KARNATAKA STATE ARCHIVES

KARNATAKA
STATE
ARCHIVES

MICROFILM
ROLL No.
152

MICROFILM
ROLL No.
152

ARS 34 APP 82

NAVAYUGA KANNADA
WEEKLY

CONTD FROM ROLL No. 151

FROM: 15:7:1965

ARS 34 APP 82

NAVAYUGA KANNADA WEEKLY

CONTD FROM ROLL No 151

FROM: 15:7:1965

NAVAYUGA 8—7—1965
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೮-೭-೬೫ರಿಂದ ೧೪-೭-೬೫ರ ವರೆಗೆ

೧. ಮೇಷ

"ಸುಖಾಸ್ಯನಂತರಂ ದುಃಖಂ ದುಃಖಸ್ಯಾನಂತರಂ ಸುಖಂ"ವೆಂಬ ಗಾದೆಯು ಮಾತು ನೆನಪಿರಲಿ. ಇಂದು ನಿಮ್ಮ ಭವಿತವ್ಯವು ಸುದೈವದ ಪರಮಾವಧಿಯನ್ನು ಮುಟ್ಟಿರುವುದು. ಮುಂದಿನ ದಾರಿಯನ್ನು ನೀವು ಇಂದೇ ಕಂಡುಕೊಳ್ಳಬೇಕಾಗಿದೆ. ಸ್ವಯಂಶಕ್ತರಾದ ನಿಮಗೆ ಪರರ ನೆರವೂ ಸಾಕಷ್ಟಿರೋಣದರಿಂದ ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಕಾರ್ಯವು ಸಿದ್ಧಿಸಲಿರುವವು.

೨. ವೃಷಭ

ಹಲವಾರು ತೆರದ ತೊಡಕು ತೊಂದರೆಗಳನ್ನು ನೀವಿಂದು ಎದುರಿಸಬೇಕಾಗಿ ಬರಲಿದೆ. ಆಪ್ತೀಯರ ವಂಚನೆಗೆ ಸಿಲುಕಿದ ನಿಮಗೆ ಮನೋರೋಗವಧಿಕವಾದೀತು. ಉದ್ಯೋಗ ವ್ಯವಹಾರಗಳಲ್ಲಿ ನಷ್ಟ ಸಂಭವವೂ ಹೆಚ್ಚಲಿದೆ. ವಿಶೇಷತಃ ರಾಜಕೀಯದಲ್ಲಿ ವಿಪಕ್ಷೀಯರಿಂದ ಅಪಮಾನಿತರಾಗುವಿರಿ. ಸ್ವಂತ ಆರೋಗ್ಯದ ಮಟ್ಟಿಗೆ ಏನೂ ತೊಂದರೆಯೆನಿಸದು. ವಾರಾದಿಯ 3 ದಿನಗಳು ಹೆಚ್ಚಿನ ದೋಷಕಾರಿಗಳಲ್ಲ.

೩. ಮಿಥುನ

ಆಸೆಕ್ಕೆ ಹೆಚ್ಚಿದ್ದು ಮೂರಕ್ಕೆ ಕುಂದದೆಂಬ ಗಾದೆಯಂತೆ ಇಂದು ನಿಮ್ಮ ಪರಿಸ್ಥಿತಿಯಿರುವುದು. ಪರಿಶ್ರಮಕ್ಕೆ ತಕ್ಕ ಫಲ ಲಭಿಸುವುದರಿಂದ ದಿನಯೋಜನೆಯು ದುಸ್ತರವಾಗದು. ಬಹ್ವಂಶ ಹಣವನ್ನು ಸದ್ವಿನಿಯೋಗ ಮಾಡುವಿರಿ. ದುರ್ಜನರ ಸಹವಾಸದಿಂದಾಗಿ ಜನಾಪವಾದಕ್ಕೆ ಸಿಲುಕುವ ಸಂಭವವಿದೆ. ಆಕಸ್ಮಿಕ ಪ್ರವಾಸವು ಗಂಟು ಬಿದ್ದೀತು. ತಾ. ೯ರಿಂದ 13ರ ವರೆಗಿನ ದಿನಗಳು ಅನುಕೂಲವಾಗಿವೆ.

೪. ಕರ್ಕಟ

ಎಂತಹ ವಿಘ್ನವಿಪತ್ತುಗಳು ಬಂದರೂ ನೀವಿಂದು ನಿಮ್ಮ ಉದ್ಯಮ ವ್ಯವಹಾರಗಳನ್ನು ಮುಂದೆ ಸಾಗಿಸುವಿರಿ. ಮಾತ್ರವಲ್ಲ ನಿಮ್ಮ ಣಿಕೆಯೂ ಕೂಡ ಸಫಲವಾಗಲಿದೆ. ಜನತೆಯಿಂದ ಗೌರವಾದರಗಳನ್ನು ಪಡೆಯಲಿರುವಿರಿ. ಗೃಹತಾಪತ್ರಯವೊಂದು ಮಾತ್ರ ಸದಾ ನಿಮ್ಮ ಮನೋನೆಮ್ಮದಿಗೆ ಭಂಗ ತರಲಿದೆ. ವಾರಾಂತ್ಯದ 3 ದಿನಗಳು ನಿಮ್ಮ ಇಷ್ಟಾರ್ಥಗಳನ್ನು ಕೊನೆ ಹಾಯಿಸುವವು.

೫. ಸಿಂಹ

ಕೆಲಸವನ್ನೇನೋ ಮಾಡುವಿರಿ. ಅದರೆ ನಿಮ್ಮ ಕೆಲಸಕ್ಕೆ ಸದೃಶವಾದ ಫಲ ಸಿಗದ್ದರಿಂದ ಅನುದಿನದ ವ್ಯವಹಾರಗಳಿಗೆ ಕಷ್ಟವಾದೀತು. ಮೊತನಾಡಿದವರ ಕೂಡೆ ಕಲಹವಾಗುವದು. ಅಧಿಕಾರಿ ವರ್ಗದವರ ಪೀಡೆಯು ದಿನದಿಂದ ದಿನಕ್ಕೆ ಹೆಚ್ಚಲಿದೆ. ಪಿತ್ತೋಷ್ಣ ದೋಷದಿಂದಾಗಿ ಆರೋಗ್ಯವು ಕೆಡುವಂತಿದೆ. ಅಯಥಿಕ ವ್ಯಯ ಮಾಡುವ ನೀವಿಂದು ಸಾಲಿಗರ ಸೆಳೆತಕ್ಕೆ ಸಿಲುಕಲಿರುವಿರಿ. ತಾ. 8, 14 ಹೆಚ್ಚಿನ ದೋಷಕಾರಿಗಳಲ್ಲ.

೬. ಕನ್ಯಾ

ಸುದೈವಿಗಳಾದ ನಿಮ್ಮ ಸಂಕಲ್ಪ ಮನೋರಥಗಳು ಯಾನೊಂದೂ ಅಡೆತಡೆಗಳಿಲ್ಲದೆ ಕಾರ್ಯರೂಪಕ್ಕೆ ಬರಲಿದೆ. ಧೈರ್ಯದಿಂದ ಕಾರ್ಯರಂಗದಲ್ಲಿ ಮುಂದರಿಯುವಿರಿ. ಬಂಧುಮಿತ್ರರು ತಾವಾಗಿ ಬಂದು ನಿಮಗೆ ನೆರವಾಗಲಿರುವರು. ಯಾವ ಭಾಗದಲ್ಲೂ ನಿಮಗಿಂದು ಕುಂದುಕೊರತೆಗಳು ಕಾಣಿಸಲಾರವಾದರೂ ಆರೋಗ್ಯದ ಮಟ್ಟಿಗೆ ಸ್ವಲ್ಪ ಜಾಗ್ರತರಾಗಿರಿ. ತಾ. 9, 10, 11 ಈ ದಿನಗಳಲ್ಲಿ ವಿಜಯ, ಲಾಭ ಗೃಹಸುಖಗಳು ಲಭಿಸುವವು.

೭. ತುಲಾ

ಸಹನೆಯಿಂದ ನೀವಿಂದು ದಿನಗಳೆಯಿರಿ. ಸದ್ಯವೇ ನಿಮ್ಮ ಅದೃಷ್ಟವು ಉತ್ತಮವಾಗಲಿದೆ. ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನ ಕೊಡಿರಿ. ಯಾರೊಬ್ಬರ ಮೇಲೂ ವಿಶ್ವಾಸವಿಟ್ಟು ಇಂದು ಕೆಲಸ ಮಾಡಲಾಗದು. ಆಪ್ತೀಯರೇ ನಿಮ್ಮನ್ನಿಂದು ವಂಚಿಸಲಿರುವರು. ಗೃಹತಾಪತ್ರಯಗಳು ಕೊಂಚ ಕಡಿಮೆಯೆನಿಸಿದರೂ ಉದ್ಯೋಗ ವ್ಯಾಪಾರ ವ್ಯವಹಾರಾದಿಗಳಲ್ಲಿ ಹಾನಿ ಹೆಚ್ಚಲಿದೆ. ತಾ. 8, 12, 13 ಇತರ ದಿನಗಳಿಗಿಂತ ಲೇಸು.

೮. ವೃಶ್ಚಿಕ

ಮರಳಿ ಯತ್ನವ ಮಾಡು ಎಂಬ ಗಾದೆಯಂತೆ ಮೇಲಿಂದ ಮೇಲೆ ಯತ್ನಿಸಿರಿ. ನಿಮ್ಮ ಬಯಕೆಯು ಈಡೇರಲಿದೆ. ಆರ್ಥಿಕ ಬಿಕ್ಕಟ್ಟಿನಿಂದ ನೀವಿಂದು ಮುಕ್ತರಾಗುವಿರಿ. ಆದರೆ ಮನೆಯಲ್ಲಿ ಮಾತ್ರ ನೆಮ್ಮದಿಯಿರದು. ಅರ್ಧಾಂಗಿಯು ಕೂಡೆ ಕಲಹವಾಗಲಿದೆ. ಸೋದರರ ಕೂಡೆ ಮನಸ್ತಾಪವುಂಟಾದೀತು. ನಿರೋಗಿಗಳಾದ ನಿಮಗೆ ತಾ. 9, 10, 11, 14 ಈ ದಿನಗಳಲ್ಲಿ ಮೃಷ್ಟಾನ್ನ ಭೋಜನ ಕಾರ್ಯಸಿದ್ಧಿ ವಿಜಯಗಳು ಲಭಿಸುವವು.

೯. ಧನು

ದಿನೇ ದಿನೇ ನಿಮ್ಮ ಅದೃಷ್ಟವು ಉತ್ತಮಗೊಳ್ಳುತ್ತಿರುವುದು. ಆದ ಕಾರಣ ನೀವಿಂದು ಆಲಸಿಗರಾಗದೆ ಸ್ವಕಾರ್ಯದಲ್ಲಿ ಮುಂದರಿಯಿರಿ. ಸ್ವಲ್ಪ ಕಾಲಾವಕಾಶದಿಂದ ಫಲವು ಸಿದ್ಧಿಯಾಗಲಿದೆ. ಕಷ್ಟಸಹಿಷ್ಣುಗಳಾದ ಸೇವಕ ವೃಂದಕ್ಕೆ ಈ ಕಾಲವು ತುಂಬ ಅನುಕೂಲವಾಗಿರುವುದು. ಸುಖಸಂತಸದಿಂದ ದಿನ ಕಳೆಯಲಿರುವರು. ಇಷ್ಟಿದ್ದರೂ ನಿಮ್ಮ ದೇಹ ಮನಸ್ಸುಗಳಿಗೆ ಸುಖ ನೆಮ್ಮದಿಯಿರಲೊಲ್ಲದು. ತಾ. 8, 12, 13 ಈ ದಿನಗಳಲ್ಲಿ ನಾನಾ ವಿಧದಿಂದ ಧನಾಗಮ ಮಿತ್ರಸಮಾಗಮವೂ ಆಗಲಿದೆ.

೧೦. ಮಕರ

ಸುರಗುರುಗಳ ಪೂರ್ಣದೃಷ್ಟಿ ನಿಮ್ಮ ಮೇಲಿದ್ದರೂ ಇತರ ಗ್ರಹರೆಲ್ಲರೂ ಪ್ರತಿಕೂಲರಾಗಿರುವುದರಿಂದ ನಿಮಗಿಂದು ನೆಮ್ಮದಿಯಿಂದ ಕಾಲ ಸಾಗದು. ಜನತೆಯ ಸಹಕಾರವು ಸಾಕಷ್ಟಿದ್ದರೂ ನಿಮ್ಮ ಕಾರ್ಯಗಳು ವಿಘ್ನವಿಪತ್ತುಗಳಿಂದಾಗಿ ಅರ್ಧದಲ್ಲೇ ನಿಲ್ಲುವವು. ಹಣದ ಬಿಕ್ಕಟ್ಟಿನಿಂದಾಗಿ ಮರ್ಯಾದೆಯಿಂದ ದಿನಗಳೆಯಲು ಕಷ್ಟವಾಗುವದು. ಆದರೂ ಗುರುದೃಷ್ಟಿಯೊಂದು ನಿಮಗೆ ರಕ್ಷಾಕವಚದಂತಿರುವುದರಿಂದ ತಾ. 8, 9, 10, 11, 14 ಈ ದಿನಗಳು ಅನುಕೂಲವಾಗಿ ಪರಿಣಮಿಸುವವು.

೧೧. ಕುಂಭ

ಮೇಲಿಂದ ಮೇಲೆ ಬರತಕ್ಕ ತೊಡಕು ತೊಂದರೆಗಳಿಂದಾಗಿ ನೀವಿಂದು ಇತಿಕರ್ತವ್ಯತಾ ಮೂಢರಾಗಿ ಉದಾಸೀನವಂ ತಳೆವಿರಿ. ವಿರೋಧಿವರ್ಗದವರು ಇದೇ ಸುಸಮಯ ಪ್ರತೀಕಾರಕ್ಕೆಳಸುವರು. ಆಪ್ತೀಯರ ವಿಯೋಗ ಸ್ವಜನರ ವಿರೋಧಗಳಿಗೆರವಾದ ನಿಮಗೆ ಆರೋಗ್ಯವೂ ಸರಿಯಿರಲಾರದು. ಮುಂದಿನ ಕಲ್ಯಾಣದ ದೃಷ್ಟಿಯಿಂದ ನೀವಿಂದು ದಿನಗಳೆಯಬೇಕಾಗಿದೆ. ತಾ. 9ರಿಂದ 13ರ ವರೆಗಿನ ದಿನಗಳು ಹೆಚ್ಚಿನ ಕಷ್ಟದಾಯಿಗಳಾಗಲಾರವು.

೧೨. ಮೀನ

ಗುರುವಿನ ಮೇಲೊಂದು ಬೊಕ್ಕೆ ಎದ್ದಂತೆ ಇಂದು ಆಪತ್ತಿನ ಮೇಲೆ ವಿಪತ್ತುಗಳು ಮೇಲಿಂದ ಮೇಲೆ ಬರಲಿವೆ. ಆರ್ಥಿಕ ದುರವಸ್ಥೆಯಿಂದ ಕಂಗಾಲಾದ ನಿಮಗೆ ಶತ್ರುಜನರ ಕಾಟವು ವಿಶೇಷವಾದೀತು. ಮಾತ್ರವಲ್ಲ, ಕೈಹಿಡಿದ ಅರ್ಧಾಂಗಿ ಹುಟ್ಟಿದ ಮಕ್ಕಳೂ ಕೂಡ ನಿಮ್ಮ ಕೂಡೆ ಕಲಹಪ್ರಿಯರಾಗುವದರಿಂದ ಮೇಲೆ ಇಂದಿನ ದಿನಗಳು ಬಹಳ ಕಷ್ಟಕ್ಕೆ ಬರಲಿವೆ. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮವೆನ್ನಬಹುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾ| ಕೊರಡ್ಕಲ್ ವೆಂಕಟ್ರಾವ್, ಬೆಳ್ತಣ್ಣು, ದ. ಕ.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿದೆ. ಬೆಲೆ: ರೂ.ಎರಡು (ಟ.ಖ.ಪ್ರತ್ಯೇಕ)

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಪಟ ನಾಟಕ

ಕಾಗದದ ನಾವೆಯಲಿ
ಸಾಗರವ ದಾಟುವರೆ?
ಮಾಯಾ ಪ್ರಪಂಚದಲಿ
ಬೀಳದೆ ಬಾಳುವರೆ

ಎತ್ತೆತ್ತ ನೋಡಿದರು
ಸತ್ತುಲೂ ಮಾಯೆಯು
ಸಂಸಾರವೆಂಬುದೇ
ಮಾಯೆಯ ಛಾಯೆಯು

ಕಪಟ ಮೋಸಗಳಿಲ್ಲ
ಕಾದಿಹವು ಕ್ಷಣಕ್ಷಣಕೆ
ನಾವೆಯೊಡೆಯನು ಪಾಪ
ಸೋತನೀ ಆಟಕ್ಕೆ.

ಪುರುಷಾರ್ಥಗಳಲೆಂದು
ತಿರುಳೆಂಬುದ ಳಿದಿಲ್ಲ
ಅರ್ಥ ಕಾಮಗಳೆದುರು
ಧರ್ಮದಾ ಸುಳಿವಿಲ್ಲ.

ದೇಶವನು ಸುಡುತಲಿದೆ
ಉರಿವ ಬಡತನದಗ್ನಿ
ಗಾಳಿ ಹೊಂದಿಹ ನರನ
ಧಮನಿ ಹೋಯಿತು ಬತ್ತಿ.

ಗಗನವನು ಏರುತಿಹ
ರಾಜಕಾರಣಿ ಇವನು
ಅಂಜಿದಾತನ ಶಿರವ
ಕಡಿಯದಲೆ ಬಿಡನು.

ಬುದ್ಧಿವಂತರು ಎಂದು
ಉದುದ್ದ ಕೊಚ್ಚುವರು.
ಬುದ್ಧಿಹೀನರ ಮೇಲೆ
ಅಪಹಾಸ್ಯ ಮಾಡುವರು.

ಬೆವರ ಸುರಿಸುತ ದುಡಿವ
ಬಡಜನರ ಗತಿಯೇನು?
ಬಾಳ ಹೋರಾಟಕ್ಕೆ ತಾ
ಕೊಡಲಿರುವ ಬೆಲೆ ಏನು?

—'ಮುಟ್ಟಾಡಿ'

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಜುಲೈ ೧೫, ೬೫ [ಸಂಚಿಕೆ ೪೬.



Phone No. 226
ಫೋನ್ ಸಂಖ್ಯೆ :

NAVAYUGA

leading nationalist weekly

೨೦ ಪೈಸೆ

ಕಥಾ ಪ್ರಪಂಚ

ಮೀನು ಮರಳಿ ನೀರಿಗಿಳಿದಾಗ

ಬರೆದವರು: ಶ್ರೀ ವಿ. ವಿ. ಗೂಳೂರ್.

ಮೀನು ತಾನಾಗಿಯೇ ಭೂಮಿಯ ಮೇಲೆ ವಾಸಿಸಲು ಬಯಸೀತೇ? ಮದುವೆಯಾದ ಹೊಸದರಲ್ಲಿ ಗಂಡನ ಜತೆ ನಲಿದಾಡಿಕೊಂಡಿರಬೇಕೆಂದು ಆಸೆಯಿತ್ತೇ ವಿನಃ ನಾನೇನು ಈ ಹಾಳು ಕೆಲಸಕ್ಕೆ ಸೇರಿಕೊಳ್ಳಬೇಕೆಂದು ಬಯಸಿದ್ದೆನೆ? ಹತ್ತರಿಂದ ಐದರ ವರೆವಿಗೂ ಕಾರಾಗೃಹ ವಾಸಿಯಾಗಿರಲು ಮದುವೆಯಾದ ಹೊಸದರಲ್ಲಿ ಯಾವ ಹೆಣ್ಣು ಬಯಸೀತ ? ತನ್ನ ಸ್ವಂತ ಮನೆಯ ಸಾಮಾನುಗಳನ್ನು ಒಪ್ಪವಾಗಿ, ಓರಣವಾಗಿ ಇಡುವುದರಲ್ಲಿ ಒಂದು ಕವಿತೆಯನ್ನೇ ಬರೆದಷ್ಟು ಸಂತೋಷವನ್ನು ಕಾಣುತ್ತಾಳೆ ಹೆಣ್ಣು. ಅದು ಬಿಟ್ಟು ಈ ಹಾಳು ಸತ್ತ ಕಾಗದಗಳ ಜೊತೆ ಸರಸ ಯಾರಿಗೆ ಬೇಕಿತ್ತು ?

ನನಗೆ ಆ ಗಂಡಸರುಗಳ ಮಧ್ಯೆ ಕುಳಿತು ಕೆಲಸ ಮಾಡಲು ನಾಚಿಕೆ. ಅಲ್ಲದೆ ದುಡಿದು ಸುಸ್ತಾಗಿ ಮನೆಗೆ 'ಅವರು' ಬಂದರೆ ನಾನೆಲ್ಲೋ ಆಫೀಸಿನಲ್ಲಿರುವುದೇ? ಮನೆಯಲ್ಲಿ ಹಣಕಾಸಿನ ಮುಗ್ಗಟ್ಟು ನಿಜ, ಆದರೆ ಅದಕ್ಕಾಗಿ ನಾನು ಕೆಲಸಕ್ಕೆ ಸೇರಿದರೆ ಎಲ್ಲಾ ಕಷ್ಟಗಳು ಪರಿಹಾರವಾದಾವೆ?

ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯಾನೆ? ಅನ್ನವನ್ನು ಹುಟ್ಟಿಸಿದ ಮೇಲೆಯೇ ಅಲ್ಲವೆ ದೇವರು ಜೀವಿಯನ್ನು ಹುಟ್ಟಿಸುವುದು? ಹೇಗೋ ಮನೆಯ ಕತೆ ಕಳೆಯುತ್ತದೆ. ಅದಕ್ಕೆ ಇವಳು ಗಂಡು ಬೀರಿಯಂತೆ ದುಡಿಯಬೇಕೇಕೆ?

ಎನ್ನುವುದು ನಮ್ಮತ್ತೆಯವರ ವಾದ. ಅಲ್ಲದೆ ಇಂತಹ ಕೆಲಸ ಮಾಡಿ ನಮ್ಮಜ್ಜರು ಕಾಲದಿಂದಲೂ ರೂಢಿಯಿಲ್ಲ. ಒಮ್ಮೆಗೆ ನಾನು ಕೆಲಸಕ್ಕೆ ಸೇರಬೇಕೆಂದರೆ ಪ್ರಯಾಸವಾಯಿತು. ಮಾವನವರ ಸಾವಿನಿಂದ ನಮ್ಮ ಮನೆಯ ಪರಿಸ್ಥಿತಿ ಬಹಳ ಚಿಂತಾಜನಕವಾಯಿತು. ನಾನೂ ಅನೇಕ ರೀತಿ ಯೋಚಿಸಿದೆ. ನನ್ನ ಯಜಮಾನರ ಸಂಬಳದಿಂದ ಏನೂ ಸಾಗುವುದಿಲ್ಲ. ಯಾರಾದರು ಒಬ್ಬರು ದುಡಿಯಬೇಕು. ಮನೆಯಲ್ಲಿ ಯಾರಿದ್ದಾರೆ ದುಡಿಯುವುದಕ್ಕೆ? ನನ್ನ ಮೈದುನ, ನಾದಿನಿಯರು ಇನ್ನೂ ಚಿಕ್ಕವರು. ನಮ್ಮತ್ತೆಯನ್ನು ದುಡಿಯಿರಿ ಎಂದು ಹೇಳಲಾಗುತ್ತದೆಯೆ ? ಕಡೆಗೆ ನಾನು ಒಪ್ಪಲೇ ಬೇಕಾಯಿತು.

ನಾನು ಎರಡನೇ ದರ್ಜೆಯ ಗುಮಾಸ್ತಳಾಗಿ ಸೇರಿ ಆಫೀಸಿಗೆ ಹೋದ ದಿವಸವನ್ನು ಜ್ಞಾಪಿಸಿಕೊಂಡರೆ ಈಗಲೂ ನಗು ಬರುತ್ತದೆ. ಮನೆಯಲ್ಲಿಯೇ ಆಟವಾಡಿಕೊಂಡಿದ್ದ ಮುದ್ದಿನಿಂದ ಬೆಳೆದ ಮಗುವನ್ನು ಸ್ಕೂಲಿಗೆ ಕಳುಹಿಸಿದರೆ ಹೇಗೋ ಹಾಗಾಯಿತು ನನ್ನ ಪರಿಸ್ಥಿತಿ. ಅವರು ನನ್ನನ್ನು ಆಫೀಸಿನಲ್ಲಿ ಬಿಟ್ಟು ಹೋದ ಕ್ಷಣ ದುಃಖ ಒತ್ತರಿಸಿ ಬಂತು. ಅಷ್ಟೊಂದು ಜನಗಳ ಮಧ್ಯೆ ನಾನು ಏಕಾಂಗಿಯಾಗಿದ್ದೆ; ಅಶೋಕ ವನದಲ್ಲಿನ ಸೀತೆಯಂತೆ. ಆಗಿನ ದಿವಸಗಳ ನೆನಪು ಈಗಲೂ ನಗು ತರಿಸುತ್ತದೆ. ದಿನಾಲು "ಅವರು" ನನ್ನನ್ನು ಆಫೀಸಿನಲ್ಲಿ ಬಿಟ್ಟು ಹೋಗುತ್ತಿದ್ದರು ಮತ್ತೆ ಆಫೀಸಿನಿಂದ ಹಿಂದಿರುಗುವಾಗ ಕರೆದುಕೊಂಡು ಬರುತ್ತಿದ್ದರು. ಒಂಬತ್ತು ಗಂಟೆಗೆಲ್ಲಾ ಅತ್ತೆಯವರು ಎಲೆ ಹಾಕಿ ಊಟಕ್ಕೆ ಎಬ್ಬಿಸುತ್ತಿದ್ದರು.

ಆ ಉಪಚಾರಗಳೆಲ್ಲಾ ಈಗ ಏನಾದವು? ಬೆಳಗಿನ ಹೊತ್ತು ಅನ್ನ ಕಟ್ಟಿಗಿಂತ ಉತ್ತಮ ಆಹಾರವನ್ನು ಊಟಮಾಡುದುದೇ ಮರೆತು ಹೋಗಿದೆ. ಅಂಬಲಿ, ಬೇಳೆಯ ಮೇಲಿನ ನೀರನ್ನೇ ದಿವ್ಯವಾದ ಆಹಾರ ಎಂದು ತಿಳಿಯ ಬೇಕಾಗಿದೆ. ಇವರ ಜೊತೆಗೆ ಅತ್ತೆ ಹಾಗು 'ಅವರ' ಸಿಡುಗುಟ್ಟಾಟ ಬೇರೆ. ನಾನು ಆಗಲೇ ಹೇಳಿದಂತೆ ನಾನೇನು ನನ್ನ ಇಚ್ಛೆಯಂತೆ ಕೆಲಸಕ್ಕೆ ಸೇರಲಿಲ್ಲ. ಅವರ ಇಚ್ಛೆ ಹಾಗೂ ಪರಿಸ್ಥಿತಿಯ ಒತ್ತಡಗಳಿಂದ ಸೇರಬೇಕಾಯಿತು. ಅದಕ್ಕೆ ಅವರೇ ಕಾರಣರು. ಈಗ ಅವರಿಗೆ ನನ್ನಲ್ಲಿ ಏನೋ ಒಂದು ರೀತಿಯ ಅಪನಂಬಿಕೆ. ನಾನೇನು ಮಾಡಿದೆ? ನಾನೇನು ಬದಲಾಗಿದ್ದೇನೆ? ದಿನ ಕ್ರಮೇಣ ಕೆಲಸ ಒಗ್ಗಿ ಹೋಯಿತು. ಈಗ ನನಗೆ ಮನೆಯಲ್ಲಿ ಕಾಲ ಕಳೆಯಲು ಬೇಸರವಾಗುತ್ತದೆ. ಆ ಆಫೀಸಿನಲ್ಲಿರುವ ಜನಗಳೇನು ಹುಲಿಗಳೇ ನನ್ನನ್ನು ತಿನ್ನುವುದಕ್ಕೆ? ನಾನು ಮೊನ್ನೆ ನನ್ನ ಆಫೀಸಿನ ಜೊತೆಯ ಗುಮಾಸ್ತನೊಂದಿಗೆ ಮಾತಾಡುತ್ತಾ ನಿಂತಿದ್ದೆ, ಅದನ್ನು ಅವರು ನೋಡಿದರು ಅದು ಅವರ ದೃಷ್ಟಿಯಲ್ಲಿ ಮಹಾಪರಾಧ. ನನಗೇನು ಅಣ್ಣ ತಮ್ಮಂದಿರಿಲ್ಲವೆ? ಆ ಕ್ಲರ್ಕ್‌ಗೇನು ಅಕ್ಕ ತಂಗಿಯರಿಲ್ಲವೆ? ಒಂದೇ ಆಫೀಸಿನಲ್ಲಿ ಕೆಲಸ ಮಾಡುವವರ ಜತೆ ಬಂದು ಮಾತಾಡಬಾರದೆ? ಎಲ್ಲೋ ಹಳೆಯ ಕಾಲದ ಗೊಡ್ಡು ಅನ್ನುವುದಿಲ್ಲವೆ? ಮೊದಲು ಮೊದಲು ನಾನೂ ಆಫೀಸಿನಲ್ಲಿ ಹಾಗೆಯೇ ಇದ್ದೆ. ಆಗ ಸಹೋದ್ಯೋಗಿಗಳೆಲ್ಲಾ ಇಟ್ಟಿದ್ದ ಹೆಸರು 'ಮುಟ್ಟಿದರೆ ಮುನಿ.' ಅದನ್ನು ಅಳಿಸಲು ಎಷ್ಟು ಕಷ್ಟಪಟ್ಟೆ ಅವರಿಗೇನು ಗೊತ್ತಾಗಬೇಕು?

ಇನ್ನು ನಮ್ಮತ್ತೆಯವರಿಗೆ ನನ್ನಲ್ಲಿರುವ ವಿಶ್ವಾಸವೋ! ಮೊದಲೇ ನಾನು ಕೆಲಸಕ್ಕೆ ಸೇರಿದುದು ಅವರಿಗೆ ಇಷ್ಟವಿಲ್ಲ. ಆಗ ನಾನೂ ಅವರ ತಾಳಕ್ಕೆ ಮೇಳ ಹಾಕುತ್ತಿದ್ದೆ. ಆದರೆ ನಮ್ಮ ಯಜಮಾನರಿಗೆ ಆಗ ಹಣ ಬೇಕಿತ್ತು. ಆದ್ದರಿಂದ ಬಲವಂತವಾಗಿ ಸೇರಿಸಿದರು. ಆಗ ನನಗೆ ಕೆಲಸದಲ್ಲಿ ಸ್ವಲ್ಪ ಆಸಕ್ತಿ ಹುಟ್ಟಿತು. ಸ್ನೇಹಿತೆಯರ ಜೊತೆಯಲ್ಲಿ ಸ್ವಲ್ಪ ಸಂತೋಷದಿಂದಿರಲು ಪ್ರಾರಂಭಿಸಿದೆ, ಅದನ್ನು ನೋಡಿ ಸಹಿಸಲು ಇವರುಗಳಿಗೆ ಆಗುತ್ತಿಲ್ಲ. ನನ್ನ ಸ್ನೇಹಿತೆಯರನ್ನು ಕಂಡರಂತೂ ನಮ್ಮತ್ತೆ ಇಲ್ಲಿ ಹಾರಿ ಅಲ್ಲಿ ಬೀಳುತ್ತಾರೆ.

ರೀಟಾ—ಅವಳಿರುವುದೇ ಹಾಗೆ. ಅವಳೇನು ಬ್ರಾಹ್ಮಣಳವಳೇ? ಅವಳು ಬಾಬ್ ಕಟ್ ಮಾಡಿಸಿಕೊಂಡಿದ್ದಾಳೆ ಅದರಲ್ಲಿ ತಪ್ಪೇನು ಅವಳಿಗೆ ಚೆನ್ನಾಗಿಯೇ ಕಾಣುತ್ತದೆ. ಅವಳು ಲಂಗವನ್ನು ಹಾಕಿಕೊಳ್ಳುತ್ತಾಳೆ. ಅದು ಅವಳ ಇಷ್ಟ. ಅವಳು ಮನೆಗೆ ಬಂದರೆ, ನಮ್ಮತ್ತೆ ಯಾಕೆ ಹಾಗೆ ಸಿಡಿಮಿಡಿಗುಟ್ಟಬೇಕು? ಅವಳೇನು ಇವರ ದೇವರ ಪೂಜೆಗೆ ಅಡ್ಡ ಮಾಡಿದಳೇ? ಇವರ ಧರ್ಮದ ವಿಷಯವಾಗಿ ಮಾತಾಡಿದಳೇ? ಅವಳ ಪಾಡಿಗೆ ಅವಳು ಒಂದು ಆಫೀಸ್ ರೂಮ್‌ನಲ್ಲಿ ಕುಳಿತಿದ್ದು ಹೋಗುತ್ತಾಳೆ. ಅವಳ ವಿಚಾರಸರಣಿ ಕೆಲವು ಸಲ ಸರಿಎನ್ನಿಸುತ್ತದೆ.

"ಹೆಣ್ಣು ಮಕ್ಕಳನ್ನು ಹೆರುವ ಯಂತ್ರವೆ? ಸದಾ ಗಂಡ, ಮಕ್ಕಳು, ಕಸಮುಸರೆ ಇವುಗಳಲ್ಲಿಯೇ ಅವಳು ಸ್ವರ್ಗವನ್ನು ಕಾಣಬೇಕೆ? ಅವಳೂ ಗಂಡಿನಂತೆ ಸಮಾಜದಲ್ಲಿ ಬೆರೆತರೆ ತಪ್ಪೇನು?" ಇದು ರೀಟಾಳ ವಾದ. ಹಿಂದೆ ನನಗೆ ಈ ವಾದ ಹಿಡಿಸದಿದ್ದರೂ ಈಗ ಅದರಲ್ಲೂ ಸತ್ಯತೆ ಇದೆ ಅನ್ನಿಸುತ್ತದೆ.

ನನ್ನ ಇನ್ನೊಬ್ಬ ಸ್ನೇಹಿತೆ ಆಂಡಾಳ್. ಅವಳ ಎರಡು ಜಡೆ ನೋಡಿದರೆ ಎಲ್ಲಿಲ್ಲದ ಸಿಟ್ಟು ನಮ್ಮತ್ತೆಗೆ. "ಒಳ್ಳೆ ಕತ್ತೆಯ ಹಾಗೆ ಬೆಳೆದಿದ್ದಾಳೆ. ಇನ್ನೂ ಎರಡು ಜಡೆ ಹಾಕ್ಕೋತಾಳೆ ಒಳ್ಳೆ ಮಕ್ಕಳ ಹಾಗೆ. ಮದ್ವೆ ಮಾಡಿದ್ರೆ ನಾಲ್ಕು ಮಕ್ಕಳಾಗೊ ವಯಸ್ಸು" ಹೀಗೆಲ್ಲಾ ಬಡಬಡಿಸುತ್ತಾರೆ. ದೇವರು ಕೂದಲಿನ ಭಾಗ್ಯ ಕೊಡದಿದ್ದರೆ (ಅವರೇ ಹಾಗೆ ಮಾಡಿಸಿಕೊಂಡರೆ) ಯಾರೇನು ಮಾಡಲಾದೀತು? ಆ ಹುಡುಗಿಯು ಲಕ್ಷಣವಾಗಿ ಎರಡು ಜಡೆ ಹಾಕಿಕೊಂಡರೆ ತಪ್ಪೇನು? ಅವಳು ಮನೆಗೆ ಬಂದರೆ ಅಟ್ಟಕ್ಕೆ ಹಾರಿ ನೆಲಕ್ಕೆ ಬೀಳ್ತಾರೆ. ಈಗಿನ ಕಾಲದ ಹುಡುಗಿಯರೇ ಹಾಗೆ. ಸ್ವಲ್ಪ ಫ್ಯಾಶನ್ ಜಾಸ್ತಿ. ನನಗೇ ಕೆಲವು ಸಲ ಅವರ ಫ್ಯಾಶನ್ ಜಾಸ್ತಿ ಅನ್ನಿಸುತ್ತದೆ. ಆದರೆ ಫ್ಯಾಶನ್ ಜಾಸ್ತಿ ಎಂದು ಅವರನ್ನು ಜತೆಗೆ ಸೇರಿಸದೇ ಓಡಿಸುವುದಕ್ಕಾಗುತ್ತದೆಯೆ?

ಕೆಲಸವನ್ನೆ ಬಿಟ್ಟು ಬಿಡೆಂದು ಅವರ ಹಠ. ಮೊದಲು ಕೆಲಸಕ್ಕೆ ಸೇರಿಸಿದವರ್ಯಾರು? ಈಗ ನಾನು ಹಣದ ವಿಷಯದಲ್ಲಿ ಸ್ವತಂತ್ರಳಾದ ಮೇಲೆ ಅವರಿಗೆ ಹೊಟ್ಟೆಯುರಿ. ನಾನು ಕೆಲಸಕ್ಕೆ ಸೇರುವ ಮೊದಲು ಅವರಿಗೆ ದುಡ್ಡಿನ ಅವಶ್ಯಕತೆ ಇತ್ತು. ಆದರೆ ಇವತ್ತು ಸ್ವಲ್ಪ ಕಡಿಮೆ ಆಗಿದೆ. ಎಷ್ಟೇ ಆದರೂ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಲ್ವೆ? ನಾನು ಎಷ್ಟೋ ಸಲ ಹೇಳಿದ್ದೇನೆ. 'ಆ ಎಂಜಲು ಕಾಸಿಗೆಲ್ಲಾ ಕೈ ಒಡ್ಡಬೇಡಿ' ಎಂದು ಅದು ಅವರಿಗೆ ಲ್ಲಿಯ ಲಕ್ಷ್ಯ ಕೆಟ್ಟ ಕೆಲಸಗಳೆಲ್ಲಾ ಮಾಡುವಾಗ ಚೆನ್ನಾಗಿಯೇ ಇರುತ್ತವೆ. ಬಾಯಿ ಕೆಟ್ಟಾಗ ತಿನ್ನಲು ಕಡಲೇ ಕಾಯಿ ರುಚಿಯಾಗಿಯೇ ಇರುತ್ತದೆ. 'ತಿಂದ ಮೇಲೆ ತಾನೇ ಗೊತ್ತಾಗುವುದು ಅದರ ಪರಿಣಾಮ.' ಅವರು ಅದನ್ನು ಯೋಚಿಸದೆ ಸುಮ್ಮನೆ ನನ್ನನ್ನು ಕೆಲಸದಿಂದ ಬಿಡಿಸಲು ಆತುರರಾಗಿದ್ದಾರೆ.

ಗಂಡಸು ತನ್ನ ಏಕೈಕ [illegible] ಹೆಣ್ಣೆಂದು ಬಹಳ ಹಿಂದಿನಿಂದ ತಿಳಿದಂತೆ ಕಾಣುತ್ತದೆ. ಅದಕ್ಕಾಗಿಯೇ ಅವಳನ್ನು ತುಳಿಯುತ್ತಲೇ ಬಂದಿದ್ದಾನೆ. ಹೆಣ್ಣನ್ನು ತಾಯಿ ದೇವಿ ಎಂದೆಲ್ಲಾ ಪೂಜಿಸಿ ದೂರವಿಟ್ಟ ಕಾಲ

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6¼
24 ತಿಂಗಳಿಂದ	36 ತಿಂಗಳ ಕೆಳಗೆ	6½
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Phone No. 226.

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಗದ ತಾವಿನ ಒಂದು ಪಾರ್ಶ್ವದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿ ಜಾಗಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅ ಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಫೋಟೋ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಹಂದಾ ಹಣವನ್ನಾಗಲೀ ಜಾಹೀರಾತಿನ ಸಾಲಗಳನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ರವಾನಿಸಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ನೇಪಾ ಕಾಗದದ ಕಾರಖಾನೆ ಮೇಲಿನ ಸಾಲು.

ಎಡ: ಒಣಗಿಸುವ ವಿಭಾಗದ ಕಾಗದ ತಯಾರಿಸುವ ಯಂತ್ರ

ಬಲ: ನೀರು ತಿಳಿಸುವ ಯಂತ್ರ.

ಕೆಳಗಿನ ಸಾಲು

ಎಡ: ಬಿಳುಪು ತಯಾರಿಸುವ ವಿಭಾಗ.

ಬಲ: ಹುಲ್ಲನ್ನು ಕಾಸ್ಟಿಕ್ ಸೋಡಾದೊಂದಿಗೆ ಬೇಯಿಸುವ ವಿಭಾಗ.

ನವಯುಗ

ಸಂಪುಟ ೪೪ | ಉಡುಪಿ | Vol.44

ಸಂಚಿಕೆ ೪೬ | ೧೫—೭—೧೯೬೫ | No. 46

ವಚನ ಸುಧೆ

ಅಭಯಂ ಮಿತ್ರಾದಭಯಂ ಅಮಿತ್ರಾತ್॥

(ಅಥರ್ವ ವೇದ, ೧೯.೧೫.೬)

೦ ಮಿತ್ರನಿಂದ ನಿರ್ಭಯತೆ ಪ್ರಾಪ್ತವಾಗಲಿ; ಶತ್ರುವಿನಿಂದ ಕೂಡ ನಿರ್ಭಯತೆ ಪ್ರಾಪ್ತವಾಗಲಿ.

೦೦ ಮಿತ್ರರಿಗೆ ನಾವೆಂತು ಹೆದರುವುದಿಲ್ಲವೋ ಅಂತೆಯೇ ಶತ್ರುವಿಗೂ ಅಂಜದಿರಬೇಕು. ಮನಸ್ಸಿನಲ್ಲಿ ಧೈರ್ಯ ತಂದುಕೊಳ್ಳುವುದರಿಂದ ಬಲ ಹೆಚ್ಚುವುದು; ಧಾರ್ಮಿಕನು ನಿರ್ಭಯನು. ತನ್ನ ಆಚರಣೆಯನ್ನು ಧರ್ಮಕ್ಕನುಕೂಲಗೊಳಿಸುವುದು, ಪರಮಾತ್ಮನನ್ನು ಉಪಾಸಿಸುವುದು, ಸತ್ಯ ಮತ್ತು ಪ್ರೇಮಗಳಿಂದ ತನ್ನ ಮನಸ್ಸನ್ನು ನಿರ್ಭಯಗೊಳಿಸುವುದೇ ಮಾನವ ಧರ್ಮ.

ಭಾರತದ ನೈತಿಕ ವಿಜಯ

ಭಾರತ ಪಾಕಿಸ್ತಾನಗಳ ನಡುವೆ ಆದ ಗಡಿ ಒಡಂಬಡಿಕೆಯೊಂದು 'ಮಹಾ ಸಾಧನೆ'ಯೆಂದೇ ಹೇಳಬೇಕು. ಬ್ರಿಟಿಷ ಪ್ರಧಾನಿಯವರ ಪ್ರಯತ್ನಗಳು ಕೊನೆಗೂ ಯಶಗಳಿಸಿದುವು. ಕಾಮನ್‌ವೆಲ್ತಿನ ರಾಷ್ಟ್ರಗಳು ಪರಸ್ಪರ ಹೋರಾಡುತ್ತಿರುವುದು; ಸಲ್ಲದೆಂದು ಭಾವಿಸಿದ ಅವರು ಸಂಧಾನದ ಪ್ರಯತ್ನಕ್ಕೆ ತೊಡಗಿದರು. ಕಚ್ಛ್-ರಣದ ಗಡಿಯ ಸಂಬಂಧದಲ್ಲಿ ಸ್ನೇಹಮಯ ವಾತಾವರಣದಲ್ಲಿಯೇ ಒಡಂಬಡಿಕೆಯನ್ನು ಸಾಧಿಸುವ ಬಗ್ಗೆ ದಾರಿಯನ್ನು ಸ್ವಚ್ಛಗೊಳಿಸಲಾಯಿತು. ಉಭಯ ಸೇನೆಗಳೂ ಹೋರಾಟಕ್ಕೆ ಮೊದಲಿದ್ದಲ್ಲಿಗೆ ಹಿಂತೆರಳುವ ಕಾರ್ಯವೂ ಮುಗಿಯಿತು. ಅಧಿಕಾರಿ ಮಟ್ಟದಲ್ಲಿ ಪ್ರಾರಂಭವಾಗಬೇಕಾದ ಮಾತುಕತೆಗೆ ಮೊದಲ ಸಭೆಯು ಪಾಕಿಸ್ತಾನದಲ್ಲಿಯೇ ಕೂಡುವುದೆಂದೂ ನಿಶ್ಚಿತವಾಗಿದೆ. ಈಗ ಸಕ್ಕರೆಯವರೂ ತಪ್ಪು ತಿಳುವಳಿಕೆಯಲ್ಲಿ ತೊಡಗಿದ್ದಾರೆ.

ಕಚ್ಛ ಸಂಬಂಧದ ಒಡಂಬಡಿಕೆಯು ಭಾರತಕ್ಕೆ ಅಪಮಾನಕಾರಕವೆಂದು ಹೇಳುವವರಿದ್ದಾರೆ. ಆದರೆ ಅಪಮಾನವಾಗುವಂತಹ ಯಾವ ಶರ್ತಗಳೂ ಒಡಂಬಡಿಕೆಯಲ್ಲಿರುವುದಿಲ್ಲ. ಗುಂಡನ್ನು ಸಜ್ಜುಗೊಳಿಸಿ ಶತ್ರುವಿನ ಆಗಮನವನ್ನು ಎದುರು ನೋಡುತ್ತ ಎಷ್ಟು ಸಮಯ ಕೂಡ್ರಬಹುದು? ವೈರಿಗಳು ಹೇಳಿ ಬರುವುದಿಲ್ಲ. ಆಕ್ರಮಣದಿಂದ ಸ್ವರಕ್ಷಣೆ ಮಾಡಿಕೊಳ್ಳುವಲ್ಲಿ ಎಷ್ಟು ಎಚ್ಚರಿಕೆಯಿದ್ದರೂ ಸಾಲದು. ಅಂದರೆ, ಇದಕ್ಕಲ್ಲಿ ಹೆದರಿ ಭಾರತವು ಒಪ್ಪಂದಕ್ಕೆ ಸಹಿ ಹಾಕಿತು ಎಂದರ್ಥವಲ್ಲ. ನೆರೆಯ ರಾಷ್ಟ್ರಗಳೊಡನೆ ಸ್ನೇಹದಿಂದಿರಬೇಕೆಂಬ ದೇಶದ ನಮ್ಮ ಆಶಯ. ಒರಿಯ ಸ್ನೇಹಕ್ಕಾಗಿ ದೇಶವನ್ನು ಬಲಿಗೊಡುವ ಹೀನಕೃತ್ಯವನ್ನು ಮಾತ್ರ ನಾವೆಂದೂ ಮಾಡಲಾರೆವು. ಈಗ ನಡೆದ ಒಡಂಬಡಿಕೆಯು ನೇರ ಮಾತುಕತೆಗಳಿಗೆ ಬಾಗಿಲನ್ನು ತೆರೆಯಿತೇ ಹೊರತು ಕಚ್ಛ-ರಣದಲ್ಲಿ ಪಾಕಿಸ್ತಾನಕ್ಕೆ ಪಾಲು ಕೊಟ್ಟರ ವೃದ್ಧಿಯೆಂಬುದನ್ನು ಗಮನಿಸಬೇಕು. ಮಾತುಕತೆಯು ಹೇಳಿಯಲ್ಲಿ ಯಾರಿಗೆ ಎಷ್ಟು ಭೂಮಿ ಬೇಕು ಎಂದು ಕೇಳಿ ಹಂಚುವ ಕಾರ್ಯವೂ ಇಲ್ಲ. ಒತ್ತಾಯಕ್ಕೆ, ಬಲಾತ್ಕಾರಕ್ಕೆ ಅಥವಾ ಸೈನಿಕ ಶಕ್ತಿಗೆ ತಲೆತಗ್ಗಿಸುವಂತೆಯೂ ಇಲ್ಲ. ಎರಡು ದೇಶಗಳ ನಡುವಿರುವ ಸೀಮೆಯನ್ನು ಸರಿಯಾಗಿ ಪರಿಶೀಲಿಸಿ ಅದನ್ನು ಗುರುತಿಸುವುದಷ್ಟೇ ಬಾಕಿಯಿರುವ ಕೆಲಸ. ಸಿಂಧ ಕಚ್ಛಗಳ ಗಡಿ ಭಾರತದ ವಿಭಜನೆಗೆ ಸಾಕಷ್ಟು ಮೊದಲೇ ಗೊತ್ತು ಪಡಿಸಿರವುದರಿಂದ ಅದರಲ್ಲಿ ಯಾವುದೇ ವಿವಾದಕ್ಕೆ ಆಸ್ಪದವಿರುವುದಿಲ್ಲ. ಆದುದರಿಂದ, ಸಂಧಾನದ ಮಾತುಕತೆಗೆ ಒಪ್ಪಿದ ಭಾರತವು ತನ್ನ ನೀತಿಗನುಸಾರವಾಗಿಯೇ ನಡೆದಿದೆ. ಇದು ಗೌರವ ತರಬಲ್ಲುದೇ ಹೊರತು ಅಗೌರವವನ್ನಲ್ಲ.

ಬ್ರಿಟಿಷ್ ಪ್ರಧಾನಿಯಿಂದ ಬಹಳ ದಿನ ಮೊದಲೇ ಬಂದಿದ್ದ ಸಂಧಾನದ ಪ್ರಸ್ತಾಪವನ್ನು ತಿರಸ್ಕರಿಸುತ್ತ ಬಂದುದು ಪಾಕಿಸ್ತಾನ. ಅದು ಕಚ್ಛ-ರಣದ ಸೀಮೆಯೊಡನೆ ಸಮಗ್ರ ಪಾಕ್-ಭಾರತ (ಕಾಶ್ಮೀರ ಕೂಡ) ಗಡಿಯನ್ನೂ ಗಂಟು ಹಾಕುವ ಪ್ರಯತ್ನ ಮಾಡಿತು; ಮಾಡುತ್ತಲೇ ಇತ್ತು. ಮಾತ್ರವಲ್ಲ, ಉಭಯತರಲ್ಲಿರುವ ಇನ್ನೂ ಕೆಲವು ಸಮಸ್ಯೆಗಳನ್ನೂ ಕೂಡಿಸಿ ಪ್ರಸಂಗವನ್ನು ಭೀಕರಾಕಾರಕ್ಕೆ ತರುವ ಇರಾದೆಯೂ ಅದಕ್ಕಿತ್ತು. ಆದರೆ ಭಾರತವು ಈ ಬಗೆಯ ಬೆದರಿಕೆಗೆ ಮುಂದೆ ಬಗ್ಗಲಿಲ್ಲ. ಬರಿಯ ಕಚ್ಛ-ರಣ ಗಡಿಯ ಸಂಬಂಧದಲ್ಲಿ ವಿಲ್ಸನ್ ಸೂಚನೆಯಂತೆ ಸಮಾಧಾನಕ್ಕೆ ಒಪ್ಪಿತು; ಗಡಿಯಲ್ಲಿ ೧೯೬೫ರ ಜನವರಿ ಒಂದರಂದು ಇದ್ದ ಪರಿಸ್ಥಿತಿಯನ್ನು ಉಳಿಸಿಕೊಳ್ಳಬೇಕೆಂದು ಹೇಳಿತ. ಪಾಕ್ ಮೊದಲಿಗೆ ಒಪ್ಪಿಕೊಳ್ಳದಿದ್ದರೂ ಮುಂದೆ ಒಪ್ಪಿಕೊಂಡಿತು. ಅಂದರೆ, ಭಾರತದ ದೃಢನೀತಿ ಗೆದ್ದಿತು. ಇದರಿಂದ ಭಾರತದ ಗೌರವ ಹೆಚ್ಚಾಗಲಿಲ್ಲವೆ? ಪ್ರಧಾನಿ ಶಾಸ್ತ್ರಿಯವರು ನಿಜಕ್ಕೂ ಈ ದಿಸೆಯಲ್ಲಿ ಯಶಗಳಿಸಿದ್ದಾರೆ; ದೇಶದ ನೀತಿಯನ್ನು ನೆಮ್ಮಿ ಹಿಡಿದಿದ್ದಾರೆ. ಇದು ಭಾರತದ ನೈತಿಕ ವಿಜಯವೆನ್ನಲೇ ಬೇಕು.

ರಾಷ್ಟ್ರಪತಿ ಡಾ| ರಾಧಾಕೃಷ್ಣನ್‌ರು ಇತ್ತೀಚೆಗೆ ಮಾತನಾಡುತ್ತ "ಕಮ್ಯೂನಿಸ್ಟ್ ಚೀನಾ ಮತ್ತು ಪಾಕಿಸ್ತಾನಗಳೊಡನೆ ಒಡಂಬಡಿಕೆಯನ್ನು ಮಾಡಿಕೊಳ್ಳುವ ಆಗತ್ಯವನ್ನು ಪ್ರಸ್ತಾಪಿಸಿದರು. ದೇಶದ ಅಭಿವೃದ್ಧಿಗಾಗಿ ಈ ಬಗೆಯ ಒಪ್ಪಂದ ಆಗತ್ಯವೆಂದವರ ಅಭಿಪ್ರಾಯ. ಇದು ನಿಜ. ಆದರೆ, ಅಭಿವೃದ್ಧಿಗಾಗಿ ಒಡಂಬಡಿಕೆ ಮಾಡುವುದೆಂದರೆ, ದೇಶದ ಭೂಭಾಗವನ್ನು ದಾನಮಾಡುವುದಲ್ಲ. ಆಕ್ರಮಣಕ್ಕೆ ಗುರಿಯಾಗುವುದಲ್ಲ. ಸಂದರ್ಭ ಒದಗಿದಾಗ ಈ ಎರಡು ದೇಶಗಳೊಡನೆ ಸ್ನೇಹ ಸಂಬಂಧವನ್ನು ಬೆಳೆಸಬೇಕು; ವಿವಾದಗಳಿಗೆ ಆಸ್ಪದಕೊಡಬಾರದು ಎಂದು ಇದರರ್ಥ. ದಿ| ಪ್ರಧಾನಿ ಜವಾಹರಲಾಲರೂ ಇದೇ ಅಭಿಪ್ರಾಯದಿಂದ ಚೀನಾದೊಡನೆ ಪಂಚಶೀಲ ತತ್ವದಂತೆ ಅನಾಕ್ರಮಣ ಒಡಂಬಡಿಕೆ ಮಾಡಿಕೊಂಡರು. ಆದರೆ, ಕೆಂಪು ಚೀನಾ ಸ್ನೇಹಕ್ಕೆ ದ್ರೋಹ ಬಗೆಯಿತು. ಇಂದಿಗಾದರೂ ಭಾರತ-ಚೀನಾ ಗಡಿ ವಿವಾದ ಪರಿಹಾರಕ್ಕೆ ಕೊಲಂಬೊ ರಾಷ್ಟ್ರಗಳ ಸಂಧಿ ಸೂತ್ರ ಕಲಹಗಳು ಚೀನಾದ ಮುಂದಿವೆ. ಅವನ್ನದು ಒಪ್ಪಿಕೊಂಡರೆ, ಇದೀಗ ಕಚ್ಛ ರಣದ ಬಗ್ಗೆ ಪ್ರಗತಿಯಾದಂತೆಯೇ ಅದೂ ಪರಿಹಾರವಾಗಬಹುದು. ಪ್ರಧಾನಿ ಶಾಸ್ತ್ರಿಯವರು ಪಾಕಿಸ್ತಾನಕ್ಕೆ ಅನಾಕ್ರಮಣ ಒಡಂಬಡಿಕೆ ಮಾಡಿಕೊಳ್ಳುವಂತೆ ಕರೆಯಿತ್ತಿದ್ದಾರೆ. ಹಿಂದೆ ನೆಹರು ನೀಡಿದ್ದ ಈ ಕೊಡುಗೆಯನ್ನು ಅಯೂಬಖಾನರು ತಿರಸ್ಕರಿಸಿದ್ದರು. ಈಗ ಅವರು ಭಾರತದೊಡನೆ ಈ ಬಗೆಯ ಒಡಂಬಡಿಕೆ ಮಾಡಿಕೊಳ್ಳಲು ಮುಂದೆ ಬಂದರೆ, ಉಭಯತರಿಗೂ ನೆಮ್ಮದಿಯಾಗುವುದು. ರಾಷ್ಟ್ರಪತಿ ರಾಧಾಕೃಷ್ಣನ್‌ರ ಮಾತು ನ್ಯಾಯೋಚಿತವಾದುದೇ. ಭಾರತ ಸರಕಾರವೂ ಅದು ತಳೆದಿರುವ ನಿಲುವೂ ಅದಕ್ಕೆ ವ್ಯತಿರಿಕ್ತವಾಗಿರುವುದಿಲ್ಲ. ಆದರೆ, ಒಂದು ಕೈ ಬೀಸಿದರೆ, ಸಪ್ಪಳಾಗುವುದು ಇಲ್ಲ.

ಕರ್ನಾಟಕ-ಮಹಾರಾಷ್ಟ್ರ

ಕರ್ನಾಟಕ — ಮಹಾರಾಷ್ಟ್ರಗಳ ಗಡಿಯ ವಿವಾದದತ್ತ ಪ್ರಧಾನಿ ಶಾಸ್ತ್ರಿಯವರ ಲಕ್ಷ್ಯದಲ್ಲೀ ಗಮನ ಹರಿಸುವರೆಂದು ಬಟ್ಟೆಯಾದ ವರದಿ ಹಬ್ಬಿದೆ. ಮಹಾರಾಷ್ಟ್ರೀಯರು ತಮ್ಮ ಸಾಧನೆಯನ್ನು ನಿರಂತರವಾಗಿ ಮುಂದುವರಿಸುತ್ತಲೇ ಇದ್ದಾರೆ. ಗೋವೆಯು ಸ್ವತಂತ್ರವಾದಂದ ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷವು ತಮ್ಮನ್ನು ಅಧಿಕಾರ ಗದ್ದುಗೆಗೇರಿಸಿದ ಗೋವನ್ನರಿಂದ ಗೋವೆಯು ಮಹಾರಾಷ್ಟ್ರದಲ್ಲಿ ವಿಲೀನವಾಗಬೇಕೆಂಬ ಅಭಿಪ್ರಾಯ ಪ್ರಕಟಿಸಿದ್ದಾರೆಂದು ಹೇಳತೊಡಗಿದ್ದಾರೆ ಮಹಾರಾಷ್ಟ್ರ ಸರಕಾ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ಹೀಗೇ ನಾಲ್ಕು ನಕ್ಷತ್ರ ಬಿಸಿಲು ಕಾದರೆ ಸರಕಾರವೇ ನಮ್ಮ ಕೈಯಲ್ಲಿ ಬರುತ್ತೆ...."

ಗೇಹ ರಾಜ್ಯದಲ್ಲಿ

ಕಾಲಕ್ಕೆ ತಕ್ಕ ಕೋಲ

"ಕೇಳಿದ್ಯೇನೆ?'

"ಏನಂತೆ?'

"ಅಲ್ಲಾ, ಯಾವಾಗ್ಲೂ ಹೌದೂಂತ ಅನ್ನೋಳು ಇವತ್ತು ಏನು ಅಜ್ಞಾನಿಯಂತೆ ಏಕೆ ತೋರ್ಸಿ ಕೊಂಡೇಂತ?"

"ಅಲ್ರಿ, ನಾನು ಕೇಳಿದ್ರೇನೆ ನೂರಾರು ಸಂಗ್ತಿ. ನೀವು ಎತ್ತೋದು ಯಾವುದೂಂತ ಹೇಗೆ ನನ್ಗೆ ಗೊತ್ತಾಗ್ಬೇಕು?'

"ಅಲ್ವೆ, ದೊಡ್ಡ ರಾಜಕೀಯ ಸ್ತ್ರೀಯಂತೆ ಮಾತಾಡೋಕೆ ಕಲಿತು ಬಿಟ್ಟೆಯಲ್ಲಾ?'

"ಯಾಕೆ? ಏನಾಯ್ತು?'

"ಆಗೋದೇನು ಮತ್ತೆ? ಇಂತಹ ವಿಷಯ ಕೇಳಿದ್ರ್ಯೆ ಅಂತ ಅಂದ್ರೆ ಹೌದೂಂತ ಅನ್ನೋದಿಲ್ವೆ ನೀನು?"

"ಹಾಗಂದ್ರೂ ಆದ್ರಲ್ಲಿ ತಪ್ಪೇನು?"

'ಅದ್ಕೇ ಅಂದದ್ದು, ದೊಡ್ಡ ರಾಜಕಾರಣಿ ಅಂತ."

"ರಾಜಕಾರಣಿಯಂತೆ! ಅಲ್ಲ, ರಾಜಕಾರಣಿಯಾಗಿ ಸಾಧಿಸೋ ಪುರುಷಾರ್ಥ ಅಷ್ಟರಲ್ಲೇ ಇದೆ."

"ಏನನ್ನೀಯೂ ನೀನು?. ನಿನ್ನಂತವರಿಗೆ ಬೇರೆ ಪುರುಷಾರ್ಥವಾದ್ರೂ ಏಕೆ? ನಿನ್ನ ತಾಳಕ್ಕೆ ರಾಗಕ್ಕೆ ಸರಿಯಾಗಿ ಕುಣಿಯೋ ಗಂಡನೆಂಬೋ ಮಂಗಣ್ಣ ಸಿಕ್ಕಿದರೆ ಸಾಕೂನ್ನ ..."

"ಪಾಪ, ನಿಮ್ಮ ದುರವಸ್ಥೆಯೆ!"

"ಸದ್ಯ ಅಷ್ಟಾದ್ರೂ ಅನುಕಂಪವಿದೆಯಲ್ಲಾ!"

'ಅನುಕಂಪವಿಲ್ದೆ ಏನಂತೆ?'

'ಅದ್ರೆ ಒಂದು ನೋಡು, ಬರಿಯ ಅನುಕಂಪವಿದ್ರೆ ಅದ್ರಿಂದೇನು ಪ್ರಯೋಜನ?'

"ಅಷ್ಟಾದ್ರೂ ಇದೇಂತ ಕೃತಜ್ಞರಾಗಿರ ಬೇಡ್ವೆ?"

"ಯಾರು, ನಾನು ನಿನಗೆ ಕೃತಜ್ಞನಾಗಿರಬೇಕೆ?"

'ನಾನು ನಿಮ್ಮ ಮೇಲೆ ಅನುಕಂಪ ಬೀರ್ತಿನೆ ಅಂದ ಮೇಲೆ ಅಷ್ಟಾದ್ರೂ ಆಗದಿದ್ರೆ.......'

'ಕೇಳು ನಿಜವಾಗಿ ನೀನೇ ನನ್ಗೆ ಕೃತಜ್ಞಳಲ್ಲ ದಾಸೀನುದಾಸಿಯಾಗಿರಬೇಕು..'

'ಹ್ಹ ಹ್ಹ........'

'ಅಲ್ವೆ, ಯಾಕದು ನಗು?'

'ಅಲ್ಲ, ಮತ್ತೆ ದಾಸೀನುದಾಸಿ ಅಂತೀರಲ್ಲಾ? ಯಾವ ನಿಘಂಟುವಿನಿಂದ ಆ ಶಬ್ದ ಆಣಿ ಮುತ್ತು ಆದೂಂತ.......'

'ಓಹೋ, ಅಷ್ಟೇನೆಯೆ? ದಾಸಾನುದಾಸನ ಸ್ತ್ರೀ ಆಕೆ...'

'ಅಂದ್ರೆ ನೀವು?'

'ಹ್ಞೂಂ....ಹಾಗೆನೇ ನೋಡು....'

'ಅದು ಸರೀನ್ನಿ....ಗಾಡಿಯ ಕೋರಿಗಳೆರಡೂ ಆದೇಶರ ಇದ್ರೆ ಮುಂದೆ ಹೋಗ ಬಹುದೂನ್ನಿ..."

'ಹ್ಞೂಂ....'

"ಅಂತೂ ನನ್ನನ್ನ ರಾಜಕಾರಣಿ ಅಂತ ಅಟ್ಟದ ಮೇಲೇರಿಸಿ ಈಗ ತಿಪ್ಪೆಗೆಸೆದ್ರಿ.."

ಅಯ್ಯೋ, ರಾಜಕಾರಣಿಗಳೆಲ್ಲ, ದಾಸಾನುದಾಸರೇ ನೋಡು...,

'ಹೇಗೆ?"

'ಅದೂ ಗೊತ್ತಿಲ್ವೆ? ಜನತೆಯೇ ಜನಾರ್ದನ. ಜನಸೇವಕರೇ ರಾಜಕಾರಣಿಗಳು...."

"ಅಂದ್ರೆ ರಾಜಕಾರಣಿಗಳು ಜನಸೇವೆಯನ್ನ ಮಾಡಿಯೇ ಜನಾರ್ದನನನ್ನು ತೃಪ್ತಿಗೊಳಿಸಬಲ್ಲರು."

"ಮತ್ತಿನ್ನೇನು? ಜನರ ದಾಸಾನುದಾಸರು ಅವರು ; ಜನಾರ್ದನನಿಗೆ ಶೀರ ಹತ್ತಿರದವರು.'

"ಅದ್ರೆ ನೋಡಿ, ಈಗ ಅವರು ಅವ್ರೆಲ್ಲ ಜನಸೇವೆ ಮಾಡುವುದನ್ನು ಕಡಿಮೆ ಮಾಡ್ತಾ ಇದ್ದಾರಂತಲ್ಲಾ....ಅದೂ ಸೇವೆ ನ್ನಿ. ಸೇವೆ ಮಾಡೋದ್ರಲ್ಲೂ ನಾ ಮುಂದೆ ನಾ ಮುಂದೇಂಬ ಪೈಪೋಟಿಯ ನಡುವೆ ಅವರಿಗೆ ಬಿಡುವಾದ್ರೆ ಎಲ್ಲಿದೆ ಸೇವೆ ಮಾಡೋಕೆ?'

'ಮರುಳೆ, ಮೊದಲು ಸ್ವಾರ್ಥ, ಅನಂತರ ಪರಾರ್ಥವಲ್ಲವೆ?'

'ಅಂದರೆ?'

'ಮೊದಲು ತನ್ನ ಸೇವೆ ತಾನು ಮಾಡಿಕೊಂಡು ಅನಂತರ ಪರ ಸೇವೆಗೆ ತೊಡಗಬೇಕು?

"ಒಳ್ಳೆ ಕತೆ ಹೇಳ್ತಿರಿ ನೀವು...?"

'ಏನ?'

'ಮತ್ತೆ ಜನಸೇವೆಯ ಸೋಗು ಯಾಕೆ?,

'ನೋಡು, ವಿವರಿಸಿ ಹೇಳ್ತೀನೆ-ಜನ ಜನಾರ್ದನನಾದರೆ, ರಾಜಕಾರಣಿ ಪೂಜಾರಿ. ಪೂಜಾರಿಗೆ ಜನಾರ್ದನನ ಪೂಜೆಮಾಡಿ ಆತನನ್ನು ಪ್ರಸನ್ನೀಕರಿಸ ಬೇಕೆಂಬ ಇರಾದೆಗಿಂತಲೂ ದೇವರ ಹೆಸರಲ್ಲಿ ತನ್ನ ತನ್ನವರ ಹೊಟ್ಟೆ ಹೊರೆದು ಕೊಳ್ಳುವುದು ಹೇಗೇಂತ ಚಿಂತೆ, ಅದಕ್ಕಾಗಿ ಕೆಲವೊಮ್ಮೆ ಜಗಳಾಡಿದರೂ ಅದರಲ್ಲಿ ದೋಷವೇನಂತೆ?'

'ಅದಲ್ಲ ಇರ್ಲಿ...ನಮಗೇನಂತೆ?'

"ಯಾಕೆ ಹೇಳಿದೆ ಅಂದ್ರೆ, ಈಗ ಒಂದು ಸಂಗ್ತಿ ನಡೆದಿದೆ ನೋಡು ..."

'ಏನಂತೆ?'

"ಕ್ಷೌರಿಕರು ಇದ್ದಾರೆ ನೋಡು,.."

"ಎಲ್ಲಿ?"

ಎಲ್ಲಿ ಅಂದ್ರೆ? ಅವರವರ ಮನೆಗಳಲ್ಲಿ.."

'ಹೌದು....'

"ಹೌದಂತೆ, ಮತ್ತವರು ಬೇರೆಯವ್ರ ಮನೇಲಿರ್ತಾರೆಯೆ?"

"ಏನಾಯ್ತೀಗ? ಯಾಕೆ ಕೋಪ ಬರುತ್ತೆ?'

'ಅಲ್ಲ, ಮತ್ತೆ ಎಲ್ಲಿರ್ತಾರೇಂತ ಅಂತೀಯಲ್ಲಾ?'

'ಹೌದು, ಇರ್ತಾರೆ ಅಂದ್ರಿ. ಎಲ್ಲೇಂತ ತಿಳ್ಕೊಳ್ಳೋದು ಬೇಡವೆ?'

"ಆಯ್ತಲ್ಲ. ಮತ್ತೆ ಕೇಳೋದಾದ್ರೆ ಕೇಳು..."

"ಹ್ಞೂಂ...ನೀವು ಹೇಳ್ತೀನೆ ಅಂದಾಗ ಬೇಡ ಅನ್ನೋಕೆ ನಾನೆಷ್ಟರವಳು?....'

"ನೋಡು, ನೀನು ಹೀಗೆಲ್ಲಾ ನನ್ನ ಉದ್ಧಾರಕ್ಕೆ ಕೇಳೋದು ಬೇಡಾಂದೆ.'

"ಅಯ್ಯಪ್ಪ, ನಿಮ್ಮ ಉದ್ಧಾರಕ್ಕಲ್ಲ, ನನ್ನ ಉದ್ಧಾರಕ್ಕೇ ಕೇಳ್ತೆನೆ ...'

'ಹಾಗೆ ಬಾ ಮತ್ತೆ ದಾರಿಗೆ... ನೋಡು, ಆ ಬಾರ್ಬರರು ತಮಗೆ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯ ಕೂಡ ಬೇಕೂಂತ ಮನವಿ ಅರ್ಪಿಸಿದ್ದಾರಂತೆ...'

"ಅದು ನ್ಯಾಯವೇ ಅನ್ನಿ. ನಿಮ್ಮ ಟೋಪಿಯೊಳಗಣ ತೂತುಗಳಿಗೆಲ್ಲಾ ಪ್ರಾತಿನಿಧ್ಯ ಕೊಡುವಾಗ..'

'ಏ, ಭಾರಿ ಉದ್ದವಾಯಿತೇ ನಿನ್ನ ನಾಲಗೆ...."

'ಅಲ್ಲ, ಇದ್ದದ್ದನ್ನ ಇದ್ದ ಹಾಗೇ ಅಂದ್ರೆ ಯಾಕೆ ಸುಂಸುಮ್ನೇ ರೇಗಾದ್ತೀರಾ?'

'ಅಲ್ಲ, ಟೋಪಿಗೂ ತೂತಿದೆ, ಕೋಟಿಗೂ ಇದೆ ....ಎಲ್ರ ಮನೇ ದೋಸೇನೂ ತೂತೇ ..."

"ತೂತು ಬಿದ್ರೆ ಇದ್ದೇ ಇರುತ್ತೇನ್ನಿ....'

'ಮತ್ಯಾಕೆ ಟೋಪಿ ತೂತನ್ನೇ ಎತ್ತಿ ಹೇಳ್ತೆ?'

'ಇಲ್ಲ ಮಾರಾಯ್ರೆ, ನಿಂಗೆ ಅನಿಷ್ಟವಾದ್ರೆ ತುಟಿ ಬಿಚ್ಚೋದಿಲ್ಲ. ನಿಮ್ಗೆ ಏನೇನ ಬೇಕು ಎಲ್ಲ ಅಂದು ಬಿಡಿ..."

'ಅಂದ್ರೆ ಕೋಣನ ಮುಂದೆ ಕಿನ್ನರಿ ಬಾರ್ಸೇಂತ ಅಲ್ವೆ? ಅಬ್ಬಾ...."

'ಮತ್ತೆ ನಾನು ಏನು ಮಾಡಬೇಕೂಂತ? ಮಾತಾಡಿದ್ರೂ ತಪ್ಪು.... ಇಲ್ದಿದ್ರೂ ತಪ್ಪು ......"

"ಅಯ್ಯೋ, ಯಾಕೆ ಗಂಗಾ ಭಾಗೀರಥೀ ಪ್ರಸನ್ನವಾದಳು? ನಾನೇನು ಅನ್ನಬಾರದ್ದನ್ನ ಅಂದೆ..."

'...............'

"ಯಾಕಮ್ಮಾ... ಇಲ್ವೆ, ಪಾಪ, ಅಳಬೇಡ ಕಣೇ. ಇಗೊ ಕಣ್ಣೀರು ಒರಸಿದೆ .... ನೋಡೋಣ ಒಂದು ಬಾರಿ ನಿನ್ನ ಅಳುಮೊಗವನ್ನ..."

'ಸಾಕು ಸುಮ್ಮನಿರೀಂದ್ರೆ...."

'ಹ್ಞಾ, ಹಾಗೆ.... ಯಾವಾಗ್ಲೂ ...."

'ಮತ್ಯಾಕೆ ನೀನು ನನ್ಮೇಲೆ ಸುಂಸುಮ್ನೆ ಸಿಟ್ಟು ಮಾಡೋದು? ಮಾತಿಗೆ ಮಾತಾಡಿದ್ರೂ ತಪ್ಪು, ಸುಮ್ಮನಿದ್ರೂ....'

'ಇಲ್ಲಮ್ಮಾ, ಏನೂ ಚಿಂತೆ ಬೇಡ. ತಪ್ಪಿದ್ರೂ ಮಾತಾಡ್ತಾನೇ ಇರು. ಏನು?"

"ಮತ್ತೆ ನಿಮಗೆ ಪಿತ್ತ ನೆತ್ತಿಗೇರಿದ್ರೆ ....'

"ಅದಕ್ಯಾಕಂತೆ ಚಿಂತೆ? ಏರಿದ್ರೆ ಮತ್ತೆ ಇಳಿಯುತ್ತೆ...."

"ಅದು ಹೌದೂನ್ನಿ... ಇರ್ಲಿ; ಆ ಬಾರ್ಬರರ ಕತೆಯೇನಾಯ್ತು?"

"ಹೌದು, ಅವರಿಗೆ ಪ್ರಾತಿನಿಧ್ಯ ಕೊಡಬೇಕಂತೆ... ಅಲ್ಲ, ಹೀಗೆ.... ಒಂದೊಂದು ಕೋಮಿನವರಿಗೂ ಪ್ರಾತಿನಿಧ್ಯ ಕೊಡುತ್ತ ಹೋದರೆ...."

'ನೀವು ಏನೇ ಹೇಳಿ, ನಾನನ್ನೋದಾದ್ರೆ ಖಂಡಿತಕ್ಕೂ ಕೊಡಬೇಕು ...'

'ಯಾಕೆ?'

'ಅವರು ಬಹಳ ಗತವೈಭವವಿರುವವರು. ರಾಜ ಕ್ಷೌರೀನೆಂಬವನೆ ಸ್ಥಾನಮಾನ ರಾಜ ಪುರೋಹಿತರಿಗಿಂತಲೂ ಹೆಚ್ಚಿತ್ತು ನೋಡಿ....'

"ಹೇಗೆ?" .

'ಪುರೋಹಿತ ರಾಜನಿಗೆ ಅರ್ಥವಾಗದ ಮಂತ್ರಗಳನ್ನು ವಟಗುಡುತ್ತಾ ಇದ್ದರೆ ಕ್ಷೌರಿಕ ಆವನಿಗೆ ಅರ್ಥವಾಗುವಂತೆ ಕಿವಿಯೂದುತ್ತ ಇದ್ದ. ಅದ್ದರಿಂದಲೇ ಅವರು ವೈಭವದಿಂದ ಇದ್ದರು. ಇಂದು ಮಾತ್ರ ಅವರ ಸ್ಥಿತಿ ಜಮಲುಬಾದು ಕೋಟಿಯಾಗಿದೆ....,

"ಯಾಕೆ?'

"ರಾಜ ಮಹಾರಾಜರು ಇಲ್ಲವಾದರು. ರಾಜ ಪುರೋಹಿತನೊಡನೆ ಈತನಿಗೂ ಅರ್ಧಚಂದ್ರವಾಯಿತು. ಅದೂ ಅಲ್ಲದೆ ಈ ಕಲಿಯುಗದಲ್ಲಿ ವರ್ಣಸಂಕರವಾಗಿ ಎಲ್ಲರೂ ಕ್ಷೌರಿಕರಾಗಿ ಬಿಟ್ಟಿದ್ದಾರೆ..."

'ಹ್ಞೂಂ, ನಾನೂನೂ ಅನ್ನು..."

'ಅಲ್ಲ, ಲೋಕವೇ ಹಾಗಿರವಾಗ ಅದರಿಂದ ನೀವೊಬ್ರು ಹೇಗೆ ಬೆರೆಯೂದೀರಾ? ಕಾಲಕ್ಕೆ ತಕ್ಕ ಕೋಲ ಕಟ್ಟ ಬೇಕಲ್ಲವೆ?'

"ಅದಕ್ಕೇ ಅಂದದ್ದು ನೀನು ಅಲ್ವೆ? ಪ್ರಾತಿನಿಧ್ಯ ನೀಡದೆ ಹೋದರೆ, ಅವರು ಸಂಪಿಗೆ ತೊಡಗಿದರೆ ಪಾಪ. ಜನ ಜನಾರ್ದನನ ಗತಿಯೇನೂಂತ?"

"ಅದು ಹೌದ್ರಿ, ಸಂಪಿನ ಯುಗವಿದು. ಕೂತದ್ದು, ನಿಂತದ್ದು ತಪ್ಪು ಎಂದು ಮುಷ್ಕರವೇಳೋ ಇಂದಿನ ಕಾಲದಲ್ಲಿ ಸರಿಯಾದ ಪ್ರಾತಿನಿಧ್ಯ ಕೊಡದೆ ಹೋದರೆ, ಕ್ಷೌರಿಕರೆಲ್ಲಾ ಸಂಪಿಗೆ ನಿಂತರೆ ಗತಿಯೇನೂಂತ?'

"ಅದ್ಕೇ ಅಂದದ್ದು ನೀನು, ಅವರ ಬೇಡಿಕೆ ನ್ಯಾಯೋಚಿತವಂತ?"

'ಹೌದ್ರಿ, ಈಗ ಮತ್ತೇನು ಮಾಡೋದಕ್ಕಾ ಇಲ್ಲ. ಜನರಿದ್ದಲ್ಲಿಯೇ ಜನಾರ್ಧನ ಇರ್ತಾನೆ. ಅದದ್ರಿಂದ, ನಾಲ್ಕು ಜನ ಏನು ಹೇಳ್ತಾರೆ, ಅದನ್ನ ಒಪ್ಪಿಕೊಳ್ಳಲೇ ಬೇಕಾಗುತ್ತೆ."

"ಹ್ಞೂ, ನೀನು ಏನೇಅನ್ನೂ, ನಾನ ಕೇಳಿಕೊಂಡು ಒಪ್ಪಿಕೊಳ್ಳೋದಿಲ್ವೆ ಹಾಗೆ..."

"ಹೌದೌದು.... ... ಒಪ್ಪಿಕೊಳ್ಳೋರು ನೀವು..."

"ಕೇಳು ನೀನು, ಕಾಲಕ್ಕೆ ತಕ್ಕ ಕೋಲ ಕಟ್ಟ..."

"ಓ, ಸರ್ತಾಗಿಲ್ರಿ ನೀವು....ಪಾಪ, ಬನ್ನಿ... ಇವತ್ತು ಮಾತ್ರ ಕೊಡಪಾನದ ಕಂತ್ರಿಗೆಗೇ ಕೈ ಹಾಕಬೇಕು. ಬೇಗ ಬನ್ನಿ ಮತ್ತೆ, ಗೋದಿ ಹಿಟ್ಟಿನ ದೋಸೆ ಮಾಡಿದ್ದೇನೆ..."

"ಓ, ಸರ್ತಾಗಿಲ್ಲ....... ಕಾಲಕ್ಕೆ ತಕ್ಕ ಕೋಲ"

"ಹ್ಹ...ಹ್ಹ....ಹ್ಹ..."

—ಗೋರಾ

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ.

0.30 ಪೈಸೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ರಖಂ ಪ್ರತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.
(ಕಳೆದ ಸಂಚಿಕೆಯಿಂದ ಮುಂದುವರಿದುದು)

ಕರ್ಮಯೋಗದಲ್ಲಿ ನಿರತನಾದವನು ಏಕಾಗ್ರತೆ ಹೊಂದಿದ ಮನದಿಂದ ದೃಢ ನಿಶ್ಚಯವುಳ್ಳವನಾಗಿ ಕೆಲಸ ಮಾಡುವವನಾಗುವನು. ಅವನಿಗೆ ಆತ್ಮ ಸಾಕ್ಷಾತ್ಕಾರವಾಗಲು ಸಾಧ್ಯವಿದೆ ಎಂದು ಶ್ರೀ ಕೃಷ್ಣನು ವಿವರಿಸತೊಡಗುವನು. ಮತ್ತು ಕೇವಲ ಕರ್ಮಕಾಂಡಗಳಲ್ಲಿ ಹೇಳಿದ ಯಜ್ಞಯಾಗಾದಿಗಳಾದ ಬಾಹ್ಯ ಆಚರಣೆಯನ್ನು ಕುರಿತು ಶ್ರೀ ಕೃಷ್ಣನು ಹಾಸ್ಯ ಮಾಡುವನು.

ಅರ್ಜುನನ ಕಾಲದಲ್ಲಿ ಕರ್ಮಯೋಗ ಎಂದರೆ ಕರ್ಮಕಾಂಡಗಳಲ್ಲಿ ಹೇಳಿದ ಯಜ್ಞಯಾಗಾದಿಗಳೆಂದು ಜನರಲ್ಲಿ ತಿಳುವಳಿಕೆಯಾಗಿತ್ತು. ಶ್ರೀ ಕೃಷ್ಣನು ಕರ್ಮಯೋಗವೆಂದರೆ ಅದು ಅಲ್ಲವೆಂದೂ, ಕರ್ಮಯೋಗದ ಗುರಿಯನ್ನು ವಿವರಿಸಿ, ಆಗಿನ ಜನರಲ್ಲಿ ಗುರಿಯನ್ನು ಸಾಧನೆಯನ್ನು ಮರೆತು ಬಿಡುವಂತಾಗಿದೆ ಎಂದೂ ವಿವರಿಸುವನು. ಶ್ರೀ ಕೃಷ್ಣನ ಮೇರೆಗೆ ಕರ್ಮಯೋಗ ಎಂದರೆ ಏಕಾಗ್ರತೆ ಪಡೆಯಲು ಮಾಡುವ ಸಾಧನೆಯಾಗಿದೆ. ಕೇವಲ ಬಾಹ್ಯ ಕರ್ಮಗಳಿಂದ ಅದನ್ನು ಪಡೆಯಲು ಸಾಧ್ಯವಿಲ್ಲವೆಂದೂ, ಯಜ್ಞಯಾಗಾದಿಗಳನ್ನು ನಾನಾ ಅಪೇಕ್ಷೆಗಳಿಂದ ಮಾಡುವವರಿಗೆ ಅದು ದೊರಕಲಾರದೆಂದೂ ಹೇಳುವನು.

ಕರ್ಮಯೋಗ ಎಂದರೆ, ನಿನ್ನ ಕಣ್ಮುಂದೆ ಒಂದು ಗುರಿಯನ್ನು ಇಡಬೇಕು. ಅದಕ್ಕಿಲ್ಲದೆ ಇದ್ದರೆ ಜೀವನದಲ್ಲಿ ಉತ್ಸಾಹ ಮೂಡಿ ಬರಲಾರದು. ಒಂದು ಗುರಿಯನ್ನು ಕಣ್ಮುಂದೆ ಇಟ್ಟು, ಸದಾ ಅದಕ್ಕಾಗಿ ಶ್ರಮಿಸಿದರೇ ನಿನ್ನ ಬುದ್ಧಿ ಮನವು ಏಕಾಗ್ರತೆ ಪಡೆಯುವುದು. ನೂರಾರು ಬಯಕೆ, ಗುರಿ ಇಟ್ಟವನಿಗೆ ಏಕಾಗ್ರತೆ ಬರಲಾರದ, ಮತ್ತು ಆಶಾವಾಸನೆಗಳಿಂದ ಮಾಡುವ ಕರ್ಮಕಾಂಡಗಳಿಂದ ನಿನಗೆ ಎಂದಿಗೂ ಶಾಂತಿ ದೊರಕಲಾರದು. ನೂರಾರು ಬಯಕೆಗಳಿಂದ ನೂರಾರು ದೇವತೆಗಳ ಬಳಿ ಪ್ರಾರ್ಥಿಸಿ ಪೂಜಾ ಹರಕೆಗಳನ್ನು ನೀಡುತ್ತಾ ಇದ್ದವರಿಗೆ ಒಂದಲ್ಲದಿದ್ದರೆ ಒಂದು ಬಯಕೆ ತಲೆದೋರುತ್ತಾ ಇರುವುದು. ಅವರಿಗೆಲ್ಲಿಂದ ಶಾಂತಿ?

ಯಾಮಿಮಾಂ ಪುಷ್ಪಿತಾಂ ವಾಚಂ|
ಪ್ರವದಂತ್ಯವಿಪಶ್ಚಿತಃ|
ವೇದ ವಾದರತಾಃ ಪಾರ್ಥ|
ನಾನ್ಯದಸ್ತೀತಿ ವಾದಿನಃ ||೪೨||

ವೇದಗಳಲ್ಲಿ ಹೇಳಿದ ಮಾತಿಗಿಂತ ಮೇಲಿನ ಮಾತು ಬೇರೆ ಇಲ್ಲ ಎಂಬುದು ಬಹು ಚೆನ್ನಾಗಿ ಶಾಸ್ತ್ರದ ಮಾತಿನ ವಿದ್ವಾಂಸರಿಗೆ ನಿಜವಾಗಿಯೂ ತಿಳಿದಿಲ್ಲ. ಕರ್ಮಕಾಂಡಗಳಿಂದ ಮೇಲಿನ ಮಾತು ಇನ್ನಿಲ್ಲ ಎನ್ನುವವರು ಏನೂ ತಿಳಿದಿಲ್ಲ.

ಕಾಮಾತ್ಮಾನಃ ಸ್ವರ್ಗಪರಾ|
ಜನ್ಮ ಕರ್ಮ ಫಲ ಪ್ರದಾಮ್|
ಕ್ರಿಯಾ ವಿಶೇಷ ಬಹುಲಾಂ|
ಭೋಗೈಶ್ವರ್ಯಗತಿಂ ಪ್ರತಿ || ೪೩ ||

ನಾನಾ ಬಯಕೆಗಳಿಂದ ತುಂಬಿದ್ದವರು ಸ್ವರ್ಗವು ತಮ್ಮ ಗುರಿ ಎಂದು ಬಹು ಚೆನ್ನಾಗಿ ಮಾತಾಡುವ ವಿದ್ವಾಂಸರು. ಇವರು ಸ್ವರ್ಗವು ಗುರಿಯಾಗಿದ್ದು ಅದು ದೊರಕುವುದು. ಹೇಳಿದ ಮಾತುಗಳಂತೆ ಕರ್ಮಗಳಿಗನುಸಾರವಾಗಿ, ಹೊಸಹೊಸ ಜನ್ಮವು ಲಭಿಸುವುದು. ಅಂತಹ ಸ್ವರ್ಗ ಅಥವಾ ಸ್ಥಾನಮಾನಗಳು ಬೇಕೆಂದು ಇದ್ದವರು ಆಚರಿಸಲು ತಕ್ಕ ಯೋಗ್ಯ ಯೋಗ್ಯ ಕರ್ಮಗಳು, ವೇದಗಳಲ್ಲಿ ಹೇಳಿದ ಯಜ್ಞ ಯಾಗಾದಿ, ಪೂಜೆಗಳೂ ಇವೆ.

ಭೋಗೈಶ್ವರ್ಯ ಪ್ರಸಕ್ತಾನಾಂ|
ತಯಾಪಹೃತ ಚೇತಸಾಮ್|
ವ್ಯವಸಾಯಾತ್ಮಿಕಾ ಬುದ್ಧಿಃ|
ಸಮಾಧೌ ನ ವಿಧೀಯತೇ ||೪೪||

ಯಾರು ಈ ಸುಖ ಮತ್ತು ಅಧಿಕಾರ ಇಚ್ಛಿಸುವರೋ, ಯಾರು ಈ ಮಾತುಗಳಿಂದ ಆಕರ್ಷಿತರಾಗುವರೋ, ಅವರು ಸ್ಥಿರ ಬುದ್ಧಿಯುಳ್ಳವರಲ್ಲ ಅವರು ದೃಢ ನಿಶ್ಚಯವುಳ್ಳವರಲ್ಲ. ಮತ್ತು ಅವರು ಸ್ಥಿಮಿತ ಬುದ್ಧಿಯಿಂದ ಧ್ಯಾನ ಮತ್ತು ಸಮಾಧಿಗೆ ಅರ್ಹತೆ ಪಡೆದವರಲ್ಲ.

ಇಲ್ಲಿ ಶ್ರೀ ಕೃಷ್ಣನ ಮುಖಾಂತರ ವ್ಯಾಸರ, ಆಕಾಲದಲ್ಲಿ ಕರ್ಮಕಾಂಡಗಳ ಕ್ರಿಯೆಗಳನ್ನು ಕೇವಲ ಬಾಹ್ಯಾಚರಣೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಆಚರಿಸುವುದನ್ನು ಖಂಡಿಸಿರುವರು. ನಾನಾ ವಿಧದ ಬಯಕೆಗಳಿಂದ ವಿವಿಧ ಬಾಹ್ಯಕರ್ಮಗಳನ್ನು ಮಾಡಿ, ನಾನಾ ದೇವತೆಗಳ ತೃಪ್ತಿಗೆ ಯಜ್ಞಗಳನ್ನು ಆಚರಿಸುವವರನ್ನು, ಮೂಲ ಉದ್ದೇಶವನ್ನು ಮರೆತು ಬಿಟ್ಟುದಕ್ಕೆ ಖಂಡಿಸಿರುವರು. ಈ ಯಜ್ಞಯಾಗಾದಿಗಳನ್ನು ಏಕಾಗ್ರತೆ ಪಡೆಯಲು ಹಿಂದಿನವರು ಇಟ್ಟರೂ ಕ್ರಮೇಣ ಜನರು ಅದರ ಮೂಲ ಉದ್ದೇಶವನ್ನು ಮರೆತು, ಕೇವಲ ಆ ಸಾಧನೆಯಲ್ಲಿಯೇ ನಿರತರಾಗಿ ಅದರಲ್ಲಿ ತೃಪ್ತಿಗೊಂಡು, ಗುರಿಯನ್ನು ಕಲಹಿದೆ ನಾನಾ ಆಶಾಕಾಮನೆಗಳಿಂದ ತೊಳಲಾಡುವಂತಾಗುವುದನ್ನು ನೋಡಿ ವ್ಯಾಸರು, ಅವರ ಪುನರ್ ಪ್ರಚಾರ ಭಗವದ್ಗೀತೆ ಮುಖಾಂತರ ಮಾಡಿದರು.

ಅದಕ್ಕಾಗಿ, ಕರ್ಮಕಾಂಡಗಳನ್ನು ಆಶಾಕಾಮನೆಗಳಿಂದ ಅನುಸರಿಸುವವರನ್ನು ಹೀಗೆ ಹಾಸ್ಯ ಮಾಡಿದ್ದಾಗಿದೆ. ಆಶಾಕಾಮನೆಗಳಿದ್ದವರು ತಮಗೆ ದೊರೆತ ಸ್ವರ್ಗ ಇತರ ಅಧಿಕಾರ ಸ್ಥಾನಗಳನ್ನು ಬಿಟ್ಟು, ಪುನಃ ಮರಳಿ ಬರಬೇಕೆಂದೂ, ಮತ್ತೆ ಮತ್ತೆ ಜನ್ಮವೆತ್ತಬೇಕೆಂದೂ ತಿಳಿಸಲಾಗಿದೆ.

ಈ ಆಶಾಕಾಮನೆಗಳು ಅಲ್ಪ ಮಟ್ಟದ್ದು. ಕರ್ಮಗಳಿಂದ ಈ ಕಾಮನೆಗಳನ್ನು, ಸಂತೋಷ, ಅಧಿಕಾರಗಳನ್ನು ಪಡೆದು ಅದನ್ನು ಅನುಭವಿಸಿ ಮುಗಿದೊಡನೆ ಪುನಃ ನೀನು ಈ ಮೃತ್ಯು ಲೋಕಕ್ಕೆ ಮರಳಿ ಬರಬೇಕಾಗುವುದು. ಈ ಸಂತೋಷ, ಅಧಿಕಾರಗಳು ಕ್ಷಣಿಕ. ಅದಕ್ಕಿಂತ ಹಿರಿದಾದ ಈ ಶಾಂತಿ ಸುಖವನ್ನು ಕೊಡುವ ಯೋಗ ಇದಾಗಿದೆ. ಇದರಿಂದ ಫಲಾಪೇಕ್ಷೆ ಇಲ್ಲದೆ ಈ ಯೋಗದಲ್ಲಿ ನಿರತನಾಗಿ, ನಿನ್ನ ಮುಂದಿದ್ದ ಸಮಸ್ಯೆಗಳನ್ನು ಇದಿರಿಸು. ಫಲಾಪೇಕ್ಷೆಯಿಂದ ನಿನ್ನ ವಿವೇಕ ಬುದ್ಧಿಯು ನಷ್ಟವಾಗುವ ಸಂಭವವಿದೆ.

ತ್ರೈಗುಣ್ಯ ವಿಷಯಾ ವೇದಾ|
ನಿಸ್ತ್ರೈಗುಣ್ಯೋ ಭವಾರ್ಜುನ|
ನಿರ್ದ್ವಂದ್ವೋ ನಿತ್ಯ ಸತ್ತ್ವಸ್ಥೋ|
ನಿರ್ಯೋಗಕ್ಷೇಮ ಆತ್ಮವಾನ್ || ೪೫ ||

ವೇದಗಳ, ಮೂರು ಗುಣಗಳ ವಿಷಯವನ್ನೇ ಹೇಳುವುವು ಎಂದರೆ ವೇದಗಳ ಕರ್ಮಕಾಂಡಗಳನ್ನು ವಿವರಿಸುವುವು. ಓ ಅರ್ಜುನಾ, ನೀನು ದ್ವಂದ್ವ ಗುಣಗಳಿಂದ ಮುಕ್ತನಾಗಿ, ಸತ್ವಗುಣದಲ್ಲಿ ಸದಾ ನಿರತನಾಗಿ, ಎಲ್ಲಾ ಮಮತೆ ಇಚ್ಛೆಯನ್ನು ತ್ಯಜಿಸಿದವನಾಗಿ ನೀನು ಆತ್ಮನಲ್ಲಿ ತೃಪ್ತಿ ಪಡೆ.

ಓ ಅರ್ಜುನನೇ, ಈ ನಶಿಸಿಹೋಗುವ ವಸ್ತುಗಳ ಆಶೆಯಿಂದ ಕರ್ಮ ಮಾಡುವ ಸ್ಥಿತಿಗಿಂತ ಅಚೆಗಿನ, ಅದಕ್ಕಿಂತ ಹಿರಿಯ, ಎಣೆ ಇಲ್ಲದ, ನಾಶವಿಲ್ಲದ, ಸದಾ, ಶಾಶ್ವತವಾಗಿರುವ ಸ್ಥಿತಿಯನ್ನು ಇಚ್ಛಿಸು. ಎಲ್ಲರೂ ಒಂದು ವಸ್ತುವನ್ನು ಬಯಸುವರು. ಅದಕ್ಕೆ ಯೋಗವೆಂದೂ, ದೊರಕಿಸಿಕೊಂಡ ಬಳಿಕ ಇಟ್ಟುಕೊಳ್ಳಬೇಕೆಂದೂ ಹಂಬಲಿಸುವರು. ಅದಕ್ಕೆ ಕ್ಷೇಮವೆಂದು ಹೇಳುವರು. ಈ ಎರಡು ಯೋಗ ಮತ್ತು ಕ್ಷೇಮವನ್ನು ಬಿಟ್ಟು ನೀನು ಶಾಶ್ವತವಾದ ಎಣೆ ಇಲ್ಲದ, ಅನಂತವಾದ ವಸ್ತು ಶಾಂತಿಯನ್ನು ಪಡೆ. ಎಂದರೆ ಈ ನಶಿಸಿ ಹೋಗುವ ವಸ್ತುಗಳನ್ನು ತ್ಯಜಿಸಿ, ಎಂದೆಂದಿಗೂ ಇರುವ ಆತ್ಮವನ್ನು ಪಡೆ. ಒಂದು ವಸ್ತುವನ್ನು ಬಯಸುವುದಾಗಲೀ, ಅದನ್ನು ಉಳಿಸಿಕೊಳ್ಳಬೇಕೆಂಬ ಹಂಬಲವಿಂದಲೂ, ಎಂದಿಗೂ ಮನಶ್ಶಾಂತಿ ಇರದು. ಈ ಎರಡನ್ನು ತ್ಯಜಿಸಿದೊಡನೆ ಶಾಂತಿ ತಾನಾಗಿ ಒದಗುವುದು.

ಯಾವಾನರ್ಥ ಉದಪಾನೇ|
ಸರ್ವತಃ ಸಂಪ್ಲುತೋದಕೇ|
ತಾವಾನ್ಸರ್ವೇಷು ವೇದೇಷು
ಬ್ರಾಹ್ಮಣಸ್ಯ ವಿಜಾನತಃ || ೪೬ ||

ಆತ್ಮವನ್ನರಿತ ಬ್ರಾಹ್ಮಣ (ಎಂದರೆ ಬ್ರಹ್ಮನ್—ಆತ್ಮವನ್ನು ತಿಳಿದವನು) ನಿಗೆ ವೇದಗಳು ಎಷ್ಟು ಮಟ್ಟಿಗೆ ಉಪಯೋಗವಾಗುವುವು, ಎಂದರೆ, ನೆರೆ ತುಂಬಿದ ಪ್ರದೇಶದಲ್ಲಿ ಬಾವಿ ನೀರಿನ ಉಪಯೋಗವಿದ್ದಷ್ಟು ಮಾತ್ರ.

ಕರ್ಮಕಾಂಡಗಳಲ್ಲಿ ಅಥವಾ ಜಪತಪಗಳಲ್ಲಿ, ದೇವಸ್ಥಾನ ಸಂದರ್ಶನ, ಪೂಜೆ ಇತ್ಯಾದಿಗಳನ್ನು ಮಾಡುವಾಗ ದೊರಕುವ ಸಮಾಧಾನ ಚಿತ್ತವು ಕೇವಲ ಕ್ಷಣಿಕ. ನೀನು ಹೊರನಡೆದಾಗ ಬಾವಿ ಬಳಿ ಕೊಡ ಒಡೆದುಕೊಂಡು ಹೋಗುವಂತೆ

(ಹನ್ನೆರಡನೇ ಪುಟ ನೋಡಿರಿ)

ನಿಮ್ಮ ಒಳಿತಿಗಾಗಿ
ಉಳಿತಾಯದ
ಮತ್ತೊಂದು ಆಕರ್ಷಕ ಯೋಜನೆ.......

"ಕ್ಯುಮುಲೇಟಿವ್ ಡಿಪಾಸಿಟ್"
(ಸಂಚಯಿತ ಠೇವಣಿ)

ರೂಪಾಯಿ ೧೦ ಅಥವಾ ಅದೇ ಗುಣಕದ ಹೆಚ್ಚಳದಿಂದ
ನೀವು ಠೇವಣಿಯನ್ನು ಇಡಬಹುದು.

ನಮೂದಿಸಿದ ಅವಧಿ	ತಿಂಗಳಿಗೆ ರೂ. 10/- ರಂತೆ ಒಟ್ಟು ಜಮೆಯಾದ ಮೊತ್ತ	ಅವಧಿಯ ಕೊನೆಯಲ್ಲಿ ಬಡ್ಡಿ ಸಮೇತ ಮರಳಿ ಪಡೆಯುವ ಮೊತ್ತ
ತಿಂಗಳು	ರೂಪಾಯಿ	ರೂಪಾಯಿ
12	120 - 00	123 - 50
24	240 - 00	254 - 50
36	360 - 00	393 - 50
48	480 - 00	539 - 00
60	600 - 00	700 - 00

ಅವಧಿಯ ಮುಂಚೆಯೇ ಬಡ್ಡಿ ಸಹಿತ ಠೇವಣಿ ಪಾವತಿಗೆ
ಈ ಯೋಜನೆಯಲ್ಲಿ ಅವಕಾಶವಿದೆ.
ಹೆಚ್ಚಿನ ವಿವರಗಳಿಗೆ ನಮ್ಮ ಯಾವ ಶಾಖೆಯಲ್ಲೂ ವಿಚಾರಿಸಬಹುದು.

FAITHFUL SB FRIENDLY
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 204
ಸಾಧನ ಸಂಪತ್ತು: ರೂ. 70 ಕೋಟಿಗೂ ಮಿಕ್ಕಿದೆ

ಕಣ್ಣೀರಿನ ಕಥೆಯೇಕೆ?

ವಂದೇ ಮಾತರಂ ಎನ್ನಿರಿ

ಬರೆದವರು: ಶ್ರೀ ಶಿವಶಂಕರ

‘ಶಾಂತಿ’ ಸಂಧಾನಗಳ ಹೆಸರಿನ ಮೇಲೆ ಭಾರತದ ಪ್ರಚಲಿತ ಪ್ರಧಾನಿಯವರು ಅದೆಂತು ವರ್ತಿಸುತ್ತಿದ್ದಾರೆಂಬುದನ್ನು ಹಿಂದಿನ ಸಂಚಿಕೆಗಳಲ್ಲಿ ನೋಡಿರುವೆವು. ದೇಶದೊಳಗಿನ ಪರಿಸ್ಥಿತಿಯನ್ನು ಹೊರಗಿನ ಒತ್ತಡ ಹಾಗೂ ಆಕ್ರಮಣವನ್ನು ಅವರೆಂತು ಎದುರಿಸುತ್ತಿದ್ದಾರೆಂಬುದನ್ನು ನೋಡಿರುವೆವು. ದಿವಂಗತ ಜವಾಹರಲಾಲಜೀ ಇಷ್ಟು ದುಡುಕುತ್ತಿರಲಿಲ್ಲ. ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳುವದಾದಲ್ಲಿ ಯಾವೊಂದು ಸಮಸ್ಯೆಯನ್ನು ಬಗೆಹರಿಸದೆ ಹಾಗೆನೇ ಇನ್ನಕ್ಕಿದ್ದಂತೆ ಬಿಟ್ಟು ಹೋಗಿದ್ದಾರೆ. ಈಗ ಆ ಲಾಲಬಹದೂರಜೀಯವರು ಬಹಳ ಕಷ್ಟಪಡಬೇಕಾಗುತ್ತದೆ. ಅವರಿಗಾದರೋ ಸ್ವತಂತ್ರವಾಗಿ ಸಂಚರಿಸಲೂ ಸಾಧ್ಯ ಇರುವುದಿಲ್ಲ. ಹಿಂದಿನ ದಾರಿಯಲ್ಲಿ ಸಾಗಲೂ ಇಷ್ಟವಿಲ್ಲ. ಹೀಗಾಗಿ ಅವರ ತೊಳಲುತ್ತಿದ್ದಾರೆ. ಸ್ವತಂತ್ರವಾಗಿ ಸಂಚರಿಸಿದಲ್ಲಿ ದಿವಂಗತ ಜವಾಹರಲಾಲಜೀಯವರ ಕಾಲಡಿಯಲ್ಲೇ ನಡೆಯುವದಿಲ್ಲವೆಂದು ಕಮ್ಯೂನಿಸ್ಟರು ಕೇಕೆ ಹಾಕುತ್ತಾರೆ. ಮನಃ ಅತ್ತ ತಿರುಗಿದಲ್ಲಿ ಆ ರಸ್ತೆಯಲ್ಲಿ ಹೋಗಲು ಅವರ ಮನಸ್ಸು ಒಪ್ಪುತ್ತದಿಲ್ಲ. ಆದವರಿಂದ ಸಾಧ್ಯವೂ ಇಲ್ಲ. ಅದಕ್ಕೆ ಹಲವಾರು ಕಾರಣಗಳಿವೆ.

ಹಾಗಿದ್ದರೂ ಕೆಲವು ಸಲ ಕೈತೋರಿಸಿ ಅಪಶಕುನ ಹೇಳಿಸಿಕೊಂಡಿದ್ದಾರವರು. ಶ್ರೀ ಲಂಕೆಯ ವಿಷಯದಲ್ಲಿ ಅದು ಸ್ಪಷ್ಟವಾಗಿದೆ. ಅಂದಿನ ಪ್ರಧಾನಿ ಪಂಡಿತ ಜವಾಹರಲಾಲಜೀ ಆ ಸಮಸ್ಯೆಯನ್ನು ಸಂಪೂರ್ಣ ತೀರಿಸದೆ ಹಾಗೆಯೇ ಬಿಟ್ಟಿದ್ದರು. ಆದರೆ ಶ್ರೀಮತಿ ಭಂಡಾರ ನಾಯಕೆಯವರು ಹೇಳಿದೊಡನೆ ಶ್ರೀ ಲಾಲಬಹದೂರ ಶಾಸ್ತ್ರೀಜಿಯವರು ಬಹಳ ಸುಲಭವಾಗಿ ಒಪ್ಪಿಕೊಂಡರು. ಅದರ ಪರಿಣಾಮವೇನು? ಶ್ರೀ ಲಂಕೆಯನ್ನು ಸಿರಿಯ ಬೀಡನ್ನಾಗಿ ಮಾಡಿರುವ ಭಾರತೀಯರಿಗೆ ಅರ್ಧಚಂದ್ರಪ್ರಯೋಗ. ನಿನ್ನೆ ಮೊನ್ನೆಯ ವರೆಗೆ ನಮ್ಮದೇ ಭೂಭಾಗವಾಗಿದ್ದು ಬ್ರಿಟಿಷರ ಒಡೆದು — ಆಳುವ ತಂತ್ರದ ಫಲವಾಗಿ ನಮ್ಮಿಂದ ದೂರವಾಗಿರುವ ಸಿಲೋನಿನಿಂದ ಅಲ್ಲಿರುವ ಭಾರತೀಯರು ಓಡಿಬರಬೇಕಾಗುತ್ತದೆ. ಸಿಂಹಳೀಯರು ಅವರಿಗೆ ಏನೂ ಆಗಬೇಕಾಗಿಲ್ಲ! ಅಥವಾ, ಸಿಂಹಳೀಯರಿಗೆ ಇತರ ಭಾರತೀಯರು ಏನೂ ಆಗಬೇಕಾಗಿಲ್ಲ! ಇದನ್ನು ನಾವು ಅವರಿಗೆ ಸ್ಪಷ್ಟವಾಗಿ ಹೇಳಲಿಲ್ಲ. ಹಿರಿಯಣ್ಣ ಚಿಕ್ಕತಮ್ಮನಿಗೆ ಸ್ಪಷ್ಟವಾಗಿ ಸೂಚಿಸಬೇಕಿತ್ತು. ಅದರ ಬದಲು ಅವರು ಒದೆಯುತ್ತೇವೆಂದರು ನಮ್ಮ ಪ್ರಧಾನಿಯವರು ಬೆನ್ನು ತೋರಿಸಲಿಕ್ಕೆ ಹೇಳಿದರು. ಅದರಿಂದ ಯಾರಿಗೆ ಲಾಭ? ಇದನ್ನು ನಾವು ಒಂದು ಸಂಧಾನ ಚತುರತೆಯೆಂದು ಕೊಂಡಾಡುತ್ತೇವೆ. ದೈವವಶಾತ್ ಪ್ರಯೋಗಕ್ಕೆ ಆದಿನ್ನೂ ನಡೆದಿರುವದಿಲ್ಲ. ನಾವು ಹಿರಿಯಣ್ಣನೆಂಬ ಜವಾಬ್ದಾರಿಯ ಸ್ಥಿತಿಯನ್ನು ಕಳೆದುಕೊಳ್ಳುತ್ತಿದ್ದೇವೆ ಮತ್ತು ಅವರ ಬಳಿ ನಮ್ಮ ಕಣ್ಣೀರ ಕಥೆಯನ್ನು ಹೇಳುತ್ತಿದ್ದೇವೆ.

ಸಿಂಹಳ ಹಾಗೆ ಸಿಡಿದು ಹೋಯಿತು. ಬ್ರಹ್ಮ ಪ್ರದೇಶದ ಪರಿಸ್ಥಿತಿಯಾದರೂ ಏನು? ೧೯೩೭ರ ವರೆಗೂ ಅದು ಭಾರತದ ಒಂದು ಪ್ರಾಂತ್ಯವಾಗಿತ್ತು. ಅಖಂಡ ಭಾರತದ ಅಸ್ತಿತ್ವದ ಇತಿ ಶ್ರೀ ಹಾಡಿ ಬಿಡಬೇಕೆಂದು ಪಣತೊಟ್ಟಿದ್ದ ಆಂಗ್ಲೇಯರು ಬ್ರಹ್ಮಪ್ರದೇಶವನ್ನು ಬೇರ್ಪಡಿಸಿದರು. ಭಾರತವನ್ನು ಬಿಟ್ಟು ಹೋದಂತೆ ಬ್ರಹ್ಮಪ್ರದೇಶವನ್ನು ಬ್ರಿಟಿಷರು ಬಿಟ್ಟುಹೋಗಲೇಬೇಕಾಯಿತು. ಅನಂತರ ಅಲ್ಲಿ ಕಮ್ಯೂನಿಷ್ಟರ ಕೀಟಲೆ ಅಧಿಕವಾಯಿತು. ಕಮ್ಯೂನಿಸಮಿನ ಕಪಿಮುಷ್ಟಿಗೊಳಗಾದ ಮೇಲೆ ಭಾರತದತ್ತ ಅದು ಹಲ್ಲು ಕಿರಿಯಲಾರಂಭಿಸಿರುತ್ತದೆ. ಅದಕ್ಕೆ ಚೈನೀ ಕಮ್ಯೂನಿಸ್ಟರ ಸಂಪೂರ್ಣ ಸಹಾಯದ ಕೈ ಸಿದ್ಧವಾಗಿದೆ. ಅಲ್ಲಿಂದಲೂ ಉಳಿದ ಭಾರತೀಯರು ನಿರ್ಗತಿಕರಾಗಿ ಭಾರತಕ್ಕೆ ಬರುತ್ತಿದ್ದಾರೆ. ಆದರೆ ನಮ್ಮ ದಿಲ್ಲಿ ದೇವತೆಗಳು ಗಮನ ಹರಿಸಿದ್ದಾರೆಯೇ? ಭಾರತೀಯರ ಮಾನಾಪಮಾನದತ್ತ ಅವರಿಗೆ ಲಕ್ಷ್ಯವಿದೆಯೇ?

ಪಾಕಿಸ್ಥಾನೀ ಪೀಡೆಗೆ ಯಾರು ಕಾರಣ? ಇತರರನ್ನು ಹಳಿದೇನು ಫಲ? ಮಾತೃ ಭೂಮಿಯ ವಿಭಜನೆ ಸಾಧ್ಯವೇ ಇಲ್ಲವೆಂದು ಧೈರ್ಯದಿಂದ ಹೇಳುತ್ತಿದ್ದಲ್ಲಿ ಸ್ವಾತಂತ್ರ್ಯ ಪಡೆದುಕೊಳ್ಳಲು ಒಂದೆರಡು ದಿನ ಹೆಚ್ಚು ಕಡಿಮೆಯಾಗಬಹುದಿತ್ತು, ಅಷ್ಟೇ. ಅನಿಷ್ಟದ ಅಮಾವಾಸ್ಯೆಯ ರಾತ್ರಿಯಂದು ಯೂನಿಯನ್ ಜ್ಯಾಕ್ ಕೆಳಗಿಳಿಯದೆ, ಅರೆಗಳಿಗೆ ಮೇಲೇರದೆ ಇದ್ದಿರಬಹುದು. ಆದರೆ ಬ್ರಿಟಿಷರ ಬೂಟುಗಾಲು ನಡುಗಲಾರಂಭವಾಗಿತ್ತು. ಅದನ್ನು ಜಸ್ಟೀಸ್ ಪಾರ್ಟಿಯವರಾಗಲೀ ಇತರ ಆಂಗ್ಲ ವ್ಯಾಮೋಹಿಗಳಾಗಲೀ ಹಿಡಿದುಕೊಂಡಿದ್ದರೂ ಬ್ರಿಟಿಷರ ಆಳ್ವಿಕೆಗೆ ಅರ್ಧಚಂದ್ರಪ್ರಯೋಗ ಆಗುತ್ತಿತ್ತು. ಆದಕಾಗಿ ಕ್ರಾಂತಿ ಹಾಗೂ ಶಾಂತಿ, ಸಂಧಾನ ಹಾಗೂ ಸಮರಗಳನ್ನು ಸಮರಸವಾಗಿ ಸಮ್ಮೇಳನಗೊಳಿಸಿ ಹೋರಾಡಬಲ್ಲ ರಾಷ್ಟ್ರೀಯ ವೀರಸೇನೆ ಸಿದ್ಧವಾಗುತ್ತಿತ್ತು. ಆದರೆ ಅಮಾವಾಸ್ಯೆಯ ಕತ್ತಲೆಯ ಹಿನ್ನೆಲೆಯಲ್ಲಿ ಘೋರ ಪಾಪಕೃತ್ಯ ನಡೆಯಿತು. ದೇಶ ವಿಭಜನೆಯ ಫಲವನ್ನು ಇಂದಿನ ಪೀಳಿಗೆ ಅಲ್ಲದೆ ಮುಂದಿನ ಪೀಳಿಗೆ ಅನುಭವಿಸಬೇಕಾಗಿರುತ್ತದೆ. ಅದಕ್ಕೆಂದು ಕೊನೆಯೇ? ಪಾಕಿಸ್ಥಾನವಾದರೋ ಕಂಜರ ಕೋಟೆಯತ್ತ ಮಾತ್ರ ಕಣ್ಣಿಟ್ಟಿರುವದಲ್ಲಿ, ಕೆಂಪು ಕೋಟೆಯತ್ತಲೇ ಕಣ್ಣಿಟ್ಟಿದೆ. ನಾವೇನು ಮಾಡುತ್ತಿದ್ದೇವೆ?

ಕಮ್ಯೂನಿಸಮಿನ ಕಡು ಭೀಕರ ಜಾಡ್ಯಕ್ಕೆ ತುತ್ತಾಗಿರುವ ಚೈನಾವೂ ಭಾರತದತ್ತ ದೃಷ್ಟಿ ಹಾಯಿಸಿರುತ್ತದೆ. ತುರಿಕುಷಿಕೆಯ ಜಾಡ್ಯಕ್ಕೊಳಗಾದ ನಾಯಿ ಒಂದೆಡೆ ಕೂಡುವಂತಿಲ್ಲವಂತೆ. ಹಾಗೇನೆ, ಕಮ್ಯೂನಿಸಂ ಕಪಿಮುಷ್ಟಿಗೊಳಗಾದ ರಾಷ್ಟ್ರಗಳ ಕರುಣಾಜನಕ ದುಸ್ಥಿತಿ ಇದೆ.

ಶ್ರೀ ಲಂಕೆ, ಬ್ರಹ್ಮಪ್ರದೇಶ ಅಥವಾ ಪಾಕೀಸ್ಥಾನದಷ್ಟು ದೂರ ಏಕೆ ಹೋಗುವುದು? ಇಲ್ಲೇ ನಮ್ಮ ಕಾಲಡಿಯಲ್ಲೇ, ನಮ್ಮ ಕಣ್ಣೆದುರಲ್ಲೇ, ನಮ್ಮ ಮೂಗಿನಡಿಯಲ್ಲೇ, ನಮ್ಮ ಮುಷ್ಟಿಯೊಳಗೇನೇ ಏನು ನಡೆಯುತ್ತಿದೆ? ಮುಸ್ಲಿಂ ಲೀಗ್ ಕ್ರಿಶ್ಚಿಯನ್ ಕಾನ್ಫರೆನ್ಸ್, ದ್ರಾವಿಡ ಮುನ್ನೇಟ್ರ ಕಳಗಂ ಅಥವಾ ಜಾರಖಂಡ ಪಾರ್ಟಿಗಳು ಎಡೆಬಿಡದೆ ಭಿನ್ನತೆಯ ವಿಷಬೀಜವನ್ನು ಬಿತ್ತುತ್ತಿವೆ. ಅದಕ್ಕೆ ಸಹಾಯಮಾಡಲು, ಧ್ವನಿಗೂಡಿಸಲು ಅಲ್ಲದೆ, ಅಂತರಾಷ್ಟ್ರೀಯ ವಲಯದಲ್ಲಿ ಪ್ರಚಾರ ಸಿಗುವಂತಾಗಲು ಅನ್ಯದೇಶೀಯರು ಒಂದು ಪ್ರಚಾರ ಮಾಡುತ್ತಿದ್ದಾರೆ. ತಾನು ಭಾರತೀಯನಲ್ಲವೆಂದು ಅಣ್ಣಾದೊರೈ ಅನ್ನಬಹುದು, ಶೇಖ್ ಅಬ್ದುಲ್ಲ ಅನ್ನಬಹುದು. ಅವರಿಗೆ ಸರಕಾರವು ನೈಜ ಮಾವನ ಮನೆಯಲ್ಲಿ ಸ್ವಾಗತವನ್ನೀಯುತ್ತದೆ. ಭಾರತವೆಂಬ ರಾಷ್ಟ್ರವೇ ಇರಲಿಲ್ಲ ಹಾಗೂ ಭಾರತೀಯರೆಂಬ ರಾಷ್ಟ್ರೀಯರೇ ಇರಲಿಲ್ಲವೆಂದು ಸ್ವತಂತ್ರ ಪಾರ್ಟಿ ಸರಾಗವಾಗಿ ಕೂಗಾಡಬಹುದು. ಅದಕ್ಕೆ ಅಡೆತಡೆಯೇ ಇಲ್ಲ. ಆದರೆ ಇದೊಂದು ರಾಷ್ಟ್ರ ಹಾಗೂ ಇಲ್ಲಿ ರಾಷ್ಟ್ರೀಯರು ಇದ್ದೇ ಇದ್ದಾರೆನ್ನುವವರೂ ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಆದರೆ ಅವರು ಪಡುತ್ತಿರುವ ಕಷ್ಟ ಹೇಳತೀರದು. ವಿದ್ರೋಹಿಗಳಾದರೋ ಸಹಾಯಮಾಡಲು ವಿದೇಶಿಯರಿದ್ದಾರೆ. ಸ್ವದೇಶ ಬಾಂಧವರಿಗೆ ಸಹಾಯಮಾಡಲು ಅದ್ಯಾರಿದ್ದಾರೆ? ಭಾರತೀಯರು ಇದನ್ನೊಂದು ತಿಳಿದುಕೊಳ್ಳುವರೋ! ದ್ರಾವಿಡರೆಂಬವರು ಆರ್ಯರೆಂಬವರಿಗಿಂತ ಭಿನ್ನ ಜನರಿದ್ದು, ಆರ್ಯರು ಆಕ್ರಮಣ ನಡೆಸಿದವರೆನ್ನುವದನ್ನು ಒಡೆದು ಆಳುವ ತಂತ್ರದ ಮೇಧಾವಿ ಬ್ರಿಟಿಷರು ಎಡೆಬಿಡದೆ ಹೇಳುತ್ತಿದ್ದರು. ಅದನ್ನು ನಾವು ಬಾಲಕರಾಗಿದ್ದಾಗ ನಮಗೆ ಹೇಳುತ್ತಿದ್ದರು. ನಾವು ಅಂದು ವಿದ್ಯೆ ಇಲ್ಲದೆ ಕಲಿತೆವು. ಇಂದು ಅದು ತಪ್ಪು, ಬ್ರಿಟಿಷರ ಆಟವೆಂದು ಅರಿತುಕೊಂಡ ಮೇಲಾದರೂ ಎಚ್ಚತ್ತಿದ್ದೇವೆಯೋ? ಇನಿತೂ ಇಲ್ಲ. ನಮ್ಮ ಬಾಲಕರಿಗೂ ಅದನ್ನೇ ಹೇಳಿಕೊಡುತ್ತಿದ್ದೇವೆ. ಈ ಆಟ ಅಲ್ಲಿಗೇನೇ ಅಂತ್ಯವಾಗಿರುವುದಿಲ್ಲ. ನಾನಾ ರೂಪಗಳನ್ನು ತಳೆದು ನಾನಾ ರಂಗಗಳಲ್ಲಿ ನಾನಾ ಸಮಯದಲ್ಲಿ ಕಾಣಿಸಿಕೊಳ್ಳುತ್ತಿದೆ. ನಾಗಾಗಳ ಉದಾಹರಣೆ ಕಣ್ಣೆದುರಿಗೇನೇ ಇದೆ. ವಿದೇಶಿ ಮತಪ್ರಚಾರಕ ಸ್ಕಾಟ್ ಮಹಾಶಯ ಸರಾಗವಾಗಿ ಸಂಚರಿಸಿ ವಿಷಬೀಜವನ್ನು ಮನಸ್ಸು ಬಂದಂತೆ ಬಿತ್ತಿದ. ಅವನಿಗೆ ಸಹಾಯ ಮಾಡಲು ಅನೇಕ ವಿದೇಶಿ ಮತ ಪ್ರಸಾರಕರಂತೂ ಮಹಿಳೆಯರಾಗಿದ್ದಲ್ಲಿ ತೀರಿತು. ಮಹಿಳೆಯರಿಂದಾಗಿ ಮಹಾನ್ ಸಾಮ್ರಾಜ್ಯಗಳು ಮಣ್ಣಡಿಗೆ ಹೋಗಿಲ್ಲವೇನು? ಇದೀಗ ಕುಮಾರಿ ಮಾರ್ಜೋರಿ ಸ್ಕಾಕ್ಸ್ ಹೆಸರು ಕೇಳಿ ಬರುತ್ತಿದೆ. ಈಕೆ ಇನ್ನು ಒಂದು ಹೆಜ್ಜೆ ಮುಂದೆ ಹೋಗಿದ್ದಾಳೆ. ನಾಗಾ ಮಂಗೋಲಿಯನರಿಗೂ, ಚೈನೀ ಜನರಿಗೂ ಉಳಿದ ಭಾರತೀಯರಿಗೂ ಸಂಬಂಧವೇ ಇಲ್ಲವೆಂದೂ, ಅದರ ಬದಲು, ನಾಗಾಯರಿಗೂ ಮಲಯದವರಿಗೂ ಸಂಬಂಧವಿದೆಯೆಂದಾಕೆ ಸಂಕೋಚವಿಲ್ಲದೆ ಸಾರುತ್ತಿದ್ದಾಳೆ. ಇದರ ಅರ್ಥವೇನು? ಮೊದಲನೆಯದಾಗಿ ನಾಗಾಜನರು ಅನ್ಯರಾಷ್ಟ್ರೀಯರಿರುವುದರಿಂದ ಅವರ ಮೇಲೆ ಭಾರತಸರಕಾರದ ಆಡಳಿತ ಲಗಾಮು ಪರಿಣಾಮ ಬೀರಲು ಸಾಧ್ಯವಿಲ್ಲ. ಎರಡನೆಯದಾಗಿ, ಭಾರತ ಒಂದು ದೇಶವಲ್ಲ. ಅಲ್ಲಿ ರಾಷ್ಟ್ರೀಯರೆನ್ನುವವರಾರೂ ಇಲ್ಲವೇ ಇಲ್ಲ. ಇಂತಹ ಭಿನ್ನ ಭಿನ್ನ ಭೂಭಾಗಗಳ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
“ವಿಜಯ ಬ್ಯಾಂಕಿ”ನಲ್ಲಿ ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.
ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿ. ಆಫೀಸು– “ವಿಜಯ ಬ್ಯಾಂಕ್ ಬಿಲ್ಡಿಂಗ್”,
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪ್ರಕಟಣೆ.

ಉಡುಪಿ ತಾಲ್ಲೂಕು ಕಾಡೂರು ಗ್ರಾಮದ ಕಣಿಪ್ರಬೆಟ್ಟುನಲ್ಲಿರುವ ಮಹಾಬಲ ಶೆಟ್ರ ಹೆಂಡ್ತಿ ದಾರಮ್ಮ ಶೆಡ್ತಿಯು ಈ ಮೂಲಕ ಪ್ರಕಟಿಸುವುದೇನೆಂದರೆ— ನನ್ನ ತಂದೆ ಕುಂದಾಪುರ ತಾಲ್ಲೂಕು ಬೆಳೂರು ಗ್ರಾಮದ ಮೂಡುಬೆಟ್ಟು ಅಂತಯ್ಯ ಶೆಟ್ರ ಅಳಿಯ ಪುಟ್ಟಯ್ಯ ಶೆಟ್ರಿಗೆ ಈಗ ವೃದ್ಧಾಪ್ಯದ ದೆಸೆಯಿಂದಲೂ ಕಿವಿ ಸರಿಯಾಗಿ ಕೇಳದೆಯಿರುವುದರಿಂದಲೂ ವಿವೇಚನಾ ಶಕ್ತಿಯು ಕಡಿಮೆಯಾಗುತ್ತಾ ಬಂದಿರುತ್ತದೆ. ಅದುದರಿಂದ ಸದ್ರಿಯವರ ಪ್ರಕೃತದ ದೇಹಸ್ಥಿತಿಯನ್ನು ದುರುಪಯೋಗಿಸಿ ಸದ್ರಿಯವರ ಯಾವತ್ತೂ ಸ್ಥಿರಚರ ಸೊತ್ತುಗಳನ್ನು ಕ್ರಯ, ದಾನ, ವಿಕ್ರಯ, ಪರಾಧೀನ ವಗೈರೆಗಳನ್ನು ಯಾರಾದರೂ ಮಾಡಿಸಿಕೊಂಡಲ್ಲಿ ಅದು ಸಿಂಧುವಾಗತಕ್ಕದ್ದಲ್ಲವೆಂತ ಈ ಮೂಲಕ ಸರ್ವರಿಗೂ ತಿಳಿಸುತ್ತೇನೆ.

ಕಾಡೂರು.
6_7_1966.
○ ಈ ಎಡ ಹೆಬ್ಬೆಟ್ಟಿನ ಗುರುತು ದಾರಮ್ಮ ಶೆಡ್ತಿಯದ್ದಾಗಿದೆ.

ಕೃಷಿಕರಂಗ

ವನ ಮಹೋತ್ಸವದ ಜುಲೈ ತಿಂಗಳು

ಬಿತ್ತನೆ, ರಕ್ಷಣೆ ಎರಡರಲ್ಲೂ ರೈತರು ಎಚ್ಚರಿಕೆ ವಹಿಸಬೇಕು

ಜುಲೈ ತಿಂಗಳು ಮುಂಗಾರು ಮೋಡಗಳು ಹೊತ್ತು ತಂದ ಮಳೆಯಿಂದ ಭೂಮಿ ಮತ್ತೆ ಹಸುರಾಗಿದೆ. ಕೆರೆ ಕುಂಟೆಗಳೆಲ್ಲಾ ತುಂಬಿವೆ. ಎಣಿಲು ಇಲ್ಲವೆ ಕಾತೀ ಬೆಳೆಗೆ ಉತ್ತು ಬಿತ್ತು ಹೊಸ ಚಟುವಟಿಕೆಗಳು ಪ್ರಾರಂಭ ಹಂತದಲ್ಲಿವೆ. ರೈತ ಬಾಂಧವರು ಈಗ ಎಷ್ಟು ನಿಷ್ಠೆಯಿಂದ ದುಡಿಯುತ್ತಾರೆಯೋ ಅಷ್ಟೇ ಅವರಿಗೂ ದೇಶಕ್ಕೂ ಹಿತ.

ಭತ್ತದ ಗದ್ದೆ

ಸುಧಾರಿತ ತಳಿಯ ಗಿಡಗಳನ್ನೇ ನಿಮ್ಮ ಗದ್ದೆಯಲ್ಲಿ ನಾಟಿ. ಎಕ್ರೆಗೆ ೪೦ ರಾತಲು ಭತ್ತದ ಬೀಜದೊಂದಿಗೆ ಎರಡು ರಾತಲು ಸಣಬಿನ ಬೀಜವನ್ನು ಮಿಶ್ರಮಾಡಿ ಬಿತ್ತಿರಿ. ಒಂದು ಎಕ್ರೆಗೆ ೫ ಗಾಡಿ ಸಗಣಿ ಅಥವಾ ಕಂಪೋಸ್ಟು ಗೊಬ್ಬರ ಹಾಗೂ ರಾಸಾಯನಿಕ ಗೊಬ್ಬರವನ್ನು ಎರಡು ಕಂತುಗಳಲ್ಲಿ ಕೊಡಬೇಕು. ಪ್ರತಿ ಕಂತಿನಲ್ಲಿ ೭೫ ಪೌಂಡು ಅಮೋನಿಯಂ ಸಲ್ಫೇಟು ಅಥವಾ ೩೦ ಪೌಂಡು ಯೂರಿಯಾ ಅಥವಾ ೫೮ ರಾತಲು ಅಮೋನಿಯಂ ಸಲ್ಫೇಟ್ ನೈಟ್ರೇಟ್ ಮತ್ತು ಸಾಧಾರಣ ೯೫ ರಾತಲು ಮೂಳೆಗೊಬ್ಬರವನ್ನು ಕೊಡಬೇಕು. ಮೂಳೆಗೊಬ್ಬರವನ್ನು ಒಂದೇ ಸಾರಿ ಹಾಕಬೇಕು.

ಭತ್ತದ ರಕ್ಷಣೆ

ಕೂಡಿಟ್ಟ ಭತ್ತಕ್ಕೆ ಹಲವು ಬಗೆ ಪಾತೆಗಳು ಅಪ್ಪಳಿ ಹರಡಿವೆ. ಈಗಿಂದೀಗ ಎಚ್ಚರಿಕೆ ವಹಿಸದೆ ಹೋದರೆ, ಸಂಗ್ರಹದ ಕಾಳು ಪೂರ್ಣ ಹುಳದ ಪಾಲಾಗಬಹುದು. ಕಾಳುಗಳಿಗೆ ಹುಳ ಹತ್ತುವುದಕ್ಕೆ ಅವುಗಳಲ್ಲಿ ತೇವವಿರುವುದೇ ಕಾರಣ. ಬಿಸಿಲು ಬಂದಾಗ ಕೂಡಿಟ್ಟ ಭತ್ತವನ್ನು ಒಣಗಿಸಿ; ಅದನ್ನು ಗಂಜಿ ಕೃಷ್ಣ ಬೇರ್ಪಡಿಸಿರಿ. ಭತ್ತವನ್ನು ಸಂಗ್ರಹಿಸುವ ಉಗ್ರಾಣವನ್ನು ಸರಿಯಾಗಿ ಶುಭ್ರಗೊಳಿಸಿ. ನೆಲ ಗೋಡೆ ಮತ್ತು ಮೇಲ್ಛಾವಣಿಗಳಿಗೆ ಸೇ. ೧೦ರ ಬಿ. ಹೆಚ್. ಸಿ. ಪುಡಿಯನ್ನು ತೆಳುವಾಗಿ ಹರಡಿರಿ. ಒಳಗಡೆ ಬಿರುಕುಗಳಿದ್ದರೆ ಸಿಮೆಂಟಿನಿಂದ ಮುಚ್ಚಿರಿ. ಪ್ರತಿನೂರು ಪೌಂಡು ಭತ್ತಕ್ಕೆ ನಾಲ್ಕು ಔನ್ಸು ಬಿ. ಹೆಚ್. ಸಿ ಪುಡಿಯನ್ನು ಮಿಶ್ರಿಸಬಹುದು. ಕಾಳುಗಳನ್ನು ಸಂಗ್ರಹಿಸುವಾಗ ಅವನ್ನು ಸರಿಯಾಗಿ ಒಣಗುವಂತೆ ನೋಡಿಕೊಂಡು, ಮುಂದವುಗಳಿಗೆ ಹುಳಬೀಳುವ ಪ್ರಸಂಗ ಬಾರದಂತೆ ನೋಡಿಕೊಳ್ಳಿ.

ರಾಗಿ

ಹೈಸಾ ರಾಗಿಯನ್ನು ಈಗಲೇ ಬಿತ್ತಬೇಕು. ಇದನ್ನು ಚೆಲ್ಲಿ ಬಿತ್ತುವುದಕ್ಕಿಂತ ಮತ್ತು ಸಾಲಿಗೆ ಬಿತ್ತನೆಗಿಂತ ನಾಟಿ ಬೆಳೆಸುವುದೇ ಲಾಭದಾಯಕ. ರಾಗಿಯ ಕಾಳು ಸಣ್ಣದಾಗಿರುವುದರಿಂದ ಮಿಶ್ರಣವಾಗದಂತೆ ಎಚ್ಚರಿಕೆ ವಹಿಸಿ; ಕಾಳನ್ನು ಉಪ್ಪು ನೀರಿನಲ್ಲಿ ಭಾರವಾದವುಗಳನ್ನೇ ಬಿತ್ತನೆಗೆ ಬಳಸಿರಿ.

ಜೋಳ

ಜೋಳವೇ ಮುಖ್ಯ ಬೆಳೆಯಾಗಿರುವ ಪ್ರದೇಶ ಕುಬ. ಗೊಬ್ಬರ ಕೊಟ್ಟಷ್ಟು ಜೋಳ ಹುಲುಸಾಗುವುದು, ಉತ್ತಮ ತಳಿಯ ಕಾಳನ್ನು ಆರಿಸಿ ೧೬ ಪೌಂಡು ಬೀಜಕ್ಕೆ ೧ ಔನ್ಸು ಗಂಧಕದ ಪುಡಿ ಬೆರೆಸಿ ಬಿತ್ತನೆಗೆ ಸಿದ್ಧಪಡಿಸಿರಿ. ಎಕ್ರೆಗೆ ೪ ಪೌಂಡು ಬೀಜ ಸಾಕಾಗುವುದು. ೧೫ ಇಂಚು–೧೮ ಇಂಚು ಅಂತರದಲ್ಲಿ ಬಿತ್ತುವುದು ಒಳ್ಳೆಯದು. ಪ್ರತಿ ಎಕ್ರೆಗೆ ೫ ಗಾಡಿ ಸಾಕಷ್ಟು ದನದ ಗೊಬ್ಬರ ಬೇಕು. ಇದಲ್ಲದೆ ೧೪ ಪೌಂಡು ಸಾರಜನಕ, ಅಮೋನಿಯಂ ಸಲ್ಫೇಟು ರೂಪದಲ್ಲಿ ಕೊಡಬೇಕು. ೧೩೫ ರಾತಲು ಅಮೋನಿಯಂ ಸಲ್ಫೇಟು ಮತ್ತು ೮೦ ರಾತಲು ಸಿಂಗಲ್ ಸೂಪರ್ ಫಾಸ್ಫೇಟನ್ನು ಎರಡು ಹಂತಗಳಲ್ಲಿ, ಒಮ್ಮೆ ಬಿತ್ತನೆಯೊಂದಿಗೆ, ಮತ್ತೊಮ್ಮೆ ಚಿಪ್ಪರಿಯಾದ ಮೇಲೆ, ಕೊಟ್ಟರೆ ಮುಂಗಾರಿ ಫಸಲಿಗೆ ಬಹಳ ಒಳ್ಳೆಯದು. ಗೊಬ್ಬರವನ್ನು ಸಸಿಗಳ ಇಕ್ಕಡೆಗಳಲ್ಲೂ ಕ್ರಮವಾಗಿ ಇಡುತ್ತ ಹೋಗಬೇಕು.

ಹತ್ತಿಗೆ ಬೀಳುವ ಕೀಟಗಳು

ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಜುಲೈ-ಆಗಸ್ಟ್ ತಿಂಗಳುಗಳಲ್ಲಿ ಹತ್ತಿಗಿಡಗಳಿಗೆ ಕಾಯಿ ಕೊರೆಯುವ ಹುಳ ಬಿದ್ದು ಎಲೆಯನ್ನೂ ಕಾಯನ್ನೂ ಕೊರೆದು ನಾಶ ಪಡಿಸುತ್ತವೆ. ಒಣಗಿರುವ ಎಳೆಯ ರೆಂಬೆಗಳನ್ನು, ಹುಳದ ಬಾಧೆಗೆ ಬಿದ್ದ ಕಾಯಿಗಳನ್ನು ಕಿತ್ತು ಹಾಕಿರಿ. ಸೇ. ೫ರಂತೆ ಬಿ. ಎಚ್. ಸಿ. ಪುಡಿಯನ್ನು ಎಲೆ–ಕಾಯಿಗಳ ಮೇಲೆ ಎರಚಿರಿ.

ಹೇನು ಇನ್ನೊಂದು ನಾಶಮಾಡುವ ಜಂತು. ಇದರ ಕಾಟ ಜೂನಿನಲ್ಲಿ ತೊಡಗಿ ಆಗಸ್ಟದವರೆಗೂ ಮುಂದುವರಿಯುತ್ತದೆ. ಮೈಸೂರು, ಹಾಸನ, ಬೆಳಗಾಂವಿ, ಚಿತ್ರದುರ್ಗ, ಚಿಕ್ಕಮಗಳೂರು, ಧಾರವಾಡ, ಬಿದರೆ, ರಾಯಚೂರು ಜಿಲ್ಲೆಗಳಲ್ಲಿ ಇದರ ಪ್ರಭಾವ ಹೆಚ್ಚು. ಇದಕ್ಕೂ ನಿವಾರಣೆಯನ್ನು ಮೇಲಿನ ರೀತಿಯಲ್ಲೇ ಮಾಡಿಕೊಳ್ಳಬಹುದು, ಜೊತೆಗೆ ಸೇ .೦೨೫ ಫಾಲಿಡಾಲನ್ನೂ ಸಿಂಪಡಿಸಿದರೆ ಎಲ್ಲವೂ ಸರಿಹೋಗುವುದು.

ವನಮಹೋತ್ಸವ

೧೯೫೭ರಿಂದ ಜುಲೈ ತಿಂಗಳಲ್ಲಿ ಸಸಿ ನೆಡುವ ಸಪ್ತಾಹವು ಅನೂಚಾನವಾಗಿ ನಡೆದು ಬರುತ್ತಿದೆ. ಮೊತ್ತ ಮೊದಲ ಸಪ್ತಾಹ ನಡೆದಾಗ ದಿ| ಪ್ರಧಾನಿ ನೆಹರೂರವರು ಚಂತ್ರ್ಯಹ ಕೆಂಪುಕೋಟೆಯಲ್ಲಿ ಮಂದಾರದ ಗಿಡಗಳನ್ನು ನೆಟ್ಟರು. ಆಗ ಅವರು, 'ಮರಗಳನ್ನು ಕಡಿಯುವ ಬಗ್ಗೆ ಒಂದು ಕಾನೂನನ್ನು ಜ್ಯಾರಿಗೆ ತರುವುದು ಆಗತ್ಯವೆಂದು ನನಗನಿಸುತ್ತದೆ. ವಯಸ್ಸಾದ ಮರವೊಂದನ್ನು ಕಡಿಯುವವರು ಆ ಮರದ ಸ್ಥಾನದಲ್ಲಿ ಬೇರೊಂದು ಸಸಿಯನ್ನು ನೆಟ್ಟು ನಷ್ಟವನ್ನು ಭರ್ತಿ ಮಾಡಬೇಕು. ಬೆಳೆಯುತ್ತಿರುವ ಮರಗಳೇ ಪ್ರಗತಿಪರ ರಾಷ್ಟ್ರದ ಜೀವಂತ ಸಾಕ್ಷಿಗಳು" ಎಂದು ನುಡಿದರು. ರಾಷ್ಟ್ರಪಿತ ಬಾಪೂಜಿಯವರು ಪ್ರಾರ್ಥನಾ ನಂತರದ ಒಂದು ಸಭೆಯಲ್ಲಿ ಭಾಷಣ ಮಾಡುವಾಗ ದೆಹಲಿಯಲ್ಲಿನ "ಸಸಿ ನೆಡುವ ಸಪ್ತಾಹ"ದ ಬಗ್ಗೆ ಹೀಗೆ ಪ್ರಸ್ತಾಪಿಸಿದ್ದರು — 'ಸಸಿ ನೆಡುವ ವಿಚಾರವನ್ನು ಹೊಂಗೆಡವಿದ ವ್ಯಕ್ತಿಗಳು ಕೇವಲ ಮೋಜಿಗಾಗಿ ಹೊರಗೆಡಹಲಿಲ್ಲ. ಅಲ್ಲದೆ ಸಸಿ ನೆಡುವ ಸಂಪ್ರದಾಯವನ್ನು ಎಲ್ಲರೂ ಅನುಸರಿಸಿ ರಾಷ್ಟ್ರ ಸಂಪತ್ತನ್ನು ಅಧಿಕಗೊಳಿಸಲೆತ್ನಿಸುವುದೊಂದೇ ಅಲ್ಲದೆ, ಹೆಚ್ಚಿನ ಮಳೆ ಪ್ರಮಾಣವನ್ನು ನಿರೀಕ್ಷಿಸಬಹುದೆಂಬುದು ಆ ವಿಚಾರವನ್ನು ಹೊರತಂದವರ ಉದ್ದೇಶ."

ವನಸಂಪತ್ತು ಅಪಾರ ಸಂಪತ್ತು. ಇದನ್ನು ಬೆಳೆಯೊಂದು ನಾವು ಭಾವಿಸುವುದಾದರೆ, ಹಣದ ಬೆಳೆ. ರಾಷ್ಟ್ರದ ಬೆಳವಣಿಗೆಯಲ್ಲಿ ಪ್ರಾಕೃತಿಕ ಸಂಪತ್ತಿನ ಸ್ಥಾನ ಗಣನೀಯವಾದುದು. ಅರಣ್ಯ ಸಂಪತ್ತಿನ ಮೌಲ್ಯವೂ ಅತ್ಯಧಿಕವಾದುದು. ಇರುವ ಕಾಡುಗಳು ನಾನಾ ಕಾರಣಗಳಿಂದ ನಾಶವಾಗುತ್ತ ಬರುತ್ತಿರುವಾಗ ಹೊಸ ಹೊಸ ಕಾಡುಗಳು ಏಳುವುದೂ ಅಗತ್ಯ. ಅದಕ್ಕಾಗಿಯೇ ಆಚರಿಸಲಾಗುತ್ತಿದೆ ವನಮಹೋತ್ಸವ. ಸಾಂಪ್ರದಾಯಿಕ ಆಚರಣೆಗಿಂತ ಪರಿಣಾಮಕಾರಿ ಆಚರಣೆಯು ನಮಗಿಂದು ಬೇಕಾಗಿದೆ. ಅವಕಾಶವಿದ್ದವರು ಅಧಿಕ ಸಸಿಗಳನ್ನು ನೆಟ್ಟು ನಾಡಿಗೂ ದೇಶಕ್ಕೂ ಹಿತವೆಸಗಬೇಕು, ನೆಟ್ಟ ಸಸಿಗಳನ್ನು ಸರಿಯಾಗಿ ರಕ್ಷಿಸುವಂತಾಗಬೇಕು.

NAVAYUGA

Announcement

You are aware that the INDEPENDENCE SPECIAL of your favourite Weeekly 'NAVAYUGA' has over the years earned a reputation for the sumptuous fare it offers to its extensive readership spread over nineteen districts of Mysore State.

The 'Special' will be issued as usual on August 15th this year to mark the 18th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social, economic, religious and educational.

August 15th is an auspicious day and the 'Navayuga Independence Special' a fitting medium to convey the message of your goods to hundreds of homes in the State. Kindly send in your advertisement material on or before August 5th, 1965.

ADVT. MANAGER.

NAVAYUGA, UDIPI. S. K.

ಚಂದಾದಾರರಲ್ಲಿ ವಿನಂತಿ.

ಇದೇ ಬರುವ ಆಗಸ್ಟ್ ತಿಂಗಳಾಂತ್ಯಕ್ಕೆ "ನವಯುಗ"ದ 44ನೇ ವರ್ಷವು ಕೊನೆಗೊಂಡು ಸಪ್ಟಂಬರದಿಂದ 45ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರೆಯಾಗಿ ಮನಿಯಾರ್ಡರು ದ್ವಾರಾ ಅಥವಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿ ಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇನೆ.

ಮೇನೇಜರ್
ನವಯುಗ, ಉಡುಪಿ.

ಪ್ರಕೃತಿ ಶಕ್ತಿಯ

ಹವಾಮಾನ ವಿಜ್ಞ

ಭಾರತದ ಪಾ

ಮಾನವನು ಪ್ರಜ್ಞಾವಂತನೆನಿಸಿದಂದಿನಿಂದಲೇ ಆತನು ಸಿಡಿಲು, ಮಿಂಚು, ಬಿರುಗಾಳಿಗಳ ಅನುಭವ ಮಾಡಿಕೊಳ್ಳುತ್ತ ಬಂದಿದ್ದಾನೆ. ಪ್ರಕೃತಿಯ ಸಹಜ ಶಕ್ತಿಗಳಾದ ಇವುಗಳಿಗೆ ಜನ ಬೇರೆ ಬೇರೆ ಅರ್ಥಗಳನ್ನು ಕಟ್ಟುತ್ತಲೇ ಬಂದಿದ್ದಾರೆ. ಮುಖ್ಯವಾಗಿ ಅಸ್ಸಾಮದ ಜನರ ಕತೆಗಳು ವಿಲಕ್ಷಣವಾಗಿಯೇ ಇವೆ. ಸಿಡಿಲು ಹಕ್ಕಿಗಳು ರೆಕ್ಕೆ ಬಡಿದಾಗ ಸಿಡಿಲೂ ಅವುಗಳ ಕಣ್ಣುಗಳಿಂದ ಮಿಂಚೂ ಹುಟ್ಟುವುವೆಂದು ಒಂದು ಕತೆ ಹೇಳುತ್ತದೆ. ಭಾರತದಲ್ಲಿ ಪ್ರಚಲಿತವಿರುವ ಕತೆಯು ಇನ್ನೂ ಸ್ವಾರಸ್ಯವಾದುದು. ಆರ್ಯರಾಜ ಸುದಾಸನ ರಾಜ್ಯವನ್ನು ತಮೋಸುರನು ಆಕ್ರಮಿಸಿದನಂತೆ. ಆಗ ಸುದಾಸನು ದೇವೇಂದ್ರನ ಮೊರೆ ಹೋಗಲು ಆತನು ತಮೋಸುರ ನಾಶಕ್ಕೆ ಹೊರಟು ಬಂದನಂತೆ. ಆತನ ರಥದ ಗಾಲಿಗಳ ಗುಡು ಗುಡು ಸದ್ದೇ ಗುಡುಗಾಯಿತು, ಜಳಪಿಸಿದ ವಜ್ರಾಯುಧದ ಬೆಳಕೇ ಮಿಂಚಾಯಿತು; ಸಹಾಯಕನಾಗಿ ಬಂದ ವಾಯುವೇ ಬಿರುಗಾಳಿಯಾಯಿತು. ಅಂದಿನಿಂದಿಂದಿನ ತನಕವೂ ವರ್ಷಂಪ್ರತಿ ತಮೋಸುರನ ಹಾವಳಿ ಇದ್ದೇ ಇದೆ, ಆಗ ಇಂದ್ರನು ತಮ್ಮ ಸಹಾಯಕ್ಕಾಗಿ ಧಾವಿಸಿ ಬರುತ್ತಾನೆ ಎಂಬ ಕಲ್ಪನೆಯೊಂದಿದೆ.

ಇಂದಿನ ಮಾನವನೂ ಪ್ರಕೃತಿಯ ಈ ಶಕ್ತಿಗಳ ಬಗ್ಗೆ ಆಸಕ್ತಿ ತಳೆದಿದ್ದಾನೆ. ಆದರೆ, ಅವನದು ಕಲ್ಪನೆಯ ಮೇಲೆ ಕಟ್ಟಿದ ಗೋಪುರವಲ್ಲ. ಬಿರುಗಾಳಿಯ ಮುನ್ಸೂಚನೆ ಇಂದು ಆತನಿಗೆ ಅತ್ಯಗತ್ಯ. ವ್ಯವಸಾಯದಲ್ಲಿ, ಆಟಪಾರಗಳಲ್ಲಿ ಮತ್ತು ಭವನ ನಿರ್ಮಾಣ ಕಾರ್ಯದಲ್ಲಿ ಈ ತರಹದ ಮುನ್ಸೂಚನೆಯಿಂದ ತುಂಬ ಪ್ರಯೋಜನಗಳಿವೆ.

ವಿಮಾನ ಸಂಚಾರವಿಂದು ಮನೆಮಾತಾಗಿದೆ. ಅವಶ್ಯವೆನಿಸಿದಾಗ ಚಂಡಮಾರುತಗಳಿಗೆದುರಾಗಿಯೂ ವಿಮಾನ ಹಾರಲೇ ಬೇಕಾಗುತ್ತದೆ. ಆದುದರಿಂದ ಬಿರುಗಾಳಿಗಳ ಸ್ಥಾನ ನಿರ್ದೇಶ, ಗಾತ್ರ ಹಾಗೂ ಸಾಂದ್ರತೆಗಳನ್ನು ಕುರಿತು ಸಮರ್ಪಕವಾದ ಜ್ಞಾನವು ವೈಮಾನಿಕರ ಸಿಕೋಟಿ ನೆಲೆಗಳಿಗೆ ಅತ್ಯಗತ್ಯ. ಸಮರ್ಪಕವಾದ ಬಿರುಗಾಳಿಗಳ ಮುನ್ಸೂಚನೆಯಿಂದ ಹೆಚ್ಚಿನ ಪ್ರಯೋಜನವಿಲ್ಲವಾದರೂ ಜನಸಾಮಾನ್ಯರಿಗೆ ಅದರಿಂದಲೂ ಲಾಭವಿದೆ. ಹಾಗೆಯೇ ಮಳೆಯ ಮುನ್ಸೂಚನೆಗಳು ಸರಿಯಾಗಿ ದೊರೆತವೆಂದರೆ ಯಾತ್ರಿಕರಿಗೂ ರೈತರಿಗೂ ಅದೆಷ್ಟು ಉಪಯುಕ್ತ!

ಆದರೆ, ಹವಾಮಾನದ ಮುನ್ಸೂಚನೆಗಳನ್ನು ನಿಖರವಾಗಿ ತಿಳಿಯುವುದು ಹೇಗೆ? ಇದಕ್ಕನುಕೂಲವಾದ ಯಾವುದೇ ಸಾಧನವಿದೆಯೆ?. ಇದೀಗ ಹವಾಮಾನವನ್ನು ಪರಿಶೀಲಿಸುವುದಕ್ಕಾಗಿಯೇ ತಯಾರಾಗಿರುವ ರಡಾರ್ ಯಂತ್ರ. ಇದರ ಸಹಾಯದಿಂದ ನಿರ್ದಿಷ್ಟವಾದ ಮುನ್ಸೂಚನೆಗಳನ್ನು ಪಡೆಯುವುದು ಸಾಧ್ಯ. ಅದು ಬಿರುಗಾಳಿಗಳ ಸ್ಥಾನ ನಕ್ಷೆಗಳನ್ನು ಸಿದ್ಧಪಡಿಸುತ್ತದೆ, ಸಾಂದ್ರತೆಯನ್ನು ಸೂಚಿಸುತ್ತದೆ. ಬಿರುಗಾಳಿಗಳ ಬೆಳವಣಿಗೆಗೆ ಹಾಗೂ ಚಲನವಲನಗಳನ್ನು ಕುರಿತು ತಿಳುವಳಿಕೆ ಪರಿಮಿತವಾಗಿರುವುದರಿಂದ ಮುನ್ಸೂಚಕರು ರಡಾರಿನ ಚೈತನ್ಯದ ಪೂರ್ಣಪ್ರಯೋಜನವನ್ನು ಪಡೆಯಲಾರದಾಗಿದ್ದಾರೆ.

೧೯೪೬—೪೭ರಲ್ಲಿ ಅಮೆರಿಕೆಯ ಹವಾಮಾನ ಶಾಖೆಯವರೂ ಕೇಂದ್ರ ಸರಕಾರದ ಇತರ ಪ್ರಾತಿನಿಧ್ಯಗಳೂ ಜತೆಗೂಡಿ ಒಂದು ಪ್ರಾಜೆಕ್ಟ ತಯಾರಿಸಿದರು. ಇದರಲ್ಲಿ ಸಂಗ್ರಹಿತವಾದ ಅಂಕೆ-ಅಂಶಗಳ ಸಹಾಯದಿಂದ ಬಿರುಗಾಳಿಗಳೆಂದರೆ ಸಾಮಾನ್ಯವಾಗಿ ಸೆಲ್‌ಗಳ ರಾಶಿ ಎಂಬುದಾಗಿ ಚಿಕಾಗೊ ವಿಶ್ವವಿದ್ಯಾಲಯದ ವಿಜ್ಞಾನಿಗಳು ಸ್ಪಷ್ಟಪಡಿಸಿರುವರು. ಈ ಸೆಲ್ಲುಗಳ ವಿಸ್ತಾರವೆಷ್ಟು? ಸಾಮಾನ್ಯವಾಗಿ ಒಂದು ಮೈಲಿನಿಂದ ತೊಡಗಿ ಕೆಲವು ಮೈಲುದ್ದದ ವ್ಯಾಸ ಇವಕ್ಕಿರುತ್ತವೆ! ಇವು ಬೆಳೆಯುವುದುಂಟು, ಕರಗುವುದೂ ಉಂಟು! ಒಂದು ಸೆಲ್ ಸುಮಾರು ಅರ್ಧ ತಾಸಿನಿಂದ ಒಂದು ತಾಸಿನ ತನಕ ಜೀವಂತವಿರುವುದು.

ಬಿರುಗಾಳಿಗಳ ಚಲನವಲನಗಳನ್ನು ಕೊಲರೆಡೊವಿನ ಬೋಲ್ಡರ್‌ನಲ್ಲಿ ವಾತಾವರಣ ಸಂಶೋಧನಾ ರಾಷ್ಟ್ರೀಯ ಕೇಂದ್ರದಲ್ಲಿ ಇತ್ತೀಚೆಗೆ ಪರಿಶೀಲಿಸಲಾಯಿತು. ಅಮೇರಿಕೆಯ ವಿಶಾಲ ಮೈದಾನ ಪ್ರದೇಶದಲ್ಲಿ ಅನೇಕ ಸೆಲ್ಲುಗಳ ಬಿರುಗಾಳಿಗಳನ್ನು ಅಧ್ಯಯನ ಮಾಡುವಾಗ ಬಿರುಗಾಳಿಯ ಚಲನೆಯ ಮೇಲೆ ಪರಿಣಾಮವನ್ನುಂಟು ಮಾಡುವ ಅತೀ ಮುಖ್ಯಾಂಶಗಳಲ್ಲಿ ಸೆಲ್ಲುಗಳ ಬೆಳವಣಿಗೆಯ ಹಾಗೂ ವಿನಾಶದ ವಿಧಾನವೊಂದೆಂಬುದು ತಿಳಿದು ಬಂತು.

ಉದಾಹರಣೆಗೆ ಅಂತಹ ಬಿರುಗಾಳಿಯನ್ನು ಮೇಲಿನಿಂದ ಅದರ ಚಲನೆಯ ದಿಕ್ಕಿನಲ್ಲಿ ವೀಕ್ಷಿಸಿದಾಗ ಇರುವ ಸೆಲ್ಲುಗಳ ಬಲಭಾಗದಲ್ಲಿ ಹೊಸ ಸೆಲ್ಲುಗಳು ರೂಪುಗೊಳ್ಳುತ್ತಿರುವುದೂ ಹಳೆಯ ಸೆಲ್ಲುಗಳು ಎಡಭಾಗದ ಕಡೆಗೆ ವಿನಾಶವಾಗುತ್ತಿರುವುದೂ ಕಂಡು ಬರುವುದು. ಪ್ರತ್ಯೇಕವಾದ ಏಕಸೆಲ್ಲುಗಳು ಇಡಿಯ ಬಿರುಗಾಳಿಯೊಡನೆ ಸ್ವಲ್ಪಮಟ್ಟಿಗೆ ಬಲ ತುದಿಗೆ ಹೊರಳಿ ಮುಂದಕ್ಕೆ ಸಾಗುತ್ತಿರುತ್ತವೆ.

ಸಾಮಾನ್ಯವಾಗಿ ಹೊಸ ಸೆಲ್ಲುಗಳ ಬೆಳವಣಿಗೆ ಇರುವ ಬಿರುಗಾಳಿಯ ಬಲಗಡೆಗೆ ಮುಂಬದಿಯಲ್ಲಿ ನಡೆಯುತ್ತದೆಂದು ಅಮೇರಿಕೆ ಮತ್ತು ಬ್ರಿಟಿಷ್ ವಿಜ್ಞಾನಿಗಳು ೧೯೬೦ರಲ್ಲಿ ನಡೆಸಿದ ರಡಾರ್ ಪರಿಶೀಲನೆಯಿಂದ ವ್ಯಕ್ತಪಟ್ಟಿತು. ಬಲಗಡೆಯಲ್ಲಿ ಹೊಸ ಸೆಲ್ಲುಗಳ ನಿರ್ಮಾಣ ವೇಗ ಹೆಚ್ಚಿದಷ್ಟು ಬಿರುಗಾಳಿಯು ತನ್ನ ಪ್ರತ್ಯೇಕ ಸೆಲ್ಲಿನ ಚಲನೆಯ ಬಲಕ್ಕೆ ಸರಿಯುವುದೂ ಹೆಚ್ಚುವುದು. ಈ ಬಗೆಯ ವ್ಯವಸ್ಥೆಯನ್ನು ನಿರೂಪಿಸುವ ಪ್ರಮೇಯವನ್ನು ೧೯೬೪ರಲ್ಲಿ ಡಾ|| ನ್ಯೂಟನ್ ಹಾಗೂ ಅವರ ಪತ್ನಿ ಹ್ಯಾರಿಯಟ್ ಮುಂದಿಟ್ಟರು. ಈ ಪ್ರಮೇಯದಲ್ಲಿ ನಾನಾ ಎತ್ತರದಲ್ಲಿ ಗಾಳಿಯ ದಿಕ್ಕುಗಳನ್ನು, ವೇಗವನ್ನು, ಬಿರುಗಾಳಿಯ ಗಾತ್ರಗಳನ್ನು, ಇತರ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿತ್ತು. ಬಿರುಗಾಳಿ ದೊಡ್ಡದಿದ್ದಷ್ಟು ಅದು ಗಾಳಿಯ ಹಾದಿಯ ಬಲಕ್ಕೆ ಹೆಚ್ಚು ದೂರವಾಗುವುದು.

ಇದೇ ಬಿರುಗಾಳಿಯ ರಚನೆಯನ್ನು ವಿವರಿಸುವ ಮೊತ್ತಮೊದಲ ಪ್ರಮೇಯ. ಆದರೆ ಇದು ಬಿರುಗಾಳಿಯ ಚಲನವಲನಗಳ ವ್ಯಾವಹಾರಿಕ ಮುನ್ಸೂಚನೆಯನ್ನು ನೀಡಲಾರದೆಂದು ಆಗ ನಂಬಲಾಗಿತ್ತು. ಈ ಮುನ್ಸೂಚನೆಯನ್ನು ಉತ್ತಮಪಡಿಸುವ ಪ್ರಯತ್ನವಾಗಿ ಕೇವಲ ಸರಬರಾಜು ಹಾಗೂ ಬೇಡಿಕೆಗಳ ಮೊತ್ತದ ದೃಷ್ಟಿಯಿಂದ ಬಿರುಗಾಳಿಗಳನ್ನು ಪರಿಶೀಲಿಸಲಾಯಿತು.

ಬಹುಕಾಲ ತೇವ ಸಂಗ್ರಹಿತವಾಗಿರುವ ಕೆಳಮಟ್ಟದಲ್ಲಿರುವ ವಾತಾವರಣದಲ್ಲಿ ಚಲಿಸುವಾಗ ಬಿರುಗಾಳಿಯು ನೀರಿನ ಆವಿಯನ್ನು ಮೇಲಕ್ಕೆ ಗುಡಿಸುವುದು. ಒಂದಷ್ಟು ನೀರು ಮಳೆಯಾಗಿ ಬೀಳುವುದು. ಮಳೆ ಬಿದ್ದದ್ದರಿಂದ ಸಮತೋಲದ ಸಾಧನೆಗೆ ತೇವಹೀರುವ ಸಲುವಾಗಿ ಬಿರುಗಾಳಿಗಳು ಕೆಳಮಟ್ಟದಲ್ಲಿ ನಿರ್ದಿಷ್ಟ ವೇಗದಲ್ಲಿ ಚಲಿಸಬೇಕಾಗುವುದು. ಬಿರುಗಾಳಿಯು ದೊಡ್ಡದಿದ್ದಷ್ಟು ವೇಗದ ಪ್ರಮಾಣವೂ ಹೆಚ್ಚ ಬೇಕಾಗುವುದು. ಗಾಳಿಯ ಸರಾಸರಿ ದಿಕ್ಕಿನ ಬಲಕ್ಕೆ ಸರಿದಷ್ಟು ಬಿರುಗಾಳಿಯ ವೇಗ ಹೆಚ್ಚುವುದು; ಎಡಕ್ಕೆ ಸರಿದಷ್ಟೂ ವೇಗ ಕಮ್ಮಿಯಾಗುವುದು.

ಈ ಪರಿಶೀಲನೆಯಿಂದ ಡಾ| ನ್ಯೂಟನ್ ಮತ್ತವರ ಸಹೋದ್ಯೋಗಿಗಳು ಸರಳವಾದ ಸೂತ್ರವೊಂದನ್ನು ಕಂಡುಹಿಡಿದರು. ಇದು ಬಿರುಗಾಳಿಗಳ ಚಲನವಲನಗಳನ್ನು ಸರಿಯಾಗಿ ವಿವರಿಸುತ್ತದೆ. ನಿಸರ್ಗದಲ್ಲಿ ಅವರ ಮುನ್ಸೂಚನೆಗಳಿಗಿಂತ ಸಾಕಷ್ಟು ಬಿನ್ನವಾದ ಘಟನಗಳು ಸಂಭವಿಸಿವೆ. ಆದರೆ, ಸಾಕಷ್ಟು ಸಂಖ್ಯೆಯಲ್ಲಿ ಬಿರುಗಾಳಿಗಳನ್ನು ಪರಿಶೀಲಿಸಿದ ಮೇಲೆ ಈ ಸೂತ್ರವನ್ನು ಉತ್ತಮಪಡಿಸಬಹುದೆಂಬ ನಿರೀಕ್ಷೆ ಅವರಿಗಿದೆ. ಇನ್ನೂ ಪರಿಷ್ಕೃತವಾಗಬೇಕಾಗಿರುವ ಈ ಸೂತ್ರ ಸಮೀಪಗತ ಬಿರುಗಾಳಿಗಳ ಮುನ್ಸೂಚನೆಗೆ ಅವಲಂಬನೀಯ ವ್ಯವಸ್ಥೆಯನ್ನು ರೂಪಿಸುವ ಹಾದಿಯಲ್ಲಿ ಇಟ್ಟ ಒಂದು ಹೆಜ್ಜೆ ಎನ್ನಬಹುದು.

ಈ ಬಿರುಗಾಳಿಗಳ ಒಳ ಅರಿವಿಗೆ ನಮ್ಮ ವೈಜ್ಞಾನಿಕ ಮುನ್ಸೂಚಕರು ಸಿಡಿಲ ಹಕ್ಕಿಗಳನ್ನು ಕರೆಯುವ ಆಸೆಯನ್ನು ಹೊಂದಿದ್ದರೆ ಆಶ್ಚರ್ಯವಿಲ್ಲ. ಅದೇನಾದರೂ ಇರಲಿ, ಎಲ್ಲೋ ದೂರದಲ್ಲಿ ಕೇಳಿ ಬಂದ ಸಿಡಿಲಿನ ನೆಲೆಯನ್ನು ಗುರುತಿಸುವ ಹಾದಿಯಲ್ಲಿ ಅವರು ಮುಂದುವರಿದಿದ್ದಾರೆ ಎನ್ನುವುದು ಖಂಡಿತ.

ಹವಾಮಾನ ಪರಿಶೀಲನೆಗಾಗಿ ಉಪಯೋಗಿಸಲಾಗುವ ಬೆಲೂನ್ ಹಾರಾಟಕ್ಕೆ ಸಿದ್ಧವಾಗಿದೆ. ನವದೆಹಲಿ ಪ್ರದರ್ಶನದಲ್ಲಿನ ಪ್ರದರ್ಶಿಕೆಯಿದು.

ಸಂಶೋಧನೆ

ನದ ಬೆಳವಣಿಗೆ

ಕಡಿಮೆಯಿಲ್ಲ

ಭಾರತವು ಹವಾಮಾನ ವಿಜ್ಞಾನ ಕ್ಷೇತ್ರದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ ಎನ್ನುವುದಕ್ಕೆ ಅನೇಕ ನಿದರ್ಶನಗಳಿವೆ. ಆಧುನಿಕ ಸಂಪರ್ಕ ಸಾಧನಗಳಿಂದ ಹವಾಮಾನಕ್ಕೆ ಸಂಬಂಧಿಸಿದ ವಿವರಗಳ ಸಂಗ್ರಹಣೆ ಮತ್ತು ವಿನಿಮಯ ಉತ್ತರ ಗೋಳಾರ್ಧದಲ್ಲಿ, ಹವಾಮಾನ ವಿಶ್ಲೇಷಣಾ ಕೇಂದ್ರದ ಸ್ಥಾಪನೆ, ಪೂನಾದ ಉಷ್ಣವಲಯದ ಹವಾಮಾನ ವಿಜ್ಞಾನ ಸಂಸ್ಥೆ ಮತ್ತು ಮುಂಬೈನ ಅಂತಾರಾಷ್ಟ್ರೀಯ ಹವಾಮಾನ ವಿಜ್ಞಾನ ಕೇಂದ್ರದ ಕಾರ್ಯವಿಧಾನ ಇವು ಹವಾಮಾನ ವಿಜ್ಞಾನ ಕ್ಷೇತ್ರದಲ್ಲಿ ಭಾರತವು ತಳೆದಿರುವ ತೀವ್ರ ಆಸಕ್ತಿಯನ್ನು ವ್ಯಕ್ತಗೊಳಿಸುತ್ತವೆ.

ಹವಾಮಾನಕ್ಕೆ ಸಂಬಂಧಪಟ್ಟಂತೆ ಸಂಶೋಧನೆಗಳನ್ನು ನಡೆಸುವ ಕೃತಕ ಉಪಗ್ರಹಗಳು ಮತ್ತು ರಾಕೆಟ್‌ಗಳ ಪ್ರಯೋಗದಿಂದ ಈ ಕ್ಷೇತ್ರದಲ್ಲಿ ನೂತನ ಯುಗವು ಆರಂಭವಾಗಿದೆ. ಇದು ಹವಾಮಾನ ವಿಜ್ಞಾನದ ಗಮನಾರ್ಹ ಅಭಿವೃದ್ಧಿಗೆ ಕಾರಣವಾಗಲಿದೆ. ಭಾರತದ ಹವಾಮಾನ ವಿಜ್ಞಾನ ಸಂಬಂಧವಾದ ವಿಭಾಗವು ಈ ಹೊಸ ಕ್ಷೇತ್ರದಲ್ಲಿನ ಬದಲಾವಣೆಗಳನ್ನು ಅಧಿಕ ಕುತೂಹಲದಿಂದ ಗಮನಿಸುತ್ತಿದೆ. ಅಂತರಿಕ್ಷ ಸಂಶೋಧನಾ ಸಂಬಂಧವಾದ ಭಾರತದ ರಾಷ್ಟ್ರೀಯ ಸಮಿತಿಯ ಸಹಯೋಗ ಪಡೆದು ತಿರುವನಂತಪುರದ ಬಳಿಯಲ್ಲಿನ ತುಂಬಾದಿಂದ ಹವಾಮಾನ ಸಂಶೋಧನಾ ರಾಕೆಟ್ಟುಗಳ ಪ್ರಯೋಗವನ್ನು ಆರಂಭಿಸಿದೆ. ಹವಾಮಾನ ಸಂಶೋಧನೆಯ ಉಪಗ್ರಹಗಳು ಮೋಡದ ಆವರಣಕ್ಕೆ ಸಂಬಂಧಿಸಿದಂತೆ ಒದಗಿಸಿರುವ ಮಾಹಿತಿಯು ಹವಾಮಾನ ವಿಶ್ಲೇಷಣಾ ಕಾರ್ಯದಲ್ಲಿ ಅತ್ಯಂತ ಪ್ರಯೋಜನಕಾರಿಯಾಗಿ ಪರಿಣಮಿಸಿದೆ.

ಹವೆಯು ಸ್ವರೂಪದಲ್ಲಿ ವಿಶ್ವವ್ಯಾಪಿಯಾಗಿದ್ದು ವಿಶ್ವದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಚಲಿಸುತ್ತದೆ. ಅದಕ್ಕೆ ಯಾವುದೇ ರಾಜಕೀಯ ಗಡಿಗಳಿಲ್ಲ. ವಾತಾವರಣವು ವಿಶ್ವದ ಸುತ್ತಲಿನ ಒಂದು ನಿರಂತರ ವಲಯವಾಗಿದೆ. ಹವೆಯ ಚಲನೆ ಮತ್ತು ಹವೆಯಲ್ಲಿನ ವಿವಿಧ ಗುಣಧರ್ಮಗಳನ್ನು ವಸ್ತುಗಳೊಂದಿಗೆ ಪರಸ್ಪರ ಕ್ರಿಯೆಯಿಂದಾಗಿ ಹವಾಮಾನವು ರೂಪುಗೊಳ್ಳುತ್ತದೆ. ಹವಾಮಾನದ ವಿಶಿಷ್ಟ ಗುಣಧರ್ಮವೂ ಈ ಕ್ರಿಯೆಯಿಂದಲೇ ನಿರ್ಧರಿಸಲ್ಪಡುತ್ತದೆ. ಯಾವುದೇ ವಿಶಿಷ್ಟ ಹವಾಮಾನವು ಒಂದು ರಾಷ್ಟ್ರದ ಗಡಿಗಳಿಗೆ ಸೀಮಿತವಾಗಿರುವುದಿಲ್ಲ. ಈ ಕಾರಣದಿಂದಲೇ ವಿಶ್ವದ ರಾಷ್ಟ್ರಗಳು ಹವಾಮಾನಕ್ಕೆ ಸಂಬಂಧಿಸಿದಂತೆ ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸುವುದು, ಇಂತಹ ಮಾಹಿತಿಯ ವಿನಿಮಯ ಮತ್ತು ಅಂತರರಾಷ್ಟ್ರೀಯ ಇವೇ ಮೊದಲಾದ ಕೆಲಸ-ಕಾರ್ಯಗಳಲ್ಲಿ ಅತ್ಯಧಿಕ ಪ್ರಮಾಣದ ಅಂತರರಾಷ್ಟ್ರೀಯ ಸಹಕಾರ ಅಗತ್ಯವೆನ್ನುವುದನ್ನು ಮನವರಿಕೆ ಮಾಡಿಕೊಂಡಿರುತ್ತವೆ.

ಹವಾಮಾನಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಿದ ಈ ವಿವರಗಳನ್ನು ಹವಾಮಾನದ ನಕ್ಷೆಗಳ ಮೇಲೆ ಗುರುತಿಸಿ ರಾಷ್ಟ್ರೀಯ ಹಿತದೃಷ್ಟಿಯಿಂದ ಈ ವಿವರಗಳನ್ನು ಅಧ್ಯಯನ ಮಾಡಲಾಗಿದೆ.

ಅಂತರರಾಷ್ಟ್ರೀಯ ಹವಾಮಾನ ವಿಜ್ಞಾನ ಸಂಸ್ಥೆಯು ೧೮೭೩ರಲ್ಲಿ ಸ್ಥಾಪನೆಗೊಂಡಿತು. ಭಾರತವು ಸಹ ಈ ಸಂಸ್ಥೆಯ ಸಂಸ್ಥಾಪಕ ರಾಷ್ಟ್ರಗಳಲ್ಲೊಂದು. ಅಂತರರಾಷ್ಟ್ರೀಯ ಹವಾಮಾನ ವಿಜ್ಞಾನ ಸಂಸ್ಥೆಯ ಅನೇಕ ಸಮಿತಿಗಳಲ್ಲಿ ಕಾರ್ಯ ನಿರ್ವಹಿಸಲು ಭಾರತಕ್ಕೆ ಒಂದಲ್ಲ ಅನೇಕ ಸಲ ಆಹ್ವಾನ ಬಂದಿದೆ. ಹವಾಮಾನ ವೀಕ್ಷಣಾಲಯಗಳಲ್ಲಿ ಸಂಪರ್ಕ ಕಲ್ಪಿಸುವ ಮೂಲಕ ಭಾರತವು ಭಾರತೀಯ ಹವಾಮಾನ ವಿಜ್ಞಾನ ಸಂಸ್ಥೆ, ಆಸ್ಟ್ರೇಲಿಯ ಮತ್ತು ಯುರೋಪಿನ ಹವಾಮಾನ ವಿಜ್ಞಾನ ಸಂಸ್ಥೆಗಳ ನಡುವೆ ಸಮನ್ವಯ ಕಲ್ಪಿಸಿದೆ. ಇದು ಅಂತರರಾಷ್ಟ್ರೀಯ ಸಹಕಾರದ ವಿಷಯದಲ್ಲಿ ಭಾರತವು ತಳೆದಿರುವ ಆಸಕ್ತಿಯನ್ನು ವ್ಯಕ್ತಪಡಿಸುತ್ತದೆ. ೧೯೫೧ರಲ್ಲಿ ವಿಶ್ವ ಹವಾಮಾನ ಸಂಸ್ಥೆಯು ವಿಶ್ವಸಂಸ್ಥೆಯ ಒಂದು ವಿಶಿಷ್ಟ ಸಂಸ್ಥೆಯೊಂದು ಮನ್ನಣೆ ಪಡೆದಿದೆ. ಈ ಸಂಸ್ಥೆಯು ಅಸ್ತಿತ್ವದಲ್ಲಿ ಬಂದಿತು. ಈ ಸಂಸ್ಥೆಯ ಹುಟ್ಟಿನೊಂದಿಗೆ ಅಂತರರಾಷ್ಟ್ರೀಯ ಹವಾಮಾನ ವಿಜ್ಞಾನ ಸಂಶೋಧನಾ ಕ್ಷೇತ್ರದಲ್ಲಿ ಭಾರತದ ಮಹತ್ವ ಇನ್ನಷ್ಟು ಹೆಚ್ಚಿದಲ್ಲದೆ ಭಾರತವೂ ಈ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ತಳೆಯಿತು.

ಹವಾಮಾನ ವಿಜ್ಞಾನವು ಕಳೆದ ೩೦ ವರ್ಷಗಳಲ್ಲಿ ತ್ವರಿತವಾಗಿ ಅಭಿವೃದ್ಧಿ ಹೊಂದಿದೆ. ಮಾನವ ಜೀವನದ ಎಲ್ಲಾ ರಂಗಗಳಲ್ಲಿಯೂ ಹವಾಮಾನ ವಿಜ್ಞಾನವು ಪಡೆದಿರುವ ಮಹತ್ವದ ಸ್ಥಾನ, ಯಾವುದೇ ಒಂದು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಅದು ನಿರ್ವಹಿಸುತ್ತಿರುವ ಮಹತ್ವದ ಪಾತ್ರ ಇವುಗಳನ್ನು ಗಮನಿಸಿ ಇದು ಪ್ರತಿಯೊಂದು ರಾಷ್ಟ್ರವೂ ಹವಾಮಾನ ವಿಜ್ಞಾನ ಸೇವಾ ವಿಭಾಗದ ಸ್ಥಾಪನೆಗಾಗಿ ಆತುರವಾಗಿದೆ.

ಅನೇಕ ರಾಷ್ಟ್ರ ನಿರ್ಮಾಣ ಕಾರ್ಯ ಚಟುವಟಿಕೆಗಳಲ್ಲಿ ಹವಾಮಾನ ವಿಜ್ಞಾನವು ನಿರ್ವಹಿಸುತ್ತಿರುವ ಪಾತ್ರ ಅತ್ಯಂತ ಮಹತ್ವಪೂರ್ಣವಾಗಿದೆ. ಹವಾಮಾನ ಸಂಬಂಧವಾದ ಮುನ್ಸೂಚನೆಗಳು, ಮುನ್ನೆಚ್ಚರಿಕೆಗಳು ವಿಮಾನ ಸಾಗಣೆಯಲ್ಲಿ ಸುರಕ್ಷತೆಯ ದೃಷ್ಟಿಯಿಂದ ಅಗತ್ಯವಾಗಿವೆ. ಭೂ, ಜಲ, ವಾಯು ಮಾರ್ಗಗಳಲ್ಲಿನ ಸಾರಿಗೆಯ ಸುರಕ್ಷತೆಯು ಹವಾಮಾನ ವಿಜ್ಞಾನವನ್ನೇ ಅವಲಂಬಿಸಿದೆ. ನೀರಾವರಿ ಕಾರ್ಯ ಯೋಜನೆಗಳ, ವೈದ್ಯಕೀಯ, ಸಾರ್ವಜನಿಕ ಆರೋಗ್ಯ, ನೆರೆಹಾವಳಿ, ಕ್ಷಾಮ ಪರಿಸ್ಥಿತಿ, ಬೇಸಾಯ ಹಾಗೂ ಆಹಾರೋತ್ಪಾದನೆ ಇವೆಲ್ಲಾ ಹವಾಮಾನದ ಸ್ಥಿತಿಗತಿಗಳನ್ನೇ ಅವಲಂಬಿಸಿವೆ. ಭಾರತದ ಆರ್ಥಿಕ ವ್ಯವಸ್ಥೆಯು ಬೇಸಾಯವನ್ನು ಮತ್ತು ಆಹಾರಧಾನ್ಯಗಳನ್ನೇ ಅವಲಂಬಿಸಿದೆ. ಹವಾಮಾನ ವಿಜ್ಞಾನ ವಿಭಾಗದವರು ರೈತರಿಗೆ ಹವಾಮಾನಕ್ಕೆ ಸಂಬಂಧಿಸಿದಂತೆ ನೀಡುವ ಮುನ್ಸೂಚನೆಗಳು ಅತ್ಯಂತ ಪ್ರಯೋಜನಕಾರಿಯಾಗಿ ಪರಿಣಮಿಸಿವೆ.

ಉತ್ತರ ಗೋಳಾರ್ಧಕ್ಕೆ ಸಂಬಂಧಿಸಿದಂತೆ ಹವಾಮಾನದ ಪರಿಸ್ಥಿತಿಯನ್ನು ಗುರುತಿಸಿದ ಚಿತ್ರವಿದು. ಇದನ್ನು ನವದೆಹಲಿಯಲ್ಲಿ ಇದನೆಯ ಹವಾ ಪರಿಶೀಲನಾ ದಿನದ ಪ್ರದರ್ಶನದಲ್ಲಿ ಪ್ರದರ್ಶಿಸಲಾಯಿತು.

ವ್ಯವಸಾಯಕ್ಕೆ ಕಾಗದದ ಚಾಪೆಗಳು

ಹಣ್ಣು ತರಕಾರಿ ಬೀಜಗಳನ್ನು ಕೈಗಳಿಂದಲೇ ನೆಡುವುದರಲ್ಲಿ ಅನೇಕ ತೊಂದರೆಗಳಿವೆ. ಸ್ವಲ್ಪ ಸೂಕ್ಷ್ಮವಾಗಿರುವವು ಗಾಳಿಯಲ್ಲಿ ಹಾರಿಹೋಗುವುವು, ಕೆಲವು ಒಂದರೊಡನೊಂದು ಅಂಟಿಕೊಂಡಿರುವುದರಿಂದ, ಮೊಳಕೆ ಒಂದೇ ವೇಳೆ ಬೇರೆ ಮಾಡಬೇಕಾಗಿ ಬರುವುದು. ಕೆಲವು ವೇಳೆ, ಸರಿಯಾಗಿ ನಡದೇ ಇರುವುದರಿಂದ ಮೊಳಕೆಯ ಮೇಲ್ಭಾಗವು ಬಹು ಬೇಗ ಒಣಗಿಹೋಗುವುದು. ಈ ತೊಂದರೆಗಳನ್ನೆಲ್ಲಾ ನೀಗಿಸಲು ಜಿ. ಹಚ್. ಉಡ್ಸ್ ಎಂಬ ಡಚ್ ಸಂಸ್ಥೆಯು ಹೊಸ ಮಾರ್ಗವೊಂದನ್ನು ಕಂಡುಹಿಡಿದಿದೆ. ಇದಕ್ಕಾಗಿ ಎರಡು ಪದರಗಳುಳ್ಳ ಚಾಪೆಯಂತಹ ಸಾಧನವನ್ನು ಉಪಯೋಗಿಸಲಾಗುವುದು. ಇದರ ನಡುವೆ ಸಾಲಿನಂತಹ ಎಳೆಗಳಿರುತ್ತವೆ. ಇದರೊಂದಿಗೆ ಕೂಡಿರುವ ಯಂತ್ರದ ಸಹಾಯದಿಂದ ಬೀಜಗಳನ್ನು ಈ ಎಳೆಗಳ ಮಧ್ಯೆ ಸಾಲು ಗಿಡಲಾಗುವುದು. ನಂತರ ಇದನ್ನು ನೆಲದ ಮೇಲಿಟ್ಟು ಆವರಿಸಲಾಗುವುದು. ಹೀಗೆ, ಕಾಗದಗಳಿದ್ದರೂ ಅವು ಅತ್ಯಂತ ತೆಳ್ಳಗಿರುವುದರಿಂದ ಅವು ಹಕ್ಕಿ, ಇಲಿ ಮುಂತಾದ ಪ್ರಾಣಿಗಳಿಂದ ಬೀಜಗಳನ್ನು ರಕ್ಷಿಸುವುವೇ ವಿನಹ ಇದರಿಂದ ಸಸ್ಯಗಳಿಗೆ ತೊಂದರೆಯೇನೂ ಇಲ್ಲ.

ನಚಿಕೇತರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಋಣ ಯಾತ್ರೆ

ಬೆಲೆ ರೂ. 3 50 ನ. ಪೈಸ

ಭಾವಾರ್ಚನೆ

ಬೆಲೆ ರೂ. 2-00

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ

ಶಿವ ಬೇರೆಯಲ್ಲ, ವಿಷ್ಣು ಬೇರೆಯಲ್ಲ

ಏಕದೇವತ್ವದ ಪ್ರತೀಕ ಹರಿಹರ

ಹರಿಹರ ಮೂರ್ತಿಯ ವ್ಯಧು ಮುಂದಹಾಕಿದ ಮುಂದೆ ಯಾರಾದರೂ ತಲೆ ತಗ್ಗಿಸಬೇಕು.

ಬರೆದವರು—ಶ್ರೀ ಕೆ. ನಾರಾಯಣ.

ಹರಿಹರ ಚಿತ್ರದುರ್ಗ ಜಿಲ್ಲೆಯಲ್ಲಿ ತುಂಗಭದ್ರಾ ನದಿಯ ತೀರದಲ್ಲಿರುವ ಚಿಕ್ಕ ಪಟ್ಟಣ. ಮೇಲಾಗಿ ತಾಲ್ಲೂಕಿನ ಮುಖ್ಯ ಸ್ಥಳ. ರೈಲು ಮತ್ತು ಬಸ್ಸಿನ ಮೂಲಕ ಪ್ರಯಾಣ ಮಾಡಬಹುದು; ರಾಷ್ಟ್ರೀಯ ಹೆದ್ದಾರಿಯೂ ಹಾದುಹೋಗಿದೆ. ಕಿರ್ಲೋಸ್ಕರ್ ಬಂಧುಗಳ ಕೈಗಾರಿಕೋದ್ಯಮದ ಮೂಲಕವೂ ಸಾಕಷ್ಟು ಕೀರ್ತಿ ಪಡೆದಿದೆ.

ತುಂಗಭದ್ರೆಯ ತೀರದಲ್ಲಿಯೇ ಹರಿಹರೇಶ್ವರ ದೇವಾಲಯವಿದೆ. ಹರಿಹರೇಶ್ವರನ ಭವ್ಯ ದೇಗುಲವಿರುವ ಕಾರಣದಿಂದಲೇ ಈ ಊರಿಗೆ 'ಹರಿಹರ' ಎಂಬ ಹೆಸರು ಬಂದಿದೆ ಎಂಬುದು ಅರಿತ ವಿಷಯ.

ಹರಿ (ವಿಷ್ಣು) ಹರ (ಶಿವ) ಇಬ್ಬರಲ್ಲಿಯೂ ಭೇದಭಾವವನ್ನೂ ಕಲ್ಪಿಸಿ ಹರಿ ಹೆಚ್ಚು ಹರ ಹೆಚ್ಚು ಎಂದು ಹೊಡೆದಾಡುವ ಜನತೆಗೆ ಹರಿಹರ ಬೇರೆಯಲ್ಲ ಒಬ್ಬನು ಎಂಬ ಸಂಗತಿಯನ್ನು ಮೂಲಮೂರ್ತಿ ಪ್ರತಿಪಾದಿಸುತ್ತದೆ.

ಜಾತಿ, ಮತ, ಪಂಥ, ದೇವರು, ಧರ್ಮ, ವಿಷಯಗಳಲ್ಲಿ ಮೇಲು ಕೀಳು, ಉತ್ತಮ — ಅಧಮ ಎಂಬ ಭಾವನೆ ತಮ್ಮ ವಿವೇಕ ಶೂನ್ಯವಾಗಿ ವರ್ತಿಸುವ ಜನತೆಯ ಮನದ ಕೊಳೆಯನ್ನು ಕಳೆಯಲು ಪರಮ ಪಾವನೆ ಗಂಗೆಯೂ ಅಶಕ್ತಳು. ದೇವನೊಬ್ಬ, ಆದರೆ ದೇವರ ಇಬ್ಬರು ಭಕ್ತರು ತಮ್ಮ ಪ್ರತಿಷ್ಠೆ ಪ್ರದರ್ಶಿಸಲು ದೇವರ ಗುಂಪುಕಟ್ಟಿ ಬಡಿದಾಡಿದರು. ಆದರೆ ನಮ್ಮ ಪೂರ್ವಿಕರು ನೀಡಿದ ಸಂದೇಶವಿಷ್ಟೇ:— ದೇವನೊಬ್ಬ. ಧರ್ಮವನ್ನು ಆಚರಿಸಿ, ಎಂದು. ಹರಿಹರ ಒಂದ ದೇವಮಂದಿರದಲ್ಲಿರುವ ಹರಿಹರೇಶ್ವರ ಮೂರ್ತಿ ಹರಿಹರರ ಭೇದವನ್ನು ತೊಡೆಯಲು ಪ್ರಯತ್ನಿಸಿದೆ.

ಹರಿಹರೇಶ್ವರ ದೇವಾಲಯ ನದೀ ತೀರದಲ್ಲಿದೆ. ಪಟ್ಟಣದ ಮಧ್ಯದಲ್ಲಿದೆ. ದೇವಾಲಯವನ್ನು ಪ್ರವೇಶಿಸುವ ಮುಂಚೆ ಕಾಣುವ ಮಹಾದ್ವಾರ ಭವ್ಯವಾಗಿದೆ. ಆದರೆ ದೇವಾಲಯದ ಸುತ್ತಮುತ್ತಲಿರುವ ಅವ್ಯವಸ್ಥಿತ ಮನೆಗಳ ಸಾಲು, ಕೊಳೆ ಎಲ್ಲೆಲ್ಲೂ ಬೇಸರ ತರುವಂತಿವೆ. ಈ ದಿಸೆಯಲ್ಲಿ ಸ್ಥಳೀಯ ಪುರಸಭೆಯವರು, ವಿಲಾಸಿಗಳು ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯ.

ಹರಿಹರೇಶ್ವರ ದೇವಾಲಯ ಮಾತ್ರವಲ್ಲದೆ ಪಕ್ಕದ ಲಕ್ಷ್ಮೀ ದೇವಾಲಯ ಮೊದಲಾದ ಅನೇಕ ಚಿಕ್ಕ ದೇವ ಮಂದಿರಗಳು ಇವೆ. ಶಿಲಾಶಾಸನಗಳ ಆಧಾರದ ಪ್ರಕಾರ ಕ್ರಿ. ಶ. ೧೧೦೦ಕ್ಕೂ ಪೂರ್ವದ ಸಂಗತಿ ತಿಳಿದು ಬರುತ್ತದೆ. ದೇವರ ಹಾಗೂ ದೇವಾಲಯದ ಕಥೆ ಇತಿಹಾಸ ಪ್ರಸಿದ್ಧವಾದದ್ದು.

ಉಚ್ಚಂಗಿಯನ್ನಾಳಿದ ಪ್ರಮುಖ ಪ್ರಾಂತ್ಯ ದೊರೆಗಳಾದ ವೀರ ಪಾಂಡ್ಯ, ವಿಜಯ ಪಾಂಡ್ಯ, ಕಾಲಚೂರ್ಯ ಬಿಜ್ಜಳ, ಹೊಯ್ಸಳ ಅರಸರು, ಯಾದವ ಕನ್ನಡ ಮತ್ತು ವಿಜಯನಗರದ ಅರಸರು ದೇವಾಲಯಕ್ಕೆ ಮತ್ತು ಸ್ಥಳೀಯ ಬ್ರಾಹ್ಮಣ ಕುಟುಂಬಗಳಿಗೆ ವಿಶೇಷ ದಾನ-ದತ್ತಿಗಳನ್ನು ದಯಪಾಲಿಸಿದರೆಂದು ಶಾಸನಗಳ ಮೂಲಕ ತಿಳಿದು ಬರುತ್ತದೆ.

ಕ್ರಿ. ಶ. ೧೧೨೪ರ ಶಾಸನ ಒಂದರ ಪ್ರಕಾರ ದೊರೆ ಜಯಸಿಂಹನ ದಂಡಾಧಿಕಾರಿ ಪೆಂಪ್ಮಡಿಯು ಕಟ್ಟಿಸಿದ ಹರಿಹರೇಶ್ವರ ದೇವಾಲಯವು ಸ್ಥಿರವಾಗಿ ಉಳಿಯದೆ ಉರುಳುತ್ತದೆ. ಈ ಕಾರಣದಿಂದ ಎರಡನೆಯ ನರಸಿಂಹ ಬಲ್ಲಾಳನ ದಂಡಾಧಿಕಾರಿ ಪೊಲಾಳ್ವ ದಂಡನಾಯಕ ಇಂದಿನ ಪೂರ್ಣ ದೇವಾಲಯವನ್ನು ಹೊಸತಾಗಿ ಕಟ್ಟಿಸಿ ೧೧೯೫ ಚಿನ್ನದ ಕಲಶಗಳನ್ನು ಸ್ಥಾಪಿಸಿದನೆಂದು ಗೊತ್ತಾಗುತ್ತದೆ

ದೊರೆ ನರಸಿಂಹ ಬಲ್ಲಾಳ ದೇವಾಲಯದ ಅಭಿವೃದ್ಧಿಗೆ, ದೇವರ ಸೇವೆಗೆ ಸಾಕಷ್ಟು ಕಾಣಿಕೆ (ಹಣ, ಭೂಮಿ)ಯನ್ನು ಸಲ್ಲಿಸಿದನೆಂದೂ ಗೊತ್ತಾಗುವುದು. ಕ್ರಿ. ಶ. ೧೨೬೮ರಲ್ಲಿ ಮತ್ತೊಬ್ಬ ಹೊಯ್ಸಳ ದಣ್ಣಾಯಕ ಸೋಮನಾಥ ಮಹಾದ್ವಾರ ಮತ್ತು ಪ್ರಾಕಾರವನ್ನು ಕಟ್ಟಿಸಿ ಕಳಶಗಳನ್ನು ಸ್ಥಾಪಿಸಿದನೆಂದು ಶಾಸನಗಳ ಮೂಲಕ ತಿಳಿಯಬಹುದಾಗಿದೆ. (ಸೋಮನಾಥಪುರದ ದೇವಾಲಯದ ನಿರ್ಮಾಣಕ್ಕೆ ಕಾರಣ ಈ ದಣ್ಣಾಯಕ ಸೋಮನಾಥ ಎಂಬುದು ಸ್ಮರಣೀಯ).

ಮುಸಲ್ಮಾನರ ಧಾಳಿಯಿಂದ ದೇವಾಲಯ ಮತ್ತು ದೇವರು ಸಾಕಷ್ಟು ಶೋಷಣೆಗೆ ಒಳಗಾಗಲೇ ಬೇಕಾಗುತ್ತದೆ. ಅದೇ ಸಂದರ್ಭದಲ್ಲಿ ಮೂಲ ಮೂರ್ತಿಯ ಸ್ಥಾನಪಲ್ಲಟವಾಗುತ್ತದೆ. ಕೆಲಕಾಲ ಚಿಕ್ಕ ಮೂರ್ತಿ ಪೂಜಾದಿಗಳು ನಡೆಯುತ್ತಿತ್ತು. ಅನಂತರ ಇತ್ತೀಚೆಗೆ ಅಂದರೆ ಮರಾಠರ ಕಾಲದಲ್ಲಿ ಮೂಲ ಮೂರ್ತಿಯನ್ನು ಹುಡುಕಿ ಯಥಾ ಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗಿದೆ ಮತ್ತು ಅಂದಿನಿಂದಲೂ ಏಕಪ್ರಕಾರವಾಗಿ ಪೂಜಾದಿಗಳು ನಡೆಯುತ್ತಾ ಬಂದಿವೆ.

ಗರ್ಭ ಗೃಹದಲ್ಲಿರುವ ಹರಿಹರೇಶ್ವರನ ಮೂಲ ಶಿಲಾಮೂರ್ತಿ ಪುರುಷ ಪ್ರಮಾಣಕ್ಕಿಂತಲೂ ಹಿರಿದಾಗಿದೆ. ಮೂರ್ತಿಯ ಮುಖದಲ್ಲಿ ಮುಗ್ಧತೆ, ಶಾಂತಿ, ತೇಜಸ್ಸು ತುಂಬಿ ತುಳುಕಿದೆ. ಶಿಲ್ಪಿ ಕೆತ್ತನೆಯಲ್ಲಿ ತನ್ನ ಚಾತುರ್ಯವನ್ನು ಪ್ರದರ್ಶಿಸಿದ್ದಾನೆ. ಶಿವ ಮತ್ತು ವಿಷ್ಣುವಿನ ಅರ್ಧಾರ್ಧ ರೂಪವನ್ನು ಇಲ್ಲಿ ನೋಡಬಹುದು. ಅಡಿಯಿಂದ ಮುಡಿಯ ವರೆಗೆ ಬಲದ ಅರ್ಧ ಭಾಗ ಶಿವನ ರೂಪ; ಎಡದ ಅರ್ಧ ಭಾಗ ವಿಷ್ಣು ರೂಪ. ಬಲಭಾಗದ ತಲೆಯಲ್ಲಿ ಜಡೆ, ಕೈಗಳಲ್ಲಿ ಒಂದು ಅಭಯ ಹಸ್ತ, ಮತ್ತೊಂದರಲ್ಲಿ ತ್ರಿಶೂಲ, ಎಡದ ಅರ್ಧ ಭಾಗದ ತಲೆಯಲ್ಲಿ ಕಿರೀಟ, ಒಂದು ಕೈಯಲ್ಲಿ ಸಂಹಾರ ಚಕ್ರ ಮತ್ತೊಂದು ಕೈಯಲ್ಲಿ ಶಂಖ. ಹರಿಹರೇಶ್ವರನ ಪಾದಗಳು ಗೋಚರಿಸುವುದಿಲ್ಲ. (ನದಿಯ ಮಧ್ಯೆ ಮುಂಟಪದಲ್ಲಿವೆ ಎಂದು ಹೇಳುತ್ತಾರೆ.)

ಮೂಲಮೂರ್ತಿಯ ಹಿಂಬದಿಯಲ್ಲಿ ಸಾಮಾನ್ಯವಾಗಿ ಚಾಲುಕ್ಯ ಮತ್ತು ಹೊಯ್ಸಳ ಶಿಲ್ಪಿ ಸಂಪ್ರದಾಯಗಳ ಪ್ರಕಾರ ಕಾಣಬರುವ ತೋರಣ ಕಾಣಬರುವುದಿಲ್ಲ.

ಹರಿಹರೇಶ್ವರ ಮೂರ್ತಿಯ ಅಂದವಾಗಲಿ, ದೇವಾಲಯದ ಅಂದವಾಗಲಿ ಕೆಟ್ಟಿಲ್ಲ. ದೇವಾಲಯ ಸಾಕಷ್ಟು ಭವ್ಯವಾಗಿಯೇ ಇದೆ. ಅಂದಿನ ಆ ಕಲ ಶಿಲ್ಪ ಕಲೆಯ ವೈಖರಿಯನ್ನು ದೇವಾಲಯದ ಹೊರ ಒಳ ಆವರಣ, ಜಾಲಂಧ್ರಗಳಲ್ಲಿ ಕಾಣಬಹುದು. ದೇವಾಲಯದ ಪ್ರಾಕಾರವೂ ಸಾಕಷ್ಟು ದೊಡ್ಡದಾಗಿಯೇ ಇದೆ.

ನವರಂಗ, ಗರ್ಭಗೃಹ, ಮಂಟಪ ಸಾಕಷ್ಟು ವಿಶಾಲವಾಗಿ ಅಂದವಾಗಿ ಇದೆ. ಬೇಲೂರು, ಹಳೇಬೀಡು, ಸೋಮನಾಥ ಪುರಗಳ ಮಟ್ಟದ ಶಿಲ್ಪಕಲಾಕೌಶಲ್ಯ ಭವ್ಯತೆ ಮನೋಹರ ಭಾವನೆ ಮೂಡದಿದ್ದರೂ ದೇವಾಲಯದ ಅಂದಕ್ಕೆ—ಭವ್ಯತೆಗೆ ಕುಂದೊದಗಿಲ್ಲ. ಒಮ್ಮೆ ನೋಡಲು ಬಂದವನ ಮನಸನ್ನು ಸೆಳೆಯುವ ಮಟ್ಟದ ಆಕರ್ಷಣೆ ಈ ದೇವಾಲಯದಲ್ಲಿದೆ.

"ಹರಿಹರ ಇಬ್ಬರಲ್ಲಿಯೂ ವ್ಯತ್ಯಾಸ ಕಾಣದೆ ಹರಿಹರರಿಬ್ಬರೂ ಒಂದೇ' ಎಂದು ಜನಮನಕ್ಕೆ ಭವ್ಯ ಸಂದೇಶವನ್ನು ನೀಡುತ್ತಿದೆ ಹರಿಹರ ದೇವಾಲಯ ಮತ್ತು ಹರಿಹರೇಶ್ವರ ಮೂರ್ತಿ.

ಹರಿಹರ ಮೂರ್ತಿಯ ಭವ್ಯ ದೇಗುಲ— ಐಕ್ಯತೆಯ ಭಾವನೆ ಈ ಕ್ಷೇತ್ರದಲ್ಲಿ ಮಾತ್ರವೆಂದು ಹೆಮ್ಮೆ ಪಟ್ಟುಕೊಳ್ಳಬಹುದು. ಸಮಸ್ತ ಧರ್ಮಗಳನ್ನೇ ತನ್ನಲ್ಲಿ ಅಡಗಿಸಿಕೊಂಡು ಬೆಳವಣಿಗೆಗೆ ಕಾರಣವಾದ ಕನ್ನಡ ನಾಡಿನಲ್ಲಿ ಹರಿಹರರ ಬಗ್ಗೆ ಬಿನ್ನ ಭಾವನೆ ತಾಳುವುದು ಸರಿಯಲ್ಲ. ದೇವನೊಬ್ಬ. ಆವನು ಶಿವನಾಗಲಿ ಕೇಶವನಾಗಲಿ. ಎಂಬ ಭಾವನೆ ನಮ್ಮ ಪೂರ್ವಿಕರದು. ಅದನ್ನರಿತೇ ಹರಿಹರ ಒಬ್ಬನೆಂದೇ ಪೂಜಿಸಿದರು.

ಕಲೆ, ಸಂಸ್ಕೃತಿ, ಸಾಹಿತ್ಯ, ಜ್ಞಾನ, ನಾಗರಿಕ ಭಾವನೆಗಳಾದಿಗಳಲ್ಲಿ ಮುನ್ನಡೆದವರ ಕನ್ನಡ ನಾಡಜನತೆ ಅವರಿಗೆ ಅಲ್ಪತನದ ಕಡೆಗೆ ಗಮನ ಎಂದೂ ಹರಿಯದು. ಅವರ ಹೃದಯ ಸಾಗರದಷ್ಟು ವಿಶಾಲ. ಆ ಕಾರಣದಿಂದಲೇ ಬೇಲೂರು ಹಳೇಬೀಡು ಸೋಮನಾಥಪುರ, ಐಹೊಳೆ, ಪಟ್ಟದ ಕಲ್ಲು, ಶೃಂಗೇರಿ, ಹಂಪೆ, ಹರಿಹರದ ಭವ್ಯದೇವಾಲಯಗಳ ಶಿಲ್ಪಕಲೆ ಅಚ್ಚಳಿಯದೆ ಉಳಿದಿರುವುದು. ಬೌದ್ಧ, ಜೈನ, ವೀರಶೈವಾದಿ ಹಲವು ಮತಗಳು ಕನ್ನಡ ತಾಯಿಯ ಕೃಪಾಶ್ರಯದಲ್ಲಿ ಮೆರೆದಿವೆ, ಬಾಳಿವೆ, ಬೆಳಗಿವೆ. ಕನ್ನಡ ನಾಡಿನ ಭವ್ಯ ಆದರ್ಶ ಪರಂಪರೆ ಆಚಾರವದ ಶ್ರವಣಬೆಳಗೊಳ ಚಂದ್ರಗಿರಿಯ ಮೇಲೆ ನಿಂತ ಗೊಮ್ಮಟೇಶ್ವರನ ಎತ್ತರ, ವಿಶಾಲತೆ, ಮುಗ್ಧ ಸೌಂದರ್ಯ ಮೆರೆವ ಮಂದಹಾಸ ಎಲ್ಲವೂ ಕನ್ನಡಿಗರ ಹೃದಯದ ಪ್ರತೀಕ. ನಮ್ಮ ಪೂರ್ವಿಕರು ನೂರಾರು ವರ್ಷಗಳ ಹಿಂದೆ ರಚಿಸಿಟ್ಟ ಕಾವ್ಯ ಕಲೆ, ಸಂಸ್ಕೃತಿಯ ಮಟ್ಟಕ್ಕೆ ತಕ್ಕ ಪ್ರತಿ ಕೃತಿ ಕೊಡಲು ನಾವು ಶಕ್ತರಾಗಿಲ್ಲ; ಅಂದಿನದನ್ನ ಉಳಿಸಿಕೊಳ್ಳುವ ಯೋಜನೆಯೂ ನಮಗಿಲ್ಲ.

ಶ್ರೀ ಕ್ಷೇತ್ರ ಬಪ್ಪನಾಡು, ಮೂಲ್ಕಿ

"ಬಪ್ಪನಾಡಿಗೆ ಡೋಲು ಬಡಿಯಲು ಹೋಗು" ಎಂಬ ಜನಜನಿತವಾದ ರೂಢಿ ಮಾತಿನಿಂದ ಬಪ್ಪನಾಡು ಕ್ಷೇತ್ರದ ಹೆಸರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆಲ್ಲಾ ಪರಿಚಿತವಾಗಿದೆ. ಏನೂ ಕೈಲಾಗದವರಿಗೆ ಹೇಳುವ ಮಾತಿದು. ಅಂದರೆ, ಬಪ್ಪನಾಡಿಗೆ ಹೋಗಿ ಸೇವೆ ಸಲ್ಲಿಸಿದಲ್ಲಿ ಶ್ರೇಯಸ್ಸಾಗುವುದು ಎಂಬುದು ಈ ಮಾತಿನ ಇಂಗಿತವಿರಬೇಕು. ಹಳೇಗಾಲದಲ್ಲಿ ಬಪ್ಪನಾಡು ಜಾತ್ರೆಗೆ ಹಲವಾರು ಕಡೆಗಳಿಂದ ನೂರಾರು ಮಂದಿ ಡೋಲು ಸೇವೆಗೆ ಬರುತಿದ್ದುದು ಈ ಕಾರಣದಿಂದಲೇ ಇರಬೇಕು.

ಬಪ್ಪನಾಡು ಕ್ಷೇತ್ರಕ್ಕೆ ಸಮ್ಮಂಧಪಟ್ಟ ಇನ್ನೊಂದು ಐತಿಹ್ಯವಿದೆ. ಸುಮಾರು ಎಂಟ್ನೂರು ವರ್ಷಗಳ ಹಿಂದೆ ಬಪ್ಪಬ್ಯಾರಿಯೆಂಬ ಮುಸಲ್ಮಾನ್ ವರ್ತಕನ ಹಾಯಿ ದೋಣಿಯು ಪ್ರಸ್ತುತ ಈ ದೇವಸ್ಥಾನ ಇರುವ ಸ್ಥಳದಲ್ಲಿ, ಹರಿಯುತ್ತಿದ್ದ ಹೊಳೆಯಲ್ಲಿ ಸಾವಿರಾರು ವರ್ಷಗಳಿಂದ ಅಲಂಕಗತವಾದ ಶ್ರೀ ದೇವಿಯ ಬಿಂಬಕ್ಕೆ ತಗಲಿ ತೊಂದರೆಗೀಡಾಯಿತು. ಅದರೆ ಅಲ್ಲಿ ನೆಲೆನಿಂತಿದ್ದ ಶ್ರೀದೇವಿಯ ಸ್ವಪ್ನದ ಸಾಕ್ಷಾತ್ಕಾರದ ಅನುಗ್ರಹದಿಂದ ಮುಂದಕ್ಕೆ ಹೋಗಿ, ಅಪಾರ ಲಾಭ ಗಳಿಸಲು ಸಾಧ್ಯವಾದುದನ್ನು ಮನಗಂಡು, ಆಗಿನ ಅಳರಸರ ಮೂಲಕ ದೇವಿಗೆ ಗುಡಿಯನ್ನು ಕಟ್ಟಿಸಲು ಕಾರಣೀಭೂತನಾದನು.

ನಂತರದ ಕಾಲದಲ್ಲಿ ಈ ಕ್ಷೇತ್ರದ ಅಪಾರ ಕೀರ್ತಿಯು ಎಲ್ಲೆಡೆಯಲ್ಲೂ ಹಬ್ಬಿ, ಪರಪ್ರದೇಶಗಳಿಂದಲೂ ಶ್ರದ್ಧಾಯುಕ್ತ ಭಕ್ತ ಸಮೋಹಗಳು ಅನುಗಾಲ ಬರಲಾರಂಭಿಸಿದರು. ಅನೇಕರು ಪುತ್ರ ಸೌಭಾಗ್ಯವನ್ನು ಮತ್ತು ಹಲವರು ರೋಗ ನಿವಾರಣೆಯನ್ನು ಬಯಸಿ ಶ್ರೀ ದೇವಿಯ ಅನುಗ್ರಹದಿಂದ ಸಫಲರಾದರು. ತದ್ರೀತಿಯ ಎಷ್ಟೋ ಪವಾಡಗಳು ಈ ಕ್ಷೇತ್ರದಲ್ಲಿ ಜರಗಿದವು

ಈ ಕ್ಷೇತ್ರದ ಆಗುಹೋಗುಗಳನ್ನು ಮೇಲಕನ್ನಿಯಿಂದ ಕಾಯುತಿದ್ದ ಶಕ್ತಿಯೇ ಕ್ಷೇತ್ರಪಾಲನು. ಈ ಕ್ಷೇತ್ರದ ಏಳಿಗೆಯನ್ನು ಸಾಧಿಸಿದ ಈತನು ಅಪಚಾರ ಅನಾಚಾರಗಳಿಗೆ ತೊಡಗುವವರಿಗೆ ಮಾರಕ ಶಕ್ತಿಯೂ ಆಗಿದ್ದನು. ಅದನ್ನು ಸಹಿಸದೆ ಹಲವರು ಮಾಟಚಾರದಿಂದ ಈತನ ಶಕ್ತಿಯನ್ನು ದಿಗ್ಬಂಧಿಸಿದರು. ಪರಿಣಾಮವಾಗಿ ಕ್ಷೇತ್ರದ ಕಲಾಬಾಹವು ಕ್ರಮೇಣ ಕಡಿಮೆಯಾಗುತ್ತಾ ಬಂತು.

ಇತ್ತೀಚೆ ಈ ಕ್ಷೇತ್ರದ ಕಲಾಪನತಿಗೆ ಕಾರಣವೇನೆಂದು ತಿಳಿಯಲು ವಿದ್ವಾಂಸರಾದ ಜೋತಿಷ್ಕರಲ್ಲಿ ಅಷ್ಟ ಮಂಗಲ ಪ್ರಶ್ನೆಯನ್ನು ಇಡಲಾದಾಗ ಈ ಸಂಗತಿಯು ಬೆಳಕಿಗೆ ಬಂತು. ಕ್ಷೇತ್ರಪಾಲನನ್ನು ದಿಗ್ಬಂಧನದಿಂದ ಬಿಡುಗಡೆಗೊಳಿಸಿದಲ್ಲಿ, ಈ ಸ್ಥಳದ ಶಕ್ತಿಯನ್ನು ಪುನರುತ್ಥಾನಗೊಳಿಸುವ ಕೆಲಸದಲ್ಲಿ ಮಹತ್ವದ ಅಂಶ ಸಾಧಿಸಿದಂತಾಗುವುದು ಎಂಬುದಾಗಿ ತಿಳಿದು ಬಂತು. ಇದರೊಂದಿಗೆ ಅಷ್ಟಬಂಧ, ಬ್ರಹ್ಮ ಕಲಶ, ಸಂತರ್ಪಣೆ ಇತ್ಯಾದಿ ಧಾರ್ಮಿಕ ವಿಧಿಯುಳ್ಳ ಕಾರ್ಯಗಳಾಗ ಬೇಕು. ಅಲ್ಲದೆ, ಶ್ರೀ ದೇವಿಯ ಅಲಂಕಾರ ಮತ್ತು ಇತರ ಉಪಕರಣಗಳು, ದೇವಸ್ಥಾನಕ್ಕೆ ಶುದ್ಧ ನೀರಿನ ಪೂರೈಕೆ, ಇದಿರುಗಡೆ ದೀಪಸ್ತಂಭ ನಿರ್ಮಾಣ, ಅಗ್ರಶಾಲೆ ದುರುಸ್ತಿ, ಇತ್ಯಾದಿ ಎಲ್ಲಾ ಕಾರ್ಯಕ್ರಮಗಳಿಗೆ ಸುಮಾರು ಒಂದು ಲಕ್ಷ ರೂಪಾಯಿ ಖರ್ಚು ಬರಬಹುದೆಂದು ಅಂದಾಜು ಮಾಡಲಾಗಿದೆ.

ವಿಶಾಲವಾಗಿ ಹಬ್ಬಿರುವ ಈ ಕ್ಷೇತ್ರದ ಭಕ್ತ ಸಮುದಾಯಕ್ಕೆ ಈ ಮೊತ್ತವು ಅಲ್ಪವೇ ಸರಿ. ಈ ಕ್ಷೇತ್ರದ ಕಳೆಯು ಮುಂಚಿನಂತೆಯೇ ಉಜ್ವಲವಾಗಿ ಬೆಳಗಿ ಭಕ್ತವೃಂದಕ್ಕೆ ಶ್ರೀ ದೇವಿಯ ಅನುಗ್ರಹವು ಧಾರಾಳವಾಗಿ ಸಿಗಲಿ. ಜನತೆಗೆ ಮಂಗಲವನ್ನುಂಟು ಮಾಡುವಂತಹ ಈ ಕೆಲಸವನ್ನು ಸಾಂಗವಾಗಿ ನೆರವೇರುವಂತೆ ನೋಡಲು ಸಹೃದಯರು ಮುಂದೆ ಬರಬೇಕು, ಧನ ಸಂಗ್ರಹ ಕಾರ್ಯದಲ್ಲಿ ಯಥಾಶಕ್ತಿ ನೆರವಾಗಬೇಕು ಎಂದು ಸಾರ್ವಜನಿಕರಲ್ಲಿ ಜೀರ್ಣೋದ್ಧಾರ ಸಮಿತಿಯು ವಿನಂತಿಸುತ್ತದೆ. ಹಣ ಕಳಿಸುವ ವಿಳಾಸ: ಕೋಶಾಧಿಕಾರಿ, ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರ ಜೀರ್ಣೋದ್ಧಾರ ಸಮಿತಿ, ಮುಲ್ಕಿ (ದ. ಕ.)

ಕೆನಡಾದ ಮಹಿಳೆಗೆ

ನಮ್ಮ ದೇಶದ ಮೇಲೆ ಅನುಕಂಪ, ನಮಗೆ?

ಲೇಖಕರು: ಶ್ರೀ ಬಸವರಾಜ ಕುಂಚೂರು

"ಸಕ್ಕರೆಯುಂಟೋ ನಿಮ್ಮಲ್ಲಿ?"

"ಉಂಟು ಬನ್ನಿ ಕುಳಿತುಕೊಳ್ಳಿ"

"ಎಷ್ಟು ಕೊಡುತ್ತೀರಿ?"

"ನಿಮಗೆಷ್ಟು ಬೇಕಾದರು ಕೊಡುತ್ತೇವೆ."

"ಛೆ, ಹಾಗೆ ಬೇಡ, ರೇಷನ್ ಪ್ರಕಾರ ಬರುವದನ್ನ ಮಾತ್ರ ಕೊಡಿರಿ."

"ಇಲ್ಲ, ಹಾಗೇನಿಲ್ಲ, ನೀವು ತೆಗೆದುಕೊಳ್ಳಬಹುದು."

"ಬೇಡ ನಮಗೆ ಸಕ್ಕರೆಯಿಲ್ಲದ ಕಾಫಿ ಕುಡಿಯುವ ರೂಢಿ ಇದೆ, ಜರ್ಮನಿಯಲ್ಲಿ ಯುದ್ಧ ಕಾಲದಲ್ಲಿ ಇದೇ ಪರಿಸ್ಥಿತಿ ಇತ್ತು."

ಹೀಗೆ ಹೇಳಿದ ಆ ಪ್ರಜ್ಞಾವಂತ ಮಹಿಳೆ ಸುರತ್ಕಲ್ ಇಂಜನಿಯರಿಂಗ್ ಕಾಲೇಜಿನಲ್ಲಿ ಸಂದರ್ಶಕ ಪ್ರೊಫೆಸರ್ ಆಗಿರುವ ಕೆನಡಾದ ಇಸ್ಟ್ರನರ ಪತ್ನಿಯವರೆ. ಅವರು ಎಷ್ಟೇ, ಸಕ್ಕರೆ ತೆಗೆದ ಕೊಳ್ಳಲಿ, ಬಿಡಲಿ, ಆ ಪ್ರಶ್ನೆ ಬೇರೆ? ನೋಡಲಿಕ್ಕೆ ಅದೊಂದು ಸಣ್ಣ ವಿಷಯ, ಆದರೆ ನಮ್ಮಲ್ಲಿ ಹೆಣ್ಣು ಮಕ್ಕಳು ಹೋಗಲಿ, ಬಹು ವಿದ್ಯಾವಂತರೆಂದೆನಿಸಿಕೊಂಡ ಮಹನೀಯರಿಗಾದರು ದೇಶದ ಸ್ಥಿತಿಗತಿ ಆಗು, ಹೋಗುಗಳ ಮೇಲೆ ದೃಷ್ಟಿ ಎಷ್ಟರ ಮಟ್ಟಿಗೆ ಇದೆ? ಸರಕಾರದ ನೀತಿ ನಿಯಮಗಳ ಬಗ್ಗೆ ಎಷ್ಟು ಗೌರವವಿದೆ? ಪರಕೀಯರಿಂದ ಕೂಡಲೆ, ಅನೇಕ ನಮ್ಮ ಮಧ್ಯಮ ಜನರು ಮೂಗ ಮುರಿಯುತ್ತಾರೆ; ಆವರ ಕಣ್ಣಿಗೆ ಕಾಣುವದು ಬರಿ ಫ್ಯಾಶನ್ ಒಂದು ಮಾತ್ರ, ಅವರಿಗಿರುವ ದೇಶದ ಮೇಲಿನ ಅಭಿಮಾನ ಪ್ರಾಮಾಣಿಕ ಬುದ್ಧಿ ಇವರಲ್ಲಿ ಸ್ವಲ್ಪವಾದರು ಇದ್ದಿದ್ದರೆ, ನಮ್ಮ ದೇಶ ಇಷ್ಟು ಹಿಂದೆ ಉಳಿಯುತ್ತಿರಲಿಲ್ಲ.

ಒಂದು ಕಾಲದಲ್ಲಿ ದಯೆ, ಅನುಕಂಪ, ಪ್ರಾಮಾಣಿಕ ಬುದ್ಧಿ, ತ್ಯಾಗ, ಶೌರ್ಯಕ್ಕೆ ಹೆಸರಾದ ಭಾರತ, ಇಂದು ಪರಕೀಯರಿಂದ ಎರವಲು ಪಡೆಯುವ ಹೊತ್ತು ಬಂದಿದೆ.

ದೇಶ ಹಾಳಾದರು ಚಿಂತೆ ಇಲ್ಲ ಬಡಜನರ ಜೀವಂತ ಸಮಾಧಿಯನ್ನ ಕಟ್ಟಿದರು ಚಿಂತೆ ಇಲ್ಲ, ಲಾಭವೇ ನಮ್ಮ ಮಂತ್ರ, ಕಲ್ಲು ಮಣ್ಣು ಬೆರಸಿ ಅಕ್ಕಿಯನ್ನ ಮಾರುವದೇ ನಮ್ಮ ಉದ್ಯೋಗ ಎನ್ನುತ್ತಾರೆ ಹೆಚ್ಚಿನ ವ್ಯಾಪಾರಸ್ಥರು.

ದೇಶ ಹಾಳಾದರೇನು? ಕೋಶ ಬರಿದಾದರೇನು? ನಮ್ಮ ಸಂಬಳ ಹೆಚ್ಚಾಗಬೇಕು ಎನ್ನುತ್ತಾರೆ ನೌಕರರು. ಕಾಲಿಗೆಯೇ ನನ್ನ ಕಾಯಕ ಎನ್ನುತ್ತಾನೆ ರಾಜಕಾರಣಿ. ಪರೀಕ್ಷೆಗುತ್ತ ಪಾಠ ಏಕೆ ಮಾಡಲಿಲ್ಲ, ಮಾಸ್ತರನನ್ನೆ ಒಂದು ಕೈ ನೋಡುತ್ತೇನೆ ಎನ್ನುತ್ತಾನೆ ವಿದ್ಯಾರ್ಥಿ. ಇಂದಿನ ದಿನ ಮಾನಕ್ಕೆ ಒಗ್ಗಿಕೊಳ್ಳುವ ಶಕ್ತಿ ಇಲ್ಲದೆ ಗಗನಕ್ಕೇರಿದ ಬೆಲೆಗಳಿಗೆ ಬೆಪ್ಪನಾಗಿ ನಿರ್ವಿಣ್ಣನಾಗಿದ್ದಾನೆ ಶ್ರೀ ಸಾಮಾನ್ಯ.

ಹಾಗಾದರೆ ದೇಶದ ಚಿಂತನೆ ಮಾಡುವರಾರು? ನಮಗೆ ತಿಳಿಯದಿದ್ದರೂ, ಬೇರೆಯವರಿಂದ ಒಳಿತನ್ನ ಕಲಿಯುವ ಸಂಯಮ ಸಹಿತ ಜನತೆಯಲ್ಲಿ ಉಳಿದಿಲ್ಲ. ದೇಶ ಯಾರದೋ ಅನ್ನುವ ರೀತಿಯಲ್ಲಿ ನಡೆದುಕೊಳ್ಳುತಿದ್ದೇವೆ. ನಮ್ಮ ಮನೆಯ ಕಂಬವನ್ನ ನಾವೇ ಕೆಡವುತಿದ್ದೇವೆ, ಬಿದ್ದರೆ ಗತಿ ಏನಾದೀತು? ಎಂಬ ಅರಿವಿಲ್ಲದೆ.

ಜನತೆಯ ಈಗಾಗಿರುವ ಸ್ಥಿತಿಗೆ ಕಾರಣಗಳೇನೇ ಇರಲಿ, ನಮ್ಮ ದೇಶದ ಬಗ್ಗೆ ಅಭಿಮಾನವಿರುವವರು ವಿರಳ ಎನ್ನುವದು ಬಹು ಸತ್ಯ. ಯುದ್ಧದಲ್ಲಿ ಬೆಂದು ಬೆಂಡಾದ ಜರ್ಮನ್, ಜಪಾನ ಇಂದು, ಎಷ್ಟು ಬಲವಾಗಿವೆ ಎಂಬುದು ತಿಳಿದ ಮಾತು, ಅದಕ್ಕೆ ಕಾರಣವಿಷ್ಟೇ, ಹಿರಿಯರು ಕಿರಿಯರು, ಗಂಡು ಹೆಣ್ಣಿನ ಶ್ರಮ, ದೇಶದ ಮೇಲಿನ ಅಭಿಮಾನ. ದೇಶ ಪರಾಕ್ರಮಣಕ್ಕೆ ಒಳಗಾಗಿ ತತ್ತರಿಸುತಿದ್ದರು. ಸಕ್ಕರೆಯನ್ನು ಕದ್ದು ತಂದಾದರು, ಲಾಡು ಜಿಲೇಬಿ ಮಾಡಲೇ ಬೇಕು. ಇದು ನಮ್ಮ ದೇಶದ ದೊಡ್ಡವರೆನ್ನುವರು ಪಾಲಿಸುವ ನೀತಿ, ನಿಯಮ.

ಸದಾಚಾರ ಎನ್ನುವದು ಪೇಟೆಯಲ್ಲಿ ಸಿಗುವ ಸಾಮಾನಲ್ಲ ಅದನ್ನು ನಾವೇ ನಮ್ಮಿಂದ ಪಡೆಯಬೇಕು. ಜಾಗ್ರತೆ ಜನತೆಯಲ್ಲಿ ಮೂಡಿ ಬರಲೇ ಬೇಕು. ಕೆನಡಾದ ಹೆಣ್ಣು ಮಗಳಿಗೆ ಹಿಂದುಸ್ಥಾನದ ಸ್ಥಿತಿಗತಿ, ರೀತಿ, ರಿವಾಜು ಗೊತ್ತಿವೆ ಆದರೆ, ಭಾರತೀಯರಾದ ನಮಗೆ ಗೊತ್ತಿಲ್ಲ.

ದೇಶದ ಅಭಿವೃದ್ಧಿ ಸಂರಕ್ಷಣೆಗಾಗಿ ನಾವು ಯಾವ ತ್ಯಾಗವನ್ನಾದರು ಮಾಡಲು ಮುಂದಾಗಬೇಕು. ದೇಶದ ಪ್ರತಿಯೊಂದು ಮನೆಯ ಮಿತವ್ಯಯಕ್ಕೆ ಮಾದರಿಯಾಗಬೇಕು, ದೇಶ ತನ್ನಿಂದ ತಾನೇ ಬೆಳೆಯುವದಿಲ್ಲ ಜನತೆಯ ಸಹಾಯ, ಸಹಾನುಭೂತಿ, ಅಭಿಮಾನ, ಗೌರವ ಬೇಕು. ಗಂಡು ಹೆಣ್ಣು ಎಲ್ಲರೂ, ಕಲಹ ಮರೆತು ದುಡಿಯಬೇಕು. ದುಡಿಮೆ ಪ್ರಾಮಾಣಿಕ ಬುದ್ಧಿ, ನಮ್ಮ ದೇಶದ ಏಳ್ಗೆಗೆ

ಕಾರ್ಕಳ ಮುನ್ಸಿಫ ಕೋರ್ಟಿನಲ್ಲಿ

O. S. 60/1965.

S. V. D. ಮಲ್ಯ —ವಾದಿ.

ಕಮಲಾಕ್ಷ ಉಪೇಂದ್ರ ಶೆಣೈ, ಉಪೇಂದ್ರ ಶೆಣೈರ ಮಗ, ಕಾರ್ಕಳ ತಾಲ್ಲೂಕು ಬೆಳ್ಮಣ್ಣು ಗ್ರಾಮದಲ್ಲಿರುವವ —ಪ್ರತಿವಾದಿ.

ಸದ್ರಿ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ—

ವಾದಿ ಜವುಳಿ ಅಂಗಡಿಯಲ್ಲಿ ನೀವು ಮಾಡಿದ ಲೇವಾದೇವಿ ಬಾಬ್ತು ವಾದಿಗೆ ನಿಂದಿಂದ ಬರತಕ್ಕ ರೂ. 538-41ನ್ನು ಬರಮಾಡಿಕೊಳ್ಳುವರೆ ನಿಮ್ಮ ಮೇಲೆ ವಾದಿಯು ದಾಖಲ್ಲು ಮಾಡಿದ ಸದ್ರಿ ದಾವೆಯು ತಾ. 19-7-66ಕ್ಕೆ ನಿಮಗೆ ಅಕ್ಬರ ನೋಟಿಸಿಗೆ ಇಟ್ಟದೆ, ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
Advocate for Plaintiff.

ಕಾರ್ಕಳ, 5-7-66.

ವಂದೇ ಮಾತರಂ ಎನ್ನಿರಿ

(ಆರನೇ ಪುಟದಿಂದ)

ಸೇರ್ಪಡೆಯೇ ಇಂಡಿಯಾ ಹಾಗೂ ದ್ರಾವಿಡ, ಆರ್ಯ, ಮಂಗೋಲಿಯನರು, ಚೈನೀಯರುವಗೈರೆಗಳು ಸೇರಿ ಇಂದಿನ ಇಂಡಿಯನರಾಗಿದ್ದು ಇಂಗ್ಲೀಷರ ಕೃಪೆಯಿಂದಾಗಿ ಒಂದು ರಾಷ್ಟ್ರದ ರೂಪನ್ನು ಪಡೆದು, ರಾಷ್ಟ್ರೀಯತೆಯ ಅಟ್ಟಿಗೆ ಒಳಗಾಗುತ್ತಿದ್ದಾರೆ! ಅದನ್ನಾಡಲು ಆಕೆಗೆ ಅದೆಷ್ಟು ಧೈರ್ಯ! ಅವಳಿಗೆ ಎಲ್ಲೆಲ್ಲೂ ಅಡಂಬರಪೂರ್ಣ ಸ್ವಾಗತ ಸಿಗುತ್ತದೆ! ಅದೇ ನಾಗಾಗಳೂ ಭಾರತೀಯರೇ ಇದ್ದಾರೆ. ಅಲ್ಲಿ ನಾವು ಶಾಲೆ ತೆರೆಯುತ್ತೇವೆಂದು ಹೋಗುವ ಭಾರತೀಯರಿಗೆ ತಡೆ! ಆಗಲಿ, ಆರ್ಯ ಸಮಾಜವೇ ಆಗಲಿ, ಶ್ರೀ ರಾಮ ಸಂಸ್ಥೆ ಸರಕಾರದ ಕ್ರೂರದೃಷ್ಟಿಗೆ ಒಳಗಾಗಿದೆ!

ಅನ್ನಾವಿನ ವಿದ್ರೋಹಿಗಳಿಗೆ ಅದೆಷ್ಟು ಧೈರ್ಯ! ಪರದೇಶಿಕ ಹಸ್ತಕರನ್ನು ಹಿಂದಕ್ಕಟ್ಟಿದಲ್ಲಿ ಇವರಿಗೆ ಕಸಿವಿಸಿಯಾಗುತ್ತದೆ, ಕಣ್ಣೀರ ಕೋಡಿ ಹರಿಯುತ್ತದೆ. ಮಾತಿನ ಮಳೆ ಬರುತ್ತದೆ! ಹಿಂದಿನ ಸಂಚಿಕೆಯಲ್ಲಿ ಈ ವಿಷಯ ಪ್ರಕಟವಾಗಿತ್ತದೆ ಅಲ್ಲಿನ ಕೃಷಿಮಂತ್ರಿ ಮ್ಯಾನುಲ್ ಹರ್ಕರವರೂ ಮಾತಿನ ಹಕ್ಕನ್ನು ಕಳೆದುಕೊಂಡಿರುವುದಿಲ್ಲ. ಕಾಂಗ್ರೆಸ್ ಅದೇನು ಮಾಡಿತು? ಹಾಗೇನೂ ನಡೆದಿಲ್ಲವೆಂದು ಪತ್ರಿಕೆಗಳ ಮೂಲಕ ಪ್ರಚಾರಮಾಡಿತು. ಮರುದಿನವೇ ಮತ್ತೊಂದು ಸುದ್ದಿ! ಮತಾಂಧರ ವಿಚಾರಣೆಗೆ ಒಂದು ಸಮಿತಿ ಸಿದ್ಧವಾಗಿದೆಯೆಂದು ಆದರೆ, ನಂತರ? ಅದೇ ಚಿಕ್ಕ ಮಕ್ಕಳಾಟ. ಕಾಂಗ್ರೆಸ್ಸಿನ ಮಾತಿನ ಪ್ರವಾಹ ದಿಕ್ಕು ಬದಲಾಯಿಸಿತು. ಬಂಡುಗಾರರ ಮುಸ್ಲಿಂ ಸದಸ್ಯರ ಬೆದರಿಕೆಗೆ ಕಾಂಗ್ರೆಸ್ ಮಣಿಯಿತು.

ಅತ್ತ ಅಖಾಲಿಗಳು ತಮಗೂ ಭಾರತೀಯರಿಗೂ ಸಂಬಂಧವೇ ಇಲ್ಲವೆಂದು ಬಂಬಡ ಬಾರಿಸುತ್ತಿದ್ದಾರೆ. ಪಾಕಿಸ್ತಾನದೊಡನೆ ಸೇರಿಯಾದರೂ ಅಖಾಲಿಸ್ಥಾನ ಪಡೆಯುತ್ತೇವೆಂದೂ ಕೆಲವರು ಕಿರಿಚಾಡುತ್ತಿದ್ದಾರೆ.

ಒಳಗಿನ ಪರಿಸ್ಥಿತಿ ಹೀಗಿದೆ. ಇವೆಲ್ಲವುಗಳಿಗೂ ಆಸರೆ ಕೊಡುತ್ತಿರುವ ಭಾರತದ ಪ್ರಧಾನಿಯವರು ಪರರಾಷ್ಟ್ರಗಳ ಬಳಿ ನಮ್ಮ ಕಣ್ಣೀರಿನ ಕಥೆಯನ್ನು ಹೇಳುತ್ತಿದ್ದಾರೆ. ಪರರಾಷ್ಟ್ರಗಳ ಬಳಿ ಪರಿತಪಿಸುವ ಬದಲು ನಾವು ನಮ್ಮತ್ತವೇ ಸಿಂಹಾವಲೋಕನ ಮಾಡಬೇಕಾಗಿತ್ತದೆ. ಅದಕ್ಕಾಗಿಯೇ ವ್ಯಾಸ ಪೌರ್ಣಿಮೆಯ ಪರ್ವಕಾಲ ಬಂದಿದೆ. ಅಖಿಲ ಜಗತ್ತು ತನ್ನ ಗುರು ಭಾರತಕ್ಕೆ ಕಾಣಿಕೆಯನ್ನರ್ಪಿಸತ್ತಿದ ಮಹಾದಿನವದು. ಶಿಷ್ಯರು ಗುರುವಿಗೆ ದಕ್ಷಿಣೆಯನ್ನರ್ಪಿಸುವ ಶುಭದಿನವದು. ನಾವೂ ನಮ್ಮ ಪಾಲಿನ ಗುರುದಕ್ಷಿಣೆಯನು ಅರ್ಪಿಸುತ್ತ ಪುನಃ ಭಾರತವನ್ನು ಉನ್ನತಕ್ಕೆ ಏರಿಸಲು ಪ್ರಯತ್ನಿಸುವ. ಬೇಡವೇ? ವಂದೇ ಮಾತರಂ ಅನ್ನುವದು ಬೇಡವೇ?

ಜೀವಾಳ, ಸಮಸ್ಯೆಗಳು ಎಷ್ಟೇ ಜಟಿಲವಿರಲಿ, ನಾವು ಮನಸ್ಸು ಮಾಡಿದಲ್ಲಿ ಬಗೆಹರಿಸಬಹುದು ಕಲ್ಪಿಸದ ಕುಂದುಗಳಾಗಿರುವ ನಮ್ಮ ಮನಸ್ಸುಗಳನ್ನ ತೊಳೆದ, ಕೊಳೆಯೇನ ಧಗಾ ದ್ರೋಹ, ವಂಚನೆ, ಕೃತ್ರಿಮತನ, ಹಿಂಸೆ, ಅಸತ್ಯದಿಂದ ದೂರ ಸಂಯೋಗ.

— — —

ಸುಭಾಷಿತಗಳು

ಸಂಗ್ರಹಕರು:— "ಸರಸ್ವತೀಸುತ" ಬಳ್ಳಾರಿ.

ಪರಸ್ತ್ರೀ ಪರಧನಕ್ಕೆ ಆಶಿಸದಿರು. ಅದು ನಿನಗೆ ಸಿಕ್ಕಿದರೂ ಅಪಾಯಕರ. —ಸಿ. ವಿ. ಗಾಮನ್

ಜೀವನವೆಂಬುದು ಒಂದು ನೌಕೆ. ಅದಕ್ಕೆ ಸಿಕ್ಕುವ ತೆರೆಗಳೇ ಸಮಸ್ಯೆಗಳು. — ಎಸ್. ಆರ್. ಕಂಠಿ.

ದುಡ್ಡಿನ ಬೆಲೆ ಗೆಳೆಯನಲ್ಲಿ ಸಾಲ ಕೇಳಲು ಹೋದಾಗ ತಿಳಿದೀತು. —ಕು. ವೆಂ. ಪು.

ಪ್ರಾಣಿ ಪಕ್ಷಿಗಳನ್ನು ನಂಬು. ಮಾನವನನ್ನು ನಂಬದಿರು.— ದ. ರಾ. ಬೇಂದ್ರೆ.

ಬೆಂಕಿಯಿಂದ ಅಪಕಾರವೂ ಉಪಕಾರವೂ ಇದೆ. — ಪಿ. ಸಿ. ರೇ

ದುಡ್ಡನ್ನು ನಂಬದಿರು. ದುಡ್ಡಿನ ಬೆಲೆಯನ್ನು ನಂಬು. —ಕೆ. ವೆಂಕಟಾಚಾರ್ಯ.

ಅಕ್ಕಿಯಿಲ್ಲದ ಬರಗಾಲದಲ್ಲಿ ಮಾನವನನ್ನು ಮಾನವನೇ ತಿನ್ನುವ ಸಮಯ ಬಂದೀತು. —ಬರ್ನಾರ್ಡ್ ಶಾ.

ಕರ್ಪೂರ ಅರಿತುಕೊಂಡು ಗೆಳೆತನ ಮಾಡು. ಬಣ್ಣದ ಮಾತುಗಳನ್ನಾಡಿ ನಿನ್ನನ್ನು ಮೋಸಗೊಳಿಸಲು ಅನೇಕರು ಯತ್ನಿಸಬಹುದು. — ಕೆ. ಎಸ್. ಸ್ಯಾಮುವೆಲ್.

ಹತ್ತು ಜನ ಬಲ್ಲವರು ಕೂಡಿದರೆ ಒಂದು ಸಾಮ್ರಾಜ್ಯ ಕಟ್ಟಬಹುದು. ಹತ್ತು ಜನ ಕಳ್ಳರು ಕೂಡಿದರೆ ಪ್ರಪಂಚವನ್ನೇ ಅಡಿಮೇಲು ಮಾಡಬಹುದು. —ವಿವೇಕಾನಂದ.

ನಿಂದಕರು ಪಶ್ಚಾತ್ತಾಪಪಡುವುದೇ ಅವರಿಗೆ ಕಠಿಣ ಶಿಕ್ಷೆ.—ಒ. ಪಿ. ಜೋಸೆಫ್.

ನೀನು ಒಂದು ಕೆಲಸಕ್ಕೆ ಸೇರಿದರೆ ಅದು ಒಳ್ಳೆಯದಲ್ಲವೆಂದು ಮತ್ತೊಂದಕ್ಕೆ ಹಾರದಿರು. ಪ್ರತಿಯೊಂದು ಕೆಲಸದಲ್ಲಿಯೂ ಕಷ್ಟವಿದೆ. —ವ. ಹರ್ಷ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Directer of Public Instruction Madras.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರನಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ರಖಂ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ

ಗೀತಾ - ದ್ವಿತೀಯ ಅಧ್ಯಾಯ

(ಐದನೇ ಪುಟದಿಂದ)

ನಾವು ಈ ಸಮಾಧೀನ ಚಿತ್ತವನ್ನು ಅನುಭವಿಸಲು ದೇವಾಲಯಕ್ಕೆ ಹೋಗುವೆವು. ಜಪ, ಪೂಜೆ ಇತ್ಯಾದಿ ಮಾಡುವೆವು. ಆದರೆ ಬ್ರಹ್ಮನ್ ನರಿದ ಜ್ಞಾನಿಗೆ ಈ ಕರ್ಮಗಳ ಅವಶ್ಯಕತೆ ಇಲ್ಲ. ಏಕೆಂದರೆ ಅವನು ನೆರೆ ತುಂಬಿ ಎಲ್ಲೆಲ್ಲೂ ನೀರು ಹರಿದ ಜಾಗದಂತೆ ಸದಾ ನೀರು ತುಂಬಿಕೊಂಡೇ ಇರುವಂತೆ, ಸದಾ ಶಾಂತಿಯನ್ನು ಅನುಭವಿಸುತ್ತಾ ಇರುವನು.

ಕರ್ಮಣ್ಯೇವಾಧಿಕಾರಸ್ತೇ।
ಮಾ ಫಲೇಷು ಕದಾಚನ।
ಮಾ ಕರ್ಮಫಲಹೇತುರ್ಭೂಃ।
ಮಾ ತೇ ಸಂಗೋ
ಸ್ತ್ವಕರ್ಮಣಿ ॥ ೪೭ ॥

ನಿನ್ನ ಅಧಿಕಾರ ಕೆಲಸಮಾಡಲು ಮಾತ್ರ. ಫಲದ ಮೇಲೆ ಇಲ್ಲ ಆದರೆ ಫಲದ ಮೇಲಿನ ಆಸಕ್ತಿಯೇ ನಿನ್ನ ಗುರಿಯಾಗದಿರಲಿ. ಮತ್ತೆ ಕೆಲಸಮಾಡದೆ ಇರುವ ಆಸಕ್ತಿಯೂ ನಿನ್ನಲ್ಲಿ ಇರದಿರಲಿ.

ಮೊದಲಿನ ಎರಡು ಶ್ಲೋಕಗಳಲ್ಲಿ ಶ್ರೀಕೃಷ್ಣನು ಅತ್ಯುತ್ತಮವಾದ ಗುರಿಯು ಮಾನವನು ತಲುಪಬೇಕಾದುದು, ವೇದಗಳಿಂದ ಆಚೆ ಇದೆಯೆಂದು ಸ್ಪಷ್ಟ ಪಡಿಸಿರುವನು. ಕರ್ಮಗಳಿಂದ, ಕರ್ಮಗಳನ್ನು ಮಾಡುತ್ತಾ ಮಾನವನು ತನ್ನ ನಿಜ ಸ್ವರೂಪವನ್ನು ತಿಳಿಯಬೇಕೆನ್ನುವನು.

ಈ ಶ್ಲೋಕವನ್ನು ಬಹು ತಪ್ಪಾಗಿ ತಿಳಿದುಕೊಂಡುದರಿಂದ ನಮ್ಮ ಹಿಂದೂ ಜನಾಂಗವು ಸತ್ವಹೀನವಾಗಿ ಅಧೋಗತಿಯನ್ನು ಮುಟ್ಟಿದೆ. ಇದು ಪ್ರತಿಯೊಬ್ಬರೂ ಅವರವರ ಕರ್ತವ್ಯವನ್ನು ಮಾಡಬೇಕೆಂಬ ಕರೆಯಾಗಿದೆ. ಕರ್ತವ್ಯವನ್ನು ಯಾವ ಫಲಾಪೇಕ್ಷೆ ಇಲ್ಲದೆ, ಸೇವೆ ಎಂದೇ ಭಾವಿಸಿ ಮಾಡತಕ್ಕದ್ದು. ಹಾಗೆ ಮಾಡಿದರೆ ಕೆಲಸವು ಅತ್ಯುತ್ತಮವಾಗುವುದು, ಫಲಾಸಕ್ತಿಯಿಂದ ಮತ್ತು ನಿರೀಕ್ಷಿಸಿದ ಫಲ ದೊರೆಯುವುದೋ ಇಲ್ಲವೋ ಎಂಬ ಯೋಚನೆಗಳಿಂದ ಕೂಡಿ ಒಂದು ಕೆಲಸಕ್ಕೆ ನಿಂತರಾದರೆ, ಆ ಕೆಲಸ ಉತ್ತಮವಾಗಿ ನಡೆಯಲಾರದು. ನಮ್ಮ ಯೋಚನಾ ಲಹರಿಗಳಿಂದ ನಾವು ಮಾಡುವ ಕೆಲಸ ಹಾಳಾಗುವುದು. ಕೆಲಸದಲ್ಲಿ ನಮ್ಮ ಸಂಪೂರ್ಣ ಗಮನವನ್ನು ಇಡಲಾಗುವುದಿಲ್ಲ. ಇದರಿಂದಾಗಿ ನಮ್ಮ ಸಂಪೂರ್ಣ ಶಕ್ತಿ, ಪ್ರತಿಭೆ ಆ ಕೆಲಸದಲ್ಲಿ ಬಳಸಲಾರದು. ಹೀಗಾಗಿ ನಾವು ಹೆಚ್ಚಿನ ಕೆಲಸದಲ್ಲಿ ವಿಫಲರಾಗುವೆವು. ಇದಕ್ಕೆ ನಮ್ಮ ಕೆಲಸದಲ್ಲಿ ನಾವು ತೋರುವ, ಹಾಕುವ ಶ್ರಮದ ಕೊರತೆಯೇ ಕಾರಣ.

ನಿನಗೆ ಕೆಲಸಮಾಡಲು ಅಧಿಕಾರವಿದೆ, ಆದರೆ ಫಲದ ಮೇಲೆ ಇಲ್ಲ—ಎಂದು ಇಲ್ಲಿ ಹೇಳಿರುವುದು: ಏಕೆಂದರೆ ಉತ್ತಮವಾದ ಕೆಲಸಕ್ಕೆ ಉತ್ತಮವಾದ ಫಲ ಖಂಡಿತಾ ದೊರಕುವುದು. ಆದರೆ ಅದರ ಯೋಚನೆ ಮಾಡುತ್ತಾ ಕಾಲ ಕಳೆಯಬೇಡ—ಎಂಬ ಆದೇಶವಾಗಿದೆ. ಮತ್ತು ಒಂದು ಕೆಲಸವನ್ನಾಗಲೀ ಒಂದು ವಸ್ತುವನ್ನಾಗಲೀ, ನಾವು ಮಾಡುವಾಗ ಅದರಿಂದ ಸಂತೋಷ ಪಡೆಯಲು ನಮಗೆ ಅದರಲ್ಲಿ ಆಸಕ್ತಿ ಇರಕೂಡದು. ನೀವು ಒಂದು ಚಿತ್ರ ಬರೆಯಲು ತೊಡಗಿದರೆ ನೀವು ಚಿತ್ರ ಬರೆಯುವ ಬದಲೇ ಚಿತ್ರವು ನಿಮ್ಮನ್ನು ಬರೆಯತೊಡಗಿದರೆ, ನಿಮ್ಮ ಸ್ಥಿತಿ ಶೋಚನೀಯ. ಹಾಗಾಗ ಕೂಡದು. ನೀವೇ ಕೆಲಸದ ಅಧಿಕಾರಸ್ಥರಾಗಬೇಕು. ಅದರ ಮೇಲೆ ವ್ಯಾಮೋಹ ಇರಕೂಡದು. ಆಗ ನಿಜವಾಗಿ ನಾವು ನಮ್ಮ ಕೆಲಸದಲ್ಲಿ ಸಂತೋಷಪಡಬಹುದು.

ಯೋಗಸ್ಥಃ ಕುರು ಕರ್ಮಾಣಿ।
ಸಂಗಂ ತ್ಯಕ್ತ್ವಾ ಧನಂಜಯ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ।
ಸಮತ್ವಂ ಯೋಗ ಉಚ್ಯತೇ ॥ ೪೮ ॥

ಓ ಧನಂಜಯನೇ, ಹೀಗೆ ಕಾರ್ಯನಿರತನಾಗು! ಯೋಗದಲ್ಲಿದ್ದು ವ್ಯಾಮೋಹವನ್ನು ತ್ಯಜಿಸಿ, ಜಯಾಪಜಯಗಳಲ್ಲಿ ಸಮತೋಲನ ಮನಬುದ್ಧಿಯುಕ್ತನಾಗಿ, ಕರ್ತವ್ಯ ಮಾಡು. ಮನದ ಈ ಸಮಸ್ಥಿತಿಯೇ ಯೋಗವಾಗಿರುವುದು.

ಮೇಲೆ ಹೇಳಿದಂತೆ ಕರ್ತವ್ಯ ನಿರತನಾಗಲು, ಮನ, ಬುದ್ಧಿಯನ್ನು ಒಮ್ಮತವಾಗಿಸಿ, ಅದಕ್ಕೆ ತಕ್ಕಂತೆ ಬಾಹ್ಯ ಕರ್ಮಗಳನ್ನು ಮಾಡತಕ್ಕದ್ದು. ನಾವು ಒಂದು ತತ್ವವನ್ನು ಒಪ್ಪಿದರೆ, ಮನಸ್ಸಲ್ಲಿ ಅದನ್ನು ಅಂಗೀಕರಿಸಿದರೆ ನಮ್ಮ ಕರ್ಮಗಳಲ್ಲಿ ಅದನ್ನು ತೋರಬೇಕು. ಅದರ ಬದಲು ಕೇವಲ ತತ್ವಗಳನ್ನು ಒಪ್ಪಿ ಅದಕ್ಕೆ ವಿರುದ್ಧವಾದ ಕರ್ಮಗಳನ್ನು ಮಾಡಿದರೆ ನಮ್ಮನ್ನು ನಾವೇ ಮೋಸಗೊಳಿಸಿದಂತಾಗುವುದು. ಇದರಿಂದ ವ್ಯಕ್ತಿಯ ವಿಕಾಸವೂ ಇಲ್ಲ, ರಾಷ್ಟ್ರದ ಬೆಳವಣಿಗೆಯೂ ಇಲ್ಲ. ಅನೇಕ ಪಾಶ್ಚಾತ್ಯ ದೇಶಗಳಲ್ಲಿ ಪ್ರಾಪಂಚಿಕ ವಸ್ತುಗಳ ಅಪರಿಮಿತ ಪ್ರಗತಿಯೂ, ಅವರ ನಾಶ ಹೊಂದಿದ ನಗರಗಳ ಪುನಾರಚನೆಯೂ, ತೀವ್ರವಾಗಿ ನಡೆಯಿತು. ಅವರು ಕೇವಲ ತಮ್ಮ ಸ್ವಾರ್ಥಕ್ಕೆ ಶ್ರಮಿಸದೆ, ನಾಡಿಗಾಗಿ, ತಮ್ಮ ಜೀವನವನ್ನು, ಶ್ರಮವನ್ನು, ದುಡಿತವನ್ನು ಅರ್ಪಿಸಲು ಮುಂದಾದುದೇ ಇದಕ್ಕೆ ಕಾರಣ. ಅವರು ಯೋಗವನ್ನು ತಿಳಿಯದ ಯೋಗ ನಿರತರಾಗಿರುವರು. ಪ್ರಾಪಂಚಿಕ ಪ್ರಗತಿಯನ್ನು ಆ ಯೋಗದ ಉದ್ದೇಶವನ್ನು ಸಾಧಿಸಿದರು. ಆದರೆ ನಮ್ಮಲ್ಲಿ 'ಯೋಗ' ತಿಳಿದು ನಾವು ಅದನ್ನು ಕಾರ್ಯತಃ ತರಲು ಯತ್ನಿಸಲಾರೆವು. ಇದಕ್ಕೆ ಆಲಸ್ಯವೇ ಕಾರಣ. ನಾವು ಒಂದು ತತ್ವವನ್ನು ಅಂಗೀಕರಿಸಿದರೆ ಅದರಂತೆ ನಡೆಯಲು ಸಿದ್ಧರಿಲ್ಲ. ಆದುದರಿಂದಾಗಿ ಇಂದಿನ ನಮ್ಮ ಜನಾಂಗದ ಅವನತಿಯನ್ನು ಕಾಣಬಹುದು. ಪ್ರತಿಯೊಬ್ಬರಿಗೂ ಅತಿ ಸುಲಭವಾಗಿ ಅತೀ ಹೆಚ್ಚಿನ ಹಣದ ಸಂಪಾದನೆಯು ಅಗತ್ಯವಿದೆ. ತನ್ನ ಕುಟುಂಬದ, ತನ್ನ ಮನೆಯ ವಿಷಯದಲ್ಲಿ ಮಾತ್ರ ಅವರಿಗೆ ಚಿಂತನೆ. ಈ ತರಹದ ಸ್ವಭಾವವು ಅತೀ ಉಚ್ಚ ಅಧಿಕಾರಿಯಿಂದ ಹಿಡಿದು ಕೆಳವರ್ಗದ ಜನರವರೆಗೂ ಇರುವುದರಿಂದ ನಮ್ಮ ನಾಡಿನ ಅವಸ್ಥೆ ಹೀಗಿದೆ: ಹಾಗಾದ ಕಾರಣ ನಾವು ದುಡಿದುದಕ್ಕೆ ಪ್ರತಿಫಲವಾಗಿ ನಮಗೆ ಫಲವು ಖಂಡಿತಕ್ಕೂ ದೊರಕುವುದು. ನಾವು ಹಳೆಯದರ ಚಿಂತೆ, ಭವಿಷ್ಯದ ಕಾತರತೆಯಲ್ಲಿ ವರ್ತಮಾನ ಕಾಲವನ್ನು ಹಾಳು ಮಾಡುತ್ತಿರುವೆವು.

ಮನ ಮತ್ತು ಬುದ್ಧಿಯನ್ನು ಏಕಾಗ್ರಗೊಳಿಸಿ ತನ್ನ ಸ್ವಾರ್ಥ ಚಿಂತನೆ ಬಿಟ್ಟು ಕರ್ತವ್ಯ ನಿರ್ವಹಿಸತೊಡಗಿದರೆ ಖಂಡಿತವಾಗಿ ಯಶಸ್ಸು ದೊರಕುವುದು.

ಹೇ ಕುರುಕುಲದಲ್ಲಿ ಹುಟ್ಟಿದವನೇ, ಐಶ್ವರ್ಯವನ್ನು ಗಳಿಸಲು ಅರ್ಹತೆ ಪಡೆದವನೇ (ಧನಂಜಯ) ನೀನು ಹೀಗೆ ಕೆಲಸದಲ್ಲಿ, ಯೋಗದಲ್ಲಿ ನಿರತನಾಗು. ಆಗ ನಿನಗೆ ಉತ್ತಮ ಫಲ ದೊರಕುವುದು. ಕೆಲಸದಲ್ಲಿ ಮುಂದೆ ಬರುವ ಸಿದ್ಧಿಗಳನ್ನಾಗಲೀ, ಅಸಿದ್ಧಿಗಳನ್ನಾಗಲೀ, ಯೋಚಿಸಿ, ತನ್ನ ಶಕ್ತಿಯನ್ನು ವ್ಯಯಿಸಬೇಡ. ಮನಸ್ಸನ್ನು ಸಮತೋಲನವಾಗಿರಿಸಿ ನಿರ್ಭಯತೆಯಿಂದ ಯೋಗದಲ್ಲಿ ನಿಲ್ಲು.

ದೂರೇಣ ಹ್ಯವರಂ ಕರ್ಮ।
ಬುದ್ಧಿಯೋಗಾದ್ಧನಂಜಯ।
ಬುದ್ಧೌ ಶರಣಮನ್ವಿಚ್ಛ।
ಕೃಪಣಾಃ ಫಲಹೇತವಃ ॥ ೪೯ ॥

ಮತ್ತು ಹೇ ಧನಂಜಯನೇ ಈ ರೀತಿಯ ಯೋಗದಲ್ಲಿ ನಿರತನಾದವನಿಗಿಂತ ಫಲಾಪೇಕ್ಷೆಯಿಂದ ಕೆಲಸ ಮಾಡುವವನು ತೀರಾ ನಿಕೃಷ್ಟನು ಏಕೆಂದರೆ ಅವನಿಗೆ ಸುಖ ಶಾಂತಿಯು ಮಾತ್ರ ತಿಳಿದಿಲ್ಲ. ಫಲಾಪೇಕ್ಷೆಯಿಂದಾಗಿ ಒಂದು ಕೆಲಸ ಮಾಡುವಾಗ ಶಾಂತಿ ದೊರಕದು. ಅದರಿಂದ ದೊರಕುವ ಸುಖ ಅಲ್ಪ. ಅದರ ಬದಲು ಈ ವಿವೇಕದ ಶರಣತೆ ಹೊಂದಿ ಕೆಲಸ ಮಾಡಿದರೆ ಅದರಿಂದ ದೊರಕುವ ಫಲ ಅತ್ಯುಚ್ಚ. ಇದನ್ನು ತಿಳಿದು ನೀನು ಬುದ್ಧಿಯೋಗದಲ್ಲಿ ಕರ್ಮವನ್ನು ಮಾಡು.

ಬುದ್ಧಿಯೋಗದಿಂದಾಗಿ ನಿನ್ನ ಸ್ವಾರ್ಥ ಮತ್ತು 'ಅಹಂ' ನಿಂದ ಉಂಟಾಗುವ ಅಶಾಂತಿ ಮತ್ತು ಕಳವಳವು ಇಲ್ಲದೆ, ನೀನು ಮನವನ್ನು ಹತೋಟಿಯಲ್ಲಿರಿಸಿಕೊಳ್ಳಲು ಸಾಧ್ಯವಾಗುವುದು. ಹತೋಟಿಯಲ್ಲಿರಿಸಿದ ಮನದಿಂದಾಗಿ ನೀನು, ಕೆಲಸವನ್ನು ಹೆಚ್ಚಿನ ಚಾಕಚಕ್ಯತೆಯಿಂದ ಮಾಡುವಂತಾಗುವುದು. ನಮ್ಮಲ್ಲಿರುವ ಶಕ್ತಿಯು ಹೆಚ್ಚಿನಂಶ ಫಲಾಪೇಕ್ಷೆಯಿಂದ ಮತ್ತು ಏನಾಗುವುದೋ ಎಂಬ ಭೀತಿಯಿಂದ ನಷ್ಟವಾಗಿ ಹೋಗುವುದು. ಅದರಿಂದಾಗಿ ಕೆಲಸವು ಉತ್ತಮವಾಗುವುದಿಲ್ಲ. ಕೆಲಸವು ಉತ್ತಮವಾಗಲು ನಿನಗೆ ಸದಾ ಶಾಂತಿ ಇರಲು, ನೀನು ಫಲಾಪೇಕ್ಷೆಯನ್ನು ಯೋಚಿಸದೆ, ಭವಿತವ್ಯದ ಭಯವಿಲ್ಲದೆ, ಬುದ್ಧಿಯೋಗದಲ್ಲಿ ಎಂದರೆ ವಿವೇಕಪೂರಿತ ಮನದಿಂದ ವಿವೇಕವಾಣಿಯಿಂದ ಹತೋಟಿಯಲ್ಲಿರಿಸಿದ ಮನದಿಂದ ಒಂದು ತತ್ವವನ್ನು ಒಂದು ಗುರಿಯನ್ನು ಕಣ್ಮುಂದೆ ಇಟ್ಟು, ಅದನ್ನು ಪಡೆಯಲು ತಕ್ಕಂತೆ ಸದಾ ದುಡಿಯುವವನಾಗು. ಆಗ ನಿನಗೆ ಕೆಲಸದಿಂದ ಸಂತೋಷವು ದೊರಕುವುದು. ಹಿರಿಯ ಮಹಾಪುರುಷರು, ಮಹಾತ್ಮರು, ಎಲ್ಲಾ ತಮ್ಮ ದೈನಂದಿನ ಜೀವನವನ್ನು ಹೀಗೆ ಸದಾ ಸಂತೋಷದಿಂದ ಮಾಡುತ್ತಿದ್ದರು. ಅವರು ಬುದ್ಧಿ ಯೋಗದಲ್ಲಿ ಕರ್ಮ ಮಾಡುತ್ತಿದ್ದರು. ಅವರಿಗೆ ಅದರಿಂದ ದೊರಕುವ ಫಲಗಳ ಮೇಲೆ ಆಸೆ ಇರಲಿಲ್ಲ. ಅವರಿಗೆ ಅದರಿಂದ ಹೆಚ್ಚಿನ ಗಮನವನ್ನು ಕೆಲಸದ ಮೇಲೆ ಇಡಲು ಆಗುತಿತ್ತು. ಅದರಿಂದಾಗಿ ಆ ಕೆಲಸದಲ್ಲಿ ಸಂತೋಷ ಪಡೆಯುತಿದ್ದರು. ಸಂತೋಷದಿಂದ ಮಾಡಿದ ಅವರ ಕಾರ್ಯಗಳು ಎಲ್ಲವೂ ನವಚೇತನ ಸ್ಫೂರ್ತಿಯುತ ಕಾರ್ಯವಾಗಿತ್ತು. ಇದನ್ನು ನಾವು ಎಲ್ಲಾ ಮಹಾತ್ಮರುಗಳ, ಸತ್ಪುರುಷರ ಜೀವನದಲ್ಲಿ ನೋಡಬಹುದು. ಮಹಾತ್ಮರುಗಳ ಜೀವನ ಚರಿತ್ರೆ ಓದಿದರೆ ಅವರು ಹೇಗೆ ಸನ್ನಿವೇಶ, ಸಂದರ್ಭಗಳಲ್ಲಿ ವ್ಯವಹರಿಸಿ ಬಂದ ಸಮಸ್ಯೆಗಳನ್ನು ಎದುರಿಸಿ ಆ ಯೋಗವನ್ನು ಮಾಡುತ್ತಿದ್ದರೆಂದು ತಿಳಿಯಬಹುದು. ಬದಲಾಗಿ ಆ ಸತ್ಪುರುಷರ ಜೀವನ ಮಟ್ಟ ಹೇಗಿತ್ತು, ಅವರ ಬಾಹ್ಯ ಸುಖ ಸೌಕರ್ಯಗಳು ಹೇಗಿದ್ದವು, ಅವರು ಏನು ಉಣ್ಣುತ್ತಿದ್ದರು, ಉಡುತ್ತಿದ್ದರು, ಅವರ ಹಣಕಾಸಿನ ಸ್ಥಿತಿ ಹೇಗಿತ್ತು? ಎಂದು ನಾವು ತಿಳಿಯಲಪೇಕ್ಷಿಸುವುದಿಲ್ಲ. ಅವರ ಜೀವನ ಚರಿತ್ರೆಯಲ್ಲಿ ಅದನ್ನು ಬರೆಯುವುದಿಲ್ಲ. ಒಂದು ಕಾರ್ಯದಲ್ಲಿ ನಾವು ನಮ್ಮನ್ನು ಮರೆತಷ್ಟು ಆ ಕೆಲಸದ ಮೌಲ್ಯತೆ ಹೆಚ್ಚುವುದು. ಆದರಿಂದಾಗಿ ನೀನು ಹೀಗೆ ಕೆಲಸ ಮಾಡು.

—ಸತೀಶ.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ
ಗೀತೆಯ ಕೈಗನ್ನಡಿ
300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊಟ್ಟಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ
ಗೀತೆಯ ಕೈಗನ್ನಡಿಯು ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು
ನವಯುಗ ಪ್ರೆಸ್, ಉಡುಪಿ.

ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ದಂತ ವೈದ್ಯರಿಗೆ ಗಿರಾಕಿ ಕಮ್ಮಿಯಾದೀತು!

ಫ್ಲೋರಿನ್ ಮಿಶ್ರಿತ ಕುಡಿಯುವ ನೀರಿನಿಂದ ದಂತ ರಕ್ಷಣೆ!

(ಡಾ। ಜೋಹಾನ್ ಮಾರ್ಕ್ಸರ್)

ಸಾಧಾರಣವಾಗಿ ಒಬ್ಬರ, ಇಬ್ಬರ ಮೇಲೆ ಪ್ರಯೋಗಗಳನ್ನು ನಡೆಸುವುದುಂಟು. ಆದರೆ, ಪಶ್ಚಿಮ ಜರ್ಮನಿಯ ಒಂದು ಸಣ್ಣ ಊರಿನ 5000 ಪ್ರಜೆಗಳೂ ಕಳೆದ 12 ವರ್ಷಗಳಿಂದಲೂ ಒಂದು ಪ್ರಯೋಗದಲ್ಲಿ ಭಾಗವಹಿಸಿದ್ದಾರೆಂಬ ವಿಷಯವು ತಿಳಿದು ಬಂದಿದೆ. ಕಾಸ್ಸೆಲ್ ನಗರದ ಬಳಿಯಿರುವ ವಾಲರ್‌ಹಾಸೆನ್ ಎಂಬ ಊರಿನಲ್ಲೇ ಈ ಪ್ರಯೋಗವು ನಡೆಯಿತು. ಈ ಊರಿನ ಜನರು ಕುಡಿಯುವ ನೀರಿಗೆ ಈ 12 ವರ್ಷಗಳಿಂದ ಅಲ್ಪ ಪ್ರಮಾಣದಲ್ಲಿ ಫ್ಲೋರಿನ್‌ನನ್ನು ಸೇರಿಸಿಕೊಂಡು ಬರಲಾಗುತ್ತಿದೆ. ಒಂದು ಲೀಟರ್ ನೀರಿಗೆ ಒಂದು ಮಿಲ್ಲಿಗ್ರಾಂ ಫ್ಲೋರಿನ್ನಿನಂತೆ ಸೇರಿಸಲಾಗುವುದು.

ಹಲ್ಲುಗಳು ಕೆಡುವುದನ್ನು ಫ್ಲೋರಿನ್ ತಡೆಯುವುದು ಎಂಬ ವಿಷಯ ಕೆಲ ವರ್ಷಗಳ ಹಿಂದೆಯೇ ಕಂಡು ಹಿಡಿಯಲ್ಪಟ್ಟಿತು. ಹಲ್ಲುಗಳಲ್ಲಿ ಕೇರಿಸ್ (caries) ಎಂಬ ರೋಗವು ಕಾಣಿಸಿಕೊಂಡಿತೆಂದರೆ, ಆರಂಭದಲ್ಲಿ ಹಲ್ಲುಗಳ ಕವಚದಂತಿರುವ ಎನಾಮಲ್ಲನ್ನು ನಾಶ ಮಾಡುವುದಲ್ಲದೆ, ಕೊನೆಗೆ ಇಡೀ ಹಲ್ಲುಗಳನ್ನೇ ಹಾಳುಮಾಡಿಬಿಡುವುದು. ಈ ರೋಗವು ಕಳೆದ ದಶಕದಲ್ಲಿ ವಿಪರೀತವಾಗಿ ವ್ಯಾಪಿಸಿದೆ. ಇತ್ತೀಚಿನ ಸಂಶೋಧನೆಗಳಿಂದ, ನಾಗರಿಕ ದೇಶಗಳಲ್ಲಿನ ಪ್ರಜೆಗಳಲ್ಲಿ 90% ಮಂದಿ ಈ ರೋಗದಿಂದ ನರಳುತ್ತಿದ್ದಾರೆಂದು ತಿಳಿದು ಬಂದಿದೆ. ಹಲ್ಲುಜ್ಜುವ ಪೇಸ್ಟಿನಲ್ಲಿ ಸೇರಿಸಲಾಗುವ ತೀರಾ ಅಲ್ಪ ಪ್ರಮಾಣದ ಫ್ಲೋರಿನ್ನಿನಿಂದ ಈ ವ್ಯಾಧಿಯನ್ನು ತಡೆಯಲು ಸಾಧ್ಯವಿಲ್ಲವೆಂದೇ, ಕುಡಿಯುವ ನೀರಿನಲ್ಲಿ ಫ್ಲೋರಿನ್ನನ್ನು ಸೇರಿಸಲು ತೀರ್ಮಾನಿಸಲಾಯಿತು. ಟೂತ್ ಪೇಸ್ಟನ್ನು ಉಪಯೋಗಿಸುವವರು, ಉಪಯೋಗಿಸದವರು ಹೀಗೆ ಎಲ್ಲರೂ ನೀರನ್ನು ಕುಡಿಯಲೇ ಬೇಕಾಗಿರುವುದರಿಂದ ಈ ಮೂಲಕ ಎಲ್ಲರಿಗೂ ರಕ್ಷಣೆಯನ್ನು ಒದಗಿಸಲಾಗುತ್ತಿದೆ. ಹನ್ನೆರಡು ವರ್ಷಗಳ ಪರೀಕ್ಷೆ ತಮಗೆ ಪೂರ್ಣ ತೃಪ್ತಿಯ ಫಲಿತಾಂಶಗಳನ್ನು ನೀಡಿದೆಯೆಂದು ಕಾಸ್ಸೆಲ್ ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ವಾಲರ್‌ಹಾಸೆನ್ ನಗರದ ಒಂದು ಬಡಾವಣೆಯ 400 ಮಕ್ಕಳ ಮೇಲೆ ಈ ಪ್ರಯೋಗವನ್ನು ನಡೆಸಿದ ಮೇಲೆ, 24% ಮಕ್ಕಳು ಕೇರಿಸ್‌ನಿಂದ ವಿಮೋಚನೆಯನ್ನು ಪಡೆದರೆಂದು ತಿಳಿದು ಬಂದಿದೆ. ಹೀಗೆ, ನೀರಿನಲ್ಲಿ ಸೇರುವ ಫ್ಲೋರಿನ್ ಬಹು ಕಡಿಮೆ ಪ್ರಮಾಣದಲ್ಲಿರುವುದರಿಂದ, ದೇಹಕ್ಕೆ ಯಾವ ರೀತಿಯ ಕೆಡುಕೂ ಉಂಟಾಗುವುದಿಲ್ಲವೆಂದು ಹೇಳಲಾಗಿದೆ.

ಈಗ ವಾಲರ್‌ಹಾಸೆನ್‌ನಲ್ಲಿ ನಡೆಯುತ್ತಿರುವ ಸಂಶೋಧನೆ 15 ವರ್ಷಗಳ ಅವಧಿಯದು. 1953ರಲ್ಲಿ ಆರಂಭಿಸಲ್ಪಟ್ಟ ಇದು 1968ರಲ್ಲಿ ಮುಗಿಯುವುದು. ಆಗ ಸಂಶೋಧನಾ ಸಮಿತಿಯು ನೀಡುವ ವರದಿಯ ಮೇಲೆ, ಈ ಪದ್ಧತಿಯನ್ನು ದೇಶಾದ್ಯಂತ ಕೈಗೊಳ್ಳುವುದೇ, ಬಿಡುವುದೇ ಎಂಬುದನ್ನು ನಿರ್ಧರಿಸಲಾಗುವುದು.

ಮಣಿಪಾಲ್ ಕೊಲೇಜ್ ಆಫ್ ಎಜುಕೇಶನಿನ ಉದ್ಘಾಟನೆ

ಉಡುಪಿ, ತಾ| 1?, ಮಣಿಪಾಲದ ಎಕಾಡೆಮಿ ಆಫ್ ಜನರಲ್ ಎಜುಕೇಶನಿನವರು ಆರಂಭಿಸಿರುವ ಮಣಿಪಾಲ್ ಕೊಲೆಜ್ ಆಫ್ ಎಜುಕೇಶನಿನ ಉದ್ಘಾಟನಾ ಸಮಾರಂಭವು ಉಡುಪಿ ಲಾ ಕೊಲೇಜಿನ ಕಟ್ಟಡದಲ್ಲಿ ಮೈಸೂರು ಯುನಿವರ್ಸಿಟಿಯ ವೈಸ್ ಚಾನ್ಸಲರ್ ಡಾ| ಕೆ. ಎಲ್. ಶ್ರೀಮಾಲಿಯವರಿಂದ ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಎಕೆಡೆಮಿಯ ಅಧ್ಯಕ್ಷ ಡಾ| ಟಿ. ಎಂ. ಎ. ಪೈಯವರು ಆರಂಭದಲ್ಲಿ ಸ್ವಾಗತಿಸುತ್ತ ಉತ್ತಮ ಉಪಾಧ್ಯಾಯರನ್ನು ತರಬೇತಿಗೊಳಿಸುವುದೇ ಈ ಕಾಲೇಜಿನ ಉದ್ದೇಶವೆಂದರು. ಡಾ| ಶ್ರೀಮಾಲಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಬೇರೆ ಬೇರೆ ದೇಶಗಳಲ್ಲಿ ಶಿಕ್ಷಣ ಪದ್ಧತಿಯು ಬೇರೆ ಬೇರೆಯಾಗಿದೆಯೆಂದೂ ಆಯಾಯ ದೇಶಕ್ಕೆ ತಕ್ಕ ಶಿಕ್ಷಣ ಪದ್ಧತಿಯನ್ನು ಆಯಾಯ ದೇಶದವರೇ ರೂಪಿಸಿಕೊಳ್ಳಬೇಕಾಗಿದೆಯೆಂದೂ ಉಪಾಧ್ಯಾಯರು ಸಮಾಜದೊಡನೆ ಬೆರೆತು ಅದರ ಅವಶ್ಯಕತೆಗಳನ್ನು ತಿಳಿದುಕೊಳ್ಳಬೇಕೆಂದೂ ಹೇಳಿ ಕಾಲೇಜಿಗೆ ಶುಭ ಕೋರಿದರು. ಅಧ್ಯಕ್ಷ ಶ್ರೀ ಅಡಿಗರು ಮಾತನಾಡುತ್ತ ಇಂದಿನ ಶಿಕ್ಷಣ ಮಟ್ಟವನ್ನು ಸುಧಾರಿಸುವ ಕಡೆಗೆ ವಿದ್ಯಾಧಿಕಾರಿಗಳು ಗಮನವೀಯಬೇಕೆಂದೂ ಹೇಳಿ ಡಾ| ಪೈ ಮತ್ತು ಡಾ| ಶ್ರೀಮಾಲಿಯವರು ಶಿಕ್ಷಣ ರಂಗದಲ್ಲಿ ಮಾಡುತ್ತಿರುವ ಕಾರ್ಯವನ್ನು ಶ್ಲಾಘಿಸಿದರು. ಅಂತ್ಯದಲ್ಲಿ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಅಂಚನರು ಧನ್ಯವಾದಗಳನ್ನರ್ಪಿಸಿದರು.

ಮಳೆ ಇಲ್ಲದೆ ವ್ಯವಸಾಯಗಾರರು ಕಂಗೆಟ್ಟಿದ್ದಾರೆ

ಈ ವರ್ಷ ಮಳೆ ಬರಲು ಆರಂಭವಾದದ್ದೆ ವಿಳಂಬವಾಗಿ. ಯಾವ ನಕ್ಷತ್ರದಲ್ಲೂ ಚೆನ್ನಾಗಿ ಮಳೆ ಬಿದ್ದಿಲ್ಲ. ಆರ್ದ್ರಾ ನಕ್ಷತ್ರದ ಕೊನೆಯ ಭಾಗದಲ್ಲಿ ಮಳೆ ಚೆನ್ನಾಗಿದ್ದರೂ ಪುನರ್ವಸುವಿನಲ್ಲಿ ಈ ವರೆಗೆ ಮಳೆಯೇ ಇಲ್ಲವಾಗಿದೆ. ಇನ್ನೂ ಎಷ್ಟೋ ಕಡೆ ವ್ಯವಸಾಯ ಬಾಕಿ ಉಳಿದಿದೆ. ನೆಟ್ಟ ಬೆಟ್ಟುಗದ್ದೆಗಳು ಒಣಗಿ ಹೋಗಿವೆ. ವ್ಯವಸಾಯಗಾರರು ತುಂಬಾ ಕಂಗಾಲಾಗಿದ್ದಾರೆ.

ಬಿಶೊಪರಿಗೆ ಮಾನಪತ್ರ.

ಹೊಸದಾಗಿ ಪಟ್ಟಾಭಿಷಿಕ್ತರಾದ ಮಂಗಳೂರಿನ ಬಿಶೊಪರಾದ ರೈಟ್ ರೆ| ಡಾ| ಬೆಸಿಲ್ ಎಸ್. ಡಿ. ಸೋಜರಿಗೆ ಉಡುಪಿ ನಗರ ಸಭೆಯವರು ತಾ. 12ರಂದು ಮುನ್ಸಿಪಲ್ ಮಹಾತ್ಮಾ ಗಾಂಧಿ ಬೇಸಿಕ್ ಶಾಲಾ ಕಟ್ಟಡದಲ್ಲಿ ಮಾನಪತ್ರವಿತ್ತು ಗೌರವಿಸಿದರು. ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ಮಾನಪತ್ರವನ್ನೋದಿ ಅರ್ಪಿಸಿದರು. ಅತಿಥಿಗಳು ಉತ್ತರಿಸುತ್ತ ಉಡುಪಿಯ ಪ್ರಸಿದ್ಧಿ, ಇಲ್ಲಿಯ ಜನರ ಕಾರ್ಯ ಪಟುತ್ವವನ್ನು ಪ್ರಸ್ತಾಪಿಸಿ, ಜಾತಿಮತ ಭೇದವಿಲ್ಲದೆ ಜನರು ಕೂಡಿ ನಡೆಯುವ ವಿಶಾಲ ಮನೋಭಾವವನ್ನು ಕೊಂಡಾಡಿದರಲ್ಲದೆ ತಾನು ತನ್ನ ಸ್ಥಾನದ ಸದುಪಯೋಗ ಮಾಡಲು ದುಡಿವೆನೆಂದರು. ಅಂತ್ಯದಲ್ಲಿ ಶ್ರೀ ಯು. ಎಂ. ಮಧ್ಯಸ್ಥರು ಧನ್ಯವಾದಗಳನ್ನರ್ಪಿಸಿದರು.

ಪರ್ಕಳ ಹೈಸ್ಕೂಲಿನ ಪ್ರವೇಶ ಸಮಾರಂಭ

ಪರ್ಕಳ, ತಾ. 7, ಪರ್ಕಳ ಎಜುಕೇಶನ್ ಸೊಸೈಟಿಯವರು ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಆಶ್ರಯದಲ್ಲಿ ನೂತನವಾಗಿ ಕಟ್ಟಿಸಿದ ಪರ್ಕಳ ಹೈಸ್ಕೂಲಿನ ಕಟ್ಟಡದ ಪ್ರವೇಶ ಸಮಾರಂಭವು ಡಾ. ಟಿ. ಎಂ. ಎ. ಪೈಗಳವರಿಂದ ಶ್ರೀ ಎಂ. ಮಧ್ವರಾಜ, ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಚೇರ್ಮನ್ ಶ್ರೀ ಬಿ. ವಿಟ್ಠಲ ಹೆಗ್ಡೆ ಮೊದಲಾದವರು ಅತಿಥಿಗಳನ್ನು ಸ್ವಾಗತಿಸಿದರು. ಶಾಲಾ ವ್ಯವಸ್ಥಾಪಕ ಶ್ರೀ ಟಿ. ರಮೇಶ ಪೈಗಳು ಸ್ವಾಗತ ಭಾಷಣ ಮಾಡಿದರು. ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಕು. ಶಿ. ಹರಿದಾಸ ಭಟ್ಟರು ದಿ| ಪಂ|| ಜವಾಹರಲಾಲರ ಭಾವಚಿತ್ರವನ್ನು ಅನಾವರಣ ಮಾಡಿದರು. ಉದ್ಘಾಟಕರ ಮತ್ತು ಅಧ್ಯಕ್ಷರ ಭಾಷಣಗಳಾದ ಬಳಿಕ ಸೊಸೈಟಿಯ ಅಧ್ಯಕ್ಷ ಶ್ರೀ ಕಬಿಯಾಡಿ ಶ್ರೀನಿವಾಸ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ವಿದಾಯ ಸತ್ಕಾರ.

ಸುಪರಿಂಟೆಂಡೆಂಟ್ ಇಂಜಿನಿಯರಾಗಿ ಜೋಗಿಗೆ ವರ್ಗವಾಗಿ ಹೋಗುತ್ತಿರುವ ಶ್ರೀ ಬಿ. ಸಿ. ಆಳ್ವರನ್ನು ಬೀಳ್ಕೊಡುವ ಸಮಾರಂಭವು ಕೆ. ಎಂ. ಸಿ. ಹಾಲಿನಲ್ಲಿ ಶ್ರೀ ಡಿ. ಶಂಕರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ವಿ. ಸುಬ್ಬರಾಯರು ಅತಿಥಿಗಳನ್ನು ಸ್ವಾಗತಿಸಿದ ಬಳಿಕ ಹಲವರು ಮಾತನಾಡಿ ಶ್ರೀ ಆಳ್ವರ ಗುಣಗಾನಮಾಡಿದರು.

ಶ್ರೀ ಬಿ. ಸಿ. ಆಳ್ವರು ಮಾತನಾಡುತ್ತಾ ಎರಡುವರೆ ವರುಷಗಳ ಕಾಲ ತನ್ನನ್ನು ಆದರಿಸಿ, ಸಹಭಾಗಿಗಳಾಗಿ ದುಡಿದ ಮಂಗಳೂರಿಗರನ್ನು ಅಭಿನಂದಿಸಿದರು. ಕೊನೆಯಲ್ಲಿ ಶ್ರೀ ಎಚ್. ವಿ. ಶ್ರೀನಿವಾಸಯ್ಯನವರು ವಂದನಾರ್ಪಣೆಗೈದರು.



ಜನಮತ

'ಸಿಂಡಿಕೇಟ್ ಬ್ಯಾಂಕ್ ಮತ್ತು ನೌಕರರು.'

ನಾನು ಹಲವಾರು ವರ್ಷಗಳಿಂದ ಸಿಂಡಿಕೇಟ್ ಬ್ಯಾಂಕಿನ ಪ್ರಗತಿಯನ್ನು ಬಹಳ ಹತ್ತಿರದಿಂದ ನಿರೀಕ್ಷಿಸುತ್ತಿದ್ದೇನೆ ಮತ್ತು ದರ ಬೆಳವಣಿಗೆಗಾಗಿ ಕುತೂಹಲಪಟ್ಟಿದ್ದೇನೆ. ನಮ್ಮ ದೇಶದ ಬ್ಯಾಂಕುಗಳಲ್ಲಿ ಅತೀ ಪ್ರಗತಿಪರ ಧೋರಣೆ ಮತ್ತು ನವೀನ ಯೋಜನೆಗಳಿಗೆ ಹೆಸರಾದ ಈ ಬ್ಯಾಂಕು, ಇಂದು ಆಂತರಿಕ ಹೊಡೆತದಿಂದ ಕಷ್ಟಪಡುತ್ತಿದೆ. ನೌಕರರ ಬೇಡಿಕೆಗಳನ್ನು ಈಡೇರಿಸುವುದರಲ್ಲಿ ಪ್ರಥಮವಾದ ಈ ಬ್ಯಾಂಕು ಇಂದು ಅದೇ ನೌಕರರ ಬೈಗಳನ್ನು ಕೇಳುತ್ತಿದೆ. ಪ್ರತಿಯೊಂದಕ್ಕೂ ನ್ಯಾಯಾಲಯ, ಲೇಬರ್ ಕೋರ್ಟುಗಳಿರುವಾಗ, ಈ ವಿದ್ಯಾವಂತ ಬ್ಯಾಂಕ್ ನೌಕರರು, ತಮ್ಮ ಮೇಲಾಧಿಕಾರಿಗಳ ಹೆಸರೆತ್ತಿ ವೈಯಕ್ತಿಕ ಬಯ್ಯುತ್ತಿರುವಾಗಲೂ ಕನಲದ ಬ್ಯಾಂಕ್ ಅಧಿಕಾರಿಗಳ ಮನೋಸ್ಥೈರ್ಯಕ್ಕೆ ಆಶ್ಚರ್ಯಪಟ್ಟಿದ್ದೇನೆ. ಪ್ರತಿಯೊಂದು ಬ್ಯಾಂಕುಗಳಲ್ಲಿ ಅವರವರ ಜಾತಿಯವರೇ ತುಂಬಿರುವಾಗ ಈ 'ಸಿಂಡಿಕೇಟ್ ಬ್ಯಾಂಕಿ'ನಲ್ಲಿ ಹೆಚ್ಚಿನ ಮಂದಿ ಪರ ಜಾತಿಯವರೇ ಇದ್ದಾರೆ. ಮತ್ತು ಬ್ಯಾಂಕ್ ನೌಕರರ ಮಕ್ಕಳಿಗೆ, ಪೇಡಿಯಿಂದ ಹಿಡಿದು ಮೆನೇಜರರ ವರೆಗೆ ಬ್ಯಾಂಕಿನವರೇ ಧರ್ಮಾರ್ಥ ವಿದ್ಯೆ ಕೊಡುತ್ತಾರೆ. ಈ ಕ್ರಮ ಭಾರತದ ಯಾವ ಬ್ಯಾಂಕಿನಲ್ಲೂ ಇಲ್ಲ. ಎಷ್ಟೋ ಮಂದಿ ಮೆಟ್ರಿಕ್ಯುಲೇಶನ್ ಆದವರು ಬೇಕಷ್ಟು ಕಾಲೇಜ್ ಡಿಗ್ರಿಯನ್ನು ಪಡೆದಿದ್ದಾರೆ. ಸಾಲ ಮತ್ತು ಸಹಾಯದ ರೂಪದಿಂದ ಸಾವಿರಾರು ಜನರ ಜೀವನವೇ ಬದಲಾದದ್ದನ್ನು ನೋಡಿದ್ದೇನೆ. ಅದಲ್ಲದೆ

(ಮೂರನೇ ಪುಟದಿಂದ)

ರದ ಬೆಂಬಲವೂ, ಕೇಂದ್ರದ ಚವಾನರ ಅನುಕಂಪವೂ ಅವರಿಗಿದೆ. ಕಾರವಾರ ತಾಲೂಕನ್ನು ಕೇಳುತ್ತಿರುವ ಮಹಾರಾಷ್ಟ್ರೀಯರು ಗೋವೆಯನ್ನೂ, ಬೆಳಗಾಂವಿ, ಕಾರವಾರಗಳನ್ನೂ ನುಂಗುವ ಹಂಚಿಕೆಯಲ್ಲಿದ್ದಾರೆ. ಗೋವೆಯ ಬಗ್ಗಿನ ಬೇಡಿಕೆಯನ್ನು ಸಮರ್ಥಿಸಲೆಂದೇ ಅವರಿಗೆ ಕಾರವಾರವೂ ಬೇಕಾಗಿದೆ. ಅದೇನೇ ಇದ್ದರೂ ಕರ್ನಾಟಕ ಸರಕಾರವು ಇದಕ್ಕೆಲ್ಲ ಸೊಪ್ಪು ಹಾಕಬಾರದು. ತಾನು ಮೊದಲೇ ಸ್ಪಷ್ಟಪಡಿಸಿದಂತೆ, ಗಡಿಯ ಪುನರ್‌ಪರಿಶೀಲನೆಗೆಂದೂ ಒಪ್ಪಬಾರದು; ಬದಲು ಚಿಕ್ಕ ಪ್ರಮಾಣದ ಹೊಂದಾಣಿಕೆಗೆ ಮಾತ್ರ ಒಪ್ಪಬೇಕು.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

S. C. 582/1962.

ಶ್ರೀನಿವಾಸ ಭಟ್ಟ — ವಾದಿ.

ಮತ್ತು

ಮಥುರಾ ಯಾನೆ ಆನಂದಿ ಬಾಯಿ ಕೊಡಾ — ಪ್ರತಿವಾದೀರು.

ಇವರೊಳಗೆ

7ನೇ ಪ್ರತಿವಾದಿ— P. V ನಾಯಕ್— ಪಾಂಡುರಂಗ ನ್ಯಾಕರ ಮಗ— ಹಾಲಿ ಬೊಂಬಾಯಿ, ಕಡಾರದಲ್ಲಿರುವವರು — ಇವರಿಗೆ—

ವಾದಿಗೆ ನೀವು ವಗೈರೆಯಿಂದ ಬರಬೇಕಾದ ಮೂಲಗೇಣಿ ಬಾಕಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯ ತಾರೀಕು 19 7-1965ಕ್ಕೆ ಇಟ್ಟಿದೆ— ಉದಾಹರಿಸುವ ವ್ಯವಸ್ಥೆಯಿದ್ದದರಿಂದ ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಪಡಿಸಿಕೊಳ್ಳತಕ್ಕದ್ದು — ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Balachandra Kao,
Advocate for Plaintiff.
Udipi, 10—7—1965.

ಎಲ್ಲೆಲ್ಲಿ ಏನೇನು?

ಉಜಿರೆಯಲ್ಲಿ ಹನ್ನೊಂದನೆ ತರಗತಿ

ಕಳೆದ ತಾ. 6ರಂದು ಉಜಿರೆಯ ಧಿ. ಕೆ. ಬಿ. ಹೈಸ್ಕೂಲಿನ ಹನ್ನೊಂದನೆಯ ತರಗತಿಯ ಉದ್ಘಾಟನಾ ಸಮಾರಂಭವು ವಿದ್ಯಾಮಂತ್ರಿ ಶ್ರೀ ಎಸ್. ಆರ್. ಕಂಠಿಯವರಿಂದ, ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ನೆರವೇರಿತು.

ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆಯವರು ಸ್ವಾಗತಿಸಿದರು. ಶ್ರೀ ಕಂಠಿಯವರು ಹೈಸ್ಕೂಲಿಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಹಾಯರ್ ಸೆಕೆಂಡರೀ ಸ್ಕೂಲ್ ಎಂಬ ನೂತನ ನಾಮಕರಣವನ್ನು ಘೋಷಿಸಿ, ಹನ್ನೊಂದನೆಯ ತರಗತಿಯನ್ನು ಉದ್ಘಾಟಿಸುತ್ತಾ, ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿ ಪಿ. ಯು. ಸಿ. ಮಟ್ಟದ ವಿದ್ಯಾ ಸೌಕರ್ಯವನ್ನು ತೆರೆಯುವುದರಿಂದ, ಕುಸಿಯುತ್ತಿರುವ ಶಿಕ್ಷಣ ಮಟ್ಟವನ್ನೂ, ವಿದ್ಯಾರ್ಥಿಗಳಲ್ಲಿನ ಶೀಲದ ಮಟ್ಟವನ್ನೂ ಎತ್ತರಿಸಲು ಕಾರಣವಾಗುವುದು' ಎಂದು ನುಡಿದರು.

ಶ್ರೀ ರತ್ನವರ್ಮ ಹೆಗ್ಗಡೆಯವರು ಶಾಲೆಗೆ ನೂತನವಾಗಿ ಕಟ್ಟಿಸಿಕೊಟ್ಟಿರುವ ಕಲಾಮಂಟಪದ ಪ್ರವೇಶೋತ್ಸವವನ್ನು ಬೆಳ್ತಂಗಡಿ ತಾ

ಹಾಗಾಗಲೇ ಅವರ ವಿವಾದವು ಕೋರ್ಟಿನಲ್ಲಿರುವಾಗ, ಈ ರೀತಿ ವಿದ್ಯಾವಂತ ನೌಕರರು ತಮ್ಮ ಅಸಭ್ಯ ವರ್ತನೆಯನ್ನು ಜನರಿಗೇನೆ ತೋರಿಸುವರೆಂದೇ ತಿಳಿಯಲಾರೆನು. ನೌಕರರ ಈ ರೀತಿಯ ವಿನಾಶಕಾರೀ ಮನೋವೃತ್ತಿ ಬೆಳೆಯುತ್ತಾ ಹೋದರೆ, ಇನ್ನು ಮುಂದೆ ಖಾಸಗೀ ವಲಯದಲ್ಲಿ ಪ್ರಗತಿ ಕುಂಠಿತವಾದೀತು ಬ್ಯಾಂಕಿಗಾಗಿಯೇ 'ದೇಸಾಯಿ ಎವಾರ್ಡಿದೆ.' ಬ್ಯಾಂಕಿನ ಆಡಳಿತ ಮಂಡಲಿಯೂ, ನೌಕರರೂ ಎಲ್ಲರೂ ವಿದ್ಯಾವಂತರೇ ಆಗಿರುತ್ತಾರೆ. ಹಾಗಿರುವಾಗ, ಸರಕಾರ ಹಾಕಿಕೊಟ್ಟ ನೀತಿ, ನಿಯಮವನ್ನು ಉಲ್ಲಂಗಿಸುವುದು ಯಾರಿಗೂ ಸಾಧ್ಯವಿಲ್ಲ. ವಿದ್ಯಾವಂತರ ಬಾಯಿಂದ ಈ ರೀತಿಯ ಬೈಗಳಿಂದ ಅಂತ್ಯವಾಗುವಾಗ, ಅವಿದ್ಯಾವಂತ ಕೂಲಿಗಾರರನ್ನು ನಾವು ದೂರಿ ಏನು ಪ್ರಯೋಜನ? ಅತ್ಯುತ್ತಮ 'ಟೆರಿಲಿನ್' ವಸ್ತ್ರವನ್ನು ಧರಿಸುವ ಸುಂದರ ತರುಣರ ಬಾಯಲ್ಲಿ ಬರುವ ಅಶ್ಲೀಲ ಶಬ್ದಗಳ ಜೋಡಣೆಯನ್ನು ನೋಡಿದಾಗ, ನಾನು ತುಂಬಾ ವಿಷಾದ ಪಟ್ಟಿದ್ದೇನೆ. ಪ್ರಗತಿಯಿಂದ ಪ್ರಗತಿಗೆ ಹಾರುತ್ತಿರುವ ಸಿಂಡಿಕೇಟ ಬ್ಯಾಂಕಿನ ಶ್ರೇಯಸ್ಸಿಗೆ ಎಂದೆಂದೂ ಕುಂದು ಬರಬಾರದಿರಲೆಂದು ಆಶಿಸುತ್ತೇನೆ.

—ಬ್ಯಾಂಕ್ ಗಿರಾಕಿ.

"ಬ್ಯಾಂಕ್ ನೌಕರರು!!"

ಇತ್ತೀಚೆಗೆ ಸಿಂಡಿಕೇಟ್ ಬ್ಯಾಂಕಿನ ಕೆಲವು ನೌಕರರು ತಮ್ಮ ಬೇಡಿಕೆಗಳ ಸಂಬಂಧವಾಗಿ ಜರುಗಿಸಿದ ಪ್ರದರ್ಶನಗಳನ್ನು ನೋಡುವಾಗ ವಿದ್ಯಾವಂತರೆನ್ನಿಸುವವರು ಹೀಗೆ ನಡೆಯಲು ಸಾಧ್ಯವೇ ಎಂದೆನ್ನಿಸುತ್ತದೆ. ತಮ್ಮ ಬೇಡಿಕೆಗಳು ಏನಿದ್ದರೂ, ಸಾಮ್ಯವಾದ ಮತ್ತು ಸುಬದ್ಧವಾದ ಬೇರೆ ವಿಧಾನಗಳೇ ಇಲ್ಲವೇ ಎಂದು ಪ್ರಶ್ನಿಸಬೇಕಾಗುವುದು.

ಎರಡನೆಯದಾಗಿ, ಬೇರಾವ ಕ್ಷೇತ್ರದ ಕೆಲಸಗಾರರಿಗಿಂತ ಬೇಂಕು ನೌಕರರ ಪಂಕ್ತಿಯು ಹೆಚ್ಚು ಉತ್ತಮಮಟ್ಟದ್ದಾಗಿದೆ. ಅವರು ತಮ್ಮ ಬೇಡಿಕೆಗಳ ತೀರ್ಮಾನಕ್ಕಾಗಿ ಸ್ವಲ್ಪ ತಾಳ್ಮೆಯಿಂದ ಸಮಯ ಕಾಯುವುದು ಸಾಧ್ಯವಿದೆ. ಹೀಗಿರುವಾಗ ಇಂಥವರೇ ಶಿಸ್ತುಗೇಡಿತನದ ಪ್ರದರ್ಶನ ಮಾಡುವುದು ಆಶ್ಚರ್ಯವಲ್ಲವೆ.

ಸಿಂಡಿಕೇಟು ಬ್ಯಾಂಕು ಪ್ರಗತಿಪರ ಧೋರಣೆಗೆ ಹೆಸರಾಗಿದೆ. ಅವರು ತಮ್ಮ ಕೆಲಸಗಾರರ ಹಿತಾಸಕ್ತಿಗಳನ್ನು ದುರ್ಲಕ್ಷಿಸಲಾರರೆಂದು ಅಪೇಕ್ಷಿಸಬಹುದಾಗಿದೆ. ಅವರು ಯೋಗ್ಯ ವಿಚಾರ ವಿನಿಮಯ ನಡೆಸುವರೆಂಬುದನ್ನು ಖಚಿತವಾಗಿ ನಂಬಬಹುದು. ಹೀಗಿರುವಾಗ ಇಂತಹ ದುಸ್ಸಾಹಸದ ಪ್ರದರ್ಶನ ವೇಕೆ?

—ಬೇಂಕು ವ್ಯವಹಾರಸ್ಥ.

ಲೂಕು ಬೋರ್ಡು ಅಧ್ಯಕ್ಷ ಶ್ರೀ ಜಿ. ಎನ್. ಭಿಡೆಯವರು ಜರಗಿಸಿದರು. ಶ್ರೀ ಮುಕುಂದ ರಾವ್, ಎಂ. ಎಲ್. ಸಿ. ಇವರು ಮಾತನಾಡುತ್ತಾ, ಶ್ರೀ ಕ್ಷೇತ್ರದಿಂದ ಇಲ್ಲಿ ಕಾಲೇಜು ತೆರೆಯುವಂತಾಗಲಿ ಎಂದು ಹಾರೈಸಿದರು. ಮಲೆನಾಡಿನ ಜನತೆಯ ಶೈಕ್ಷಣಿಕ ಸಾಕಲ್ಯಕ್ಕಾಗಿ ಶ್ರಮಿಸುತ್ತಿರುವ ಶ್ರೀ ಹೆಗ್ಗಡೆಯವರನ್ನು ಶ್ರೀ ವೆಂಕಟ ಸುಬ್ಬರಾಯರು ಅಭಿನಂದಿಸಿದರು. ಕೊನೆಯಲ್ಲಿ ಶ್ರೀ ಆರ್. ಎನ್. ಭಿಡೆಯವರು ಧನ್ಯವಾದಾರ್ಪಣೆಗೈದರು.

ಲೋಕ ಸೇವಾ ಹೈಸ್ಕೂಲು

ಅಳಿಕೆ, ಜೂ 5 ಲೋಕ ಸೇವಾ ಹೈಸ್ಕೂಲಿನ ಶಾಲಾ ಸರಕಾರಕ್ಕೆ ಗುಪ್ತ ಮತದಾನ ನಡೆದು ಶ್ರೀ ಕೆ. ಮಧುಸೂದನ ಭಟ್ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡರು. ತಾ. 2-7-65ರಂದು ಶ್ರೀ ಮಡಿಯಾಲ ನಾರಾಯಣ ಭಟ್ಟರು ಪಾರ್ಲಿಮೆಂಟಿಗೆ ಆಯ್ಕೆಯಾದ ಸ್ಪೀಕರ್ ವ್ಹಿಪ್. ಮುಖ್ಯಮಂತ್ರಿ ಮತ್ತಿತರ ಸಚಿವರಿಗೆ ಪ್ರತಿಜ್ಞಾ ಸ್ವೀಕಾರ ಮಾಡಿಸಿ ಪಾರ್ಲಿಮೆಂಟನ್ನು ವಿಧಿವತ್ತಾಗಿ ಉದ್ಘಾಟಿಸಿದರು.

ಅಳಿಕೆ ತಾ. 6 — ಮಂಗಳೂರಿನ ಗಾಂಧೀ ತತ್ವ ಪ್ರಚಾರಕರಾದ ಶ್ರೀ ಪಿ. ಸದಾಶಿವ ಭಟ್ಟರು ಶ್ರೀ ಯಮ್. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಲೋಕಸೇವಾ ಹೈಸ್ಕೂಲಿನ ಚರ್ಚಾ ಸಭೆಯನ್ನು ತಾ. 6-7-65ರಂದು ಉದ್ಘಾಟಿಸಿದರು. ಶ್ರೀಯುತರು ತಮ್ಮ ಭಾಷಣದಲ್ಲಿ ಮಾತುಗಾರಿಕೆಯ ಮಹತ್ವವನ್ನೂ, ಅದನ್ನು ಕರಗತ ಮಾಡಿಕೊಳ್ಳಬೇಕಾದ ಪ್ರಕ್ರಿಯೆಯನ್ನೂ ಒತ್ತಿ ಹೇಳಿದರು. ಮಾತ್ರವಲ್ಲದೆ ಗಾಂಧೀ ಸ್ಮಾರಕ ನಿಧಿಯ ಉದ್ದೇಶಗಳನ್ನೂ ಅದರ ಕಾರ್ಯಕಲಾಪಗಳನ್ನೂ ವಿದ್ಯಾರ್ಥಿಗಳಿಗೆ ತಿಳಿಯ ಹೇಳಿ, ಗಾಂಧೀಜೀಯವರ ದಿವ್ಯ ಸಂದೇಶಗಳನ್ನು ಸಾರುವ ತತ್ವ ಪ್ರಚಾರಕರಾಗಬೇಕೆಂದು ಕರೆಕೊಟ್ಟರು. ಅಧ್ಯಕ್ಷರ ಭಾಷಣದ ನಂತರ ಶಾಲಾ ನಾಯಕ ಕುಮಾರ ಮಧುಸೂದನನಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಮೊಗವೀರ ವ್ಯವಸ್ಥಾಪಕ ಮಂಡಳಿಯ ವಾರ್ಷಿಕ ಸಾಮಾನ್ಯ ಸಭೆ

ಮುಂಬಯಿ, ಮಂಡಳಿಯ 62ನೇ ವಾರ್ಷಿಕ ಸಾಮಾನ್ಯ ಸಭೆಯು ತಾ 26_6_65 ರಂದು ಮಂಡಳಿಯ ಆಫೀಸಿನಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ ಎಸ. ಕೆ. ಪಡುಬಿದ್ರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಧಾನ ಕಾರ್ಯದರ್ಶಿ ಶ್ರೀ ಯಚ್. ಕೆ. ಪುತ್ರನರು ಸಭಿಕರನ್ನು ಸ್ವಾಗತಿಸಿದರು. ಅಧ್ಯಕ್ಷರು ವರದಿ ವರ್ಷದಲ್ಲಿ ಮೃತರಾದ ಮಂಡಳಿಯ ಸದಸ್ಯರ ಆತ್ಮಗಳಿಗೆ ಚಿರಶಾಂತಿಯನ್ನು ಕೋರುವ ಗೊತ್ತುವಳಿಯನ್ನು ಮಂಡಿಸಲು, ಸರ್ವರ ಮೌನ ಪ್ರಾರ್ಥನೆಯೊಂದಿಗೆ ಅದನ್ನು ಪಾಸು ಮಾಡಲಾಯಿತು. ಮುದ್ರಿತ ವರದಿಯಲ್ಲಿದ್ದ ಲೋಪದೋಷಗಳನ್ನು ಪ್ರಧಾನ ಕಾರ್ಯದರ್ಶಿಯವರು ಸಭಿಕರ ಅವಗಾಹನೆಗೆ ತಂದ ಬಳಿಕ, ಅಧ್ಯಕ್ಷರು ಮಂಡಳಿಯು ಕಳೆದ 62 ವರ್ಷಗಳಲ್ಲಿ ಸಾಧಿಸಿರುವ ಪ್ರಗತಿಯ ಸ್ಥೂಲ ಪರಿಚಯ ಮಾಡುತ್ತಾ, 31-3-65ಕ್ಕೆ ಅಂತ್ಯವಾಗುವ ಮಂಡಳಿಯ ಆಯ—ವ್ಯಯ ಮತ್ತು ಆಸ್ತಿ ವ, ಸೊತ್ತುಗಳ ಪಟ್ಟಿಯನ್ನು ಹಾಗೂ 62ನೇ ವಾರ್ಷಿಕ ವರದಿಯನ್ನೂ ಮಂಜೂರುಗೊಳಿಸುವ ಬಗ್ಗೆ ಸೂಚಿಸಲಾಗಿ, ಶ್ರೀ ಯಚ್. ಯಮ್. ಕುಂದರರ ಅನುಮೋದನೆಯೊಂದಿಗೆ ಸರ್ವಾನುಮತವಾಯಿತು. ಅನಂತರ ಮುಂದಿನ ವರ್ಷಕ್ಕೆ (1965—66) ಶ್ರೀ ಆರ್. ಕೆ. ಕಾರಂತ, ಚಾರ್ಟರ್ಡ್ ಎಕೌಂಟೆಂಟ್, ಇವರನ್ನೇ ಮಂಡಳಿಯ ಲೆಕ್ಕ ಪರಿಶೋಧಕರನ್ನಾಗಿ ನೇಮಿಸುವ ಮತ್ತು ಮಂಡಳಿಯ ವಿದ್ಯಾನಿಧಿಗೆ ಧನ ಸಂಗ್ರಹಿಸಲು ನೆರವಾದವರಿಗೆ ಉಪಕಾರ ಸ್ಮರಿಸುವ ಠರಾವುಗಳನ್ನೂ ಪಾಸು ಮಾಡಲಾಯಿತು.

ಸಭಿಕರಲ್ಲಿ ಶ್ರೀಗಳಾದ ಬಿ. ಎಸ್. ಸಾಲ್ಯಾನ್, ಬಿ. ಎ. ಕರ್ಕೇರ, ಯಂ. ಕೆ. ಕೋಟೆಂಕಾರ್, ಐ. ಪಿ. ಪುತ್ರನ್, ಕೆ. ಟಿ. ಕರ್ಕೇರ, ಲಿಂಗಪ್ಪ ಕಾಂಚನ್ ಮತ್ತು ಎಸ್. ಕೆ. ಮೆಂಡನರು ಮಂಡಳಿಯ ಮುಂದಿನಾಭಿವೃದ್ಧಿಯ ಬಗ್ಗೆ ಸಲಹೆ ಸೂಚನೆಗಳನ್ನಿತ್ತು ಮಾತಾಡಿದ ಬಳಿಕ ಜೊತೆ ಕಾರ್ಯದರ್ಶಿ ಶ್ರೀ ಗೋವಿಂದ ಅಮೀನರು ಉಪಕಾರ ಸ್ಮರಣೆ ಮಾಡಿದರು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. E. P. 35/65.
in O. S. 583/55

ಕೊರಪೊಳು ಯಾನೆ ಉಮ್ಮು ಹೆಂಗಸು— ಅರ್ಜಿದಾರಳು.

and

ಚೆಲುವಮ್ಮ ಹೆಂಗಸು— ಎದ್ರಿರು

1. ಚೆಲುವಮ್ಮ, ಕುಂಞಾಹೆಂಗ್ಸಿನ ಮಗಳು
2. ಚಂದ್ರ ಪೂಜಾರಿ } ಚೆಲುವಮ್ಮ ಹೆಂಗ್ಸಿನ ಮಕ್ಕಳು
3. ಕಾಂತಪ್ಪ ಪೂಜಾರಿ }

ಗರ್ಡಾಡಿ ಗ್ರಾಮದ ಕೊಡ್ದಂತ್ರೋಡಿ ಎಂಬಲ್ಲಿರುವವರಿಗೆ.

ಅರ್ಜಿದಾರಳು ನಿಮ್ಮ ಮೇರೆ ಬಹು ಐವೇಜಿಗೆ ತೆಗೆದ ಅಮಲ್ದಾರಿಯ ನಿಮ್ಮ ಹಾಜರಾತಿಗೆ ತಾ. 22.7.1965ಕ್ಕೆ ಇಟ್ಟಿದೆ. ಆ ದಿವಸ ನೀವು ಸ್ವತಹಾ ಯಾ ವಕೀಲರ ದ್ವಾರವಾಗಲೀ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ನಿಮ್ಮನ್ನು ಶಿಕ್ಷ್ಯಮಾಡಿ ಮುಂದಿನ ತಖ್ತಿಯಿಂದ ತೀರ್ಮಾನಿಸಲಾಗುವುದು. ಎಂದು ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಯದೆ.

(Sd) ಯನ್. ಜೆ. ಕದಂಬ
Advocate for Petitioner.
ಬೆಳ್ತಂಗಡಿ 8-7_1965.

ಮಹಾವೀರ ಕಾಲೇಜು ಉದ್ಘಾಟನಾ ಸಮಾರಂಭ

ಮಣಿಪಾಲ, ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಸಹಕಾರದಿಂದ ಮೂಡಬಿದ್ರೆಯ ಉತ್ಸಾಹಿಗಳು ರೂಪಿಸಿದ ಮೂಡಬಿದ್ರೆ ಮಹಾವೀರ ಕಾಲೇಜಿನ ಉದ್ಘಾಟನಾ ಸಮಾರಂಭವು ತಾ 9ರಂದು ಸಮಾಜ ಮಂದಿರದಲ್ಲಿ ಫುಡ್ ಕಾರ್ಪೋರೇಶನ್ ಅಧ್ಯಕ್ಷ ಶ್ರೀ ಟಿ. ಎ. ಪೈಯವರಿಂದ, ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈಗಳು ಉದ್ಘಾಟಿಸುತ್ತಾ, ಸ್ವಾವಲಂಬನ, ಸ್ವಾಭಿಮಾನ ಇಲ್ಲದೆ ರಾಷ್ಟ್ರವು ಏಳಿಗೆ ಹೊಂದಲಾರದು ಎಂದು ನುಡಿದರು. ಮಾನವತೆಯನ್ನು ಉದ್ಧರಿಸಿದ ಮಹಾವೀರನ ನಾಮಕರಣದಿಂದ ಪ್ರಾರಂಭವಾದ ಈ ಕಾಲೇಜು ಮಹಾವೀರರ ನಿರ್ವಾಣಕ್ಕೆ ಕಾರಣವಾಗಲಿ ಎಂದು ಹಾರೈಸಿದರು.

ಪ್ರಾರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಮಹಾವೀರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀ ಎಂ. ಕೆ. ದೇವರಾಜರು ಸ್ವಾಗತಿಸಿದರು. ಅಲ್ಲದೆ, ಕಾಲೇಜಿನ ಸ್ಥಾಪನೆಗೆ ಕಾರಣಪುರುಷರಾದ ಡಾ| ಪೈಗಳ ಭಾವಚಿತ್ರ ಅನಾವರಣ ಮಾಡಿದರು. ಸಂಘದ ಜತೆ ಕಾರ್ಯದರ್ಶಿ ಶ್ರೀ ಬಿ. ವಾಸುದೇವ ಪೈಯವರು ಕಾಲೇಜು ನಿಧಿಗೆ ಸಹಾಯ ಮಾಡಿದವರ ಹೆಸರುಗಳನ್ನು ಓದಿದರು.

ಡಾ| ಶಿವರಾಮ ಕಾರಂತ, ಪ್ರಿನ್ಸಿಪಾಲ್ ಕು. ಶಿ. ಹರಿದಾಸ ಭಟ್, ಶ್ರೀ ಕೆ. ಬಾಸುದೇವ ಕಾಮತ್ ಮತ್ತು ಡಾ| ಎಂ ರಾಯಪ್ಪ ಕಾಮತರು ಭಾಷಣ ಮಾಡಿ, ಕಾಲೇಜಿಗೆ ಶುಭ ಕೋರಿದರು. ಶ್ರೀ ಎಸ್. ಎನ್. ಮೂಡಬಿದಿರೆಯವರು ಸಂಘದ ಚಟುವಟಿಕೆಗಳನ್ನು ಸ್ಥೂಲವಾಗಿ ವಿವರಿಸಿದರು. ಕೊನೆಯಲ್ಲಿ ಶ್ರೀ ಎಸ್. ಡಿ. ಸಾಮ್ರಾಜ್ಯ ಎಂ. ಎಲ್. ಎ. ಯವರು ವಂದನಾರ್ಪಣೆಗೈದರು.

ಶ್ರೀ ಆರ್. ಎಸ್. ಮಾಧವರಾಯರು ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟಿರುವರು

ಸ್ವಾತಂತ್ರ್ಯ ದಿನೋತ್ಸವ
ವಿಶೇಷ ಸಂಚಿಕೆಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಸಹಕರಿಸಿರಿ.

ವಿಣಾನು ಮರಳಿ ನೀರಿಗಿಳಿದಾಗ

(ಎರಡನೇ ಪುಟದಿಂದ)

ಒಂದಾದರೇ, ಹೆಣ್ಣು ಲಕ್ಷ ಮುಂತಾದ ಉಪನಾಮೇಯಗಳಿಂದ ಹೊಗಳಿ ದೂರವಿಟ್ಟ ಕಾಲ ಇನ್ನೊಂದು. ತ್ರಿಶೂಲದಿಂದ ಆಸೆಯನ್ನು ಹಿಡಿತದಲ್ಲಿಟ್ಟು ಹಾಗೆ, ಸತಿ ವಿಧವಾ ಮುಂತಾದ ಪದ್ಧತಿಗಳಿಂದ ಬಲಾತ್ಕಾರದಿಂದ ಹೆಣ್ಣನ್ನು ತುಳಿದಿದ್ದಾರೆ. ಹೆಣ್ಣು ಮನೆಯಲ್ಲಿ ಕೊಳೆಯಬೇಕೆಂಬುದೆ ಇವರೆಲ್ಲರ ಆಕಾಂಕ್ಷೆ. ಇವರಿಗೆ ದುಡ್ಡಿನ ಅವಶ್ಯಕತೆ ಇದ್ದಾಗ ನಮ್ಮನ್ನು ದುಡಿಯಲು ಬಿಡುತ್ತಾರೆ. ಅದು ತೀರಿದ ನಂತರ ನಾವು ಕೆಲಸಕ್ಕೆ ಹೋದರೆ ಅವರಿಗೆ ಅಪಮಾನ ಅವರ ಘನತೆಗೆ ಕುಂದು. ಹೆಣ್ಣು ಸಂಪಾದಿಸಿದರೆ ಅವಳಿಗೆ ಸ್ವತಂತ್ರವಾದ ವಿಚಾರಶಕ್ತಿ ಬರುತ್ತದಲ್ಲ, ಅವನ್ನು ಗಂಡಸು ಹೇಗೆ ಸಹಿಸಿಯಾನು? ಹೆಣ್ಣು ಸದಾ ಗಂಡಿನ ಅಡಿಯಾಳಾಗಿರಬೇಕು. ಅವಳು ಎಷ್ಟೇ ಆದರೂ ಅವನಿಗಿಂತ ಅಲ್ಪಳು. ಗಂಡು ಎಷ್ಟೇ ನಾಗರಿಕನಾದರೂ ಅವನ ಮನಸ್ಸಿನಿಂದ ಈ ಭಾವನೆಗಳು ಅಳಿಸಲ್ಪಟ್ಟಿರುವುದಿಲ್ಲ. ಶಕ್ತಿಯೇ ಅವನ ದೃಷ್ಟಿಯಲ್ಲಿ ಎಲ್ಲಕ್ಕಿಂತ ಮಿಗಿಲು. ಆದರೆ ಇವತ್ತು ಆ ದೈಹಿಕ ಶಕ್ತಿಯ ಬೆಲೆಯೇನು? ವಿಜ್ಞಾನ ಅದರ ಅಡಿಗಲ್ಲನ್ನು ಅಲ್ಲಾಡಿಸದೇ ಅನ್ನುವ ಅರಿವೆಯೇ ಇಲ್ಲ ಅವನಿಗೆ. ಎಲ್ಲಾದರೂ ಹೋಗಲಿ, ಈ ವಿಚಾರಗಳೆಲ್ಲಾ ಈಗೇಕೆ ಒಟ್ಟಿನಲ್ಲಿ ಸದ್ಯಕ್ಕೆ ನಾನು ಈ ಕೆಲಸವನ್ನು ಬಿಡಲು ಇಚ್ಛಿಸುವುದಿಲ್ಲ. ಹಾಗೆಯೇ ಅವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ.

ನನಗೆ ದುಡ್ಡಿನ ಅವಶ್ಯಕತೆ ಇತ್ತು. ಅದಕ್ಕಾಗಿ ಇವಳನ್ನು ಕೆಲಸಕ್ಕೆ ಸೇರಿಸಿದೆ. ಆದರೆ ಆ ಅವಶ್ಯಕತೆ ತೀರಿತೆ? ಇಲ್ಲ. ಮೊದಲ ಸಲ ಸಂಬಳ ಬಂದಾಗ ಸೀರೆಯಾಯಿತು. ದುಡಿತದ ಮೊದಲನೆಯ ಫಲದಿಂದ ಜ್ಞಾಪಕಾರ್ಥವಾಗಿ ಏನಾದರೂ ತೆಗೆದುಕೊಳ್ಳಬೇಕೆಂದು ಅವಳ ಸಂಬಳ ಪೂರ್ತಿ ಖರ್ಚು ಮಾಡಿ ಒಂದೇ ಸೀರೆ ಕೊಂಡಳು. ಹೋಗಲಿ, ಹೆಣ್ಣಿನ ಆಕಾಂಕ್ಷೆ, ಅಲ್ಲದೆ ಅವಳ ದುಡಿತದ ಬೇಡಿಕೆ ಎಂದು ಸುಮ್ಮನಾದೆ. ಸರಿ, ಎರಡನೆಯ ತಿಂಗಳ ಸಂಬಳದ ಹೊತ್ತಿಗಾಗಲೇ ಇನ್ನೊಂದು ಕಾದಿತ್ತು—ಕೈಗಡಿಯಾರ. ಅದಿಲ್ಲದೆ ಆಫೀಸಿಗೆ ಹೋಗುವುದೇ? ಸಹೋದ್ಯೋಗಿಗಳು ಏನೆಂದಾರು? ಸರಿ, ಅದೂ ಆಯಿತು. ಮುಂದೆ ತಿಂಗಳಿಗೆ ಒಂದರಂತೆ ಅವಳ ಅಲಂಕರಣೆಗಳ ಬಳಗ ಬೆಳೆಯಲು ಪ್ರಾರಂಭವಾಯಿತು. ನನಗೆ ಅವಳ ಸಂಬಳದಿಂದ ಆದ ಉಪಯೋಗವೇನು? ಏನೇ, ದೇವರು ಕಣ್ಣು ಬಿಟ್ಟು ನೋಡಿದ. ಅವಳ ಸಂಬಳ ದ ಕೈ ಕಾಯುವುದನ್ನು ತಪ್ಪಿಸಿದ. ಅವಳನ್ನು ಕೆಲಸಕ್ಕೆ ಸೇರಿಸಿದ ಉದ್ದೇಶ್ಯ ಸಫಲದ ಮೇಲೆ ಅವಳ ಕೆಲಸವನ್ನೇಕೆ ಮಾಡಬೇಕು? ಇತ್ತಕಡೆ ತಾಯಿಗೂ ವಯಸ್ಸಾಯಿತು. ಇವಳು ಕೆಲಸವನ್ನು ಬಿಟ್ಟರೆ ಅಮ್ಮನಿಗೆ ಸಹಾಯವಾದರೂ ಆದೀತು. ಕೆಲಸಕ್ಕೆ ಸೇರುವುದಿಲ್ಲ ಎಂದು ಹಠ ಹಿಡಿದಿದ್ದವಳನ್ನು ನಾನೇ ಕೆಲಸಕ್ಕೆ ಸೇರಿಸಿ ತಪ್ಪು ಮಾಡಿದೆ.

ಸಾದೆ ಸೀಳಲು ಹೋಗಿ ಬೆರಳನ್ನು ಕತ್ತರಿಸಿಕೊಂಡ ಹಾಗಾಯಿತು ನನ್ನ ಪರಿಸ್ಥಿತಿ. ಮದುವೆಯಾದವರಿಗೆಲ್ಲಾ ನಾನು ಹೇಳುವುದೇನೆಂದರೆ, "ದಯವಿಟ್ಟು ನಿಮ್ಮ ಹೆಂಡತಿಯರನ್ನು ಕೆಲಸಕ್ಕೆ ಸೇರಿಸಬೇಡಿ, ಹಿಟ್ಟೋ ಸಪ್ಪೋ, ಅಂಬಲಿಯೋ ಗಂಜಿಯೋ, ಯಾವುದಾದರೂ ನಡೆದೀತು". ಆದರೆ ನಿಮ್ಮ ಹೆಂಡತಿಯ ಸಂಬಳದಿಂದ ನಿಮ್ಮ ಕಷ್ಟಕಾರ್ಪಣ್ಯಗಳು ಕಡಿಮೆಯಾಗುತ್ತವೆ ಅನ್ನುವ ಭ್ರಮೆ ಖಂಡಿತ ಬೇಡ. ಹೆಣ್ಣಿಗೆ ದುಡ್ಡಿನ ರುಚಿಯನ್ನು ತೋರಿಸುವುದು ಹುಲಿಯ ಮರಿಗೆ ರಕ್ತದ ರುಚಿಯನ್ನು ತೋರಿಸಿದಂತೆ. ಏನು! ಇವನು ಹಳೆಯ ಕಾಲದವನಂತೆ ಮಾತಾಡುತ್ತಾನೆ ಎಂದು ನೀವು ಕೇಳಬಹುದು. ನೀವು ದಾಂಪತ್ಯದ ಕೊಂಚವಾದರೂ ಸುಖವನ್ನು ಅನುಭವಿಸಬೇಕೆಂದಿದ್ದರೆ ನನ್ನ ಹಿತವಚನವನ್ನು ಕೇಳಿ. ನನ್ನ ಮದುವೆಯಾದ ಹೊಸತರಲ್ಲಿ ಬಡತನದಿಂದ ನರಳುತ್ತಿದ್ದೆ. ಆದರೆ ಆ ದಿನದ ಆನಂದ ನನಗೆ ಇಲ್ಲ. ಆಫೀಸಿನಿಂದ ಬರುವ ಹೊತ್ತಿಗೆ ಮನೆಯ ಬಾಗಿಲಿನಲ್ಲಿಯೇ ಕಾದಿರುತ್ತಿದ್ದಳು ಗೌರಿ ನಗುಮುಖದಿಂದಲೂ, ಒಪ್ಪ ಓರಣಗಳಿಂದ ಕೂಡಿದ ಶೃಂಗಾರದಿಂದಲೂ ಸ್ವಾಗತಿಸುತ್ತಿದ್ದಳು. ಆ ಸ್ವಾಗತಕ್ಕೆ ಸಮವಾದ ಆನಂದ ಯಾವುದಿದೆ? ಮನುಷ್ಯನ ಜೀವನದಲ್ಲಿ. ಕಷ್ಟಪಟ್ಟು ಕೆಲಸಮಾಡಿಕೊಂಡು ಮನೆಗೆ ಬಂದಾಗ ಗಂಡು ಬೇಕಾದ್ದೇನು? ಹೆಣ್ಣಿನ ಒಂದು ಮಂದಸ್ಮಿತ. ಅದರ ಬೆಲೆಯನ್ನು ಯಾರೂ ಕಂಡು ಹಿಡಿದಿಲ್ಲ. ಯಾವ ವಿಜ್ಞಾನವೂ ಕಂಡು ಹಿಡಿಯಲಾರದು. ಹೆಣ್ಣಿನ ಮಂದಹಾಸವೆನ್ನುವ ಔಷಧಿ ಗಂಡಿನ ಆಯಾಸವನ್ನು ಒಂದೇ ನಿಮಿಷದಲ್ಲಿ ಹೋಗಲಾಡಿಸಿ ಬಿಡುತ್ತದೆ. ಅದು ಬಿಟ್ಟು, ನಿಮ್ಮ ಹೆಂಡತಿಯೂ ಕೆಲಸ ಮಾಡಿಕೊಂಡು ನೀವು ಬಂದ ಒಂದು ಗಂಟೆಯ ಮೇಲೆ ಕಾಲೆಳೆಯುತ್ತಾ ಬಂದರೆ ಅವಳ ಆ ಮುಖವನ್ನು ನೋಡಲು ಯಾವ ಗಂಡ ಬಯಸಿಯಾನು?

ಗೌರಿ ಮೊದಲು ಹೇಗಿದ್ದವಳು ಈಗ ಹೇಗೆ ಆಗಿದ್ದಾಳೆ. ನಮ್ಮ ಧರ್ಮದಲ್ಲಿ ಅವಳಿಗೆ ನಂಬಿಕೆ ತಪ್ಪುತ್ತಿದೆ. ಅವಳ ಹಣೆಯ ಮೇಲಿನ ಕುಂಕುಮ ಕೃಷ್ಣಪಕ್ಷದ ಚಂದ್ರನಂತೆ ದಿನೇ ದಿನೇ ಕ್ಷೀಣಿಸುತ್ತಿದೆ. ಉಬ್ಬುಸದ ತೋಳು. ದಿನ ಕ್ರಮೇಣ ನಾಚಿ ಹಿಂದಕ್ಕೆ ಸರಿಯುತ್ತಿದೆ. ಅವಳ ಜೊತೆಗಾತಿಯರೋ! ರಾಮ! ರಾಮ! ಆ ರೀಟಾ, ಆ ಆಂಡಾಳ್—ಪರಮಾತ್ಮನೇ ಕಾಪಾಡಬೇಕು ಇವರುಗಳನ್ನು. ಅವರು ವೇಷಭೂಷಣಗಳೇ? ದೊಂಬರು ಹಾಕುವ ವೇಷವಿದ್ದ ಹಾಗಿರುತ್ತದೆ. ಅವರ ಇವಳ ಅಷ್ಟು ಮೈತ್ರಿಯರು. ಈಚೆಗೆ ನಾನು ಕರೆದಾಗ ಒಂದು ದಿನವಾದರೂ ಸಿನೆಮಾಗೆ ಬಂದಿದ್ದಾಳೆಯೆ? ಇಲ್ಲ ರಜಾದ ದಿವಸವೂ ಅವಳಿಗೆ ಆಫೀಸ್. ಅವಳನ್ನು ಭೇಟಿಮಾಡುವುದೇ ನನಗೆ ಕಷ್ಟವಾಗಿದೆ. ಅವಳ ಸ್ನೇಹಿತೆಯರೊಂದಿಗೆ ವಾರಕ್ಕೊಮ್ಮೆಯಾದರೂ ಸಿನಿಮಾ ನೋಡದೆ ತಪ್ಪಿಸುತ್ತಾಳೆಯೆ? ಅಂತೂ ನನಗೂ ಬಹಳ ರೋಸಿಹೋಗಿದೆ. ಅವಳಿಗೆ ಕೆಲಸ ಬಿಡಲಿಕ್ಕೆ ಬಹಳ ಹೇಳುತಿದ್ದೇನೆ. ಅವಳು ಕೆಲಸ ಬಿಟ್ಟರೆ ಅಮ್ಮನಿಗೂ ಸಹಾಯವಾದಹಾಗಾಯಿತು. ಅಲ್ಲದೆ ನನ್ನ ಮನಸ್ಸಿಗೂ ನೆಮ್ಮದಿ. ಆದರೆ ಅವಳು ನನ್ನ ಮಾತು ಕೇಳಬೇಕಲ್ಲ?

"ಇನ್ನೂ ಸ್ವಲ್ಪ ದಿವಸ ತಡಿ. ಈಗ ಹೇಗೂ ಎಂಟು ತಿಂಗಳಾಯಿತು. ಕೈಗೊಂದು ಗೊಂಬೆ ಬಂದರೆ ತನ್ನಷ್ಟಕ್ಕೆ ತಾನೇ ಕೆಲಸವನ್ನು ಬಿಡುತ್ತಾಳೆ, ಎನ್ನುತ್ತಾರೆ ನನ್ನ ಸ್ನೇಹಿತರು. ಅದು ನಿಜವೇ ಅನ್ನಿ. ಗಂಡ, ಮಗು, ಆಫೀಸು ಎಲ್ಲೂ ಹೇಗೆ ನಡೆದೀತು?

ನಾನೇನು ಇನ್ನು ಮೇಲೆ ಒಲವಂತ ಮಾಡುವುದಿಲ್ಲ. ನನಗೆ ಒರುತ್ತಿರುವ ಆದಾಯ ಹೇಗೂ ನನಗೆ ಸಾಕಾಗುತ್ತದೆ. ಅಂತೂ ಒಂದು ಒಳ್ಳೆಯ ಮನೆಯನ್ನು ಮಾಡಿದೆ. ಅದನ್ನೂ ಸಹ ಸಜ್ಜುಗೊಳಿಸಿದೆ. ಇದೇ ರೀತಿ ನನ್ನ ಕೈ ನಡೆದರೆ ಏನು ತಾನೇ ಮಾಡಲು ಸಾಧ್ಯವಿಲ್ಲ? ಎಲ್ಲಾ ದೈವೇಚ್ಛೆ. ಸದ್ಯದಲ್ಲಿ ಅವಳ ಕೆಲಸ ಒಂದೇ ನನ್ನ ಮನಸ್ಸಿಗೆ ಬೇಸರ ತಂದಿರುವ ಸಮಾಚಾರ. ನೋಡೋಣ. ಕಾದು ನೋಡುತ್ತೇನೆ.

೦ ೦ ೦

ಈಗ ಈ ಆಂಡಾಳಳ ಗತಿಯೇನು? ಈ ಆಫೀಸರ್ ಅವಳನ್ನು ಹಾಳು ಮಾಡಿ ಬಿಟ್ಟನಲ್ಲ. ಇನ್ನೂ ಚಿಕ್ಕ ಹುಡುಗಿ, ಮದುವೆಯಿಲ್ಲಾ. ಈ ವಿಚಾರ ತಿಳಿದರೆ ಯಾರು ತಾನೇ ಮದುವೆಯಾಗುತ್ತಾರೆ? ನಾನೂ ಕೆಲವೊಮ್ಮೆ ಅವಳಿಗೆ ಎಚ್ಚರಿಸುತ್ತಿದ್ದೆ. ಆದರೆ ಅವನು ಮೆತ್ತಗೆ ಅವಳನ್ನು ಬುಟ್ಟಿಗೆ ಹಾಕಿಕೊಂಡೇ ಬಿಟ್ಟ. ಅವನ ಹಾಳು ವಕ್ರ ದೃಷ್ಟಿ ನನ್ನ ಮೇಲೆ ಬಿದ್ದಿದೆ. ಮೊನ್ನೆ ನಾನು ಫೈಲ್ ಕೊಟ್ಟಾಗ ಕೈ ಹಿಡಿಯುವುದೆ? ನಾನು ತಕ್ಷಣ ಬಿಡಿಸಿಕೊಂಡು ಓಡಿ ಬಂದೆ. ಮೂರು ದಿನ ಜ್ವರದಿಂದ ಮಲಗಿದೆ. ಇಂತಹ ಘಟನೆಗಳಿಂದಲೇ ಮರ್ಯಾದಸ್ಥ ಹೆಣ್ಣುಹೆಂಗಸರು ಕೆಲಸಕ್ಕೆ ಬರದಂತಾಗಿದೆ. ಆ ಹಾಳು ರೀಟಾ ನೋಡಿ, ಏನುದ್ಯೋಗಕ್ಕಾಗಿ? ಆ ಮ್ಯಾನೇಜರ್ ಜತೆ ಓಡಿಯಾಡಿಕೊಂಡಿದ್ದಾಳೆ! ಸ್ವಲ್ಪವಾದರೂ ನಾಚಿಕೆಯಿಲ್ಲ, ಘನತೆಯಿಲ್ಲ, ಗಾಂಭೀರ್ಯವಿಲ್ಲ. ಇವರೆಲ್ಲಾ ನೋಡುವುದಕ್ಕೆ ಹ್ಯಾಗಿದ್ದಾರೆ? ಗೋಮುಖವ್ಯಾಘ್ರಗಳು. ಈ ಆಫೀಸರುಗಳು ಹೆಂಗಸರು ಕೆಲಸಕ್ಕೆ ಬರುವುದು ತಮ್ಮ ಸ್ವಂತ ಉಪಯೋಗಕ್ಕೆ ಎಂದುಕೊಂಡಿದ್ದಾರೆ. ಇವರುಗಳು ಹಲ್ಲು ಕಟ್ಟಿಸಿಕೊಂಡಿದ್ದಾರೆ. ಇರುಗಳ ಮಕ್ಕಳಿಗೆ ಆಗಲೇ ಅರ್ಧ ಡಜನ್ ಮಕ್ಕಳಾಗಿವೆ. ಆದರೆ ಇವರುಗಳಿಗಿನ್ನೂ ಕನ್ಯೆಯರು ಬೇಕು. ಅಬ್ಬ! ಇವರ ಸಂಗಮದ ಮಟ್ಟವನ್ನು ನೋಡಿ. ಥೂ, ಇವರ ಜನ್ಮವನ್ನು ಸುಡಬೇಕು, ಇಷ್ಟೆಯೇ, ಇವರ ವ್ಯಭಿಚಾರವಿಯೇ ಇಷ್ಟು ಅಯಿಸಿಯೇನು. ಇವರುಗಳಿಗೆ ಒಂದು ಪಾಠವನ್ನು ಕಲಿಸಿಯೇನು. ಆದರೆ ಮನೆಯ ಕಡೆ ಒತ್ತಡ ಜಾಸ್ತಿಯಾಗಿದೆ. ಅತ್ತೆಯವರಿಗೆ, ವಯಸ್ಸಾಯಿತು. ಮಗು, ಮೀನಾಕ್ಷಿಯನ್ನು ನೋಡಿಕೊಳ್ಳುವುದಕ್ಕಾಗುವದಿಲ್ಲ ಎನ್ನುವ ದಿನನಿತ್ಯದ ಅತ್ತೆಯವರ ಗೋಳಿದ್ದೇ ಇದೆ. ಅಲ್ಲದೆ ಅವರಿಗೂ ನಾನು ಕೆಲಸ ಮಾಡುವುದು ಇಷ್ಟವಿಲ್ಲ, ಹಾಳಾಗಿ ಹೋಗಲಿ, ಕೆಲಸಕ್ಕೆ ತಿಲಾಂಜಲಿಯನ್ನು ಕೊಟ್ಟೇ ಬಿಡುತ್ತೇನೆ.

೦ ೦ ೦

ಮದುವೆಯಾದ ಹೊಸದರಲ್ಲಿ ಸಾಲಂಕೃತಳಾಗಿ, ಕಾತುರಳಾದ ನೇತ್ರದಿಂದ ಕೂಡಿ, ತಲೆಬಾಗಿಲಿನಲ್ಲಿ ಹೇಗೆ ನಿಂತಿರುತ್ತಿದ್ದಳೋ ಇಂದೂ ಹಾಗೆಯೇ ಗಂಡನಿಗಾಗಿ ಎದುರು ನೋಡುತ್ತಾ ನಿಂತಿದ್ದಾಳೆ ಗೌರಿ. ಐದು ಗಂಟೆಯಾದ ಮೇಲೆ ಒಂದೊಂದು ಗಳಿಗೆಯೂ ಒಂದೊಂದು ಯುಗವಾದಂತಾಗಿದೆ ಅವಳಿಗೆ. ಸಂತೋಷದ ಸುದ್ದಿಯನ್ನು ಹೇಳಿ ಅವನ ನಗುಮುಖವನ್ನು ನೋಡಬೇಕು, ಬಹಳ ದಿವಸಗಳಿಂದ ಇದ್ದ ಸಿಡುಕನ್ನು, ಅಸಂತೋಷವನ್ನು ಹೋಗಲಾಡಿಸಬೇಕು, ಎಂದು ನಿರ್ಧರಿಸಿ ನಿಂತಿದ್ದಾಳೆ ಗೌರಿ. ಆರು ಗಂಟೆಯಾದರೂ ಬರಲಿಲ್ಲ. ಅವಳಿಗೆ ಬಹಳ ನಿರಾಶೆಯಾಯಿತು. ಕಡೆಗೆ ಎಂಟೂಕಾಲು ಗಂಟೆಗೆ ಮನೆಗೆ ಬಂದ ಚೆನ್ನಕೇಶವಯ್ಯ. ಎಂದಿಗಿಂತಲೂ ತುಂಬಾ ಬಳಲಿ ಹೀನವಾಗಿದ್ದ ಅವನ ಮುಖವನ್ನು ನೋಡಿ ಮನಸ್ಸಿನಲ್ಲಿಯೇ ನಕ್ಕಳು ಗೌರಿ. ಇನ್ನು ಮುಂದೆ ಆ ನೋವು ಇರಲಿಲ್ಲ, ಬಿಡುವುದಿಲ್ಲ ಎಂದುಕೊಂಡಳು. ಅವನು ಕಾಫಿಯನ್ನು ಕುಡಿಯುವ ವರೆವಿಗೂ ಹೇಗೋ ಸುಮ್ಮನಿದ್ದಳು.

"ನಾನು ನಿಮ್ಮ ಮುಖವನ್ನು ನೋಡಲಾರೆ, ಸ್ವಲ್ಪ ನಗಿ".

"ಸಾಕು ಸುಮ್ಮನಿರೆ ನಿನ್ನ ಹಾಸ್ಯ.

"ಹೋಗಿ ಕನ್ನಡಿ ನೋಡಿಕೊಳ್ಳಿ. ದಮ್ಮಯ್ಯ ಸ್ವಲ್ಪ ನಗಿ. ನಾನು ಇನ್ನು ಮೇಲೆ ಕೆಲಸಕ್ಕೆ ಹೋಗುವುದಿಲ್ಲ. ಕೆಲಸಕ್ಕೆ ರಾಜೀನಾಮೆಯಿತ್ತಿದ್ದೇನೆ. ಇನ್ನು ನನ್ನ ಕೆಲಸ ನಿಮ್ಮನ್ನು ರಾಟೆಗೆ ತೆಗೆದುಕೊಳ್ಳುವುದೇ ಆಗಿದೆ."

"ಆ! ಏನು, ರಾಜೀನಾಮೆ ಕೊಟ್ಟೆಯ ಗೌರಿ?" ಬಹಳ ಗಾಬರಿಯಿಂದ ಕೇಳಿದ ಚೆನ್ನಕೇಶವಯ್ಯ.

"ಹೌದೂರಿ. ಯಾಕೆ, ಇಷ್ಟು ದಿವಸ ನೀವೇ ಒತ್ತಾಯಪಡಿಸುತ್ತಿರಲಿಲ್ಲವೆ? ಇಂದು ರಾಜೀನಾಮೆ ಮೇಲಿನ ಆಫೀಸರಿಂದ ಒಪ್ಪಿಗೆಯಾಗಿ ಬಂತು."

"ಗೌರಿ, ಎಂತಹ ಕೆಲಸ ಮಾಡಿಬಿಟ್ಟೆ! ಒಮ್ಮೆ ನನ್ನನ್ನು ಕೇಳಬಾರದಾಗಿತ್ತೆ? ನೀನಾದರೂ ಊರುಗೋಲಾಗುವಿ ಎಂದಿದ್ದೆ. ನೀನು ಎಚ್ಚರಗೊಳಿಸಿದರೂ ನಾನು ಎಚ್ಚರಗೊಳ್ಳಲಿಲ್ಲ ನನ್ನ ಅತಿಯಾಸೆಯ ಫಲ ನನ್ನ ಕೆಲಸವೂ ಹೋಯಿತು ಗೌರಿ." ಎಂದವನೇ—ಬಿಳಿಚಿಕೊಂಡ ಮುಖದಿಂದ ಕುರ್ಚಿಗೆ ಒರಗಿದ.

ಮೀನು ಮರಳಿ ನೀರಿಗಿಳಿದಾಗ ಕೆರೆಯೇ ಆರಿ ಹೋಗಿತ್ತು!

READ & ADVERTISE IN NAVAYUGA WEEKLY

NAVAYUGA 15-7-1965
Registered with the Registrar
of News Papers for India
under No. F. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೫-೭-೬೫ರಿಂದ ೨೧-೭-೬೫ರ ವರೆಗೆ

೧ ಮೇಷ

ಜನ್ಮಪತಿಯಾದ ಅಂಗಾರಕನು ಉಚ್ಚಸ್ಥಾನದಲ್ಲಿದ್ದು ಪೂರ್ಣದೃಷ್ಟಿಯಿಂದ ನಿಮ್ಮ ರಾಶಿಯನ್ನು ನೋಡುತ್ತಿದ್ದು ಧನಲಾಭ ಸ್ಥಾನಗಳಲ್ಲಿ ಗುರುಶನಿಗಳು ಅನುಕೂಲರಾಗಿರುವ ಕಾರಣ ಇಂದು ನಿಮ್ಮ ಆರ್ಥಿಕ ಪರಿಸ್ಥಿತಿಯು ಬಹಳೇ ಸುಧಾರಿಸಲಿದೆ. ಎಂತಹ ಕಾರ್ಯವೂ ನಿಮಗೆ ಅಶಕ್ಯವೆನಿಸದು. ಕೆಲವೊಂದು ಗೃಹಶಾತ್ರವಯಗಳು ನಿಮ್ಮ ಮನೋನೆಮ್ಮದಿಗೆ ಭಂಗ ತರಲಿವೆ. ಸೋದರರೊಳು ಮತ್ತು ಮಕ್ಕಳ ಕೂಡೆ ಮತಭೇದದಿಂದಾಗಿ ಮನಸ್ತಾಪ ಹುಟ್ಟೀತು. ವಾರಾದಿಯ ೪ ದಿನಗಳು ಅನುಕೂಲಕರ.

೨ ವೃಷಭ

ನಿಮ್ಮ ಆರ್ಥಿಕ ಪರಿಸ್ಥಿತಿಯು ಇಂದು ಸುಧಾರಿಸಲಿದೆ. ಪರಿಶ್ರಮಕ್ಕೆ ತಕ್ಕ ಪ್ರತಿಫಲ ಲಭಿಸುವುದರಿಂದ ದಿನಯಾಪನೆಯು ಸುಗಮವಾದೀತು. ಸಾಂಸಾರಿಕ ತಾಪತ್ರಯಗಳಿಂದಲೂ ಮುಕ್ತರಾದೀರಿ. ಶ್ರಮಜೀವಿ ವರ್ಗಕ್ಕೆ ಅಧಿಕಾರಿಗಳ ಕೂಡೆ ಕಲಹ ವಿರೋಧ ವುಂಟಾಗಲಿದೆ. ಕಫವಾತ ದೋಷದಿಂದ ಆರೋಗ್ಯವು ಸರಿಯಿರಲಾರದು. ಸದ್ಯ ಪ್ರತಿಪಕ್ಷಗಳ ಕೈಯೇ ಮೇಲಾಗುವ ಸಂಭವವಿರುವುದರಿಂದ ಹೊಸ ಕಾರ್ಯಗಳಿಗೆ ಕೈ ಹಾಕಬೇಡಿರಿ. ತಾ. 16ರಿಂದ 20ರ ವರೆಗಿನ ದಿನಗಳು ಸುಖಲಾಭದಾಯಿಗಳಾಗಿವೆ.

೩ ಮಿಥುನ

ದಿನದಿಂದ ದಿನಕ್ಕೆ ಬಿಕ್ಕಟ್ಟು ಹೆಚ್ಚುತ್ತಿರುವುದು. ಸ್ವಜನ ವಿರೋಧ ಶತ್ರುಜನರ ಕಾಟದಿಂದಾಗಿ ಯಾವ ಭಾಗದಲ್ಲೂ ನೀವು ನಿರೀಕ್ಷಿಸಿದ ಗುರಿಯನ್ನು ಸೇರಲಾರಿರಿ. ವಿಶೇಷತಃ ಭೂಸಂಬಂಧವಾದ ವ್ಯವಹಾರಗಳಲ್ಲಿ ಪ್ರತಿಪಕ್ಷದವರಿಂದ ಪರಾಭವ ಹೊಂದಲಿರುವಿರಿ. ಅನಿರೀಕ್ಷಿತ ಪರ್ಯಟನದಿಂದಾಗಿ ಕಷ್ಟನಷ್ಟಗಳೂ ಸಂಭವಿಸಲಿವೆ. ಆತ್ಮೀಯರ ಮರಣ ವಿಯೋಗ ದುಃಖ ತಪ್ತರಾದ ನಿಮಗೆ ವಾರಾಂತ್ಯದ 3 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾವು.

೪ ಕರ್ಕಟ

ವಿಘ್ನೇಶನಿಂದ ಎಷ್ಟೇ ವಿಘ್ನವಿಡ್ಡೂರಗಳು ಬಂದರೂ ನೀವು ಆರಂಭಿಸಿದ ಕಾರ್ಯವನ್ನು ಕೊನೆಸಾಗಿಸಿಯೇ ತೀರುವಿರಿ. ಸ್ವಯಂ ಶಕ್ತರಾದ ನಿಮಗೆ ಬಂಧುಮಿತ್ರರ ನೆರವೂ ಚೆನ್ನಾಗಿರುವುದರಿಂದ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳು ಲಭಿಸುವವು. ಮಾತ್ರವಲ್ಲ ಕೋರ್ಟು ಕಛೇರಿಗಳ ವ್ಯವಹಾರದಲ್ಲೂ ವಿಜಯಿಗಳಾಗುವಿರಿ. ಭಾಗ್ಯಪನಾದ ಬೃಹಸ್ಪತಿಯು ಲಾಭಸ್ಥಾನದಲ್ಲಿದ್ದು ಲಾಭಪತಿಯಾಗ ಶುಕ್ರನೂ ಧನಸ್ಥಾನದಲ್ಲಿ ಕುಳಿತಿರುವ ಕಾರಣ ನಿಮ್ಮ ಆರ್ಥಿಕ ಪರಿಸ್ಥಿತಿಯು ತುಂಬಾ ಸುಧಾರಿಸಲಿದೆ. ವಾರದ ಅಂತ್ಯದ ದಿನಗಳು ವಿಜಯ ಲಾಭದಾಯಿಗಳಾಗಿವೆ.

೫. ಸಿಂಹ

ಸದ್ಯ ನಿಮ್ಮ ಜನ್ಮರಾಶಿಗತನಾದ ಶುಕ್ರನನ್ನೊಬ್ಬನನ್ನು ಬಿಟ್ಟು ಇತರ ಎಲ್ಲಾ ಗೃಹರೂ ಪ್ರತಿಕೂಲರಾಗಿರುವುದರಿಂದ ನಾನಾ ತೆರನಾದ ಕಷ್ಟನಷ್ಟಗಳನ್ನು ನೀವಿಂದು ಎದುರಿಸಬೇಕಾಗಿ ಬರಲಿದೆ. ಜೀವದ ಮಾತಂತಿರಲಿ ಕೈಹಿಡಿದ ಅರ್ಧಾಂಗಿ ಪಡೆದ ಮಕ್ಕಳೂ ಕೂಡ ನಿಮ್ಮನ್ನಿಂದು ವಿರೋಧಿಸಲಿರುವರು. ವಿನಾಕಾರಣ ಕಲಹ ನಿಷ್ಠುರಗಳಾಗಲಿವೆ. ರಾಜಕೀಯ ರಂಗದಲ್ಲಿ ಹೆಚ್ಚಿನ ನಷ್ಟ ಪರಾಜಯಗಳಿಗೆ ಪಾತ್ರರಾಗುವಿರಿ. ಅತೀವ ಕಷ್ಟದಿಂದ ಕಾಲಯಾಪನೆ ಮಾಡುತ್ತಿರುವ ನಿಮಗೆ ವಾರಾದಿಯ 3 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೬. ಕನ್ಯಾ

ನೆನೆದಂತೆ ಸಕಲ ಕಾರ್ಯಗಳೂ ಸಿದ್ಧಿಸಲಿವೆ. ವ್ಯವಹಾರ ಚತುರರೂ ಕಾರ್ಯದಕ್ಷರೂ ಆದ ನಿಮಗೆ ಬಹುಮುಖದಿಂದ ಧನಾಗಮವಾಗುವುದಲ್ಲದೆ ಜನತೆಯೂ ಕೂಡ ನಿಮ್ಮನ್ನು ಗೌರವದಿಂದ ಕಾಣುವುದು. ಅದಾಯದಷ್ಟನ ಅಧಿಕಾರವನ್ನು ಸದ್ವಿನಿಯೋಗ ಮಾಡುವಿರಿ. ಸ್ವಂತ ಆರೋಗ್ಯಕ್ಕೆ ಸ್ವಲ್ಪ ಆತಂಕವಿದೆ. ತಾ. 16ರಿಂದ 20ರ ವರೆಗಿನ ದಿನಗಳು ಅತೀವ ಪ್ರಶಸ್ತವಿವೆ.

೭. ತುಲಾ

ಸಾಡೇಸಾತಿ ಅಷ್ಟಮದಲ್ಲಿ ಕುಳಿತಿದ್ದರೂ ಧನಸ್ಥಾನದ ರಾಜನು ವ್ಯಯಕ್ಕೆ ಬಂದಿದ್ದರೂ ನೀವಿಂದು ಅಷ್ಟೊಂದು ಹೆದರಬೇಕಾಗಿಲ್ಲ. ಉದ್ಯಮಸ್ಥಾನದಲ್ಲಿ ರವಿ ಲಾಭಸ್ಥಾನದಲ್ಲಿ ಬುಧ ಶುಕ್ರರು ಸೇರಿ ನಿಮ್ಮ ಆಕಾಂಕ್ಷೆಗಳನ್ನು ಈಡೇರಿಸಲು ಬದ್ಧಕಂಕಣರಾಗಿರುವರು. ಹೆಚ್ಚಿನ ನಿಮ್ಮ ತಾಪತ್ರಯಗಳು ದೂರವಾಗಲಿವೆ. ಪ್ರವಾಸಕ್ಕೀ ಕಾಲವು ಹಿತಕರವಲ್ಲ. ಸ್ವಜನ ವಿಯೋಗ ದುಃಖಕ್ಕೆರವಾಗುವ ಸಂಭವವಿದೆ. ವಾರಾಂತ್ಯದ 3 ದಿನಗಳು ಇಷ್ಟಾರ್ಥಪ್ರದಗಳಿವೆ.

೮. ವೃಶ್ಚಿಕ

ಮನೋದೌರ್ಬಲ್ಯದಿಂದ ಕೂಡಿದ ನೀವು ಇಂದು ಯಾವ ಹೊಸ ಉದ್ಯಮವನ್ನೂ ಸಾಧಿಸಲಾರಿರಿ. ಆದರೆ ಹಿಡಿದ ಕಾರ್ಯವನ್ನೂ ಮಧ್ಯೆ ಕೈಬಿಡಲಾರಿರಿ. ನಿಮ್ಮ ಖರ್ಚುವೆಚ್ಚಗಳಿಗೆ ತಕ್ಕುದಾದ ಆದಾಯವೂ ಇರೋಣದರಿಂದ ದಿನಯಾಪನೆಯೂ ಕಷ್ಟವಾಗದು. ಆರೋಗ್ಯವು ಮುಂಚಿಗಿಂತ ಎಷ್ಟೋ ಸುಧಾರಿಸಲಿದೆ. ಹಣದ ವ್ಯವಹಾರ ನಿಮಿತ್ತ ಕೋರ್ಟಿಗೆ ಹೋಗುವ ಪರಿಸ್ಥಿತಿ ಬಂದೀತು. ಕಾರ್ಯಸಾಧಕರಾದ ನಿಮಗೆ ತಾ. 15, 21 ಈ ದಿನಗಳಲ್ಲಿ ಇಷ್ಟಸಿದ್ಧಿ ವಿಜಯಗಳು ಲಭಿಸುವವು.

೯. ಧನು

ಭಾಗ್ಯಪತಿಯಾದ ರವಿಯು ಅಷ್ಟಮದಲ್ಲಿ ಸಿಂತಿದ್ದರೂ ಧನಲಾಭಪತಿಗಳಾದ ಶನಿಶುಕ್ರರು ಅನುಕೂಲರಾಗಿರುವುದರಿಂದ ನಿಮಗಿಂದು ಆರ್ಥಿಕ ವಿಚಾರವಾದ ಚಿಂತೆಯಿರದು. ಹೆರವರ ಸಹಾಯ ಸಹಕಾರವನ್ನು ಬಯಸದೆ ಎಂತಹ ದುಸ್ಸಾಧ್ಯವಾದ ಕಾರ್ಯವನ್ನೂ ನೀವೊಬ್ಬರೇ ಸಾಧಿಸಲು ಶಕ್ತರಿರುವಿರಾದ ಕಾರಣ ಶತ್ರುವರ್ಗದವರು ದೂರದಿಂದಲೇ ನಿಮ್ಮನ್ನು ನೋಡಿ ಮಾರಾಗುವರು. ಬಿಕ್ಕಟ್ಟು ಗೃಹಕಲಹಗಳು ವೃದ್ಧಿ ಹೊಂದಿಸಿಕೊಂಡರೂ ಒಡನೆಯೇ ಅವು ನಶಿಸಿಹೋಗಲಿವೆ. ತಾ. 16, 17 18 ತುಂಬಾ ಅನುಕೂಲ.

೧೦. ಮಕರ

ನಿಸರ್ಗತಃ ಶುಭರಾದ ಬುಧ ಗುರು ಶುಕ್ರರ ಅನುಗ್ರಹಕ್ಕೆ ನೀವಿಂದು ಪಾತ್ರರಾಗುವಿರಿ. ಆದಕಾರಣ ನಿಮ್ಮ ಸದಿಚ್ಛೆಗಳೆಲ್ಲವೂ ಕಾರ್ಯರೂಪಕ್ಕೆ ಬರಲಿವೆ. ವಿಶೇಷತಃ ನಿಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದು. ರಾಜಕೀಯೋತರ ಚಟುವಟಿಕೆಗಳಲ್ಲಿ ನೀವು ಯಶಸ್ವಿಗಳಾಗಲಿರುವಿರಿ. ಗೃಹತಾಪತ್ರಯಗಳಿಂದ ಮುಕ್ತರಾಗಿದ್ದರೂ ಆರೋಗ್ಯಭಾಗ್ಯವು ಚೆನ್ನಾಗಿಲ್ಲವೆಂದೇ ಹೇಳಬೇಕಾಗಿದೆ. ಉದ್ಯೋಗದಲ್ಲಿ ಪ್ರಗತಿಯನ್ನೈದುವ ನಿಮಗೆ ತಾ. 15, 19, 20 ತುಂಬಾ ಅನುಕೂಲ.

೧೧. ಕುಂಭ

ರವಿಯೊಯೋಗನನ್ನು ಬಿಟ್ಟು ಇತರ ಎಲ್ಲಾ ಗೃಹರೂ ಪ್ರತಿಕೂಲರಾದ ನಿಮಗೆ ಇಂದಿನ ದಿನಗಳು ಸ್ವಲ್ಪ ಕಷ್ಟದಾಯಿಗಳಾಗಿ ಪರಿಣಮಿಸಲಿವೆ. ಶತ್ರುವರ್ಗದವರು ಕೆಟ್ಟ ಮೀರಿ ಕೀಟಲೆಯನ್ನು ಕೊಡಲಿರುವರು. ಆತ್ಮೀಯರ ಕೂಡೆ ವಿರೋಧ ಹುಟ್ಟೀತು. ಮನೆಯ ಜನರೊಳು ಮನಸ್ತಾಪವುಂಟಾಗಲಿದೆ. ಆರ್ಥಿಕ ಬಿಕ್ಕಟ್ಟು ವಾತದೋಷದಿಂದಾಗಿ ದೇಹಾಲಸ್ಯ ಇವುಗಳಿಂದ ಸಂತಪ್ತರಾದ ನಿಮಗೆ ತಾ. 16, 17, 18, 21 ಸ್ವಲ್ಪ ಇದ್ದುದರಲ್ಲಿ ತೃಪ್ತಿ ಮನೆನಿಸೀತು.

೧೨. ಮೀನ

ಮುದ್ಯೋಗಿಗಳಾದ ನಿಮಗೆ ಎಲ್ಲಿಯುವೂ ಕೂಡ ನಾಗರಿಕಾಗಿ ಕಾಣಿಸಲಿದೆ. ಆಯವು ಅಲ್ಪವಾಗಿ ವ್ಯಯವು ತುಂಬಾ ಹೆಚ್ಚಿರುವ ಕಾರಣ ನಿಮ್ಮ ಆಪದ್ಧನವೂ ಖಾಲಿಯಾಗುವುದಲ್ಲದೆ ಹೆರವರ ಕೂಡೆ ಸಾಲ ಕಡಗಳನ್ನೂ ಮಾಡಬೇಕಾಗಿ ಬರುವುದು. ಕುಟುಂಬದಲ್ಲಿ ವಿರಸವುಂಟಾಗಲಿವೆ. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟ ಸಂಭವಿಸೀತು. ತಾ. 16, 19, 20 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಲಾರವು

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

—ಸಾದಾ ಪ್ರತಿ 2·00   ಉತ್ತಮ ಪ್ರತಿ 2·50

ಪುಸ್ತಕದ ಬೆಲೆಯೊಂದಿಗೆ 25 ಪೈಸೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೊಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್
ಶ್ರೀನಿವಾಸ್ ಬ್ರದರ್ಸ್, ಪುತ್ತೂರಲ್ಲಿ ಪ್ಯೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ

Edited, Printed & Published by K. H. Shetty at the Navayuga Press, Udipi, S. India.

నవయుగ



226

NAVAYUGA

leading nationalist weekly

౨౦

ಕಥಾ ಪ್ರಪಂಚ

ದೇವಪುತ್ರ

ಬರೆದವರು: ವಾಮನ ಪಾಸನಾಸಕರ್.

ದೇವಪುತ್ರ !

ಆತ ಎಷ್ಟೊಂದು ಒಳ್ಳೆಯ ನಡತೆಯ ಯುವಕ! ಜೀವನದಲ್ಲಿ ಅನೇಕ ತರದ ಕಷ್ಟ ನಷ್ಟಗಳನ್ನು ಕಂಡು ಬೇಸತ್ತ ಓರ್ವ ನವ ಯುವಕ! ಬಹುಶ ಅವನ ಜೀವನದಲ್ಲಿ ಅವನು ಪಟ್ಟ ಬವಣೆ ನನಗೆ ಒದಗಿ ಬಂದಿದ್ದಲ್ಲಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆನೊ ಏನೋ

ಹೌದು! ಆತ್ಮ ಮುಟ್ಟಿದ ವಸ್ತು ಮಣ್ಣು! ಆತ ಹಿಡಿದ ಕೆಲಸ ವ್ಯರ್ಥ! ಪ್ರಾರಂಭಿಸಿದ ವ್ಯಾಪಾರ ನಷ್ಟ. ಹತ್ತಾರು ತಿರುಗಿ ನೂರಾರು ಬಾವಿ ನೀರು ಕುಡಿದು ಪರ ಫಲವೇ! ಇರಬೇಕು.

ಇಲ್ಲವಾದರೆ ಆತನಿಗೆ ಊರಿನಲ್ಲಿ ಯೋಗ್ಯ ತಾಣವಿದ್ದರೂ ಊರೂರು ಅಲೆಯುವ ದುರ್ಭಾಗ್ಯ ಏಕಾಗಿ ಒದಗಬೇಕಿತ್ತು? ಹತ್ತಾರು ತಿರುಗಿದರೂ ಆತನೊಬ್ಬ ಅದೃಷ್ಟವಂತನೇ ಸರಿ! ಉತ್ತಮ ಕೆಲಸ; ಆತನಿಗೊಪ್ಪುವ ಕೆಲಸ. ಆದರೇಕೊ ಆ ಕೆಲಸಕ್ಕೆ ಸೇರಿದ ಮೂರೇ ತಿಂಗಳಲ್ಲಿ ಆತ ಮುಂಬಯಿಯ ವಾಸ್ತವ್ಯಕ್ಕೆ ಅಭಿಲಾಷೆಪಟ್ಟು ಹೊರನಡೆದು ಬಂದ.

ಮುಂಬಯಿಯಲ್ಲಿನ ಜನ ಒಂದಲ್ಲ ಒಂದು ಕೆಲಬು ಮಾಡಿ ಜೀವನ ಸಾಗಿಸುವರು. ಎಷ್ಟೋ ಮಂದಿ ಲಕ್ಷಾಧೀಶರೊ ಇನ್ನೇನೊ ಆಗಿ ಬಿಡುವರು. ಆದರೆ ದೇವಪುತ್ರನ ಹಣೆಯಲ್ಲಿ ಆ ಅದೃಷ್ಟ ಬರೆದಿರಲಿಲ್ಲ.

ಆತನ ನೀರಿನ ಋಣ ಊರಿನದ್ದೇ ಆಗಿದ್ದಿತು. ಅಂತೂ ಅಲ್ಲಿ ಒಂದೆರಡು ವರ್ಷವಿದ್ದು ಊರಿಗೆ ಬಂದ.

ನಾನು ಸಾಹುಕಾರ! ನನ್ನ ಸಾಹುಕಾರಿಕೆಯಿಂದಾಗಿ ಆತನು ದಿನನಿತ್ಯ ನನ್ನಲ್ಲಿ ಬರುತ್ತಿದ್ದಿಲ್ಲವಾದರೂ ನನ್ನ ಕಾರ್ಖಾನೆಯಲ್ಲಿ ತನ್ನ ಸುಖ ಕಷ್ಟಗಳನ್ನು, ಊರಿನ ವಿಶೇಷ ವಿದ್ಯಮಾನಗಳನ್ನು ಹೇಳುವರೇ ದಿನನಿತ್ಯವೂ ಬರುತ್ತಿದ್ದ.

ಒಮ್ಮೆ ನಾನು ಸಾವಿರಾರು ರೂಪಾಯಿಗಳ ನಾಣ್ಯಗಳನ್ನು ರಾಶಿ ಹಾಕಿ ಲೆಕ್ಕ ಮಾಡುತ್ತಿರುವ ವೇಳೆ ಆತ ಎಂದಿನಂತೆ ಬಂದು ಕೇಳಿದ—

"ದುಡ್ಡೇ ದುಡ್ಡು! ಆ ದುಡ್ಡನ್ನು ಲೆಕ್ಕ ಮಾಡಲು ನಿಮಗೆ ಜನ ಬೇಕೆ?"

ನಾನು ಕೇಳಿದೆ— "ಬೇಕು ಬೇಡ ಎಂದು ಈಗಲೇ ಹೇಳಲಾರೆ. ಬೇಕಾದಾಗ ಖಂಡಿತ ನಿನಗೆ ಹೇಳುವೆ."

ದೇವಪುತ್ರ ಕೇಳಿದ್ದು ತಮಾಷೆಗಾಗಿ. ನಾನೂ ಹೇಳಿದ್ದು ತಮಾಷೆಗಾಗಿಯೆ!

ಆದರೆ ಇಂದು ದೇವಪುತ್ರ ನನ್ನ ಕೆಲಸದ ಆಳು. ಆತ ಪ್ರಾಮಾಣಿಕ. ಆತ ನನ್ನಲ್ಲಿ ಕೆಲಸಕ್ಕೆ ಸೇರಿದಂದಿನಿಂದ ನನ್ನ ಲಾಭ ಗಳಿಕೆಯೂ ದ್ವಿಗುಣವಾಗಿದೆ. ಆತ ವಿನಯಶೀಲ ವ್ಯಕ್ತಿ. ಅವನು ನಿಜವಾಗಿಯೂ ದೇವಪುತ್ರನೇ ಸರಿ. ಆತ ನನ್ನ ಆಳಾದರೂ ನಾನು ನನ್ನ ಓರ್ವ ಸ್ನೇಹಿತನಂತೆ ಆತನನ್ನು ತಿಳಿದುಕೊಂಡಿದ್ದೇನೆ.

ಆತನೂ ಅಷ್ಟೆ! ಹಿಂದಿನಷ್ಟೇ ಸಲುಗೆಯಿಂದಿದ್ದು ಇಂದಿಗೆ ಐದು ವರ್ಷ ಕಳೆದು ಹೋಗಿವೆ!

ನಮ್ಮೊಳಗಿನ ಈ ಸಲುಗೆ—ಮಿತ್ರತ್ವ ಮತ್ತು ಪ್ರಾಮಾಣಿಕತೆ, ವಿನಯಗಳ ಸಂಕಲೆಗಳಿಂದಾಗಿಯೇ ನಾನಿಂದು ಆತನೊಡನೆ ಎರಡು ಸಾವಿರ ರೂಪಾಯಿ ಸ್ಟೇಟ್ ಬ್ಯಾಂಕಿಗೆ ಕಟ್ಟಿ ಬರುವರೇ ನೀಡಿದ್ದೆ!

ಆದರೆ ಎಂತಹ ನನ್ನ ತಪ್ಪು ತಿಳುವಳಿಕೆ? ನಾನೆಂತಹ ಮೋಸಕ್ಕೆ ಬಲಿಯಾದೆ? ಬೆಳಗ್ಗೆ ಹತ್ತು ಘಂಟೆಗೆ ಹೋದ ದೇವಪುತ್ರ, ಮಧ್ಯಾಹ್ನ ಎರಡು ಘಂಟೆಯಾದರೂ ಬಂದಿಲ್ಲ!

ಪೋಲೀಸರಿಗೆ ಫೋನ್ ಮಾಡಲೆ? ಛೆ! ಆತ ಬರೇ ಎರಡು ಸಾವಿರ ರೂಪಾಯಿಗಾಗಿ ಇಂತಹ ನೀಚ ಕೆಲಸಕ್ಕೆ ಕೈ ಹಾಕುವವನಲ್ಲ. ಆತನ ಮನಸ್ಸು ನನಗೆ ಗೊತ್ತು.

— ೨ —

ನನಗೂ ಗೊತ್ತು!

ನಾನೂ ಇಲ್ಲಿ ಹೋಟೇಲು ಇಟ್ಟು ಇಪ್ಪತ್ತು ವರ್ಷಗಳಾದುವು. ಈ ಇಪ್ಪತ್ತು ವರ್ಷಗಳಲ್ಲಿ ನನ್ನಲ್ಲಿ ಎಂತೆಂತಹ ಗಿರಾಕಿಗಳು ಬಂದು ಹೋಗಿದ್ದಾರೆ. ಆದರೆ ದೇವಪುತ್ರನಷ್ಟು ಸುಯೋಗ್ಯ ತರುಣನನ್ನು ನಾನು ಕಂಡದಿಲ್ಲ.

ಆತ ನನ್ನಲ್ಲಿ ಕಡ ವ್ಯಾಪಾರ ಮಾಡದೆ ನಗದಿ ಗಿರಾಕಿ ಎಂದು ಆತನ ಮುಖ ದರ್ಶನದ ಆ ತೇಜಸ್ಸು ಕಂಡ ಎಂತಹ ವ್ಯಕ್ತಿಯೂ ಮಾರು ಹೋಗಿ ಹೊಗಳ ಬೇಕಾದುದೇ!

ಆತ ಒಂದು ದಿನ ನನ್ನೊಡನೆ ಹೇಳುತ್ತಿದ್ದ. "ಹೊಟ್ಟೆ ಹಿಟ್ಟಿಲ್ಲವೆಂದು ಊರು ತುಂಬಾ ಸಾಲಮಾಡಬಾರದು. ಕಷ್ಟಪಟ್ಟು ದುಡಿದು ಗಳಿಸಿ ಮಿತವಾಗಿ ವ್ಯಯ ಮಾಡಬೇಕು. ನಾನಂತೂ ಸಾಲ ಮಾಡಲಾರೆ."

ಆದರೆ ಹಾಗೆ ಹೇಳಿದ ದೇವಪುತ್ರನೇ ನಿನ್ನೆ ನನ್ನಲ್ಲಿ, ತನ್ನ ನಾಲ್ಕಾರು ಮಿತ್ರರೊಂದೊಡಗೂಡಿ ಬಂದು ಭರ್ಜರಿ ಕಾಫಿ ಕುಡಿದು ಕೊನೆಗೆ—

"ಉದ್ದೇಶ ಪೂರ್ವಕ ನಾನೀಗ ಸಾಲ ಮಾಡುತ್ತಿಲ್ಲ. ಮುಂಬಾಯಿಯ ನನ್ನ ಗೆಳೆಯರು ಬಂದಿದ್ದಾರೆ. ಅವರಲ್ಲಿದ್ದಾಗ ಎಷ್ಟೋ ಸಲ ನಾನು ಅವರಲ್ಲಿ ಪುಕ್ಕಟೆ ಊಟ ಮಾಡಿದ್ದೇನೆ, ಇಲ್ಲಿ ಬಂದಾಗ ಕಾಫಿಯಾದರೂ ಕುಡಿಸ ಬೇಡವೆ? ಆದರೆ ಸಂಬಳದ ದಿನ ನಾಳೆ ಅಲ್ಲವೆ? ನಾಳೆ ಖಂಡಿತ ಕೊಡುವೆನು."ಎಂದಿದ್ದ.

ನನ್ನಲ್ಲಿ ನಿತ್ಯ ಬರುವ ಗಿರಾಕಿ ಆದುದರಿಂದ ಒಪ್ಪಿದೆ.

ಕರಾರು ವಾಕ್ಕಾಗಿ ಎಂಬಂತೆ ಪ್ರತಿದಿನ ಹನ್ನೊಂದು ಘಂಟೆಗೆ ಕಾಫಿಕುಡಿಯಲು ಬರುತ್ತಿದ್ದ ದೇವಪುತ್ರ ಇಂದು ಮಾತ್ರ ಮಧ್ಯಾಹ್ನ ಘಂಟೆ ಎರಡಾದರೂ ಬಂದಿಲ್ಲ. ಸಂಬಳದ ದಿನವಾದರೇನು? ತಡವಂತೂ ಆಗುವುದಿಲ್ಲ. ಇನ್ನಂತೂ ಆತ ಬರುವ ಸಂಭವವಿಲ್ಲ.

ಏನೆಂದರೂ ಕಡಕೊಂಡ ಮೇಲೆ ಕೊಡಲು ಯಾರಿಗೆ ಮನಸ್ಸು ಬರುತ್ತದೆ? ನನ್ನಲ್ಲಿ ಇನ್ನೊಮ್ಮೆ ಬಂದರೆ ಮಾಡಿದ ಸಾಲ ಕೊಡಬೇಡವೆ? ಬಹುಶಃ ಮಾಡಿದ ಸಾಲ ತೀರಿಸಲು ಮನಸ್ಸಿಲ್ಲದೆ ನನ್ನ ಹೋಟಲಿಗೆ ಬಾರದಿರಲೂ ಬಹುದು. ಆತ ಒಳ್ಳೆಯವನು. ಆದರೆ ಹಣ ಒಳ್ಳೆಯದಲ್ಲ. ಎಲ್ಲವೂ ನನ್ನ ಗ್ರಹಚಾರ!

— ೩ —

ಗ್ರಹಚಾರ ನನ್ನದು!

ಒಬ್ಬನೇ ಮಗ ಎಂದು ನಾನು ದೇವಪುತ್ರ ಎಂದು ಹೆಸರಿಸಿದೆ. ಯಾವಾಗಲೂ ಒಂದು ಘಂಟೆಗೆ ಸರಿಯಾಗಿ ಊಟಕ್ಕೆ ಬರುವ ನನ್ನ ಮಗ ಇಂದು ಘಂಟೆ ಎರಡೂವರೆ ಆದರೂ ಬಂದಿಲ್ಲ.

ಇಂದು ಸಂಬಳದ ದಿನ. ಹಿಂದೆ ಐದಾರು ವರ್ಷಗಳಿಂದಲೂ ಸಂಬಳದ ದಿನಗಳಲ್ಲಿ ಊಟಕ್ಕೇನೂ ತಡವಾಗುತ್ತಿರಲಿಲ್ಲ. ಒಂದು ನಿಶ್ಚಿತ ಸಮಯಕ್ಕೆ ಬರುತ್ತಿದ್ದ.

ಬಹುಶಃ ಆತನೆಂದರಬಹುದೆ? ಐದು ವರ್ಷದ ಹಿಂದೆ ಆತ ನಮ್ಮ ಮೇಲೆ ಮುನಿದು ಊರು ಬಿಟ್ಟು ತೊಲಗಿದ್ದ. ಎಲ್ಲಿ ಹೋದ ಎಂದು ಆತ ಒಂದು ಗುರಿ ಮುಟ್ಟಿದ ನಂತರ ಆತನ ಪತ್ರದಿಂದ ತಿಳಿಯಿತು!

ಇಂತಹ ಘಟನೆಯೇನೂ ಆ ಐದು ವರ್ಷದ ನಂತರ ಘಟಿಸಿಲ್ಲ.

— ೪ —

ಏನೂ ಘಟಿಸಿಲ್ಲ! ನಿಜವಾಗಿಯೂ ಇಲ್ಲ!

ಹತ್ತು ಘಂಟೆಗೆ ಹೊರಟ ನಾನು ಘಂಟೆ ಎರಡೂವರೆ ಆದರೂ ಹಿಂದಿರುಗಿಲ್ಲ ಎಂದರೆ ಕಳಿಸಿದವರು ಏನೆಂದು ಕೊಂಡಾರು? ಅದೂ ಕೂಡಾ ಎರಡು ಸಾವಿರ ರೂಪಾಯಿಗಳ ಗಂಟನ್ನು ಹೊತ್ತುಕೊಂಡು ನಾನು ಓಡಿ ಹೋದೆ ಎಂದು ಅಪವಾದಕ್ಕೆ ಗುರಿಯಾಗಲಾರೆನೆ?

ಸ್ಟೇಟ್ ಬ್ಯಾಂಕಿನಲ್ಲಿ ಇಷ್ಟು ಹೊತ್ತು ನಾನೇನು ಮಾಡಿದೆ?

ಊರು ಸುತ್ತಾಡಿ ಬಂದೆನೆ? ಅಥವಾ ಜೂಜಾಡಿದೆನೆ? ಏನೂ ಇಲ್ಲ! ಹಣ ನನ್ನಲ್ಲಿಯೇ ಇದೆ!

ಹತ್ತು ಘಂಟೆಗೆ ಸ್ಟೇಟ್ ಬ್ಯಾಂಕಿಗೆ ಬಂದವನೇ—ಅದೂ ಪ್ರಥಮ ಬಾರಿ ಬಂದುದರಿಂದ "ವಿಚಾರಣಾ" ವಿಭಾಗದಲ್ಲಿ ಕೇಳಿದೆ—

"ಸ್ವಾಮಿ! ಈ ಚಲನ್ ತುಂಬಿಸಬೇಕು! ಎಲ್ಲಿ ಸ್ವಾಮಿ!"

ವಿಚಾರಣಾ ವಿಭಾಗದವ ಒಮ್ಮೆ ಮುಖವೆತ್ತಿ ನೋಡಿದ. ಮುಖದಲ್ಲಿ ಗೆಲವಿಲ್ಲ. ಒರಟು ಸ್ವಭಾವ ಎತ್ತಿ ಮುಡಿದ್ದಿತು. ನಾನು ಶಿವನೆದುರು ಮನ್ಮಥನಂತಾದೆ. ಪುಣ್ಯಕ್ಕೆ ಆತನಿಗೆ ಮೂರನೆ ಕಣ್ಣು ಇಲ್ಲ! ಅಥವಾ ಇದ್ದಿತ್ತೊ ಏನೋ! ಸದ್ಯಕ್ಕೆ ತೆರೆಯಲಿಲ್ಲ! ನಾನು ಬದುಕುಳಿದೆ. ನಾನು ಹೆದರುವ ಭಾವದಲ್ಲಿ ನುಡಿದೆ. "....ಈ ಚಲನ್......."

"ಆ ಕಡೆ...' ವಿಚಾರಣಾ ವಿಭಾಗದಾತ ಮುಖ ತಗ್ಗಿಸಿದ. ಏನೊ ಗೀಚುತ್ತಿದ್ದ. ನನಗಂತೂ ನಿರ್ದೇಶನ ಸಿಕ್ಕಿತ್ತು. ಇನ್ನು ಆವನೊಡನೆ ನನಗೆ ಕೆಲಸವಿಲ್ಲ ಆ ಕಡೆ ಎಲ್ಲಿ? ನೀಡಿಕೆ-ಸಂದಾಯ- ಸಾಲ ಖಾತೆ-ಚಿಲ್ಲರೆ-ಹುಡುಕೊನೆ

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	5½
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	6½
24 ತಿಂಗಳಿಂದ	36 ತಿಂಗಳ ಕೆಳಗೆ	....	6¾
36 ತಿಂಗಳಿಂದ	48 ತಿಂಗಳ ಕೆಳಗೆ	....	7
48 ತಿಂಗಳಿಂದ	60 ತಿಂಗಳ ಕೆಳಗೆ	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	7¾
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್ ಖಾತೆಯ ಮೇಲೆ		... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Phone No. 226.

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2 00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮುಂಗಡವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಹಿಂದೂಸ್ತಾನ್ ಮೆಶಿನ್ ಟೂಲ್ಸ್ ಕಾರಖಾನೆ.

ಮೇಲಿನ ಸಾಲು -

ಬಲ: ಕಾರಖಾನೆಯ ಬಾಹ್ಯ ನೋಟ.

ಎಡ: ಕಾರ್ಯಾಗಾರದ ಡಿಸೈನಲ್.

ಕೆಳಗಿನ ಸಾಲು —

ಬಲ: ತಯಾರಾದ ಯಂತ್ರೋಪಕರಣಗಳನ್ನು ಸುಂದರವಾಗಿ ಪ್ಯಾಕ್ ಮಾಡಿಟ್ಟ ದೃಶ್ಯ.

ಎಡ: ಕಾರಖಾನೆಯ ಒಳನೋಟ.

ನವಯುಗ

ಸಂಪುಟ ೪೪ | ಉಡುಪಿ | Vol.44

ಸಂಚಿಕೆ ೪೭ | ೨೨—೨—೧೯೬೫ | No. 47

ವಚನ ಸುಧೆ

ನ ಗುರೋರಧಿಕಂ ತತ್ತ್ವಂ

ನ ಗುರೋರಧಿಕಂ ತಪಃ

೦ ಗುರುವಿಗಿಂತ ಅಧಿಕವಾದ ತತ್ತ್ವವಿಲ್ಲ; ಗುರುವಿಗಿಂತ ಹೆಚ್ಚಿನದಾದ ತಪಸ್ಸು ಬೇರೆಯಿಲ್ಲ.

೦೦ ಗುರುವು ಸಕಲ ತತ್ತ್ವಗಳನ್ನೂ ತಿಳಿದಿರುವವನು. ಸಾಕ್ಷಾತ್ ನಾದ ಗುರುವನ್ನು ಹೊಂದುವುದೇ ತಪಸ್ಸಿದ್ಧಿ. ಈ ಬಗೆಯ ಗುರುವನ್ನು ಭಯ ಭಕ್ತಿಯಿಂದ ನೋಡಬೇಕು. ಪರಬ್ರಹ್ಮ ಸ್ವರೂಪನಾದ ಗುರುವನ್ನು ಸರ್ವತ್ರ ಗೌರವಿಸಿ ಆದರಿಸಬೇಕು.

ಅವಸರ ಬೇಡ

ನಮ್ಮನ್ನು ಕಾಡುವ ಸಮಸ್ಯೆಗಳಿಗೆಲ್ಲ ಮೂಲ ಮಿತಿಮೀರಿ ಹೆಚ್ಚುವ ಜನಸಂಖ್ಯೆ ಎಂಬುದನ್ನು ಇಂದು ಹೆಚ್ಚಿನವರು ಒಪ್ಪುತ್ತಾರೆ. ಎಂತಾದರೂ ಮಾಡಿ ಈ ಸಂಖ್ಯೆಯನ್ನು ಅಂಕೆಯೊಳಗೆ ತರಬೇಕು ಎಂಬಲ್ಲಿಯವರೆಗೆ ನಮ್ಮ ನಾಯಕರು ಮುಂದುವರಿದಂತೆ ಕಾಣುತ್ತದೆ. ನಮ್ಮ ಅಭಿವೃದ್ಧಿ ಯೋಜನೆಗಳು ನಿರೀಕ್ಷಿತ ಪರಿಣಾಮ ತೋರಿಸದಿರುವುದಕ್ಕೆ ಅಡಳಿತದಲ್ಲಿನ ಸಡಿಲು ಬಿರುಕುಗಳೊಡನೆ ಜನಸಂಖ್ಯೆಯ ಹೆಚ್ಚಳವೂ ಕಾರಣವಾಗಿದೆ. ಹಾಗಾಗಿ ಏರುತ್ತಿರುವ ಜನನ ಸಂಖ್ಯೆಯನ್ನು ಅದುಮಿ ಹಿಡಿಯುವ ಪ್ರವೃತ್ತಿಯಿಂದು ಹೆಚ್ಚಬೇಕು; ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ, ಜನಸಂಖ್ಯೆಯನ್ನು ಮಿತಗೊಳಿಸುವುದು ಹೇಗೆ? ಕಳೆದೊಂದು ದಶಕದಿಂದ ವ್ಯವಸ್ಥಿತವಾದ ಕುಟುಂಬ ಯೋಜನೆಯಿಂದ ಹೆಚ್ಚಿನ ಲಾಭವಾಗಿದೆಯೆನ್ನುವಂತಿಲ್ಲ. ಏಕೆಂದರೆ, ಈ ಯೋಜನೆಯು ಇನ್ನೂ ಬಹುಜನಪ್ರಿಯವಾಗಿರುವುದಿಲ್ಲ. ಈ ಸಂಬಂಧದ ಶಸ್ತ್ರ ಚಿಕಿತ್ಸೆಗೆ ಸ್ವೇಚ್ಛೆಯಿಂದ ಕೆಲವರು ಮುಂದೆ ಬಂದಿರುವುದು ನಿಜವಾದರೂ ಇವರೆಲ್ಲರೂ ಸುಶಿಕ್ಷಿತರೇ ಇರುವರು. ಇವರಲ್ಲಿಗಿಂತ ಅಶಿಕ್ಷಿತರಲ್ಲಿಯೇ, ಗ್ರಾಮೀಣ ಪ್ರದೇಶದಲ್ಲಿಯೇ ಜನಸಂಖ್ಯೆಯು ಹೆಚ್ಚುತ್ತ ಬರುತ್ತದೆ; ಏಕೆಂದರೆ, ಜನನ ನಿಯಂತ್ರಣವು ಧರ್ಮವಿರುದ್ಧವಾದುದೆಂಬ ಕಲ್ಪನೆ ಅವರಲ್ಲಿ ಬಲವಾಗಿ ಬೇರೂರಿದೆ. ಇದನ್ನು ದೂರ ಮಾಡದೆ ಹೋದರೆ, ಸುಸಂಸ್ಕೃತ ಜನಾಂಗದ ಬದಲು ಅಸಂಸ್ಕೃತ ಪ್ರಜಾ ಕೋಟಿಯೇ ಭಾರತದಲ್ಲಿ ಹೆಚ್ಚಬಹುದು. ಇದರಿಂದ ದೇಶದ ಆರೋಗ್ಯ ನೆಮ್ಮದಿಯಿಂದಿರುವುದೆ?

ಗರ್ಭಪಾತವು ಇಂದು ಕಾಯಿದೆ ವಿರುದ್ಧವಾದುದು. ಇದನ್ನು ಕಾಯಿದೆ ಬದ್ಧಗೊಳಿಸುವ ಸಲಹೆಯೊಂದು ಮುಂದೆ ಬಂದಿದೆ. ಸಂತಾನ ನಿಯಂತ್ರಣ ಕಾರ್ಯದಲ್ಲಿ ತೊಡಗಿರುವ ಕೆಲವು ಸ್ವಯಂಪ್ರೇರಿತ ಸಂಸ್ಥೆಗಳೂ ವ್ಯಕ್ತಿಗಳೂ ಇದಕ್ಕೆ ಬೆಂಬಲವನ್ನಿತ್ತಿರುವರು. ಇಂತಹ ಕಾಯಿದೆ ತರುವುದರಿಂದಲೇ ಜನಸಂಖ್ಯೆಯ ಬೆಳವಣಿಗೆಗೆ ತಡೆಯುಂಟಾಗುವುದೆಂದು ನಂಬುವುದು ಕಷ್ಟಸಾಧ್ಯ. ಒಂದು ವೇಳೆ ಸಾಧ್ಯವೆನಿಸಿದರೂ ಇದರಿಂದ ನೈತಿಕ ಅಧಃಪತನಕ್ಕೆ ನಾಂದಿಯಾಗುವುದೆಂದು ಅಂಜಿಕೆ ತೋರಿಸುವವರೂ ಇದ್ದಾರೆ. ಅದರ ಫಲಾಫಲಗಳನ್ನು ಚರ್ಚಿಸುವುದಕ್ಕಿಂತ ಮೊದಲು, ಅದನ್ನು ಕಾರ್ಯರೂಪಕ್ಕೆ ತರಲು, ನಮ್ಮಲ್ಲಿರ ಬಹುದಾದ ಅನನುಕೂಲತೆಗಳನ್ನು ಪರಿಶೀಲಿಸಬೇಕು. ಜಪಾನದಲ್ಲಿ ಈ ಬಗೆಯ ಕಾಯಿದೆಯಿತ್ತೆನ್ನುತ್ತಾರೆ, ಸಮರ್ಥಕ ಪಕ್ಷದವರು. ಆದರೆ, ನಮ್ಮನ್ನು ಜಪಾನೀಯರ ಮಟ್ಟಕ್ಕೆ ಹೋಲಿಸುವುದೇ ಒಂದು ಅಪರಾಧ. ಪೌರಾತ್ಯ ರಾಷ್ಟ್ರಗಳಲ್ಲಿ ಜಪಾನವು ಬಹಳ ಮುಂದುವರಿದ ದೇಶ. ಅಲ್ಲಿ ನೂರಕ್ಕೆ ನೂರರಷ್ಟು ಸಾಕ್ಷರತೆಯಿದೆ. ಸಾಕಷ್ಟು ಸಂಖ್ಯೆಯಲ್ಲಿ ಆಸ್ಪತ್ರೆಗಳೂ ವೈದ್ಯರೂ, ವೈದ್ಯಕೀಯ ಸೌಕರ್ಯಗಳೂ ಅಲ್ಲಿ ದೊರೆಯುತ್ತವೆ. ಇದನ್ನು ನೋಡುವಾಗ, ನಾವಿನ್ನೂ ಪಾತಾಳದಲ್ಲಿಯೇ ಕೊಳೆಯುತ್ತಿದ್ದೇವೆ. ಮುಖ್ಯವಾಗಿ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ೧೦ ಸಾವಿರ ಜನರಿಗೆ ಒಬ್ಬನಂತೆಯೂ ವೈದ್ಯನಿರುವುದಿಲ್ಲ. ಅಲ್ಲಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ತೆರೆಯಲ್ಪಟ್ಟಿವೆಯಾದರೂ ಅವುಗಳಲ್ಲಿ ಡಾಕ್ಟರರು ಇರುವುದಿಲ್ಲ; ಅತ್ಯಂತಾವಶ್ಯಕ ಮದ್ದುಗಳೂ ಇರುವುದಿಲ್ಲ. ತಾಲೂಕು—ಜಿಲ್ಲಾ ಕೇಂದ್ರಗಳಲ್ಲಿನ ಆಸ್ಪತ್ರೆಗಳಲ್ಲಿ ಕೂಡ ಸಮುಚಿತ ರೀತಿಯ ವೈದ್ಯಕೀಯ ಸೌಲಭ್ಯಗಳು ದೊರೆಯುತ್ತಿಲ್ಲ. ಸರಕಾರವು ಸಾಕಷ್ಟು ಸಂಖ್ಯೆಯ ಡಾಕ್ಟರರುಗಳ ಸೇವೆಯನ್ನು ಪಡೆದುಕೊಳ್ಳಲು ಸಮರ್ಥವಾಗಿಲ್ಲ. ಹಳ್ಳಿಗಳಲ್ಲಿ ಆಧುನಿಕ ಶಿಕ್ಷಣ ಪಡೆದ ವೈದ್ಯರೇ ಇರುವುದಿಲ್ಲ. ಇಂತಹ ದೀನ ಹೀನ ಪರಿಸ್ಥಿತಿಯಲ್ಲಿ ಗರ್ಭಪಾತವನ್ನು ಕಾಯಿದೆ ಬದ್ಧಗೊಳಿಸಿದರೆ ಗತಿಯೇನು? ನೈತಿಕ ಅಧಃಪತನದೊಡನೆ ಗರ್ಭವತಿಯ ಜೋಚನೀಯ ಪರಿಸ್ಥಿತಿಯನ್ನೂ ನಾವು ವಿವೇಚಿಸಬೇಡವೆ? ಆವಶ್ಯಕ ಚಿಕಿತ್ಸೆಯೊದಗಿಸುವುದು ಸಾಧ್ಯವಿದ್ದಲ್ಲಿ ಮಾತ್ರ ಗರ್ಭಪಾತ ಮಾಡಿಸುವುದು ಶಕ್ಯವಾದೀತು.

ಇಂತಹ ಶೋಚನೀಯ ಸ್ಥಿತಿಯನ್ನು ತಿಳಿದಿರುವ ನಮ್ಮ ನಾಯಕರು, ಮಂತ್ರಿಗಳು ಗರ್ಭಪಾತವನ್ನು ಕಾಯಿದೆ ಬದ್ಧಗೊಳಿಸುವುದಕ್ಕೆ ಮೊದಲು ನೂರು ಬಾರಿ ಯೋಚಿಸಬೇಕು.

ಗರ್ಭಪಾತದ ಕಾಯಿದೆ ಬದ್ಧತೆಯ ಹೊರತು ಜನನ ನಿಯಂತ್ರಣಕ್ಕೆ ಬೇರೆ ದಾರಿಯೇ ಇಲ್ಲವೇ ಎಂದು ನೋಡಬೇಕು. ಸಹಜವಾಗಿ ಜನತೆಯಲ್ಲಿ ಕುಟುಂಬ ನಿಯಂತ್ರಣದ ಬಗ್ಗೆ ಸದಭಿಪ್ರಾಯವುಂಟುಮಾಡುವುದು ಬ್ರಹ್ಮಚರ್ಯದತ್ತ ಮನಸ್ಸು ಹರಿಸಿದಂತೆ. ಇದು ಯಶಸ್ವಿಯಾಗುತ್ತದೆ. ಆದರೆ, ಈ ಬಗೆಯ ನೈತಿಕ ಬಲ ನಮ್ಮ ಜನತೆಯಲ್ಲಿ ಹುಟ್ಟಲು ಇನ್ನೆಷ್ಟು ಶತಕಗಳು ಬೇಕಾಗಬಹುದೋ ಏನೋ? ಈ ಸ್ಥಿತಿ ಅಪಾಯವಿಲ್ಲವೆಂತಹ ನಿಯಂತ್ರಣ ವಿಧಾನಗಳನ್ನು ಪ್ರಚಾರಮಾಡುವುದೊಂದೇ ನಮ್ಮ ಮುಂದಿರುವ ಕರ್ತವ್ಯವಾಗಿದೆ. ಗ್ರಾಮೀಣ ಜನತೆಯಲ್ಲಿ ಸಂತಾನ ನಿಯಂತ್ರಣದ ಬಗ್ಗೆ ಸದಭಿಪ್ರಾಯ ಮೂಡಿಸುವುದು ಅಗತ್ಯ. ಸಾಮಾನ್ಯವಾದ ಪ್ರಾಣಾಪಾಯಕಾರದ ಸುಲಭ ಸರಳ ವಿಧಾನಗಳನ್ನೇ ಸಂತಾನ ನಿಯಂತ್ರಣಕ್ಕೆ ಬಳಸುವುದೂ ಅಷ್ಟೇ ಅಗತ್ಯ. ಗರ್ಭಪಾತವನ್ನು ಕಾಯಿದೆ ಬದ್ಧವೆಂದು ಘೋಷಿಸುವುದಕ್ಕೆ ಮೊದಲು ಆಧುನಿಕ ವಿಜ್ಞಾನವು ನಮಗಿತ್ತಿರುವ ಇನ್ನಿತರ ಸುಲಭ ತಂತ್ರಗಳೆಲ್ಲವನ್ನೂ ಪ್ರಯೋಗಿಸಿ ನೋಡುವುದು ಅಪೇಕ್ಷಣೀಯ. ಇವೆಲ್ಲವುಗಳಿಂದಲೂ ಇಷ್ಟಾರ್ಥ ಸಾಧಿಸದೆ ಹೋದರೆ, ಮುಂದೆ ಗಂಭೀರವಾಗಿ ಗರ್ಭಪಾತಕ್ಕೆ ಅವಕಾಶ ಕೊಡುವ ಕುರಿತು ಚಿಂತಿಸಲೂಬಹುದು.

ಒಂದು ಸಲಹೆ

ಕರ್ನಾಟಕ ರಾಜ್ಯದಲ್ಲಿ ಅಧ್ಯಾಪಕರ ಹುದ್ದೆಗಳಿಗೆ ಅಭ್ಯರ್ಥಿಗಳೇ ಇಲ್ಲವಂತಹ ಪರಿಸ್ಥಿತಿಯಿಂದು ಗಂಭೀರವಾಗಿ ಕಾಡುತ್ತಿದೆ. ಮೊದಲ ಕೆಲವರ್ಷಗಳಲ್ಲಿ ತರಬೇತಿ ಹೊಂದಿದವರ ಕೊರತೆಯಿತ್ತು. ಕಳೆದೆರಡು—ಮೂರು ವರ್ಷಗಳಲ್ಲಿ ವಿಜ್ಞಾನ ಅಧ್ಯಾಪಕರ ಅಭಾವವಿತ್ತು. ಆದರೆ ಈಗ ಸಾಮಾನ್ಯವಾಗಿ ಹೆಚ್ಚಿನ ಹೈಸ್ಕೂಲುಗಳಲ್ಲಿ ಅಧ್ಯಾಪಕರ ಕೊರತೆ ವಿಪರೀತವಾಗಿದೆ. ಪ್ರತಿಯೊಂದರಲ್ಲೂ ಸ್ಥಳಗಳು ಖಾಲಿ ಬಿದ್ದಿವೆ. ಹೀಗೆಯೇ ಮುಂದುವರಿದರೆ, ಭಾವೀ ಜನಾಂಗದ ಗತಿಯೇನು? ಇದರ ಪರಿಹಾರಕ್ಕೆ ಸೂಕ್ತ ಕ್ರಮ ಸರಕಾರ ಕೈಗೊಳ್ಳಬೇಕು. ಅಧ್ಯಾಪಕರ ವೇತನವನ್ನು ಆಕರ್ಷಕಗೊಳಿಸಬೇಕು. ಇದರ ಜತೆಗೆ ಇನ್ನೊಂದು ಕ್ರಮವನ್ನೂ ರಾಜ್ಯದ ವಿಶ್ವವಿದ್ಯಾನಿಲಯಗಳು ಕೊಡಗಬೇಕು. ಹಿಂದೆ ಮದ್ರಾಸ ರಾಜ್ಯದಲ್ಲಿಯೂ ಇಂತಹುದೇ ಅಭಾವ (ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ಪಠ್ಯ ಪುಸ್ತಕವೇ ಬಂದಿಲ್ಲವಂತೆ ರಾಯ್ರೆ, ಅದ್ರಿಂದ ಅಧ್ಯಾಪಕರ ನೇಮಕವೂ ಆಗಿಲ್ಲವಂತೆ!"

"ನಮಗೆ ಪುಸ್ತಕವೂ ಬೇಡ, ಅಧ್ಯಾಪಕರೂ ಬೇಡ, ನಮ್ಮ ಹುಡುಗ ಶಾಲೆಗೆ ಹೋಗಿ ಬಂದ್ರೆ ಸಾಕು..."

ಮೂರು

ಗೇಹ ರಾಜ್ಯದಲ್ಲಿ

ದಾಕ್ಷಿಣಾತ್ಯರು ಬಾಯಿಬಡಕರೆ?

'ಹೌದ್ರಿ ಏನಾಯಿತಂತೆ?'

'ಯಾವುದು?"

'ಯಾವುದೂಂದ್ರೆ? ಅದೇ, ಟೋಪಿಯವ್ರೇ ಟೋಪಿಯವ್ರಿಗೆ ಟೋಪಿಯಿಡುವ ವಿಚಾರ..."

"ಹಾಗಂದ್ರೆ?"

'ಹಾಗಂದ್ರೆ, ಹಾಗೇ....ಅದೇ ಅಂದೆನಲ್ಲಾ?"

"ಹೌದಪ್ಪಾ ನೀನೇನೋ ಅಂದೆ. ಆದ್ರೆ ಅದ್ರ ಅರ್ಥ ನನಗೆ ಹೇಗಾಗ್ಬೇಕೂಂತ?"

'ಪಾಪ ಹೇಗೆ ಅರ್ಥವಾಗುತ್ತೆ? ಅಥವಾ ಆಗಬೇಕಾದ್ರೂ ಯಾಕೇಂತ?"

'ಅಯ್ಯೋ ಮಹರಾಯ್ತಿ. ಏನದು ವಿಚಾರ? ತುಸು ಸೂತ್ರವನ್ನು ಬಿಡಿಸಿ ಹೇಳಿದ್ರೆ...."

'ಬಿಡಿಸಿ ಹೇಳ ಬೇಕಂತೆ ಮತ್ತೆ, ಅಲ್ಲಾ, ನಾನೇನು ಮುಚ್ಚಿಟ್ಟು ಹೇಳಿದ್ದೇನೆಯ?'

'ಯಾರು ಹಾಗೆ ಅಂದವ್ರು? ಟೋಪಿ ಟೋಪಿ ಅಂತ ಜರಚಿಕೊಂಡ್ರೆ ನನಗೇನು ಗೊತ್ತಾಗಬೇಕೂಂತ?'

'ಅದೇ ಅಂದೆನಲ್ಲಾ, ಇದೆಲ್ಲಾ ನಿನ್ಗೆ ಹೇಗೆ ಗೊತ್ತಾಗುತ್ತೆ? ಪಾಪ, ಏನೂ ಗೊತ್ತಿಲ್ಲ ನಿನಗೆ. ಬಾಯಲ್ಲಿ ಬೆರಳಿಟ್ರೆ ಚೀಪಿ ಬಿಡೋ ಹರಿಯ ಅಲ್ವೆ?"

"ಸಾಕು ಮಾಡೇ, ನೀನೊಂದು, ನಂಜಿ ಕಾರೋವ್ಳು!'

"ಹೌದಪ್ಪ, ತಾನು ನಂಜಿ ಕಾರೋಳು. ಹೇಳಿ, ಕನ್ನಡಿ ಹಾವೂಂತ...."

"ಅಲ್ಲಾ, ನಿನ್ನ ನಾಲಿಗೆ ತುದಿಗೆ ಸಿಕ್ಕಿಬಿದ್ರೆ ಮತ್ತೆ ಕನ್ನಡಿ ಹಾವು ಬೇರೆ ಕಡಿಯೋದು ಯಾಕೆ?'

'ಅಷ್ಟು ಗೊತ್ತಿದ್ದೂ ಮತ್ತೂ ಆ ಕನ್ನಡಿ ಹಾವನ್ನ ಕಿಸೇಲಿಟ್ಕೊಂಡಿದ್ದೀರಲ್ಲಾ...'

'ಮತ್ತೇನು ಮಾಡೋದು ಹೇಳು? ಮೊದಲೇ ಅದು ಅಂತಹ ಹಾವೂಂತ ಗೊತ್ತಿದ್ರೆ, ಮುಟ್ಟೋಕೇ ಹೋಗ್ತಿರ್ಲಿಲ್ಲ ನೋಡು....'

"ಈಗ, ಗೊತ್ತಾದ ಮೇಲಾದ್ರೂ. ."

"ಏನು ಮಾಡೋದು? ನಾನಾಗಿ ಮುಟ್ಟೋಕೆ ಹೋಗ್ದಿದ್ರೂ ಅದೂನೇ ಕಚ್ಚೋಕೆ ಓಡಿ ಬರುತ್ತಲ್ಲಾ?"

"ಅದ್ಕೊಂದು ಕೆಲ್ಸ ಮಾಡ್ಬೇಕು. '

"ಏನದು?'

"ಭಾರೀ ಸುಲಭವದ್ದು .."

"ಏನದು ಹೇಳು..."

'ಅಂತಹ ನಂಜಿನ ಹಾವೂಂತ ತಿಳಿದ ಮೇಲಾದ್ರೂ...'

"ಕೊಂದು ಬಿಡಬೇಕೆ?'

'ಅದೂ ಮಾಡಬಹುದು; ಅಥವಾ...'

"ಏನದು, ಪರ್‍ಯಾಯ ಕಾರ್‍ಯ?'

"ಹ್ಞಾಂ, ಪರ್‍ಯಾಯ ಕಾರ್‍ಯ ಶುರು ಆಗಿದೆ. ಇನ್ನೇನು ಆರು ತಿಂಗ್ಳಲ್ಲಿ ಪರ್‍ಯಾಯನೂ ಮುಗಿದು ಹಳೆಯದಾಗುತ್ತೆ..."

"ಅದು ಸರಿ, ಒಂದು ಹಳೆಯದಾದ್ರೆ ಮತ್ತೊಂದು ಹೊಸ್ತಾಗೋಕೆ ತಯಾರಿರುತ್ತೆ. ಅಸಿಲ್ಲಿ ನೀನಂದ ಅಥವಾ ಏನು?"

"ಏನು ಅಂದ್ರೆ? ಕಿಸೇಲ್ಲಿರೋದು ಕನ್ನಡಿ ಹಾವೂಂತ ತಿಳಿದು ಬಂದ ಮೇಲೆ ಅದನ್ನು ದೂರಕ್ಕೆ ಎಸೆದು ಬಿಡೋದು.."

"ಅದೆಲ್ಲಿ ಸಾಧ್ಯ ಒಂದು ವೇಳೆ ಸಾಧ್ಯವಿದ್ರೂ ಪಾಪ, ಊರವರಿಗೆ ಯಾಕೆ ಉಪದ್ರವ ಕೊಡಬೇಕು?"

'ಸದ್ಯ, ಊರವರ ಮೇಲಾದ್ರೂ ಕರುಣೆಯಿದೆಯಲ್ಲಾ ಹೃದಯದಲ್ಲಿ?'

"ಒಂದು ವೇಳೆ ಇಲ್ದಿದ್ರೂ ಇದೇಂತ ಅಂದ್ಬಿಟ್ರೆ, ಅದರಿಂದಾಗೋ ನಷ್ಟವಾದ್ರೂ ಏನು?'

"ಅದ್ಕೇ ಅಂದೆನಲ್ಲಾ ಇವತ್ತಿನ ಮನುಷ್ಯರೆಲ್ಲಾ ಹೀಗೇನೇ. ಹಿಂಸ್ರ ಪಶುಗಳಂತೆ ತಮ್ಮ ಮಕ್ಕಳನ್ನು ತಾವೇ ನುಂಗಿ ತೇಗೋದು..."

'ಅದೆಂತದೊ ಏನೋ! ನಿನ್ನ ಒಂದೂ ಮಾತು ನನಗೆ ಅರ್ಥವಾಗೋದಿಲ್ಲ. ಏನೋ ಒಂದು ಜಟಿಲವಾದ ಸೂತ್ರ ನೇರವಾಗಿ...?"

'ಯಾಕೆ ನಾನು ನೇಯಬೇಕು? ನಿಮ್ಮ ಟೋಪಿಯವ್ರೇ ಅದಕ್ಕೆ ಸಾಕೂನ್ನಿ..."

"ಸಾಕೋ ಬೇಕೋ ನಾನರಿಯೆ. ವಸ್ತು ಸ್ಥಿತಿಯೇನೂಂತ ತಿಳಿದ್ರೆ, ಸೂತ್ರವನ್ನು ಅರ್ಥವಿಸೋ ಪ್ರಯತ್ನವನ್ನಾದ್ರೂ ಮಾಡ್ತೇನೆ...."

'ಬೇಡ ಕಣ್ರೀ, ನನಗೇನಂತ ಭಯ? ಇದ್ದುದನ್ನು ಇದ್ದಹಾಗೆ ಹೇಳೋಕೆ ..'

'ಹಾಗೇ ಹೇಳಿದ್ರೆ ತೊಂದ್ರೆಯಿಲ್ಲ ಆದರೆ ಅದಕ್ಕೆ ಖಾರ ಒಗ್ಗರಣೆ ಹಾಕಿದ್ರೆ ಮಾತ್ರ ..."

"ಅಲ್ರಿ, ಒಗ್ಗರಣೆ ಹಾಕೋಕೂ ನಿಮ್ಮವರೇ ಇರುವಾಗ ಅದ್ಕೆ ನಾನ್ಯಾಕೆ ಹೋಗ್ಬೇಕು?'

'ಏನೂಂತ ಸರಿಯಾಗಿ ಬಾಯಿ ಬಿಟ್ರೆ..."

"ಆಯ್ತಪ್ಪ, ಇಗೊಳ್ಳಿ, ಸರಿಯಾಗಿ ನೋಡಿ...'

'ಅಯ್ಯಯ್ಯೋ, ಇದೆಂತದ್ರಿ? ..."

'ಮತ್ತೇನೂ ಇಲ್ಲ, ಎಂದು ಸಿಲಿದ ಚಾಕಲೇಟು...'

'ಅಯ್ಯೋ, ಹಳಸಿದ ಬೆಲ್ಲ...ಚೀ...."

'ಅದಕ್ಕೇ ರುಚಿ ಬಹಳ. ."

"ಅದು ಸರಿಯೇ. ನಿಮ್ಮಂತಹವರಿಗೆ ಹಳಸಿದ್ದೇ ಚಂದ ಜಗಿಯೋಕೆ...."

'ಏನೇ, ಇವತ್ತು ಏಕ್ ದಂ ಪ್ರತಿಯೊಂದಕ್ಕೂ ನನ್ನನ್ನೇ ಬೊಟ್ಟು ಮಾಡ್ತಿ?"

"ಮತ್ಯಾರನ್ನ ಮಾಡೋದು? ನೀವೇ ಅಡೋದು ನೀವೇ ಬಳಸೋದು ಮತ್ತೆ ನೀವೋ ಉಣ್ಣೋದು?"

"ಸುಂಸುಮ್ನೆ ಯಾಕೆ ಹೀಗೆಲ್ಲಾ ಬೇಡವಾದ ಮಾತು? ಸಂಗ್ತಿ ಏನೊಂತಂದ್ರೆ..'

"ಆಯ್ತಪ್ಪ, ನಾನು ಅಂದದ್ದು ಮತ್ತೇನೂ ಅಲ್ಲ, ಗೋವೆಯ ವಿಷಯ...."

'ಓ ಗೋವೆಯೆ? ನಾನು ಏನೋ ಅಂತಿದ್ದೆ ..."

"ಹೌದಪ್ಪ, ನಿಮಗೆಲ್ಲ ನೀವು ಮಾಡೋ ಅನ್ಯಾಯ ಹೇಗೆ ಗೊತ್ತಾಗುತ್ತೇಂತ?"

"ಯಾಕೆ, ಏನಾಯ್ತು?"

'ಆಗೋದೇನು? ನಿಮ್ಮ ಟೋಪಿಯವ್ರು...'

'ಓ, ಹಾಗೆ....ಹ್ಞಾಂ, ಈಗ ಅರ್ಥವಾಯ್ತು ಬಿಡು .."

"ಬೆರಳು ತೋರ್‍ಸಿದ್ರೆ, ಕೈ ನುಂಗೋ ಜಾತಿ ನಿಮ್ಮದೂಂತ ನನಗೂ ಗೊತ್ತು....'

"ಗೊತ್ತಿದ್ರೆ, ಯಾರು ಬೇಡಾಂತಾರೆ?'

'ಯಾರು ಬೇಡಾಂತಂದ್ರೂ ಗೊತ್ತಿರೋದು ಗೊತ್ತಿಲ್ಲದಾಗುತ್ಯೆ?'

'ಹ್ಞಾಂ, ಅದು ಸರೀನ್ನು....'

'ಏನು ಸರಿಯೋ.... ಅಂತೂ ಆರಂಭ ಶೂರಾಃ ಖಲು ದಾಕ್ಷಿಣಾತ್ಯಾಃ ಅನ್ನೋದು ಮಾತ್ರ ಸತ್ಯ....'

(ಹದಿಮೂರನೇ ಪುಟ ನೋಡಿರಿ)

ಅಂಕೆಗಳನ್ನು ಗಣನೆಗೆ ತೆಗೆದು ಕೊಳ್ಳುವುದಾದರೆ ಕೆನರಾ ಬ್ಯಾಂಕಿನ ಸಂಪತ್ಸಾಧನಗಳು ಒಂಬತ್ತು ಅಂಕೆಗಳೆತ್ತರ ಹೋಗುತ್ತವೆ - 90 ಕೋಟಿ ರೂ. ಗಳಿಗಿಂತ ಹೆಚ್ಚಾಗಿವೆ - ಕೆನರಾ ಬ್ಯಾಂಕ್ ದೇಶದ ಅತಿ ದೊಡ್ಡ ಬ್ಯಾಂಕುಗಳಲ್ಲಿ ಒಂದೆಂದು ಇದು ಸಹಜವಾಗಿ ಸೂಚಿಸುವುದು ■ ಆದರೂ ಬ್ಯಾಂಕಿಂಗ್ ಉದ್ಯಮದಲ್ಲಿ ಅಂಕೆಗಳ ಗಣನೆಗಿಂತ ಅತ್ಯಂತ ಗಣನೀಯ ಅಂಶ ಗ್ರಾಹಕ ವರ್ಗವೆಂದು ಕೆನರಾ ಬ್ಯಾಂಕ್ ದೃಢವಾಗಿ ನಂಬಿದೆ ■ ಸುದೃಢ ಹಾಗೂ ಪ್ರಗತಿಪರ ಕೆನರಾ ಬ್ಯಾಂಕ್ ಗ್ರಾಹಕರ ಬ್ಯಾಂಕಿಂಗ್ ಆವಶ್ಯಕತೆಗಳನ್ನು ಅರ್ಥ ಮಾಡಿ ಕೊಳ್ಳುವಂತಹ ಬ್ಯಾಂಕಾಗಿದೆ ■ ಆದ ರಿಂದಲೇ ತನ್ನ ಲಕ್ಷಾಂತರ ಗ್ರಾಹಕರಿಗೆ ಕೆನರಾ ಬ್ಯಾಂಕು ಕ್ರಿಯಾಶೀಲ ಬ್ಯಾಂಕೆಂದು ಸುಪರಿಚಿತವಾಗಿದೆ. ಏಕೆಂದರೆ ಕೆನರಾ ಬ್ಯಾಂಕು ತೃಪ್ತಿಕರ ಸೇವೆ ಸಲ್ಲಿಸುತ್ತದೆ.

ಅಂಕೆಗಳು ಗಣನೀಯ ಹೌದು ಆದರೆ .... ಅದಕ್ಕಿಂತ ಗಣನೀಯ ಅಂಶ ಗ್ರಾಹಕವರ್ಗ

1
12
123
1234
12345
123456
1234567
12345678
123456789

ಇಂದೇ ನೀವು ನಮ್ಮ ಗ್ರಾಹಕ ವರ್ಗಕ್ಕೆ ಸೇರಿ

ಕೆನರಾ ಬ್ಯಾಂಕ್ ಲಿಮಿಟೆಡ್
(ಸ್ಥಾಪಿತ: 1906)

ಆಡಳಿತ ಕಛೇರಿ: ಬೆಂಗಳೂರು
ರಿಜಿಸ್ಟರ್ಡ್ ಆಫೀಸ್. ಮಂಗಳೂರು

90 ಕೋಟಿ ರೂ. ಗಳಿಗೂ ಮೀರಿದ ಸಂಪತ್ಸಾಧನಗಳು

CB-123/ Kannada

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಸ್ಥಿತಪ್ರಜ್ಞನ ಲಕ್ಷಣಗಳು

ಬುದ್ಧಿಯುಕ್ತೋ ಜಹಾತೀಹ |
ಉಭೇ ಸುಕೃತ ದುಷ್ಕೃತೇ |
ತಸ್ಮಾದ್ಯೋಗಾಯ ಯುಜ್ಯಸ್ವ |
ಯೋಗಃ ಕರ್ಮಸು ಕೌಶಲಮ್ ||೫೦||

ವಿವೇಕದಿಂದ ಕೂಡಿ ಸಮತ್ವ ಬುದ್ಧಿಯುಕ್ತನಾಗಿ, ಹಿತಾಹಿತ ಕರ್ಮಗಳ ವಿಚಾರವನ್ನೇ ಈ ಜನ್ಮದಲ್ಲಿ ತ್ಯಜಿಸುವವನಾಗು. ಆದ್ದರಿಂದ ಯೋಗಯುಕ್ತನಾಗು. ಯೋಗವೆಂದರೆ ಕೆಲಸ ಮಾಡುವುದರಲ್ಲಿನ ಚಾತುರ್ಯ.

ಹಿಂದೆ ಹೇಳಿದ ಶ್ಲೋಕದಲ್ಲಿ ಯೋಗವೆಂದರೆ ಸಮತ್ವ ಬುದ್ಧಿಯಿಂದು ನುಡಿದು, ಈಗ ಕರ್ಮವನ್ನು ಕುಶಲತೆಯಿಂದ ಮಾಡುವುದೇ ಯೋಗವೆಂದು ಹೇಳಿರುವನು. ಸಮತ್ವ ಬುದ್ಧಿಯಿಂದ ಮಾತ್ರ ಕೂಡಿದ್ದರೆ ಅದು ಯೋಗವಲ್ಲವೆಂದೂ, ಆ ಬಗೆಯ ಸ್ಥಿತಿಯಲ್ಲಿ ಕೆಲಸ ಮಾಡುತ್ತಾ ಇರಬೇಕೆಂದೂ ಈ ಶ್ಲೋಕದಲ್ಲಿ ಅದನ್ನೇ ವಿವರಿಸಿ ಹೇಳಿದುದಾಗಿದೆ. ಸಮತ್ವ ಬುದ್ಧಿಯಿಂದ ಕೂಡಿದೊಡನೆ, ಕೆಲಸ ಮಾಡಲು ಉತ್ಸಾಹ, ಹುರುಪು, ಹೆಚ್ಚು ಬರುವುದು. ಅದನ್ನು ಮಹಾತ್ಮರ ಜೀವನದಿಂದ, ಅವರ ಸ್ಫೂರ್ತಿಯುತ ಕರ್ಮದಿಂದ ನಾವು ತಿಳಿದುಕೊಳ್ಳಬಹುದು.

ಕರ್ಮಜಂ ಬುದ್ಧಿಯುಕ್ತಾ ಹಿ |
ಫಲಂ ತ್ಯಕ್ತ್ವಾ ಮನೀಷಿಣಃ |
ಜನ್ಮಬಂಧ ವಿನಿರ್ಮುಕ್ತಾಃ ಪದಂ |
ಗಚ್ಛಂತ್ಯನಾಮಯಮ್ ||೫೧||

ಕರ್ಮದಿಂದ ಹುಟ್ಟುವ ಫಲದ ಅಪೇಕ್ಷೆಯನ್ನು ಈ ಬುದ್ಧಿ ಯೋಗದಿಂದಾಗಿ ತ್ಯಜಿಸಿ, ವಿವೇಕವಂತರು, ಜ್ಞಾನಿಗಳು ತಮ್ಮ ಮನ ಬುದ್ಧಿಯನ್ನು ದಾಟಿ ಪರಮ ಪದವನ್ನು ತಲುಪುವರು. ಅನಂತತೆಯನ್ನು ಹೊಂದುವರು. ಋಷಿಗಳು ಇದನ್ನೇ ತಪಸ್ಸಿನಿಂದ ಹೊಂದುವರು. ಹೀಗೆ ನೀನು ನಿನ್ನ ಮುಂದಿದ್ದ ಸಮಸ್ಯೆಗಳನ್ನು ಕೆಲಸವನ್ನು ಮಾಡಿಯೇ ಆ ಗತಿಯನ್ನು ತಲುಪಬಹುದು.

ಈ ಶ್ಲೋಕದಲ್ಲಿ ಶ್ರೀಕೃಷ್ಣನು ನಮ್ಮ ಉಪನಿಷತ್ ತತ್ವಗಳನ್ನು ಕಾಡಿನ ಪ್ರಶಾಂತ ವಾತಾವರಣದಲ್ಲಿ ಮಾತ್ರ ಬಾಳುವಾಗ ಅಲ್ಲ, ಜನರ ಮಧ್ಯೆ ಕರ್ತವ್ಯ ನಿರ್ವಹಣೆ ಮಾಡುವಾಗಲೂ, ಬಳಸಬಹುದು ಎಂದು ಹೊಸತೊಂದು ರೂಪದಲ್ಲಿ ಕಾಲದ ಪರಿಸ್ಥಿತಿ ಬದಲಾದಾಗ, ಹಳೆಯ ತತ್ವಗಳನ್ನೇ ಹೊಸ ಸ್ಥಿತಿಗೆ ಅನುಗುಣವಾಗಿ ರೂಪಿಸಿ ವಿವರಿಸಿರುವನು. ಇದು ಶ್ರೀಕೃಷ್ಣನು ಇಟ್ಟ ಒಂದು ಹೊಸ ದಿಟ್ಟ ಹೆಜ್ಜೆ ಎನ್ನಬಹುದು.

ಮಹಾಭಾರತದ ಕಾಲದಲ್ಲಿ ಆರ್ಯರ ಸಂಸ್ಕೃತಿಯು ಅವನತಿ ಹೊಂದುತ್ತಾ ಬಂದಾಗ, ಹಿಂದಿನ ತತ್ವಗಳು ಬಾಳಿನಲ್ಲಿ ಬದುಕಲು ನಿಷ್ಪ್ರಯೋಜಕ ಎಂಬ ಭಾವನೆ ಜನ ಮನದಲ್ಲಿ ಬೇರೂರಿದಾಗ, ವ್ಯಾಸರು ಹಳೆಯ ತತ್ವಗಳಿಗೆ ಹೊಸ ಉಡಿಗೆಯನ್ನು ಹೀಗೆ ತೊಡಿಸಿರುವರು. ಆ ಕಾಲದಲ್ಲಿ ವಿದ್ಯಾವಂತ ನಾಗರಿಕರಿಗೆ, ವೇದಗಳ ಬಗ್ಗೆ ಎಂತಹ ತಪ್ಪು ಕಲ್ಪನೆ, ಇತ್ತೆಂದು ಅರ್ಜುನನನ್ನು ಆ ನಾಗರಿಕರ ಪ್ರತೀಕವಾಗಿರಿಸಿ, ತತ್ವದ ಉಪದೇಶವನ್ನು ಶ್ರೀಕೃಷ್ಣನಿಂದ ಕೊಡಿಸಿರುವರು.

ಹೀಗೆ ಆ ಪರಮ ಪದವನ್ನು ತಲುಪಲು ಮನ, ಬುದ್ಧಿಯನ್ನು ದಾಟಿ ಮೇಲೆ ಹೋದ ಬಳಿಕ ಭ್ರಾಂತಿಯು ತೊಲಗುವುದು. ಅವರವರ ಪಾಲಿಗೆ ಬಂದ ಕರ್ತವ್ಯ ನಿರ್ವಹಣೆಯಲ್ಲಿಯೇ ಧಾರ್ಮಿಕ ತತ್ವಗಳನ್ನು ಬುದ್ಧಿ ಯೋಗದಿಂದ ಬಾಳಿ ಪರಮ ಪದವನ್ನು ತಲುಪಬಹುದು. ಆಗ ಭ್ರಾಂತಿಯು ನಾಶವಾಗುವುದು. ಹಾಗೆ ಅಂತಹ ಸ್ಥಿತಿಯನ್ನು ತಲುಪಿದ ಬಳಿಕ, ಅಂತಹವನಿಗೆ ಕೇಳಿದ ಸ್ಥಿತಿ ಪ್ರಾಪ್ತವಾಗುವುದು.

ಯದಾತೇ ಮೋಹ ಕಲಿಲಂ |
ಬುದ್ಧಿ ರ್ವ್ಯತಿತರಿಷ್ಯತಿ |
ತದಾ ಗಂತಾಸಿ ನಿರ್ವೇದಂ |
ಶ್ರೋತವ್ಯಸ್ಯ ಶ್ರುತಸ್ಯ ಚ ||೫೨||

ಮನ ಬುದ್ಧಿಯನ್ನು ದಾಟಿದವನು, ತನ್ನ ಅಜ್ಞಾನದಿಂದ ಬಿಡುಗಡೆ ಹೊಂದುವುದರಿಂದ, ಇನ್ನು ಮುಂದೆ ತಿಳಿಯಬೇಕೆಂಬ ಅಪೇಕ್ಷೆಯನ್ನೂ, ಇಷ್ಟರ ತನಕ ತಿಳಿದುದರ ಮೇಲಿನ ಅಪೇಕ್ಷೆಯನ್ನು ತ್ಯಜಿಸಿ ಬಿಡುವನು. ಅವನು ಅತ್ಯಂತ ಶಾಂತ ಸ್ಥಿತಿಯಲ್ಲಿ ಸದಾ ಇರುವನು. ಅವನಿಗೆ ಅದಕ್ಕಿಂತ ಹೆಚ್ಚಿನದನ್ನು ತಿಳಿಯಬೇಕೆಂಬ, ಹೊಂದಬೇಕೆಂಬ ಇಚ್ಛೆಯೇ ಇಲ್ಲದ ಕಾರಣ ಅವನು ಶಾಂತಿ ಪಡೆಯುವನು.

ಮನ, ಬುದ್ಧಿಯನ್ನು ದಾಟಿದವನಾದುದರಿಂದ ಅಂತಹವನು, ತನ್ನ ನಿಜ ಸ್ವರೂಪವನ್ನು ತಿಳಿದು, ಅವನು ಇಂದ್ರಿಯಾದಿ ವಿಷಯಗಳಲ್ಲಿನ ಆಸಕ್ತಿಯನ್ನು ಸಂಪೂರ್ಣ ತ್ಯಜಿಸಿಬಿಡುವನು.

ಶ್ರೀ ಕೃಷ್ಣನು ಹೀಗೆ ಹೇಳುವಾಗ ಅರ್ಜುನನಿಗೆ, ಆ ಮನಶ್ಶಾಂತಿಯ ಸ್ಥಿತಿಯ ವರ್ಣನೆ ಕೇಳಿ ಕುತೂಹಲ ಉಂಟಾಗತೊಡಗಿತು. ಇದನ್ನಾತ ಹಿಂದೆ ಎಲ್ಲಿಯೂ ಕೇಳಿರಲಿಲ್ಲ. ಅದರಿಂದಾಗಿ ಇದು ಶ್ರೀಕೃಷ್ಣನ ಸ್ವಂತ ತತ್ವವೋ ಎಂಬ ಸಂದೇಹ ಬರತೊಡಗಿತು.

ಒಂದು ವಸ್ತುವಿನ ವಿಷಯ ಒಬ್ಬೊಬ್ಬರು ಒಂದೊಂದು ಊಹನೆ, ಕಲ್ಪನೆ ಮಾಡಿದರೆ, ಆ ವಿಷಯದ ಅರಿವು, ಒಬ್ಬೊಬ್ಬರಿಗೆ ಒಂದೊಂದು ತರಹವಾಗಿ ತೋರಿದರೆ, ಆ ವಸ್ತುವಿನ ಅಳೆಯುವ ಪ್ರಮಾಣ, ಒಂದೊಂದು ತರಹವಾಗಿ ಬೇಕಾಗುವುದು. ಹಾಗೆ ನೀತಿ ಧರ್ಮಗಳು, ಒಬ್ಬೊಬ್ಬರಿಗೆ ಒಂದೊಂದು ತರಹವಾಗಿ ಇವೆ. ಆದರೆ, ಅವನ್ನು ಅಳೆಯುವ ಒಂದು ಪ್ರಮಾಣಕ್ಕೆಂದು, ಅತಿ ಉತ್ತಮ, ಅತಿ ಪ್ರೇಮಮಯ, ಅತಿ ಉದಾತ್ತ ಚಿಂತನೆಯಿಂದ ಒಂದು ವಸ್ತುವನ್ನು ದೇವರೆಂದು, ಕರೆಯುವರು. ಎಲ್ಲಾ ಜಾತಿ, ಮತ, ಧರ್ಮಗಳಲ್ಲಿ ಆ ದೇವರನ್ನು, ಆ ಉಚ್ಚತಮ ಆದರ್ಶವನ್ನು ವರ್ಣಿಸುವ ಮಾತು ಒಂದೇ ಆಗಿದೆ. ಕೇವಲ ಅದನ್ನು ಸಂಭೋಧಿಸುವ ಹೆಸರು ಮಾತ್ರ ಬೇರೆ ಇರಬಹುದು. ಆದರೆ ಅದರ ಕಲ್ಪನೆ ಒಂದೇ ಆಗಿದೆ. ಅದನ್ನು ತಲುಪುವ ಹಾದಿಗಳಲ್ಲಿ ವ್ಯತ್ಯಾಸವಿದೆ. ನಿಜ,ಆದರೆ ಗುರಿ ಮುಟ್ಟಿದ ಬಳಿಕ ಎಲ್ಲವೂ ಒಂದೇ ಆಗಿರುವುದು ಕೇವಲ ತಪಸ್ಸಿನಿಂದ ಮಾತ್ರ ಆ ಪರಮ ಪದವನ್ನು ತಲುಪುವ ಬದಲು ಈ ಬುದ್ಧಿ ಯೋಗದಿಂದ ಆ ಸ್ಥಿತಿ ತಲುಪಲು ಸಾಧ್ಯವಿದೆ ಎಂದು ಕೃಷ್ಣನು ಹೇಳಿದನು. ಆ ಸ್ಥಿತಿ ತಲುಪಿದ ಗುರುತೇನು ಎಂದು ಕೂಡಾ ಕೃಷ್ಣನು ಹೇಳಿರುವನು

ಶ್ರುತಿ ವಿಪ್ರತಿಪನ್ನಾ ತೇ |
ಯದಾ ಸ್ಥಾಸ್ಯತಿ ನಿಶ್ಚಲಾ |
ಸಮಾಧಾವಚಲಾ ಬುದ್ಧಿ |
ಸ್ತದಾ ಯೋಗಮವಾಪ್ಸ್ಯಸಿ ||೫೩||

ಮುನಿಗಳು, ಋಷಿವರ್ಯರು, ತಪಸ್ಸಿನಿಂದ ಹೇಗೆ ಬುದ್ಧಿ ಮತ್ತು ಮನವನ್ನು ಏಕಮುಖವಾಗಿ ಪ್ರವಹಿಸುವಂತೆ ಮಾಡಿ, ಅದನ್ನು ದಾಟಿ ಹೋಗುವರು, ಹಾಗೆ ದೈನಂದಿನ ಕರ್ತವ್ಯವನ್ನು ಮಾಡುತ್ತಾ ಬುದ್ಧಿಯೋಗದಿಂದ, ಮನ ಬುದ್ಧಿಗಳನ್ನು ದಾಟಿ ಹೋಗಬಹುದು. ಹಾಗೆ ದಾಟಿ ಹೋದರೆ ಮನಸ್ಸಿನಲ್ಲಿ ಸಮತ್ವ ಉಂಟಾಗುವುದು. ಅವನು ಏನು ಕೇಳಿದರೂ, ಏನು ನೋಡಿದರೂ, ಏನು ಮಾತನಾಡಿದರೂ, ಏನು ಕೆಲಸ ಮಾಡಿದರೂ ಮನದ ಸ್ಥಿತಿ ಕದಲದೆ, ಅಚಲನಾಗಿಯೇ ಇರುವನು. ಅವನು ಬಾಹ್ಯ ಸನ್ನಿವೇಶದಿಂದ ಕದಲಲಾರನು, ಅತ್ತಿತ್ತ ಹೊಯ್ದಾಡಲಾರನು. ಇಂತಹ ಸ್ಥಿತಿ ಪ್ರಾಪ್ತವಾದಾಗ ಅವನು ಯೋಗಾರೂಢನಾದನೆಂದು ತಿಳಿಯಬಹುದು. ಹೀಗೆ ನೀನು ಬುದ್ಧಿಯೋಗವನ್ನು ಅಭ್ಯಸಿಸಿ ಯೋಗಸ್ಥನಾಗು.

ಶ್ರೀ ಕೃಷ್ಣನು ಹೀಗೆ ಹೇಳಿದೊಡನೆ ಅರ್ಜುನನಿಗೆ ಕುತೂಹಲ ಕೆರಳಿತು. ಬುದ್ಧಿಗೆ ಮಂಕು ಕವಿದುದು ಕೊಂಚ ಸರಿಯಿತು. ಕೊಂಚ ಯೋಚನೆ ಮಾಡತೊಡಗಿದನು. ಒಂದು ಪ್ರಶ್ನೆ ಕೇಳಿದನು.

ಅರ್ಜುನ ಉವಾಚ:—

ಸ್ಥಿತ ಪ್ರಜ್ಞಸ್ಯ ಕಾ ಭಾಷಾ |
ಸಮಾಧಿಸ್ಥಸ್ಯ ಕೇಶವ |
ಸ್ಥಿತಧೀಃ ಕಿಂ ಪ್ರಭಾಷೇತ |
ಕಿಮಾಸೀತ ವ್ರಜೇತ ಕಿಮ್ ||೫೪||

ಅಂತಹ ವಿವೇಕವಂತ ಸ್ಥಿತಪ್ರಜ್ಞನು ಬಾಹ್ಯ ವರ್ತನೆಗಳನ್ನು ಹೇಗೆ ಮಾಡುವನು? ಅವನ ವ್ಯವಹಾರಗಳು ಹೇಗಿವೆ? ಲೋಕದಲ್ಲಿ ಅವನು ಸಮಸ್ಯೆಗಳನ್ನು ಹೇಗೆ ನಿವಾರಿಸಿ ಕೊಳ್ಳುವನು ?

ಮೊದಲನೆಯ ಸಾಲಿನಲ್ಲಿ ಅಂತಹ ವಿವೇಕವಂತನಾದ ಜ್ಞಾನಿಯು ಅಂತಃ ಜಗತ್ತು ಎಂದರೆ ಮನದ ಸ್ಥಿತಿ ಹೇಗಿರುವುದು ಎಂದೂ, ಅವನ ಬಾಹ್ಯ ಕರ್ಮಗಳು ಹೇಗೆ ಇರುವುವು ಎಂದು ಅರ್ಜುನನು ಪ್ರಶ್ನಿಸಿರುವನು.

(ಹನ್ನೆರಡನೇ ಪುಟ ನೋಡಿರಿ)

ಮತ್ತೊಂದು ಅಪೂರ್ವ
ಉಳಿತಾಯ ಯೋಜನೆ—

"ಜ್ಯೆಂಟ್
ಕೇಶ್ ಸರ್ಟಿಫಿಕೇಟುಗಳು"

ಲಾಭದಾಯಕ ವೈಶಿಷ್ಟ್ಯಗಳು......

- 100/- ರೂಪಾಯಿ ಮತ್ತು 1000/- ರೂಪಾಯಿ ಮೊತ್ತಗಳಲ್ಲಿ ಸಿಗುವುದು.
- ಸರ್ಟಿಫಿಕೇಟುಗಳನ್ನು ಪೂರ್ಣಾವಧಿಯ ಮುಂಚಿತವಾಗಿ, ನಮೂದಿಸಲ್ಪಟ್ಟ ಬಡ್ಡಿಯೊಡನೆ ನಗದು ಮಾಡಬಹುದು.
- ಆರು ತಿಂಗಳು ದಾಟಿದ ಮೇಲೆ ನೀವು ತೊಡಗಿಸಿದ ಹಣ ಬೆಳೆಯಲಾರಂಭವಾಗುತ್ತದೆ. ಈಗ ತೊಡಗಿಸಿದ 100/- ರೂಪಾಯಿ 60 ತಿಂಗಳುಗಳಲ್ಲಿ ರೂಪಾಯಿ 136-30 ಆಗುವುದು.

FAITHFUL SB FRIENDLY
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

— ಅತ್ಯುತ್ತಮ ಬ್ಯಾಂಕಿಂಗ್ ಸೇವೆಗೆ —

ವಿಚಾರವೀಚಿ

ನಿಮ್ಮ ಆತ್ಮವನ್ನು ನೋಡಿಕೊಳ್ಳಿರಿ

ಬರೆದವರು

ಶ್ರೀ ಎನ್. ಎಸ್. ಎಸ್. ಉಜಿರೆ.

ಇಂದಿನ ವಿದ್ಯಾವಂತರು

ಇಂದಿನ ಹಿರಿಯ ವ್ಯಕ್ತಿಯಿಂದ ಮೊದಲ್ಗೊಂಡು ಕಿರಿಯರ ತನಕ ತಪ್ಪು ಹೊರಿಸುವುದರಲ್ಲೇ ಶ್ರದ್ಧೆ ವಹಿಸಿದ್ದಾರೆ. ಈ ತಪ್ಪು ಎಲ್ಲಿಂದ ಆರಂಭಿಸುತ್ತದೆಂದು ಕಂಡು ಅದನ್ನು ಸರಿಪಡಿಸುವ ಮಾರ್ಗದರ್ಶನಕ್ಕೆ ಯಾರೂ ತಯಾರಿಲ್ಲ. ದೂಷಿಸುವ ವ್ಯಕ್ತಿ ಮೊದಲು ತಮ್ಮ ವೈಯುಕ್ತಿಕ ಜೀವನದಲ್ಲಿ, ತ್ರಿಕರಣ ಪೂರ್ವಕವಾಗಿ, ತಾವು ಹೇಳುವಂತೆ, ನಡೆನುಡಿ, ವಿಚಾರಗಳ ಆಚಾರವಂತರಾದರೇನೇ ಅವರ ನುಡಿಗೆ ಇಡೀ ನವಜನಾಂಗ ಅಡಿಯಿಡಲು ಆಸ್ಪದವಾಗುತ್ತವೆ. ಇದಕ್ಕೆ ಪ್ರಚಾರ ಯಾ ಲೇಖನಗಳ ಉದ್ಬೋಧನೆ ಅನಗತ್ಯ. ಹಿಂದಿನ ಮಹಾತ್ಮರು ನಡೆ, ನುಡಿ, ಆಚಾರವಿರುವವನೇ ಸರ್ವೋತ್ತಮ ಮತ್ತು ಸೇವ್ಯ ಪುರುಷನು ಎಂಬುದಾಗಿ ಬೋಧಿಸುತ್ತಾರೆ. ಈಗಿನ ಲೇಖಕರನ್ನು ವಿಮರ್ಶಿಸಿದರೆ, ಜೀವನದ ಪ್ರತಿಯೊಂದು ವಿಷಯವೂ ಅವ್ಯವಸ್ಥಿತ ಮತ್ತು ಚಿಂತಾಜನಕವಾಗಿರುತ್ತದೆ. ಇವರ ಆಚಾರ ಮತ್ತು ನಿಷ್ಠೆಗಳು ತಿರುವು ಮುರುವಾಗಿರುತ್ತವೆ. ಇಂತಹ ಲೇಖಕರ, ಲೇಖನಗಳ ಪ್ರಭಾವದಿಂದ ಯಾವ ಜನಾಂಗವೂ ಸರಿಯಾಗಲಾರದು.

ಇಂದಿನ ಹಿರಿಯ ವ್ಯಕ್ತಿಗಳ ನಡತೆ ಮತ್ತು ವಿಚಾರ ಪ್ರಣಾಳಿಕೆಯನ್ನು ಅವಲೋಕಿಸುವಾಗ ಮಾನವನಾಗಿ ಬದುಕಲಾರ ಎಂಬುದಾಗಿ ಪ್ರತೀ ವ್ಯಕ್ತಿ ವ್ಯಕ್ತಿಯ ಅಂತರಂಗ ನುಡಿಯುತ್ತಿದೆ. ನಮ್ಮ ಹಿರಿಯ ಗತಕಾಲದ ಶ್ರೇಷ್ಠ ವ್ಯಕ್ತಿಗಳಾದ ಶ್ರೀ ರಾಮ, ಸತ್ಯ ಹರಿಶ್ಚಂದ್ರ, ವಿದ್ಯಾರಣ್ಯ, ಛತ್ರಪತಿ ಶಿವಾಜಿ ಮತ್ತು ಝಾನ್ಸಿ ಲಕ್ಷ್ಮೀ ಬಾಯಿ ಮುಂತಾದವರನ್ನು ಜ್ಞಾಪಿಸಿದರೆ, ಅವರು ಆಳಿದ ಜನಾಂಗಕ್ಕೂ, ಈಗಿನ ನಮ್ಮ ನಾಗರಿಕ ಜನಾಂಗಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ನಾವು ಬಹಳ ಮುಂದುವರಿದ ನಾಗರಿಕರೆಂದು ಬಡಾಯಿ ಕೊಚ್ಚುತ್ತೇವೆಯೇ ವಿನಃ ಅವರ ಧರ್ಮನಿಷ್ಠ ಸಂಸ್ಕಾರವನ್ನು ಅವಲೋಕಿಸುವಾಗ ನಾವು ಬಹಳ ಅನಾಗರಿಕ (ಪಶುಗಳ)ರಂತೆ ವರ್ತಿಸುತ್ತಲಿದ್ದೇವೆಂದು ಪ್ರತಿಯೊಂದು ಪ್ರಗತಿಯಲ್ಲೂ ಮನವರಿಕೆಯಾಗುತ್ತಲಿದೆ. ನಮ್ಮ ಉಚ್ಚವ್ಯಕ್ತಿಗಳಿಂದ ಕನಿಷ್ಠ ವ್ಯಕ್ತಿಗಳವರೆಗೆ ಒಂದೇ ನಾದ ಪ್ರತಿಧ್ವನಿಸುತ್ತಲಿದೆ. ಇಂದಿನ ಭ್ರಷ್ಟಾಚಾರ, ರಾಜ್ಯಾಡಳಿತ ಸುಧಾರಣೆ ವ್ಯಕ್ತಿಯ ಜೀವನ ದಿನದಿಂದ ದಿನಕ್ಕೆ ನಿಕೃಷ್ಟವಾಗುತ್ತಲಿರುವುದು ಮತ್ತು ಅವಿಶ್ವಾಸದ ಒಂದು ದೊಡ್ಡ ಭೂತವೇ ಎದ್ದು ನಿಂತಿವೆ. ಸರಕಾರ ಜನತೆಗೆ ಅನ್ಯಾಯ ಮಾಡುತ್ತಾ, ಜನತೆ ಸರಕಾರಕ್ಕೆ ಮೋಸ ವಂಚನೆಗಳನ್ನು ಮಾಡುತ್ತಾ ಕಾಲಹರಣವಾಗುತ್ತಲಿವೆ. ಈ ರೀತಿಯಿಂದಾಗಿ ಎಲ್ಲರ ಹೃದಯಾಕಾಶದಲ್ಲಿ ಅವ್ಯವಸ್ಥೆಯೇ ತುಂಬಿರುತ್ತದೆ. ಇದರಿಂದಾಗಿ ಜನತೆ ಕಂಗಾಲಾಗಿದೆ. ಈ ಅವ್ಯವಸ್ಥೆ ಅನ್ಯಾಯ, ಮತ್ತು ಎಲ್ಲಾ ರೀತಿಯ ನವೀನ ತಲೆ ಹುಳುಕುಳ್ಳ ಸಮಸ್ಯೆಗಳು ಪರಿಹಾರವಾಗಿ, ಸುದೃಢ, ಸುಸಂಸ್ಕೃತ ಜನಾಂಗ ತಯಾರಾಗಬೇಕು. ಈ ರೀತಿಯ ಜನಾಂಗ ತಯಾರಾಗಲು ಮುಖ್ಯ ಉಪಾಯ, ಸನಾತನ ಧರ್ಮ ಜಾಗೃತಿಯೊಂದೇ ಆಗಿರುತ್ತದೆ. ಧರ್ಮಾಚರಣೆ ಯಾವಾಗ ಮನುಷ್ಯನು ಬಿಡುತ್ತಾನೋ ಆಗ ಪಶುತ್ವ ಪ್ರಾಪ್ತಿಯಾಗುತ್ತದೆಂದು ಶ್ರೇಷ್ಠ ಮಹಾತ್ಮರು ಉಲ್ಲೇಖಿಸಿರುತ್ತಾರೆ. ನಾವು ಯಾರ ಕಿವಿಗೂ ಓಗೊಟ್ಟು, ಯಾವ ಕೊಳಗೂ ನಾಲಗೆ ನೀಡಿ, ಅಕ್ಕತಂಗಿ ಎಂಬ ಸಹೋದರತೆ ಮುಂತಾದ ಉಚ್ಚ ಧ್ಯೇಯ ನಿಷ್ಠೆಗಳ ಮರೆಯುವಿಕೆಯಿಂದಾಗಿ, ಕೇವಲ ಆಹಾರ, ನಿದ್ರಾ, ಭಯ, ಮೈಥುನಗಳ ಕಡೆಗೇ ಮನಸ್ಸು ಹರಿಸಿರುವುದನ್ನು ಗಮನಿಸುವಾಗ, ಭಾರತ ಮಾತೆಯ ಪುತ್ರರೆನಿಸಿಕೊಳ್ಳಲು ಅನರ್ಹರೇ ಎಂದರೂ ಅತಿಯೋಕ್ತಿಯಾಗಲಾರದು.

ಹಿಂದಿನ ಕಾಲದ ಜನರು ಮತ್ತು ಭಾರತ.

ಸತ್ಯ, ಧರ್ಮ ಮತ್ತು ನ್ಯಾಯ ನಿಷ್ಠತೆ ಮುಂತಾದ ಉಚ್ಚ ಸದ್ಧರ್ಮಗಳ ಪರಿಪಾಲನೆಯ ಪ್ರಭಾವದಿಂದ ಹಿಂದಿನ ಭಾರತ ಎಷ್ಟು ವೈಭವದ ಶಿಖರಕ್ಕೆ ತಲುಪಿದ್ದಿತೆಂದು ವಿಮರ್ಶಿಸಿದರೆ ಆಶ್ಚರ್ಯ ಮತ್ತು ರೋಮಾಂಚನವಾಗಲೇ ಬೇಕು. ನಮ್ಮ ನಮ್ಮ ಮನೆಗಳಲ್ಲಿರುವ ಹಿರಿಯ ವ್ಯಕ್ತಿ ಮತ್ತು ಪುರಾತನ ವ್ಯಕ್ತಿಗಳಲ್ಲಿರುವ ತ್ಯಾಗ, ಧರ್ಮದ ಸಂಸ್ಕಾರಗಳು ನಡೆ ನುಡಿ, ಪ್ರತಿಯೊಂದರಲ್ಲೂ ಕಠೋರವಾಗಿರುವುದು ವ್ಯಕ್ತವಾಗುತ್ತದೆ. ಕೌರವನು ಸತ್ಯಭ್ರಷ್ಟ, ಅಧರ್ಮ ಪಾರಾಯಣನಾದುದರಿಂದ ಇಡಿ ರಾಷ್ಟ್ರದ ಜನಾಂಗ ಕಷ್ಟಪಟ್ಟು ಅಳಿಯಬೇಕಾದ ಪುರಾಣಕಥೆ ನಮಗೆ ಎಚ್ಚರಿಕೆ ನೀಡುತ್ತಲಿರುವುದು ವ್ಯಕ್ತಿಯು ನಿಷ್ಕಲ್ಮಶ ಹೃದಯನೂ, ಕರ್ತೃತ್ವಶಾಲಿಯೂ ಸುವಿಚಾರಗಳ ಹೊಂಗೆಡಹುವಿಕೆಯೊಂದಿಗೆ ಸಮರ್ಪಣ ಭಾವ. ಈ ತ್ರಿವಿಧ ಧ್ಯೇಯಗಳ ಸಾಧಕನಾದರೆನೇ ಭಾರತ ಯೋಗ್ಯ ಗೌರವಾನ್ವಿತ ರಾಷ್ಟ್ರವಾಗಿ ಪ್ರಪಂಚದಲ್ಲಿ ಚಿರಸ್ಥಾಯಿಯಾಗಿ ಉಳಿದೀತೆಂದು ಹಿಂದಿನ ಇತಿಹಾಸ ಹೆಜ್ಜೆ ಹೆಜ್ಜೆಗೆ ತಿಳಿಸುತ್ತಲಿದೆ. ಒಳ್ಳೆ ದಾರಿಯೆಂದು ಹಾಳನ್ನು ವೃದ್ಧಿಗೆ ತರುತ್ತಲಿರುವುದಕ್ಕೆ ಈ ಯೋಗ್ಯ ಧ್ಯೇಯ ನಿಷ್ಠ ಸಂಸ್ಕಾರಗಳ, ಕೊರತೆಯೇ ಕಾರಣ. ನಮ್ಮ ನಾಯಕರೇ ರಾಷ್ಟ್ರದ ಸಮಸ್ಯೆಗಳನ್ನು ಬುಡಮೇಲು ಮಾಡುತ್ತಿರುವಾಗ, ಅವರ ಹಿಂಬಾಲಿತ ನವಯುವ ಜನಾಂಗ ಅವರಂತೆಯೇ ಕಾಣಿಸಿಕೊಂಡಲ್ಲಿ ಏನಾಶ್ಚರ್ಯವಿಲ್ಲ. ಧಾರ್ಮಿಕತೆಯು ಕೆಳಗಿನಿಂದ ಮೇಲಿನ ತನಕ ಅವಶ್ಯಕ. ನಮ್ಮ ಈಗಿನ ಹೃದಯ ಶೂನ್ಯ ಜನತೆಯಂತಾಗದಿರಲು ವಿದ್ಯಾರ್ಥಿ ಜೀವನದಿಂದಲೇ ಸನಾತನ ಧರ್ಮದ ಅಡಿಗಲ್ಲು ಪ್ರಾರಂಭಿಸಿದರೇನೇ, ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತವೆ.

ಭಾರತವು ಪುರಾತನ ಕಾಲದಿಂದಲೂ ಸತ್ಯ, ಧರ್ಮ ಮುಂತಾದ ಉಚ್ಚಧ್ಯೇಯ ನಿಷ್ಠೆಯ ತಳಹದಿಯಲ್ಲೇ ನಿರ್ಮಿತವಾಗಿರುತ್ತದೆ. ಭಾರತಮಾತೆಯ ಮಕ್ಕಳಾದ ನಾವು ಅಧರ್ಮಪ್ರವೃತ್ತರಾದುದರಿಂದ ಎಲ್ಲರಲ್ಲೂ ದ್ವೇಷ, ಅಸೂಯೆ, ಭಾಷಾ ಸಮಸ್ಯೆ, ಅಸಹಕಾರ, ಆಹಾರ ಸಮಸ್ಯೆ, ಮತ್ತು ಏಕತೆಯ ಅಭಾವವು ದಿನೇ ದಿನೇ ವೃದ್ಧಿಸುತ್ತಲಿರುವುದು ವಿಷಾದದ ಸಂಗತಿ. ಸ್ವತಂತ್ರರಾಗುವ ಮುನ್ನ ನಾವು ಭಾರತವನ್ನು ಮಾತೆಯಾಗಿ ಪ್ರೀಯ ಸ್ಥಾನದಲ್ಲಿರಿಸಿ ಒಕ್ಕೊರಲಿನಿಂದ ಭಾರತ ಮಾತೆಯನ್ನು ಬಂಧನ ಮುಕ್ತ ಮಾಡಲು ಮುಂದೆ ಬಂದೆವು. ಆದರೆ, ಇಂದು ಎಲ್ಲರ ಮನಃಪಟಲದಲ್ಲಿ ಮಾತೆ ಎಂಬ ಭಾವನೆ ಅಳಿದು ಅನರ್ಥ ಕಲ್ಪನೆ ಬಂದು, ನವಭಾರತ ಎಲ್ಲರ ಕಣ್ಮುಂದೆ ಎದ್ದು ಗರ್ಜಿಸುತ್ತಲಿದೆ.

ವಿದ್ಯಾರ್ಥಿ ಆಂದೋಲನ, ತಂದೆ, ತಾಯಿ, ಗುರುಹಿರಿಯರ ನಿಂದನೆ, ಇವುಗಳಿಂದಾಗಿ ಸಮಾಜ ಘಾತುಕರ ವೃದ್ಧಿಗೆ ಆಸ್ಪದವಾಗಿರುವುದು ದುಃಖದ ಸಂಗತಿ. ಹಿಂದೆ ನಲಂದ ವಿಶ್ವವಿದ್ಯಾಲಯ ೧೭ ಮಂದಿ ಮಹಮ್ಮದೀಯರ ಕ್ರೂರತ್ವಕ್ಕೆ ನುಚ್ಚುನೂರಾದುದನ್ನು ಜ್ಞಾಪಿಸಿದರೆ, ನಮ್ಮ ತಿಳಿಗೇಡಿ ಹೇಡಿತನಕ್ಕೆ ಅಂತಿಮಕಾಲವೆನ್ನಬೇಕೋ ಅನ್ನಿಸುತ್ತದೆ. ಇಂದಿಗೆ ಚೀನಾ, ಪಾಕ್‌ಗಳು ಒಂದು ಮೂಲೆಯಲ್ಲಿ ಆಕ್ರಮಣ ಮುಂದುವರಿಸುತ್ತಲಿವೆ. ನಮ್ಮ ದೇಹದ ಮೂಲೆಯಲ್ಲಿ ನೋವುಂಟಾದರೆ, ಆ ಭಾಗ ಉಪಯೋಗವಿಲ್ಲೆಂದು ಸುಮ್ಮನೆ ಬಿಡುವರೇನೂ? ರಾತ್ರಿ ಹಗಲು ಆ ನೋವು ಶಮನ ಪಡಿಸುವುದಕ್ಕಾಗಿ ಚಿಂತಿಸುವುದಿಲ್ಲವೇ? ಇದೇ ರೀತಿ ನಮ್ಮ ಪವಿತ್ರ ಭಾರತ ಮಾತೆಯ ಮಕ್ಕಳಾದ ಬಂಧು ಭಗಿನಿಯರನ್ನು ಹಿಂಸಿಸಿ ಅವಮಾನಿಸುತ್ತಲಿರುವುದು ಕೇಳಿಯೂ, ನಾವು ಮೋಜಿನ ಜೀವನದಲ್ಲೇ ಮಗ್ನರಾಗಿರುವುದೆಂದರೆ, ನಾವೆಲ್ಲರೂ ನಿರ್ಜೀವರೆಂದೂ, ಷಂಡರೆಂದೂ ವ್ಯಕ್ತವಾಗುತ್ತದೆ. ಯಾರು ಏನಾದರೂ ನಾನು ಸುಖದಿಂದ ಇರುತ್ತೇನೆಂದು ಸರಕಾರದಿಂದ ಕೂಲಿಕಾರನ ತನಕ ಬಂಧುತ್ವ ಅಳಿದಿದೆ. ಇಂದು ಉತ್ತರ ಭಾರತದ ಬಂಧುಗಳ ನಿರ್ನಾಮವಾದರೆ, ನಾಳೆ ನಮಗೂ ಅದೇ ಗತಿ ಕಾದಿರುತ್ತದೆಂದು ತಿಳಿಯುವ ಅತ್ಯಂತ ನಿರೀಕ್ಷಕ ವ್ಯಕ್ತಿಯು ಸುಮ್ಮನೆ ಕುಳಿತಿರಲಾರನು. ನಮ್ಮ ರಾಷ್ಟ್ರ ಪುರುಷನ ಉದಯವಾಗಬೇಕಾದರೆ, ಪ್ರತಿಯೊಬ್ಬನೂ ಜಾಗ್ರತಾವಸ್ಥೆಯಲ್ಲಿರುವುದು ಮುಖ್ಯ. ವ್ಯಕ್ತಿ ವ್ಯಕ್ತಿಯ ಅಂತರಂಗದಲ್ಲಿ, ಸದ್ಧರ್ಮದ ಜಾಗೃತಿಯನ್ನುಂಟು ಮಾಡುವುದು ಪ್ರತಿಯೊಬ್ಬನ ಕರ್ತವ್ಯ ಮತ್ತು ಮಾತೃ ಸೇವೆಯಾಗಿರುತ್ತದೆ.

ಹೊಸ ವೈದ್ಯನಿಗಿಂತ ಹಳೆರೋಗಿ ಮೇಲೆಂಬ ಗಾದೆಯಂತೆ, ಈಗಿನ ರಾಜ್ಯಾಡಳಿತವಾಗಿರುತ್ತದೆಂದು ವಿಧಿತವಾಗುತ್ತದೆ. ಈ ಆಡಳಿತದಲ್ಲಿ ಪುರಾತನದ, ಭಾರ

(ಹತ್ತನೇ ಪುಟ ನೋಡಿರಿ)

GRAND GALA OPENING
ON 15—7—1965

HOTEL MAYUR

The Most Modern & Uptodate

Boarding Lodging & Restaurant

Housed in a Newly constructed multi storied palacious building

"Shri Shakti Nilaya" Coen Road, **HUBLI.**

ತಾ.೧೫-೭-೧೯೬೫ರಿಂದು ಶುಭಾರಂಭ

ವ್ಯಾಪಾರಿ ಮಧ್ಯವರ್ತಿ ಸ್ಥಳದಲ್ಲಿರುವ ಭವ್ಯ ಅತ್ಯಾಧುನಿಕ ಸುಸಜ್ಜಿತ
ನೂತನ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ

ಹೋಟೆಲ್ ಮಯೂರ

ಊಟ, ವಸತಿ ಮತ್ತು ಉಪಹಾರಗೃಹ

"ಶ್ರೀ ಶಕ್ತಿ ನಿಲಯ" ಕೋಯಿನ್ ರೋಡ್, ಹುಬ್ಬಳ್ಳಿ.

ಭಾರತವು ಸಿಕ್ಕಿಕೊಂಡಿತೇ?

(ಐದನೇ ಪುಟದಿಂದ)

ಉಳಿಯಿತು. ಆ ಸ್ಥಳ ಕದನ ವಿರಾಮ ರೇಖೆಯ ಆಚೆ ಇರುವದರಿಂದ ನಮ್ಮ ಸೇನೆ ಅಲ್ಲಿರಬಾರದೆಂದು ಪಾಕಿಸ್ತಾನ ಪಟ್ಟು ಹಿಡಿಯಿತು. ಶಾಂತಿಯ ಅಪರಾವತಾರವಾಗಿರುವ ಶ್ರೀ ಲಾಲಬಹದ್ದೂರಜೀಯವರು ಅದಕ್ಕೆ ಒಪ್ಪಿಕೊಂಡರು. ಅಲ್ಲಿಂದ ನಮ್ಮ ಆಕ್ರಮಣಕ್ಕೊಳಗಾಗಿದ್ದ ಕದನ ಸ್ಥಗಿತ ರೇಖೆಯ ಆಚೆ ಇರುವ ಪ್ರದೇಶದ ಮೇಲೆ ನಮಗೆ ಒಂದಿನಿತೂ ಅಧಿಕಾರ ಇಲ್ಲವೆಂಬುದನ್ನು ನಾವೇ ಒಪ್ಪಿಕೊಂಡಂತಾಯಿತು. ನೀರಿನಲ್ಲಿ ಮುಳುಗಿ ಸತ್ತು ಹೋಗಬೇಕಾಗುತ್ತಿದ್ದ ಸೇನೆಯನ್ನು ಶಾಂತಿ-ಸಂಧಾನದ ನುಣ್ಣನೆಯ ಹಾದಿಯಲ್ಲಿ ಗೌರವದಿಂದ ಹಿಂದಕ್ಕೆ ಹೋಗಲು ಬಿಟ್ಟವು.

ಹೇಗಾದರೂ ಒಮ್ಮೆ ಸಂಧಾನ ನಡೆಸಿಕೊಳ್ಳಬೇಕೆಂದು ಶ್ರೀ ಲಾಲಬಹದ್ದೂರ ಭಾವಿಸಿಕೊಂಡಿದ್ದರು. ಅದಕ್ಕೆ ಕಾರಣವೆಂದರೆ ಬ್ರಿಟನ್ ಹಾಗೂ ಅಮೇರಿಕ ಪ್ರಬಲ ರಾಷ್ಟ್ರಗಳಿವೆ. ಅವುಗಳ ಮಾತನ್ನು ಕೇಳದಿದ್ದಲ್ಲಿ ಮುಂದಕ್ಕೆ ಕಷ್ಟವಾದೀತೆನ್ನುವದು ಅವರ ಈ ಭಾವನೆಯನ್ನು ತಿಳಿಸಲಿಕ್ಕೆಂದೇ ವರಕವಿ ಭಾರತೀಯವರೊಂದು ಚಿಕ್ಕ ಕಥೆಯನ್ನು ಬರೆದಿರುವರು.

ಆನೆಕಾಲು ರೋಗಕ್ಕೊಳಗಾಗಿದ್ದವನೊಬ್ಬ ಒಂದು ಅಂಗಡಿ ತೆರೆದು ಹಣ್ಣುಗಳನ್ನು ಮಾರಲಾರಂಭಿಸಿದನು. ಅಲ್ಲಿದ್ದ ಹಣ್ಣುಗಳು ಹುಡುಗರ ಗಮನವನ್ನು ಸೆಳೆದುವು. ಬಾಲಕರ ದೃಷ್ಟಿಗೆ ಬಿದ್ದೆಂದರೆ ಅವರು ಹಣ ತೆತ್ತು ನಯ ನಾಜೂಕಿನ ದಾರಿಯಲ್ಲಿ ಹೋಗಿ ಹಣ್ಣುಗಳನ್ನು ಪಡೆದುಕೊಳ್ಳುವದಕ್ಕಿಂತ ಇತರ ಸಾಹಸಮಯ ಹಾಗೂ ಅಡ್ಡದಾರಿಯಲ್ಲಿ ಹೋಗುವದೇನೂ ಆಶ್ಚರ್ಯದ ವಿಷಯವಲ್ಲ. ಅವರ ಕಣ್ಣು ಬಿದ್ದಿರುವದು ಅಂಗಡಿಯವನಿಗೆ ಗೊತ್ತಾಯಿತು. ಅವನು ತನ್ನ 'ಕಾಲು'ಗಳನ್ನು ತೋರಿಸಿ, "ಹುಡುಗರೇ, ಜೋಕೆ! ನಾನೊಮ್ಮೆ ಕಾಲಿನಿಂದ ಒದೆದರೆನೇ ನಿಮ್ಮಿಂದ ಸಹಿಸಿಕೊಳ್ಳಲು ಸಾಧ್ಯವಾಗಲಿಕ್ಕಿಲ್ಲ. ಇಷ್ಟು ದೊಡ್ಡ ಕಾಲಿನಿಂದ ಒದೆದರೆ ಏನಾದೀತೆಂದು ಯೋಚಿಸಿಕೊಳ್ಳಿರಿ"ಎಂದು ಬೆದರಿಸಿದನು. ಹುಡುಗರೂ ಹೆದರಿದರು. ಒಂದು ದಿನ ಅಂಗಡಿಯವನು ಬೇರೆ ಕೆಲಸದಲ್ಲಿದ್ದಾಗ ಹುಡುಗರು ತಮ್ಮ ಸಾಹಸಕ್ಕೆ ಮುಂದಾದರು ಅಂಗಡಿಯವನಿಗದು ಗೊತ್ತಾಯಿತು. ಅವನು ಒಡನೆಯೇ ತಿರುಗಿ ಒಬ್ಬನನ್ನು ಹಿಡಿದೇ ಬಿಟ್ಟನು ಮತ್ತು ಒದೆದನು. ಆಗ ಆ ಹುಡುಗನು ಬೊಬ್ಬೆ ಹಾಕಲಾರಂಭಿಸಿದನು—"ಬನ್ನಿರಿ, ಬನ್ನಿರಿ, ಎಲ್ಲಾ ಸುಮ್ಮಗೆ, ಕೇವಲ ಚರ್ಮ, ಎಲುಬೆ ಇಲ್ಲ, ಓಡಿ ಬನ್ನಿರಿ".

ಹಾಗೆ ಒದೆ ತಿನ್ನುವ ವರೆಗೆ ಮಾತ್ರ ಹುಡುಗರಿಗೆ ಭಯವಿತ್ತೆಂದು ಶ್ರೀ ಭಾರತೀಯವರು ಕಥೆ ಮುಗಿಸುತ್ತಾರೆ. ಈ ಕಥೆಯನ್ನು ಶ್ರೀ ಲಾಲ ಬಹದ್ದೂರ ಶಾಸ್ತ್ರೀಜೀಯವರಿಗೆ ಹೇಳಿದರೆ ಏನಾದರೂ ಪ್ರಯೋಜನವಾದೀತೇ? ಪಾಕಿಸ್ತಾನ ಕೇಳಿದ್ದನ್ನು ಕೊಡಬೇಕೆಂದು ಪಾಕಿಸ್ತಾನದ ಪಕ್ಕ ಶ್ರೀ ರಾಜಾಜಿಯವರು ಹಾಗೂ ಅವರ ಸ್ವತಂತ್ರ ಪಾರ್ಟಿಯು ಎಡೆಬಿಡದೆ ಹೇಳಿಕೊಂಡು ಬರುತ್ತಿದೆ ಹಾದರೂ ಶ್ರೀ ಲಾಲ ಬಹದ್ದೂರಜೀಯವರು ಒಪ್ಪಂದಕ್ಕೆ ಒಪ್ಪಿ ಕೊಂಡರೆಂಬುದು ತಿಳಿದೊಡನೆ ಅದೇ ಸ್ವತಂತ್ರಪಾರ್ಟಿಯ ಮುಂಖಂಡರೊಬ್ಬರು ಒಪ್ಪಂದವನ್ನು ತಾವು ವಿರೋಧಿಸುವುದಾಗಿ ಪತ್ರಿಕೆಗಳಿಗೆ ತಿಳಿಸಿದರು. ಹಾಗೆಯೇ ಸಂಯುಕ್ತ ಸಮಾಜವಾದಿಗಳು ಕೂಡಾ ಮಾತಿನ ಗಾಳಿ ಬಿಟ್ಟದ್ದಾದರೂ ಕಾರ್ಯರಂಗಕ್ಕಿಳಿದಿರಲಿಲ್ಲ. ಭಾರತೀಯ ಜನಸಂಘದವರು ಧುಮುಕಿಯೇ ಬಿಟ್ಟರು. ಪ್ರಧಾನಿಯವರಿಗೆ ಅಭಿಪ್ರಾಯ ವ್ಯಕ್ತಪಡಿಸಲು ಅವರು ಹೊರಟರು. ಅವರನ್ನು ಬಂಧಿಸಲಾಯಿತು.

ಇಂತಹ ಇನ್ನೊಂದು ದುರ್ಘಟನೆ ಜ್ಞಾಪಕಕ್ಕೆ ಬರುತ್ತಿದೆ. ಲೋಕಮಾನ್ಯ ಬಾಲಗಂಗಾಧರ ಟಿಲಕ ಮಹಾರಾಜರ ಜಯಂತಿಯನ್ನೀಂದು ರಾಷ್ಟ್ರಾದ್ಯಂತ ಆಚರಿಸಲಾಯಿತು. ಸತ್ತ ಎಮ್ಮೆಗೆ ಕುತ್ತಿ ಹಾಲೆಂದು ಗೊಳ್ಳ ಗೋಗರೆಯುವದು ಆಶ್ಚರ್ಯದ ಸಂಗತಿಯಲ್ಲ ನಾವೂ ಅದಕ್ಕಿಂತ ಬೇರೆಯಾಗಿರುವದಿಲ್ಲ. ಶ್ರೀ ಬಾಲಗಂಗಾಧರ ಟಿಲಕರು ತಮ್ಮ ಜೀವಮಾನವನ್ನೇ ಭಾರತದ ಸ್ವಾತಂತ್ರ್ಯಕ್ಕಾಗಿ ಮುಡಿಪಾಗಿಟ್ಟಿದ್ದರು. ಅದೆಂತಹ ಭೀಕರ ಪರಿಸ್ಥಿತಿಯಲ್ಲಿ ಅವರು ಕಂಗೆಟ್ಟಿದ್ದಿಲ್ಲ, ಸಾಸ್ತಾವಾಂಶವನ್ನು ಬಿಟ್ಟಿದ್ದಿಲ್ಲ. ರಾಷ್ಟ್ರೀಯತ್ವ್ಯರು ಮಧ್ಯರಾಷ್ಟ್ರೀಯತೆ ಯಾವದು. ಅವರು ಬಹಳ ಸ್ಪಷ್ಟವಾಗಿ ಹೇಳಿದ್ದರು. ಆದರೆ ಅದು ಕಾಂಗ್ರೆಸ್ಸಿಗರಿಗೆ ಕಹಿಯಾಗಿ ಕಂಡಿತು. ಆಕ್ರಮಣಗಾರ ಬ್ರಿಟಿಷರು ಬಾಲಗಂಗಾಧರ ಟಿಲಕರನ್ನು ಮಾಂಡಲೆಗೆ ಕಳುಹಿಸಿಬಿಟ್ಟರು. ಅಲ್ಲಿ ಅವರು ಅಮಾನುಷ ಚಿತ್ರಹಿಂಸೆಯನ್ನು ಸಹಿಸಿಯೂ ಭಾರತದ ಸ್ವಾತಂತ್ರ್ಯವನ್ನು ಇದೇ ಕಣ್ಣುಗಳಿಂದ ಕಾಣಬೇಕೆಂದು ಭಾರತಕ್ಕೆ ಮರಳಿಬಂದಾಗ ಅವರನ್ನು ಸ್ವಾಗತಿಸಲು ಯಾರೂ ಹೋಗಲಿಲ್ಲ. ಅವರು ಸ್ವಾಗತವನ್ನು ನಿರೀಕ್ಷಿಸಿಕೊಂಡಿರಲಿಲ್ಲ. ಅವರಿಗೆ ವೈಯಕ್ತಿಕ ಜಯಕಾರ ಬೇಕಾಗಿರಲಿಲ್ಲ-ಭಾರತ ಮಾತಾಕೀ ಜೈ ಮಾತ್ರ ಬೇಕಾಗಿತ್ತು. ಈಗ ಕೆಲ ಕಹಿ ವಿಷಯಗಳನ್ನು ಅವರು ದಿಟ್ಟತನದಿಂದ ಅಂಜದೆ ಅಳುಕದೆ ರಾಷ್ಟ್ರೀಯರಿಗೆ ತಿಳಿಸಿದಕ್ಕಾಗಿ ಅವರನ್ನು ನಿರ್ಲಕ್ಷಿಸಲಾಯಿತು. ಅಂತಹ ಜನರು ಇಂದೂ ಅದೇ ಕೆಲಸವನ್ನು ಮಾಡುತ್ತಿದ್ದಾರೆ. ತಮಗೆ ಕಹಿಯಾಗಿದ್ದ ಮಾತ್ರಕ್ಕೆ ಅದು ರಾಷ್ಟ್ರಕ್ಕೆ ಹಾಲಾಹಲವಾಗಲಾರದು, ಅಮೃತ ಅಥವಾ ಸಂಜೀವಿನಿಯೂ ದೀತೆಂಬುದನ್ನು ಅವರು ಮರೆತು ಅಚಾತುರ್ಯದಿಂದ ಸಲ್ಲದ ಕಾರ್ಯಕ್ಕೆ ಮುಂದಾಗುತ್ತಾರೆ ಮತ್ತು ಎಡವಿ ಬೀಳುತ್ತಾರೆ.

ಸೌಂದರ್ಯ ಸಾಧನಗಳ ಬಗ್ಗೆ ನಿಮಗೆಷ್ಟು ಗೊತ್ತಿದೆ?

ಲೇಖಕ: ಮಲ್ಲಿಕಾರ್ಜುನ ಮಠ (ಬಿ. ಎ. ಆನರ್ಸ)

ಇಂದಿನ ಸೌಂದರ್ಯದ ಸಾಧನಗಳಲ್ಲಿ ಕೃತ್ರಿಮ ಸೌಂದರ್ಯದ ಸಾಧನಗಳನ್ನೇ ನಾವು ಕಾಣುತ್ತೇವೆ. ನಾವೆಲ್ಲರೂ ಇಂದು ಕೃತ್ರಿಮ ಯುಗದ ದಾಸಾನುದಾಸರಾಗಿದ್ದೇವೆ ಎಂದರೂ ಅಡ್ಡಿಯಿಲ್ಲ. ಇಂದು ಪ್ರತಿಯೊಂದು ಮನೆಯಲ್ಲಿಯೂ ಸೌಂದರ್ಯವನ್ನು ಹೆಚ್ಚಿಸುವ ಕೃತ್ರಿಮ ಸಾಧನಗಳಾದ ಸ್ನೋ, ಪಾವುಡರ್, ಲಿಪ್‌ಸ್ಟಿಕ್-ಗಂಧ ಮುಂತಾದವುಗಳನ್ನು ಕಾಣುತ್ತೇವೆ.

ಇವೆಲ್ಲವುಗಳು ನಿಜವಾಗಿಯೂ ಎಷ್ಟು ಮಾತ್ರಕ್ಕೆ ಸೌಂದರ್ಯವನ್ನು ನೀಡುವ ವಸ್ತುಗಳಾಗಿವೆ? ಇದರ ಬಗ್ಗೆ ಯಾರೂ ಆಳವಾಗಿ ಯೋಚಿಸಲಾರರು. ಇಂದಿನ ಸೌಂದರ್ಯದ ಸಾಧನಗಳೆಲ್ಲ ಒಂದಲ್ಲ ಒಂದು ರೀತಿಯಿಂದ, ಸ್ವಾಭಾವಿಕ ಸೌಂದರ್ಯವನ್ನು ಹಾಳುಗೆಡಹುತ್ತವೆಯೇ ವಿನಹ ಹೆಚ್ಚಿಸುವದಿಲ್ಲ. ಪುರಾತನ ಕಾಲದಲ್ಲಿಯ ಜನರ ಸೌಂದರ್ಯದ ಸಾಧನಗಳು ಯಾವುವು ಇದ್ದವೆಂಬುದನ್ನು ಯೋಚಿಸಿ ನೋಡೋಣ. ಹಿಂದಿನ ಕಾಲದಲ್ಲಿ ಸ್ತ್ರೀಯರು ಮುಖಕ್ಕೆ ಸ್ವಲ್ಪ ಪ್ರಮಾಣದಲ್ಲಿ ಹಸಿ ಅರಿಷಿಣವನ್ನು ತೊಡೆದುಕೊಳ್ಳುತ್ತಿದ್ದರು. ಅದರಿಂದ ಮುಖದ ಕಾಂತಿ ಅಷ್ಟೊಂದು ಜೋರ ಹೊಮ್ಮದೇ ಇದ್ದರೂ ಕ್ರಮೇಣವಾಗಿ ಮುಖದ ಅಂದ ಹೆಚ್ಚುತಿತ್ತು. ಮುಖ ಕಳೆ ಪೂರ್ಣವಾಗುತಿತ್ತು. ಮುಖ ಮಿನುಗುತಿತ್ತು. ಸುಂದರಿಯರಾದವರು ತಮ್ಮ ಕಣ್ಣುಗಳ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ಕಣ್ಣಿಗೆ ಕಾಡಿಗೆ ಬಳಿದುಕೊಳ್ಳುತ್ತಿದ್ದರು. ಇದರಿಂದ ಕಣ್ಣುಗಳು ಕಾಂತಿಯುತವಾಗುತ್ತಿದ್ದವು.

ಹಣೆಯ ಕುಂಕುಮ ಅಗಲವಾಗಿ ಚಂದ್ರಮನಂತೆ ಶೋಭಿಸುವ ಕುಂಕುಮದ ಬೊಟ್ಟನ್ನು ಇಟ್ಟುಕೊಳ್ಳುತ್ತಿದ್ದರು. ಸರ್ವಸಾಮಾನ್ಯ ಜನರ ಸೌಂದರ್ಯ ಸಾಧಾರಣ ಸಾಧನಗಳು ಇವು ಆಗಿದ್ದವು. ಈ ಸೌಂದರ್ಯ ಸಾಧನೆಗಳನ್ನು ಉಪಯೋಗಿಸುವದರಿಂದ ಸೌಂದರ್ಯ ಅತಿಶಯವಾಗಿ ಹೊರಹೊಮ್ಮದೇ ಇದ್ದರೂ ಕ್ರಮೇಣ ವೃದ್ಧಿಯಾಗುತಿತ್ತು. ಕುಂಕುಮ ದೊಡ್ಡದಾಗಿ ಹಚ್ಚುವದರಿಂದ ಎಷ್ಟು ಸ್ತ್ರೀಯರು ಸುಂದರಿಯರಾಗಿ ಕಾಣುವದಿಲ್ಲ? ಅರಿಷಿಣವನ್ನು ಮುಖಕ್ಕೆ ತೊಡೆಯುವದರಿಂದ ಅವರಲ್ಲಿ ಒಂದು ಸ್ವಾಭಾವಿಕ ನೈಸರ್ಗಿಕ ಗುಣವಿದೆ. ಅದು ತ್ವಚೆಯನ್ನು ಮೃದುವಾಗಿಯೂ ಕಾಂತಿಯುಕ್ತವಾಗಿಯೂ ಇಡುತ್ತದೆ. ಮುಖದ ಮೇಲಿನ ತ್ವಚೆಯನ್ನದು ಮಿನುಗುವಂತೆ ಮಾಡುತ್ತದೆ.

ಬಂಗಾರದ ಆಭರಣಗಳನ್ನು ಕೈಗಳಲ್ಲಿ ಉಪಯೋಗಿಸುವದರಿಂದ ಆಗುವ ಲಾಭ ಎಷ್ಟೋ ಸ್ತ್ರೀಯರಿಗೆ ಗೊತ್ತಿಲ್ಲ. ಬಂಗಾರದ ಆಭರಣಗಳನ್ನು ತೊಟ್ಟುಕೊಳ್ಳುವದರಿಂದ ಸ್ತ್ರೀಯರ ಸೌಂದರ್ಯ ಹೆಚ್ಚುವದು. ಮಾತ್ರವಲ್ಲ, ಇನ್ನೊಂದು ಕಾರಣವೂ ಇದೆ. ಬಂಗಾರದಲ್ಲಿ ಸೂಕ್ಷ್ಮವಾದ ಕ್ರಿಮಿಗಳನ್ನು ತಡೆಯುವ ಶಕ್ತಿಯಿದೆ. ಹೆಣ್ಣು ಮಕ್ಕಳು ಮುಂಜಾನೆಯಿಂದ ಸಂಜೆಯ ವರೆಗೆ ಮನೆಯ ಕೆಲಸ ಬೊಗಸೆಗಳನ್ನು ಮಾಡುತ್ತಿರುತ್ತಾರೆ. ಮುಸುರೆ ತಿಕ್ಕುವದು, ಕಸ ಉಡುಗುವದು, ಮುಂತಾದವುಗಳು. ಅವರು ಇಂಥ ಕೆಲಸಗಳನ್ನು ಮಾಡುವಾಗ ಅನೇಕ ಸೂಕ್ಷ್ಮವಾದ ರೋಗಾಣುಗಳು ಕೈಯ ಮುಖಾಂತರ ದೇಹವನ್ನು ಪ್ರವೇಶಿಸುತ್ತವೆ ಅದನ್ನು ಅಲ್ಲಿಗೇ ತಡೆದು ರೋಗಾಣುಗಳನ್ನು ನಾಶ ಪಡಿಸುತ್ತವೆ, ಈ ಆಭರಣಗಳು. ಅದರಿಂದ ಅನೇಕ ರೋಗಗಳಿಂದ ಸ್ತ್ರೀಯರು ಪಾರಾಗಬಹುದು. ಇದೆಲ್ಲ ಪುರಾತನ ಸೌಂದರ್ಯದ ಸಾಧನಗಳ ಬಗ್ಗೆ ವಿಚಾರಿಸೋಣ.

ಇಂದು ಮುಖದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಸ್ನೋ ಪೌಡರ್‌ಗಳನ್ನು ತೊಡೆದುಕೊಳ್ಳುತ್ತಾರೆ. ಸ್ನೋ ಪೌಡರ್ ಹಚ್ಚಿಕೊಂಡಾಗ ಮಾತ್ರವೇ ಮುಖ ಸೌಂದರ್ಯಯುಕ್ತವಾಗಿ ಕಾಣಬಹುದು, ಕಳೆಗಟ್ಟುತ್ತದೆ. ನಂತರ ಸ್ನೋ-ಪೌಡರ್ ಅಳಿಸಿ ಹೋದಾಗ ಮುಖ ಕಳಾಹೀನವಾಗಿ ಕಾಣುತ್ತದೆ, ಸ್ವಾಭಾ

(ಹದಿಮೂರನೇ ಪುಟ ನೋಡಿರಿ)

ಇದು ನಿಮಗೂ ತಿಳಿದಿರಲಿ → ಹೊಗೆಸೊಪ್ಪಿನ ಜನ್ಮ

ಚಿತ್ರ ೧: ವರ್ಜೀನಿಯಾ

ವರ್ಜೀನಿಯಾ ಹೊಗೆಸೊಪ್ಪಿನ ಹೆಸರು ಕೇಳದವರಿಲ್ಲ. ಇದು ಹೊಗೆಸೊಪ್ಪುಗಳಲ್ಲಿಯೇ ಅತ್ಯುತ್ತಮವಾದುದು. ಅಮೆರಿಕೆಯ ವರ್ಜೀನಿಯಾ ಪ್ರಾಂತವು ಹೊಗೆಸೊಪ್ಪಿನ ಬೆಳೆಗೆ ಹೆಸರಾದುದು. ಪ್ರಪಂಚದ ಹೊಗೆಸೊಪ್ಪಿನಲ್ಲಿ ಮೂರರಲ್ಲಿ ಒಂದಂಶವನ್ನು ಅಮೆರಿಕೆಯೊಂದೇ ಉತ್ಪಾದಿಸುತ್ತದೆ. ಇದರ ಪ್ರಮಾಣ ವಾರ್ಷಿಕ ಎರಡು ಸಾವಿರ ಮಿಲಿಯ ರಾತಲುಗಳಷ್ಟು. ಸಂಯುಕ್ತ ಸಂಸ್ಥಾನಗಳ ೪೮ ರಾಜ್ಯಗಳಲ್ಲಿ ೨೦ ಮಾತ್ರ ಹೊಗೆಸೊಪ್ಪು ಬೆಳೆಯುತ್ತವೆ. ಈ ವಿಚಿತ್ರ ಮೋಹಕ ಸೊಪ್ಪಿನ ಉಗಮ ಸ್ಥಾನವು ಅಮೆರಿಕೆಯೇ ಆಗಿದ್ದರೂ ಸ್ವಯಂ ಅಮೆರಿಕೆಗೆ ತಾನು ಬೆಳೆದ ಹೊಗೆಸೊಪ್ಪು ಸಾಕಾಗುವುದಿಲ್ಲ. ಅದು ಪ್ರತಿ ವರ್ಷವೂ ಸುಮಾರು ಒಂದು ಸಾವಿರ ಮಿಲಿಯ ಡಾಲರ್ ಮೌಲ್ಯದ ಹೊಗೆಸೊಪ್ಪನ್ನು ಆಯಾತ ಮಾಡುತ್ತದೆ

ಚಿತ್ರ ೨ ಶುದ್ಧೀಕರಣ.

ಗದ್ದೆಗಳಲ್ಲಿ ಬೆಳೆಯುವ ಹೊಗೆಸೊಪ್ಪನ್ನು ಇದ್ದಕ್ಕಿದ್ದಂತೆ ಉಪಯೋಗಿಸಿಕೊಳ್ಳಲಾಗುವುದಿಲ್ಲ. ಉಪಯೋಗಕ್ಕೆ ಬೀಳುವಂತೆ ಅದನ್ನು ಉಚಿತ ರೀತಿಯಲ್ಲಿ ನಿರ್ಮಲಗೊಳಿಸಬೇಕಾಗುತ್ತದೆ. ಮೊತ್ತ ಮೊದಲಿಗೆ ನಾವು ಬತ್ತದ ಕಾಳುಗಳನ್ನು ಒಣಗಿಸುವಂತೆಯೇ ಹೊಗೆಸೊಪ್ಪನ್ನೂ ಒಣಗಿಸುತ್ತಾರೆ. ಇದಕ್ಕಾಗಿ ಸೂರ್ಯನ ಬಿಸಿಲು ಮತ್ತು ಗಾಳಿಯನ್ನು ಬಳಸುತ್ತಾರೆ. ಮತ್ತೆ ಕೆಲವೊಮ್ಮೆ ಯಾಂತ್ರಿಕವಾಗಿ ಒಣಗಿಸುವುದೂ ಉಂಟು. ಅನಂತರ ಒಣಗಿನ ಎಲೆಗಳನ್ನು ದೊಡ್ಡ ಜಾಡಿ ಅಥವಾ ಪೀಪಾಯಿಗಳಲ್ಲಿ ಸುಮಾರು ಮೂರು ವರ್ಷಗಳ ವರೆಗೆ ಇರಿಸುತ್ತಾರೆ. ಈ ಅವಧಿಯಲ್ಲಿ ಆ ಸೊಪ್ಪು ಮೃದುವಾಗುತ್ತದೆ; ತನ್ನದೇ ಆದ ವಿಶಿಷ್ಟ ರುಚಿಯನ್ನು ಪಡೆಯುತ್ತದೆ; ಜನರನ್ನು ಸುಲಭವಾಗಿ ಮೋಹಿಸುವ ಸಮ್ಮೋಹಿನೀ ಶಕ್ತಿಯನ್ನು ಪಡೆಯುತ್ತದೆ.

ಚಿತ್ರ ೩ ಸಿದ್ಧ ವಸ್ತುಗಳು

ಅಮೆರಿಕೆಯಲ್ಲಿ ಸಿಗರೇಟು ತಯಾರಿಯು ದೊಡ್ಡ ಉದ್ದಿಮೆಗಳಲ್ಲಿ ಒಂದು. ಇದಕ್ಕೆ ಬಳಸುವ ಯಂತ್ರೋದ್ಯಮವೂ ಹಿರಿಯದು. ಸ್ವಯಂಚಾಲಿತ ಯಂತ್ರಗಳು ಪ್ರತಿ ವರ್ಷವೂ ಸುಮಾರು ೪,೦೦,೦೦೦ ಮಿಲಿಯ ಸಿಗರೇಟುಗಳನ್ನೂ ೬೦೦೦ ಮಿಲಿಯ ಸಿಗಾರ್‌ಗಳನ್ನೂ ತಯಾರಿಸುತ್ತವೆ. ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿಯೇ ಅವುಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿಯೇ ಮಾರುತ್ತವೆ. ತಜ್ಞರಾದವರು ಸಿಗರೇಟು ತಯಾರಿಯ ವೇಳೆ ಹೊಗೆಸೊಪ್ಪೇ ಮೊದಲಾದುವನ್ನು ಪರಿಶೀಲಿಸುವುದರ ಹೊರತಾಗಿ ವಿಶೇಷ ರೀತಿಯ ರೇಡಿಯೋ ಐಸೊಟೋಪ್‌ಗಳ ಸಹಾಯದಿಂದ ಪ್ರತಿ ಸಿಗರೇಟು ಅಥವಾ ಸಿಗಾರನ್ನು ಪರೀಕ್ಷಿಸಿ, ಅವುಗಳು ಉತ್ತಮ ಗುಣ ಪಡೆದಿರುವಂತೆ ಉದ್ದಿಮೆದಾರರು ನೋಡಿಕೊಳ್ಳುತ್ತಾರೆ. ಆದುದರಿಂದಲೇ ವರ್ಜೀನಿಯಾ ಹೊಗೆಸೊಪ್ಪು ಮತ್ತು ಸಿಗರೇಟುಗಳೆಂದರೆ ಉತ್ತಮವಾದುವೆಂಬ ಭಾವನೆ ಹರಡಿದೆ.

ಚಿತ್ರ ೪ ಪ್ರಥಮ ನಿವೇಶನ

ಇಂಗ್ಲೆಂಡಿನ ಅರಸ ಜೇಮ್ಸನೊಡನೆ ಸಮಾಧಾನಗೊಂಡು ಯಾತ್ರಾರ್ಥಿತಾಪಾದರಾಗಿ ಅಮೆರಿಕೆಗೆ ಬಂದ ಇಂಗ್ಲಿಷರ ಮೊತ್ತ ಮೊದಲ ನಿವೇಶನ ಜೇಮ್ಸ್ ಟೌನ್. ಅಂದು ಕ್ರಿ. ಶ. ೧೬೦೭ರಲ್ಲಿ ೧೦೪ ಪಾದ್ರಿಗಳನ್ನೂ ಕೆಲವು ಅನುಚರರನ್ನೂ ಕೂಡಿದ ಪಂಗಡವನ್ನು 'ಕ್ಯಾಪ್ಟನ್ ಜಾನ್‌ಸ್ಮಿತ್' ಹಡಗಿನ ಮೂಲಕ ವರ್ಜೀನಿಯಾ ಪ್ರದೇಶದಲ್ಲಿ ತಂದು ಬಿಟ್ಟನು. ತಮಗೆ ನೂರಾರು ಅನನುಕೂಲತೆಗಳು ಎದುರಾಗುತಿದ್ದರೂ ಅವರು ಸ್ವಾತಂತ್ರ್ಯದ ಅಡಿಗಲ್ಲನ್ನು ಹಾಕಿದರು. ಈ ಮಹತ್ವಪೂರ್ಣವಾದ ಆ ದಿನಗಳವೆಂದು ಜನಶೂನ್ಯವಾಗಿದೆ. ಬರಿಯ ಇಗರ್ಜಿಯೊಂದು, ಅದೂ ಮುಂದೆ ಜೀರ್ಣೋದ್ಧಾರವಾದುದು, ಈ ಪ್ರಥಮ ನಿವೇಶನದಲ್ಲಿ ನಿಂತಿದೆ.

ಚಿತ್ರ ೫. ಪೊಕಹೊಂಟಾಸ್.

ಭಾರತೀಯ (ರೆಡ್ ಇಂಡಿಯನ್) ಅಧಿಕಾರಿಯೊಬ್ಬನ ಮಗಳು ಪೊಕಹೊಂಟಾಸ್. ಆಕೆಯ ತಂದೆಯು ಅಮೆರಿಕೆಯಲ್ಲಿ ಕಾಲಿರಿಸಿದ ಜಾನ್‌ಸ್ಮಿತ್ತನನ್ನು ಸೆರೆಹಿಡಿಯಲು ಆಜ್ಞಾಪಿಸಿದಾಗ ಆತನ ಪ್ರಾಣವನ್ನು ಈಕೆ ರಕ್ಷಿಸಿದಳು— ಈ ಕತೆಯು ಎಲ್ಲ ಅಮೆರಿಕನರಿಗೂ ತಿಳಿದಿದೆ. ಇದು ಸತ್ಯವೇ ಅಲ್ಲವೇ ಎನ್ನುವುದು ಸರಿ ಇದು ಸತ್ಯವೇ ಅಲ್ಲವೇ ಎನ್ನುವುದು ಸರಿಯಾಗಿ ಗೊತ್ತಿಲ್ಲ. ಹಾಗಿದ್ದರೂ ಪೊಕಹೊಂಟಾಸಳ ಹೆಸರನ್ನು ಅಮೆರಿಕನ್ನರು ಜಪಿಸುತ್ತಾರೆ. ಈ ಕುಮಾರಿ ಮುಂದೆ ಅಮೆರಿಕೆಯಲ್ಲಿ ಹೊಗೆಸೊಪ್ಪಿನ ಉದ್ದಿಮೆಗೆ, ಉಪಯೋಗಕ್ಕೆ ಬುನಾದಿಯಾಕಿ ಹಾಕಿದ ಜಾನ್‌ರೋಲ್ಫನನ್ನು ಮದುವೆಯಾದಳು.

ಚಿತ್ರ ೬: ವಿಲ್ಲಿಯಮ್ಸ್ ಬರ್ಗ

೧೬೭೦ರಲ್ಲಿ ವಿಲ್ಲಿಯಮ್ಸ್ ಬರ್ಗ್ಸ್ ವರ್ಜೀನಿಯಾದ ರಾಜಧಾನಿಯಾಗಿತ್ತು. ಇಂದಿಗೂ ಅದು ರಾಜಧಾನಿಯಲ್ಲವಾದರೂ ಅದೇ ಸ್ಥಿತಿಯಲ್ಲಿದೆ. ಸಾವಿರಾರು ಯಾತ್ರಾರ್ಥಿಗಳು ಪ್ರತಿವರ್ಷವೂ ಇಲ್ಲಿಗೆ ಬರುತ್ತಾರೆ. ೧೭೭೫ರಲ್ಲಿ ಅಮೆರಿಕೆಯ ಪೆಟ್ರಿಕ್ ಹೆನ್ರಿಯು ಇದೇ ಊರಲ್ಲಿ ಉದ್ಘೋಷಿಸಿದ್ದನು. "ನನಗೆ ಸ್ವಾತಂತ್ರ್ಯ ಕೊಡಿರಿ; ಇಲ್ಲವೇ ಮರಣ ನೀಡಿರಿ."

ಚಿತ್ರ ೭: ಹಳೆಯ ಕಾಲೇಜು

ವಿಲ್ಲಿಯಮ್ಸ್ ಬರ್ಗನಲ್ಲಿ ೧೬೯೩ರಲ್ಲಿ

೧ ೨ ೩ ೪













೧೦ ೧೧ ೧೨ ೧೩

ಾಮಿ ವರ್ಜೀನಿಯಾ

ಸ್ಥಾಪನೆಯಾದ ಒಂದು ಕಾಲೇಜಿದೆ. ೧೬೯೩ ರಲ್ಲಿ ಆರಂಭವಾದ ಹಾರ್ವರ್ಡ್ ಕಾಲೇಜನ್ನುಳಿದರೆ ಈ ವಿಲ್ಲಿಯಂ ಮತ್ತು ಮೇರಿ ಕಾಲೇಜೇ ಹಳೆಯದಾಗುತ್ತದೆ. ೧೭೭೬ರಲ್ಲಿಯೇ ವಿಶಾಲ ಪ್ರಖ್ಯಾತಿ ಹೊಂದಿದ, ಫಿ ಬೆಟಾ ಕಪ್ಪಾ ಗೌರವ ಶಿಕ್ಷಣ ಸಮಿತಿಯು ವಿಲ್ಲಿಯಂ ಮತ್ತು ಮೇರಿಯಲ್ಲಿ ಸ್ಥಾಪಿತವಾಗಿತ್ತು. ಇಲ್ಲಿ ಶಿಕ್ಷಣ ಪಡೆದ ಜಫರ್‌ಸನ್, ಜೊನ್‌ರೋ ಮತ್ತು ಟೈಲರ್‌ರವರು ಮುಂದೆ ಅಮೆರಿಕನ್ ಅಧ್ಯಕ್ಷ ಪದವಿಗೇರಿದರು

ಚಿತ್ರ ೮: ಡ್ರೈವ್ ಇನ್ ರೆಸ್ಟೋರೆಂಟ್

ಡ್ರೈವ್ ಇನ್ ರೆಸ್ಟೋರೆಂಟ್ ಅಮೆರಿಕೆಯ ವಿಶಿಷ್ಟ ಸಂಸ್ಥೆ. ಇವು ಹೈವೇಗಳ ಪಕ್ಕಗಳಲ್ಲಿದ್ದು ಶೀಘ್ರವಾಗಿ ಉತ್ತಮ ಆಹಾರವನ್ನು ಒದಗಿಸುತ್ತವೆ. ಕಾರನ್ನು ರೆಸ್ಟೋರೆಂಟಿನ ಪಕ್ಕದಲ್ಲೇ ನಿಲ್ಲಿಸಿ ಸೇವಕಿಯೊಡನೆ ಆಜ್ಞಾಪಿಸಿದ ಕೂಡಲೇ ಇದ್ದಲ್ಲಿಗೇ ಆಹಾರದ ಪೂರೈಕೆಯಾಗುವುದು.

ಚಿತ್ರ ೯. ಮೊಂಟಿಸೆಲ್ಲೋ

೧೮೦೧ರಿಂದ ೧೮೦೯ರ ವರೆಗೆ ಅಮೆರಿಕನ್ ಅಧ್ಯಕ್ಷರಾಗಿದ್ದ ಥಾಮಸ್ ಜಫರ್‌ಸನ್‌ರವರ (ಮೂರನೆಯ ಅಧ್ಯಕ್ಷರು) ಮನೆ ಮೊಂಟಿಸೆಲ್ಲೋದಲ್ಲಿದೆ. ಇದು ವರ್ಜೀನಿಯಾದ ಎತ್ತರಗುಡ್ಡ ಚಾರ್ಲೊಟ್ಟ್ ವಿಲ್ಲೆಯ ಮೇಲಿದೆ. ಜಫರ್‌ಸನ್ ಎಂಬ ಶಿಲ್ಪಿಯೇ ಇದನ್ನು ನಿರ್ಮಿಸಿದ್ದನು ಮಾನವ ಮನಸ್ಸಿನ ಮೇಲೆ ಕವಿಯುವ ಎಲ್ಲ ಭೀತಿಗಳಿಗೆ ವಿರುದ್ಧವಾಗಿ ಶಾಂತಿಯನ್ನು ಒದಗಿಸುವ ಧೀರ ಪ್ರತಿಜ್ಞೆ ಜಫರ್‌ಸನ್ನರದು.

ಚಿತ್ರ ೧೦ ಮೋಟೆಲ್

ಮೋಟಾರು ವಾಹಕರಿಗೆ ಉಳಕೊಳ್ಳುವ ಸಲುವಾಗಿಯೇ ಹೈವೇಗಳ ಪಕ್ಕದಲ್ಲಿರುವ ಹೋಟೇಲುಗಳೇ ಮೋಟೆಲ್‌ಗಳು. ಇವುಗಳಲ್ಲಿ ಸರಳರೀತಿಯವಿವೆ, ಆಡಂಭರ ವೈಭವದಿಂದ ಕೂಡಿದವೂ ಇವೆ. ವಾಶಿಂಗ್‌ಟನ್ನಿಗೆ ಸಮೀಪದ ಒಂದು ಹೋಟೇಲು ೩೬೦ ಕೋಣೆಗಳನ್ನೂ ಹೊಂದಿದೆ, ಏಯರ್ ಕಂಡೀಷನ್ಡ್ ಆದ ಇದು ಜಗತ್ತಿನ ಮೋಟೆಲ್‌ಗಳಲ್ಲೇ ದೊಡ್ಡದು.

ಚಿತ್ರ ೧೧: ರಾಷ್ಟ್ರೀಯ ಸ್ಮಶಾನ

ವರ್ಜೀನಿಯಾದ ಮೂಲಕ ವಾಶಿಂಗ್‌ಟನ್ನನ್ನು ಸಮೀಪಿಸುವಾಗ ಅರ್ಲಿಂಗ್‌ಟನ್ ರಾಷ್ಟ್ರೀಯ ಸ್ಮಶಾನ ಕಾಣುತ್ತದೆ. ಅಜ್ಞಾತರ ಗೋರಿಯ ಮುಂದೆ ಗೌರವ ಸಲ್ಲಿಸುವುದನ್ನು ಇಲ್ಲಿ ನಾವು ಕಾಣಬಹುದು ಪ್ರಥಮ ಮತ್ತು ದ್ವಿತೀಯ ಜಾಗತಿಕ ಯುದ್ಧಗಳಲ್ಲಿ ಮತ್ತು ಕೊರಿಯಾ ಪ್ರಸಂಗದಲ್ಲಿ ಸತ್ತ ಅಜ್ಞಾತ ಶವಗಳ ಗೋರಿಯಿದು.

ಚಿತ್ರ ೧೨. ಮರಳಿ ವಾಶಿಂಗ್‌ಟನ್

ಪಶ್ಚಿಮ ಕರಾವಳಿಯ ಸಂದರ್ಶನಕ್ಕೆ ವಾಶಿಂಗ್‌ಟನ್ನಿಗೆ ಮರಳಿ ಬಂದಾಗ, ರಾಷ್ಟ್ರೀಯ ಆರ್ಟ್ ಗೆಲರಿಯನ್ನು ನೋಡಲು ಮರೆಯಬಾರದು. ದಾನಶೂರ ಆಂಡ್ರ್ಯೂ ಮೆಲ್ಲನ್‌ರವರ ಕೊಡುಗೆ ಈ ಗೆಲರಿ. ಇದರಲ್ಲಿ ೨೬ ಸಾವಿರ ಪೈಂಟಿಂಗ್, ಶಿಲ್ಪಗಳಿದ್ದು ಇವು ಇಡೀ ಪ್ರಪಂಚವನ್ನು ಪ್ರತಿನಿಧೀಕರಿಸುತ್ತವೆ. ಆರ್ಟ್ ಲೈಬ್ರೆರಿಯಲ್ಲಿ ಸಾವಿರಾರು ಮುದ್ರಿತ ಕಲಾಕೃತಿಗಳೂ ಇವೆ.

ಚಿತ್ರ ೧೩:

ಸ್ಮಿತ್‌ಸೋನಿಯನ್ ಸಂಸ್ಥೆ

ಸ್ಮಿತ್‌ಸೋನಿಯನ್ ಸಂಸ್ಥೆ ದೊಡ್ಡ ಪ್ರದರ್ಶನಾಲಯ ಇಲ್ಲಿ ಲಿಂಡಬರ್ಗನು ಪ್ರಯಾಣಮಾಡಿದ ಮೊದಲ ವಿಮಾನವನ್ನು ನಾವು ಕಾಣಬಹುದು. ಈ ಯಾತ್ರೆಯು ನ್ಯೂಯಾರ್ಕಿನಿಂದ ಪೇರಿಸಿನ ತನಕ ಮೇ ೧೯೨೭ರಲ್ಲಿ ನಡೆದಿತ್ತು.

ಚಿತ್ರ ೧೪: ಪಶ್ಚಿಮದ ಕಡೆಗೆ.

ವಾಶಿಂಗ್‌ಟನ್ನಿನ ಹೊರಗಡೆ ನ್ಯಾಶನಲ್ ವಿಮಾನ ನಿಲ್ದಾಣವಿದೆ. ಪಶ್ಚಿಮ ಅಮೆರಿಕೆಗಾತ್ತ ಪ್ರಯಾಣಿಸಲು ಇಲ್ಲಿಯೇ ವಿಮಾನವೇರಬೇಕು ನ್ಯಾಶನಲ್‌ನಲ್ಲಿ ಪ್ರತಿಸಲ ಸುಮಾರು ೧,೦೦೦ ವಿಮಾನಗಳು ತಂಗುತ್ತವೆ.

ಚಿತ್ರ ೧೫ ವಿಮಾನಯಾತ್ರೆ

ವಿಮಾನವು ನಾಲ್ಕು ಇಂಜನ್‌ನಿಂದ ಕೂಡಿರುತ್ತದೆ ಏಯರ್ ಕಂಡಿಷನ್ ಆಗಿರುತ್ತದೆ. ರೇಲ್ವೆ ಪರಿಚಾರಿಕೆಯು ವರ್ಜೀನಿಯಾದ ಅಲೆಕ್ಸಾಂಡ್ರಿಯಾದಲ್ಲಿನ ಜಾರ್ಜ್‌ವಾಶಿಂಗ್‌ಟನ್ನನ ಸ್ಮಾರಕವನ್ನು ಮೇಲಿನಿಂದಲೇ ತೋರಿಸುತ್ತಾಳೆ.

ಚಿತ್ರ ೧೬. ಸತ್ಕಸಂಗತಿ

ಪರಿಚಾರಿಕೆಯು ವಿಮಾನದಲ್ಲಿಯೇ ಬಿಸಿಯೂಟವನ್ನು ಒದಗಿಸುತ್ತಾಳೆ, ಅಮೇರಿಕೆಯಲ್ಲಿ ೧೬೦೦ ವಿಮಾನಗಳುಳ್ಳ ಏಯರ್ ಲೈನ್‌ಗಳಿವೆ ಪ್ರತಿವರ್ಷವೂ ಸುಮಾರು ೫೦ ಮಿಲಿಯ ಯಾತ್ರಿಗಳನ್ನು ಇವು ೩,೧೦೦೦೦ ಮಿಲಿಯ ಮೈಲು ಕೊಂಡೊಯ್ಯುತ್ತವೆ. ಅಮೆರಿಕೆಯಲ್ಲಿ ೭,೦೦೦ ವ್ಯಾಪಾರಿ ವಿಮಾನ ನಿಲ್ದಾಣಗಳಿವೆ. ೯,೦೦,೦೦೦ ಲೈಸನ್ಸ್ ಪಡೆದ ನಾಗರಿಕ ಅಥವಾ ಖಾಸಗಿ ವಿಮಾನ ಚಾಲಕರಿದ್ದಾರೆ.

ಚಿತ್ರ ೧೭ ದಾರಿ

ವಾಶಿಂಗ್‌ಟನ್ನಿನಿಂದ ಸಾನ್ ಫ್ರಾನ್ಸಿಸ್ಕೋವಿಗೆ ೨೫೦೦ ಮೈಲು ದೂರ. ಇದನ್ನು ಸಾಗಬೇಕಾದರೆ ವಿಮಾನಕ್ಕೆ ೧೦ ತಾಸುಗಳ ಅವಧಿ ಬೇಕಾಗುತ್ತದೆ ಅತ್ಲಾಂಟಿಕ ಸಾಗರದಿಂದ ಶಾಂತ ಸಾಗರದ ವರೆಗೆ ಹರಡಿದಅಮೆರಿಕನ್ ರಾಜ್ಯಗಳಲ್ಲಿ ೧೧ರ ಮೇಲೆ ಈ ವಿಮಾನವು ಹಾರುತ್ತದೆ. ಹಿಂದಿನ ಕಾಲದಲ್ಲಿ ಈ ಯಾತ್ರೆಗೆ ಸುಮಾರು ೬ ತಿಂಗಳ ಕಾಲ ಬೇಕಾಗುತಿತ್ತು

ಚಿತ್ರ ೧೮: ಮಿಸಿಸಿಪಿ ನದಿ

'ನೀರಿನ ತಂದೆ' ಎನಿಸುವ ಮಿಸಿಸಿಪಿ ನದಿಯನ್ನು ವಿಮಾನವು ಹಾರುತ್ತದೆ ಮಿಸಿಸಿಪಿಯು ಅನೇಕ ಅಮೇರಿಕನ್ ದಂತಕಥೆಗಳಿಗೆ, ಜಾನಪದ ಕತೆಗಳಿಗೆ ಮೂಲವಾಗಿದೆ ೨,೩೦೦ ಮೈಲು ದೂರವಿರುವ ಈ ನದಿಯು ಮಿನ್ನೆಸೋಟಾದಲ್ಲಿ ಹುಟ್ಟಿ ನ್ಯೂ ಓರ್ಲಿಯನ್ಸ್‌ನ ಬಳಿ ಮೆಕ್ಸಿಕೋ ಕೊಲ್ಲಿಯನ್ನು ಸೇರುತ್ತದೆ.

೬ ೭ ೮ ೯





೧೫ ೧೬ ೧೭ ೧೮

ಬ್ರಿಟನ್ನಿನ ಮೋಹಜಾಲದಲ್ಲಿ

ಭಾರತವು ಸಿಕ್ಕಿಕೊಂಡಿತೆ?

ಸಮರವಿರಾಮ ಒಡಂಬಡಿಕೆಯನ್ನು ಪಾಕಿಸ್ತಾನ ಕಾರ್ಯರೂಪಕ್ಕೆ ತಂದೀತೆ?

ಬರೆದವರು: ಶ್ರೀ ಶಿವಶಂಕರ.

ವ್ಯಾಸ ಪೌರ್ಣಿಮೆಯ ಪ್ರಶಾಂತ ಹಾಗೂ ಹಾಲು ಬೆಳಕಿನ ರಾತ್ರಿ ಅದೆಂತು ಭಾರತದ ಭಾವೀ ಭವಿಷ್ಯತ್ತಿನ ಕುರಿತು ನಾವು ಯೋಚಿಸಿದ್ದೆವೆಂಬುದನ್ನು ಕಳೆದ ವಾರ ಕಂಡಿರುವೆವು. ಮತ್ತೆ?—ಅದೇ ಹಳೆಯ ಹಾಡು.

ದೇಶದೊಳಗೆ ವಿಷಜಂತುಗಳಿಗೆ ಹಾಲೂಡಿಸಲಾಗುತ್ತದೆ. ಅದರ ಸಂಪೂರ್ಣ ಲಾಭವನ್ನು ನೆರೆಕರೆಯ ನಾಡುಗಳು ಪಡೆಯುತ್ತಿವೆ. ಅವು ದೇಶವನ್ನು ಅದೆಂತಾದರೂ ಸ್ವಾಹಾಮಾಡಿಕೊಳ್ಳಬೇಕೆಂದು ಪ್ರಯತ್ನಿಸುವುದರಲ್ಲೇನೂ ಆಶ್ಚರ್ಯವಿಲ್ಲ. ಚೈನಾದಲ್ಲಿ ಕ್ರಾಂತಿ ನಡೆದು ಶ್ರೀ ಚಿಯಾಂಗ್—ಕೈ—ಶೇಖರ ಕೈ ಮೇಲಾಗುವಂತೆ ಭಾರತೀಯ ನಾಯಕರು ಕೆಲವರು ಪ್ರಯತ್ನಿಸಿದ್ದರು. ಶ್ರೀ ಚಿಯಾಂಗ್-ಕೈ-ಶೇಖರು ಅಡಿಗೆ ಬಿದ್ದು ಕಮ್ಯೂನಿಸ್ಟ್ ಕರಡಿ ಬಂದಾಗ ಅದಕ್ಕೂ ಸ್ವಾಗತವನ್ನೀಯಲು ನಮ್ಮ ನಾಯಕರು ಹಿಂಜರಿಯಲಿಲ್ಲ. ಅದಕ್ಕೂ ಜಯಕಾರ, ಇದಕ್ಕೂ ಜಯಕಾರ! ಅಷ್ಟೇ ಅಲ್ಲ, ಅವಿಶ್ವಾಸವನ್ನು ತಿಂದು ತೇಗಲೂ ಕಮ್ಯೂನಿಸ್ಟ್ ಕರಡಿಗೆ ನಾವು ಸಹಾಯ ಮಾಡಿದೆವು! ಎಂತಹ ಪಾಪ ಕಾರ್ಯ! ಅದರ ಫಲ!—ನಾವಿಂದು ಅನುಭವಿಸಬೇಕಾಗಿರುತ್ತದೆ.

ದೇಶದ ಸ್ವಾತಂತ್ರ್ಯಕ್ಕಿಂತಲೂ ಅಧಿಕಾರ ಲಾಲಸೆಯಿಂದಲೋ ಎಂಬಂತೆ ದೇಶವಿಭಜನೆಯಂತಹ ಘೋರ ಪಾತಕಕ್ಕೂ ಒಪ್ಪಿ ಅಮವಾಸ್ಯೆಯ ರಾತ್ರಿ ನಾವು ದಿಲ್ಲೀಶರಾದೆವು. ಮಾನವನ ರುಚಿ ಕಂಡ ಹುಲಿ ಸುಮ್ಮನೆ ಬಿಟ್ಟೀತೇ? ಅದೇ ಬಿಸಿಯಲ್ಲಿ ಪಾಕಿಸ್ತಾನವು ಕಾಶ್ಮೀರವನ್ನು ಕಬಳಿಸಲು ಪ್ರಯತ್ನಿಸುತ್ತಿದೆ ಸರಿ. ಒಂದಿಷ್ಟು ಬಿಟ್ಟುಕೊಟ್ಟೆವು. ಅಸ್ಸಾಂ ಆದರೇನು ಕಚ್ಛ ಆದರೇನಂತೆ ಆಕ್ರಮಣದ ಆಲೋಚನೆ ಇರುವವರಿಗೆ? ಅಂತೆಯೇ ಅಂದಿನಿಂದ ಎಡೆಬಿಡದೆ ಆಕ್ರಮಣ ಮುನ್ನಡೆಸುತ್ತಿದೆ, ಪಾಕಿಸ್ತಾನ. ಒಂದು ದಿನವಾದರೂ ನಾವದಕ್ಕೆ ಎಚ್ಚರಿಕೆ ಕೊಟ್ಟಿದ್ದೇವೆಯೇ? ಇದೀಗ ನಡೆದುದಾದರೂ ಏನ? ಪಾಕಿಸ್ತಾನವು ಇತ್ತ ಕಚ್ ಪ್ರದೇಶದಲ್ಲಿ ಕಾಲಿಟ್ಟಿತ್ತು. ಅವನ್ನಲ್ಲಿಂದ ಅಟ್ಟಿ ಬಿಡುವುದು ನಮ್ಮ ಸೈನಿಕರಿಗೆ ಸ್ವಲ್ಪ ಶ್ರಮದ ಕೆಲಸವೆಂದು ನೇತಾವರ್ಗ ನುಡಿಯಿತು. ಸರಿ. ನಿಮಗೆ ಬೇರೆ ದಾರಿಯೇ ಇಲ್ಲವೇನು? ಅದು ನ್ಯಾಯದದಾರಿಯಲ್ಲವಾದರೂ ಶಾಂತ್ರವದಾರಿಯೋ ಇದೆ. ನಮಗೆಸುಲಭವಾಗಿರುವ ಸ್ಥಳವನ್ನು ನಾವೂ ಹಿಡಿದು ಬಿಡೋಣ. ಆಗ ಪಾಕಿಸ್ಥಾನ ತಾನಾಗಿ ಸಂಧಾನಕ್ಕೆ ಬಂದೇ ಬರುತ್ತದೆ. ಕಾಂಗ್ರೆಸ್ ಶಾಸಕ ವರ್ಗ "ಶಾಂತಂ ಪಾಪಂ" ಎಂದಿತು ನಾವು ಶಾಂತಿಯ ಅವತಾರವೆಂದೇ ಘೋಷಣೆ ಹಾಕಿಕೊಂಡಿತು. ಹೀಗೆ ಹೋದಲ್ಲೆಲ್ಲಾ ನಮ್ಮ ಕರುಣಾಜನಕ ಕಣ್ಣೀರಿನ ಕಥೆಯನ್ನು ಆ ಶಾಸಕ ವರ್ಗ ಹೇಳುತ್ತ ಬಂದಿತು. ಅದಕ್ಕೆ ಶ್ರೀ ರಾಜಾಜಿಯವರ ಸ್ವತಂತ್ರ ಪಾರ್ಟಿ ಗಾಳಿ ಹಾಕಿತು. ಕಾಶ್ಮೀರವನ್ನಾದರೂ ಸರಿ, ಕಚ್ಛನ್ನಾದರೂ ಸರಿ, ಪಾಕಿಸ್ತಾನಕ್ಕೆ ಬಿಟ್ಟು ಕೊಟ್ಟು ಸಂಧಾನ ಮಾಡಿಕೊಳ್ಳೋಣವೆಂದು ಸ್ವತಂತ್ರ ಪಾರ್ಟಿ ಸಾರುತ್ತ ಬಂತು. ಅದಕ್ಕೆ ಕಾರಣವೇನು? ಅಮೇರಿಕ ಅಲ್ಲದೆ ಇಂಗ್ಲೆಂಡಿವೆ.

ಕಾಶ್ಮೀರದಲ್ಲಾಗಲೀ, ಕಚ್ಛನಲ್ಲಾಗಲೀ ಆಕ್ರಮಣನಡೆಸಿದವರು ಪಾಕಿಸ್ಥಾನಿಗಳೆಂಬುದು ಅಮೇರಿಕಕ್ಕೂ, ಇಂಗ್ಲೆಂಡಿಗೂ ಚೆನ್ನಾಗಿ ಗೊತ್ತು. ಕಾಶ್ಮೀರದಲ್ಲಿರುವ ಸಂಯುಕ್ತ ರಾಷ್ಟ್ರಸಂಘದ ವೀಕ್ಷಕರು ಅನೇಕ ಬಾರಿ ಪಾಕಿಸ್ಥಾನಿಗಳಿಂದ ಪೆಟ್ಟು ತಿಂದಿಲ್ಲವೇನು? ಅದರೂ ನಮಗೆ ದೊರಿತ ಬಹುಮಾನವೇನು? ಪಾಕಿಸ್ಥಾನವನ್ನು ಉದ್ರೇಕಿಸಿದವರು ನಾವಂತೆ. ಅಲ್ಲವೇ ಮತ್ತೆ? ದಾರಿಯಲ್ಲಿ ಬಂಗಾರದ ಮೊಟ್ಟೆಯೊಂದು ಸಿಕ್ಕಿದಲ್ಲಿ ಯಾರಾದರೂ ಹೆಕ್ಕದಿರುತ್ತಾರೆಯೇ? ಅದು ಹೆಕ್ಕಿದವನ ತಪ್ಪೇನು? ಹಾಗೆನೇ ಆಕ್ರಮಣ ನಡೆಸಿದವನದ್ದೇನೂ ತಪ್ಪಿರುವದಿಲ್ಲ. ಆಕ್ರಮಣಕ್ಕೆ ತಲೆಬಾಗಿ ಸಹಿಸಿಕೊಂಡಿರುವ ನಮ್ಮದೇ ತಪ್ಪಿದೆ. ಅಮೇರಿಕ ಅದರಿಂದಲೂ ತೃಪ್ತಿಪಡಲಿಲ್ಲ. ಪಾಕಿಸ್ಥಾನದ ಪ್ರೀತಿ ಪೀಡೆಗೆ ಭಾರತ ತಲೆಬಾಗಲೇ ಬೇಕೆಂದು ತಿಳಿಸುತ್ತ ಬಂದಿರುತ್ತದೆ. ಅದೆಷ್ಟರ ಮಟ್ಟಿಗೆ ಅವರು ಮುಂದರಿದ್ದಾರೆಂದರೆ ಪಾಕಿಸ್ತಾನವನ್ನು ಭಾರತ ಸಂತುಷ್ಟಗೊಳಿಸದಿದ್ದಲ್ಲಿ ಅದು ತನ್ನ ಅತೃಪ್ತಿಯನ್ನು ಸಂಯುಕ್ತ ರಕ್ಷಣಾ ಸಮಿತಿಯಲ್ಲಿ ಪ್ರಕಟಪಡಿಸೀತು. ಆಗ ಅಮೇರಿಕವು ಪಾಕಿಸ್ತಾನದ ಪಕ್ಷವೆತ್ತಬೇಕಾಗುತ್ತದೆ. ಅದನ್ನು ತಪ್ಪಿಸಲು ಕಾಶ್ಮೀರ ಹಾಗೂ ಕಚ್ಛನ್ನು ಪಾಕಿಸ್ತಾನಕ್ಕೆ ಮರ್ಯಾದೆಯಿಂದ ಬಿಟ್ಟು ಕೊಡಬೇಕೆಂದು ಅಮೇರಿಕವು ಭಾರತಕ್ಕೆ ತಿಳಿಸೀತ, ಒಂದಿಷ್ಟು ಸಂಕೋಚನಸ್ಥಿತಿ ಸಿಲಿಪ್, ತಾಲಿಬೋಟರು ಭಾರತದ ಶ್ರೀ ಬಿ. ಕೆ. ನೆಹ್ರೂ ಹಾಗೂ ಶ್ರೀ ಮೂನ್ ಸಿ. ಕೆ. ಬೆನರ್ಜಿಯವರನ್ನು ಒಲಿಸಲು ಪ್ರಯತ್ನಿಸಿದರು. ಅವರೀಬ್ಬರೂ ವಿಷಯವನ್ನು ಶ್ರೀಯುತ ಲಾಲಬಹದೂರ ಶಾಸ್ತ್ರೀಜೀಯವರಿಗೆ ತಿಳಿಸಿದರು. ಅದೇ ಸಮಯವನ್ನು ನೋಡಿ ಬ್ರಿಟನ್ನಿನ ಪ್ರಧಾನಿ ವಿಲ್ಸನ್‌ರವರೊಂದು ಪತ್ರವನ್ನು ಮುಂದಿಟ್ಟು ಅದಕ್ಕೆ ಸಹಿ ಹಾಕಲು ಶ್ರೀ ಲಾಲಬಹದೂರ ಶಾಸ್ತ್ರೀಜಿಯವರಿಗೆ ತಿಳಿಸಿದರು. ಅದರಲ್ಲಿ ಒಡನೆ ವಿರಾಮ ರೇಖೆಗೆ ಒಪ್ಪಬೇಕೆಂದಿತ್ತು. ಆದರೆ ಆಕ್ರಮಣಗಾರರಿಗೆ ಇನ್ನೊಂದಿಷ್ಟು ಸಮಯ ಕೊಡಬೇಕೆಂದು, ಅಷ್ಟೇ. ಪುಣ್ಯವಶಾತ್ ನಮ್ಮ ಪ್ರಧಾನಿಯವರದಕ್ಕೆ ಒಪ್ಪಲಿಲ್ಲ ಅದನ್ನು ಕಸದ ಬುಟ್ಟಿಗೆ ಹಾಕಿದರು. ತಾತ್ವಿಕ ದೃಷ್ಟಿಯಿಂದ ಅಪಮಾನಿತ ಬ್ರಿಟನ್ ಬೇರೆಂದು ಹಂಚಿಕೆಯನ್ನು ಮುಂದಿಟ್ಟಿತು. ಈ ಸಲ ಅದಕ್ಕೆ ಬೇರೆ ಹೊಸ ರೀತಿಯ ಸೀಸೆಯನ್ನು ಉಪಯೋಗಿಸಲಾಯಿತು. ಇತ್ತ ಅಮೇರಿಕವಂತೂ ಭಾರತದ ಮೇಲೆ ಒತ್ತಡ ಹಾಕುವದನ್ನು ಅಧಿಕಗೊಳಿಸಿತು. ಅತ್ತ ಅದರ ಬಾಲದಂತಿರುವ ಸ್ವತಂತ್ರ ಪಾರ್ಟಿಯ ಮೂಲಕ ಅದು ಒಳಗಿಂದ ಅಣುಜೀವಿಯಂತೆ ಕೆಲಸ ಮಾಡಲು ಪ್ರೋತ್ಸಾಹ ಕೊಟ್ಟಿತು.

ಬ್ರಿಟನ್ ಬೇರೊಂದು ಮಾರ್ಗವನ್ನು ಹಿಡಿಯಿತು. ಕಚ್ಛನಿಂದ ಕಾಲ್ತೆಗೆಯದಿದ್ದರೆ ಅಯೂಬಖಾನನ ಮುಖಾವಲೋಕನ ಮಾಡುವದಿಲ್ಲವೆಂದು ಒಮ್ಮೆ ಶ್ರೀ ಲಾಲಬಹದೂರ ಶಾಸ್ತ್ರೀಜೀಯವರು ಉದ್ವೇಗಭರದಲ್ಲಿ ಆಡಿದ್ದರು. (ತಣ್ಣಗಾದ ಮೇಲೆ ಹಾಗಲ್ಲ—ಹೀಗಲ್ಲ ಎಂದೆಲ್ಲಾ ಹೇಳಿದ್ದರು) ಬ್ರಿಟನ್ ಆಟವನ್ನಾಡಿದರು ಮತ್ತು ಹಿಂದೆ ತಮಗಾಗಿರುವ ತಾತ್ವಿಕ ಸೋಲಿನ ಮಸಿಯನ್ನು ತೊಳೆದು ಬಿಡಲು ಆ ಸಂದರ್ಭವನ್ನುಪಯೋಗಿಸಿಕೊಂಡರು. ಕಾಮನವೆಲ್ತಿನ ಪ್ರಧಾನಿಗಳೆಲ್ಲರೂ ಬ್ರಿಟನ್ನಿನಲ್ಲಿ ಸೇರಿದಾಗ ಪಾಕಿಸ್ಥಾನದ ಅಧ್ಯಕ್ಷ ಅಯೂಬಖಾನ್ ಹಾಗೂ ಭಾರತದ ಪ್ರಧಾನಿ ಶ್ರೀ ಲಾಲಬಹದೂರ ಶಾಸ್ತ್ರೀಜೀಯವರನ್ನು ತೆರೆಯ ಮರೆಯಲ್ಲಿ ಒಂದಾಗಿಸಲು ಬ್ರಿಟನ್ನಿನ ಪ್ರಧಾನಿ ಶ್ರೀ ವಿಲ್ಸನ್ ಒಂದು ತಂತ್ರವನ್ನು ಹೂಡಿದರು. ಆಗ ಶ್ರೀ ಲಾಲಬಹದೂರರೇನು ಮಾಡುವದು? ಮುಖಾವಲೋಕನ ಮಾಡದಿರಲು ಸಾಧ್ಯವೇನು? ತಮ್ಮ ಹಿಂದಿನ ಶರ್ತಗಳನ್ನು ಶ್ರೀ ಲಾಲಬಹದೂರಜೀಯವರು ಗಾಳಿಯಲ್ಲಿ ತೂರಿ ಬಿಟ್ಟುದುವರಿಂದ ಶ್ರೀ ವಿಲ್ಸನ್ ದ್ವಿತೀಯ ದೃಶ್ಯಕ್ಕೆ ಅಣಿಗೊಳಿಸಿದರು. ಕೊನೆಯಲ್ಲಿ ಆ ಪರದೆ—ಅವಸರವಾಗಿ ಪರದೆಯನ್ನೆಳೆದೂ ಬಿಟ್ಟರು. ಶ್ರೀ ಲಾಲಬಹದೂರ ಶಾಸ್ತ್ರೀಜೀ ಬಹಳ ಸುಲಭವಾಗಿ ಅವರ ಬಲೆಯಲ್ಲಿ ಸಿಕ್ಕಿ ಬಿದ್ದರು. ವಿಲ್ಸನ್ ಸಂಧಾನ ಶರತ್ತುಗಳಿಗೆ ಅವರು ಒಪ್ಪಿಕೊಂಡರು. ಅಲ್ಲಿಂದ ಭಾರತಕ್ಕೆ ಆಗಮಿಸಿದೊಡನೆ ರಹಸ್ಯವಾಗಿ ಹಾಗೂ ಅವಸರವಾಗಿ ತಮ್ಮ ಮಂತ್ರಿಮಂಡಳದ ಸಭೆಯನ್ನು ಕರೆದು ವಿಚಾರ ತಿಳಿಸಿದರು ಹಾಗೂ ಅವರ ಒಪ್ಪಿಗೆಯನ್ನು ಪಡೆದುಕೊಂಡರು. ದೂರದ ಬೆಟ್ಟ ನೋಡಲು ಮಾತ್ರ ಚಂದವೆಂಬುದು ಅವರಿಗೆ ಗೊತ್ತಾಗಲಿಲ್ಲ. ಸಂಧಾನಕ್ಕೆ ಪಾಕಿಸ್ಥಾನ ಕೂಡಾ ಒಪ್ಪಿರುವದರಿಂದ ತಾವೂ ಒಪ್ಪದಿದ್ದಲ್ಲಿ ತಮ್ಮ ಮೇಲೆ ಆಗವಾದ ಬಂದೀತೆಂದು ಅವರ, ಕಸಿವಿಸಿಗೊಂಡರೋ ಏನೋ!—ಅಮೇರಿಕ ಬೇರೆ ಹೆದರಿಸಿದೆ.

ಪಾಕಿಸ್ಥಾನ ಒಪ್ಪಿತು ವಾಸ್ತವ. ಅದಕ್ಕದು ಬೇಕಾಗಿತ್ತು. ಈಗಂತೂ ಅಲ್ಲಿ ಆಕ್ರಮಣ ಮುಂದರಿಸಲು ಸಾಧ್ಯ ಇರುವದಿಲ್ಲ. ಹಾಗಿರುವಾಗ ಸಂಧಾನದ ಆವಶ್ಯಕತೆಯೂದರೂ ಏನು? ಅಲ್ಲದೆ, ಹಿಂದೆಂದೂ ತನ್ನ ಮಾತಿನಂತೆ ಪಾಕಿಸ್ಥಾನ ನಡೆದುಕೊಂಡಿದೆಯೇ? ಅಸ್ಸಾಂ- ಬಂಗಾಲ—ತ್ರಿಪುರ—ಮಣಿಪುರ—ಮುಂತಾದೆಡೆಗಳಲ್ಲಿರುವ ಗಡಿ ಪ್ರದೇಶದಲ್ಲಿ ಅದು ಆಕ್ರಮಣವನ್ನು ಮುಂದರಿಸುತ್ತಿಲ್ಲವೇನು? ಹಾಗಿರುವಾಗ ನಿಜವಾಗಿ ಅದಕ್ಕೆ ಸಂಧಾನ—ಶಾಂತಿ ಬೇಕಾಗಿದೆಯೇನು? ಇದೊಂದು ಕೇವಲ ನಾಟಕ.

ಈ ನಾಟಕದಿಂದ ಪಾಕಿಸ್ಥಾನಕ್ಕೆ ನಷ್ಟವಾಗಿದೆ ಏನು? ಒಂದಿಷ್ಟು ಇಲ್ಲ; ಲಾಭವೇ ಆಗಿದೆ. ಈಗ ಎಲ್ಲಿ ಆಕ್ರಮಣ ಮುನ್ನಡೆಸಲು ಸಾಧ್ಯ ಇಲ್ಲವೋ ಆ ಪ್ರದೇಶದಿಂದ ಸೇನೆಯನ್ನು ಹಿಂದಕ್ಕೆ ಕೊಂಡು ಹೋಗುವದಾಗಿ ಪಾಕಿಸ್ಥಾನ ಒಪ್ಪಿರುತ್ತದೆ. ನೀರು ನಿಲ್ಲುವ ಪ್ರದೇಶದಲ್ಲಿ ಸೇನೆ ನಿಲ್ಲಲು ಸಾಧ್ಯವೇನು? ಆದುದರಿಂದ ಅದು ಹಿಂದಕ್ಕೆ ಹೋಗುತ್ತಿದೆ. ಹಾಗೆ ಉಪಾಯವಿಲ್ಲದೆ, ನಿಸರ್ಗಕ್ಕೆದುರು ನಿಲ್ಲಲು ಸಾಧ್ಯವಿಲ್ಲದೆ ಹಿಂದಕ್ಕೆ ಹೋಗುವಾಗಲೂ ಅದು ಲಾಭವನ್ನು ಗಳಿಸಿತು. ನಿಜವಾಗಿ ಪಾಕಿಸ್ತಾನಕ್ಕೆ ಸೇರದಿರುವ ಪ್ರದೇಶದ ಮೇಲೂ ಉಳಿದ ಭಾರತಕ್ಕಿರುವ ಅಧಿಕಾರವನ್ನದು ಒಪ್ಪಿಕೊಳ್ಳದೆ, ಆ ಸ್ಥಳದಲ್ಲಿ ಮೂರನೇಯವರ ಸೇನೆ ಅಥವಾ ಸಂಯುಕ್ತ ರಾಷ್ಟ್ರ ಸಂಘದ ಸೇನೆ ಇರಬೇಕೆಂದು ಹೇಳಿತು. ಭಾರತ ಒಪ್ಪಿತು. ಅಂತರಾಷ್ಟ್ರೀಯ ಪ್ರೇಕ್ಷಕರ ಪ್ರೇಕ್ಷಣೀ ಹೀಗೆ ನಮ್ಮ ಗಡಿ ಪ್ರದೇಶ ಯ ಪ್ರದೇಶವಾಯಿತು! ಅಷ್ಟೇ ಅಲ್ಲ, ನಮ್ಮ ಸಂಪರ್ಕ ಶಾಖೆಯ ಅನುಕೂಲತೆಗಾಗಿ, ಹಾಗೂ ಪಾಕಿಸ್ತಾನವು ಸಂಯುಕ್ತ ರಾಷ್ಟ್ರ ಸಂಘದವರು ಸೂಚಿಸಿರುವ ಶರತ್ತುಗಳಿಗೆ ಬೆನ್ನು ತೋರಿಸಿದಾಗ ಭಾರತೀಯ ಶೂರ ಸೈನಿಕರು ಕಾರ್ಗಿಲಿನಲ್ಲಿ ಕಾಲಿಟ್ಟಿದ್ದರು. ನಿಜವಾಗಿ ಇದು ಪಾಕಿಸ್ತಾನಕ್ಕೆ ಸೇರಿದ ಪ್ರದೇಶವಲ್ಲ ಆದರೆ ಕಾಶ್ಮೀರವನ್ನು ಆಕ್ರಮಿಸಿಕೊಂಡು, ಕದನವಿರಾಮ ರೇಖೆಗೊಪ್ಪಿಕೊಂಡಾಗ ಕಾರ್ಗಿಲ್ ಆಕ್ರಮಣಕ್ಕೊಳಗಾದ ಪ್ರದೇಶದಲ್ಲಿ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ವಿಜ್ಞಾನದ ವಿಚಿತ್ರ

ಬಳಸಿದ ನೀರಿನಿಂದ ಶುದ್ಧ ನೀರು

ಮಾನವ ದೀರ್ಘ ಕಾಲದ ಗಗನಯಾತ್ರೆಯನ್ನು ಕೈಕೊಂಡಾಗ ಅನುಕೂಲವಾಗುವಂತಹ ಜಲಮೂಲವೊಂದನ್ನು ಅಮೇರಿಕದ ವಿಜ್ಞಾನಿಗಳು ಈಗ ರೂಪಿಸುತ್ತಿದ್ದಾರೆ. ಇಂತಹ ಯಾತ್ರೆಗಳಿಗೆ ಅವಶ್ಯವಾಗುವಷ್ಟು ದೊಡ್ಡ ಪ್ರಮಾಣದ ಜಲಸಂಗ್ರಹವನ್ನು ಜತೆಯಲ್ಲಿ ಒಯ್ಯಲಾಗುವುದಿಲ್ಲ, ಎಂಬುದು ಸ್ಪಷ್ಟ. ಆದುದರಿಂದ ಅವರು ಆರ್ಥಿಕವಾಗಿಯೂ ತಾಂತ್ರಿಕವಾಗಿಯೂ ಸಾಧ್ಯವಾದ ಮೂಲವೊಂದನ್ನು ಹುಡುಕಬೇಕಾಗಿದೆ.

ಉಪಯೋಗಿಸಿದ ನೀರನ್ನೇ ಶುದ್ಧೀಕರಣದಿಂದ ಪುನಃ ಉಪಯೋಗಿಸುವಂತೆ ಏರ್ಪಡಿಸಬೇಕೆಂಬುದೇ ಅವರ ಉದ್ದೇಶ. ಎಲೆಕ್ಟ್ರೋಡಯಾಲಿಸಿಸ ಎಂಬುದೇ ಅವರ ತಂತ್ರದ ಹೆಸರು. ಉಪಯೋಗಿಸಿದ ನೀರನ್ನು ಪುನಃ ಸಂಗ್ರಹಿಸಿ ಅದರಲ್ಲಿರುವ ಕಶ್ಮಲಗಳನ್ನು ತೆಗೆದು ಹಾಕುವ ಮೂಲಕ ಮತ್ತೆ ಆ ನೀರನ್ನು ಉಪಯೋಗಾರ್ಹವಾಗಿ ಮಾಡಲಾಗುವುದು.

ಉಪಯೋಗಿಸಿದ ನೀರಿನಿಂದ ಹಾಗೂ ಶರೀರದ ಕಶ್ಮಲಗಳಿಂದ ಖನಿಜಗಳನ್ನು ತೆಗೆದುಹಾಕಬಲ್ಲ ಮೂಲಭೂತ ಅಂಶವೊಂದನ್ನು ಅಭಿವೃದ್ಧಿಪಡಿಸುವ ವಿಧಾನಗಳಿಗಾಗಿ ಕ್ಯಾಲಿಫೋರ್ನಿಯಾದ ನ್ಯೂಪೋರ್ಟ್ ಬೀಚಿನಲ್ಲಿರುವ ಡೊಗ್ಲಾಸ್ ಅಸ್ಟ್ರೋಪವರ್ ಪ್ರಯೋಗಶಾಲೆಯ ವಿದ್ಯುತ್ ರಾಸಾಯನಿಕ ಶಾಸ್ತ್ರದ ಪ್ರಯೋಗಶಾಲೆಯ ಮುಖ್ಯರಾದ ಡಾ| ಕಾರಬರ್ಗರ್ ಅವರು ಸಂಶೋಧನೆ ನಡೆಸುತ್ತಿದ್ದಾರೆ.

ಕಾಗದದಷ್ಟು ತೆಳುವಾದ ಪದರಗಳನ್ನು ಬಳಸಿ ನೀರಿನಿಂದ ಅಶುದ್ಧ ವಸ್ತುಗಳನ್ನು ಬೇರ್ಪಡಿಸುವ ಎಲೆಕ್ಟ್ರೋಡಯಾಲಿಸಿಸ ವಿಧಾನವನ್ನು ಡಾ| ಬರ್ಗರ್ ಶೋಧಿಸುತ್ತಿದ್ದಾರೆ. ಗಗನ ಕೋಶಗಳಲ್ಲಿಯೂ, ಪ್ರಯೋಗ ಶಾಲೆಗಳಲ್ಲಿಯೂ ಅತಕ ಮಾಡಬಹುದಾದ, ದೇಹದ ಕಶ್ಮಲೋತ್ಪನ್ನಗಳನ್ನು ಶುದ್ಧಿಪಡಿಸುವ ಖನಿಜಗಳ ನಿವಾರಣೆಯ ಯೂನಿಟ್ಟಿನ ಪ್ರಯೋಗಗಳನ್ನೂ ನಡೆಸುತ್ತಿದ್ದಾರೆ.

"ಮರುಭೂಮಿಯಲ್ಲಿರುವ ತೈಲ ಶೋಧಕ ಶಿಬಿರಗಳಲ್ಲಿ ಕಳೆದ ೧೫ ವರ್ಷಗಳಿಂದ ಎಲೆಕ್ಟ್ರೋಡಯಾಲಿಸಿಸ್ ವಿಧಾನವನ್ನು ಬಳಸಲಾಗುತ್ತಿದೆ. ಒಂಟೆಯ ಮೇಲೆ ಚರ್ಮದ ಚೀಲಗಳಲ್ಲಿ ನೀರನ್ನು ಸಾಗಿಸಲು ವೆಚ್ಚ ಬಹಳವಾಗುತ್ತದೆ." ಎಂದರು ಡಾ| ಬರ್ಗರ್.

ಭಟ್ಟಿ ಇಳಿಸುವುದು, ಘನೀಕರಿಸುವುದು ವಿಪರೀತವಾಗಿ ಸೋಸುವುದು ಈ ಬಗೆಯ ಸಾಮಾನ್ಯ ಜಲಶುದ್ಧೀಕರಣದ ವಿಧಾನಗಳಿಗಿಂತ ಎಲೆಕ್ಟ್ರೋಡಯಾಲಿಸಿಸ್‌ನಲ್ಲಿ ಅನೇಕ ಹೆಚ್ಚಿನ ಅನುಕೂಲಗಳಿವೆ. ಇವುಗಳಲ್ಲಿ ಮುಖ್ಯವಾದುದು, ಅಡಕವಾದ ಯೂನಿಟ್ಟು ಬಹು ಶೀಘ್ರಗತಿಯಿಂದ ಹೆಚ್ಚು ಕಷ್ಟವಿಲ್ಲದೆ ಹೆಚ್ಚು ನೀರನ್ನು ಎಲೆಕ್ಟ್ರೋಡಯಾಲಿಸಿಸ್ ವಿಧಾನ ಒದಗಿಸಬಲ್ಲದು ಎಂಬುದು.

ಸಾಮಾನ್ಯ ಎಲೆಕ್ಟ್ರೋಡಯಾಲಿಸಿಸ್ ಯೂನಿಟ್ಟಿನಲ್ಲಿ ಅಂಗುಲದ ೧೫ರಿಂದ ೩೦ ಸಾವಿರದ ಒಂದು ಭಾಗದಷ್ಟು ತೆಳುವಾದ ಅಯೋನ್ ವಿನಿಮಯದ ಪದರಗಳು, ಪ್ಲಾಸ್ಟಿಕ್ ಸ್ಪೇಸರಿನಿಂದ ಪ್ರತ್ಯೇಕಿಸಲ್ಪಟ್ಟು ಪರ್ಯಾಯವಾಗಿ ಧನ ಹಾಗೂ ಋಣ ವಿದ್ಯುತ್‌ಪೂರಿತವಾಗಿರುತ್ತವೆ. ಇವೆಲ್ಲವನ್ನು ನೇರ ವಿದ್ಯುತ್ ಪ್ರವಾಹದ ದ್ವಾರಗಳ ನಡುವೆ ಇರಿಸಲಾಗುವುದು. ನೋಟಕ್ಕೆ ಈ ಯೂನಿಟ್ಟು ಬ್ಯಾಟರಿಯಂತೆ ಕಾಣುತ್ತದೆ.

ಉಪ್ಪಿನಿಂದ ಕೂಡಿದ ಜಲದಲ್ಲಿ ವಿದ್ಯುತ್ತಿನಿಂದ ಪೂರಿತವಾದ ಸೋಡಿಯಂ ಅಯೋನುಗಳೂ, ಧನವಿದ್ಯುತ್ತಿನಿಂದ ಪೂರಿತವಾದ ಕ್ಲೋರೈಡ್ ಅಯೋನುಗಳೂ ಇದ್ದು, ವಿದ್ಯುತ್ ಪ್ರವಾಹ ಸೋಡಿಯಂ ಅನ್ನು ಋಣ ವಿದ್ಯುತ್ ಪೂರಿತವಾದ ಪದರು ಕಡೆಗೂ, ಕ್ಲೋರೈಡನ್ನು ಧನ ವಿದ್ಯುತ್ ಪೂರಿತವಾದ ಪದರು ಕಡೆಗೂ ಸಾಗಿಸಿ, ಖನಿಜ ರಹಿತವಾದ ನೀರನ್ನು ಒಂದು ಪಕ್ಕದಲ್ಲೂ ಉಪ್ಪು ನೀರಿನ ದ್ರವವನ್ನು ಮತ್ತೊಂದು ಪಕ್ಕದಲ್ಲೂ ಉಳಿಸುತ್ತದೆ.

ಈ ವಿಧಾನ ಬಹು ಸಮರ್ಥವಾದುದು; ಕಛೇರಿಯ ಮೇಜಿನಷ್ಟು ಎತ್ತರ ಹಾಗೂ ಅದರ ಮೂರನೆ ಒಂದರಷ್ಟು ಉದ್ದದ ಯೂನಿಟ್ಟಿನಲ್ಲಿ ದಿನವೊಂದಕ್ಕೆ ೩೫,೦೦೦ ಗ್ಯಾಲನ್ ಶುದ್ಧ ನೀರನ್ನು ಸಿದ್ಧಪಡಿಸಬಹುದು ಎನ್ನುತ್ತಾರೆ ಡಾ| ಬರ್ಗರ್.

ಜಲಶುದ್ಧಿಯ ಭವಿಷ್ಯ, ಜಲಸಮಸ್ಯೆಯ ಅರ್ಥ ವ್ಯವಸ್ಥೆಯನ್ನೂ, ಅವಶ್ಯವಾದ ವೈಜ್ಞಾನಿಕ ಪ್ರಗತಿಯನ್ನೂ ಅವಲಂಬಿಸಿದೆ ಎಂದು ಡಾ| ಬರ್ಗರ್ ನಂಬಿದ್ದಾರೆ.

ವಿದ್ಯುತ್ ಸಮೃದ್ಧವಾಗಿರುವ ಹಾಗೂ ನೀರು ಯಥೇಚ್ಛವಾಗಿ ಲಭ್ಯವಿಲ್ಲದಿರುವ ಹಾಗೂ ಈಗ ಉಪಯೋಗದಲ್ಲಿರುವ ಪದರಗಳನ್ನು ತಾಳುವಂತಹ ಕಶ್ಮಲಗಳು ನೀರಿನಲ್ಲಿ ಇಲ್ಲದಿರುವ ಪರಿಸ್ಥಿತಿಗಳಲ್ಲಿ ಬಳಸಿದ ನೀರನ್ನು ಪುನರ್‌ಬಳಕೆಗೆ ಸಿದ್ಧಪಡಿಸುವ ವಿಧಾನವಾಗಿ ನಗರಗಳಲ್ಲೂ ಕೈಗಾರಿಕೆಯ ಕ್ಷೇತ್ರಗಳಲ್ಲೂ ಎಲೆಕ್ಟ್ರೋಡಯಾಲಿಸಿಸ್ ಶೀಘ್ರಗತಿಯಿಂದ ಬಳಕೆಗೆ ಬರಬಹುದು ಎಂದೂ ಡಾ. ಬರ್ಗರ್ ಹೇಳಿದರು.

ಪ್ರತಿದಿನ ಕುಡಿಯಲು ಬೇಕಾದ ೬೦೦,೦೦೦ ಗ್ಯಾಲನ್ನುಗಳ ನೀರಿಗಾಗಿ ಅರಿಜೋನಾದ ಬಕ್‌ಐಯ ಪೌರರು ಎಲೆಕ್ಟ್ರೋಡಯಾಲಿಸಿಸ್ ಅನ್ನು ಅವಲಂಬಿಸಿದ್ದಾರೆ.

ಗಗನದ ಸುದೀರ್ಘ ಯಾತ್ರೆಯಲ್ಲಿ, ಚಾಲಕಪಡೆಯ ಸಂಖ್ಯೆ ಹೆಚ್ಚುವುದರಿಂದ ನೀರಿನ ಸಮಸ್ಯೆಯ ಪರಿಹಾರಕ್ಕೆ ಎಲೆಕ್ಟ್ರೋಡಯಾಲಿಸಿಸ್ಸೇ ಉತ್ತರವಾಗಬಹುದು. ಇದಕ್ಕೆ ಈ ಯೂನಿಟ್ಟು ಹಗುರವೂ ಅಧಿಕ ಉತ್ಪಾದನೆಯದು ಆದುದೂ ಒಂದು ಕಾರಣ.

ಕಾರಿನಲ್ಲಿ ಕುಳಿತೇ ಬ್ಯಾಂಕಿನ ಕೆಲಸ!

ಬ್ಯಾಂಕಿನಲ್ಲಿ ಲೆಖ್ಖವಿಟ್ಟಿರುವವರು ಕಾರಿನಲ್ಲಿ ಬಂದರೆ, ಬ್ಯಾಂಕಿನ ಬಳಿ ಕಾರಿನಿಂದ ಇಳಿಯದೆಯೇ ಹಣವನ್ನು ಕಟ್ಟಿಯೋ, ತೆಗೆದುಕೊಂಡೋ ಹೋಗವಂತಹ ಸಾಧನವೊಂದನ್ನು ಹಾಲೆಂಡ್ ತಯಾರಿಸಿದೆ. ಕಾರನ್ನು ಕಿಟಿಕಿಯ ಬಳಿ ನಿಲ್ಲಿಸಲಾಗಿದೆಯೆಂದಿಟ್ಟುಕೊಳ್ಳೋಣ. ಕಿಟಿಕಿಯ ಅಡಿಯಲ್ಲಿ ಬೇಗ ಹಾಕುವಂತಹ ಡ್ರಾಯರ್ ಒಂದಿರುತ್ತದೆ. ಅದನ್ನು ಒಳಗಿನಿಂದ ಕಾರಿನವರೆಗೂ ಅದಕ್ಕಿರುವ ಹಿಡಿಯ ಸಹಾಯದಿಂದ ತಳ್ಳಬಹುದು. ಅಕೌಂಟ್ ಇಟ್ಟಿರುವವರು ಅದರಲ್ಲಿ ಚೆಕ್ಕನ್ನೋ, ಹಣವನ್ನೋ ಹಾಕಿ ಬೇಗ ಹಾಕುವರು. ಒಂದು ಬೇಗದಕ್ಕೆ ಮಾಲೀಕನ ಬಳಿ, ಮತ್ತೊಂದು ಬ್ಯಾಂಕಿನಲ್ಲಿ ಇರುವುದು. ಎರಡೇ ಕ್ಷಣ, ಮಾಲೀಕ ಕಾರಿನಲ್ಲಿ ಕುಳಿತಿದ್ದಂತೆಯೇ ಕೆಲಸ ಮುಗಿದು ಹೋಗುವುದು. ಕಾರಿನಲ್ಲಿ ಬಂದವರು ಬ್ಯಾಂಕಿನೊಂದಿಗೆ ಏನಾದರೂ ಮಾತಾಡಬೇಕಿದ್ದಲ್ಲಿ, ಅದಕ್ಕೆಂದು ಟೆಲಿಫೋನ್ ವ್ಯವಸ್ಥೆಯನ್ನು ಮಾಡಲಾಗಿದೆ.

ನಿಮ್ಮ ಆತ್ಮವನ್ನು ನೋಡಿಕೊಳ್ಳಿರಿ

(ಏಳನೇ ಪುಟದಿಂದ)

ತಳಹದಿಯಾಗಿರುವ ಸತ್ಯ, ಧರ್ಮ, ಮತ್ತು ರಾಷ್ಟ್ರೀಯ ಜಾಗೃತಿಯ ಕೊರತೆ ಇರುವುದರಿಂದ, ಹೊಸ ವೈದ್ಯನಂತೆ ಸಿಕ್ಕಿದ ಅನಾಚಾರಗಳನ್ನು ಮಾಡುತ್ತಲಿರುವುದು ಈಗ ಜನತೆಗೆ ಅರ್ಥವಾದೀತು. ಈ ಹೊಸ ಮಾದರಿ ವಿಚಾರಗಳನ್ನು ದೂರಕ್ಕೆ ತಳ್ಳಿ, ಪುರಾತನ ಸನಾತನ ಪರಂಪರೆಯನ್ನು ಬೋಧಿಸುತ್ತಿರುವ ವ್ಯವಸ್ಥೆಯೆಡೆಗೆ ಜನಾಂಗ ನಿರ್ದಾಕ್ಷಿಣ್ಯತೆಯಿಂದ ಮುನ್ನುಗ್ಗದೆ ನಿರ್ವಾಹವಿಲ್ಲ. ಭೇಜವಾಬ್ದಾರೀ ಜನರ ಆಡಳಿತ, ಹೃದಯ ಶೂನ್ಯರನ್ನಾಗಿ ಮಾಡಿ ಎಲ್ಲರ ಗೋಣನ್ನು ಪರರಾಷ್ಟ್ರಗಳಿಗೆ ಮಾರಲು ಕಾರಣರಾಗಿರುವುದು ನಮ್ಮೆಲ್ಲರ ಕರ್ತವ್ಯ ಹೀನತೆ ಹೊರಹೊಮ್ಮುತ್ತಲಿದೆ.

ಪರಿಹಾರ ಕ್ರಮ

ಈ ಎಲ್ಲಾ ರೀತಿಯ ಕ್ರಾಂತಿಕಾರಿ ಸಮಸ್ಯೆಗಳ ಪರಿಹಾರಕ್ಕೆ ವಿದ್ಯಾರ್ಥಿ ಜೀವನದಲ್ಲೇ ರಾಷ್ಟ್ರ ಪ್ರೇಮ ಮತ್ತು ಧಾರ್ಮಿಕ ಜಾಗೃತಿಯ ಶಿಕ್ಷಣವು ಕೊಡುವಂತಾಗಬೇಕು. ಇದು ಅಸಾಧ್ಯವಾದಲ್ಲಿ ಮತ್ಸರ ದ್ವೇಷಗಳ ಪರಿಣಾಮದಿಂದ ವ್ಯಕ್ತಿಯು ಭಕ್ಷಣಕ್ಕೆ ಮುಂದುವರಿವುದು ನಿಶ್ಚಿತ. ಭಾರತ ಮಾತೆಯ ಸುಪುತ್ರರಾದ ನಾವು ಪ್ರತಿಯೋರ್ವರ ಹೃದಯದಲ್ಲಿ ರಾಷ್ಟ್ರೀಯ ಜಾಗೃತಿಯ ಬೆಳಕನ್ನು ಚೆಲ್ಲಲು ಮುಂದಾಗುವುದು "ದೇಶ ಸೇವೆಯೇ ಈಶ ಸೇವೆ" ಎನಿಸುವುದು, ನಮ್ಮ ಜನ್ಮ ಭಾರತ ಮಾತೆಯ ಪವಿತ್ರ ಚರಣಗಳ ಸೇವೆಗೇ ಮೀಸಲಾಗಿದೆ ಎಂದು ಕೃತಿಯ ಮೂಲಕ ಸಾಧಿಸಿ ತೋರಿಸುವಂತಾಗಲಿ.

"ಮಾತೆಯ ವೀರವಾಣಿ"

ಹೋಗಿ ಬಾರೆ ಕಂದ
ವೀರ ನಡೆಯು ಚಂದ
ಇಂದು ಆದೆ ವೀರಮಾತೆ
ಬೇಗ ಹೋಗು ಕಂದ

ಕೋವಿ ಹಿಡಿದು ನಡೆದು
ಪಾತಕರನು ತಾ ಬಡೆದು
ಮಾತೆ ಮಮತೆಯ ಮರೆತು
ನಾಡಿಗಾಗಿ ದುಡಿದು

ಇಂದು ಗೈ ದೀಕ್ಷೆ
ಮಾತೆ ಮಮತೆ ರಕ್ಷೆ
"ನಾಡ ಸೇವೆ ದೈವ ಸೇವೆ"
ಸ್ವಾಸಿಯರಿಗೆ ಶಿಕ್ಷೆ

ನಿನ್ನ ಜಯಕ್ಕೆ ನಾನು
ಬೇಡ್ವೆ ದೈವವನ್ನು
ಭೀತಿಯನ್ನು ಬಿಸುಟು ಹಾಕಿ
ಜಯಿಸಿ ಬಾರೊ ನೀನು

ಗೆಳೆಯರೊಡನೆ ಕೂಡಿ
ಭಾರತಿಯನೂ ಬೇಡಿ
"ವೈರಿ ಶಿರವ ತರಿದು ಹಾಕಿ"
ವೀರವಾಣಿ ಪಾಡಿ
ಹೋಗಿ ಬಾರೊ ಕುವರ
ಜಯಿಸಿ ತಾರೊ ಸಮರ

—"ಕೃಷ್ಣ" ಕ್ಯಾತ್ಸಂದ್ರ

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು

ನವಯುಗ ಪ್ರೆಸ್, ಉಡುಪಿ.

ಗೀತಾ - ದ್ವಿತೀಯ ಅಧ್ಯಾಯ

(ಐದನೇ ಪುಟದಿಂದ)

ಶ್ರೀ ಭಗವಾನುವಾಚ: —

ಪ್ರಜಹಾತಿ ಯದಾ ಕಾಮಾನ್।
ಸರ್ವಾನ್ ಪಾರ್ಥ ಮನೋಗತಾನ್।
ಆತ್ಮನ್ಯೇವಾತ್ಮನಾ ತುಷ್ಟ:।
ಸ್ಥಿತಪ್ರಜ್ಞಸ್ತದೋಚ್ಯತೇ॥೫೫॥

ಓ ಪಾರ್ಥಾ, ಒಬ್ಬನು ತನ್ನ ಮನದ ಎಲ್ಲಾ ಬಯಕೆಗಳನ್ನು ತ್ಯಜಿಸಿ, ಆತ್ಮನಲ್ಲಿಯೇ ತೃಪ್ತನಾದಾಗ, ಅವನು ಸ್ಥಿತಪ್ರಜ್ಞನು ಎಂದೆನಿಸಿಕೊಳ್ಳುವನು. ಶ್ರೀ ಕೃಷ್ಣನು ಜ್ಞಾನಿಯು ಹೇಗೆ ಪ್ರಪಂಚದಲ್ಲಿ ವ್ಯವಹರಿಸುವ ರೀತಿ ಅವನ ದೈಹಿಕ, ಮಾನಸಿಕ, ಬೌದ್ಧಿಕ ವಿಚಾರಗಳ ವಿವರಣೆಗಳನ್ನು ಬಹು ಚೆನ್ನಾಗಿ ಈ ಹದಿನೆಂಟು ಶ್ಲೋಕಗಳಲ್ಲಿ ಕೊಟ್ಟಿರುವನು. ವಿಶ್ವದ ಇತರ ಯಾವ ಧಾರ್ಮಿಕ ಗ್ರಂಥಗಳಲ್ಲೂ ಜ್ಞಾನಿಯ ವರ್ಣನೆ ಇಷ್ಟು ಉತ್ತಮವಾಗಿ ಬರೆದಿಲ್ಲ.

ಯಾರು ತನ್ನ ಮನಸ್ಸಿನಲ್ಲಿ ಒಂದೇ ಒಂದು ಬಯಕೆಗಳನ್ನು ಇರಿಸದೆ, ಆಲೋಚಿಸಿ ನಿಜಾರ, ಬಯಕೆಗಳು ಬದ್ಧಿಗೆ ಹೊಳೆದ ತಕ್ಷಣ ಅದನ್ನು ಅಲ್ಲಿಯೇ ಬಿಟ್ಟು ಬಿಡುವನೋ ಮತ್ತು ಆ ಬಯಕೆಗಳ ತೃಪ್ತಿಗೆ ಇಷ್ಟಪಡದೆ ಇರುವನೋ ಅವನು ಜ್ಞಾನಿ. ಹಾಗೆ ಅವನು ಆ ಆಶಾಪೂರ್ತಿಗೆ ಪ್ರಯತ್ನಿಸಲಾರನು. ಏಕೆಂದರೆ ಅವನು ಹೃದಯದಲ್ಲಿ ಆ ಕ್ಷಣಿಕ ಆಶಾಪೂರ್ತಿಗಳಿಂದ, ಈ ಲೌಕಿಕ ವಿಷಯಗಳ ಆಶಾಪೂರ್ತಿಯಿಂದ ದೊರಕುವ ಸುಖಕ್ಕಿಂತ ಅತೀ ಹಿರಿದಾದ ಆತ್ಮಸುಖವನ್ನು ಅನಂತ ಶಾಂತಿಯನ್ನು ಅನುಭವಿಸುವುದೇ ಕಾರಣವಾಗಿದೆ. ಇದರಿಂದಾಗಿ ಈ ಕ್ಷಣಿಕ ಸುಖದ ಕಡೆ ಅವನ ಮನಸ್ಸು ಓಡುವುದೇ ಇಲ್ಲ. ಅವನು ಅವನಲ್ಲಿಯೇ ತೃಪ್ತನಾಗಿ ಇರುವನು.

ದು:ಖೇಷ್ವನುದ್ವಿಗ್ನಮನಾ:।
ಸುಖೇಷು ವಿಗತಸ್ಪೃಹ:॥
ವೀತರಾಗ ಭಯ ಕ್ರೋಧ:।
ಸ್ಥಿತಧೀರ್ಮುನಿರುಚ್ಯತೇ ॥೫೬॥

ದು:ಖದಿಂದ ಉದ್ವಿಗ್ನನಾಗದೆ, ಎಂದರೆ ದು:ಖದಿಂದ ಒಂದಿಷ್ಟೂ ಅಲ್ಲಾಡದೆ ಎಂತಹ ಕಠಿಣ ವೇದನೆ, ದು:ಖವು ಬಂದರೂ ಒಂದಿಷ್ಟು ಕದಲದೆ ನಿಶ್ಚಲನಾದ ಮನೋಸ್ಥಿತಿಯನ್ನು ಪಡೆದಿರುವನು. ಹಾಗೆ ಸುಖದಲ್ಲಿ ಹೆಚ್ಚಿನ ಮೋಹದಿಂದ ಆಸಕ್ತಿ ಹೊಂದದೆ, ತನಗೆ ಅತೀ ಸುಖವನ್ನು ಒಂದು ವಸ್ತು ಕೊಡುತ್ತದೆಂದು ಅದರ ಮೇಲೆ ಅತಿಶಯ ಮೋಹವನ್ನು ತೋರದೆ ಒಂದು ವಸ್ತು ಸುಖ ಕೊಟ್ಟರೂ ಅದರಲ್ಲಿ ಹೆಚ್ಚಿನ ಆಸಕ್ತಿ ಹೊಂದದೆ ಇರುವನು. ದು:ಖವು ದೇಹದ ಮಟ್ಟದಿಂದ ಅನುಭವಿಸುವಂತಹದು. ಸುಖವು ಮಾನಸಿಕ ಮಟ್ಟದಿಂದ ಅನುಭವಿಸುವಂತಹುದು. ಹಾಗೆ ಬುದ್ಧಿಮೂಲಕ, ಒಂದು ವಸ್ತುವಿನಲ್ಲಿ ಅಪೇಕ್ಷೆ ಇಟ್ಟು ಅದರ ವಿನಾಶದಿಂದ ಭಯ ಉಂಟಾದಾಗ ಕ್ರೋಧ ಉಂಟಾಗುವುದು ಸಹಜ. ಇದು ಸಾಮಾನ್ಯ ಎಲ್ಲರ ಅನುಭವದಲ್ಲಿ ಇದು ಇದೆ. ಒಂದು ವಸ್ತುವಿನ ಮೇಲಿನ ಅತಿಶಯ ಆಸೆ, ಆ ಆಸೆಗೆ ವಿರುದ್ಧವಾಗಿ ವಿನಾಶದಿಂದ ಅಡಚಣೆ ಬಂದರೆ, ಆ ಆಸೆ ಪೂರೈಸಲಾಗದು ಎಂಬ ಭಯ ಬಂದು ಮನವನ್ನು ಆವರಿಸಲು ತಕ್ಷಣ ಅದು ಕ್ರೋಧವಾಗಿ ಬಾಹ್ಯ ಕರ್ಮದಲ್ಲಿ ಪರ್ಯವಸಾನವಾಗುವುದು. ಹೀಗೆ ನಿನ್ನ ಸುಖವು ಒಂದು ವಸ್ತುವಿನಲ್ಲಿ ಇದೆ ಎಂಬ ಈ ವಿಚಾರವು ಮೊದಲು ಮೂಡುವುದು. ಹೀಗೆ ಬುದ್ಧಿಯ ಮಟ್ಟದಿಂದಲೂ ಅವನು ಕದಲದೆ ನಿಶ್ಚಲನಾಗಿ, ದು:ಖ ಸುಖಗಳಲ್ಲಿ ಒಂದು ವಸ್ತು ದೊರಕದೆ ಇದ್ದರೆ, ಇಚ್ಛೆಗೆ ವಿರೋಧವಾದರೆ ಸಿಟ್ಟುಗೊಳ್ಳದೆ ಎಲ್ಲಾ ಕಾಲದಲ್ಲೂ ಎಲ್ಲಾ ಸನ್ನಿವೇಶಗಳಲ್ಲೂ ಸ್ಥಿರವಾದ ಮನದಿಂದ ಇರುವವನು ಅವನು ಜ್ಞಾನಿ.

ಯ: ಸರ್ವತ್ರಾನಭಿಸ್ನೇಹ:।
ತತ್ತತ್ಪ್ರಾಪ್ಯ ಶುಭಾಶುಭಮ್।
ನಾಭಿನಂದತಿ ನ ದ್ವೇಷ್ಟಿ।
ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥೫೭॥

ಹೀಗೆ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಎಲ್ಲೆಗಳನ್ನು ದಾಟಿದವನಿಗೆ, ಈ ಮಟ್ಟಗಳಿಂದ ಬಾಹ್ಯ ಪ್ರಪಂಚದಲ್ಲಿ ಎಲ್ಲಿಯೂ ಆಸಕ್ತಿ ಉಂಟಾಗದು. ಹಾಗಾದರೆ ಈ ಮೂರು ಮಟ್ಟಗಳಲ್ಲೂ ಹಿತ ಅಹಿತ ಎಂಬ ಎರಡು ಗುಣಗಳಿಂದ ಆತ ಕಂಗೆಡಲಾರನು. ಆದುದರಿಂದ ಎಲ್ಲರಲ್ಲೂ ಎಂದರೆ ಶುಭ ಮತ್ತು ಅಶುಭ ಎರಡು ತರಹದ ಸಮಸ್ಯೆಗಳನ್ನು ಕೂಡಾ ಆತ ಒಂದಿನಿತು ಕದಲದೆ ಸ್ಥಿರವಾಗಿಯೇ ಅವಲೋಕಿಸಿ ಇದಿರಿಸುವನು. ಅವನಿಗೆ ಹಿತವಾದುದು ಮಾತ್ರವೇ ಸುಖವೆಂದೂ, ಅಹಿತವಾದುದು ದು:ಖವೆಂದೂ ಇಲ್ಲ. ಅದರಿಂದಾಗಿ ಅವನು ಎರಡು ಪರಿಸ್ಥಿತಿಯನ್ನು ಸ್ಥಿರ ಬುದ್ಧಿಯಿಂದ ಬಾಳುವನು. ಹೀಗೆ ಬಾಳಲು ಈ ಮೂರು ಮಟ್ಟಗಳಿಂದ ದಾಟಿದ ಜ್ಞಾನದ ವಿಷಯ ಅವನಿಗೆ ಸರಿಯಾಗಿ ತಿಳಿದಿರಬೇಕು. ಆ ಜ್ಞಾನದಲ್ಲಿ ಅವನು ಚೆನ್ನಾಗಿ ನೆಲೆಸಿರಬೇಕು.

ಶ್ರೀ ಕೃಷ್ಣನು ಸ್ಥಿತಪ್ರಜ್ಞನ ಒಂದು ರಮ್ಯ ಚಿತ್ರವನ್ನು ಇಲ್ಲಿ ಶಬ್ದಗಳ ಮುಖಾಂತರ ಚಿತ್ರಿಸಿರುವನು. ಇದು ಬಹಳ ಗಹನ ರೀತಿಯ ಕಠಿಣ ಕಾರ್ಯವಾಗಿರುವುದು. ಒಂದು ಚಿತ್ರವನ್ನು ಬಿಡಿಸಲು ಕೇವಲ ಬಣ್ಣವೂ ಪರದೆಯೂ ಇದ್ದರೆ ಸಾಲದು. ಚಿತ್ರಕಾರನಿಗೆ ಬಿಡಿಸಲು ಗೊತ್ತಿದ್ದರೆ, ಸಾಲದು; ಅದನ್ನು ನೋಡುವವರಿಗೆ ಚಿತ್ರಕಲಾ ಕುಶಲತೆಯ ಅರಿವು ಆಗಬೇಕು. ಅದು ಕೀಳು ಕೆಳಮಟ್ಟದ ವರ್ಗದ ಜನರನ್ನು ಆಕರ್ಷಿಸುವಂತಹದಿರಬೇಕಾದರೆ ಚಿತ್ರಕಾರನ ಕಲಾ ಪರಿಣತಿಯ ಉತ್ಕೃಷ್ಟತೆ ಎಷ್ಟಿರಬೇಕು? ಹೀಗೆ ಶ್ರೀ ಕೃಷ್ಣನು ಸ್ಥಿತಪ್ರಜ್ಞನ ಚಿತ್ರವು ಸಾಮಾನ್ಯರೂ ಗ್ರಹಿಸುವಂತಹ ತಿಳಿ ಮಾರ್ಗದಲ್ಲಿ ಬರೆದುದಾಗಿದೆ.

ಎರಡನೆಯದಾಗಿ ಬರೆದ ರೀತಿ, ಕೇವಲ ಅಕ್ಷರಗಳಲ್ಲಿ ಬರೆಯಬೇಕಾಗಿದೆ. ಅಕ್ಷರಗಳಲ್ಲಿ ಎಂದರೆ ಮಾತಿನಲ್ಲಿ ಬರೆಯುವಾಗ, ನೋಡುವವರ ಹೃದಯದ ಮೇಲೆ ಮನದ ಮೇಲೆ ಚಿತ್ರ ಕೊರೆಯುವಂತಾಗಬೇಕು. ಹಾಗೆ ಕೊರೆಯುವಾಗ, ಮನವು ಯೋಚನಾ ಪ್ರವಾಹವಾಗಿರುವಾಗ, ಆ ಚಿತ್ರ ಕೊರೆಯುವ ವಿಧಿ ಎಷ್ಟು ಕಷ್ಟವಾದೀತು. ಒಂದು ಯೋಚನೆ ಹರಿದು ಇನ್ನೊಂದು ಯೋಚನೆ ಬರುವ ಮುನ್ನವೇ ಸಂಪೂರ್ಣ ಚಿತ್ರವು ತಕ್ಷಣ ಹೃದಯದಲ್ಲಿ ಅಚ್ಚೊತ್ತಿದಂತೆ, ಓದುಗರ ಮನದಲ್ಲಿ ನಾಟಬೇಕು. ಹಾಗೆ ನೋಡಲು ಶ್ರೀ ಕೃಷ್ಣನು ಕೆಲವೇ ಬಣ್ಣಗಳಲ್ಲಿ ಅದ್ದಿದ್ದ ಕುಂಚದಿಂದ, ಅತೀ ಕಡಿಮೆ ಗೆರೆಗಳಿಂದ, ಚಿತ್ರ ಬಿಡಿಸಿರುವನು ಎನ್ನಬಹುದು.

ಶ್ರೀಕೃಷ್ಣನು ಸ್ಥಿತಪ್ರಜ್ಞನ ವಿಷಯ ವಾಗಿ ವಿವರಣೆ ಇತ್ತಾಗ, ಅರ್ಜುನನಿಗೆ ಆ ವಿವರಣೆ ಕೇಳಿ ಆಶ್ಚರ್ಯವಾಯಿತು. ಅಂತಹ ಜ್ಞಾನಿಯು ಹೇಗೆ ಮನವನ್ನು ನಿಗ್ರಹಿಸಿ ಆತ್ಮಸುಖವನ್ನು ಪಡೆಯುತ್ತಾ ಕೆಲಸ ಮಾಡುವನೆಂಬ ಯೋಚನೆ ಬಂತು. ಆ ಪ್ರಶ್ನಾ ಭಾವನೆಯು ಅರ್ಜುನನಲ್ಲಿದ್ದುದನ್ನು ನೋಡಿ ಶ್ರೀ ಕೃಷ್ಣನು ತಕ್ಷಣ ವಿವರಣೆಯನ್ನು ಕೊಂಚ ವಿಶದವಾಗಿ ಮಾಡಿದನು.

ಯದಾ ಸಂಹರತೇ ಚಾಯಂ।
ಕೂರ್ಮೋಽಙ್ಗಾನೀವ ಸರ್ವಶ:।
ಇಂದ್ರಿಯಾಣೀಂದ್ರಿಯಾರ್ಥೇಭ್ಯ।
ಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥೫೮॥

ಆಮೆಯು ಅಪಾಯಸೂಚಕ ಸಂಜ್ಞೆಯಾದೊಡನೆ, ತನ್ನ ಅಂಗಗಳನ್ನು ಚಿಪ್ಪಿನಡಿಯಲ್ಲಿ ಸೆಳೆದುಕೊಳ್ಳುವಂತೆ, ಜ್ಞಾನಿಯು ಇಂದ್ರಿಯಗಳನ್ನು ವಿಷಯಾದಿ ವಸ್ತುಗಳ ಆಸಕ್ತಿಯಿಂದ ಸೆಳೆದುಕೊಳ್ಳಲು ಶಕ್ತನು. ಹಾಗೆ ಸೆಳೆದುಕೊಂಡು ತನ್ನ ಆತ್ಮದಲ್ಲಿಯೇ ತೃಪ್ತನಾಗಿ ಇರುವನು. ಅಂತಹವನು ಜ್ಞಾನಿ, ಅಥವಾ ಸ್ಥಿತಪ್ರಜ್ಞನೆಂದೆನ್ನಿಸಿಕೊಳ್ಳುವನು. ಅವನು ಇಂದ್ರಿಯಗಳ ಮುಖಾಂತರ ವ್ಯವಹರಿಸುವುದು ಬಿಡುವುದಿಲ್ಲ. ಆದರೆ ಆ ಇಂದ್ರಿಯಗಳ ಮೂಲಕ ವ್ಯವಹಾರ ನಡೆಸುತ್ತಿರುವಾಗ ಎಲ್ಲಿ ಆ ಇಂದ್ರಿಯಗಳು ಮನಸ್ಸು ವಿಷಯಾದಿಗಳ ಆಸಕ್ತಿಯಲ್ಲಿ ಬಂಧಿಸಲ್ಪಡುವುದೋ ಎಂಬ ಅಪಾಯವನ್ನು ಆತ ತಿಳಿದುಕೊಂಡೊಡನೆ ತಕ್ಷಣ ಆ ಆಸಕ್ತಿಯಿಂದ ತನ್ನ ಇಂದ್ರಿಯವನ್ನು ಸೆಳೆದು, ಹತೋಟಿಯಲ್ಲಿರಿಸಿಕೊಳ್ಳಲು ಶಕ್ತನಾಗುವನು. ಆಗ ಅವನು ಸ್ಥಿತಪ್ರಜ್ಞನೆನಿಸಿಕೊಳ್ಳುವನು. ಜ್ಞಾನಿಯಾದೊಡನೆ ಅವನು ಕೇವಲ ಇಡೀ ಜೀವನವನ್ನು ಗುಹೆಯಲ್ಲಿ ಕುಳಿತು ಕಳೆಯಬೇಕೆಂದಿಲ್ಲ. ಜನರೊಡನೆ, ಜನರ ಮಧ್ಯೆ ವ್ಯವಹರಿಸಬಹುದು. ಆದರೆ ಆತನಿಗೆ ತನ್ನ ಇಂದ್ರಿಯಗಳ ಮೇಲೆ ಬಹಳ ಹತೋಟಿ ಇದೆ. ತಾನು ಹೆಚ್ಚಿನ ಬಂಧನಕ್ಕೆ ಬಲಿ ಬೀಳುವೆನೆಂದು ಗೊತ್ತಾದೊಡನೆ, ಆ ಬಂಧನವನ್ನು ಕಡಿಕೊಳ್ಳಲು ಅವನು ಸಮರ್ಥನಿರುವನು.

— ಸಶೇಷ.

NAVAYUGA

Announcement

You are aware that the INDEPENDENCE SPECIAL of your favourite Weekly 'NAVAYUGA' has over the years earned a reputation for the sumptuous fare it offers to its extensive readership spread over nineteen districts of Mysore State.

The 'Special' will be issued as usual on August 15th this year to mark the 18th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social economic religious and educational.

August 15th is an auspicious day and the 'Navayuga Independence Special' a fitting medium to convey the message of your goods to hundreds of homes in the State. Kindly send in your advertisement material on or before August 5th, 1965.

ADVT. MANAGER.
NAVAYUGA, UDIPI S. K.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466, N/50 dated 2-12-1950 of the Director of Public Instruction Madras

ದಾಕ್ಷಿಣಾತ್ಯರು ಬಾಯಿಬಡಕರೆ?

(ನಾಲ್ಕನೇ ಪುಟದಿಂದ)

"ಯಾಕೆ? ಏನಾಯ್ತು?"

"ಹಾಕ್ಹೋ ಮತ್ತೊ ಏನಾಯ್ತು ಅಂತ್ಲೇ ಅನ್ತೀರಲ್ಲಾ...."

'ಮತ್ತೆ ನಿನ್ನ ಒಗಟನ್ನು ನಾನು ಹೇಗೆ ಅರ್ಥ ಮಾಡಿಕೊಳ್ಳಬೇಕೂಂತ....'

"ಓಹೋ, ಹಾಗೇನೆಯೇ? ಮತ್ತೀಗ ಅರ್ಥವಾಯ್ತೂಂತಂದ್ರಿಯಲ್ಲ...."

"ಅಂದದ್ದು ನಿಜ. ಮತ್ತೇನನ್ಬೇಕಿತ್ತು?"

"ಅಲ್ಲ, ಸಕ್ಕ ಹೇಳಿ,...."

'ಹೇಳಿದ್ನಲ್ಲಾ....'

'ನಿಜವಾಗ್ಲೂ...'

"ಏನವ್ವಾ ಅದು?"

"ಅಲ್ಲ, ಗೋವೆಯ ಭವಿಷ್ಯವನ್ನು ನಿರ್ಧರಿಸೋಕೆ ಅಲ್ಲಿ ಈಗ್ಲೇ ಚುನಾವಣೆ ಮಾಡ್ತಾರಂತಲ್ಲಾ?

'ಈಗ್ಲೇ ಎಲ್ಲಿ ಆಗುತ್ತೆ?'

"ಈಗ್ಲೇ ಅದ್ರೆ ಇವತ್ತೇ ಅಲ್ಲ, ಇನ್ನೊಂದಾರು ತಿಂಗಳಲ್ಲಿ...."

'ಮಾಡಿಕೊಳ್ಳಲಿ; ನಿಂಗೇನು? ನಂಗೇನು?'

"ಏನೂಂತಂದ್ರೆ, ಗೋವೆಯ ಮೇಲೆ ನಮಗೂ ಅಧಿಕಾರವಿದೇ ಅಂತ.."

'ಇಲ್ಲಿ, ಯಾರು ಬೇಡಾಂತಾರೆ?'

'ಅನ್ನೋದು ಯಾರು? ಜೇರಿಯವ್ರು ಅಲ್ವೆ? ಅದ್ರೆ ನಿಮ್ಮ ಟೋಪಿಯವ್ರು ನೆಹರು ಹೇಳಿದಂತೆ ಹತ್ತು ವರ್ಷಗಳ ತನಕ ಅದು ಯಾರಿಗೆ ಸೇರಬೇಕೂಂತ ಚರ್ಚೆ ನಡೆಸೋದಿಲ್ಲಾಂತಂದವ್ರು ಮತ್ತೆ ಈಗ...."

"ಏನು ಮಾಡೋದು? ಅನು ಆಗಿನ ಮಾತು."

'ಅಂದ್ರೆ ಆ ಮಾತಿಗೆ ಈಗ ಬೆಲೆಯೇ ಇಲ್ವೆ?'

'ಕಾಲಕ್ಕೆ ತಕ್ಕ ಕೋಲ ಕಟ್ಟಬೇಕು ಕಣೇ....'

"ಅಂದ ಮಾತ್ರಕ್ಕೆ ಆದ ನಿರ್ಧಾರವನ್ನು ಬದಲಾಯಿಸೋದೆ?"

"ನಿರ್ಧಾರ ಮಾಡಿದವ್ರು ಮಾನವರು; ಅದನ್ನು ಬದಲಾಯಿಸೋದೂ ಅವ್ರೆ...."

"ಮಾನವರೂಂತನ್ಬೇಡಿ. ನಿಮ್ಮ ಟೋಪಿಯವರೂನ್ನಿ...."

"ಯಾರೇ ಇರ್ಲಿ, ಅಲ್ಲ, ಅದೆಷ್ಟು ಅಂತಿಮವಾಗಿ ತೀರ್ಮಾನವಾಗಿದೆ?"

"ಆಗದಿದ್ರೆ ಏನಂತೆ? ಚವನರ ಆಟೋಪದ ಮುಂದೆ ಶಾಸ್ತ್ರಿಗಳು ತಲೆಬಾಗೋದು ಖಂಡಿತ."

"ಈಗ್ಲೆ ಯಾಕೆ ಹಾಗಂತಿ? ನಾವೇನೂ ಸುಮ್ನೆ ಕೂತಿದ್ದೇವೆಯೆ?"

"ಇಲ್ಲ; ಇಲ್ಲ, ರಾಜಿನಾಮೆ ನೀಡೋ ಬೆದರಿಕೆ ಹಾಕಿದ್ದೀರಿ.... ಅಲ್ಲಾ, ನಿಮ್ಮ ಹಾಗೇನೇ ಬೊಂಬಾಯಿಯಲ್ಲಿ ನಾಯಕರೂ ರಾಜಿನಾಮೆ ಕೊಡ್ತೇನೆ ಅಂದ್ರೆ, ಚವನರೂ ಹಾಗೇ ಅಂದ್ರೆ, ಪಾಪ ಶಾಸ್ತ್ರಿ, ಕಾಮರಾಜರು ಏನು ಮಾಡಬೇಕೂಂತೆ?"

'ಅವರೂ ಹಾಗೆ ಅಂದು ಬಿಡ್ಲಿ...'

'ಹೌದು, ಪಾಪ ಅವ್ರ ಕಷ್ಟ ನಿಮಗೇಲ್ಲಿ ಗೊತ್ತು? ನಿಮ್ಮ ಟೋಪಿಯೊಳ್ಗಿರೊದು ಸಣ್ಣಗಿನ ತಲೆ ಮಾತ್ರ"

'ಸದ್ಯ ಅಷ್ಟಾದ್ರೂ ಇದೆಯಲ್ಲಾ...'

'ಅಲ್ರಿ, ಯಾರವ್ರು, ನೋಡಿ ಸರಕಾರದ ದೃಢ ನಿಲುವನ್ನ ತಿಳಿಸೋಕೆ ದಿಲ್ಲಿಗೆ ಹಾರಿದವ್ರು?"

'ಅದು ಹೆಗಡೆಯವರು; ಅವರು ಹಿಂದೆ ಬಂದೂ ಆಯ್ತಲ್ಲ?"

'ಏನಂದ್ರಂತೆ ಶಾಸ್ತ್ರಿಯವರು?'

'ಅನ್ನೋದೇನು? ನಿಮ್ಮನ್ನ ವಿಚಾರ್ಸಲಿಲ್ಲಾಂತ ಕೋಪ ಅಲ್ವೇ ಅಂದ್ರು, ಹೌದೂಂತ ತಲೆಯಾಡಿಸಿದ್ರು ಇವ್ರು. ಬೇಸರ ಮಾಡಬೇಡಿ, ನಾಯಕರನ್ನೂ ಕೇಳ್ಲಿಲ್ಲ. ಬರೀ ಬಾಂದೋಡ್ಕರರನ್ನ ಮಾತ್ರ ಕೇಳಿರೋದು. ಮುಂದೆ ನಿಮ್ಮೂರಲ್ಲೇ ಕಾಂಗ್ರೆಸ್ ಸಭೆ ಸೇರಿದಾಗ ನೋಡೋಣ ಅಂದ್ರು..."

'ಇವ್ರು ಹೌದೂಂತ ಹಿಂದೆ ಬಂದ್ರು ಅಲ್ವೆ?'

'ಹೌದೂನ್ನು....'

"ಆದ್ರೂ ಒಂದು ಆಯ್ತೂನ್ನಿ...."

"ಏನು?"

'ನಿಮ್ಮ ಸರಕಾರವು ಗಂಡು ನಿಲುವು ತಳೆಯಿತಲ್ಲಾ?"

'ಸರಕಾರಾಂತೇನು, ಕನ್ನಡಿಗರೆಲ್ಲರೂ ಗೋವಾ ಮಧ್ಯಾವಧಿ ಚುನಾವಣೆಯನ್ನು ವಿರೋಧಿಸ್ತಾರೆ...'

'ಆದ್ರೂ ಒಂದ ನಿಜಾಗುತ್ತೆ...'

'ಏನದು?'

'ಗೋವೆ ಬಲ್ಲಿ ಇಂದಲ್ಲ, ನಾಳೆ ಚುನಾವಣೆ ನಡೆದೇ ನಡೆಯುತ್ತೆ. ಗೋವೆ ಮಹಾರಾಷ್ಟ್ರಕ್ಕೆ ಸೇರಿಯೇ ಸೇರುತ್ತೆ...."

'ಅನಿಷ್ಟದವ್ಳೇ ನೀನೊಬ್ಳು...."

'ಅಲ್ರಿ, ಪರಿಸ್ಥಿತಿ ಹಾಗೆ ಇದೆ..."

'ನಿನಗೆ ಹೇಗೆ ಗೊತ್ತು?"

'ಅಲ್ರಿ, ಅಲ್ಲಿ ಅಳುವ ಪಕ್ಷವೇ ಹಾಗಿದೆ. ಮತ್ತೆ ನೋಡಿ, ಮೈಸೂರು ಸರ್ಕಾರದ ಹಿಡಿಗೆ ಬಾರದಿರೋ ಬೆಳಗಾವಿ ಪ್ರದೇಶಗಳವ್ರ ಬೊಬ್ಬಾಟ ಕೇಳದ್ರೆ....'

"ಗೋಮಾಂತಕರು ಖಂಡಿತ ಕನ್ನಡ ಬೊಂಬಾಯಿಗೆ ಓಡಿ ಹೋಗ್ತಾರೆ ಅಂತೀಯ?"

'ಏನೋ, ನನಗಂತೂ ಹಾಗನಿಸುತ್ತೆ..'

'ಒಂದು ವೇಳೆ ಚುನಾವಣೆಗೆ ಅನುಮತಿ ದೊರೆತರೆ, ನಮ್ಮ ಸರಕಾರ ರಾಜಿನಾಮೆ ನೀಡುತ್ತೆ....'

"ಅದ್ಕೇ ನೋಡಿ, ನಾಯಕರು ಅಂದದ್ದು, ಕಾಂಗ್ರೆಸ್ ಹೈಕಮಾಂಡಿನ ಗೊತ್ತುವಳಿಯನ್ನು ನಿಜಲಿಂಗಪ್ಪನವರು ನಿಷ್ಠಾವಂತ ಕಾಂಗ್ರೆಸಿಗರಾದ್ದು ಒಪ್ಪದಿದ್ದುದು ಸಾಧುವಲ್ಲಾಂತ...."

"ತಮ್ಮ ಟೀಕೆ ಬೇಯಿಸೋಕೆ ಹಾಗಂದ್ರು, ಅಲ್ಲಾ, ಕೇಂದ್ರ ಸರಕಾರದ ಮುಖಕ್ಕೆ ಮಸಿ ಬಳಿದವ್ರು ಅವ್ರಲ್ವೆ? ಅಪಾರ್ಥ ವಿಚಾರದಲ್ಲಿ?'

"ಅದೂ ಹೌದೂನ್ನಿ. ಆದ್ರೆ, ನನಗೇನೋ ಭಯವಾಗುತ್ತೆ. ಗೋವೆಗೆ ವಿದ್ಯುತ್ತು ಪೂರೈಸೋದು ನಾವು. ಅದ್ರ ಗತಿ ಹೆಚ್ಚಿನಂತೆ ತಾಗಿರೋದು ನಮಗೆ. ಕೊಂಕಣಿಗರು ಹೆಚ್ಚಿರೋದು ನಮ್ಮ ನಡುವೆ...."

"ಎಲ್ಲಾ ಸರಿಯೇ. ಆದ್ರೆ ನೋಡು, ನಮ್ಮ ಧ್ವನಿಯನ್ನ ಕೇಳೋರು ಮಾತ್ರ ದಿಲ್ಲಿಯಲ್ಲಿಲ್ಲ....'

'ಅಂತಹ ಮಟ್ಟದಲ್ಲಿ ನೀವಿದ್ದೀರಿ... ......ಅಲ್ಲ, ಒಂದು ವೇಳೆ ನಮ್ಮ ಅಭಿಪ್ರಾಯವನ್ನು ಕೇಳಗಿದ್ರೆ ಕೇಳಿದರೆ?"

'ನಿಜಲಿಂಗಪ್ಪನವ್ರು ರಾಜಿನಾಮೆ ನೀಡ್ತಾರಂತೆ..."

'ಅಷ್ಟೇ ತಾನೆ? ಅದರಿಂದೇನೂ ತೊಂದ್ರೆಯಿಲ್ಲ..."

'ಯಾಕೆ?"

'ಅಂದು ಹಿಂದೀ ವಿರೋಧೀ ಚಳವಳದ ವೇಳೆ ಸುಬ್ರಮಣ್ಯಂ ಕೊಡಲಿಲ್ಲವೆ? ಮತ್ತೆ ತುಸು ಪುಸಲಾಯಿಸಿದ್ರೆ ಸಾಕು... ಎಲ್ಲಾ ನೋಡಿ, ಚುನಾವಣೆಯ ಸ್ಟಂಟು ...."

'ಹೌದು ಇದ್ದರೂ ಇರಬಹುದು...."

'ಇರಬಹುದು ಏನು? ಅದೇ..."

'ಅಲ್ಲ, ಈಗಲೇನೂ ಕೊನೆಯ ಹಂತಕ್ಕೆ ಬಂದಿರೋದಿಲ್ಲ, ಹಾಗಿರುವಾಗ ನೀನು...'

'ಇರ್ಲಿ, ಗೋವೆ ಮಹಾರಾಷ್ಟ್ರಕ್ಕೆ ಸೇರ್ಲಿ, ಮೈಸೂರಿಗೇ ಬರ್ಲಿ, ಸದ್ಯ ಮತ್ತೆ ಪೋರ್ಚುಗೀಸರಿಗೆ ಹಿಂದೆ ಹೋಗದಿದ್ರೆ ಸಾಕು...ಅಂತೂ ಇತ್ತೀಚಿನ ವಾತಾವರಣದಲ್ಲಿ ಒಂದು ನಿಜವಾಯ್ತು, ದಕ್ಷಿಣ ಪ್ರದೇಶದವ್ರು ಬಾಯಿ ಬಡಕರೂಂತ"

'ಅದೇನೇ ಇರ್ಲಿ, ಗೋವೆ ಪೋರ್ಚುಗೀಸರ ಕೈಗೆ ಹೋಗುತ್ತೇಂತ ಹೆದ್ರಬೇಡ್ವೆ. ರಕ್ಷಣಾ ಮಂತ್ರಿ ಚವಾನರಿದ್ದಾರೆ ಗೋವೆಯ ಹಿಂದೆ....'

"ನಮ್ಮೊಬ್ಬ ಮಂತ್ರಿ ಇದ್ದವರೂ ಈ ಗೊಂದಲವೇ ಬೇಡಾಂತ ಯಮುನೂರಿಗೆ ಹೋಗಿ ಬಿಟ್ರು ನೋಡಿ...ಅಷ್ಟು ಜನ ಮಂತ್ರಿಗಳಿರುವಾಗ, ಕೇಂದ್ರ ಮಂತ್ರಿಯಾಗೋಕೆ ಲಾಯಕ್ಕಾದ ಒಬ್ಬನೇ ಒಬ್ಬ ಪುತ್ರನನ್ನ ಕನ್ನಡ ಮಾತೆ ಪಡೆದಿಲ್ಲ ನೋಡಿ....'

'ಆಕೆ ಪಡೆದಿಲ್ಲ, ನೀನಾದ್ರೂ ಪಡೆಯಮ್ಮ...."

"ಬೇಡ್ರಿ, ನನ್ನ ಮಗ ಮಂತ್ರಿಯಾಗೋದೂ ಬೇಡ, ಕುತಂತ್ರಿಯಾಗೋದೂ ಬೇಡ...'

'ಮತ್ತೆ?'

'ನೋಡೋಣ, ಇನ್ನು ಹುಟ್ಟಿ ಬರಬೇಕು ತಾನೆ? ಅಷ್ಟರಲ್ಲಿ ಏನೇನಾಗುತ್ತೋ ಯಾರಿಗೆ ಗೊತ್ತು?"

"ಇವತ್ತು ಏನಾಗುತ್ತೇಂತ ದಿಳಿಯದವ್ರಿಗೆ ನಾಳೆಯ ಕತೆ ಹೇಗೆ ಗೊತ್ತಾಗುತ್ತೆ?"

'ಈಗ ಆಗೋದಂತೂ ಗೊತ್ತು...'

ಏನ?'

"ಮತ್ತಿನ್ನೇನು? ರಾತ್ರಿ ಹನ್ನೊಂದೂವರೆ ಹೊಡೆಯಿತು...."

"ಓ, ಹೌದೂಂದ್ರೆ, ನೀವು ಬರೋವಾಗ್ಲೇ ಗಂಟೆ ಹತ್ತೂವರೆ.... ಆಯ್ತು. ನೋಡೋಣ. ಟೋಪಿಯವ್ರೇ ಟೋಪಿಯವ್ರಿಗೆ ಟೋಪಿಯಿಡೋ ನಾಟಕ ಹೇಗೆ ಅಭಿನಯಿಸಲ್ಪಡುತ್ತೇಂತ..."

'ಭಲಾ! ಯಾಶಸ್ವಿಯಾಗಿ...'

'ಏನೋಪ್ಪ, ಇರ್ಲಿ ಬಿಡಿ ಅದ್ರ ಪಾಡಿಗೆ. ಬನ್ನಿ ಬೇಗ... ಎಲ್ಲಾ ತಯಾರಾಗಿದೆ...'

"ನಾನೂ ತಯಾರೇ..."

"ಪಂಚ್ಳಾಗಿಲ್ರಿ ನೀವು...."

'ಖಂಡಿತಕ್ಕೂ....'

—ಗೋರಾ.

ಸೌಂದರ್ಯ ಸಾಧನೆಗಳ ಬಗ್ಗೆ ನಿಮಗೆಷ್ಟು ಗೊತ್ತಿದೆ?

(ಹನ್ನೊಂದನೇ ಪುಟದಿಂದ)

ವಿಕ ಸೌಂದರ್ಯ ಹಾಳಾಗಿ ಹೋಗುತ್ತದೆ.

ತುಟಿಗಳ ಸೌಂದರ್ಯವನ್ನು ಹೆಚ್ಚಿಸುವುದಕ್ಕಾಗಿ ಲಿಪ್‌ಸ್ಟಿಕ್ ಮುಂತಾದವುಗಳನ್ನು ಕೊಡೆದುಕೊಳ್ಳುತ್ತಾರೆ. ಇದೆಂಥ ಹಾನಿಕಾರಕ ಪದಾರ್ಥವೆನ್ನುವದನ್ನು ಯಾರೂ ತಿಳಿದಿಲ್ಲ. ಇದು ತುಟಿಗಳ ಸೌಂದರ್ಯವನ್ನು ಹಾಳುಮಾಡುವದಲ್ಲದೆ ಅನೇಕ ರೋಗಗಳಿಗೆ ಮೂಲವಾದರೂ ಆಗಬಹುದು ಎಂದು ವೈಜ್ಞಾನಿಕ ಸಂಶೋಧನೆಗಳಿಂದ ಕಂಡು ಬರುತ್ತದೆ. ವೈಜ್ಞಾನಿಕ ಸಂಶೋಧನೆಗಳ ಮೂಲಕ ನಮಗೆ ತಿಳಿಯುವದೇನಂದರೆ ಇಂದಿನ ಕಾಲದ ಸೌಂದರ್ಯ ವೃದ್ಧಿಯ ಸಾಧನೆಗಳೆಲ್ಲ ಸ್ವಾಭಾವಿಕ ಸೌಂದರ್ಯವನ್ನು ಹೆಚ್ಚಿಸುವಂಥವುಗಳಲ್ಲ. ಇದ್ದ ಸೌಂದರ್ಯವನ್ನೂ ಇದ್ದಂತೆ ಇಡುವವುಗಳಲ್ಲ - ದೇವದತ್ತ ಸೌಂದರ್ಯವನ್ನು ಕೆಡಿಸಲು ಅನುವು ಮಾಡಿ ಕೊಡುತ್ತವೆ ಎಂದು ಹಿರಿಯ ವೈಜ್ಞಾನಿಕರ ಹೇಳಿಕೆಯಾಗಿದೆ.

ಹಿಂದಿನ ಮತ್ತು ಇಂದಿನ ಸೌಂದರ್ಯ ಸಾಧನಗಳನ್ನು ಹೋಲಿಸಿ ನೋಡಿದಾಗ ಹಿಂದಿನ ಕಾಲದ ಸೌಂದರ್ಯ ವೃದ್ಧಿಸಾಧನಗಳೇ ಹೆಚ್ಚು ಒಳ್ಳೆಯವು ಎನ್ನಬಹುದು. ಅಂದಿನ ಸೌಂದರ್ಯ ಸಾಧನಗಳು ತಾತ್ಕಾಲಿಕ ಸೌಂದರ್ಯನೀಡಿದರೂ ಹಾನಿಕಾರಕವೆಂದು ಕಂಡು ಬರುತ್ತದೆ.

ಇಷ್ಟೆಲ್ಲ ಹೇಳಿದ ಮಾತ್ರಕ್ಕೆ ಇವನ್ಯಾರೋ ಇಂದಿನ ಸೌಂದರ್ಯ ಸಾಧನಗಳನ್ನು ದೂಷಿಸುವವನಿದ್ದಾನೆ. ವಿರೋಧಿ ಇದ್ದಾನೆ. ಎಂದು ಕೋಪಿಸಿಕೊಳ್ಳಬೇಡಿರಿ. ನಾನೂ ಕೂಡ....ಸ್ನೋ, ಉಪಯೋಗಿಸುತ್ತೇನೆ.

(ಸಂದರ್ಶನ)

— ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ.

O. P. $\frac{25}{1965}$

In the matter of delcts due to late Sri Kochikar Padmanabha Pai - deceased.

K. ಅಂಬಾಯೂನೆ ಅನಂದಿಬಾಯಿ-ಯಿವರ. ಜನರಲ್ ಯೇಜಂಟ್ ಸಿಂಡಿಕೇಟ್ ಬೇಂಕ್ ಲಿಮಿಟೆಡ್, ಮಣಿಪಾಲ— } ಅರ್ಜಿದಾರ

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನಂದ್ರೆ:—

ತಾರೀಕು 2-10-1960ರಲ್ಲಿ ಮೃತಪಟ್ಟ ಕೊಚ್ಚಿಕಾರ ಶ್ರೀ ಪದ್ಮನಾಭ ಪೈಯವರ ಬಾಬ್ತು ಅರ್ಜಿಯಲ್ಲಿ ಕಾಣ್ಸಿದ ಶಾರ್ಸುಗಳು ವಗೈರೆಗಳನ್ನು ಅರ್ಜಿದಾರರ ಹೆಸರಲ್ಲಿ ಟ್ರಾನ್ಸ್‌ಫರ್ ಮಾಡ್ಸಿ ಅದರ ಡಿವಿಡೆಂಡ್‌ಗಳನ್ನು ವಸೂಲು ಮಾಡುವರೆ ಅರ್ಜಿದಾರರ ಬಗ್ಗೆ ಅವರ ಜನರಲ್ ಯೇಜಂಟರ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 26-7-65ಕ್ಕೆ ಇಟ್ಟಿದೆ. ಆ ಕುರಿತು ಯೇನಾದರೂ ಆಕ್ಷೇಪಣೆಯಿದ್ದರೆ ಆ ದಿವ್ಸ ಹಗಲು 11 ಗಂಟೆಗೆ ಸರಿಯಾಗಿ ಈ ಕೋರ್ಟಿನ ಮುಂದೆ ಬಂದು ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

(By order of the Court)

Sd. M. Damodhara Kamath,
Advocate for Petitioner.

Udipi, Dated 10—7—65.

ಎಲ್ಲೆಲ್ಲಿ ಏನೇನು?

ಕಡಬ ಹೈಸ್ಕೂಲಿನ ಉದ್ಘಾಟನೆ.

ಕಳೆದ ತಾ. 10ರಂದು, ಪುತ್ತೂರು ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ವತಿಯಿಂದ ಹೊಸತಾಗಿ ತೆರೆಯಲ್ಪಟ್ಟ ಕಡಬ ಹೈಸ್ಕೂಲಿನ ಉದ್ಘಾಟನಾ ಸಮಾರಂಭವು, ಪಂಚಾಯತು ಆಫೀಸು ಕಟ್ಟಡದಲ್ಲಿ, ಶ್ರೀ ಕೆ. ವೆಂಕಟ್ರಮಣ ಗೌಡರಿಂದ, ಶ್ರೀ ಕೆ. ಸುಬ್ರಹ್ಮಣ್ಯ ಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು.

ಪ್ರಾರಂಭದಲ್ಲಿ ಪ್ರಾರ್ಥನೆಯಾದ ಬಳಿಕ, ಶ್ರೀ ವೆಂಕಟರಮಣ ಗೌಡರು ಜ್ಯೋತಿ ಹೊತ್ತಿಸಿ ಉದ್ಘಾಟಿಸಿದರು. ಹೈಸ್ಕೂಲ್ ಸಮಿತಿ ಅಧ್ಯಕ್ಷ ಶ್ರೀ ಬಿ. ಆರ್. ಗಂಗ ಚೈನಿಯವರು ಸ್ವಾಗತಿಸಿದರು. ಶ್ರೀ ಎ. ಕೃಷ್ಣಶೈಗಳು ವರದಿ ವಾಚನ ಮಾಡಿದರು. ಉದ್ಘಾಟನಾ ಭಾಷಣದ ಬಳಿಕ ಸಭಿಕರಲ್ಲಿ ಹಲವರು ಸೂಕ್ತ ಸಲಹೆಗಳೊಂದಿಗೆ ಶ್ರೇಯಸ್ಸನ್ನು ಕೋರಿ ಭಾಷಣವಿತ್ತರು.

(ಮೂರನೇ ಪುಟದಿಂದ)

ತಲೆದೋರಿದಾಗ, ವಿಶ್ವವಿದ್ಯಾಲಯವು ಅಧ್ಯಾಪಕರಾಗಿ ಮೂರು ವರ್ಷ ಸೇವೆ ಸಲ್ಲಿಸಿದವರಿಗೆ ಖಾಸಗಿಯಾಗಿ ಪರೀಕ್ಷೆ ಕೊಡುವ ಸೌಲಭ್ಯ ನೀಡಿತು. ಇವರ ಪ್ರಯೋಜನವನ್ನು ಅನೇಕರು ಪಡೆಯುತಿದ್ದಾರೆ, ಅಲ್ಲಿ. ಅದೇ ರೀತಿಯಲ್ಲಿ ನಮ್ಮ ರಾಜ್ಯದ ಮೂರೂ ವಿಶ್ವವಿದ್ಯಾಲಯದವರು ಅವಕಾಶ ಕಲ್ಪಿಸಿದರೆ, ಬಹುಮಟ್ಟಿಗೆ ಅಧ್ಯಾಪಕರ ಕೊರತೆಯನ್ನು ಹೋಗಲಾಡಿಸಬಹುದು. ಈ ಕಡೆಗೆ ರಾಜ್ಯ ಸರಕಾರವು ವಿಶ್ವವಿದ್ಯಾಲಯಗಳ ಗಮನವನ್ನು ಸೆಳೆಯಬೇಕು. ಖಾಸಗಿ ಶಿಕ್ಷಣದಿಂದ ಪದವಿಗಳ ಮೌಲ್ಯ ಇಳಿಯುವುದೆಂಬ ಭ್ರಾಂತಿಯನ್ನು ನಮ್ಮ ಮೂರೂ ವಿಶ್ವವಿದ್ಯಾಲಯಗಳು ತೊಡೆದು ಹಾಕಬೇಕು.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ.

O. P. No. 32/1965.

ಅರ್ಜಿದಾರರು:—

1) ಶಾರದಮ್ಮ. K. S. ಸೂರ್ಯನಾರಾಯಣ ಶಾಸ್ತ್ರಿಗಳ ವಿಧವೆ.
2) K. S. ನಾಗರತ್ನ.
3) K. S. ಬಾಲಸುಬ್ರಹ್ಮಣ್ಯ.
4) K. S. ಶ್ರೀಧರ ಕಮೂರ್.

1ನೇ ಅರ್ಜಿದಾರಳ ಮಕ್ಕಳು ನ್ಯೂನರೆರು, ಕ್ಷೇಮಚಿಂತಕಳು ತಾಯಿ 1ನೇ ಅರ್ಜಿದಾರಳು, ಉಡುಪಿ ತಾಲ್ಲೂಕು ಹಂದಾಡಿ ಗ್ರಾಮದಲ್ಲಿರುವವರು—

ಮತ್ತು

ಎದ್ರಿರು:—

1) K. S. ಸ್ವಾಮಿನಾಥನ್, K. S. ಸೂರ್ಯನಾರಾಯಣ ಶಾಸ್ತ್ರಿಗಳ ಮಗ.
2) ಪುಟ್ಟನಂಜಮ್ಮ, K. S. ಸೂರ್ಯನಾರಾಯಣ ಶಾಸ್ತ್ರಿಗಳ ವಿಧವೆ.

ಚಾಮರಾಜನಗರ- ಚಾಂದ್ ಕಾಮಾಡಿ ಪೋಟಳ್, ಹೆಬ್ಬಸೂರು ಗ್ರಾಮ—

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಉಡುಪಿ ತಾಲೂಕು ಹಂದಾಡಿ ಗ್ರಾಮದಲ್ಲಿ ತಾ. 11-5-1965ರಲ್ಲು ಮೃತಪಟ್ಟ K. S ಸೂರ್ಯನಾರಾಯಣ ಶಾಸ್ತ್ರಿಗಳಿಗೆ ಅರ್ಜಿಯಲ್ಲಿ ಕಾಣಿಸಿದಂತೆ ಬರಬೇಕಾದ ಸಾಲ ವಗೈರೆಗಳನ್ನು ವಸೂಲು ಮಾಡುವರೆ ಅರ್ಜಿದಾರರು ಹಕ್ಕುದಾರರೆಂತಲೂ, ಆ ಬಗ್ಗೆ 1ನೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ, ವಗೈರೆ ಸಂಗತಿಗಳನ್ನು ಕಾಣಿಸಿ ಅರ್ಜಿದಾರರು ದಾಖಲು ಮಾಡಿರುವ ಮೇಲ್ಕಂಡ ಅರ್ಜಿಯನ್ನು ತಾ. 21-8-65ಕ್ಕೆ ಇಟ್ಟಿರುವುದ್ರಿಂದ ಆಕ್ಷೇಪವುಳ್ಳಂಥವರು ಆ ದಿವಸ ಬೆಳಿಗ್ಗೆ ಖುದ್ದಾಗಲೀ ವಕೀಲುದ್ವಾರಾವಾಗಲೀ ಹಗಲು 11 ಗಂಟೆಗೆ ಈ ಕೋರ್ಟಿನಲ್ಲಿ ಹಾಜರಾಗಿ ತಿಳಿಯಪಡಿಸತಕ್ಕದ್ದು.

—ಉಡುಪಿ,

ತಾ. 15-7-65. **P. V. Acharya**
Vakil for Petitioners.

ಕಾಸರಗೋಡು ಪ್ರದೇಶಕ್ಕೆ ವಿದ್ಯುಚ್ಛಕ್ತಿ.

ಶ್ರೀ ಕೆ. ಕೆ. ರೈಯವರ ಅಧ್ಯಕ್ಷತೆಯಲ್ಲಿ ಸೇರಿದ ಬದಿಯಡ್ಕ ಪಂಚಾಯತ್ ಸಭೆಯಲ್ಲಿ ಕಾಸರಗೋಡು ಪ್ರದೇಶಕ್ಕೆ ಮೈಸೂರಿನಿಂದ ವಿದ್ಯುಚ್ಛಕ್ತಿ ಒದಗಿಸಿ ಕೊಡುವರೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಕೇರಳ ಮತ್ತು ಮೈಸೂರು ಸರಕಾರಗಳನ್ನು ಕೇಳಿಕೊಳ್ಳುವ ನಿರ್ಣಯವನ್ನು ಅಂಗೀಕರಿಸಲಾಗಿದೆ. ಸಭೆಯಲ್ಲಿ, 15 ಮಂದಿ ಸದಸ್ಯರಿರುವ ನೆಹರೂ ಸ್ಮಾರಕ ನಿಧಿ ಸಂಗ್ರಹ ಸಮಿತಿಯನ್ನು ಆರಿಸಲಾಯಿತು. ಮಾತ್ರವಲ್ಲದೇ ಕೆಲವು ಮಾರ್ಗಗಳ ರಿಪೇರಿ ಮಾಡಬೇಕೆಂದೂ, ಕಾಲರಾ ನಿರೋಧಕ ಕಾರ್ಯಕ್ರಮ ಕೈಕೊಳ್ಳುವಂತೆ ಆರೋಗ್ಯ ಇಲಾಖೆಯನ್ನು ಕೇಳಿಕೊಳ್ಳಬೇಕೆಂದೂ ನಿರ್ಣಯವಾಯಿತು.

ಉಡುಪಿ ನಗರ ಸಭೆ

ಶ್ರೀ ಪಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ನಗರಸಭಾಪತಿ ಕಳೆದ ತಾ. 13ರಂದು ಉಡುಪಿನಗರ ಸಭೆಯು ಜರಗಿತು. ಮೊದಲಾಗಿ, ನಗರ ಸಭೆ ಮೆನೇಜರರ ನಿವೃತ್ತಿ ಸಮಯಕ್ಕೆ ಅವರನ್ನು ಯಾಕೆ ನಿವೃತ್ತಿಗೊಳಿಸಲಿಲ್ಲವೆನ್ನುವ ಕುರಿತು ಚರ್ಚಿಸಲಾಯಿತು. ಕೊನೆಯಲ್ಲಿ ಕಮಿಶನರು ಸರಕಾರದ ತೀರ್ಮಾನದಂತೆ ಅದು ಕೊನೆಗೊಳ್ಳುವುದೆಂದರು.

ದೊಡ್ಡನ ಗುಡ್ಡೆಯಲ್ಲಿನ ಸರಕಾರಿ ಜಾಗವನ್ನು ಮುನ್ಸಿಪಲ್ ಸಿಬಂದಿಗಳ ವಸತಿ ಸಾಕರ್ಯಕ್ಕಾಗಿ ನಗರಸಭೆಗೆ ಕೊಡಿಸಬೇಕೆಂದೂ, ಉಡುಪಿ ನಗರ ಸಭೆಗೆ ಟೌನ್ ಪ್ಲೇನಂಗ್ ಯೋಜನೆಯಂತೆ ವಿಸ್ತೃತ ಉಡುಪಿ. ಯೋಜನೆಯನ್ನು ಸೇರಿಸಬೇಕೆಂದೂ ಸರಕಾರವನ್ನು ಕೇಳಿಕೊಳ್ಳಬೇಕೆಂಬ ಸೂಚನೆಯು ಅಂಗೀಕಾರವಾಯಿತು ಬೇರೆ ಬೇರೆ ಮಾರ್ಗಗಳ ಅಭಿವೃದ್ಧಿಗೆ 25 ಸಾವಿರ ರೂಪಾಯಿಗಳ ಎಸ್ಟಿಮೇಟಿಗೆ ಮಂಜೂರಾತಿಯನ್ನೀಯಲಾಯಿತು. ಇದರ ಪ್ರಕಾರ ಸುಮಾರು ಎರಡು ತಿಂಗಳೊಳಗೆ ವಿದ್ಯುದ್ದೀಪದ ಸೌಕರ್ಯವನ್ನು ಎಲ್ಲಾ ಕಡೆಗೂ ಒದಗಿಸಲಾಗುತ್ತಿದೆಯೆಂದು ತಿಳಿದು ಬಂದಿದೆ.

ವಿಜಯಾ ಬ್ಯಾಂಕಿನ ವಿಜಯಿ ಹೆಜ್ಜೆ

ಅರ್ಧ ಶತಮಾನದಷ್ಟು ಹಳೆಯದಾದ ಕುನೂರಿನ ಸುಬ್ರಮಣ್ಯ ವಿಲಾಸ ಉಪಕಾರ ಬ್ಯಾಂಕು ಮಂಗಳೂರಿನ ವಿಜಯಾ ಬ್ಯಾಂಕಿನೊಂದಿಗೆ ತಾ 12-7-65ರಂದು ಸೇರ್ಪಡೆ ಹೊಂದಿದೆ. ಈ ಬ್ಯಾಂಕಿನ ಕುನೂರು ಮತ್ತು ಕೋಟಗಿರಿಯ ಶಾಖೆಗಳೆರಡು ವಿಜಯಾ ಬ್ಯಾಂಕಿನ ಶಾಖೆಗಳಾಗಿ ಮಾರ್ಪಟ್ಟು ಕಾರ್ಯ ನಿರ್ವಹಿಸುವವು. ಈ ಬ್ಯಾಂಕಿನ ವಿಲಯನದಿಂದಾಗಿ ಮದ್ರಾಸ್ ಪ್ರಾಂತ್ಯದಲ್ಲಿ ಇದೇ ಪ್ರಥಮವಾಗಿ ವಿಜಯಾ ಬ್ಯಾಂಕ್ ಎರಡು ಶಾಖೆಗಳನ್ನು ಹೊಂದಿದಂತಾಯಿತು.

ಎರಡು ಬ್ಯಾಂಕುಗಳ ಸೇರ್ಪಡೆಯ ಸಮಾರಂಭಕ್ಕೆ ವಿಜಯಾ ಬ್ಯಾಂಕಿನ ಚೇರ್‌ಮನ್ ಶ್ರೀ ಎಂ. ಸುಂದರ ರಾಮ ಶೆಟ್ಟಿ, ಕಾರ್ಯದರ್ಶಿ ಶ್ರೀ ಪಿ. ವಿಜಯರಾಮ ಶೆಟ್ಟಿ ಮೊದಲಾದವರು ತೆರಳಿದ್ದರು.

ವಿಜಯಾ ಬ್ಯಾಂಕಿನ ಇನ್ನೆರಡು ಹೊಸ ಶಾಖೆಗಳು ಕೊಡಗಿನ ಸಿದ್ದಾಪುರ ಮತ್ತು ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಬೇಗನೆ ತೆರೆಯಲ್ಪಡುವುವು ಎಂದು ತಿಳಿದುಬರುತ್ತದೆ.

ತಿರುವನಂತಪುರದಲ್ಲಿ ಶ್ರೀ ಟಿ. ಎ. ಪೈ.

ಒಂದು ದಿನದ ಸಂದರ್ಶನಾರ್ಥವಾಗಿ ತಿರುವನಂತಪುರಕ್ಕೆ ಭೇಟಿಯಿತ್ತ ಫುಡ್ ಕಾರ್ಪೊರೇಷನಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಶ್ರೀ ಅಜಿತ ಪ್ರಸಾದ ಜೈನ್, ಮತ್ತು ರಾಜ್ಯಪಾಲ, ಸ್ಟೇಟ್ ಸೆಕ್ರೆಟರೀ ಮೊದಲಾದ ಇತರ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿದರು. ಅವರು ಅಲ್ಲಿ ಮಾತನಾಡುತ್ತಾ, ಸಂಗ್ರಹಿಸಿದ ಆಹಾರಧಾನ್ಯದ ಜೋಪಾನ ಹಾಗೂ ಅದರ ಸಾಗಣಿಕೆ ವಿತರಣೆ ಮುಂತಾದ ಕಡೆಗೆ ಪ್ರಮುಖ ದೃಷ್ಟಿ ಹರಿಸಬೇಕೆಂದೂ ಆಹಾರ ಧಾನ್ಯಗಳ ವ್ಯಾಪಾರವಲ್ಲ, ವಿತರಣೆಯೇ ಮುಖ್ಯ ಪ್ರಶ್ನೆ ಎಂದೂ ನುಡಿದರು.

ವಾರ್ಷಿಕ ಸಭೆ

ಗದಗ- ಡಿ. ಎಸ್. ಎಸ್. ಕೆ. ವಿದ್ಯಾವರ್ಧಕಸಂಘ ರಿಜಿಸ್ಟರ್ಡ್ ಆಫೀಸ ಗದಗ ಇದರ ತಾ. 11-7-65ರಂದು ವಾರ್ಷಿಕ ಸಾಧಾರಣ ಸಭೆಯು "ಶ್ರೀ ಚಂದುಲಾಲಸಾ ಚವ್ಹಾಣ ಕಲ್ಯಾಣಮಂಟಪ" (ಶ್ರೀ ಅಂಬಾಭವಾನಿ ದೇವಾಲಯದ ಹಳೆ ಸರಾಫ ಬಜಾರ) ದಲ್ಲಿ ಶ್ರೀ ಮೇಘರಾಜಸಾ ರಾಮಚಂದ್ರ ಹಬೀಬ ಅವರ ಅಧ್ಯಕ್ಷತೆಯಲ್ಲಿಯೂ ಶ್ರೀ. ಜೀವಣಸಾ ವಿಶ್ವನಾಥಸಾ ಕಬಾಡಿ, ಅವರ ಸ್ವಾಗತಾಧ್ಯಕ್ಷತೆಯಲ್ಲಿಯೂ ನೆರವೇರಿತು.

ಕೊಳ್ಳೆಗಾಲದಲ್ಲಿ ಶ್ರೀ ಜಿ. ನಾರಾಯಣ ಗೌಡರು

ಕೊಳ್ಳೆಗಾಲ, ಜು. 10— ವಿಜಯಾ ಬ್ಯಾಂಕ್, ಮಂಗಳೂರು ಅವರು ತಮ್ಮ ಕೊಳ್ಳೆಗಾಲ ಶಾಖೆಯ ಮೂಲಕ ಇಲ್ಲಿಯ ರೈತರಿಗೆ ವ್ಯವಸಾಯದ ಪಂಪುಸೆಟ್ಟುಗಾಗಿ ಕಂತಿನ ರೂಪದಲ್ಲಿ ಸಾಲ ನೀಡುವ ಯೋಜನೆಯ 25 ಪಂಪುಸೆಟ್ಟುಗಳ ಪ್ರಥಮ ಹಂತದ ಉದ್ಘಾಟನೆಯು ಇಂದು ಸ್ಥಳೀಯ ಶ್ರೀಮತಿ ವಸಂತಕುಮಾರಿ ಬಾಲಿಕಾ ಪ್ರೌಢಶಾಲಾ ಆವರಣದಲ್ಲಿ ಮೈಸೂರು ಸರಕಾರದ ವ್ಯವಸಾಯ ಸಚಿವರಾದ ಮಾನ್ಯ ಶ್ರೀ ಜಿ. ನಾರಾಯಣ ಗೌಡರಿಂದ ನಡೆಯಿತು. ಸಚಿವರು ಈ ಯೋಜನೆಯನ್ನು ಶ್ಲಾಘಿಸುತ್ತಾ ವಿಜಯಾ ಬ್ಯಾಂಕ್ ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿ ಉಳಿದ ಬ್ಯಾಂಕ್‌ಗಳೂ ಕಾರ್ಯೋನ್ಮುಖವಾಗಲಿ ಎಂದು ನುಡಿದರು. ಅಲ್ಲದೆ ಸರಕಾರವು ಕೃಷಿಕರಿಗಾಗಿ ಹಲವಾರು ಸವಲತ್ತುಗಳನ್ನು ಒದಗಿಸುತ್ತಿದ್ದರೂ, ಹೆಚ್ಚಿನವರಿಗೆ ಅವುಗಳ ಸೌಲಭ್ಯ ದೊರಕದೇ ಇದ್ದಾಗ ಇಂತಹ ಯೋಜನೆಗಳು ಅಗತ್ಯವೆಂದು ಹೇಳಿದರು. ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ ಕೊಳ್ಳೆಗಾಲ ತಾಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷ ಶ್ರೀ ಎ. ನುಗಣ ಶೆಟ್ಟಿ ಅವರು ತನ್ನ ಭಾಷಣದಲ್ಲಿ ಕೊಳ್ಳೆಗಾಲದ ಕೃಷಿಕರ ಭವಣೆಗಳ ಕುರಿತು ಸಚಿವರಲ್ಲಿ ಮನವಿ ಮಾಡಿದರು. ಶ್ರೀಯುತ ವೆಂಕಟಯ್ಯ ಗೌಡ, ಎಂ. ಎಲ್. ಎ. ಅವರೂ, ಕೊಳ್ಳೆಗಾಲದ ಕೃಷಿಕರಿಗಾಗಿ ಅನುತಾಪ ವ್ಯಕ್ತಪಡಿಸುತ್ತಾ ಅವರ ಬಾವಿಗಳ ಅಭಾವ, ಪಂಪುಸೆಟ್ಟುಗಳಿಗಾಗಿ ಸರಕಾರಕ್ಕೆ ಸಲ್ಲಿಸುವ ಕೃಷಿಕರ ಅರ್ಜಿಗಳ ಕುರಿತು ಸರಕಾರ ಯಾವುದೇ ನಿರ್ಣಯಕ್ಕೆ ಬಾರದೆ ಇರುವುದು. ಸುಮಾರು 400 ಪಂಪು ಸೆಟ್ಟುಗಳಿಗೆ ಅರ್ಜಿ ಸಲ್ಲಿಸಿದರೂ ಕೇವಲ 85 ಮಂದಿಗೆ ಮಾತ್ರ ಪಂಪುಸೆಟ್ಟುಗಳು ದೊರೆತು ಉಳಿದವರು ನಿರಾಶರಾಗುವಂತಹ ಕೆಲವು ಪರಿಸ್ಥಿತಿಗಳನ್ನು ಸಚಿವರಲ್ಲಿ ಅರಿಕೆ ಮಾಡಿಕೊಂಡರು.

ಈ ಯೋಜನೆಗಾಗಿ ಶ್ರಮವಹಿಸಿದ ಶ್ರೀ ಮಾನ್ ಚಕ್ಕವ-ರಿಗೌಡರು ತಾನು ಅದಕ್ಕಾಗಿ ಪಟ್ಟ ಶ್ರಮವನ್ನು ಸಭೆಯಲ್ಲಿ ತೋಡಿಕೊಂಡರು. ವಿತರಣೆಯಾಗುವಂತಹ 25 ಪಂಪುಸೆಟ್ಟುಗಳಿಗೆ ತಾನೇ ಸ್ವತಃ ಜವಾಬ್ದಾರಿಯನ್ನು ವಹಿಸಿಕೊಂಡು, ತನ್ನ ಮೂಲಕ ಕೃಷಿಕರಿಗೆ ಆ ಪಂಪುಸೆಟ್ಟುಗಳನ್ನು ನೀಡುವ ಅವರ ಈ ಸಾಹಸ ಪ್ರಶಂಸಾರ್ಹ. ಈ ಯೋಜನೆಗೆ ಸಹಾಯಕರಾದ ವಿಜಯಾ ಬ್ಯಾಂಕ್ ಸೆಕ್ರೆಟರಿ ಹಾಗೂ ಚೇರ್‌ಮೇನರಿಗೂ, ಕೊಳ್ಳೆಗಾಲ ಬ್ರಾಂಚಿನ ಮ್ಯಾನೇಜರ್ ಶ್ರೀ ಕೆ. ವಿರಲ ಶೆಟ್ಟಿಯವರಿಗೂ ಅಭಿನಂದನೆಗಳನ್ನು ಸಲ್ಲಿಸಿದರು. ಅಲ್ಲದೆ, ಪಂಪುಸೆಟ್ಟುಗಳನ್ನು ಸಕಾಲದಲ್ಲಿ ಒದಗಿಸಿಕೊಟ್ಟ 'ಬಿ.ಎಂ.ಎಫ್' ಗೆ ಮೈಸೂರು ಸ್ಟೇಟಿನ ಸೋಲ್ ಏಜೆಂಟರುಗಳಾದ ಕಸ್ತೂರಪ್ಪ ಟ್ರೇಡಿಂಗ್ ಕಾರ್ಪೋರೇಶನ್ ಅವರಿಗೂ ಅಭಿನಂದನೆಗಳನ್ನು ಸಲ್ಲಿಸಿದರು.

ಕುಂದಾಪುರ ತಾಲೂಕು ಬೋರ್ಡ್ ಅಧ್ಯಕ್ಷರಾಗಿ ಶ್ರೀ. ಎಂ. ಹೆಗ್ಡೇರ ಆಯ್ಕೆ

ಕಳೆದ ತಾ 14ರಂದು, ಕುಂದಾಪುರ ತಾಲೂಕು ಅಭಿವೃದ್ಧಿ ಬೋರ್ಡಿನ ತೆರವಾದ ಅಧ್ಯಕ್ಷ ಸ್ಥಾನಕ್ಕೆ, ಎಡ್ವಕೇಟ್ ಶ್ರೀ ಎಂ. ಎಂ. ಹೆಗ್ಡೆಯವರು ಅವಿರೋಧವಾಗಿ ಆಯ್ಕೆ ಹೊಂದಿರುವರು ಈ ಸಂದರ್ಭದಲ್ಲಿ ಕುಂದಾಪುರ ಅಸಿಸ್ಟೆಂಟ್ ಕಮಿಶನರ ಅಧ್ಯಕ್ಷತೆಯಲ್ಲಿ ಜರಗಿದ ಬೋರ್ಡಿನ ಸಭೆಯಲ್ಲಿ ಶ್ರೀಗಳಾದ ಎನ್ ಎಸ್. ಪರಮೇಶ್ವರಯ್ಯ, ಎ. ಜಿ. ಕೊಡ್ಗಿ ಮತ್ತು ಸಭಾಧ್ಯಕ್ಷರು ಅಭಿನಂದನಾಭಾಷಣ ಮಾಡಿದರು. ಶ್ರೀ ಎಂ. ಎಂ. ಹೆಗ್ಡೆಯವರು ಕೃತಜ್ಞತೆಗಳನ್ನರ್ಪಿಸಿದರು.

ಪಣಂಬೂರು ಅನ್ನ ಸತ್ಯಾಗ್ರಹ

ಹೆಚ್ಚಿನ 1500 ಎಕ್ರೆ ಭೂಮಿಯನ್ನು ಸ್ವಾಧೀನ ಪಡಿಸುವುದರ ಪ್ರತಿಭಟನಾರ್ಥವಾಗಿ ತಾ. 1—6—65ರಿಂದ ದಿನಂಪ್ರತಿ ಐದೈದು ಜನರಂತೆ ಮಾಡುತ್ತಿರುವ ಅನ್ನ ಸತ್ಯಾಗ್ರಹವು ಯಶಸ್ವಿಯಾಗಿ ಮುಂದುವರಿಯುತ್ತಿದೆ. ಇತ್ತೀಚೆಗೆ ಮಹಿಳೆಯರೂ ಸ್ವಯಂಸ್ಫೂರ್ತಿಯಿಂದ ದಿನಂಪ್ರತಿ ಐವರಂತೆ ಅನ್ನ ಸತ್ಯಾಗ್ರಹ ಹೂಡಿ ತಮ್ಮ ಪಾಲಿನ ಕರ್ತವ್ಯವನ್ನು ನೆರವೇರಿಸುತ್ತಿದ್ದಾರೆ. ಈ ವರೆಗೆ ಸುಮಾರು 260 ಜನರು ಸತ್ಯಾಗ್ರಹದಲ್ಲಿ ಭಾಗಿಗಳಾಗಿದ್ದಾರೆ.

ಬೆಳ್ಳಾರೆಯಲ್ಲಿ ಪಬ್ಲಿಕ್ ಕಾಲ್ ಆಫೀಸು

ಪುತ್ತೂರು ತಾಲೂಕಿನ ಬೆಳ್ಳಾರೆಯ ಸಬ್ ಪೋಸ್ಟ್ ಆಫೀಸನ್ನು ತಾ. 10ರಂದ ಪಬ್ಲಿಕ್ ಕಾಲ್ ಆಫೀಸಾಗಿ ಪರಿವರ್ತಿಸಲಾಗಿದ್ದು, ಇದರ ಉದ್ಘಾಟನೆಯು ಮೈಸೂರಿನ ಟೆಲಿಗ್ರಾಫ್‌ನ ಸಬ್‌ಡಿವಿಜನಲ್ ಎಂಜಿನಿಯರ್ ಶ್ರೀ ಸಂಜೀವ ನಾಯಕರಿಂದ, ಶ್ರೀ ಅಪ್ಪಾರು ರಾಮಣ್ಣ ಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು.

ಚಂದಾದಾರರಲ್ಲಿ ವಿನಂತಿ

ನವಯುಗದ ಚಂದಾ ಅವಧಿ ಮುಗಿದ ನಮ್ಮ ಚಂದಾದಾರ ಬಂಧುಗಳಿಗೆಲ್ಲಾ ಪ್ರತ್ಯೇಕಪ್ರತ್ಯೇಕವಾಗಿ ಬರೆದು ತಿಳಿಸಿರುತ್ತೇವೆ. ಅವರೆಲ್ಲರೂ ದಯಮಾಡಿ ತಮ್ಮ ತಮ್ಮ ಚಂದಾ ಹಣವನ್ನು ಆದಷ್ಟು ಬೇಗನೆ ಕಳುಹಿಸಿ ಕೊಡುವಂತೆ ಈ ಮೂಲಕ ಇನ್ನೊಮ್ಮೆ ವಿನಂತಿಸುತ್ತೇವೆ. ಸಕಾಲದಲ್ಲಿ ಚಂದಾ ಹಣ ಬಾರದಿದ್ದರೆ ಚಂದಾ ಅವಧಿ ಮುಗಿದವರಿಗೆಲ್ಲಾ ಮುಂದಿನ ವಾರದ ಪತ್ರಿಕೆಯನ್ನು ವಿ. ಪಿ. ದ್ವಾರಾ ಕಳುಹಿಸುತ್ತೇವೆ. ಅದನ್ನು ದಯಮಾಡಿ ಸ್ವೀಕರಿಸಿ, ಸಹಕರಿಸುವಂತೆ ಬಿನ್ನವಿಸುತ್ತೇವೆ.

ಮೆನೇಜರ್,
ನವಯುಗ.

The Modern Agricultural & Industrial Enterprise Ltd.

Registered Office: **Kharvikeri, Coondapur, S. Kanara.**

Sealed offers for property of 0-98½ cents in extent with rice mills, buildings and machinery, situate in Coondapur Kasba, will be received by the undersigned up to 17-8-1965. The property is subject to an annual 'moolgeni' rent of Rs. 150/- and assessment and without encumbrances. The rice mill is under lease. Inspection of the documents can be had at the office.

Coondapur, S. K.
17—7—1965.

Sd. **J. Ramanand Row,**
Chairman.

ಡಚ್ಚರು ಹೊರಟರೆಂದರೆ

ಹೊಲೆಂಡು ಸಮುದ್ರ ಪಾಲಾಗುವುದು

ಸಮುದ್ರದೊಡನೆ ನಿರಂತರ ಹೋರಾಡುತ್ತಲೇ ಡಚ್ಚರು ಬದುಕುತ್ತಾರೆ.

ಜಲ! ಜಲ! ಜಲ!......ಎತ್ತ ಕಡೆ ತಿರುಗಿ ನೋಡಿದರೂ ಜಲಮಯ. ನೆದರ್ ಲ್ಯಾಂಡ್ಸಿನ ಇರುವಿಕೆಯೇ ಹಾಗೆ. ಎತ್ತ ಕಡೆ ತಿರುಗಿ ನೋಡಿದರೂ ಅಬ್ಬರಿಸುವ ಸಮುದ್ರವಿದ್ದರೂ, ಡಚ್ಚರು ಅದನ್ನು ಜಯಿಸುತ್ತಲೇ ಬಂದಿದ್ದಾರೆ. ಡಚ್ಚರು ತಮ್ಮ ದೇಶದಲ್ಲಿರುವವರೆಗೆ ನೆದರ್ ಲ್ಯಾಂಡ್ಸ್ ಸಹಾ ಇರುತ್ತದೆ. ಎಂದಾದರೊಮ್ಮೆ ಅವರೆಲ್ಲರೂ ದೇಶವನ್ನು ಬಿಟ್ಟು ಹೋಗಲು ನಿಶ್ಚಯಿಸಿ ಹೊರಟರೆಂದರೆ, ಸಮುದ್ರವು ಈ ದೇಶವನ್ನು ಕಬಳಿಸಿ ಬಿಡುವುದು ನಿಶ್ಚಯ.

ನೆದರ್ ಲ್ಯಾಂಡ್ಸಿನ ಬಹುಭಾಗವೆಲ್ಲ ಸಮುದ್ರದ ಅಂಚಿನಲ್ಲಿರುವುದಂತೆಯೇ. ಯೂರೋಪಿನ ಎರಡು ಭಾರೀ ನದಿಗಳಾದ ರೈನ್ ಮತ್ತು ಮ್ಯೂಸ್‌ಗಳು ಬೇರೆ ಅನೇಕ ಉಪನದಿಗಳೊಂದಿಗೆ ಕೂಡಿಕೊಳ್ಳುತ್ತವೆ. ಡಚ್ಚರು ನೂರೆಂಟು ಕಾಲುವೆಗಳನ್ನು ಸಿದ್ಧಪಡಿಸಿದ್ದಾರೆ. ಹೊಸ ಸರೋವರಗಳನ್ನು ಸೃಷ್ಟಿ ಮಾಡಿದ್ದಾರೆ. ಹೊಸ ಬಂದರುಗಳನ್ನು ನಿರ್ಮಿಸಿದ್ದಾರೆ. ಇಷ್ಟೆ ಇನ್ನು ಒಂದು ವಿಧದ ಕಷ್ಟವಿದೆ. ಬಹು ಹೆಚ್ಚಿನ ಭಾಗಗಳಲ್ಲಿ ಭೂಮಟ್ಟಕ್ಕಿಂತ, ನೀರಿನ ಮಟ್ಟವು ಮೇಲಿದೆ, ಅಂಥ ಜಾಗಗಳಲ್ಲಿ ಸಮುದ್ರದ ನೀರು ಭೂಮಿಯ ಮೇಲೆ ಧಾಳಿಮಾಡಿ, ಹಾವಳಿಯೆಬ್ಬಿಸದಂತಿರಲು ಡಚ್ಚರು ತಡೆಗೋಡೆಗಳನ್ನು ನಿರ್ಮಿಸಿದ್ದಾರೆ.

ವರ್ಷ ವರ್ಷ, ಜನ ಸಂಖ್ಯೆಯು ಏರುತ್ತಲೇ ನಡೆದಿದೆ. ಇರುವವರಿಗೇ ಭೂಮಿ ಸಾಲದೆಂದಿರುವಾಗ, ಕಡಲು ಬೇರೆ ಕರಾಳಜಿಹ್ವೆಗಳಿಂದ ನಾಡನ್ನು ಕಬಳಿಸಲು ಬರುತ್ತಿದೆ. ಇಂತಹ ಪರಿಸ್ಥಿತಿಯಿದ್ದರೂ, ಡಚ್ಚರು ಎದೆಗುಂದದೆ, ಅನೇಕ ಶತಮಾನಗಳಿಂದ ಸಮುದ್ರವನ್ನು ಅಣಗಿಸಿ, ಅದರಿಂದಲೇ ಭೂಪ್ರದೇಶವನ್ನು ಪಡೆದು ಬರುತ್ತಿದ್ದಾರೆ. ಹಾಲೆಂಡಿನ ಯಾಂತ್ರಿಕ ಪರಿಣತರ ಈ ಅಮೋಘ ಸಾಹಸವನ್ನು ಕಂಡು ಇಡೀ ಜಗತ್ತೇ ಬೆಬ್ಬೆರಗಾಗಿದೆ.

ಹಾಲೆಂಡಿಗೆ ಬರುವ ಪ್ರವಾಸಿಗಳ ಸಂಖ್ಯೆಯು ಈ ಜಲಪ್ರಧಾನತೆಯಿಂದಲೇ ಏರುತ್ತಿದೆ. ಪ್ರವಾಸಿಗಳು ಯಾವ ದಿಕ್ಕಿನಲ್ಲೇ ನಡೆಯಲಿ, ಹಾಲೆಂಡಿನಲ್ಲಿ ಕೆಲವು ನೂರು ಗಜಗಳಷ್ಟು ದೂರವನ್ನು ಭೂಮಿಯ ಮೇಲೆಯೇ ಕ್ರಮಿಸಲು ಸಾಧ್ಯವಿಲ್ಲದಂತೆ ಕಾಲುವೆಯೋ, ನದಿಯೋ, ಕೆರೆಯೋ ಅಡ್ಡಬಂದುಕೊಂಡೇ ಇರುವುವು. ನೆಲಕ್ಕಿಂತ ಜಲವೇ ಹೆಚ್ಚೇ ಎಂಬ ಸಂದೇಹವು ಯಾರಲ್ಲಿಯೂ ಉಂಟಾಗುವುದು, ಆದರೆ ಅಲ್ಲಿನ ಒಂದೊಂದು ಜಲಪ್ರದೇಶವನ್ನೂ ವಶಪಡಿಸಿ ಭೂಮಿಯೊಂದಿಗೆ ಸೇರಿಸಲಾಗಿದೆ. ಹಾಗಿಲ್ಲದೆ ಹೋಗಿದ್ದರೆ, ಎಂದೋ ಪ್ರವಾಹ ಬಂದು, ಜಲಪಂಕ್ತಿ ಬಂದು, ನೆದರ್ ಲ್ಯಾಂಡ್ಸನ್ನು ಅಪೋಶನ ತೆಗೆದುಕೊಳ್ಳುತ್ತಿತ್ತು.

ಸಮುದ್ರ ನುಗ್ಗುವುದರಿಂದ, ನೀರಿಂ ನದಿಗಳು ನುಂಗುವುದರಿಂದ ಭೂಮಿಯನ್ನು ರಕ್ಷಿಸಲು ಗೋಡೆಗಳನ್ನು ರಚಿಸುವ ಕಾರ್ಯವು ಹಾಲೆಂಡಿನಲ್ಲಿ ಗಣನೆಯ ಶತಮಾನಗಳಿಂದಲೇ ನಡೆಯುತ್ತಿದೆ. ಮೊದಲು ಈ ಕಾರ್ಯವನ್ನು ಭೂಮಾಲಿಕರೇ ಮಾಡುತ್ತಿದ್ದರು. ಆದರೆ, ನಿರಂತರವಾಗಿ ಅವರೇ ಈ ಮಹಾಕಾರ್ಯವನ್ನು ನಡೆಸಲು ಸಾಧ್ಯವಾಗದೆಂದು ಕಂಡುಬಂದದ್ದರಿಂದ ಇದಕ್ಕಾಗಿ ಸಮಿತಿಯೊಂದನ್ನು ರಚಿಸಲಾಯಿತು. ಇಂತಹ ಸಮಿತಿಗಳಿಗೆ ಅಲ್ಲಿ ವಾಟರ್‌ಷಾಪ್ ಎಂದು ಹೆಸರು. ತಡೆನಿರ್ಮಿಸುವ ಕಾರ್ಯಗಳಿಗೆ ಆಗುವ ಈ ಸಮಿತಿಗಳು ಒಂದಂಶವನ್ನು ಭೂಸ್ವಾಮ್ಯಗಳಿಂದ ಪಡೆಯುತ್ತದೆ.

ಹಾಲೆಂಡಿನಲ್ಲಿ ನೀರನ್ನು ಹೀರಿ, ಭೂಮಿಯನ್ನು ಪಡೆಯಲು ಪಂಪಿಂಗ್ ಸ್ಟೇಶನ್‌ಗಳನ್ನು ನಿರ್ಮಿಸಲಾಗಿತ್ತು, ಆ ಜಾಗಗಳಲ್ಲಿ ವಿದ್ಯುಚ್ಛಾಲಿತ ಯಂತ್ರಗಳಿವೆ.

ಅಲ್ಲಿ ಇಷ್ಟೆಲ್ಲಾ ಎಚ್ಚರಿಕೆಗಳನ್ನು ವಹಿಸುತ್ತಿದ್ದರೂ, ೧೯೫೩ರಲ್ಲಿ ಜೀಲಂಡ್‌ನಲ್ಲಿ ಸಮುದ್ರವು ಉಕ್ಕಿ ಅನೇಕರು ಸತ್ತು, ಲಕ್ಷಾಂತರ ಪೌಂಡುಗಳಷ್ಟು ನಷ್ಟವಾಯಿತು. ನೀರು ಒಳ್ಳೆಯದನ್ನು ಮಾಡಬಲ್ಲಂತೆ ಕೆಡುಕನ್ನೂ ಮಾಡಬಲ್ಲುದು ಎಂಬುದನ್ನರಿತೇ ಡಚ್ಚರು ಕಾಲವನ್ನು ತಳ್ಳುತ್ತಿದ್ದಾರೆ.

— ಹರಕೆ —

ಸುಳಿ ಸುಳಿದು ಸುತ್ತುತಿದೆ ಭಾವನಾ
ತರಂಗ
ರಾಣಿ ತಲೆಯೊಳಗೆ ಎನ್ನ ||
ನೆನೆ ನೆನೆದು ಕೂಗುತಿದೆ ಹೃದಯ
ದೇಗುಲ
ಕರೆಯುತಿದೆ ಅದು ನಿನ್ನ ||೧||
ಕಾಲು ಶತಮಾನದಾಯುಷ್ಯ ದಾಟಿರಲು
ಎನಗೆ
ಕೈ ಹಿಡಿಯೆ ಆಳಿಸಿದೆಯು ನೀನು ||
ನೋವನರಿಯದೆ ಬಾಳ ದೀವಿಗೆಯ ಬೆಳಗೆ
ಕರೆಯುತ್ತಿ ನಿನಗೆ ನಾನು ||೨||
ದಾಂಪತ್ಯ ಜೀವನದ ಇನಿರಸದ ಸ್ಪಂದನವ
ಹರುಷದಿ ನೀಯೆನಗೆ ಉಣಲಿತ್ತೆ ||
ವಸಂತ ಋತುವೆರಡು ಸಂತಸದಿ
ಕಳೆಯೆ ನೀ
ತವರು ಮನೆಗೆ ತೆರಳಿತ್ತೆ ||೩||
ಶಿಶುವ ಭೂಮಿಗೆ ತರಲಿರುವ ನಿನ್ನ
ಕಳುಹಿದೆನು
ಬಲು ಸಂಭ್ರಮದಿ ನಾನೆ ||
ಏಕ ದುಃಖದಿಂ ಕೊರಗಿ
ಬಳಲುವೆಯೆಂದು
ಕಣ್ಣೀರಿಟ್ಟೆಯ ನೀನು ||೪||
ಚೊಚ್ಚಲ ಗಂಡುಮಗು ಪಡೆದ ಎನ್ನ
ಇಹ ಜನ್ಮವಿದು ಧನ್ಯ ||
ಬಳಿಯಿನಾ ಕಂದನ ಮಾತೆಯ
ಮಮತೆಯಿತ್ತು
ಜಗದೊಳಾತನಾಗಲಿ ಮಾನ್ಯ ||೫||
ಇದುವೆ ಎಲ್ಲ ಕೂಸು ಹೆತ್ತವರು ಮನದಿ
ಆಶಿಪ ಒಂದೇ ಬಯಕೆ ||
ಅದಕ್ಕಾಗಿ ವಿನಸಲಾಗಿರಲಿ ನಮ್ಮ ಬಾಳು
ಇದು ದೇವರಿಗಿತ್ತ ಹರಕೆ ||೬||

— ಕೆ. ಆನಂದ, ವೇಣೂರು

ದೇವಪುತ್ರ

(ಎರಡನೇ ಪುಟದಿಂದ)

ಮ ವಿಭಾಗ ಜಮಾ ವಿಭಾಗ! ಅಲ್ಲಿ ಏಳೆಂಟು ಜನ ಆಗಲೇ ನಿಂತಿದ್ದರು. ಕೆಲವರಂತೂ ತೂಕಡಿಸುತ್ತಿದ್ದರು. ಒಬ್ಬ ಅಂದಿನ ಪತ್ರಿಕೆ ಬಿಡಿಸಿ ಓದುತ್ತಿದ್ದನು. ಹಾಗಾಗ ನನಗೆ ಒಳಗೆ ವಿಭಾಗಾಧಿಕಾರಿಯ ಮುಖ ಕಾಣಲಾಗಲಿಲ್ಲ. ಪತ್ರಿಕೆ ಓದುವವನ ಸರದಿ ಬಂದಾಗಲೇ ವಿಭಾಗಾಧಿಕಾರಿಯನ್ನು ಕಾಣಲಾಯಿತು.

ಬಿಳುಪಾದ ಮುಖ. ಚೂಪಾದ ಮೀಸೆ. ನೋಡುವಾಗ ಕ್ರಿಶ್ಚಿಯನ್‌ನಂತೆ ಆದರೆ ಆತ ಹಿಂದೂ ಎಂದು ಮತ್ತೆ ತಿಳಿಯಿತು.

ಆತನು ಕೆಲಸ ಮಾಡುವುದಕ್ಕೂ ಹೆಚ್ಚು ಅತ್ತಿಂದಿತ್ತ ತಿರುಗಾಡುತಿದ್ದ.

ಏನೋ ಆತ ಕಳೆದುಕೊಂಡಿರಬಹುದೆಂದು ನಾನೆಣಿಸಿದನಾದರೂ ಅದು ಅವನ ಸ್ವಭಾವ ಎಂದು ಕೊನೆಗೆ ತಿಳಿದು ಬಂತು.

ಹತ್ತು ಬಾರಿ ಅತ್ತಿಂದಿತ್ತ ತಿರುಗಾಡಿ ಆದ ಮೇಲೆ ಒಬ್ಬರ ಹಣಾ ಪಡೆದ. ಕೆಂಪು ಶಾಯಿ ಮುಟ್ಟುತಿದ್ದ, ಕತ್ತಾರು ಕಡೆ ರುಜು ಹಾಕಿದ ನಂತರ ಪುನಃ ತಿರುಗಾಟ, ಮಾತಿಗೆ ಪ್ರಾರಂಭ! ನನಗೆ ರೇಗಿತು. ಆದರೆ ಪಕ್ಕದಲ್ಲಿದ್ದವ ಹೇಳಿದ.

"ಸ್ವಾಮಿ ಇದು ಸರಕಾರೀ ಬ್ಯಾಂಕು ನೀವು ರೇಗಿದರೆ ಪ್ರಯೋಜನವಿಲ್ಲ, ತಾಳ್ಮೆಬೇಕು. ಮನುಷ್ಯ ತಾಳ್ಮೆ ಹೇಗೆಂಬುದನ್ನು ತಿಳಿಯಬೇಕಾದರೆ ಸ್ಟೇಟ್ ಬ್ಯಾಂಕಿಗೆ ಹೋಗಿ ಬರಬೇಕು.

"ಸರಕಾರೀ ನೌಕರರು ದೇವಲೋಕದಿಂದಿಳಿದವರು ಎಂದು ಅವರೇ ತಿಳಿದುಕೊಂಡಿರುತ್ತಾರೆ. ಪ್ರತಿಯೊಬ್ಬನೂ ತಾನು ದೇವಪುತ್ರ ಎಂದು ತಿಳಿದು ಕೊಂಡಿದ್ದಾನೆ.

ಇಲ್ಲಿಂದ ಇನ್ನು ಮೆನೇಜರ ತನಕ ಹೋಗಿ ರಸೀದಿ ಬರಬೇಕಾದರೆ ಎಷ್ಟೆಂದರೂ ಎರಡು ಘಂಟೆ ಆದೀತು!"

ಆದರೆ ಬ್ಯಾಂಕ್ ಕೆಲಸದ ಅವಧಿ ಎರಡುಘಂಟೆಯ ತನಕ. ನನ್ನ ಸರದಿ ಬರುವಾಗ ಆಗಲೆ ಎರಡು ಹೊಡೆಯಿತು.

ನಾನು ಹೇಳಿದೆ — ಸ್ವಾಮಿ, ಈ ದೇವರುತ್ತರ ನಡುವೆ ಈ ಆತದೃಷ್ಟ ದೇವಪುತ್ರ 'ಸತ್ತ!" ಪಕ್ಕದಲ್ಲಿದ್ದವ ಕೇಳಿದ.

"ಏಕೆ, ಏನಾಯ್ತು?"

"ಏನಿಲ್ಲ, ನಾನು ಎರಡು ಸಾವಿರ ರೂಪಾಯಿ ಕಟ್ಟುವರೆ ಬ್ಯಾಂಕ್ ಅವಧಿಗೆ ಸರಿಯಾಗಿಬಂದರೂ ನನ್ನಾ ಕಟ್ಟಲಾಗಲಿಲ್ಲ. ಇನ್ನೂ ನಾಳೆ ಕಟ್ಟಬೇಕು. ಆದರೆ ಈ ಹಣವನ್ನು ಇಂದೇ ಕಟ್ಟುವುದು, ಕಟ್ಟಲೇಬೇಕು. ಇದರ ಪರಿಣಾಮವೇನಾಗುವುದೊ ತಿಳಿಯದು ಆದರೂ ನಾನಿದುವರೆಗೆ ಎಲ್ಲಿ ಹೋದೆನೆಂದು ಕೊಂಡು ನನ್ನ ಸಾಹುಕಾರರು ಹುಡುಕುತ್ತಿದ್ದಾರೊ ಏನೋ!"

ಜನರು ಚದರಿದರು. ಬ್ಯಾಂಕು ಮುಚ್ಚಿತು. ನಾನು ಹೊರಬಿದ್ದೆ. ನನ್ನ ಪ್ಯಾಂಟಿನ ಎಡ ಕಿಸೆ ಒಂದೊಮ್ಮೆ ಒತ್ತಿನೋಡಿದೆ.

ನನ್ನ ಎದೆ ಝಲ್ಲೆಂದಿತು. ಕಾರಣ ಅಲ್ಲಿ ಪಾಕೀಟು ಇದ್ದಿರಲಿಲ್ಲ ಗಾಬರಿಯಾದೆ. ಪ್ಯಾಂಟಿನ ಬಲಕಿಸೆಯುಕ್ತ ಮುಟ್ಟಿನೋಡಿದೆ. ಅಲ್ಲಿ ಮುದ್ದೆಯಾಗಿ ಎರಡು ಸಾವಿರ ರೂಪಾಯಿಕಂತೆ ಇದ್ದಿತ್ತು. ನನ್ನ ಪರ್ಸ ಮಾತ್ರ ಕಾಣೆ ಆಗಿತ್ತು.

ನನ್ನ ಆ ತಿಂಗಳ ಸಂಬಳದಲ್ಲಿ ಮುಂಗಡ ಕೊಂಡದ್ದನೆಲ್ಲಾ ಕಳೆದುಳಿದ ರೂ. ಇಪ್ಪತ್ತು ಮಾತ್ರ ಕಳೆದು ಕೊಂಡಿದ್ದೆ.

ಏನೇ ಆಗಲಿ. ದೇವಪುತ್ರರಲ್ಲಿ ಕಾದು ನಿಂತು ನನ್ನ ಹಣ ಕಳೆದು ಹೋದರೂ, ನನ್ನ ಸಾಹುಕಾರರ ಹಣ ಉಳಿಯಿತಲ್ಲ! ನನ್ನ ಪುಣ್ಯ. ನನ್ನ ಹೆಸರಿಗೆ ಕಳಂಕ ಬಂದಿಲ್ಲವಲ್ಲ! ಅದೇ ಯೋಗ! ನಾನು ಬೇಗ ಬೇಗನೆ ಕಾರ್ಖಾನೆ ಸೇರಿದೆ

ಘಂಟೆ ಆಗಲೇ ಮೂರಾಗಿತ್ತು. ಸಾಹುಕಾರರ ಹಣ ಹಿಂದಿರುಗಿಸಿದೆ. ನನ್ನ ಕಥೆ ಹೇಳಿದೆ.

ಸಾಹುಕಾರರು ಮರುಕ ಹಾಗೂ ಸಂತೋಷದಿಂದ ನನ್ನ ಕಳೆದು ಹೋದರೂ ಇಪ್ಪತ್ತು ಬಹುಮಾನ ಕೊಟ್ಟರು. ಕಾರಣ ಅವರ ಎರಡು ಸಾವಿರ ರೂಪಾಯಿ ಹಿಂದಿರುಗಿ ಸಿಕ್ಕಿದುದಕ್ಕಾಗಿಯೂ ಇರಬಹುದು.

ಆ

ಯಾವುದಕ್ಕೂ ಇರಬಹುದು! ಆದರೆ ಮನುಷ್ಯ ಎಷ್ಟು ಪ್ರಾಮಾಣಿಕನಾದರೂ ಮರವೆ ಎಂಬುದು ಮಾತ್ರ ಒಂದು ಕೊರತೆ.

ಮರವೆಯಿಂದ ಸಂಬಳ ಪಡೆದು ಹಣವನ್ನು ತನ್ನ ಮೇಜಿನ ಮೇಲೆ ಬಿಟ್ಟು ನಾನು ಸ್ಟೇಟ್ ಬ್ಯಾಂಕಿಗೆ ಹೋಗಲೆಂದು ಹೇಳಿದೊಡನೆ ಸೇವಾ ಭಾವನೆಯಿಂದ ಹೊರಟು ಹೋದ. ಸಂಜೆಗೆ ನಾನು ಆ ಹಣ ನೋಡಿದ ಮೇಲೆ ನಾನು ತಿಳಿದಿದ್ದೆ.

ಪಾಪ! ದೇವಪುತ್ರ ಗಡಿಬಿಡಿ ಮನುಷ್ಯ ಆದರೆ ಉತ್ತಮ ಸೇವಕ, ಸೇವಾಭಾವನೆ ಇದೆ. ಯಾವ ಕೆಲಸಕ್ಕೂ ಹಿಂಜರಿದಿಲ್ಲ, ಅವನು ನನಗೆ ಕೆಲಸಕ್ಕೆ ಸಿಕ್ಕಿದುದು ನನ್ನ ಪುಣ್ಯವೇ ಸರಿ! ಆತ ದೇವತಾ ಮನುಷ್ಯ! ಆತ ದೇವಪುತ್ರ!

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೆ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ



ಎಲ್ಲಾ ತರದ ನೋವುಗಳಿಗೆ ಸಿದ್ಧ ಮತ್ತು ನೋವುಗಳಿಗೆ

೬೦ ವರ್ಷ ಉಪಾಯದ

ಫ್ಯಾಕ್ಟರಿ ಡಾಕ್ಟರ್

ಅಮೃತಾಂಜನ ಲಿ. ಮುಂಬಾಯಿ, ಮದ್ರಾಸು, ಕಲ್ಕತ್ತಾ

NAVAYUGA 22-7-1965
Registered with the Registrar
of News Papers for India
under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೨-೭-೬೫ರಿಂದ ೨೮-೭-೬೫ರ ವರೆಗೆ

೧. ಮೇಷ

ನಿಶ್ಚಿಂತರೂ ನಿರಾಮಯರೂ ಆದ ನಿಮಗಿಂದು ಕೆಲವೊಂದು ಸಾಂಸಾರಿಕ ತಾಪತ್ರಯಗಳು ಕಾಣಸಿಕೊಳ್ಳಲಿವೆ. ಗಂಡಹೆಂಡಿರೊಳು ತಂದೆ ಮಕ್ಕಳೊಳು ಸ್ವಲ್ಪ ವಿರಸವುಂಟಾದೀತು. ವ್ಯವಹಾರ ಚತುರರಾದ ನೀವು ಹೆಚ್ಚಿನ ಕಾರ್ಯಗಳನ್ನು ಉಪಾಯದಿಂದಲೇ ಸಾಧಿಸುವಿರಿ. ಪ್ರಬಲನಾದ ವಿರೋಧಿಯೂ ಕೂಡ ಇಂದು ನಿಮಗೆ ಶರಣು ಬರುವನು. ಹಲವಾರು ತೆರದಿಂದ ಧನವು ನಿಮ್ಮಲ್ಲಿ ಸೇರಲಿದೆ. ತಾ. 23, 26, 27 ಈ ದಿನಗಳು ಅನುಕೂಲವಾಗಿವೆ.

೨. ವೃಷಭ

ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದರಿಂದ ದಿನಯಾಪನೆಯು ದುಸ್ತರವಾಗದು. ಉದ್ಯೋಗ ವ್ಯಾಪಾರಗಳಲ್ಲಿ ನಿಮ್ಮ ನಿರೀಕ್ಷೆಯು ಸಫಲವಾಗುವದು. ಪ್ರವಾಸ ಸುಖಕರವಾದರೂ ಆರೋಗ್ಯ ದೃಷ್ಟಿಯಿಂದ ಉತ್ತಮವಿರದು. ಬಂಧುಜನರ ವಿಯೋಗವುಂಟಾಗಲಿದೆ. ಚಿಕ್ಕಮಕ್ಕಳು ಕಾಯಿಲೆಕಸಾಲೆಗೆ ಸಿಲುಕುವ ಸಂಭವವಿದೆ. ಒಳ್ಳೆ ವಾಚಾಳರಾದ ನಿಮಗೆ ತಾ. 24, 25, 28 ಈ ದಿನಗಳಲ್ಲಿ ಮಾನಾದರಗಳು ಲಭಿಸುವವು

೩. ಮಿಥುನ

ದೈವಬಲದಿಂದ ವಂಚಿತರಾದ ನಿಮ್ಮ ಬಯಕೆಗಳು ಗಗನ ಕುಸುಮಗಳಂತಾಗಲಿವೆ. ಆಪ್ತವರ್ಗದವರಿಂದ ವಂಚಿತರಾದ ನೀವು ವಿಶೇಷತಃ ಮನೋರೋಗಕ್ಕೆ ಬಲಿಯಾಗುವಿರಿ. ವಿನಾಕಾರಣ ವಾಕ್ಕಲಹವುಂಟಾಗುವದು. ಉದ್ಯೋಗಿಗಳಿಗೆ ಅಧಿಕಾರಿಗಳ ಕಿರಿಕಿರಿ ಹೆಚ್ಚಲಿದೆ. ಕುಜನರ ಸಂಸರ್ಗದಿಂದಾಗಿ ವ್ಯರ್ಥ ನಷ್ಟ ಮತ್ತು ಜನಾಪವಾದಕ್ಕೆ ಸಿಲುಕಲಿರುವಿರಿ. ಆರ್ಥಿಕ ಬಿಕ್ಕಟ್ಟಿನಿಂದ ಸಂತಪ್ತರಾದ ನಿಮಗೆ ತಾ. 23, 26, 27 ಸ್ವಲ್ಪ ಉತ್ತಮವೆನಿಸುವವು.

೪ ಕರ್ಕಾಟ

ದೈವಪಾರುಷಗಳೆರಡೂ ನಿಮಗಿಂದು ಸಾಕಷ್ಟಿರುವುದರಿಂದ ನಿಮ್ಮ ಯಾವತ್ತೂ ಸಂಕಲ್ಪಗಳು ಅನಾಯಾಸದಿಂದ ಸಿದ್ಧಿಸಲಿವೆ. ನಿರೀಕ್ಷಿಸಿದುದಕ್ಕಿಂತಲೂ ಅಧಿಕವಾದ ಫಲವನ್ನು ಪಡೆವಿರಿ. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಎಂತಹ ಪ್ರಬಲನಾದ ಶತ್ರುವನ್ನೂ ಪರಾಭವಗೊಳಿಸಿ ವಿಜಯಶ್ರೀಯನ್ನು ಪಡೆಯಲು ಸಮರ್ಥರಾದ ನಿಮಗೆ ತಾ. 22, 23, 24, 25, 28 ಈ ದಿನಗಳು ನಿಮಗೆ ಸುಖಲಾಭಗಳನ್ನೀಯುವವು.

೫. ಸಿಂಹ

ನಿಮ್ಮ ಪ್ರಯತ್ನಗಳಿಂದು ನೀರಲ್ಲಿ ಗೈದ ಹೋಮದಂತೆ ವಿಫಲವಾಗಲಿವೆ. ಸ್ವಜನರೂ ಕೂಡ ಇಂದು ವಿರೋಧ ಪಕ್ಷವನ್ನು ಸೇರುವರು. ಆತನಿಂದ ನಿಮ್ಮ ಹೆಚ್ಚಿನ ಕಾರ್ಯಗಳು ಅರ್ಧದಲ್ಲೇ ನಿಲ್ಲಲಿವೆ. ಆರ್ಥಿಕ ಮುಗ್ಗಟ್ಟು ಗೃಹತಾಪತ್ರಯ ಉಷ್ಣಪಿತ್ತ ಸಂಬಂಧವಾದ ದೇಹಾಲಸ್ಯಗಳಿಂದ ಪೀಡಿತರಾದ ನಿಮಗೆ ತಾ. 24ರಿಂದ 27ರ ವರೆಗಿನ ದಿನಗಳು ಸ್ವಲ್ಪ ಸಹ್ಯವೆನಿಸುವವು.

೬. ಕನ್ಯಾ

'ಅಡಿಯ ಮುಂದಿಡೆ ಸ್ವರ್ಗ' ಎಂಬ ನಾಣ್ಣುಡಿಯಂತೆ ನೀವಿಂದು ಧೈರ್ಯದಿಂದ ಮುಂದೆ ಸಾಗಿರಿ. ನಿಮ್ಮ ಆಶಾಕಾಂಕ್ಷೆಗಳು ಯಾವ ತೆರನಾದ ಎಡರುತೊಡರುಗಳಿಲ್ಲದೆ ನಿರೀಕ್ಷಿಸಿದ ಗುರಿಯನ್ನು ಸೇರಲಿವೆ. ಜನತೆಯ ಸಹಕಾರವು ಸಾಕಷ್ಟಿದ್ದರೂ ರಾಜಕೀಯರಂಗದಲ್ಲಿ ಸ್ವಲ್ಪ ಬಿಕ್ಕಟ್ಟು ಕಾಣಸೀತು. ಆರೋಗ್ಯಕ್ಕೂ ಕೂಡ ಸ್ವಲ್ಪ ಧಕ್ಕೆಯಿದೆ. ವಾರಾಂತ್ಯದ 3 ದಿನಗಳು ತುಂಬ ಅನುಕೂಲವಾಗಿವೆ.

೭. ತುಲಾ

ದುರ್ದಿನಗಳು ದೂರವಾದವು. ನಿಮ್ಮ ಪರಿಶ್ರಮವಿಂದು ಸಾರ್ಥಕವಾಗಲಿದೆ. ಆದರೂ ನೀವೆಷ್ಟೇ ದುಡಿಯಿರಿ ದಿನಾಂತ್ಯದಲ್ಲಿ ಕೈ ಬರಿದಾಗಿಯೇ ನಿಲ್ಲುವದು. ಸಂಸಾರದಲ್ಲಾವ ಕೊರತೆಯಿಲ್ಲವಾದರೂ ಅರ್ಧಾಂಗಿಯು ಅನಾರೋಗ್ಯದಿಂದ ಬಳಲಲಿರುವಳು. ರಾಜಕೀಯದಲ್ಲಿ ವ್ಯರ್ಥ ಧನವ್ಯಯವಾಗಲಿದೆ. ವಿರೋಧಿಗಳ ಉಪಟಳವು ದಿನದಿಂದ ದಿನಕ್ಕೆ ಹೆಚ್ಚೀತು. ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾದ ನಿಮಗೆ ತಾ. 22, 28 ಅನುಕೂಲವಾಗಿರುವವು.

೮. ವೃಶ್ಚಿಕ

ನಿಶ್ಚಯಿಸಿದ ಕಾರ್ಯಗಳನ್ನು ಎಷ್ಟೇ ವಿಘ್ನ ವಿಡಂಬರಗಳು ಬಂದರೂ ಬಿಡದೆ ಸಾಧಿಸುವಿರಿ. ನಿಮ್ಮ ಪರಿಶ್ರಮವೆಂದೂ ವಿಫಲವಾಗದು. ಉದ್ಯೋಗದಲ್ಲಿ ಪ್ರಗತಿಯ ಚಿಹ್ನೆಗಳಿವೆ. ವಿದ್ಯೋಪಜೀವೀ ನೌಕರಿವರ್ಗದವರು ನಿರೀಕ್ಷೆಗಿಂತಲೂ ಅಧಿಕ ಫಲವನ್ನು ಪಡೆಯಲಿರುವರು. ವ್ಯಾಪಾರೀ ಜನತೆಗೆ ಅನಿರೀಕ್ಷಿತ ನಷ್ಟನಾಲಗಳಾಗುವ ಸಂಭವವಿದೆ. ವಿಷಯಾದಿಗಳ ಸೆಳವಿಗೆ ಸಿಲುಕಿ ಕೆಲವೊಂದಂಶ ಹಣವು ಅಪವ್ಯಯವಾಗಲಿದೆ. ವಾರಾದಿಯ 4 ದಿನಗಳು ಬಹಳ ಪ್ರಶಸ್ತವಾಗಿವೆ.

೯. ಧನು

ಸಾಹಸಿಗಳಾದ ನಿಮ್ಮ ಪರಿಶ್ರಮವು ತೃಣ ಫಲದಾಯಿಯಾಗಲಾರದಾದರೂ ನಿಮ್ಮ ದೈನಂದಿನ ಜೀವನಕ್ಕೆ ಏನೊಂದೂ ಕೊರತೆಯಾಗದು. ಎಂತಹ ದುಸ್ಸಾಧ್ಯವಾದ ಕಾರ್ಯವಾದರೂ ನಿಮಗದು ತೃಣಸಮವೆನಿಸುವದು. ನೀವೆಷ್ಟೇ ದುಡಿದರೂ ನಿಮ್ಮ ಮನಸ್ಸಿಗೆ ನೆಮ್ಮದಿಯಿರದು. ದೇಹಾಲಸ್ಯದಿಂದಾಗಿ ನೈಹಿಕವಾಗಿಯೂ ಸುಖ ಕಾಣಲಾರಿರಿ. ಶ್ರಮಜೀವಿಗಳಿಗೀ ಕಾಲವು ಸ್ವಲ್ಪ ಅನುಕೂಲವಾಗಿ ಪರಿಣಮಿಸೀತು. ತಾ. 24ರಿಂದ 27ರ ವರೆಗಿನ ದಿನಗಳು ಧನಸುಖಗಳನ್ನೀಯಲಿವೆ.

೧೦. ಮಕರ

ದಿನಗಳೆದಂತೆ ನಿಮ್ಮ ಸ್ಥಿತಿಯು ಸುಧಾರಿಸುತ್ತ ಬರುತ್ತದೆ. ಗುರುವಿನ ಪೂರ್ಣದೃಷ್ಟಿಯು ನಿಮ್ಮ ಮೇಲಿರುವುದರಿಂದ ನಿಮ್ಮ ಕಾರ್ಯಕಲಾಪಗಳಿಗೆ ಎಷ್ಟೇ ತೊಡಕು ತೊಂದರೆಗಳು ಬಂದರೂ ಉಪಾಯದಿಂದವುಗಳನ್ನು ಪಾರುಗಾಣುವಿರಿ. ಬಂಧುಮಿತ್ರರ ನೆರವಿನಿಂದಾಗಿ ದಿನಗಳನ್ನು ನಿರಾತಂಕವಾಗಿ ಕಳೆವಿರಿ. ಆದರಿಂದು ರಾಜಕೀಯದಲ್ಲಿ ಪ್ರತಿಕೂಲ ಫಲವು ಲಭಿಸೀತು. ಆದ ಕಾರಣ ಸಧ್ಯ ಆ ಭಾಗದಲ್ಲಿ ಮುಂದರಿಯದಿರಿ. ತಾ. 26, 27, 28 ಇದ್ದುದರಲ್ಲುತ್ತಮ.

೧೧. ಕುಂಭ

"ದೈವೇ ದುರ್ಬಲತಾಂಗತೇ ತೃಣಮಪಿ ಪ್ರಾಯೇಣ ವಜ್ರಾಯತೇ" ದುರ್ದೈವೀ ನರನಿಗೆ ಹುಲ್ಲುಕಡ್ಡಿಯೂ ಕೂಡ ವಜ್ರಾಯುಧವಾಗಿ ಪರಿಣಮಿಸುವದು. ಅಂತೆಯೇ ಇಂದು ನಿಮ್ಮ ಪರಿಸ್ಥಿತಿಯಾಗಿದೆ. ಕರ್ಕಾಟದ ರವಿ ಯೋರ್ವನೇ ಬಿಟ್ಟರೆ ಬೇರಾವ ಗ್ರಹವೂ ನಿಮಗನುಕೂಲವಾಗಿಲ್ಲವು. ಆದ ಕಾರಣ ನೀವಿಂದು ವಿಪತ್ಪರಂಪರೆಗಳನ್ನು ಎದುರಿಸಬೇಕಾಗಿ ಬರಲಿದೆ. ಜಾಗ್ರತರಾಗಿರಿ. ತಾ. 22, 28 ಇದ್ದುದರಲ್ಲುತ್ತಮ.

೧೨. ಮೀನ

ಏಳೂವರೆ ಶನಿಯು ವ್ಯಯದಲ್ಲಿದ್ದು ನಿಮ್ಮ ಧನಭಾಗ್ಯ ಸ್ಥಾನಗಳನ್ನು ಪೂರ್ಣ ದೃಷ್ಟಿಯಿಂದ ನೋಡುವುದರಿಂದ ಕೈಯಲ್ಲಿ ಕಾಸಿಲ್ಲದಂತೆ ಮಾಡುವನು. ಕಾಸು ಇಲ್ಲದ ನರ ಕಳ್ಳದೆ ಸಮನೆಂಬಂತೆ ಜನರಿಂದಲೂ ನೀವು ತಿರಸ್ಕಾರಗಳನ್ನು ಹೊಂದಲಿರುವಿರಿ. ಆರೋಗ್ಯಕ್ಕೆ ಹೆಚ್ಚಿನ ಹಾನಿಯಿದೆಯಾದರೂ ಆರ್ಥಿಕ ಬಿಕ್ಕಟ್ಟಿನಿಂದಾಗಿ ಮನಸ್ಸಿಗೆ ನೆಮ್ಮದಿಯಿಲ್ಲವು. ಸದಾ ಚಿಂತಾಕುಲಿತರಾದ ನಿಮಗೆ ತಾ. 24, 25 ಇದ್ದುದರಲ್ಲಿ ಉತ್ತಮವಾಗಿ ಕಾಣಲಿವೆ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

—ಸಾಧಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ಪೈಸೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಶ್ರೀನಿವಾಸ್ ಬ್ರದರ್ಸ್, ಪುತ್ತೂರಲ್ಲಿ ಪ್ಯೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಜುಲೈ ೨೯, ೬೭ [ಸಂಚಿಕೆ ೪೮



Phone No
ಫೋನ್ ನಂಬ್ರ: 226

NAVAYUGA

leading nationalist weekly

೧೦ ಪೈಸೆ

ಕಥಾ ಪ್ರಪಂಚ

ಕನ್ನಮ್ಮನ ಭ್ರಮೆ

ಮೂಲ: ಪದ್ಮಭೂಷಣ ಪ್ರೊ। ಎನ್. ಎಸ್. ಫಡ್ಕೆ.

ಅನು: ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್, ಕಣ್ವತೀರ್ಥ.

"ನಾನೇ ಸಾಯಬೇಕಿತ್ತು. ಅವನಲ್ಲ. ನನ್ನ ಸಹೋದರನಾದ ದಿಲೀಪನ ಬದಲು ನಾನು ಸಾಯುತ್ತಿದ್ದರೆ, ಪರಿಸ್ಥಿತಿಯು ಬಹು ಚೆನ್ನಾಗಿರುತ್ತಿತ್ತು." ಹೀಗೆ ನಾನು ಕನ್ನಡಿಯಲ್ಲಿ ನನ್ನ ಪ್ರತಿಬಿಂಬವನ್ನು ನೋಡುತ್ತಾ ಆಲೋಚಿಸಿದೆನು.

ಸಂಪೂರ್ಣ ಉಡುಪನ್ನು ಧರಿಸಿ ಕೈಯಲ್ಲಿ ಕೆಂಪು ಟೊಪ್ಪಿಯನ್ನು ಹಿಡಿದು ಕನ್ನಡಿಯ ಮುಂದೆ ನಿಂತುಕೊಂಡು ನಾನೂ, ನನ್ನ ಸಹೋದರನೂ ಅತ್ಯಂತವಾಗಿ ಒಂದೇರೀತಿ ಕಾಣುತ್ತಿದ್ದೇವೆಯೆಂದು ನಾನು ತಿಳಿದು ಕೊಂಡೆನು. ಆದರೂ ನಮ್ಮ ಜೀವನ ಕ್ರಮವು ಬೇರೆ ಬೇರೆಯಾಗಿತ್ತು. ನಾನೇ ಸಾಯುತ್ತಿದ್ದರೆ ಒಳ್ಳೆಯದಿತ್ತು. ಕೊನೆಗೆ ಅವನ ಮರಣವಾರ್ತೆಯನ್ನು ಖಚಿತವಾಗಿ ನಾನು ತಿಳಿಯದೆ ಇನ್ನೂ ಸ್ವಲ್ಪ ಸಮಯ ಅಜ್ಞಾನದಲ್ಲೇ ಇರುತ್ತಿದ್ದರೆ ಒಳ್ಳೆಯದಿತ್ತು.

ನಾನು ನಾಳೆ ಜಲಂಧರ್ ಕ್ಯಾಂಪನ್ನು ಬಿಟ್ಟು ವಿಮಾನದಲ್ಲಿ ಹೊರಡಲು ತಯಾರು ಮಾಡುತ್ತಿದ್ದದರಿಂದ ಉಲ್ಲಾಸ ಪೂರ್ವಕ ಮನೆಗೆ ಹೋಗಿ ಮುಟ್ಟಲು ಎದುರು ನೋಡುತ್ತಿದ್ದೆನು. ಅಲ್ಲಿ ನನ್ನ ಸಹೋದರನ ಹೆಂಡತಿಯಾದ ಕನ್ನಮ್ಮನನ್ನು ನೋಡಿ ಅವಳ ಉದ್ವಿಗ್ನ ಜೀವನಕ್ಕೆ ಸೂರ್ಯ ಪ್ರಭೆಯನ್ನೂ ನಗುವನ್ನೂ ತರಲು ಬಯಸುತ್ತಿದ್ದೆನು. ಅವಳನ್ನು ಮಾತನಾಡಿಸುವುದಕ್ಕೂ ನಗಾಡಿಸುವುದಕ್ಕೂ "ದೇವರು ಕುರುಡನಾಗಿಲ್ಲ. ನಿನ್ನ ಪಯಣಕ್ಕೆ ತಕ್ಕ ಫಲ ಸಿಗಲೇ ಬೇಕು, ದಿಲೀಪನು ಹಿಂದಿರುಗಿ ಬರಲೇಬೇಕು" ಎಂದು ಅವಳಿಗೆ ಹೇಳಲಿಕ್ಕೂ ಆತುರಪಡುತ್ತಿದ್ದೆನು.

ನಾನು ಈ ಸುಖ ಸ್ವಪ್ನವನ್ನು ಕಾಣುತ್ತಿದ್ದಾಗ ಈ ದಿನ ಬೆಳಿಗ್ಗೆ ಜಲಂಧರಕ್ಕೆ ಹೊಸತಾಗಿ ಬಂದ ಒಬ್ಬ ಸಿಖ್ ಆಫೀಸರನಿಂದ 'ನಿನ್ನ ಸಹೋದರನು ಐದು ವರ್ಷಗಳ ಮೊದಲೇ ಸತ್ತುಹೋದನು. ಅದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ'ವೆಂದು ನನಗೊಂದು ವಾರ್ತೆ ಸಿಕ್ಕಿತು. ಆ ಸಿಖ್ ಆಫೀಸರನೂ ನನ್ನ ಸಹೋದರನೊಂದಿಗೆ ಪ್ಲೂಸಿ ರಾಣೀ ರೆಜಿಮೆಂಟಿನಲ್ಲಿ ಇರುತ್ತಿದ್ದನು. ಗೊಳಹನೇ ಮೇ ಎರಡು ರಂಗೂನ್ ಪಟ್ಟಣವು ಬ್ರಿಟಿಷರ ಕೈಯೊಳಗೆ ಬಿದ್ದಾಗ ಅವರಿಬ್ಬರೂ ಗಾಯಗೊಂಡಿದ್ದರು. ಅವರಿಬ್ಬರನ್ನೂ ಆಸ್ಪತ್ರೆಗೆ ಸಾಗಿಸಲಾಗಿತ್ತು. ಅಲ್ಲಿ ನನ್ನ ಸಹೋದರನ ಶವವನ್ನು ದೂರಕ್ಕೆ ಎತ್ತಿಕೊಂಡು ಹೋಗುವುದನ್ನು ಕಣ್ಣಾರ ಕಂಡಿದ್ದನು.

ಒಂದು ವಿಮಾನವು ನನ್ನನ್ನು ಡಿಲ್ಲಿಗೆ ಕೊಂಡು ಹೋಗಿ ಅಲ್ಲಿಂದ ಬೊಂಬಾಯಿಗೆ ತಲುಪಿಸುವುದು. ಈಗ ನನಗೆ ನನ್ನ ಸಹೋದರನು ಸತ್ತವರಲ್ಲಿ ಸೇರಿರುತ್ತಾನೆಂದು ವಾರ್ತೆಯು ಸಿಕ್ಕಿದೆ. ನನಗೆ ನನ್ನ ಸ್ವಾಧೀನತೆಯೇ ತಪ್ಪಿಹೋಯಿತು. ನನ್ನ ರಜೆಯನ್ನು ರದ್ದುಪಡಿಸಿ ಮನೆಗೆ ಹೋಗುವುದನ್ನು ನಿಲ್ಲಿಸಬೇಕೆಂದು ನನಗೆ ಕಂಡಿತು. ಕನ್ನಮ್ಮನಿಗೆ ಈ ದುರಂತವಾದ ವಾರ್ತೆಯನ್ನು ಮುಟ್ಟಿಸಲು ನನಗೆ ಮನಸ್ಸಿರಲಿಲ್ಲ. ಆದರೂ ಬೇರೊಂದು ವಿಧವಾದ ಆಲೋಚನೆಗಳು ನನ್ನ ದುರವಸ್ಥೆಯನ್ನು ಹೋಗಲಾಡಿಸಿದವು. ಈ ವಾರ್ತೆಯನ್ನು ಅವಳಿಗೆ ತಿಳಿಸುವ ಅಗತ್ಯವಿಲ್ಲವೆಂದು ನಾನು ಆಲೋಚಿಸಿದೆನು. ಅದನ್ನು ನಾನು ನನ್ನೊಳಗೇ ಇಟ್ಟುಕೊಳ್ಳಬಹುದು. ನನ್ನನ್ನು ನೋಡಲು ಕನ್ನಮ್ಮನಿಗೆ ಸಂತೋಷವಾಗಬಹುದು, ಅವಳು ನನ್ನನ್ನು ಅಷ್ಟು ಪ್ರೀತಿಸುತ್ತಿದ್ದಳು. ಸರಿ. ಅದೇ ಒಳ್ಳೆಯದೆಂದು ನಾನು ತೀರ್ಮಾನಿಸಿದೆನು. ಆದರೂ ನನ್ನ ಸಹೋದರನ ಮರಣದ ವಿಷಯದಲ್ಲಿ ಖಚಿತವಾದ ಆಧಾರವನ್ನು ತಂದೊಡ್ಡಿದ ಈ ದುರದೃಷ್ಟಕ್ಕೆ ನಾನು ಬಹು ಗೋಳಾಡಿದೆನು. ಈ ರಹಸ್ಯವನ್ನು ಬಚ್ಚಿಟ್ಟು, ಏನೂ ತಿಳಿಯದವನಂತೆ ನಟಿಸುತ್ತಾ ಕನ್ನಮ್ಮನೊಡನೆ ಅವಳ ಮನೋರಥಸಾಮ್ರಾಜ್ಯದಲ್ಲಿ ನಾನೂ ಪಾಲುಗೊಳ್ಳುವವನಂತೆ ಉಲ್ಲಾಸದಿಂದ ಮಾತನಾಡುವುದು ನನಗೆ ನರಕಯಾತನೆಯಾಗುವುದು. ನಾನು ಉಡುಪು ಧರಿಸಿ ಟೊಪ್ಪಿಗೆಯನ್ನು ತೆಗೆದುಕೊಂಡು ತಲೆಗೂದಲನ್ನು ಎಡಗೈಯಿಂದ ಹಿಂದಕ್ಕೆ ಸವರಿ ಕನ್ನಡಿಯ ಮುಂದೆ ನಿಂತುಕೊಂಡಾಗ ನನ್ನ ಸಹೋದರನ ಬದಲು ನಾನೇ ಸಾಯುತ್ತಿದ್ದರೆ ಒಳ್ಳೆಯದಿತ್ತೆಂದು ನನಗೆ ಕಂಡಿತು.

"ಮೇಜರ್! ರೆಡಿಯಾಗಿದ್ದೀರಾ?" ಎಂದು ಹೊರಗಿನಿಂದ ಒಂದು ಧ್ವನಿಯು ಕೇಳಿಸಿತು. "ಹೌದು, ರೆಡೀ" ಎಂದು ಉತ್ತರಕೊಟ್ಟು ಡ್ರೆಸ್ಸಿಂಗ್ ಟೇಬಲನ್ನು ಬಿಟ್ಟು ಹೊರಗೆ ಬಂದೆನು. "ಬನ್ನಿರಿ" ಎಂದು ನನ್ನ ಸ್ನೇಹಿತರನ್ನು ಕಂಡು ಹೇಳಿದೆನು. ನಾವು ಜಲಂಧರದಿಂದ ಟ್ರಾನ್ಸ್‌ಫರ್ ಪಡೆದ ಬ್ರಿಗೇಡಿಯರ್ ಹುಸ್ಸೇನರ ಗೌರವಾರ್ಥವಾಗಿ ಜರಗುವ ಒಂದು ವಿದಾಯದ ಡಿನ್ನರ್ ಪಾರ್ಟಿಗೆ ಹೋಗಬೇಕಿತ್ತು.

ನಮ್ಮ ಕಾಲ ಸಪ್ಪಳವು ರಾತ್ರಿಯ ನೀರವತೆಯನ್ನು ಭೇದಿಸಿತು. ದೂರದ ಶ್ರೀನಗರದಲ್ಲಿ ಪರ್ವತದ ಕಣಿವೆಯು ಆಚೆಗೆ ವಸಂತ ಋತುವು ತನ್ನ ಫಲ ಪುಷ್ಪಗಳ ಸಮೃದ್ಧಿಯನ್ನೂ ಸುವಾಸನೆಯನ್ನೂ ವಿಸ್ತರಿಸಿ ಪೂರ್ಣವಾಗಿ ವಿಕಾಸಗೊಂಡಿರಬೇಕು. ಆದರೆ ಇಲ್ಲಿಯೂ ಆದರ ಮಹತ್ವದ ಕುರುಹುಗಳು ಕಂಡುಬರುತ್ತಿದ್ದವು. ವಸಂತ ಮಾಸವು ಹಿಮಾಚ್ಛಾದಿತ ಶಿಖರಗಳನ್ನು ದಾಟಿಬಂದು ತನ್ನ ಪದ ಚಿಹ್ನೆಗಳನ್ನು ಇಟ್ಟುಹೋಗಿತ್ತು. ಸಾಯಂಕಾಲದ ಮಂದಮಾರುತವು ಬಿಸಿಲಿನಿಂದ ಕಾದ ಭೂಮಿಗೆ ಹಿತಕರವಾಗಿ ಬೀಸುತ್ತಾ ಮೃದುವಾಗಿ ಬುಸುಗುಟ್ಟುತ್ತಿತ್ತು. ಚಂದ್ರನ ಬೆಳ್ಳಿಯ ಬೆಳಕು ದಟ್ಟವಾದ ಮರಗಳನ್ನೂ, ಕೆಳುವಾಗಿ ಉದ್ದವಾಗಿರುವ ಗಿಡಗಳನ್ನೂ ಮುಚ್ಚಿಕೊಂಡಿತ್ತು. ರಸ್ತೆಯ ಇಕ್ಕೆಡೆಗಳಲ್ಲೂ ದೂರದಲ್ಲಿ ಸಣ್ಣ ಗಿಡಗಳ "ದ್ವೀಪ"ಗಳೂ ಹುಲ್ಲಿನ ಪೊದರುಗಳೂ ಇದ್ದವು. ಗಾಳಿಯು ಹೂಗಳಿಂದ ಪರಿಮಳಿತವಾಗಿತ್ತು. ಹೂವಿನ ಪರಿಮಳದ ಒಂದು ಲಹರಿಯು ನಮ್ಮನ್ನು ಹಾದು ಹೋಗುತ್ತಿದ್ದಾಗ ನಿಶಾದೇವಿಯು ತನ್ನ ಜಡೆಯಲ್ಲಿ ಮುಡಿದುಕೊಂಡ ಕುಸುಮ ಮಾಲೆಯ ಒಂದು ಅಪೂರ್ವ ಸುಗಂಧವೋ ಎಂದು ನಾವು ಆಶ್ಚರ್ಯಪಡುವಂತಿತ್ತು.

ನನ್ನ ಸಂಗಾತಿಯು ಸಂತೋಷದಿಂದ ಸಿಳ್ಳು ಹಾಕ ತೊಡಗಿದನು. ಅವನಂತೆಯೇ ನಾನೂ ಹಗುರವಾಗಿ ಹೆಜ್ಜೆಯಿಡುತ್ತಿದ್ದೆನು. ನಾವು ಹೋಗುತ್ತಿರುವ ಕಟ್ಟಡದ ಮೇಲೆ ಬಿದ್ದ ಶುಭ್ರವಾದ ಪ್ರಭೆಯನ್ನು ನಾನು ನೋಡಿದೆನು. ನನ್ನ ಹೃದಯದಲ್ಲಿ ಅಂಧಕಾರವಿತ್ತು. ನನ್ನ ಮನಸ್ಸು ಭಾರವಾದ ಹೆಜ್ಜೆಗಳಿಂದ ಹಿಂದಕ್ಕೆ ಸರಿಯುತ್ತಲೂ, "ನನಗೆ ಇದು—ಇದು—ಮತ್ತು ಇದು ನೆನಪಿದೆಯೇ' ಎಂದು ಕೇಳುವಂತೆ ಗತಕಾಲದ ಘಟನೆಗಳನ್ನು ಎದುರಿಗೆ ತರುತ್ತಲೂ ಇತ್ತು.

ನಿಜ, ನಾನು ಎಲ್ಲವನ್ನೂ ಸ್ಮರಿಸುತ್ತಿದ್ದೆನು.

ನಾವಿಬ್ಬರು ಮೆಂಬರರಾಗಿದ್ದ ಒಂದು ಕ್ರಿಕೇಟ್ ಟೀಮಿನ ಗೌರವಾರ್ಥವಾಗಿ ನಮ್ಮ ಕಾಲೇಜಿನ ಪ್ರಿನ್ಸಿಪಾಲರು ಏರ್ಪಡಿಸಿದ ಒಂದು ಪಾರ್ಟಿಯಲ್ಲಿ ಕನ್ನಮ್ಮನನ್ನು ನಾನು ಮೊದಲಾಗಿ ನೋಡಿದೆನು. ನಾವು ಸಭಾ ಮಂದಿರದಲ್ಲಿ ಭೋಜನ ಸಮಾರಂಭದ ಮುಂದೆ ಅಭ್ಯಾಗತರೊಡನೆ ಮುಖ್ಯವಾಗಿ ಕ್ರಿಕೇಟಿನ ಕುರಿತು ಮಾತನಾಡುತ್ತಿದ್ದಾಗ ನಮ್ಮ ಪ್ರಿನ್ಸಿಪಾಲರು ವಯಸ್ಸಾದ ಒಬ್ಬ ಮಹನೀಯನನ್ನು ನನ್ನ ಬಳಿಗೆ ಕರೆತಂದು ಹೇಳಿದರು:—"ಇವರು ಎಕ್ಸಿಕ್ಯೂಟಿವ್ ಇಂಜಿನೀಯರರಾದ ಮಿಸ್ಟರ್ ಪ್ರೇಮನಾಥರು, ನನ್ನ ಸ್ನೇಹಿತರು. ಇವರೊಡ ಮಾತನಾಡು. ನಿನ್ನನ್ನು ಕಾಣಲು ಇವರು ಬಹು ತವಕಗೊಂಡಿದ್ದಾರೆ."

ನಾನು ತಲೆ ತಗ್ಗಿಸಿ ಕೈಮುಗಿದೆನು. "ಬಹು ಸಂತೋಷ"ವೆಂದು ನಾನು ಮೆಲ್ಲಗೆ ಹೇಳಿದೆನು. ಆ ಮೇಲೆ ಅವರ ಆರೋಗ್ಯದ ಕುರಿತು ಅವರನ್ನು ಅಭಿನಂದಿಸುವ ಸಲುವಾಗಿ 'ಸ್ವಾಮಿ! ತಾವು ತಮ್ಮ ಎಳೇ ಪ್ರಾಯದಲ್ಲಿ ಬಹಳ ಕ್ರಿಕೇಟು ಆಡಿರಬೇಕು" ಎಂದು ಹೇಳಿದೆನು.

'ನಾನು ಆಡಿದ್ದೇನೆಂದು ನೀನು ಶಪಥ ಮಾಡಿ ಹೇಳುತ್ತಿ" ಎಂದು ಅವರು ಗಟ್ಟಿಯಾಗಿ ನಕ್ಕರು. ಆದರೆ ನಾನು ಅವರನ್ನು ನೋಡುತ್ತಿರಲಿಲ್ಲ. ಮತ್ತೊಂದು ಮುಖವು ನನ್ನ ಕಣ್ಣನ್ನು ಹಿಡಿದು ಬಿಟ್ಟಿತು. ಅವರ ಹಿಂದುಗಡೆಯಿದ್ದ ಒಂದು ಸಣ್ಣ ಹುಡುಗಿಯ ಮುಖ.

"ಮುಂದೆ ಬಾ! ಏಕೆ ನೀನು ಹಿಂದೆಯೇ ನಿಂತಿರುತ್ತೀ?' ಎಂದು ಪ್ರಿನ್ಸಿಪಾಲರು ಹೇಳುವುದು ನನಗೆ ಕೇಳಿತು.

ಆ ಮೇಲೆ ಅವರು ನನ್ನ ಕಡೆ ತಿರುಗಿ ಹೇಳಿದರು: — "ಇವಳು ತಂದೆಗಿಂತಲೂ ಹೆಚ್ಚಾಗಿ ನಿನ್ನನ್ನು ಕಾಣಲು ತವಕಗೊಂಡಿದ್ದಾಳೆ'. ಅವಳು ಮುಂದೆ ಹೆಜ್ಜೆ ಇಟ್ಟಳು. ನಾನು ಕೈಮುಗಿದು 'ನಮಸ್ತೇ' ಎಂದು ಹೇಳುತ್ತಿದ್ದೆ. ಆದರೆ ಒಂದು ಅಂತರಿಕ ಪ್ರೇರಣೆಯು ಹೀಗೆ ಗೌರವಪೂರ್ವಕವಾಗಿ ದೂರವಾಗಿರುವುದು ಬೇಡವೆಂದು ನನಗೆ ಹೇಳಿತು. 'ನೀನು ಹೇಗಿದ್ದಿ?" ಎಂದು ನಾನು ಕೇಳಿ ನನ್ನ ಕೈಯನ್ನು ಕೊಟ್ಟೆನು. ಅವಳಿಗೆ ಆಶ್ಚರ್ಯವೆನಿಸಿತೇ? ಬಹುಶಃ ಹಾಗಿರಬೇಕು. ಆದರೆ ಅವಳ ಅಧರಬಿಂಬದಲ್ಲಿ ಒಂದು ಮಧುರವಾದ ಮಂದಹಾಸವು ಮೂಡಿ ಬಂತು. ಮರುಕ್ಷಣದಲ್ಲಿ ಅವಳ ಬೆರಳುಗಳ ಕೋಮಲ ಸ್ಪರ್ಶವನ್ನು ನಾನು ಅನುಭವಿಸಿದೆನು.

ನಾನು ಒಂದು ವಾರ ಹಾಗೆಯೇ ಬಿಟ್ಟೆನು. ಆ ಮೇಲೆ ಅವಳ ಮನೆಗೆ ಹೋದೆನು. ನನ್ನನ್ನು ಕಂಡು ಅವಳಿಗೆ ಆಶ್ಚರ್ಯವಾಯಿತೆಂದು ಕಂಡು ಬಂತು. "ನೀನು ಒಬ್ಬನೇ ಬಂದಿದ್ದೀಯಾ?" ಎಂದು ಅವಳು ಮೆಲ್ಲಗೆ ಹೇಳಿದಳು. ಅವಳ ಧ್ವನಿಯು ನನ್ನನ್ನು ಬೆರಗುಗೊಳಿಸಿತು. ನನ್ನೊಡನೆ ನನ್ನ ಸಹೋದರನನ್ನು ಕಾಣದಿದ್ದುದರಿಂದ ಅವಳು ಬೇಜಾರಗೊಂಡಳೋ ಅಥವಾ ನಾನೊಬ್ಬನೇ ಒಂದು ಹುಡುಗಿಯಲ್ಲಿಗೆ ಬಂದುದು ಉಚಿತವಲ್ಲವೆಂದು ತಿಳಿದಳೋ ನನಗೆ ನಿರ್ಣಯಿಸಲಾಗಲಿಲ್ಲ. ನಾವಿಬ್ಬರು ಸಹೋದರರು ನಮ್ಮಲ್ಲಿ ಸ್ತ್ರೀ ಮೋಹವಿಲ್ಲದುದಕ್ಕಾಗಿ ಪ್ರಸಿದ್ಧರಾಗಿದ್ದೆವು, ಅಥವಾ ಅಪಖ್ಯಾತಿ ಪಡೆದಿದ್ದೆವೆನ್ನುವುದು ಲೇಸು. ನಮಗೆ ಶುದ್ಧ ಬ್ರಹ್ಮಚಾರಿಗಳೆಂದು ಅಡ್ಡ ಹೆಸರು ಬಂದಿತ್ತು. ಈ ಮೊದಲು ಎಂದೂ ನಾನು ಒಂದು ಹುಡುಗಿಯ ಕಡೆಗೆ ಧಾವಿಸಿ ಹೋದವನಲ್ಲ. ಕನ್ನಮ್ಮನನ್ನು ಕಾಣಬೇಕೆಂಬ ಬಯಕೆ ನನಗೆ ಹೇಗೆ ಉಂಟಾಯಿತೆಂದು ನನಗೇ ಆಶ್ಚರ್ಯವಾಯಿತು. ನಾನು ಒಂದು ಇಡಿ ವಾರ ಈ ಆಲೋಚನೆಯಿಂದ ಹೋರಾಡಿದೆನು. ಕನ್ನಮ್ಮನನ್ನ ಸಂದರ್ಶಿಸಲು ನಾನು ಹೋಗಲಿಕ್ಕಿದ್ದೇನೆ ಎಂಬ ಸಂಗತಿಯನ್ನು ದಿಲೀಪನಿಗೆ ಕೂಡ ಅವನು ನನ್ನನ್ನು ಪರಿಹಾಸ್ಯ ಮಾಡಿಯಾನೆಂಬ ಭಯದಿಂದ ತಿಳಿಸಿರಲಿಲ್ಲ. ಈಗ ಅವಳು ಕೂಡ 'ನೀನೊಬ್ಬನೇ ಬಂದಿದ್ದೀಯಾ' ಎಂದು ಕೇಳಿದಳು. ನಾನು ಹೊರಟು ಹೋಗುವ ಆಲೋಚನೆ ಮಾಡಿದೆನು. ಆದರೆ ಅವಳು ನನ್ನ ಹಿಂದುಗಡೆಯಿಂದ ಬಾಗಿಲು ಮುಚ್ಚಿದಳು. 'ನೀನು ಬಂದದ್ದು ಸಂತೋಷವಾಯಿತು' ಎಂದು ಅವಳು ಹೇಳಿದಳು. ಜಮಖಾನೆಯ ಮೇಲೆ ತನ್ನ ಚಪ್ಪಲಿಗಳನ್ನು ಎಳೆದುಕೊಂಡು ಅವಳು ಕಿಟಕಿಯ ಕಡೆಗೆ ಹೋದಳು. ನಾನು ಅವಳನ್ನು ಹಿಂಬಾಲಿಸಿದೆನು. ಅವಳ ಸಣ್ಣ ಬಿಳಿಯ ಪಾದಗಳು ಕೆಂಪು ಸೀರೆಯ ಅಂಚಿನ ಕೆ

(ಹದಿನೈದನೇ ಪುಟ ನೋಡಿರಿ)



Phone No. 226.

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2 00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಅಥವಾ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣ ಕಾರ್ಯವು ಸಾಮಾನ್ಯವಾಗಿ ಮುಂಗಡವಾಗಿಯೇ ಮುಗಿಯುವುದರಿಂದ ವಾರ್ತೆ, ನೋಟೀಸ್ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಭಾರತದ ಖನಿಜ ಸಂಪತ್ತು.

ಕೆಳಗಡೆ—
ಎಡ: ಮ್ಯಾಂಗನೀಸ್ ಅದುರು ನಿರ್ಯಾತಕ್ಕೆ ಸಿದ್ಧವಾಗಿದೆ.
ಬಲ: ಗಣಿಯಲ್ಲಿ ಕಾರ್ಮಿಕರು ಇದ್ದಲಿ ಅಗೆಯುತ್ತಿದ್ದಾರೆ.

ಮೇಲ್ಗಡೆ—
ಎಡ: ನೈವೇಲಿಯ ಕಾರಖಾನೆಯಲ್ಲಿನ ಎಕ್ಸ್‌ಕವೇಟರ್.
ಬಲ: ಕಂದು ಕಲ್ಲಿದ್ದಲಿನ ಒಂದು ತುಂಡು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೪೮	೨೯—೭—೧೯೬೫	No. 48

ವಚನ ಸುಧೆ

ಕಷ್ಟಂ ಖಲು ಮೂರ್ಖತ್ವಂ
ಕಷ್ಟಂ ಖಲು ಯೌವನೇಷು ದಾರಿದ್ರ್ಯಂ
ಕಷ್ಟಾದಪಿ ಕಷ್ಟತರಂ
ಪರಗೃಹ ವಾಸಃ ಪರಾನ್ನಂ ಚ॥

O ಮೂರ್ಖನಾಗಿರುವುದು, ಯೌವನದಲ್ಲಿ ದರಿದ್ರನಾಗಿರುವುದು ಕಷ್ಟ. ಇತರರ ಮನೆಯಲ್ಲಿರುವುದೂ ಪರರನ್ನ ಪಾನ್ನಾಶ್ರಯಿಸಿರುವುದೂ ಕಷ್ಟತರ.

OO ಮನುಷ್ಯನು ಮೂರ್ಖನೆನಿಸಬಾರದು. ಹರೆಯದ ವೇಳೆ ನ್ಯಾಯರಿದು ದುಡಿದುಣ್ಣಬೇಕು; ಯಾವುದೇ ಸಂದರ್ಭದಲ್ಲಿ ಬೇರೆಯವರನ್ನೇ ಆಶ್ರಯಿಸಿರುವುದೂ ಅನ್ನಾನ್ನ ಗತಿಕನಾಗುವುದೂ ಮಾನಕ್ಕೆ ಕುಂದು. ಅಂತಹ ದುಸ್ಥಿತಿಗಳಿಗೆಂದೂ ಒಳಗಾಗದಂತೆ ಎಚ್ಚರಿಕೆ ವಹಿಸಬೇಕು.

ಬೆಂಗಳೂರು ಘಟನೆಗಳು

ಬೆಂಗಳೂರಿನ ಎ.ಐ.ಸಿ.ಸಿ. ಅಧಿವೇಶನದ ವೇಳೆ ನಡೆದ ಕೆಲವು ಘಟನೆಗಳು ಅನಪೇಕ್ಷಣೀಯ ಮತ್ತು ಉದ್ರೇಕಕಾರಕವೆಂದು ಹೇಳಬಹುದಾದರೂ ಕನ್ನಡಿಗರ ಆಂತರ್ಯವನ್ನು ಕಾಂಗ್ರೆಸ್ ನಾಯಕರ ಮನಸ್ಸಿಗೆ ಮುಟ್ಟಿಸುವಲ್ಲಿ ಅವು ಯಶಸ್ವಿಯಾದವೆಂದೇ ಹೇಳಬೇಕು. ಬೆಂಗಳೂರಿನಲ್ಲಿಯೇ ಗೋವೆಯ ಭವಿಷ್ಯವನ್ನು ನಿರ್ಧರಿಸಬೇಕೆಂಬ ಮಹಾರಾಷ್ಟ್ರೀಯರ ಹಾಗೂ ಗೋವಾ ಮುಖ್ಯಮಂತ್ರಿ ಬಾಂದೋಡಕರರ ಹೇರಾಸೆಗೆ ತಣ್ಣೀರು ಎರಚಲಾಯಿತು. ಈ ಸಂಬಂಧದಲ್ಲಿ ಸೂಕ್ತ ನಿರ್ಣಯವನ್ನು ಮುಂದಕ್ಕೆ ಕೈಗೊಳ್ಳಲಾಗುವುದೆಂದು ವರದಿ ಹೊರಟಿರುವುದು ಮಾತ್ರವಲ್ಲ, ಇದಕ್ಕಾಗಿ ಸೇರುವ ಸಭೆಯ ದಿನವನ್ನು ಈಗಲೇ ಗೊತ್ತು ಮಾಡದಿರುವುದು ಉಲ್ಲೇಖನೀಯ.

ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಹೇಳುವಂತೆ ಪಾರ್ಲಿಮೆಂಟರಿ ಬೋರ್ಡಿನ ಸಭೆಯು ಶಾಸ್ತ್ರಿಯವರಿಗೆ ಬಾಂದೋಡಕರರೊಡನೆ ವಿಚಾರ ವಿನಿಮಯ ಮಾಡಲು ನೀಡಿದ ಅಧಿಕಾರದ ಬಗ್ಗೆ ಅವರಿಗೇನೂ ಮೊದಲಿಗೆ ತಿಳಿದಿಲ್ಲ; ಏಕೆಂದರೆ, ಅವರು ಆ ವೇಳೆಯಲ್ಲಿ ಸಂಚಾರ ಮಾಡುತ್ತಿದ್ದರು. ಆದರೂ ಸಭೆಯ ನಿರ್ಧಾರವನ್ನು ಅವರು ಅಧ್ಯಯನ ಮಾಡಬೇಕಾಗಿತ್ತು. ಅಥವಾ ಬೆಂಗಳೂರಿನಲ್ಲಿ ಒದಗಿ ಬಂದ ಗಂಡಾಂತರ ಪರಿಸ್ಥಿತಿಯಲ್ಲಿ ಯಾವುದೇ ಹೇಳಿಕೆಯನ್ನು ನೀಡುವುದು ಕಷ್ಟಕ್ಕೆ ಕಾರಣವಾಗಬಹುದೆಂದು ಅವರು ಹೆದರಿದರೋ ಏನೋ! ಅಷ್ಟು ಮಾತ್ರವಲ್ಲದೆ ಇದೇ ವರ್ಷ ನಡೆಯಲಿರುವ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಕಾಮರಾಜರು ಒಬ್ಬ ಹುರಿಯಾಳಾಗುವ ಲಕ್ಷಣಗಳು ಅಧಿಕವಾಗುವುದರಿಂದ, ತನ್ನ ಪ್ರಬಲ ಸಮರ್ಥಕರಾದ ನಿಜಲಿಂಗಪ್ಪನವರ ಮನಸ್ಸನ್ನು ನೋಯಿಸಲು ಅವರು ಒಪ್ಪದೆ ಹೋಗಿದ್ದರೂ ಇರಬಹುದು. ಅದೇನೇ ಇರಲಿ, ಕಾಂಗ್ರೆಸ್ಸಿನ ಇತಿಹಾಸದಲ್ಲಿಯೇ ಪೋಲೀಸು ಬಂದೋಬಸ್ತಿನಲ್ಲಿ ಅಧಿವೇಶನ ನಡೆಸಿದ ಪ್ರಥಮ ಗೌರವ ಬೆಂಗಳೂರಿಗೆ ಸಲ್ಲಬೇಕು. ಇದರೊಡನೆ ತಮ್ಮ ಕೂಗನ್ನು ದಿಲ್ಲಿಯ ನಾಯಕರ ಕಿವಿಗಳಿಗೆ ಮುಟ್ಟಿಸುವ ಶಕ್ತಿ, ಅದು ಪುರೋಗಾಮಿಯೇ ಆಗಬಹುದು, ಕನ್ನಡಿಗರಿಗೆ ಇದೆ ಎಂಬುದೂ ವ್ಯಕ್ತವಾಯಿತು. ಕನ್ನಡದ ಕಾಂಗ್ರೆಸ್ ನಾಯಕರು ಮೊದಲಿನಿಂದಲೂ ತಮ್ಮ ಜನತೆಯ ಅಭಿಪ್ರಾಯವನ್ನು ಮನ್ನಿಸುತ್ತಲೇ ಬಂದಿದ್ದಾರೆ, ಗೋವೆಯ ವಿಷಯದಲ್ಲಿ. ದಿವಂಗತ ಪ್ರಧಾನಿ ನೆಹರುರವರು ಹತ್ತು ವರ್ಷಗಳ ಕಾಲ ಗೋವೆಯು ಕೇಂದ್ರಾಧೀನ ಪ್ರದೇಶವಾಗಿಯೇ ಉಳಿಯಬೇಕೆಂದು ಆ ರೀತಿಯಲ್ಲಿ ಗೋವಾ ಜನತೆಗೆ ಭರವಸೆಯಿತ್ತಿದ್ದರು. ಆ ಅವಧಿಯಲ್ಲಿ ಇದೀಗ ನಾಲ್ಕು ವರ್ಷಗಳು ಕಳೆದುವು. ಉಳಿದಿರುವುದು ಬರಿಯ ಆರು ವರ್ಷಗಳು. ಕಳೆದ ನಾಲ್ಕು ವರ್ಷಗಳಲ್ಲಿ ಗೋವೆಯು ಪ್ರತ್ಯೇಕವಾಗಿದ್ದು ಉನ್ನತಿಯ ಪಥದಲ್ಲಿ ಭ್ರಮಣ ಮಾಡುತ್ತಿದೆ. ಹಾಗಿರುವಾಗ, ಮಹಾರಾಷ್ಟ್ರೀಯರಿಗಾಗಲೀ, ಕೇಂದ್ರಕ್ಕಾಗಲೀ ಚಿಂತೆಯೇಕೆ? ನೆಹರು ಆಶ್ವಾಸನವು ಬರಿಯ ವ್ಯಕ್ತಿ ಸಂಬಂಧಿತವಾಗಿರುವುದಿಲ್ಲ. ಕಾಂಗ್ರೆಸ್ಸು ಅದೇ ಅಭಿಪ್ರಾಯಕ್ಕೆ ಒಂದಕ್ಕಿಂತ ಹೆಚ್ಚು ಬಾರಿ ಸಮ್ಮತಿಯ ಮುದ್ರೆಯೊತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ತಮ್ಮ ನಿರ್ಣಯವನ್ನು ಬದಲಾಯಿಸುವ ಅಗತ್ಯ ಕೇಂದ್ರ ಸರಕಾರಕ್ಕಾಗಲೀ ಕಾಂಗ್ರೆಸ್ ವರಿಷ್ಠರಿಗಾಗಲೀ ಏನು ಬಂತು? ಮಹಾರಾಷ್ಟ್ರದಲ್ಲಿ ಸಂರಕ್ಷಣ ಮಂತ್ರಿ ಚವನರ ಪ್ರಭಾವ ಹೆಚ್ಚಿರುವುದರಿಂದ, ಅವರು ಮರಾಠಿಗರಿಗೆ (ಅ)ವ್ಯಕ್ತ ಆಶ್ವಾಸನೆ ನೀಡಿರುವುದರಿಂದ ಅವರ ಬಲವಂತದಿಂದ ಇಂತಹ ಹೊಸ ಸಂಪ್ರದಾಯವನ್ನು ತೊಡಗುವುದಾದರೆ, ಅದು ಕರ್ನಾಟಕದ ದುರ್ದೈವ. ಕೇಂದ್ರದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವವರು ಯಾರೂ ಹುದ್ದೆಯಲ್ಲಿಲ್ಲ; ಅಲ್ಲಿ ಕನ್ನಡದ ಬಗ್ಗೆ ಆಸ್ಥೆ ವಹಿಸುವವರೂ ಯಾರೂ ಇಲ್ಲ. ಒಂದಲ್ಲ, ಹಲವು ರಂಗಗಳಲ್ಲಿ ಕನ್ನಡಕ್ಕೆ ಅನ್ಯಾಯವಾಗುತ್ತಲೇ ಇದೆ. ಗೋವೆಯ ಸಂಬಂಧದಲ್ಲಿಯೂ ತನ್ನ ನಿರ್ಧಾರ ಬದಲಾಯಿಸುವ ಧೋರಣೆ ಕಾಂಗ್ರೆಸ್ಸು ವಹಿಸಿದಲ್ಲಿ, ಕನ್ನಡಿಗರಿಗೆ ದೊಡ್ಡ ಅಪಮಾನ; ಅದನ್ನು ಯಾವ ರೀತಿಯಿಂದಲೂ ತೊಳೆಯುವುದು ಅಸಾಧ್ಯ.

ಗೋವೆಯ ಬಗೆಗೆ ಕನ್ನಡಿಗರ ನಿಲುವನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಅದು ಹತ್ತು ವರ್ಷಗಳ ನಂತರ ಕರ್ನಾಟಕದಲ್ಲಿಯೇ ವಿಲೀನಗೊಳ್ಳಬೇಕೆಂದು ಅವರು ಹೇಳುವುದಿಲ್ಲ. ಆ ಸಮಯ ಬಂದಾಗ ತಮ್ಮ ಭವಿಷ್ಯವನ್ನು ಗೋಮಾಂತಕರೇ ನಿರ್ಧರಿಸಬೇಕೆಂಬುದು ಅವರ ಸ್ಪಷ್ಟಾಭಿಪ್ರಾಯ. ಇದರಲ್ಲಿ ಎಳ್ಳಿನಷ್ಟಾದರೂ ಸ್ವಾರ್ಥವಿಲ್ಲ. ಗೋವೆಯ ಜನತೆಯೂ ಇದನ್ನು ಅನುಮೋದಿಸುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ ಕಾಂಗ್ರೆಸ್ಸು ನಡೆದರೆ, ಕರ್ನಾಟಕದಲ್ಲಿ ಕಾಂಗ್ರೆಸ್ಸಿನ ಬಗ್ಗೆ, ಅದರ ನಿಲುವಿನ ಬಗ್ಗೆ ಸಂದೇಹ ಪ್ರವೃತ್ತಿ ಹೆಚ್ಚುವುದು; ತತ್ಕಾರಣ ಅದರ ಶಕ್ತಿ ಹ್ರಾಸವಾಗುವುದು. ಗುಂಪುಗಾರಿಕೆಯ ಕಾರಣದಿಂದ ಕಾಂಗ್ರೆಸ್ಸು ಕ್ಷೀಣಿಸುತ್ತಿರುವುದರೊಡನೆ ಇದೂ ನಾಶಕ್ಕೆ ಕಾರಣವಾಗಬಹುದು. ಮಹಾರಾಷ್ಟ್ರೀಯರೂ ಈ ಬಗ್ಗೆ ತಿಳುವಳಿಕೆಯಿಂದ ನಡೆದುಕೊಳ್ಳಬೇಕು. ಕಾಂಗ್ರೆಸ್ ಪಕ್ಷದ ನೀತಿಯಲ್ಲಿ ದೃಢ ನಿಲುವು ತಳೆಯುವಲ್ಲಿ ಅವರೂ ಸಹಾಯ ಮಾಡಬೇಕು. ಅವಸರದ, ಅಸ್ಥಿರವಾದ ನೀತಿ-ನಡಾವಳಿಗಳಿಂದ ಮೂಲಕ್ಕೆ ಏಟು ಬೀಳುವಂತಾಗಬಾರದು. ಭಾರತದ ಐಕ್ಯವು ಎಲ್ಲ ಭಾರತೀಯರ ಕರ್ತವ್ಯ. ಕನ್ನಡಿಗರನ್ನು ಎದುರು ಹಾಕಿಕೊಂಡು, ದ್ವೇಷವನ್ನು ಬೆಳೆಯಿಸಿ ತನ್ನ ಹಠವನ್ನು ಸಾಧಿಸುವುದು ಎಂದಿಗೂ ಕಾಂಗ್ರೆಸ್ಸಿಗೂ ಒಳ್ಳೆಯದಲ್ಲ. ಹತ್ತು ವರ್ಷಗಳ ಅವಧಿ ಮುಗಿದ ಮೇಲೆ ಇಡಿಯ ಪ್ರಶ್ನೆಯನ್ನು ಪುನರ್ವಿಮರ್ಶಿಸುವ ಅವಕಾಶ ತಾನಾಗಿಯೇ ಬರುವುದರಿಂದ ತಮ್ಮ ಶಕ್ತಿಯನ್ನು ವ್ಯರ್ಥ ಹಾಳು ಮಾಡುವಂತೆ ಯಾರೂ ಬೊಬ್ಬಾಟವೆಬ್ಬಿಸಬಾರದು. ನಾಯಕ ಮಣಿಗಳು ಬೆಂಗಳೂರು ಘಟನೆಗಳಿಂದ ಪಾಠ ಕಲಿಯಬೇಕು.

ಇದು ಭೂಷಣವಲ್ಲ

ಕಲ್ಲಿದ್ದಲು ಉದ್ಯಮವನ್ನು ಬೆಳೆಸುವ ಸಲುವಾಗಿ ನಾಲ್ಕು ವರ್ಷಗಳೊಳಗೆ ಬಳಸುವ ಶರ್ತದ ಮೇಲೆ ಜಾಗತಿಕ ಬ್ಯಾಂಕು ಭಾರತಕ್ಕೆ ನೀಡಿದ್ದ ೧೭.೬೭ ಕೋಟಿ ರೂಪಾಯಿಗಳ ಸಾಲದಲ್ಲಿ ಭಾರತವು ಸು

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ

'ನಾವು ಮಾಡಿದ್ದು ಸರಿಯೇ ಆಯ್ತು. ಸದ್ಯ ಬೆಂಗಳೂರಿನ ಮತ ಪ್ರದರ್ಶನದಿಂದಾಗಿ ಗೋವಾ ನಿರ್ಧಾರ ಬೆಂಗಳೂರಿನಲ್ಲಾಗಲಿಲ್ಲವಲ್ಲಾ!'

"ಸರಿ ಸ್ವಾಮಿ, ಬೊಂಬಾಯಿಯಲ್ಲಿ ನಾಳೆಯೇ ಹೊಂದಿಸುವುದಾದರೆ ಸಾಕು, ಆಗ....?"

ಗೇಹ ರಾಜ್ಯದಲ್ಲಿ

ಎತ್ತಿದ್ರಲ್ಲಾ ಮಂಗ್ಳಾರ್ತೀನ?

"ಕೇಳಿದ್ರೇಲ್ಲಾ, ಆಯ್ತಲ್ಲ ನಿಮ್ಮುಖಕ್ಕೆ ಮಂಗ್ಳಾರ್ತಿ!"

"ಏನೇ, ಏನು ಅನ್ತಾ ಇದ್ದೀಯೊ ನೀನು? ಯಾರವ್ರು ನನ್ಮುಖಕ್ಕೆ ಮಂಗ್ಳಾರ್ತಿ ಎತ್ತೋರು? ಅದೂ ಈ ಆಷಾಢ ಮಾಸದಲ್ಲಿ?"

"ಆಷಾಢ ದೀಪಾವಳಿಯೆಲ್ಲಾ ಮಾನ ಮರ್ಯಾದೆ ಇರೋರ್ವಂಗೆ. ಅದೆಲ್ಲ ನಿನ್ಗೆಲ್ಲಿ ವರ್ಜ್ಯ?'

"ಅಂದ್ರೆ?"

"ಪಾಪ, ಏನೂ ಅರ್ಥ ಆಗ್ಲಿಲ್ಲ ಅಲ್ವೆ?'

"ಅಲ್ಲಾ, ಬಂದ ಕೂಡ್ಲೆ ಮಂಗ್ಳಾರ್ತಿ ತಿಂಗ್ಳಾರ್ತೀಂತ ಬಡಬಡಿಸ್ತ ಕೂತ್ರೆ...."

'ಹೌದಪ್ಪ, ನಾವು ಮಾತಾಡೋದು, ಅನ್ನೋದು, ಬರೆಯೋದು ಎಲ್ಲಾ ಬಡಬಡಾಟ. ನಿಮ್ದು ಮಾತ್ರ ಬಡೆದಾಟ ಅಲ್ವೆ?"

'ಅಂದ್ರೆ? ನಾನು ಏನು ಬರ್ದೆ? ನೀನು ಏನು ಬರ್ದೆ ..."

"ನೀವು ಅಂದ್ರೆ, ನೀವಲ್ಲ, ನಿಮ್ಮ ಟೋಪಿಯವ್ರು ..."

"ಓ, ಅವ್ರು.... ಹ್ಞಾಂ, ಇಲ್ಲಿ ಏನದು ಬಡಿದಾಟಕ್ಕೆ ಕಾರಣವಾಗಿರೋದೂಂತ?'

'ಅದೂ ಗೊತ್ತಿಲ್ಲ ಪಾಪ....'

"ಬಂದೆ ಪಾಪ ಪಾಪ ಅಂತ ಸತಾಯಿಸ್ಬೇಡ ಕಣೇ... ಯಾವ ವಿಚಾರ, ಏನಾಯ್ತು ಎಲ್ಲಾ ಬಾಯಿತೆರೆದು ಅಂದ್ಬಿಟ್ರೆ.."

'ಕಿವಿ ತೆರೆದು ಕೇಳ್ತೀನೆ ಅನ್ನಿ....'

"ಎಲ್ಲಾ ಮತ್ತೇನು ಕಿವಿ ಮುಚ್ಚಿದ್ರೆ ಕೇಳಿಸುತ್ಯೆ?"

"ಹೌದಪ್ಪ, ಮತ್ತೆ, ಏನು ಅಂದ್ರೆ, ನಾನೆಲ್ಲಿ ಕೇಳಿದ್ದೇನೆ ಅನ್ನಿ..."

"ಅಂದ್ರೆ?..."

"ದೇವ್ರು ಕೊಟ್ಟಿರೋ ಒಂದು ಕಿವಿಯಲ್ಲಿ ಕೇಳಿದ್ದೀನೆ, ಇನ್ನೊಂದ್ರಲ್ಲಿ ಬಿಟ್ಟಿದ್ದೇನೇಂತ.'

'ಒಳ್ಳೆ ಪಜೀತಿಯಾಯ್ತಲ್ಲ ಇದು? ಅಲ್ಲಾ, ಅಂತಹ ಮಾತನ್ನ ನಾನೆಂದಾದ್ರೂ ಅಂದದ್ದಿದೆಯೆ?,

'ಇದೀಗ ಸರಿಯಾಯ್ತು. ನೋಡಿ, ಇದುವರೆಗೆ ಅನ್ನಿಲ್ಲಾಂತಂದ ಮೇಲೆ ಇನ್ನು ಮುಂದೆ ಅನ್ಬಾರ್ದೂಂತಿಲ್ಲವಲ್ಲಾ?'

'ಅಲ್ವೆ, ಇದುವರೆಗೆ ಆಗದೆ ಇದ್ದದ್ದು ಇನ್ನು ಮುಂದೆ ಯಾಕೆ ಆಗ್ಬೇಕೂಂತ....'

'ಅದು ಸರೀನ್ನಿ. ಆದರೂ....'

'ಏನು? ಆದರೂಂತ....'

'ಮತ್ತೇನಿಲ್ಲ, ನೋಡಿ, ಎರಡು ವರ್ಷ ಕೆಳಗಡೆ ನಮ್ಮ ಮದುವೆಯಾಯ್ತಲ್ಲ?'

'ಹೌದು...ಅದ್ರಲ್ಲೇನು?'

'ಅಷ್ಟೇ ನ.ನಂದದ್ದು. ಅದ್ಕೆ ಮೊದ್ಲು ನಮ್ಮ ಮಧ್ಯೆ ಆಗ್ಲೇ ಇರ್ಲಿಲ್ಲ ನೋಡಿ....'

'ಹ್ಞ...ಹ್ಞ...ಹ್ಞ....'

'ನಕ್ಕು ಮಾತು ತಿರುಗಿಸೋದು ಬೇಡಾನ್ನಿ. ನೋಡಿ, ಒಬ್ಬ ಇದುವರೆಗೆ ಬಾಯಲೆ ಬೀಳಲೇ ಇಲ್ಲಾನ್ನಿ; ಇನ್ನು ಮುಂದೆ ಆತನಿಗೆ ಬಾಯಲೇನೇ ಬರೋಲ್ಲಾಂತ ಗ್ಯಾರಂಟಿ ಹೇಗೆ?'

'ನೀನನ್ನೋದು ತಿಳೀತು. ಅಂದ್ರೆ ೧೯೬೯ನೆ ಇಸ್ವಿ ಆಗಸ್ಟ್ ಮೊದಲನೇ ತಾರೀಕು ಇದುವರೆಗೆ ಬರ್ಲಿಲ್ಲಾಂತಂದ್ರೆ ಮೇಲೆ ನಾಳೆದು ಭಾನುವಾರ ತಾರೀಕು ಬರೋದಿಲ್ವೆಂತ ನೀನು ಹೇಳೋದು. ಹ್ಞಾಂ ....ಬರುತ್ತೆ, ಖಂಡಿತಕ್ಕೂ ಬರುತ್ತೆ...'

'ಖಂಡಿತ ಅಲ್ರಿ, ಕಂಡಿತ, ಕಂಡಿತ...'

'ಹೌದೌದು, ಖಂಡಿತ. ಅದ್ರೂ ಅದನ್ನ ಹೇಳೋ ಜಾಪಿನಲ್ಲಿ ಖಂಡಿತ ಆಗಿಬಿಡುತ್ತೆ....'

'ಅದ್ರಲ್ಲೇನಿಲ್ಲಾ ಏನಂತೆ ಇಂದು? ಅಲ್ಪಪ್ರಾಣ ಮಹಾಪ್ರಾಣ ಎಲ್ಲಾ ಒಂದೇ ಆಗಿ ಬಿಟ್ಟಿದೆ ಈಗ..'

"ಈ ಸಮಾನತೆಯ ಯುಗದಲ್ಲಿ ವರ್ಣಗಳಿಗೂ ಸಮಾನತೆ ಬಂದಿದೆ. ಅದ್ರಲ್ಲೇನಂತೆ ದೋಷ?"

'ಏನೂ ಇಲ್ಲ ಬಿಡ್ರಿ. ನಿಮ್ಮ ಧಾರ್ವೈಕ್ಯದಲ್ಲಿ ಎಲ್ಲಾ ಭಾಷೆಯನ್ನೂ ನಾಗರೀ ಲಿಪಿಯಲ್ಲಿ ಬರೆಯೋದಕ್ಕೆ ಸುರುಮಾಡಿದ್ರೆ, ಕೊಳವೂ ಕೋಳವೂ ಒಂದೇ ಆಗುತ್ತೆ..'

"ಹ್ಞಾಂ, ಕೊಳವೂ ಒಂದು ಬಗೆಯ ಕೋಳವೇ ಅಲ್ವೆ?"

'ಹೌದಪ್ಪ. ಅವೆಲ್ಲಾ ಇರ್ಲಿ ಹೇಗಾಯ್ತು ಮಂಗಳಾರತಿ?"

"ಅದೇ ಕೇಳಿದ್ನಲ್ಲಾ, ಯಾರು ಎತ್ತಿರೋದು? ಯಾವಾಗ ಮತ್ತು ಯಾಕೆ?"

'ಸೋದಾರಣ ವಿವರಿಸಿರಿ ಅನ್ನಿ...'

'ಹಾಗೆಲ್ಲಾ ಕೇ ಳೋ ಕೆ ಅದೇನು ಪ್ರಶ್ನೆ ಪತ್ರಿಕೆಯೆ? ಒಂದು ವೇಳೆ ಹಾ ದೂ ಂ ತಾ ದ್ರೂ ಈಗಿನ ಮಾದರಿಯಲ್ಲಿ ಅಂತಹ ಯಕ್ಷಪ್ರಶ್ನೆಗಳನ್ನ ಕೇಳುವಂತೆಯೇ ಇಲ್ಲ ನೋಡು...'

"ಮತ್ತೆ?"

"ಈಗೆಲ್ಲಾ ರಾಕೆಟ್ ಹಾರಿಸೋದು......'

'ಅಂದ್ರೆ?'

'ಅಲ್ಲಾ, ವಿಶ್ವ ಮಂಗಳ ಗ್ರಹದತ್ತ ಹತ್ತೊಂಬತ್ತು ಸಾವಿರ ಮೈಲಿ ತಾಸಿಗೆ ದೌಡಾಯಿಸುತ್ತಿರುವಾಗ ಒಂದು ಪ್ರಶ್ನೆಗೆ ಉತ್ತರ ಬರೆಯಲು ಅರ್ಧ ತಾಸು ಎಲ್ಲಿ ಸಿಗುತ್ತೆ?'

"ಅದಕ್ಕೆ?"

"ಆದಕ್ಕೇ ಕೇಳು. ಉದಾಹರಣೆಗೆ ಹೇಳ್ತೀನೆ. ಈ ಕೆಳಗಿನವುಗಳಿಗೆ ಸರಿಯಾದ ಉತ್ತರವು ಬ್ರಾಕೆಟ್ಟಿನವುಗಳಲ್ಲಿ ಒಂದು ಇದೆ. ಅದನ್ನು ಆರಿಸಿ ಅದನ್ನು ಗುರುತಿಸಿ.'

"ಇದು ಎಂತದಿರಿ?"

"ಅಯ್ಯೋ, ಇದು ಸೂಚನೆ ಕಣೇ...."

"ಅಂದ್ರೆ? ಜೈಮಿನಿ ಭಾರತದಲ್ಲಿ ಸಂಧಿಗೆ ಮೊದಲು ಸೂಚನೇಂತ ಇರುತ್ತೆ ನೋಡಿ..."

'ಹೌದೌದು. ಹಾಗೆನೇ...."

"ಈಗ ಪ್ರಶ್ನೆಗಳಿಗೂ ಸೂಚನೆ ಬೇರೆ ಇದೆಯೆ?"

"ಇಲ್ದಿದ್ರೆ ಹೇಗೆ ಗೊತ್ತಾಗಬೇಕು? ಕೇಳು, ಮೌರ್ಯವಂಶದ ಅರಸ. ಬ್ರೆಕೆಟ್ಟಿನೊಳಗಡೆ ಅಶೋಕ, ಚಾಣಕ್ಯ, ಹರ್ಷ, ಅವರಂಗಜೇಬ, ಲಾರ್ಡ್ ಕಾರ್ನ್‌ವಾಲೀಸ್..."

"ಮುಗಿಯಿತೆ? ಇನ್ಯಾರದ್ದೂ ಹೆಸ್ರಿಲ್ಲವೇನು?"

"ಇದೇನು. ಒಂದೊಂದಕ್ಕೆ ಐದೈದು ಕೊಡೋದು ಕ್ರಮ..."

"ಓ, ಈಗ ಗೊತ್ತಾಯ್ತು...."

'ಏನು?'

'ನೋಡಿ, ಮೊನ್ನೆ ಒಂದು ದಿವ್ಸ ಐ ಎ ಎಸ್ ನ ಪರೀಕ್ಷೆಯಲ್ಲಿ ಯಾರೊ ಒಬ್ರು ಜಪಾನದ ರಾಜಧಾನಿ ಸೈಗಾನ್ ಅಂತ್ಲೋ ಏನೋ ಬರೆದಿದ್ರೂಂತ ಓದಿದ್ದೆ. ಅದು ಯಾಕೇಂತ? ಅಲ್ಲ, ಹೀಗೆಲ್ಲಾ ಕಂಡಾಬಟ್ಟೆ ಆಗೋಬದ್ಲು ನೇರವಾಗಿಯೇ ಕೇಳಬಹುದಲ್ಲಾ ಜಪಾನದ ರಾಜಧಾನಿ ಯಾವುದೂಂತ. ಗೊತ್ತಿದ್ದವನಾದ್ರೂ ಎಳ್ಳಷ್ಟೂ ಸಂದೇಹವಿಲ್ಲದೆ ಬರೀತಾನೆ.'

"ಅದು ಸರೀನ್ನು. ಆದ್ರೆ ನೋಡು ಉತ್ತರ ಬರಿಯುವವ ಜಪಾನಿನ ರಾಜಧಾನಿ ಟೋಕಿಯೋ ಅಂತ ಬರೀಬೇಕಾಗುತ್ತೆ. ಅದಕ್ಕೆ ಪುರ್ಸೊತ್ತೆಲ್ಲಿ?"

"ಸರೀನ್ನಿ. ಈ ಗಡಿಬಿಡಿಯುವ್ರ ಕಾಲವೇ ಹೀಗೆ ಯಾವಾಗ್ಲೂ ಗಡಬಡ ಮಾಡುತ್ಲೇ ಇರೋದು. ಊರವರಿಂದ ಮಂಗಳಾರ್ತಿ ಮಾಡಿಸಿಕೊಳ್ಳೋದು...."

"ಅಲ್ಲಾ, ವಿಷಯ ಏನೂಂತ ಹೇಳದೆ ಬರಿ ಮಂಗಳಾರ್ತಿ ಮಂಗಳಾರ್ತೀಂತ ಅಂದ್ರೆ....'

'ಅಯ್ತಪ್ಪ, ನೋಡಿ. ಸ್ವಲ್ಪ, ನಿಮ್ಮ ಬೆಂಗಳೂರ ಕಡೆಗೆ...."

'ಏನಾಗಿದೆ? ಚಂದವಿದೆ. ಲಾಲ್ ಬಾಗಂತೂ ಸುಂದರದಲ್ಲಿ ಸುಂದರ...'

"ಅದ್ರೆ ನಿಮ್ಮ ಲಾಲ್‌ಬಾಗ್‌ನ ಚಂದ ಈಗ ಹೇಳೋದು....'

'ಏನು?'

'ಮತ್ತಿನ್ನ ಆಗಬೇಕಾದ್ದೂ ಏನಂತೆ? ನಿಮ್ಮ ಶಾಸ್ತ್ರಿಯವರಿಗೆ ಕರಿಪತಾಕೆ, ಕಾಮರಾಜರಿಗೆ ಕಲ್ಲಿನೇಟು..."

'ಓ, ಆ ಸುದ್ದಿ... ಅಲ್ವೆ ಗೋವೆ ಗೋವೆ...'

'ಹೌದು ಹೌದು ನಿಮ್ಮ ಟೋಪಿಯವರಿಗೆ ಟೋಪಿಯವ್ರೇ ಆರ್ತಿ ಎತ್ತಿಸಿದ್ರು...'

"ಹ್ಞಾ, ಯಾರು ಎತ್ತಿಸಿದ್ರೋ... ಅಂತೂ ಎತ್ತಿದ್ದು ಖಂಡಿತ ..."

"ನೋಡಿ ಯಾಕೆ ಹೀಗೆ ಮಾಡ್ಬೇಕಿತ್ತು? ಇದು ಯಾರಿಗೆ ಅಪಮಾನ?"

'ಅಯ್ಯೋ, ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯವನ್ನ ವ್ಯಕ್ತ ಪಡಿಸುವ ರೀತಿಯಿದೇತಾನೆ?'

"ಏನೂ, ಕಲ್ಲು ತೂರುವುದು! ಅದೂ ಪಾಪ, ನೆಹ್ರೂ ಮಗಳ ಮೇಲೆ!"

'ಓ, ಈಗ ಅರ್ಥವಾಯ್ತು. ಬಿಡು. ಪಾಪ, ಇಂದಿರಾ ಗಾಂಧಿಯವರ ಕಾರಿಗೆ ಕಲ್ಲು ತೂರಿದ್ರೂಂತ ಇಷ್ಟು ರಂಪಾಟವೆ? ಇರ್ಲಿ, ಸದ್ಯ ಏನೂ ಅನಾಹುತ ನಡೆದಿಲ್ಲವಲ್ಲಾ...'

"ಇನ್ನೇನು ನಡೀಬೇಕೂಂತ? ಆ ನಿಮ್ಮ ದೊಡ್ಡ ಟೋಪಿಯ ದೊರೆಗಳು ಏನೇನೋ ಮಾಡಿದ್ರೆ ಪಾಪ ಇವ್ರಮೇಲ್ಯಾಕೆ ಸಿಟ್ಟು?"

'ಅವ್ರ ಮೇಲೆ ಇರೋ ಕನಿಕರದ ನೂರರಲ್ಲೊಂದು ಪಾಲು ಮತ ಪ್ರದರ್ಶಕರ ಮೇಲೂ ಇರುತಿದ್ರೆ.... ...."

'ಇರುತಿತ್ತು. ಯಾಕೆ ಇರ್ಬೆಕೂಂತ? ನೀವು ಟೋಪಿಯವ್ರು ಮಾಡೋದು ಇದೇಂತ ಗೊತ್ತಿದ್ದ ಮೇಲೆ ಅವು ಯಾಕೆ ಪ್ರದರ್ಶನ ಮಾಡಬೇಕಿತ್ತು? ಬೇಕಾದ್ರೆ ಮಾಡ್ಲಿ ಪಾಪ, ಏನೂ ಅರಿಯದವ್ರ ಮೇಲೆ ರೇಗಾಡೋದು ಯಾಕೆ?"

'ಅಲ್ವೆ, ಇದೇ ಮಾಡ್ತಾರೆಂತ ಹೇಗೆ ಗೊತ್ತು?"

'ಕೇಳಿ, ಭಾರತ ವಿಭಜನೆಯಾಗಲಾರದೂಂತಂದ್ರು, ಮತ್ತೆ ಮಾಡಿಸಿಯೇ ಬಿಟ್ರು......"

"ಹ್ಞಾ......'

'ನೀವು ಹ್ಞಾ ಅನ್ಬೇಡಿ ......"

(ಹದಿಮೂರನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ,ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬುದ್ಧಿಯೋಗದಿಂದ ಸ್ಥಿತಪ್ರಜ್ಞತೆ

ವಿಷಯಾ ವಿನಿವರ್ತಂತೇ |
ನಿರಾಹಾರಸ್ಯ ದೇಹಿನಃ |
ರಸವರ್ಜಂ ರಸೋಽಪ್ಯಸ್ಯ |
ಪರಂ ದೃಷ್ಟ್ವಾ ನಿವರ್ತತೇ ||೫೯||

ಸಾಧಕನು ಸಾಧನೆ ಮಾಡುತ್ತಿದ್ದಂತೆ ಮನೋನಿಗ್ರಹದ ಅವಶ್ಯವಿದೆ. ಹಾಗೆ ಮಾಡುತ್ತಾ ಇದ್ದಂತೆ ಅವನ ಚಿತ್ತಾಸಕ್ತಿಯು ನಿರಾಹಾರತೆಯಿಂದ ಎಂದರೆ ವಿಷಯಾದಿ ವಸ್ತುಗಳ ಆಸಕ್ತತೆಗೆ ಅಡ್ಡಿ ಹೊರಿಸಿದಂತೆ, ವಿಷಯ ವಾಸನೆಗಳು ತಾನಾಗಿಯೇ ಕ್ಷೀಣವಾಗುವವು. ಆ ವಿಷಯಾದಿಗಳ ಮೇಲಿನ ಆಸಕ್ತಿ, ರಸವು ಎಂದರೆ ಅವುಗಳಲ್ಲಿ ದೊರಕುವ ಸಂತೋಷ'ಸ್ಮರಣೆಯೂ, ಅನುಭವಗಳಲ್ಲಿ ಪಡೆದ ಸುಖದ ಯೋಚನೆಯೂ, ನೆನಪೂ, ಥಟ್ಟನೆ ಮರೆಯುವುದಿಲ್ಲ. ಅದರೆ ಅನಂತತೆಯ ಅರಿವನ್ನು ಆತ ತನ್ನ ಹೃದಯದಲ್ಲಿ ಅನುಭವಿಸಿದಾಗ, ಆ ಸ್ಮರಣೆಯೂ ಅರಿ ಹೋಗುವುದು. ಆ ರಸವೂ ಹಿಂಗಿ ಹೋಗುವುದು. ಅನಂತತೆಯ ಸುಖ ಸಂತೃಪ್ತಿಯ ಇದಿರು, ಈ ಕ್ಷಣಿಕ ಪ್ರವೃತ್ತಿ ಇದ್ದ ಇಂದ್ರಿಯಾದಿಗಳ ಸುಖವಸ್ತುವಿನ ಆಸಕ್ತಿ ತಕ್ಷಣ ಅರಿ ಹೋಗುವುದು. ಅಷ್ಟರ ತನಕ ಅವನಲ್ಲಿ ಆ ಸ್ಮರಣೆಗಳು ಸುಪ್ತವಾಗಿರುವವು. ಅವನ ಅಹಂ ಸಂಪೂರ್ಣ ನಾಶವಾಗುವ ತನಕ ಆ ರಸವು ಇದ್ದೇ ಇದೆ. ಒಂದು ಬಾರಿ ಆತ್ಮದ ಅನುಭವವಾದ ಬಳಿಕ ಆ ರಸವೂ ಹಿಂಗಿ ಹೋಗುತ್ತದೆ.

ಯತತೋ ಹ್ಯಪಿ ಕೌಂತೇಯ |
ಪುರುಷಸ್ಯ ವಿಪಶ್ಚಿತಃ |
ಇಂದ್ರಿಯಾಣಿ ಪ್ರಮಾಥೀನಿ |
ಹರಂತಿ ಪ್ರಸಭಂ ಮನಃ ||೬೦||.

ಅರ್ಜುನನಿಗೆ ಶ್ರೀ ಕೃಷ್ಣನ ಮೇಲಿನ ವಾದ ಸಮ್ಮತಿಯಾಗಿ ಲಿಕ್ಕಿಲ್ಲ, ಏಕೆ ಇಂದ್ರಿಯಗಳನ್ನು ನಿಗ್ರಹಿಸುತ್ತಾ ಇರಬೇಕೆಂಬ ಭಾವ ಮುಖವಷ್ಟೆ ಮಾಡಿಂಬೇಕು. ಅದಕ್ಕೆ ಶ್ರೀ ಕೃಷ್ಣನು ಹೀಗೆ ಮುಂದುವರಿಸಿರುವನು, ಎಲ್ಲಾ ಇಂದ್ರಿಯಗಳನ್ನು ಮನಸ್ಸಿನ ಹಿಡಿತದಲ್ಲಿರಿಸಿಕೊಂಡು, ಮನವು ಸದಾ ಆತ್ಮದಲ್ಲಿ ನಿರತವಾಗಿರಬೇಕು. ಯೋಚನೆಗಳನ್ನು ಆತ್ಮ ಚಿಂತನೆಯಲ್ಲಿ ಮುಳುಗಿಸಬೇಕು. ಮನಸ್ಸನ್ನು ದೇವರ ಮೇಲೆ ತಿರುಗಿಸಬೇಕು ಎಂದರೆ ಆದರ್ಶವಾದ ಉದಾತ್ತ ಉತ್ತಮ ಚಿಂತನೆಗಳಿಂದ ತುಂಬಿಸಬೇಕು. ಉದಾ:—ತಂದೆ ಅಥವಾ ತಾಯಿ ಸತ್ತ ಕೆಲವು ದಿನಗಳಲ್ಲಿ ಬೇರೆ ಭೋಜನದಲ್ಲಿ ಮಕ್ಕಳಿಗೆ ಮನಸ್ಸು ಓಡಲಾರದು. ಏಕೆಂದರೆ ಅವರ ಮನಸ್ಸಿನಲ್ಲಿ ತಂದೆ ಅಥವಾ ತಾಯಿಯ ವಿಚಾರವೇ ತುಂಬಿರುವುದು. ಹೀಗೆ ತನ್ನ ಬುದ್ಧಿಯನ್ನು ಹತೋಟಿಯಲ್ಲಿರಿಸಲು ಸಾಧ್ಯವಾದರೆ ಮಾತ್ರ ಅವನ ವಿವೇಕವು ಸ್ಥಿರವಾಗುವುದು. ಏಕೆಂದರೆ ಎಷ್ಟು ವಿವೇಕವಂತನಾದರೂ, ಒಂದಿನಿತು ಇಂದ್ರಿಯಗಳನ್ನು ಸಡಿಲು ಬಿಟ್ಟರೆ ಅದು ಪುನಃ ಅವನನ್ನು ವಿಷಯಾದಿಗಳ ಕಡೆ ಎಳೆಯುವುದು. ಅದಕ್ಕಾಗಿ ಅತ್ಯಂತ ನಿಗ್ರಹಶಕ್ತಿಯನ್ನು ಅವನು ಮೊದಲು ಅಭ್ಯಸಿಸಬೇಕು.

ತಾನಿ ಸರ್ವಾಣಿ ಸಂಯಮ್ಯ |
ಯುಕ್ತ ಆಸೀತ ಮತ್ಪರಃ |
ವಶೇ ಹಿ ಯಸ್ಯೇಂದ್ರಿಯಾಣಿ |
ತಸ್ಯ ಪ್ರಜ್ಞಾ ಪ್ರತಿಷ್ಠಿತಾ ||೬೧||

ಸರ್ವ ಇಂದ್ರಿಯಗಳನ್ನು ನಿಗ್ರಹಿಸಿ, ಆತ್ಮತತ್ವದಲ್ಲಿ ತನ್ನ ಗಮನವನ್ನು ಸಂಪೂರ್ಣವಾಗಿ ಏಕಾಗ್ರತೆಯಿಂದ ನಿಲ್ಲಿಸಬೇಕು. ಇಂದ್ರಿಯಗಳನ್ನು ಮನದಿಂದ ಹತೋಟಿಯಲ್ಲಿರಿಸಿ ಕೊಂಡವನು ಸ್ಥಿತ ಪ್ರಜ್ಞನೆನಿಸಿಕೊಳ್ಳುವನು.

ಇಂದ್ರಿಯಗಳು ವಿಷಯಾದಿಗಳಲ್ಲಿ ಪ್ರವಹಿಸುವುದನ್ನು ಬಲಾತ್ಕಾರವಾಗಿ ನಿಗ್ರಹಿಸಬೇಕು ಮತ್ತು ಹಾಗೆ ನಿಗ್ರಹಿಸಿ ಅವುಗಳನ್ನು ಆತ್ಮ ಚಿಂತನೆಯಲ್ಲಿ ಓಡುವಂತೆ ಅಭ್ಯಾಸಕೊಡಬೇಕು ಎಂದು ಶ್ರೀಕೃಷ್ಣನು ವಿವರಿಸಿರುವನು. ಕೇವಲ ನಿಗ್ರಹದಿಂದ ಮಾತ್ರ ಮಾನವನು ವಿಕಾಸನ ಹೊಂದಲಾರನು. ನಿಗ್ರಹದಿಂದ ಉಂಟಾದ ಶಕ್ತಿಯನ್ನು, ಮನ ವಿಕಾಸನಕ್ಕೆ ಉಪಯೋಗಿಸಬೇಕು. ಇದಕ್ಕೆ ಧ್ಯಾನವು ಅತ್ಯುತ್ತಮವಾದ ಸಾಧನೆಯಾಗಿರುತ್ತದೆ. ಏಕಮುಖವಾಗಿ ಮನದ ಯೋಚನೆಗಳನ್ನು ಆದರ್ಶ ಚಿಂತನೆಯಲ್ಲಿ ಕಳೆಯುವುದು ಧ್ಯಾನ. ಹೀಗೆ ಮನಸ್ಸಿಗೆ ಅಭ್ಯಾಸ ಮಾಡಬೇಕು. ಮನದ ಮೇಲೆ ಸಂಪೂರ್ಣ ಹತೋಟಿ ಬಂದಾಗ ಅವನು ಸ್ಥಿತಪ್ರಜ್ಞನೆನಿಸಿಕೊಳ್ಳುವನು. ಅಷ್ಟರ ತನಕ ಮನವನ್ನು ಸಡಿಲು ಬಿಡಬಾರದು. ಅವನು ತಪ್ಪು ಹಾದಿಗೆ ಬೀಳುವ ಸಂಭವವಿದೆ. ಆದುದರಿಂದ ಜಾಗ್ರತೆವಹಿಸತಕ್ಕದ್ದು.

ಮಾನವನ ಅಧಃಪತನವು ಹೇಗೆ ಮೊದಲಾಗುವುದು ಎಂದು ಕೆಳಗಿನ ಶ್ಲೋಕದಲ್ಲಿ ವಿವರಿಸಲಾಗಿದೆ.

ಧ್ಯಾಯತೋ ವಿಷಯಾನ್ಪುಂಸಃ |
ಸಂಗಸ್ತೇಷೂಪಜಾಯತೇ |
ಸಂಗಾತ್ಸಂಜಾಯತೇ ಕಾಮಃ |
ಕಾಮಾತ್ಕ್ರೋಧೋಽಭಿಜಾಯತೇ ||೬೨||

ಒಂದೇ ಬಾರಿಗೆ ವಿಷಯಾದಿಗಳು ನಮ್ಮನ್ನು ಎಳೆಯುವುದಿಲ್ಲ, ಮೊತ್ತಮೊದಲು ನಮ್ಮಲ್ಲಿ ಅದರ ಯೋಚನೆ ಮಾಡುವುದು. ಆ ಯೋಚನೆಯನ್ನು ಸಡಿಲು ಬಿಟ್ಟರೆ ಅದೇ ಯೋಚನೆ ಮೇಲಿಂದ ಮೇಲೆ ಬಂದು ಅದು ಒಂದು ಅಭ್ಯಾಸವಾಗುವುದು. ಆಗ ಆ ಯೋಚನೆ ಹರಿದ ವಸ್ತುವಿನ ಮೇಲೆ ಆಸೆ ಉಂಟಾಗುವುದು. ತನಗೆ ಆ ವಸ್ತುವನ್ನು ಪಡೆಯಬೇಕೆಂಬ ಲವಲವಿಕೆ ಮೂಡುವುದು. ಆ ಆಶೆಗೆ ತಡೆಯಾದೊಡನೆ ಕೋಪವು ಉಂಟಾಗುವುದು.

ಕ್ರೋಧಾದ್ಭವತಿ ಸಂಮೋಹಃ |
ಸಂಮೋಹಾತ್ ಸ್ಮೃತಿ ವಿಭ್ರಮಃ |
ಸ್ಮೃತಿ ಭ್ರಂಶಾ ದ್ಬುದ್ಧಿನಾಶೋ |
ಬುದ್ಧಿ ನಾಶಾತ್ಪ್ರಣಶ್ಯತಿ ||೬೩||

ಕೋಪ ಬಂದಾಗ, ಮೋಹ ಉಂಟಾಗುವುದು. ಯಾವುದು ತಪ್ಪು, ಯಾವುದು ಸರಿ ಎಂದು ಆತ ತಿಳಿದುಕೊಳ್ಳದೆ, ಅಜ್ಞಾನಿಯಾಗುವನು. ಅಜ್ಞಾನ ಉಂಟಾದೊಡನೆ ಬುದ್ಧಿಯು ನಾಶ ಹೊಂದುವುದು, ಬುದ್ಧಿ ನಾಶವಾದೊಡನೆ, ವಿವೇಕವು ಹೊರಟು ಹೋಗುವುದು. ವಿವೇಕರಹಿತ ಮನುಷ್ಯನು ಪ್ರಾಣಿಗಳಿಗೆ ಸಮಾನ. ಮಾನವನು ವಿವೇಕದಿಂದ ಜೀವನ ಸಾಗಿಸುವನು. ವಿವೇಕ ನಷ್ಟ ಹೊಂದಿದರೆ, ಮಾನವನು ಪ್ರಾಣಿಗಳ ಮಟ್ಟಕ್ಕೆ ಇಳಿಯುವನು. ಅವನ ಸಂಪೂರ್ಣ ನಾಶ ಉಂಟಾಗುವುದು.

ರಾಗ ದ್ವೇಷ ವಿಯುಕ್ತೈಸ್ತು |
ವಿಷಯಾನಿಂದ್ರಿಯೈಶ್ಚರನ್ |
ಆತ್ಮವಶ್ಯೈ ರ್ವಿಧೇಯಾತ್ಮಾ |
ಪ್ರಸಾದ ಮಧಿ ಗಚ್ಛತಿ ||೬೪||.

ಸ್ಥಿತ ಪ್ರಜ್ಞನನ್ನು ವಿವರಿಸುತ್ತಾ, ಸ್ಥಿತ ಪ್ರಜ್ಞನು ಬೇಕು, ಬೇಡ ಎಂಬ ಪ್ರಿಯ, ಅಪ್ರಿಯ ವಸ್ತುಗಳಿಂದ ಅವನು ಕಂಗೆಡಲಾರನು, ಅವನಲ್ಲಿ ಹಿತ, ಅಹಿತ ಎಂಬ ಎರಡೂ ಸನ್ನಿವೇಶಗಳನ್ನೂ ಆತ ಕದಲದೆ ಇದಿರಿಸುವನು. ಅವನಿಗೆ ಯಾವುದು ಹಿತವೆಂದಾಗಲೀ, ಅಹಿತವೆಂದಾಗಲೀ, ಇಲ್ಲ. ಈ ಹಿತ, ಅಹಿತ ಎಂಬ ಗುಣಗಳನ್ನು ನೋಡುವ ದೈಹಿಕ, ಮಾನಸಿಕ, ಬೌದ್ಧಿಕ ಎಲ್ಲೆಗಳನ್ನು ಆತ ದಾಟಿದುದರಿಂದ ಅವನನ್ನು ಈ ಎರಡು ಗುಣಗಳು ಪೀಡಿಸಲಾರವು. ಇವೆಲ್ಲಾ ತನ್ನ ಮಾನಸಿಕ, ಬೌದ್ಧಿಕ ಮಟ್ಟಗಳಲ್ಲಿ ನಡೆಯುವ ಆಟ ಎಂದು ಆತ ನಿಶ್ಚಿಂತೆಯಿಂದ ಇರುವನು. ಅವನೇ ತನ್ನ ಇಂದ್ರಿಯಗಳನ್ನು ಬಾಹ್ಯ ವಸ್ತುಗಳಲ್ಲಿ ಓಡಿಸುವನು. ಅವನಿಗೆ ಇಂದ್ರಿಯಗಳನ್ನು ಹಿಂದೆ ಸರಿಸಲು ಚೆನ್ನಾಗಿ ತಿಳಿದುದರಿಂದ ವಾತಾವರಣಗಳಿಂದ ಅವನು ಕಂಗೆಡಲಾರನು. ಹಿತ, ಅಹಿತ ಎಂಬ, ನಾವು ಪಡೆಯುವ ಅನುಭವದ ಮೇಲೆ, ನಮ್ಮ ಮನ ಬುದ್ಧಿಗಳು ಬಾಹ್ಯ ವಸ್ತುಗಳನ್ನು ಅನುಭವಿಸುವವು. ಸ್ಥಿತ ಪ್ರಜ್ಞನೆನಿಸಿಕೊಂಡವನಿಗೆ, ಬಾಹ್ಯ ವಸ್ತುಗಳು ಕೊಡುವ ಅನುಭವದಿಂದ ಮನದಲ್ಲಿ ಹಿತ, ಅಹಿತ ಎಂಬ ಭಾವನೆ ಬರಲಾರದು. ಅದರಿಂದ ಆತ, ಬಾಹ್ಯ ವಸ್ತುಗಳಿಂದ ಬಂಧಿಸಲ್ಪಡಲಾರನು. ಬಾಹ್ಯ ವಸ್ತುಗಳಲ್ಲಿ, ಮನ, ಬುದ್ಧಿಗಳು ಇವೆ. ಆದುದರಿಂದಾಗಿ, ಮನ, ಬುದ್ಧಿಗಳಲ್ಲಿ ನಡೆಯುವ ಹಿತ, ಅಹಿತ ಭಾವನೆಗಳೂ ಅವನನ್ನು ಪೀಡಿಸಲಾರವು, ಅವನಿಗೆ ಈ ಅನುಭವ ಪಡೆಯಬೇಕೆಂದಾಗ, ಬೇಡವೆಂದಾಗ ಇಂದ್ರಿಯಗಳನ್ನು ಬಿಡಲೂ, ತಡೆ ಹಿಡಿಯಲೂ ಸಾಮರ್ಥ್ಯವಿರುವುದರಿಂದ, ಬಾಹ್ಯ ವಾತಾವರಣದಿಂದ ಒಂದಿನಿತೂ 'ಅಲ್ಲೋಲಕಲ್ಲೋಲತೆ ಉಂಟಾಗದು. ಹೀಗೆ ಅವನು ಹಿತ ಅಹಿತ, ಎಂಬ ಎರಡು ದ್ವಂದ್ವಗುಣಗಳಿಂದ ಪೀಡಿತನಾಗದೆ ಸ್ಥಿರ ಶಾಂತಿ ಸ್ಥಿತಿಯಲ್ಲಿ ಮನಸ್ಸು ಇರಿಸಿದಂತೆ, ಅವನಲ್ಲಿ ಅ

(ಹನ್ನೆರಡನೇ ಪುಟ ನೋಡಿರಿ)

ನಿಮಗಾಗಿ ಮತ್ತೊಂದು ಆಕರ್ಷಕ ಯೋಜನೆ!

**ಕ್ಯುಮುಲೇಟಿವ್
ಎನ್ಯುಟಿ
ಠೇವಣಾತಿಗಳು**

ಕೆಲವು ವೈಶಿಷ್ಟ್ಯಗಳು......

- ಪ್ರತಿ ತಿಂಗಳಿಗೂ ರೂಪಾಯಿ 10/- ಪ್ರಕಾರ 24 ತಿಂಗಳ ಠೇವಣಿ.
- ತಿಂಗಳಿಗೆ ರೂಪಾಯಿ 10/-ರಂತೆ 27 ತಿಂಗಳ ಮರುಪಾವತಿ. ಅಂದರೆ 30 ರೂಪಾಯಿ ಬಡ್ಡಿ ಲಭಿಸುವುದು.
- ಮರುಪಾವತಿ ಸ್ವೀಕರಿಸಲು ನೀವು ಪ್ರತೀ ಸಾರಿ ಬರಬೇಕಾಗಿಲ್ಲ. ನಿಮ್ಮ ಸೇವಿಂಗ್ಸ್ ಖಾತೆಗೆ ಸದರಿ ಮೊತ್ತವನ್ನು ಜಮಾಗೊಳ್ಳಲು ನಿಮ್ಮ ಖಾಯಂ ಸೂಚನೆಯು ಸಾಕಾಗುವುದು.
- ನೀವು ಅಪೇಕ್ಷೆ ಪಟ್ಟದಾದರೆ, ಪೂರ್ಣಾವಧಿಯ ನಂತರವೂ ಠೇವಣಿಯನ್ನು ಪುನರಾವರ್ತಿಸಬಹುದು.
- ಅಂತಹ ಸಂದರ್ಭದಲ್ಲಿ ಹೊಸ ಠೇವಣಿಯ ತಿಂಗಳ ಕಂತುಗಳು ಪೂರ್ಣವಾದ ಹಳೇ ಠೇವಣಿಯಿಂದ ತಾನಾಗಿಯೇ ಪಾವತಿಯಾಗುವುವು.

ವಿವರಗಳಿಗೆ ನಿಮ್ಮ ಹತ್ತಿರದ
ಶಾಖೆಯಲ್ಲಿ ವಿಚಾರಿಸಿರಿ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿ

ಕಚ್ಛ ಸಮರವಿರಾಮಕ್ಕೆ

ಪಾಕಿಸ್ತಾನಿಗಳೊಂದಿಗೆ ಸಂಧಾನ

ಬರೆದವರು: ಶ್ರೀ ಶಿವಶಂಕರ್.

ಕಾಮನ್‌ವೆಲ್ತ್ ಕೂಟ ಮುಗಿದ ಮೇಲೆ ಬ್ರಿಟನಿನಿಂದ ಭಾರತದ ಪ್ರಧಾನಿ ಶ್ರೀ ಲಾಲಬಹದೂರ ಶಾಸ್ತ್ರೀಜೀಯವರು ಜೂನ್ ಇಪ್ಪತ್ತೇಳರಂದು ಬೆಳಗ್ಗೆ ದಿಲ್ಲಿ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಅವರಿಗೆ ಸಂಭ್ರಮದ ಸ್ವಾಗತವನ್ನೀಯಲಾಯಿತು. ಪ್ರಧಾನಿಯವರು ಆಗಮಿಸುವುದಕ್ಕಿಂತ ಮುಂಚೆ ಬೇರೊಂದು ವರ್ತಮಾನವು ಆದಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಅದುವೇ ಶ್ರೀ ಲಾಲಬಹದೂರ ಶಾಸ್ತ್ರೀಜೀಯವರು ಅಯೂಬಖಾನರೊಂದಿಗೆ ಮಾತುಕತೆ ನಡೆಯಿಸಿದ್ದು ಹಾಗೂ ಬ್ರಿಟಿಷ್ ಪ್ರಧಾನಿ ವಿಲ್ಸನರು ಕಚ್ಛ್ ಕದನ ವಿರಾಮ ರೇಖೆಯ ಕುರಿತು ತಿಳಿಸಿದ ಸಲಹೆಗಳಿಗೆ ಭಾರತದ ಪ್ರಧಾನಿಯವರು ಒಪ್ಪಿಕೊಂಡದ್ದು. ಆಕ್ರಮಣಗಾರ ಅಡಿಯು ಹಿಂದಿಡದಿದ್ದಲ್ಲಿ ಅವನ ಮುಖಾವಲೋಕನವನ್ನೂ ಮಾಡಲಾರೆನೆಂದು ದಿಲ್ಲಿಯಲ್ಲಿ ಢಣಾಢಂಗುರ ಬಡಿದಿದ್ದ ಶ್ರೀ ಲಾಲಬಹದೂರ ಶಾಸ್ತ್ರೀಜೀ ಬ್ರಿಟನಿನಲ್ಲಿ ಅಯೂಬಖಾನನ ಕೂಡ ಮುಖವನ್ನು ಕಂಡದ್ದು ಮಾತ್ರವಲ್ಲ, ಬಳಿಯಲ್ಲಿ ಕುಳಿತುಕೊಂಡು ಮಾತುಕತೆ ನಡೆಸಿದರು ಮತ್ತು ಕಚ್ಛ್ ಕೌಲಿಗೆ 'ಆಸ್ತು' ಅಂದರು. ಭಾರತದ ಪ್ರಧಾನಿಯವರು ದಿಲ್ಲಿಯಲ್ಲಿ ಸಿಂಹಘರ್ಜನೆ ಮಾಡಿದ್ದಾಗ ಅಲ್ಲಿ ಬಹಳ ಇದ್ದಿರಬಹುದು. ಇಂಗ್ಲೆಂಡಿನಲ್ಲಿ ಬಹಳ ತಂಪು ಇದ್ದಿರಬಹುದು. ಆದರೆ ಉನ್ನತ ಅಧಿಕಾರದ ಆಸನದಲ್ಲಿರುವವರ ಹೃದಯದ ಬಿಸಿ ವಾತಾವರಣಕ್ಕನುಸಾರವಾಗಿ ಬದಲಾದೀತೇ?—ಇದು ರಾಷ್ಟ್ರೀಯರು ಕೇಳುವ ಪ್ರಶ್ನೆ. ಆದರಲ್ಲೇನೂ ಆಶ್ಚರ್ಯವಿಲ್ಲ, ಹಾಗೆಯೇ ಪ್ರಧಾನಿಯವರು ವಿಮಾನ ನಿಲ್ದಾಣದಲ್ಲಿ ಬಂದಿಳಿದೊಡನೆಯೇ ಅವರು ಪ್ರಶ್ನೆಗಳ ಸುರಿಮಳೆಯನ್ನೆದುರಿಸಬೇಕಾಯಿತು. ಶ್ರೀ ಲಾಲಬಹದೂರಜೀಯವರು ಭಾರೀ ತಂತ್ರಶಾಲಿಯಿರುವುದರಿಂದ ಅಂದು ಬಹಳ ಜಾಗ್ರತೆಯಿಂದ ಬದಲಿತ್ತು ಅಲ್ಲಿಂದ ಜಾರಿದರು. ತಾನು ವಿಲ್ಸನ್‌ಗಿತ್ತಿರುವ ಒಪ್ಪಂದದ ಸಲಹೆಗಳ ಮೂಟೆಯನ್ನು ಹೊತ್ತುಕೊಂಡು ಬಂದಿಲ್ಲವೆಂದೂ, ಸಂಧಾನದ 'ಲಹೆಗಳು ನಮಗೆ ಅನುಕೂಲವಾಗಿದ್ದಲ್ಲಿ ಮಾತ್ರ ಅದಕ್ಕೆ ಒಪ್ಪಿಕೊಳ್ಳುವದೆಂದೂ, ಇಲ್ಲದಿದ್ದಲ್ಲಿ ಒಪ್ಪುವದಿಲ್ಲವೆಂದೂ ಅವರು ಪತ್ರಕರ್ತರಿಗೆ ತಿಳಿಸಿದರು. ಸಂದರ್ಭವಶಾತ್ ಅಯೂಬಖಾನನನ್ನು ಕಾಣಬೇಕಾಯಿತೇನೂ, ತಾನಾಗಿ ಅದಕ್ಕೇನೂ ಪ್ರಯತ್ನಿಸಿಲ್ಲವೆಂದೂ ಅವರು ಹೇಳಿದರು. ಅಲ್ಲದೆ ತಾನೇನೂ ಕೌಲಿನ ಕುರಿತು ಅಯೂಬನ ಬಳಿ ಮಾತುಕತೆ ನಡೆಸಿಯೇ ಇಲ್ಲವೆಂದೂ, ಕೌಲದ ಪ್ರತಿ ಬಂದೊಡನೆ ಮಂತ್ರಿಮಂಡಳದವರನ್ನು ಕಂಡು ಅವರ ಅಭಿಪ್ರಾಯ ತಿಳಿದುಕೊಂಡ ಮೇಲೆಯೇ ಅದಕ್ಕೆ ಒಪ್ಪುವದಾಗಿಯೂ ನಮ್ಮ ಪ್ರಧಾನಿಯವರು ವಿವರಿಸಿದರು. ಪತ್ರಿಕೆಗಳಲ್ಲಿ ಈ ವಿಷಯಗಳೆಲ್ಲಾ ಪ್ರಕಟವಾದುವು. ಜನತೆಯಾದರೋ ತಮ್ಮ ಪ್ರಧಾನಿಯವರಿಗೆ 'ಭಲೇ!' ಎಂದಿತು. ಶ್ರೀ ಲಾಲಬಹದೂರಜೀಯವರನ್ನು 'ಸಂಧಾನ ಬಹಾದ್ದೂರರೆಂ'ದು ಜನತೆ ಜಯ ಜಯಕಾರ ಹಾಕಿತು. ಆದರೂ ಅವರ ಮನಸ್ಸಿನಲ್ಲಿ ಸಂದೇಹವಿದ್ದೇ ಇತ್ತು. ಹಿಂದೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಸುದ್ದಿಗಳೆಲ್ಲವೂ ಕೇವಲ ಗಾಳಿ ಸುದ್ದಿಗಳೇನು? ಶ್ರೀ ಲಾಲಬಹದೂರಜೀಯವರೋ ಬಹಳ ಸಣ್ಣನೆಯ ಮಾತುಗಳನ್ನಾಡುತ್ತಿದ್ದಾರೆ. ನೋಡುವ, ಕಾದು ನೋಡುವ. ಗುಟ್ಟು ಹೊರಗೆ ಬಂದೇ ಬಂದೀತೆಂದು ಜನತೆ ಸುಮ್ಮಗಾಯಿತು.

ನಾಯಿಯ ಹಿಂದೆ ಬಾಲ ಬರುತ್ತದೆನ್ನುವದು ಗಾದೆ ಮಾತು. ಭಾರತದ ಪ್ರಧಾನಿಯವರ ಹಿಂದುಗಡೆಯೇ ಬ್ರಿಟನಿನ ಪ್ರಧಾನಿ ಶ್ರೀ ವಿಲ್ಸನರ ಸಂಧಾನ ಸಮಾಲೋಚನೆಯ ಪತ್ರವೂ ಬಂದು. ಪ್ರಧಾನಿಯವರು ಬಂದ ಮರುದಿನವೇ ಕೇಂದ್ರದ ಮಂತ್ರಿಗಳ ಸಭೆ ನಡೆಯಿತು. ವಿಲ್ಸನರ ಪತ್ರದ ಕುರಿತೂ ಅಂದು ಮಾತುಕತೆ ನಡೆಯಿತು. ಮರುದಿನ ಪುನಃ ಎಲ್ಲರೂ ಸೇರಬೇಕೆಂದು ನಿಶ್ಚಯಿಸಿ ಅಂದಿನ ಸಭೆ ಮುಕ್ತಾಯವಾಯಿತು.

ಮರುದಿನ ಮಂತ್ರಿಗಳ ಮಹಾಸಭೆ ಕೂಡಿತು. ಹಿಂದೆ ಯಾವದನ್ನು ಗಾಳಿ ಸುದ್ದಿ ಎನ್ನಲಾಗಿತ್ತೋ ಅದನ್ನೇ ಅಂದು ನೈಜ ಸುದ್ದಿಯೆಂದು ಘೋಷಿಸಲಾಯಿತು. ಜುಲೈ ಒಂದನೇ ತಾರೀಕಿನ ಬೆಳಗ್ಗೆ ಆರೂವರೆ ಘಂಟೆಯಿಂದ ಕಚ್ಛ್ ಕದನ ಕಳದಲ್ಲಿ ಸಮರ ಸಂಧಾನ ರೀತಿ ಪ್ರಯೋಗಕ್ಕೆ ಬರುತ್ತದೆಂದೂ ಹೇಳಲಾಯಿತು. ಆ ಒಪ್ಪಂದದ ಪ್ರತಿಗಳಿಗೆ ನವದೆಹಲಿ ಹಾಗೂ ಕರಾಚಿಯಲ್ಲಿ ಒಂದೇ ಹೊತ್ತಿನಲ್ಲಿ ಒಪ್ಪಿಗೆಯ ಸಹಿ ಹಾಕಲಾಗುತ್ತದೆಂದೂ ಅನಂತರ ಕ್ರಮಶಃ ಅದನ್ನು ಕಾರ್ಯರೂಪಕ್ಕೆ ತರಲಾಗುತ್ತದೆಂದೂ ತಿಳಿಸಲಾಯಿತು. ದೆಹಲಿ ದೇವತೆಗಳೂ ಪಾಕಿಸ್ಥಾನೀ ಪ್ರೇತಗಳೂ ವಿಲ್ಸನರ ವಿಚಿತ್ರ ಸಲಹೆಗಳಿಗೆ ಒಪ್ಪಿಗೆಯನ್ನಿತ್ತರು. ಶ್ರೀ ಲಾಲಬಹದೂರ ಶಾಸ್ತ್ರೀಜೀಯವರ ಸಂಧಾನ ಸ್ತ್ರೀ ಹಾಗೂ ಶ್ರೀ ವಿಲ್ಸನರ ಸಮಾಲೋಚನೆಯ ಪುರುಷನ ಸಂಬಂಧದಿಂದ ಬಂದ ಒಪ್ಪಂದದ ಶಿಶು ಕೂಡಾ ಸಹಿ ರಾಜಕೀಯದ ರೂಪ ತಳೆಯಿತು. ಇಂತಹ ವಿಚಿತ್ರ ಶಿಶುವಿನ ಜನನವಾದೊಡನೆ ಭಾರತೀಯ ಜನತೆಗೆ ದಿಗ್ಭ್ರಮೆಯಾಯಿತು. ಪ್ರಧಾನಿಯವರ ಪೌರುಷದ ಮಾತುಗಳು ಎತ್ತ ಹೋದುವು? ಲಂಡನಿನಿಂದ ಶ್ರೀ ಲಾಲಬಹದೂರ ಶಾಸ್ತ್ರೀಜೀಯವರು ತಂದಿರುವ 'ಔಷಧ'ದಿಂದ ರೋಗ ಗುಣವಾಗುವ ಬದಲು ಹೊಸ ರೋಗವೂ ಉಂಟಾಯಿತು!

ನವದೆಹಲಿಯಲ್ಲಿ ಒಪ್ಪಂದದ ಪ್ರತಿಗೆ ಪಾಕಿಸ್ಥಾನದ ಪರವಾಗಿ ಭಾರತದಲ್ಲಿರುವ ಪಾಕಿಸ್ಥಾನದ ರಾಯಭಾರಿ (ಹೈಕಮಿಷನರ್) ಶ್ರೀ ಅರ್ಷಾದ್ ಹುಸೇನ್ ಮತ್ತು ಭಾರತದ ಪರವಾಗಿ ಪರ ರಾಷ್ಟ್ರ ಸಂಪರ್ಕ ವಿಭಾಗದ ಕಾರ್ಯದರ್ಶಿ ಶ್ರೀ ಅಝೀಮ್ ಹುಸೇನರು ಜೂನ್ ಮೂವತ್ತನೇ ತಾರೀಕಿನಂದು ಹನ್ನೆರಡು ಮುಕ್ಕಾಲು ಘಂಟೆ ಸಮಯದಲ್ಲಿ ಸಹಿ ಹಾಕಿದರು. (ಅವರು ಭಾವಮೈದುನರು.) ಹಿಂದೆ ನಿಶ್ಚಯಿಸಿದ್ದು ಹನ್ನೆರಡೂವರೆ ಘಂಟೆ ಸಮಯದಲ್ಲಿ ಸಹಿ ಹಾಕಬೇಕೆಂದು. ಇದು ಆರಂಭದಲ್ಲೇ ಕಂಡು ಬಂದ ಅಪಲಕ್ಷಣವೋ ಏನೋ! ಅಂತೂ ಸಮಯವನ್ನು ಮೀರಿ—ಅಂದು ಸಂಧಾನಕ್ಕೆ ಸಹಿ ಹಾಕಲಾಯಿತು. ಈ ರೀತಿ ಭಾವಮೈದುನರ ಸಹಿ ಹಾಕುತ್ತಿದ್ದಾಗ ಜನತೆ ಸುಮ್ಮಗುಳಿಯಲಿಲ್ಲ.

ಭಾರತೀಯ ಜನಸಂಘದ ಬಾವುಟದಡಿಯಲ್ಲಿ ದಿಲ್ಲಿಯ ಜನತೆ ಕೇಂದ್ರ ಮಂತ್ರಿ ಮಂಡಳದ ಕಾರ್ಯಾಲಯದತ್ತ ಕಾಲು ಹಾಕಿದರು. ಅದರ ಮುಖಂಡತ್ವವನ್ನು ಶ್ರೀ ರಾಮಚಂದ್ರ ಬಿಡೆ ಮತ್ತು ಶ್ರೀ ಅಟಬಿಹಾರಿ ವಾಜಪೇಯಿ, ಮತ್ತು ದಿಲ್ಲಿ ಶ್ರೀ ಕೇದಾರನಾಥ ಸಹಾನಿಯವರು ವಹಿಸಿಕೊಂಡಿದ್ದರು. ವಿಲ್ಸನರ ಸಮಾಲೋಚನೆ ರಾಷ್ಟ್ರದ ಸ್ವಾಭಿಮಾನಕ್ಕೆ ಬಳಿದ ಮಸಿಯೆಂಬುದನ್ನು ಶ್ರೀ ಸ್ವರಣ ಸಿಂಘರಿಗೆ ತಿಳಿಸಲು ಅವರು ಮುಂದಾಗಿದ್ದರು. ಆದರೆ ನಗರ ರಕ್ಷಕರು ಅವರನ್ನು ಒಳಗೆ ಬಿಡಲಿಲ್ಲ ಅಲ್ಲದೆ ಕೈಗೆ ಸಿಕ್ಕಿದ ಸುಮಾರು ನಲ್ವತ್ತು ಮಂದಿಯನ್ನು ಬಂಧಿಸಿದರು. ಅದರಲ್ಲಿ ಮುಖಂಡರೂ ಇದ್ದರು. ಶ್ರೀ ಕೇದಾರನಾಥ ಸಹಾನಿಯವರು ಒಪ್ಪಂದದ ಪ್ರತಿಯೊಂದನ್ನು ಸುಟ್ಟು ಹಾಕಿದರು—ಅದೂ ನಗರ ರಕ್ಷಕರ ವಾಹನದೊಳಗಿನಿಂದಲೇ ಅಲ್ಲದೆ ಅದು ಪ್ರತಿಭಟನೆಯ ಕೇವಲ ಆರಂಭ ಮಾತ್ರವೆಂದಿದ್ದು, ದೇಶದಾದ್ಯಂತ ಜುಲೈ ಎರಡು ಪ್ರತಿಭಟನಾ ಸಭೆಗಳನ್ನು ನಡೆಸಿದ್ದಾರೆ—ಜನಸಂಘದವರು.

ಭಾರತೀಯ ಜನಸಂಘ, ಪ್ರಜಾ ಸಮಾಜವಾದಿ ಪಕ್ಷ, ಸಂಯುಕ್ತ-ಸಮಾಜವಾದಿ ಪಕ್ಷ ಹಾಗೂ ಹಿಂದೂ ಮಹಾಸಭೆ ಮತ್ತು ರಾಮರಾಜ್ಯಪರಿಷತ್ತು ಈ ಸಂಧಾನವನ್ನು ರಾಷ್ಟ್ರದ ಸ್ವಾಭಿಮಾನಕ್ಕೆ ಅಪಮಾನವೆಂದು ಕರೆದಿವೆ. ಸ್ವತಂತ್ರ ಪಾರ್ಟಿ ಹಾಗೂ ಕಮ್ಯೂನಿಸ್ಟ್ ಪಕ್ಷಗಳು ಡೊಂಬರಲಾಗ ಹಾಕಿದ್ದಾವೆ. ಇವಲ್ಲದೆ ಇಸ್ಲಾಮೀ ಸಂಸ್ಥೆಗಳು ಹಾಗೂ ಕೆಲ ಕಮ್ಯೂನಿಸ್ಟರ ಗುಂಪುಗಳು ಶ್ರೀ ಲಾಲ ಬಹದೂರ ಶಾಸ್ತ್ರೀಜೀಯವರ ಸಂಧಾನ 'ಜಾಣಾಕ್ಷತನ'ವನ್ನು ಚೆನ್ನಾಗಿ ಕೊಂಡಾಡಿವೆ, ಹೊಗಳಿವೆ. ಸ್ವತಂತ್ರ ಪಾರ್ಟಿಗೂ ಮುಸ್ಲಿಂಲೀಗಿಗೂ ಆದಾಗಲೇ ಸಂಬಂಧ ಬೆಳೆದಿದ್ದು ಮುಸ್ಲಿಂ ಲೀಗಿನವರು ಕರೆದೆಡೆಗಳಿಗೆಲ್ಲಾ ಶ್ರೀ ರಾಜಗೋಪಾಲಾಚಾರಿಯವರು ಹೋಗುತ್ತಾ

(ಹನ್ನೊಂದನೇ ಪುಟ ನೋಡಿರಿ)

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ಸಮಾಜದಲ್ಲಿ ಅಂಟಿಕೊಂಡಿರುವ ಕೆಟ್ಟ ಚಾಳಿ

ವರದಕ್ಷಿಣಾ ಪದ್ಧತಿ

ಬರೆದವರು
ಶ್ರೀ ಬಿ. ಎ. ಶೆಟ್ಟಿ, ಬೆಂಗ್ಳಾನ್ತಿಮಾರ್.

ವಿವಾಹ ಸಮಾರಂಭದಲ್ಲಿ ವಧುವಿನ ಕಡೆಯಿಂದ ವರನಿಗೆ ಕೊಡಬೇಕಾದ ನಿಧಿಯೇ ವರದಕ್ಷಿಣೆ. ಭಾರತದ ನಾಗರಿಕ ಜೀವನದಲ್ಲಿ ಸೇರಿಕೊಂಡಿರುವ ಅತೀ ಕೆಟ್ಟ ವಾಡಿಕೆಯೇ ವರದಕ್ಷಿಣೆ. ಈ ವರದಕ್ಷಿಣಾ ವಾಡಿಕೆಯು ಜೀವನದುದ್ದದ ಪ್ರೇಮಮಯ ಸುಂದರ ಸಂಸಾರವನ್ನು ನರಕ ಜೀವನಕ್ಕೆಳೆಯುತ್ತದೆ ಎಂದರೆ ತಪ್ಪಾಗಲಾರದು.

ನಾವು ಇತಿಹಾಸವನ್ನು ತೆರೆದು ನೋಡಿದರೆ ಈ ವರದಕ್ಷಿಣಾ ವಾಡಿಕೆಯು ಎಲ್ಲೂ ಕಂಡು ಬರುವುದಿಲ್ಲ. ಆದರೆ ವಿವಾಹ ಸಮಾರಂಭದಲ್ಲಿ ಕನ್ಯೆಯನ್ನು ವರನ ಮನೆಗೊಪ್ಪಿಸುವಾಗ ಜೊತೆಯಲ್ಲಿ ಅವಳ ಜೀವನಕ್ಕಾಗಿ ಧನಕನಕಾದಿ ಆಭರಣಗಳನ್ನೂ ಸ್ವಲ್ಪ ಸ್ಥಳವನ್ನೂ ಬಿಟ್ಟು ಕೊಡುತ್ತಿದ್ದ ಪುರಾವೆ, ಧರ್ಮಶಾಸ್ತ್ರಗಳಲ್ಲಿ ಕಂಡು ಬರುತ್ತದೆ. ಈ ವಾಡಿಕೆಯು ಮುಸಲ್ಮಾನರಲ್ಲಿ ಮತ್ತು ಕ್ರೈಸ್ತರಲ್ಲಿ ಈಗಲೂ ಅಲ್ಲಲ್ಲಿ ಇದೆ. ಇದು ನಿಜಕ್ಕೂ ಉತ್ತಮವಾಡಿಕೆ ಎಂಬುದು ಸರ್ವಸಮ್ಮತ ವಿಷಯವಾಗಿದೆ. ಎಲ್ಲೋ ಹುಟ್ಟಿ ಬೆಳೆದ ಸ್ತ್ರೀ ಪುರುಷರಿಬ್ಬರನ್ನು ಕರೆತಂದು ವಿವಾಹವೆಂಬ ಬಂಧನದಿಂದ ಬಂಧಿಸಿ, ಅವರನ್ನು ಒಂದುಗೂಡಿಸಿ ಸಂಸಾರ ಜೀವನವನ್ನು ಸಾಗಿಸುವಂತೆ ಮಾಡುತ್ತೇವೆ. ವಧೂವರರಿಬ್ಬರ ಸ್ನೇಹ ಮಿಲನವೇ ವಿವಾಹ. ಮುಂದೆ ಅವರು ಒಂದು ನಾಣ್ಯದ ಎರಡು ಬದಿಗಳಂತೆ ಒಂದುಗೂಡಿ ಜೀವನ ಸಾಗಿಸುವರು. ಹಾಗಿರುವಾಗ ಧರ್ಮಶಾಸ್ತ್ರಗಳು ಸಾರುತ್ತಿರುವ ಕನ್ಯಾದಾನ ಕಾಲದ ಸಂಪತ್ತು ಮುಂದೆ ಇವರ ಜೀವನಕ್ಕೆ ಸಹಕಾರಿಯಾಗುತ್ತದೆ. ವಧುವಿಗೆ ದೊರೆಯುವ ಲೌಕಿಕ ಸಾಧನಗಳು ಆವಶ್ಯಕತೆಗೆ ಬೀಳುತ್ತವೆ. ಈ ಕಾರಣದಿಂದಲೋ ಏನೋ ಕನ್ಯಾದಾನ ಮಾಡುವಾಗ ಸಂಪತ್ಸಾಧನಗಳನ್ನು ಕೊಡುವುದು ಕ್ರಮಾಗತ ಅನುಸರಣೆಗೆ ಬಂದಿತು. ಆದರೆ! ಈ ಮನೋಭಾವನೆಯು ದಿನದಿಂದ ದಿನಕ್ಕೆ ಮಾರ್ಪಾಟು ಹೊಂದಲಾರಂಭವಾಯಿತು. ಯಾವ ಪ್ರಾಂತ್ಯದಲ್ಲಿ ಯಾ ಯಾವ ಜಾತಿಯಲ್ಲಿ ಕನ್ಯಾ ಸಂಖ್ಯೆ ವಿರಲ ರಂಭವಾಯಿತೋ ಅಂದಿನಿಂದ ವಾಡಿಕೆಯು ಬದಲಾವಣೆಗೊಂಡಿತು. ಕನ್ಯೆಯನ್ನು ಹೇಗಾದರೂ ಓರ್ವ ವರನಿಗೆ ಕೊಟ್ಟು ವಿವಾಹ ಮಾಡಿಸಬೇಕಾಗುತ್ತದೆ. ವರರ ಸಂಖ್ಯೆಯು ಕಡಿಮೆಯಾಗುತ್ತದೆ. ಆದ್ದರಿಂದ ಅಲ್ಲಿ ವರನಿಗೆ ಕನ್ಯಾದಾನ ಮಾಡುವಾಗ ವರದಕ್ಷಿಣೆಯನ್ನು ಕೊಡಬೇಕು ಎಂಬುದು ರೂಢಿ ಎಲ್ಲಿ ಬಳಾರಂಭಿಸಿತು. ವರದಕ್ಷಿಣೆಕೊಡದಿದ್ದಲ್ಲಿ ವರನು ವಿವಾಹ ವಾಗುವುದಿಲ್ಲ. ಈ ರೂಢಿಯು ದಿನದಿಂದ ದಿನಕ್ಕೆ ಬೆಳೆಯುತ್ತಾ ಬಂತು.

ವಿವಾಹ ಯೋಗ್ಯ ವಧುಗಳ ಸಂಖ್ಯೆ ಜಾಸ್ತಿ ಇದ್ದು ವರರ ಸಂಖ್ಯೆ ಕಡಿಮೆಯಿದ್ದಲ್ಲಿ ಕನ್ಯಾರ್ಥಿಗಳಾಗಿ ಹೋಗುವಾಗ, "ನಿಮ್ಮ ಕನ್ಯೆಗೆ ನೀವು ಇಂತಿಷ್ಟು ಎಂಬ ನಿಶ್ಚಿತ ಮೌಲ್ಯದ ಧನಕನಕಾದಿ ಆಭರಣಗಳನ್ನು ಕೊಟ್ಟರೆ ಕನ್ಯೆ ಸ್ವೀಕರಿಸಿಕೊಳ್ಳುವೆವು" ಅನ್ನುವರು. ಈ ರೀತಿಯಾಗಿ ವರದಕ್ಷಿಣೆ ಸರಿಯಾಗಿ ಕ್ರಮವು ಅನುಸರಣೆಗೆ ಬಂದಿತು.

ಆದರೆ ಇಂದು ಈ ರೂಢಿಯು ಕ್ರಮಾಗತವಾಗಿ ಬೆಳೆಯುತ್ತಾ ಬೆಳೆಯುತ್ತಾ, ಕನ್ಯೆಯರ ಸಂಖ್ಯೆ ಹೆಚ್ಚಿರುವ ಪ್ರದೇಶದಲ್ಲಿ ಅಸಂಖ್ಯಾತ ಧನವನ್ನು ವರದಕ್ಷಿಣಾ ರೂಪದಲ್ಲಿ ಕೊಡುವರೀ ಮುಂದಾಗಿದೆ. ಕನ್ಯಾರ್ಥಿಗಳು ಕನ್ಯೆಗೆ ಧನಕನಕಾದಿ ಆಭರಣಗಳನ್ನು ಕೊಡುವ ವಾಡಿಕೆ ಬಹು ಕಡಿಮೆ ಪ್ರದೇಶದಲ್ಲೇ ಕಾಣಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಭೀಕರ ರೂಪ ತಾಳಿ ತಾಂಡವವಾಡುತ್ತಿದೆ ಎಂದರೆ ತಪ್ಪಾಗಲಾರದು.

ಇದರಿಂದಾಗಿ ರೂಪವಂತ ಗುಣಸಂಪನ್ನನಾದ ವರನಿಗೆ, ಗುಣವತಿ ರೂಪವತಿಯಾದ ಕನ್ಯೆಯೇ ಲಭಿಸುತ್ತಿಲ್ಲ. ಕಾರಣ ಯಾವ ಕನ್ಯೆಯ ಕಡೆಯಿಂದ ಹೆಚ್ಚು ಧನವು ವರದಕ್ಷಿಣಾ ರೂಪದಲ್ಲಿ ದೊರಕುತ್ತಿದೆಯೋ ಅದೇ ಕನ್ಯೆಯ ಅನ್ವೇಷಣೆಗಾಗಿ ಹೊರಡಲನುವಾಗುತ್ತಾರೆ. ಕನ್ಯೆಯು ನಿರ್ಗುಣೆಯಾಗಿರಲಿ ಸದ್ಗುಣೆಯಾಗಿರಲಿ, ಯಾ ರೂಪವತಿಯಾಗಿರಲಿ ಕುರೂಪಿಯಾಗಲಿ ಲಕ್ಷ್ಯಕ್ಕೆ ತರುವುದಿಲ್ಲ. ಇದೇ ರೀತಿ ಸದ್ಗುಣಿ ರೂಪವತಿ ಕನ್ಯೆಗೆ ಕುರೂಪಿ ನಿರ್ಗುಣವಂತ ವರನ ಜೋಡಿಯಾಗುವುದು. ಕಾರಣ ಆತನು ಸ್ವಲ್ಪ ಕಡಿಮೆ ವರದಕ್ಷಿಣೆಗೆ ಒಪ್ಪಿಕೊಳ್ಳುತ್ತಾನೆ.

ಇದರಿಂದಾಗಿ ಸ್ತ್ರೀಪುರುಷರಿಬ್ಬರ ಸುಖಸಂಸಾರ ಸಂಬಂಧವು ತುಂಡರಿಸಲ್ಪಟ್ಟು, ಮಾನಸಿಕ ಶಾರೀರಿಕ ಒಕ್ಕೂಟವನ್ನು ಮಾಡಲಾಗದೆ, ಬಲತ್ಕಾರಪೂರ್ವಕ ವಿವಾಹಕ್ಕೆ ಒಳಗಾಗಬೇಕಾಗುತ್ತದೆ. ಹಿರಿಯರ ಆಜ್ಞಾಪಾಲನೆಗಾಗಿ ವಧೂವರರು ವಿವಾಹಕ್ಕೆ ಒಪ್ಪಿಗೆಯಿತ್ತು ಮುಂದಾಗಬೇಕಾಗುವುದು. ಸ್ತ್ರೀಗೆ ತನಗೊಬ್ಬ ಉತ್ತಮ ರೂಪವಂತ ಸದ್ಗುಣ ವರನು ದೊರಕಬೇಕೆಂಬ ಹಂಬಲವಿರುತ್ತದೆ. ಅದ್ರೀತಿ ಪುರುಷನಿಗೂ ತನಗೊಬ್ಬಳು ಉತ್ತಮ ರೂಪವತಿ ಸದ್ಗುಣಿ ವಧು ದೊರಕಬೇಕೆಂಬ ಹಂಬಲವು ಇದ್ದೇ ಇರುತ್ತದೆ. ಆದರೆ ಹಿರಿಯರ ಕಟ್ಟಿಗೋಸ್ಕರ ತಾವು ಮನಸ್ಸಿಲ್ಲದಿದ್ದರೂ ಮದುವೆಗೆ ಒಪ್ಪಲೇಬೇಕಾಗುತ್ತದೆ. ನಿಶ್ಚಿತ ಸಮಯಕ್ಕೆ ವಿವಾಹ ಸಮಾರಂಭ ಜರುಗುವುದು. ಸತಿಪತಿಯರಿಗೆ ಪ್ರೇಮಮಯ ಜೀವನವು ದೊರಕುವುದಿಲ್ಲ, ದಿನೇ ದಿನೇ ಸತಿಪತಿಯರು ದುಃಖಿತರಾಗಿಯೇ ದಿನಕಳೆವರು ಕೆಲವೇ ದಿನಗಳಲ್ಲಿ ಸತಿಯನ್ನು ತೊಲಗಿ ಪತಿಯು ಅಗಲುವುದಿದೆ. ಪತಿಯನ್ನು ಬಿಟ್ಟು ಸತಿ ಆತ್ಮಹತ್ಯೆಗೈದುಕೊಳ್ಳುವುದಿದೆ. ಇಲ್ಲವೇ ಸತಿಯನ್ನು ತ್ಯಜಿಸಿ ಪತಿಯು ಪರಲೋಕ ಯಾತ್ರೆ ಮಾಡುವುದಿದೆ. ಇದರಿಂದಾಗಿ ಹಿರಿಯರ ಆಜ್ಞೆಗೆ ಒಪ್ಪಿ ವರದಕ್ಷಿಣಾ ಪ್ರಭಾವದಿಂದ ಸತಿಯೂ ವಿಧವೆಯಾಗುವುದಿದೆ. ಪತಿಯೂ ವಿಧುರನಾಗುವುದಿದೆ.

ಉತ್ತಮ ವಧೂವರರ ಜೋಡಿಯು ಅವರವರ ಸ್ವೇಚ್ಛಾ ಪ್ರಕಾರ ಜರಗುವುದಿಲ್ಲ. ಹಿರಿಯರಿಚ್ಛೆಯಂತೆ ಜರಗಿದ ವಿವಾಹವು ದುಃಖಮಯವಾಗುವುದು, ಸತಿಪತಿಗಳಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸಿಕೊಳ್ಳುವಂತಿಲ್ಲ ಸದಾ ದುಃಖಮಯ ಜೀವನ. ಮನೆಯಲ್ಲಿ ಗೆಲುವಿಲ್ಲ. ಮನದಲ್ಲಿ ನಲುವಿಲ್ಲ. ತನುವೆಲ್ಲಾ ಬಡಕಲಾಗ ಹತ್ತುವುದು ಇನು ವಿವಾಹ ಜರಗಿದರೆ ಆಗುವ ಪರಿಣಾಮವಾಯಿತು.

ವತ್ಸರ ತುಂಬಿದ ಹೆಣ್ಣು ಮನೆಯಲ್ಲಾದಳೆಂದುಭಾವಿಸೋಣ. ದಿನೇ ದಿನೇ ಕನ್ಯಾರ್ಥಿಗಳು ಬರ ಹತ್ತುವರು. ಅವರಿಗೆಲ್ಲಾ ಭಕ್ಷ್ಯ ಭೋಜನದ ವ್ಯವಸ್ಥೆ ಮಾಡಬೇಕಾಗುತ್ತದೆ. ಕೊನೆಗೆ ವರ ದಕ್ಷಿಣಾ ನಿಶ್ಚಯ. ಕನ್ಯೆಯ ಪಿತನು ಸ್ವಲ್ಪ ಬಡವನೆಂದೆಣಿಸೋಣ. ಕನ್ಯಾರ್ಥಿಗಳು ಸಾವಿರಗಟ್ಟಲೆ ಹಣವನ್ನು ಕೇಳುತ್ತಿದ್ದಾರೆ ಎಲ್ಲಿಂದ ತಾನೆ ಕೊಡಬಹುದು? ಕೊನೆಗೆ ಇದ್ದ ತನ್ನ ಅಲ್ಪ ಆಸ್ತಿಯನ್ನು ಅಡವಿಟ್ಟೋ ಯಾ ಅನ್ಯರಿಗೆ ಮಾರಿಯೋ ತನ್ನ ಕುವರಿಯ ವಿವಾಹಕ್ಕೆ ಬೇಕಾಗುವಷ್ಟು ಸಾಲವನ್ನು ಪಡೆದು ವಿವಾಹ ನೆರವೇರಿಸುವನು. ವಿವಾಹ ಜರಗುವುದು, ವಧುವಿನ ಮಾತಾಪಿತರು ನಿರ್ಗತಿಕರಾಗಿ ಉಳಿದಲೆಯಬೇಕಾಗುತ್ತದೆ.

ಬರೀ ಬಡವನೊಬ್ಬನ ಕನ್ಯೆಯಿರುವಳೆಂದು ಗ್ರಹಿಸೋಣ, ಕನ್ಯೆಗೆ ವಿವಾಹ ಜರಗಬೇಕು ತಾನೆ? ಸರಿ! ಕನ್ಯಾರ್ಥಿಗಳು ಬರುವರು; ವರದಕ್ಷಿಣೆ ಕೇಳುವರು. ಪಾಪ! ದುಡಿದೇ ಜೀವನ ಸಾಗಿಸುವ ಬಡವ ವರದಕ್ಷಿಣೆ ಎಲ್ಲಿಂದ ತಾನೆ ಕೊಡುವನು? ಇದೇ ರೀತಿಯಾಗಿ ಹಲವು ವರ್ಷಗಳು ಕಳೆಯುವುವು. ಕನ್ಯೆಯು ಕೊನೆ ವರೆಗೂ ಕುಮಾರಿಯಾಗಿಯೇ ಇರಬೇಕಾಗುತ್ತದೆ. ಇದು ವರದಕ್ಷಿಣೆಯಿಂದ ಪ್ರಾಪ್ತವಾಗುವ ನರಕ ಜೀವನವಲ್ಲವೇ?

ಪ್ರಾಯಸ್ಥಳಾದ ಕುವರಿಯು ಮನೆಯಲ್ಲೇ ಇರುವಳು; ಕನ್ಯಾರ್ಥಿಗಳ ಬರುತ್ತಾ ಹೋಗುತ್ತಾ ಇರುವರೇ ಹೊರತು ವಿವಾಹ ನಿಶ್ಚಯವಾಗುವುದಿಲ್ಲ. ಕಾರಣ! ಬೇಕಾಗುವಷ್ಟು ವರದಕ್ಷಿಣೆ ಕೊಡುವದೇ ಅಸಾಧ್ಯವಾಗುತ್ತದೆ. ಅಂತಹ ಸಮಯದಲ್ಲಿ ಹಲ ಕೆಲವು ವೃದ್ಧರು ಪುನರ್ವಿವಾಹಕ್ಕಾಗಿ ಕನ್ಯೆ ಅರಸಲಾರಂಭಿಸುವರು. ವೃದ್ಧರು ವರದಕ್ಷಿಣೆ ಕೊಡದೇನೆ ವಿವಾಹಕ್ಕೊಪ್ಪುವರು. ಕಾರಣ! ಹೆಣ್ಣು ಮುದುಕನೊಬ್ಬನಿಗೆ ಎಳೆ ಹೆಣ್ಣು ದೊರಕುವುದಲ್ಲವೇ? ವರದಕ್ಷಿಣಾ ಪರಿಣಾಮದಿಂದಾಗಿ ವೃದ್ಧ—ಕುವರಿಯರ ವಿವಾಹವು ನೆರವೇರುವುದು. ಕನ್ಯೆಗೆ ವೃದ್ಧ ಪತಿಯಾಗಲು ಮನವಿರಬಹುದೇ? ವರದಕ್ಷಿಣೆಯ ಭಯಕ್ಕೆ ಹಾಗೂ ಹಿರಿಯರ ಮಾತಿಗೆ ಬೇಕಾಗಿ ಮದುವೆಗೆ ಒಪ್ಪಿ ವಿವಾಹ ನೆರವೇರಿತೆನ್ನೋಣ. ಮೊದಲೇ ವೃದ್ಧಪತಿ, ಸತಿಗೆ ನಿಜವಾದ ಸುಖವಿಲ್ಲ. ಮೃತ್ಯುವಿನ ಪಟ್ಟಣಕ್ಕೆ ಕಾಲಿಡಲು ಸಮೀಪಿಸಿದ ವೃದ್ಧಪತಿ ಕೆಲವೇ ಸಮಯದಲ್ಲಿ ಮರಣಕ್ಕೀಡಾಗುತ್ತಾನೆ—ಆ ಪುಟ್ಟ ಕನ್ಯೆ ಆಗಲೇ ವಿಧವೆಯಾಗಿ ಬಿಟ್ಟಳು. ಮಕ್ಕಳನ್ನಾದರೂ ನೋಡಿ ಸಂತೋಷ ಪಡುವೆನೆಂದು ಭಾವಿಸಿಕೊಳ್ಳಲೇ? ಇನ್ನೂ ಮಕ್ಕಳಾಗಲಿಲ್ಲ. "ಅಪುತ್ರಸ್ಯ ಗತಿರ್ನಾಸ್ತಿ" ಎಂಬ ಹಿರಿಯರ ನಾಣ್ಣುಡಿಯೇ ಇದೆ, ಅವಳಿಗೆ ಎಳ್ಳಷ್ಟಾದರೂ ಸುಖವಿದೆಯೇ? ಇದು ವರದಕ್ಷಿಣಾ ಪ್ರಭಾವವಲ್ಲದೆ ಇನ್ನೇನು?

ವರದಕ್ಷಿಣಾ ಫಲ ಸ್ವರೂಪವಾಗಿ ನಿಜವಾದ ಸತಿಪತಿಯರ ಜೋಡಿಯಾಗುವುದಿಲ್ಲ. ಉತ್ತಮ ಸಂತಾನ ಪ್ರಾಪ್ತಿಯಾಗು

(ಹತ್ತನೇ ಪುಟ ನೋಡಿರಿ)

ಇದೀಗ ಪ್ರಕಟವಾಗಿದೆ–

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ.........................."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ!

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಯುಗ ಪ್ರೆಸ್, ಉಡುಪಿ | ನವಭಾರತ ಬುಕ್ ಡಿಪ್ಪೊ, ಪಾಲುಕೋಟೆ, ಉಡುಪಿ.

ಚಿನ್ನದಿಂದಲೇ

ಅಮೆರಿಕೆಯ ಪೂರ್ವ

ಚಿತ್ರ ೧: ರೊಕ್ಕೀ ಪರ್ವತ ಶ್ರೇಣಿ

ವಾಶಿಂಗ್ ಟನ್ನಿನಿಂದ ಸಾನ್ ಫ್ರಾನ್ಸಿಸ್ಕೊವಿಗೆ ವಿಮಾನ ಮೂಲಕ ಹಾರುವಾಗ ರೊಕ್ಕೀ ಪರ್ವತ ಶ್ರೇಣಿಯ ಸೌಂದರ್ಯವನ್ನು ನೋಡಬಹುದು. ಈ ಪರ್ವತದ ಪಂಕ್ತಿಯು ಉತ್ತರ ಧ್ರುವವೃತ್ತ ಪ್ರದೇಶದಲ್ಲಿ ಪ್ರಾರಂಭವಾಗಿ ಅಮೆರಿಕೆಯ ಪಶ್ಚಿಮ ಕರಾವಳಿಯ ಪಕ್ಕದಲ್ಲಿ ದಕ್ಷಿಣ ಅಮೆರಿಕೆಯತ್ತ ಸಾಗುತ್ತದೆ ಅಲ್ಲಿ ಅದು ಎಂಡಿಸ್ ಪರ್ವತವೆಂದು ಕರೆಯಲ್ಪಡುತ್ತದೆ. ಪ್ರಪಂಚದ ಅತಿ ದೀರ್ಘ ಪರ್ವತ ಮಾಲೆಯಲ್ಲಿ ರೊಕ್ಕೀ-ಎಂಡಿಸ್ ಒಂದು. ಸಂಯುಕ್ತ ಸಂಸ್ಥಾನಗಳ ಪಶ್ಚಿಮ ರಾಜ್ಯಗಳನ್ನು ರೊಕ್ಕೀ ಪ್ರತ್ಯೇಕಿಸುತ್ತದೆ. ಇದರ ಪೂರ್ವ ಸೋಪಾನಗಳಲ್ಲಿ ಬಿದ್ದ ಮಳೆ ನೀರು ಮಿಸಿಸ್ಸಿಪಿ ನದಿಯನ್ನು ಸೇರುತ್ತದೆ. ಪಶ್ಚಿಮ ಪಕ್ಕದಲ್ಲಿ ಚಿಕ್ಕ ನದಿಗಳ ಮೂಲಕ ಶಾಂತ ಸಾಗರವನ್ನು ಕೂಡುತ್ತದೆ.

ಚಿತ್ರ ೨—ಆಗಮನ

ರೊಕ್ಕೀ ಪರ್ವತವನ್ನು ದಾಟಿದ ವಿಮಾನ ನೇರವಾಗಿ ಸಾನ್‌ಫ್ರಾನ್ಸಿಸ್ಕೋವಿನ ಮೇಲೆ ಹಾರಾಡ ತೊಡಗುತ್ತದೆ. ಪ್ರಪಂಚದ ಮೊತ್ತಮೊದಲ ಸ್ಥಾನ ಪಡೆಯುವ ಪ್ರಕೃತಿ ಸಹಜವಾದ ಬಂದರದ ಒಂದು ಮೈಲುದ್ದದ ಗೋಲ್ಡನ್ ಗೇಟನ್ನು ನಾವು ಮೇಲಿಂದಲೇ ಕಾಣಬಹುದು ಈ ಗೇಟಿನಲ್ಲಿ ೪,೨೦೦ ಅಡಿ ಉದ್ದದ ಒಂದು ಸೇತುವೆಯಿದೆ. ಇದು ಈ ಬಗೆಯ ಸೇತುಗಳಲ್ಲಿ ಅತಿ ದೀರ್ಘವಾದುದು ಇದನ್ನೂ ನಾವು ವಿಮಾನದಿಂದಲೇ ಈಕ್ಷಿಸಬಹುದು. ಸಾನ್ ಫ್ರಾನ್ಸಿಸ್ಕೋವಿನ ಆರಂಭವಿಲ್ಲಿಯೇ ಆಗುವುದು.

ಚಿತ್ರ ೩— ಸಾನ್ ಫ್ರಾನ್ಸಿಸ್ಕೊ

೧೮ನೆ ಶತಮಾನದ ಕೊನೆಯಲ್ಲಿ ಸ್ಪೇನಿನರು ಸಾನ್‌ಫ್ರಾನ್ಸಿಸ್ಕೊ ನಗರವನ್ನು ಕಟ್ಟಿದರು. ೧೮೪೭ರ ವರೆಗೆ ಈ ಶಹರದ ಜನಸಂಖ್ಯೆ ಸುಮಾರು ೮೦೦ ಮಾತ್ರ. ಅದೇ ಸಮಯದಲ್ಲಿ ಸಮೀಪದ ಗುಡ್ಡಗಳಲ್ಲಿ ಚಿನ್ನವು ದೊರೆಯುವುದೆಂದು ಪ್ರಕಟವಾಯಿತು. ರಾತ್ರಿ ಬೆಳಗಾಗುವುದರೊಳಗೆ ೧ ಲಕ್ಷ ಜನರ ಮಹಾ ನಗರವೆನಿಸಿತು ಇದು. ಇಂದು ಸಾನ್‌ಫ್ರಾನ್ಸಿಸ್ಕೊವಿನ ಜನಸಂಖ್ಯೆಯು ಸುಮಾರು ೧೦ ಲಕ್ಷವನ್ನೂ ಮೀರುತ್ತದೆ. ಪೂರ್ವ ದೇಶಗಳಿಂದ ಬರುವ ಹಡಗುಗಳು ಹಾಗೂ ವಿಮಾನಗಳಿಗೆ ಆಶ್ರಯ ನೀಡುವ ಮಹಾ ಬಂದರ ಸ್ಥಳವೂ ಇದಾಗಿದೆ. ಇದ್ದಲು-ಎಣ್ಣೆ-ನೀರು ಸಂಗ್ರಹಣೆಯ ನಿಲ್ದಾಣವೂ ಇದೇ.

ಚಿತ್ರ ೪: ಮಹಾಸೇತು

ವಿಮಾನ ನಿಲ್ದಾಣದಿಂದ ಮುಖ್ಯ ನಗರ ಪ್ರದೇಶದತ್ತ ಪ್ರಯಾಣಿಸುವಾಗ ಮಹಾ ಸೇತುವೊಂದು ಅಡ್ಡ ಬರುತ್ತದೆ. ಸಾನ್‌ಫ್ರಾನ್ಸಿಸ್ಕೋ— ಓಕ್‌ಲ್ಯಾಂಡ್ ಅಖಾತ ಸೇತುವೆಯೆಂದಿದನ್ನು ಕರೆಯುತ್ತಾರೆ. ಇದರ ಉದ್ದವೆಷ್ಟು ಊಹಿಸಬಲ್ಲಿರಾ? ಎಂಟು ಮೈಲುಗಳ ಮೇಲೆ ಎರಡು ಫರ್ಲಾಂಗು! ಈ ಪ್ರದೇಶದಲ್ಲಿ ವಾಹನ ಸಂಚಾರವು ಅತೀವವಾಗಿದೆ. ಹಾಗಿದ್ದರೂ ಸಂಚಾರ ವ್ಯವಸ್ಥೆಯು ಅತ್ಯುತ್ತಮವಾಗಿಯೇ ಇದೆ.

ಚಿತ್ರ ೫. ವೈ ಎಂ ಸಿ ಎ.

ಯಂಗ್‌ಮೆನ್ ಕ್ರಿಶ್ಚಿಯನ್ ಎಸೋಸಿಯೇಶನ್ ಅಥವಾ ವೈ ಎಂ ಸಿ ಎಯು ಹಲವಾರು ಹೋಟೇಲುಗಳು ಸನ್‌ಫ್ರಾನ್ಸಿಸ್ಕೊವಿನಲ್ಲಿವೆ ಯಾತ್ರಿಗಳು ಇವುಗಳಲ್ಲೊಂದರಲ್ಲಿ ತಂಗಬಹುದು. ವೈ ಎಂ ಸಿ ಎ ಸಂಸ್ಥೆಯು ಜಗತ್ ಪ್ರಸಾರಿತವಾದುದು. ಮಾನವ ಸಮಾಜಕ್ಕೆ ಬಹುಮುಖದ ಸೇವೆ ಸಲ್ಲಿಸುವ ಸಂಸ್ಥೆಯಿದು. ಕ್ರೀಡೆ ಮತ್ತು ಶಾರೀರಿಕ ಶಿಕ್ಷಣ ಕಾರ್ಯಕ್ರಮಗಳನ್ನು ಗಂಡು ಹುಡುಗರಿಗೂ ಯುವಜನರಿಗೆ ಸಾಮಾಜಿಕ ಕಾರ್ಯಕ್ರಮಗಳನ್ನೂ, ದುಸ್ಥಿಯಲ್ಲಿರುವವರಿಗೆ ಸಹಾಯ ಯೋಜನೆಗಳನ್ನೂ ವೈ ಎಂ ಸಿ ಎ ರೂಪಿಸುತ್ತದೆ. ಈ ನೂರು ಸಂಸ್ಥೆಯ ಕಾರ್ಯಕಲಾಪ ಹಾಗೂ ಚಟುವಟಿಕೆಗಳಲ್ಲಿ ಇವು ಕೆಲವು ಮಾತ್ರ.

ಚಿತ್ರ ೬—ಸ್ಥಳಾವಕಾಶ

ವೈ ಎಂ ಸಿ ಎ ಯು ಯಾತ್ರಿಗಳಿಗೆ ಸುವ್ಯವಸ್ಥಿತ, ಪರಿಶುದ್ಧ ಕೋಣೆಗಳನ್ನು ಒದಗಿಸುತ್ತದೆ. ಬಾಡಿಗೆಯ ದರವಾದರೂ ನ್ಯಾಯ ಸಮ್ಮತವಾದುದು. ಬಜೆಟ್ ತಯಾರಿಸಿಯೇ ಸಂಚಾರ ಮಾಡುವ ವಿದ್ಯಾರ್ಥಿಗಳೂ ಇತರ ಸಾಮಾನ್ಯ ಜನರೂ ಇಲ್ಲಿಯೇ ಸ್ಥಳಾವಕಾಶವನ್ನು ಪಡೆಯುತ್ತಾರೆ. ಅತಿಥಿಗಳ ಉಪಯೋಗಕ್ಕೆಂದು ಪ್ರತಿ ಉಪ್ಪರಿಗೆಯಲ್ಲಿಯೂ ಶೊವರ್ ಬಾತ್ ವ್ಯವಸ್ಥೆಯಿದೆ; ಜತೆಗೆ ವಾಶ್‌ರೂಮುಗಳೂ ಇವೆ. ಪುರುಷರಿಗೆ ಸೌಲಭ್ಯವೊದಗಿಸಲು ವೈ ಎಂಸಿಎ ಇರುವಂತೆಯೇ ಸ್ತ್ರೀಯರ ಸೌಕರ್ಯಕ್ಕಾಗಿ ಯಂಗ್ ವಿಮನ್ಸ್ ಕ್ರಿಶ್ಚಿಯನ್ ಎಸೋಸಿಯೇಶನ್ ಎಂಬ ಸಂಸ್ಥೆಯೂ ಇಲ್ಲಿದೆ ಇದು ಮಹಿಳಾ ಯಾತ್ರಿಕರಿಗೆ ಸಕಲ ಪ್ರಕಾರದ ವ್ಯವಸ್ಥೆಗಳನ್ನು ಮಾಡುತ್ತದೆ.

ಚಿತ್ರ ೭— ಕೆಫೆಟೇರಿಯಾ

ಕೆಫೆಟೇರಿಯಾ ಅಮೆರಿಕೆಯ ಪ್ರಮುಖ ಆದರೆ, ವಿಲಕ್ಷಣ ಸಂಸ್ಥೆಗಳಲ್ಲಿ ಒಂದು. ವೈ ಎಂ ಸಿ ಎ ಯ ಕೆಫೆಟೇರಿಯಾದಲ್ಲಿ ನಾವು ಭೋಜನ ಸ್ವೀಕರಿಸಬಹುದು ಭೋಜನಾಪೇಕ್ಷಿಯು ಒಂದು ಟ್ರೇಯನ್ನು ತೆಗೆದು ರ್‍ಯಾಕಿನ ಮೇಲಿಡು

೧ ೨ ೩ ೪








೧೦ ೧೧ ೧೨ ೧೩

…ಳೆದು ಬಂದಿದೆ

…ವ್ಯಾರ–ಸಾನ್ ಫ್ರಾನ್ಸಿಸ್ಕೋ

ತ್ತಾನೆ. ಮುಂದುಗಡೆ ಅಚ್ಚುಗಾಗಿಟ್ಟಿರುವ ಹಲವಾರು ಬಗೆಯ ಆಹಾರ ವಸ್ತುಗಳ ತಟ್ಟೆಗಳ ಮುಂದೆ ಅದನ್ನು ಎಳೆಯುತ್ತಾನೆ. ತಾನು ಬಯಸುವ ಆಹಾರವನ್ನು ಹೆಕ್ಕಿ ಟ್ರೇಯಲ್ಲಿ ಇಡುತ್ತಾನೆ. ಖಾಲಿ ಮೇಜೊಂದರ ಬಳಿಗೆ ಹೋಗಿ ಅಲ್ಲಿ ಉಣ್ಣುತ್ತಾನೆ. ಇದು ಕೆಫೆಟೇರಿಯೊದಲ್ಲಿ ಆಹಾರ ಬಡಿಸಿಕೊಳ್ಳುವ ಕ್ರಮ.

ಚಿತ್ರ ೮— ಕೇಬಲ್ ಕಾರ್

ಸಾನ್ ಫ್ರಾನ್ಸಿಸ್ಕೊ ನಗರವು ಗುಡ್ಡದ ಮೇಲೆ ಕಟ್ಟಲ್ಪಟ್ಟಿದೆ. ಆದುದರಿಂದಾಗಿಯೇ ಅತಿ ಕಡಿದಾದ ಕೆಲವು ಮಾರ್ಗಗಳೂ ಇಲ್ಲಿವೆ. ಇಷ್ಟೊಂದು ಕಡಿದು ದಾರಿಗಳು ಪ್ರಾಯಃ ಜಗತ್ತಿನ ಮತ್ತಾವ ನಗರದಲ್ಲಿಯೂ ಇರುವುದಿಲ್ಲ. ಕೇಬಲ್ ಕಾರುಗಳು ಈ ನಗರದ ವೈಶಿಷ್ಟ್ಯ. ನೆಲದೊಳಗೆ ಕೇಬಲ್ ವ್ಯವಸ್ಥೆಯಿದ್ದು ರಸ್ತೆಯಲ್ಲಿ ಕಾರುಗಳು ಓಡುವುವು. ಇದೇನೂ ಸಮರ್ಥ ಸಾರಿಗೆಯ ವ್ಯವಸ್ಥೆಯನ್ನು ಒದಗಿಸುವುದಿಲ್ಲವಾದರೂ ಜನಪ್ರಿಯತೆಯಿಂದಾಗಿ ಇನ್ನೂ ಅಸ್ತಿತ್ವದಲ್ಲಿವೆ. ಕೇಬಲ್ ಕಾರಿನಲ್ಲಿ ಪ್ರಯಾಣಿಸುವುದೂ ಒಂದು ಬಗೆಯ ಫೇಶನ್!

ಚಿತ್ರ ೯—ಒಪೆರಾ ಕಂಪೆನಿ

ಅಮೇರಿಕೆಯ ಮೊತ್ತಮೊದಲ ಸ್ಥಾನ ಗಳಿಸುವ ಮೆಟ್ರೊಪೊಲಿಟನ್ ಒಪೆರಾ ಕಂಪೆನಿಯು ನ್ಯೂಯಾರ್ಕಿನಲ್ಲಿದೆ. ಸಾನ್ ಫ್ರಾನ್ಸಿಸ್ಕೊ ಒಪೆರಾ ಕಂಪೆನಿಯು ದ್ವಿತೀಯ ಸ್ಥಾನ ಗಳಿಸುತ್ತದೆ. ವಿದೇಶೀಯ ಒಪೆರಾ ತಾರೆಯರನ್ನು ಕರೆತರಿಸಿ ಕಾರ್ಯಕ್ರಮಗಳನ್ನು ಏರ್ಪಡಿಸುವುದೇ ಈ ಒಪೆರಾಗಳ ಕೆಲಸ. ೧೯೪೫ರಲ್ಲಿ ಜಾಗತಿಕ ಶಾಂತಿಸ್ಥಾಪನೆಯ ಬಗ್ಗೆ ೫೦ ರಾಷ್ಟ್ರಗಳ ಪ್ರತಿನಿಧಿಗಳು ಸಾನ್‌ಫ್ರಾನ್ಸಿಸ್ಕೊವಿನಲ್ಲಿ ಸಭೆ ಸೇರಿದರು. ಆ ಸಮಯದಲ್ಲಿ ಒಪೆರಾ ಕಂಪೆನಿಯೊಂದು ಆಕರ್ಷಕ ದೃಶ್ಯವೆನಿಸಿತ್ತು. ಈ ಪ್ರತಿನಿಧಿ ಸಭೆಯೇ ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಜನ್ಮವಿತ್ತಿತು.

ಚಿತ್ರ ೧೦: ಮೀನುಗಾರರ ಮೂಲೆ

ಮಾಂಸಾಹಾರಿಗಳು ಸಾನ್ ಫ್ರಾನ್ಸಿಸ್ಕೋವಿನ ಮೀನುಗಾರರ ಮೂಲೆಗೆ ಹೋಗದೆ ಹಿಂದಿರುಗುವುದಿಲ್ಲ. ಸಮುದ್ರವು ಮಾನವನಿಗಿತ್ತ ಆಹಾರದ ರುಚಿ ನೋಡುವುದು ತಪ್ಪೇನಲ್ಲ. ತಿನ್ನಲು ಕುಳಿತಲ್ಲಿಂದಲೇ ದೂರದಲ್ಲಿ ಮೀನುಗಾರರ ನೌಕೆಗಳನ್ನೂ ಸಮುದ್ರಜನಿತ ಆಹಾರಗಳನ್ನು ಮಾರುತ್ತಿರುವ ಸ್ಟಾಲುಗಳನ್ನೂ ಕಾಣಬದು. ಇಲ್ಲಿ ನೆಲಸುತ್ತಿರುವ ಮೀನುಗಾರರಲ್ಲಿ ಹೆಚ್ಚಿನವರು ಇಟೇಲಿಯನ್ ಮೂಲದವರು. ಅವರು ತಮ್ಮ ಮಾತೃಭೂಮಿಯ ಕಟ್ಟುಕಟ್ಟಲೆಗಳನ್ನೂ ರೀತಿ ರಿವಾಜುಗಳನ್ನೂ ಪಾಲಿಸಿಕೊಂಡು ಬರುತ್ತಾರೆ. ಇದಕ್ಕೆ ಯಾವ ಅಭ್ಯಂತರವೂ ಇಲ್ಲ.

ಚಿತ್ರ ೧೧—ಸಟ್ಟರ್ಸ್‌ಮಿಲ್

ಸಾನ್‌ಫ್ರಾನ್ಸಿಸ್ಕೊವಿನಿಂದ ಅನತಿದೂರದ ಸಟ್ಟರ್ಸ್ ಮಿಲ್‌ನಲ್ಲಿ ೧೮೪೮ರಲ್ಲಿ ಚಿನ್ನದ ಗಣಿಗಳಿರುವುದು ಕಂಡು ಬಂತು. ಹೊನ್ನಿನ ಹೊಲದ ಪ್ರವೇಶದ್ವಾರವಾದ ಸಾನ್‌ಫ್ರಾನ್ಸಿಸ್ಕೊವಿಗೆ ಜಗತ್ತಿನ ನಾನಾ ಮೂಲೆಗಳಿಂದ ಸುವರ್ಣಾಪೇಕ್ಷಿಗಳೂ ಸಾಹಸಶೀಲರೂ ನುಗ್ಗಿಬಂದರು. ತಂದ್ರಾವಸ್ಥೆಯಲ್ಲಿದ್ದ ಚಿಕ್ಕ ಹಳ್ಳಿಯು ಈ ಕಾರಣದಿಂದಲೇ ಅರ್ಭಟಿಸುವ ಮಹಾನಗರವಾಯಿತು; ಗಡಿನಾಡಿನ ಸುಪ್ರಸಿದ್ಧ ನಗರವೆನಿಸಿತು.

ಚಿತ್ರ ೧೨—ಚಿನ್ನದ ಗಣಿ

ಕೆಲಿಫೋರ್ನಿಯಾದ ಚಿನ್ನದ ಗಣಿಗಳು ಅಮೆರಿಕನ್ ಇತಿಹಾಸದಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಅವು ಕೆಲಿಫೋರ್ನಿಯಾದ ಅಭಿವೃದ್ಧಿಗೆ ಸಹಾಯಕವಾದುವು. ಚಿನ್ನದ ಗಣಿ ಇರುವುದರಿಂದಲೇ ಅಲ್ಲಿಗೆ ಸುವರ್ಣಾಪೇಕ್ಷಿಗಳು ಮಾತ್ರವಲ್ಲದೆ, ವ್ಯಾಪಾರಿಗಳು ಕೃಷಕರು, ಡಾಕ್ಟರರು, ವಕೀಲರು ಹೊಟ್ಟೆದಾರರು ಮತ್ತಿತರ ಕಲಾವಿದರು ಧಾವಿಸಿ ಬಂದರು. ಸುವರ್ಣ ಖನಿಗಳ ಕಾರಣದಿಂದಲೇ ಅಲ್ಲಿ ರೇಲು ದಾರಿಗಳೂ ಒಂದೇ ಸಮನೆ ನಿರ್ಮಾಣ ಹೊಂದಿದವು.

ಚಿತ್ರ ೧೩— ವಿಶ್ವವಿದ್ಯಾಲಯ

ಕೆಲಿಫೋರ್ನಿಯಾ ವಿಶ್ವವಿದ್ಯಾಲಯಕ್ಕೆ ರಾಜ್ಯದಲ್ಲಿ ಎಂಟು ಶಾಖೆಗಳಿವೆ. ಇವುಗಳಲ್ಲಿ ಮುಖ್ಯವಾದುದು ಸಾನ್ ಫ್ರಾನ್ಸಿಸ್ಕೊ ಬಳಿಯ ಬರ್ಕಲೇಯಲ್ಲಿದೆ. ಇಲ್ಲಿರುವ ೧೭ ಸಾವಿರ ವಿದ್ಯಾರ್ಥಿಗಳಲ್ಲಿ ಸುಮಾರು ೧,೦೦೦ದಷ್ಟು ವಿದೇಶೀಯರು. ವಿಶ್ವವಿದ್ಯಾಲಯವು ಶಿಲ್ಪ ಕಲೆಯಿಂದ ತೊಡಗಿ ಪ್ರಾಣಿ ಶಾಸ್ತ್ರದ ವರೆಗಿನ ನೂರಾರು ಕಲೆ—ವಿಜ್ಞಾನಗಳಲ್ಲಿ ಶಿಕ್ಷಣ ನೀಡುತ್ತದೆ. ಪ್ರಮುಖವಾದ ವೈದ್ಯಕೀಯ ಸಂಶೋಧನೆಗಳೂ ಇಲ್ಲಿ ನಡೆಯುತ್ತವೆ.

ಚಿತ್ರ ೧೪—ಅಂತಾರಾಷ್ಟ್ರೀಯ ಗೃಹ

ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ವರ್ತುಲದಲ್ಲಿಯೇ ಅಂತಾರಾಷ್ಟ್ರೀಯ ಗೃಹವಿದೆ. ಇಲ್ಲಿ ೫೦೦ಕ್ಕೂ ಮಿಕ್ಕಿದ ವಿದ್ಯಾರ್ಥಿಗಳು ನೆಲಸುತ್ತಾರೆ. ಇವರಲ್ಲಿ ಅಮೆರಿಕನರೂ ಇದ್ದಾರೆ; ವಿದೇಶೀಯರೂ ಇದ್ದಾರೆ. ವಿಶ್ವವಿದ್ಯಾಲಯದಲ್ಲಿರುವ ವಿದೇಶೀ ವಿದ್ಯಾರ್ಥಿಗಳಿಗೆ ಇದೊಂದು ಸಾಮಾಜಿಕ ಕೇಂದ್ರ. ಸಾಮಾನ್ಯವಾಗಿ ಇಲ್ಲಿ ವಾಸವಾಗಿರುವ ವಿದ್ಯಾರ್ಥಿಗಳ ಮುಂದೆ ಆಹಾರಗಳನ್ನು ತಯಾರಿಸುತ್ತಾ

(ಹದಿಮೂರನೇ ಪುಟ ನೋಡಿ)



೬

೭

೮



೯



೧೫

೧೩

೧೨

೧೧

ವರದಕ್ಷಿಣಾ ಪದ್ಧತಿ

(ಏಳನೇ ಪುಟದಿಂದ)

ವುದಿಲ್ಲ. "ಇಂದಿನ ಮಕ್ಕಳೇ ಮುಂದಿನ ಜನಾಂಗ"—ಎಂಬ ಹಿರಿಯರ ಅಭಿಪ್ರಾಯಕ್ಕೆ ಸರಿ ಹೋಗುವುದಿಲ್ಲ. ಕೆಲ ಕೆಲವು ವೃದ್ಧ ಹಾಗೂ ದುರ್ಗುಣಿಗಳಿಗೆ ಕನ್ಯೆಯರನ್ನು ಕೊಟ್ಟು ವಿವಾಹ ಮಾಡುವುದರಿಂದಾಗಿ ದಿನೇ ದಿನೇ ಕನ್ಯೆಯರ ಆತ್ಮಹತ್ಯಾ ಸಂಖ್ಯೆ ಇಮ್ಮಡಿಸುತ್ತಿದೆ. ನಮ್ಮ ಭಾರತದಲ್ಲಿ ಪ್ರಾಯಶಃ ಎಲ್ಲಾ ಪ್ರಾಂತಗಳಲ್ಲೂ ಈ ವರದಕ್ಷಿಣಾ ರೂಢಿ ಬಳಕೆಯಲ್ಲಿದೆ ಎನ್ನಬಹುದು. ಮಧ್ಯ ಪ್ರದೇಶ, ಉತ್ತರ ಪ್ರದೇಶ ಮತ್ತು ಬಂಗಾಳಗಳಲ್ಲಿ ಈ ವರದಕ್ಷಿಣಾ ನಾಶ ಪ್ರಯತ್ನವು ನಡೆಯುತ್ತಿದೆ.

ಈ ವರದಕ್ಷಿಣಾ ರೂಢಿಯಿಂದಾಗಿ ವಿಧವೆ, ವಿಧುರರ ಸಂಖ್ಯೆ, ಆತ್ಮಹತ್ಯೆಗೈವವರ ಸಂಖ್ಯೆ ಏರುತ್ತಿದೆ. ಅಲ್ಲಲ್ಲಿ ಇದಕ್ಕಾಗಿ ದುರಾಚಾರಗಳು ಜರಗುತ್ತಿವೆ. ಏಳಿಗೆಯ ಜನಾಂಗವು ಅಳಿವಿಗೇ ಕಾರಣವಾದ ಜನಾಂಗವಾಗುತ್ತಿದೆ.

ಇದರಿಂದಾಗಿ ಕೇವಲ ಸ್ತ್ರೀಯರೇ ಯೋಗ್ಯ ಪುರುಷರು ಸಿಗದೆ ಕಷ್ಟಪಡುವುದು ಮಾತ್ರವಲ್ಲ, ಪುರುಷನು ತನಗೆ ಯೋಗ್ಯಳಾದ ಗೃಹಲಕ್ಷ್ಮಿಯು ಸಿಗದೆ ಕಷ್ಟಕ್ಕೀಡಾಗಿ ನರಕ ಜೀವನವನ್ನು ಸಾಗಿಸಬೇಕಾಗುತ್ತದೆ.

ನಮ್ಮ ಭಾರತವು ವೀರಯೋಧರ ಹಾಗೂ ವೀರರಮಣಿಯರ ತಾಯ್ನಾಡೆಂದು ಕೀರ್ತಿಗಳಿಸಿದೆ. ಅಂತಹ ರಾಷ್ಟ್ರಗೌರವಕ್ಕಾಗಿ ಎದೆಕಟ್ಟಿ ನಿಲ್ಲಬೇಕಾದ ಸ್ತ್ರೀ, ಪುರುಷರು ನರಕ ಸಂಸಾರದಲ್ಲಿ ತೊಳಲಾಡಿ, ದೇಶಕ್ಕಾಗಿ ಅರ್ಪಿಸಬೇಕಾದ ದೇಹವನ್ನು ತಮ್ಮ ಕೈಯಿಂದಲೇ ತಾವು ಇರಿದುಕೊಂಡು ಪರಲೋಕ ಯಾತ್ರೆ ಮಾಡುತ್ತಾರೆ. ಹಲಕೆಲವರು ಯೋಗ್ಯ ಸತಿಯು ದೊರಕದೆ ಉಂಡಾಡಿಗಳಾಗಿ ತಿರುಗುತ್ತಿರುವರು.

ಈ ವರದಕ್ಷಿಣೆ ಕ್ರಮವೆಂಬುದು ನಮ್ಮ ಹಿರಿಯರಿಂದಲೂ ಆಚರಣೆಗೆ ಬಂದಿರುವ ಒಂದು ಧಾರ್ಮಿಕ ವಿಧಾನವೆಂದು ಪರಿಗಣಿಸಿ ಅನುಸರಿಸುತ್ತಾ ಬರುತ್ತಿರುವರು. ಮಾನವ ಸಮಾಜದ ಉದ್ಧರಣಾ ಶಕ್ತಿ ಸ್ವರೂಪವೇ ಧರ್ಮ. ಸರಿ ಆದರೆ! ಅಂತಹ ಧಾರ್ಮಿಕ ವಿಧಾನವೆಂದು ವರದಕ್ಷಿಣಾ ಕ್ರಮವನ್ನು ಅನುಸರಿಸುತ್ತಾ ಬಂದುದಾದರೆ ರಾಷ್ಟ್ರವು ಅಧೋಗತಿಗಿಳಿಯುವುದು. ಉತ್ತಮ ಸಮಾಜ ರಚನೆಯಾಗಲಾರದು. ರಾಷ್ಟ್ರಕಲ್ಯಾಣವಾಗಬೇಕು; ರಾಷ್ಟ್ರದ ಪ್ರಜೆಗಳೆಲ್ಲಾ ಸುಖಿಗಳಾಗಬೇಕು; ಹಾಗಾಗಬೇಕಾದರೆ ಈ ಕೆಟ್ಟ ರೂಢಿಯಾದ ವರದಕ್ಷಿಣಾ ಪದ್ಧತಿಯು ತೊಲಗಿಹೋಗಬೇಕು.

ವರದಕ್ಷಿಣಾ ವಿಧಾನವು ತೊಲಗಿಹೋದರೆ ಉತ್ತಮ ದಾಂಪತ್ಯ ಜೀವನವು ನಡೆಯುವುದು, ಸಮಾಜ ಉನ್ನತ ಮಟ್ಟಕ್ಕೇರುವುದು, ಆದ್ದರಿಂದ ಸಮಾಜದಲ್ಲಿ ಅಂಟಿಕೊಂಡಿರುವ ಈ ಕೆಟ್ಟ ಚಾಳಿಯು ದೂರವಾಗಲಿ.

ಸರಕಾರವು ಈಗಾಗಲೇ ಈ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೈಗೊಂಡಿದೆ, ಇದರ ಕೆಡುಕುಗಳನ್ನು ಮಾನವರ ಮನ ಮುಟ್ಟುವಂತೆ ತಿಳಿಯಲು ನಮ್ಮ ಭಾರತ

ಕೃಷಿಕರಂಗ

ರಾಸಾಯನಿಕ ಗೊಬ್ಬರಗಳ ದುಸ್ಥಿತಿ

ನಮ್ಮ ದೇಶದ ಮಣ್ಣಿನಲ್ಲಿ ನೈಟ್ರೋಜನ್‌ನ ಅಂಶ ಕಡಿಮೆ. ರಂಜಕವೂ ಹೆಚ್ಚಿನೆಡೆಯ ಮಣ್ಣಿನಲ್ಲಿಲ್ಲ. ರಂಜಕದಂಶವಿರುವ ಮಣ್ಣಿನಲ್ಲಿ ಪೊಟಾಸ್‌ನ ಕೊರತೆಯಿದೆ. ಆದುದರಿಂದ ಮಣ್ಣಿನಲ್ಲಿ ರಾಸಾಯನಿಕ ಗೊಬ್ಬರಗಳನ್ನು ನಾವು ಬಳಸಲೇ ಬೇಕಾಗುತ್ತದೆ. ನಾವಿಂದು ಉಪಯೋಗಿಸುವ ಈ ಬಗೆಯ ಗೊಬ್ಬರವು ತೀರ ಅಲ್ಪ. ಪ್ರತಿ ಹೆಕ್ಟರಿಗೆ ೨.೪೩ ಕಿಲೋಗ್ರಾಮ್ ರಾಸಾಯನಿಕ ಗೊಬ್ಬರವನ್ನು ನಾವು ನೀಡುತ್ತೇವೆ. ಈ ಪ್ರಮಾಣವು ಬೇರೆ ಬೇರೆ ದೇಶಗಳಲ್ಲಿ ಹೀಗಿದೆ:

ಫ್ರಾನ್ಸ್	೬೭-೧೨	ಕಿ. ಗ್ರಾ.
ಪಶ್ಚಿಮ ಜರ್ಮನಿ	೧೬೦-೬೫	,,
ಇಟಲಿ	೪೧-೮೮	,,
ಹಾಲೆಂಡ್	೨೦೩-೧೫	,,
ಇಂಗ್ಲೆಂಡ್	೭೦.೧೨	,,
ಅಮೆರಿಕಾ	೧೬-೬೫	,,
ಜಪಾನ್	೨೩೩.೬೯	,,
ಅರಬ ಗಣರಾಜ್ಯ	೯೪.೭೮	,,

ಇದರಿಂದಲೇ ನಾವೆಷ್ಟು ಹಿಂದೆ ಬಿದ್ದಿರುವೆವೆಂಬುದನ್ನು ತಿಳಿಯಬಹುದು.

ಭಾರತದ ಸಾಗುವಳಿ ಭೂಮಿ ಒಟ್ಟು ೩೬ ಕೋಟಿ ಎಕ್ರೆಗಳು. ನಮಗೆ ಒಟ್ಟು ೨೪ ಲಕ್ಷ ಟನ್ ನೈಟ್ರೋಜನ್, ೧೨ ಲಕ್ಷ ಟನ್ ರಂಜಕದ ಪೆಂಟೋಕ್ಸೈಡ್ ಮತ್ತು ೫ ಲಕ್ಷ ಟನ್ ಪೊಟಾಶ್ ಬೇಕಾಗುವುದು. ನಾವು ತಯಾರಿಸುವ ಈ ಗೊಬ್ಬರಗಳ ಪ್ರಮಾಣ ತೀರ ನಿರುತ್ಸಾಹಯಾಗಿದೆ! ೨ ಲಕ್ಷ ಟನ್ ನೈಟ್ರೋಜನ್, ೧ ಲಕ್ಷ ಟನ್ ರಂಜಕದ ಪೆಂಟೋಕ್ಸೈಡ್ ಮಾತ್ರ. ಬೇಕಾಗುವ ಪೊಟಾಶ್ ಆಯಾತ ಮಾಡಿಕೊಳ್ಳುತ್ತೇವೆ.

ನಾಲ್ಕನೆಯ ಯೋಜನೆಯ ವೇಳೆಗೆ ೪೨.೫ ಕೋಟಿ ಎಕ್ರೆ ಜಮೀನಿನಲ್ಲಿ ಒಕ್ಕಲುತನ ನಡೆಯುವುದೆಂದು ನಿರೀಕ್ಷಿಸಲಾಗಿದೆ. ಇದೇ ವೇಳೆಯಲ್ಲಿ ಆಹಾರೋತ್ಪಾದನೆಯಲ್ಲಿ ಸೇ. ೫೦ರಷ್ಟು ಹೆಚ್ಚುವರಿಯನ್ನು ಸಾಧಿಸಬೇಕೆಂಬುದು ನಮ್ಮ ಗುರಿಯಾಗಿದೆ. ಉತ್ಪಾದನೆಯಲ್ಲಿ ಈ ಗುರಿ ಹೇಗೆ ಮುಟ್ಟಬಹುದು? ರಾಸಾಯನಿಕ ಗೊಬ್ಬರಗಳನ್ನು ಉಚಿತ ಪ್ರಮಾಣದಲ್ಲಿ ಭೂಮಿಗೆ ಸೇರಿಸಿಕೊಳ್ಳಲೇಬೇಕಾಗಿದೆ.

ನಮ್ಮ ದೇಶವು ಸ್ವತಂತ್ರವಾದ ಮೇಲೆ, ಪಂಚವಾರ್ಷಿಕ ಯೋಜನೆಗಳು ರೂಪುಗೊಂಡ ಮೇಲೆ ರಾಸಾಯನಿಕ ಗೊಬ್ಬರೋದ್ಯಮಕ್ಕೆ ಚೇತನ ಬಂದಿತು. ಮೊದಲೆರಡು ಯೋಜನೆಗಳು ಮುಗಿಯುವಾಗ ನಮ್ಮ ಆವಶ್ಯಕತೆಗಳು ಹೆಚ್ಚಿದವಾದರೂ ಉತ್ಪಾದನೆಯು ಅದೇ ಪ್ರಮಾಣದಲ್ಲಿ ಬೆಳೆಯಲಿಲ್ಲ.

ಮೂರನೆಯ ಯೋಜನೆಯಲ್ಲಿ ೮ ಲಕ್ಷ ಟನ್ ನೈಟ್ರೋಜನ್, ೪ ಲಕ್ಷ ಟನ್ ರಂಜಕ ಮತ್ತು ೨ ಲಕ್ಷ ಟನ್ ಪೊಟಾಶ್ ಸಂಬಂಧಿಸಿದ ಗೊಬ್ಬರಗಳನ್ನು ಉತ್ಪಾದಿಸಬಹುದೆಂಬ ನಿರೀಕ್ಷೆಯಿದೆ. ಆದರೆ, ಇದು ಸಿಗದಿ ಮಾಡಿದ್ದ ಗುರಿಯಿಂದ ಬಹುದೂರವಿದೆ. ಖಾಸಗಿ ರಂಗದಲ್ಲಿ ರಾಸಾಯನಿಕ ಗೊಬ್ಬರಗಳ ಕಾರಖಾನೆಗಳು ಸ್ಥಾಪಿತವಾಗುವವೆಂದು ಅಂದು ಆಶಿಸಲಾಗಿದ್ದರೂ ಅದು ಈಡೇರಿರುವುದಿಲ್ಲ. ಸಾರ್ವಜನಿಕ ರಂಗದಲ್ಲಿ ಗೋರಖಪುರದಲ್ಲಿ ತೊಡಗಬೇಕಾದ ಕಾರಖಾನೆಯೂ ಬಹಳ ಹಿಂದೋಡುತ್ತಿದೆ. ೧೯೬೫-೬೬ರಲ್ಲಿ ಸಾಧಿಸಬೇಕಾದ ಗುರಿಯನ್ನು ಎರಡು ವರ್ಷಗಳ ನಂತರವಾದರೂ ಮುಟ್ಟಿಯೇವೆ? ಎಂಬುದೂ ಸಂದೇಹಾಸ್ಪದ.

ಆಹಾರದ ಪ್ರಶ್ನೆಯನ್ನು ನಾವು ತೀವ್ರ ಉತ್ತರಿಸಬೇಕಾಗಿರುವುದರಿಂದ ನಾಲ್ಕನೆಯ ಯೋಜನೆಯಲ್ಲಿ ರಾಸಾಯನಿಕ ಗೊಬ್ಬರೋತ್ಪಾದನೆಯನ್ನು ವಿಶೇಷ ಗಮನದಿಂದ ಮಾಡಬೇಕು. ಇದಕ್ಕಾಗಿ ಸಿಂಧ್ರಿ ಮತ್ತು ನಂಗಲ್‌ಗಳ ಕಾರಖಾನೆಗಳನ್ನು ವಿಸ್ತರಿಸುವ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ. ಉತ್ತರ ಪ್ರದೇಶದ ರಿಹಂದ, ಬಿಹಾರದ ಬರೌನಿ, ಪಶ್ಚಿಮ ಬಂಗಾಲದ ಹಾಲ್ದಿಯಾಗಳಲ್ಲಿ ಹೊಸ ಕಾರಖಾನೆಗಳನ್ನು ಸ್ಥಾಪಿಸುವ ಬಗ್ಗೆ ತಾಂತ್ರಿಕ ಸಾಧಕ ಬಾಧಕಗಳನ್ನು ನೋಡಲಾಗುತ್ತಿದೆ. ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗಿ ಈಗ ಕೆಲಸ ಮಾಡುತ್ತಿರುವ ಕೇಂದ್ರಗಳ ಸಾಮರ್ಥ್ಯವನ್ನು ಹೆಚ್ಚಿಸಲು ಅನುಮತಿಯನ್ನು ನೀಡಲಾಗುತ್ತಿದೆ.

ನಮಗೆ ಬೇಕಾದ ಪೊಟೇಸಿಕ್ ಗೊಬ್ಬರವನ್ನು ನಾವು ಆಯಾತ ಮಾಡಿಕೊಳ್ಳುತ್ತೇವೆ. ಇದು ತಪ್ಪಿದರೆ ವಿದೇಶ ವಿನಿಮಯವೂ ಉಳಿಯುವುದು.

ದೇಶದ ರಾಸಾಯನಿಕ ಗೊಬ್ಬರದ ಕಾರ್ಪೊರೇಶನ್ ವಿಕಾಸಹೊಂದುತ್ತಿದೆ. ಇದರ ಕಾರ್ಯದಕ್ಷತೆಯ ಪ್ರತೀಕವಾಗಿಯೇ ಸಾರ್ವಜನಿಕ ರಂಗದಲ್ಲಿ ಕೊಚಾರದಲ್ಲೊಂದು ರಾಸಾಯನಿಕ ಗೊಬ್ಬರಗಳ ಕಾರಖಾನೆ ಸ್ಥಾಪನೆಯಾಗಲಿದೆ. ಈ ಕಾರ್ಪೊರೇಶನ್ ರೈತರಿಗೆ ಕಡಿಮೆ ಬೆಲೆಯಲ್ಲಿ ಗೊಬ್ಬರಗಳನ್ನು ಪೂರೈಸಲು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ.

ಅಧಿಕೋತ್ಪಾದನೆ, ಪರಿಮಿತ ದರದಲ್ಲಿ ರೈತರಿಗೆ ಅದರ ಪೂರೈಕೆಯೊಡನೆ ರಾಸಾಯನಿಕ ಗೊಬ್ಬರಗಳ ಉಪಯೋಗದ ಬಗ್ಗೆ ಸರಿಯಾದ ತಿಳುವಳಿಕೆಯನ್ನು ರೈತರಿಗೆ ಕೊಡುವುದು ಪ್ರಮುಖ ಕಾರ್ಯ. ಈ ಪ್ರಚಾರಕಾರ್ಯ ನಡೆಯದೆ ಹೋದರೆ, ನಮ್ಮ ಗುರಿಯು ನಿಷ್ಪ್ರಯೋಜಕವಾಗುವುದು. ರಾಜ್ಯದ ವ್ಯವಸಾಯ ಮತ್ತು ಸಹಕಾರ ವಿಭಾಗಗಳೂ ಸಾಮೂಹಿಕ ಅಭಿವೃದ್ಧಿ ಶಾಖೆಗಳೂ ಈ ದಿಸೆಯಲ್ಲಿ ಚುರುಕಿನಿಂದ ಕೆಲಸ ಮಾಡಬೇಕು.

ಸರಕಾರದ ಸಮಾಚಾರ ಮತ್ತು ಪ್ರಸಾರ ಮಂತ್ರಿ ಶಾಖೆಗೆ ಸೇರಿದ ಚಲಚ್ಚಿತ್ರ ವಿಭಾಗದವರು "ಒಣಗಿದ ಎಲೆಗಳು" ಎಂಬ ಹೆಸರಿನ ಈ ವಿಷಯ ನಿರೂಪಕ ಚಿತ್ರವನ್ನು ತಯಾರಿಸಿ ಅಲ್ಲಲ್ಲಿ ಪ್ರದರ್ಶಿಸುತ್ತಿದ್ದಾರೆ.

ಆಗಸ್ಟ್ 15

ನವಯುಗ

ಸ್ವಾತಂತ್ರ್ಯ ವಿಶೇಷ ಸಂಚಿಕೆ

ಕರ್ನಾಟಕದ ಪ್ರಸಿದ್ಧ ಲೇಖಕರನೇಕರ ವಿಚಾರಪರ ಲೇಖನ, ಕವನ, ವಿಡಂಬನೆ ಮೊದಲಾದುವುಗಳಿಂದ ಕೂಡಿ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.

ಅಖಿಲ ಕರ್ನಾಟಕದಲ್ಲೂ ಬೊಂಬಾಯಿ, ಮದರಾಸು ಮೊದಲಾದ ಹೊರರಾಜ್ಯ ಹಾಗೂ ವಿದೇಶದಲ್ಲೂ ಪ್ರಚಾರದಲ್ಲಿರುವ 'ನವಯುಗ'ವು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ವಿಶೇಷ ಸಂಚಿಕೆಯ ಜಾಹೀರಾತು ದರ:-

ಪುಟಕ್ಕೆ ರೂ. 200/-, ಅರ್ಧ ಪುಟಕ್ಕೆ ರೂ. 100/-, ಕಾಲು ಪುಟಕ್ಕೆ ರೂ 50/-.

ಹೆಚ್ಚಿನ ಮಾಹಿತಿಗೆ ಬರೆಯಿರಿ:—

ಮೆನೇಜರ್, ನವಯುಗ, ಉಡುಪಿ.

ಬಂಟರ ಯಾನೆ ನಾಡವರ ಸಂಘ ಮುಂಬಯಿ (ರಿಜಿಸ್ಟರ್ಡ್)

ನಿಯೋಜಿತ ಶಾಲಾ ಕಟ್ಟಡದ ಸಹಾಯಾರ್ಥವಾಗಿ ಶ್ರೀ ನರಸಿಂಹ ದಶಾವತಾರ ಯಕ್ಷಗಾನ ಮಿತ್ರಮಂಡಳಿಯವರ ಮೂಲಕ ಊರಿನ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ಬರುವ ತಾ. 1.8.1966ನೇ ರವಿವಾರ ಅಪರಾಹ್ನ ಗಂಟೆ ೩ಕ್ಕೆ ಸರಿಯಾಗಿ ಕಿಂಗ್ಸ್ ಸರ್ಕಲಿನಲ್ಲಿರುವ ಶ್ರೀ ಷಣ್ಮುಖಾನಂದ ಹಾಲ್ (Air conditioned)ನಲ್ಲಿ ಯಕ್ಷಗಾನ ನಾಟಕ ಮಹೋತ್ಸವದ ಉದ್ಘಾಟನಾ ಸಮಾರಂಭವು ಮುಂಬಯಿಯ ನಗರ ಸಭಾಧ್ಯಕ್ಷ (ಮೇಯರ್) ಶ್ರೀ ಯಂ. ಮಾಧವನ್ ಇವರಿಂದ ಜರಗಲಿರುವುದು. ಅಂದಿನ ಪ್ರಸಂಗ "ಕುರುಕ್ಷೇತ್ರ".

ನೆನೆದರೆ ರೋಮ ನಿಮಿರುವುದು

ಮೃತ್ಯುವಿನ ದವಡೆಯಿಂದ ಹೊರಬಿದ್ದೆ

ದಿ। ನೆಹರು ಜೀವನದ ರೋಮಾಂಚಕಾರಿ ಘಟನೆ

ಸಂಗ್ರಹ
ಶ್ರೀ ಬೇಕಲ್ ನರಸಿಂಗರಾವ್.

ನನ್ನ ವಿವಾಹವು ದಿಲ್ಲಿಯಲ್ಲಿ ಮೇ ಮಾಹೆಯಲ್ಲಿ ವಸಂತ ಪಂಚಮಿಯಂದು ನಡೆಯಿತು. ಗ್ರೀಷ್ಮ ಋತುವಿನ ಕೆಲವೊಂದು ದಿನಗಳನ್ನು ನಾನು ಕಾಶ್ಮೀರದಲ್ಲಿ ಕಳೆದೆನು. ನನ್ನ ಪರಿವಾರದ ಸದಸ್ಯರನ್ನು ಅಲ್ಲೇ ಘಟ್ಟದ ಕೆಳಗಡೆ ಬಿಟ್ಟು ನಾನು ಹಾಗೂ ನನ್ನ ಚಿಕ್ಕಪ್ಪನ ಮಗನು ಕೆಲವು ವಾರದವರೆಗೆ ಘಟ್ಟದ ಮೇಲೆ ಸಂಚರಿಸುವ ಯೋಚನೆಮಾಡಿದೆವು. ಅಂತೆಯೆ ಮುಂದು ಮುಂದಕ್ಕಡಿಯಿಡುತ್ತ ಲದ್ವಾಕ್ ರೋಡ್ ವರೆಗೂ ಬಂದೆವು.

ಲೋಕದಲ್ಲೇ ಅತ್ಯುನ್ನತ ನಿರ್ಜನ ಪ್ರದೇಶಗಳಲ್ಲಿ ಸಂಚರಿಸುವುದು ನನ್ನ ಪ್ರಥಮ ಅನುಭವವಾಗಿತ್ತು. ಜೋಜಿಲಾ ಘಾಟಿಯ ಶಿಖರದಿಂದ ಒಂದೆಡೆ ನಾವು ಹಚ್ಚ ಹಸುರಾದ ದೃಶ್ಯವನ್ನು ಇನ್ನೊಂದೆಡೆ ಶುಷ್ಕ ಶಿಲೆಗಳನ್ನೂ ವೀಕ್ಷಿಸಬಹುದಿತ್ತು. ಅಲ್ಲಿಂದಲೂ ಮುಂದಕ್ಕೆ ಏರುತ್ತಲೆ ನಾವು ಪರ್ವತಗಳಿಂದ ಆವೃತವಾದೆವು. ಹಿಮದಿಂದ ಮುಚ್ಚಲ್ಪಟ್ಟ ಶಿಖರವು ರಾಜನ ಕಿರೀಟದಂತೆ ಹೊಳೆಯುತಿತ್ತು. ಅಲ್ಲೊಂದೆಡೆ ಚಿಕ್ಕ—ಚಿಕ್ಕ ಹಿಮಸರೋವರಗಳು ನಮ್ಮೊಡನೆ ಸೇರಲೋ ಎಂಬಂತೆ ಓಡಿ—ಓಡಿ ಬರುತ್ತಿದ್ದವು. ಗಾಳಿಯು ಶೀತವೂ, ವೇಗವೂ ಆಗಿತ್ತು. ಆದರೆ ಬಿಸಿಲಿನ ಝಳವು ಅಧಿಕವಿದ್ದುದರಿಂದ ವಾತಾವರಣವು ಶುಭ್ರವಾಗಿ ನಮಗೆ ಕೊಂಚದೂರದಲ್ಲಿರುವ ವಸ್ತುವನ್ನು ನೋಡಲಾಗುತ್ತಿರಲಿಲ್ಲ. ಮೆಲ್ಲ-ಮೆಲ್ಲನೆ ವಾತಾವರಣವು ಶೂನ್ಯವಾಗುತ್ತಾ ಬರುತಿತ್ತು. ಮರ—ಗಿಡಗಳು ನಮ್ಮನ್ನು ಬೀಳ್ಕೊಂಡಿದ್ದವು. ಕೇವಲ ನಗ್ನ ಶಿಲೆಗಳು, ಹಿಮ-ಇಬ್ಬನಿಗಳು ಮಾತ್ರವೇ ಕಣ್ಣಿಗೆ ತಂಪೆರೆಯುತ್ತಿದ್ದವು. ಆದರೂ ನಿರ್ಜನ ಪ್ರದೇಶದಲ್ಲಿ ನನಗೊಂದು ಅದ್ಭುತ ಸಂತೋಷವಾಗುತಿತ್ತು. ನನ್ನ ಉತ್ಸಾಹವೂ, ಸಾಹಸವೂ ಮತ್ತೆ ಮತ್ತೆ ಚಿಗುರುತಿತ್ತು.

ಈ ಯಾತ್ರೆಯಲ್ಲಿ ನನಗೊಂದು ಸ್ಫೂರ್ತಿದಾಯಕ, ಉತ್ತೇಜಕ ಅನುಭವ ಉಂಟಾಯಿತು. ಜೋಜಿಲಾ ಘಾಟಿಯಿಂದ ಮೇಲಕ್ಕೆ (ಬಹುಶಃ ಕೀತಾಯೂನ ಆಗಿರಬೇಕು) ಅಮರನಾಥದ ಗುಹೆಯು ಎಂಟು ಮೈಲು ದೂರವಿರುವುದೆಂದು ನಮಗೆ ಸೂಚಿಸಲಾಗಿತ್ತು. ಆದರೆ ದಾರಿಯಲ್ಲಿ ಹಿಮದಿಂದಾವೃತವಾದ ಪರ್ವತವೊಂದನ್ನು ದಾಟಬೇಕಿತ್ತು. ಎಂಟು ಮೈಲು ಏನು ಮಹಾ! ಸಾಕಷ್ಟು ಸ್ಫೂರ್ತಿಯಿತ್ತು, ಆದರೆ ಅನುಭವ ಮಾತ್ರ ಒಂದಿನಿತೂ ಇರಲಿಲ್ಲ. ಆದರೂ ಗುಹೆಯ ವರೆಗೆ ತೆರಳುವ ಪ್ರಯತ್ನ ಮಾಡಬೇಕೆಂದು ನಿಶ್ಚಯಿಸಿದೆವು. ಅಂತೆಯೇ ನಮ್ಮ ಶಿಬಿರವನ್ನು ಗಗಹಂ ಅವಿಯಲ್ಲಿ ಬಿಟ್ಟು, ಒಂದು ಸಣ್ಣ ದಳದೊಂದಿಗೆ ನಾವು ಯಾತ್ರೆಯನ್ನು ಕೈಗೊಂಡೆವು. ದಾರಿಯನ್ನು ಸೂಚಿಸಲು ಮಾರ್ಗದರ್ಶಕನಾಗಿ ಒಬ್ಬ ಗೋವಳನೂ ನಮ್ಮ ಗುಂಪಿನಲ್ಲಿದ್ದನು.

ಹಗ್ಗದ ಸಹಾಯದಿಂದ ನಾವು ಹಲವಾರು ಹಿಮಸರೋವರಗಳನ್ನು ದಾಟಿದೆವು. ದಾರಿಯಲ್ಲಿ ಕಷ್ಟವು ಅಧಿಕವಾಗುತ್ತಲೇ ಇದ್ದು ಶ್ವಾಸವೆಳೆಯುವುದೇ ಕಷ್ಟವಾಯಿತು. ನನ್ನ ಗೆಳೆಯರಲ್ಲಿ ಕೆಲವರ ಮೂಗಿನಿಂದ ರಕ್ತವು ಸೋರುತಿತ್ತು. ಅವರು ಹೆಚ್ಚು ಭಾರವನ್ನು ಹೊತ್ತಿರಲಿಲ್ಲ. ಇಷ್ಟರಲ್ಲೆ ಹಿಮವು ಬೀಳತೊಡಗಿ ಹಿಮ ಸರೋವರವು ಭಯಾನಕ ರೀತಿಯಲ್ಲಿ ಹರಿಯತೊಡಗಿತು. ನಾವು ಬಹಳವಾಗಿ ಆಯಾಸಗೊಂಡಿದ್ದರಿಂದ ಕಾಲೇ ಬರುತ್ತಿರಲಿಲ್ಲ. ಆದರೂ ನಾವು ಧೃತಿಗೆಡಲಿಲ್ಲ. ಎಂಟು ಗಂಟೆಗೆ ಶಿಬಿರವನ್ನು ಬಿಟ್ಟಿದ್ದ ನಮಗೆ ಹನ್ನೆರಡು ಘಂಟೆಗೆ ಸುವಿಶಾಲ ಹಿಮಸರೋವರವನ್ನು ನೋಡುವ ಭಾಗ್ಯ ದೊರಕಿತು. ಆ ದೃಶ್ಯವು ಬಹಳ ಸುಂದರವಾಗಿತ್ತು. ಅಲ್ಲಿ ನಾಲ್ದೆಸೆಗಳಲ್ಲೂ ಹಿಮಾಚ್ಛಾದಿತ ಪರ್ವತಗಳು ಸೂರ್ಯನ ಹೊಂಬಿಸಿಲಲ್ಲಿ ಮೆರೆಯುತಿದ್ದವು. ಅವುಗಳು ದೇವತೆಯ ಮುಕುಟದಂತೆ ಅರ್ಧಚಂದ್ರನಂತೆ ಕಾಣುತಿದ್ದವು. ಆದರೆ ತಾಜಾ ಹಿಮವೂ, ಮಂಜೂ ಕವಿದುದರಿಂದ ಆ ದೃಶ್ಯವು ಕೂಡಲೆ ಕಣ್ಣಿಂದ ಮಾಯವಾಯಿತು. ನಾವೆಷ್ಟು ಎತ್ತರದಲ್ಲಿದ್ದೆವೆಂಬ ಸುಳಿವೇ ನಮಗಿರಲಿಲ್ಲ. ಆದರೆ ನನ್ನ ಅಂದಾಜಿಗೆ ನಾವು ಸುಮಾರು ೧೫-೧೬ ಸಾವಿರ ಅಡಿಗಳ ಮೇಲಿರಬಹುದು, ಯಾಕೆಂದರೆ ಅಮರನಾಥದ ಗುಹೆಯಿಂದ ನಾವು ಕೊಂಚ ಎತ್ತರದಲ್ಲೇ ಇದ್ದೆವು. ಈ ಅರ್ಧ ಮೈಲುದ್ದದ ಹಿಮಸರೋವರವನ್ನು ದಾಟಿ ಇನ್ನೊಂದು ದಡವನ್ನು ಸೇರಬೇಕಿತ್ತು.

ಇದನ್ನು ದಾಟಿ ಕೊಂಚ ಮೇಲೇರಿದರೆ ನಮ್ಮ ಕಷ್ಟವೂ ಪರಿಹಾರವಾದೀತೆಂಬ ಸಂತೋಷದಿಂದ ನಾವು ನಗು-ನಗುತ್ತಾ ನಮ್ಮ ಗುರಿಯೆಡೆಗೆ ಕಾಲು ಬೆಳೆಸಿದೆವು. ಅಲ್ಲಲ್ಲಿ ಹಿಮವು ಬಿರುಕು ಬಿದ್ದು ಸಂದುಗಳುಂಟಾಗಿದ್ದವು. ಈ ಸಂದುಗಳಲ್ಲಿ ತಾಜಾ ಹಿಮವು ಬಿದ್ದು ಅವನ್ನು ಅಪಾಯಕಾರಿ ರೀತಿಯಲ್ಲಿ ಮುಚ್ಚುತಿದ್ದುದರಿಂದ ನಾವು ಮೋಸಪಟ್ಟೆವು. ಈ ತಾಜಾ ಹಿಮವೇ ನಮಗೆ ಮೃತ್ಯುಪಾಶವಾಗುತಿತ್ತು. ನಾನು ಅದರ ಮೇಲೆ ಕಾಲೂರಿದ್ದೇ ತಡ ಮುಖ ಎಡಕಡೆಗೆ ಹೊರಳಿತು; ಒಂದು ಸಂದುವಿನಲ್ಲಿ ಬಿದ್ದುಬಿಟ್ಟೆ. ಯಾವುದಾದರೂ ವಸ್ತುವು ಅದರಲ್ಲಿ ಬಿದ್ದಿದ್ದರೆ ಸಾವಿರಾರು ವರ್ಷಗಳ ಅನಂತರ ಭೂಗರ್ಭ ಶಾಸ್ತ್ರಿಗಳಿಗೆ ಅದು ನಿಶ್ಚಿತರೂಪದಲ್ಲಿ ಸುರಕ್ಷಿತವಾಗಿ ದೊರಕುವಂತಿತ್ತು. ಆದರೆ ದೈವವಶಾತ್ ನಾನು ಹಗ್ಗದ ಒಂದು ತುದಿಯನ್ನು ಹಿಡಿದಿದ್ದರಿಂದ ನನ್ನನ್ನು ಯಾರೋ ಮೇಲಕ್ಕೆಳೆಯುತ್ತಿರುವ ಅನುಭವವಾಯಿತು. ಅಂತೂ ಮೇಲೆ ಬಂದೆ. ಈ ಘಟನೆಯಿಂದ ನಮ್ಮ ಉತ್ಸಾಹವೇನೋ ಶಿಥಿಲವಾಯಿತು; ಆದರೂ ನಾವು ಮುಂದಕ್ಕೆ ಹೆಜ್ಜೆ ಇಟ್ಟೆವು. ಮುಂದಕ್ಕೆ ಹೋಗುತಿದ್ದಂತೆ ಸಂದುಗಳೂ ಅಧಿಕವಾಗುತಿದ್ದುವು. ಅವುಗಳಲ್ಲಿ ಕೆಲವನ್ನು ದಾಟುವ ಸಾಮಗ್ರಿಯೇ ನಮ್ಮಲ್ಲಿರಲಿಲ್ಲವಾದುದರಿಂದ ಹತಾಶರಾಗಿ ನಾವು ಹಿಂದಿರುಗಲೇಬೇಕಾಯಿತು. ಅಂತೂ ಅಮರನಾಥದ ಗುಹೆಯನ್ನು ನಾನು ನೋಡದೆ ಹೋದೆ; ಮೃತ್ಯುವಿನ ದವಡೆಯಿಂದ ಹೊರ ಬಿದ್ದೆ.

ಪಾಕಿಸ್ತಾನಿಗಳೊಂದಿಗೆ ಸಂಧಾನ

(ಆರನೇ ಪುಟದಿಂದ)

ರೆ. ಅವರೇ ಪಾಕಿಸ್ಥಾನದ ಹಿತೈಷಿ ಕೂಡಾ ಇದ್ದಾರೆ. ಹಿಂದಿನಿಂದಲೂ ಪಾಕಿಸ್ತಾನದೊಂದಿಗೆ ಅದೆಂತಾದರೂ ಒಪ್ಪಂದ ಮಾಡಿಕೊಳ್ಳಬೇಕೆಂದು ಅವರಾಡುತ್ತಾ ಬಂದಿದ್ದಾರೆ. ಅದೂ ಅಲ್ಲದೆ ಶ್ರೀ ರಾಜಾಜೀಯವರ ಆಚಾರ್ಯತನದಲ್ಲಿ ತಮಿಳುನಾಡಿನ ಮರಣಹೋಮ—ಭಾಷಾ ಬಡಿದಾಟ ನಡೆದಾಗ ಬ್ರಿಟಿಷ್ ಕೌನ್ಸಿಲ್ ಎಲ್ಲಾ ರೀತಿಯಲ್ಲೂ "ಸಹಾಯ" ಮಾಡಿತ್ತು. ಆ "ಉಪಕಾರ"ವನ್ನು ಶ್ರೀ ರಾಜಾಜಿಯವರಿಂದ ಮರೆಯಲು ಸಾಧ್ಯವೇನು? ಅದರ ಪರಿಣಾಮವೆಂದರೆ ವಿಲ್ಸನರ ಸಮಾಲೋಚನೆಗೆ ಸರಿಯೆನ್ನುವದು. ಇದರಿಂದ ಬ್ರಿಟನ್ ಹಾಗೂ ಪಾಕಿಸ್ಥಾನದ ದೃಷ್ಟಿಯನ್ನು ಸೆಳೆದುಕೊಂಡಂತಾಗುತ್ತದೆ. ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನು ಬೀಳಿಸುವ ಚತುರತೆ ಶ್ರೀ ರಾಜಾಜಿಯವರಿಗೆ ಕರಾಗ್ರದಲ್ಲೇ ಇದೆ. ಇದು ಶ್ರೀ ರಾಜಾಜೀಯವರ ರಾಜಕೀಯವಾದಲ್ಲಿ, ಗುಜರಾತಿನಲ್ಲಿ ನಾಳೆ ಸ್ವತಂತ್ರ ಪಾರ್ಟಿ ಚುನಾವಣೆಗೆ ನಿಲ್ಲುವುದು ಬೇಡವೇನು? ಚುನಾವಣೆಯತ್ತ ಕಣ್ಣಿಟ್ಟುಕೊಂಡು ಗುಜರಾಥಿನ ಸ್ವತಂತ್ರ ಪಾರ್ಟಿ ಹಾಗೂ ಇತರ ಕೆಲವೆಡೆಯ ಸ್ವತಂತ್ರ ಪಾರ್ಟಿಗಳು ಶ್ರೀ ರಾಜಾಜೀಯವರನ್ನು ಖಂಡಿಸದಿದ್ದರೂ ಶ್ರೀ ಲಾಲಬಹದೂರ ಶಾಸ್ತ್ರೀಜೀಯವರನ್ನೂ ಟೀಕಿಸಿವೆ. ಇದು ರಾಜಕೀಯ! ಸ್ವತಂತ್ರ ಪಾರ್ಟಿಯಲ್ಲಿ ಸರ್ವರಿಗೂ ಸರ್ವವಿಷಯದಲ್ಲೂ ಸ್ವತಂತ್ರರು! ಕಮ್ಯೂನಿಸ್ಟರ ಹಣೆಬರಹವೂ ಅಷ್ಟೇ. ಚೈನಾ-ಪಾಕಿಸ್ಥಾನದೊಂದಿಗೆ ಚೆಲ್ಲಾಟವಾಡುತ್ತಿದೆ. ಪಾಕಿಸ್ಥಾನ ಒಪ್ಪಿರುವ ಸಂಧಾನಕ್ಕೆ ಸರಿ ಎನ್ನದೆ ಇಲ್ಲಿಯ ಕಮ್ಯೂನಿಸ್ಟರಿರಲು ಸಾಧ್ಯವೇನು? ಅಲ್ಲದೆ ರಷ್ಯಾ ಆದಾಗಲೇ ಶ್ರೀ ಲಾಲ ಬಹದೂರಜೀಯವರ "ಕಾರ್ಯಚಾತುರ್ಯ"ವನ್ನು ಕೊಂಡಾಡಿದೆ. ಹೀಗಿರುವಾಗ ರಷ್ಯಾದ ಬಾಲಹಿಡಿಯುವ ಕಮ್ಯೂನಿಸ್ಟರಾಗಲೀ, ಚೈನಾಕ್ಕೆ ಜಯಕಾರ ಹಾಕುವ ಕಮ್ಯೂನಿಸ್ಟರಾಗಲೀ ಸಂಧಾನವು ಸ್ವಾಭಿಮಾನಕ್ಕೆ ಮಸಿ ಬಳಿಯುವಂತಹದೆನ್ನಬಹುದೆಂದು ಯಾರಾದರೂ ನಿರೀಕ್ಷಿಸಿಯಾರೇ? ಹಾಗಿದ್ದರೂ ಸಂಧಾನ ಕಾರ್ಯದ ಹಿಂದುಗಡೆ ಅಮೇರಿಕದ ಕೈವಾಡವೂ ಇರುವದರಿಂದ ಸಹಿಸಿಕೊಳ್ಳಲು ಅವರಿಗೆ ಸ್ವಲ್ಪ ಕಷ್ಟವಾಗುತ್ತಿದೆ. ಅದನ್ನೇ ಬ್ಲಿಟ್ಝ್ ಹಾಗೂ ನ್ಯೂಏಜ್ ಮುಂತಾದ ಅವರ ಪೀಠ ಹಾಗೂ ಮುಖ್ಯಪತ್ರಿಕೆಗಳಲ್ಲಿ ಕಾಣಬಹುದು. ಅವರು ಎರಡು ನಾಲಗೆಯಿಂದ ಮಾತಾಡಿದ್ದಾರೆ ಅದು ಅವರ ಅಭ್ಯಾಸ. ಪಾಕಿಸ್ಥಾನಕ್ಕೆ ಪ್ರಯೋಜನವಾಗುವದಕ್ಕೆ ಇಸ್ಲಾಮಿ ಸಂಸ್ಥೆಗಳು ಬೇಡವೆಂದಾವೆ? ಆದುದರಿಂದ ಇಸ್ಲಾಮಿ ಸಂಸ್ಥೆಗಳು ಜಯಕಾರ ಹಾಕಿರುವದರಲ್ಲಿ ಏನೂ ಆಶ್ಚರ್ಯವಿಲ್ಲ. ಅದವರ ಮನದಿಂಗಿತವನ್ನು ಪ್ರಕಟಪಡಿಸಲು ಸಿಕ್ಕಿದ ಸಂದರ್ಭವಿದೆ. ಅದನ್ನು ಅವರು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ಇನ್ನು ಕೆಲ ಪಕ್ಷಗಳಿಗೆ ಕಚ್ಛಹೋದರೂ ಒಂದೇ ಮುಂಡಾಸು ಹೋದರೂ ಒಂದೇ. ಅದಿಲ್ಲಾ, ಗೋಡೆ ಬಿದ್ದರೆ ಜಗಲಿ ಮೇಲೆ ತಾನೇ—ಶಿವ-ನಾಗಾರಕ್ಕೇನೂ ಆಗದಿದ್ದರೆ ಸರಿ! ಗುಜರಾಥಿನಲ್ಲಿ ನಡೆದಿರುವದಕ್ಕೆ ಇಷ್ಟು ಯಾಕೆ ಗಡಿಬಿಡಿ ಮಾಡಬೇಕು? ದ್ರಾವಿಡನಾಡು ಅಂದರೆ ತಮಿಳು ನಾಡು, ನಾಗಾಲೇಂಡ, ಮಿಝೋಲೇಂಡಿನಲ್ಲಿ ಏನಾದರೆ ಅದರ ಆಗ ನೋಡುವ ಎಂದು ಕೆಲವರು ಇವನ್ನು ಭಾಷಾ ಬಡಭಾಗ್ನಿಗೆ ಎಣ್ಣೆ ಸುರಿಯುವದಕ್ಕೇನೇ ಪ್ರಯತ್ನಿಸುತ್ತಿದ್ದಾರೆ. ಕಾಂಗ್ರೆಸ್ಸಿಗರಿಗೆ ಇಂದು ನುಂಗಲಾರದ ತುತ್ತಾಗಿರುತ್ತದೆ; ಬಾಯಿ ಬಂದ್ ಆಗಿರುತ್ತದೆ. ಜನರ ಹೃದಯಮಿಡಿತಕ್ಕೆ ಕಿವಿಗೊಡಬೇಕು, ಆಗ ಗೊತ್ತಾಗುತ್ತದೆ. ಅದನ್ನೇ ಸ। ಶ್ರೀ ಗುಲ್ಜಾರಿಲಾಲ ನಂದಾ ಹಾಗೂ ಯಶವಂತ ಚವ್ಹಾಣರ ಮಾತುಗಳಿಂದ ನಾವು ಅರಿತುಕೊಳ್ಳಬಹುದು.

ಹೀಗೆ ಸ। ಶ್ರೀ ಗುಲ್ಜಾರಿಲಾಲ ನಂದಾ ಹಾಗೂ ಯಶವಂತ ಚವ್ಹಾಣರು 'ಹಾಗೆ ಹೀಗೆ'ಂದು ಜನತೆಗೆ ತಿಳಿಸುತ್ತಿರುವಂತೆ ಶ್ರೀ ಲಾಲ ಬಹದೂರ ಶಾಸ್ತ್ರೀಜೀಯವರು ತನ್ನ 'ವಿಶ್ವ ವಿಜಯ'ದ ಕುರಿತು ವಿವರಿಸುತ್ತ ಬರುತ್ತಿದ್ದಾರೆ. ತನ್ನ ಬೆನ್ನನ್ನವರು ತಾನೇ ತಟ್ಟಿಕೊಳ್ಳುತ್ತಿದ್ದಾರೆ, 'ಹಾಗಿಲ್ಲ-ಹೀಗಿಲ್ಲ, ಅದೇನಿಲ್ಲ-ಇದೇನಿಲ್ಲವೆಂ'ದು ಎಡೆಬಿಡದೆ ಅವರು ಪ್ರಚಾರನಡೆಸುತ್ತಿದ್ದಾರೆ. ಹೀಗೆ ಒಂದೆಡೆ ಎದುರು ಪಕ್ಷಗಳು ಹಾಗೂ ಪಕ್ಷೇತರರು ಶ್ರೀ ಲಾಲ ಬಹದೂರ ಶಾಸ್ತ್ರೀಜೀಯವರ ಒಪ್ಪಂದದ ವಿರುದ್ಧ ಜನಜಾಗ್ರತಿ ಕಾರ್ಯಕ್ಕೆ ಮುಂದಾಗಿದ್ದಾರೆ, ಇನ್ನೊಂದೆಡೆ ಶ್ರೀ ಲಾಲಬಹದೂರ ಶಾಸ್ತ್ರೀಜೀಯವರು ತಾನು ಮಾಡಿದ್ದೇ ಸರಿಯೆಂದು ವಿವರಿಸುತ್ತ ಬರುತ್ತಿದ್ದಾರೆ. ದಿಲ್ಲಿಯಾದ ಮೇಲೆ ಬೊಂಬಾಯಿಯಲ್ಲಿ ಭಾರೀ ಪ್ರತಿಭಟನೆ ನಡೆಯಿತು. ಅದರ ಪರಿಣಾಮವಾಗಿ ನಗರರಕ್ಷಕರು ಕೆಲವರನ್ನು ಬಂಧಿಸಿದರು. ಇತ್ತ ಹೈದರಾಬಾದಿನಲ್ಲಿ ಸಂಯುಕ್ತ ಸಮಾಜವಾದ ಪಕ್ಷದವರು ಶ್ರೀ ಲಾಲ ಬಹದೂರ ಶಾಸ್ತ್ರೀಜೀಯವರಿಗೆ ಕಪ್ಪು ಬಟ್ಟೆ ಪ್ರದರ್ಶಿಸಿ ತಮ್ಮ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸಿದುದರ ಪರಿಣಾಮವಾಗಿ ಕೆಲವರನ್ನು ಬಂಧಿಸಬೇಕಾಯಿತು. ಈ ರೀತಿ ಸಂಯುಕ್ತ ಪ್ರತಿಕ್ರಿಯೆಗೆ ಸಂಧಾನದಲ್ಲಿರುವ ಶರತ್ತುಗಳಾದರೂ ಏನು? ಜನತೆ ಏಕೆ ಪ್ರತಿಭಟಿಸುತ್ತಿದೆ?

ಆರೋಗ್ಯ ವಿಚಾರ

ಕ್ಷಯ ರೋಗವು ರಾಜಯೋಗವಲ್ಲ

ಡಾಕ್ಟರ್ ಜಿರಿ ಸ್ನೋರೇಸ.

ಈ ವ್ಯಾಧಿಯು ಈಗ ಜಗತ್ತಿನಲ್ಲೆಲ್ಲ ವ್ಯಾಪಿಸಿದೆ. ಅದನ್ನು ನ್ಯಾಯವಾಗಿಯೇ ಬಡವರ ಜಾಡ್ಯವೆಂದು ಕರೆಯುತ್ತಾರೆ. ಅಜೀರ್ಣ, ಅತಿಶ್ರಮ, ಇತ್ಯಾದಿಗಳ ಮೂಲಕ ಸಾಂಕ್ರಾಮಿಕಕ್ಕೆ ಸುಲಭವಾಗಿ ಸಿಕ್ಕುವ ಅಂಗಗಳ ಮೇಲೆ ಇದರ ಧಾಳಿ ನಡೆಯುತ್ತದೆ. ಯೂರೋಪಿನಲ್ಲಿ ಇದು ಶತಮಾನಗಳಗಟ್ಟಲೆ ಧಾಂಧಲೆ ನಡೆಸಿದ ತರುವಾಯ, ಅಲ್ಲಿ ಇದರ ಕಾರ್ಯಶಕ್ತಿಯು ಕಡಮೆಯಾಯಿತು. ಯೂರೋಪಿಗೆ ಬಂದ ಆಫ್ರಿಕನ್ನರು ಈ ರೋಗಕ್ಕೆ ಸುಲಭವಾಗಿ ಬಲಿಯಾದರು.

ಈಗ ಅದರ ಅಪಾಯಗಳೇನೂ ಕಡಮೆಯಾಗಿಲ್ಲವಾದರೂ, ಅದರ ಚಿಕಿತ್ಸೆಯ ಅಧಿಕಾಧಿಕ ಸಾಧ್ಯತೆಗಳು ಇವೆಯೆಂಬುದು ಸಂತೋಷಜನಕ ವಿಷಯವೇ.

ಜೀವಿಯ ಅಂಗದಲ್ಲಿ ಉಂಟಾಗುವ ರಸಗಂತಿಗಳಲ್ಲಿರುವ ಕೋಚ್ ದಂಡಾಣು ಜೀವಿಗಳಿಂದ ಕ್ಷಯ ರೋಗ ಉಂಟಾಗುತ್ತದೆ. ಮಾನವನಿಂದ ಮಾನವನಿಗೆ, ಪ್ರಾಣಿಯಿಂದ ಮಾನವನಿಗೆ, ಮಾನವನಿಂದ ಪ್ರಾಣಿಗೆ ಈ ರೋಗವು ಹಬ್ಬುತ್ತದೆ.

ಮೂರು ಘಟ್ಟಗಳಲ್ಲಿ ಈ ರೋಗವು ವಿಕಾಸಗೊಳ್ಳುತ್ತದೆ. ಮೊದಲನೆಯ ಘಟ್ಟದಲ್ಲಿ ದಂಡಾಣು ಜೀವಿಯು ದೇಹವನ್ನು ಪ್ರವೇಶಿಸುತ್ತದೆ. ಈ ಸೂಕ್ಷ್ಮ ಸಾಂಕ್ರಾಮಿಕವು ಸಾಮಾನ್ಯವಾಗಿ ಅಷ್ಟಾಗಿ ಗಮನಕ್ಕೆ ಬರುವುದೇ ಇಲ್ಲ. ಮಾಂಸ ಖಂಡ ಸೇರಿದ ದಂಡಾಣು ಜೀವಿಯು ಗಂತಿಯನ್ನಾಗಲಿ, ಕ್ಷತಿಯನ್ನಾಗಲೀ ಉಂಟುಮಾಡಿ ಅದರ ಸಮೀಪದ ನರಗ್ರಂಥಿಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಸಾಂಕ್ರಾಮಿಕ ಪ್ರಬಲವಾದಾಗ ಉಂಟಾಗುವ ಮೆನಿಂಜೆಟಿಸ್, ನ್ಯೂಮೋನಿಯ ಅಥವಾ ಗ್ರಾನ್ಯುಲಿಟಿನ್ ರೋಗ ಮಾರಕವಾಗಲೂ ಬಹುದು.

ಎರಡನೆಯ ಘಟ್ಟದಲ್ಲಿ ದಂಡಾಣು ಜೀವಿಗಳು ಅಭಿವೃದ್ಧಿಯಾಗಿ ರಕ್ತಪರಿಚಲನೆಯ ಮೂಲಕ ದೇಹದಲ್ಲಿ ವ್ಯಾಪಿಸುತ್ತವೆ. ಆಗ ಜ್ವರವೂ, ಕರುಳು ಬೇನೆಯೂ ಉಂಟಾಗಲೂಬಹುದು. ಶ್ವಾಸಕೋಶಾವರಣದ ಉರಿಯೂತ ಉದರ ಪರಿವೇಷ್ಟನ ಪಟಲದ ಉರಿಯೂತ ಮಿದುಳು ಪೊರೆಗಳ ಉರಿಯೂತ ಸಂಧಿವಾತ, ಇತ್ಯಾದಿ ಗಂಭೀರ ರೋಗಗಳೂ ಉಂಟಾಗಬಹುದು.

ಕಾರಣ

ಈ ದಂಡಾಣು ಜೀವಿಯು ತುಂಬ ಸಣ್ಣದು. ಅದು ಚಲಿಸದ ಜೀವಿ. ಗುಂಡು ಕೊನೆಗಳುಳ್ಳ ದಂಡಾಣು ಇದು. ಅದನ್ನು ಕೋಚ್‌ರವರು ೧೮೮೨ರಲ್ಲಿ ಕಂಡುಹಿಡಿದರು. ಒಣ ಕಫ ಕಣಗಳಲ್ಲಿಯೂ, ತೇವದ ಕಣಗಳಲ್ಲಿಯೂ, ಕ್ಷಯ ಗ್ರಂಥಿಗಳುಳ್ಳ ಹಾಲಿನಲ್ಲಿಯೂ ಕಂಡು ಬರುವ ಈ ದಂಡಾಣು ಜೀವಿಗಳುಳ್ಳ ಒಂದು ಕಣವು ಸಾವಿರಾರು ಜನರಿಗೆ ಸಾಂಕ್ರಾಮಿಕವನ್ನು ಉಂಟುಮಾಡಬಹುದು. ರೋಗಗ್ರಸ್ತರ ರಕ್ತದಲ್ಲಿಯೂ ಇದು ಕಣರೂಪದಲ್ಲಿ ಅಥವಾ ಹಳೆಯ ಕ್ಷಯದ ಸುಪ್ತ ರೂಪದಲ್ಲಿರುತ್ತದೆ.

ಹಳೆಯ ಕ್ಷಯವು ದೀರ್ಘ ಕಾಲದವರೆಗೆ ಆಗಾಗ್ಗೆ ದಾಳಿ ಮಾಡುತ್ತಿರುತ್ತದೆ. ಮೊದಲ ವರ್ಷಗಳಲ್ಲಿ ಸಾಂಕ್ರಾಮಿಕ ಸಂಪೂರ್ಣವಾಗಿ ವಾಸಿಯಾದಂತೆ ಕಂಡು ಬರುತ್ತದೆ ಕೂಡ. ದೇಹೋಷ್ಣವು ಸಹಜವಾಗಿರುತ್ತದೆ. ಆರೋಗ್ಯ ಸುಧಾರಿಸುತ್ತದೆ. ಆದರೇನು? ರೋಗದ ರೋಗಾಣುಗಳು ಪುನಃ ಬರುತ್ತವೆ, ಸಾಂಕ್ರಾಮಿಕ ಹರಡುತ್ತದೆ.

ತೀವ್ರ ಕ್ಷಯವು ಮುಖ್ಯತಃ ತಾರುಣ್ಯಾವಸ್ಥೆಯಲ್ಲಿ ಸಾಂಕ್ರಾಮಿಕದಿಂದ ಉಂಟಾಗುತ್ತದೆ. ಚಳಿಜ್ವರ, ಪಾರ್ಶ್ವವೇದನೆ, ಶ್ವಾಸಾವರೋಧ, ಅತ್ಯುಗ್ರ ಜ್ವರ, ನಿತ್ರಾಣ—ಮುಂತಾದ ತೀವ್ರ ರೋಗಗಳುಂಟಾಗುತ್ತವೆ. ಪ್ರಾರಂಭದಿಂದಲೂ ಶ್ಲೇಷ್ಮದಲ್ಲಿ ಕೋಚ್ ದಂಡಾಣು ಜೀವಿಗಳಿರುತ್ತವೆ. ಒಂಬತ್ತನೆಯ ದಿನವೂ ಜ್ವರ ಮುಂದುವರಿಯುತ್ತದೆ. ನಾಡಿಯು ತೀವ್ರವಾಗಿರುತ್ತದೆ. ವ್ಯಾಧಿಯ ದಂಡಾಣು ಜೀವಿಗಳ ಸಂಖ್ಯೆಯು ಶ್ಲೇಷ್ಮದಲ್ಲಿ ಅತ್ಯಧಿಕವಾಗಿರುತ್ತದೆ. ರೋಗಿಯ ತೂಕ ಕಡಮೆಯಾಗುತ್ತದೆ. ಹಸಿವೆಯೂ ಗನು. ಬಲಹೀನತೆಯು ಹೆಚ್ಚುತ್ತದೆ.

ಬೆಳವಣಿಗೆ

ಶ್ಲೇಷ್ಮದಲ್ಲಿ ಕೀವು ತುಂಬಿರುತ್ತದೆ. ಜ್ವರ, ಅತಿಸಾರ, ಹೆಮೊಪ್ಟೈಟಸ್, ಎಡಿಮಾ, ಅಲ್ಬುಮಿನೂರಿಯಾ ರೋಗಗಳುಂಟಾಗುತ್ತವೆ. ನಾಲ್ಕೈದು ವಾರಗಳಲ್ಲಿ ರೋಗವು ಅತ್ಯುಗ್ರ ದಶೆಗೇರುತ್ತದೆ. ಈ ಮಾರಕ ರೋಗವು ಸ್ಟ್ರೆಪ್ಟೋಮೈಸಿನ್ ಬಳಕೆಯಿಂದ ಬಹುಮಟ್ಟಿಗೆ ಹತೋಟಿಗೆ ಬರುತ್ತದೆ.

ಕ್ಷಯ ರೋಗದ ವಿರುದ್ಧ, ಹೋರಾಟ ತೀವ್ರವಾಗಿ ನಡೆಯಬೇಕು. ಮಾನವ ಮೂಲದ ದಂಡಾಣು ಜೀವಿಯ ವಿರುದ್ಧ ಹೋರಾಡಲು ಮೊದಲು ಜನರು ಎಲ್ಲೆಂದರಲ್ಲಿ ಉಗುಳದೆ, ಗೊತ್ತಾದ ಕಡೆಗಳಲ್ಲಿ ಮಾತ್ರವೇ ಉಗುಳುವಂತೆ ಮಾಡಬೇಕು. ಪ್ರಾಣಿಮೂಲದ ದಂಡಾಣು ಜೀವಿಗಳು ವ್ಯಾಪಿಸದಂತೆ, ಕೊಟ್ಟಿಗೆಗಳನ್ನು ಚೊಕ್ಕಟವಾಗಿಟ್ಟಿರಬೇಕು. ಕ್ಷಯಗ್ರಸ್ತ ಪ್ರಾಣಿಗಳನ್ನು ಉಳಿಸಿರಬಾರದು. ಮಾಂಸವನ್ನು ಜೀಯಿಸುವ ಕಾರಣ ಇದು ಹಾನಿಕರವು, ಆದರೆ ಹಾಲು ಅತ್ಯಪಾಯಕರ. ಕ್ಷಯಗ್ರಸ್ತವಾದ ಹಸು ಒಂದಿದ್ದರೆ, ಅದರ ಹಾಲು ಅಲ್ಲಿನ ಎಲ್ಲ ಹಸುಗಳ ಹಾಲಿನಲ್ಲಿ ಬೆರೆತಾಗ ಸಾಂಕ್ರಾಮಿಕವಾಗಬಹುದು. ಆದುದರಿಂದಲೇ ಹಾಲನ್ನು ಬಳಸುವ ಮೊದಲು ಕುದಿಸಲೇ ಬೇಕು.

ಕಾಯಿಸಿದಾಗಲೂ ಟಾಕ್ಸಿನ್ನುಗಳು (ಜೀವಾಣು ವಿಷಗಳು) ಉಳಿದಿರಬಹುದು.

ಜೀವಿಯ ಪ್ರತಿರೋಧ ಶಕ್ತಿಯನ್ನು ಬಲಹೀನಗೊಳಿಸುವ ಸ್ಥಿತಿಗಳನ್ನು-ಹೊಲಸು ಕೇರಿಗಳು, ಅತಿಶ್ರಮ, ಪೋಷಣೆ ಅಭಾವ, ಮಾದಕಗಳ ಸೇವನೆ, ಇಂತಹ ಸ್ಥಿತಿಗಳನ್ನು--ನಿವಾರಿಸಬೇಕು.

ಆರೋಗ್ಯ ವ್ಯವಸ್ಥೆಯು ಚೆನ್ನಾಗಿ ಸಂಘಟಿತವಾಗಿರುವ ಕಡೆಗಳಲ್ಲಿ, ಜನತೆಗೆ ವೈದ್ಯಕೀಯ ಸೇವೆಯೂ, ರೋಗ ನಿರೋಧಕ ಚಿಕಿತ್ಸೆಗಳೂ ದೊರೆಯುತ್ತಿರುವ ಕಡೆಗಳಲ್ಲಿ ಕ್ಷಯರೋಗವನ್ನು ಯಶಸ್ವಿಯಾಗಿ ಎದುರಿಸಬಹುದು. ಗೊತ್ತಾದ ಕಾಲಕಾಲಕ್ಕೆ ವಯಸ್ಕರೆಲ್ಲರ ಶ್ವಾಸಕೋಶಗಳನ್ನು ಎಕ್ಸ್ ಕಿರಣಗಳ ಮೂಲಕ ಉಚಿತವಾಗಿ ಪರೀಕ್ಷಿಸಬೇಕು. ಅವಶ್ಯಕತೆ ಕಂಡುಬಂದಲ್ಲಿ ಒಡನೆಯೇ ಚಿಕಿತ್ಸೆಯನ್ನು ಪ್ರಾರಂಭಿಸಬೇಕು. ಮಕ್ಕಳಿಗೂ, ಯುವ ಜನರಿಗೂ, ಈ ಪರೀಕ್ಷೆಗಳು ಆಗಾಗ್ಗೆ ನಡೆಯುತ್ತಿರಬೇಕು.

ರೋಗಿಯು ಅನುಭವಿಕರಾದ ತಜ್ಞರ ವಶದಲ್ಲಿ ಇದ್ದರೆ ಮಾತ್ರವೇ ಚಿಕಿತ್ಸೆ ಯಶಸ್ವಿಯಾಗುವುದೆಂದು ನಾನು ಒತ್ತಿ ಹೇಳುತ್ತೇನೆ. ಸ್ಟ್ರೆಪ್ಟೊಮೈಸಿನ್ ಅತ್ಯಂತ ಗುಣಕಾರಿ ಔಷಧ. ಆದರೆ ಅದನ್ನು ತಪ್ಪಾಗಿ ಬಳಸಿದ ಪಕ್ಷದಲ್ಲಿ, ಕ್ಷಯ ರೋಗದ ದಂಡಾಣು ಜೀವಿಗಳು ಆ ಔಷಧಕ್ಕೆ ಪಳಗಿಸಿಕೊಳ್ಳುತ್ತವೆ. ಆ ಮೇಲೆ ಸ್ಟ್ರೆಪ್ಟೊಮೈಸಿನ್ ಚಿಕಿತ್ಸೆ ಪರಿಣಾಮಕಾರಿಯಾಗದು. ಇದು ಅಪಾಯಕರ. ಮೊದಲೇ ಈ ಬಗೆಯ ದಂಡಾಣು ಜೀವಿಯ ಸಾಂಕ್ರಾಮಿಕವಾಗಿದ್ದರಂತೂ ಚಿಕಿತ್ಸೆ ತುಂಬಾ ಕಷ್ಟ. ಆದುದರಿಂದ ಈ ಸಂಘರ್ಷದಲ್ಲಿ ತುಂಬ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ.

ಗೀತಾ - ದ್ವಿತೀಯ ಅಧ್ಯಾಯ

(ಐದನೇ ಪುಟದಿಂದ)

ತ್ಮದ ಪ್ರಭೆ ಬೆಳಗತೊಡಗುವುದು. ಆತ್ಮದ ಕೃಪೆ, ಮನಸ್ಸಿನ ಶಾಂತಿ ರೂಪದಲ್ಲಿ ಸಮತೋಲನದಲ್ಲಿ ದೊರಕುವುದು. ಈ ಆತ್ಮದ ಕೃಪೆ, ಈ ಶಾಂತಿ ರೂಪದಲ್ಲಿ ದೊರಕುವುದರಿಂದ ಅವನನ್ನು ಬಾಹ್ಯ ವಾತಾವರಣಗಳು ಪೀಡಿಸದೆ ಇರುವುವು.

ಪ್ರಸಾದೇ ಸರ್ವದುಃಖಾನಾಂ।
ಹಾನಿ ರಸ್ಯೋಪ ಜಾಯತೇ।
ಪ್ರಸನ್ನ ಚೇತಸೋ ಹ್ಯಾಶು।
ಬುದ್ಧಿಃ ಪರ್ಯ ವತಿಷ್ಠತೇ ॥೬೫॥

ಈ ಪ್ರಸಾದ, ಈ ಸರ್ವ ಸುಖ ಶಾಂತಿಯು ಹೆಚ್ಚಿದಂತೆ, ಅವನ ಎಲ್ಲಾ ದುಃಖಗಳೂ, ಎಲ್ಲಾ ಕಷ್ಟಗಳೂ, ಎಲ್ಲಾ ನೋವುಗಳೂ ಮಾಯವಾಗುವುವು. ಇತ್ತೀಚೆಗೆ ವೈದ್ಯಶಾಸ್ತ್ರಜ್ಞರು ಒಂದು ನೂತನ ಸಂಶೋಧನೆ ಮಾಡಿರುವರು. ಮಾನವನ ಎಲ್ಲಾ ರೋಗಗಳೂ, ಮಾನಸಿಕ, ಬೌದ್ಧಿಕ ತಳಮಳದಿಂದ, ವಿಕ್ಷೇಪಗಳಿಂದ ಉಂಟಾಗುವುದು ಎಂದು ತಿಳಿದಿರುವರು. ಮನಸ್ಸು ಸಮಾಧಾನಗೊಂಡಂತೆ ದೈಹಿಕ ಆರೋಗ್ಯವು ದೊರಕುವುದು. ಹಾಗೆ ಈ ಆತ್ಮದ ಕೃಪೆ ಎಂಬ ಶಾಂತಿಯು ದೊರಕಿದಂತೆ, ಸಮಸ್ತ ದುಃಖ ನೋವುಗಳು ಮಾಯವಾಗುವುವು.

ನಾಸ್ತಿ ಬುದ್ಧಿರ ಯುಕ್ತಸ್ಯ ।
ನ ಚಾ ಯುಕ್ತಸ್ಯ ಭಾವನಾ ।
ನ ಚಾ ಭಾವಯತಃ ಶಾಂತಿರ ।
ಶಾಂತಸ್ಯ ಕುತಃ ಸುಖಮ್ ॥ ೬೬ ॥

ಇಂತಹ ಪ್ರಸನ್ನತೆ ಮನಸ್ಸಿನಲ್ಲಿ ಹೆಚ್ಚಿದಂತೆ ಬುದ್ಧಿವಂತಿಕೆ, ಮೇಧಾವಿತನ, ಪಾಂಡಿತ್ಯವೂ ಹೆಚ್ಚುವುದು. ಇದನ್ನು ಎಲ್ಲಾ ವಿದ್ಯಾರ್ಥಿಗಳು ತಿಳಿದಿರಬೇಕು. ಮನಸ್ಸು ಒಂದು ವಿಷಯದಲ್ಲಿ ಆಸಕ್ತವಾಗಿ ಅದರ ಹಂಬಲದಿಂದ ವಿಕ್ಷೇಪಗೊಂಡರೆ ವಿಷಯಾದಿಗಳ ಕಡೆ ಮನಸ್ಸು ಹರಿದಂತೆ, ವ್ಯಾಸಂಗಕ್ಕೆ ಹೆಚ್ಚಿನ ಶ್ರದ್ಧೆ ಇಡಲು ಸಾಧ್ಯವಾಗುವುದಿಲ್ಲ. ಆಗ ಮೇಧಾವಿತನ ಮಾಯವಾಗುವುದು. ಆದರಿಂದ ಮೊತ್ತ ಮೊದಲು ಮನಶ್ಶಾಂತಿಯನ್ನು ಮನೋನಿಗ್ರಹದ ಮೂಲಕ ಸಾಧಿಸಿಕೊಂಡು ಮೇಧಾವಿತನ ಹೆಚ್ಚಿಸಿಕೊಳ್ಳಬೇಕು.

ಬುದ್ಧಿಯೋಗದಿಂದಾಗಿ ಒಬ್ಬನು ಸ್ಥಿತಪ್ರಜ್ಞ ಸ್ಥಿತಿ ತಲಪಿದಾಗ ಅವನು ಪ್ರಪಂಚದ ವಸ್ತುಗಳನ್ನು ಅನುಭವಿಸಿ ಸಂತೋಷ ಪಡುವನು. ಅವನನ್ನು ಪ್ರಪಂಚದ ವಸ್ತುಗಳು ಅನುಭವಿಸುವುದಿಲ್ಲ. ಅವನು ಅವುಗಳಿಂದ ಕಂಗೆಡುವುದಿಲ್ಲ.

ಮೇಧಾವಿತನ ಹೆಚ್ಚಿದಂತೆ, ಒಬ್ಬನಲ್ಲಿ ಪ್ರತಿಭಾ ಶಕ್ತಿ ಹೆಚ್ಚುವುದು. ಒಂದು ಗುರಿಯನ್ನು ಇಟ್ಟುಕೊಂಡು, ಅದಕ್ಕ ತಕ್ಕಂತೆ, ಮಾನಸಿಕವಾಗಿ ಕೆಲಸ ಮಾಡುವುದು, ಅದನ್ನು ಬೌದ್ಧಿಕವಾಗಿ ತಿಳಿಯಲೆತ್ನಿಸುವುದು ಭಾವನಾಶಕ್ತಿಯನ್ನು ಹೊಂದಿಕೊಂಡಿದೆ. ಆದರಿಂದಾಗಿ ಈ ಭಾವನಾ ಶಕ್ತಿ ಇಲ್ಲದಿದ್ದರೆ ಶಾಂತಿಯು ದೊರಕದು. ಶಾಂತಿ ಎಂದರೆ ಸಮಾಧಾನ ತಿ ಇದು ಇಲ್ಲದಿದ್ದರೆ ಸುಖವಿಲ್ಲ.

ಇಂದ್ರಿಯಾಣಾಂ ಹಿ ಚರತಾಂ ।
ಯನ್ಮನೋಽನು ವಿಧೀಯತೇ ।
ತದಸ್ಯ ಹರತಿ ಪ್ರಜ್ಞಾಂ ।
ವಾಯುರ್ನಾವ ಮಿವಾಂಭಸಿ ॥೬೭॥

ಇಂದ್ರಿಯಗಳು ಹೇಳಿದಂತೆ ಮಾಡುವವನು, ಚುಕ್ಕಾಣಿಯಿಲ್ಲದ ನಾವೆಯಂತೆ, ಸಂಸಾರವೆಂಬ ಸಾಗರದಲ್ಲಿ ತೇಲಾಡುವನು. ಸಾಗರದ ಅಲೆಗಳ ಮೇಲೆ ಗಾಳಿ ಬೀಸಿದ ದಿಕ್ಕಿಗೆ, ಚುಕ್ಕಾಣಿ ಇಲ್ಲದ ನಾವೆ ಚಲಿಸುವಂತೆ ಒಬ್ಬನು ಇಂದ್ರಿಯಗಳ ವಶನಾಗಿ, ಅವುಗಳಿಗನುಸಾರವಾಗಿ, ನಡೆದರೆ, ಅವನು ಉದ್ದೇಶ ರಹಿತ ಬಾಳ್ವೆ ನಡೆಸಿ, ಕೊನೆಗೆ ನಾಶ ಹೊಂದುವನು.

ಸಶೇಷ.

ಬೈಂಡಿಂಗ್ ಸಂಸ್ಥೆಗೆ ಬೇಕಾದ ಯಂತ್ರ.

ಪುಸ್ತಕಗಳನ್ನು ಬೈಂಡ್ ಮಾಡಿದಾಗ, ಅದರ ಮೇಲ್ಭಾಗದಲ್ಲಿರುವ ಬಟ್ಟೆಯ ಮಡಿಕೆಯು ಬಹುಬೇಗ ಮುದುರಿಕೊಳ್ಳುವುದನ್ನು ಕಂಡಿದ್ದೇವೆ. ಆದ್ದರಿಂದ ಪೂರ್ವಭಾವಿಯಾಗಿಯೇ ರಟ್ಟಿನ ಶಕ್ತಿ ಅದರ ಮೇಲಿನ ಬಟ್ಟೆಯ ಶಕ್ತಿಗಳನ್ನು ತಿಳಿಯುವುದೊಳ್ಳೆಯದು. ಇದಕ್ಕಾಗಿ, ಆಮ್ಸ್ಟರ್‌ಡ್ಯಾಂನಲ್ಲಿರುವ ದಿ ನೆದರ್‌ಲೇಂಡ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಫಾರ್ ಪ್ರಿಂಟಿಂಗ್ ಅಂಡ್ ಅಲೈಡ್ ಇನ್‌ಡಸ್ಟ್ರೀಸ್ (The Netherlands Reserch Institute for printing and allied Industries) ಎಂಬ ಸಂಸ್ಥೆಯು ಯಂತ್ರವೊಂದನ್ನು ಕಂಡುಹಿಡಿದಿದೆ. ಬಟ್ಟೆಯ ಯೋಗ್ಯತೆಯನ್ನು ಮೊದಲೇ ತೋರಿಸಿಕೊಡುವ ಈ ಯಂತ್ರವನ್ನು 'ಗ್ರಿಂಕ್ಲಿಂಗ್ ಅಪರೇಟನ್' ಎಂದು ಕರೆಯಲಾಗಿದೆ.

(ಒಂಭತ್ತನೇ ಪುಟದಿಂದ)

ರೆ, ಕೆಲವೊಮ್ಮೆ ಸುಮಾರು ೨೦ ಬಗೆಯ ಅಡುಗೆಯು ಬಡಿಸಲ್ಪಡುತ್ತದೆ.

ಚಿತ್ರ ೧೫—ಚಕಿಂವಟಿಕೆಗಳು

ಅಂತಾರಾಷ್ಟ್ರೀಯ ಗೃಹದಲ್ಲಿರುವ ವಿದ್ಯಾರ್ಥಿಗಳು ಆಗಾಗ ಸಂತೋಷ ಕೂಟಗಳನ್ನು ಏರ್ಪಡಿಸುತ್ತಾರೆ. ಅವರು ತಮ್ಮ ದೇಶದ ನೃತ್ಯವನ್ನು ಮಾಡಿ ತೋರಿಸುತ್ತಾರೆ. ತಮ್ಮ ಜಾನಪದ ಗೀತೆಯನ್ನು ಹಾಡುತ್ತಾರೆ. ಅಮೆರಿಕನ್ ವಿದ್ಯಾರ್ಥಿಗಳೂ ಇದರಲ್ಲಿ ಪಾಲುಗೊಳ್ಳುತ್ತಾರೆ. ಒಬ್ಬರು ಇನ್ನೊಬ್ಬರ ರೀತಿ-ರಿವಾಜುಗಳನ್ನು ಅರಿತು ಕೊಳ್ಳುವಲ್ಲಿ ಉತ್ಸಾಹ ತೋರಿಸುತ್ತಾರೆ. ಜನರು ಪರಸ್ಪರರನ್ನು ಸರಿಯಾಗಿ ತಿಳಿದುಕೊಂಡರೆ, ಶಾಂತಿಯುತ ಜಗತ್ತನ್ನು ನಿರ್ಮಿಸುವುದು ಸಾಧ್ಯವಾದೀತು.

ಚಿತ್ರ ೧೬—ಸ್ಮಾರಕಕ್ಕೆ ಗೌರವ

ಮಹಾಧನಿ ಅಡಾಲ್ಫ್ ಸ್ಪ್ರೆಕಲ್ಸ್ ಎಂಬವನು ಯುದ್ಧದಲ್ಲಿ ಮಡಿದ ಅಮೆರಿಕನರ ಸ್ಮಾರಕವೆಂದು ಒಂದು ಶಿಲ್ಪವನ್ನು ಕೆಲಿಫೋರ್ನಿಯಾ ರಾಜ್ಯಕ್ಕೆ ದಾನವಿತ್ತನು. ಇದರಲ್ಲಿ ೧೯ಗ್ಯಾಲರಿಗಳಿರುವ ಒಂದು ವಸ್ತು ಸಂಗ್ರಹಾಲಯವಿದೆ. ಇದರಲ್ಲಿ ವರ್ಣಚಿತ್ರಗಳು, ಶಿಲ್ಪಗಳು ಮತ್ತು ಛಾಪಿಸಿದ ಕಲಾಕೃತಿಗಳಿವೆ. ಸಾನ್‌ಫ್ರಾನ್ಸಿಸ್ಕೋವಿನಲ್ಲಿ ಹಲವಾರು ಕಲಾಕೃತಿ ಸಂಗ್ರಹಾಲಯಗಳಿದ್ದು, ಇವುಗಳಲ್ಲಿ ಜಗತ್ತಿನ ಎಲ್ಲ ದೇಶಗಳನ್ನೂ ಪ್ರತಿನಿಧಿಸುವ ಕೃತಿಗಳಿವೆ.

ಚಿತ್ರ ೧೭—ಚೀನಾ ನಗರ

ಅಮೆರಿಕೆಯಲ್ಲಿ ಚೀನಾ ನಗರವಿದೆಯೆಂದರೆ, ಬೆರಗಾಗಬೇಡಿ. ಸಾನ್‌ಫ್ರಾನ್ಸಿಸ್ಕೋವಿನಲ್ಲಿ ಸುಮಾರು ಮೂವತ್ತು ದೇಶಗಳಿಗೆ ಸೇರಿದ ಜನರಿದ್ದಾರೆ. ಇವರಲ್ಲಿ ಚೀನೀಯರೆಲ್ಲರೂ ನಗರದ ಬಡಾವಣೆಯೊಂದರಲ್ಲಿ ನೆಲಸಿದ್ದಾರೆ. ಈ ಪ್ರದೇಶವನ್ನು ಚೀನಾ ಟೌನ್ ಎಂದು ಹೆಸರಿಸಿದ್ದಾರೆ. ಇಲ್ಲಿ ಚೀನೀಯರು ತಮ್ಮ ದೇಶದ ಪದ್ಧತಿ, ಸಂಪ್ರದಾಯ, ಮತ್ತು ಧರ್ಮಗಳನ್ನು ಕಾಪಾಡಿಕೊಳ್ಳುತ್ತ ಬಂದಿದ್ದಾರೆ. ಇವರನ್ನು ಕಂಡರೆ, ಅಮೆರಿಕೆಯಲ್ಲಿದ್ದೇ ಚೀನಾವನ್ನು ಕಂಡಂತೆಯೇ ಸರಿ.

ಚಿತ್ರ ೧೮— ಭೂಕಂಪ

೧೯೦೬ರಲ್ಲಿ ಸಾನ್‌ಫ್ರಾನ್ಸಿಸ್ಕೋವಿನಲ್ಲಿ ಭೂಕಂಪ ನಡೆಯಿತು. ಆಗ ಇಡಿಯ ನಗರವೇ ನೆಲದಲ್ಲಿ ಹೂತು ಹೋಯಿತು. ಸುಮಾರು ೫೦೦ ಪ್ರಜೆಗಳೂ ೩೦,೦೦೦ ಕಟ್ಟಡಗಳೂ ನಾಶವಾದುವು. ಅದೇ ದಿನಗಳಲ್ಲಿ ನಗರ ಪ್ರಜೆಗಳು ನಗರ ಪುನರ್ನಿರ್ಮಾಣಕ್ಕೆ ತೊಡಗಿದರು. ಓರೆಕೋರೆಯಾದ ರಸ್ತೆ; ಆಯವಿಲ್ಲದ ಮನೆಗಳ ಸ್ಥಾನದಲ್ಲಿ ಈಗ ಅಂದದ ನಗರ ನಿರ್ಮಾಣಕ್ಕೆ ಅನುಕೂಲವಾದ ಯೋಜನೆಗಳನ್ನು ರೂಪಿಸಿಕೊಂಡು ಅಚ್ಚುಕಟ್ಟನ್ನು ಉಳಿಸಿಕೊಂಡಿದ್ದಾರೆ.

READ &
ADVERTISE IN
NAVAYUGA WEEKLY

ಎತ್ತಿದ್ರಲ್ಲಾ ಮಂಗ್ಯಾರ್ತೀನ?

(ನಾಲ್ಕನೇ ಪುಟದಿಂದ)

'ಯಾಕೆ? ಊರು ಹೊಡೆದದ್ದು ಮರ್ತು ಹೋಗುತ್ಯೆ?"

'ಕೇಳ್, ಹೌದು, ಮಾಡಿಸಿಯೇ ಬಿಟ್ರು. ಭಾಷಾವಾರು ರಾಜ್ಯ ವಿಂಗಡಿಸೋದಿಲ್ಲಾಂದ್ರು, ಪೊಟ್ಟಿಲು ಆತ್ಮಕ್ಕೆ ಶಾಂತಿ ಕೋರಲು ಆಂಧ್ರ ರಾಜ್ಯ ಪ್ರತ್ಯೇಕಿಸಿದ್ರು.... ಇದೇ ಮೊದಲು ಮತ್ತು ಕೊನೆ. ಇನ್ಯಾವ ಭಾಷಾ ಪ್ರಾಂತವೂ ಇಲ್ಲಾಂದ್ರು, ರಾಜ್ಯ ಪುನರ್ವಿಂಗಡಣೆ ಮಾಡಿದ್ರು ಬೊಂಬಾಯಿ ರಾಜ್ಯ ಅವಿಭಾಜ್ಯ ಅಂದ್ರು. ಚುನಾವಣೇಲಿ ಗೆಲ್ಲೋಕೆ ಮಹಾರಾಷ್ಟ್ರ—ಗುಜರಾತಾಂತ ಒಡೆದ್ರು. ನಾಗರಿಗೆ ರಾಜ್ಯ ವಿಲ್ಲಾಂದ್ರು. ಹಿಂದಿನಿಂದ ಕೊಟ್ಟೇ ಬಿಟ್ರು... ಚೀನಾ ಭಾಯಿ ಅಂದ್ರು, ಈಗ ವೈರಿ ಅನ್ತಾರೆ....?"

"ಹ್ಞಾಂ, ಸಾಕು ಕಣೇ. ನಿನ್ನ ಬತ್ತಳಿಕೆಯಲ್ಲಿ ಇನ್ನೂ ಬಾಣವಿದೆ ತಾನೆ?'

'ಗೋವೆ ಪ್ರತ್ಯೇಕವಾಗಿರುತ್ತೇಂದ್ರು, ಈಗ...'

"ಹೌದಪ್ಪ, ನುಡಿದಂತೆ ನಡಿಯೋದಿಲ್ಲಾಂತ ತಾನೇ ನೀನನ್ನೋದು?"

"ಹೌದು ಅದನ್ನೇ...'

'ನುಡಿ ಬೇರೆ, ನಡೆ ಬೇರೆ ನೋಡು. ತಾನು ಹಿಡಿದ ಕೋಳಿಗೆ ಮೂರು ಕಾಲೂಂತ ವಾದ ಮಾಡ್ತಾನೇ ಕೂತ್ರೆ ಸರಿಯಾಗುತ್ಯೆ?"

"ಹೇಳೋಕೆ ಮೊದಲೇ ಸರಿಯಾಗಿ ನೋಡಿಕೊಳ್ಳಬೇಕು, ಮೂರಿದೆಯೋ, ನಾಲ್ಕಿದೆಯೋ? ಅಥವಾ ಎರಡೇನಯೋಂತ."

"ರಾಜಕಾರಣ ಹಾಗಲ್ಲ ನೋಡು. ಕಾಲ ಬಂದ ಹಾಗೆ ಕಾಲು ಬಡೆದಾಡಬೇಕಾಗುತ್ತೆ...''

"ಗೊತ್ತಾಯ್ತು ಬಿಡಿ. ಎಲ್ಲಾ ಡೊಂಬರಾಟ...."

"ಜೀವನವೇ ಡೊಂಬರಾಟವಾಗಿರುವಾಗ ಅದರ ಒಂದಂಶವಾದ ರಾಜಕಾರಣ ಹಾಗೇ ಆಗುವುದರಲ್ಲಿ ತಪ್ಪೇನಿದೆಯೋ?"

"ಏನೇ ಇರ್ಲಿ, ಅದ್ರೂ ನೋಡಿ. ಈ ರೀತಿ ಗೊಂಬೆ ಆಟವಾಡ್ತಾ ಇದ್ರೆ ಒಂದು ದಿನ ತಿಪ್ಪರಲಾಗ ಹಾಕಲೇಬೇಕಾಗುತ್ತೆ...."

"ಆ ಕಾಲ ಬಂದಾಗ ಅದಕ್ಕೆ ತಕ್ಕಂತೆ ತಾಳ ಹಾಕಿದ್ರೆ ಸರಿ...."

"ನೀವು ಈಗ ಮಾಡಿರೋದೇ ಅದನ್ನೇ...."

"ಏನು?"

"ಡಿಲ್ಲಿಯಲ್ಲಿ ಮರಾಠಿಗರಿಗೆ ಆಸೆ ತೋರಿಸಿ ಬೆಂಗಳೂರಲ್ಲಿ ಅವ್ರನ್ನ ನಡು ನೀರಿಗೆ ಕರೆದೊಯ್ದರಿ .."

"ಏನೋಪ್ಪ, ಸದ್ಯ ಏನೂಂತ ಗೊತ್ತಾಗುತ್ತೆ...."

"ನನಗೊಂದು ಸಂದೇಹ...."

"ಏನು?'

"ಅಲ್ಲಾ, ಗೋವಾ ಮಹಾರಾಷ್ಟ್ರಕ್ಕೆ ಸೇರಬೇಕೋ ಮೈಸೂರಿಗೋಂತ ತಾನೇ ಮುಂದೆ ಪ್ರಶ್ನೆ...."

"ಹ್ಞಾಂ. ಹಾಗೇಂತ ಇಟ್ಟುಕೊಳ್ಳಬಹುದು."

"ಅದರೊಂದಿಗೆ ಇನ್ನೆರಡು ಅಯ್ಕೆಗೂ ಅವಕಾಶ ಕಲ್ಪಿಸಬೇಕು."

"ಯಾವುದಕ್ಕೆ?"

'ಚುನಾವಣೆಯಲ್ಲಿ ನಾಲ್ಕು ಪೆಟ್ಟಿಗೆ ಇಡೋದು, ಒಂದು, ಗೋವೆ ಕೇಂದ್ರಾಧೀನವಾಗಿಯೇ ಇರಬೇಕೆಂಬವರಿಗೆ....'

'ಮತ್ತೊಂದು ಕರ್ನಾಟಕಕ್ಕೆ ಸೇರಬೇಕೆಂಬುವವರಿಗೆ, ಬೇರೊಂದು ಮಹಾರಾಷ್ಟ್ರವಾದಿಗಳಿಗೆ, ಉಳಿದೊಂದು....?"

'ಗೋವೆಯನ್ನು ಮತ್ತೆ ಪೋರ್ಚುಗೀಸರಿಗೊಪ್ಪಿಸ ಬೇಕೆನ್ನುವವರಿಗೆ...."

'ಭಾರಿ ಉದ್ದವಾಯ್ತು ನಿನ್ನ ನಾಲಿಗೆ..."

'ಇಲ್ಲ...ಇನ್ನು ಮಾತಾಡೊಲ್ಲ. ಆಯ್ತಲ್ಲಾ...'

'ನೀನು ಯಾರಿಗೂ ಮಂಗ್ಯಾರ್ತೀ ಎತ್ತುತ್ತಿ ಕಣೇ, ಅಬ್ಬಾ, ಹೆಣ್ಣೇ...."

'ಹಣ್ಣು ಉಂಡ ಮೇಲೆ ತಿನ್ನಿ. ಬನ್ನಿ ಬೇಗ, ಗಂಜಿ ಆಗ್ಲೇ ಬಡಿಸಿಟ್ಟಿದೆ....ತಣ್ಣಗಾಗಿ ಹೋಗಿರ ಬಹುದು...'

'ಎಲ್ಲವೂ ಒಮ್ಮೆಗೆ ತಣ್ಣಗಾಗಲಿ...."

'ಆಗ್ಲಿ, ಆಗ್ಲಿ. ಯಾರು ಬೇಡಾಂತಾರೆ?"

'ಯಾರು ಬೇಡಾಂತಂದ್ರೂ ನಾನು ಬೇಡಾಂತನ್ನೋಲ್ಲ.'

'ನೀವ್ಯಾಕೆ ಬೇಡಾಂತೀರಿ? ನೀವು ಕೇಳೋದೂ ಅದನ್ನೇ ತಾನೆ? ಬನ್ನೀಂದ್ನಲ್ಲಾ....'

"ಹ್ಞಾಂ.... ಪರ್ವಾಗಿಲ್ವೆ ನೀನು. ಭಾರಿ ಬುದ್ಧಿವಂತೆ..."

"ಎಷ್ಟಾದ್ರೂ ನಿಮ್ಮಂಥವ್ರ...."

"ಅಬ್ಬಬ್ಬಾ..."

'ಶೂ...ಸಾಕುಮಾಡಿ. ಬನ್ನಿ....'

"ಅಯ್ತಮ್ಮಾ ಆಯ್ತು ..."

— ಗೋರಾ.

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ನವಯುಗ ಪ್ರೆಸ್, ಉಡುಪಿ.

ದ. ಕ. ಜಿಲ್ಲಾ ಟಿ. ಬಿ. ಎಸೋಸಿಯೇಶನ್

ಮಂಗಳೂರಿನ ವೆಟಂಸರಿ ಆಸ್ಪತ್ರೆಯಲ್ಲಿ, ಗುಣಮುಖರಾದ ಕ್ಷಯರೋಗಿಗಳು ತಮ್ಮ ಮುಂದಿನ ಜೀವನ ಸಾಗಿಸಲು ಅನುಕೂಲವಾಗುವಂತೆ 12 ಮಂದಿಗೆ ಕೋಳಿ ಸಾಕಣೆಯ ವಿಷಯದಲ್ಲಿ ಒಂದು ತಿಂಗಳ ತರಬೇತಿ ನೀಡುವರೆ ದ. ಕ. ಜಿಲ್ಲಾ ಟಿ. ಬಿ. ಎಸೋಸಿಯೇಶನ್ ನಿರ್ಧರಿಸಿದೆ. ಅಲ್ಲದೆ, ಮಂಗಳೂರು ಕ್ಷಯ ರೋಗಿಗಳು ಸರಿಯಾದ ಮದ್ದನ್ನು ತೆಗೆದುಕೊಳ್ಳುವಂತೆ ನೋಡಿಕೊಳ್ಳಲು ಪಿಕ್ಟ್ ಪ್ರೈವೆಟ್ ಆಫೀಸರ್, ಮತ್ತು ನಾಲ್ವರು ಸ್ವಯಂಸೇವಕರನ್ನು ನೇಮಿಸಲು ನಿರ್ಧರಿಸಿದೆ. ಸ್ಥಳೀಯ ರಾಮಕೃಷ್ಣ ಮಿಶನ್ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಮದ್ದು ಖರೀದಿಸಲು ರೂ. ೨೦೦ರನ್ನು ಎಸೋಸಿಯೇಶನ್ ಮಂಜೂರು ಮಾಡಿ, ಬೀಡಿ ಕೈಗಾರಿಕೆಗಳಲ್ಲಿ ಕೆಲಸಮಾಡುವ ಕೆಲಸಗಾರರಲ್ಲಿ ಕ್ಷಯ ರೋಗದ ಬೆಳವಣಿಗೆ ಕುರಿತು ಸಮೀಕ್ಷೆ ನಡೆಸಲು ನಿರ್ಧರಿಸಿದೆ ಎಂದು ತಿಳಿದುಬರುತ್ತದೆ.

ಮಂಗಳೂರು ರೋಟರಿ ಸಭೆಯಲ್ಲಿ ಶ್ರೀ ಕರಿಯಪ್ಪನವರು

ಕಳೆದ ತಾ. 23ರಂದು ಮಂಗಳೂರಿನಲ್ಲಿ ಜರಗಿದ ರೋಟರಿ ಕ್ಲಬ್ ಸಭೆಯಲ್ಲಿ, ಭಾರತದ ಕ್ಷಯರೋಗ ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿ. ಎಂ. ಕರಿಯಪ್ಪನವರು ಮಾತನಾಡುತ್ತಾ, ಕ್ಷಯ ರೋಗ ಸಾಕಷ್ಟು ಪ್ರಬಲವಾಗಿರುವ ದಕ್ಷಿಣ ಕನ್ನಡ ಜಿಲ್ಲೆಗೆ ಮಾಸ್ ಎಕ್ಸರೇ ಮೆಶಿನ್ ಒಂದರ ಆವಶ್ಯಕತೆಯಿದೆಯೆಂದು ಹೇಳಿದರು ಮಾತ್ರವಲ್ಲದೆ, ಕ್ಷಯ ರೋಗ ನಿವಾರಣೆಯಲ್ಲಿ ಸ್ವಯಂಸೇವಕ ಸಂಸ್ಥೆಗಳ ಪ್ರಪಂಚದಾದ್ಯಂತ ವಹಿಸುತ್ತಿರುವ ಸೇವೆಯನ್ನು ವಿವರಿಸಿದರು. ನಂತರ ರಾಜಕುಮಾರಿ ಅಮೃತಕೌರ್‌ರವರು ಭಾರತದಲ್ಲಿ ಆಂದೋಲನ ಪುನರುಜ್ಜೀವನ ಹೊಂದುವಂತೆ ಮಾಡಿ ಆಗೋಸ್ತು 15ರಿಂದ ಜನವರಿ 26ರ ವರೆಗೆ ಕ್ಷಯರೋಗ ಮುದ್ರೆಗಳನ್ನು ಮಾರಾಟಮಾಡುವ ಯೋಜನೆ ಕೈಗೊಂಡುದನ್ನು ತಿಳಿಸಿದರು.

ವಿವೇಕಾನಂದ ಕಾಲೇಜಿನ ಉದ್ಘಾಟನೆ

ಪುತ್ತೂರು ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಸ್ಥಾಪಿಸಲ್ಪಟ್ಟ ವಿವೇಕಾನಂದ ಕಾಲೇಜಿನ ಉದ್ಘಾಟನಾ ಸಮಾರಂಭವು ಕಳೆದ ತಾ. 14ರಂದು ಮೈಸೂರು ಯುನಿವರ್ಸಿಟಿಯ ವೈಸ್ ಚಾನ್ಸಲರ್ ಡಾ| ಕೆ. ಎಲ್. ಶ್ರೀಮಾಲಿಯವರಿಂದ ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ನೆರವೇರಿತು.

ಪ್ರಾರಂಭದಲ್ಲಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀ ಪ್ರಭಾಕರರಾಯರು ಸ್ವಾಗತಿಸಿದರು. ಶ್ರೀ ಕೆ. ರಾಮಭಟ್ಟರವರು ಸಂದೇಶಗಳನ್ನೋದಿದರು. ಕಾರ್ಯದರ್ಶಿ ಶ್ರೀ ಬಿ. ರಾಮಮೋಹನರಾಯರು ಕಾಲೇಜ್ ಸ್ಥಾಪನೆಗೆ ಉದಾರವಾಗಿ ಧನಸಹಾಯ ಮಾಡಿದವರ ಹೆಸರುಗಳನ್ನೋದಿದರು. ಕಾಲೇಜಿನ ಗವರ್ನಿಂಗ್ ಕೌನ್ಸಿಲಿನ ಉಪಾಧ್ಯಕ್ಷ ಶ್ರೀ ಕೆ. ಎನ್. ಮಲ್ಯರವರು ಸಂಘದ ವರದಿಯನ್ನೋದಿದರು. ಡಾ| ಶ್ರೀಮಾಲಿಯವರು ಉದ್ಘಾಟಿಸುತ್ತಾ, ವಿವೇಕಾನಂದರ ಹೆಸರಿಗೆ ತಕ್ಕುದಾದ ಸಂಸ್ಥೆ ಇದಾಗಲೆಂದು ಹಾರೈಸಿದರು. ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಭಾಷಣವಾದ ಬಳಿಕ ಅಧ್ಯಕ್ಷ ಭಾಷಣವಾಯಿತು. ಕೊನೆಯಲ್ಲಿ ಪ್ರಿನ್ಸಿಪಾಲ್ ಜಿ. ಕೆ. ಶೆಟ್ಟಿಯವರು ವಂದನಾರ್ಪಣೆಗೈದರು.

ಜನಮತ

ಪಠ್ಯಪುಸ್ತಕಗಳಿಲ್ಲ

ಶಾಲೆಗಳು ಆರಂಭವಾಗಿ ಎರಡು ತಿಂಗಳುಗಳು ಕಳೆಯುತ್ತ ಬಂದರೂ ಇನ್ನೂ ನಿರ್ಧಾರಿತ ಪಠ್ಯಪುಸ್ತಕಗಳು ಮಾರುಕಟ್ಟೆಗೆ ಬಂದಿಲ್ಲ. ಸರಕಾರವು ಸಕಾಲದಲ್ಲಿ ಪುಸ್ತಕಗಳನ್ನು ಪೂರೈಸದ, ಮಂಜೂರಾತಿ ಪಡೆದ ಪುಸ್ತಕಗಳ ಪ್ರಕಾಶಕರ ಮೇಲೆ ಶಿಸ್ತಿನ ಕ್ರಮವನ್ನು ಕೈಕೊಳ್ಳಬೇಕು. ಆಗೋಸ್ತು ತಿಂಗಳ ಮಧ್ಯದಲ್ಲೇ ಪರೀಕ್ಷೆಗಳೂ ನಡೆಯಲಿವೆ. ಚೆನ್ನಾಗಿ ಪಾಠ ನಡೆಯುವ ಸಮಯವೆಂದರೆ ಮಳೆಗಾಲ ಮಾತ್ರ. ಇಂತಹ ಪರಿಸ್ಥಿತಿಯು ಮುಂದುವರಿದರೆ, ಶಿಕ್ಷಣದ ಮಟ್ಟ ಹೇಗೆ ಉತ್ತಮವಾದೀತು? ಮತ್ತೆ ಶಿಕ್ಷಕರನ್ನೇ ಬೊಟ್ಟು ಮಾಡುವ ನುಪ್ರವೃತ್ತಿಗೆ ಯಾಕೆ ಮರೆ ಹೋಗಬೇಕು?

— ಲಕ್ಷ್ಮಣ ನಾಯಕ್.

ಆಹಾರ ಸಮಸ್ಯೆ

ಈಗ ನಮ್ಮ ಮುಂದಿರುವ ಅತಿ ಮುಖ್ಯ ಸಮಸ್ಯೆ ಎಂದರೆ ಆಹಾರ ಸಮಸ್ಯೆಯಾಗಿದೆ. ನಾವು ಈಗ ೨೦ನೆಯ ಶತಮಾನದ ವಿಜ್ಞಾನ ಯುಗದಲ್ಲಿದ್ದೇವೆ. ಹಲವು ವಿಧದಲ್ಲಿ ನಾವು ಪ್ರಗತಿ ಸಾಧಿಸಿದ್ದೇವೆಯೆಂದು ಹೆಮ್ಮೆ ಪಡಬಹುದು. ಆದರೆ ನಾವು ಹಸಿವಿನ ಬಾಧೆಯಿಂದ ಪಾರಾಗಿಲ್ಲ. ಇಂದು ಹಸಿವು ನಮ್ಮ ಮೇಲೆ ಧಾಳಿ ನಡೆಸುತ್ತಾ ಇದೆ. ನಮ್ಮ ಜೀವನದ ಸುಖ ಸಾಧನಗಳು ದಿನದಿಂದ ದಿನಕ್ಕೆ ಅಭಿವೃದ್ಧಿಯಾದರೂ ಇಂದು ಶೇಕಡ ೭೦ ಜನರು ಅರೆ ಹೊಟ್ಟೆಯಿಂದ ಜೀವಿಸುತ್ತಿದ್ದಾರೆ ಎಂದು ಹೇಳಬಹುದು. ಆದುದರಿಂದ ನಮ್ಮ ಆಹಾರ ಸಮಸ್ಯೆ ಪರಿಹಾರವಾಗಬೇಕಾಗಿದೆ. ಜನತೆಗೆ ಯೋಗ್ಯ ಆಹಾರ ಸಿಗಬೇಕಾಗಿದೆ. ಆದುದರಿಂದ ನಮ್ಮ ಆಹಾರ ಮಂತ್ರಿಗಳು ಹೆಚ್ಚಿನ ಆಸಕ್ತಿಯನ್ನು ವಹಿಸಿ ನಮ್ಮ ಆಹಾರ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುವರೇ?

— ಎನ್. ವಿ. ರಮಣ,
ಐವರ್ನಾಡು

(ಮೂರನೇ ಪುಟದಿಂದ)

ಮೂರು ಅರ್ಧವಷ್ಟನ್ನು ಮಾತ್ರ ಉಪಯೋಗಿಸಲು ಸಮರ್ಥವಾಗಿದೆ. ಆದುದರಿಂದ ಉಳಿದಂಶವನ್ನು ಮರಳಿಸುವಂತಹ ದುರ್ದೈವದ ಸನ್ನಿವೇಶ ಒದಗಿ ಬಂದಿದೆ. ಇದಕ್ಕೆ ಕಾರಣವನ್ನು ಮುಂದಿಡುತ್ತ ಖಾಸಗಿರಂಗಗಳು ಉದ್ಯಮದಲ್ಲಿ ಪಾಲುಗೊಳ್ಳಲು ಮುಂದೆ ಬಂದಿಲ್ಲವೆಂದು ಹೇಳಲಾಗಿದೆ. ಅಭಿವೃದ್ಧಿ ಯೋಜನೆಗಳಿಗೆ ಹಣಸಂಪಾದಿಸುವುದೇ ದೊಡ್ಡ ಪ್ರಶ್ನೆಯಾಗಿರುವಾಗ, ದೊರೆತುದನ್ನು ಬಳಸದೆ ಹೋಗುವುದು ಸಂಯೂದೀತೆ? ಇದು ನಮ್ಮ ಅಶಕ್ತತೆಯ ಕುರುಹಲ್ಲವೇ? ಖಾಸಗಿ ರಂಗಗಳು ಮುಂದೆ ಬಾರದಿರುವ ಸಂದರ್ಭದಲ್ಲಿ ಸರಕಾರ ವಲಯವಾದರೂ ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುವುದು ಆವಶ್ಯವಲ್ಲವೇ? ಇಂತಹ ದುಸ್ಥಿತಿಗಳು ಇನ್ನು ಮುಂದಾದರೂ ತಲೆದೋರದಂತೆ ಎಚ್ಚರಿಕೆ ವಹಿಸಬೇಕು; ಇಲ್ಲವಾದರೆ, ನಮ್ಮ ಯೋಗ್ಯತೆಯನ್ನು ನಾವೇ ತೂಕ ಮಾಡಿ ಬೇರೆಯವರ ಮುಂದಿಟ್ಟಂತೆಯಾಗುತ್ತದೆ. ಇದು ಹಣಕ್ಕಾಗಿ ಆರರೊಡ್ಡವಕ್ಕೆ ಕೈಚಾಚುವ ಭಾರತಕ್ಕೆ ಭೂಷಣವೇ ಅಲ್ಲ.

ಎಲ್ಲೆಲ್ಲಿ ಏನೇನು?

ಉಡುಪಿ ನಗರ ಸಭೆಯ ಒತ್ತಾಯ

ತಾ. 22ರಂದು, ಉಡುಪಿ ನಳ್ಳಿನೀರು ಯೋಜನೆಯ ಪರಿಶೀಲನೆ ಹಾಗೂ ಸ್ಥಳಸಂದರ್ಶನಾರ್ಥವಾಗಿ ಆಗಮಿಸಿದ ಶ್ರೀಗಳಾದ ಡಬ್ಲ್ಯು. ಜಿ. ಎಸ್. ಸಲ್ಡಾನಾ, ಎಚ್. ರಾಮಕೃಷ್ಣ, ಕೃಷ್ಣಮೂರ್ತಿ, ಕೆ. ಎಸ್. ನಾಯಕ್, ಶೇಷಗಿರಿರಾವ್ ಸಾಲಿಯಾನ್ ಮತ್ತು ಶ್ರೀ ಸವದತ್ತಿ ಇವರನ್ನು, ಉಡುಪಿ ನಗರಸಭೆಯು ಕೈಕೊಂಡಿರುವ 44 ಲಕ್ಷ ರೂ. ವೆಚ್ಚದ ನೀರು ಸರಬರಾಯಿ ಯೋಜನೆಯನ್ನು ಕ್ಷಿಪ್ರದಲ್ಲಿಯೇ ಒದಗಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.

ಆರಂಭದಲ್ಲಿ ನಗರಸಭಾಪತಿ ಶ್ರೀ ಪಿ. ರಂಗನಾಥ ಶೆಣ್ಯೆಯವರು ಸ್ವಾಗತಿಸಿದರು. ಸುಪರಿಂಟೆಂಡೆಂಟ್ ಇಂಜಿನಿಯರ್ ಶ್ರೀ ಸಲ್ಡಾನರು ಮಳೆಗಾಲ ಮುಗಿದ ಕೂಡಲೇ ಕಾರ್ಯಕ್ಕೆ ತೊಡಗುವುದಾಗಿ ತಿಳಿಸಿದರು ಅಲ್ಲದೆ ಶೀಘ್ರದಲ್ಲಿ ನೆರವೇರಿಸಿಕೊಡುವ ಭರವಸೆಯನ್ನಿತ್ತಿರುವರು. ಈ ಕುರಿತು ಉಳಿದವರು ತಮ್ಮ ಸಲಹೆಗಳನ್ನಿತ್ತ ಬಳಿಕ ನಗರಸಭಾಪತಿಗಳು ಧನ್ಯವಾದ ಸಮರ್ಪಿಸಿದರು.

ಭಜನೆ ಸಪ್ತಾಹ

ಉಡುಪಿ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ ವಾಡಿಕೆಯಂತೆ ಭಜನೆ ಸಪ್ತಾಹ ಮಹೋತ್ಸವವು ಈ ವರ್ಷ 2-8-65ರಿಂದ ತಾ. 9-8-65ರ ತನಕ ನಡೆಯುವುದೆಂದೂ ಸರ್ವರೂ ಬಂದು ಸಹಕರಿಸಿ ಶ್ರೀದೇವರ ಶ್ರೀ ಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಬೇಕೆಂದೂ ಆಡಳ್ತೆ ಮೊಕ್ತೇಸರ್ ಡಾ| ಪಿ. ರಾಘವೇಂದ್ರ ನಾಯ್ಕರು ಅಪೇಕ್ಷಿಸುತ್ತಾರೆ.

ಶಾಲಾಮುಖಂಡ

ಕಡಿಯಾಳಿ ಹಾ. ಪ್ರಾ. ಶಾಲೆಯ ಶಾಲಾಮುಖಂಡ ಸ್ಥಾನಕ್ಕೆ ಮತ್ತು ಮಕ್ಕಳ ಕೂಟದ ಕಾರ್ಯದರ್ಶಿ ಸ್ಥಾನಕ್ಕೆ ಗುಪ್ತ ಮತದಾನ ನಡೆದು ಬಿ. ಸದಾನಂದ ಭಕ್ತನು ಶಾಲಾಮುಖಂಡನಾಗಿಯೂ ಕೆ. ಕೃಷ್ಣ ಶೆಟ್ಟಿಯು ಶಾಲಾಮಕ್ಕಳ ಕೂಟದ ಕಾರ್ಯದರ್ಶಿಯಾಗಿ ಆರಿಸಿಬಂದರು.

ಕಲ್ಲಮುಡ್ಕೂರ್‌ನಲ್ಲಿ ಎಲ್. ಎಫ್. ಆಸ್ಪತ್ರೆ

ಸ್ಥಳೀಯ ರೂರಲ್ ಡಿಸ್ಪೆನ್ಸರಿಯನ್ನು, ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಲಿಯವರು, ಎಲ್. ಎಫ್. ಆಸ್ಪತ್ರೆಯನ್ನಾಗಿ ಬದಲಾಯಿಸಿದ್ದು, ಅದರ ಉದ್ಘಾಟನಾ ಸಮಾರಂಭವು ಕಳೆದ ತಾ. 17ರಂದು, ಶ್ರೀ ಎಸ್. ಡಿ. ಸಾಮ್ರಾಜ್ಯ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ, ಶ್ರೀ ಎನ್. ಮೋಹನದಾಸ ಅಂಥ್ಯಂತಾಯರಿಂದ ನೆರವೇರಿತು. ಶ್ರೀ ಎಂ. ಎಸ್. ಹಡಿವಾಳರು ಸ್ವಾಗತಿಸಿದ ಬಳಿಕ ಶ್ರೀ ಜಯರಾಮ ಭಟ್ಟರು ವರದಿ ವಾಚನ ಮಾಡಿದರು. ಶ್ರೀ ರಾಮಣ್ಣ ಭಟ್ಟರು ತಾಲೂಕು ಬೋರ್ಡಿನ ಈ ಕಾರ್ಯವನ್ನು ಶ್ಲಾಘಿಸಿ ಮಾತನಾಡಿದರು. ಅಧ್ಯಕ್ಷರು ಆಸ್ಪತ್ರೆಯ ಪ್ರಗತಿಯನ್ನು ಹಾರೈಸಿ ಗ್ರಾಮಸ್ಥರು ದ್ಯಾಸ್ಪತ್ರೆಯೊಂದರ ಸ್ಥಾಪನೆಗೆ ಪ್ರಯತ್ನಿಸಬೇಕೆಂದರು. ಶ್ರೀ ಸುಭಾಸ ಚಂದ್ರ ಹಡಿವಾಳರು ವಂದನಾರ್ಪಣೆಗೈದರು. ಕಾರ್ಕಳದ ಡಾ. ಕುಮಾರಿ ಸುಶೀಲರು ಈ ಆಸ್ಪತ್ರೆಯ ವೈದ್ಯಕೀಯಾಧಿಕಾರಿಗಳಾಗಿ ನೇಮಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ಜಿಲ್ಲೆಯಲ್ಲಿ ಪಂಚಾಯತ ಚುನಾವಣೆಗಳು

ಜಿಲ್ಲೆಯ ಪಂಚಾಯತ ಬೋರ್ಡುಗಳ ಚುನಾವಣೆಗಳು ಕೆಳಗಿನ ಕಾರ್ಯಕ್ರಮದಂತೆ ನಡೆಯಲಿರುವವು.

ಕುಂದಾಪುರ ಮತ್ತು ಬಂಟ್ವಾಳ ತಾಲೂಕುಗಳಲ್ಲಿ ತಾ. 2-9-65ರಂದು ರೂಲ್ 7ರ ಪ್ರಕಾರ ಚುನಾವಣಾ ನೋಟೀಸಿನ ಪ್ರಕಟನೆ, ತಾ. 7-9-65ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನ, ತಾ. 10-9-65ರಂದು ನಾಮಪತ್ರಗಳ ಪರಿಶೀಲನೆ, ತಾ. 13-9-65 ನಾಮಪತ್ರಗಳನ್ನು ಹಿಂದೆ ತೆಗೆದುಕೊಳ್ಳಲು ಕೊನೆಯದಿನ, ತಾ. 11-10-65ರಂದು ಮತದಾನದ ದಿನವೆಂದು ತಿಳಿಸಲಾಗಿದೆ.

ಉಡುಪಿ ಮತ್ತು ಪುತ್ತೂರು ತಾಲೂಕುಗಳಲ್ಲಿ ರೂಲ್ 7ರ ಪ್ರಕಾರ ಚುನಾವಣಾ ನೋಟೀಸಿನ ಪ್ರಕಟನೆ 9-9-65, ನಾಮಪತ್ರ ಸಲ್ಲಿಸಲು ಕೊನೆಯದಿನ 14-9-65, ನಾಮಪತ್ರಗಳ ಪರಿಶೀಲನೆ 17-9-65, ನಾಮಪತ್ರಗಳನ್ನು ಹಿಂದೆ ತೆಗೆದುಕೊಳ್ಳುವ ಕೊನೆಯ ದಿನ 20-9-65; ಮತದಾನದ ದಿನ 18-10-65.

ಕಾರ್ಕಳ, ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ರೂಲ್ 7ರ ಪ್ರಕಾರ ಚುನಾವಣಾ ನೋಟಿಸಿನ ಪ್ರಕಟನೆ 16-9-65, ನಾಮಪತ್ರ ಸಲ್ಲಿಸಲು ಕೊನೆಯ ದಿನ 20-9-65, ನಾಮಪತ್ರ ಪರಿಶೀಲನೆ 23-9-65, ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯದಿನ 27-9-65; ಮತದಾನ 25-10-65.

ಹೆಚ್ಚಿನ ವಿವರಗಳನ್ನು ಸಂಬಂಧಪಟ್ಟ ತಹಸಿಲ್ದಾರ ಅಥವಾ ಚುನಾವಣಾ ಅಧಿಕಾರಿಗಳಿಂದ ಪಡೆಯಬಹುದು.

ಉಡುಪಿ ತಾಲೂಕು ಟಿ. ಬಿ. ಎಸೋಸಿಯೇಶನ್

ಡಾ| ಎ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ. 22ರಂದು ಉಡುಪಿ ತಾಲೂಕು ಟಿ. ಬಿ. ಎಸೋಸಿಯೇಶನಿನ ಉದ್ಘಾಟನಾ ಸಮಾರಂಭವು ಭಾರತದ ಕ್ಷಯರೋಗ ಸಮಿತಿಯ ಕಾರ್ಯದರ್ಶಿ ಶ್ರೀ ಬಿ. ಎಂ. ಕಾರ್ಯಪ್ಪನವರಿಂದ ಮಣಿಪಾಲ ಕಸ್ತೂರಬಾ ಮೆಡಿಕಲ್ ಕಾಲೇಜಿನ ಸಭಾ ಭವನದಲ್ಲಿ ನೆರವೇರಿತು.

ಎಸೋಸಿಯೇಶನ್ ಅಧ್ಯಕ್ಷ ಡಾ| ಸಿ. ಎಚ್. ಶಿವರಾಮನ್‌ರವರು ಸ್ವಾಗತಿಸಿದರು. ಕಾರ್ಯದರ್ಶಿ ಡಾ| ಕೆ. ಮೋಹನದಾಸ ಪೈಯವರು ಆರ್ಥಿಕ ನೆರವಿನ ಆವಶ್ಯಕತೆಯನ್ನು ವಿವರಿಸಿ, ಎಸೋಸಿಯೇಶನಿನ ಆಡಳಿತ ಮಂಡಳಿಯ ಸದಸ್ಯರ ಹೆಸರುಗಳನ್ನೋದಿ ಹೇಳಿದರು. ದ. ಕ. ಜಿಲ್ಲಾ ಟಿ. ಬಿ. ಎಸೋಸಿಯೇಶನ್ ಅಧ್ಯಕ್ಷ ಡಾ. ಉಮೇಶ್ ರಾಯರು ಶ್ರೀ ಕಾರ್ಯಪ್ಪನವರ ಪರಿಚಯ ಮಾಡಿಕೊಟ್ಟು ಉಡುಪಿ ತಾಲೂಕು ಎಸೋಸಿಯೇಶನ್ ಸಮರ್ಥಸೇವೆ ಸಲ್ಲಿಸಬಹುದೆಂದು ಹೇಳಿದರು. ಶ್ರೀ ಕಾರ್ಯಪ್ಪನವರು ಅ. ಭಾ. ಟಿ. ಬಿ. ಎಸೋಸಿಯೇಶನ್ ಸಲ್ಲಿಸುತ್ತಿರುವ ಸೇವೆಯನ್ನು ವಿವರಿಸಿದರು. ಅಧ್ಯಕ್ಷರ ಭಾಷಣದ ನಂತರ ಶ್ರೀ ಟಿ. ರಮೇಶ ಪೈಗಳು ಧನ್ಯವಾದ ಸಮರ್ಪಿಸಿದರು.

ವಕೀಲ್ ನಾರಾಯಣ ರೈಗಳ ನಿಧನ

ಮಂಗಳೂರಿನ ಸುಪ್ರಸಿದ್ಧ ವಕೀಲರಲ್ಲೊಬ್ಬರಾದ ಎಡ್ವಕೇಟ್ ಕೆ. ನಾರಾಯಣ ರೈಗಳು (ಕೆದಂಬಾಡಿ, ಪುತ್ತೂರು) ತಾ. 20-7-65 ರಂದು 52ನೇ ವಯಸ್ಸಿನಲ್ಲಿ ಹೃದ್ರೋಗದಿಂದ ನಿಧನಹೊಂದಿದರೆನ್ನಲು ವಿಷಾದಿಸುತ್ತೇವೆ. ದಿವಂಗತರು ಚತುರ ವಕೀಲರಾಗಿದ್ದು ಜಿಲ್ಲೆಯಲ್ಲಿಯೂ ಹೊರ ಜಿಲ್ಲೆಗಳಲ್ಲಿಯೂ ಪ್ರಸಿದ್ಧರಾಗಿ ಜನಮನ್ನಣೆಗಳಿಸಿದ್ದರು. ಆರಂಭದಲ್ಲಿ ಪುತ್ತೂರಲ್ಲಿ ವಕಾಲತನ್ನಾರಂಭಿಸಿದ ಶ್ರೀ ರೈಗಳು ಸುಮಾರು 1950ರಲ್ಲಿ ಮಂಗಳೂರಿಗೆ ಬಂದು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು ಜನಾನುರಾಗಿಗಳಾಗಿದ್ದರು. ಕೆಲವು ವರ್ಷ ಎಡಿಷನಲ್ ಪಬ್ಲಿಕ್ ಪ್ರೊಸಿಕ್ಯೂಟರ್ ಆಗಿಯೂ ಸೇವೆ ಸಲ್ಲಿಸಿದ್ದರು. ದಿವಂಗತರು ಪುತ್ತೂರಲ್ಲಿ ಹರಿಜನ ಹೊಸ್ಟೆಲ್, ರಾಮಕೃಷ್ಣ ವಿದ್ಯಾರ್ಥಿ ಭವನ ಮೊದಲಾದ ಸಂಸ್ಥೆಗಳ ಆಡಳಿತವರ್ಗದ ಉತ್ಸಾಹಿ ಸದಸ್ಯರಾಗಿ ಗಣನೀಯ ಸೇವೆ ಸಲ್ಲಿಸಿದ್ದರು. ಕಂಡುದನ್ನು ಕಂಡಂತೆ ಹೇಳುವ ಸ್ಪಷ್ಟವಾದಿಗಳೂ ನಿರಾಡಂಬರ, ಸರಳ ಜೀವಿಗಳೂ ಆಗಿದ್ದರು. ಸಾಹಿತ್ಯ ಲಲಿತ ಕಲೆಗಳ ಭಕ್ತರಾಗಿ ಕಲಾರಾಧಕರಿಗೆ ಕೈಲಾದ ಪ್ರೋತ್ಸಾಹ ನೀಡುತ್ತಿದ್ದರು. ಅಪಾರ ಬಂಧು ಮಿತ್ರರನ್ನು ಗಳಿಸಿದ್ದ ಡಾ. ರೈಗಳು ಕುಟುಂಬಿಕರೆಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು.

ದಿವಂಗತರು ತಮ್ಮ ಹಿಂದೆ ಪತ್ನಿ, ನಾಲ್ವರು ಗಂಡು ಮತ್ತು ಮೂವರು ಹೆಣ್ಣು ಮಕ್ಕಳನ್ನು ಬಿಟ್ಟು ಅಗಲಿರುವರು.

ಶ್ರೀ ರಾಘವೇಂದ್ರ ರಾಯರ ನಿಧನ

ಉಡುಪಿಯ ಅನಂತೇಶ್ವರ ಶಾಲೆಯಲ್ಲಿ ದಕ್ಷ ಅಧ್ಯಾಪಕರಾಗಿ ನಿವೃತ್ತರಾಗಿದ್ದ ಶ್ರೀ ರಾಘವೇಂದ್ರ ರಾಯರು ಕಳೆದ ತಾ. 22ರಂದು ತಮ್ಮ 85ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಅವರಿಗೆ ಪತ್ನಿ, 4 ಗಂಡು ಮತ್ತು ಒಬ್ಬ ಹೆಣ್ಣು ಮಕ್ಕಳಿರುವರು.

ವಕೀಲ್ ಕುಂಜೂರು ರಾಮಕೃಷ್ಣ ರಾಯರ ನಿಧನ

ಕಳೆದ ತಾ. 21ರಂದು ಉಡುಪಿಯ ಪ್ರಸಿದ್ಧ ವಕೀಲ ಶ್ರೀ ಕುಂಜೂರು ರಾಮಕೃಷ್ಣರಾಯರು ತಮ್ಮ 61ನೇ ವಯಸ್ಸಿನಲ್ಲಿ ನಿಧನರಾದರು. ಇವರಿಗೆ ಪತ್ನಿ, 6 ಗಂಡು ಮತ್ತು 1 ಹೆಣ್ಣು ಮಕ್ಕಳಿದ್ದಾರೆ.

ಶ್ರೀ ಬಾಳ್ಕಟ್ಟ ಮಹಾಬಲ ಹೆಗ್ಡೆಯರ ನಿಧನ

ಉಡುಪಿ ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿ ಸೇವೆಸಲ್ಲಿಸಿ ನಿವೃತ್ತರಾಗಿದ್ದ ಶ್ರೀ ಬಾಳ್ಕಟ್ಟ ಮಹಾಬಲ ಹೆಗ್ಡೆಯವರು ಕಳೆದ ತಾ. 22ರಂದು ತನ್ನ ೬೦ನೇ ವಯಸ್ಸಿನಲ್ಲಿ ನಿಧನರಾದರು. ಅವರಿಗೆ ಪತ್ನಿ, 4 ಗಂಡು ಮತ್ತು 8 ಹೆಣ್ಣು ಮಕ್ಕಳಿರುವರು.

ಶ್ರೀ ಕು. ಶಿ. ಯವರ ಮಾತೃವಿಯೋಗ

ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರ ತಾಯಿ ಶ್ರೀಮತಿ ಕಮಲಮ್ಮನವರು ತಾ. 22ರಂದು ತಮ್ಮ 68ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಅವರಿಗೆ 2 ಹೆಣ್ಣು ಮತ್ತು ಒಬ್ಬರು ಗಂಡು ಮಕ್ಕಳಿದ್ದಾರೆ.

ಚಂದಾದಾರರಲ್ಲಿ ವಿನಂತಿ

ನವಯುಗದ ಚಂದಾ ಅವಧಿ ಮುಗಿದ ನಮ್ಮ ಚಂದಾದಾರ ಬಂಧುಗಳಿಗೆಲ್ಲಾ ಪ್ರತ್ಯಪ್ರತ್ಯೇಕವಾಗಿ ಬರೆದು ತಿಳಿಸಿರುತ್ತೇವೆ. ಅವರೆಲ್ಲರೂ ದಯಮಾಡಿ ತಮ್ಮ ತಮ್ಮ ಚಂದಾ ಹಣವನ್ನು ಆದಷ್ಟು ಬೇಗನೆ ಕಳುಹಿಸಿ ಕೊಡುವಂತೆ ಈ ಮೂಲಕ ಇನ್ನೊಮ್ಮೆ ವಿನಂತಿಸುತ್ತೇವೆ. ಸಕಾಲದಲ್ಲಿ ಚಂದಾ ಹಣ ಬಾರದಿದ್ದರೆ ಚಂದಾ ಅವಧಿ ಮುಗಿದವರಿಗೆಲ್ಲಾ ಮುಂದಿನ ವಾರದ ಪತ್ರಿಕೆಯನ್ನು ವಿ. ಪಿ. ದ್ವಾರಾ ಕಳುಹಿಸುತ್ತೇವೆ. ಅದನ್ನು ದಯಮಾಡಿ ಸ್ವೀಕರಿಸಿ, ಸಹಕರಿಸುವಂತೆ ಬಿನ್ನವಿಸುತ್ತೇವೆ.

ಮೆನೇಜರ್,
ನವಯುಗ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. No. 123/1965

U. K. ಗೋಪಾಲಕೃಷ್ಣ ಆಚಾರ್ಯ —ವಾದಿ.

ಮೆಣ್ಕೆ ಶೆಡ್ತಿ ಕೂಡಾ —ಪ್ರತಿವಾದಿರು.
2. ನಾರಾಯಣ ಶೆಟ್ಟಿ, ಮೆಣ್ಕೆ ಶೆಡ್ತಿರ ಮಗ ಉಡುಪಿ ತಾಲ್ಕು ನಂಬ್ರ 41ನೇ ಶಿರೂರು ಗ್ರಾಮದ ಉಗ್ರಾಣಿ ಬೆಟ್ಟನಲ್ಲಿರುವವ—

ಸದ್ರಿ 2ನೇ ಪ್ರತಿವಾದಿ ಆದ ನಿಮಗೆ ಈ ಮೂಲಕ ತಿಳಿಸುವುದೇನಂದ್ರೆ.

ನೀವು ಮತ್ತು 1ನೇ ಪ್ರತಿವಾದಿಯು ವಾದಿಯವರಿಗೆ ಚಾಲಗೇಣಿ ಹಕ್ಕಿನಿಂದ ಅನುಭವಿಸಿ ಬರುವ ಶಿರೂರು ಗ್ರಾಮದ ಆಸ್ತಿ ಬಾಬ್ತು ವಾದಿಗೆ ನಿಮ್ಮಿಂದ ಕಳೆದ ಕ್ರೋಧಿ ಸಂವತ್ಸರದ ಮೂಘ ಬ. 80ಕ್ಕೆ ಬರತಕ್ಕ ಚಾಲಗೇಣಿ ಗೇಣಿ ಬಡ್ಡಿ ಕೂಡಾ ರೂಪಾಯಿ 435-65ಕ್ಕೆ ವಾದಿಯು ದಾಖಲ್ಲು ಮಾಡಿದ ಸದ್ರಿ ದಾವೆಯು ತಾ. 4-3-1965ಕ್ಕೆ ನಿಮಗೆ ಅಕ್ಟರ ನೋಟೀಸಿಗೆ ಇಟ್ಟದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನ ಮಾಡಲಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

Karkala.
25—7—65.

K. V. Kamath,
Advocate for
Plaintiff.

ಕನ್ನಮ್ಮನ ಭ್ರಮೆ

(ಎರಡನೇ ಪುಟದಿಂದ)

ಳಗೆ ಬಹು ಚಂದವಾಗಿ ಕಂಡು ಬಂದವು. ಅವಳ ನಡಿಗೆಯಲ್ಲಿ ವೈಯಾರವಿತ್ತು. ಅವಳ ಎತ್ತರಕ್ಕೆ ಒಪ್ಪುವ ಕಾಂಡದಂತಹ ಕೊರಳು, ಕಪ್ಪಾಗಿ ಹೊಳೆಯುವ ತಲೆ ಕೂದಲುಗಳ ಗಂಟಿನಿಂದ ಸ್ವಲ್ಪ ಮುಚ್ಚಿಕೊಂಡಿತ್ತು. ಅವಳು ಕಿಟಿಕಿಯನ್ನು ತೆರೆದಾಗ ಗಾಳಿಯು ಒಳಕ್ಕೆ ಬಂದು ಕಿವಿಗಳ ಸಮೀಪದ ತಲೆಜಡೆಯನ್ನು ಮೇಲಕ್ಕೆತ್ತಿತು. ಪ್ರಕಾಶದಿಂದ ಅವಳ ಕೈಗಳು ಒಂದು ಚಂದವಾದ ರೂಪರೇಖೆಯನ್ನುಂಟು ಮಾಡಿದವು. ನಾನು ಜಿಜ್ಞಾಸೆಯನ್ನು ಮರೆತು ಬಿಟ್ಟೆನು. 'ಅವಳು ಸುಂದರಿ. ಅವಳನ್ನು ನೋಡುವುದೇ ದೊಡ್ಡದು'. ಎಂದು ನಾನು ಆಲೋಚಿಸಿದೆನು. ಅವಳು 'ನನ್ನ ಸಂದರ್ಶನವು ....' ಎಂದು ಆಲೋಚಿಸಿದರೆ ನಾನೇಕೆ ಚಿಂತಿಸಬೇಕು? ಒಂದು ಪುಸ್ತಕವನ್ನು ಮೇಜಿನಿಂದ ತೆಗೆದುಕೊಂಡು ಅವಳು ನನ್ನ ಸಮೀಪಕ್ಕೆ ಬಂದಳು. ಎದುರಾಗಿ ಕುಳಿತುಕೊಂಡು ಅವಳು ಹೇಳಿದಳು:—

"ನನಗೆ ಸ್ವಲ್ಪ ಸಹಾಯ ಮಾಡುವೆಯಾ? ನಾನು ಈ ಪದ್ಯವನ್ನು ಓದುತ್ತಿದ್ದೆನು. ಈ ನಾಲ್ಕೈದು ಚರಣಗಳ ಅರ್ಥವು ನನಗೆ ಸರಿಯಾಗಿ ತಿಳಿಯುವುದಿಲ್ಲ. ನೀನು ಬರುವಾಗ ಇದನ್ನು ಯಾರೊಡನೆ ಕೇಳಬೇಕೆಂದು ಯೋಚಿಸುತ್ತಿದ್ದೆನು."

ಓಹೋ! ಅದ್ದರಿಂದಲೇ ಅವಳು ಹೇಳಿದ್ದು. 'ನನಗೆ ಬಹಳ ಸಂತೋಷವಾಯಿತೆಂದು.' ನಾನು ತಲೆಯಲ್ಲಾಡಿಸಿ ನಗಾಡಿದೆನು. ನನ್ನ ಮುಂದೆ ಅವಳು ಹಿಡಿದ ಪುಸ್ತಕದ ಪುಟದ ಕಡೆಗೆ ನೋಡಿದೆನು.

ಅವೆಲ್ಲವೂ ನನಗೆ ಗ್ರೀಕ್ ಮತ್ತು ಲ್ಯಾಟಿನ್‌ಗಳಾಗಿದ್ದವು. ನಾನು ಕಾಲೇಜಿನಲ್ಲಿ ಭೌತ ಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳನ್ನು ಕಲಿಯುತ್ತಿದ್ದೆನು. ಪದ್ಯ ಕಾವ್ಯಗಳಲ್ಲಿ ನನಗೆ ಅಭಿರುಚಿ ಇರಲಿಲ್ಲ. ದಿಲೀಪನಿಗೆ ಸಾಹಿತ್ಯದಲ್ಲಿ ತುಂಬಾ ಅಭಿರುಚಿ ಇತ್ತು. ಆದರೆ ನನಗೇನೂ ಇರಲಿಲ್ಲ. ಆದರೆ ಇದೊಂದು ಕಷ್ಟಪಡುವ ಹುಡುಗಿಯ ವಿಷಯವಾಗಿತ್ತು. ಕನ್ನಮ್ಮನಿಗೆ ಸಹಾಯ ಮಾಡಲು ಏನು ಮಾಡಲೂ ನಾನು ತಯಾರಾಗಿದ್ದೆನು. ಒಂದು ಪದ್ಯಕ್ಕಾಗಿ ಹೋರಾಡಲೂ ಸಿದ್ಧನಾಗಿದ್ದೆನು. ಅದ್ದರಿಂದ ನಾನು "ಅದು ಬಹು ಸುಲಭ, ನೋಡು" ಎಂದು ಹೇಳಿದೆನು.

"ಸರಿ" ಎಂದು ಅವಳು ನಗಾಡಿದಳು. ಆ ನಗೆಯು ಯಾರನ್ನಾದರೂ ಸಾಹಿತ್ಯದಲ್ಲಿ ಒಬ್ಬ ವಿದ್ವಾಂಸನನ್ನಾಗಿ ಮಾಡುವುದಕ್ಕೆ ಸಾಕಾಗುವಷ್ಟು ಶಕ್ತಿಯುಳ್ಳದಾಗಿತ್ತು. "ಆ ಹಾಂ" ಎಂದು ನಾನು ಕಂಠವನ್ನು ಸರಿಪಡಿಸಿಕೊಂಡೆನು. ಅವಳಿಗೆ ತಿಳಿಯದ ಆ ಚರಣಗಳ ಗೂಢವಾದ ಅರ್ಥವನ್ನು ವಿವರಿಸುತ್ತಾ ಆ ಪದ್ಯದಲ್ಲಿ ನನ್ನ ಸರ್ವ ಪ್ರಯತ್ನವನ್ನು ಮಾಡಿದೆನು.

ನನ್ನ ಅರ್ಥ ವಿವರಣೆಯು ತಿಳಿಯುವ ಹಾಗಿತ್ತೆಂದು ಅವಳು ಎಣಿಸಿದಳೋ ಇಲ್ಲವೋ ಎಂಬುದನ್ನು ನನಗೆ ಊಹಿಸಲಾಗಲಿಲ್ಲ. ಆದರೆ ಅವಳು ಅತ್ಯಂತ ಆಸಕ್ತಿಯಿಂದ ಮನಸ್ಸಿಟ್ಟು ಕೇಳಿ, ನನ್ನ ಮಾತುಗಳಿಂದ ಸಂತೋಷಪಟ್ಟವಳಂತೆ ನನಗೆ ಕಂಡಿತು. ಕೊನೆಗೆ ನಾನು ಅವಳನ್ನು ಬೀಳ್ಕೊಂಡಾಗ ಅವಳೊಂದು ಅಪೂರ್ವವಾದ ನಗೆಯನ್ನು ಬೀರಿದಳು. "ನೀನು ಪದ್ಯ ಕಾವ್ಯಗಳಲ್ಲಿ ಬಹು ಅಭಿರುಚಿಯುಳ್ಳವನೆಂದು ತಿಳಿದು ನನಗೆ ಅತಿ ಸಂತೋಷವಾಯಿತು. ನೀನು ಇನ್ನೊಮ್ಮೆ ಬರುವಾಗ ನಾವು ಬಹು ವಿಷಯಗಳ ಕುರಿತು ಮಾತನಾಡಬಹುದು" ಎಂದು ಅವಳು ಹೇಳಿದಳು. ಈ ನಿಗೂಢವಾದ ಆಮಂತ್ರಣದಿಂದ ನನಗೆ ಸಂತೋಷವಾಯಿತು. ಆದರೆ ನಾನು ಅವಳ ಭೇಟಿ ಮಾಡುವ ಎಲ್ಲಾ ಕಾಲಗಳಲ್ಲಿ ಪದ್ಯ ಕಾವ್ಯಗಳ ಕುರಿತು ಚರ್ಚಿಸಲಿಕ್ಕಿರುವುದೆಂದು ತಿಳಿದು ನನಗೆ ಭಯವೂ ಉಂಟಾಯಿತು. ಸಾಹಿತ್ಯದಲ್ಲಿ ನನಗಿರುವ ಮಹತ್ತರವಾದ ಅಜ್ಞಾನವನ್ನು ಅವಳು ಕೂಡಲೇ ಕಂಡುಹಿಡಿಯುವಳು. ನಾನು ಸಂಪೂರ್ಣ ಸೋತು ಹೋಗುವೆನೆಂದು ಯೋಚಿಸಿದೆನು. ಈ ವಿಚಿತ್ರ ಪರಿಸ್ಥಿತಿಯಿಂದ ವಿವೇಚನೆ ಹೊಂದುವ ಏನಾದರೊಂದು ಉಪಾಯವು ಒದಗಿ ಬಾರದಿದ್ದರೆ ನಾನು ಅವಳಲ್ಲಿಗೆ ಹೋಗುವುದನ್ನು ನಿಲ್ಲಿಸಿ ಸ್ವಾಭಿಮಾನವನ್ನು ಉಳಿಸಿಕೊಳ್ಳುವುದೇ ಉತ್ತಮವೆಂದು ಕಂಡು ಬಂತು. ಆದರೆ ಒಂದು ಉಪಾಯವು ನನಗೆ ಹೊಳೆದೋರಿತು.

ನಾನು ಆಕಸ್ಮಾತ್ತಾಗಿ ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿದುದನ್ನು ನೋಡಿ ದಿಲೀಪನಿಗೆ ಆಶ್ಚರ್ಯವಾಯಿತು. ಹಾಗಿದ್ದರೂ ನನ್ನ ಆ ಆಸಕ್ತಿಯನ್ನು ಹೆಚ್ಚಿಸಿ ಪ್ರೋತ್ಸಾಹಿಸಲು ಅವನು ಸಂತೋಷಪಟ್ಟನು. ನಾನು ಅವನಿಂದ ಲೇಖಕರ ಮತ್ತು ಕವಿಗಳ ವಿಷಯದಲ್ಲಿ ಕೊಸ ಹೊಸ ಸಂಗತಿಗಳನ್ನೂ ಇನ್ನೂ ಅನೇಕ ವಿಷಯಗಳನ್ನೂ ತಿಳಿದುಕೊಂಡೆನು. ಕನ್ನಮ್ಮನೊಡನೆ ನನ್ನ ಸಾಹಿತ್ಯಜ್ಞಾನ ಸಂಗ್ರಹವು ಹೆಚ್ಚಾಗಿ ಬೆಳೆಯಿತು. ನಾನು ಆಗಾಗ್ಗೆ ಅವಳ ಭೇಟಿ ಮಾಡುತ್ತಿದ್ದೆವು. ಅವಳು ನನ್ನನ್ನು ಆದರದಿಂದ ಬರಮಾಡಿಕೊಳ್ಳತೊಡಗಿದಳು. ದಿಲೀಪನನ್ನು ಇದರಿಂದ ದೂರವಿರಿಸುವುದಕ್ಕೆ ಬಹು ಸಮಯ ಸಾಧ್ಯವಾಗಲಿಲ್ಲ. ಅದ್ದರಿಂದ ಸಂದರ್ಭವನ್ನು ಸಾರಿ ಅವನನ್ನೂ ಸಂಗಡ ಕರೆದುಕೊಂಡು ಹೋಗತೊಡಗಿದೆನು. ದಿಲೀಪನು ಬಂದ ಸಮಯದಲ್ಲೆಲ್ಲಾ ಕನ್ನಮ್ಮನ ಮುಖವು ಒಂದು ವಿಶೇಷ ಕಾಂತಿಯಿಂದ ಹೊಳೆಯುತ್ತಿತ್ತು. "ನೀನು ಹೆಚ್ಚಾಗಿ ಬರಬೇಕು" ಎಂದು ಅವಳು ಅವನಿಗೆ ಹೇಳಿದಳು. ಅವಳ ಧ್ವನಿಯಲ್ಲಿ ವಿಶೇಷವಾದ ಆತುರಭಾವವಿತ್ತು. ಆದರೆ ದಿಲೀಪನು ನನ್ನ ಸಂಗಡ ಬರಲು ತಪ್ಪಿಸುತ್ತಿದ್ದನು. "ಬೇಜಾರ ಮಾಡಬೇಡ, ನನಗೆ ಲೆಬೊರೇಟರಿಯಲ್ಲಿ ಸ್ವಲ್ಪ ಕೆಲಸ ಮಾಡಲಿಕ್ಕಿದೆ. ನೀನೊಬ್ಬನೇ ಹೋಗು" ಎಂದು ಅವನು ಹೇಳುತ್ತಿದ್ದನು. ಬಹುಶಃ ನಾನು ಕನ್ನಮ್ಮನನ್ನು ಮದುವೆಯಾಗಲು ಬಯಸುತ್ತೇನೆಂದು ಅವನು ಊಹಿಸಿದ್ದಿರಬೇಕು.

ನಾವು ವೈಶಿಷ್ಟ್ಯಪೂರ್ಣವಾಗಿ ಬಿ. ಎಸ್‌ಸಿ. ಡಿಗ್ರಿಯನ್ನು ಪಡೆದು ಆ ಕಾಲೇಜಿನಲ್ಲಿ ಪೋಸ್ಟ್ ಗ್ರ್ಯಾಜುವೇಟ್ ರಿಸರ್ಚ್ ಕಾರ್ಯಕ್ಕೆ ತೊಡಗಿದೆವು. ಆದರೆ ಮೊದಲನೆ ಟರ್ಮು ಇನ್ನೂ ಪೂರ್ಣ ಮುಗಿದಿರಲಿಲ್ಲ ಅಷ್ಟರಲ್ಲಿ ಎರಡನೆ ಜಾಗತಿಕ ಯುದ್ಧವು ಸ್ಫೋಟವಾಗೊಂಡಿತು. ನಮ್ಮಂತಹ ಜನರ ಅವಶ್ಯಕತೆಯುಂಟಾಯಿತು. ಸೈನಿಕ ಉದ್ಯೋಗವು ನಮ್ಮಿಬ್ಬರನ್ನೂ ಮರುಳುಗೊಳಿಸಿತು. ನಾವು ಸೈನ್ಯಕ್ಕೆ ಸೇರಲು ನಿರ್ಣಯ ಮಾಡಿದೆವು. ಕನ್ನಮ್ಮನಿಗೆ ಇದು ಇಷ್ಟವಿರಲಿಲ್ಲ. "ನಾವು ಅವಳನ್ನು ಬಿಟ್ಟು ಬಹು ದೂರ ಹೋಗುವೆವು. ಅಲ್ಲಿ ನಮ್ಮ ಪ್ರಾಣಗಳು ಯಾವಾಗಲೂ ಅಪಾಯಕ್ಕೊಳಗಾಗಿರುವವು." ಎಂದು ಅವಳು ಆಲೋಚಿಸಿ ಅದಕ್ಕೆ ಅಸಮಾಧಾನಪಟ್ಟಳು. ಆದರೆ ನಾವು ಸಂಪೂರ್ಣ ನಿರ್ಣಯಿಸಿದ್ದೇವೆಯೆಂದು ಅವಳಿಗೆ ತಿಳಿಯಿತು. ಅದ್ದರಿಂದ ಅವಳು ಸಂತೋಷದಿಂದ ನಮ್ಮನ್ನು ಕಳುಹಿಸಿಕೊಟ್ಟಳು.

ಕಾರ್ಯಪರವಾದ ಉದ್ಯೋಗವು ನನ್ನನ್ನು ದಿಲೀಪನಿಂದ ಬೇರ್ಪಡಿಸಿತು. ನಾವಿಬ್ಬರೂ ಮನೆಗೆ ಬಂದಾಗ ಕನ್ನಮ್ಮನನ್ನು ಕಾಣುತ್ತಿದೆವು. ಆದರೆ ನಾವು ಬೇರೆ ಬೇರೆಯಾಗಿಯೇ ಕಾಣುತ್ತಿದ್ದೆವು. ನಮ್ಮ ರಜಾ ದಿನಗಳು ಎಂದೂ ಒಟ್ಟಿಗೆ ಕೂಡಿ ಬರುತ್ತಿರಲಿಲ್ಲ. ನಾನು ಕನ್ನಮ್ಮನ ಮೇಲೆ ಅತಿಯಾಗಿ ಆಸಕ್ತಿವಹಿಸಿದೆನು. ಅವಳನ್ನು ಬಿಟ್ಟಿರುವುದು ನನಗೆ ಬಹು ಕಷ್ಟವೆನಿಸಿತು. ಯುದ್ಧವು ಮುಂದೆ ಮುಂದೆ ಹೋಯಿತು. ನಮ್ಮನ್ನು ಯುದ್ಧ ಮಾಡಲಿಕ್ಕೆ ಬೇಗನೆ ಫ್ರಾನ್ಸಿಗೆ ಕಳುಹಿಸುತ್ತಾರೆಂದು ನನಗೆ ತಿಳಿದು ಬಂತು. ಭಾರತವನ್ನು ಬಿಟ್ಟು ಹೋಗುವ ಮೊದಲು ನನಗೆ ಸ್ವಲ್ಪಕಾಲ ರಜೆ ಸಿಕ್ಕಿದುದಕ್ಕಾಗಿ ನಾನು ದೇವರನ್ನು ವಂದಿಸಿದೆನು. ಮನೆಗೆ ಹೋಗಿ ಕನ್ನಮ್ಮನನ್ನು ನೋಡಿದೆನು. ನಮಗೆ ಬೇಗನೇ ಮದುವೆಯಾಗಬೇಕೆಂದು ನಾನು ಅಪೇಕ್ಷಿಸಲಿಲ್ಲ. ಆದರೆ ಅವಳು ನನ್ನಲ್ಲಿ ಅನುರಾಗವುಳ್ಳವಳಾಗಿದ್ದಾಳೆ ಎಂಬುದನ್ನು ನಿಶ್ಚಯವಾಗಿ ತಿಳಿದು ಕೊಳ್ಳಲು ಬಯಸಿದ್ದೆನು. ಅವಳು ನನ್ನ ಕುರಿತು ಯೋಚಿಸುತ್ತಾಳೆ ಮತ್ತು ನನ್ನನ್ನು ಕಾದಿರುತ್ತಾಳೆ ಎಂಬುದನ್ನು ತಿಳಿದರೆ, ನಾನು ಮೃತ್ಯುವನ್ನೂ ಧೈರ್ಯದಿಂದ ಎದುರಿಸಬಲ್ಲೆನೆಂದು ಆಲೋಚಿಸಿದೆನು.

ನಮ್ಮ ಮಾತುಗಳು ಸಗಮವಾಗಿ ಸಾಗಲಿಲ್ಲ. "ನಾನಿಲ್ಲದಿರುವಾಗ ನಿನಗೆ ಬೇಜಾರವಾಗುವುದೇ?" ಎಂದು ನಾನು ಅವಳನ್ನು ಕೇಳುತ್ತಾ ಇದ್ದೆನು. ಅವಳು ತಲೆಯಲ್ಲಾಡಿಸುತ್ತಾ ಸುಮ್ಮನೆ ನಗಾಡುತ್ತಾ ಮೆಲ್ಲಗೆ ಹೇಳುತ್ತಿದ್ದಳು:— "ಹೌದ, ನನಗೆ ಬೇಜಾರವಾಗುವುದು. ಆದರೆ ನಿನ್ನ ವಿಷಯದಲ್ಲಿ ನೀನು ಜಾಗ್ರತೆ ತೆಗೆದುಕೊಳ್ಳಬೇಕು." ಮುಖ್ಯ ವಿಷಯವನ್ನು ಬಿಟ್ಟು ಬೇರೆಯೇ ಎಲ್ಲಾ ಮಾತಾಡಿ ನನಗೆ ಸಾಕಾಯಿತು. 'ಕನ್ನಮ್ಮಾ!' ಎಂದು ಮೆಲ್ಲಗೆ ಹೇಳಿ ಅವಳ ಕೈಯನ್ನು ಹಿಡಿದೆನು.

ಅವಳು ಆಶ್ಚರ್ಯದಿಂದ ನನ್ನನ್ನು ನೋಡಿ ಕೈಯನ್ನು ಹಿಂದೆ ಎಳೆದುಕೊಂಡಳು.

ನಾನು ಕೇಳಿದೆನು.— 'ಕನ್ನಮ್ಮಾ, ನಿನ್ನ ಮೇಲೆ ನನಗೆ ಅನುರಾಗವಿದೆಯೆಂದು ನೀನು ತಿಳಿದಿಲ್ಲವೇ?'

ನನ್ನ ಮಾತುಗಳಿಂದ ಆಘಾತವಾದಂತೆ ಅವಳು ಮೌನವಾದಳು.

ನಾನು ಅಸ್ಪಷ್ಟವಾಗಿ ಹೇಳಿದೆನು:— "ನೀನು ನನ್ನ ಕುರಿತು ಯೋಚಿಸುತ್ತೀ, ನಾನು ತಿರುಗಿ ಬಂದವೇಳೆ ನೀನು ನನ್ನವಳಾಗುವಿ, ಎಂದು ತಿಳಿದರೆ ಅದು ನನಗೆ ಬಹಳ ಸಮಾಧಾನಕರವಾಗುವುದು."

ಅವಳು ಕಣ್ಣುಗಳನ್ನು ತಿರುಗಿಸಿದಳು. ಅವಳ ಕಣ್ಣೀರನ್ನು ನಾನು ನೋಡಿದೆನು.

ನಾನು ಕೇಳಿದೆನು:— "ನೀನೇಕೆ ಏನೂ ಹೇಳುವುದಿಲ್ಲ? ಬೇರೆಯಾರಾದರೂ ನಿನ್ನನ್ನು ಪ್ರೀತಿಸುತ್ತಾರೆಯೋ?"

ಅವಳು ಅಳುವುದಕ್ಕೆ ತೊಡಗಿದಳು

"ನೀನು ಬೇರೆಯಾರನ್ನಾದರೂ ಪ್ರೀತಿಸುವೆಯಾ?"

ಅವಳು ತಲೆಯಲ್ಲಾಡಿಸಿದಳು.

'ಯಾರದು? ನನಗೇನೂ ಚಿಂತೆಯಿಲ್ಲ ಹೇಳು, ಯಾರು?"

ಅವಳು ಅಳುತ್ತಾ ನನಗೆ ಹೇಳಿದಳು. "ನಿನ್ನ ಸಹೋದರ, ದಿಲೀಪ." ಅವಳು ಹೇಳುತ್ತಿದ್ದಾಗ ಅವಳ ತುಟಿಗಳು ನಡುಗುತ್ತಿದ್ದವು. —ಮತ್ತು ಹೇಳಿದಳು:— "ಅವನಿಗೆ ಅದು ಗೊತ್ತಿಲ್ಲ ನಾನು ಹೇಳಲಿಲ್ಲ. ಅವನು ನನ್ನನ್ನು ಪ್ರೀತಿಸುತ್ತಾನೋ ಎಂಬುದೂ ನನಗೆ ತಿಳಿದಿಲ್ಲ. ಆದರೆ ನಾನು ಅವನನ್ನು ಅತಿಯಾಗಿ ಪ್ರೀತಿಸುತ್ತೇನೆ.'

ಅದ್ದರಿಂದ ಅದು ಅಲ್ಲಿಗೆ ಮುಗಿಯಿತು. ನಾನು ಅವಳನ್ನು ಪ್ರೀತಿಸಿದೆನು. ಆದರೆ ಸೋತು ಹೋದೆನು. ದಿಲೀಪನು 'ನಾನು ಅವಳಿಗೆ ಒಲಿದಿದ್ದೇನೆಂದು' ತಿಳಿದು ಅವಳನ್ನು ಬಿಟ್ಟಿದ್ದನು. ಆದರೆ ಅವಳು ಅವನ ಮೇಲೆ ಪ್ರೇಮವಿಟ್ಟಳು. ಇದೆಂತಹ ಅಪೂರ್ವ ಪ್ರೇಮ!

(ಮುಂದಿನವಾರ ಎರಡನೆ ಭಾಗ).

ಸ್ವಾತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಸಹಕರಿಸಿರಿ.

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಸಾಮಾನ್ಯ ರೋಗಗಳು

ಡಾ| ಕೆ. ಎಲ್. ಪತಾಳ, ಎಂ ಬಿ ಬಿ ಎಸ್.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA 29—7—1965

Registered with the Registrar
of News Papers for India
under No. K. N. 3646/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೯-೭-೬೫ರಿಂದ ೪-೮-೬೫ರ ವರೆಗೆ

೧. ಮೇಷ

ಧನಸ್ಥ ಬೃಹಸ್ಪತಿ ಉಪಚಯಗತರಾದ ಸನ್ಮಂಗಾರಕರು ನಿಮ್ಮ ಸಕಲ ಮನೋರಥಗಳನ್ನು ಈಡೇರಿಸಲು ಶಕ್ತರಿರುವರು. ಯಾವೊಂದು ವಿಭಾಗದಲ್ಲೂ ನಿಮಗೆ ಕುಂದುಕೊರತೆಗಳಿರಲಾರವು. ಇಷ್ಟಿದ್ದರೂ ನಿಮ್ಮನ್ನು ಮನೋರೋಗವು ವಿಶೇಷವಾಗಿ ಪೀಡಿಸಲಿದೆ. ಕಾರಣ ನಿಮ್ಮ ಗೃಹಕೃತ್ಯವಲ್ಲಿನ ಅವ್ಯವಸ್ಥೆಯೇ. ಸೋದರ ಹೆಂಡತಿ ಮಕ್ಕಳಾದಿಯಾಗಿ ಎಲ್ಲರೂ ನಿಮ್ಮನ್ನು ವಕ್ರದೃಷ್ಟಿಯಿಂದ ಕಾಣಲಿರುವರು. ವಾರಾಂತ್ಯದ 4 ದಿನಗಳು ಉತ್ತಮವಾಗಿವೆ.

೨. ವೃಷಭ

ದೈವವು ಅಷ್ಟೊಂದು ಅನುಕೂಲವಾಗಿಲ್ಲವಾದರೂ ಕರ್ತವ್ಯಶಾಲಿಗಳಾದ ನೀವು ಶ್ರಮವಹಿಸಿ ದುಡಿಯುವಿರಿ. ಅತಏವ ನಿಮ್ಮ ದೈನಂದಿನದ ವ್ಯವಹಾರಗಳಿಗೆ ಸಾಲುವಷ್ಟು ಫಲವು ಲಭಿಸಲಿದೆ. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗಿದ್ದರೂ ಪ್ರಿಯ ಜನರ ವಿರಹವಿಯೋಗದಿಂದಾಗಿ ಮನಸ್ಸಿಗೆ ಸ್ವಾಸ್ಥ್ಯವಿರದು. ಕಫದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆಯಿದೆ, ಆದರೂ ವ್ಯವಹಾರಚತುರರಾದ ನಿಮಗೆ ತಾ. 29, 3, 4 ಈ ದಿನಗಳಲ್ಲಿ ಆಕಸ್ಮಿಕ ಧನಲಾಭ, ಕಾರ್ಯಸಿದ್ಧಿಯಾಗುವವು.

೩. ಮಿಥುನ

ದುರ್ವಿಧಿಯೇ ನಿಮ್ಮನ್ನಿಂದು ಮೂರ್ತಿವತ್ತಾಗಿ ಬಂದು ಕಾಡುತಿರುವುದೆಂದರೂ ತಪ್ಪಾಗದು. ದೇಹಾಲಸ್ಯ ಮನೋದೌರ್ಬಲ್ಯಗಳಿಂದ ಕೂಡಿದ ನೀವು ಹೆಚ್ಚಿನ ಕಾಲವನ್ನು ವೃಥಾ ಕಳೆಯುವಿರಿ. ವಿನಾಕಾರಣ ಜನತೆಯೊಳು ಕಲಹ ನಿಷ್ಠುರಗಳನ್ನು ಕಟ್ಟಿಕೊಳ್ಳುವಿರಿ. ಅಧಿಕಾರಿ ವರ್ಗದವರ ಕಾಟಕ್ಕೆ ಸಿಲುಕಿದ ನಿಮಗೆ ಮನೆಯಲ್ಲೂ ಸುಖವಿರದು. ಭೂಸಂಬಂಧ ವ್ಯವಹಾರದಲ್ಲಿ ಹೆಚ್ಚಿನ ನಷ್ಟಕ್ಕೆ ಗುರಿಯಾಗಲಿರುವಿರಿ. ತಾ. 29, 31 ಈ ದಿನಗಳು ಇದ್ದುದರಲ್ಲಿ ಅನುಕೂಲವಾಗಿವೆ.

೪ ಕರ್ಕಟ

ನಾಳೆ ಮಾಡಬೇಕಾದ ಕಾರ್ಯಗಳನ್ನು ಇಂದೇ ಮಾಡಲು ಯತ್ನಿಸಿರಿ, ಉದಾಸೀನರಾದಲ್ಲಿ ಕಾರ್ಯವು ವಿಫಲವಾದೀತು. ಸುತ್ತಮುತ್ತಲಿಂದಲೂ ವಿಘ್ನವಿಡ್ಡೂರಗಳು ಬರುವ ಸಂಭವವಿದೆ. ಆತ್ಮೀಯರೇ ವಿರೋಧಿಗಳಾದಾರು. ಸಂಸಾರವು ನೆಮ್ಮದಿಯಿಂದಿರುವದಾದರೂ ವಾತಪಿತ್ತ ಸಂಬಂಧವಾದ ಕಾಹಿಲೆಗೆ ನೀವಿಂದು ಸಿಲುಕುವ ಸಂಭವವಿದೆ. ಪ್ರವಾಸದಲ್ಲಿ ಕಷ್ಟನಷ್ಟಗಳು ಸಂಭವಿಸುವಂತಿವೆ. ತಾ 29, 1, 2 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿರುವವು.

೫. ಸಿಂಹ

ಸಾಧಿಸಿದರೆ ಸಬಳ ನುಂಗಬಹುದೆಂಬ ಗಾದೆಯಂತೆ ಪ್ರಯತ್ನಪಟ್ಟರೆ ನಿಮಗಾವ ಕಾರ್ಯವೂ ಅಶಕ್ಯವೆನಿಸದು. ಜನತೆಯ ನೆರವೂ ನಿಮಗಿಂದು ಸಾಕಷ್ಟು ಲಭಿಸಲಿದೆ. ನಿಮ್ಮ ಆರ್ಥಿಕ ಬಿಕ್ಕಟ್ಟು ದೂರವಾಗಿ ಕೈಯಲ್ಲಿ ಸಾಕಷ್ಟು ಹಣವು ಸಂಗ್ರಹವಾಗಲಿದೆ. ದೇಹಾಲಸ್ಯ ಗೃಹತಾಪತ್ರಯಗಳು ಆಗಾಗ ಕಾಣಿಸಿಕೊಂಡರೂ ನಿಮ್ಮ ಮನೋನೆಮ್ಮದಿಗೆ ಭಂಗ ತರಲಾರವು. ತಾ. 30, 31, 3, 4 ಈ ದಿನಗಳಲ್ಲಿ ನಿಮ್ಮ ಶ್ರಮವು ಸಾರ್ಥಕವಾಗಲಿದೆ.

೬. ಕನ್ಯಾ

ದೇಹದಾರೋಗ್ಯವೊಂದನ್ನುಳಿದು ಇತರ ಯಾವ ಭಾಗದಲ್ಲೂ ನಿಮಗೆ ಕೊರತೆಯಿರದು. ಉದ್ಯಮಶೀಲರಾದ ನಿಮಗೆ ಯಾವ ಕಾರ್ಯದಲ್ಲೂ ನಷ್ಟವಾಗಲೀ ಸೋಲಾಗಲೀ ಉಂಟಾಗಲಾರದು. ಬಂಧುಮಿತ್ರರ ಸಹಕಾರದಿಂದಾಗಿ ಎಂತಹ ಪ್ರಬಲ ವಿರೋಧಿಯನ್ನೂ ನೀವಿಂದು ಎದುರಿಸಲು ಶಕ್ತರಾಗಿರುವಿರಿ. ಪ್ರವಾಸವು ಅನಿಷ್ಟದಾಯಿಯಾಗಿ ಪರಿಣಮಿಸೀತು. ಕೆಲವೊಂದು ವಿಷಯಗಳಲ್ಲಿ ಸತಿಪತಿಗಳಲ್ಲಿ ವಿರಸವುಂಟಾಗಲಿದೆ. ತಾ. 29, 1, 2 ಈ ದಿನಗಳು ಇದ್ದುದರಲ್ಲುತ್ತಮ.

೭. ತುಲಾ

ಶುಕ್ಲಪಕ್ಷದ ಚಂದ್ರಮನಂತೆ ನಿಮ್ಮ ಅದೃಷ್ಟವಿಂದು ದಿನದಿಂದ ದಿನಕ್ಕೆ ವೃದ್ಧಿಹೊಂದುತ್ತಿದೆ. ಸೂರ್ಯರಶ್ಮಿಯಿಂದ ಹಿಮರಾಶಿಯಂತೆ ನಿಮ್ಮ ಚಿಂತಾದುಃಖಗಳು ಕ್ರಮವಾಗಿ ನಶಿಸುತ್ತಿವೆ. ನಿಮ್ಮ ನಿರೀಕ್ಷೆಯಂತೆ ಹೆಚ್ಚಿನ ಕಾರ್ಯಗಳು ಸಿದ್ಧಿಸುವವು. ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾಗಿ ಸುಖ ನೆಮ್ಮದಿಯಿಂದ ಕಾಲಕಳೆವಿರಿ. ಮಕ್ಕಳ ಆರೋಗ್ಯದತ್ತ ನಿಗಾ ಇರಲಿ. ತಾ. 29, 30, 31, 3, 4 ಈ ದಿನಗಳಲ್ಲಿ ರಾಜಕೀಯೇತರ ಚಟುವಟಿಕೆಗಳಲ್ಲಿ ಯಶಸ್ವಿಗಳಾಗುವಿರಿ.

೮. ವೃಶ್ಚಿಕ

ಮೃಗಮರೀಚಿಕೆಯನ್ನು ಬೆಂಬಲಿಸಿದಂತಾಗಲಿದೆ ನಿಮ್ಮ ಪರಿಸ್ಥಿತಿಯಿಂದು. ಆಪಾತತಃ ತೋರುವಿಕೆಗೆ ನಿಮಗೆಲ್ಲವೂ ಅನುಕೂಲವಾಗಿ ಕಂಡರೂ "ದೂರದ ಬೆಟ್ಟ ನುಣ್ಣಗೆ" ಎಂಬ ಗಾದೆಯಂತೆ ಸಮೀಪಕ್ಕೆ ಬಂದು ನೋಡುವಾಗ ಎಲ್ಲವೂ ಪ್ರತಿಕೂಲವಾಗಿ ಪರಿಣಮಿಸೀತು. ಆರ್ಥಿಕ ವಿಷಯದಲ್ಲಿ ಕನ್ನಡಿಯೊಳಗಿನ ಗಂಟಿನಂತಾಗುವುದು. ಹೆಚ್ಚಿನ ಕಾರ್ಯಗಳನ್ನು ನೀವು ಅರ್ಧಮರ್ಧ ಮಾಡಿಬಿಡುವಿರಿ. ತೊಡಕು ತೊಂದರೆಗಳು ಸಮೀಪಿಸಿ ಬರುತ್ತಿವೆ. ಬಲುಜಾಗರೂಕತೆಯಿಂದ ವರ್ತಿಸಿರಿ. ತಾ. 30ರಿಂದ 2ರ ವರೆಗಿನ ದಿನಗಳು ಹೆಚ್ಚಿನ ಹಾನಿಕರಗಳಲ್ಲವು.

೯. ಧನು

"ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ" ಎಂಬ ಗಾದೆಯಂತೆ ಉದ್ಯೋಗಶೀಲನಿಗೆ ಲಕ್ಷ್ಮಿಯೂ ಜನತೆಯೂ ತಾವಾಗಿ ಬಂದು ನೆರವಾಗುವರು. ಅಂತೆಯೇ ನೀವಿಂದು ಬೃಹದ್ಯೋಜನೆಗಳನ್ನು ಮೆಲುಕು ಹಾಕುತ್ತ ಕುಳಿತರಾಗದು. ಕಾರ್ಯರಂಗದಲ್ಲಿ ಮುನ್ನುಗ್ಗಿರಿ. ನಿಮ್ಮ ಅಭೀಷ್ಟದಂತೆ ಫಲಸಿದ್ಧಿಯು ಆಗೇ ತೀರುವದು ಪುಣ್ಯಕಾಲವೆಲ್ಲಾ ಸಂಕಲ್ಪದಲ್ಲೇ ಹೋಯಿತೆಂಬ ಗಾದೆಯಂತೆ ವ್ಯರ್ಥ ಸಮಯ ಕಳೆಯದಿರಿ. ವಾರಾಂತ್ಯದ 4 ದಿನಗಳು ಅತೀವ ಅನುಕೂಲವಾಗಿವೆ.

೧೦. ಮಕರ

ನಿಮ್ಮ ಕಾರ್ಯೋತ್ಸಾಹವು ದಿನದಿಂದ ದಿನಕ್ಕೆ ಕುಗ್ಗುತ್ತಿರುವುದು. ಜನತೆಯೂ ಕೂಡ ನಿಮ್ಮ ಮೇಲೆ ಹಿಂದಿನಂತೆ ಅಭಿಮಾನವಿಡಲಾರದು. ಆದರೂ ಕರ್ತವ್ಯ ದೃಷ್ಟಿಯಿಂದ ನೀವಿಂದು ದುಡಿಯಿರಿ. ನಿಮ್ಮ ಶ್ರಮವೆಂದೂ ವಿಫಲವಾಗದು. ದಿನದ ನಿರ್ವಹಣೆಗಾಗಿ ಪರರ ಮುಖವನ್ನು ನೋಡುವ ಪ್ರಸಂಗ ನಿಮಗೆ ಉಂಟಾಗಲಾರದು. ಎಷ್ಟೊಂದು ಯತ್ನಿಸಿದರೂ ಸಕಾಲದಲ್ಲಿ ನಿಮಗೆ ಊಟೋಪಹಾರಗಳು ದೊರಕಲಾರವು. ಶತ್ರುಜನರ ಕಾಟಕ್ಕೆ ಸಿಲುಕಿದ ನಿಮಗೆ ತಾ 29, 3, 4 ಈ ದಿನಗಳು ಸುಖ ನೆಮ್ಮದಿಯಿಂದ ಕಳೆಯಲಿವೆ.

೧೧. ಕುಂಭ

ನಾನಾತೆರನಾದ ತೊಂದರೆ ತಾಪತ್ರಯಗಳನ್ನು ನೀವಿಂದು ಎದುರಿಸಬೇಕಾಗಿ ಬಂದಿದೆ. ಹೆರವರ ಮಾತಂತಿರಲಿ ನಿಮ್ಮವರೇ ನಿಮ್ಮ ಮೇಲಿರದೆ ಟೀಕಿಸುವರು ಗೃಹತಾಪತ್ರಯಗಳಂತೂ ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬಂದು ನಿಮ್ಮನ್ನು ಒಂದಿನಿತೂ ನೆಮ್ಮದಿಯಿಂದಿರಗೊಡಲೊಲ್ಲವು. ಆರ್ಥಿಕ ಬಿಕ್ಕಟ್ಟಿನಿಂದಾಗಿ ಮರ್ಯಾದೆಯಿಂದ ದಿನಗಳೆವುದು ಕಷ್ಟವಾಗಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟ ಸೋಲುಗಳು ಪ್ರಾಪ್ತವಾಗುವವು. ವಾರಾದಿಯ 3 ದಿನಗಳು ಸ್ವಲ್ಪ ಉತ್ತಮವಾಗಿ ಕಾಣುವವು.

೧೨. ಮೀನ

ಬುಧನೋರ್ವನನ್ನುಳಿದು ಇತರ ಎಲ್ಲ ಗ್ರಹರೂ ನಿಮಗಿಂದು ಪ್ರತಿಕೂಲವಾಗಿರುವುದರಿಂದ ನಿಮ್ಮ ಪೌರುಷವು ನೀರಲ್ಲಿಟ್ಟ ಹೋಮದಂತೆ ವಿಫಲವಾಗುವದು. ಆತ್ಮೀಯರ ವಿರೋಧವು ದಿನದಿಂದ ದಿನಕ್ಕೆ ಹೆಚ್ಚಲಿದೆ. ಅಧಿಕಾರ ವರ್ಗದವರ ವಕ್ರದೃಷ್ಟಿಗೆ ಪಾತ್ರರಾದ ನೀವು ಸ್ಥಾನಾಂತರವನ್ನೂ ಕೂಡ ಹೊಂದುವ ಸಂಭವವಿದೆ. ದೇಹಾಲಸ್ಯ ಆರ್ಥಿಕ ಬಿಕ್ಕಟ್ಟುಗಳಿಗೊಳಗಾದ ನಿಮಗೆ ದಿನಯಾಪನೆಯು ಬಹಳ ಕಷ್ಟವಾಗಿ ಪರಿಣಮಿಸುವದು. ತಾ. 30ರಿಂದ ೪ರ ವರೆಗಿನ ದಿನಗಳು ಹೆಚ್ಚಿನ ದೋಷದಾಯಿಗಳಾಗಲಾರವು.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂಬ ಚಿಂತೆ ಬೇಡ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಸುಲಭವಾಗಿ ಕಲಿಯಬಹುದಾದ
ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ತಾವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತ ಪುಸ್ತಕ.

—ಸಾದಾ ಪ್ರತಿ: 2.00. ಉತ್ತಮ ಪ್ರತಿ: 2. 50.

ಪುಸ್ತಕದ ಬೆಲೆಯೊಂ...ಗೆ ..5 ಪೈಸೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೊಲೇಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್
ಶ್ರೀನಿವಾಸ್ ಬ್ರದರ್ಸ್, ಪುತ್ತೂರಲ್ಲಿ ಪ್ಪೊಪ್ಯುಲರ್ ನ್ಯೂಸ್ ಏಜನ್ಸಿ ಇವರಲ್ಲಿಯೂ ಪ್ರತಿಗಳು ದೊರೆಯುತ್ತವೆ

Edited, Printed & Published by K. H. Shetty at the Navayuga Press, Udipi, S. India.

ನವಯುಗ

ಸಂಪುಟ ೪೪] ಅಗೋಸ್ಟ್ ೫, ೬೫ [ಸಂಚಿಕೆ ೪೮

Phone No
ಫೋನ್ ಸಂಖ್ಯೆ : 226

NAVAYUGA

leading nationalist weekly

೨೦ ಪೈಸೆ

ಕಥಾ ಪ್ರಪಂಚ

ಕನ್ನಮ್ಮನ ಭ್ರಮೆ

ಮೂಲ: ಪದ್ಮಭೂಷಣ ಪ್ರೊ। ಎನ್. ಎಸ್. ಫಡ್ಕೆ.

ಅನು: ಕೆ. ನಾರಾಯಣಾಚಾರ್, ಶಿರೋಮಣಿ, ವಿದ್ವಾನ್, ಕಣ್ವತೀರ್ಥ.

(ಗಳಿದ ಸಂಚಿಕೆಯಿಂದ ಮುಂದುವರಿದುದು)

ನಾನು ಯುದ್ಧ ಕಾರ್ಯಗಳಲ್ಲಿ ಮಗ್ನನಾಗಿ ಈ ಎಲ್ಲಾ ಸಂಗತಿಗಳನ್ನು ಮರೆತು ಬಿಡಲು ಜೂರ ಹೋದೆನು. ಆದರೆ ಒಂದು ದಿನ ನಾನು ನನ್ನೊಳಗೆ ಸಮಾಧಾನ ಮಾಡಿ ಕೊಳ್ಳಬೇಕೆಂದು ಆಲೋಚಿಸಿದೆನು. ನಾನು ದಿಲೀಪನಿಗೆ ಒಂದು ಪತ್ರ ಬರೆದು ಹೀಗೆ ತಿಳಿಸಿದೆನು:— "ಕನ್ನಮ್ಮನು ನಿನ್ನಲ್ಲಿ ಪ್ರೇಮ ವಿಟ್ಟಿದ್ದಾಳೆ. ನೀನು ಇನ್ನೊಮ್ಮೆ ಊರಿಗೆ ಹೋಗುವಾಗ ಇದನ್ನು ನೆನಸಿನಲ್ಲಿಟ್ಟುಕೊಂಡು ಅವಳನ್ನು ಸಂತೋಷಪಡಿಸು. ನಾನು ಒಮ್ಮೆ ಅವಳಲ್ಲಿ ಅನುರಾಗವಿಟ್ಟಿದ್ದೆನೆಂಬ ಸಂಗತಿಯನ್ನೆ ಮರೆತಿದ್ದೇನೆ. ಅವಳು ನನ್ನ ಹೆಂಡತಿಯಾಗಿ ನನ್ನ ಹೃದಯಕ್ಕೆ ಪ್ರಿಯಳಾಗಿರಬಹುದು".

ನಾನು ಇದನ್ನು ಮನಃಪೂರ್ವಕವಾಗಿ ಬರೆದಿದ್ದೆನು. ಆದ್ದರಿಂದ ಆರು ತಿಂಗಳ ನಂತರ ದಿಲೀಪನು ಕನ್ನಮ್ಮನನ್ನು ಮದುವೆಯಾದನೆಂದು ತಿಳಿದು ಸಂತೋಷ ಪಟ್ಟೆನು. ಬಹು ಸಮಯದ ನಂತರ ನಾನು ಮನೆಗೆ ಹೋದಾಗ ಅವಳು ಸಂತೋಷದಿಂದ ಉಲ್ಲಾಸಗೊಂಡಿರುವುದನ್ನು ಕಂಡು ನಾನು ಅತಿ ಸಂತೋಷಪಟ್ಟೆನು. ನಾನು ಅವಳೊಡನೆ ಹೆಚ್ಚು ಸಮಯವನ್ನು ಕಳೆದೆನು. ನನ್ನ ರಜಾದಿನಗಳು ಮುಗಿದುದೇ ನನಗೆ ತಿಳಿಯಲಿಲ್ಲ ನಾನು ಅವಳನ್ನು ಬೀಳ್ಕೊಂಡಾಗ ಅವಳು ಹೇಳಿದಳು:— "ನಾವು ಮೂರು ಜನರೂ ಒಟ್ಟುಗೂಡಿ ಮೊದಲಿನಂತೆಯೇ ಮಾತನಾಡಿ ನಗಾಡಿಕೊಂಡಿರುವ ದಿನವನ್ನು ಕಾಣಲು ನಾನು ಬಹಳ ಆತುರ ಪಟ್ಟಿರುತ್ತೇನೆ" ಅವಳ ಧ್ವನಿಯಲ್ಲಿ ಹೃದಯದ ವೇದನೆಯು ತಿಳಿದು ಬರುತ್ತಿತ್ತು. ನಾನು ಅವಳ ಕೈಯನ್ನು ಕುಲುಕಿ "ಆ ದಿನವು ಬರುವುದು" ಎಂದು ಹೇಳಿದೆನು. "ಬೇಗನೆ" ಎಂದು ಮತ್ತೆ ಹೇಳಿದೆನು.

ಆದರೆ ನಾನೊಂದು ವ್ಯರ್ಥವಾದ ಆಶೆಯನ್ನು ಕಟ್ಟಿಕೊಂಡಿದ್ದೆನೆಂದು ತಿಳಿಯಿತು. ಯುದ್ಧವು ಮುಗಿಯುವ ಚಿಹ್ನೆಯು ತೋರಲಿಲ್ಲ. ಅದಕ್ಕೆ ವಿಪರೀತವಾಗಿ, ಯುದ್ಧರಂಗಕ್ಕೆ ನಾನು ತಿರುಗಿ ಹೋದ ಕೂಡಲೇ ದೊರಕಿದ ವಾರ್ತೆಯು ಯುದ್ಧವು ಬೇಗನೇ ಅವಸಾನಗೊಂಡರೆ ಅದು ಮಿತ್ರಪಕ್ಷಕ್ಕೆ ಅಪಜಯಪ್ರದವಾದ ರೀತಿಯಲ್ಲೇ ಕೊನೆಗೊಳ್ಳುವುದೆಂದು ಸೂಚನೆ ಕೊಟ್ಟಿತು. ಜಪಾನೀಯರು ೧೯೪೧ನೇ ಡಿಸೆಂಬರ ೭ನೇ ದಿನ ಪರ್ಲ್‌ಹಾರ್ಬರನ್ನು ಪುಡಿಗುಟ್ಟಿದರು. ಮತ್ತು ಗುವಾಂ, ವೇಕ್ ಐಲೇಂಡ್ ಹೊಂಗ್‌ಕೊಂಗ್, ಮನಿಲ್ಲಾ ಪೀನಾಂಗ್ ಸಿಂಗಾಪೂರ್ ಇವೆಲ್ಲವೂ ಒಂದರ ಮೇಲೊಂದಾಗಿ ತ್ವರಿತಗತಿಯಿಂದ ಜಪಾನೀ ಸೈನ್ಯಗಳ—ಬಿರುಗಾಳಿಯ ಪ್ರಚಂಡ ಆಕ್ರಮಣಕ್ಕೆ ಸಿಲುಕಿ—ಬಿದ್ದುಹೋದವು. ರಂಗೂನಿನ ಪತನದ ವಾರ್ತೆಯು ನನಗೆ ಬಹು ದುಃಖವುಂಟು ಮಾಡಿತು. ಏಕೆಂದರೆ ನನ್ನ ಸಹೋದರನನ್ನು ಅಲ್ಲಿಗೆ ಕಳುಹಿಸಲಾಗಿತ್ತು. ಬ್ರಿಟಿಷರು ಇಂಡಿಯನ್ ಸೈನಿಕರನ್ನು ಅವರ ಪಾಡಿಗೇ ಬಿಟ್ಟು, ರಂಗೂನಿನಿಂದ ಓಡಿಹೋದರೆಂದು ನಮಗೆ ತಿಳಿದು ಬಂತು. ಈ ಸೈನಿಕರು ಬಹು ಪರಾಕ್ರಮದಿಂದ ಕಾದಾಡಿದರು. ಆದರೆ ರಂಗೂನನ್ನು ರಕ್ಷಿಸುವುದಕ್ಕೆ ಶಕ್ತರಾಗಲಿಲ್ಲ, ಅವರು ಯುದ್ಧ ಕೈದಿಗಳಾಗಿ ಜಪಾನೀಯರ ಕೈಯಲ್ಲಿ ಸಿಕ್ಕಿಬಿದ್ದರು.

ಇದು ಮರ್ಮಭೇದಕವಾದ ವಾರ್ತೆಯಾಗಿತ್ತು. ನಾನು ಅತ್ಯಂತ ಶೋಕವ್ಯಾಕುಲನಾದೆನು. ದಿಲೀಪನ ಸಮಾಚಾರವನ್ನು ತಿಳಿಸುವುದಕ್ಕಾಗಿ ಕನ್ನಮ್ಮನಿಂದ ಮೇಲಿಂದ ಮೇಲೆ ನನಗೆ ಕೇಬಲ್ ವಾರ್ತೆಗಳು ಬಂದವು. ನಾನೇ ಪೂರ್ಣ ಅಂಧಕಾರದಲ್ಲಿರುವಾಗ ಅವಳಿಗೆ ಅದನ್ನು ಹೇಗೆ ತಿಳಿಸಬೇಕು? ತಿಂಗಳುಗಳು ಕಳೆದವು. ದಿಲೀಪನ ವಾರ್ತೆಯನ್ನು ತಿಳಿಯಲು ನಾನು ಮಾಡಿದ ಯತ್ನಗಳು ಯಾವುದೂ ಮುಟ್ಟಲಿಲ್ಲ. ಜಪಾನೀಯರ ಕೈಯಲ್ಲಿ ಸೆರೆಸಿಕ್ಕಿದ ಭಾರತೀಯ ಸೈನಿಕರು ಸ್ವತಂತ್ರ ಸೈನಿಕರಾಗಿ ಪರಿಗಣಿಸಲ್ಪಟ್ಟಿದ್ದಾರೆಂದು ನಾವು ಕೇಳಿ ತಿಳಿದೆವು. ಜಾವಾ, ಸುಮಾತ್ರಾ, ಬೋರ್ನಿಯೋಗಳಿಂದ ಬಂದ ಸಾವಿರಾರು ಸೈನಿಕರು ಹೊಸತಾಗಿ ಏರ್ಪಡಿಸಿದ 'ಆಜಾದ್ ಹಿಂದ್ ಫೌಜ'ನ್ನು ಸೇರಿಕೊಂಡರೆಂದೂ, ಸುಭಾಷಚಂದ್ರಬೋಸರು ಜರ್ಮನಿಯಿಂದ ಟೋಕಿಯೋ ಪಟ್ಟಣಕ್ಕೆ ಹೋಗಿ ಜಪಾನೀ ಸರ್ಕಾರದೊಡನೆ ಒಂದು ಮಿತ್ರಭಾವದ ಒಪ್ಪಂದವನ್ನು ಮಾಡಿಕೊಂಡರೆಂತಲೂ, ಕೊನೆಗೆ ಅವರು ಸಿಂಗಾಪುರಕ್ಕೆ ಹೋಗಿ ಅಧಿಕೃತವಾಗಿ ಭಾರತೀಯ ಸೈನ್ಯದ ನಾಯಕತ್ವವನ್ನು ವಹಿಸಿಕೊಂಡರೆಂತಲೂ ನಾವು ಕೇಳಿದೆವು. ನಾವು ಇದನ್ನು ಪೇಪರುಗಳಲ್ಲಿ ಓದಿ ತಿಳಿಯಲಿಲ್ಲ. ಆದರೆ ನಮ್ಮ ವಸತಿ ಮತ್ತು ಭೋಜನಗೃಹಗಳಿಗೆ ಈ ಕರ್ಣಾಕರ್ಣಿಕೆಯು ನುಸುಳಿ ಬರುವ ಒಂದು ದಾರಿಯಿತ್ತು.

ಹಾಗಿದ್ದರೂ ನಾನು ರಜೆ ಪಡೆದು ೧೯೪೩ನೇ ನವಂಬರದಲ್ಲಿ ಮನೆಗೆ ಬಂದಾಗ ಕನ್ನಮ್ಮನು ದಿಲೀಪನಿಂದ ತನಗೆ ಬಂದ ಎರಡು ಪತ್ರಗಳನ್ನು ನನಗೆ ತೋರಿಸಿದಳು. ಇಂಡಿಯಕ್ಕೆ ಬರುವ ಒಬ್ಬ ಬರ್ಮಾ ನಿರಾಶ್ರಿತನ ಮೂಲಕ ಗುಪ್ತವಾಗಿ ಅವನು ಅವುಗಳನ್ನು ಕಳುಹಿಸಲು ಶಕ್ತನಾಗಿದ್ದನು. ಈ ಕಾಗದಗಳಿಂದ ಈಗ ನನ್ನ ಸಹೋದರನು ಆಜಾದ್ ಹಿಂದ್ ಫೌಜಿನಲ್ಲಿ ಒಬ್ಬ ಬ್ರಿಗೇಡಿಯರನಾಗಿದ್ದನೆಂದು ತಿಳಿದು ಬಂತು. ಅವನು ತನ್ನ ಸೈನ್ಯದ ಮಿತಿಮೀರಿದ ಉತ್ಸಾಹವನ್ನೂ ಸುಭಾಸ್‌ಚಂದ್ರಬೋಸರ ಪ್ರಕಟವಾದ ಜನಪ್ರಿಯತೆಯನ್ನು ವಿವರಿಸಿದ್ದನು. ನೂರಾರು ಜನರು ಪ್ರತಿ ದಿನವೂ ಬಂದು ಬೋಸರ ಧ್ವಜದಡಿಯಲ್ಲಿ ಒಟ್ಟುಗೂಡುತಿದ್ದರು; ಸಾವಿರಾರು ರುಪಾಯಿಗಳು ಅವರ ಪಾದಗಳಲ್ಲಿ ಸುರಿದು ಬೀಳುತ್ತಿದ್ದವು ಎಂದೂ ಅವನು ಬರೆದಿದ್ದನು. ಮಲಯದಲ್ಲಿ ಒಂದು ಪ್ರಚಂಡ ಸಭೆಯಲ್ಲಿ ಭಾಷಣ ಮಾಡುತ್ತಾ "ಕೋಟಿಗಟ್ಟಲೆ ರುಪಾಯಿಗಳು ನಿಮ್ಮಿಂದ ನನಗೆ ಸಿಕ್ಕಬೇಕು" ಎಂದು ಸುಭಾಸರು ಹೇಳಿದ್ದರು. ಜನರು ಅವರಿಗೆ ಹತ್ತು ಕೋಟಿ ರುಪಾಯಿಗಳನ್ನು ಕೊಟ್ಟಿದ್ದರು. ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳು ಜಪಾನೀಯರಿಂದ ನೇತಾಜೀ ಬೋಸರಿಗೆ ಕೊಡಲ್ಪಟ್ಟಿದ್ದವು. ಅವುಗಳಿಗೆ ಈಗ ಶಾಹಿದ್ ಮತ್ತು ಸುರಾಜ್ ಎಂದು ಹೆಸರಿಡಲಾಗಿದೆ. ಸ್ವತಂತ್ರ ಭಾರತದ ಧ್ವಜವು ಅವುಗಳ ಮೇಲೆ ಹಾರಾಡುತ್ತಿದೆ.... ಅವನು ಮತ್ತೂ ಬರೆದಿದ್ದನು—"ನನ್ನನ್ನು ಕಾಣಲು ನೀನೆಷ್ಟು ಆತುರಳಾಗಿರಬಹುದೆಂಬುದು ನನಗೆ ಗೊತ್ತಿದೆ. ನಾನೂ ಬರುವುದಕ್ಕೆ ಉತ್ಸುಕನಾಗಿರುತ್ತೇನೆ ನನ್ನ ಮಾತನ್ನು ನಂಬು. ಆದರೆ ಪ್ರಿಯಳೆ ಮೆಯೇ! ಇನ್ನೂ ಸ್ವಲ್ಪ ಸಮಾಧಾನದಿಂದಿರು. ನಾವು ಬೇಗನೆ ದಿಲ್ಲಿಯ ಕೆಂಪು ಕೋಟೆಯ ಮೇಲೆ ನಮ್ಮ ಧ್ವಜವನ್ನು ಹಾರಿಸುವೆವು. ಆಗ ನಾವು ಪರಸ್ಪರ ನೋಡೋಣ. ನಾನು ನಿನ್ನಲ್ಲಿಗೆ ಈ ಗುಲಾಮಗಿರಿಯ ಚಿಹ್ನೆಯಾದ ಬ್ರಿಟಿಷ್ ಸಮವಸ್ತ್ರವನ್ನು ಧರಿಸಿಬರುವುದಿಲ್ಲ. .... ಆದರೆ' ...

ನಾನು ಬಹಳ ಕಳವಳಪಟ್ಟೆನು. ನನ್ನ ಕಣ್ಣುಗಳಲ್ಲಿ ಕಣ್ಣೀರು ತುಂಬಿತು. ಆ ಪತ್ರದ ಉಳಿದ ಭಾಗವನ್ನು ನಾನು ಓದಲಾರದವನಾದೆನು.

ನಾನು ಬಹು ದೀನ ಭಾವದಿಂದ ಭಾರವಾದ ಹೃದಯದೊಡನೆ ಯುದ್ಧರಂಗಕ್ಕೆ ತಿರುಗಿ ಹೋದೆನು. ನನ್ನ ಸಹೋದರನು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಆಜಾದ್ ಹಿಂದ್ ಫೌಜಿನಲ್ಲಿ ಒಬ್ಬ ಸೈನಿಕನಾಗಿದ್ದಾನೆ. ನಾನಿಲ್ಲಿ ವಿದೇಶದ ನಾಯಕನಿಂದ ಓಡಿಸಲ್ಪಡುವ ಒಬ್ಬ ಗುಲಾಮನಾಗಿರುತ್ತೇನೆ. ನನ್ನ ವಿಷಯದಲ್ಲಿ ನಾನು ಬಹಳ ಅಸಹ್ಯಪಟ್ಟೆನು. ಆದರೆ ನನಗೂ ಒಂದು ಆಶೆಯಿದೆಯೆಂದು ನಾನು ಆಲೋಚಿಸಿದೆನು. ನನ್ನ ದೇಶವು ಬೇಗನೆ ಸ್ವತಂತ್ರವಾಗುವುದು. ಆಗ ನಾನು ಅದರ ಹೆಮ್ಮೆಯ ಸೈನಿಕನಾಗುವೆನು."

ಆದರೆ ಈ ಗುಪ್ತವಾದ ಆಶೆಯು ಅನಂತರದ ಘಟನೆಗಳಿಂದ ವಿನಾಶವಾಯಿತು. ಜಪಾನೀಯರು ಮುಂದೆ ಬಂದ ಹಾಗೆಯೇ ವಿದ್ಯುದ್ವೇಗದಿಂದ ಹಿಂದೆ ಸರಿಯಲು ಶುರು ಮಾಡಿದರು. ಮಿತ್ರ ಪಕ್ಷದವರು ಒಂದರಿಂದ ಇನ್ನೊಂದು ಸ್ಥಳಕ್ಕೆ ಮುಂದರಿದು ಹೋದರು. ಜನರಲ್ ಮೌಕ್ ಆರ್ಥರರು ಆಶ್ಚರ್ಯಕರವಾದ ವೇಗದಿಂದ ಮುಂದೆ ನಡೆದರು. ಜಪಾನೀಯರು ಭಾರತೀಯ ಸೇನೆಯನ್ನು ಕಷ್ಟದಲ್ಲಿ ಬಿಟ್ಟು ರಂಗೂನಿಂದ ಓಡಿಹೋದರು. ನೇತಾಜಿ ಬೋಸರ ಫೌಜು ಧೈರ್ಯದಿಂದ ಕಾದಾಡಿತು. ಆದರೆ ರಂಗೂನು ಬಿದ್ದು ಹೋಯಿತು. ಬ್ರಿಗೇಡಿಯರ್ ಲಾಡರನು ಆಜಾದ್ ಹಿಂದ್ ಜೇಂಕನ್ನು ಸೂರೆ ಮಾಡಿದನು. ಮೊದಲು ಅವನು ಭಾರತೀಯ ಸೈನಿಕರು ಇಂಡಿಯಕ್ಕೆ ತಿರುಗಿ ಹೋಗಲು ಸ್ವತಂತ್ರರಾಗಿರುತ್ತಾರೆಂದು ಮಾತುಕೊಟ್ಟನು. ಆದರೆ ಅನಂತರ ಅವನು ತನ್ನ ಮನಸ್ಸನ್ನು ಬದಲಾಯಿಸಿದನು. ಝಾನ್ಸಿ ರಾಣೀ ರೆಜಿಮೆಂಟಿನ ಎಲ್ಲಾ ಜನರೂ ಬ್ರಿಟನ ಕೈಯಲ್ಲಿ ಯುದ್ಧ ಕೈದಿಗಳಾದರು.

ಈ ಪ್ರಕಾರ ನೇತಾಜೀ ಬೋಸರ ಮಹತ್ತರವಾದ ಕನಸು ವಿನಾಶವಾಯಿತು. ಅದರೊಡನೆ ನನ್ನ ಸಹೋದರನು ಜಯಶಾಲಿಯಾಗಿ ಮರಳಿ ಬರುವ ನಮ್ಮ ಖಾಸಗೀ ಕನಸೂ ಹಾಳಾಯಿತು. ಆಜಾದ್ ಫೌಜಿನಲ್ಲಿ ದುರವಸ್ಥೆಗೀಡಾದ ಜನರ ವಾರ್ತೆಯನ್ನು ತಿಳಿಯುವುದು ಅಸಾಧ್ಯವಾಯಿತು. ಅವರಲ್ಲಿ ಬಹುಮಂದಿ ನೆಲದೊಳಗೆ ಅಡಗಿ ಹೋದರೆಂದು ವಾರ್ತೆ ಬಂತು. ಕೆಲವು ತಿಂಗಳ ನಂತರ ಆ ಫೌಜಿನ ಪ್ರಮುಖ ಜನರ ವಿಚಾರಣೆಯನ್ನು ನಡೆಸಬೇಕೆಂದು ಗವರ್ನಮೆಂಟು ತೀರ್ಮಾನಿಸಿತು. ಆ ಪಟ್ಟಿಯಲ್ಲಿ ನನ್ನ ಸಹೋದರನ ಹೆಸರು ಇರಲಿಲ್ಲ ಅವನು ಎಲ್ಲಿದ್ದಾನೆ ಎಂಬ ಸಂಗತಿಯನ್ನು ನಮಗೆ ಕಂಡು ಹಿಡಿಯಲಾಗಲಿಲ್ಲ. ಕೊನೆಗೆ ನೇತಾಜಿಯವರು ಒಂದು ವಿಮಾನ ಅಪಘಾತದಲ್ಲಿ ಸತ್ತು ಹೋದರು ಎಂದು ತಿಳಿಯಿತು. ಹೀಗೆ ಕಲ್ಕತ್ತದ ತಮ್ಮ ಮನೆಯಿಂದ ದಿಟ್ಟತನದಿಂದ ತಪ್ಪಿಸಿಕೊಂಡು ಹೋಗಿ ಕೆಲವು ವರ್ಷಗಳ ಮೊದಲು ಅವರು ಆರಂಭಿಸಿದ ಮನೋವೇದಕವಾದ ಈ ನಾಟಕದಲ್ಲಿ ಕೊನೆಯ ಪರದೆಯು ಕೆಳಗಿಳಿದುಬಂತು. ಅನಂತರ ಕೂಡಲೇ ಇಂಡಿಯವು ಸ್ವತಂತ್ರವಾಯಿತು. ನೇತಾಜಿಯವರ ಸೈನ್ಯದ ಧೀರ ಯೋಧರ ಕುರಿತು ಜನತೆಯು ಎಲ್ಲಾ ಸಂಗತಿಯನ್ನೂ ಮರೆತು ಬಿಟ್ಟಿತು.

ಆದರೆ ನಾವು ದಿಲೀಪನನ್ನು ಮರೆತು ಬಿಡಲಾಗಲಿಲ್ಲ. ಅತ್ಯಾತುರದಿಂದ ಅವನ ವಾರ್ತೆಯನ್ನು ಪಡೆಯಲು ಯತ್ನಿಸುತ್ತಿದ್ದೆವು. ಅವನು ಸತ್ತು ಹೋದ ಸಮಾಚಾರವು ನಮಗೆ ತಿಳಿಯಲಿಲ್ಲ. ಅವನು ಸತ್ತನೆಂಬುದನ್ನು ನಾವು ನಂಬಲೂ ಇಲ್ಲ. 'ನೇತಾಜಿಯವರೂ ಸಾಯಲಿಲ್ಲ. ಅವರು ರಷ್ಯದಲ್ಲಿದ್ದಾರೆ. ಇಂಡಿಯಕ್ಕೆ ಅವರು ಬೇಗನೆ ಬರುವರು.' ಎಂದು ಜನರು ಹೇಳಲಿಲ್ಲವೇ? ಹಾಗೆಯೇ ದಿಲೀಪನೂ ಬದುಕಿದ್ದು ಎಲ್ಲಿಯೋ ಅಡಗಿರುತ್ತಾನೆ. ಬೇಗನೆ ಅವನು ಬರಲೇಬೇಕು ಎಂದು ನಾವು ಆಶಿಸುತ್ತಿದ್ದೆವು. ಕನ್ನಮ್ಮನು ಈ ಆಶೆಯನ್ನು ಕಟ್ಟಿಕೊಂಡಿದ್ದಳು. ನಾವು ಅವಳ ಆಶೆಯನ್ನು ಹೆಚ್ಚಿಸಿ ಅವಳು ಬದುಕಿರುವುದಕ್ಕೆ ಸಹಾಯ ಮಾಡಿದೆವು.

ಈಗ ನಾನು ಆ ಸಿಖ್ ಆಫೀಸರರಿಂದ ನಮಗೇನೂ ಆಶೆಯಿಲ್ಲವೆಂದು ತಿಳಿದಿದ್ದೆ. ರಂಗೂನು ಕದನದಲ್ಲಿ ಐದು ವರ್ಷಗಳ ಮೊದಲೇ ದಿಲೀಪನು ಸತ್ತು ಹೋಗಿದ್ದನು. ನಾನು ನಾಳೆ ಮನೆಗೆ ಹೋಗಲಿಕ್ಕಿದ್ದೇನೆ. ನನಗೇನೂ ದಿಲೀಪನ ವಾರ್ತೆ ಗೊತ್ತಿಲ್ಲವೆಂದು ನಟಿಸಿ, ಕನ್ನಮ್ಮನೊಡನೆ ಮಾತನಾಡಿ, ನಗಾಡಿ, ದಿಲೀಪನು

(ಹದಿನೈದನೇ ಪುಟ ನೋಡಿರಿ)

Phone No. 226.

Estd: 1921

NAVAYUGA

Leading Kannada Weekly

UDIPI, S Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ
ಅಂಚೆ ವೆಚ್ಚ ಸಹಿತ ಮುಂಗಡ
ಸ್ವದೇಶ ರೂ. ೧೦
ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)
ಕಲಂ ಸೆಂಟಿಮೀಟರಿಗೆ ರೂ. 2-00
ನಿಯಮಿತ (ಕಂಟ್ರಾಕ್ಟ್)
ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ಸಂಖ್ಯೆಯನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಜೆಮಿನಿ ಉಪಗ್ರಹದಲ್ಲಿ ನಾಲ್ಕು ದಿನ ಆಕಾಶ ಯಾತ್ರೆ ಮಾಡಿದ ಗಗನಯಾತ್ರಿ ಜೇಮ್ಸ್ ಮೆಕ್ ಡಿವಿಟ್ ಯಾತ್ರೆಗೆ ಮೊದಲು ಸೂಕ್ತ ತಯಾರಿ ನಡೆಸಿ ಹಸನ್ಮುಖಿಯಾಗಿದ್ದ ಸನ್ನಿವೇಶ.

ನವಯುಗ

ಸಂಪುಟ ೪೪ | ಉಡುಪಿ | Vol. 44

ಸಂಚಿಕೆ ೪೯ | ೫—೮—೧೯೬೫ | No. 49

ವಚನ ಸುಧೆ

ಯದ್ಯದಾಚರತಿ ಶ್ರೇಷ್ಠ
ಸ್ತತ್ತದೇವೇತರೋ ಜನಃ
ಸ ಯತ್ ಪ್ರಮಾಣಂ ಕುರುತೇ
ಲೋಕಸ್ತದನುವರ್ತತೇ ||

O ಶ್ರೇಷ್ಠರು ಹೇಗೆ ಆಚರಿಸುತ್ತಾರೆಯೋ ಹಾಗೆಯೇ ಸಾಮಾನ್ಯ ಜನರೂ ವ್ಯವಹರಿಸುತ್ತಾರೆ. ಅವರು ಯಾವುದನ್ನು ಪ್ರಮಾಣವೆಂದು ಬಗೆಯುತ್ತಾರೆಯೋ ಅದನ್ನೇ ಇತರರೂ ಹಾಗೆಯೇ ತಿಳಿಯುತ್ತಾರೆ; ಹಿಂಬಾಲಿಸುತ್ತಾರೆ.

OO ದೊಡ್ಡವರೆನಿಸಿಕೊಂಡವರ ನಡಾವಳಿಯನ್ನು ಇತರರು ನೋಡುತ್ತಿರುತ್ತಾರೆ. ಅವರ ಆಚರಣೆ, ನಡವಳಿಕೆ ಎಲ್ಲವನ್ನೂ ಇವರು ಅನುಸರಿಸುವ ಪ್ರಯತ್ನ ಮಾಡುತ್ತಾರೆ. ಶ್ರೇಷ್ಠರಾದವರೇ ಅಕ್ರಮ, ಅನ್ಯಾಯ, ದುರ್ನಡತೆಗಳಲ್ಲಿ ತೊಡಗಿದರೆ, ಲೋಕವೇ ನಾಶವಾಗುವುದು. ಆದುದರಿಂದ ಅವರು ಸದಾಚಾರ ಸಂಪನ್ನರಾಗಿ ಉಳಿದವರಿಗೆ ಉತ್ತಮ ಆದರ್ಶವನ್ನು ಹಾಕಿ ಕೊಡಬೇಕು.

ಏಶ್ಯನ್ ಬ್ಯಾಂಕ್ ಪ್ರಶ್ನೆ

ಏಶ್ಯದ ದೇಶಗಳ ಅಭಿವೃದ್ಧಿಗಾಗಿ ಆರ್ಥಿಕ ನೆರವನ್ನು ನೀಡುವ ಬ್ಯಾಂಕೊಂದರ ರಚನೆಯಲ್ಲಿ ಇದೀಗ ಸಾಕಷ್ಟು ಪ್ರಗತಿಯು ಕಂಡುಬಂದಿದೆ. ಒಂದು ಬಿಲಿಯ ಡಾಲರ್‌ಗಳ ಬಂಡವಳದಿಂದ ಇದು ಸ್ಥಾಪನೆಯಾಗುವುದೆಂಬ ನಿರೀಕ್ಷೆಯಿದೆ. ಬಂಡವಳವನ್ನು ಪೂರೈಸಲು ಕೆಲವೊಂದು ದೇಶಗಳು ಈಗಾಗಲೇ ಮುಂದೆ ಬಂದಿವೆ. ಅಮೆರಿಕೆ ಮತ್ತು ಜಪಾನಗಳು ಪ್ರತಿಯೊಂದು ೨೦೦ ಮಿಲಿಯ ಡಾಲರ್‌ಗಳ ಆಶ್ವಾಸನ ನೀಡಿವೆ; ಆಸ್ಟ್ರೇಲಿಯಾವೂ ತನ್ನ ಪಾಲಿನ ಬಂಡವಳ ನೀಡುವುದು. ಬ್ರಿಟನ್ ಮತ್ತು ಫ್ರಾನ್ಸ್‌ಗಳೂ ಈ ಕಾರ್ಯದಲ್ಲಿ ಹಿಂದುಳಿಯಲಾರವು. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪೈಕಿ ಭಾರತವು ೯೩ ಮಿಲಿಯ ಡಾಲರ್‌ಗಳನ್ನು ಕೊಡಲು ಒಪ್ಪಿಕೊಂಡಿದೆ. ಆದರೆ, ಇದರ ಅರ್ಧಾಂಶವನ್ನು ಪರಿವರ್ತನೀಯ ಕರೆನ್ಸಿಯ ರೂಪದಲ್ಲಿಯೂ ಉಳಿದರ್ಧವನ್ನು ರೂಪಾಯಿಗಳ ರೂಪದಲ್ಲಿಯೂ ಕೊಡುವುದು. ವಿದೇಶೀ ವಿನಿಮಯದ ಬಗ್ಗೆ ತಲೆ ಕೆರೆದು ಕೊಳ್ಳುವ ಪರಿಸ್ಥಿತಿಯಲ್ಲಿರುವ ಮತ್ತು ವಿದೇಶೀ ನೆರವನ್ನು ವಿಶೇಷವಾಗಿ ಬಯಸುತ್ತಿರುವ ಭಾರತದ ಈ ವಂತಿಗೆ ಅದರ ಶಕ್ತಿ ಮೀರಿದ್ದೆಂದು ಯಾರಾದರೂ ಹೇಳಬಹುದು. ಅಂತೆಯೇ ಪಾಕಿಸ್ತಾನ ಮತ್ತು ಮಲೇಶ್ಯಗಳೂ ಸಣ್ಣ ಪ್ರಮಾಣದ ದೇಣಿಗೆಯನ್ನು ನೀಡುವವೆಂದು ನಂಬಲಾಗಿದೆ.

ಕಳೆದ ಮಾರ್ಚ್ ತಿಂಗಳಲ್ಲಿ "ಇಕೇಫೆ"ಯ ವಾರ್ಷಿಕ ಸಭೆಯು ವಾಶಿಂಗ್‌ಟನ್ನಿನಲ್ಲಿ ನಡೆದಾಗ ಏಶ್ಯನ್ ದೇಶಗಳ ನೆರವಿಗೆಂದೇ ಈ ಬ್ಯಾಂಕನ್ನು ಸ್ಥಾಪಿಸುವ ಪ್ರಸ್ತಾಪ ಬಂದಿತ್ತು. ಅಭಿವೃದ್ಧಿ ಪಥಗಾಮಿಯಾಗಿರುವ ಏಶ್ಯನ್ ದೇಶಗಳಿಗೆ ಸಕಾಲದಲ್ಲಿ ಆರ್ಥಿಕ ನೆರವನ್ನು ನೀಡುವುದೇ ಇದರ ಮುಖ್ಯೋದ್ದೇಶ. ಉದ್ದೇಶಕ್ಕೆ ಯಾರೂ ವಿಘ್ನವನ್ನೊಡ್ಡುವುದಿಲ್ಲವಾದರೂ ಇಂಥಹ ಸಂಸ್ಥೆಯೊಂದು ರೂಪಧಾರಣೆ ಮಾಡುವಲ್ಲಿ ಒಂದಲ್ಲ ಹಲವು ಸಮಸ್ಯೆಗಳು ತಲೆ ಹಾಕುತ್ತಿವೆ. ಕಳೆದ ಕೆಲವು ವಾರಗಳಲ್ಲಿ ಸಮಸ್ಯೆಗಳನ್ನು ತಿಳಿಗೊಳಿಸಲು ಕೆಲವು ಪ್ರಯತ್ನಗಳು ನಡೆದುವಾದರೂ ಅವುಗಳಿಂದ ನಿರೀಕ್ಷಿತ ಪರಿಣಾಮಗಳು ಸಿಗಲಿಲ್ಲವೆಂದೇ ಹೇಳಬೇಕು. ಜಗತ್ತಿನ ಮುಂದುವರಿದ ದೇಶಗಳು ಅಧಿಕ ಬಂಡವಾಳವನ್ನು ಒದಗಿಸುವುವೆಂದು ಆಶಿಸಿದ್ದರೂ ಕೆಲವು ಹೆಚ್ಚಿನ ಆಸಕ್ತಿಯನ್ನು ಇನ್ನೂ ತೋರಿಸಿರುವುದಿಲ್ಲ. ಅಧ್ಯಕ್ಷ ಲಿಂಡನ್ ಜಾನ್ಸನ್ನರು ದಿಟ್ಟ ಹೆಜ್ಜೆಯನ್ನು ಇಡಲು ಮುಂದೆ ಬಂದುದರಿಂದ ಈಗ ಈ ಯೋಜನೆಯು ಗಾಳಿ ಇಡಿಯ ಜಗತ್ತಿನಲ್ಲಿ ಹರಡ ತೊಡಗಿದೆ. ಇದಕ್ಕೆ ಯಾವ ಬಗೆಯ ಪ್ರತಿಕ್ರಿಯೆ ಹೊರಡುವುದೆಂದು ಕಾದು ನೋಡಬೇಕಾಗಿದೆ. ಈಗ ತಿಳಿದು ಬಂದಿರುವಂತೆ ಅಮೆರಿಕೆಯು ಆಗ್ನೇಯ ಏಶ್ಯಾದ ಅಭಿವೃದ್ಧಿಗಾಗಿ ಕೊಡುವ ಒಂದು ಬಿಲಿಯ ಡಾಲರ್‌ಗಳು ಪ್ರತ್ಯೇಕವಾಗಿಯೇ ನೀಡಲ್ಪಡುವುವು. ಇದನ್ನು ಹೊರತು ೨೦೦ ಮಿಲಿಯ ಡಾಲರ್‌ಗಳನ್ನು ಬ್ಯಾಂಕ್ ಬಂಡವಳಕ್ಕೆ ಒದಗಿಸುವುದೆಂದು ಜಾನ್ಸನ್ನರ ವಿಶೇಷ ಸಲಹೆಗಾರ ಇಗಿನ್ ಬ್ಲಾಕ್ ಘೋಷಿಸಿದ್ದಾರೆ. ಮಾತ್ರವಲ್ಲದೆ ಯುರೋಪಿನ ಬೇರೆ ಬೇರೆ ದೇಶಗಳ ಸಂಚಾರ ಕೈಗೊಂಡು ಬಂಡವಾಳ ಕೂಡಿಸಲು ಇವರು ಪ್ರಯತ್ನಿಸುತ್ತಿದ್ದಾರೆ. ಅವರ ಶ್ರಮವು ಸಾರ್ಥಕವಾದರೂ ಆಗಬಹುದು. ಅಮೆರಿಕನ್ ಎಯ್ಡ್ ಸಮಿತಿಯ ಅಧಿಕಾರಿಗಳೂ ಇಕಾಫೆಯ ಮಧ್ಯವರ್ತಿ ಸಮಿತಿಯ ಸದಸ್ಯರೂ ಒಂದಾಗಿ ಬ್ಯಾಂಕಿನ ನಿರ್ಮಾಣದಲ್ಲಿ ಆಸಕ್ತಿಯನ್ನು ಕದುರಿಸಿದ್ದಾರೆ.

ಹೀಗೆ ಬ್ಲಾಕರ ಸಂಚಾರದಿಂದ, ವಿಚಾರ ವಿನಿಮಯದಿಂದ, ಅವರು ಯುರೋಪಿಯನ್ ದೇಶಗಳಿಂದ ಬಂಡವಾಳ ಕೂಡಿಸಲು ಶಕ್ತರಾಗಬಹುದೆಂದು ನಂಬಬಹುದು. ಆದರೆ, ಸೋವಿಯತ್ ರಶ್ಯದ ಮಾತು ನಂಬುವುದು ಕಷ್ಟಸಾಧ್ಯ. ಆರ್ಥಿಕ ನೆರವು ನೀಡುವ ಸಾಮೂಹಿಕ ಪ್ರಯತ್ನಗಳಲ್ಲಿ ಇದುವರೆಗೆ ಸಕ್ರಿಯ ಭಾಗವಹಿಸದ ಸೋವಿಯತ್ತು ಏಶ್ಯನ್ ಬ್ಯಾಂಕಿಗೆ ಬಂಡವಾಳ ಒದಗಿಸಬಲ್ಲುದೇ ಎಂಬುದೊಂದು ಪ್ರಶ್ನೆ. ಇನ್ನೂ ಮುಖ್ಯವಾದುದೆಂದರೆ, ಉತ್ತರವಿಯತನಾಮದ ಪ್ರಶ್ನೆ. ಸದ್ಯಕ್ಕೆ ಅಮೆರಿಕವು ಅಲ್ಲಿ ಒಂದೇ ಸಮನೆ ಬಾಂಬುದಾಳಿಯನ್ನು ಮಾಡುತ್ತಿದೆ. ಸೋವಿಯತ್ತು ಈ ಉತ್ತರವಿಯತನಾಮದಲ್ಲಿ ತುಸು ಆಸಕ್ತಿ ತೋರಿಸಿದೆ. ಒಂದು ವೇಳೆ ಅದು ಬ್ಯಾಂಕಿಗೆ ಬಂಡವಾಳವನ್ನು ಒದಗಿಸುವಲ್ಲಿ ನೆರವಾದರೂ ಬ್ಯಾಂಕಿನಿಂದ ಉತ್ತರವಿಯತನಾಮಕ್ಕೂ ನೆರವು ದೊರೆಯಬೇಕೆಂದು ವಾದಿಸಬಹುದು. ಆದರೆ, ಇದನ್ನು ಅಮೆರಿಕೆ ಒಪ್ಪುವುದೆ? ಮೋಸ್ಕೋ ಮತ್ತು ಪ್ರೇಗಗಳಿಗೆ ತಜ್ಞರ ತಂಡಗಳು ವಿಚಾರ ವಿನಿಮಯಕ್ಕೆಂದು ಹೋಗಿವೆ; ಅವುಗಳ ಭೇಟಿಯ ಪರಿಣಾಮವೇನು ಎಂದು ಮುಂದೆ ನೋಡಬೇಕಾಗಿದೆ. ಮೋಸ್ಕೋವು ಉತ್ತರವಿಯತನಾಮವನ್ನೂ ಸೇರಿಸಿಕೊಳ್ಳುವ ಶರ್ತ ಹಾಕಿದರೆ, ಅದನ್ನು ಒಪ್ಪಿಕೊಳ್ಳುವುದು ಅಮೆರಿಕೆಗೆ ಸಾಧ್ಯವಾದೀತೆ? ಸ್ವತಃ ಯುದ್ಧವನ್ನೇ ಘೋಷಿಸಿರುವ ಅದು ಇದನ್ನು ಮನ್ನಿಸಲು ಸಿದ್ಧವಾದರೂ ಅಮೆರಿಕನ್ ಕಾಂಗ್ರೆಸಿನಲ್ಲಿ ಬೇಕೆಂಬಷ್ಟು ಅಪಶಬ್ದಗಳು ಏಳುವ ಸಂಭವವಿದೆ. ಇಂತಹ ಸನ್ನಿವೇಶದಲ್ಲಿ ಅಮೆರಿಕನ್ ಸರಕಾರ ಹೇಗೆ ಒಪ್ಪೀತು? ಇದೇ ಮತ್ತು ಇದೇ ಬಗೆಯ ಮತ್ತೂ ಕೆಲವು ಸಮಸ್ಯೆಗಳು ಬ್ಯಾಂಕಿನ ಯೋಜನೆಯೊಡನೆಯೇ ಮೂಡಿದ್ದುವು. ಇದೀಗ ಇರುವ ಸಮಸ್ಯೆಗಳೂ ಅವೇ. ಇವೆಲ್ಲವನ್ನೂ ಬಗೆಹರಿಸಿಕೊಳ್ಳುವುದು ಸದ್ಯಕ್ಕಂತೂ ಕಷ್ಟಸಾಧ್ಯ. ಹಾಗಿರುವಾಗ, ಏಶ್ಯನ್ ಬ್ಯಾಂಕಿನ ಯೋಜನೆಯು ಕಾರ್ಯರೂಪದಲ್ಲಿ ಬಂದರೂ ಅದು ಯಾವ ಬಗೆಯಲ್ಲಿ ಮುಂದೆ-ವರಿಯುವುದೆಂಬುದು ಮತ್ತೂ ಸಂದಿಗ್ಧವೇ. ಅದೇನೇ ಇದ್ದರೂ ಬ್ಯಾಂಕಿನ ಸ್ಥಾಪನೆಯ ಉದ್ದೇಶ ಒಳ್ಳೆಯದೇ ಆಗಿರುವುದರಿಂದ, ನಾವು ಒಳಿತನ್ನೇ ಹಾರೈಸಬೇಕು.

ಧೀರ ಮುರಾರ್ಜಿ

ಬೆಂಗಳೂರು ಎ ಐ ಸಿ ಸಿ ಯ ಅಧಿವೇಶನದಲ್ಲಿ ಧೀರೋಕ್ತಿಗಳನ್ನು ಆಡಿದ ಮುರಾರ್ಜಿ ನಿಷ್ಠುರವಾದಿಗಳೆಂದುಕೊಂಡರೂ ಎಂಟೆದೆಯವರೆಂದೂ ಕರೆಸಿಕೊಳ್ಳು

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



"ಸಾಯೋದಕ್ಕೆ ಮೊದಲೊಮ್ಮೆ ಬೊಂಬಾಯಿ ನೋಡಬೇಕೂಂತ ನಮ್ಮಾಕೆ ಚಂಡಿ ಹಿಡೀತಾಳೆ ಸಾರ್ .."

"ಅದಕ್ಕೇನಂತೆ, ಮುಂದಿನ ಬಾರಿ ನೀನೇ ಇಲೆಕ್ಷನಿಗೆ ನಿಂತುಬಿಡು. ಚೀಟಿ ಎದ್ದರೂ ಏಳಬಹುದಲ್ಲ? ಎದ್ದಿತೆಂದರೆ ಬೊಂಬಾಯಿಯಾಗೆ ನಮ್ಮಾಕೆಗೂ ಹೋಗಿ ಬರಬಹುದು..."

ಗೇಹ ರಾಜ್ಯದಲ್ಲಿ

ಭಿನ್ನವಾಗಿದ್ರೂ ಅಭಿನ್ನವಿರ್ಬೇಕು

ಅಲ್ರಿ, ಕೇಳಿದ್ರಲ್ಲಾ?'

'ಏನನ್ನು?"

"ಅಲ್ಲ, ಈಗ ಹೇಳಿದ್ದನ್ನ ಈಗ್ಲೇ ಮರೆತು ಬಿಟ್ರೆ ಹೇಗೇಂತ?'

"ನೀನು ಈಗ ಏನು ಹೇಳಿದ್ದೀಯ?"

'ಅಂದ್ರೆ, ಅದು ಮರ್‍ತು ಹೋಯ್ತನ್ನಿ.'

"ಅದನ್ನು ಬಾಯ್ಬಿಟ್ಟು ಹೇಳಬೇಕ?"

'ಯಾರ್‍ಯಾರ ಮುಂದೆ ಹೇಳೋದಲ್ಲ ನೋಡಿ..."

"ಅದೂ ಹೌದೂನ್ನು. ಆದ್ರೂ ಗಂಡನೆಂಬವ ಹೆಂಡ್ತೀ ಮುಂದೆ ಮರವಾಯ್ತೂಂತ ಅಂದ್ರೆ...."

"ಅಲ್ರಿ, ಮತ್ಯಾರ ಮುಂದೆ ಅನ್ಬೇಕು?'

'ಅದ್ರಲ್ಲೂ ನಾನು..."

"ಪಾಪ, ಮರೆತು ಬಿಡೋದು ಇದೇ ಮೊದಲ ಸಲ ಅಲ್ವೆ, ನಾಚಿಗೆಯಾಗುತ್ತೆ...'

"ಹಾಗೇನಿಲ್ಲ, ಇದೇನು ಮಾಮೂಲೂಂತ ನೀನು ಅನ್ನೋದು ಅಲ್ವೆ? ಆದರೆ ನೋಡು, ಅಂತಹದ್ದೇನೂ ಇಲ್ಲ. ನೆನಪಾಗುವುದು ಮಾತ್ರ ತುಸು ತಡವಾಗಬಹುದು."

"ನಾನೂ ಅನ್ನೋದು ಅದನ್ನೇ. ಅಲ್ಲ ಸರಿಯಾದ ಸಮಯದಲ್ಲಿ ನಿಮಗೆ ಯಾವುದಾದರೂ ಜ್ಞಾಪಕವಾದದ್ದಿದೆಯಂತ?"

"ಇಲ್ಲ ಬಿಡಮ್ಮಾ, ಆದ್ರೂ ನೋಡು ಈ ತಲೆಬುರುಡೆ ಒಂದು ದುಸ್ಟ್‌ಬಿನ್..."

"ಅಂದ್ರೆ?"

'ಮಾನವರ ತಲೆ ಬುರುಡೆ ಒಂದು ಡುಸ್ಟ್‌ಬಿನ್...."

'ಹೌದ್ರಿ, ದುಸ್ತ್‌ಬಿನ್ ಅಂದ್ರೆ...?"

'ಹೋ, ಹಾಗೆ ದುಸ್ತ್‌ಬಿನ್ ಅಂದ್ರೆ ಮುನ್ಸಿಪಾಲ್ಟಿ ಡಬ್ಬಿ."

'ಅಂದ್ರೆ, ಬೇಕಾದ್ದಕ್ಕಿಂತ ಹೆಚ್ಚು ಬೇಡಾಗಿರೋದೇ ತುಂಬಿರೋದೂಂತ...."

"ಹಾಗೂ ಅಂದುಕೊಳ್ಳಬಹುದು..."

'ಅಥವಾ ಬೇಡಾಗಿರೋದೇ ತುಂಬಿಕೊಂಡಿರ್ಬೇಂತ...."

'ಹ್ಞೂಂ, ಹೀಗೂ ಇರಬಹುದು...'

"ಊರವರಿಗೆ ಬೇಡವಾದುದೆಲ್ಲಾ ತುಂಬಿರುತ್ತೆ ನೋಡಿ, ಹಾಗೆ....'

'ಯಾರಿಗೆ ಏನು ಬೇಡವಾದರೂ ದುಸ್ತ್‌ಬಿನ್ ಬೇಡಾನ್ನೋಕಾಗುತ್ಯೆ? ಬೇಕಾಗ್ಲಿ ಬೇಡವಾಗ್ಲಿ ಅದು ತುಂಬಿಕೊಳ್ಳಲೇಬೇಕು....'

'ಯಾಕೇಂತ? ನೋಡಿ, ಮಹಾತ್ಮ ಗಾಂಧಿಯವರ ಮಂಗಮೂರ್ತಿಯಂತೆ ಕೇಳದಂತೆ ಕಿವಿಮುಚ್ಚಬಹುದು, ಕಾಣದಂತೆ ಕಣ್ಣು ಮುಚ್ಚಬಹುದು...'

'ಎಲ್ಲಾ ಮಾಡಬಹುದು, ಹಾಗಿದ್ರೂ ಕೇಳದೇನೇ ಇರಬೇಕಾದ್ರೆ ಕಿವುಡನಾಗಬೇಕು, ನೋಡದೇನೇ ಇರಬೇಕಾದ್ರೆ ಕುರುಡನಿರಬೇಕು...'

"ಅಂದ್ರೆ ಹಾದೀಲಿ ಹೋಗೋ ಮಾರಿಯನ್ನ ಮನೆಗೆ ಬಂದು ಹೋಗೂಂತ ಸ್ವಾಗತ ಮಾಡೋರೇ ಎಲ್ಲಾಂದ ಹಾಗಾಯ್ತು....'

'ಇಂದು ನೋಡು, ವಸುಧೈವ ಬಾಂಧವರ ಕಾಲ. ತನ್ನ ಮನೆಗೆ ಮಾತ್ರ ಮಾರಿ ಹೋಗ ಬಾರದು ಎಂಬ ಸಂಕುಚಿತ ಪ್ರವೃತ್ತಿಯ ಕಾಲವಿದಲ್ಲ. ಎಲ್ಲರೂ ತನ್ನವರೇ ಎಂಬ ವಿಶಾಲ ಅತಿ ವಿಶಾಲ ಮನೋವೃತ್ತಿಯ ಯುಗವಿದು...'

'ಅದುದರಿಂದಲೇ ಇರಬೇಕು. ತಮ್ಮ ತಪ್ಪನ್ನು ಕಾಣದೆ ಪರರ ದೋಷಗಳನ್ನೇ ಎತ್ತಿ ನೋಡುವ, ಹೇಳುವ, ಆಡುವ ಪರಿಪಾಠ ಬಂದಿದೆ ..'

'ಅಲ್ವೆ, ನನ್ನ ತಪ್ಪನ್ನು ನೀನು ತೋರಿಸಿ ಕೊಡಬೇಕು. ನಿನ್ನದನ್ನು ನಾನು...'

'ಯಾತಕ್ಕೆ?"

'ಮನೆಯೆಂಬ ಒಂದು ಬಂಡಿಯ ಎರಡು ಚಕ್ರಗಳೇ ನಾನು ಮತ್ತು ನೀನು. ಬಂಡಿ ಸುಸೂತ್ರವಾಗಿ ಮುಂದುವರಿಯಬೇಕಾದರೆ ಚಕ್ರಗಳು ಏಕಪ್ರಕಾರವಾಗಿಯೇ ಮುಂದರಿಯಬೇಕು; ಅವುಗಳಲ್ಲಿ ಹೊಂದಾಣಿಕೆಯಿರಬೇಕು. ನಾನು ತಪ್ಪಿದಲ್ಲಿ ನೀನು ಎಚ್ಚರಿಸು, ನೀನು ತಪ್ಪಿದಲ್ಲಿ ನಾನು..."

"ಅದೆಲ್ಲ ಸರಿ, ಸಿದ್ಧಾಂತದಲ್ಲಿ ಮಾತ್ರ"

"ಯಾಕೆ?"

"ಅಲ್ಲ, ನಾನು ಹೇಳಿದ್ದೇನ್ನಿ. ನೀವು ಮಾತ್ರ ಅದನ್ನ ಒಪ್ಪಬೇಕಲ್ಲಾ?"

'ನ್ಯಾಯವಾಗಿರೋದನ್ನ ಯಾರು ತಾನೇ ಒಪ್ಪೋದಿಲ್ಲಾ?"

'ಯಾವುದು ನ್ಯಾಯ ಯಾವುದು ಅನ್ಯಾಯ ಎಂಬುದನ್ನು ಹೇಗೆ ಗೊತ್ತುಮಾಡಬೇಕು ಅನ್ನೋದು ಮಾತ್ರ ತಿಳಿಯೋದಿಲ್ಲ."

"ಯಾಕೆ?"

"ಯಾಕೇಂತಂದ್ರೆ? ನೋಡಿ ನನಗೆ ನ್ಯಾಯವಾಗಿರೋದು ನಿಮಗೆ ಅನ್ಯಾಯಾಂತ ಕಾಣಬಹುದು. ಹಾಗೇನೇ ನನಗೂನೂ...'

"ಅದೆಲ್ಲಿಯಾದ್ರೂ ಸ್ವಲ್ಪ ಮಟ್ಟಿಗೆ ಇರಬಹುದೂನ್ನು...."

"ಅಂತೂ ಪ್ರತಿ ಮನೆಯಲ್ಲೂ ಭಿನ್ನಾಭಿಪ್ರಾಯವಿದ್ದೇ ಇರುತ್ತೆ ಅನ್ನಿ.'

"ತೋರಿಕೆಗೆ ಭಿನ್ನಾಭಿಪ್ರಾಯವಿದ್ರೂ ಮೂಲ ಗುರಿಯೊಂದೇ ತಾನೆ?"

'ಅಲ್ರಿ, ನೀವು ಭಾರಿ ದೊಡ್ಡ ಟೋಪಿ ಬಿಟ್ಟವ್ರ ಹಾಗೆ ಮಾತಾಡ್ತಾ ಇದ್ದೀರಲ್ಲಾ...?"

"ಯಾಕೆ?"

'ಮತ್ಯಾಕಂದ್ರಿ? ನೋಡಿ, ಟೋಪಿಯವ್ರಲ್ಲೂ ತೋರಿಕೆಗೆ ಭಿನ್ನಾಭಿಪ್ರಾಯ ಇದ್ರೂ ಅವ್ರೆಲ್ಲ ಇಟ್ಕೊಂಡಿರೋ ನಡೆಯುತ್ತಿರೋ ಹಾಗೂ ಮುಟ್ಟೋ ಗುರಿಯೆಲ್ಲಾ ಒಂದೇಂತ ಅಂತಾರಲ್ಲಾ...."

"ಅದ್ರಲ್ಲೇನೇ ವಿಶೇಷ?" ಅವರವರ ತಲೆ ಬುರುಡೆಯ ಪ್ರಮಾಣಕ್ಕೆ ಸರಿಯಾದ ಟೋಪಿಯನ್ನೇ ಹೊಲಿಸುತ್ತಿರುವಾಗ, ಟೋಪಿಯವರಲ್ಲಿ ಭಿನ್ನತೆಯಿಲ್ಲದೇನಂತೆ? ಹಾಗೇನೇ ನೋಡು ಟೋಪಿಯಿಡದವ್ರಲ್ಲೂ ಭಿನ್ನತೆಯಿಲ್ಲವೆ?

"ಹೇಗೆ?"

'ಹಾಗೇನೋಡು, ದೇವ್ರು ಒಬ್ಬೊಬ್ಬ್ರತಲೆ ಬುರುಡೆಗೆ ಎಂದೊಂದು ಗಾತ್ರದ ರೂಪವನ್ನಿತ್ತಿದ್ದಾನೆ. ಆದ್ದರಿಂದ ವಿಭಿನ್ನತೆಯೆನ್ನುವುದು ಅಥವಾ ದ್ವೈತ ಅನ್ನುವುದು ದೈವನಿರ್ಮಿತವಾದುದು."

"ಎತ್ತು ಏರಿಗೆಳದ್ರೆ ಹೋರಿ ನೀರಿಗೆಳೆದಂತಾಯ್ತು...."

'ಏನು, ಏನಾಯ್ತು?"

'ಆಗೋದೇನು? ನಾನು ನಿಮ್ಮ ಅವ್ರು ಯಾರೋ ಬಂಗಾರವನ್ನು ತಾವ್ರು ಮಾಡಿದವ್ರು....'

'ಬಂಗಾರವನ್ನ ತಾವ್ರು ಮಾಡಿದವ್ರು.. ನಮ್ಮವ್ರು....'

"ಹಾದ್ರಿ ಅವ್ರೆ ನೋಡಿ ನಮ್ಮವ್ರು"

'ನಮ್ಮವ್ರು ನೀವೇ. ಆದ್ರೆ ಬಂಗಾರವನ್ನ ತಾವ್ರು ಮಾಡಿದವ್ರಲ್ಲ, ಮಾಡಿಸಿಕೊಂಡವ್ರು..."

'ಸಾಕು ಬಿಡೀಂದ್ರೆ, ನಿಮಗೆ ಯಾವಾಗಲೂ ಯಾವುದ್ರಲ್ಲೂ ತಮಾಷೇನೇ...."

'ಅಲ್ವೆ, ಮತ್ತೆ ನೀನು ನಮ್ಮವ್ರು ನಿಮ್ಮವ್ರೂಂತಂದ್ಬಿಟ್ಟು ಒಗಟು ನುಡಿದರೆ...'

'ಅಲ್ರಿ, ಅವ್ರ ಹೆಸ್ರು ಇದೆ ನೋಡಿ.... ಹೊಟ್ಟೆಯಲ್ಲಿದೆ, ಬಾಯಿಗೆ ಬರೋಲ್ಲ..."

'ಬೇಡ ಮಹಾರಾಯ್ತಿ, ಹೊಟ್ಟೆಯಲ್ಲಿರೋದು ಅಲ್ಲಿಂದ್ಲೇ ಕೆಳಗೆ ಹೋಗಲಿ. ಬಾಯಿಗೆ ಬಂದು ಬಿಟ್ರೆ ಮತ್ತೆ ..."

'ಪುನಃ ಶುರು ಮಾಡಿದ್ರಿ....'

'ಮತ್ತೆ ಮಾಡುವುದಾದರೂ ಏನು? ನೀನು ಅರ್ಥವಾಗದಂತೆ ಮಾತಾಡ್ತಾ ಬಂದ್ರೆ...ಹೇಳು ನೋಡೋಣ ಯಾರವ್ರೂಂತ...."

"ಯಾರು ನಾನೆ? ನಾನಂತೂ ನಿಮ್ಮಪ್ಪೇ ಅಲ್ವೆ?"

"ಅದು ನನ್ಗೆ ನೀನು ಹೇಳಿಕೊಡ್ಬೇಕಾ? ಅವ್ರಲ್ಲ, ನಿನ್ನ ಒಗಟಿನ ವ್ಯಕ್ತಿ..."

"ನೋಡಿ, ಬೊಂಬಾಯಿಯಲ್ಲಿ ಭಾರಿ ಕಾರ್ಬಾರು ಮಾಡಿದವ್ರು, ದಿಲ್ಲಿಯಲ್ಲಿರೋವಾಗ ಚಿನ್ನವನ್ನ ತಾವ್ರು ಮಾಡಿದವ್ರು ಮತ್ತೆ ನಮ್ಮ ನೆಹರೂ ಸರ್ಕಾರ್ಗ ಕಾಮರಾಜರ ತಂತ್ರದಿಂದ ..."

"ಹ್ಞೂಂ, ತಿಳೀತು ಬಿಡು. ಮುರಾರ್ಜಿ ದೇಸಾಯಿ ಕಣೋ...."

"ಹೌದು, ಹೌದು ಅವ್ರೆ. ಪಾಪ, ಮೊದಲಾದರೆ, ಯಾವಾಗ್ಲೂ ಅವ್ರ ನೆನಪು ಆಗುತಿತ್ತು. ಈಗ ನೋಡಿ ಅವರ ಹೆಸ್ರೇ ಕೇಳಿ ಬರೋದಿಲ್ಲ. ..."

"ಅದೂ ಸರಿಯೇ ಅನ್ನು. ಅಧಿಕಾರದಲ್ಲಿರೋವರ್‍ಗೆ ಅಧಿಕಾರಿಗಳ ಜ್ಞಾಪಕ; ಆ ಮೇಲೆ?"

"ಯಾರಿಗೆ ಬೇಕ್ರೀ ಅವ್ರ ಗೋಟಾಲೆ?'

'ಗೋಟಾಲೆ? ಯಾರದ್ದು?"

"ಅದೇ ಅಧಿಕಾರಿಗಳದ್ದು....'

'ಯಾಕೆ?'

"ಅಲ್ರೀ, ಅಧಿಕಾರದಲ್ಲಿರೋವಾಗ ಜನರ ತಲೆ ಮೇಲೆ ಸವಾರಿ ಮಾಡಿದವ್ರು ಅಧಿಕಾರ ಕೈತಪ್ಪಿದ ಮೇಲೆ ಹೇಗೆ ನೋಡಿ ರಸಾತಳಕ್ಕಿಳಿದು ಹೋಗ್ತಾರೆ? ಅಂತವ್ರ ಸಹವಾಸ ನಮಗ್ಯಾಕೇಂತ, ಅದ್ಕೇ ಇರ್ಬೇಕು, ಅಂಥವ್ರ ಹೆಸ್ರೆಲ್ಲಾ ಮರ್‍ತೇ ಹೋಗುತ್ತೆ...."

'ಆದ್ರೆ ನೋಡು, ಮುರಾರ್ಜಿಯವ್ರ ಕಥೆ ಹಾಗಲ್ಲ. ಅವ್ರು ಅಧಿಕಾರದಲ್ಲಿದ್ರೂ ಇಲ್ಲದಿದ್ರೂ ಒಂದೇ ರೀತಿ..."

"ಏನು?"

"ಅವಳ ನಿಷ್ಠುರವಾದಿ...'

"ಹಾಗಂತದ್ರೆ....?"

"ಹಾಗೇಂದ್ರೆ, ನೋಡು, ಬೇರೆಯವರನ್ನು ತೃಪ್ತಿ ಪಡಿಸೋದಕ್ಕಾಗಿ ಹೊಗಳಿಕೆಯ ಮಾತನ್ನಾಡೋವ್ರಲ್ಲ. ತನಗೆ ಸರಿ ಕಂಡದನ್ನು ಎಲ್ಲೆಂದರಲ್ಲಿ ಕಡ್ಡಿ ಮುರಿದು ಹೇಳಿಯೇ ತೀರುವವ್ರು..."

"ಅದು ಗೊತ್ರಿ. ಅಲ್ಲಾದ್ರೆ ಬೆಂಗಳೂರಲ್ಲಿ ಅವ್ರು ಯಾಕೆ ಹಾಗೆಲ್ಲಾ ಮಾತಾಡ್ತಿದ್ರು?'

'ಮಾತಾಡಿದ್ರಿಂದ ಏನು ತೊಂದ್ರೆಯೋ ಆಯ್ತು?"

'ಆಗೋದೇನು ನೋಡಿ. ಹಿಂದೊಮ್ಮೆ ಅವ್ರು ಅಮೆರಿಕೆಗೆ ಹೋಗಿದ್ದಾಗ, ನೆಹ್ರೂ ಉತ್ತರಾಧಿಕಾರಿಯೆಂತ ಸನ್ಮಾನ ಸಿಕ್ಕಿತಂತೆ. ಆದ್ರೆ ನೆಹ್ರೂ ನಂತರ ಆದ ಘಟನೆಯೇನೂಂತ? ಅವ್ರ ಆ ನಿಷ್ಠುರವಾದದಿಂದ್ಲೇ ಉತ್ತರಾಧಿಕಾರವೂ ಇಲ್ಲ, ಮತ್ತಾವುದೂ ಇಲ್ಲ...'

"ಅವ್ರು ಪಕ್ಷಬಲ ಸಂವರ್ಧನೆಗೆಂದು ದುಡಿಯಲು ಹೊರಟವರು.'

"ಅದೂ ಅವರಿಂದ ಆಗೋದಿಲ್ಲ. ಪಕ್ಷದವ್ರು ಇವ್ರ ಮಾತು ಕೇಳಬೇಕಾದ್ರೆ, ಅವ್ರ ಮಾತನ್ನು ಇವ್ರು ಹೇಳ್ಬೇಕು. ಪ್ರಜಾಸತ್ತೆಯಲ್ಲಿ ನೋಡಿ, ಒಬ್ಬನ ಅಭಿಪ್ರಾಯಕ್ಕೆ ಬೆಲೆಯೆಲ್ಲಿ?'

"ಆದ್ರೂ ನೋಡು, ತನ್ನ ಖಚಿತಾಭಿಪ್ರಾಯವನ್ನು ಧೈರ್ಯದಿಂದ ತಿಳಿಸುವುದೂ ಪ್ರಜಾಸತ್ತೆಯ ಆರೋಗ್ಯಕ್ಕೆ ದಿವ್ಯೌಷಧಿ...."

'ಹೌದ್ರಿ, ಆದ್ರೆ ಹಾಗಿದ್ರೂ ಪಕ್ಷದಲ್ಲಿ ಬಹುಮತದ ತೀರ್ಮಾನದ ಮುಂದೆ ಬಗ್ಗಲೇ ಬೇಕು ನೋಡಿ."

"ಅದನ್ನೇ ನೋದು ಅವ್ರು ಅಂದಿರೋದು. ನಾನೇನೂ ಕಾಂಗ್ರೆಸ್ ಬಿಡೋದಿಲ್ಲ. ಅದು ನನ್ನಿಂದ ದೂರವಾದ್ರೆ ನನ್ನ ಪ್ರಾಣಾನೂ ಹೋಗುತ್ತೆ..."

(ಹದಿಮೂರನೇ ಪುಟ ನೋಡಿರಿ)

ಪುತ್ತೂರು ಪ್ರಿನ್ಸಿಪಾಲ್
ಮುನ್ಸಿಫ್ ಕೋರ್ಟಿನಲ್ಲಿ

R.I A. 880/1965. O.S. 255/1962.

ಅನಂತಮತಿ ಕೂಡಾ — ಅರ್ಜಿದಾರರು (ವಾದಿರು)

ನಾರ್ಣಪ್ಪ ಪೂಜಾರಿ ಕೂಡಾ — ಎದ್ರಿರು (ಪ್ರತಿವಾದಿರು)

4ನೇ ಎದ್ರಿ ದಾಸಪ್ಪ ಪೂಜಾರಿ, ತಿಂಪುಕ್ಕೆ ಚೆಂಗ್ಸಿನ ಮಗ, ಪುತ್ತೂರು ತಾಲ್ಲೂಕು ಕಡಬ ಕಸಬಾ ಗ್ರಾಮದ ಕೇವಳ ಎಂಬಲ್ಲಿರ್ಪವ.

ಸದ್ರಿ 4ನೇ ಎದ್ರಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದ್ರೆ—

ಮೇಲಿನ ವ್ಯವಹರಣೆಯಲ್ಲಿ ನೀವು ಕೂಡಾ 5 ಜನರ ಮೇಲೆ ಅರ್ಜಿದಾರರು ಪಡೆದ ಪ್ರಿಲಿಮಿನರಿ ಡಿಕ್ರಿಗೆ ಅನುಸಾರವಾಗಿ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರರು ದಾಖಲ್ಲು ಮಾಡಿದ ಮೇಲಿನ ಅರ್ಜಿಯು ತಾ. 16-8-1965 ಕ್ಕೆ ಇಟ್ಟಿರುವುದ್ರಿಂದ, ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜರಾಗಿ ಉಜ್ರ ದಾಖಲ್ಲು ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾಗುವುದು.

"ಕೋರ್ಟು ಹುಕುಂ ಪ್ರಕಾರ"

P. A. ARIGA,

Advocate for petitioners (Plff.)

ಪುತ್ತೂರು,

ತಾರೀಕು 30-7-1965.

ಶ್ರೀ ಸ್ವಾಮಿ ಚಿನ್ಮಯಾನಂದ ಮೀಮಾಂಸೆ

ಗೀತಾ-ದ್ವಿತೀಯ ಅಧ್ಯಾಯ

ಸಂಗ್ರಹಕರ್ತೆ
ಶ್ರೀಮತಿ ಆನಂದಿ ಸದಾಶಿವ ರಾವ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ತಸ್ಮಾದ್ಯಸ್ಯ ಮಹಾಬಾಹೋ |
ನಿಗೃಹೀತಾನಿ ಸರ್ವಶಃ |
ಇಂದ್ರಿಯಾಣೀಂದ್ರಿಯಾರ್ಥೇಭ್ಯ |
ಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ||೬೮||

ಆದ್ದರಿಂದ ಶೌರ್ಯವುಳ್ಳ ಆಜಾನುಬಾಹುವೇ ನಿಗ್ರಹದಿಂದ, ಬಾಳ್ವೆ ಸಾಗಿಸು. ಇಂದ್ರಿಯುಗಳನ್ನು ಸಂಯಮದಲ್ಲಿರಿಸಿ ಸ್ಥಿತಪ್ರಜ್ಞನಾಗು.

ಯಾ ನಿಶಾ ಸರ್ವ ಭೂತಾನಾಂ |
ತಸ್ಯಾಂ ಜಾಗರ್ತಿ ಸಂಯಮೀ |
ಯಸ್ಯಾಂ ಜಾಗ್ರತಿ ಭೂತಾನಿ |
ಸಾ ನಿಶಾ ಪಶ್ಯತೋ ಮುನೇಃ ||೬೯||

ಎಲ್ಲಾ ಜೀವಿಗಳಿಗೆ ಕತ್ತಲೆಯಾಗುವಾಗ, ಜ್ಞಾನಿಗೆ ಬೆಳಕು. ಜ್ಞಾನಿಗೆ ಕತ್ತಲೆ ಎನಿಸಿದುದು, ಇತರರಿಗೆ ಬೆಳಕು. ಇದರ ಅರ್ಥ ಏನೆಂದರೆ, ಜ್ಞಾನಿ, ದೇಹ, ಮನ, ಬುದ್ಧಿಯು ಎಲ್ಲೆ ದಾಟಿ ಅನಂತತೆಯ ಅನುಭವ ಪಡೆದವನಿಗೆ, ಇತರ ಎಲ್ಲಾ ಜೀವಿಗಳಿಗೆ, ಕತ್ತಲು ಎಂದರೆ ತಿಳಿಯದೆ ಇದ್ದುದು, ತಿಳಿದು ಅದು ಅವನಿಗೆ ಹಗಲು ಎಂದರೆ ಬೆಳಕು ಎಂದಾಗಿದೆ. ಹಾಗೆ ಅವನಿಗೆ ಇತರ ಜೀವಿಗಳ ಈ ಮೂರು ಮುಟ್ಟಿದ ಅಜ್ಞಾನವು ಕತ್ತಲೆ. ಅವನು ಅದನ್ನು ದಾಟಿ ಹೋಗಿರುವನು. ಅದರಲ್ಲಿ ಆತ ಇರಲಾರ. ಆದರಿಂದ ಇತರರಿಗೆ ತಿಳಿದುದು ಅವನಿಗೆ ತಿಳಿಯದೆ ಇರುವುದು.

ಆಪೂರ್ಯಮಾಣಮಚಲ ಪ್ರತಿಷ್ಠಂ|
ಸಮುದ್ರಮಾಪ ಪ್ರವಿಶಂತಿ ಯದ್ವತ್|
ತದ್ವತ್ ಕಾಮಾಯಂ ಪ್ರವಿಶಂತಿ
ಸರ್ವೇ|
ಸ ಶಾಂತಿ ಮಾಪ್ನೋತಿ
ನಕಾಮ ಕಾಮೀ ||೭೦||

ಎಲ್ಲಾ ನದಿಗಳ ನೀರು ಸಮುದ್ರಕ್ಕೆ ಬಂದು ತಲಪಿದರೂ, ಸಮುದ್ರವು ಏರಿಳಿತಗೊಳ್ಳದೆ ಅಚಲವಾಗಿರುವಂತೆ, ಸ್ಥಿತಪ್ರಜ್ಞನ ಹೃದಯದಲ್ಲಿ ಎಷ್ಟೇ ಆಸೆಗಳು ಬಂದು ಮುತ್ತಿಕ್ಕಿದರೂ ಆವನು ಅವುಗಳಿಂದ ಒಂದಿನಿತು ಏರಿಳಿತ ಹೊಂದಲಾರನು, ಅವನಿಗೆ ಬಯಕೆಗಳ ಬಯಕೆಯಿಲ್ಲ. ಆದರಿಂದ ಅವನು ಸದಾ ತೃಪ್ತನು, ಶಾಂತನು. ಅವನಿಗೆ ಸಂಕಲ್ಪಗಳನ್ನು ಮಾಡುವ ಇಚ್ಛೆಯೇ ಇಲ್ಲ.

ವಿಹಾಯ ಕಾಮಾನ್ಯಃ ಸರ್ವಾನ್ಪು |
ಮಾಂಶ್ಚರತಿ ನಿಃ ಸ್ಪೃಹಃ
ನಿರ್ಮಮೋ ನಿರಹಂಕಾರ: |
ಸ, ಶಾಂತಿ ಮಧಿ ಗಚ್ಛತಿ ||೭೧||

ಆಶೆಗಳನ್ನು ತ್ಯಜಿಸಿದವನು, ಯಾವ ಆಸಕ್ತಿ ಮೋಹ ಇಲ್ಲದವನು. ಯಾರಲ್ಲಿಯೂ ಹೆಚ್ಚಿನ ಆಸಕ್ತಿ ಇಟ್ಟುಕೊಳ್ಳದವನು. ತಾನು ಒಂದು ಕೆಲಸ ಮಾಡುವೆನೆಂಬ ಅಭಿಮಾನ ಇಲ್ಲದವನು; ಖಂಡಿತಾ ಅತಿ ಹೆಚ್ಚಿನ ಶಾಂತಿ ಹೊಂದುವನು.

ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ|
ನೈನಾಂ ಪ್ರಾಪ್ಯ ವಿಮುಹ್ಯತಿ|
ಸ್ಥಿತ್ವಾ ಸ್ಯಾಮಂತ ಕಾಲೇಽಪಿ|
ಬ್ರಹ್ಮ ನಿರ್ವಾಣಮೃಚ್ಛತಿ ||೭೨||.

ಇದೇ ಬ್ರಹ್ಮಸ್ಥಿತಿ ಪಾರ್ಥನೇ. ಇದನ್ನು ದೊರಕಿಸಿಕೊಂಡವನು, ಮುಂದೆ ದೇಹವನ್ನು ಬಿಡುವಾಗ, ಪರಬ್ರಹ್ಮ ಸ್ವರೂಪ ಪಡೆಯುವನು.

ಓಂ ತತ್ಸದಿತಿ ಶ್ರೀ ಮದ್ಭಗವದ್ಗಿತಾ ಸೂಪನಿಷಸ್ತು ಬಹ್ಮ ವಿದ್ಯಾಯಾಂ ಯೋಗ ಶಾಸ್ತ್ರೇ ಶ್ರೀ ಕೃಷ್ಣಾರ್ಜುನ ಸಂವಾದೇ ಸಾಂಖ್ಯಯೋಗೋ ನಾಮ.

ಈ ಅಧ್ಯಾಯದಲ್ಲಿ ಹೇಳಿದುದು ಸತ್ಯ. ಗೀತೆ ಎಂಬ ಉಪನಿಷತ್ತು ಬ್ರಹ್ಮವಿದ್ಯೆಯನ್ನು ತಿಳಿಸುವ ಶಾಸ್ತ್ರವು. ಅದನ್ನು ಪಡೆಯುವ ಸಾಧನೆ (ಯೋಗ) ವಿವರಿಸುವ ಶ್ರೀ ಕೃಷ್ಣ ಅರ್ಜುನ ಸಂವಾದ ರೂಪದಲ್ಲಿರುವ ಸಾಂಖ್ಯಯೋಗ ಎಂಬ ಹೆಸರುಳ್ಳ ಎರಡನೆ ಅಧ್ಯಾಯವು ಸಮಾಪ್ತಿ.

ಯುಜ್ಞ ಶ್ಲೋಕ.

ಅನನ್ಯಾಶ್ಚಿಂತ ಯಂತೋ ಮಾಂ |
ಯೇ ಜನಾಃ ಪರ್ಯು ಪಾಸತೇ |
ತೇಷಾಂ ನಿತ್ಯಾಭಿಯುಕ್ತಾನಾಂ |
ಯೋಗ ಕ್ಷೇಮಂ ವಹಾಮ್ಯಹಮ್
||೯-೨೨||

ಶ್ರೀಕೃಷ್ಣನ, ಮಾನವರಿಗೆ ಈ ಮೂರು ಕೆಲಸಗಳನ್ನು ಮಾಡಿದರೆ, ನಾನು ನಿಮ್ಮ ಎಲ್ಲಾ ಯೋಗವನ್ನು ಎಂದರೆ, ಇಚ್ಛಿಸಿದ ಕಾಮನೆಗಳ ನಡೆಸುವಿಕೆ ಮತ್ತು ಕ್ಷೇಮ ಎಂದರೆ ಗಳಿಸಿದ ವಸ್ತುಗಳನ್ನು ಇರಿಸಿಕೊಳ್ಳುವ ಹೊಣೆಯನ್ನು ತಾನು ವಹಿಸಿಕೊಳ್ಳುವೆನೆಂದು ಆಶ್ವಾಸನೆ ಇತ್ತಿರುವನು. ಆ ಮೂರು ಕೆಲಸಗಳಲ್ಲಿ ಒಂದನೆಯದು, ಒಂದು ಗುರಿ ಅಥವಾ ಆದರ್ಶವನ್ನು ಮುಂದೆ ಇರಿಸಿಕೊಳ್ಳುವುದು. ಎರಡನೆಯದು ಇದಕ್ಕೆ ತಕ್ಕದಾಗಿ ಮಾನಸಿಕ ಭಾವನೆಗಳನ್ನು ಕೆಲಸಗಳನ್ನು ಮಾಡುತ್ತಾ ತನ್ನಿಂದಾಷ್ಟು ಪ್ರಯತ್ನ ಮಾಡುತ್ತಾ ಇರುವುದು. ಹಾಗೆ ಪ್ರಯತ್ನ ಮಾಡಿ, ತನ್ನ ಸರ್ವ ಶಕ್ತಿಯನ್ನು ಆ ಗುರಿ ತಲಪಲು ದಿನನಿತ್ಯ ವ್ಯಯಿಸುತ್ತಾ ಇದ್ದಾಗ, ಒಂದೇ ಒಂದು ಬಾರಿ ಆ ಹಾದಿಯಿಂದ ತಪ್ಪದೆ ಯಾವ ಇತರ ಆಕರ್ಷಣೆಗಳಿಗೆ ಬಲಿಬೀಳದೆ ದಾರಿಗೆಡದೆ, ಒಂದೇ ಸವನೆ ಕೆಲಸ ಮಾಡುವುದು. ಹೀಗೆ ಒಬ್ಬನು ಮಾಡಿದರೆ, ಆಧ್ಯಾತ್ಮಿಕ ರಂಗದಲ್ಲಾಗಲೀ, ಪ್ರಾಪಂಚಿಕ ರಂಗದಲ್ಲಾಗಲೀ, ಅವನು ಇಚ್ಛಿಸಿದ ಗುರಿಯನ್ನು ಮತ್ತು ಗುರಿ ತಲಪಿದ ಬಳಿಕ ಅದನ್ನು ಆತ ಇರಿಸಿಕೊಳ್ಳುವಂತೆ ಮಾಡುವ ಹೊಣೆ ದೇವರು ವಹಿಸಿಕೊಂಡಿರುವನು.

ಸರ್ವ ಧರ್ಮಾ ನ್ಪರಿ ತ್ಯಜ್ಯ |
ಮಾಮೇಕಂ ಶರಣಂ ವ್ರಜ |

(ಹನ್ನೆರಡನೇ ಪುಟ ನೋಡಿರಿ)

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೆ
ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧

8% ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

			ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	....	5½
6 ತಿಂಗಳಿಂದ	12 ತಿಂಗಳ ಕೆಳಗೆ	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	6½
24 ತಿಂಗಳಿಂದ	36 ತಿಂಗಳ ಕೆಳಗೆ	....	6¾
36 ತಿಂಗಳಿಂದ	48 ತಿಂಗಳ ಕೆಳಗೆ	....	7
48 ತಿಂಗಳಿಂದ	60 ತಿಂಗಳ ಕೆಳಗೆ	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	7½
84 ತಿಂಗಳಿಂದ	120 ತಿಂಗಳ ಕೆಳಗೆ	....	8
ಸೇವಿಂಗ್ಸ್ ಖಾತೆಯ ಮೇಲೆ		... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

ಆಗಸ್ಟ್ 15

ನವಯುಗ
ಸ್ವಾತಂತ್ರ್ಯ ವಿಶೇಷ ಸಂಚಿಕೆ

ಕರ್ನಾಟಕದ ಪ್ರಸಿದ್ಧ ಲೇಖಕರನೇಕರ ವಿಚಾರಪರ ಲೇಖನ, ಕವನ, ವಿಡಂಬನೆ ಮೊದಲಾದುವುಗಳಿಂದ ಕೂಡಿ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.

ಅಖಿಲ ಕರ್ನಾಟಕದಲ್ಲೂ ಬೊಂಬಾಯಿ, ಮದರಾಸು ಮೊದಲಾದ ಹೊರರಾಜ್ಯ ಹಾಗೂ ವಿದೇಶದಲ್ಲೂ ಪ್ರಚಾರದಲ್ಲಿರುವ 'ನವಯುಗ'ವು ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ವಿಶೇಷ ಸಂಚಿಕೆಯ ಜಾಹೀರಾತು ದರ:—
ಪುಟಕ್ಕೆ ರೂ. 200/-, ಅರ್ಧ ಪುಟಕ್ಕೆ ರೂ. 100/-,
ಕಾಲು ಪುಟಕ್ಕೆ ರೂ 50/-.

ಹೆಚ್ಚಿನ ಮಾಹಿತಿಗೆ ಬರೆಯಿರಿ:—
ಮೆನೇಜರ್, ನವಯುಗ, ಉಡುಪಿ.

ಕದನ ವಿರಾಮರೇಖೆಯಿಂದಾದ ಕಸಿವಿಸಿ

ಬರೆದವರು: ಶ್ರೀ ಶಿವರಂಕರ.

ಸುಮಾರು ಒಂದು ತಿಂಗಳಿನಿಂದ ಎಲ್ಲಿ ಕೇಳಿದರೂ ಕಚ್ಛ್ ಕದನ ವಿರಾಮ ರೇಖೆಯ ಕುರಿತಾದ ಮಾತುಕತೆಗಳೇ ಕೇಳಿ ಬರುತ್ತಿವೆ. ಪಾಕ್-ಭಾರತ ಒಪ್ಪಂದಕ್ಕೆ ಸಹಿ ಹಾಕುತ್ತಿದ್ದಂತೆ ಭಾರತೀಯ ಜನಸಂಘದವರದನ್ನೆದುರಿಸಲು ಆರಂಭಿಸಿದ್ದರು. ಪ್ರಜಾಸಮಾಜವಾದಿ ಪಕ್ಷ ಹಾಗೂ ಸಂಯುಕ್ತ ಸಮಾಜವಾದಿ ಪಕ್ಷಗಳು ಜನಸಂಘವನ್ನು ಅನುಸರಿಸಿದುವು. ಕಮ್ಯೂನಿಸ್ಟ್ ಪಕ್ಷಗಳು ಹಾಗೂ ಸ್ವತಂತ್ರ ಪಾರ್ಟಿಗೆ ಎತ್ತ ಕೊಡೆ ಹಿಡಿಯಬೇಕೆಂದು ಆರಂಭದಲ್ಲಿ ಗೊತ್ತಾಗಲಿಲ್ಲ. ಅದರಲ್ಲಿ ಕಮ್ಯೂನಿಸ್ಟ್ ಪಕ್ಷಗಳು ಬಹಳ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದ್ದುವು. ಅದನ್ನೇ ಬ್ಲಿಟ್ಝ್ ಹಾಗೂ ಸ್ಟ್ಯಾಪಣ್ ಮುಂತಾದ ಪೀರ ಹಾಗೂ ಕೆಂಪು ಪತ್ರಿಕೆಗಳು ಹೊರಗೆಡಹಿದ್ದುವು. ಪಾಕಿಸ್ತಾನದೊಂದಿಗೆ ಚೈನಾ ಚೆಲ್ಲಾಟವಾಡುತ್ತಿರುವದರಿಂದ ಆ ಒಪ್ಪಂದವನ್ನೆದುರಿಸಿದಲ್ಲಿ ಚೈನಾ-ಕೈಕೋಪ ಒಂದೀತೆನ್ನುವದು ಚೈನೀ ಚೇಲಾಗಳಿಗೆ ಮೌನ ವೇಷದ ಕಾರಣ. ಹಾಗೆನೇ ರಷ್ಯಾದ ಬಾಲಗಳಿಗೂ ಬೆದರಿಕೆ ಆದಾಗಲೇ ರಷ್ಯಾವು ಭಾರತದ ಪ್ರಧಾನಿ ಶ್ರೀ ಲಾಲಬಹದೂರಶಾಸ್ತ್ರೀಜೀಯವರ ಸಂಧಾನ ಚಾಣಕ್ಯತೆಯ ಮೇಲೆ ಪ್ರಶಂಸಾ ಪತ್ರ ಕೊಟ್ಟಿತ್ತು. ಹಾಗಿರುವಾಗ ಇಲ್ಲಿರುವ ಅವರ ಬಾಲ ಅಲುಗಾಡಲು ಸಾಧ್ಯವೇನು? ಆದರೆ ಈ ಎರಡು ಪಂಗಡಗಳಿಗೂ ಅಮೇರಿಕವು ಬಂಡವಲಶಾಹಿ ರಾಷ್ಟ್ರವಿದೆ ಹಾಗೂ ಸಮಾನ ಶತ್ರುವಿದೆ. ಪಾಕಿಸ್ತಾನದ ಒಂದು ಕೈ ಅಮೇರಿಕದೊಂದಿಗಿರುವದರಿಂದ ಮಾತ್ರ ಈ ಒಪ್ಪಂದದಲ್ಲಿ ಅದರ ಕೈವಾಡವೂ ಇರುವದರಿಂದ ಕಮ್ಯೂನಿಸ್ಟರಿಗೆ ಅದು ನುಂಗಲಾರದ ತುತ್ತಾಯಿತು. ಆದುದರಿಂದಲೇ ಕಮ್ಯೂನಿಸ್ಟರ ಹಾಗೂ ಅವರ ಸಹಚರರ ಪತ್ರಿಕೆಗಳು ಒಂದೇ ಸಂಚಿಕೆಯಲ್ಲೇ ಹಾದ್ಯಾತದ್ಯಾ ಬರೆದಿದ್ದುವು. ಇನ್ನು ಸ್ವತಂತ್ರ ಪಾರ್ಟಿಯ ಸಂಕಟವೂ ಅನೇ. ಅಮೇರಿಕ ಹಾಗೂ ಬ್ರಿಟನಿಗಾಗಿ ಇಲ್ಲಿ ಕೆಲಸ ಮಾಡುತ್ತಿರುವ ದಲ್ಲಾಳಿಗಳಂತೆ ವರ್ತಿಸುತ್ತಿದ್ದಾರೆ. ಸ್ವತಂತ್ರ ಪಾರ್ಟಿಯ ಮುಂದಾಳುಗಳು-ಅದರಲ್ಲೂ ಮುಖ್ಯವಾಗಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು, ಅದೇ ಪಕ್ಷದ ಅನೇಕ ಪ್ರಮುಖರು ತಮಗಿಷ್ಟ ಬಂದಂತೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಗುಜರಾಥಿನ ಸ್ವತಂತ್ರ ಪಾರ್ಟಿಯು ಒಪ್ಪಂದವನ್ನು ವಿರೋಧಿಸುತ್ತಿದೆ. ಎಲ್ಲಿಲ್ಲದ ಪ್ರಾಣ ಸಂಕಟ ಕಾಂಗ್ರೆಸ್ಸಿಗರಿಗೆ— ಅದನ್ನೆದುರಿಸಲೇ, ಬಿಡಲೇ? ಗುಜರಾಥಿನ ಕಾಂಗ್ರೆಸ್ಸ್ ಅದನ್ನು ಸಹಿಸಿಕೊಳ್ಳಲು ಸಿದ್ಧವಿಲ್ಲ. ಅದನ್ನೇ ಶ್ರೀ ಮುರಾರ್ಜಿ ದೇಸಾಯಿಯವರ ಮಾತುಗಳಲ್ಲಿ ಕಾಣಬಹುದು. ಶ್ರೀ ಮುರಾರ್ಜಿ ದೇಸಾಯಿಯವರಲ್ಲದೆ ಶ್ರೀ ಕೃಷ್ಣ ಮೆನನ್, ಶ್ರೀ ರಾಮಸುಭಾಗ ಸಿಂಘ ಮುಂತಾದವರೂ ಒಪ್ಪಂದವನ್ನು ವಿರೋಧಿಸಿದ್ದಾರೆ. ಅದಕ್ಕಿಂತಲೂ ಆಶ್ಚರ್ಯಕರ ಸಂಗತಿಯೆಂದರೆ ಸರಕಾರದ ಮೇಲೆ ಅಪನಂಬಿಕೆಯ ತೀರ್ಮಾನವನ್ನು ತರುವದಿದೆ. ಪ್ರ. ಸ. ಪಾ.ದವರು ಆದಾಗಲೇ ತಮ್ಮ ಅಭಿಪ್ರಾಯವನ್ನು ಪ್ರಕಟಪಡಿಸಿರುವರು. ಕಾಂಗ್ರೆಸ್ಸಿಗರೂ ಕಾಂಗ್ರೆಸ್ಸ್ ಸರಕಾರಕ್ಕೆ ಎಚ್ಚರಿಕೆ ಕೊಡಲು ಸೆಟೆದು ನಿಂತಿದ್ದಾರೆ. ಅಷ್ಟೇ ಅಲ್ಲ, ಮಂತ್ರಿ ಮಾಗಧರು ಹೋದಲ್ಲೆಲ್ಲಾ ಕಪ್ಪು ಬಟ್ಟೆಯ ಸ್ವಾಗತವನ್ನು ಸ್ವೀಕರಿಸಬೇಕಾಗಿ ಬಂದಿದೆ. ಅದಕ್ಕೆ ರಾಷ್ಟ್ರಾಧ್ಯಕ್ಷ ಹಾಗೂ ಪ್ರಧಾನಿಯವರೂ ಅಪವಾದವಲ್ಲ. ಸಂಸದ್ ಸದಸ್ಯರೂ ಸಂಕಟದಲ್ಲಿ ಸಿಲುಕಿಕೊಳ್ಳಬೇಕಾಗಿರುತ್ತದೆ. ಎಲ್ಲಾ ಸಂಸದ್ ಸದಸ್ಯರನ್ನು ಕಂಡು ತಮ್ಮ ಅಭಿಪ್ರಾಯವನ್ನು ತಿಳಿಸಲು ಭಾರತೀಯ ಜನಸಂಘವು ಕಳೆದ ದಿನಾಂಕ ೩೧ರಿಂದ ಆರಂಭಿಸಿರುತ್ತದೆ.

ಇಷ್ಟೆಲ್ಲಾ ಕಸಿವಿಸಿಗೇನು ಕಾರಣ? ಆ ಒಪ್ಪಂದದಲ್ಲಿ ಅಂತಹ ರಾಷ್ಟ್ರಹಿತಕ್ಕೆ ವಿರೋಧವಾಗಿರುವ ವಿಷಯವೇನಿದೆ? ರಾಷ್ಟ್ರದ ಹಿತಕ್ಕೆ ಧಕ್ಕೆ ಬರುವ ವಿಷಯಗಳಿದ್ದಲ್ಲಿ ರಾಷ್ಟ್ರದ ಪ್ರಧಾನಿಯವರು ಒಪ್ಪುತ್ತಿದ್ದರೇ? ಹಾಗೇನಿಲ್ಲವಾದಲ್ಲಿ ಕಾಂಗ್ರೆಸ್ ಸಹಿತ ಮತ್ತು ಕಮ್ಯೂನಿಸ್ಟ್ ಹಾಗೂ ಸ್ವಾತಂತ್ರ ಪಾರ್ಟಿಗಳವರೂ ಅದನ್ನು ವಿರೋಧಿಸಲು ಕಾರಣವೇನು?

ಜೂನ್ ದಿನಾಂಕ ಮೂವತ್ತರ ಅವೇಳೆಯಲ್ಲಿ ನಿಶ್ಚಿತ ಸಮಯ ಸಂದ ಮೇಲೆ ಪಾಕ್ ಭಾರತದ ಪ್ರತಿನಿಧಿಗಳು ನವದೆಹಲಿಯಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು. ಆರಂಭದಲ್ಲಿ ಕಂಡು ಬಂದ ಅಪಶಕುನವದು. ಹೊಲಿಮನೆಯಲ್ಲೇ ಸಂಧಾನ ಶಿಶುವು ಸತ್ತು ಹೋಯಿತೋ ಎನ್ನುವ ಸಂದೇಹಕ್ಕೆ ಆ ಹದಿನೈದು ನಿಮಿಷಗಳು ಎಡೆ ಮಾಡಿಕೊಟ್ಟಿದ್ದುವು. ಅಂತೂ ಅಂದು ಸಹಿ ಹಾಕಲಾಯಿತು.

ವಿರಸಗೊಂಡಿರುವ ಎರಡು ರಾಷ್ಟ್ರಗಳ ನಡುವೆ ಯಾರಾದರೂ ಒಪ್ಪಂದದ ದೀಪ ಉರಿಸುವರಾದಲ್ಲಿ ಆ ಎರಡು ರಾಷ್ಟ್ರಗಳು ಅದನ್ನು ನಂದಿಸಲು ಗಾಳಿ ಊದಲಾರವೆನ್ನುವದು ಶ್ರೀ ಸಾಮಾನ್ಯನ ಅಭಿಪ್ರಾಯ. ಆದರೆ ಅಂದು ನಡೆದುದು ಏನು? ಕಚ್ಛ್ ಪ್ರದೇಶದಲ್ಲಿ ಕದನ ಇಲ್ಲದಿದ್ದಿರಬಹುದು, ಆದರೆ ಪೂರ್ವ ದಿಕ್ಕಿನಲ್ಲಿ?— ಪಾಕಿಸ್ಥಾನವು ತನ್ನ ಪ್ರೇತ ಕುಕೃತ್ಯಗಳಿಂದ ಭಾರತೀಯರ ರಕ್ತ ಹರಿಸುತ್ತಿರಲಿಲ್ಲವೇನು? ಇದು ಶಾಂತಿ ಪ್ರಿಯರ ಲಕ್ಷಣವೇನು? ವಾತಾವರಣ ಹಾಗಿದ್ದರೂ, ಅಮೇರಿಕ ಹಾಗೂ ಚೈನಾದ ನೆರವಿನಿಂದ ಗಿಟ್ಟಿಸಿಕೊಂಡಿರುವ ಪಾಕಿಸ್ತಾನಿಗಳ ಆಯುಧಗಳ ಶಬ್ದ ಭೋರ್ಗರೆಯುತ್ತಿತ್ತು; ಅದರ ಗುಡುಗಾಟ ಕೇಳಿ ಬರುತ್ತಿತ್ತು. ಭಾರತೀಯರ ಮೈಯ್ಯಿಂದ ರಕ್ತದ ಮಳೆ ಸುರಿಯುತ್ತಿತ್ತು! ಅಂತಹ ವಾತಾವರಣದಲ್ಲಿ ಶಾಂತಿ-ಸಂಧಾನಗಳ ಒಪ್ಪಂದದ ಕಾಗದಕ್ಕೆ ಸಹಿ ಬಿತ್ತು.

"ಕಚ್ಛ್ ಕದನ ವಿರಾಮ ಒಪ್ಪಂದವು ಮುಖ್ಯವಾಗಿ ಗುಜರಾಥ—ಪಶ್ಚಿಮ ಪಾಕಿಸ್ಥಾನಗಳ ಗಡಿಗೆ ಮಾತ್ರ ಸಂಬಂಧಿಸಿದ್ದಾದರೂ ಪೂರ್ಣ ಭಾರತ-ಪಾಕಿಸ್ಥಾನಗಳ ನಡುವೆ ಇಂದಿರುವ ಗಡಿ ತಂಟೆಯು ಶಮನವಾದೀತೆಂಬ ಆಶೆ ಹಾಗೂ ಧೈರ್ಯದ ಬೀಜವೂ ಇದೆ. ಇತ್ತಂಡದವರೂ ೧೯೬೫ ಜನವರಿ ಒಂದನೇ ತೇದಿಯಂದು ಯಾವ ತಾಣದಲ್ಲಿದ್ದರೋ ಅಲ್ಲಿಗೆ ತಕ್ಷಣ ಮರಳಬೇಕು. ಇತ್ತಂಡದವರೂ ಹಿಂದಿನ ತಾಣಕ್ಕೆ ಮರಳಿದ ಮೇಲೆ ಗಡಿ ನಿಶ್ಚಯಿಸುವ ಹಾಗೂ ಗುರುತಿಸುವ ಕಾರ್ಯವನ್ನು ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಎರಡೂ ಸರಕಾರಗಳು ಮಾಡಬೇಕಾಗಿರುವ ಕಾರ್ಯಗಳು ಕೆಲವಿವೆ.

ಸಾವಿರದೊಂಭೈನೂರ ಅರುವತ್ತೈದು ಜುಲೈ ಒಂದನೇ ತಾರೀಕಿನ ಆರಂಭದಿಂದಲೇ ಕದನ ವಿರಾಮವನ್ನು ಅಮಲಿಗೆ ತರಬೇಕು.

ಕದನ ವಿರಾಮವನ್ನು ಒಪ್ಪಿಕೊಂಡ ಮೇಲೆ (೧) ಇಬ್ಬದಿಗಳಲ್ಲಿರುವ ಪಡೆಗಳೂ ಒಡನೆ ಹಿಂತಿರುಗಲಾರಂಭಿಸುವವು (೨) ಈ ಕಾರ್ಯ ಏಳು ದಿನಗಳೊಳಗೆ ಮುಗಿಯಬೇಕು (೩) ಆ ಮೇಲೆ, ಛಾಡ ಬೆಟ್ಟದಲ್ಲಿ ಭಾರತೀಯ ಪೋಲಿಸ್ ಪಡೆಯು ಹೋಗಿ ಪುನರ್ ನೆಲಸಬಹುದು. ಆದರೆ ಅದರ ಸಂಖ್ಯೆ ೧೯೬೪ರ ದಶಂಬರ ಮೂವತ್ತೊಂದರಂದು ಇದ್ದುದಕ್ಕಿಂತ ಅಧಿಕವಾಗಿರಬಾರದು (೪) ಭಾರತೀಯ ಹಾಗೂ ಪಾಕಿಸ್ಥಾನಿ ಪೋಲಿಸ್ ಪಡೆಗಳು ೧೯೬೫ ಜನವರಿ ಒಂದನೇ ದಿನಾಂಕದಂದು ಯಾವ ಪ್ರದೇಶದಲ್ಲಿ ಕಾಯುತ್ತಿದ್ದವೋ ಆ ಪ್ರದೇಶಗಳಲ್ಲಿ ಪಹರೆ ನಡೆಸಬಹುದು. ಆದರೆ ಸಂಖ್ಯೆ ಹಿಂದೆ ಇದ್ದದ್ದಕ್ಕಿಂತ ಅಧಿಕಗೊಳಿಸಬಾರದು ಅಲ್ಲದೆ ತೀವ್ರತೆಯನ್ನು ಜಾಸ್ತಿ ಮಾಡಬಾರದು ಮತ್ತು ಕಳೆದ ಮಳೆಗಾಲದ ಸಮಯ ಇದ್ದದ್ದಕ್ಕಿಂತ ಅಧಿಕ ಮಂದಿ ಈ ಮಳೆಗಾಲದಲ್ಲಿ ಅಲ್ಲಿ ಇರಬಾರದು. (೫) ಭಾರತದ ಹಾಗೂ ಪಾಕಿಸ್ತಾನದ ಪಹರೆ ಪಡೆಗಳು ಭೇಟಿಯಾದಾಗ ಅವರು ಜಗಳಕಾಡಿಕೊಳ್ಳಬಾರದು. ಅದರ ಬದಲು ೧೯೬೦ ಜನವರಿಯಲ್ಲಿ ನಡೆದಿರುವ ಒಪ್ಪಂದದಂತೆ ವರ್ತಿಸಬೇಕು. (೬) ಕದನ ವಿರಾಮ ಜಾರಿಗೆ ಬಂದ ಮೇಲೆ ಇತ್ತಂಡದ ಅಧಿಕಾರಿಗಳು ಆಗಾಗ ಕಲೆತು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು.

ಕಚ್ ಪ್ರದೇಶದಲ್ಲಿ ಗಡಿ ವಿವಾದವೇ ಇಲ್ಲವೆಂದು ಭಾರತ ಸರಕಾರ ಹೇಳುತ್ತಿ

(ಹನ್ನೊಂದನೇ ಪುಟ ನೋಡಿರಿ)

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.

ನಮ್ಮ ವೈಶಿಷ್ಟ್ಯಗಳು:

● ಶಾಸ್ತ್ರೀಯ ನೇತ್ರಪರೀಕ್ಷೆ— ಲಂಡನ್ನಿನಲ್ಲಿ ನೇತ್ರ ಪರೀಕ್ಷೆಯ ಪದವಿ ಪಡೆದವರಿಂದ

● ಮೊಳ್ಳುದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು

● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ವಿಚಾರ ವೀಚಿ

ದಿಲ್ಲಿಯಲ್ಲಿ ಗೋವಾ ನಾಟಕ

ಎ ಐ ಸಿ ಸಿಯ ಅಧಿವೇಶನ ಬೆಂಗಳೂರಲ್ಲಿ ನಡೆಯಿತು. ಪೋಲೀಸರ ಭದ್ರರಕ್ಷೆಯಲ್ಲಿ. ನಗರ ಮಾತ್ರವಲ್ಲ ಮತ್ತೆಕಡೆಯ ಕನ್ನಡಿಗರು ಕಾಂಗ್ರೆಸ್ ನಾಯಕರಿಗೆ ಕರಿಪತಾಕೆ ತೋರಿಸಿದರು, ಕಾರುಗಳಿಗೆ ಕಲ್ಲು ತೂರಿದರು, ಗುಲ್ಲೆಬ್ಬಿಸಿದರು. ಪುಂಡಾಟಿಕೆಯು ಬರಿಯ ಮರಾಠಿಗಳ ಜನ್ಮಸಿದ್ಧ ಹಕ್ಕಲ್ಲ ಎಂದು ಕೊಂಡು ತಾವೂ ಅದರಲ್ಲಿ ಪಾಲುಗೊಂಡರು. ನಾಮಕ್ಕೆ ಬಗ್ಗುವ ಪರಿವಾರ ಕರ್ನಾಟಕ ಸರಕಾರಕ್ಕೂ ಇಲ್ಲ; ಕೇಂದ್ರಕ್ಕೂ ಇಲ್ಲ. ಆದುದರಿಂದಲೇ ಬೆಂಗಳೂರಿನ ಚಟುವಟಿಕೆಗಳನ್ನು ನೋಡಿದ ಬಳಿಕ ಗೋವೆಯ ಭವಿಷ್ಯ ನಿರ್ಣಯವನ್ನು ಕೆಲವು ದಿನ ಮುಂದೂಡಿದರು. ಇದು ಕನ್ನಡಿಗರ ವಾದಕ್ಕೆ ಸಿಕ್ಕ ವಿಜಯವಲ್ಲ, ಗೋಮಾಂತಕರ ಅಭಿಪ್ರಾಯದ ಮನ್ನಣೆಯೂ ಅಲ್ಲ. ಎದ್ದಿರುವ ಎಲ್ಲ—ವಿರೋಧಿ ಪ್ರತಿಕ್ರಿಯೆಗಳ ತಾತ್ಕಾಲಿಕ ಪರಿಣಾಮ ಮಾತ್ರ.

ಇದೇ ತಿಂಗಳ ೬ ಮತ್ತು ಏಳನೆಯ ದಿನಗಳಲ್ಲಿ ನವದೆಹಲಿಯಲ್ಲೊಂದು ಚಿಕ್ಕ ಸಮಾಲೋಚನಾ ಸಭೆ ನಡೆಯಲಿದೆ. ಕರ್ನಾಟಕದ ಮುಖ್ಯಮಂತ್ರಿ ನಿಜಲಿಂಗಪ್ಪನವರೂ ಪ್ರಧಾನಿ ಶಾಸ್ತ್ರಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಕಾಮರಾಜರೂ ಇದರಲ್ಲಿ ಭಾಗವಹಿಸುವರು. ವಿಷಯ, ಗೋವೆಯ ಬಗ್ಗೆ ಕರ್ನಾಟಕದ ವಾದವನ್ನು ಕೂಲಂಕಷವಾಗಿ ಕೇಳುವುದು. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸದಸ್ಯರಾದ ಶಾಸ್ತ್ರಿ ಮತ್ತು ಕಾಮರಾಜರಿಗೆ ಈ ಮಾತುಕತೆಯ ನಂತರ ಗೋವೆಯ ಬಗ್ಗೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ನಿರ್ಧರಿಸಲು ಅನುಕೂಲವಾಗಬಹುದೆಂದು ವಿಶ್ವಾಸ, ಟೊಳ್ಳು.

ಶಾಸ್ತ್ರಿಯವರು ಈ ಬಗೆಯ ನಿಲುವೆಯನ್ನು ಏಕೆ ತಳೆದರು? ಕರ್ನಾಟಕ ಮತ್ತು ಗೋವೆಯ ಕಾಂಗ್ರೆಸಿಗರು, ಸಂಯುಕ್ತ ಗೋಮಾಂತಕ ಪಕ್ಷದ ಪ್ರತಿನಿಧಿಗಳು ಗೋವೆಯಲ್ಲಿ ಚುನಾವಣೆ ನಡೆಯಲೇಬೇಕಾದಂತಹ ಗಂಭೀರ ಪರಿಸ್ಥಿತಿಯೇನೂ ಉದ್ಭವಿಸಿಲ್ಲವೆಂಬ ಸತ್ಯವನ್ನು ಕಾಂಗ್ರೆಸ್ ಹೈಕಮಾಂಡಿನ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟರು. ಅಲ್ಲಿ ಸದ್ಯಕ್ಕಿರುವ ಪರಿಸ್ಥಿತಿಯಲ್ಲಿಯೇ ಚುನಾವಣೆಗಳನ್ನು ನಡೆಸಿದರೆ, ಜನತೆಯ ಮನದಾಶಯವು ಹೊರ ಪಡುವುದು ಸಾಧ್ಯವಿಲ್ಲವೆಂದೂ ಅರ್ಹ ನಾಗರಿಕರೆಲ್ಲರಿಗೂ ಮತಾಧಿಕಾರ ದೊರೆಯುವಂತೆ ಮತದಾರರ ಯಾದಿಯನ್ನು ಪುನರ್ಪರಿಶೀಲಿಸಿ ಆ ಮೇಲೆ ಬೇಕಾದರೆ ಚುನಾವಣೆ ನಡೆಸಬಹುದೆಂದೂ ಅವರು ಸೂಚಿಸಿದರು. ಅಷ್ಟು ಮಾತ್ರವಲ್ಲದೆ, ಗೋವೆಯ ಆಡಳಿತೆಯಲ್ಲಿ ತುಂಬಿರುವ ಮಹಾರಾಷ್ಟ್ರೀಯ ಅಧಿಕಾರಿಗಳನ್ನು ಹಿಂತೆಗೆದುಕೊಳ್ಳಬೇಕು, ಚುನಾವಣೆಗೆ ಸೂಕ್ತ ವಾತಾವರಣವನ್ನು ನಿರ್ಮಿಸಲು ಅನುಕೂಲವಾಗುವಂತೆ ಅಲ್ಲಿನ ಮಂತ್ರಿ ಮಂಡಲವು ರಾಜಿನಾಮೆ ಕೊಡಬೇಕು:- ಹೀಗಾದಲ್ಲಿ ನಿಷ್ಪಕ್ಷಪಾತತನದಿಂದ ಅಲ್ಲಿ ಚುನಾವಣೆಗಳು ನಡೆಯುವುದು ಸಾಧ್ಯವಾದೀತು ಎಂಬುದು ಇವರೆಲ್ಲರ ಅಭಿಪ್ರಾಯ.

ಮಹಾರಾಷ್ಟ್ರದ ಮುಖ್ಯಮಂತ್ರಿ ವಿ. ಪಿ. ನಾಯಕರು ಕರ್ನಾಟಕದ ಮುಖ್ಯಮಂತ್ರಿ ನಿಜಲಿಂಗಪ್ಪನವರ ಮೇಲೆ ಆರೋಪ ಹೊರಿಸಿದ್ದಾರೆ. ಗೋವೆಯ ವಿಲೀನತೆಯ ಸಂಬಂಧದಲ್ಲಿ ಚುನಾವಣೆ ನಡೆಸಲು ನಿಜಲಿಂಗಪ್ಪನವರು ಮೊದಲಿಗೆ ಒಪ್ಪಿದ್ದಾರಂತೆ. ಹಾಗಿರುವಾಗ ಈಗ ಅದರಿಂದ ಕಾಲು ಕೀಳುವುದು ಅನ್ಯಾಯವಲ್ಲವೆ? ಎನ್ನುತ್ತಾರೆ ನಾಯಕರು. ನಿಜಲಿಂಗಪ್ಪನವರ ವಾದ ವೈಖರಿಯೇ ಬೇರೆ: ಗೋವೆಯಲ್ಲಿ ಯಥಾ ಸ್ಥಿತಿಯನ್ನು ಉಳಿಸಿಕೊಂಡು ಬರಬೇಕು. ಅಗತ್ಯವೆನಿಸಿದಾಗ ಚುನಾವಣೆಗಳ ಮೂಲಕ ಗೋಮಾಂತಕರ ಅಭಿಲಾಷೆಯನ್ನು ಅರಿತುಕೊಳ್ಳಬೇಕು. ಅಂದರೆ ತಾನು ಒಪ್ಪಿದ ಚುನಾವಣೆಗಳು ಈಗಲೇ ನಡೆಯಬೇಕೆಂದು ಅರ್ಥವಲ್ಲ. ನಾಯಕರು ಕೇಳಬಹುದು 'ಈಗಲೇ ಯಾಕಾಗಬಾರದು?' ಅದಕ್ಕೆ ನಮ್ಮ ಉತ್ತರವಿಷ್ಟೆ ಯಥಾಸ್ಥಿತಿಯು ಹತ್ತು ವರ್ಷಗಳ ಅವಧಿ ಮುಂದುವರಿಯಬೇಕು, ಚುನಾವಣೆಯ ಸಂಗತಿ ಅನಂತರ ಮಾತ್ರ ಏಳುವದು ಅದುವರೆಗೆ ಬಾಯಿ ಬಡಕತನ ಮಾಡಬೇಡಿ.

ಬರಿಯ ಗುಲ್ಲೆಬ್ಬಿಸಿಯೇ ಕನ್ನಡಿಗರು ತೃಪ್ತರಾಗಲಿಲ್ಲ ಈ ಬಾರಿ. ತಮ್ಮ ಸಹನೆಯಿಂದ ಯಾವ ಕಾರ್ಯವೂ ಸಾಧಿತವಾಗದೆಂಬುದನ್ನು ಅವರು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ. ಕೇಂದ್ರ—ಮಹಾರಾಷ್ಟ್ರ ಸರಕಾರಗಳ ಗೋವಾ ನಿಲುವೆಯನ್ನು ಎದುರಿಸಲು ಕನ್ನಡಿಗರಿಂದು ಮುಂದಾಗಿದ್ದಾರೆ. ಗಡಿನಾಡಿನ ಜಿಲ್ಲೆಯ ವರಿಷ್ಠ ನಾಯಕರೆಲ್ಲ ಒಟ್ಟಾಗಿ "ಕ್ರಿಯಾ ಸಮಿತಿ"ಯೊಂದನ್ನು ಕಟ್ಟಿದ್ದಾರೆ. ಜಿ. ವಿ. ಹಳ್ಳಿಕೇರಿಯವರೇ ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಸಮಿತಿಯಲ್ಲಿ ಪ್ರತಿಭಾವಂತ ಶಾಸಕರೂ ಕಾಂಗ್ರೆಸ್ ನಾಯಕರೂ ಇದ್ದಾರೆ. ಪಂಡಿತ ನೆಹರುರವರು ನೀಡಿದ, ಆ ಮೇಲೆ ಕಾಂಗ್ರೆಸ್ ಒಪ್ಪಿಗೆಯ ಮುದ್ರೆ ಹಾಕಿದ ಹತ್ತು ವರ್ಷಗಳ ಅವಧಿಯವರೆಗೆ ಯಥಾಸ್ಥಿತಿಯನ್ನು ಉಳಿಸುವುದನ್ನು ಬಿಟ್ಟು ಗೋವೆಯ ಬಗ್ಗೆ ಯಾವುದೇ ಕ್ರಮ ಕೈಗೊಂಡರೂ ಅದನ್ನು ವಿರೋಧಿಸುವುದೇ ಈ ಕ್ರಿಯಾ ಸಮಿತಿಯ ಮುಖ್ಯ ಉದ್ದೇಶ.

ಮೈಸೂರು ಹೈಕೋರ್ಟಿನ ಅಡ್ವೋಕೇಟರ ಸಂಘವು ಪಾರ್ಲಿಮೆಂಟರಿ ಬೋರ್ಡಿನ ನಿರ್ಣಯದಿಂದ ನೊಂದಿದೆ. ಅದು ಗೋವೆಯು ಕರ್ನಾಟಕದ ಭಾಗವಾಗಲೇ ಬೇಕೆಂದೂ ಹಾಗಿದ್ದರೂ ಹತ್ತು ವರ್ಷಗಳ ತನಕ ಅದು ಈಗಿನಂತೆಯೇ ಮುಂದುವರಿಯಲು ತನ್ನ ಅಭ್ಯಂತರವೇನೂ ಇಲ್ಲವೆಂದೂ ಹೇಳಿದೆ.

ಪ್ರತಿಯೊಬ್ಬ ಕನ್ನಡಿಗನೂ ಗೋವೆಯ ಬಗ್ಗೆ ಕೇಂದ್ರದ ನಿಲುವೆಯನ್ನು ಖಂಡಿಸುತ್ತಾನೆ. ಅದು ಮಹಾರಾಷ್ಟ್ರ ಪರವಾಗಿದೆಯೆಂದು ಅನ್ನುತ್ತಾನೆ. ಕರ್ನಾಟಕದ ಕೂಗನ್ನು ಕೇಳುವವರೇ ಇಲ್ಲವೆಂದು ಅಳುತ್ತಾನೆ. ಈ ಅಳುವಿನ ಬಂದ ಸೆಲೆಯಿಂದು ಕಾಂಗ್ರೆಸ್ ಹೈಕಮಾಂಡಿನ ಕಿವಿಗೆ ಬಿತ್ತು; ಅದನ್ನು ಕೇಳಬೇಕೋ ಬೇಡವೋ ಎಂಬಾಗ ಗೋವಾ ಕಾಂಗ್ರೆಸಿನ ಅಧ್ಯಕ್ಷ ಕಾರೋಡ್ಕರರೂ ಆರ್ಭಟವಿತ್ತರು.

ಗೋವಾ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಪುರುಷೋತ್ತಮ ಕಾಕೋಡ್ಕರರು ಗೋವೆಯ ಭವಿಷ್ಯ ನಿರ್ಮಾಣಕ್ಕೆ ಚುನಾವಣೆಗಳು ಸಹಾಯಕವಾಗುವವು ಎಂಬ ವಾದವನ್ನೇ ಒಪ್ಪುವುದಿಲ್ಲ. ಆಡಳಿತೆಯನ್ನು ನಡೆಸುವ ಅಧಿಕಾರ ಪಡೆಯುವ ಮತ್ತು ಗೋವೆಯ ಭವಿಷ್ಯವನ್ನು ನಿರ್ಮಿಸುವ ಚುನಾವಣೆಗಳು ಘಾತಕವೆಂದವರನ್ನುತ್ತಾರೆ.

ಕಳೆದ ವರ್ಷ ಎಪ್ರಿಲ್ ೭ರಂದು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ನಿರ್ಣಯದಂತೆ ಹತ್ತು ವರ್ಷಗಳ ವರೆಗೆ ಸ್ಥಿತಿಯನ್ನು ಕೆದಕಬಾರದು. ಈ ನಿರ್ಣಯವನ್ನು ಬದಲಾಯಿಸಲೇ ಬೇಕಾದ ಯಾವುದೇ ಘಟನೆ ಗೋವೆಯಲ್ಲಿ ನಡೆದಿಲ್ಲ. ಬದಲಿಗೆ ಯಾವುದೇ ರಾಜ್ಯದೊಡನೆ ವಿಲೀನವಾಗುವುದನ್ನೇ ವಿರೋಧಿಸುವಂತಹ ಪ್ರವೃತ್ತಿ ಗೋಮಾಂತಕರಲ್ಲಿ ಬೆಳೆದು ಬರುತ್ತಿದೆ. ಗೋವೆಯ ಹೊರಗಡೆ ನಡೆಯುತ್ತಿರುವ ಕೆಲವು ಘಟನೆಗಳೇ ಗೋವೆಯನ್ನು ಕಲಂಕಗೊಳಿಸುತ್ತಿವೆ. ಕೇಂದ್ರವು ಇದನ್ನು ಲಕ್ಷಿಸಬಾರದು. ಆದುದರಿಂದ ತಕ್ಕಡಿಯ ಮೇಲೆ ಗೋವೆಯನ್ನು ತೂಗುವ ಪ್ರವೃತ್ತಿಯಿಂದ ಕೇಂದ್ರವು ದೂರವಿರಬೇಕು. ಹತ್ತು ವರ್ಷಗಳ ಕಾಲ ಅದನ್ನು ಕೆದಕಲೇ ಬಾರದು.

ಗೋವೆಯ ಪರಿಸ್ಥಿತಿಯಲ್ಲಿ ವಿಧಾನ ಸಭೆಗೆ ಚುನಾವಣೆಗಳನ್ನು ನಡೆಸಿ ಅವರ ಫಲಿತಾಂಶಗಳಿಂದಲೇ ಭವಿಷ್ಯ ನಿರ್ಧರಿಸುವುದು ಮಹಾ ಅಪಾಯಕರ. ಚುನಾವಣೆಯೆಂದೊಡನೆ ರಾಜಕೀಯ ಸ್ಪರ್ಧೆಗೆ ಅವಕಾಶವಾಗುವುದು. ಹಲವಾರು ಪಕ್ಷಗಳು ವ್ಯಕ್ತಿಗಳು, ಪ್ರಭಾವಗಳು ಅದರಲ್ಲಿ ಇಣುಕಿ ನೋಡುವುವು. ಇದರಿಂದ ಗೋವೆಯ ಜನತೆಯ ಇಂಗಿತವು ಎಂದಿಗೂ ವ್ಯಕ್ತವಾಗಲಾರದು. ಒಂದು ವೇಳೆ ಚುನಾವಣೆಯ ಮೂಲಕವೇ ಭವಿಷ್ಯ ನಿರ್ಣಾಯವಾಗಬೇಕೆಂದರೆ, ಬರಿಯ ವಿಲೀನೀಕರಣ ಬೇಕೋ ಬೇಡವೋ ಎಂಬುದಷ್ಟೇ ಚುನಾವಣೆಯ ವಿಷಯವಾಗಬೇಕು.

ಗೋವೆಯಲ್ಲಿನ ಸರಕಾರವು ಮಹಾರಾಷ್ಟ್ರದಿಂದ ಅಧಿಕಾರಿಗಳನ್ನು ಆಮದು ಮಾಡುತ್ತಿದೆ. ಹೀಗೆ ಹೊರರಾಜ್ಯದವರೇ ಗೋವೆಯನ್ನು ಆಳುತ್ತಿದ್ದಾರೆ. ಇವರು ಪೋರ್ಚುಗೀಸ್ ಆಳಿಕೆಗೆ ಅನಭಿಜ್ಞರು ಮಾತ್ರವಲ್ಲ, ರಾಜಕೀಯ ದುರುದ್ದೇಶದ ಪೂರ್ವಗ್ರಹ ಹಿಡಿದವರು. ಇವರಿಗಿಂತ ಪೋರ್ಚುಗೀಸ್ ಆಳಿಕೆಯಲ್ಲಿದ್ದ ಅಧಿಕಾರಿಗಳೇ ಬಹುಮಟ್ಟಿಗೆ ಒಳ್ಳೆಯವರು. ಹತ್ತು ವರ್ಷಗಳ ಕಾಲಾವಧಿಯ

(ಹದಿನಾರನೇ ಪುಟ ನೋಡಿರಿ)

ನಿಮಗಾಗಿ ಮತ್ತೊಂದು ಆಕರ್ಷಕ ಯೋಜನೆ!

ಕ್ಯುಮುಲೇಟಿವ್ ಎನ್ಯುಟಿ ಡಿಪಾಸಿಟ್

ಕೆಲವು ವೈಶಿಷ್ಟ್ಯಗಳು......

- ಪ್ರತಿ ತಿಂಗಳಿಗೂ ರೂಪಾಯಿ 10/- ಪ್ರಕಾರ 24 ತಿಂಗಳ ಠೇವಣಿ.
- ತಿಂಗಳಿಗೆ ರೂಪಾಯಿ 10/-ರಂತೆ 27 ತಿಂಗಳ ಮರುಪಾವತಿ. ಅಂದರೆ 30 ರೂಪಾಯಿ ಬಡ್ಡಿ ಲಭಿಸುವುದು.
- ಮರುಪಾವತಿ ಸ್ವೀಕರಿಸಲು ನೀವು ಪ್ರತೀ ಸಾರಿ ಬರಬೇಕಾಗಿಲ್ಲ. ನಿಮ್ಮ ಸೇವಿಂಗ್ಸ್ ಖಾತೆಗೆ ಸದರಿ ಮೊತ್ತವನ್ನು ಜಮಾಗೊಳ್ಳಲು ನಿಮ್ಮ ಖಾಯಂ ಸೂಚನೆಯು ಸಾಕಾಗುವುದು.
- ನೀವು ಅಪೇಕ್ಷೆಪಟ್ಟಿದಾವರೆ, ಪೂರ್ಣಾವಧಿಯ ನಂತರವೂ ಠೇವಣಿಯನ್ನು ಪುನರಾವರ್ತಿಸಬಹುದು.
- ಅಂತಹ ಸಂದರ್ಭದಲ್ಲಿ ಹೊಸ ಠೇವಣಿಯ ತಿಂಗಳ ಕಂತುಗಳು ಪೂರ್ಣವಾದ ಹಳೇ ಠೇವಣಿಯಿಂದ ತಾನಾಗಿಯೇ ಪಾವತಿಯಾಗುವುವು.

—ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ವಿಚಾರಿಸಿರಿ—

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ

ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿ

ಮೋಸಹೋಗಬೇಡಿ, ಇದು ಜೀವಂತರ ಚಿತ್ರಪಟವಲ್ಲ. ಬಂಜಾರಿ ಹುಡುಗಿ ಮತ್ತು ಜಿಲ್ಲೆ ವಕೀಲರ(?) ಗೊಂಬೆಗಳ ಚಿತ್ರವಿದು. ಮಧ್ಯಪ್ರದೇಶದ ಪೋರಸಾಲರ ಕುಶಲ ಕಲಾವಿದರ ಕೃತಿಯಿದು.

ಭಾರತ ದರ್ಶನ

ಆಕರ್ಷಕ ಕುಶಲ ಕಲಾಕೃತಿಗಳು

ಬದುಕುವುದೂ ಒಂದು ಕಲೆ. ಜೀವಿಗಳೆಲ್ಲವುಗಳಿಗಿಂತ ಆ ಬದುಕಲು ಕಲಿಯುವುದೂ ಬದುಕುವುದೂ ಒಂದು ದೊಡ್ಡ ಕಲೆ. ಈ ಕಲೆಯ ಅಂಗಗಳೇ ಉಳಿದ ಕಲೆಗಳು. ಶಿಲ್ಪ ಕಲೆ, ಚಿತ್ರ ಕಲೆ, ಸಂಗೀತ ಕಲೆ, ನಾಟ್ಯ ಕಲೆಗಳು ಪ್ರಧಾನ ಕಲೆಗಳಾಗಿದ್ದರೆ, ಲೋಹಕಾರ್ಯ, ಆಭರಣ ರಚನೆ, ಖಾದ್ಯ ಮುಂತಾದವು ಉಪಕಲೆಗಳಾಗಿವೆ. ಕಲೆಯು ಬೆಳೆಯುತ್ತ ಬಂದಂತೆ ಮಾನವನ ನಾಗರಿಕತೆಯೂ ಬೆಳೆಯುತ್ತ ಒಂದು ಹೊಸ ಜೀವನವೂ ಕಲಾಮಯವಾಗುತ್ತ ಬಂತು. ಆದುದರಿಂದಲೇ ಪ್ರತಿಯೊಬ್ಬನಿಗೂ ಒಂದಲ್ಲ ಒಂದು ಬಗೆಯ ಕಲೆಯಲ್ಲಿ ಒಲವು ದರೂ ಆಸಕ್ತಿ ಇದ್ದೇ ಇದೆ.

ಹಿಂದೆ ಶಿಲೆಗಲ್ಲುಗಳಿಂದ ಮೂರ್ತಿಗಳನ್ನು ಕೆತ್ತುತಿದ್ದರು. ವಿವಿಧ ಲೋಹಗಳಿಂದ ವಿಗ್ರಹ ಮೂರ್ತಿಗಳನ್ನು ರೂಪಿಸುತ್ತಿದ್ದರು. ಆದರೆ, ಇದು ಬಹಳ ಕಠಿನ ಕಾರ್ಯವಾಗಿತ್ತು. ನಾಗರಿಕತೆಯು ಬೆಳೆದಂತೆ ಮಣ್ಣಿನಿಂದ ವಿವಿಧ ಗೊಂಬೆಗಳು ತಯಾರಾದುವು. ಕುಂಬಾರನೇ ಇದರ ಸೃಷ್ಟಿಕರ್ತ. ಆತನು ಮಾಡುವ ಮಡಿಕೆಯೇ ಒಂದು ಕುಶಲಕಲಾ ಕೃತಿ. ಮರದಲ್ಲಿ ಕೆತ್ತಿ ಕಲಾಕೃತಿಯನ್ನು ತಯಾರಿಸುವುದೂ ಪರಿಪಾಠವಾಯಿತು.

ಆದರೆ, ಇಂದು ಮಾನವ ಬಹಳಷ್ಟು ಮುಂದುವರಿದಿದ್ದಾನೆ. ಬಳಸಿ ಎಸೆಯುವ ವಸ್ತುಗಳಿಂದ ಶಿಲ್ಪ ತಯಾರಿಸಿ ಆದರಿಂದ ಉತ್ತಮೋತ್ತಮ ಕಲಾಕೃತಿಯನ್ನು ನಿರ್ಮಿಸಲು ಕಲಿತಿದ್ದಾನೆ. ಶಿಲೆ ಕಲ್ಲಿನ ಮೇಲೆ ಗಂಧದ ಕೊರೆದು ಮೇಲೆ ಚಿನ್ನ, ಉತ್ತಮ ಕಲೆಯನ್ನು ರೂಪಿಸಲು ಅರಿತಿದ್ದಾನೆ. ಲೋಹಗಳಿಂದ ಅಥವಾ ಮಣ್ಣಿನಿಂದ ಪಾತ್ರೆ ಪರಡಿಗಳನ್ನು ಮಾಡಿ ಅವುಗಳಲ್ಲಿಯೂ ರತ್ನನೆಯನ್ನು ಮಾಡಬಲ್ಲನು. ಇಷ್ಟು ಮಾತ್ರವಲ್ಲ, ಪ್ಲಾಸ್ಟಿಕ್, ಕರ್ಪೂರ ಮೊದಲಾದುವುಗಳಿಂದಲೂ ಆತನು ಅನೇಕ ತರದ ಆಟಿಕೆಗಳನ್ನೂ ಕಲಾಕೃತಿಯನ್ನೂ ನಿರ್ಮಿಸಬಲ್ಲನು.

ಸಾಮಾನ್ಯವಾಗಿ ಇಂತಹ ಕುಶಲಕಲೆಗಳು ಗುಡಿ ಕೈಗಾರಿಕೆಗಳ ರೂಪದಲ್ಲಿಯೇ ಬೆಳೆದು ಬಂದಿವೆ. ಈ ಕಲಾವಿದರಿಗೆ ಗುಡಿಗಾರರು ಎಂದೂ ಕರೆಯುವುದಿದೆ. ವಂಶ ಪಾರಂಪರ್ಯವಾಗಿಯೇ ಇದರ ಅಧ್ಯಯನ—ಅಧ್ಯಾಪನಗಳು ಜರಗುತ್ತಿವೆ. ಇಂದು ಅಲ್ಲಲ್ಲಿ ಕಲಾ ಶಾಲೆಗಳು ತೆರೆಯಲ್ಪಟ್ಟು ಅಲ್ಲಿ ಶಾಸ್ತ್ರ ತರಬೇತಿಯನ್ನು ಕೊಡುವ ವ್ಯವಸ್ಥೆಯಿರುವುದು ನಿಜವಾದರೂ, ಪಾರಂಪರ್ಯವಾಗಿ ಬಂದಿರುವ ಕುಶಲ ಕಲಾವಿದರ ಸಂಖ್ಯೆಯೇ ಹೆಚ್ಚು. ಭಾರತದ ಎಲ್ಲ ರಾಜ್ಯಗಳಲ್ಲಿಯೂ ಈ ಬಗೆಯ ಕಲಾವಿದರು ನೆಲಸಿದ್ದಾರೆ. ಒಂದೊಂದು ಪ್ರದೇಶದ ಕಲಾ ನಿರ್ಮಾಣದ ವಿಧಾನವು ಪ್ರತ್ಯೇಕವಾಗಿದ್ದರೂ ಅವೆಲ್ಲವುಗಳ ಮೂಲ ಮಾತೃಕೆಯಲ್ಲಿ ಸಮಾನತೆಯಿರುವುದು; ಭಾರತೀಯ ಸಂಸ್ಕೃತಿಯು ಏಕ ಸೂತ್ರದಿಂದ ಕೋದಿರುವುದೆಂಬುದಕ್ಕೆ ಕಲಾಕೃತಿಗಳೂ ನಿದರ್ಶನವಾಗಿವೆ.

ಮಧ್ಯಪ್ರದೇಶ ಕಾಡುಗಳ ರಾಜ್ಯ. ಸ್ವಾಭಾವಿಕವಾಗಿ ಕ್ರೂರ ಪ್ರಾಣಿಗಳ ಕಾರುಬಾರವೇ ಅಲ್ಲಿ ನಡೆಯುವುದು. ಜನರಲ್ಲಿ ಯಾದರೂ ಡಕಾಯಿತರ ಪಂಗಡಕ್ಕೆ ಸೇರಿದವರು ಕಾಡುಗಳಲ್ಲಿಯೇ ನೆಲಸುವುದು ರೂಢಿ. ಈ ಡಕಾಯಿತರು ದಾರಿ ಹೋಕರನ್ನು ಎದುರಲ್ಲೇ ಸುಲಿಯುವುದರೊಡನೆ ದೂರ ದೂರದಲ್ಲಿರುವ ಶ್ರೀಮಂತರಿಗೆ ಬೆದರಿಕೆಯ ಪತ್ರಗಳನ್ನು ಕಳಿಸಿ ಹಣ ಪಡೆಯುತ್ತಿದ್ದಾರೆಂಬುದನ್ನು ನಾವು ಈಗಲೂ ಪತ್ರಿಕೆಗಳಲ್ಲಿ ಓದುತ್ತೇವೆ. ಈ ಬಗೆಯ ರುದ್ರ ಜನರ ನಡುವೆಯೂ ಕುಶಲ ಕಲಾವಿದರಿದ್ದಾರೆ. ಕುಂಬಾರರ ಜಾತಿಗೆ ಸೇರಿದ ಇವರು ಮಾನವರ ಗೊಂಬೆಗಳನ್ನು ಲೀಲಾಜಲವಾಗಿ ನಿರ್ಮಿಸುತ್ತಾರೆ. ಈ ಗೊಂಬೆಗಳು ಸುಮಾರು ಎರಡರಿಂದ ನಾಲ್ಕು ಅಡಿ ಎತ್ತರವಿರುತ್ತವೆ. ಇವುಗಳಿಗೆ ಉಚಿತವಾದ ಬಟ್ಟೆ ಬರೆಗಳು, ತಲೆಗೂದಲು, ಆಭರಣ ಮೊದಲಾದುವುಗಳನ್ನು ಜೋಡಿಸಿ, ನೋಡುವಾಗ ಜೀವಂತ ಮಾನವರೆಂಬ ಭ್ರ— — — — ದೂರದಲ್ಲಿ ಹೋದರೂ ಇಂತಹ ಗೊಂಬೆಯನ್ನು ಕಂಡರೆ, ಅವರ ಮಾನವರೆಂದೇ ತಿಳಿಯುತ್ತಾರೆ.

ಊಟದ ಬಟ್ಟಲುಗಳನ್ನು ತಯಾರಿಸುವ ಕಲಾವಿದರು ಗ್ವಾಲಿಯರ (ಮಧ್ಯಪ್ರದೇಶ)ದಲ್ಲಿ ಹೆಸರುವಾಸಿಯಾಗಿದ್ದಾರೆ. ತಯಾರಾದ ಬಟ್ಟಲುಗಳು ಆಕರ್ಷಕವಾಗುವಂತೆ ಮೆರುಗನ್ನು ಕೊಡುವುದೂ ಅಗತ್ಯ. ಈ ಕಲಾಕಾರರ ಬಟ್ಟಲು, ಪಾತ್ರೆ ಪರಡಿಗಳನ್ನು ನಿರ್ಮಿಸುವುದರೊಡನೆ ಅವುಗಳು ಚಕಮಕಿಸುವಂತೆ ರಾಸಾಯನಿಕ ದ್ರವ್ಯವನ್ನು ಸವರಿ ತಿಕ್ಕಿ ನಯವೂ ಹೊಳಪೂ ಬರುವಂತೆ ಮಾಡುತ್ತಾರೆ.

ಮಧ್ಯ ಪ್ರದೇಶದಲ್ಲಿ ಮಣ್ಣಿನಲ್ಲಿ ಗೊಂಬೆ ತಯಾರಿಸುವಂತೆಯೇ ರಾಜಸ್ಥಾನದಲ್ಲಿ ಅಮೃತಶಿಲೆಯಲ್ಲಿ ಚಿತ್ರಗಳನ್ನು ಕೆತ್ತುವ ಕಲೆಯು ಸುಪ್ರಸಿದ್ಧವಾಗಿದೆ. ಸಾಮಾನ್ಯವಾಗಿ ರಾಜ ಮಹಾರಾಜರ ರಾಜ್ಯವಾಗಿ



ಚಂದ್ರಕಾಂತ ಶಿಲೆಯಲ್ಲಿ ಕೆತ್ತಿದ ಉತ್ತರ ಭಾರತದ ಶೃಂಗಾರಪ್ರಿಯ ಢೋಲಾಮರು. ಜಯಪುರದ ಕುಶಲ ಕೃತಿಯಿದು.

ಊಟದ ಬಟ್ಟಲುಗಳನ್ನು ತಯಾರಿಸಿದ ಮೇಲೆ ಅವಕ್ಕೆ ಹೊಳಪು ತರುವುದರಲ್ಲಿಯೇ ಗ್ವಾಲಿಯರದ ಈ ಕಲಾವಿದ ಮೈಮರೆತಿದ್ದಾನೆ.

ಅಭಿವೃದ್ಧ ಭಾರತ

ಟೆಲಿವಿಷನ್ ಯುಗದಲ್ಲಿ ಪಾದಾರ್ಪಣ

೧

ರಾಜಸ್ಥಾನದ ಪಿಲಾನಿಯಲ್ಲಿ ಸೆಂಟ್ರಲ್ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂಬ ಸಂಶೋಧನಾ ಸಂಸ್ಥೆಯೊಂದಿದೆ. ಈ ಸಂಸ್ಥೆಯಲ್ಲಿ ಪ್ರಯೋಗಾರ್ಥವಾಗಿ ಟೆಲಿವಿಷನ್ ಯಂತ್ರಗಳನ್ನು ತಯಾರಿಸುವ ಉದ್ದೇಶದಿಂದ ಯಂತ್ರ ವಿಭಾಗವೊಂದನ್ನು ಸ್ಥಾಪಿಸಲಾಗಿದೆ. ದೇಶದಲ್ಲಿ ಇಂತಹ ಯಂತ್ರ ವಿಭಾಗವಿರುವುದು ಪಿಲಾನಿಯಲ್ಲಿ ಮಾತ್ರ. ಈ ಯಂತ್ರ ವಿಭಾಗದಲ್ಲಿ ಇತ್ತೀಚೆಗೆ ಟೆಲಿವಿಷನ್ ಯಂತ್ರಗಳ ತಯಾರಿಕೆಯನ್ನು ಪ್ರಾರಂಭಿಸಲಾಯಿತು. ಜನರಿಗೆ ಮನರಂಜನೆ ಮತ್ತು ಶಿಕ್ಷಣ ನೀಡುವಲ್ಲಿ ಟೆಲಿವಿಷನ್ ಮಹತ್ತರ ಪಾತ್ರ ವಹಿಸುತ್ತದೆ ಎಂಬುದರಲ್ಲಿ ಸಂಶಯವೇ ಇಲ್ಲ. ಟೆಲಿವಿಷನ್ ಸೆಟ್‌ಗಳ ತಯಾರಿಕೆಯಲ್ಲಿ ವಿದೇಶೀ ತಾಂತ್ರಿಕ ನೆರವಿನ ಅವಲಂಬನೆಯಿಂದ ನಮ್ಮ ಅತ್ಯಮೂಲ್ಯ ವಿದೇಶೀ ವಿನಿಮಯ ತುಂಬಾ ನಷ್ಟವಾಗಿ ಪರದೇಶಗಳಿಗೆ ನಮ್ಮ ಹಣ ಹೋಗುವುದೇ ಅಲ್ಲದೆ ನಮ್ಮ ಪ್ರಗತಿಗೆ ದೊಡ್ಡ ಅಡಚಣೆಯು ಸಂಭವವೂ ಇದೆ. ಈ ಪರಿಸ್ಥಿತಿಯನ್ನರಿತ ಪಿಲಾನಿಯ ಕೇಂದ್ರ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯು ಟೆಲಿವಿಷನ್ ಯಂತ್ರಗಳ ತಯಾರಿಕಾ ಕ್ಷೇತ್ರದಲ್ಲಿ ಇದೇ ಮೊದಲನೆಯ ಬಾರಿ ಪ್ರವೇಶಿಸಿತು. ಸ್ವದೇಶೀ ಪದಾರ್ಥಗಳನ್ನೇ ಸಾಧ್ಯವಾದಷ್ಟು ಮಟ್ಟಿಗೆ ಬಳಸಿಕೊಂಡು ವಿದೇಶೀ ವಿನಿಮಯ ಹಣವನ್ನು ಆದಷ್ಟು ಕಡಿಮೆ ಬಳಸಿಕೊಂಡು ಟೆಲಿವಿಷನ್ ಯಂತ್ರಗಳ ತಯಾರಿಕೆಗೆ ಕೈ ಹಾಕಿತು. ತಯಾರಿಕೆಗೆ ಪೂರ್ವಭಾವಿಯಾಗಿ ಸಂಶೋಧನೆ ನಡೆಸಿ ಒಂದು ಯೋಜನಾಬದ್ಧ ವಿಧಾನದಲ್ಲಿ ಮುಂದುವರಿಯಿತು.

ಟೆಲಿವಿಷನ್ ರಿಸೀವರ್ ಯಂತ್ರವನ್ನು ರೂಪಿಸಿ ಅದನ್ನು ತಯಾರಿಸುವಾಗ, ಸರ್ಕ್ಯೂಟಿನ ವಿನ್ಯಾಸ, ಉಪಕರಣಗಳ ಆಯ್ಕೆ, ವೈರ್‌ಗಳನ್ನು ಹಾಕುವ ವಿಧಾನ ಈ ಮುಂತಾದ ವಿಷಯಗಳ ಬಗ್ಗೆ ತುಂಬಾ ಎಚ್ಚರಿಕೆಯನ್ನು ವಹಿಸಲಾಯಿತು. ಟ್ರಾನ್ಸ್‌ಫಾರ್ಮರುಗಳು, ಕಾಯಿಲ್‌ಗಳು ಮುಂತಾದುವನ್ನು ಪಿಲಾನಿ ಸಂಸ್ಥೆಯಲ್ಲಿಯೇ ರೂಪಿಸಿ ತಯಾರಿಸಲಾಗುತ್ತಿದೆ. ಒಂದೊಂದು ಟೆಲಿವಿಷನ್ ರಿಸೀವರ್‌ನ ಬೆಲೆ ಅಬಕಾರಿ ಸುಂಕ ಬಿಟ್ಟು ೮೦೦ ರೂಗಳೆಂದು ಅಂದಾಜು ಮಾಡಲಾಗಿದೆ. ಈ ಪೈಕಿ ಆಮದು ಮಾಡಿಕೊಂಡ ಉಪಕರಣಗಳ ಮೌಲ್ಯ ಕೇವಲ ೧೫೦ ರೂಗಳಷ್ಟಾಗಬಹುದು. ಸಂಸ್ಥೆಯು ವಿದೇಶೀ ವಿನಿಮಯ ಹಣದ ಖರ್ಚನ್ನು ಆದಷ್ಟು ಕಡಿಮೆಗೆ ಇಳಿಸಿದೆ ಎಂಬುದನ್ನು ಇದು ತುಂಬಾ ರುಜುವಾತು ಮಾಡಿ ಕೊಡುತ್ತದೆ. ಇನ್ನೊಂದು [illegible] ೧೦೦೦ ಟೆಲಿವಿಷನ್ ರಿಸೀವರ್ ಯಂತ್ರಗಳನ್ನು ತಯಾರಿಸುವ ನಿರೀಕ್ಷೆಯಿದೆ.

ಆಮದು ಮಾಡಿಕೊಂಡ ಉಪಕರಣಗಳಿಂದಲೇ ಜೋಡಿಸಿದ ಟೆಲಿವಿಷನ್ ಯಂತ್ರದ ಬೆಲೆ ಪಿಲಾನಿ ಸಂಸ್ಥೆಯಲ್ಲಿ ತಯಾರಾದ ಯಂತ್ರದ ಬೆಲೆಗಿಂತ ಸುಮಾರು ೫೦೦ ರೂಗಳಷ್ಟು ಹೆಚ್ಚಾಗಿರುವುದೆಂದು ಅಂದಾಜು ಮಾಡಲಾಗಿದೆ. ಟೆಲಿವಿಷನ್ [illegible] ಇತರ ಪ್ರಸಾರಗಳಿಗೂ ವಿಸ್ತರಿಸುವ ಉದ್ದೇಶವಿರುವ ಕಾರಣ, ಇನ್ನು ಮುಂದಿನ ೧೦ ವರ್ಷಗಳಲ್ಲಿ ದೇಶದಲ್ಲಿ ಒಂದು ಲಕ್ಷ ಟೆಲಿವಿಷನ್ ರಿಸೀವರ್‌ಗಳಿಗೆ ಬೇಡಿಕೆ ಬರಬಹುದೆಂದು ಅಂದಾಜು ಮಾಡಲಾಗಿದೆ. ಈ ಯಂತ್ರಗಳನ್ನು ಆಮದು ಮಾಡಿಕೊಂಡ ಉಪಕರಣಗಳಿಂದಲೇ ಸಿದ್ಧಪಡಿಸಿದಲ್ಲಿ, ದೇಶವು ಸುಮಾರು ೫೦ ಕೋಟಿ ರೂ.ಗಳಷ್ಟು ಹಣವನ್ನು ರಾಯಲ್ಟಿ ಮತ್ತಿತರ ರೀತಿಗಳಲ್ಲಿ ವಿದೇಶಗಳಿಗೆ ಕೊಡಬೇಕಾಗಿ ಬರುವುದು.

ಈ ರೀತಿಯಾಗಿ ಕೇಂದ್ರ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯು ಸ್ವದೇಶೀ ಟೆಲಿವಿಷನ್ ಯಂತ್ರವೊಂದನ್ನು ರೂಪಿಸುವಲ್ಲಿ ತುಂಬಾ ಯಶಸ್ವಿಯಾಗಿದೆ. ಈ ಯಂತ್ರದ ತಯಾರಿಕೆಯಲ್ಲೇ ಆದಷ್ಟು ವಿದೇಶೀ ವಿನಿಮಯ ಹಣವನ್ನು ಉಳಿಸಿದೆ ಮಾತ್ರ ಉಳಿಸಿದಂತೂ ಈ ಯಂತ್ರವು ತೃಪ್ತಿಕರ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಸುಲಭ ಬೆಲೆಗೆ ಉತ್ತಮ ದರ್ಜೆಯ ಯಂತ್ರವನ್ನು ತಯಾರಿಸುವಲ್ಲಿ ಗಳಿಸಿರುವ ಈ ಜಯವು ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ನಿಜಕ್ಕೂ ಒಂದು ಮಹತ್ಸಾಧನೆಯಾಗಿದೆ ಎಂದೇ ಹೇಳಬಹುದು.

ನಾವು ಟೆಲಿವಿಷನ್ ಯುಗದಲ್ಲಿ ಇದೀಗ ಪಾದಾರ್ಪಣ ಮಾಡಿದ್ದೇವೆ. ಅದೇ ಸಮಯದಲ್ಲಿ ಅಮೆರಿಕನ್ ಲೆಬೊರೇಟರಿಯ ರೇಡಿಯೋ ಕಾರ್ಪೊರೇಶನ್ ಟೆಲಿವಿಷನ್‌ನಿಗೆ ಮೈಕ್ರೋಸ್ಕೋಪನ್ನು ಜೋಡಿಸುವ ಪ್ರಯತ್ನದಲ್ಲಿ ಯಶಸ್ವಿಯಾಯಿತು. ಈ ಪ್ರಯತ್ನದ ಮಾದರಿಯ ಚಿತ್ರವನ್ನಿಲ್ಲಿ ಕಾಣಬಹುದು.

ವೆರೆದಾಡಿದ್ದ ರಾಜಸ್ಥಾನ ಶೃಂಗಾರ ಮತ್ತು ವೀರ ರಸಗಳಿಗೆ ಹೆಸರಾದುದು. ಅಲ್ಲಿನ ಕೆತ್ತನೆಯ ಕೆಲಸದಲ್ಲಿಯೂ ನಾವು ಈ ಈ ರಸಗಳ ಪ್ರಭಾವವನ್ನು ಗುರುತಿಸಬಹುದು.

ಈ ಬಗೆಯ ಕಲೆಯು ಭಾರತದಲ್ಲಿ ಅನೂಚಾನವಾಗಿ ಬೆಳೆದುಬಂದಿದೆ. ಪ್ರಾಚೀನಾತಿಪ್ರಾಚೀನವಾದ ಈ ಕಲಾ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬರುವ ಬಗ್ಗೆ ಸರಕಾರವೂ ಉಚಿತ ಕಾರ್ಯಕ್ರಮ ಕೈಗೊಳ್ಳುತ್ತಿದೆ. ಜನತೆಯೂ ಪ್ರೋತ್ಸಾಹ ನೀಡುತ್ತಿದೆ.

ಕೇಂದ್ರ ಶಿಕ್ಷಣ ಮಂತ್ರಿ ಶ್ರೀ ಎಂ. ಸಿ. ಚಾಗ್ಲಾರು ಪಿಲಾನಿಯ ಕೇಂದ್ರ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯಲ್ಲಿ ಟೆಲಿವಿಷನ್ ಉತ್ಪಾದನಾ ವಿಭಾಗವನ್ನು ಕಂಡು ಹರ್ಷ ವ್ಯಕ್ತಪಡಿಸಿದರು.

READ &
ADVERTISE IN
NAVAYUGA WEEKLY

ಒಂದು ಅಭಿಪ್ರಾಯ

ನಮ್ಮ ಸಾಹಿತ್ಯ

— ಶ್ರೀ ಸ. ನಾರಾಯಣ, ಚಿತ್ರದುರ್ಗ.

'ಸಾಹಿತ್ಯ ಜನಜೀವನದ ಕೈಗನ್ನಡಿ' —ಎನ್ನುವ ಮಾತು ಅಕ್ಷರಶಃ ಸತ್ಯ. ಈ ಮಾತು ಎಲ್ಲ ರಾಷ್ಟ್ರ, ಎಲ್ಲ ಕಾಲ, ಎಲ್ಲ ಭಾಷೆಗಳಿಗೂ ಅನ್ವಯಿಸುತ್ತದೆ. ಪ್ರಸ್ತುತ ಲೇಖನದ ಉದ್ದೇಶ ಪ್ರಚಲಿತ ಕನ್ನಡ ಸಾಹಿತ್ಯದ ಕೆಲವು ಮುಖಗಳನ್ನು ಮಾತ್ರ ಸೂಕ್ಷ್ಮವಾಗಿ ವಿವೇಚಿಸುವುದಾಗಿದೆ.

ಕನ್ನಡ ಭಾಷೆಗೆ ಭವ್ಯ ಪುರಾತನ ಪರಂಪರಾ ಪ್ರೌಢಿಮೆ ಇದೆ. ಇತಿಹಾಸವೂ ಇದೆ. ಕನ್ನಡ ಅತಿ ಪ್ರಾಚೀನ ಭಾಷೆಗಳಲ್ಲೊಂದು ಎನ್ನುವ ಅಂಶ ಎಲ್ಲರಿಗೂ ಚಿರಪರಿಚಿತ. ಕಾಲಸ್ಥಿತಿಗತಿಗಳಿಗನುಸಾರವಾಗಿ ಹಲವಾರು ಮಾರ್ಪಾಡುಗಳು. ಪ್ರಗತಿ ಆಗಬೇಕಾದುದು ಪ್ರಕೃತಿ ಧರ್ಮ. ಕನ್ನಡ ವಾಙ್ಮಯದಲ್ಲಿಯೂ ಆ ಬಗೆಯ ಪ್ರಗತಿ ಉಂಟಾದುದು ಹರ್ಷದಾಯಕ ಸಂಗತಿ.

ಭಾರತ ಧರ್ಮ ಪ್ರಧಾನವಾದ ನಾಡು. ಜನತೆಯ ನರನಾಡಿಗಳಲ್ಲಿ ಮಾತ್ರವಲ್ಲದೆ ಸಾಹಿತ್ಯದ ಪುಟಗಳಲ್ಲಿಯೂ ಸಂಸ್ಕೃತಿ, ಧರ್ಮ—ಸಂಸ್ಕಾರಗಳ ಹೊಳೆ ಹರಿದು ಬಂದಿದೆ. ವೇದ, ಉಪನಿಷತ್ತು, ಭಗವದ್ಗೀತೆ, ರಾಮಾಯಣ, ಭಾರತ ಆದಿಯಾಗಿ ಹಲವು ಹತ್ತು ಪ್ರಾಕಾರಗಳ ಸಾಹಿತ್ಯ ಇಮ್ಮಡಿ ಮುಮ್ಮಡಿಯಾಗಿ ಬೆಳೆದಿದೆ ಬಾಳಿದೆ, ಬದುಕಿದೆ. ಇಂದಿನ ಯುಗಕ್ಕೆ ಮಾತ್ರವಲ್ಲದೆ ಇನ್ನು ನಾಲ್ಕು ಯುಗಗಳಿಗೆ ಹಂಚುವಷ್ಟು ಅಖಂಡವಾಗಿದೆ.

ಹತ್ತೊಂಭತ್ತನೆಯ ಶತಮಾನದವರೆಗೆ ಒಂದು ಬಗೆಯ ಸಾಹಿತ್ಯ ಬಳಕೆಯಲ್ಲಿತ್ತು ಹಾಗೂ ಜನತೆಗೆ ಪರಿಚಿತವಾಗಿತ್ತು. ಮನದಲ್ಲಿ ನೆಲೆಯೂರಿತ್ತು. ಹೊಸ ಯುಗಕ್ಕನುಸಾರವಾಗಿ ನವೀನ ಬಗೆಯ ಸಾಹಿತ್ಯವೂ ಬೆಳೆಯಿತು. ಬೆಳೆಯ ಬೇಕಾಗಿದ್ದುದೂ ಧರ್ಮ. ಕಾದಂಬರಿ, ಸಣ್ಣ ಕಥೆ ನವ್ಯ ಕವಿತೆ, ನಾಟಕ, ಹರಟೆ ಮುಂತಾದುವು ನಮಗೆ ಅಪರಿಚಿತವಿಲ್ಲವಾದರೂ ಹೊಸ ರೂಪ ತಾಳಿ ಬಂದವು.

ಅಖಂಡವಾಗಿ ಬೆಳೆಯಿತು ಸಾಹಿತ್ಯ ಸೃಷ್ಟಿ.

ಬರಹಗಾರರ ಸಂಖ್ಯೆಯೂ ಬೆಳೆಯಿತು. ಸಾಹಿತ್ಯದ ಪುಟಗಳ ಸಂಖ್ಯೆಯೂ ಬೆಳೆಯಿತು. ಆದರೆ ಸಾಹಿತ್ಯದ ಮೌಲ್ಯಗಳು ಕಡಿಮೆಯಾಯಿತೆಂದು ತಿಳಿಸಲು ದುಃಖವಾಗುತ್ತದೆ. ಕನ್ನಡ ನಾಡಿನಲ್ಲಿ ಹೊಸ ಸಾಹಿತ್ಯದ ಗಾಳಿ ಬೀಸಲಾರಂಭಿಸಿದ್ದರೂ ಅಕ್ಕ ಪಕ್ಕದ ಸೋದರ ನಾಡುಗಳೊಂದಿಗೆ ಹೋಲಿಸಿ ನೋಡಿದರೆ ನಮ್ಮ ಸಾಹಿತ್ಯದ ಬೆಳವಣಿಗೆ ಅಲ್ಪವೆಂದೇ ಹೇಳಬೇಕಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಕನ್ನಡ ನಾಡು-ನುಡಿಗಳ ಬಗ್ಗೆ ಜನತೆಯಲ್ಲಿ ಅಭಿಮಾನ ಮೂಡಿರುವುದು ಆನಂದದ ಸಂಗತಿ. ಹೆಮ್ಮೆ ಪಡಬೇಕಾದ ವಿಷಯ. ಬೆರಳಿನಲ್ಲಿ ಎಣಿಸುವಷ್ಟು ಮಂದಿ ಹಿರಿಯ ಸಾಹಿತಿಗಳು ಕನ್ನಡ ನಾಡು ನುಡಿಗಳಿಗೆ ಸಲ್ಲಿಸಿರುವ ಸೇವೆ, ಎದುರಿಸಿದ ಸಮಸ್ಯೆಗಳು, ಅನುಭವಿಸಿದ ವೇದನೆ ನರ ನಾಡಿಗಳನ್ನೂ ನುಡಿಯುತ್ತವೆ. ಮುಂದಿನ ಪೀಳಿಗೆಗಾದರೂ ಆ ಬಗೆಯ ಶೋಷಣೆ ಆಗದಂತೆ ಎಚ್ಚರಿಗೆ ವಹಿಸಬೇಕಾದುದು ಸಾಹಿತ್ಯಾಭಿಮಾನಿಗಳು, ಸಮಾಜದ, ಸರ್ಕಾರದ ಕರ್ತವ್ಯ.

ಬರಹಗಾರನ ದೃಷ್ಟಿಯಲ್ಲಿ ಕೇವಲ ಬರವಣಿಗೆಯ ಒಂದೇ ಚಿಂತೆ ಇದ್ದರೆ ಸಾಲದು. ತನ್ನ ಅನುಭವವನ್ನು, ತಾನು ಕಂಡ ಲೋಕವನ್ನು ಜಗತ್ತಿನ ಜನರಿಗೆ ಶೃತ ಪಡಿಸಲು ಹೊರಟ ಸಾಹಿತಿ ತನ್ನ ಬರವಣಿಗೆಯಿಂದ ಸಮಾಜದ ಮೇಲೆ ಜನತೆಯ ಮೇಲೆ ಆಗುವ ಪರಿಣಾಮ ಏನು? ಎಂಬುದನ್ನು ಚಿಂತಿಸಬೇಕು.

ವಿಪುಲವಾಗಿ ಬೆಳೆಯುತ್ತಿರುವ ಸಾಹಿತ್ಯದ ಪುಟಗಳು ಕೇವಲ ಲೈಂಗಿಕ ಜೀವನದ ಚಿತ್ರಣದಿಂದಲಾಗಲಿ ಅಥವಾ ಅನೈತಿಕ ಜೀವನದ ವೇಶ್ಯೆ, ಕುಡಿತ, ಇಸ್ಪೀಟು ಆಟಗಳ ಪರಿಸರಣಗಳ ವಿವರಣೆಯಿಂದಲಾಗಲಿ ತುಂಬಿದರೆ ಮಾತ್ರವೇ ಸಾಲದು, ಇದಷ್ಟೇ ಸಾಹಿತ್ಯದ ಪ್ರಗತಿಯಲ್ಲ: ಸಾಹಿತ್ಯ ಮಾನವನ ಮನೋವಿಕಾಸಕ್ಕೆ ಕಾರಣವಾಗಬೇಕು, ಅವನನ್ನು ಶ್ರೇಷ್ಠ ಹೃದಯಿಯನ್ನಾಗಿ ಮಾಡಬೇಕು, ಸಂಸಾರ, ಸಮಾಜ, ಸರ್ಕಾರ, ರಾಷ್ಟ್ರಗಳೆಲ್ಲೆಡೆಯಲ್ಲಿ ಸಾತ್ವಿಕ ವೃತ್ತಿಯನ್ನಾಗಿ ಮಾಡುವಂತಾಗಬೇಕು.

ಸಮಾಜದ ಏಳಿಗೆಗೆ, ವ್ಯಕ್ತಿಯ ವಿವೇಚನೆಗೆ, ಸಂಸಾರಗಳ ಸಮಸ್ಯೆಗಳ ಬದಲಾವಣೆಗೆ, ಓದುಗರ ಮನಸ್ಸಿಗೆ, ನಿತ್ಯಾ ಶಾಶ್ವತ, ಅನುಕಂಪ ಸಾತ್ವಿಕತೆ, ಮಾನವೀಯತೆ, ಆದರ್ಶ ಪರಂಪರೆಯನ್ನು ನೀಡದ ಸಾಹಿತ್ಯ ಎಷ್ಟಿದ್ದರೇನು! ಸತ್ಯಾನ್ವೇಷಣೆ, ಸಮಾಜ ಸುಧಾರಣೆ, ಸಮಸ್ಯೆಗಳ ನಿರ್ಮೂಲನಕ್ಕೆ ಸೃಷ್ಟಿಯಾದ ಸಾಹಿತ್ಯ-ಅನುಭವ ಸಾಹಿತ್ಯ, 'ಪ್ರಗತಿಶೀಲ ಸಾಹಿತ್ಯ'

ಸಾಹಿತ್ಯದ ಚಿಂತನೆ ಕೇವಲ ಬರಹಗಾರರಲ್ಲಿ ಮೂಡಿದರೆ ಮಾತ್ರವೇ ಸಾಲದು. ಓದುಗರಲ್ಲೂ ಮೂಡಬೇಕು. ಸಮಾಜ ಸುಧಾರಕರಲ್ಲೂ ಪ್ರತಿಧ್ವನಿಸಬೇಕು. ಇಂದು ಬರಹವನ್ನೇ ನಂಬಿರುವ ವ್ಯಕ್ತಿ ಪ್ರಕಾಶಕರ ಮಾತಿನಂತೆ ಬರೆಯದೆ ಹೋದರೆ ಮೂರು ತಿಂಗಳಿಗೊಂದು ಬಾರಿ ಅನ್ನಗಾಣ ಬೇಕಾಗುತ್ತದೆ. ಪ್ರಕಾಶಕರು ಓದುಗರ ಅಭಿರುಚಿಯನ್ನು ಅನುಸರಿಸಿ ಕೃತಿಗಳನ್ನು ಬಿಕರಿಸುತ್ತಾರೆ. ರಾಜಾಶ್ರಯದಲ್ಲಿ ಯಾವ ಚಿಂತೆಯೂ ಇಲ್ಲದೆ ಎನ್ನುತ ಕಾವ್ಯ ಬರೆಯುವ ಕವಿಯ ಕಾಲ ಮುಗಿಯಿತು.

ಉನ್ನತ ಸಾಹಿತ್ಯದ ಚಿಂತೆ ಸಮಾಜಕ್ಕಾಗಲಿ, ಸರಕಾರಕ್ಕಾಗಲಿ ಬೇಕಿಲ್ಲ. ಬರಹವನ್ನು ನಂಬಿದ ವ್ಯಕ್ತಿ ತಬ್ಬಲಿ ಮಗು. ಪರಿಸ್ಥಿತಿಗಳ ಕಾರಣ ಒಲ್ಲದ ಸಾಹಿತ್ಯವನ್ನು ಬರೆದು ಹೊಟ್ಟೆ ತುಂಬಿಸಿ ಕೊಳ್ಳಬೇಕಾಗುತ್ತದೆ.

ಇಂದಿನ ಕಾದಂಬರಿ ಯುಗದಲ್ಲಿ ಪ್ರಕಟವಾಗುವ ಅಧಿಕ ಸಂಖ್ಯೆಯ ಕೃತಿಗಳು ನಮ್ಮ ಜನತೆಯ ನೈತಿಕ ಮಟ್ಟ ಸಾಹಿತ್ಯದ ಅಭಿರುಚಿಯನ್ನು ಪ್ರಕಟ ಪಡಿಸುತ್ತವೆ.

ಇಂದು ಬೆಳೆಯುತ್ತಿರುವ ಒಂದು ಬಗೆಯ ವಿವೇಚನಾರಹಿತ ಸಾಹಿತ್ಯ ಒಂದು ಪೀಳಿಗೆ ಪರಂಪರೆಯನ್ನೇ ಅಧೋಗತಿಗೆ ಇಳಿಸುತ್ತದೆ ಎಂದು ಹೇಳಬಹುದು. ವಯಸ್ಕರಲ್ಲದ ಮಕ್ಕಳು ಶಾಲೆಗಳಲ್ಲಿ, ಮನೆಗಳಲ್ಲಿ ಪುಸ್ತಕಗಳ ಮರೆಯಲ್ಲಿ ಕಾದಂಬರಿ ಎಂಬ ಹೆಸರಿನ ಅಶ್ಲೀಲ ಕೃತಿಗಳನ್ನು ಓದುತ್ತಿರುವುದು ಎಲ್ಲರಿಗೂ ಚಿರಪರಿಚಿತ ಸಂಗತಿ.

'ಸಾಹಿತ್ಯದಲ್ಲಿ ಪ್ರಗತಿ:— ಯಶಸ್ವಿ ಹೋರಾಟ ಎಂದು ಹೇಳಿಕೊಳ್ಳುವ ಗುಂಪು ಸಾಹಿತ್ಯರಂಗದಲ್ಲುಂಟು. ಇದು ಪ್ರಗತಿಯೆ? ಎಂದು ಪ್ರಶ್ನೆ ಹಾಕಿಕೊಂಡರೆ ಅವರ ಅಂತರಾತ್ಮ ಉತ್ತರ ಕೊಡಬಹುದೆಂದು ತೋರುತ್ತದೆ.

ಬರಹಗಾರರಿಗೆ, ಪ್ರಕಾಶಕರಿಗೆ, ಮುದ್ರಕರಿಗೆ, ಓದುಗರಿಗೆ ಕೊರತೆ ಇಲ್ಲ. ಆದರೆ ಇವರೆಲ್ಲರೂ ತಮ್ಮನ್ನು ತಾವೇ ಒಮ್ಮೆ ವಿಮರ್ಶೆ ಮಾಡಿಕೊಂಡರೆ ಒಳಿತೇನೋ? ಅನ್ನಿಸುತ್ತದೆ. ಸುಸಂಸ್ಕೃತ ಸಂಪದ್ಭರಿತ ಭವ್ಯಭಾರತದ ಜನಾಂಗ ಎಂದು ಹೇಳಿಕೊಳ್ಳುವ ನಾವು ಇಂದಿನ ನಮ್ಮ ನೈತಿಕ ಮಟ್ಟವನ್ನು ಒಂದು ಬಾರಿ ನೆನಪು ಮಾಡಿಕೊಂಡರೆ ನಮ್ಮರಿವು ನಮಗಾಗಬಹುದು.

ಎಲ್ಲದಕ್ಕೂ ಸಂಸ್ಕಾರ ಅಗತ್ಯ.

ಸಾಹಿತ್ಯ ಬೆಳೆಯಬೇಕು, ಉಳಿಯಬೇಕು, ಬಾಳಬೇಕು. ಈ ವಿಷಯದಲ್ಲಿ ಎರಡು ಮಾತಿಲ್ಲ. ಆದರೆ ಇಂದು ಮುಂದಿನ ಪೀಳಿಗೆ ತಮ್ಮನ್ನೇ ತಾವರಿತು ಬಾಳುವಂತಹ, ನಿತ್ಯ ಶಾಶ್ವತವಾದ, ಚಿರಕಾಲ ನೆನೆಪಿನಲ್ಲಿ ಉಳಿಯುವಂತಹ ಸಾಹಿತ್ಯವೇ ಬೆಳೆಯಲಿ ಎಂದಾಸೆ. ಸಮಾಜದಲ್ಲಿ ನೈತಿಕ ಮಟ್ಟ ಕೊನೆ ಮುಟ್ಟಿ ಇಂದು ಮುಂದಿನ ಜನಾಂಗವೇ ಕಳಂಕ ಹೊತ್ತು ಮಲಿನ ಕೀರ್ತಿ ಹೊತ್ತು ಮೆರೆಯುವಂತಹ ಸಾಹಿತ್ಯ ಎಂದಿಗೂ ಬೇಡ.

ಇಂದು ಸಾಹಿತ್ಯ ಕ್ಷೇತ್ರದಲ್ಲಿ ಕೇವಲ ಪೂರ್ಣಾನುಭವ ಪಡೆದಿರುವ ಹಿರಿಯರು ಮಾತ್ರವೇ ಕಾದಂಬರಿ ಬರೆಯುತ್ತಿಲ್ಲ. ಅಪಾತ್ರ ಅನುಭವದ, ವಿಚಾರ ಗೊಂದಲಗಳ ಅನ್ಯಭಾವನೆಗಳ ಹಲವು ಮಂದಿಯೂ ಕಾದಂಬರಿ ಬರೆಯುತ್ತಿದ್ದಾರೆ. ಹೈಸ್ಕೂಲು ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳೂ ಕಾದಂಬರಿ ಬರೆಯುತ್ತಿದ್ದಾರೆ. ಹಲವು ಪ್ರಕಟವೂ ಆಗುತ್ತವೆ. ಪ್ರತಿಭೆಗಿಂತಲೂ ಪ್ರಭಾವಕ್ಕೆ ಪ್ರಾಶಸ್ತ್ಯವಿರುವ ಕಾಲದಲ್ಲಿ ಇದಕ್ಕೆ ಕೊರತೆ ಏನು?

ಸಾಹಿತ್ಯಕ್ಷೇತ್ರ ಸೀಮಿತವಾದುದಲ್ಲ ವಿಶಾಲವಾದುದು. ವಿಶ್ವತೋಮುಖವಾದುದು. ಬರೆಯುವವರೆಲ್ಲರನ್ನೂ ಟೀಕಿಸುವುದು ಪ್ರಸ್ತುತ ಉದ್ದೇಶ್ಯವಲ್ಲ. ಬರೆದುದೆಲ್ಲವೂ ಬರಹವಲ್ಲ, ಬರಹಗಾರನಿಗೆ ಬರೆಯುವ ಶಕ್ತಿ. ಸಹಜ ಪ್ರತಿಭೆ, ಗಹನ ವಿಷಯ ಚಿಂತನೆ ಸಂಸ್ಕಾರ, ಸಮಾಜದ ಕಲ್ಪನೆ, ಸಾಹಿತ್ಯಾನುಭವ ಎಲ್ಲವೂ ಬೇಕು. ಜನಮನ ರಂಜಿಸುವ, ಸಮಾಜದ ಬೆಳವಣಿಗೆಗೆ, ಉನ್ನತಿಗೆ ಕಾರಣವಾಗುವ, ವ್ಯಕ್ತಿಯನ್ನು ಮಾನವನನ್ನಾಗಿ ರೂಪಿಸುವ ಅಮೂಲ್ಯ ಸಾಹಿತ್ಯ ಹೊರಬರಲೆಂದು ಬಯಸುತ್ತೇನೆ.

ಪ್ರಸ್ತುತ ಸಾಹಿತ್ಯದ ಅಳಿವು- ಉಳಿವುಗಳ ವಿವೇಚನೆಯನ್ನು ಸಮಾಜ, ಸರಕಾರ, ಸಂಸಾರಿಗಳು ವಿವೇಚಿಸ ಬೇಕಾದುದು ಅಗತ್ಯ ಅಂತೆಯೇ ಇಂದಿನ ಬರಹಗಾರರ ತಲೆಯ ಮೇಲಿರುವ ಭಾರ ಹಿರಿದಾದುದು ಈ ಹೊರೆಯನ್ನು ಹೊರುವ ಶಕ್ತಿ ಸಾಹಿತಿಗಳಿಗಿದೆ ಅವರಿಂದ ರೂಪಿತವಾಗುವ ಸಾಹಿತ್ಯ ಸತ್ವದ ಕಿಡಿಯಾಗಿರಲಿ, ಕನ್ನಡ ವಾಙ್ಮಯ ಶ್ರೀಮಂತವಾಗಲಿ ಎಂದು ಹಾರೈಕೆ.

"ಸಿರಿಗನ್ನಡಂಗೆಲ್ಗೆ"

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ

ಋತುಭೇದ ಮೊದಲಿಲ್ಲದೆ

ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು

ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ

ನವಯುಗ ಪ್ರೆಸ್, ಉಡುಪಿ

ಅಥವಾ

ನವಭಾರತ ಪುಸ್ತಕ ಭಂಡಾರ, ಉಡುಪಿ

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ಕದನ ವಿರಾಮರೇಖೆಯಿಂದಾದ ಕಸಿವಿಸಿ

(ಆರನೇ ಪುಟದಿಂದ)

ಡೆ. ಭೂಪಟಗಳಲ್ಲಿ ಕಚ್ಛನು ಭಾರತದ ಭೂಪ್ರದೇಶವೆಂದೇ ಗುರುತಿಸಲಾಗುತ್ತದೆ; ಅಲ್ಲಿ ಗಡಿಯನ್ನು ನಿಶ್ಚಯಿಸಲಾಗಿರುತ್ತದೆಂದೂ ಭಾರತ ಸರಕಾರ ಹೇಳುತ್ತದೆ— ಆ ಪ್ರದೇಶಗಳಲ್ಲಿ ಈಗ ಗಡಿಯನ್ನು ನಿಶ್ಚಯಿಸಿಕೊಂಡು ಗುರುತಿಸಬೇಕಾಗಿರುತ್ತದೆ. ಯಾಕೆಂದರೆ (೧) ಭಾರತ ಸರಕಾರದ ಮಾತನ್ನು ಪಾಕಿಸ್ತಾನ ಅಂಗೀಕರಿಸುವುದಿಲ್ಲ. ಅಲ್ಲಿ ಮೂರು ಸಾವಿರದ ಐನೂರು ಚದರ ಮೈಲು ಪ್ರದೇಶ ವಿವಾದಾಸ್ಪದವೆಂದು ಪಾಕಿಸ್ತಾನ ಹೇಳುತ್ತಿದೆ. (೨) ಭಾರತ—ಪಾಕಿಸ್ಥಾನದ ನಡುವೆ ಜನವರಿ ೧೯೬೦ರಲ್ಲಾಗಿರುವ ಮಾತುಕತೆಯಲ್ಲಿ ಕಚ್ಛ್ ಗಡಿಯ ಕುರಿತು ಇನ್ನೂ ಹೆಚ್ಚಿನ ಮಾಹಿತಿ ಹಾಗೂ ಪ್ರಮಾಣ ಸೂಚಕ ವಿಷಯಗಳನ್ನು ಸಂಗ್ರಹಿಸಿ ವಿವಾದವನ್ನು ಬಗೆ ಹರಿಸಿಕೊಳ್ಳಬೇಕೆಂದಿದೆ.

ಅಧಿಕಾರಿಗಳು ಮಾತುಕತೆ ಮುಗಿಸಿದ ನಂತರ ಹಾಗೂ ಕದನ ವಿರಾಮ ರೇಖೆಯನ್ನೊಪ್ಪಿಕೊಂಡ ಒಂದು ತಿಂಗಳೊಳಗೆ ಇತ್ತಂಡಗಳಿಂದ ಸಂಬಂಧಪಟ್ಟ ಸಚಿವರು ಸೇರಿ ವಿಚಾರ ವಿನಿಮಯ ಮಾಡಿಕೊಳ್ಳಬೇಕು; ಗಡಿ ಗುರುತಿಸಿದ ವಿಷಯವನ್ನು ತೀರ್ಮಾನಿಸಿಕೊಳ್ಳಬೇಕು. ತಮ್ಮ ತಮ್ಮ ಬಳಿ ಇರುವ ಪ್ರಮಾಣ ಸಾಕ್ಷ್ಯಗಳ ಆಧಾರದ ಮೇಲೆ ನಿಶ್ಚಯಕ್ಕೆ ಬಂದು ಗಡಿ ಗುರುತಿಸಿ ಕೊಳ್ಳಬೇಕು. ಸಭೆಯಲ್ಲಿ ತಮ್ಮ ತಮ್ಮ ಪ್ರಮಾಣ ಸಾಕ್ಷ್ಯಗಳನ್ನು ಮಂಡಿಸಲು ಇತ್ತಂಡದವರಿಗೂ ಪೂರ್ಣ ಸ್ವಾತಂತ್ರ್ಯ ಇದೆ. ಕದನ ವಿರಾಮ ರೇಖೆಯನ್ನೊಪ್ಪಿಕೊಂಡ ಒಂದು ತಿಂಗಳೊಳಗೆ ಇತ್ತಂಡದ ಸಚಿವರ ಸಭೆ ಕೂಡಬೇಕು ಮತ್ತು ಎರಡು ತಿಂಗಳೊಳಗೆ ಗಡಿ ನಿರ್ಣಯಕ್ಕೆ ಬರಬೇಕು. ಅದಕ್ಕೆ ೧೯೫೯ ಅಕ್ಟೋಬರ್ ದಿನಾಂಕ ಇಪ್ಪತ್ತನಾಲ್ಕರ ಸೂಚನಾ ಪತ್ರವು ಆಧಾರವಾಗಿರಬೇಕು. ಇಲ್ಲಿ ಯಾವದೊಂದು ನಿರ್ಣಯಕ್ಕೂ ಬರಲಿಕ್ಕೆ ಸಾಧ್ಯವಾಗದಿದ್ದಲ್ಲಿ ಇತ್ತಂಡದವರೂ ಒಂದು ವಿಚಾರಣಾ ಸಮಿತಿಗೆ ಒಪ್ಪಿಕೊಳ್ಳಬೇಕು.

ಕದನ ವಿರಾಮ ರೇಖೆ ಉಲ್ಲಂಘಿಕೊಂಡ ನಾಲ್ಕು ತಿಂಗಳೊಳಗೆ ಈ ವಿಚಾರಣಾ ಸಮಿತಿಯು ನೇಮಕವಾಗಬೇಕು. ಈ ಸಮಿತಿಯಲ್ಲಿ ಮೂವ್ವರಿರಬೇಕು. ಆದರೆ ಇಬ್ಬದಿಯವರ್ಯಾರೂ ಅದರಲ್ಲಿ ಭಾಗವಹಿಸುವಂತಿಲ್ಲ. ಒಬ್ಬೊಬ್ಬರು ಒಂದೊಂದು ಪ್ರತಿನಿಧಿಗಳನ್ನು ನಾಮಕರಣ ಮಾಡಬೇಕು. ಹೀಗೆ ಒಬ್ಬರು ಪಾಕಿಸ್ಥಾನದ ಪರವಾಗಿಯೂ ಇನ್ನೊಬ್ಬರ ಭಾರತದಿಂದ ನಾಮಕರಣಗೊಳಿಸಲ್ಪಟ್ಟವರೂ ಇರಬೇಕು. ಮೂರನೆಯ ಸದಸ್ಯನನ್ನು ನಿಮ್ಮ ಇತ್ತಂಡದವರೂ ಸೇರಿ ಆರಿಸಬೇಕು. ಆ ಸದಸ್ಯನೇ ಆ ಸಮಿತಿಯ ಅಧ್ಯಕ್ಷನಾಗುತ್ತಾನೆ. ಕದನ ವಿರಾಮ ರೇಖೆಯನ್ನೊಪ್ಪಿಕೊಂಡ ನಾಲ್ಕು ತಿಂಗಳೊಳಗೆ ಸಮಿತಿಯು ಸ್ಥಾಪನೆಯಾಗಬೇಕಾದರೂ ಮೂರು ತಿಂಗಳೊಳಗೆ ಅಧ್ಯಕ್ಷನ ನೇಮಕವಾಗಬೇಕು. ಅಧ್ಯಕ್ಷನನ್ನು ಆರಿಸಿಕೊಳ್ಳುವಲ್ಲಿ ಇಬ್ಬದಿಯವರೂ ಸೋತರೆ ಆ ವಿಷಯವನ್ನು ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯವರಿಗೆ ಬಿಟ್ಟು ಬಿಡಬೇಕು. ಅವರು ಅಧ್ಯಕ್ಷನನ್ನು ಆರಿಸಬೇಕು. ಅದನ್ನು ಇತ್ತಂಡದವರೂ ಒಪ್ಪಿಕೊಳ್ಳಬೇಕು.

ಈ ಸಮಿತಿಯ ತೀರ್ಮಾನವೇ ಕೊನೆಯದ, ಅದರ ತೀರ್ಮಾನವನ್ನು ಪ್ರಶ್ನಿಸುವ ಹಕ್ಕು ಇತ್ತಂಡದವರಿಗೂ ಇರುವದಿಲ್ಲ ಇಬ್ಬರೂ ಒಪ್ಪಿಕೊಳ್ಳಲೇ ಬೇಕು. ಸಮಿತಿ ತನ್ನ ತೀರ್ಮಾನವನ್ನು ತಿಳಿಸಿದ ನೇಲೆ ಅದನ್ನು ಆದಷ್ಟು ಬೇಗನೆ ಇತ್ತಂಡದವರೂ ಕಾರ್ಯರೂಪಕ್ಕೆ ತರಬೇಕು ಮತ್ತು ಏನಾದರೂ ಕಷ್ಟವೆಂದು ಕಂಡುಬಂದಲ್ಲಿ ಸಮಿತಿಯ ಬಳಿ ಸಂದೇಹ ನಿವೃತ್ತಿ ಮಾಡಿಕೊಳ್ಳಬೇಕು. ಆದುದರಿಂದ ಕಾರ್ಯ ಮುಗಿಯುವ ವರೆಗೂ ಸಮಿತಿ ಜೀವಂತವಾಗಿರುತ್ತದೆ.

ಇದು ಒಡಂಬಡಿಕೆಯ ಮುಖ್ಯ ಸಾರಾಂಶ. ಇದರಿಂದ ನಮಗಾಗುವ ಹಿತವೇನು? ದೇಶದ ಹಿತದೃಷ್ಟಿಯಿಂದ ಒಪ್ಪಂದ ಸ್ವೀಕಾರಾರ್ಹವೇ? ಮುಂತಾದ ವಿಷಯಗಳನ್ನು [illegible]ಎಂದೆ ನೋಡುವ.

ಇದೀಗ ನಾಗರ ಪಂಚಮಿ ಹಬ್ಬವನ್ನು ನಾಡಿನಾದ್ಯಂತ ಆಚರಿಸಿರುವೆವು. ಅಂದರೆ ಭಾರತೀಯರು ಹಾವಿಗೂ ಹಾಲೆರೆಯಲು ಹಿಂಜರಿಯುವವರಲ್ಲವೆಂಬುದನ್ನು ಜಗತ್ತಿಗೇನೇ — ಪಾಕೀಸ್ತಾನ ಹಾಗು ಚೈನಾಕ್ಕೆ ಮಾತ್ರವಲ್ಲ—ಸ್ಪಷ್ಟಪಡಿಸಿರುವೆವು. ಅಲ್ಲ ಹಾಲೆರಯುವವರೂ ಓರ್ವ ಶಾಸ್ತ್ರಿಗಳೇ. [ಬ್ರಾಹ್ಮಣರು]. ಅಂದರೆ ನಮ್ಮ ಶಾಸ್ತ್ರೀಜೀಯವರ ಒಡಂಬಡಿಕೆ, ಶಾಂತಿ–ಸಂಧಾನಗಳನ್ನು ಶಾಂತವಾಗಿ ಅವಲೋಕಿಸಿದಲ್ಲಿ ಅವು ಕೇವಲ ಹಾವಿಗನೇ ಹಾಲೆರೆಯುವ ರೀತಿಯಲ್ಲಿವೆಯೆಂಬುದನ್ನು ಕಾಣಕೊಳ್ಳಬಹುದು. ನಮ್ಮ ಶಾಸ್ತ್ರೀಜೀಯು ಎರೆಯುತ್ತಿರುವ ಹಾಲನ್ನೆಂದು ಕುಡಿದು ಪಾಕಿಸ್ತಾನಿ ಕಾಳಿಂಗ ಕೈಗನೇ ಕಡಿಯುತ್ತದೆ. ಅದಕ್ಕದು ಅಂಜುವದಿಲ್ಲ ಉಪಕಾರ ಸ್ಮರಣೆಯು ಅಭ್ಯಾಸವೇ ಪಾಕಿಸ್ಥಾನಕ್ಕಿಲ್ಲ. ಅದು ಜನ್ಮದಾರಭ್ಯ ಬಂದ ಗುಣ. ಅದನ್ನು ಬದಲಾಯಿಸುವುದು ಬಹಳ ಕಷ್ಟ. ಅದರಲ್ಲೂ ಕಳ್ಳು ಕುಡಿದ ಕಪಿಯ ಮೈಲೇ ಚೇಳು ಇರುವೆಗಳು ಆಟ ಆಡುತ್ತಿವೆ. ಅದರಿಂದ ಕಳ್ಳಿನ ಅಮಲಿನಲ್ಲಿರುವ ಕಪಿ ಕುಣಿದಾಡುತ್ತಿದೆ. ಅದೂ ಅಲ್ಲದೆ ಅದರ ಕೈಯಲ್ಲಿ ಅಮೇರಿಕದ ತನ್ನಪ್ಪದ ಕೊಳ್ಳಿ ಇದೆ. ಹಾಗಿರುವಾಗ ಅದು ಸುಮ್ಮಗಿದ್ದೀತೆ? ಈ ಕಾಳಿಂಗನ ಗುಣ ಅಥವಾ ಕಪಿಚೇಷ್ಟೆಯನ್ನು ನಿಗ್ರಹಿಸುವ ಬದಲು ನಾವೇ ಅದಕ್ಕೆ ಶಾಂತಿಯ ಭ್ರಾಂತಿಯಿಂದ ಹಾಲೂಡುತ್ತಿದ್ದೇವೆ. ಪಾಕಿಸ್ಥಾನಿ ಕಾಳಿಂಗನೋ "ಬರಲಿ ಬರಲೆಂ"ದು ಸ್ವಾಗತ ಮಾಡಿಕೊಳ್ಳುತ್ತಿದೆ. ಕಾಳಿಂಗ ಮರ್ದನ ಗೈದಿರುವ ಶ್ರೀ ಕೃಷ್ಣನ ವಂಶಜರು ನಾವಲ್ಲವೇನು? ನಮಗೆ ಆತ್ಮ ವಿಸ್ಮೃತಿಯಾಗಿದೆ, ಶಾಂತಿ ಮೃಗಮರೀಚಿಕೆಯ ಹಿಂದುಗಡೆ ಅತಿ ವೇಗವಾಗಿ ಓಡುತ್ತಿದ್ದೇವೆ. ಪರರಾಷ್ಟ್ರಗಳು ಅದರ ಪರಮ ಲಾಭವನ್ನು ಪಡೆಯುತ್ತಿವೆ.

ನಿನಗೆ ಕೀರ್ತಿ ಏಕೊ ಕಾಣೆ!

ಗಂಟೆ ಗಂಟೆ ಕಾಲವೆಲ್ಲ
ಜನರ ಸಂತೆಯೊಡನೆ ಬೆರೆತು|
ನಡುಗುತಿತ್ತು ಅವನ ಕಾಲು
ಸುಡುತಲಿತ್ತು ಹೃದಯ ಭಾಗ
|| ೧ ||
ಗಂಟಲೊಡೆಯುವಂತೆ ಮಾತು
ಕಾಲು ಹೋಗುವಂತೆ ನೋತು|
ಭಾಷಣದ ಮಾಲೆ ಬಿಗಿದು
ಮೆಪ್ಪುದನ್ನೆ ಅಗಿದು ಜಗಿದು || ೨ ||
ಬೋಧಿಸಿಮುದು ವ್ಯರ್ಥವೆಲ್ಲ
ಕೇಳಲಾರರವರು ಎಲ್ಲ!
ಸಮಾಜದೆಲ್ಲ ಸೇವೆಯೇಕೆ?
ತನ್ನ ಮನೆಯು ತನಗೆ ಸಾಕೆ!
|| ೩ ||
ಗಂಜಿಗಂದು ಅಕ್ಕಿಯಿಲ್ಲ—
ವೆಂದು ಮಿಡುಕುತಿರುವ ಸತಿಯು
ಶಾಲಾ ಫೀಸಿಗೇನು ಎಂದು!
ಅತ್ತು ಹಣವ ಕೇಳ್ವ ಸುತನು || ೪ ||
ಇತರ ಧಿವೆಯು ತಣಿಸು ನೀನು
ಬಾಹ್ಯ ಜಗದ ಹಂಗು ಏನು|
ಗೃಹದ ಸ್ವಾಸ್ಥ್ಯಕಿಂತ ಮೇಲೆ
ನಿನಗೆ ಕೀರ್ತಿ ಏಕೊ ಕಾಣೆ ||೫||
ಸತಿಯು ಸುತರು ಕೇಳ್ದರಲ್ಲ
ಇತರರೆಲ್ಲ ಕೇಳ್ವರು ||
ಹಿಂದಿನಿಂದ ಹಳಿವರವನ
ಬುದ್ಧಿವಾದ ಕೇಳ್ದರಿಲ್ಲ || ೬ ||
ನಿಸ್ವಾರ್ಥ ಸೇವೆಗಿಂದು
ಕಾಲವಲ್ಲ ಸರ್ವವಿದಿತ |
ನಿನ್ನ ಹೊಟ್ಟೆ ತುಂಬಿಕೊ—ಬರಿದೆ
ಇತರ ಗೊಡವೆ ಏಕೆ ಮನುಜ
|| ೭ ||
ಬಾಯಿಯಲ್ಲಿ ಹೇಳ್ವರಿಲ್ಲ ತಂಥ
ಅವರೆ ಆಚರಿಸಿಲ್ಲ ಎನ್ನ
ಆದರ್ಶದ ನುಡಿಯ ಜಿಹ್ವೆ—
ಯಲ್ಲಿ ಕಾರ್ಯವದಕೆ ವಿರುದ್ಧ ||೮||
ಸಾಕು ಸಾಕು ಸುಳ್ಳು ಕಟ್ಟಿ
ನಿಲ್ಲಿಸಿನ್ನು ನಟನವು |
ಹೃದಯವಿದ್ದು ಕಾರ್ಯಮಾಡು
ಅಳಿಬೇಡ ದಾನವಾ || ೯ ||
ತಾಯಿ ನಾಡಿಗ ನಿ ಸೇವೆಯೆಸಗಿ
ಮಂದಿಯನ್ನು ಕಾಣು ನೀ |
ಗೃಹದ ಸ್ವಾಸ್ಥ್ಯಕಿಂತ ಮೇಲೆ
ನಿನಗೆ ಕೀರ್ತಿ ಏಕೊ ಕಾಣೆ! ||೧೦||

ಶ್ರೀ ಕೆ ಆನಂದ ವೇಣೂರು.

ಸ್ವಾತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಸಹಕರಿಸಿರಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಮ್. ಎಟ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ —
ನವಭಾರತ ಪುಸ್ತಕ ಭಂಡಾರ, ಉಡುಪಿ.





ಸತ್ಯ ಸಂಗತಿ

ಹಸಿವೆಯಿಂದಲೂ ಹಾಸ್ಯ

ಬರೆದವರು: ಶ್ರೀ "ಮಾರಂಗ"

ಗಂಡ ಆಫೀಸಿನಿಂದ ಬರುವಾಗ ಅವರ ಕೋಪರೇಟಿವ್ ಸ್ಟೋರಿನಿಂದ ಅಕ್ಕೀ, ರವೆ, ಗೋದಿ ಇತ್ಯಾದಿಗಳ ಚೀಲವನ್ನು ಹೊತ್ತುಕೊಂಡು ಮನೆಗೆ ಬಂದು 'ಉಸ್ಸ್' ಅಂತ ಚೀಲವನ್ನು ನೆಲದಲ್ಲಿಟ್ಟು 'ಹಮ್ಮಾ' ಅಂತ ಕುರ್ಚೀಲಿ ಕುಳಿತು ಉಸಿರು ಬಿಡುವ ಆಫೀಸರ್ ಗಂಡನ ದಾರುಣಾವಸ್ಥೆಯನ್ನು ಕಂಡು ಓಡಿ ಬಂದ ಹೆಂಡತಿ—"ಅಯ್ಯೋ! ಪಾಪ!—ಇನ್ಮೇಲೆ, ಮೊದಲಿನ ಹಾಗೆ ಎಲ್ಲಾ ಅಂಗಡೀಲೂ ಇಷ್ಟ ಪ್ರಕಾರದಲ್ಲಿ ಅಕ್ಕೀ ಕಾಳು ಎಲ್ಲಾ ಸಿಕ್ಕುವ ಹಾಗೆ ಏರ್ಪಾಡು ಮಾಡ್ತೀವೇ ಅಂದವರಿಗೇನೇ ಓಟು ಹಾಕ್ತೀವೇ ಅನ್ನಿ. ಇಲ್ಲದಿದ್ದರೆ ಯಾರಿಗೂ ಓಟು ಹಾಕ್ಬೇಡಿ" ಅಂದಳು!

ಂ ಂ ಂ

ಗಂಡ ಆಫೀಸಿನಿಂದ ಮನೆಗೆ ಬರುತ್ತಾ ಕೈಯಲ್ಲೊಂದು ಹೆಗಲಲ್ಲೊಂದು ಚೀಲಗಳೊಂದಿಗೆ ಮನೇ ಮುಂದೆ ತುಸು ದೂರ ಗೆಳೆಯನೊಂದಿಗೆ ಹರಟೆ ಹೊಡೀತಾ ನಿಂತದ್ದನ್ನು, ಅವರ ದಾರೀ ಕಾಯುತ್ತಿದ್ದ ಹೆಂಡತಿ ನೋಡಿ ಮಗಳ ಹತ್ತಿರ-"ಆಫೀಸು ಬಿಟ್ಟು ಅಕ್ಕಿಯೊಂದಿಗೆ ಸೀದಾ ಮನೆಗೆ ಬರೋದು ಬಿಟ್ಟು ಅಲ್ಲಿ ನಿಂತು ಕುಶಾಲಾಗಿ ಹರಟೆ ಹೊಡೀತಿದ್ದಾರಲ್ಲಾ! ಎಸರು ಕುದೀತಾ ಇದೆ, ಸುಮ್ಮನೆ ಕಟ್ಟಿಗೆ ನಷ್ಟವಾಗ್ತಾ ಇದೆ. ಹೋಗಿ ಅಪ್ಪನ ಕರಿ!" ಎಂದಳು.

ಂ ಂ ಂ

ಗುಮಾಸ್ತರೊಬ್ಬರು ದರ್ಜಿಯವನ ಹತ್ತಿರ ಒಂದು ಶರ್ಟ ಹೊಲಿಯಲಿಕ್ಕೆ ಕೊಡುತ್ತ—"ಈ ಶರ್ಟಿನಲ್ಲಿ ಎರಡು ಬದಿಯ ಕಂಕುಳಗಳಲ್ಲೂ ಎರಡೆರಡು ಕಿಲೋ ಮೊಟ್ಟಾ ಹಿಡಿಸೋ ಹಾಗೆ ಜೇಬುಗಳನ್ನಿಟ್ಟುಬಿಡಿ. ಮಾಮೂಲು ಜೇಬೂ ಇರಲಿ". ಎಂದು ಅಪ್ಪಣೆ ಕೊಟ್ಟರು.

ಂ ಂ ಂ

ಒಂದು ಶ್ರೀಮಂತರ ಮನೆಯ ಮುಂದೆ ಹೀಗೊಂದು ಬೋರ್ಡ ಒಮ್ಮೆ ಕಾಣಿಸಿತು: "ಕ್ಯೂನಲ್ಲಿ ನಿಂತು ಸಾಮಾನು ತರಲು ಸಮರ್ಥ ತಾಳ್ಮೆಯುಳ್ಳ ಆಳೊಬ್ಬ ಬೇಕು."

ಂ ಂ ಂ

ವ್ಯಾಪಾರಿಯ ಹೆಂಡತಿ "ಹೀಗೆ ಬ್ಲಾಕ್ ಮಾರ್ಕೆಟ್ ಮಾಡ್ತಾ ಇದ್ದೀರಲ್ಲಾ, ಪಾಪಗೀಪ ಸುತ್ತಿಕೊಂಡೀತೋ ಏನೋ!"

ವ್ಯಾಪಾರೀಗಂಡ:— "ಪುಣ್ಯ ಕಣೇ ನಾ ಮಾಡೋದು! ಹೇಗಾದರೂ ಕೊಟ್ಟು ಜೀವವುಳಿಸೀ ಅಂತ ಕೇಳೋನಿಗೆ ಕೊಟ್ಟು ಅವರ ಪ್ರಾಣಾ ಕಾಪಾಡೋದಕ್ಕಿಂತ ಹೆಚ್ಚಿನ ಪುಣ್ಯ ಬೇರೆಯುಂಟೇನೇ ಈ ಕಾಲದಲ್ಲಿ?"

ಂ ಂ ಂ

"ದಿನವಿಡೀ ಕ್ಯೂನಲ್ಲಿ ನಿಂತು ನಿನಗೆ ಸಿಕ್ಕಿದ ಅಕ್ಕೀ ಇಷ್ಟೇ ತಾನೆ? ಸಮಯದ ಬೆಲೆ ಎಷ್ಟೆಂತ ಆಲೋಚನೆ ಮಾಡಿದಿಯಾ? ನನ್ನ ಹತ್ರ ಬಂದಿದ್ರೆ ಸ್ವಲ್ಪ ಹೆಚ್ಚಿನ ಬೆಲೆಗೆ ನಿನಗೆ ಬೇಕಷ್ಟು ಅಕ್ಕಿ ಕೊಡ್ತಿದ್ದೆ. ನಿನ್ನ ಸಮಯದ ಬೆಲೇನೂ ನಾ ಕೇಳುವ ಅಕ್ಕಿ ಬೆಲೇನೂ ಲೆಕ್ಕ ಹಾಕಿ ನೋಡಿಕೋ." ಎಂದನೊಬ್ಬ ಬ್ಲಾಕ್ ಮಾರ್ಕೆಟ್ ವ್ಯಾಪಾರಿ ನ್ಯಾಯಬೆಲೆಯ ಅಂಗಡಿಯಿಂದ ಒಂದಿಷ್ಟು ಅಕ್ಕಿ ಕೊಂಡೊಯ್ಯುವ ಒಬ್ಬನನ್ನು ನೋಡಿ.

ಂ ಂ ಂ

ಒಂದು ಸಾರಿ ಒತ್ತೊತ್ತಾಗಿ ನಿಂತ ಕ್ಯೂನಲ್ಲಿ ಹೀಗೆಂದು ಕೂಗೆದ್ದಿತು: "ಅಯ್ಯಯ್ಯೋ! ಮೈಗೆ ಮೈ ಅಂಟಿಕೊಂಡು ಹೋಯ್ತಪ್ಪೋ!"

ಂ ಂ ಂ

ಒಬ್ಬನೊಬ್ಬ ಕನಸಿನಲ್ಲಿ ದೇವರನ್ನು ನೋಡಿ- "ನನಗೆ ಮೂರು ಹೊತ್ತೂ ಹಸಿವಾಗುವುದಕ್ಕೆ ಬದಲಾಗಿ ಮೂರು ದಿನಕ್ಕೊಮ್ಮೆ ಹಸಿವಾಗೋ ಹಾಗೆ ವರ ಕೊಡಿ ಸ್ವಾಮಿ" ಅಂತ ಬೇಡಿಕೊಂಡನಂತೆ.

ಂ ಂ ಂ

ಕ್ಯೂನಲಿ ನಿಂತು ಕಾಲು ಮರಕಟ್ಟಿಹೋದಾಗ ಕೈ ಬೆರಳುಗಳ ತುಂಬಾ ಅಕ್ಕೀ ಸಿಕ್ಕದಾಗ ನಡೀಲಿಕ್ಕಾಗದೆ ಪೇಚಾಡಿದವನನ್ನು ಯಾರೋ ಕರುಣೆಯಿಂದ ಜಟ್ಕಾದಲ್ಲಿ ಮನೆ ಸೇರಿಸಿದರಂತೆ.

ಂ ಂ ಂ ಂ

"ಅಮ್ಮಾ ಒಂದು ಮುಷ್ಟಿ ಬಿಕ್ಷೆ!" ಅಂತ ಭಿಕ್ಷುಕ ಮನೆ ಬಾಗಿಲಲ್ಲಿ ನಿಂತಾಗ ಮನೆಯಾಕೆ-"ಅಕೋ, ಅಲ್ಲಿ ಹೋಗಿ ಕ್ಯೂನಲ್ಲಿ ನಿಂತು, ಈ ಚೀಲದಲ್ಲಿ ಅಕ್ಕಿ ತಾ. ಎಷ್ಟು ಕಿಲೋ ಉಂಟೋ ಅಷ್ಟು ಮುಷ್ಟಿ ಭಿಕ್ಷೇ ಹಾಕ್ತೀನೆ" ಎಂದಳು.

ಚಪ್ಪರದಲ್ಲಿ ತಲೇ ಮೇಲೆ ಮಂತ್ರಾಕ್ಷತೆ ತಳದಾಗ ಎಲ್ಲರೂ ಒಂದಕ್ಕೀಕಾಳು ಕೂಡಾ ಬಿಡದೆ ಹೆಕ್ಕಿಕೊಳ್ಳುತ್ತ "ಇದು ನನ್ನ ತಲೆಗೆ ಬಿದ್ದದ್ದು" "ಅಲ್ಲ ನನ್ನ ತಲೆಗೆ ಬಿದ್ದದು" ಅಂತ ಕೆಲವರೊಳಗೆ ಜಟಾಪಟಿಯಾಯಿತಂತೆ.

ಂ ಂ ಂ

ಒಬ್ಬರು ಆಫೀಸರ್ರಿಗೆ ತಮ್ಮ ಕೋಪರೇಟಿವ್ ಸ್ಟೋರಿಂದ ಚೀಲ ಹೊತ್ತು ಅದೊಂದು ಅಭ್ಯಾಸವಾಗುತ್ತಿರಲು ಅವರಿಗೆ ತೋರಿದ್ದು ಹೀಗೆ "ಪರವಾಯಿಲ್ಲ ಇನ್ನು ಎಡ ಹೆಗಲಲ್ಲಿ ಐದು, ಬಲ ಹೆಗಲನ್ನು ಹತ್ತು ಕಿಲೋ ಭಾರ ಹೊರಲಿಕ್ಕೆ ಕಲಿತೆ. ಇನ್ನಿಷ್ಟು ಹೆಚ್ಚು ಹೊರಲು ಕಲಿತು ಬಿಟ್ರೆ ಈ ಉದ್ಯೋಗ ಹೋದ್ರೂ ಚಿಂತಿಲ್ಲ. ಬದುಕಿ ಕೊಂಡೇನು."

ಂ ಂ ಂ

ಒಬ್ಬ ವ್ಯಾಪಾರಿ: "ಸರಕಾರೀ ಉದ್ಯೋಗಸ್ಥರಿಗೆಲ್ಲಾ ಡಿ. ಎ. ಏರಿಸಿದ್ದಾರಂತೆ."

ಇನ್ನೊಬ್ಬ ವ್ಯಾಪಾರಿ: "ಹೌದೌದು. ಆದಕ್ಕೇ ನಾವೂ ಒಂದಾಗಿ ಸೇರಿ ಕಿಲೋಗೆ ಎರಡು ಪೈಸೆಯಾದರೂ ಏರಿಸಬೇಕಿನ್ನು.

— —

NAVAYUGA

Announcement

You are aware that the INDEPENDENCE SPECIAL of your favourite Weekly 'NAVAYUGA' has over the years earned a reputation for the sumptuous fare it offers to its extensive readership spread over nineteen districts of Mysore State.

The 'Special' will be issued as usual on August 15th this year to mark the 18th Anniversary of our Independence. To commemorate the occasion it will contain essays and skits by noted authors and journalists of Karnataka and pictures and sketches narrating the steady progress of this country in various spheres of national life including social, economic, religious and educational.

August 15th is an auspicious day and the 'Navayuga Independence Special' a fitting medium to convey the message of your goods to hundreds of homes in the State. Kindly send in your advertisement material on or before August 5th, 1965.

ADVT. MANAGER.

NAVAYUGA, UDIPI· S.K.

ಗೀತಾ-ದ್ವಿತೀಯ ಅಧ್ಯಾಯ

(ಐದನೇ ಪುಟದಿಂದ)

ಅಹಂ ತ್ವಾ ಸರ್ವ ಪಾಪೇಭ್ಯೋ |
ಮೋಕ್ಷಯಿಷ್ಯಾಮಿ ಮಾಶುಚಃ
|| ೧೮—೬೬ ||

ಧ್ಯಾನ ಮಾಡುವಾಗ ಎಲ್ಲಾ ಧರ್ಮಗಳನ್ನು ಎಂದರೆ, ಪ್ರತಿಯೊಬ್ಬರಿಗೂ ಅವರವರ ವ್ಯಕ್ತಿತ್ವದ ರೂಪು ರೇಖೆ ಎನಿಸಿದ ದೈಹಿಕ, ಮಾನಸಿಕ, ಬೌದ್ಧಿಕ ಬಂಧನಗಳನ್ನು ತ್ಯಜಿಸಬೇಕೆಂದು ಶ್ರೀಕೃಷ್ಣನು ಈ ಶ್ಲೋಕದಲ್ಲಿ ಹೇಳಿರುವನು. ಹೀಗೆ ಎಲ್ಲಾ ವಿಚಾರಗಳನ್ನು, ಬಂಧನಗಳನ್ನು ಮರೆತು ಕೇವಲ ನನ್ನನ್ನೇ ಎಂದರೆ ಆತ್ಮವನ್ನೇ ಚಿಂತಿಸಿದಾಗ, "ಅಹಂ" ಕಳೆದು ಹೋಗುವುದು. ವ್ಯಕ್ತಿತ್ವವು ಮರೆತು ಹೋಗುವುದು. ಆಗ ಸರ್ವ ಪಾಪಗಳೆಂದರೆ ಹಿಂದೆ ಮಾಡಿದ ಕೃತ್ಯಗಳಿಂದ ಉಂಟಾಗುವ ಮನಃಕ್ಷೋಭೆ ಮಾಯವಾಗುವುದು. ಪಾಪಗಳೆಂದರೆ ಮಾಡಿದ, ಯೋಚಿಸಿದ, ಇರಿಸಿದ ದೈಹಿಕ, ಮಾನಸಿಕ, ಬೌದ್ಧಿಕ ಕರ್ಮಗಳಿಂದ ಉಂಟಾಗುವ ಮನಃಕ್ಷೋಭೆ ಮಾನಸಿಕ, ಬೌದ್ಧಿಕ ಮಟ್ಟಗಳಲ್ಲಿ ಇರದೆ ಇರಬೇಕಾದರೆ ಆ ಎರಡರ ಮಟ್ಟ ದಾಟಿ ಮೇಲೆ ಹೋಗಬೇಕು. ಎಂದರೆ ಸಂಪೂರ್ಣವಾಗಿ ತನ್ನ ವ್ಯಕ್ತಿತ್ವವನ್ನು ಮರೆಯಬೇಕು. ಆಗ ಬಂಧನವು ತೊಲಗಿ ಮೋಕ್ಷ ದೊರಕೀತು. ಆಗ ಆತ್ಮವು ಮಾತ್ರವೇ ಉಳಿಯುವುದು. ಹೀಗೆ ಯಾವಾಗಲೂ 'ಮಾಶುಚ' ಎಂದರೆ ನನಗೆ ಮೋಕ್ಷ ದೊರೆಯಬೇಕು. ಬೌದ್ಧಿಕ ಎಲ್ಲೆ ದಾಟಿ ಆಚೆ ಹೋಗಬೇಕು ಎಂಬ ಕಳವಳವನ್ನು ಯೋಚನೆಯನ್ನು ಬಿಟ್ಟು ಬಿಡು ಎಂದರೆ ಹಾಗೆ ಬಂಧ ವಿಮೋಚನೆಗೊಳ್ಳಬೇಕೆಂಬ ಆತುರತೆಯನ್ನು ಮರೆಯಬೇಕು. ಹಾಗೆ ಒಂದಿನಿತು ಯೋಚನೆ ಇದ್ದರೆ ಮನಸ್ಸಿನಿಂದಾಚೆಗೆ ನೀನು ಹೋಗಲಾರೆ. ಯೋಚನೆ ಎಂದರೆ ಬುದ್ಧಿ, ಮನಸ್ಸು. ಆ ಎಲ್ಲೆಯನ್ನು ದಾಟಲು ಎಲ್ಲಾ ಯೋಚನೆಗಳನ್ನೂ ಸಾಧನೆಯನ್ನೂ ಕೂಡಾ ಮರೆಯು ಬೇಕು. ಆಗ ನಿನಗೆ ನಾನು ವಿಮೋಚನೆಯು ಉಂಟಾಗುವಂತೆ ಮಾಡುವೆನು ಎಂದು ಶ್ರೀ ಕೃಷ್ಣನು ಹೇಳಿರುವನು. ಇದು ಸದಾ ಸತ್ಯ. ಏಕೆಂದರೆ ಈ ರೀತಿ ಹೇಳಿದಂತೆ ಮಾಡಿದರೆ, ಅಲ್ಲಿ ಉಳಿಯುವುದು ಕೇವಲ ಆತ್ಮ ಸ್ವರೂಪ.

|| ಶ್ರೀ ಕೃಷ್ಣಾರ್ಪಣಮಸ್ತು ||

ಚಂದಾದಾರರಲ್ಲಿ ವಿನಂತಿ.

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 45 ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿ ಇರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರ್ಯ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿಗೆ ಸಮೀಪದ ಶಾಖೆಯಲ್ಲಿ "ನವಯುಗ"ದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೇನೇಜರ್
ನವಯುಗ, ಉಡುಪಿ.

ಭಿನ್ನವಾಗಿದ್ರೂ ಅಭಿನ್ನ ವಿವೇಕ

(ನಾಲ್ಕನೇ ಪುಟದಿಂದ)

'ಬೇಡ ಕಂಡ್ರಿ... ನಿಮ್ಮ ಪ್ರಾಣ ಹೋಗ್ಬಿಟ್ರೆ...."

'ಅಯ್ಯೋ, ನನ್ನದೆಲ್ಲೀಂತ? ನಾವೆಲ್ಲಾ ಓತಿ ಕಾಟಗಳ ಜಾತಿಗೆ ಸೇರಿರೋದು. ಎತ್ತ ಮಳೆ ಬರುತ್ತೆ ಅತ್ತ ಕೊಡೆ ಹಿಡಿಯೋರು..."

"ನೀವು ಏನೇ ಅನ್ನಿ, ಮುರಾರ್ಜಿಯವ್ರು ತಪ್ಪ ಚಿನ್ನದಿಂದ ಅಜರಾಮರವಾಗಿದ್ದಾರೆ...'

"ಹಾಗಲ್ವೆ ತನ್ನ ಕ್ರಾಂತಿಕಾರಿ ನೀತಿಯಿಂದ...."

"ಅದೇನು ಕ್ರಾಂತಿಯೋ! ಎಲ್ಲರೂ ಕಾದೂಂತಂದದ್ದನ್ನ ಅಲ್ಲಾಂತಂದ ಮಾತ್ರಕ್ಕೆ ಅದು ಕ್ರಾಂತಿಕಾರಿಯಾಯ್ತೆ?"

"ಹಾಗಲ್ಲ. ಹಾಗೆ ಅನ್ನೋದ್ರಲ್ಲೂ ನ್ಯಾಯವಿದೆ- ಹೃದಯದ ಧ್ವನಿಯಿದೆ..'

"ಹೌದಪ್ಪ, ಉತ್ತರದಲ್ಲಿ ಮುರಾರ್ಜಿಯವ್ರು, ದಕ್ಷಿಣದಲ್ಲಿ ಕೆಂಗಲ್ ಹನುಮಂತಯ್ಯನವ್ರು..."

"ಹ ಹ್ಹ ಹ್ಹ... ಸರಿಯಾಗಿದೆ ಜೋಡಿ. ಇಬ್ರೂ ಒಂದೇ ಥಾಟಿಯವ್ರು...."

"ಆದ್ದರಿಂದಲೇ ಈ ಸುಬ್ರಮಣ್ಯದ ಜೋಡಿ ನಿಮ್ಮ ಟೋಪಿಯವ್ರ ಬೂಕಿನಲ್ಲಿ ಸ್ಥಾನವಿಲ್ಲ....'

'ಏಕೆ?'

'ಈಗಿನ ಸರಕಾರದ ನೀತಿಯನ್ನು ಖಂಡಿಸುವ ಭಿನ್ನಾಭಿಪ್ರಾಯಗಳು ಇವರು.... ಈ ಒಳಜಗಳದಿಂದ್ಲೇ ಕಾಂಗ್ರೆಸ್ಸು ಹಾಳಾಗಿರೋದು....'

"ಇರಬೇಕು ನೋಡು ಭಿನ್ನಾಭಿಪ್ರಾಯ... ಅದು ಸ್ವಾಭಾವಿಕ. ಬೆಂಕಿ ಸರಿಯಾಗಿ ಉರಿಯೋದಕ್ಕೆ ಒಲೆಯಲ್ಲಿ ಎರಡು ಕೊಳ್ಳಿ ಇಡ್ತಾರೆ ನೋಡು ಹಾಗೆ.... ಅದು ಹಿಂದೆಯೂ ಇತ್ತು, ಇಂದಿಗೂ ಇದೆ...'

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ.

O. S. No. 33/1965.

ಚೋಮ ಗೌಡ —ವಾದಿ.

ಮತ್ತು

ಶೇಷಮ್ಮ ಕೂಡಾ —ಪ್ರತಿವಾದಿರು.

1ನೇ ಪ್ರತಿವಾದಿ—ಶೇಷಮ್ಮ— ಶ್ರೀಮತಿ ಅಂಮೂನ ಮಗಳು ಮ ಕುಮಾರಯ್ಯ ಬಲ್ಲಾಳರ ಹೆಂಡ್ತಿ ಬೆಳ್ತಂಗಡಿ ತಾಲೂಕು ನ್ಯಾಯತರ್ಪು ಗ್ರಾಮದ ದೇರಜಾಲು ಎಂಬಲ್ಲಿ.

ಸದ್ರಿ ವಾದಿಯು ಡಿಕ್ರೀ ನೋಟಿನ ಹಣಗಳ ವಸೂಲಿ ಬಗ್ಗೆ ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ದಾವೆಯು ನಿಂಮ ಹಾಜರಾತಿ ಬಗ್ಗೂ, ಪ್ರತಿವಾದಿಕಲ್ಪಿಸುತ್ತದೋ ಯಿಲ್ಲವೋ ಎಂದು ತಿಳಿಯುವ ಬಗ್ಗೂ, ಕೊಡ್ಡೆ ಫಿಕ್ಸ್ ಮಾಡ್ವ ಬಗ್ಗೂ ತಾ. 16 8.65ಕ್ಕೆ ವ್ಯಾದಯಿರುವುದರಿಂದ ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಆ ದಿನ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದರೆ ನಿಂಮ ಗೈರುಹಾಜರಿಯಲ್ಲಿ ಫೈಸ್ಲ ಮಾಡೋಣಾಗುವದೆಂತಲೂ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗ್ಯದೆ.

(Sd.) K. T. Bhat,

Advocate for. Pltf.

ಮೊಕ್ಕಾಂ ಪುತ್ತೂರು,
ತಾ. 22.7.1965.

ದಿಲ್ಲಿಯಲ್ಲಿ ಗೋವಾ ನಾಟಕ

(ಏಳನೇ ಪುಟದಿಂದ)

ನ್ನು ಗೋಮಾಂತಕರಿಗೆ ನೀಡಿದರೆ, ಮುಂದೆ ಯಾವುದೇ ನಿರ್ಣಯಕ್ಕೆ ಬರಲು ಸಹಾಯಕವಾಗಲಾಗುವುದು.

ಆದುದರಿಂದ, ಭಾರತದ ಉಳಿದ ರಾಜ್ಯಗಳು, ಮುಖ್ಯವಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕಗಳು ತಮ್ಮ ಅಭಿಪ್ರಾಯವನ್ನು ತಾವು ಮಾಡಿಕೊಂಡಿರಲಿ, ಗೋವೆಯ ಬಗ್ಗೆ ಯಾವುದೇ ರೀತಿಯಲ್ಲಿ ತಲೆ ಕೆಡಿಸಿಕೊಳ್ಳದಿರಲಿ ಎಂದು ಸಲಹೆಯನ್ನು ಕಾಕೋಡ್ಕರರಿತ್ತಿದ್ದಾರೆ. ಗೋವೆಯ ಮುಂಗಡ ಪತ್ರದ ಕೊರತೆ ರೂ. ೧೧ ಕೋಟಿಯನ್ನು ತಾನು ತುಂಬಿ ಕೊಡುವುದಾಗಿ ಮಹಾರಾಷ್ಟ್ರ ಹೇಳಿತ್ತು. ಅದಕ್ಕೆ ಇವರ ಪ್ರತಿಕ್ರಿಯೆ: "ಮುಂದಿನ ತಾರೀಕು ಹಾಕಿ ನೀಡುವ ಚೆಕ್ಕುಗಳ ಮೇಲೆ ಗೋಮಾಂತಕರಿಗೆ ವಿಶ್ವಾಸವಿಲ್ಲ."

ಇಂತಹ ಪರಿಸ್ಥಿತಿಯಲ್ಲಿ ಗೋವೆಯ ಭವಿಷ್ಯವನ್ನು ಗಡಿಬಿಡಿಯಲ್ಲಿ ಬರೆಯಲು ಕಾಂಗ್ರೆಸ್ ಬ್ರಹ್ಮರಿಗೆ ಹೇಗೆ ಧೈರ್ಯ ಬಂದೀತು? ವೈ. ಬಿ. ಚವನರು ಇಂದ್ರ ಪದವಿಯಲ್ಲಿದ್ದಾರೆ, ನಿಜವೇ. ಮಹಾರಾಷ್ಟ್ರೀಯರ ಮಹಾ ಪಡೆಯ

'ಆದ್ರೂ ಅದನ್ನ ತೋರಿಸ್ಬಾರ್ದು...'

"ಯಾಕೆ? ಪಕ್ಷದೊಳಗಡೆ ಮುಕ್ತಮನದಿಂದ ಚರ್ಚೆ ನಡೆದರೆ ಸರಿಯೇ. ಹೊರಗಡೆ ಏನೇನೋ ಅನ್ನುವುದು ದೊಡ್ಡ ಹಗರಣ..."

"ಹ್ಞಾಂ, ತಿಳಿಯಿತೂನ್ನಿ. ಇಲ್ಲೇ ನನಗೂ ನಿಮಗೂ ಮತ ಭೇದವಾಯ್ತು. ಇನ್ನು ಮುಂದುವರಿಸಿದ್ರೆ ಮತ್ತೆ ಕೊನೆಯೇ ಸಿಗದು."

"ಅಂದ್ರೆ....'

'ನನ್ಗೊಗೊತ್ತು. ನಿಮ್ಮ ಸ್ವಭಾವ' ಮುಖಕ್ಕೆ ತಕ್ಕಂತೆ ಮಾತಾಡೋದನ್ನ ನೀವೆಲ್ಲಿ ಕಲ್ತಿದ್ದೀರಿ? ಇದ್ದದ್ದನ್ನ ಇದ್ದಂತೆ ಅದು ಬಿಟ್ಟು ನಾಲ್ಕು ಜನರ ನಿಷ್ಠೂರವೇ ನಿಮ್ಮ ಸಂಪಾದನೆ....'

"ಅದು ಏನೇ ಇಲ್ಲಿ. ನನಗಂತೂ ನಾನು ನನ್ನ ಮಾಡ್ಲಿಲ್ಲಾಂತನ್ನೋ ಸಮಾಧಾನವಿದೆಯಲ್ಲಾ, ಯಾರು ಏನು ಬೇಕಾದ್ರೂ ಅನ್ಲಿ....'

"ಇದು ವಿಶ್ವ ಭ್ರಾತೃತ್ವದ ಯುಗ. ನಮ್ಮ ಮೇಲೆ ಉಳಿದವ್ರು ಏನಾದರೂ ಅನ್ನ ಬೇಕಾದ್ರೆ ನಮ್ಮಲ್ಲಿ ದೋಷವಿರ್ಲೇಬೇಕು....'

"ಶ್ವಾನನೂ ನಿಮ್ಮ ಬೊಗಳಲಾರಂಭಿಸುವುದೇ?"

"ಅಲ್ರಿ, ಇದ್ರಲ್ಲಿ ಆನೆ ಯಾರು ಶ್ವಾನ ಯಾರಂತ..."

'ಹ್ಞಾಂ, ಯಾರೆ ಇಲ್ಲಿ, ನಾವಿಬ್ರೂ ಒಂದೇ ಜಾತಿಗೆ ಸೇರಿರೋಣ...ಒಬ್ರು ಆನೆ, ಒಬ್ರು ಶ್ವಾನ ಆಗಿ ಬಿಟ್ರೆ ತಾರತಮ್ಯ— ಒಂದ್ವೇಳೆ ಭಿನ್ನವಾಗಿದ್ರೂ ಅಭಿನ್ನವಿವೇಕ...."

"ಸಾಕು ಬಿಡೀಂಪ್ರೆ....ಯಾರೋ ಎಂದೋ... ನಾಟಕ್ಕದಿಸ ಹಾಯಾಗಿ ಮಳೆ ಬಂದಿದೆ ಚಳಿಯಾಗುತ್ತೆ....'

"ಗೊತ್ತಾಯ್ತು.. .ಬಿಟ್ಟಲಿಡು... ಒಂದು ಬಿಟ್ಟ..."

"ಆಯ್ತು, ಯಥಾಜ್ಞಾ ..."

—ಗೋರಾ.

ಬೆಂಬಲವೂ ಅವರಿಗಿದೆ. ಅವರ ತೃಪ್ತಿಗಾಗಿಯೇ ಗೋವೆಯನ್ನು ಮಹಾರಾಷ್ಟ್ರಕ್ಕೆ ಬಲಿ ಕೊಡುವ ಇರಾದೆ ಲಾಲ ಬಹದೂರರದ್ದು. ಹಾಗೆ ಮಾಡಿದರೆ, ನಿಜಲಿಂಗಪ್ಪನವರನ್ನು ಎದುರು ಹಾಕಿ ಕೊಳ್ಳ ಬೇಕಾಗುತ್ತದೆ. ಮತ್ತೊಮ್ಮೆ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗುವ ಆಶೆಯಿಂದಿರುವ ಕಾಮರಾಜರು ಈಗಲೇ ತಮ್ಮ ಪ್ರಬಲ ಸಮರ್ಥಕ ನಿಜಲಿಂಗಪ್ಪನವರ ಮನಸ್ಸನ್ನು ನೋಯಿಸಲಾರರು. ಆದುದರಿಂದಲೇ ಅವರು ಕಾಂಗ್ರೆಸ್ ಪಕ್ಷದ ಚುನಾವಣೆಯಾದ ನಂತರವೇ ಈ ಬಗ್ಗೆ ದೃಢ ನಿಲುವು ತಳೆದಾರು. ಮಹಾರಾಷ್ಟ್ರದ ವಾದವನ್ನು ಅಲ್ಲಗಳೆಯುವಷ್ಟೇ ವಾದರೆ ಒಂದಾರು ತಿಂಗಳು ಕಾಯುವುದಕ್ಕೂ ಚವನರು ಸಿದ್ಧರೇ. ಆದುದರಿಂದಲೇ ಈಗ ಕರ್ನಾಟಕದ ವಾದವನ್ನು ಕೂಲಂಕಷ ಕೇಳುವ ನಾಟಕ ನಡೆಯುತ್ತಿದೆ.

ಈ ನಡುವೆ ಮತ್ತೊಂದು ಮಾತು ಕೇಳಿ ಬರುತ್ತದೆ. ಎಲ್ಲ ಪಂಗಡಗಳಿಗೂ ಒಪ್ಪಿಗೆಯಾಗುವ ಸೂತ್ರವನ್ನು ಕಂಡು ಹಿಡಿಯುವಲ್ಲಿ ಶಾಸ್ತ್ರೀ-ಕಾಮರಾಜರು ತಲೆಕೆಡಿಸಿಕೊಳ್ಳುತ್ತಾರೆ ಎಂದು. ಆದರೆ, ಇಂತಹ ಸೂತ್ರವನ್ನು ಯಾರಿಂದಲೂ ತರಲು ಪಡು ಸಾಧ್ಯವಲ್ಲ. ಮಹಾರಾಷ್ಟ್ರ-ಕರ್ನಾಟಕಗಳ ಮೊಣಕೈಗೆ ಬೆಲ್ಲ ತಾಗಿಸಿ ಕೆಲವು ಕಾಲ ದೂಡಬಹುದೇ ಹೊರತು ಮತ್ತ್ಯಾವ ನಿರ್ಣಯಕ್ಕೂ ಬರುವುದರಿಂದ ಒಂದು ಪಕ್ಷಕ್ಕೆ ಬೇಸರವಾಗುವುದು ಖಂಡಿತ. ಆದುದರಿಂದ, ಸದ್ಯಕ್ಕೆ ಕಾಂಗ್ರೆಸ್ ಹೈಕಮಾಂಡಿಗಿರುವ ದಾರಿಯೆಂದರೆ, ನೆಹರೂ ಆಶ್ವಾಸನೆಯನ್ನು ಪಾಲಿಸುವುದು ಮಾತ್ರ. ಇದಕ್ಕೆ ಮೂವರ ನೈತಿಕ ಬಲವೂ ಇರಲೇ ಬೇಕು.

ಸ್ವಾತಂತ್ರ್ಯ ವಿಶೇಷಾಂಕ

ತಾ. 15ರಂದು ಸ್ವಾತಂತ್ರ್ಯ ವಿಶೇಷ ಸಂಚಿಕೆಯು ಪ್ರಕಟವಾಗುವುದರಿಂದ ಬರುವ ವಾರ (ತಾ. 12—8—65) ಪ್ರತ್ಯೇಕ ವಾರ ಪತ್ರಿಕೆ ಪ್ರಕಟವಾಗುವುದಿಲ್ಲ.

—ಮೆನೇಜರ್.

ಡಾ। ಆನಂದ ಶೆಟ್ಟರ ಕನ್‌ಸಲ್ಟಿಂಗ್ ರೂಮ್ಸ್‌ನ ಪ್ರಾರಂಭೋತ್ಸವ

ಮಂಗಳೂರು, ತಾ. 1_8_65ನೇ ಸಂಜೆ ರಥಬೀದಿಯ ಟೆಂಪಲ್ ಸ್ಕ್ವೇರಿನಲ್ಲಿ ಡಾ। ಆನಂದ ವಿ. ಶೆಟ್ಟಿ, ಎಂ. ಡಿ., ಎಂ. ಆರ್. ಸಿ. ಪಿ., ಇವರ ಕನ್‌ಸಲ್ಟಿಂಗ್ ರೂಮ್ಸ್‌ನ ಪ್ರಾರಂಭೋತ್ಸವವು ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತು. ನಗರದ ಮತ್ತು ಹೊರಗಿನ ಹಲವಾರು ಗಣ್ಯ ಡಾಕ್ಟರರೂ ವ್ಯಕ್ತಿಗಳೂ ಆಗಮಿಸಿ ಡಾ. ಶೆಟ್ಟರಿಗೆ ಯಶ ಕೋರಿದರು. ಮುನ್ಸಿಫ್ ಶ್ರೀ ವಿ. ಕಷ್ಣಪ್ಪ ಶೆಟ್ಟರೂ ಡಾ। ಶೆಟ್ಟರೂ ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು. ಯಂತ್ರೋಪಕರಣಗಳಿಂದ ಸುಸಜ್ಜಿತವಾದ ಪರೀಕ್ಷಾಗಾರವನ್ನು ನೋಡಿ ಎಲ್ಲರೂ ಮೆಚ್ಚಿಗೆ ವ್ಯಕ್ತಪಡಿಸಿದರು. ಆರಂಭದಲ್ಲಿ ಉಪಹಾರದ ಕೂಟ ನಡೆಯಿತು.

ಶ್ರೀ ರಾಮರಾಯರ ನಿಧನ

ಉಡುಪಿ ಎಲ್. ಐ. ಸಿ. ಬ್ರಾಂಚ್ ಮೆನೇಜರಾಗಿದ್ದ ಶ್ರೀ ಸಿ. ಎನ್. ರಾಮರಾಯರು ಇದೇ ತಾ. 1ರಂದು ಬೆಳಗ್ಗೆ ಸ್ವಕ್ಷೇತ್ರದಲ್ಲಿ ಐಂತು ಕಮ್ಮಿ ೬೦ನೆಯ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ದಿವಂಗತರು ಉತ್ಸಾಹಿಗಳೂ ಜನಪ್ರಿಯರೂ ಆಗಿದ್ದರು. ಅವರ ಹಿಂದೆ ಪತ್ನಿ ಮತ್ತು ಮೂವರು ಹೆಣ್ಣು ಮಕ್ಕಳು ಇರುವರು.

ಮಂಗಳೂರು ಲಯನ್ಸ್ ಕ್ಲಬ್ ಸಭೆ.

ಕಳೆದ ತಾ. 28ರಂದು ಮಂಗಳೂರು ಲಯನ್ಸ್ ಕ್ಲಬ್ಬಿನ ಸಭೆಯು ನಗರದ ಥಿಯೋಸೋಫಿಕಲ್ ಲಾಜಿನಲ್ಲಿ ನಡೆಯಿತು. ಶ್ರೀ ಎನ್. ರಾಮರಾಯರು ಮುಖ್ಯ ಅತಿಥಿಗಳಾಗಿದ್ದರು. ಕ್ಲಬ್ಬಿನ ಅಧ್ಯಕ್ಷ ಡಾ। ಕೆ. ಬಾಲಕೃಷ್ಣ ಶೆಟ್ಟರು ಸ್ವಾಗತಿಸಿದ ಬಳಿಕ ಶ್ರೀ ರಾಮರಾಯರು ನಮ್ಮ ಕೃಷಿ ಸಮಸ್ಯೆಗಳನ್ನು ವಿವರಿಸಿದರು. ಅಂತ್ಯದಲ್ಲಿ ಡಾ। ಬಿ. ಆರ್. ರಾಮರಾವ್‌ರವರು ವಂದನಾರ್ಪಣೆ ಗೈದರು.

ಸೈಕಲ್ ಸವಾರಿ.

ಉಡುಪಿ, ಪುದಿಕೇರಿಯ ಅನ್ವರ್ ಬಾಷಾ ಅವರು ಎಲ್. ಎಲ್ ಎ. ಲೈಬ್ರೆರಿಯ ಮಹಾರದಲ್ಲಿ 40 ತಾಸುಗಳ ಸೈಕಲ್ ಸವಾರಿಯನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ಪ್ರಾರಂಭದಲ್ಲಿ ಶ್ರೀ ಎ. ಜೆ. ಅಲ್ವೆಯವರು ಸ್ವಾಗತಿಸಿದ ಬಳಿಕ ಶ್ರೀ ಪಿ. ರಂಗನಾಥ ಶೆಣೈಯವರು ಉದ್ಘಾಟಿಸಿದರು. ಕೊನೆಯಲ್ಲಿ ಶ್ರೀ ಬಿ. ಅಣ್ಣಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಮುಕ್ತಾಯ ಸಮಾರಂಭ ನಡೆಯಿತು. ಜ। ಬಾವಾಜಾನ್ ಸಾಹೇಬರು ಧನ್ಯವಾದ ಸಮರ್ಪಿಸಿದರು.

'ಬಂಟರ ಯಾನೆ ನಾಡವರ ಸಂಘ, ಮುಂಬಯಿ.

ಈ ಮೇಲಿನ ಸಂಘದ 37ನೇ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಡಾ। ಯಚ್. ಬಾಲಕೃಷ್ಣ ಶೆಟ್ರ ಅಧ್ಯಕ್ಷತನದಲ್ಲಿ, ತಾ. 25—7—1965ರಂದು ದಾದರಿನಲ್ಲಿರುವ ಕಿಟ್ಟಿ ಭಂಡಾರಿ ಹಾಲಿನಲ್ಲಿ ಜರಗಿತು. ಈ ಕೆಳಗಿನವರನ್ನೊಳಗೊಂಡ 35 ಮಂದಿ ಸದಸ್ಯರು, 1965 _ 66 ನೇ ವರ್ಷದ ಕಾರ್ಯಕಾರಿ ಸಮಿತಿಗೆ ಚುನಾಯಿಸಲ್ಪಟ್ಟರು: "ಡಾ. ಯಚ್. ಬಾಲಕೃಷ್ಣ ಶೆಟ್ಟಿ (ಅಧ್ಯಕ್ಷ) ಶ್ರೀ ಯಸ್. ಕೃಷ್ಣದಾಸ್ ಶೆಟ್ಟಿ (ಉಪಾಧ್ಯಕ್ಷ) ಶ್ರೀ ಯನ್. ಗೋಪಾಲ ಶೆಟ್ಟಿ (ಗೌ. ಪ್ರ. ಕಾರ್ಯದರ್ಶಿ) ಶ್ರೀ ಕೆ. ಕರುಣಾಕರ ಶೆಟ್ಟಿ (ಗೌ. ಉಪಕಾರ್ಯದರ್ಶಿ) ಶ್ರೀ ಕೆ. ಸದಾಶಿವ ಭಂಡಾರಿ(ಗೌ. ಕೋಶಾಧಿಕಾರಿ) ಶ್ರೀ ಪಿ. ಶೀನಪ್ಪ ಶೆಟ್ಟಿ (ಗೌ. ಉಪಕೋಶಾಧಿಕಾರಿ)"

ವನಮಹೋತ್ಸವ

ಕಡಿಯಾಳಿಯವರ ಪಂಚಾಯತ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯ ಯು. ವಾಸುದೇವ ನಾಯ್ಕರ ನೇತೃತ್ವದಲ್ಲಿ, ಶಾಲಾ ಆವರದಲ್ಲಿ ನೂತನ ಸಸಿಗಳನ್ನು ನೆಟ್ಟು ವನಮಹೋತ್ಸವವನ್ನು ಆಚರಿಸಲಾಯಿತು. ವನಮಹೋತ್ಸವದ ವಿಚಾರವಾಗಿ ಭಾಷಣಗಳಾದುವು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 39/1965.

K. ಯೆಲ್ಲಪ್ಪ ಆಚಿಲ, ಪೌತಿ, ಸಹಾ —ವಾದಿರು

ಮತ್ತು

ಶಿವಪ್ಪ ಹೆಗ್ಡೆ ಸಹಾ —ಪ್ರತಿವಾದಿರು

ಕೋರ್ಟಿನ ಹುಕುಂ ಪ್ರಕಾರ ಸದ್ರಿ ದಾವೆಯ 4ನೇ ಪ್ರತಿವಾದಿ ಶೀನಪ್ಪ ಹೆಗ್ಡೆ, ಚೆನ್ನಕ್ಕೆ ಹೆಗ್ಗಡ್ತಿ ಮಗ ನುದಾಡಿ ಗ್ರಾಮದ ಬಳಿ ಎಂಬಲ್ಲಿರುವವ ಮತ್ತು 8ನೇ ಪ್ರತಿವಾದಿ ಬಾಬು ಹೆಗ್ಡೆ, ದಾರು ಹೆಗ್ಗಡ್ತಿ ಮಗ, ನಿಟ್ಟೆ ಗ್ರಾಮದ ಸುದೆಲ್ಲೆ ಎಂಬಲ್ಲಿರುವವ. ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ-

ಸದ್ರಿ ದಾವೆಯ ವಾದಿರು ದಾವಾ ಆಸ್ತಿಯಲ್ಲಿರುವ ಗೇಣಿ ಹುಟ್ಟುವಳಿ ಕೇಳಿ ಪ್ರತಿವಾದಿರ ಮೇಲೆ ಹಾಕಿದ ಸದ್ರಿ ದಾವೆಯು ತಾ. 18_8_1965ಕ್ಕೆ 4.8ನೇ ಪ್ರತಿವಾದಿರ ಹಾಜರಾತಿ ಬಗ್ಗೆ ಇಟ್ಟಿದೆ. ಆದ್ದರಿಂದ ಆ ಕುರಿತು 4.8ನೇ ಪ್ರತಿವಾದಿರ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಪ್ರತಿವಾದಿರ ಆಕ್ಷೇಪದ ಹೊರತು ದಿವ್ಯ ದಾವೆ ತೀರ್ಮಾನಿಸಲ್ಪಡುತ್ತದೆ.

H. K. Gopalkrishna Rao.

Vakil for Pltf.

Karkal, 31-7-65

ಸಿಂಡಿಕೇಟ್ ಬ್ಯಾಂಕ್ ನೌಕರರ ಚಳವಳ

ಉಪದ್ರಕಾರಿ ಗೊಂದಲ, ಬೆದರಿಕೆ ಹಾಗೂ ಅಕ್ರಮ ಪ್ರವೇಶ— ಎಂದು ನ್ಯಾಯಾಧೀಶ ಹಟ್ಟಂಗಡಿ.

ದೇಶದಾದ್ಯಂತ ಸಾರ್ವಜನಿಕರ ಗಮನವನ್ನು ಸೆಳೆದಿದ್ದ ಸಿಂಡಿಕೇಟ್ ಬ್ಯಾಂಕ್ ನೌಕರ ಸಂಘದ ಚಳವಳವು ಸ್ಥಗಿತಗೊಂಡಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಚಳವಳದ ನೆಪದಲ್ಲಿ, ಟ್ರೇಡ್‌ಯೂನಿಯನ ಹಕ್ಕುಗಳ ನೆಪದಲ್ಲಿ, ಯೂನಿಯನಿನ ಕಾರ್ಯಕರ್ತರು ಹಾಗೂ ಸದಸ್ಯರು ಬ್ಯಾಂಕಿನ ಹಿತಾಸಕ್ತಿಗಳಿಗೆ ಆತಂಕವನ್ನೊಡ್ಡುವ ಕೆಲವಾರು ಕಾರ್ಯಗಳಲ್ಲಿ ಉದ್ಯುಕ್ತರಾದುದನ್ನು ಯಾರೂ ಮರೆಯುವಂತಿಲ್ಲ. ಚಳವಳದ ಹೆಸರಿನಲ್ಲಿ ನೌಕರರನೇಕರು ಕಾನೂನಿಗೆ ವ್ಯತಿರಿಕ್ತವಾಗಿ ನಡೆದು, ಹಿಂಸಾಚಾರ, ಅತಿಕ್ರಮಣ, ಅಕ್ರಮ ಪ್ರವೇಶ ಇತ್ಯಾದಿಗಳಲ್ಲಿ ತೊಡಗಿರುವುದನ್ನು ಕಂಡ ಸಿಂಡಿಕೇಟ್ ಬ್ಯಾಂಕಿನ ಆಡಳಿತವರ್ಗವು ಮುಂಬಯಿ ನಗರದ ಸಿವಿಲ್ ಕೋರ್ಟಿನಲ್ಲಿ ನೌಕರ ಸಂಘದ ಈ ವರ್ತನೆಯ ವಿರುದ್ಧ ದಾವೆಯನ್ನು ಹೂಡಿತು. ಈ ದಾವೆಯ ವಿಚಾರಣೆ ನಡೆಸಿದ ಜಡ್ಜ್ ಶ್ರೀ. ಆರ್. ಡಿ. ಹಟ್ಟಂಗಡಿಯವರು ಈ ಕುರಿತು ವ್ಯಕ್ತಪಡಿಸಿದ ಅಭಿಪ್ರಾಯಗಳು ಮನನೀಯವಾಗಿದ್ದು ನೌಕರ ಸಂಘಗಳು ಇದರಿಂದ ಕಲಿಯಬೇಕಾದ ಪಾಠಗಳು ಹಲವಾರಿವೆ.

ನೌಕರ ಸಂಘವು ಬ್ಯಾಂಕಿನ ಪರಿಸರದೊಳಗೆ, ಅಥವಾ ಅದರ ಯಾವುದೇ ಶಾಖೆಯ ಪರಿಸರದೊಳಗೆ ಮತ್ತು ಬ್ಯಾಂಕಿನ ಪ್ರವೇಶ ದ್ವಾರದ ಹತ್ತು ಗಜ ದೂರದೊಳಗೆ ಮತಪ್ರದರ್ಶನ ನಡೆಸಕೂಡದೆಂದು ನ್ಯಾಯಾಧೀಶರು ತಡೆಯಾಜ್ಞೆಯನ್ನಿತ್ತಿದ್ದಾರೆ. ಇಷ್ಟು ಮಾತ್ರವಲ್ಲದೆ ನೌಕರ ಸಂಘವು ಸಭೆ ಜರಗಿಸುವುದು, ಘೋಷಣೆಗಳನ್ನು ಕೂಗುವುದು, ತಾವಾಗಿ ಅಥವಾ ತಮ್ಮ ಏಜಂಟರು ಅಥವಾ ನೌಕರರ ಮೂಲಕ ಬ್ಯಾಂಕನ್ನು, ಅದರ ಆಫೀಸರರನ್ನು ಅಥವಾ ಗಿರಾಕಿಗಳನ್ನು ಬೈಯುವುದನ್ನು ನಿಷೇಧಿಸಿರುತ್ತಾರೆ. ಯಾವುದೇ ವಿಧದ ಕರಪತ್ರ, ಸರ್ಕ್ಯುಲರು ಅಥವಾ ಇನ್ಯಾವುದೇ ತರದ ನೋಟೀಸು ವಗೈರೆಗಳನ್ನು ಪ್ರಕಟಿಸುವುದು, ಬ್ಯಾಂಕಿನ ಭದ್ರತೆ ಇತ್ಯಾದಿಗಳ ವಿಚಾರ ಅಪಪ್ರಚಾರ ನಡೆಸುವುದೂ ಕೂಡದೆಂದು ಆಜ್ಞೆ ಇತ್ತಿರುತ್ತಾರೆ.

ಬ್ಯಾಂಕಿನ ಕಟ್ಟಡದ ಗೋಡೆಗಳಲ್ಲಿ ವಾಲ್‌ಪೋಸ್ಟರುಗಳನ್ನು ಹಚ್ಚುವುದು, ಬ್ಯಾಂಕಿನ ಆಫೀಸರರ, ಡೈರೆಕ್ಟರರ ಅಥವಾ ಗಿರಾಕಿಗಳ ಮನೆಯ ಮೂವತ್ತು ಗಜ ದೂರದೊಳಗೆ ಮೆರವಣಿಗೆ ತೆಗೆಯುವುದು, ಕೂಗುವುದು ಇತ್ಯಾದಿಗಳನ್ನು ಕೂಡಾ ನಿಷೇಧಿಸಿರುತ್ತಾರೆ.

ಈ ರೀತಿಯ ತಡೆಯಾಜ್ಞೆಯು ನಮ್ಮ ಘಟನೆಯನ್ವಯ ಕೊಡಮಾಡಿದ ಮೂಲಭೂತ ಹಕ್ಕುಗಳ ಉಲ್ಲಂಘನೆಯಲ್ಲ ಎಂದೂ ಜಡ್ಜರು ಪ್ರತಿಪಾದಿಸಿದ್ದಾರೆ. ಮುಷ್ಕರ ನಡೆಸಲು, ಬೊಬ್ಬಾಟೆ ನಡೆಸಲು ಮುಖ್ಯವಾಗಿ ಮಾಲಕರ ಸ್ಥಳದೊಳಗೆ ಕೂಗಲು, ಉಪದ್ರಕಾರಿ ಕೃತ್ಯಗಳನ್ನು ನಡೆಸಲು ಯಾವುದೇ ಮೂಲಭೂತ ಹಕ್ಕು ಅನುವು ಮಾಡಿ ಕೊಡುವುದಿಲ್ಲ ಎಂದೂ ನ್ಯಾಯಾಧೀಶರು ಅಭಿಪ್ರಾಯ ಪಟ್ಟಿರುತ್ತಾರೆ.

ಸ್ವಾತಂತ್ರ್ಯವೆಂದರೆ ಸ್ವೇಚ್ಛೆಯಲ್ಲ. ಘಟನೆಯ ಹತ್ತೊಂಭತ್ತನೇ ಕಲಮಿನನ್ವಯ ಸರಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ಈ ಮೂಲಭೂತ ಹಕ್ಕುಗಳ ಕುರಿತು ನಿರ್ಬಂಧಿಸುವ ಅಧಿಕಾರ ಪಡೆದಿದೆ ಎಂದು ನ್ಯಾಯಾಧೀಶರು ಪ್ರತಿವಾದಿಗಳ ವಾದವನ್ನು ಖಂಡಿಸಿ, ಟ್ರೇಡ್ ಯೂನಿಯನ್ ಎಕ್ಟಿನ 18ನೇ ಕಲಂ ಅನ್ವಯ ಕೊಡಮಾಡಿದ ರಕ್ಷಣೆಯೂ, ಅತಿಕ್ರಮಣ, ಜಿವಂಕೆ, ಗೊಂದಲ ಇತ್ಯಾದಿಗಳ ವಿರುದ್ಧ ದೂರು ಬಂದಾಗ ದೊರೆಯಲಾರದು ಎಂದಿದ್ದಾರೆ.

ಒಂದೆಡೆ ನೌಕರರ ಸಂಘವು ತನ್ನ ಮೇಲೆ ಹೊರಿಸಿದ ಅಪವಾದನೆಗಳನ್ನೆಲ್ಲಾ ಅಲ್ಲಗಳೆದರೂ, ಇನ್ನೊಂದೆಡೆ ತಾನು ಟ್ರೇಡ್‌ಯೂನಿಯನಿನ ಚಟುವಟಿಕೆಗಳಲ್ಲಷ್ಟೇ ನಿರತವಾಗಿದೆ ಎಂದು ವಾದಿಸುತ್ತಿದೆ. ಅಪವಾದನೆಗಳ ಸತ್ಯಾಸತ್ಯತೆ ಏನೇ ಇರಲಿ, ಅವುಗಳನ್ನೊಂದೊಂದಾಗಿ ಈಗ ಚರ್ಚಿಸುವ ಅಗತ್ಯವಿಲ್ಲ. ನೌಕರ ಸಂಘವು ಹೊರಡಿಸಿದ ಕರಪತ್ರ, ನೋಟೀಸು, ಪುಸ್ತಕ ಮತ್ತು ಸರ್ಕ್ಯುಲಾರುಗಳನ್ನು ಆಡಳಿತ ವರ್ಗವು ನ್ಯಾಯಸ್ಥಾನಕ್ಕೆ ಹಾಜರು ಪಡಿಸಿದೆ. ಇವುಗಳ ಮೇಲಿಂದಲೇ ನೌಕರ ಸಂಘವು ಬ್ಯಾಂಕಿನೊಳಗೆ ಸಭೆಗಳನ್ನು ಜರಗಿಸಿತ್ತೆಂದೂ, ಘೋಷಣೆಗಳನ್ನೆಬ್ಬಿಸಿತ್ತೆಂದೂ, ಬೈಗಳನ್ನು ಆಡುತ್ತಿತ್ತೆಂದೂ, ಮತಪ್ರದರ್ಶನ ನಡೆಸುತ್ತಿತ್ತೆಂದೂ, ಈ ಕುರಿತು ಬೆದರಿಕೆಗಳನ್ನು ಹಾಕುತ್ತಿತ್ತೆಂದೂ ತನಗೆ ಮನವರಿಕೆಯಾಗಿದೆ ಎಂದು ಹಟ್ಟಂಗಡಿಯವರು ಹೇಳಿದ್ದಾರೆ. ನೌಕರ ಸಂಘದ ಈ ತರದ ವರ್ತನೆಯು ಉಪದ್ರವ, ಗೊಂದಲ, ಪೀಡೆ, ಬೆದರಿಕೆ ಹಾಗೂ ಅತಿಕ್ರಮಣದ ರೂಪ ತಾಳಿದೆ ಎಂದು ಅವರು ಹೇಳಿದ್ದಾರೆ.

ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಭ್ಯರೀತಿಯಲ್ಲಿ ಕಾರ್ಯಾಚರಣೆಗಿಳಿಯುವುದನ್ನು ಯಾರೂ ತಡೆಯುವಂತಿಲ್ಲ. ಈ ಕುರಿತು ಮಾತುಕತೆಗಳನ್ನು ಅವರು ನಡೆಸಲು ಅರ್ಹರು. ಸಾರ್ವಜನಿಕರ, ಮತ್ತು ಗಿರಾಕಿಗಳ ಗಮನವನ್ನು ತಮ್ಮ ಬೇಡಿಕೆಗಳ ಕಡೆಗೆ ಸೆಳೆಯಲು ಅವರು ಮತ ಪ್ರದರ್ಶನವನ್ನು ನಡೆಸಬಹುದು. ಇವುಗಳು ಕಾರ್ಮಿಕರ ಸಂಘದ ಚಳವಳಿಯ ಪ್ರಧಾನ ಅಂಗ ಎಂಬುದೂ ನಿಜ. ಆದರೆ, ಕಾರ್ಮಿಕರಿಗೆ ಕೊಡಮಾಡಿದ ಈ ಎಲ್ಲಾ ಹಕ್ಕುಗಳನ್ನೊಂದನ್ನು ಅವರು ಬಿಡದೆ ಮಾಲಕರ ಅಸ್ತಿತ್ವವನ್ನೇ ಇಲ್ಲವೆಂದು ಮಾಡ ಹೊರಟರೆ, ಅದು ನ್ಯಾಯ ಸಮ್ಮತವಾದೀತೇ? ಎಂದು ಜಡ್ಜರು ಪ್ರಶ್ನಿಸಿದ್ದಾರೆ.

ಸಿಂಡಿಕೇಟ್ ಬ್ಯಾಂಕ್ ನೌಕರರ ಚಳವಳವು ಗೊಂದಲ, ಬೆದರಿಕೆ, ಅಕ್ರಮ ಪ್ರವೇಶ ಹಾಗೂ ಉಪದ್ರಕಾರಿಯಾಗಿ ಪರಿಣಮಿಸಿರುವುದೆಂದು ನ್ಯಾಯಾಧೀಶ ಹಟ್ಟಂಗಡಿಯವರು ಖಚಿತ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಆದುದರಿಂದಲೇ ತಡೆಯಾಜ್ಞೆಯನ್ನು ಇತ್ತಿರುತ್ತಾರೆ.

(ಮೂರನೇ ಪುಟದಿಂದ)

ತ್ತಾರೆ. ಕಾಮರಾಜರನ್ನೇ ಎರಡನೆಯ ಬಾರಿಗೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಆರಿಸಲು ಅನುಕೂಲವಾಗುವಂತೆ ಕಾಂಗ್ರೆಸ್ ಸಂವಿಧಾನ ತಿದ್ದುಪಡಿಯ ಸಂಬಂಧದಲ್ಲಿ ಅವರು ಮಾಡಿದ ಭಾಷಣವು ಸತ್ಯನಿಷ್ಠುರವಾದುದು. ತನ್ನ ಮನಸ್ಸಿಗೆ ಸರಿತೋರದುದನ್ನು ಪ್ರತಿಭಟಿಸುವುದು ನಾಗರಿಕನ ಕರ್ತವ್ಯವೂ ಆಗಿದೆ. ಆತ್ಮವಂಚನೆ ಮಾಡಿಕೊಳ್ಳಲಾರದ ಮುರಾರ್ಜಿಯವರು ತನ್ನ ಹೃದಯವನ್ನೇ ಬಿಚ್ಚಿ ಮಾತಾಡಿದರು. ತನ್ನ ಅಭಿಪ್ರಾಯವನ್ನು ಇತರರು ಒಪ್ಪಿಕೊಳ್ಳಬೇಕೆಂದು ಅವರು ಆಗ್ರಹ ಪಡುವುದಿಲ್ಲ. ಆದರೆ, ಅನಿಸಿದ್ದನ್ನು ಹೇಳದೆ ಇದ್ದರೆ, ಆತ್ಮದ್ರೋಹವಾಗುವುದೆಂದವರು ನಂಬಿದ್ದಾರೆ. ತಾನು ಪಕ್ಷ ಬಿಟ್ಟು ಹೊರನಡೆಯುವುದಿಲ್ಲವೆಂಬ ಆಶ್ವಾಸನೆಯೊಡನೆ ಪಕ್ಷ ಸಂವರ್ಧನೆಗಾಗಿ ದುಡಿಯುವ ತಮ್ಮ ಮೂಲನಿಷ್ಠೆಯನ್ನು ಬಿಟ್ಟುಕೊಡುವುದಿಲ್ಲ. ಕಾಂಗ್ರೆಸ್ ಬಿಟ್ಟಂದು ಅವರೂ ಇಲ್ಲವಾಗುವರಂತೆ.

ಮುರಾರ್ಜಿಯವರಂತಹ ಶೂರ, ವೀರ, ಕಾರ್ಯಕುಶಲರು ಆತ್ಮಸಾಕ್ಷಿಯಾಗಿ ನಡೆದು ನಡೆವಂತಹ ಕೆಲವರಾದರೂ ಕಾಂಗ್ರೆಸ್ಸಿನಲ್ಲಿ ಇಂದಿಗೂ ಇರುವುದರಿಂದಲೇ ಕಾಂಗ್ರೆಸ್ ಬದುಕುಳಿದಿದೆ. ಇಲ್ಲವಾದರೆ, ಯಾವಾಗಲೋ ಅದು ನಿರ್ಜೀವವಾಗಿ ಹೋಗುತ್ತಿತ್ತು!

ಬಾಲಾಶ್ರಮದ ಹಾವಳಿಯ ಕತೆಯೇ?
ವೇಶ್ಯಾಪುತ್ರಿಯ ಮಾನಾಪಹಾರದ ಚಿತ್ರವೇ?
ಯಾವುದು?

ಸನ್ಯಾಸಿಯ ಸೋಗಿನಲ್ಲಿ!

ಸನ್ಯಾಸದ ಹೆಸರಿನಲ್ಲಿ ವಿನ್ಯಾಸವೇ?
ವೇಶ್ಯಾಪುತ್ರಿಯರಿಗೆ ನೀತಿಯ ಜೀವನ ನಡೆಸುವ ಹಕ್ಕಿಲ್ಲವೇ?
ಈ ಪ್ರಶ್ನೆಗಳಿಗೆ ತಕ್ಕ ಉತ್ತರ ಬೇಕೆಂದಿದ್ದರೆ

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಇವರ
ಈ ವಿಷಾದಾಂತ ಕಾದಂಬರಿಯನ್ನೋದಿರಿ
ಬೆಲೆ: 0-75 ಪೈಸೆ ಮಾತ್ರ. ಟ. ಖ. ಪ್ರತ್ಯೇಕ.

ಸಿಗುವ ಸ್ಥಳಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಮಂಗಳೂರು ಪ್ರೆಸ್ ಕ್ಲಬ್‌ನ ಉದಯ

ಜಿಲ್ಲೆಯ ಇತಿಹಾಸದಲ್ಲೇ ಪ್ರಥಮ ಮಂಗಳೂರು ಪ್ರೆಸ್ ಕ್ಲಬ್‌ನ ಉದ್ಘಾಟನಾ ಸಮಾರಂಭವು ಕಳೆದ ತಾ. 25ರಂದು, ಶ್ರೀ ವಿ. ಎಸ್. ಕುಡ್ವಾರವರ ಅಧ್ಯಕ್ಷತೆಯಲ್ಲಿ ಶ್ರೀ ಆರ್. ಕೆ. ಪ್ರಭುಗಳಿಂದ ನೆರವೇರಿತು. ಪ್ರಾರಂಭದಲ್ಲಿ ಸ್ವಾಗತಿಸಿದ ಶ್ರೀ ನರಸಿಂಹ ರಾವ್ ಇವರು ಕ್ಲಬ್ಬಿನ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಶ್ರೀ ಆರ್. ಕೆ. ಪ್ರಭುಗಳು ಉದ್ಘಾಟಿಸುತ್ತಾ ಪ್ರೆಸ್ ಕ್ಲಬ್ಬಿನ ಪ್ರಯೋಜನಗಳನ್ನು ವಿವರಿಸಿದರು. ಅಧ್ಯಕ್ಷರು ಮಾತಾಡುತ್ತಾ ಜನತೆಯ ಸಹಕಾರ ಇದಕ್ಕೆ ಅತ್ಯವಶ್ಯವೆಂದು ನುಡಿದು, ಕನ್ನಡ ಪತ್ರಿಕೆಗಳು ಎದುರಿಸಬೇಕಾದ ಸಮಸ್ಯೆಗಳೇನೆಂಬುದನ್ನು ಸ್ಪಷ್ಟಪಡಿಸಿದರು. ಸಮಾರಂಭಕ್ಕೆ ಶುಭಕೋರಿ ಹಲವಾರು ಮಹನೀಯರ ಸಂದೇಶಗಳು ಬಂದಿದ್ದುವು ಹಾಗೂ ಹಲವಾರು ವರಿಷ್ಠ ವ್ಯಕ್ತಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಕೊನೆಯಲ್ಲಿ ಶ್ರೀ ಸಿ. ಗೋಪಾಲನ್‌ರವರು ವಂದನಾರ್ಪಣೆಗೈದರು.

ಉದ್ಘಾಟನೆ

ಪುತ್ತೂರು, ಶ್ರೀ ಲಕ್ಷ್ಮೀ ವೆಂಕಟರಮಣ ದೇವಳದ ಕಟ್ಟಡದಲ್ಲಿ ಉಡುಪಿ ಪಾಸ್ ಟ್ಯುಟೋರಿಯಲ್ ಕಾಲೇಜಿನ ಶಾಖೆಯು ಇತ್ತೀಚೆಗೆ ಶ್ರೀ ಲಕ್ಷ್ಮೀನಾರಾಯಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಉಗ್ರಾಣ ಮಂಗೇಶರಾಯರಿಂದ ಉದ್ಘಾಟಿಸಲ್ಪಟ್ಟಿತು. ಆರಂಭದಲ್ಲಿ ಮೆನೇಜರ್ ಡಾ| ಕೆ. ಕೆ. ಕಲ್ಯಾರರು ಸ್ವಾಗತಿಸಿದರು. ಸಭಿಕರಲ್ಲಿ ಶ್ರೀಗಳಾದ ಭವಾನಿಶಂಕರ ರಾವ್, ದರ್ಬೆ ನರಸಿಂಹ ನ್ಯಾಕ್, ಎಂ. ಸತ್ಯನಾರಾಯಣ ಭಟ್, ಪುಟ್ಟಿ ಸುಬ್ರಮಣ್ಯ ರಾವ್, ಪುರಂದರ ರೈ, ಸುಂದರ ಮೊದಲಾದವರು ಮಾತಾಡಿ ಶುಭಕೋರಿದರು. ಅಧ್ಯಕ್ಷರ ಭಾಷಣದ ಬಳಿಕ ಶ್ರೀ ಗಂಗಾಧರ ವೈದ್ಯರು ಅಭಿನಂದನೆ ಸಲ್ಲಿಸಿದರು.

ಕುಟುಂಬ ಯೋಜನಾ ಪ್ರಚಾರ ಸಪ್ತಾಹ

ಬೆಳ್ತಂಗಡಿ, ಡಾ. ಬಿ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ, ಬೆಳ್ತಂಗಡಿ ಬ್ಲಾಕಿನ ಕುಟುಂಬ ಯೋಜನಾ ಪ್ರಚಾರ ಸಪ್ತಾಹದ ಅಂಗವಾಗಿ ಸ್ಥಳೀಯ ಮಹಿಳಾವೃಂದದಲ್ಲಿ, ಸಾರ್ವಜನಿಕ ಸಭೆಯು, ತಾ. 20ರಂದು ಜರಗಿತು

ಆರಂಭದಲ್ಲಿ ಶ್ರೀ ಬಿ. ಶಿವರಾಮರಿಂದ ಪ್ರಾರ್ಥನೆಯಾದ ಬಳಿಕ ಡಾ| ಡಿ. ಎ. ರಾನೇಗೌಡರು ಸ್ವಾಗತಿಸಿದರು. ಶ್ರೀ ಉಪೇಂದ್ರ ಭಟ್, ಶ್ರೀಧರ ಪ್ರಭು, ಯು. ಮಹಾಬಲ ಶೆಟ್ಟಿ ಮೊದಲಾದವರು ಮಾತಾಡುತ್ತಾ ಕುಟುಂಬ ಯೋಜನಾ ಕಾರ್ಯಕ್ರಮದ ಅವಶ್ಯಕತೆಗಳನ್ನು ವಿವರಿಸಿದರು. ಅಧ್ಯಕ್ಷರು, ಜಾತಿ ಮತ ಭೇದವಿಲ್ಲದೆ ಎಲ್ಲರೂ, ದೇಶದ ಪ್ರಗತಿಗಾಗಿ ಕುಟುಂಬ ಯೋಜನೆಯನ್ನು ಕೈಕೊಳ್ಳಬೇಕೆಂದು ನುಡಿದರು. ಕೊನೆಯಲ್ಲಿ ಶ್ರೀ ಎಂ. ಯು. ಸಂಜೀವ ಶೆಟ್ಟರು ವಂದನಾರ್ಪಣೆಗೈದ ಬಳಿಕ ಇದಕ್ಕೆ ಸಂಬಂಧಿಸಿದ ಚಲಚಿತ್ರ ಪ್ರದರ್ಶನ ನಡೆಯಿತು.

ಎಂ. ಬಿ. ಬಿ. ಎಸ್‌ಗೆ ಮನ್ನಣೆ

ಮಣಿಪಾಲ, ಜುಲೈ. 22— ಇಂಗ್ಲೇಂಡಿನ ಜನರಲ್ ಮೆಡಿಕಲ್ ಕೌನ್ಸಿಲ್‌ನವರು ಕರ್ನಾಟಕ ವಿಶ್ವವಿದ್ಯಾನಿಲಯದ ಸ್ಥಳೀಯ ಕಸ್ತೂರಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ನೀಡುವ ಎಂ. ಬಿ. ಬಿ. ಎಸ್. ಪದವಿಗೆ ಮನ್ನಣೆ ಕೊಟ್ಟಿದ್ದಾರೆ. ದೇಶದಲ್ಲಿನ ಒಟ್ಟು ಎಂಟು ಕಾಲೇಜುಗಳಿಗೆ ಈ ಮನ್ನಣೆ ಸಿಕ್ಕಿದೆ. ಇದರಿಂದಾಗಿ ಈ ಕಾಲೇಜುಗಳಿಂದ ಪದವೀಧರರಾಗುವವರು ಯಾವುದಾದರೊಂದು ಕಾಮನ್‌ವೆಲ್ತ್ ರಾಷ್ಟ್ರದಲ್ಲಿ ತಮ್ಮ ವೃತ್ತಿ ನಡೆಸಬಹುದಾಗಿದೆ.

ಕನ್ನಮ್ಮನ ಭ್ರಮೆ

(ಎರಡನೇ ಪುಟದಿಂದ)

ಹಿಂದಿರುಗಿ ಬರುವನೆಂಬ ಅವಳ ಆಸೆಗೆ ಬಲಕೊಟ್ಟು, ರುಗ್ಣಶಯ್ಯೆಯಲ್ಲಿರುವ ಅವಳು ಮೃತ್ಯುವಿನ ಸಂಗಡ ಕಾದಾಡುವುದಕ್ಕೆ ಶಕ್ತಿ ಕೊಡಲಿಕ್ಕಾಗಿ ಹೋಗುತ್ತಿದ್ದೇನೆ.

ನಾನು ಸ್ವಪ್ನದಲ್ಲಿ ನಡೆಯುವ ಒಬ್ಬ ಮನುಷ್ಯನಂತೆ ಭೋಜನಾಲಯಕ್ಕೆ ಜೋತಾಡುತ್ತಾ ನಡೆದೆನು.

ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದ ಸಮಯದಲ್ಲೆಲ್ಲಾ ನಾನು ಈ ರೀತಿಯ ಮೋಹಾವಸ್ಥೆಯಲ್ಲಿದ್ದೆನು. ಮನೆಗೆ ಮುಟ್ಟಿ, ಕನ್ನಮ್ಮನ ಮನೆಗೆ ಹೋಗಿ ಅವಳ ತಾಯ್ತಂದೆಯವರೊಡನೆ ಮಾತನಾಡುತ್ತಾ ಚಾವಡಿಯಲ್ಲಿ ನಿಂತೆನು ಅವಳು ಹೇಗಿದ್ದಾಳೆಂದು ಅವರನ್ನು ಕೇಳಿದೆನು. ಅವಳು ಏನೋ ಮೆಲ್ಲಗೆ ಗುಣುಗುಟ್ಟುತ್ತಾ ತಲೆಯಲ್ಲಾಡಿಸುವುದನ್ನು ನೋಡಿದೆನು. ಮಾಳಿಗೆಯ ಮೆಟ್ಟಲುಗಳ ಕಡೆ ತಿರುಗಿದೆನು. ಆದರೆ ನಾನು-ಎಚ್ಚರವಾಗಿಲ್ಲ. ಇದೆಲ್ಲವನ್ನೂ ನಿದ್ದೆಯಲ್ಲೇ ಮಾಡುತ್ತಿದ್ದೇನೆಂದು ನನಗೆ ಕಂಡಿತು ಈ ಮೊದಲು ಕನ್ನಮ್ಮನನ್ನು ನಾನು ನೋಡಿ ಸುಮಾರು ಎರಡು ವರ್ಷಗಳು ಸಂದಿದ್ದವು. ಆಗಲೂ ಹೃದಯದಲ್ಲಿ ಆಶೆಯ ಬುಗ್ಗೆಗಳೆಲ್ಲಾ ಬತ್ತಿ ಹೋಗಿವೆಯೆನ್ನುವಂತೆ ಅವಳ ಮಾತುಗಳಲ್ಲಿ ನಿರಾಶೆಯನ್ನು ನಾನು ಊಹಿಸಿದ್ದೆನು. ಮತ್ತು ಆಗಲೂ ಅವಳ ದೇಹದ ಸೌಂದರ್ಯವನ್ನು ಕ್ಷಯರೋಗವು ಆಕ್ರಮಿಸಿತ್ತು. ನಾನು ಅವಳನ್ನು ಬೀಳ್ಕೊಂಡಾಗ ನನ್ನ ಕಡೆಗೆ ಅವಳು ಬಹು ದುಃಖದಿಂದ ನೋಡಿದ್ದಳು. ಕೆಲವು ಸಂಕ್ಷಿಪ್ತ ಪತ್ರಗಳು ಅವಳಿಂದ ನನಗೆ ಬಂದಿದ್ದವು. ಆದರೆ ಆ ಮೇಲೆ ಅವಳು ಬರೆಯುವುದನ್ನು ನಿಲ್ಲಿಸಿದಳು. ಅವಳಿಗೆ ಎಲ್ಲಾ ಉತ್ಸಾಹವೂ ಹೋಗಿ ಬಿಟ್ಟಿತ್ತು ಎಂದು ನನಗೆ ಕಂಡಿತು. ಆಶೆ, ಉಲ್ಲಾಸಗಳನ್ನು ತುಂಬಿಸಿ ನಾನು ಅವಳಿಗೆ ಉದ್ದವಾದ ಪತ್ರಗಳನ್ನು ಬರೆದಿದ್ದರೂ ಅವಳು ಅವೆಲ್ಲವನ್ನೂ ಓದಿದ್ದಳೆಂದು ನನಗೆ ನಿಶ್ಚಯವಿಲ್ಲ. ಅವಳ ತಂದೆಯ ಪತ್ರವು ಒಂದು ನಿಯತವಾದ ರೂಪದಲ್ಲಿತ್ತು. "ನಾವು ಕೂಡಿದಷ್ಟು ಯತ್ನ ಮಾಡುತ್ತಿದ್ದೇವೆ" ಇತ್ಯಾದಿಯಾಗಿತ್ತು. ಇದನ್ನು ಓದುವುದು,— ಮತ್ತು ನನ್ನ ಕಣ್ಣುಗಳ ಮುಂದೆ ಬಂದು ನಿಂತ—ಕೊನೆಯ ಬಾರಿ ಗಂಡನ್ನು ನೋಡುವುದಕ್ಕೆ ಜೀವವನ್ನು ಹಿಡಿದಿರುವ ಮತ್ತು ಅವನಿಗಾಗಿ ಮತ್ತು ಮತ್ತು ಕಾಯುತ್ತಿರುವ—ಕನ್ನಮ್ಮಳ ಚಿತ್ರವನ್ನು ಕಾಣುವುದು ನನಗೆ ಬಹಳ ಭಯಂಕರವಾಯಿತು.

ನಾನು ಮಾಳಿಗೆಯ ಮೇಲೆ ಅವಳ ರೂಮಿಗೆ ಹೋಗುತ್ತಿದ್ದೆನು. ಎರಡು ವರ್ಷಗಳ ನಂತರ ಅವಳನ್ನು ಕಾಣಲು ಹೋಗುತ್ತಿದ್ದೆ. ಈಗ ನಾನು ಅವಳ, ಅತ್ಯಾಸಕ್ತಿಯಿಂದ ತಿಳಿಯಲಪೇಕ್ಷಿಸಿದ ವಾರ್ತೆಯನ್ನು ಅವಳಿಗೆ ತಿಳಿಸಲಾರದವನಾಗಿದ್ದೆನು. ಅದಕ್ಕೆ ವಿಪರೀತವಾಗಿ, ಆ ಭಯಂಕರ ಸತ್ಯಸ್ಥಿತಿಯನ್ನು ನನ್ನ ಹೃದಯದೊಳಗೆ ಅಡಗಿಸಿಟ್ಟು, ಮುಖದಲ್ಲಿ ನಗೆಯನ್ನು ತಂದುಕೊಳ್ಳಬೇಕಿತ್ತು. ನಾನು ಅವಳನ್ನು ಕಾಣಲು ಆತುರಪಡುತ್ತಿದ್ದೆನು. ನನ್ನ ಹೃದಯದಲ್ಲಿ ಒಂದು ಅಸಮಾಧಾನದ ಬಡಿತವುಂಟಾಗಿತ್ತು. ಆದರೆ ನನ್ನ ಕಾಲುಗಳಿಗೆ ಸಂಕೋಲೆಗಳನ್ನು ಹಾಕಿರುವಂತೆ ನನ್ನ ಹೆಜ್ಜೆಗಳು ತಡೆಯಲ್ಪಡುತ್ತಿದ್ದವು. ನಾನು ಒಂದು ನಿದ್ದೆಯಲ್ಲಿ ನಡೆದು ಹೋದೆನು.

ಬಾಗಿಲನ್ನು ಮೆಲ್ಲಗೆ ದೂಡಿ ರೂಮಿನೊಳಗೆ ಕಾಲಿಟ್ಟೆನು. ಹೊರಗೆ ಮುಸುಕಾಗಿತ್ತು. ಪರದೆಗಳು ಎಳೆಯಲ್ಪಟ್ಟವು. ಸುತ್ತಮುತ್ತ ನೋಡಲು ನಾನು ಕಣ್ಣುಗಳಿಗೆ ಕಷ್ಟ ಕೊಡಬೇಕಾಯಿತು. ನಾನು ನಿಂತ ಸ್ಥಳದಿಂದ ಸ್ವಲ್ಪ ದೂರದ ಒಂದು ಮೂಲೆಯಲ್ಲಿ ಹಾಸಿಗೆಯ ಮೇಲೆ ಒಂದು ಬಿಳಿಯ ಹಾಸುಬಟ್ಟೆಯನ್ನೂ, ಸ್ಲೇಟಿನ ಬಣ್ಣದ ಒಂದು ಶಾಲನ್ನೂ ನನಗೆ ನೋಡುವುದಕ್ಕಾಯಿತು. ಅವಳೆಲ್ಲಿದ್ದಾಳೆ? ಎಂದು ನಾನು ಆಲೋಚಿಸಿದೆನು. ಮರುಕ್ಷಣದಲ್ಲಿ ಬಿಳಿಯ ತಲೆದಿಂಬಿನ ಮೇಲೆ ಅವಳ ಕಪ್ಪಾದ ಕೂದಲುಗಳನ್ನು ನಾನು ನೋಡಿದೆನು. ದೀರ್ಘಕಾಲದ ರೋಗವು ಅವಳನ್ನು ಒಂದು ಸಣ್ಣ ಮಗುವಿನ ಆಕಾರಕ್ಕೆ ತಂದು ಕ್ಷೀಣಗೊಳಿಸಿತ್ತು. ನಾನು ಮೊದಲನೇ ಸಲ ಎಳೇ ವಯಸ್ಸಿನ ಅನುರಾಗದ ಸಾಹಸಕ್ಕೊಳಗಾಗಿ ಅವಳ ಹಸ್ತಸ್ಪರ್ಶವನ್ನು ಬಯಸಿ ಅವಳನ್ನು ಕಂಡ ಆ ಕಾಲವು ನನಗೆ ಕೂಡಲೆ ಸ್ಮರಣೆಗೆ ಬಂತು. ಹೃದಯದೊಳಗಿನ ವೇದನೆಯಿಂದ ನಾನು "ಇದು ಅದೇ ಕನ್ನಮ್ಮನೇ? ನಾನು ಕೂಡ ಅದೇ ಯುವಕನೇ? ಮತ್ತು ಈಗ ದಿಲೀಪನು ಎಲ್ಲಿದ್ದಾನೆ??" ಎಂದು ಆಶ್ಚರ್ಯಪಟ್ಟೆನು. ನನ್ನ ಪಾದಗಳು ನೆಲವನ್ನು ಒರಸಿಕೊಂಡೇ ಚಲಿಸಿದವು. ನಾನು ಕಂಠವನ್ನು ಸರಿಪಡಿಸಿಕೊಳ್ಳಬೇಕಾಯಿತು.

"ದಿಲೀಪ್" ಎಂದು ಅವಳಿಂದ ಬಂದ ಒಂದು ಅಸ್ಫುಟವಾದ ಧ್ವನಿಯನ್ನು ನಾನು ಕೇಳಿದೆನು. ಆದರೆ ಅವಳು ತಲೆಯನ್ನು ತಿರುಗಿಸಲಿಲ್ಲ. ಅವಳು ನನ್ನ ಕಾಲುಸಪ್ಪಳವನ್ನು ಕೇಳಿರಬೇಕು. ಮತ್ತೂ ಅವಳು ಹೇಳಿದಳು:— "ದಿಲೀಪನೇ!" ಕರುಣಾತ್ಮಕವಾದ ಅವಳ ಧ್ವನಿಯಿಂದ ವ್ಯಾಕುಲಿತವಾದ ನನ್ನ ಹೃದಯಕ್ಕೆ ಒಂದು ಆಘಾತವಾಯಿತು. ನಾನು ಕಣ್ಣು ಮುಚ್ಚಿಕೊಂಡು ನಿಂತೆನು. ಆ ಮೇಲೆ ಮೆಲ್ಲನೆ ಅವಳ ಸಮೀಪಕ್ಕೆ ಹೋದೆನು. ಅವಳ ಕಣ್ಣುಗಳು ಮುಚ್ಚಲ್ಪಟ್ಟಿದ್ದವು. ಆದರೆ ಜ್ವರದಿಂದ ಕರಟಿ ಉಷ್ಣವಾದ ಅವಳ ತುಟಿಗಳಲ್ಲಿ ಒಂದು ನಗೆಯು ಕಂಡು ಬಂತು. ನಾನು ಅವಳನ್ನು ನೋಡುತ್ತಾ ನಿಂತೆನು. ಅವಳು ನನ್ನನ್ನು ತಿಳಿದುಕೊಂಡಳೋ ಎಂಬುದು ನನಗೆ ಗೊತ್ತಾಗಲಿಲ್ಲ. ನಾನು ಅವಳ ಹಣೆಗೆ ಮುತ್ತಿಡಲು ಬಯಸಿ ಬಗ್ಗಿದಾಗ, ಅವಳು ಕಣ್ಣು ತೆರೆದು ನೋಡಿದಳು. ಅವಳ ಯತ್ನಗಳು ಬಹು ಕಷ್ಟಕರವಾಗಿದ್ದವೆಂದು ತಿಳಿದು ಬಂದವು. ಅವಳ ನೋಟವು ನನ್ನನ್ನು ದಾಟಿ ಮುಂದೆ ಹೋಗಿತ್ತು." ಕನ್ನಮ್ಮಾ! ನಾನು ಬಂದೆನು" ಎಂಬ ಮಾತುಗಳು ನನ್ನ ತುಟಿಗಳಿಂದ ಹೊರಟು ಬರುತ್ತಿದ್ದವು. ಆಗ ಕೂಡಲೆ ಅವಳು ತನ್ನ ಎರಡು ಕೈಗಳನ್ನು ಮೇಲಕ್ಕೆತ್ತಿ ನನ್ನನ್ನು ತಬ್ಬಿಕೊಂಡಳು.

"ದಿಲೀಪನೇ! ಕೊನೆಗೆ.... ನೀನು ಬರುವ ತನಕ ನನಗೆ ಸಾಯಲಿಕ್ಕಾಗಲಿಲ್ಲ. ಪ್ರಿಯತಮಾ"....ಎಂದವಳು ಮೆಲ್ಲನೆ ಹೇಳಿದಳು.

ಅವಳ ಬೆರಳುಗಳು ನನ್ನನ್ನು ಎಳೆದುಕೊಳ್ಳುವುದಕ್ಕೋ ಎನ್ನುವಂತೆ ಒತ್ತಿ ಹಿಡಿದವು. ಸ್ವಲ್ಪ ಅವಳು ತಲೆ ಎತ್ತಿದಳು. ಆದರೆ ಮರುಕ್ಷಣದಲ್ಲೇ ಅವಳ ಕೈಗಳು ತಮ್ಮ ಒತ್ತಡವನ್ನು ಬಿಟ್ಟು ಬಿಟ್ಟವು. ಅವಳ ತಲೆಯು ತಲೆದಿಂಬಿನ ಮೇಲೆ ಜೋತು ಬಿತ್ತು. ಕಣ್ಣು ರೆಪ್ಪೆಗಳು ನಡುಗಿದವು. ಗಂಟಲಿನೊಳಗಿನಿಂದ ಒಂದು ಅಸ್ಫುಟ ಧ್ವನಿಯು ಹೊರಟು ಬಂತು. "ಕೊನೆಗೆ ನಾವು ಒಬ್ಬರನ್ನೊಬ್ಬರು ನೋಡಿಕೊಂಡೆವು." ಆ ಮೇಲೆ ಮತ್ತು ಅಸ್ಪಷ್ಟವಾಗಿ "ನನಗೆ ಸುಖವಾಯಿತು" ಎಂಬ ಸ್ವರವು ಹೊರಟಿತು.

ಅವಳ ಕೈಗಳು ಜೋತು ಬಿದ್ದವು. ಕ

ದಿ ವಿಜಯಾ ಬೇಂಕ್ ಲಿಮಿಟೆಡ್ ಬೈಂದೂರು.

ರಜಿಸ್ಟರ್ಡ್ ಆಫೀಸು: ಲೈಟ್ ಹೌಸ್ ಹಿಲ್‌ರೋಡು, ಮಂಗಳೂರು - 3

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರನ್ನು ರಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡದ್ದಕ್ಕೆ ಕೆಲವರಿಗೆ ಬಿಟ್ಟ ರಜಿಸ್ಟ್ರ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ ಸದ್ರಿಯವರಿಗೆ—ಯಾ—ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ಬರುವ ತಿಂಗಳ ತಾರೀಕು 14—8—65ರ ಒಳಗಾಗಿ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 23—8—65 ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು—ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬಹಿರಂಗ ಯಾ—ಖಾಸಗೀಯಾಗಿ ಹರಾಜುಮಾಡಲಾದೀತು. ಈ ಸಂಬಂಧ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು—ವ—ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ ತಿಳಿದಿರಲಿ.

ಸಾಲದ ಜಂತ್ರಿ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ತಾ. 30.6.65ರ ಅಸಲು ಬಡ್ಡಿ ಕೂಡಾ ರೂ.	ಪೈಸೆ
1076/62	ಹಾಡಿಮನೆ ಮಂಜ, ದುರ್ಗಿ ಮಗ, P. O. ಬೈಂದೂರು.	34	10
227/63	ಸಂಜೀವ ಶೆಟ್ಟಿ, ಮಹಾಬಲ ಶೆಟ್ರ ಅಳಿಯ, ಕಾರಿಕಟ್ಟೆ, P. O. ಮಯ್ಯಾಡಿ, ಬೈಂದೂರು.	49	70
319/63	ಸುಂದರ ಭಂಡಾರಿ, ಮಂಜಯ ಭಂಡಾರಿ ಮಗ, ನಾಯ್ಕನಕಟ್ಟೆ, ಕೆರ್ಗಾಲ್ ಗ್ರಾಮ, P. O. ಕೆರ್ಗಾಲ್ ಕುಂದಾಪುರ ತಾಲೂಕು.	41	70
656/63	ಸಂಜೀವ ಶೆಟ್ಟಿ, ಮಹಾಬಲ ಶೆಟ್ರ ಅಳಿಯ, ಕಾರಿಕಟ್ಟೆ P. O. ಮಯ್ಯಾಡಿ, ಬೈಂದೂರು.	58	10
53/64	ಅಮೃತ ನಾಯಕ, ವೆಂಕಟೇಶ್ ನಾಯಕರ ಮಗ, ಕಾಲ್ತೋಡು ಗ್ರಾಮ, P. O. ಕಾಲ್ತೋಡು, ಕುಂದಾಪುರ ತಾಲೂಕು.	36	55
97/64	ಮಂಜಯ ಶೆಟ್ಟಿ, ಗೋವಿಂದ ಶೆಟ್ರ ಅಳಿಯ, ಹೇರಂಜಾಲು ಗ್ರಾಮ, P. O. ಹೇರಂಜಾಲು, ಕುಂದಾಪುರ ತಾಲೂಕು	11	30
121/64	ಲಿಯಾಂವು ನಜ್ರೆತ್, ಶಾಭಿ ನಜ್ರೆತ್‌ರ ಮಗ, ನರ್ಸಾರೆ ಹಿತ್ಲು, ಪಡುವರಿ ಗ್ರಾಮ, P. O. ಪಡುವರಿ, ಬೈಂದೂರು.	27	35
160/61	ಮಂಜಯ, ಕನ್ನನ ಮಗ, ಉಪ್ಪುಂದ ಗ್ರಾಮ, P. O. ಉಪ್ಪುಂದ, ಕುಂದಾಪುರ ತಾಲೂಕು.	19	35
163/64	ಚಿನ್ನಿ ನಜ್ರೆತ್, ಅಂತೋನಿ ನಜ್ರೆತ್‌ರ ಮಗ, ಕಲ್ಲಾರೆ ಹಿತ್ಲು, ಪಡುವರಿ ಗ್ರಾಮ, P. O. ಬೈಂದೂರು	37	80
178/64	ಮಂಜೊಳಿ, ದುರ್ಗಿ ಹೆಂಗಸಿನ ಮಗ, ಅಲ್ವಾಡಿ ನಡುಮನೆ, ಕಾಲ್ತೋಡು ಗ್ರಾಮ, P. O. ಕಾಲ್ತೋಡು.	25	85
196/61	ರಾಮಯ ಶೆಟ್ಟಿ, ಸುಬ್ಬಯ ಶೆಟ್ರ ಅಳಿಯ, ಕೊಡುಮುಕ್ಕಿ ಮನೆ, P. O. ತಗ್ಗರ್ಸೆ, ಕುಂದಾಪುರ, ತಾಲೂಕು.	200	25
198/61	ಮಂಜಯ ಶೆಟ್ಟಿ, ಗೋವಿಂದ ಶೆಟ್ರ ಅಳಿಯ, ಹೇರೆಂಜಾಲು ಗ್ರಾಮ, P. O. ಹೇರೆಂಜಾಲು, ಕುಂದಾಪುರ ತಾಲೂಕು.	37	00
230/64	ವೆಂಕಮ್ಮ, ತಿಮ್ಮಪ್ಪ ಸೇರೆಗಾರರ ಹೆಂಡತಿ, ಸೋದಿತಾರು ಮನೆ, ಪಡುವರಿ ಗ್ರಾಮ, P. O. ಪಡುವರಿ, ಬೈಂದೂರು.	70	45
261/64	ಬಾಲಯ್ಯ ಸೇರೆಗಾರ, ವೆಂಕಟ್ರಮಣ ಸೇರೆಗಾರರ ಮಗ, ಬಟ್ವಾಡಿ ಮನೆ, ಬೈಂದೂರು ಗ್ರಾಮ, P. O. ಬೈಂದೂರು.	48	00
374/61	ಅಲ್ಫೋನ್ಸ್ ಮಾಸ್ಕಲ್ ಡಯಾಸ್, ದುರ್ಮಿ ಮನೆ, ಪಡುವರಿ ಗ್ರಾಮ, P. O. ಬೈಂದೂರು.	91	40

A. VITTAL SHETTY,
Manager.
THE VIJAYA BANK LTD.,
Byndoor.

ಬೈಂದೂರು,
23—7—1955.

NAVAYUGA 5—8—1965
Registered with the Registrar of News Papers for India under No. R. N. 3540/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಸಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೫-೮-೬೫ರಿಂದ ೧೧-೮-೬೫ರ ವರೆಗೆ

೧. ಮೇಷ

ಈ ತನಕ ನಿಮ್ಮ ಯಶಸ್ಸಿಗೆ ನೆರವಾದ ಕುಜ ಗುರುಗಳಿಂದು ಪ್ರತಿಕೂಲ ಸ್ಥಾನವನ್ನಾಶ್ರಯಿಸಿದ ಕಾರಣ ಇಲ್ಲಸಲ್ಲದ ತೊಡಕು ತೊಂದರೆಗಳಿಗೆ ನೀವು ಸಿಲುಕುವ ಸಂಭವವಿದೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬಂತೆ ಎಷ್ಟೋ ಕೆಲಸಗಳು ಮಧ್ಯದಲ್ಲೇ ನಿಂತು ಹೋಗಲಿವೆ. ಆಸುಗಿನವ ಪಿರ್ಚ ವೆಚ್ಚಗಳಿಗೆ ಸಾಲುವಷ್ಟು ದುಡಿಮೆಯಿರುವುದಾದರೂ ಸತಿಸುತಗಳೊಳಗೆ ಮನಸ್ತಾಪವು ಹೆಚ್ಚಲಿದೆ. ವಾರಾಂತ್ಯದ ೪ ದಿನಗಳು ಸ್ವಲ್ಪ ಸುಖನೆಮ್ಮದಿಯನ್ನೀಯಲಿವೆ.

೨. ವೃಷಭ

ನಿಮ್ಮ ಅದೃಷ್ಟ ರವಿಯಿಂದು ಅಪೂರ್ವ ಅವನ್ನೇರಿ ಬರುತಿಹನು. ಇಂತಹ ಅಪೂರ್ವ ಸಮಯವನ್ನು ಸದುಪಯೋಗಗೊಳಿಸುವುದು ನಿಮ್ಮ ಆದ್ಯ ಕರ್ತವ್ಯವಾಗಿರುವುದು. ಎಂತಹ ಅಸಾಮಾನ್ಯ ಕಾರ್ಯವು ಕೂಡ ನಿಮಗೆ ತೃಣಸಮವೆನಿಸಲಿದೆ. ವಿಶೇಷತಃ ರಾಜಕೀಯ ಕ್ಷೇತ್ರಗಳಲ್ಲಿ ಕೋರ್ಟು ಕಛೇರಿಗಳ ವ್ಯವಹಾರಗಳಲ್ಲಿ ವಿಜಯ ಕೀರ್ತಿಗಳನ್ನು ಸಂಪಾದಿಸುವಿರಿ. ನಿರೀಕ್ಷೆಗಿಂತಲೂ ಅಧಿಕಾಧಿಕವಾದ ಫಲವು ಅನಾಯಾಸದಿಂದ ಲಭಿಸಲಿದೆ. ನಿರೋಗಿಗಳೂ ನಿಶ್ಚಿಂತರೂ ಆದ ನಿಮಗೆ ದಿನಗಳೆದುದೇ ತಿಳಿಯಲೊಲ್ಲದು. ವಾರಾದಿಯ ೩ ದಿನಗಳು ಅತೀವ ಪ್ರಶಸ್ತವಿವೆ.

೩. ಮಿಥುನ

ನಿಮ್ಮ ದುರ್ವಿಧಿಯ ಕಾಲವಿನ್ನೂ ಮುಗಿದಿಲ್ಲ. ನೀವು ಎಷ್ಟೇ ಬುದ್ಧಿವಂತರಿದ್ದರೂ ಕೂಡ ಇಂದು ಒಂದರಹಿಂದೊಂದೆಂಬಂತೆ ಬರತಕ್ಕ ದುಃಖ ದುಮ್ಮಾನ ದುಗುಡಗಳಿಂದ ಮುಕ್ತರಾಗಲಾರಿರಿ. ಆಪ್ತೇಷ್ಟ ವರ್ಗದವರೂ ಕೂಡ ಇಂದು ವಚನಭ್ರಷ್ಟರಾಗುವರು. ಆರ್ಥಿಕ ದುರವಸ್ಥೆ, ದೇಹಾಲಸ್ಯ ಮನೋರೋಗಾದಿಗಳಿಂದ ಪೀಡಿತರಾದ ನಿಮಗೆ ದಿನಗಳು ದೀರ್ಘಗಳಾಗಿ ಕಾಣಲಿವೆ. ತಾ. ೬ರಿಂದ ೯ರ ವರೆಗಿನ ದಿನಗಳು ಹೆಚ್ಚಿನ ದೋಷಕಾರಿಗಳಾಗಿರಲಾರವು.

೪ ಕರ್ಕಾಟ

ಸುಖಪತಿಯಾದ ಶುಕ್ರನು ಶತ್ರುಕ್ಷೇತ್ರಗತನಾಗಿದ್ದು, ಭಾಗ್ಯಪತಿಯಾದ ಬೃಹಸ್ಪತಿಯೂ ವ್ಯಯಸ್ಥಾನಕ್ಕೆ ಬಂದಿರುವದರಿಂದ ಈ ವಾರವು ನಿಮಗೆ ಕೊಂಚ ಬಿಕ್ಕಟ್ಟಿನದಾಗಿ ಪರಿಣಮಿಸಲಿದೆ. ದುರ್ಜನರ ಮಾಯೋಜಾಲಕ್ಕೆ ಸಿಲುಕಿ ವರ್ಥ ನಷ್ಟಕಷ್ಟಗಳಿಗೆ ಪಾತ್ರರಾಗುವಿರಲ್ಲದೆ, ಜನಾಪವಾದಕ್ಕೂ ಗುರಿಯಾಗುವ ಸಂಭವವಿದೆ. ದುಡಿಮೆಯಲ್ಲಿನ ಹೆಚ್ಚಿನಂಶ ಸಿದ್ಧಿ ನಿಂದೋಗವಾಗಲಿದೆ. ಆತ್ಮೀಯರ ವಿಯೋಗ ದುಃಖಾವೃತರಾದ ನಿಮಗೆ ವಾರಾಂತ್ಯದ ೪ ದಿನಗಳು ಸ್ವಲ್ಪ ಅನುಕೂಲಗಳಾಗಿ ಕಾಣಿಸುವವು.

೫. ಸಿಂಹ

ಈ ವಾರದಲ್ಲಿ ಬಹು ಮಟ್ಟಿನ ನಿಮ್ಮ ಆಕಾಂಕ್ಷೆಗಳು ಕೈಗೂಡಲಿವೆ. ಸ್ವತಃ ಪೌರುಷ ಸಂಪನ್ನರಾದ ನಿಮಗೆ ಹೆರವರ ನೆರವಿನ ಆವಶ್ಯಕತೆಯೇ ಇರುವದಿಲ್ಲವು. ಬಲೀಯನಾದ ಇದಿರಾಳಿಯನ್ನೂ ಪರಾಭವಗೊಳಿಸುವ ಅಸಮಾನ ಶಕ್ತಿ ಸಂಪನ್ನರಾದ ನಿಮಗೆ ಪ್ರತಿಯೊಂದು ಉದ್ಯಮ ವ್ಯವಹಾರಗಳಲ್ಲೂ ನಿರೀಕ್ಷಾಧಿಕವಾಗಿ ಫಲ ಲಾಭವಾಗುವುದು. ಪಿತ್ಥ ದೋಷದಿಂದಾಗಿ ಆರೋಗ್ಯ ಕೆಡಲಿದೆ. ತಾ. ೫, 10, 11, ಈ ದಿನಗಳು ನಿಮ್ಮ ಸಿದ್ಧಿಗೆ ಸಾಧನಗಳಾಗಿವೆ.

೬. ಕನ್ಯಾ

ಹಿಂದಿನ ಅನುಕೂಲವು ನಿಮಗೆ ಇಂದು ಪೂರ್ಣವಾಗಿಲ್ಲವಾದರೂ ನಿಮ್ಮ ಬಯಕೆಯಂತೆ ಕಾರ್ಯಗಳು ಪೂರೈಗೊಳ್ಳಲಿವೆ. ವಿದ್ಯೋಪಜೀವಿ ನೌಕರಿ ಜನತೆಗೆ ಮೇಲಧಿಕಾರಿಗಳಿಂದ ಕೆಲವೊಂದು ತಂಟೆತಕರಾರುಗಳು ಬರಲಿವೆ. ಬಂಧುವರ್ಗದವರೊಡನೆ ವಿನಾ ಕಾರಣವಾಕ್ಕಲಹವಾಗುವ ಸಂಭವವಿದೆ. ಪರಿಶ್ರಮಕ್ಕೆ ತಕ್ಕ ಫಲಲಭಿಸುವುದರಿಂದ ದಿನಯಾಪನೆಯು ದುಸ್ತರವಾಗದು. ಶತ್ರು ಜನರ ಕಾಟದಿಂದ ಮುಕ್ತರಾದ ನಿಮಗೆ ತಾ. ೬, 7 ಈ 2 ದಿನಗಳು ಮಾತ್ರ ಅನುಕೂಲವಾಗಿವೆ.

೭. ತುಲಾ

ಹೆಚ್ಚಿನ ನಿಮ್ಮ ತಾಪತ್ರಯಗಳು ದೂರವಾಗುವವು. ಹಲವು ದಿನಗಳ ನಿಮ್ಮ ಬಯಕೆಯು ಇಂದು ಕೈಗೂಡಲಿದೆ. ಹಿಂದೆ ಮಾಡಿದ ಸಾಲ ಕಡಗಳಿಂದ ನೀವಿಂದು ಮುಕ್ತರಾಗಿ ಕೈಯಲ್ಲಿ ಸಾಕಷ್ಟು ಧನವನ್ನೂ ಸಂಗ್ರಹಿಸಿಟ್ಟುಕೊಳ್ಳುವಿರಿ. ಶ್ರಮಜೀವಿಗಳಿಗೂ ಸೇವಕ ಜನತೆಗೂ ಸದ್ಯದ ದಿನಗಳು ಅಷ್ಟೊಂದು ಅನುಕೂಲವಾಗಿರವು. ಪ್ರವಾಸಕ್ಕೆ! ಕಾಲವು ವಿಹಿತವಲ್ಲ. ವ್ಯವಹಾರ ಚತುರರಾದ ನಿಮಗೆ ತಾ. 5 8, 9, ಈ ದಿನಗಳು ಅನುಕೂಲವಾಗಿವೆ.

೮. ವೃಶ್ಚಿಕ

ಕರ್ಮಸ್ಥಾನಗತನಾದ ಬುಧನೊರ್ವನನ್ನುಳಿದು ಇತರ ಗ್ರಹಮಂಡಲವೇ ನಿಮಗಿಂದು ಪ್ರತಿಕೂಲವಾಗಿರುವುದರಿಂದ ನಿಮ್ಮ ಪರಿಶ್ರಮವು ನೀರಲ್ಲಿ ಗೈದ ಹೋಮದಂತೆ ನಿಷ್ಫಲವಾದೀತು. ಆತ್ಮೀಯರ ಅಸಹಕಾರ ಶತ್ರು ಜನರ ಕಾಟಗಳಿಂದಾಗಿ ನೆಮ್ಮದಿಯಿಂದ ಕಾಲಕಳೆಯಲಾರಿರಿ. ಆರ್ಥಿಕ ಮುಗಟ್ಟಿನಲ್ಲಿ ಸಿಲುಕಿದ ನಿಮಗೆ ಯಾರೊಬ್ಬರ ನೆರವು ಲಭಿಸದೆ ಕೆಲವೊಮ್ಮೆ ಮಾನಚ್ಯುತಿಯ ಸಂಭವವೂ ಉಂಟಾಗಲಿದೆ. ಅನೇಕ ಕಷ್ಟದಿಂದ ಕಾಲಕಳೆವ ನಿಮಗೆ ತಾ. 6, 7, 10, 11 ಹೆಚ್ಚಿನ ದೋಷಕಾರಿಗಳಾಗಲಾರವು.

೯. ಧನು

ಸ.ದಿನಗಳು ನಿನ್ನ ಹಿತಗಳಾಗಿವೆ ಈ ಕಾಲದಲ್ಲಿ ನಿಮ್ಮ ಬಹುವತ್ತೊ ಬಯಕೆಗಳನ್ನು ಪೂರ್ತಿಗೊಳಿಸಲು ಕಾರ್ಯಪ್ರವೃತ್ತರಾಗಿರಿ. ದೈವವೂ ಕೂಡ ನಿಮಗೆ ಬೇಕಾದ ಸವಲತ್ತುಗಳನ್ನೊದಗಿಸುವದು. ಕೈಬಿಟ್ಟು ಹೋದ ವಸ್ತು ಒಡವೆಗಳೂ ಧನಕನಕಾದಿಗಳೂ ಕೂಡ ಅನಾಯಾಸದಿಂದ ತಾವಾಗಿ ಬಂದು ನಿಮ್ಮ ಕೈಸೇರುವವು. ನಿರುದ್ಯೋಗ ಸಮಸ್ಯೆಯಿಂದ ಮುಕ್ತರಾದ ನೀವು ಸುಖ ನೆಮ್ಮದಿಯಿಂದ ಕಾಲಕಳೆವಿರಿ. ತಾ. 5, 7, 9 ಈ ದಿನಗಳಲ್ಲಿ ಸುಖ ಭೋಗಗಳು ಲಭಿಸಲಿವೆ.

೧೦. ಮಕರ

ಕೈ ಕೆಸರಾದರೆ ಬಾಯಿ ಮೊಸರಾದೀತೆಂಬ ಗಾದೆಯಂತೆ ನೀವಿಂದು ಶ್ರಮವಹಿಸಿ ಕಾರ್ಯಪ್ರವೃತ್ತರಾಗಿರಿ. ನಿಮ್ಮ ಬಯಕೆಗಳು ಸಫಲಗಳಾಗುವವು. ಬಂಧುಮಿತ್ರರ ನೆರವು ಇಂದು ನಿಮಗೆ ಲಭಿಸದಿದ್ದರೂ ಹಿಡಿದ ಕಾರ್ಯವನ್ನು ಮಧ್ಯದಲ್ಲೇ ಕೈಬಿಡಲಾರಿರಿ. ನಿಷ್ಕಾರಣ ವಾಕ್ಕಲಹವಾದೀತು. ಸದಾ ಮನೋರೋಗದಿಂದ ಪೀಡಿತರಾದ ನಿಮಗೆ ಆಕಸ್ಮಿಕ ಧನ ಲಾಭದ ಯೋಗವಿದೆ. ತಾ. 5, 6, 7, 10, 11 ಈ ದಿನಗಳು ಸಾಕಷ್ಟು ಅನುಕೂಲವಾಗಿವೆ.

೧೧ ಕುಂಭ.

ನಿಮ್ಮ ಧನಲಾಭ ಪತಿಯಾದ ಗುರುವಿಂದು ತ್ರಿಕೋಣಗತನಾಗಿ ನಿಮ್ಮ ರಾಶಿಯನ್ನು ಪೂರ್ಣ ದೃಷ್ಟಿಯಿಂದ ನೋಡುತ್ತಿರುವ ಕಾರಣ ಹೆಚ್ಚಿನ ನಿಮ್ಮ ತಾಪತ್ರಯಗಳು ದೂರವಾಗುವವು. ಆರೋಗ್ಯವು ಉತ್ತಮಗೊಳ್ಳುವದು. ಆರ್ಥಿಕ ಪರಿಸ್ಥಿತಿಯೂ ಸುಧಾರಿಸಲಿದೆ. ಆದರೆ ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ಸ್ತ್ರೀ ನಿಮಿತ್ತವಾದ ವ್ಯವಹಾರದಿಂದಾಗಿ ನಷ್ಟ ಜನಾಪವಾದಕ್ಕೂ ಗುರಿಯಾದೀರಿ. ತಾ. ೮ರಿಂದ ೧೦ ವರೆಗಿನ ದಿನಗಳು ವಿಜಯ ಲಾಭಕಾರಿಗಳಾಗಿವೆ.

೧೨. ಮೀನ

ಧನ ಭಾಗ್ಯಪನಾದ ಕುಜನು ಅನಿಷ್ಟ ಸ್ಥಾನವಾದ ಅಷ್ಟಮಕ್ಕೆ ಪ್ರವೇಶಿಸಿಹನು. ಸಾಲದ್ದಕ್ಕೆ ನಿಮ್ಮ ವ್ಯಯಸ್ಥಾನದಲ್ಲಿ ಏಳೂವರೆ ಶನಿಯೂ ಕಾಳಿಸಿಹನು. ಅದಕಾರಣ ಅನಿರೀಕ್ಷಿತ ವಿಪತ್ಪರಂಪರೆಗಳು ನಿಮ್ಮನ್ನು ಬಂದು ಕಾಡಲಿವೆ. ಪ್ರತೀಕಾರಾಶಕ್ತರಾದ ಶತ್ರು ಜನರಿಂದಾಗಿ ನಿಮ್ಮ ಧನಮಾನಗಳಿಗೆ ಹೆಚ್ಚಿನ ಧಕ್ಕೆಯಿದೆ. ವ್ಯಾಪಾರ ವ್ಯವಹಾರಾದಿ ಉದ್ಯಮಗಳಲ್ಲಿ ಪರಿಣಾಮವು ವಿಪರೀತದಲ್ಲಿ ಪರ್ಯವಸಾನ ಹೊಂದುವುದರಿಂದ ಸದ್ಯದ ದಿನಗಳನ್ನು ಬಲು ಕಷ್ಟದಿಂದ ಕಳೆಯಬೇಕಾಗಿದೆ. ವಾರಾಂತ್ಯದ ೪ ದಿನಗಳು ಇದ್ದುದರಲ್ಲಿ ಉತ್ತಮವಾಗಿ ಕಂಡೀತು.

ಣ್ಣುಗಳು ಮುಚ್ಚಲ್ಪಟ್ಟಿವು. ತುಟಿಗಳಲ್ಲಿ ಸ್ವಲ್ಪ ನಡುಕವು ಕಂಡಿತು. ಅದು ಕೂಡ ಬೇಗನೆ ನಿಂತು ಸ್ತಬ್ಧವಾಯಿತು. ಶರೀರದಲ್ಲಿ ಚಲಿಸುತ್ತಿದ್ದ, ಅವಳ ಜೀವದ ಕೊನೆಯ ತರಂಗವು ಕೂಡಲೆ ಅಳಿದು ಹೋದಂತಾಯಿತು. ನಾನು ಬಗ್ಗಿ ಆ ನಂದಿ ಹೋದ ಜ್ಯೋತಿಯನ್ನು ನೋಡುತ್ತಾ ನಿಂತೆನು.

ಸಮಯವು ನನಗೆ ಸ್ತಬ್ಧವಾದಂತಾಯಿತು. ನನ್ನ ಕಣ್ಣುಗಳನ್ನು ನಾನು ನಂಬಲಾರದವನಾದೆನು. ಕನ್ನಮ್ಮನು ಸತ್ತು ಹೋದ ಸಂಗತಿಯನ್ನು ಒಪ್ಪಿಕೊಳ್ಳುವುದು ಬಹು ಶೋಚನೀಯವಾಯಿತು. ಆದರೂ ಹಾದು ಹೋಗುವ ಕಾರಿನ ಒಂದು ಗಾಯದಂತೆ ಆ ದುಃಖವು ನನ್ನನ್ನು ಮೇಲ್ಭಾಗದಲ್ಲಿ ಮಾತ್ರ ಮುಟ್ಟಿತು. ಅದರಿಂದಲೂ ಆಳವಾಗಿ ಮತ್ತು ವ್ಯಕ್ತವಾಗಿ ಒಂದು ಸೂಕ್ಷ್ಮವಾದ— ಅಪೂರ್ವವಾದ ತೃಪ್ತಿಯುಂಟಾಗಿತ್ತು. ಅವಳು ನನ್ನನ್ನು ನನ್ನ ಸಹೋದರನೆಂದು ಭ್ರಮಿಸಿದಳು. ಅವಳ ಕೊನೆಯ ಗಳಿಗೆಯಲ್ಲಿ ಅವಳು ಏಕಾಂಗಿಯಾಗಿರಲಿಲ್ಲ. ಯಾರ ಪ್ರಸಂಗಮನಕ್ಕೆ ತಾನು ಕಾದಿದ್ದು ಮೃತ್ಯುವಿನೊಡನೆ ಹೋರಾಡಿದ್ದಳೋ ಅಂತಹ ಪ್ರಿಯ ಪತಿಯನ್ನು ತಾನು ನೋಡಿದೆನೆಂದು ಅವಳು ನಂಬಿದಳು. ಅವಳು ಅವನ ಕೈಗಳಲ್ಲೇ ಸತ್ತಳು. ನನ್ನ ಕೈಗಳಲ್ಲಿ ಅಲ್ಲ...ನಾನು ಅಪೇಕ್ಷಿಸಿದಂತೆ ಅವಳ ಜೀವನವನ್ನು ಸುಖಮಯವಾಗಿ ಮಾಡಲು ನಾನು ಶಕ್ತನಾಗಲಿಲ್ಲ. ಆದರೆ ನಾನು ಅವಳ ಮರಣವನ್ನು ಸುಖಮಯವಾಗಿ ಮಾಡಿದೆನು.

ಇದೀಗ ಪ್ರಕಟವಾಗಿದೆ–

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.........."ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ........................."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ!

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ... ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಯುಗ ಪ್ರೆಸ್, ಉಡುಪಿ	ನವಭಾರತ ಬುಕ್ ಡಿಪ್ಪೊ, ಪಾಲುಕೋಟೆ, ಉಡುಪಿ.

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೧

Edited, Printed & Published by K. H. Shetty at the Navayuga Press, Udipi, S. India.

నవయుగ

NAVAYUGA

50 P

ನಮ್ಮ ಸೌಲಭ್ಯಗಳು

"ಜೀವನ ನಿಧಿ" – ದೈನಿಕ ಉಳಿತಾಯ ಯೋಜನೆ.

"ರಿಕರಿಂಗ್ ಡಿಪ್ಪೊಸಿಟು" – ತಿಂಗಳು ಕಂತಿನ ಉಳಿತಾಯ ಯೋಜನೆ.

"ಸೇವಿಂಗ್ಸ್ ಬ್ಯಾಂಕ್" ಠೇವಣಾತಿ – ಸಾ. ಸೇಕಡಾ 4½ ದರದ ಬಡ್ಡಿ.

"ವಿಜಯಾ ಕೇಶ್ ಸರ್ಟಿಫಿಕೇಟ್" – ಮೂರು ವರ್ಷಗಳ ಯೋಜನೆ.

"ನಿರಖು ಠೇವಣಾತಿ" – ಸಾ. ಸೇಕಡಾ ೮ ರ ವರೆಗೆ ಬಡ್ಡಿ.

ನಮ್ಮ ಶಾಖೆಗಳು :-

ಮೈಸೂರು ರಾಜ್ಯದಲ್ಲಿ – ಬೆಂಗಳೂರು – ಕೆ. ಜಿ. ರೋಡ್, ಮಲ್ಲೇಶ್ವರಂ ಮತ್ತು ಅಲ್ಸೂರು, ಮೈಸೂರು. ಸಿಟಿ, ಚಾಮರಾಜ ನಗರ, ನಂಜನಗೂಡು, ಕೃಷ್ಣರಾಜ ಪೇಟೆ, ಕೊಳ್ಳೇಗಾಲ್, ಕೋಲಾರ, ದೊಡ್ಡಬಳ್ಳಾಪುರ, ನೆಲಮಂಗಲ, ಮದ್ದೂರು, ಮಾಗಡಿ, ಮಳವಳ್ಳಿ, ಹುಬ್ಬಳ್ಳಿ, ಧಾರವಾಡ, ಗದಗ, ಕನಕಪುರ, ರಾಮನಗರ, ಚೆನ್ನಪಟ್ಣ, ಮೂಡಿಗೆರೆ, ಗೋಣಿಕೊಪ್ಪಲ, ಮಡಿಕೇರಿ, ಪುತ್ತೂರು, ಕಾರ್ಕಳ, ಮಂಗಳೂರು – 3, ಮತ್ತು ಮಂಗಳೂರು - ಸಿಟಿ, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರು ಮತ್ತು ಭಟ್ಕಳ.

ಕೇರಳ ರಾಜ್ಯದಲ್ಲಿ – ಕಾಸರಗೋಡು, ಕಾಞಂಗಾಡು, ತಾಳಿಪರಂಬ, ಕುತ್ತುಪರಂಬ, ತಲಿಚೇರಿ, ಕಲ್ಲೈ, (ನ್ಯೂಮಾಹೆ) ಕಲ್ಲಿಕೋಟೆ - ಚಾಲಾಪುರಂ, ತಿರೂರು, ಮಂಜೇರಿ, ಮನ್ನಾರ್‌ಘಾಟ್, ಪೊನ್ನಾನಿ, ಪೆರಿಂತಲಮನ್ನ, ಕಲ್ಪೆಟ್ಟಾ, ಕೊಟ್ಟಾಕಲ್, ತ್ರಿಚೂರ್, ಎರ್ನಾಕುಳಂ, ಕೊಚ್ಚಿನ್ -2 , ಮತ್ತು ತ್ರಿಪುಣಿತ್ತುರೈ.

ಮದ್ರಾಸ್ ರಾಜ್ಯದಲ್ಲಿ – ಕೂನೂರು ಮತ್ತು ಕೋಟಗಿರಿ (ನೀಲಗಿರಿ ಜಿಲ್ಲೆ)

ಮಹರಾಷ್ಟ್ರ ರಾಜ್ಯದಲ್ಲಿ – ಪಾರ್ಸೀ ಬಜಾರ್ ಸ್ಟ್ರೀಟ್, ಮುಂಬಾಯಿ - 1

ಸದ್ಯದಲ್ಲಿಯೇ ಮೈಸೂರು ರಾಜ್ಯದ ಪಾಂಡವಪುರ ಮತ್ತು ಸಿದ್ದಾಪುರಗಳಲ್ಲಿ ನಮ್ಮ ಹೊಸ ಶಾಖೆಗಳು ತೆರೆಯಲ್ಪಡುವವು.

ಡೈರೆಕ್ಟರರ ಮಂಡಳಿ:–

1. ಶ್ರೀ ಯಂ. ಸುಂದರ್‌ರಾಮ ಶೆಟ್ಟಿ, ಬೆಂಗಳೂರು-1. (ಚೆಯರ್‌ಮೇನ್)
2. „ ಟಿ. ಮಂಜಯ್ಯ ಹೆಗ್ಡೆ, ಮಂಗಳೂರು.
3. „ ಕೆ. ಸುಂದರರಾಮ ಶೆಟ್ಟಿ, ಮಂಗಳೂರು.
4. „ ಬಿ. ರಾಜೀವ ಶೆಟ್ಟಿ, ಮಂಗಳೂರು.
5. „ ಕೆ. ಯಲ್. ಭಂಡಾರಿ, ಮೈಸೂರು.
6. „ ಕೆ. ಪಿ. ಭವಾನಿ ಶಂಕರ ಶೆಟ್ಟಿ, ಮಂಗಳೂರು.
7. ಶ್ರೀ ಡಿ. ರತ್ನವರ್ಮ ಹೆಗ್ಗಡೆ, ಧರ್ಮಸ್ಥಳ.
8. ಡಾ. ಕೆ. ವಿಠಲ ಶೆಟ್ಟಿ, ಕಾಪು.
9. „ ಕೆ. ಬಾಲಪ್ಪ ಶೆಟ್ಟಿ, ಮಂಗಳೂರು
10. ಶ್ರೀ ಬಿ. ಟಿ. ರವೀಂದ್ರನಾಥ ಪೂಂಜ, ಬೆಂಗಳೂರು.
11. „ ಬಿ. ಜಿ. ವೀರಣ್ಣ, ಬೆಂಗಳೂರು.
12. „ ಕೆ ಸಿ. ಪುಟ್ಟಯ್ಯ, ದೊಡ್ಡಬಳ್ಳಾಪುರ.
13. „ ಯಚ್. ಟಿ ಭಂಡಾರಿ, ಮುಂಬಯಿ.

ಆಡಿಟರ್ —
ಶ್ರೀ ಪಿ. ಯಂ. ಹೆಗ್ಡೆ.

ಸೆಕ್ರೆಟರಿ —
ಶ್ರೀ ಪಿ. ಜಯರಾಮ ಶೆಟ್ಟಿ.

ಡೆಪ್ಯುಟಿ ಸೆಕ್ರೆಟರಿ —
ಶ್ರೀ. ಯಸ್. ವಿಠಲ ಶೆಟ್ಟಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸು:- "ವಿಜಯಾ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3

ಸ್ಥಾಪನೆ: 1931.

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

Vol· 44 ಸಂಪುಟ ೪೪
No. 50 ಸಂಚಿಕೆ. ೫೦

ಸ್ಥಾಪಕರು:— ದಿ। ಎ. ಬಿ. ಶೆಟ್ಟರು
ಸಂಚಾಲಕ ಸಂಪಾದಕ: ಕೆ. ಹೊನ್ನಯ್ಯ ಶೆಟ್ಟಿ

ಸ್ವಾತಂತ್ರ್ಯ ವಿಶೇಷಾಂಕ ೧೯೬೫
NAVAYUGA
Independence Day Special 1965

ಒಳ ತಿರುಳು

ಅಂತರಾತ್ಮನ ಕರೆ
— ಸಂಪಾದಕೀಯ

ಆ ರಾಜ್ಯದಲ್ಲಿ ಕಂದಾಯವೇ ಇರಲಿಲ್ಲ.
— ಬಿ. ನ. ಸುಂದರ ರಾವ್.

ಸ್ವಾತಂತ್ರ್ಯ ಹೀಗೆ ಬಂದಿತು.
— ಮ. ರಾಜೀವ.

ಏನು ಸ್ವಾತಂತ್ರ್ಯ.
— ಬೈಕಾಡಿ ವೆಂಕಟಕೃಷ್ಣರಾಯ.

ಗಾಂಧಿ — ನೆಹರೂ ಶಕ.
— ಸುಬೋಧ ಎಂ. ರಾಮರಾವ್.

ಭರತ ಖಂಡದ ಜೀವಜ್ಯೋತಿ ಶ್ರೀ ಕೃಷ್ಣ.
— ಯ. ನಾ. ಉಡುಪ.

ನವಯುಗದ ಆಗಮನ.
— ಬಿ. ಎಚ್. ಶ್ರೀಧರ.

ಸ್ವದೇಶ ಧರ್ಮ — ಧ್ವಜದ ರಕ್ಷಣೆ.
— ಶಿವಶಂಕರ.

ಪ್ರಗತಿಯ ಲಕ್ಷಣ.
— ಎಂ. ರಂಗರಾವ್.

ಸಹಕಾರದಲ್ಲಿ ಸತ್ಯಂ, ಶಿವಂ, ಸುಂದರಂ.
— ಕೆ. ಎಸ್. ಭಟ್. ಶಿರಾಲಿಕರ್.

ಆದಿತ್ಯ ಪುರಾಣದ ಶ್ರೀರಾಮನ ಕತೆಯಲ್ಲಿ ಭರತನ ಪಾತ್ರವೈಶಿಷ್ಟ್ಯ
— ಕೆ. ವೆಂಕಟರಾಮಾಚಾರ್ಯ.

ಆಗೋಸ್ತು ತಿಂಗಳು.
— ಕೆ. ನಾರಾಯಣಾಚಾರ್.

ಶ್ರೀ ಸಾಮಾನ್ಯನ ದೃಷ್ಟಿ.
— ಆ. ಗೌ. ಕಿನ್ನಿಗೋಳಿ.

ಭಾವೈಕ್ಯ ಸಾಧಿಸುವ ಬಗೆಯೆಂತು.
— ಶಿರ್ತಾಡಿ [illegible]

ಕೆಸರಿನಲ್ಲಿ ತಾವರೆ.
— ಬೈಕಾಡಿ ಚಂದ್ರಶೇಖರ ಜೈನ್

ಹಗ್ಗ ಹರಿದರೆ ಹೇಗಿದೆ?
— ಕಯ್ಯಾರ ಕಿಞ್ಞಣ್ಣ ರೈ.

ಯೋಜನಾ ಯುವತಿ.
— ಪಾಟೀಲ ಪುಂಡಲೀಕ.

ಸ್ವತಂತ್ರವಿಲ್ಲದ ಸ್ವಾತಂತ್ರ್ಯ.
— ಡಾ. ಎಂ ಗೋಪಾಲಕೃಷ್ಣರಾವ್.

ನೀನಿಲ್ಲದಾರಿನ್ನೆಮಗೆ ಜವಾಹರಲಾಲ.
— ದಾಮೋದರ ಬಾಳಿಗ.

ಮೋತಿಲಾಲ್ ನೆಹರು
— ವನವಿಹಾರಿ.

ಕನಕದಾಸ.
— ಪ್ರೊ. ಕೆ. ತಿಮ್ಮರಸಯ್ಯ.

ಇನ್ನೊಮ್ಮೆ ಬೆಳಗಿ ಬಾ ಭಾರತದ ಜ್ಯೋತಿ.
— ಕೆ. ಪಿ. ಆಚಾರ್ಯ.

ಓ ಎನ್ನ ಬಾಳುವೆಯ ಸಂಗಾತಿ!
— ಎ. ಬಾಲಕೃಷ್ಣ ಶೆಟ್ಟಿ.

Index to Advertisers

S. No.	NAME	Page
1.	Punja & Co.	3
2.	Pangal Nayak Bank Ltd.	4
3.	Manohara Cafe	6
4.	Gadag Restaurant	9
5.	Sadvaidyasala Private Ltd.	9
6.	The United Trading Corporation & Workshop Private Limited.	10
7.	Arya Vaidya Sala	10
8.	Srinivas Brothers	12
9.	The Canara Banking Corporation Ltd.	12
10.	South Kanara Central Co-op. Bank Limited	13
11.	Canara Workshops Limited	14
12.	The South Kanara Central Co-op. Wholesale Stores Limited	15
13.	Jayanthi Tile Factory	16
14.	Shastry & Co.	17
15.	Royal Mahal	18
16.	New Karnatak Stores	18
17.	Chandarana Brothers	19
18.	Karnataka Optical Co.	22
19.	S. R. Beedi Works	22
20.	Hotel Shiva Prasad	23
21.	A. S. Pakkala	24
22.	Modern Garage	24
23.	Jyothi Talkies	25
24.	Nava Bharath Book Depot	26

S. No.	NAME	Page
25.	S. L. Shet Diamond House	7
26.	Bharath Industrial & Canning Co. Limited	28
27.	V. Shivarama Holla	29
28.	Karkera Sons & Co.	3[illegible]
29.	Arvind Motors	31
30.	Canara Jewellers	32
31.	Sri Gurudatha Bhavan	32
32.	Sri Shankeranarayana Construction Co.	35
33.	Hotel Mayur	36
34.	S. S. C. Institute	37
35.	Sri Krishna Jewellery Mart	37
36.	Sudarshana Tile Works	37
37.	Satyanarayana Tile Works	38
38.	The S. K. A. C. M. Society Limited	39
39.	Sri Shakthi Tile Works	39
40.	Udipi Sri Krishna Vilas	39
41.	Hotel Tourist	39
42	Sharada Industries	40

COVER PAGES

Back Cover page—
Syndicate Bank Limited.

1st Inside Cover page—
The Vijaya Bank Limited.

2nd Inside Cover page –
Sri Krishna Motor Service.

ನವಯುಗ

ಅಂತರಾತ್ಮನ ಕರೆ

ಸ್ವಾತಂತ್ರ್ಯ ದಿನ, ಆಗೋಸ್ತು ಹದಿನೈದು ರಾಷ್ಟ್ರೀಯ ಪರ್ವದಿನ. ವರ್ಷಾನು ವರ್ಷಗಳ ಹೋರಾಟವು ಫಲವಿತ್ತ ಮಹಾದಿನ. ಅಸಂಖ್ಯಾತ ವೀರಾತ್ಮಗಳ ಆತ್ಮೋತ್ಸರ್ಗ, ಬಲಿದಾನಗಳ ಫಲವು ನಮ್ಮೆಲ್ಲರ ಕೈಸೇರಿದ ಪರಮ ಪವಿತ್ರ ದಿನ. ಪಾರತಂತ್ರ್ಯದ ಕಷ್ಟನಷ್ಟಗಳನ್ನು ಅನುಭವಿಸಿ ಸೋತು ಸುಣ್ಣವಾದ ನಾವು ಗಳಿಸಿಕೊಂಡಿರುವ ಸ್ವಾತಂತ್ರ್ಯವನ್ನು ಕೊನೆಯುಸಿರಿರುವ ವರೆಗೂ ಉಳಿಸಿಕೊಂಡೇ ತೀರುವೆವೆಂಬ ದೃಢ ಪ್ರತಿಜ್ಞೆಯನ್ನು ಮತ್ತೆ ಪುನರುಚ್ಚರಿಸುವ ಪ್ರತಿಜ್ಞಾದಿನ. ಇಂತಹ ದಿನ ವರ್ಷ ವರ್ಷವೂ ಬಂದು ನಮಗೆ ನಮ್ಮ ಹಿರಿಯರ ತ್ಯಾಗ—ಸೇವೆಗಳ ನಮ್ಮ ಕರ್ತವ್ಯ—ಅಧಿಕಾರಗಳ ನೆನಪನ್ನು ಮತ್ತೆ ಮತ್ತೆ ಮಾಡಿಕೊಡುತ್ತದೆ.

ದೇಶದ ಆಡಳಿತೆಯ ಸೂತ್ರವು ಕಾಂಗ್ರೆಸ್ಸಿನ ಕೈಯಲ್ಲಿ ಸದ್ಯಕ್ಕೆ ಭದ್ರವಾಗಿಯೇ ಉಳಿದು ಕೊಂಡಿದೆ. ಸಬಲ ಕ್ರಿಯಾತ್ಮಕ ಪ್ರತಿ ಪಕ್ಷಗಳ ಅಭಾವದಿಂದಾಗಿ ಆಡಳಿತೆಯಲ್ಲಿ ಕಾಣ ಬರುವ ಬಿರುಕುಗಳನ್ನು ಸರಿ ಹೊಂದಿಸುವುದು ಕಷ್ಟ ಸಾಧ್ಯವಾಗಿದೆ. ವಿರೋಧಿ ಪಕ್ಷಗಳ ಸಂಖ್ಯಾಬಲ ಹೆಚ್ಚಿರುವುದಾದರೂ ಆಡಳಿತೆಯನ್ನು ನಿರ್ವಹಿಸುವ ಶಕ್ತಿ ಯಾವುದರಲ್ಲೂ ಇಲ್ಲವಾಗಿದೆ. ಇದರಿಂದಾಗಿಯೇ ಇರಬೇಕು, ಕಾಂಗ್ರೆಸ್‌ನ ಪ್ರತಿ ಘಟಕದಲ್ಲಿಯೂ ಭಿನ್ನಾಭಿಪ್ರಾಯಗಳ ಗುಂಪೊಂದು ತಲೆಯೆತ್ತಿದೆ. ಅಧಿಕಾರಿ ಅನಧಿಕಾರಿ ಗುಂಪುಗಳು ತಮ್ಮ ತಮ್ಮೊಳಗೆ ಪ್ರತ್ಯಕ್ಷವಾಗಿಯೇ ಎನ್ನುವಂತೆ ಹೋರಾಡುತ್ತಿವೆ; ಒಂದು ಇನ್ನೊಂದಕ್ಕೆ ಸಂಘಾಹ್ವಾನವನ್ನೇ ಕೊಡುತ್ತಿದೆ. ಈ ಯಾದವೀಕಲಹವನ್ನು ವಿರೋಧಿ ಪಕ್ಷಗಳು ತಮ್ಮ ಪ್ರಚಾರಕ್ಕೆ ತೆಗೆದುಕೊಳ್ಳುತ್ತವೆ. ಇದರ ಪರಿಣಾಮವೆಂಬಂತೆ ಕೇರಳದ ಚುನಾವಣೆಗಳಲ್ಲಿ ಯಾವೊಂದು ಪಕ್ಷವೂ ಆಡಳಿತೆ ನಡೆಸಲು ಆವಶ್ಯಕ ಮತ ಪಡೆಯಲಿಲ್ಲ—ರಾಷ್ಟ್ರಪತಿ ಆಡಳಿತೆಯು ಅನಿವಾರ್ಯವೆನಿಸಿತು. ಇದು ಪ್ರಜಾಪ್ರಭುತ್ವಕ್ಕೆ ಹಿತಕರವಲ್ಲವಾದರೂ ನಿರುಪಾಯ ಸ್ಥಿತಿಯಲ್ಲಿ ಸೂಕ್ತ ಪರಿಹಾರೋಪಾಯ. ಕಾಂಗ್ರೆಸ್ ಅಂತಃಕಲಹದಲ್ಲಿಯೇ ತಲ್ಲೀನವಾಗಿ, ಅಧಿಕಾರದಾಹದಿಂದ ಮೈಮರೆತರೆ, ಈ ವರ್ಷ ಕೇರಳದಲ್ಲಿ ತೋರಿದ ಪರಿಸ್ಥಿತಿ ಮುಂದೆ ಇಡಿಯ ದೇಶದಲ್ಲೂ ಉದ್ಭವಿಸಬಹುದು. ಅಲ್ಲಿಗೆ ಪ್ರಜೆಗಳಿಗಾಗಿ ಪ್ರಜೆಗಳಿಂದಲೇ ನಡೆಯುವ ಆಡಳಿತೆಯೆಲ್ಲಿ ಬಂತು? ಆದುದರಿಂದ, ಸ್ವಾತಂತ್ರ್ಯ ಹೋರಾಟದಲ್ಲಿ ತ್ಯಾಗ—ಸೇವೆ—ಬಲಿದಾನಗಳ ಪಾಠವನ್ನು ಅನುಷ್ಠಾನಕ್ಕೆ ತಂದ ಕಾಂಗ್ರೆಸ್ ಈಗ ಮತ್ತೆ ಜಾಗ್ರತವಾಗಬೇಕು; ದೇಶವನ್ನು ಸುಭದ್ರವಾಗಿ ಕಟ್ಟುವಲ್ಲಿ ಎಚ್ಚರಿಕೆಯಿರಬೇಕು.

ರಾಜ್ಯ—ರಾಜ್ಯಗಳ ಸಂಬಂಧ ಸಮಂಜಸವಾಗಿರುವುದು ರಾಷ್ಟ್ರ—ಐಕ್ಯಕ್ಕೆ ನಾಂದಿ. ಭಾಷಾ ಸಂಬಂಧದ ದೊಂಬಿ, ರಾಜ್ಯಗಳ ಗಡಿಗಳ ಬಗ್ಗೆ ಭಿನ್ನಾಭಿಪ್ರಾಯಗಳು ಇದಕ್ಕೆ ಪ್ರೇರಕವಾಗಲಾರವು. ಗೋವೆಯ ಬಗ್ಗೆ ಕರ್ನಾಟಕ—ಮಹಾರಾಷ್ಟ್ರಗಳ ನಡುವೆ ತೀವ್ರ ಬಿಕ್ಕಟ್ಟು ತಲೆದೋರಿದೆ. ಕೇಂದ್ರದ ಒಂದು ಯೋಜನೆಗೆಂದು ಒಂದು ರಾಜ್ಯದ ಒಂದು ನಗರ ಆಯ್ಕೆಯಾದೊಡನೆ ಉಳಿದ ರಾಜ್ಯಗಳು ರಂಪಾಟವೆಬ್ಬಿಸುತ್ತವೆ—ಇದೇ ರೀತಿ ರಾಜ್ಯ—ರಾಜ್ಯಗಳು, ಕೇಂದ್ರ—ರಾಜ್ಯಗಳು ಹೋರಾಡುತ್ತ ನಿಂತರೆ ಅದು ರಾಷ್ಟ್ರೀಯ ಪುರುಷನ ಅನಾರೋಗ್ಯದ ದ್ಯೋತಕ. ಇವುಗಳಿಗಿರುವಷ್ಟು ಸಮಯ ಐಕ್ಯ ಮೂಡಿ ಬರಲಾರದು. ಬಾಹ್ಯ ಭೀತಿಯಿಂದ ಕಂಬಿರುವ ಭಾರತವು ಆಂತರಿಕವಾಗಿ ಒಂದಾಗಲೇ ಬೇಕು.

ನಾವು ಸಾಧಿಸಿದ ಅಭಿವೃದ್ಧಿ ಪ್ರಶಂಸನೀಯ, ಇನ್ನು ಸಾಧಿಸಲಿರುವ ಅಂಶವೂ ಅತುಲನೀಯ. ಸರಿ ದಾರಿಯಲ್ಲಿ ನಾವು ನಡೆಯ ತೊಡಗಿದ್ದೇವೆ, ಯೋಜನಾಬದ್ಧ ರೀತಿಯಲ್ಲಿ. ಸರಿದಾರಿ ತುಳಿಯಬೇಕು, ಭಾವೈಕ್ಯ ನೀತಿಯಲ್ಲಿ. ಕಚ್ಛ—ರಣದಲ್ಲಿ ಪಾಕಿಸ್ತಾನ ಮಾಡಿದ ಆಕ್ರಮಣ ತೆರವಾಗಿ ಸೀಮಾ ವಿವಾದ ಪರಿಹಾರದ ಮಾತುಕತೆಗಳು ನಡೆಯ ತೊಡಗಿವೆ ಆದರೆ, ಉಳಿದೆಡೆಯಲ್ಲಿ ಪಾಕ್ ಗಡಿಯನ್ನು ಉಲ್ಲಂಘಿಸುತ್ತಿದೆ. ಚೀನೀಯ ಭೀತಿಯಿನ್ನೂ ದೂರವಾಗಿಲ್ಲ. ಕಾಶ್ಮೀರವು ತನಗೆನ್ನುತ್ತ ಅಯ್ಯೂಬರು ಕೂಗುತ್ತಾರೆ; ಶೇಖ್ ಅಬ್ದುಲ್ಲಾರ ವಿಕಟ ನಗೆಯೇನೋ ತುಸು ನಿಂತಿದೆ. ಏನಿದ್ದರೂ ದೂರದಲ್ಲಿ ಕಾಣುತ್ತಿರುವುದು ನಮಗೆ ಭಯಾನಕ ಶರತಲ್ಪ ಮಾತ್ರ. ಅದನ್ನು ಕಂಡೂ ಕಂಡೂ ನಾವು ಒಳಗಡೆ ಸುಖದ ಸುಷುಪ್ತಿಯಲ್ಲಿ ಒರಗಿ ಮೈಮರೆತರೆ, ನಮಗಿಂತ ಮೂರ್ಖರು ಮತ್ತಾರೂ ಇರಲಾರರು. ಆದುದರಿಂದ ಸುಖ ನಿದ್ರೆಯಿಂದ ಕಣ್ಣು ತೆರೆದು ನಮ್ಮ ನಮ್ಮ ಅಂತರಾತ್ಮನ ಕರೆಯ ಕಡೆಗೆ ಕಿವಿಗೊಡುವ ಪರಿಪಾಠವನ್ನು ನಾವಿಂದಿನಿಂದಲೇ ಇಟ್ಟುಕೊಳ್ಳುವ ಪ್ರತಿಜ್ಞೆ ಮಾಡೋಣ.

ದೇಶ ಸೇವೆಯ ಪ್ರತಿಜ್ಞೆ ಸ್ಥಿರವಾಗಲಿ.
ಭಾರತೀಯ ಸ್ವಾತಂತ್ರ್ಯ ಚಿರಾಯುವಾಗಲಿ.
ಜೈಹಿಂದ್

ಅಭಿವಂದನೆ

"ನವಯುಗ"ದ ಸ್ವಾತಂತ್ರ್ಯ ದಿನ ಸಂಚಿಕೆಯನ್ನು ಹೊರಡಿಸುವಲ್ಲಿ ಸರ್ವ ರೀತಿಯ ನೆರವಾದವರೆಲ್ಲರಿಗೂ ನಮ್ಮ ವಂದನೆಗಳು. ಮುಂದೆಯೂ ಇದಕ್ಕಿಂತಲೂ ಹೆಚ್ಚಿನ ಸಹಾಯ ಇವರಿಂದ ದೊರೆಯುವಂತಾಗಲಿ.

ಶ್ರೀ ಬ. ನ. ಸುಂದರ ರಾವ್

ಆ ರಾಜ್ಯದಲ್ಲಿ ಕಂದಾಯವೇ ಇರಲಿಲ್ಲ

ಹೊಯ್ಸಳರ ಬಿಟ್ಟಿದೇವ ಅಥವಾ ವಿಷ್ಣುವರ್ಧನನ ಹೆಸರರಿಯದವರಾರು? ಆತನ ರಾಜ್ಯದಲ್ಲಿ ಕಂದಾಯದ ಬದಲು ಸವೆದು ಹೋದ ನೇಗಿಲ ಗುಳವನ್ನು ರಾಜನಿಗೊಪ್ಪಿಸಿದರೆ ಸಾಕಿತ್ತಂತೆ! ಇದೇಕಿಸ ವೈಪರೀತ್ಯ? ಓದಿಯೇ ತಿಳಿಯಿರಿ

ಈಗಿನ ಹಳೇಬೀಡು ಹಿಂದೆ ಹೊಯ್ಸಳರ ರಾಜಧಾನಿಯಾಗಿತ್ತು. ಆಗ ಅದಕ್ಕೆ ದ್ವಾರಸಮುದ್ರ, ದ್ವಾರಾವತಿ—ಎಂಬ ಹೆಸರುಗಳಿದ್ದುವು. ಈ ಹೊಯ್ಸಳರಲ್ಲಿ ಬಲ್ಲಾಳ, ಎರೆಯಂಗ, ಮುಂತಾದ ಅನೇಕ ರಾಜರುಗಳು ಪ್ರಸಿದ್ಧರು. ಈ ರಾಜರುಗಳಲ್ಲಿ ಅತ್ಯಂತ ಪ್ರಸಿದ್ಧನಾದವನೆಂದರೆ ಬಿಟ್ಟಿದೇವ. ಈತನು ಶ್ರೀ ವೈಷ್ಣವ ಮತಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರ ಪ್ರಭಾವಕ್ಕೊಳಗಾಗಿ ಶ್ರೀ ವೈಷ್ಣವ ಮತವನ್ನವಲಂಬಿಸಿ ವಿಷ್ಣುವರ್ಧನನಾದ. ಈತನ ಕಾಲದಲ್ಲಿ ಶಿಲ್ಪಕಲೆ ಉಚ್ಛ್ರಾಯ ಸ್ಥಿತಿಗೇರಿತ್ತು. ದೊರೆ ನ್ಯಾಯಪಕ್ಷಪಾತಿ, ಪ್ರಜೆಗಳ ಹಿತೈಷಿ, ಆತನ ಕಾಲದಲ್ಲಿ ಜನರೆಲ್ಲ ನೆಮ್ಮದಿಯಿಂದಿದ್ದರು. ಎಲ್ಲಿ ನೋಡಿದರೂ ಹಸುರಾದ ಹೊಲ, ತುಂಬಿದ ಕೆರೆ, ಕಣ್ಣಿಗೆ ಮನೋಜ್ಞ ನೋಟ.

ಈತನ ರಾಜ್ಯದ ಒಂದು ಗ್ರಾಮದಲ್ಲಿ ವಿಷ್ಣುಶರ್ಮನೆಂಬ ಬ್ರಾಹ್ಮಣನಿದ್ದ. ನೆಮ್ಮದಿಯಿಂದಲೇ ಜೀವನ ನಡೆಸುತ್ತಿದ್ದ ಆತನಿಗೆ ಈಶ್ವರನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಹಂಬಲಾಯಿತು. ಈಶ್ವರನ ಸಾಕ್ಷಾತ್ಕಾರಕ್ಕೆ ಪ್ರಶಾಂತವಾದ ತಾಣವನ್ನರಸುತ್ತ ಕೊನೆಗೆ ಅವನು ಚಂದ್ರದ್ರೋಣಪರ್ವತವನ್ನು ಸೇರಿದ. ಅಲ್ಲಿ ವೃಕ್ಷವೊಂದರ ಕೆಳಗೆ ಕುಳಿತು ಬಹಳ ವರ್ಷಗಳು ತಪಸ್ಸು ಮಾಡಿದ. ಈಶ್ವರ ಎಷ್ಟಾಗಲೀ ಭಕ್ತರಾಧೀನನಲ್ಲವೆ? ಬ್ರಾಹ್ಮಣನ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾದ. ಈಶ್ವರನನ್ನು ಕಂಡ ವಿಷ್ಣುಶರ್ಮ ಆನಂದದಿಂದ ಹಿಗ್ಗಿ ಹೋದ. ಆನಂದದ ಪರಮಾವಧಿಯಲ್ಲಿ ಮುಳುಗಿ ಹೋದ ಅವನಿಗೆ ಈಶ್ವರನನ್ನು ಕಂಡಾಗ ಏನು ಮಾತನಾಡಬೇಕೆಂಬುದೇ ತೋಚದೆ ಬೆಪ್ಪಾಗಿ ನಿಂತುಬಿಟ್ಟ. ಕಡೆಗೆ ಈಶ್ವರನೇ—ಏನು ಬೇಕಪ್ಪಾ ನಿನಗೆ! ಎಂದು ವಿಷ್ಣುಶರ್ಮನನ್ನು ಕೇಳಬೇಕಾಯಿತು. ವಿಷ್ಣುಶರ್ಮ ಒಂದೆರಡು ಕ್ಷಣದಲ್ಲಿ ಚೇತರಿಸಿಕೊಂಡು ಈಶ್ವರನಿಗೆ ಅಡ್ಡಬಿದ್ದು—"ಹೇ ಜಗದೀಶ, ನನ್ನನ್ನು ಉದ್ಧರಿಸು. ನಿನ್ನ ದರ್ಶನವೇ ಒಂದು ಭಾಗ್ಯ. ತಂದೆ ಕಾಯಿ—ಎಲ್ಲವೂ ನೀನೇ, ನಾನು ಸುಖದಿಂದ ಜೀವಿಸಲು ಅನುಕೂಲ ಮಾಡಿಕೊಟ್ಟರೆ ಸಾಕು" ಎಂದ. ಈಶ್ವರನು ಮುಗುಳ್ನಗೆ ನಗುತ್ತಾ—"ಆಗಲಿ, ನಾನೊಂದು ವಿಧವಾದ ರಸವನ್ನು ಕೊಡುತ್ತೇನೆ, ಅದನ್ನು ಕಬ್ಬಿಣದ ಮೇಲೆ ಹಾಕಿದರೆ ಕಬ್ಬಿಣ ಕೂಡಲೇ ಚಿನ್ನವಾಗುತ್ತದೆ, ನಿನಗೆ ಬೇಕಾದಷ್ಟು ಐಶ್ವರ್ಯ ಸಿಗುತ್ತದೆ." ಎಂದು ಹೇಳಿ ರಸವನ್ನು ತುಂಬಿದ್ದ ಚಿನ್ನದ ತಂಬಿಗೆಯೊಂದನ್ನು ವಿಷ್ಣುಶರ್ಮನಿಗೆ ಕೊಟ್ಟ. ವಿಷ್ಣುಶರ್ಮ ಮತ್ತೆ ಅಡ್ಡಬಿದ್ದು, ಮೇಲಕ್ಕೇಳುವಷ್ಟರಲ್ಲಿ ಈಶ್ವರ ಮಾಯವಾಗಿದ್ದ.

ವಿಷ್ಣುಶರ್ಮ ಸಿದ್ಧರಸವಿದ್ದ ಆ ತಂಬಿಗೆಯನ್ನು ಜೋಪಾನವಾಗಿ ತೆಗೆದುಕೊಂಡು ಅಲ್ಲಿಂದ ಹೊರಟ. ತನ್ನ ಊರಿಗೆ ಹೋಗುವ ಮಾರ್ಗದಲ್ಲಿ ರಾಜಧಾನಿಯಾದ ದ್ವಾರಸಮುದ್ರಕ್ಕೆ ಬಂದು ಸೇರಿದ. ಆ ವೇಳೆಗೆ ಕತ್ತಲೂ ಆದುದರಿಂದ ಆ ರಾತ್ರಿಯನ್ನು ವಿಷ್ಣುಶರ್ಮನು ದ್ವಾರಸಮುದ್ರದಲ್ಲಿಯೇ ಕಳೆಯಬೇಕಾಯಿತು. ಸಮೀಪದಲ್ಲಿಯೇ ಕಮ್ಮಾರನ ಅಂಗಡಿಯೊಂದು ಕಾಣಿಸಿತು. ಆಗ ಚಳಿಗಾಲ. ವಿಷ್ಣುಶರ್ಮ ಬೆಂಕಿಯ ಮುಂದೆ ಸ್ವಲ್ಪ ಹೊತ್ತು ಬೆಚ್ಚಗೆ ಕುಳಿತಿದ್ದು ಇನ್ನು ಸಂಧ್ಯಾವಂದನೆಯಾಗಬೇಕಲ್ಲ. ಆಗ ವಿಷ್ಣುಶರ್ಮ ತನ್ನಲ್ಲಿದ್ದ ಗಂಟೊಂದನ್ನು ಅಂಗಡಿಯ ಮೂಲೆಯಲ್ಲಿ ಮರೆಯಾಗಿಟ್ಟು ಕಮ್ಮಾರನಿಗೆ ಸ್ವಲ್ಪ ನೋಡಿಕೊಳ್ಳುವಂತೆ ತಿಳಿಸಿ, ಅಲ್ಲಿಂದ ನದಿಯ ಕಡೆಗೆ ಹೊರಟ. ವಿಷ್ಣುಶರ್ಮನ ಗಂಟಿನಲ್ಲಿ ಈಶ್ವರನು ಕೊಟ್ಟ ಚಿನ್ನದ ತಂಬಿಗೆಯೂ ಇತ್ತು.

ತನ್ನ ಕೆಲಸದಲ್ಲಿ ಮಗ್ನನಾಗಿದ್ದ ಕಮ್ಮಾರ ಮೂಲೆಯಲ್ಲಿದ್ದ ಕಬ್ಬಿಣದ ತುಂಡೊಂದನ್ನು ತೆಗೆಯಬೇಕಾಯಿತು. ಆ ತುಂಡಿನ ಬಳಿಯಲ್ಲೇ ವಿಷ್ಣುಶರ್ಮನ ಗಂಟೂ ಇತ್ತು. ಆ ಗಂಟಿನ ವೈಖರಿಯನ್ನು ತಿಳಿಯದೆ ಕಮ್ಮಾರ ಆ ಗಂಟನ್ನು ತೆಗೆದು ಪಕ್ಕಕ್ಕೆ ಸರಿಸಿ ತನ್ನ ತುಂಡನ್ನು ತೆಗೆದುಕೊಂಡು ಮತ್ತೆ ತನ್ನ ಕೆಲಸದಲ್ಲಿ ನಿರತನಾದ. ಆಗ ಚಿನ್ನದ ತಂಬಿಗೆಯಲ್ಲಿದ್ದ ಸಿದ್ಧರಸ ಒಂದು ತೊಟ್ಟು ಪಕ್ಕದಲ್ಲಿದ್ದ ಕಬ್ಬಿಣದ ತುಂಡಿನ ಮೇಲೆ ಬಿತ್ತು. ಕೂಡಲೇ ಅದು ಬಂಗಾರವಾಯಿತು. ಆದರೆ ಕಮ್ಮಾರ ಇದನ್ನು ಗಮನಿಸಲೇ ಇಲ್ಲ. ಸ್ವಲ್ಪ ಹೊತ್ತಿನ ಮೇಲೆ ಕಮ್ಮಾರನ ಹೆಂಡತಿ ತನ್ನ ಗಂಡನನ್ನು ಊಟಕ್ಕೆ ಕರೆಯಲು ಅಲ್ಲಿಗೆ ಬಂದಳು. ಥಳಥಳ ಹೊಳೆಯುತ್ತಿದ್ದ ಬಂಗಾರದ ತುಂಡು ಅವಳ ಕಣ್ಣಿಗೆ ಗೋಚರಿಸಿತು. ಆ ಕ್ಷಣವೆ ಗಂಡನನ್ನು ಕರೆದು ತೋರಿಸಿದಳು. ಆ ಸೋಜಿಗ ಕಂಡು ಇಬ್ಬರಿಗೂ ಅದರ ಆಶ್ಚರ್ಯ ತಪ್ಪಿಸಲಿಲ್ಲ. ಅದರ ಕಾರಣವನ್ನು ಇಬ್ಬರೂ ಅಂಗಡಿಯೆಲ್ಲ ಹುಡುಕತೊಡಗಿದರು. ಅವರ ಕಣ್ಣಿಗೆ ವಿಷ್ಣುಶರ್ಮನ ಗಂಟೊಂದು ಕಾಣಿಸಿತು. ಅಷ್ಟೆ. ಕಮ್ಮಾರ ಅದನ್ನು ಮತ್ತೊಮ್ಮೆ ಎತ್ತಿ ಪಕ್ಕಕ್ಕಿಟ್ಟ. ಆಗ ಇನ್ನೊಂದು ತೊಟ್ಟು ರಸ ಚೆಲ್ಲಿ ಮತ್ತೊಂದು ಕಬ್ಬಿಣದ ತುಂಡು ಬಂಗಾರವಾಯಿತು. ಇಬ್ಬರು ಆ ಗಂಟನ್ನು ಬಿಚ್ಚಿ ನೋಡಿದರು. ಚಿನ್ನದ ತಂಬಿಗೆ ಕಾಣಿಸಿತು. ಅದರಲ್ಲಿದ್ದ ರಸದಿಂದ ಕಮ್ಮಾರನ ಹೆಂಡತಿ ಇನ್ನೊಂದು ತುಂಡು ಕಬ್ಬಿಣವನ್ನು ನಿರಾಯಾಸವಾಗಿ ಬಂಗಾರವನ್ನಾಗಿ ಮಾಡಿದಳು. ಅದರ ಗುಟ್ಟನ್ನು ಇಬ್ಬರೂ ಅರಿತರು. ಅವರ ಆನಂದಕ್ಕೆ ಪಾರವೆಲ್ಲಿ?

ಇಬ್ಬರೂ ಪಿಸಪಿಸನೆ ಮಾತನಾಡಿಕೊಂಡರು. ಕಮ್ಮಾರನ ಹೆಂಡತಿ ಆ ಗಂಟನ್ನು ಬಹು ಜೋಪಾನದಿಂದ ತೆಗೆದುಕೊಂಡು ತನ್ನ ಮನೆಯ ಕಡೆ ನಡೆದಳು. ಆದರೆ ಅದನ್ನು ತನ್ನ ಮನೆಯಲ್ಲಿಡಲಿಲ್ಲ. ತನ್ನ ನೆರೆಮನೆಯೊಂದರಲ್ಲಿ ಏನೋ ನೆಪ ಹೇಳಿ ಅದನ್ನು ಮುಚ್ಚಿಟ್ಟಳು. ಇತ್ತ ಕಮ್ಮಾರ ತನ್ನ ಅಂಗಡಿಗೇ ಬೆಂಕಿಯಿಟ್ಟ. ಅಂಗಡಿ ಬೆಂಕಿಯಿಂದ ಉರಿಯುತ್ತಿದ್ದರೆ ಕಮ್ಮಾರ, ಅವನ ಹೆಂಡತಿ ಹೋ ಎಂದು ಅಳಲು ಪ್ರಾರಂಭಿಸಿದರು. ಆ ವೇಳೆಗೆ ಸಂಧ್ಯಾವಂದನೆಗೆಂದು ಹೋಗಿದ್ದ ವಿಷ್ಣುಶರ್ಮನು ಬಂದ. ನೋಡಿದರೆ ಅಂಗಡಿಗೆ ಬೆಂಕಿ ಹತ್ತಿದೆ, ಕಮ್ಮಾರನನ್ನು ಕೂಗಿದ. ಉತ್ತರವೇ ಇಲ್ಲ. "ಅಯ್ಯೋ ದೇವರೇ, ಕೈಗೆ ಬಂದ ತುತ್ತು ಬಾಯಿಗಿಲ್ಲವಾಯಿತೇ" ಎಂದು ಗಟ್ಟಿಯಾಗಿ ರೋಧಿಸತೊಡಗಿದ. ಇವನ ರೋಧನವನ್ನು ಕೇಳಿ ದಾರಿಯ ಜನರೆಲ್ಲ ಸೇರಿದರು. ವಿಷ್ಣುಶರ್ಮ ಆಗ ನಡೆದಿದ್ದ ವಿಷಯವೆಲ್ಲವನ್ನೂ ನಿವೇದಿಸಿಕೊಂಡ. ಎಲ್ಲರೂ ಸೇರಿ ಕಮ್ಮಾರನನ್ನು ಕರೆತಂದರು. "ಅಯ್ಯಾ— ನಾನು ನಿನ್ನ ಅಂಗಡಿಯಲ್ಲಿಟ್ಟಿದ್ದ ಗಂಟು...!" ಎಂದು ವಿಷ್ಣುಶರ್ಮನು ಹೇಳುವಷ್ಟರಲ್ಲಿ ಕಮ್ಮಾರನೂ ಅವನ ಹೆಂಡತಿಯೂ— "ನಮ್ಮ ಅಂಗಡಿಯೇ ಹಾಳಾಗುತ್ತಿದೆ. ಈ ಹೊತ್ತಿನಲ್ಲಿ ಈ ಬ್ರಾಹ್ಮಣನಿಗೆ ತನ್ನ ಗಂಟಿನ ಯೋಚನೆ." ಎಂದು ಅಬ್ಬರಿಸಿ, ಬಹು ಚೆನ್ನಾಗಿ ನಾಟಕವನ್ನು ಅಭಿನಯಿಸಿದರು. ಊರಿನ ಮುಖ್ಯಸ್ಥರೊಬ್ಬರು ನ್ಯಾಯ ಮಾಡಿದರು. ಅವರೇನು? ಕಮ್ಮಾರ ಹೇಳಿದ ದಿಷ್ಟು— "ಅಯ್ಯಾ ಬ್ರಾಹ್ಮಣ ನಿನ್ನ ಗಂಟನ್ನು ನಾನು ಜೋಪಾನವಾಗಿಯೇ ಇಟ್ಟಿದ್ದೆ. ಆದರೆ ಬೆಂಕಿ ಬಿದ್ದು ಎಲ್ಲ ಗುಡಿಸಲೇ ಸುಟ್ಟು ಹೋಗುತ್ತಿದೆ. ನಾನೇನು ಮಾಡಲಿ?" ಕಡೆಗೂ ಕಮ್ಮಾರ ಸುಳ್ಳನ್ನೇ ಸಾಧಿಸಿದ.

(ಮೂವತ್ತೆಂಟನೇ ಪುಟ ನೋಡಿರಿ)

For BEST TEAS
CONTACT:
PUNJA & CO.,
MULKI
PHONE No. Office: 26
Res. No. 36
Dealers of:
Waterfall
Brooklands
Glendale
TEAS
KOTHARI & SONS,
P. B. NO. 267,
MADRAS-1.

ಸ್ವಾತಂತ್ರ್ಯ ದಿನದ ಶುಭಾಶಯಗಳು!

ಸೌಜನ್ಯ, ಸೌಲಭ್ಯ ಹಾಗೂ ಭದ್ರತೆಗಳ ಹೆಗ್ಗುರುತು—

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್,

(ಶೆಡ್ಯೂಲ್ಡ್ ಬ್ಯಾಂಕ್)



ವಿವಿಧ ಬ್ಯಾಂಕಿಂಗ್ ಸೌಕರ್ಯಗಳು:

ಕರೆ, ಚಿಕ್ಕ ವಾಯಿದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು.

ಬಡ್ಡಿ ಸೇಕಡಾ **8**ರ ವರೆಗೆ

ಚಲಾವಣಾ ಭಂಡವಾಳ ರೂ. **2** ಕೋಟಿಗೂ ಮಿಕ್ಕಿದೆ.

ಪ್ರಗತಿ ಪಥದಲ್ಲಿ ಮುಂದಡಿಯಿಡುತ್ತಿರುವ ನಾಯಕ್ ಬ್ಯಾಂಕ್ ಪ್ರತಿಯೊಬ್ಬರಿಗೂ

ಏಕಪ್ರಕಾರದ ಸೌಜನ್ಯ ಸೇವೆ ಸಲ್ಲಿಸಲು ಸಿದ್ಧವಿದೆ.

ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಶಾಖಾ ಕಛೇರಿಯನ್ನು ಸಂದರ್ಶಿಸಿರಿ.

ನಮ್ಮ ಶಾಖಾ ಸಮುದಾಯ

ಮೈಸೂರು ರಾಜ್ಯದಲ್ಲಿ— ಉಡುಪಿ ಟೌನ್, ಮಂಗಳೂರು—ಬಂದರ್, ಮಂಗಳೂರು—ಹಂಪನಕಟ್ಟೆ, ಬೆಂಗಳೂರು, ಶಿವಮೊಗ್ಗಾ, ಬೇಲೂರು, ತುಮಕೂರು, ಕಟಪಾಡಿ, ಸುರತ್ಕಲ್, ಕುಣಿಗಲ್, ಕಿನ್ನಿಗೋಳಿ, ಶಂಕರಪುರ, ಹಳೆಯಂಗಡಿ, ಮುದರಂಗಡಿ, ಬೆಳ್ಳಿ, ಭದ್ರಾವತಿ, ನಾಗಮಂಗಲ, ಚಿಕ್ಕನಾಯಕನ ಹಳ್ಳಿ.

ಕೇರಳ ರಾಜ್ಯದಲ್ಲಿ— ಕಾಂಞಂಗಾಡ್, ನೀಲೇಶ್ವರ, ಕಾಸರಗೋಡ್.

THE PANGAL NAYAK BANK LTD.

(SCHEDULED BANK)

ESTD. 1920

Regd. Office: UDIPI, S. Kanara.

ಶ್ರೀ ಮ. ರಾಜೀವ, ಬೆಂಗಳೂರು.

ಸ್ವಾತಂತ್ರ್ಯ ಹೀಗೆ ಬಂದಿತು

ನಾವಿಂದು ಸ್ವತಂತ್ರರು, ಆದರೆ ನಮಗೆ ಸ್ವಾತಂತ್ರ್ಯ ಹೇಗೆ ಬಂದಿತು ಎಂಬುದನ್ನು ಕೂಲಂಕಷವಾಗಿ ನಮ್ಮಲ್ಲಿ ಎಷ್ಟು ಜನರು ವಿವೇಚಿಸಿದ್ದಾರೆ? ಭಾರತದಲ್ಲಿ ಬ್ರಿಟಿಷ ಪ್ರಭುತ್ವದ ಅಸ್ತಮಾನ ಮತ್ತು ಸ್ವತಂತ್ರ ಭಾರತೋದಯದ ಸಂಕ್ರಾಂತಿ ಕಾಲದ ಐತಿಹಾಸಿಕ ಮಹತ್ವದ ಘಟನೆಗಳೇ ನಮಗೆ ಸ್ವಾತಂತ್ರ್ಯ ತಂದಿತ್ತುವು

ಭಾರತಕ್ಕೆ ಸ್ವಾತಂತ್ರ್ಯ ಬಂದಿದೆ. ಆದು ಹೇಗೆ ಬಂದಿತು? ಬ್ರಿಟಿಷರು ಭಾರತೀಯರಿಗೆ ಸ್ವಾತಂತ್ರ್ಯವನ್ನು ಕೊಡಲು, ಅಧಿಕಾರವನ್ನು ವರ್ಗಾಯಿಸಲು ಯಾಕೆ ಒಪ್ಪಿದರು? ಇವು ಚರಿತ್ರೆಯ ಪ್ರಶ್ನೆಗಳು. ಆದರೆ ಭಾರತೀಯ ಪ್ರಜೆಯು ತಿಳಿಯಬೇಕಾದ ಮುಖ್ಯವಾದ ಹಾಗೂ ಮೂಲಭೂತವಾದ ವಿಚಾರಗಳಾಗಿವೆ.

ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ, ಭಾರತೀಯ ಜನರ ತ್ಯಾಗ ಧೈರ್ಯ ಸಾಹಸ, ದೇಶಪ್ರೇಮ, ಬಲಿದಾನಗಳು ಭಾರತೀಯ ದಾಸ್ಯ ವಿಮೋಚನೆಯಲ್ಲಿ ಮಹತ್ವದ ಪಾತ್ರ ವಹಿಸಿದಂತೆಯೇ ಅಂತರ್ ರಾಷ್ಟ್ರೀಯ ಪರಿಸ್ಥಿತಿಯೂ ಭಾರತೀಯ ಸ್ವಾತಂತ್ರ್ಯ ಹೋರಾಟದ ವಿಜಯಕ್ಕೆ ಒಂದು ಮುಖ್ಯ ಕಾರಣವಾಗಿದೆ. ಬ್ರಿಟಿಷ್ ಸರಕಾರದ ಬದಲಾದ ರಾಜಕೀಯ ಧೋರಣೆಯೂ ಇನ್ನೊಂದು ಪ್ರಧಾನ ಕಾರಣವಾಗಿದೆ. ಸಂಯುಕ್ತ ಅಮೇರಿಕವು ಬ್ರಿಟನಿನ ಮೇಲೆ ಹಾಕಿದ ಒತ್ತಾಯವೂ ಮತ್ತೊಂದು ಕಾರಣವಾಗಿದೆ.

ಬ್ರಿಟಿಷ್ ರಾಜ್ಯದ ಅಂತಿಮ ದಿನಗಳು ಭಾರತೀಯ ಚರಿತ್ರೆಯ ಅತ್ಯಂತ ಪ್ರಮುಖ ದಿನಗಳಾಗಿದ್ದುವು. ದ್ವಿತೀಯ ಮಹಾಯುದ್ಧ ಕಾಲದಲ್ಲಿ ಬ್ರಿಟನ್ ತನ್ನ ಸಾಮ್ರಾಜ್ಯದ ಬಗ್ಗೆ ದೂರ ದೃಷ್ಟಿಯ ಧೋರಣೆಯನ್ನನುಸರಿಸುವ ಆವಶ್ಯವನ್ನು ಅರ್ಥ ಮಾಡಬೇಕಾಯಿತು. ಅಜಾದ್ ಹಿಂದ್ ಫೌಜ್—ಆಗ್ನೇಯ ಏಷ್ಯಾದಲ್ಲಿ ಅದರ ಸಾಹಸದ ಕಾರ್ಯ ಬ್ರಿಟಿಷ್ ಸರಕಾರದ ಕಣ್ಣು ತೆರೆಯುವಂತೆ ಮಾಡಿತು. ಬ್ರಿಟಿಷ್ ಸರಕಾರವು ಬಲವಾಗಿ ನಂಬಿಕೊಂಡಿದ್ದ ಭಾರತೀಯ ಸೈನ್ಯವು ಅವರಿಗೆ ವಿರುದ್ಧವಾಗಿ 'ಸ್ವತಂತ್ರ ಭಾರತ ಸರಕಾರ'ವನ್ನು ಸ್ಥಾಪಿಸಿದುದು ಭಾರತವನ್ನಾಳುವ ಅವರ ಭರವಸೆಯನ್ನು ಕೊನೆಗೊಳಿಸಿತು.

ಬ್ರಿಟನಿನಲ್ಲಿ ಅಧಿಕಾರಕ್ಕೆ ಬಂದ ಲೇಬರ್ ಪಕ್ಷದ ಸರಕಾರವು ಭಾರತದ ಸ್ವಾತಂತ್ರ್ಯ ಬೇಡಿಕೆಗೆ ಮೊದಲಿನಿಂದಲೂ ಸಹಾನುಭೂತಿಯನ್ನು ವ್ಯಕ್ತಪಡಿಸಿತ್ತು. ಆದರೆ ಭಾರತದ ರಾಜಕೀಯ ಮುಂದಾಳುಗಳಲ್ಲಿ ಮುಂದಿನ ರಾಜಕೀಯ ಬೆಳವಣಿಗೆಯ ಬಗ್ಗೆ ಮೂಲಭೂತವಾದ ಭಿನ್ನಾಭಿಪ್ರಾಯಗಳು ದೊಡ್ಡ ಕಡೆಗಳಾಗಿ ನಿಂತಿದ್ದುವು. ದೇಶವನ್ನು ಅಂತಃಕಲಹದಲ್ಲಿ ಬಿಟ್ಟು ಅಧಿಕಾರವರ್ಗಾಯಿಸುವುದು ಸರಿಯಾದ ದಾರಿಯಲ್ಲ. ಇನ್ನೊಂದೆಡೆ ಚಾರಿತ್ರಿಕ ಸಂಬಂಧಗಳಿಂದ ಬೆಳೆದು ಬಂದಿರುವ ಹಲವಾರು ಸಂಸ್ಥಾನಗಳ ಬಗ್ಗೆ ಸಮರ್ಪಕ ವ್ಯವಸ್ಥೆ ಮಾಡದೆ ಭಾರತೀಯರಿಗೆ ಅಧಿಕಾರ ಕೊಡುವುದೂ ಅಸಾಧ್ಯ. ಮತ್ತೊಂದು ಕ್ಲಿಷ್ಟ ಸಮಸ್ಯೆ ಅಲ್ಪ ಸಂಖ್ಯಾತರಾದ ಮುಸ್ಲಿಮರ ಪ್ರಶ್ನೆಯಾಗಿತ್ತು.

ಈ ಮುಸ್ಲಿಂ ಸಮಸ್ಯೆಯ ಚಾರಿತ್ರಿಕ ಹುಟ್ಟು, ಬೆಳವಣಿಗೆ ಏನೇ ಇರಲಿ— ಅದು ದೊಡ್ಡ ಪ್ರಶ್ನೆಯಾಗಿ ದೇಶದ ಸ್ವಾತಂತ್ರ್ಯ ಬೇಡಿಕೆಯ ಪರಿಹಾರದಲ್ಲಿ ಹಲವು ವರ್ಷಗಳಿಂದ ತೀರಾ ತೊಡಕಿನ ಕಡೆಯಾಗಿ ನಿಂತಿತ್ತು. ಬ್ರಿಟಿಷ್ ಸರಕಾರವು ನೀಡಿದ ಪರಿಹಾರಗಳೆಲ್ಲವೂ ವಿಫಲವಾಗಲು ಒಂದು ಮುಖ್ಯ ಆತಂಕವು ಮುಸ್ಲಿಂ ಪ್ರಶ್ನೆಯಾಗಿತ್ತು. ೧೯೪೦ರ ಬಳಿಕವಂತೂ ಪಾಕಿಸ್ಥಾನದ ಬೇಡಿಕೆಯು ದೇಶ ವಿಭಜನೆಯು ಅಂದರೆ ಭಾರತಕ್ಕೆ ಒಕ್ಕೂಟ ಸರಕಾರವು ಅಸಾಧ್ಯವೆಂಬ ಗಂಭೀರ ಸಮಸ್ಯೆಯನ್ನುಂಟು ಮಾಡಿತು.

ಈ ಹಿನ್ನಲೆಯಲ್ಲಿ ಬ್ರಿಟಿಷ್ ಸರಕಾರವು ಒಂದು ನಿರ್ಧಾರವನ್ನು ಮಾಡಿತು. ಭಾರತೀಯರಿಗೆ ಸ್ವಾತಂತ್ರ್ಯವನ್ನು ಕೊಡುವ ಒಂದು ನಿರ್ದಿಷ್ಟ ಸಮಯವನ್ನು ಸೂಚಿಸಿ ಅದರೊಳಗೆ ಅವರು ನಿಶ್ಚಿತ ಹಾಗೂ ಒಮ್ಮತದ ನಿರ್ಣಯಗಳಿಗೆ ಬರಬೇಕೆಂದು ನಿರ್ಧರಿಸಿದರು. ಈ ಹಿನ್ನಲೆಯಿಂದಲೇ ಕ್ಯಾಬಿನೆಟ್ ಮಿಶ್ಯನ್ ಭಾರತವನ್ನು ಸಂದರ್ಶಿಸಿತು. ಬ್ರಿಟಿಷ್ ಮಂತ್ರಿಮಂಡಲದ ಈ ಆಯೋಗವು ಭಾರತೀಯ ಪ್ರಶ್ನೆಯನ್ನು ವಿವಿಧ ದೃಷ್ಟಿಕೋನಗಳಿಂದ, ಘಟನಾತ್ಮಕ ತತ್ವಗಳ ನೆಲೆಯಿಂದ ಕೂಲಂಕುಷವಾಗಿ ಪರಿಶೀಲಿಸಿ ಭಾವೀ ಭಾರತದ ಸರಕಾರವು ಬಲವಾದ ಕೇಂದ್ರ ಸರಕಾರವನ್ನು ಪಡೆಯಬೇಕೆಂದೂ ಅಲ್ಪಸಂಖ್ಯಾತರಿಗೆ ರಕ್ಷಣೆ ದೊರೆಯುವಂತಹ ಒಕ್ಕೂಟವಾಗಬೇಕೆಂದೂ ಸೂಚಿಸಿತು. ಡಾ। ಆರ್. ಸಿ. ಮಜೂಂದಾರರು ಅದು ಅಖಂಡ ಭಾರತವನ್ನು ರಚಿಸುವ ಅವಕಾಶವಿದ್ದ ಬ್ರಿಟಿಷ್ ಸರಕಾರದ ಅಂತಿಮ ಕೊಡುಗೆಯಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ. (History of Freedom Movement in India R. C. Majumdar) ಈ ಯೋಜನೆಯು ಒಕ್ಕೂಟ ಸರಕಾರವು ಬಲಿಷ್ಟವಾದ ಕೇಂದ್ರ ಸರಕಾರವನ್ನೊಳಗೊಂಡಿರುವ ಆವಶ್ಯವನ್ನು ಅಲ್ಲಗಳೆಯದ ರೀತಿಯಲ್ಲಿ ಮನದಟ್ಟು ಮಾಡಿ ದೇಶ ವಿಭಜನೆಯ ಅನಾಹುತವನ್ನು ಅತ್ಯಂತ ಸಮರ್ಪಕವಾಗಿ ವಿವರಿಸಿತ್ತು. ದೇಶವಿಭಜನೆಯ ವಿರುದ್ಧವಾದ ಎಲ್ಲಾ ತರ್ಕಗಳನ್ನು ಈ ಯೋಜನೆಯು ಸ್ಪಷ್ಟಪಡಿಸಿತು. ಮುಸ್ಲಿಂಲೀಗ್ ಹಾಗೂ ಕಾಂಗ್ರೆಸ್ ಪಕ್ಷಗಳು ಈ ಯೋಜನೆಯನ್ನು ಒಪ್ಪಿಕೊಂಡವು. ಒಪ್ಪಿಕೊಂಡ ಬಳಿಕ ನೆಹರೂ ತನ್ನ ಭಾಷಣವೊಂದರಲ್ಲಿ 'ನಾವು ಯೋಜನೆಯನ್ನು ಒಪ್ಪಿಕೊಂಡರೂ ನಮಗೆ ಬೇಕಾಗುವ ಬದಲಾವಣೆಯನ್ನು ಮಾಡಬಹುದು' ಎಂದರು. ಕೂಡಲೇ ಜಿನ್ನಾರವರು ಕ್ಯಾಬಿನೆಟ್ ಮಿಶ್ಯನಿನ ಯೋಜನೆಗೆ ಕೊಟ್ಟ ತಮ್ಮ ಒಪ್ಪಿಗೆಯನ್ನು ಹಿಂತೆಗೆದುಕೊಂಡರು. ಕಾಂಗ್ರೆಸ್ಸಿನ ಅವರ ಮುಂದಾಳುಗಳನ್ನು ನಂಬುವುದು ಸಾಧ್ಯವಿಲ್ಲವೆಂದು ಘೋಷಿಸಿದರು. ಇದನ್ನೇ ನೆಹರೂರವರ ರಾಜಕೀಯ ಆತ್ಮಕಥೆಯನ್ನು ಬರೆದ ಮೈಕಲ್ ಬ್ರೆಚರ್‌ರವರು ನೆಹರೂ ಅವರ "ನಲ್ವತ್ತು ವರ್ಷಗಳ ಸಾರ್ವಜನಿಕ ಜೀವನದ ಮಹಾ ಅಪರಾಧ" ಎಂದು ಕರೆದಿದ್ದಾರೆ. (Nehru A Political Biography-Michael Brecher).

ಕ್ಯಾಬಿನೆಟ್ ಮಿಶ್ಯನಿನ ಕೊಡುಗೆಯು ಅಖಂಡ ಭಾರತವನ್ನುಳಿಸುವ ಅಂತಿಮ ಯೋಜನೆಯಾಗಿತ್ತು. ಅದನ್ನು ತ್ಯಜಿಸಿದ ಬಳಿಕ ಉಳಿದ ಮಾರ್ಗ ದೇಶವಿಭಜನೆ. ಮುಸ್ಲಿಂಲೀಗ್ ಇನ್ನಾವುದನ್ನೂ ಸ್ವೀಕರಿಸುವಂತಿರಲಿಲ್ಲ. ಆದುದರಿಂದ ದೇಶ ವಿಭಜನೆಯು ಅನಿವಾರ್ಯವಾಯಿತು. 'ಕ್ಯಾಬಿನೆಟ್ ಮಿಶ್ಯನಿನ ಯೋಜನೆಯು ಎಲ್ಲಾ ರಾಜಕೀಯ ಪಕ್ಷಗಳಿಂದ ಬೇರೆ ಬೇರೆ ರೀತಿಯಲ್ಲಿ ಒಪ್ಪಿಗೆ ಪಡೆದಿತ್ತು. ಆದರೆ ಅದನ್ನು ಕಾರ್ಯರೂಪಕ್ಕೆ ತರುವುದು ಸುಲಭವಾಗಿರಲಿಲ್ಲ. ಬಲವಾದ ಇಚ್ಛೆ ಹಾಗೂ ದೀರ್ಘವಾದ ಸಹಕಾರದಿಂದ ಕಾರ್ಯರೂಪಕ್ಕೆ ತರಬಹುದಾದ ಯೋಜನೆಗಳಲ್ಲಿ ಅದೊಂದಾಗಿತ್ತು. ಆದರೆ ಮುಸ್ಲಿಂಲೀಗ್ ದೇಶದ ವಿಭಜನೆಯ ಹೊರತು ಇನ್ನಾವ ದಾರಿಯನ್ನು ಅನುಸರಿಸುವುದಿಲ್ಲವೆಂದು ದೃಢನಿರ್ಧಾರ ಮಾಡಿತ್ತು. ಇನ್ನಾವ ಶಾಂತಿಯುತ ಪರಿಹಾರವನ್ನು ಮುಸ್ಲಿಂಲೀಗ್ ಸ್ವೀಕರಿಸಲು ಸಿದ್ಧವಿರದ ಕಾರಣ ಭಾರತವನ್ನು ವಿಭಜಿಸಬೇಕಾಯಿತು." ಎಂದು ವಿ. ಪಿ. ಮೆನನ್‌ರವರ An outline of Indian Constitutional History ಪುಸ್ತಕದ ಮುನ್ನುಡಿಯಲ್ಲಿ ಲಾರ್ಡ್ ಮೌಂಟ್‌ಬೇಟನ್ ಬರೆದಿರುವರು. ಲಾರ್ಡ್ ಮೌಂಟ್‌ಬೇಟನ್‌ರವರು ಅಧಿಕಾರ ಸ್ವೀಕಾರ ಮಾಡಿದಾಗ ದೇಶ ವಿಭಜನೆಯ ಕುರಿತು ಬ್ರಿಟಿಷ್ ಸರಕಾರ ನಿರ್ಧಾರ ಮಾಡಿಲ್ಲವೆಂಬುದು ಸ್ಪಷ್ಟ. ಭಾರತವನ್ನು ಅಖಂಡವಾಗಿ ಉಳಿಸುವುದೇ ಯುಕ್ತ ಹಾಗೂ ಸಮಸ್ಯೆಗಳಿಗೆ ಸಮರ್ಪಕವಾದ ಉತ್ತರವೆಂದು ಲಾರ್ಡ್ ಮೌಂಟ್‌ಬೇಟನ್ ಅಭಿಪ್ರಾಯಪಟ್ಟಿದ್ದರು. ತಾನೆಂದೂ ಅಭಿಪ್ರಾಯವನ್ನು ಬದಲಿಸಿಲ್ಲವೆಂದೂ ಬರೆದಿದ್ದಾರೆ.

ಸಮಗ್ರ ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ವರ್ಷಗಳಿಂದ ತ್ಯಾಗ ಮಾಡಿದ ಮುಂದಾಳುಗಳು ದೇಶವಿಭಜನೆ– ಅದರ ದುರಂತವನ್ನೇಕೆ ಒಪ್ಪಿಕೊಂಡರು? ಕಲ್ಕತ್ತಾದ ದುರಂತ, ಅನಂತರವಾಗಿ ಭಾರತದಲ್ಲಿ ನಡೆದ ಅನೇಕ ಜಾತೀಯ ಕಲಹಗಳು – ಸಹಸ್ರಾರು ಮಂದಿಯ ಹತ್ಯಾಕಾಂಡ, ಹೃದಯವಿದ್ರಾವಕ ಘಟನೆಗಳು ದೇಶದ ನಿಜವಾದ ಮುಂದಾಳುಗಳ ಹಾಗೂ ದೇಶಭಕ್ತರ ಹೃದಯಗಳನ್ನು ತತ್ತರಿಸಿತು. "ಕಲ್ಕತ್ತಾದಲ್ಲಿ ೧೯೪೬ರ ಆಗಸ್ಟಿನಲ್ಲಿ ಮುಸ್ಲಿಂಲೀಗಿನ ಪ್ರೇರಣೆಯಿಂದ ನಡೆದ ಗಲಭೆ ಜಾತೀಯ ಗಲಭೆಗಳಲ್ಲಿ ಅತ್ಯಂತ ಘೋರವಾದುದು. ಎಪ್ಪತ್ತೆರಡು ಘಂಟೆ ಕಾಲ ಕಲ್ಕತ್ತವನ್ನು ಈ ದುರಂತವು ವಧಾಲಯವನ್ನಾಗಿ ಪರಿವರ್ತಿಸಿತ್ತು. ಅದು ಭಾರತದ ರೂಪವನ್ನು, ಚರಿತ್ರೆಯ ನಿಲುವನ್ನೇ ಬದಲು ಮಾಡಿತು.

ಕಲ್ಕತ್ತಾದ ಬೀದಿಗಳು ಚರಂಡಿಗಳು ಶವಗಳು ಕೊಳೆತು ದುರ್ಗಂಧವಿದ್ದಿತು. ಹದ್ದುಗಳು ಶವಗಳನ್ನು ಕುಕ್ಕುತ್ತಿದ್ದಂತೆಯೇ ಭಾರತದ ಐಕ್ಯವನ್ನೂ ಕುಕ್ಕಿದುವು. ಅದು ಭಾರತದ ಇತಿಹಾಸದಲ್ಲಿಯೇ ಅತ್ಯಂತ ಹೇಯವಾದ, ಅತ್ಯಂತ ರಕ್ತಮಯವಾದ ಜಾತೀಯ ಗಲಭೆಯಾಗಿತ್ತು." ಎಂದು ಮೋಸ್ಲೆ ಬರೆದಿರುವ ಮಾತುಗಳು ಪರಿಸ್ಥಿತಿಯ ಭೀಕರತೆಯ ಒಂದು ಚಿತ್ರವಾಗಿದೆ.

ಮೋಸ್ಲೆಯವರ ಅಭಿಪ್ರಾಯದಲ್ಲಿ ೬,೦೦,೦೦೦ ಜನರು ಈ ಜಾತೀಯ ಗಲಭೆಯಲ್ಲಿ ಪ್ರಾಣ ಕಳೆದುಕೊಂಡರು. ಇದರ ಪ್ರತಿಕ್ರಿಯೆ ಬಿಹಾರಕ್ಕೆ ಹರಡಿತು. ಈ ಹಿಂದೂ ಮುಸ್ಲಿಂ ಗಲಭೆ ದೇಶದಲ್ಲಿ ಅಂತಃಕಲಹವನ್ನೇ ಉಂಟು ಮಾಡುವ ಭಯವನ್ನು ತಂದಿತು. ೧೯೪೭ರಲ್ಲಿ ಭಾರತದಾದ್ಯಂತ ನಡೆಯುತ್ತಿದ್ದ ಜಾತೀಯ ಗಲಭೆಗಳು ದೇಶ ವಿಭಜನೆಯ ಕಾರ್ಯವನ್ನು ನೆರವೇರಿಸುತ್ತಿದ್ದುವು. ದೇಶವನ್ನು ಬ್ರಿಟಿಷರು ಬಿಟ್ಟು ಹೋಗುವುದು ಖಂಡಿತವೆಂದು ಮುಂದಾಳುಗಳು ತಿಳಿದಿದ್ದರು. ಆದುದರಿಂದ ಅದರ ಅತ್ಯಂತ ಹೆಚ್ಚಿನ ಲಾಭ ಪಡೆಯುವುದರಲ್ಲಿ ಅವರು ನಿರತರಾಗಿದ್ದರು. ಅಧಿಕಾರದ ಆಶೆ – ಅವರ ತಾಂಡವ ನೃತ್ಯದಲ್ಲಿ ಮಗ್ನವಾಗಿತ್ತು. ದೇಶ, ಈ ವರ್ಷದಲ್ಲಿ ಭಾರತವೇ ನಿರ್ದಯಿಯಾಗಿತ್ತು. ಜನರ ಹೃದಯದಲ್ಲಿ ದಯೆಯಿರಲಿಲ್ಲ. ಕರುಣೆಯ ಕೃಪಾದೃಷ್ಟಿಯಿರಲಿಲ್ಲ. ಮುಂದಾಳುಗಳ ಹೃದಯದಲ್ಲಂತೂ—ಗಾಂಧಿಯಲ್ಲಿ ಕೂಡಾ—ದಯೆಯಿರಲಿಲ್ಲವೆಂದು ಲಿಯೋನಾರ್ಡೊ ಮೋಸ್ಲೆ ಆರೋಪಿಸಿರುವರು. (The hart Days of British Raj Leonardo Mosley) ಅಪನಂಬಿಕೆ, ಸಂಶಯ, ನಿರ್ದಯ ನೀತಿ ಮುಖ್ಯವಾಗಿ ಹೊಂದಾಣಿಕೆಯ ರಾಜಕೀಯವನ್ನು ಕಟ್ಟಿಸಿಟ್ಟಿತು. ರಕ್ಷಿಸುವ ನೀತಿ ಭಾರತದ ದುರಂತಕ್ಕೆ ನಾಂದಿಯಾಯಿತೆಂದು ಮೋಸ್ಲೆ ಬರೆದಿರುವರು. ಸಮಸ್ಯೆಯ ಪರಿಹಾರಕ್ಕೆ ಅತ್ಯಂತ ದೊಡ್ಡದಾಗಿ ನಿಂತಿದ್ದ ತೊಡಕು ಅಪನಂಬಿಕೆಯಾಗಿತ್ತು. "ಜಿನ್ನಾ ಮತ್ತು ಮುಸ್ಲಿಂಲೀಗ್ ಕಾಂಗ್ರೆಸ್ಸಿನ ಬಗ್ಗೆ ಅಪನಂಬಿಕೆಯುಳ್ಳವರಾಗಿದ್ದುವು. ಕಾಂಗ್ರೆಸ್ಸಿಗೆ ವೈಸರಾಯನ ಬಗ್ಗೆ ಅಪನಂಬಿಕೆ, ವೈಸರಾಯನಿಗೆ ಬ್ರಿಟನಿನ ಸರಕಾರ

(ಮೂವತ್ತೈದನೇ ಪುಟ ನೋಡಿರಿ)

ಶ್ರೀ ಪೈಕಾಡಿ ವೆಂಕಟಕೃಷ್ಣರಾಯ.

ಏನು ಸ್ವಾತಂತ್ರ್ಯ?

ಸ್ವಾತಂತ್ರ್ಯ ನಮಗೆ ದೊರಕಿ ಹಲವು ವರ್ಷಗಳು ಕಳೆದವು; ಈ ನಡುವೆ ನಮ್ಮ ಮೂರು ಯೋಜನೆಗಳು ಕೊನೆಗೊಂಡುವು. ಅಭಿವೃದ್ಧಿ ಪಥದತ್ತ ನಾವು ಸಾಗುತ್ತಿದ್ದೇವೆ; ಆದರೆ, ಪಥದಲ್ಲಿ ಏನು ಸಾಧನೆ ಮಾಡಿದ್ದೇವೆಯೋ? ಮಾಡಿದ್ದರೂ ನಮ್ಮ ನಡಿಗೆ ಹೇಗಿದೆ? ಈ ಮೊದಲಾದ ಪ್ರಶ್ನೆಗಳನ್ನು ಸ್ವತಂತ್ರ ಭಾರತೀಯ ತುಸು ವಿವೇಚಿಸಬೇಕು.

ಸ್ವಾತಂತ್ರ್ಯ— ಇದು ಪ್ರತಿಯೊಂದು ಪ್ರಜೆಯ ಜನ್ಮಸಿದ್ಧ ಹಕ್ಕು. ನೀರಿನಲ್ಲಿ ಕದಡಿದ ಸಕ್ಕರೆ ನೀರಿನ ಪ್ರತಿಯೊಂದು ಕಣವನ್ನು ಸೇರಿ ಒಟ್ಟು ನೀರಿನ ರುಚಿಯಲ್ಲಿ ಅದರ ಗುಣ ಕಾಣುವಂತೆ ಸ್ವಾತಂತ್ರ್ಯದ ಅನುಭವವೂ ಪ್ರತಿಯೊರ್ವ ಪ್ರಜೆಯಲ್ಲಿಯೂ ಉಂಟಾಗಿ—ರಾಷ್ಟ್ರ ಸಮೂಜದ ಜೀವನದಲ್ಲೇ ಈ ಸ್ವಾತಂತ್ರ್ಯದ ಅನುಭವ ಎದ್ದು ಕಾಣಬೇಕು.

ಸ್ವತಂತ್ರವಾದ ಹದಿನೆಂಟನೇ ವರ್ಷದಲ್ಲಿ ಇಂದು ನಮ್ಮಲ್ಲಿ ಈ ಅನುಭವ ಹೇಗೆ ಕಾಣುತ್ತಿದೆ!

ಈ ಸ್ವಾತಂತ್ರ್ಯಕ್ಕಿಂತ ಬ್ರಿಟಿಷರೇ ಆಗಬಹುದಿತ್ತು ಎಂಬವರೂ ನಮ್ಮಲ್ಲಿ ಇಲ್ಲವೆ? ಸ್ವಾತಂತ್ರ್ಯ ಬಲಪಿದ್ದವರ ಸೊತ್ತಾಯಿತು ಎಂಬುದು ಕೆಲವರ ದೂರು. ಸ್ವಾತಂತ್ರ್ಯ—ಇದೊಂದು ವ್ಯಾಪಾರ— ಬಂಡವಾಳ ಹಾಕಿದವರಿಗೆ ಅದರ ಲಾಭ—ಇದು ಇನ್ನಿತರರ ಕುಹಕದ ನುಡಿ.

ಒಟ್ಟಿನಿಂದ ನಮ್ಮ ಸ್ವಾತಂತ್ರ್ಯದ ಬಾಳು ಸುಖವಾಗಿಲ್ಲ. ಹಾಗಾದರೆ ಸ್ವತಂತ್ರ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯ ಕನಿಷ್ಠ ಬೇಡಿಕೆ ಏನು? ಕೇವಲ ಮತದಾನ ಮಾಡಿದರಾಯಿತೆ? ಶಾಸನ ಸಭಾ ಸದಸ್ಯರುಗಳನ್ನು ಮಂತ್ರಿಗಳನ್ನು ಆರಿಸುವುದು ಮಾತ್ರ ಈತನ ಕರ್ತವ್ಯವೆ? ಆರಿಸಿದ ಪ್ರತಿನಿಧಿಗಳಿಂದ ಈತ ಏನ ನಿರೀಕ್ಷಿಸಬೇಕು?

ಪಂಚಾಯತ್ ರಾಜ್ಯ—ಸ್ಥಳೀಯ ಸಂಸ್ಥೆಗಳು — ಶಾಸನ ಸಭೆ — ಮಂತ್ರಿ ಮಂಡಳ—ಯೋಜನಾ ಆಯೋಗ— ಇವೆಲ್ಲದರ ವ್ಯವಸ್ಥೆ ಒಟ್ಟಿನಿಂದ ಏನು ತರಬೇಕು? ಅದನ್ನೆಲ್ಲ ನಮ್ಮ ಈ ಹದಿನೇಳು ವರ್ಷದ ರಾಷ್ಟ್ರ ಜೀವನ, ರಾಜಕೀಯ ಜೀವನ, ನಮಗೆ ತಂದಿತೆ? ಎಷ್ಟು ತಂದಿತು—ಇನ್ನೆಷ್ಟು ಬರಬೇಕು—ಬಂದದ್ದು ಕಡಿಮೆಯಾದರೆ, ಲೋಪ ಏನು? ಈ ವಿವೇಚನೆ, ಈ ಚರ್ಚೆ, ಇಂದು ಆಗ ಬೇಕಾಗಿದೆ.

ಜಗತ್ತಿನ ಭಾರೀ ರಾಷ್ಟ್ರಗಳಿಗೆ ಕಡಿಮೆ ಇಲ್ಲದ ಆಡಳಿತ ವ್ಯವಸ್ಥೆ ಯೋಜನೆ—ಎಲ್ಲ ನಾವೂ ಮಾಡುತ್ತಿದ್ದೇವೆ. ಅಲ್ಲಿನ ತಂತ್ರಗಳು ನಮ್ಮಲ್ಲಿ ಬಳಕೆಯಲ್ಲಿವೆ ನಮ್ಮವರೂ ಅಲ್ಲಿಗೆ ಹೋಗಿ ಅಧ್ಯಯನ ಮಾಡುತ್ತಾರೆ—ಅಲ್ಲಿನಂತೆಯೇ ಕಾರ್ಖಾನೆ, ಶಾಲೆ, ಕಾಲೇಜು, ಇನ್ನು ವಿಧಾನ ಸಭೆ, ಮಂತ್ರಿಗಳು, ಗವರ್ನರ್, ರಾಯಭಾರಿಗಳು, ಸಭೆ ಸಮ್ಮೇಳನಗಳು ಇನ್ನು ಏನೇನೋ-ಆದರೆ ಆ ದೇಶಗಳು ಇಷ್ಟತ್ತು ವರ್ಷಗಳಲ್ಲಿ ಸಾಧಿಸಿದುದನ್ನು ನಾವು ಮಾತ್ರ ಸಾಧಿಸಿಲ್ಲ—ಏಕೆ?

ಜಗತ್ತಿನ ಯಾವುದ್ಯಾವುದೋ ರಾಷ್ಟ್ರಗಳ ಅನುಕರಣೆ ನಾವು ಇಲ್ಲಿ ಮಾಡುತ್ತಿದ್ದೇವೆ. ಅವುಗಳಂತೆ ಬಹು ಬೇಗ ಮುಂದು ಬರಬೇಕೆಂಬ ಮಹತ್ವಾಕಾಂಕ್ಷೆ ನಮ್ಮದು ನಿಜ. ಆದರೆ ಅಲ್ಲಿನ ಶಿಸ್ತು, ಅವರ ಕರ್ತವ್ಯ ನಿಷ್ಠೆ, ಪ್ರಜೋತ್ಸಾಹ, ಅಲ್ಲಿನ ಧುರೀಣರ ಚಾಕಚಕ್ಯತೆ —ಅವೆಲ್ಲ ನಮ್ಮಲ್ಲಿವೆಯೆ?

ಅಮೇರಿಕೆಯಂತಹ ದೇಶದಲ್ಲಿನ ಒಂದು ನಗರದ ಮುನಿಸಿಪಲ್ ಆದಾಯವನ್ನೂ ದೇಶದ ಒಟ್ಟು ಆದಾಯಕ್ಕೆ ಹೋಲದಿರುವಾಗ ಆ ರಾಷ್ಟ್ರಗಳ ಜೀವನವನ್ನು ನಾವು ನೂರಕ್ಕೆ ನೂರು ಅನುಕರಿಸಿದರಾದೀತೆ?

ನಮ್ಮದು ಬಡರಾಷ್ಟ್ರ—ನಾವೂ ಹೇಳಿದ್ದೇವೆ. ಅದ್ದರಿಂದಲೇ ಭಿಕ್ಷಾಪಾತ್ರೆ ಹಿಡಿದು ಹೊರದೇಶಗಳಲ್ಲಿ ತಿರುಗುತ್ತೇವೆ. ಆದರೂ ನಮ್ಮನ್ನು ಹಿಂದುಳಿದ ರಾಷ್ಟ್ರಗಳ ಪಂಕ್ತಿಯಲ್ಲಿಟ್ಟಿದ್ದಾರೆ.

ಈಗ ಬಡರಾಷ್ಟ್ರದ ಒಳ ವ್ಯವಸ್ಥೆ— ಏರ್ಪಾಟು ಕೂಡ ವಿಮರ್ಶಿಸೋಣ.

ನಮ್ಮಲ್ಲಿ ರಾಜ್ಯಗಳಲ್ಲಿ ಎರಡೆರಡು ಶಾಸನ ಸಭೆಗಳು. ಈ ತನಕ ಮಧ್ಯ ಪ್ರದೇಶದಲ್ಲಿ ಒಂದೇ ಶಾಸನ ಸಭೆ ಇತ್ತು—ಇತ್ತೀಚೆ ಕೆಲವು ಅತೃಪ್ತ ರಾಜಕಾರಣಿಗಳನ್ನು ತೃಪ್ತಿ ಪಡಿಸಲು ಅಲ್ಲಿನ ಮುಖ್ಯಮಂತ್ರಿಗಳು ಮೇಲ್ಮನೆಯೊಂದನ್ನು ತೆರೆಯುವ ಹಂಚಿಕೆ ಹಾಕಿದ್ದಾರಂತೆ.

ನಮ್ಮ ಕಿಸೆಗೆ ಅನುಗುಣವಾಗುವಂತೆ ನಮಗೆ ರಾಜ್ಯಗಳಲ್ಲಿ ಒಂದೇ ಶಾಸನ ಸಭೆ ಸಾಲದೆ? ಮೇಲ್ಮನೆಯ ಶ್ರೀಮಂತಿಕೆ ಬೇಕೆ?

Phone: 19

1965 ರಜತೋತ್ಸವ ವರುಷ 1965

- ನೆಲ್ಲಿ ಪ್ರಕಾಶ್ -

ಮನೋಹರ ಕೆಫೆ

ಶಿವಮೊಗ್ಗಾ.

25 ವರ್ಷಗಳ ಹಿಂದೆ

ಮನೋಹರ ಕೆಫೆಯನ್ನು ಸ್ಥಾಪಿಸಿ, ಊಟ ಉಪಾಹಾರ ಮತ್ತು ವಸತಿ ಗೃಹಗಳ ಸೌಕರ್ಯವನ್ನು ಉಚ್ಚಮಟ್ಟದಲ್ಲಿ ನೆರವೇರಿಸಿಕೊಂಡು ಬರಲು ಸಹಕರಿಸಿ ಪ್ರೋತ್ಸಾಹಿಸಿದ ನಮ್ಮ ಎಲ್ಲಾ ಗ್ರಾಹಕರನ್ನೂ ಈ ಶುಭಸಂದರ್ಭದಲ್ಲಿ ಸ್ಮರಿಸುತ್ತೇವೆ.

ಅಲ್ಲದೆ—

ಇನ್ನೂ ಹೆಚ್ಚಿನ ಸೇವೆ ಸೌಲಭ್ಯಗಳನ್ನೊದಗಿಸಲು

ನೂತನವಾಗಿ ನಿರ್ಮಿಸಿದ "ಏಯರ್ ಕಂಡೀಶನ್ಡ್" ರೂಮುಗಳು— ಬಾತ್ ರೂಮ್ ಒಳಗಿದೆ— ನಯನ ಮನೋಹರ ರೂಫ್ ಗಾರ್ಡನ್ಸ್, ಶುಕ್ರವಾರ ಸ್ಪೆಷಲ್ ಊಟಗಳ ಸೌಕರ್ಯ ಇತ್ಯಾದಿ ಸದಾ ಸಿದ್ಧವಿವೆ.

NELLI PRAKASH

MANOHAR CAFE

RESTAURANT, BOARDING & LODGING

NEHRU ROAD : SHIMOGA.

PROP: P. K. JANARDHANA NELLI.

ಪ್ರತಿಯೊಂದು ರಾಜ್ಯದಲ್ಲಿಯೂ ಮಂತ್ರಿಗಳ ಸಂಖ್ಯೆ ಎಷ್ಟಿರಬೇಕು? —ಇಷ್ಟು ಪ್ರಜೆಗೆ ಇಷ್ಟು ಪ್ರತಿನಿಧಿ.—ಪಾರ್ಲಿಮೆಂಟಿನಲ್ಲಿ ಮತ್ತು ರಾಜ್ಯದ ಶಾಸನ ಸಭೆಯಲ್ಲಿ ಎಂದು ಚುನಾವಣಾ ಕಮಿಶನ್ ಗೊತ್ತು ಮಾಡಿದೆ. ಇಷ್ಟು ಶಾಸನ ಸಭಾ ಸದಸ್ಯರಿಗೆ ಇಷ್ಟು ಮಂತ್ರಿಗಳು ಎಂದು ಗೊತ್ತು ಮಾಡಬಾರದೆ?—ಆಗಾಗ್ಗೆ ಮಂತ್ರಿ ಮಂಡಲದ ಬದಲಾವಣೆ ವಿಸ್ತರಣ— ಇವೆಲ್ಲ ಏಕೆ? ಇವುಗಳೆಲ್ಲ ಪ್ರಜೋತ್ಪತ್ತಿಗೆಯಿಂದ ನಡೆವ ಸಂಗತಿಗಳೆ? ಒಮ್ಮೆ ಚುನಾಯಿತರಾದ ಪ್ರತಿನಿಧಿಗಳು ಮಧ್ಯೆ ಏಕೆ ರಾಜಿನಾಮೆ ಇತ್ತು ತಮಗೆ ಮತದಾನ ಮಾಡಿದ ಪ್ರಜೆಗೂ ಕ್ಷೇತ್ರಕ್ಕೂ ಅವಮಾನ ಮಾಡಬೇಕು? ಉಪಚುನಾವಣೆಯ ಹೊರೆಯನ್ನು ಹೊರಬೇಕು?

ಚುನಾವಣಾ ಪೂರ್ವದಲ್ಲಿ ಮಂತ್ರಿ ಮಂಡಲ ರಾಜಿನಾಮೆ ಇತ್ತು ಚುನಾವಣಾ ಕಾಲಕ್ಕೆ ತಾತ್ಕಾಲಿಕ ಸರಕಾರದ ರಚನೆ ಏಕಾಗಬಾರದು?

ಶಾಸನ ಸಭಾ ಸದಸ್ಯರು, ಸೇವೆಗಾಗಿ ಟೊಂಕ ಕಟ್ಟಿದವರಲ್ಲವೆ?— ಅವರಿಗೆ ದಿನಭತ್ಯ, ಪ್ರಯಾಣ ಭತ್ಯ—ವಸತಿ ಸೌಕರ್ಯ—ಎಲ್ಲ ವ್ಯವಸ್ಥೆ ಇರುವಾಗ ಇವರಿಗೆ ಪೂರ್ತಿ ಹೊತ್ತಿನ ನೌಕರರಂತೆ ಸಂಬಳವೇಕೆ? ಸಂಬಳವೇ ಸಲ್ಲಬೇಕಾದರೆ ಇತರ ಭತ್ಯಗಳನ್ನು ರದ್ದು ಮಾಡಬಹುದಲ್ಲ.

ಹಾಗಾದರೆ ತಿಂಗಳ ಸಂಬಳ ಪಡೆವ ಈ ಸದಸ್ಯರ ಹೊಣೆಗಾರಿಕೆ ಏನು. ಸರಕಾರಿ ನೌಕರರಿಗೆ ಕೆಲವು ಶಿಸ್ತು, ನಿಯಮಗಳಿವೆ. ಈ ಶಾಸನ ಸಭಾ ಸದಸ್ಯರಿಗೆ?

ನಮ್ಮ ಸ್ಪೀಕರರುಗಳಿಂದ ಕೋರಂನ ಕೊರತೆಯ ದೂರು ಯಾವಾಗಲೂ ಕೇಳುತ್ತಿದೆಯಲ್ಲ.— ಸಭೆಯಿಂದ ಗೈರು ಹಾಜರಾದ ಸದಸ್ಯರುಗಳಿಗೆ ಏನು ದಂಡ?

ಪ್ರತಿಯೊಂದು ರಾಜ್ಯಕ್ಕೂ ಓರ್ವ ಗವರ್ನರ್ ಬೇಕು? ಶ್ರೇಷ್ಠ ನ್ಯಾಯಾಧೀಶರು ಈ ಕೆಲಸ ನಿರ್ವಹಿಸಲಾರರೆ?

ಪ್ರಮುಖ ಹುದ್ದೆಗಳಿಗೆ, ಸಮಿತಿಗಳಿಗೆ, (ತಾಂತ್ರಿಕ ಸಮಿತಿಗಳಿಗೂ) ರಾಜಕಾರಣಿಗಳೇ ನೇಮಕವಾಗಬೇಕೆ?

ಒಟ್ಟಿನಿಂದ ಪ್ರಜಾಪ್ರಭುತ್ವದಲ್ಲಿ ಪ್ರಧಾನ ಯಾವುದು?— ವ್ಯಕ್ತಿ ನಿಷ್ಠೆಯೆ?. ರಾಷ್ಟ್ರ ನಿಷ್ಠೆಯೆ?. ನಮ್ಮ ಪ್ರಜಾಪ್ರಭುತ್ವಕ್ಕೊಂದು ಆದರ್ಶ ಬೇಡವೆ? ಯಾವುದು?

ನಮ್ಮಲ್ಲಿ ಮೂರು ಪಂಚವಾರ್ಷಿಕ ಯೋಜನೆ ಅವಧಿ ಕಳೆಯಿತು. ನಾವು ಗುರಿ ಮುಟ್ಟಿವೆವೆ? ನಾವು ಹೊರರಾಷ್ಟ್ರದಿಂದ ತಂದ ಸಾಲ, ಸಹಾಯ, ವಿನಿಮಯ ಇವೆಲ್ಲದರ ಪ್ರತಿಫಲ ನಮಗೆ ಎಷ್ಟು ದೊರೆಯಿತು?

ಆಹಾರ—ಉದ್ಯೋಗ— ಈ ಸಮಸ್ಯೆ ನಾವು ಎಷ್ಟು ದೂರ ಸಾಗಿದವು? ಅಧಿಕ ಉತ್ಪಾದನೆ ಏನೋ ನಮ್ಮ ಮಂತ್ರವಾಗಿದೆ—ಆದರೆ ಅದೂ ಯಾವ ಮಾರ್ಗ ಹಿಡಿದಿದೆ ಕೇಂದ್ರೀಕೃತವೆ? ವಿಕೇಂದ್ರೀಕೃತವೇ ಭಾರೀ ನೀರಾವರೀ ಯೋಜನೆಗಳು ನಮ್ಮ ಆಹಾರ ಸಮಸ್ಯೆ ಬಗೆಹರಿಸಲಿಲ್ಲ. ಬೃಹತ್ ಕೈಗಾರಿಕೆಗಳಿಂ

(ಮೂವತ್ತಾರನೇ ಪುಟ ನೋಡಿರಿ)

ಶ್ರೀ ಸುಬೋಧ ಎಂ. ರಾಮ ರಾವ್.

ಗಾಂಧಿ - ನೆಹರೂ ಶಕ ‡

೨೦ನೆ ಶತಮಾನದ ಮಹಾಪುರುಷರಲ್ಲಿ ಗಾಂಧಿ— ನೆಹರೂ ಇಬ್ಬರು. ಭಾರತೀಯ ಇತಿಹಾಸ ಲೇಖಕರು ಈ ಮಹನೀಯದ್ವಯರನ್ನು ಶಕಪುರುಷರಾಗಿ ಗಣಿಸಬಹುದು. ವಿಭಿನ್ನ ಪ್ರಕೃತಿಯ ಇಬ್ಬರು ಪುರುಷರು ಏಕಲಕ್ಷ್ಯವನ್ನು ಒಂದಾಗಿ ಸಾಧಿಸಿದ ಘಟನೆಯೂ ಅವರಿಬ್ಬರ ಸಮಾಗಮದಂತೆ ಅತ್ಯಪೂರ್ವ.

ಭಾರತ ರಾಜಧಾನಿ ನವದೆಹಲಿ ನಗರವನ್ನು ಸಂದರ್ಶಿಸಿದವರು ನೋಡಲೇಬೇಕಾದ ಎರಡು ಅತಿಮುಖ್ಯ ದರ್ಶನೀಯ ಸ್ಥಳಗಳಿವೆ. ಒಂದು ೧೯೪೮ನೆಯ ಜನವರಿ ೩೧ರಂದು ನಿರ್ಮಿತವಾದ ಮಹಾತ್ಮಾ ಗಾಂಧಿಯವರ ಸಮಾಧಿ. ಎರಡನೆಯದು ೧೯೬೪ನೆಯ ಮೇ ೨೮ರಂದು ನಿರ್ಮಿತವಾದ ಪಂಡಿತ ಜವಾಹರಲಾಲ ನೆಹರೂ ಅವರ ಸಮಾಧಿ. ಎರಡೂ ಪವಿತ್ರ ಯಮುನಾ ನದಿಯ ದಂಡೆಯ ಮೇಲೆ ನಿರ್ಮಿತವಾಗಿವೆ. ಗಾಂಧಿಯವರು ನಿಧನರಾದಾಗ ಆ ಹಿಂದೆ ಎರಡು ದೆಹಲೀ ನಗರದಲ್ಲಿ ನೆರೆದಿರದಷ್ಟು ಜನಸಂಖ್ಯೆ ನೆರೆದು, ರಾಷ್ಟ್ರಪಿತನ ಮೃತ ಕಳೇಬರದ ದಹನ ಕಾಲಕ್ಕೆ ತಮ್ಮ ಗದ್ಗದ ರೋದನ ಮತ್ತು ಕಣ್ಣೀರುಗಳಿಂದ ಶೋಕ ಸಂತಾಪಗಳನ್ನು ವ್ಯಕ್ತಪಡಿಸಿದರೆಂದು ಹೇಳಲಾಗಿದೆ. ಆದರೆ ಪಂ. ನೆಹರೂ ಅವರು ನಿಧನವಾದಂದು, ಅವರ ದಹನ ಕಾಲಕ್ಕೆ ದೆಹಲಿಯಲ್ಲಿ ಸೇರಿದ್ದ ಜನಸಂಖ್ಯೆ ರಾಷ್ಟ್ರಪಿತನ ದಹನ ಕಾಲದಲ್ಲಿ ನೆರೆದಿದ್ದುದಕ್ಕಿಂತ ನಾಲ್ಕು ಪಾಲಷ್ಟು ಹೆಚ್ಚಿದ್ದಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ. ಈ ಮಹನೀಯರ ಅಗಲುವಿಕೆಯ ವಿಷಯದಲ್ಲಿ ಇಷ್ಟು ಅಗಾಧ ಅಭಿಮಾನ-ಸಹಾನುಭೂತಿಯನ್ನು ಜನತೆ ಪ್ರದರ್ಶಿಸಲು, ಅವರು ಈ ರಾಷ್ಟ್ರಕ್ಕೆ ಸಲ್ಲಿಸಿರುವ ನಿಸ್ವಾರ್ಥ-ಅನುಪಮ ಸೇವೆಯೇ ಕಾರಣವೆಂದರೆ, ಅದು ಅತಿಶಯೋಕ್ತಿಯಲ್ಲ.

ಮ. ಗಾಂಧಿ ಮತ್ತು ಪಂ ನೆಹರೂ ಇವರ ಪಾಂಚ ಭೌತಿಕ ದೇಹಗಳು ಯಮುನಾನದಿಯ ದಂಡೆಯಲ್ಲಿ ಸಮಾಧಿಸ್ಥವಾಗಿರುವ ಸ್ಥಳಗಳು ಕ್ರಮವಾಗಿ ರಾಜಘಾಟ್ ಮತ್ತು ಶಾಂತಿಘಾಟ್ ಎಂದು ಕರೆಯಲ್ಪಟ್ಟಿವೆ. ಅವು ಒಂದಕ್ಕೊಂದು ಸುಮಾರು ಮುನ್ನೂರು ಗಜಗಳ ಅಂತರದಲ್ಲಿವೆ. ಅವು ಇನ್ನೂ ಸ್ವಲ್ಪ ಸಮೀಪದಲ್ಲಿದ್ದು ಅವುಗಳ ಹೆಸರುಗಳೂ ಸ್ವಲ್ಪ ವ್ಯತ್ಯಸ್ತವಾಗಿದ್ದರೆ, ಉತ್ತಮವಾಗಿತ್ತೆಂದು ತೋರುತ್ತದೆ. ಮ. ಗಾಂಧಿಯವರ ಸಮಾಧಿಯು ಶಾಂತಿಘಾಟ್ ಎಂದೂ, ನೆಹರೂ ಅವರ ಸಮಾಧಿಯು ರಾಜಘಾಟ್ ಎಂದೂ ಹೆಸರಿಸಲ್ಪಟ್ಟಿದ್ದರೆ ಅರ್ಥವತ್ತಾಗಿರುತ್ತಿತ್ತು. ಏಕೆಂದರೆ ಮ. ಗಾಂಧಿಯವರು ಒಬ್ಬ ಮಹಾ ಸಾಧುಪುರುಷನಂತೆ ಜೀವನ ನಡೆಯಿಸಿ ಅಧಿಕಾರವಿಲ್ಲದಿದ್ದರೂ ಭಾರತದ ಜನಮನವನ್ನಾಳಿ, ರಾಜದಂಡವಿಲ್ಲದಿದ್ದರೂ ಶಾಂತರೀತಿಯ ಶಾಸನದಿಂದ ಒಂದೆರಡು ದಶಕಗಳ ಕಾಲ ಭಾರತೀಯರ ನೇತ್ರವೆನ್ನಿಸಿದ್ದರು. 'ರಾಜ' ಎಂಬ ಪದವು ರಾಜಕೀಯದಿಂದ ಜೀವನವನ್ನು ಸಾಗಿಸಿ, ರಾಜದಂಡವನ್ನು ಧರಿಸಿ ರಾಜ್ಯವನ್ನಾಳಿದ ವ್ಯಕ್ತಿಗೇ ಬಹುಮಟ್ಟಿಗೆ ಒಪ್ಪುತಕ್ಕುದಾಗಿದೆ. ಭಾವೀ ಚರಿತ್ರಕಾರರು ಈ ಇಬ್ಬರು ಮಹಾಪುರುಷರನ್ನೂ ಬುದ್ಧ ಮತ್ತು ಅಶೋಕ ಚಕ್ರವರ್ತಿ ಈ ಇಬ್ಬರಿಗೆ ಹೋಲಿಸಿದರೆ ಅದು ಅಸಮಂಜಸವೆನ್ನಿಸಿದೆ.

ಬುದ್ಧ—ಅಶೋಕ ಈ ಇಬ್ಬರ ಜೀವಿತ ಕಾಲಾವಧಿಯ ಅಂತರ ಮುನ್ನೂರು ವರ್ಷಗಳಿರಬಹುದು. ಆದರೆ ಗಾಂಧಿ ನೆಹರೂ ಅವರ ಜೀವಿತ ಕಾಲದಲ್ಲಿ ಅಂತಹ ಅಂತರವು ಲೇಶ ಮಾತ್ರವೂ ಇಲ್ಲ. ಉಭಯರೂ ಸಮಕಾಲೀನರಾಗಿದ್ದೇ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಮಹಾ ಪುರುಷರು. ಈಗಾಗಲೇ ಮಿ|| ಟಾಯಿನ್‌ಬೀ ಎಂಬೊಬ್ಬ ಐತಿಹಾಸಿಕ ತತ್ವಜ್ಞಾನಿಯು ತನ್ನ ಒಂದು ಲೇಖನದಲ್ಲಿ ಗಾಂಧಿ—ನೆಹರೂ ಅವರನ್ನು ಮೇಲೆ ಹೇಳಿದಂತೆ ಬುದ್ಧ ಮತ್ತು ಅಶೋಕರಿಗೆ ಹೋಲಿಸಿ ಬರೆದಿದ್ದಾನೆ.

ಇದೇ ೨೭–೫–೧೯೬೪ಕ್ಕೆ ಕೊನೆಗೊಂಡ ಕಳೆದ ಅರ್ಧ ಶತಮಾನ ಕಾಲವನ್ನು—ಭಾವೀ ಇತಿಹಾಸಕಾರರು ಗಾಂಧಿ - ನೆಹರೂ ಯುಗ ಎಂದು ಕರೆಯಬಹುದು. ಈ ಇಬ್ಬರು ಮಹಾ ಪುರುಷರೂ ಭಾರತದ ರಾಜಕೀಯ ಮತ್ತು ಸಾಮಾಜಿಕ ಜೀವನದ ಮೇಲೆ ಅಷ್ಟು ಮಟ್ಟಿಗೆ ತಮ್ಮ ಪ್ರಭಾವವನ್ನು ಬೀರಿ ಜನತೆಯ ಜೀವನ ಸ್ಥಿತಿಯನ್ನೇ ಅಷ್ಟು ಮಟ್ಟಿಗೆ ರೂಪಿಸಿರುವುದರಿಂದ, ಚರಿತ್ರಕಾರರು ಅದನ್ನು ಒಂದು ಪ್ರತ್ಯೇಕ ಯುಗ ಅಥವಾ ಶಕ ಎಂಬ ವಿಶಿಷ್ಟ ನಾಮದಿಂದ ಕರೆಯುವುದು ಸಹಜವೆನ್ನಬಹುದು. ಇಂದಿನ ಭಾರತ ಜನತೆಯ ಸ್ಥಿತಿಗತಿಗಳನ್ನು ಉನ್ನತ ಮಟ್ಟಕ್ಕೇರಿಸುವಲ್ಲಿ – ಈ ಅವಧಿಯಲ್ಲಿ ಇತರ ಪ್ರಮುಖ ವ್ಯಕ್ತಿಗಳ್ಯಾರೂ ಪರಿಶ್ರಮಿಸಲಿಲ್ಲವೆಂದೆಣಿಸಲಾಗದು. ಉದಾಹರಣೆಗೆ, ಭಾರತದ ಆಧುನಿಕ ಕಾಲದ ಚರಿತ್ರಾಂಶಗಳನ್ನು ಲಿಖಿಸುವಲ್ಲಿ ಸರ್ದಾರ್ ಪಟೇಲ್, ರಾಜೇಂದ್ರ ಪ್ರಸಾದ್, ಅಬ್ದುಲ್ ಕಲಾಮ್ ಅಜಾದ್, ಸುಭಾಷ್ ಚಂದ್ರಬೋಸ್ ಮತ್ತು ಚಕ್ರವರ್ತಿ ರಾಜಗೋಪಾಲಾಚಾರ್ಯ ಈ ಮಹಾ ಪುರುಷರು ಪಟ್ಟ ಅಗಾಧ ಪರಿಶ್ರಮ ಮತ್ತು ಸಲ್ಲಿಸಿದ ತ್ಯಾಗಮಯ ಸೇವೆ ಇವುಗಳನ್ನು ಸ್ಮರಿಸಿಕೊಳ್ಳದಿರಲು ಸಾಧ್ಯವಿಲ್ಲ. ಆದರೆ ನಮ್ಮ ದೇಶದ ರಾಜಕೀಯ ಮತ್ತು ಆರ್ಥಿಕ ಸಾಮಾಜಿಕ ವಿಚಾರಗಳ ರೂಪ ರಚನೆ ಅಭಿವೃದ್ಧಿಗಳಿಗೆಲ್ಲ ಪ್ರೇರಣೆ—ಸ್ಫೂರ್ತಿಗಳು ಬರುತ್ತಿದ್ದ ಚಿಲುಮೆ ಮಾತ್ರ ಗಾಂಧಿ—ನೆಹರೂ ಅವರ ಮಸ್ತಿಷ್ಕದಿಂದ ಎಂದು ಹೇಳಿದರೆ ಅದು ಅತಿಶಯೋಕ್ತಿಯೆನ್ನಿಸದು. ಗಾಂಧಿ—ನೆಹರೂ ಈ ಇಬ್ಬರಿಗಿಂತಲೂ ಹೆಚ್ಚಿನ—ಮಹತ್ವವನ್ನು ಗಳಿಸಿದ ಶ್ರೀ ಅರವಿಂದ ಘೋಷರು, ಶ್ರೀ ರವೀಂದ್ರನಾಥ ಟ್ಯಾಗೋರ್, ರಮಣ ಮಹರ್ಷಿ, ವಿನೋಬಾ ಭಾವೆ ಮುಂತಾದ ಮಹನೀಯರ ವ್ಯಕ್ತಿತ್ವಗಳಿವೆ. ಅವರ ನಾಮಧೇಯಗಳೂ ಭಾರತೀಯ ಚರಿತ್ರಾಕಾಶದಲ್ಲಿ ಶುಕ್ರ ತಾರೆಗಳಂತೆ ಬೆಳಗುತ್ತಿವೆ. ಆದರೆ ಅವರ ಕಾರ್ಯ ಕ್ಷೇತ್ರಗಳೇ ಬೇರೆ—ಅವುಗಳ ವ್ಯಾಪ್ತಿ—ವೈವಿಧ್ಯಗಳೇ ಬೇರೆ. ಗಾಂಧಿ—ನೆಹರೂ ಅವರ ಆರ್ಥಿಕ—ರಾಜಕೀಯ ಕಾರ್ಯ ಕ್ಷೇತ್ರಕ್ಕೂ, ಆ ಮಹನೀಯರ ತಾತ್ವಿಕ—ಸಾಹಿತ್ಯಿಕ ಕಾರ್ಯ ಕ್ಷೇತ್ರಗಳಿಗೂ ಯಾವ ಬಗೆಯ—ಹೋಲಿಕೆ ತಾರತಮ್ಯಗಳನ್ನೂ ಎಣಿಸಲಾಗದಿದ್ದರೂ, ಅಖಿಲ ಭಾರತದ ಸಮಗ್ರ ಅಭಿವೃದ್ಧಿ ಕಾರ್ಯ ಕ್ಷೇತ್ರದ ಮಹತ್ವವನ್ನು ಗಣನೆಗೆ ತೆಗೆದುಕೊಳ್ಳುವಾಗ, ಆ ಮಹಾಪುರುಷದ್ವಂದ್ವ ನಡೆಸಿದ ಸೇವೆಯನ್ನು ಅಲಕ್ಷ್ಯ ಮಾಡುವಂತಿಲ್ಲ—ಮಾತ್ರವಲ್ಲ, ಖಂಡ ಖಂಡಾಂತರಗಳಲ್ಲಿ ಭಾರತದ ಕೀರ್ತಿ ಪ್ರತಿಷ್ಠೆಗಳು ಹಬ್ಬಲು ಆ ಮಹನೀಯರ ಮೂಲಕ ನಡೆದಿರುವ ಸೇವೆಗಾಗಿ ದೇಶವು ಚಿರ ಕೃತಜ್ಞವಾಗಿರಬೇಕಾಗಿದೆ.

ನಮ್ಮ ಸುತ್ತುಮುತ್ತಲಿರುವ ಇತರ ಹಲವಾರು ರಾಷ್ಟ್ರಗಳ ಪ್ರಾಚೀನ ಇತಿಹಾಸವನ್ನು ಕೆತ್ತಿರೆದು ನೋಡಿದರೆ ಈ ಇಬ್ಬರು ಮಹಾವ್ಯಕ್ತಿಗಳಂತೆ ಚರಿತ್ರ ನಿರ್ಮಾಪಕರನ್ನಾಗಲೀ, ತಮ್ಮ ಜೀವನದಲ್ಲಿ ಇಷ್ಟು ಹೆಚ್ಚಿನ ಮಹತ್ವವನ್ನು ಪಡೆದವರನ್ನಾಗಲೀ ಕಾಣೆವು. ಅಲ್ಲದೆ ಅನುದಿನದ ಜೀವನ, ಕಾರ್ಯ ನಿರ್ವಹಣೆ, ಪರಸ್ಪರ ಹೊಂದಾಣಿಕೆ, ಮತ್ತು ಸಹಕಾರ ಸಹಾನುಭೂತಿಗಳಿಂದ ಇಬ್ಬರೂ ಒಂದಾಗಿ ರಾಷ್ಟ್ರ ಕಾರ್ಯವನ್ನು ನಿರ್ವಹಿಸಿದ ಉದಾಹರಣೆ ಎಲ್ಲೂ ದೊರೆಯುತ್ತಿಲ್ಲ. ಅಷ್ಟು ಮಾತ್ರವಲ್ಲ, ತಮ್ಮಲ್ಲೇ ಪರಸ್ಪರ ಗುಣ ನಡತೆಗಳು, ಯೋಗ್ಯತೆ ಸ್ವಭಾವಗಳಲ್ಲಿ ಎಷ್ಟು ಭಿನ್ನತೆ ಕಂಡುಬಂದರೂ ನಾಲ್ವತ್ತು ಕೋಟಿ ಪ್ರಜಾಸಂಖ್ಯೆಗೆ ಮೀರಿದ ಒಂದು ಪ್ರಬಲ ರಾಷ್ಟ್ರದ ಆಗುಹೋಗುಗಳನ್ನು ನಿರ್ಧರಿಸುವ ಒಂದು ಮಹಾಕಾರ್ಯದಲ್ಲಿ ಪರಸ್ಪರ ಉತ್ಸಾಹದಿಂದ ನಡೆದ ಇಂತಹ ಇಬ್ಬರು ಪ್ರಚಂಡ ವ್ಯಕ್ತಿ ಮಹಾಶಯರನ್ನು ಪ್ರಪಂಚ ಚರಿತ್ರೆಯಲ್ಲೇ ಕಾಣಲು ಸಾಧ್ಯವಿಲ್ಲ ಮತ್ತು ಪರಸ್ಪರ ವಿರುದ್ಧ ಚಿತ್ತವೃತ್ತಿಯನ್ನುಂಟಾಗಿದ್ದ ಈ ವರ್ಗದ ಮಹನೀಯರು ಏಕೀಭವಿಸಿ —ನಾನೂರು ದಶಲಕ್ಷ ಪ್ರಜಾಬಾಹುಳ್ಯ ನಿಬಿಡವಾದ ಒಂದು ಮಹಾರಾಷ್ಟ್ರವನ್ನು, ಹಲವು ಕಾಲದ ಗುಲಾಮಗಿರಿಯಿಂದ ಮುಕ್ತಗೊಳಿಸಿ ಆಧುನಿಕ ನಾಗರಿಕ ರಾಷ್ಟ್ರಗಳ ಸರಿಸಮವೆನ್ನಿಸಿದ ಈ ಮಹಾಕಾರ್ಯಸಂಘಟನೆಯು ಕೇವಲ ಅಪೂರ್ವವೆನ್ನಬೇಕಾಗಿದೆ. ಲೋಕದ ಯಾವ ದೇಶದ ಚರಿತ್ರೆಯಾದರೂ, ಹೀಗೆ ಅಧಃಪಾತಾಳಕ್ಕಿಳಿದು ಹತಾಶ ಸ್ಥಿತಿಯಲ್ಲಿದ್ದ ಜನಾಂಗವನ್ನು ಮಹೋನ್ನತ ಸ್ಥಿತಿಗೇರಿಸಿ ಸ್ಥಿರವಾಗಿ ನಿಲ್ಲಿಸುವ ಅನನ್ಯಸಾಧಾರಣವಾದ ಕಾರ್ಯವನ್ನು ಕೇವಲ ಇಬ್ಬರು ಮಹಾಶಯರಿಗೆ ಒಪ್ಪಿಸಿದ್ದ ಉದಾಹರಣೆಯೂ ಎಲ್ಲಿಯೂ ದೊರೆಯುತ್ತಿಲ್ಲ.

ಭಾರತ ದೇಶವು ಸಾಧಿಸಿರುವ ಈ ಮಹಾ ಕಾರ್ಯವು ಕೇವಲ ಒಂದು ಕನಸಲ್ಲ—ಅಥವಾ ಒಂದು ಆಶೋತ್ತರವಲ್ಲ—ಆದರೆ ಪ್ರತ್ಯಕ್ಷವಾಗಿ ಸಾಧಿಸಲ್ಪಟ್ಟಿರುವ ಒಂದು ಮಹಾರಾಷ್ಟ್ರದ ಸ್ವಾತಂತ್ರ್ಯವಾಗಿದೆ—ನಿತ್ಯದ ಅಭಿವೃದ್ಧಿ ಪಥವಾಗಿದೆ. ಆ ಮಹಾಪುರುಷರ ಸಮಕಾಲೀನರಾಗಿ ಜೀವಿಸುವ ಸುಯೋಗ ಗಳಿಸಿದ್ದ ಈ ತಲೆಮಾರಿನವರಾದ ನಾವು ಪ್ರ

(ಮೂವತ್ತನಾಲ್ಕನೇ ಪುಟ ನೋಡಿರಿ)

‡ ಭವಾನ್ಸ್ ಜರ್ನಲ್‌ನಲ್ಲಿ ಶ್ರೀ ಆರ್. ಆರ್. ದಿವಾಕರ್ ಅವರ (Gandhi Nehru Era) 'ಗಾಂಧಿ-ನೆಹರೂ ಈರಾ" ಎಂಬ ಲೇಖನವನ್ನು ಅವಲಂಬಿಸಿ ಬರೆದುದು.

ಶ್ರೀ ಯ. ನಾ. ಉಡುಪ, ವಿದ್ವಾನ್, ಕೋಟೇಶ್ವರ.

ಭರತ ಖಂಡದ ಜೀವಜ್ಯೋತಿ— ಶ್ರೀ ಕೃಷ್ಣ

ವಿಶ್ವೋಪನಿಷತ್ತು ಗೀತೆಯ ಕರ್ತೃ, ಮಹಾದ್ರಷ್ಟಾರ, ವೇದಪುರುಷ ಶ್ರೀಕೃಷ್ಣನ ಜನನ ಕಾಲದ ಬಗ್ಗೆ ಯಾವ ಸಂಶೋಧಕನೂ ಬೆಂತಿಸಲಿಲ್ಲ. ಆದರೂ ಸಿಕ್ಕ ಆಧಾರಗಳ ನೆರವಿನಿಂದ ಆತನ ಜೀವಿತ ಕಾಲವನ್ನೂ ಮಹತ್ವಗಳನ್ನೂ ಶ್ರೀ ಉಡುಪರು ಮುಂದಿಟ್ಟಿದ್ದಾರೆ.

೧

ಶ್ರೀಕೃಷ್ಣನು ವೇದಪುರುಷ. ಈತನ ಪಾವನ ನಾಮವು ಭಾಗವತ, ವಿಷ್ಣುಪುರಾಣ, ಹರಿವಂಶ ಮತ್ತು ಮಹಾಭಾರತ ಮೊದಲಾದವುಗಳಲ್ಲಲ್ಲದೆ, ಋಗ್ವೇದದಲ್ಲೂ ಬಂದಿದೆ. ವೇದದಲ್ಲಿ ಇವನೊಬ್ಬ ಮಂತ್ರದ್ರಷ್ಟ-ದ್ರಷ್ಟಾರ. ಛಾಂದೋಗ್ಯೋಪನಿಷತ್ತಿನಲ್ಲಿ ಈತನು ಘೋರ ಆಂಗಿರಸನ ಶಿಷ್ಯನಾಗಿ ರಹಸ್ಯ ವಿದ್ಯೆಯನ್ನು ಕಲಿತನೆಂದಿದೆ. ನಾರಾಯಣಾಥರ್ವ ಶಿರಸೋಪನಿಷತ್ತಿನಲ್ಲಿ ಮತ್ತು ಆತ್ಮ ಬೋಧೋಪನಿಷತ್ತಿನಲ್ಲಿ ಇವನನ್ನು ಬ್ರಹ್ಮಣ್ಯನೆಂದು ಕರೆದು, ಇವನು ಮಧುಸೂದನನ ಸಮಾನನೆಂದಿದೆ. ಮಹಾಭಾರತದಲ್ಲಾದರೆ ಇವನೇ ಸೂತ್ರಧಾರ! ವಿಷ್ಣುಪುರಾಣ ಮತ್ತು ಭಾಗವತ ಪುರಾಣಗಳಲ್ಲಿ ಈತನು ದೇವ ದೇವನ ಸ್ಥಾನಕ್ಕೇರಿದ್ದಾನೆ; ಅಲ್ಲದೆ ದಾಮೋದರ, ಉಪೇಂದ್ರ, ರಾಧಾಮಾಧವ, ಗೋಪಾಲಕೃಷ್ಣ, ಬಾಣವಾಂತಕ ಮೊದಲಾದ ಬಿರುದುಗಳಿಂದ ಭಕ್ತ ಜನರ ಹೃನ್ಮಂದಿರ ಜ್ಯೋತಿಯೆನಿಸಿದ್ದಾನೆ; ಭರತಖಂಡದ ಜೀವಜ್ಯೋತಿಯಾಗಿದ್ದಾನೆ. ಇವುಗಳಲ್ಲಿ, ಹರ, ಬ್ರಹ್ಮರೂ, ಇಂದ್ರಾದಿ ದೇವತೆಗಳೂ ಈತನ ಕಿಂಕರರು. ಇವನು ಅವಾಙ್ಮಾನಸಗೋಚರನು; ಅನುಪಮನು; ಅಚಿಂತ್ಯನು; ಅನಂತನು; ಅಜನು ಈ ಪುರಾಣಗಳಲ್ಲಿ. ಇಲ್ಲಿ ಶ್ರೀ ರಾಮಾದಿಗಳು ವಿಷ್ಣುವಿನ ಅಂಶಾವತಾರವಾದರೆ, ಶ್ರೀ ಕೃಷ್ಣನು ವಿಷ್ಣುವಿನ ಪೂರ್ಣಾವತಾರನೆನಿಸಿದ್ದಾನೆ.

ಇತಿಹಾಸ ಸಂಶೋಧಕರಲ್ಲಿ ಲೋಕಮಾನ್ಯ ತಿಲಕರು ಕ್ರಿ. ಪೂ. ಸು. ಆರು ಸಾವಿರ ವರ್ಷಗಳ ಮೊದಲೇ ವೇದ ಮಂತ್ರಗಳಿದ್ದುವೆಂದು ಹೇಳುತ್ತಾರೆ. ಕೆಲವು ಸಂಶೋಧಕರೂ ಕ್ರಿ. ಪೂ. ೧೬ ಸಾವಿರ-೨೦ ಸಾವಿರಗಳಿಗಿಂತಲೂ ಮಿಕ್ಕೂ ಹಿಂದೆ ವೇದಕಾಲವನ್ನು ತಳ್ಳುತ್ತಾರೆ. ಇದರಿಂದ ವೇದಗಳ ಕೃಷ್ಣನೂ, ಭಾರತ ಪುರಾಣಗಳ ಕೃಷ್ಣನೂ ಒಬ್ಬನಾಗುವುದು ಹೇಗೆ? ಎಂಬ ಸಂದೇಹವು ಸಂಶೋಧಕರಿಗೆ ಬರುವುದು ಸಹಜ. ಆದರೆ ವೇದದ ಎಲ್ಲಾ ಭಾಗಗಳೂ ಒಂದೇ ಕಾಲದಲ್ಲಿ ನಿರ್ಮಾಣವಾದವುಗಳಲ್ಲ; ಅದರ ಪೂರ್ಣತೆಗೆ ಕೆಲವು ಸಹಸ್ರ ವರ್ಷಗಳೇ ಬೇಕಾಗಿವೆ—ಎಂಬುದನ್ನು ನೆನೆದರೆ ಬಂದ ಸಂದೇಹವು ತಾನಾಗಿಯೇ ಪರಿಹಾರವಾಗುವುದು. ಅಂದ ಮೇಲೆ ಮಹಾ ವಿಭೂತಿ ಪುರುಷನಾದ ಶ್ರೀಕೃಷ್ಣನಿಗೂ ವೇದದಲ್ಲಿ ಒಂದು ಸ್ಥಾನ ದೊರೆತದ್ದು ಆಗ್ರಾಹ್ಯವೂ ಅಲ್ಲ, ಅಸಂಭವವೂ ಅಲ್ಲ. ಶ್ರೀಕೃಷ್ಣನ ಜೀವನ ಕಾಲದಲ್ಲಿ—ಅಥವಾ ಸ್ವಲ್ಪ ಮುಂದೆ, ವೇದವ್ಯಾಸಮುನಿಗಳು ಅವನ್ನು ವಿಭಾಗಿಸಿ ಇಂದಿನ ಸ್ವರೂಪ ಕೊಡುವಾಗ ಶ್ರೀಕೃಷ್ಣನ ವಿಚಾರಗಳು ಅವುಗಳಲ್ಲಿ ಸೇರಲು ಸಾಧ್ಯವಿದೆ; ಅಲ್ಲದೆ ಆತನಿಗೆ ದ್ರಷ್ಟಾರನಾಗುವ ಪ್ರತಿಭೆಯೂ ಇತ್ತು. ಇದರಿಂದ ವೇದ ಪುರುಷನು ಶ್ರೀಕೃಷ್ಣನೇ ಎಂಬುದರಲ್ಲಿ ಎರಡಿಲ್ಲ. ಇನ್ನು ಉಪನಿಷತ್ತುಗಳ ಕೃಷ್ಣನೂ ವಾಸುದೇವನೇ ಎಂಬುದನ್ನು ಮಂಡಿಸಲು ಬಹಳ ಕಷ್ಟವಿಲ್ಲ. ಶ್ರೀಕೃಷ್ಣ ಕ್ರಿ. ಪೂ. ಸು. ನಾಲ್ಕು ಸಾವಿರ ವರ್ಷಗಳ ಹಿಂದೆ ಭಾರತದಲ್ಲಿ ವಿರಾಜಿಸುತ್ತಿದ್ದನು. ಇದರಿಂದ ಕ್ರಿ. ಪೂ. ಸು. ಒಂದೂವರೆ ಸಾವಿರ ವರ್ಷಗಳ ಹಿಂದೆ ಜನ್ಮವೆತ್ತಿದ ಉಪನಿಷತ್ತುಗಳಲ್ಲಿ ಶ್ರೀ ಕೃಷ್ಣನ ವಿಚಾರ ಬರಲು ಹೇಗೂ ಸಾಧ್ಯವಿದೆ. ಅವನು ನ ಭೂತೋ ನ ಭವಿಷ್ಯದ್ವ್ಯಕ್ತಿ! ಇದಲ್ಲದೆ ಉಪನಿಷತ್ತಿನ ಘೋರ ಆಂಗಿರಸನಲ್ಲಿ ಶ್ರೀ ಕೃಷ್ಣನು ಪಡೆದ ಉಪದೇಶಕ್ಕೂ (ಭಾಗವತದ ಸಾಂದೀಪನಿ ಮತ್ತು ಘೋರ ಆಂಗೀರಸರು ಒಬ್ಬರೇ ಇರಬಹುದು) ಗೀತೆಯಲ್ಲಿ ಅರ್ಜುನನಿಗೆ ಕೃಷ್ಣನು ಮಾಡಿದ ಉಪದೇಶಕ್ಕೂ ತುಂಬಾ ಹೊಂದಿಕೆ ಇದೆ. ಆಂಗಿರಸನು ಕೃಷ್ಣನಿಗೆ ಪುರುಷಯಜ್ಞ ವಿದ್ಯೆಯನ್ನು ಉಪದೇಶಿಸಿದ್ದನು. ಈ ಯಜ್ಞದಲ್ಲಿ ನಿತ್ಯಕಾರ್ಯಗಳೇ ಯಜ್ಞಾಂಗಗಳು; ತಪಸ್ಸು, ದಾನ, ಆರ್ಜವ, ಅಹಿಂಸೆ, ಸತ್ಯವಚನಗಳೇ ಈ ಯಜ್ಞದಕ್ಷಿಣೆಗಳು; ಮರಣವೇ ಯಜ್ಞದ ಅವಭೃತ. ಇದರಲ್ಲಿ ಪಶುಯಜ್ಞಕ್ಕೆ ಸ್ಥಾನವಿಲ್ಲ. ಶ್ರೀ ಕೃಷ್ಣನು ಬೋಧಿಸಿದ ಗೀತಾಧರ್ಮ-ಭಾಗವತ ಧರ್ಮ-ಪಾಂಚರಾತ್ರ ಧರ್ಮದಲ್ಲೂ ಪಶುಯಜ್ಞಕ್ಕೆ ಸ್ಥಾನವಿಲ್ಲ. ಇದರಿಂದ ಉಪನಿಷತ್ ಕೃಷ್ಣನೇ ವಸುದೇವ ಕೃಷ್ಣ.

ಶ್ರೀ ಕೃಷ್ಣನು ಬೋಧಿಸಿದ ಭಾಗವತ ಧರ್ಮವು ಭಾರತದಲ್ಲಿ ಕ್ರಿ. ಶ. ಮೂರನೆಯ ಶತಮಾನದ ವರೆಗೂ ಪ್ರಬಲವಾಗಿದ್ದು ಆ ಕಾಲದಲ್ಲಿ ಸಮಗ್ರ ಭರತಖಂಡದಲ್ಲೇ ಚತುರ್ವ್ಯೂಹಗಳ (ಚತುರ್ವ್ಯೂಹ-ಕೃಷ್ಣ, ಬಲರಾಮ, ಪ್ರದ್ಯುಮ್ನ, ಅನಿರುದ್ಧ) ಪೂಜೆಗೆ ಪ್ರಾಧಾನ್ಯವಿತ್ತು. ಕ್ರಿ. ಪೂ. ಎರಡನೆಯ ಶತಮಾನದಲ್ಲಿ ಬೆಸ್ನಗರ್ ಶಾಸನ ಘೋಸುಂಡಿ ಶಾಸನಗಳಿಂದ ಗ್ರೀಕರು ಕೂಡ ಈ ಭಾಗವತ ಮತವನ್ನು ಸ್ವೀಕರಿಸಿದ್ದರೆಂದು ತೋರುತ್ತದೆ. ಗುಪ್ತ ವಂಶದವರೆಲ್ಲಾ ಪರಮ ಭಾಗವತರಾಗಿದ್ದರು. ಅಹಿರ್ಬುಧ್ನ್ಯ ಸಾತ್ವತ ಸಂಹಿತೆ, ನಾರದ ಪಾಂಚರಾತ್ರ, ನಾರದ ಮತ್ತು ಶಾಂಡಿಲ್ಯರೇ ಮೊದಲಾದವರ ಭಕ್ತಿ ಸೂತ್ರಗಳೆಲ್ಲಾ ಪಾಂಚರಾತ್ರ ಗ್ರಂಥಗಳಾಗಿದ್ದು, ಭಾಗವತಧರ್ಮವನ್ನು ಸಾರುತ್ತಿರುವುವು. ಸಾರಾಂಶ— ಶ್ರೀಕೃಷ್ಣನು ಭರತಖಂಡದ ಜೀವಜ್ಯೋತಿಯಾಗಲು ಅವನೊಬ್ಬ ಪ್ರಸಿದ್ಧ ಭಾಗವತ ಧರ್ಮಬೋಧಕ ಮತ್ತು ಸುಪ್ರಸಿದ್ಧ ಮತಾಚಾರ್ಯನಾಗಿದ್ದುದೂ ಒಂದು ಪ್ರಬಲ ಕಾರಣ.

ಎಷ್ಟೋ ಗೀತಾವಾಕ್ಯಗಳಿಗೂ ಉಪನಿಷತ್ ವಾಕ್ಯಗಳಿಗೂ ನಿಕಟವಾದ ಹೋಲಿಕೆ ಇದೆ. ಪ್ರತಿಯೊಂದು ಅಧ್ಯಾಯದ ಕೊನೆಯಲ್ಲೂ "ಇತಿ ಶ್ರೀಮದ್ಭಗವದ್ಗೀತಾಸು ಉಪನಿಷತ್ಸು" ಎಂದು ಹೇಳಿದೆ. ಶ್ರೀ ಶಂಕರಾಚಾರ್ಯರು ಗೀತಾ ಭಾಷ್ಯವನ್ನು ಬರೆಯುವಾಗ ಗೀತೆಯನ್ನು "ಸಮಸ್ತ ವೇದಾರ್ಥ ಸಾರ ಸಂಗ್ರಹ ಭೂತಂ" "ತದರ್ಥ ವಿಜ್ಞಾನೇ ಸಮಸ್ತ ಪುರುಷಾರ್ಥ ಸಿದ್ಧಿ:" ಎಂದಿರುವರು. ಗೀತೆಯು ಒಂದು ತತ್ವವಲ್ಲ; ಒಂದು ಸಂಪ್ರದಾಯವಲ್ಲ. ಇದು ಹಿಮಾಲಯ ಪರ್ವತ ಶ್ರೇಣಿಯಂತೆ ಹಲವು ತತ್ವಗಳ ನಿಧಿ. ಇಲ್ಲಿಂದಲೇ ಮುಂದೆ ಅದ್ವೈತ ದ್ವೈತ, ವಿಶಿಷ್ಟಾದ್ವೈತವೆಂಬ ಮಹಾನದಿಗಳು ಉದ್ಭವಿಸಿ, ಹರಿದು, ಭಗವಂತನೆಂಬ ಸಾಗರವನ್ನು ಸೇರುವುವು. ಇದರಿಂದ ದಿವ್ಯ ಜ್ಞಾನಿಯೆನಿಸಿದ್ದ ಪರಿಪೂರ್ಣ ಶ್ರೀಕೃಷ್ಣನ ಯಶಸ್ಸು ಭಾರತದ ಅದ್ಯಂತ ಮಾತ್ರವಲ್ಲ, ವಿಶ್ವತೋಮುಖವಾಗಲು ಸಾಧ್ಯವಾಯಿತು. ಆದುದರಿಂದಲೇ ಮಹಾಭಾರತವು "ಸಏಷ ಭಗವಾನ್ ವಿಷ್ಣು: ಕೃಷ್ಣೇತಿ ಪರಿಕೀರ್ತ್ಯತೇ" ಎಂದು ಹಾಡಿದುದು. ಆದುದರಿಂದಲೇ ವಿಷ್ಣುವೂ ಕೃಷ್ಣನೂ ಸಮಾನರೆಂಬ ಭಾವನೆಯು ಜನತೆಯಲ್ಲಿ ನೆಲೆಯೂರಿತು. ಶ್ರೀ ಭಂಡಾರಕಾರರು "ವೈಷ್ಣವಿಜಂ, ಶೈವಿಜಂ, ಎಂಬ ಲೇಖನದಲ್ಲಿ ಶ್ರೀ ಕೃಷ್ಣನು ಕಾಷ್ಣಾಯನ ಗೋತ್ರಕ್ಕೆ ಸೇರಿದುದರಿಂದಲೇ ಆತನಿಗೆ ಆ ಹೆಸರು ಪ್ರಾಪ್ತವಾಯಿತೆನ್ನುತ್ತಾರೆ.

ಶ್ರೀ ಕೃಷ್ಣನು ಭರತಖಂಡದ ಜೀವಜ್ಯೋತಿಯಾಗಲು ಆತನ ಜೀವನ ಲೀಲೆಯಲ್ಲಿದ್ದ ಅನಿರ್ವಚನೀಯವಾದ ಸೊಬಗೂ ಒಂದು ಕಾರಣ. ಸಾಕ್ಷಾತ್ ವಿದ್ಯಾಧಿದೇವತೆ ಶಾರದೆಯೇ ಚೇತೋಹಾರಿಯಾದ ಆತನ ಲೀಲೆಯನ್ನು ಗಾನಮಾಡಿ ಆನಂದ ತುಂದಿಲಳಾದಳಂತೆ! ನಾರದಾದಿ ಮಹಾಮುನಿಗಳು ಮಾಯಾಪಾಶವನ್ನು ಕಿತ್ತೊಗೆದರಂತೆ!

ಆ ನಂದ ಕಂದ ಭಗವಾನನ ಪಾವನ ಮಧುರ ಜೀವನವು ಅನೇಕ ಭಕ್ತರಿಗೆ ಶ್ರದ್ಧಾಪ್ರೇರಕವಾಯಿತು. ಹಲವರಿಗೆ ಆನಂದೋದ್ಧಾರಕವಾಯಿತು; ಭಕ್ತರಿಗೆ ಮೋಕ್ಷಕಾರಕವಾಯಿತು. ಆದರೆ ಕರ್ಮನು ಜೀವಿಗಳಾದ ಇತಿಹಾಸ ಸಂಶೋಧಕರಿಗೆ ಇದು ಹೃದಯಾಕರ್ಷಕವಾಗದುದು ಭಾರತೀಯರ ದುರ್ದೈವ. ಇತಿಹಾಸ ಸಂಶೋಧಕರಿಗೆ ಭೂಗೋಲದ ಜಾತಕವನ್ನು ಶೋಧಿಸುವ ಆತುರವಿದೆ; ಮಾನವನ ಮೂಲವನ್ನು ಶೋಧಿಸುವ ಉತ್ಸಾಹವಿದೆ. ಆದರೆ ದೇವ ಮಾನವನೊಬ್ಬನ—ಸಹಸ್ರಾರು ವರ್ಷಗಳಿಂದ ಭಾರತೀಯರ ಹೃದಯ ಪ್ರದೀಪವೆನ್ನಿಸಿದ ಮಹಾ ವ್ಯಕ್ತಿಯೊಬ್ಬನ ಸತ್ಯ ಜೀವನವನ್ನೂ, ಕಾಲವನ್ನೂ, "ಇದಮಿತ್ಥಂ" ಎಂದು ನಿರ್ಧರಿಸಲಾಗಲಿಲ್ಲ. ಪುರಾಣಯುಗದ ಆ ಪುರಾಣ ಪುರುಷನನ್ನು ಇತಿಹಾಸ ರಂಗಕ್ಕೆ ತರಲಾಗಲಿಲ್ಲ. ಇದರಿಂದ ಶ್ರೀ ಕೃಷ್ಣನ ಸ್ಥಾನಮಾನವೊಂದೂ ಕೆಳಗೆ ಇಳಿಯಲಾರದು. ಅಕ್ಕಸಾಲಿಯ ಕೈಗಿತ್ತ ಮಾತ್ರಕ್ಕೆ ಕೊಹಿನೂರು ರತ್ನವು ಕೋಳಿಯ ಮೊಟ್ಟೆಯ ಬೆಲೆಗಿಳಿದೀತೆ? ಇದು ಸುತರಾಂ ಅಸಾಧ್ಯ ಮುಗಿಲೆತ್ತರದ ದಿವ್ಯಜೀವನವು ಮಾನವ ಮಟ್ಟದವರಿಗೆ ಅರಗಿಸಿಕೊಳ್ಳಲು ಸಾಧ್ಯವಾಗಬೇಕು.

೨

ಶ್ರೀ ಭಾಗವತ ಪುರಾಣದಲ್ಲಿ ಶ್ರೀ ಕೃಷ್ಣನ ವಯೋಮಾನ ೧೨೫ ವರ್ಷವೆಂದಿದೆ. ಆದರೆ ಆತನ ಜನ ಮರಣಗಳ ಕಾಲವನ್ನು ಯಾವ ಪುರಾಣವೂ ಸ್ಪಷ್ಟವಾಗಿ ಹೇಳಿಲ್ಲ. ಆದ್ದರಿಂದ ನಾವು ವರಾಹಮಿಹಿರನ ಗ್ರಂಥ, ಕಲ್ಹಣನ ರಾಜತರಂಗಿಣಿ, ವ್ಯಾಸಭಾರತ ಮತ್ತು ಗರ್ಗ ಸಂಹಿತೆಗಳಿಗೆ ಶರಣುಹೋಗಬೇಕಾಗಿದೆ. ಪ್ರಸಿದ್ಧ ಜ್ಯೋತಿಷ್ಕನಾದ ವರಾಹಮಿಹಿರನು ಭಾರತಯುದ್ಧ ಕಾಲವು ಶಕ ವರ್ಷ ೨೫೨೬ (ಕ್ರಿ. ಪೂ. ೨೪೪೮) ಎನ್ನುತ್ತಾನೆ. ಪ್ರಾಚೀನ ಇತಿಹಾಸಕಾರನಾದ ಕಲ್ಹಣನೂ (ಕ್ರಿ. ಶ. ೧೧೪೮) ತನ್ನ ರಾಜತರಂಗಿಣಿಯಲ್ಲಿ ಸಾಮಾನ್ಯವಾಗಿ ಇದನ್ನೇ ಅನುಮೋದಿಸಿದ್ದಾನೆ.

ಈಗ ವಿಶ್ವಾವಸು (ಕ್ರಿ. ಶ. ೧೯೬೫) ಸಂವತ್ಸರವು ನಡೆಯುತ್ತಿದೆ. ಇಂದಿಗೆ ಕಲಿಯುಗವಾರಂಭವಾಗಿ ೫೦೬೬ ವರ್ಷಗಳಾದುವೆಂದು ಜ್ಯೋತಿಷ್ಕರ ಸಿದ್ಧಾಂತ. ಭಾರತ ಯುದ್ಧವು ಕಲಿಯುಗಕ್ಕಿಂತ ನಲತ್ತೆಂಟು ವರ್ಷಗಳ ಮೊದಲು ನಡೆಯಿತು. ಅಂದರೆ ಭಾರತ ಯುದ್ಧವು ೫೦೬೬ + ೪೮ = ೫೧೧೪ ವರ್ಷಗಳ ಮೊದಲು ನಡೆಯಿತು. ಅಥವಾ ೫೧೧೪- ಕ್ರಿ. ಶ. ೧೯೬೫ = ಕ್ರಿ. ಪೂ. ೩೧೪೯ರಲ್ಲಿ ನಡೆಯಿತು. ಈ ಕುರಿತು ಆಧುನಿಕ ಸಂಶೋಧಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಭಾರತ ಯುದ್ಧ ಕಾಲವನ್ನು ಕ್ರಿ. ಪೂ. ೧೪೦೦ಕ್ಕೆ ಎಳೆದಿದ್ದಾರೆ!

ಭಾರತದ ಉದ್ಯೋಗ ಪರ್ವದಲ್ಲಿ ಶ್ರೀ ಕೃಷ್ಣನು, ತನ್ನ ಸಹಾಯ ಪಡೆಯಲು ಬಂದ ದುರ್ಯೋಧನನೊಡನೆ ತಾನು ಮುದುಕನಾದೆನೆಂದು- "ವಿಮುಕಲಾರೆವು ಚಕ್ರ ಭಂಡಾರಿಸಿತ; ಮುನ್ನಿನ ಜವ್ವನದ ಬಲ ಮುಸುಳಿತು, ಅವ್ ಉಂಡಾಡಿ ಭಟ್ಟರು, ಎಂದು ಹೇಳುವುದರಿಂದಲೇ ಯುದ್ಧಕಾಲದಲ್ಲಿ ಶ್ರೀ ಕೃಷ್ಣನು ಮುದುಕನಾಗಿದ್ದನೆಂದು ಊಹಿಸಲು ಸಾಧ್ಯವಿದೆ. ಆದರೆ ಆಗ ಕೃಷ್ಣನ ವಯಸ್ಸೆಷ್ಟಾಗಿರಬಹುದು?—ಇದಕ್ಕೆ ಯಾವ ಪುರಾಣದಲ್ಲೂ ಆಧಾರ ತೋರುವುದಿಲ್ಲ. ಆದ್ದರಿಂದ ಗರ್ಗಮಹರ್ಷಿಗಳ ಶ್ರೀಕೃಷ್ಣ ಜನ್ಮಕುಂಡಲಿ ಮತ್ತು ಭಾರತದ ಕುಂಡಲಿ

(ಮೂವತ್ತಮೂರನೇ ಪುಟ ನೋಡಿರಿ)

ಶ್ರೀ ಬಿ. ಎಚ್. ಶ್ರೀಧರ

ನವಯುಗದ ಆಗಮನ

«ಸಹನಾವವತು' ಎಂದು ಋಷಿ ಮುನಿ ಹೇಳುತಿಹ—
ಅವನಿಂದ ರಕ್ಷಿತರು ಅಂತು ಸರ್ವರು;
ಬಹು ಮೋಹ ಗೀತಗಳ ಪ್ರೇಮಭ್ರಮಾವಿಷ್ಟ
ಕವಿ ರಚಿಸಿ ಹಾಡುತಿಹ—ವೀರರಿವರು!

ಮನೆ ಜಮೀನಂಗಡಿಗಳನು ಬಂಡವನು ಮಾಡಿ,
ಹಣಕಾಸ ಕೂಡಿಟ್ಟು, ಹಿರಿಯರುಗಳ
ಘನ ಪರಂಪರೆಯಂತೆ ಹೀರಿ ನಿರ್ಗತಿಗಳಿಸಿ
ಜನತೆಯಲಿ ದುರ್ದೈವಿ ಮುಗ್ಧರುಗಳ—
ನವಿಲು ಕೋಗಿಲೆ ಗಿಳಿಗಳೆಲ್ಲ ತಾವೇ ಎಂದು
ಬಾಯ್ಮಾಡಿ ಬರಿವವರು ಬೆಳ್ಳಕ್ಕರ
ಋಷಿ ರಾಜಾಸ್ಥಾನ ಪಂಡಿತರು ದುರ್ಹೃದಯ—
ಪಂಡಿತರು ಮಾಡುವುದು ಬ್ರಹ್ಮಾಧ್ವರ!

ಬಾಡಿಗೆಯ ಭಾವನೆಯ ಬರಹದಲಿ ತುಂಬಿಸುವ
ಕಾಡಾಡಿ ಕೂಡ ಕವಿ ಬಾಲ ಬಡಿದು
ಮೂಡಿ ಮಾತಿನ ದೈವತನವ ತೊತ್ತು, ಲೋಭಿಗಳ
ಕೂಡುವವ ಭ್ರಾಂತವ ಹೊರೆವ ದುಡಿದು!

ಕಾಡಹಸು ಊರಲ್ಲಿ ಬಂದ, ಎಲ್ಲವ ಮೇದು
ಕೋಡೆತ್ತಿ ಊರ ಹಸುಗಳನು ಕಂಡು
'ನಾಡಿಗಳನಕ್ಕೆ ನಾನಾದರ್ಶ, ನೀವೆಲ್ಲ
ಕಾಡ ಬಳಗದ ಕೂಗಿನವರು' ಎಂದು
ಮಾಡುವೊಲ್ ಜಗಳವನು ಉಂಡು ಸೊಕ್ಕಿದ ಜನರು
ಆಡುವರು ಮಂಗಳದ ಮಾತುಗಳನು;
ಊಡದವರುಸಿರುವುದಭದ್ರ, ಹೀನೋದ್ವೇಗ?
ಆಡಿರೋ ಮಾಡುತ್ತ ಶೋಷಣವನು!

ಶ್ರೀ ಜವಾಹರ ಸಾಮ್ಯತತ್ವ ಖಡ್ಗವ ಹಿಡಿದು,
ಭೋಜನ ಮದಾವಿರಳ ಮರ್ದಿಸಲಿದೋ
ಮೂಜಗದ ಕರ್ಮವೀರರು ಮುಂದೆ ಬರುತಿಹರು;
ರಾಜಾಜಿ ಪಕ್ಷಕ್ಕೆ ಜಯವು ಸಿಗದೋ!
ವಿಷಮಾರ್ಥ ವಿತರಣದ ತತ್ವವನು ಹಿಡಿದವರ
ರಸೆಲನೂ ನಿಂದಿಸಿಹ ಸಾಮ್ಯವಾದ
ಪಶುವಾದಕಿಂತಲೂ ಕೀಳೆಂದು ಕೇಳಿರೋ
ಮಿಸುನಿದಿನಿಗಳೆ, ಟೊಳ್ಳು ನಿಮ್ಮ ವೇದ!
ದುಡ್ಡು ಕೊಳ್ಳದೆ ಕೆಲಸ ಮಾಡಿಕೊಡ ಬೇಕಯ್ಯ;
ಬಡ್ಡಿ ಮಾರ್ವಾಡಿ ಗಿಟ್ಟುವಂತೆ, ಕಸಿದು,
ಒಡ್ಡು ಗಿಡ್ಡುಗಳ ಕಟ್ಟಿಸುವ ಕಂತ್ರಾಟಿಂದ
ಜಡ್ಡುಂಡು ಬದುಕ ಬೇಕಯ್ಯ ತಾನು
ದೊಡ್ಡವನು ತನ್ನನೋಲೈಸಬೇಕುಳಿದವರು
ಅಡ್ಡಾಡಿ ಕಾಲೇರಿ ಉದ್ಘಾಟಿಸಿ,
ಗೊಡ್ಡೆನ್ನು ಹಬ್ಬಗಳ ಮೆರೆವೆನೆಂಬಾಟಕ್ಕೆ
ಸೆಡ್ಡು ಹೊಡೆದಿದಿರಿಸುವ ಜನ ಬರುವುದೋ!

ಬರುತಿಹುದು ನವಯುಗವು ವ್ಯೋಮ ಯಾನವನೇರಿ
ಬರಸಿಡಿಲ ಹಾಗೆ ಬಡಿದೀ ಪೀರರ
ಕರುಬು ಬಾಳನು ಕಿತ್ತು ಬುಡಸಹಿತ ಕೋಸ್ಯಂಸು
ಸೆರೆ ಬಿಡಿಸಿ ಹಾರ ಬಿಡುವುದು ಸತ್ವರ!
ಸಂಸ್ಕೃತಿ ವಿಕಾಸದೀ ಭವ್ಯಪದ ಮಾನವನ
ಲೋಭ ದುಸ್ವಪ್ನವನಿಳಿಸಿ, ಸ್ವಾರ್ಥಕನಿಯ
ದುಷ್ಕೃತಿಯ ಕೊನೆಗೊಳಿಸಿ,ಬುವಿಸಗ್ಗಗಳಗಿರುವ
ಅಂತರವ ಕಿರಿದುಗೊಳಿಸುವುದು ಸನಿಹ!

ಕಳೆದ ನಲ್ವತ್ತೆಂಟು ವರುಷಗಳಿಂದ
ಉತ್ತಮ ಸೇವೆಯನ್ನು ಸಲ್ಲಿಸಿಕೊಂಡು ಬರುತ್ತಿರುವ
ಗದಗಿನ ಅತ್ಯುತ್ತಮ ರೆಸ್ಟೋರೆಂಟ್

ಗದಗ ರೆಸ್ಟೋರೆಂಟ್,

ಸ್ಟೇಶನ್ ರೋಡ್, ಗದಗ.

ಮನಮೆಚ್ಚುವ ವ್ಯವಸ್ಥೆ, ರುಚಿಕರವಾದ ತಿಂಡಿತಿನಸುಗಳು
ಇವುಗಳೇ ನಮ್ಮ ವೈಶಿಷ್ಟ್ಯ.

ಉಪಾಹಾರ ಕೂಟಗಳ ವ್ಯವಸ್ಥೆಯನ್ನು ಉತ್ತಮ ರೀತಿಯಲ್ಲಿ
ಮಾಡುತ್ತೇವೆ.

ಒಮ್ಮೆ ಸಂದರ್ಶಿಸಿರಿ

GADAGA RESTAURANT
STATION ROAD,
GADAG

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು.

ಐವತ್ತು ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ
ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್ ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧ ದ್ರವ್ಯಗಳೂ ಸಹ
ಪ್ರತಿನಿತ್ಯ ಅತ್ಯುತ್ತಮ ರೀತಿಯಲ್ಲಿ ತಯಾರಾಗುತ್ತಲಿವೆ.

ಶಾಖೆಗಳು: ಮೈಸೂರು, ಬೆಂಗಳೂರು ಮತ್ತು ಮಂಗಳೂರು.
ಡಿಪೋ: ಟಿ. ನರಸೀಪುರ.

ಸೋಲ್ ಏಜಂಟರು:— (ಕರ್ನಾಟಕದಾಚೆಗೆ) ದಿ ಯುನೈಟೆಡ್
ಕನ್ಸರ್ನ್ಸ್, 54, ಬಂದರು ಬೀದಿ, ಮದ್ರಾಸ್.

With Best Compliments from:

The United Trading Corporation & Workshop (Private) Limited,

Attavar, Nandigudde Road,

MANGALORE.

Dealers for

Hindustan Ambassador Cars.

ವೈದ್ಯರತ್ನಂ ಪಿ. ಎಸ್. ವಾರಿಯರ್‌ರವರ

ಆರ್ಯ ವೈದ್ಯ ಶಾಲಾ,

ಕೋಟ್ಟಕಲ್ (ಕೇರಳ ರಾಜ್ಯ)

ಸ್ಥಾಪನೆ: 1902

ಹೆಡ್ ಆಫೀಸು: **ಕೋಟ್ಟಕಲ್** ಫೋನ್ ನಂ. **44** **(ತಿರೂರು ಎಕ್ಸ್‌ಚೇಂಜ್)**

ಶಾಖೆಗಳು :

1. ಕೋಳಿಕ್ಕೋಡ್ (ಫೋನ್ ನಂ. 2155) ಕಲ್ಲಾಯ್ ರೋಡ್.
2. ತಿರೂರು (ಫೋನ್ ನಂ. 31) ಸ್ಟೇಶನ್ ರೋಡ್.
3. ಪಾಲ್ಘಾಟ್ (ಫೋನ್ ನಂ. 104) ವಡಕ್ಕಂತರ.
4. ಪಾಲ್ಘಾಟ್ ಸೇಲ್ಸ್ ಡಿಪೋ ಜಿ. ಬಿ. ರೋಡ್.
5. ಎರ್ನಾಕುಳಂ (ಫೋನ್ ನಂ. 3026) ಮಹಾತ್ಮಾ ಗಾಂಧೀ ರೋಡ್.
   ,, ವೈದ್ಯರ ನಿವಾಸ (ಫೋನ್ ನಂ. 674)
6. ತ್ರಿವೆಂಡ್ರಮ್ (ಫೋನ್ ನಂ. 3924) ಸ್ಟೇಚು ರೋಡ್.
7. ಈರೋಡು (ಫೋನ್ ನಂ. 172) 45, ಕಾವೇರಿ ರೋಡ್.
8. ಆಳ್ವಾಯಿ ಸೇಲ್ಸ್ ಡಿಪೋ: ಬ್ಯಾಂಕ್ ರೋಡ್.

ಕೋಟ್ಟಕಲ್‌ನಲ್ಲಿರುವ ನಮ್ಮ ಹೆಡ್ ಆಫೀಸು ಮತ್ತು ಶಾಖೆಗಳಲ್ಲಿ ಖಾತ್ರಿಯಾದ ಸುಪ್ರಸಿದ್ಧ ಆಯುರ್ವೇದೀಯ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯಾಧಿಕಾರಿಯವರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಝುಚಿಲ್, ನವರಕಿಝಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳು ನಮ್ಮ ಪ್ರಧಾನ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್

ಇಲ್ಲಿ ನಡೆಸಲ್ಪಡುತ್ತವೆ.

ಎಲ್ಲಾ ಪತ್ರವ್ಯವಹಾರಗಳನ್ನು ಇಂಗ್ಲಿಷ್, ಮಲಯಾಳಂ ಅಥವಾ ತಮಿಳಿನಲ್ಲಿ ನಡೆಸಬೇಕು. ಹೆಚ್ಚಿನ ವಿವರಗಳಿಗೆ ದಯಮಾಡಿ ಬರೆಯಿರಿ:

ಮೆನೇಜಿಂಗ್ ಟ್ರಸ್ಟಿ, ಆರ್ಯ ವೈದ್ಯ ಶಾಲಾ, ಕೋಟ್ಟಕಲ್.

ಸ್ವದೇಶ-ಧರ್ಮ-ಧ್ವಜದ ರಕ್ಷಣೆ

ಶ್ರೀ ಶಿವಶಂಕರ

ಧ್ವಜವನ್ನು ತಲೆಗಾಗಿ ಹಾರಿಸುವುದು, ಧರ್ಮವನ್ನು ತಲೆಕೆಳಗಾಗಿಸಿ ಆಚರಿಸುವುದು ದೇಶದಲ್ಲಿ ಅಲ್ಲಲ್ಲಿ ಕಂಡು ಬರುತ್ತದೆ. ಸ್ವದೇಶ ರಕ್ಷಣೆಯನ್ನು ಮಾಡಬೇಕಾದ ಸರಕಾರವೂ ಜನತೆಯೂ ಕೆಲವೊಮ್ಮೆ ಈ ಬಗೆಯ ತಲೆಕೆಳಕು ವ್ಯಾಪಾರ ಮಾಡುತ್ತಿರುವುದುಂಟು. ಇವುಗಳಿಂದ ದೂರವಾಗಿ ಪವಿತ್ರ ಮಾತೃಭೂಮಿ ಭಾರತದ ರಕ್ಷಣೆಯ ರಾಖಿಯನ್ನು ನಾವಿಂದು ಕಟ್ಟಿಕೊಳ್ಳಬೇಕು.

ಪ್ರಶಾಂತ ಪೌರ್ಣಿಮೆಯ ಪರ್ವಕಾಲದಲ್ಲಿ ಕಂಕಣ ಕಟ್ಟಿಕೊಂಡೆವು ಮೊನ್ನೆ. ಇಂದು ಸ್ವಾತಂತ್ರ್ಯ ದಿನಾಚರಣೆ ಇದೆ. ಕೆಲವೇ ದಿನಗಳಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಹಬ್ಬ ಆಚರಿಸಲಿಕ್ಕಿದ್ದೇವೆ. ಹಬ್ಬವೇ ಹಬ್ಬ! ಉತ್ಸವವೇ ಉತ್ಸವ! ಒಂದರ ಹಿಂದೆ ಇನ್ನೊಂದು! ರಾಷ್ಟ್ರೀಯರಿಗೆ ಎಲ್ಲಿಲ್ಲದ ಸಡಗರ, ಉತ್ಸಾಹ. ಇದರಲ್ಲಿ ಯಾವುದನ್ನು ಬಿಡುವುದು, ಯಾವದನ್ನು ಆಚರಿಸುವದು? ನೈಜ ರಾಷ್ಟ್ರೀಯನು ಯಾವದನ್ನೂ ಬಿಡಲಾರನು. ಆತ ಸಮಯೋಚಿತವಾಗಿ ಆಚರಿಸುವನು. ಕಳೆದ ವರ್ಷ ಅಥವಾ ಅದಕ್ಕಿಂತ ಹಿಂದಿನ ವರ್ಷಕ್ಕೂ ಈ ವರ್ಷಕ್ಕೂ ಅದೊಂದು ವ್ಯತ್ಯಾಸ. ಈ ಮೂರು ಉತ್ಸವ-ಹಬ್ಬಗಳು ಹೊಂದಿಕೊಂಡು ಈ ರೀತಿ ಬಂದಿರಲಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಅದೊಂದು ಅಪೂರ್ವ 'ಘಟನೆ' ಎನ್ನಬಹುದು. ನೈಜ ರಾಷ್ಟ್ರೀಯನು, ಸಂದರ್ಭ—ಪರಿಸ್ಥಿತಿಗಳಿಂದ ಪಾಠ ಕಲಿತುಕೊಂಡು ರಾಷ್ಟ್ರದೇಳಿಗೆಗಾಗಿ ಹೋರಾಡಲು ಸಿದ್ಧನಾಗಿರುವಾತ ಅಂತಹ 'ಘಟನೆ'ಗಳನ್ನು ದಿಕ್ಸೂಚಿಯೆಂದು ಭಾವಿಸದಿರಲಾರ ಮತ್ತು ಅದಕ್ಕನುಸಾರವಾಗಿ ಕಾರ್ಯೋನ್ಮುಖನಾಗದಿರಲಾರ.

ಮೊನ್ನೆ ಪೌರ್ಣಿಮೆಯ ಪರ್ವಕಾಲದಲ್ಲಿ ರಕ್ಷೆಯನ್ನು ಕಟ್ಟಿಕೊಂಡೆವು. ಏಕೆ? ಸ್ವದೇಶ—ಧರ್ಮ—ಧ್ವಜದ ರಕ್ಷಣೆ ಮಾಡುವೆವೆಂದು ನಾವು ರಾಖಿಯನ್ನು ಕಟ್ಟಿಕೊಂಡೆವು. ರಾಖಿ ಬಂಧನಕ್ಕೆ ಒಂದೊಂದು ಕಾಲದಲ್ಲಿ ಒಂದೊಂದು ಅರ್ಥ ಇದ್ದಿರಬಹುದು. ಭಿನ್ನಭಿನ್ನ ಉದ್ದೇಶ-ಅಭಿಪ್ರಾಯಗಳಿಂದ ಅದನ್ನು ಒಬ್ಬರು ಇನ್ನೊಬ್ಬರಿಗೆ ಕಟ್ಟುತ್ತಿದ್ದಿರಬಹುದು. ಇಂದು ಅಂತಹ ಚಿಕ್ಕಪುಟ್ಟ ವಿಷಯಗಳನ್ನು ಮೀರಿ ಒಂದು ಉದಾತ್ತ, ಗಂಭೀರ ಆದರೂ ಉತ್ಸಾಹಪೂರ್ಣ ಕಾರ್ಯಕ್ಕಾಗಿ ಅದನ್ನು ಕಟ್ಟಿಕೊಳ್ಳಬೇಕಾಗಿದೆ. ಒಬ್ಬೊಬ್ಬರ ರಕ್ಷಣೆಗಾಗಿ ಮಾತ್ರ ಅಲ್ಲ, ಭಗಿನೀತ್ವದ ಭದ್ರತೆಗಾಗಿ ಮಾತ್ರ ಅಲ್ಲ—ಅಖಂಡ ಭಾರತವನ್ನು ಕನ್ಯಾಕುಮಾರಿಯಿಂದ ಅಥವಾ ಹಿಂದೂಮಹಾಸಾಗರದಿಂದ ಹಿಮಾಲಯದ ತನಕ ಇರುವ ಪರಮ ಪವಿತ್ರ ಹಾಗೂ ವಾತ್ಸಲ್ಯಮಯೀ ಭಾರತಾಂಬೆಯ ಚಿತ್ರವನ್ನು ಕಣ್ಣೆದುರಿಗಿಟ್ಟುಕೊಂಡು ಕಂಕಣ ಬದ್ಧರಾಗಿದ್ದೇವೆ. ಅದೇ ಧೈರ್ಯ ಹಾಗೂ ಉತ್ಸಾಹದಿಂದ ಧ್ವಜವನ್ನು ಮೇಲೇರಿಸುತ್ತಿದ್ದೇವೆ. ಬರಲಿರುವ ಶ್ರೀಕೃಷ್ಣ ಜಯಂತಿಯೂ ಆಗ ಜ್ಞಾಪಕಕ್ಕೆ ಬರುತ್ತಿದೆ; ಧೈರ್ಯವನ್ನೀಯುತ್ತಿದೆ, ಆಶಾಜ್ಯೋತಿಯನ್ನು ಬೆಳಗಿಸುತ್ತಿದೆ.

ಭಗವಾನ್ ಶ್ರೀಕೃಷ್ಣ ಧರ್ಮ ರಕ್ಷಣೆಗೈದ ವೀರವರ. ಪಂಚಪಾಂಡವರಿಗೆ ಐದು ಗ್ರಾಮಗಳಿಂತಿರಲಿ, ಸೂಜಿ ಮೊನೆಯೂರುವಷ್ಟು ಸ್ಥಳವನ್ನು ಬಿಟ್ಟುಕೊಡೆನೆಂದು ಛಲದಂಥ ದುರ್ಯೋಧನ ದರ್ಪದಿಂದ ನುಡಿದಾಗ, ಶ್ರೀಕೃಷ್ಣ ಕಸಕ್ಕನೆ ನಕ್ಕರು. ಮುಂದೆ ಅದರ ಪರಿಣಾಮ? ಕೌರವ—ಪಾಂಡವರೊಳಗೆ ಭಾರತದ ವಿಭಜನೆಯಲ್ಲ—ಅಖಂಡ ಭಾರತದ ಮಹಾಸ್ಥಾಪನೆ. ದೇಶ ವಿಭಜನೆಯ ಕರಾಳ ರಾತ್ರಿಯಂದು, ಹಿಂದೂಗಳೂ ಮುಸಲ್ಮಾನರೂ ಅಣ್ಣತಮ್ಮಂದಿರೆಂದೂ ಅವರಿಂದು ಪಾಲು ಪಡೆದುಕೊಳ್ಳುತ್ತಿದ್ದಾರೆಂದೂ ಬ್ರಿಟಿಷರು ಹೋದ ಮೇಲೆ ಅವರು ಒಂದಾಗಲಿರುವರೆಂಬ 'ಭವಿಷ್ಯ'ವನ್ನು ಅಂದಿನ 'ಮಹಾನಾಯಕರುಗಳು' ಹೇಳಿದ್ದರು. ಪಾಕಿಸ್ತಾನವೆಂಬ ಭಾರತೀಯರ ಕೊಳೆ ಮನೆ ಸಿದ್ಧವಾಯಿತು. ಶಾಸಕಾಂಗ—ನ್ಯಾಯಾಂಗ ಯಾವ ರಂಗವೇ ಆಗಲಿ ಹಿಂದೂಗಳಿಗೊಂದು ಸ್ಥಾನವನ್ನೂ ಕೊಡುವದಿಲ್ಲವೆಂದು ಪಾಕಿಸ್ತಾನಿಗಳು ಪಟ್ಟುಹಿಡಿದಿರುವರು. ಹಿಂದೂಗಳಲ್ಲಿಂದ ಓಡಿ ಬರುತ್ತಿದ್ದಾರೆ. ಅವರಿಗಲ್ಲಿ ಸೂಜಿ ಮೊನೆಯೂರುವಷ್ಟು ಸ್ಥಳವನ್ನು ಪಾಕಿಸ್ತಾನಿಗಳು ಕೊಡಲು ಸಿದ್ಧರಿಲ್ಲ. ಅಂತೆಯೇ ಶ್ರೀಲಂಕೆ, ಬ್ರಹ್ಮದೇಶ ಕೂಡಾ ತಮ್ಮ ಸಹೋದರ ಭಾರತೀಯರನ್ನು ಓಡಿಸುತ್ತಿವೆ. ಕಮ್ಯೂನಿಸ್ಟ್ ಚೈನಾ ಕಬಳಿಸುವಾಟಕ್ಕೆ ಕಾಲುಮುಂದಿಕ್ಕುತ್ತಿದೆ.

ಜುನಾಗಢವೆಂದ ಪಾಕಿಸ್ತಾನಕ್ಕೆ ಪಲಾಯನಮಾಡಿರುವ ಅಲ್ಲಿಯ ನವಾಬನು ಭಾರತದ ತ್ರಿರಂಗಿಯನ್ನು ಮೇಲೆ ಕೆಳಗೆ ಹಾಕಿಕೊಂಡು ತನ್ನ ವೈಯುಕ್ತಿಕ ವೈದ ಯಂತಿಯೆಂದು ಉಪಯೋಗಿಸಿಕೊಳ್ಳುತ್ತಿದ್ದಾನಂತೆ! ಇದು ಪಾಕಿಸ್ತಾನದಲ್ಲಿ. ಅಲ್ಲಿನ ಅಭ್ಯಾಸವೇ ಹಾಗೆ ಎನ್ನಬಹುದು. ಆದರೆ ಉಳಿದ ಭಾರತದಲ್ಲಿ ಹಾಗಲ್ಲ. ಆದರೂ ಅಲ್ಲಿಕೂಡಾ ಅಂತಹ ಘಟನೆಗಳಿಗೇನೂ ಕೊರತೆ ಇಲ್ಲ. ಒಂದು ಪ್ರಾಂತ್ಯದ ರಾಜ್ಯಪಾಲರೊಮ್ಮೆ ತ್ರಿರಂಗಿಯನ್ನು ಮೇಲೆ ಹಾರಿಸಿದರು; ಎಲ್ಲರೂ ನೋಡುತ್ತಿದ್ದರು! ಅದು ತಲೆ-ಕೆಳಗಾಗಿ ಹಾರಾಡುತಿತ್ತು. ಇದು ನೈಜ ಘಟನೆ. ಒಂದು ಪ್ರಾಂತ್ಯದ ಉಚ್ಚ ಪ್ರತಿನಿಧಿಯು ಮಾಡಿದ ಕೆಲಸ! ಮತ್ತೆ ಏನಮಾಡುವುದು? ಒಮ್ಮೆ ಹಾರಿಸಿದ ಧ್ವಜವನ್ನು ಅರ್ಧದಿಂದ ಇಳಿಸುವದು ಸರಿಯಲ್ಲ ಹೂಂ; ಇರಲಿ ಹಾಗೆಯೇ ಎಂದರು. ಅಂದದು ಹಾಗೆಯೇ ಹಾರಾಡಿತು!

ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಶ್ರೀ ಸಾಮಾನ್ಯನು, ರಾಷ್ಟ್ರೀಯನು ಸ್ವದೇಶ—ಧರ್ಮ—ಧ್ವಜದ ರಕ್ಷಣೆಗಾಗಿ ರಕ್ಷೆಕಟ್ಟಿಕೊಳ್ಳುತ್ತಾನೆ. ಅಥವಾ ಕಂಕಣಬದ್ಧನಾಗುತ್ತಾನೆ ಮತ್ತು ಕಟಿಬದ್ಧನಾಗುತ್ತಾನೆ. ಅದಕ್ಕಾಗಿ ಅದಿನಿತೂ ಅಂಜುವದಿಲ್ಲ, ಅಳುಕುವುದಿಲ್ಲ, ಹಿಂಜರಿಯುವುದಿಲ್ಲ. ಆದರೆ ನೇತಾವರ್ಗ ಅಂದರೆ ನಮ್ಮ ಪ್ರಾಂತ್ಯಪಾಲರು, ಸಚಿವರು ಅಥವಾ ದಿಲ್ಲಿ ದೇವತೆಗಳು ಎಲ್ಲವನ್ನೂ ತಲೆ ಕೆಳಗೆ—ಕಾಲುಮೇಲೆ ಮಾಡಿಬಿಡುತ್ತಿದ್ದಾರೆ. ಧ್ವಜದ ಘಟನೆ ಒಂದು ಉದಾಹರಣೆ ಮಾತ್ರ. ಇಂದಿನ ಆಹಾರ ಅಭಾವದ ದುಸ್ಥಿತಿಯಲ್ಲಿ ಹೊಟ್ಟೆ ಬಿಗಿದುಕೊಳ್ಳಲು ಬಡವರಿಗೆ ಬಂಬಡ ಬಾರಿಸಲಾಗುತ್ತಿದೆ. ಆದರೆ ದಿಲ್ಲಿಯಲ್ಲಿ ಏನು ನಡೆಯುತ್ತಿದೆ? ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅದನ್ನು ಚೆನ್ನಾಗಿ ಹೇಳಿದ್ದಾರೆ. ಮಂತ್ರಿ—ಮಾಗಧರ ಮಹಾಕೂಟದಲ್ಲಿ ವಿಜೃಂಭಣೆಯ ಭೋಜನಕೂಟ ನಡೆಯುತ್ತಿದೆ! ಊಟವಾದ ಮೇಲೆ ಕುಡಿತ. ಒಂದೆಡೆ ನೀರಿಗಾಗಿ ನೀರೆಯರು ನಲ್ಲಿಗಳ ಬಳಿ ನೇತ್ರನೀರು ಸುರಿಯುತ್ತಾ ಕಾಯುತ್ತಿರುವರಾದಲ್ಲಿ ಇನ್ನೊಂದೆಡೆ "ಕುಡಿತ"ಕ್ಕೇ ಗೃಹ ಕೈಗಾರಿಕೆಯ ಗೃಹಚಾರ ಗಡಿಮಿತಿ ಇಲ್ಲದೆ ಸಿಗುತ್ತಿದೆ. ತಿಂಡಿ—ತೀರ್ಥಗಳಾದ ಮೇಲೆ ಬಟ್ಟೆ. ಬಟ್ಟೆಗಳ ಬೆಲೆ ಏರುತ್ತ ಹೋಗುತ್ತಿರುವಂತೆ ನರ—ನಾರಿಯರ ಮೈಮೇಲಿನ ಬಟ್ಟೆಯೂ ಮೇಲಕ್ಕೆ ಹಾರುತ್ತಿರುವದನ್ನು ಕಾಣಬಹುದು. ಆದರೆ, ಅಬ್ಬಾ! ಮಂತ್ರಿ—ಮಾಗಧರಲ್ಲಿ ಅದೆಷ್ಟು ವ್ಯತ್ಯಾಸ—ಅಂತರ ಕಂಡು ಬರುತ್ತಿದೆ? ಹಿಂದಿನ ಖಾದಿ ಇಂದು ಕದಿಯಾಗಿ ಬಿಟ್ಟಿದೆ. ಯಾಕೆಂದರೆ, ಎಳೆದು ಹೇಳಲು ಮಂತ್ರಿಗಳಿಗೆ ಶಕ್ತಿ ಹಾಗೂ ಸಮಯ ಇಲ್ಲದಿರಬಹುದು. ತಮಿಳುನಾಡಿನಲ್ಲಂತೂ ಅದಕ್ಕೆ ವೈಶಿಷ್ಟ್ಯತೆ ಇದ್ದೇ ಇದೆ. ತಮಿಳು ಭಾಷೆಯಲ್ಲಿ ಕ, ಖ, ಗ, ಘ ನಾಲ್ಕಕ್ಷರಗಳಿಗೆ ಉಪಯೋಗದಲ್ಲಿರುವದು ಒಂದೇ ಒಂದು ಅಕ್ಷರ. [ಚತುರ್ವರ್ಣಗಳಲ್ಲಿ ಅವರಿಗೆ ಅಂತರವೇ ಇಲ್ಲ!] ಅದೇ ಅಕ್ಷರ ಸಮಯಾನುಸಾರವಾಗಿ 'ಕ' ಆಗುತ್ತದೆ, 'ಖ' ಆಗುತ್ತದೆ, '..' ಆಗುತ್ತದೆ, 'ಘ' ಕೂಡಾ. ಅಲ್ಲದೆ ಹೆಚ್ಚಾಗಿ ಅವರು, 'ಗ'ವನ್ನೇ [ಗಡಸಾಗಿ!] ಉಪಯೋಗಿಸುತ್ತಾರೆ. ಅಂತೆಯೇ 'ಖಾದಿ' ಎನ್ನುವ ಬದಲಿಗೆ ತಮಿಳುನಾಡಿನವರು 'ಗಾದಿ' ಎನ್ನುತ್ತಾರೆ. ಇಂದದು ಶೋಭಾಯಮಾನ ಪದವಾಗಿರುತ್ತದೆ. ಇಂದು ಅದೆಷ್ಟು ಅಮಾತ್ಯರು ಖಾದಿ ಧರಿಸುತ್ತಿದ್ದಾರೆ. ಅವರಿಂದ ಖಾದಿಧಾರಿಗಳಲ್ಲ—[ಅಧಿಕಾರದ] ಗದಾಧರರಿದ್ದಾರೆ. ಅವರ ಮಹಲುಗಳಲ್ಲಿ ಅದೆಷ್ಟು ಖಾದಿಯು ಉಪಯೋಗವಾಗುತ್ತಿದೆ! ಸಮಯ ಬದಲಾದಂತೆ ಅವರೂ ಬದಲಾಗಿದ್ದಾರೆ. ಊಟ—ತೀರ್ಥ—ಬಟ್ಟೆಗಳಾದ ಮೇಲೆ ಇರಲು ಮನೆಬೇಕು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ದಿಲ್ಲಿ ದೇವತೆಗಳ ದರ್ಬಾರನ್ನು ಮೊಗಲ ದರಬಾರಿಗೆ ಹೋಲಿಸಿರುವರು. ಈಗ ಅವರ ಗುಡಿಸಲೇ ಮಾತಿನ ವಿಷಯವಾಗಿ ಬಿಟ್ಟಿದೆ. ಅದೊಂದು ಮಾಡರ್ನ[ಮಾಡರ್ನ್?] ಗುಡಿಸಲಂತೆ. ಅದರಲ್ಲಿ ಆಧುನಿಕ ಸಲಕರಣೆಗಳೆಲ್ಲವೂ ಇವೆಯಂತೆ. ಹಾಗಿದ್ದರೂ ಹೆಸರು ಗುಡಿಸಲು. ಮಹಾನಗರ ಮುಂಬಯಿಯಲ್ಲಿ ಮನೆಗಳಿಲ್ಲದಿರುವದರಲ್ಲಿ ಕೆಲವರಿಗೆ ಘನಸರಕಾರವು ಉಳಕೊಳ್ಳಲು "ಏರ್ಪಾಡು" ಮಾಡಿಕೊಟ್ಟಿರುತ್ತದೆ. 'ಏರ್ಪಾಡ ಮಾತ್ರ ಆಗಿರುವ ಸ್ಥಳ ಹಿಂದೆ ವಾಸಸ್ಥಳವೇ ಆಗಿತ್ತು. ಅದಲ್ಲ ವಿಶೇಷ. ಹಿಂದಿನ ವಾಸಸ್ಥಳದ ಬಚ್ಚಲು ಕೋಣೆ ಇಂದು ಹಲವಾರು ಕುಟುಂಬಗಳಿಗೆ ಬದುಕಿರಲು ಮನೆಯಾಗಿರುತ್ತದೆ. ಯಾರು ಮೇಲು?—ಗುಡಿಸಲಿನಲ್ಲಿ ವಾಸಿಸುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರೆ?—ಅಥವಾ ಈ ಮನೆಯಲ್ಲಿ ತಂಗಿಕೊಂಡಿರುವವರೆ? ಊಟ—ಕುಡಿತ—ಉಡುಗೆ ಉಳಿಸಿಕೊಳ್ಳಲು ಆಲಯ ಮೆಲ್ಲ ಸಿಕ್ಕಿದ ಮೇಲೆ, ಅಥವಾ, ಕನಿಷ್ಟಪಕ್ಷ ನಾಲ್ಕು ಜನರು [ಹೆಂಗಸರೇ ಇರಬೇಕೆಂದೇನಿಲ್ಲ. ಅಥವಾ ಶಕುಂತಳೆ—ದುಷ್ಯಂತರೇ ಇರಬೇಕೆಂದೇನಿಲ್ಲ.] ಸೇರಿದ ಮೇಲೆ ನಾಲಗೆ ಸುಮ್ಮಗಿರುತ್ತದೆಯೇ? ಅದು ಇನ್ನು ದೇಶದ ವಿಷಯದಲ್ಲಿ ಕೇಳಬೇಕೇ? ನಾಲ್ಕು ಅಲ್ಲ ನಲ್ವತ್ತು ಕೋಟಿ ಜನರಿಗೊಂದು ವ್ಯಾವಹಾರಿಕ ಭಾಷೆ ಬೇಡವೇ? ಸ್ವತಂತ್ರ ಭಾರತಕ್ಕೊಂದು ಸ್ವತಂತ್ರ ಭಾಷೆ ಅಥವಾ ಸ್ವರಾಜ್ಯದಲ್ಲಿ ಸ್ವದೇಶಿ ಭಾಷೆಯೊಂದು ಸಂಪರ್ಕಭಾಷೆಯಾಗಿರುವದು ಬೇಡವೇ? ದಿಲ್ಲಿ ಸಿಂಹಾಸನದ ಮೇಲಿನಿಂದ ಇಂಗ್ಲಿಷರು ಇಳಿದಂತೆ, ಕೆಂಪು ಕೋಟೆಯ ಮೇಲಿದ್ದ ಇಂಗ್ಲಿಷರ ಯೂನಿಯನ್ ಜ್ಯಾಕ್ ಜಾರಿ ಹೋದಂತೆ, ಅಧಿಕಾರದ ಅಂತಸ್ತಿನಿಂದ ಇಂಗ್ಲಿಷ್ ಭಾಷೆಯೂ ಇಳಿಯುವದು ಸರಿಯಲ್ಲವೇನು? ಎಲ್ಲಾ ಸರಿಯೆಂದು ತಿಳಿದುಕೊಂಡು, ೧೯೬೫ರ ಜನವರಿ ಇಪ್ಪತ್ತಾರರಿಂದ ಅಂದರೆ ಪ್ರಜಾಪ್ರಭುತ್ವ ದಿನದಿಂದ ಹಿಂದಿ ವ್ಯಾವಹಾರಿಕ ಭಾಷೆಯಾಗಿರಬೇಕೆಂದು ಹದಿನೈದು ವರ್ಷಗಳ ಹಿಂದೆಯೇ ಘೋಷಿಸಿ ಬಿಟ್ಟಿದ್ದರು. ಆದರೆ ೧೯೬೫ರ ಜನವರಿ ಇಪ್ಪತ್ತಾರು ಬರುವಾಗಲೇ ಇಪ್ಪತ್ತಾರು ಜನರ ಹೆಣ ಬಿದ್ದಾಗಿತ್ತು! ಅಂದು ಕಾಂಗ್ರೆಸ್ಸಿನಲ್ಲಿದ್ದ ಪ.ಶಾಸ್ತ್ರಾಚಾರ್ಯರು ಅಂತಹವರು. ಕಾಂಗ್ರೆಸ್ಸಿನಲ್ಲಿರುವುದು ಮೂರು ಅಕ್ಷರ; ೧೯೬೫ ಒಟ್ಟು ಕೂಡಿಸಿದಲ್ಲಿ ಇಪ್ಪತ್ತೊಂದು. ಅದರಲ್ಲಿ ಮೂರು ಏಳಲಿ ಹೋಗುತ್ತದೆ; ಏನೂ ಉಳಿಯುವುದಿಲ್ಲ. ಆದುದರಿಂದ ೧೯೬೫ ಆಗಬಾರದೆಂದು ಭವಿಷ್ಯತ್ತಾಚಾರ್ಯರು ಹೇಳಿದಾಗ, ಏನೂ ಉಳಿಯುವುದಿಲ್ಲ ವಾಸ್ತವವಾದರೂ ಕಾಂಗ್ರೆಸ್ಸಿನಲ್ಲೂ ಕುಸ್ತಿ ಇದೆ. ಈ ಗಳಿಗೆಯಾಗ ಎರಡು ಗ್ರಹಗಳು ಡಿಕ್ಕಿ ಹೊಡೆದಂತಾದೀತೆಂದು ಲೆಕ್ಕ ಹಾಕಿ ಕೊಂಡಿದ್ದ ಆಚಾರ್ಯರೊಬ್ಬರು ಹೇಳಿದ್ದರಂತೆ. ತಮಿಳು ನಾಡಿನ ಆಚಾರ್ಯರು ಆಗಲೇ ಹೇಳಿದ್ದರಂತೆ—ತಮಿಳಿನಲ್ಲಿ ಕಾಂಗ್ರೆಸ್ ಬರೆದು ಅಕ್ಷರಗಳನ್ನು ಲೆಕ್ಕಮಾಡಿ ಇಪ್ಪತ್ತೊಂದಕ್ಕೆ ಭಾಗಾಕಾರ

ಮಾಡಿದಲ್ಲಿ ಒಂದು ಭಾಗ ಉಳಿಯುತ್ತಿದೆಂದು. ಆಂಗ್ಲ ವ್ಯಾಮೋಹಿಗಳೂ ಅಂದಿದ್ದರಂತೆ—ಸ್ಪೆಲ್ಲಿಂಗಿನ ಪ್ರಕಾರ ನೋಡಿದಲ್ಲಿ ಎಂಟಿದೆ, ಅದು ಇಪ್ಪತ್ತೊಂದರಲ್ಲಿ ಸರಿಯಾಗಿ ಹೋಗುವುದಿಲ್ಲವೆಂದು ಹೀಗೆ ಅಂದಿದ್ದವರಲ್ಲಿ ೧೯೬೫ ಜನವರಿ ಇಪ್ಪತ್ತಾರರಂದು ಸುಮ್ಮಗಿರುವದುಂಟೇ? ಸುಮ್ಮಗಿದ್ದಲ್ಲಿ ತಮ್ಮ ಭವಿಷ್ಯದ ಭವಿಷ್ಯ ಏನಾದೀತು? ಅವರು ಒಡನೆ ಭೂ ಮಂತ್ರ ಹಾಕಿದರು. ಕೊನೆಯಲ್ಲಿ ಕಾಂಗ್ರೆಸ್ಸಿನ ಕಾಲು ನಡುಗಿತು. ಮಂತ್ರಕ್ಕೆ ಮಂತ್ರಿಗಳು ಸಂಕೋಚನ. ೧೯೬೫ ಜನವರಿ ಇಪ್ಪತ್ತಾರರಿಂದ ಹಿಂದಿ ಭಾರತದ ವ್ಯಾವಹಾರಿಕ ಭಾಷೆಯೆಂದು ಘೋಷಿಸಿರುವ ಭಾರತದ ಪ್ರತಿನಿಧಿಗಳ ಸಭೆಯಲ್ಲಿ ಶ್ರೀ ಸುಬ್ರಹ್ಮಣ್ಯ ಹಾಗೂ ಶ್ರೀ ಅಲಗೇಶನ್ ಸುಮ್ಮಗೆ ಅಲುಗಾಡದೆ ಇದ್ದರು. ಆಗ ಜನರು ಇಡ್ಲಿ-ಸಾಂಬಾರು ತಿನ್ನುತ್ತಿದ್ದರೆ ಸ್ನಾನವು ಗಂಭೀರತೆಯ ಸೃಷ್ಟಿಯಿಂದ ಸರಿಯಲ್ಲ. ತಮಿಳುನಾಡಿನಲ್ಲಿ ಕೆಲವುಳ ಅದುವೇ ಸರಿ ಶ್ರೀ ಸುಬ್ರಹ್ಮಣ್ಯಂ ಹಾಗೂ ಶ್ರೀ ಅಲಗೇಶನ್ ದಿಲ್ಲಿಯಿಂದ ಇಲ್ಲಿಗೆ ಧಾವಿಸಿ, ಬಂದರು. ಪಾಪ! ಮತದಾರರನ್ನು ಕಾಣುವ ಅವಸರದಲ್ಲಿ ತಮ್ಮ ರಾಜೀನಾಮೆಯು ಪತ್ರಸ್ವೀಕಾರವಾಗಿದೆಯೋ ಇಲ್ಲವೋ ಎಂಬುದನ್ನು ನೋಡಲೂ ಅವರಿಗೆ ಬಿಡುವು ಸಿಗಲಿಲ್ಲ, ಒಂದೇ ಓಟ ಬಿಟ್ಟರು. ಅವರಿಗಿರುವದು ಒಂದೇ ಒಂದು ನೋಟ. ಅದು ೧೯೬೫ ಅಲ್ಲ, ೧೯೬೭. ಮತ್ತೆ ತಮಿಳು ನಾಡಿನಲ್ಲಿ ಇದ್ದಕ್ಕಿದ್ದಂತೆ ರಾತ್ರಿ ಮಳೆಯು ಹನಿ ಬಿತ್ತು. ಸೋಮವಾರ ಬೆಳಿಗ್ಗೆ ಎಲ್ಲಾ ಸಾಂಗವಾಗಿ ನಡೆಯಿತು. ತಿರು ಸುಬ್ರಮಣ್ಯಂ ಹಾಗೂ ತಿರು ಅಲಗೇಶನ್ ದಿಲ್ಲಿಗೆ ಹಿಂತೆರಳಿದರು.

ಇನ್ನೊಂದು ಬದಿಯಲ್ಲಿ, ೧೯೬೫ ಜನವರಿ ೨೬ರಿಂದ ಹಿಂದಿ ವ್ಯಾವಹಾರಿಕ ಭಾಷೆಯೆಂದು ಘೋಷಿಸಿದ್ದ ಕಾಂಗ್ರೆಸ್ಸಿನ ಅಧ್ಯಕ್ಷರೇ ಬದಲಾಗಿದ್ದರು—ವ್ಯಕ್ತಿ ಮಾತ್ರವಲ್ಲ, ಕೃತಿಕೂಡಾ. ದಕ್ಷಿಣದವರ ಮೇಲೆ ಹಿಂದಿ ಹೇರಲು, ಉತ್ತರದವರ್ಯಾರೆಂದು ಪ್ರಶ್ನೆ ಹಾಕುತ್ತ ಹಿಂದಿ ಪ್ರಶ್ನೆಗಳನ್ನು ಕಸದ ಬುಟ್ಟಿಗೆ ಒಗೆಯಿರೆಂದು ಅವರು ತಮ್ಮ 'ದಕ್ಷಿಣ'ದವರಿಗೆ ಬೋಧಿಸುತ್ತ ಬಂದರು.

ಭಾರತದ ವ್ಯಾವಹಾರಿಕ ಭಾಷೆ ಹಿಂದಿ ಅನ್ನುವುದನ್ನು ಕಮ್ಯೂನಿಸ್ಟರು ಒಪ್ಪಿಕೊಂಡಿದ್ದರು. ಆದರೆ ೧೯೬೫ ಜನವರಿ ಇಪ್ಪತ್ತಾರರಂದು ಅವರು ಮಾಡಿದ್ದೇನು? ಎಂದಿಗೂ ಅಂದ ಗಾಯ! ನಿಜವಾಗಿ ಹೇಳುವುದಿದ್ದಲ್ಲಿ ಅವರು ದಂಗೆ ಎದ್ದಿದ್ದರು. ಕಾಂಗ್ರೆಸ್ಸಿಗರ ದುರ್ಬಲತೆ ಹಾಗೂ ಬಿಕ್ಕಟ್ಟಿನ ಪೂರ್ಣ ಮುಲಾಭ ಅವರು ಪಡೆದುಕೊಂಡರು.

ದೇಶವಿದ್ರೋಹಿ ಕಮ್ಯೂನಿಸ್ಟರಿಗೆ ಪಕ್ಷ ಬಲವಾಗಿದ್ದರು. ಸ್ವತಂತ್ರ ಪಾರ್ಟಿಯವರು, ಮುಸ್ಲಿಂ ಲೀಗಿನವರು ಮತ್ತು ದ್ರಾವಿಡ ಮುನ್ನೇಟ್ರ ಕಳಗಮಿನವರು. ಹಿಂದಿಯನ್ನು ವಿರೋಧಿಸುವದು ದ್ರಾವಿಡ ಮುನ್ನೇಟ್ರ ಕಳಗಮಿನ ಬಂಡವಾಳ, ಆದರೆ ಸ್ವತಂತ್ರ ಪಾರ್ಟಿ ಹಾಗಲ್ಲ. ಶಾಲೆಗಳಲ್ಲಿ ಹಿಂದಿ ಭಾಷೆಯನ್ನು ಕಡ್ಡಾಯವಾಗಿ ಕಲಿಸಲು ಏರ್ಪಾಡು ಮಾಡಿಸಿದವರೇ ಅಂದು ಮದ್ರಾಸಿನಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಚಕ್ರವರ್ತಿ ರಾಜಗೋಪಾಲಾಚಾರಿಯವರು. ಅದಕ್ಕೆ ಆಗ ಎದುರು ಬಂದವರು ತಿರು ರಾಮಸ್ವಾಮಿ ನಾಯ್ಕರ್ ಹಾಗೂ ತಿರು ಕಾಮರಾಜ ನಾಡಾರರು. ಇಂದು ಹಿಂದಿ ವಿರೋಧಿಸುವವರನ್ನು ವಿರೋಧಿಸುತ್ತಿದ್ದಾರೆ ತಿರು ರಾಮಸ್ವಾಮಿ ನಾಯ್ಕರ್‌ರವರು. ಹಿಂದಿಯತ್ತ ತಿರು ಕಾಮರಾಜರ ಅಭಿಪ್ರಾಯ ಹೇಗಿದ್ದರೂ ಅವರಿಂದು ಕಾಂಗ್ರೆಸ್ಸಿನ ಅಧ್ಯಕ್ಷರಿಂದ್ದಾರೆ. ಕಾಂಗ್ರೆಸ್ ಕಳೇಬರದ ಸಂಸ್ಕಾರಕ್ಕಾಗಿಯೇ ಇರುವ ಆಚಾರ್ಯ ತಾನೆಂದು ಶ್ರೀ ರಾಜಾಜಿಯವರೇ ಹೇಳುತ್ತಿದ್ದಾರೆ. ಹಾಗಿರುವಾಗ ಆಚಾರ್ಯರು ಸಂದರ್ಭವನ್ನು ಕಳೆದುಕೊಂಡಾರೆ? ಉರಿಯುತ್ತಿದ್ದ ಬೆಂಕಿಗೆ ಅವರು ಸೀಮೆ ಎಣ್ಣೆ ಅಲ್ಲ ಪೆಟ್ರೋಲೇ ಸುರಿದರು.

ಹಿಂದಿ ವ್ಯಾವಹಾರಿಕ ಭಾಷೆಯಾಗುವುದರಿಂದ ಮುಸ್ಲಿಮರಿಗೇನಾದರೂ ಭಾಧಕ ಇದೆಯೇ? ಏನೂ ಇಲ್ಲ. ಪ್ರಯೋಜನವೇ ಜಾಸ್ತಿ. ಹಾಗಿದ್ದರೂ ಮುಸ್ಲಿಂ ಲೀಗ್ ಏಕೆ ವಿರೋಧಿಸಿದ್ದಿತು? ಅವರ ಪ್ರವಾದಿ ಮುಹಮ್ಮದನ ಭಾಷೆ ಹಿಂದಿ ಅಲ್ಲ. ಹಾಗಿರುವಾಗ ಅದನ್ನು ಪುರಸ್ಕರಿಸಲು ಸಾಧ್ಯವೇ? ಅರೇಬಿಕ್ ಭಾಷೆಯೊಂದೇ ವ್ಯಾವಹಾರಿಕ ಭಾಷೆಯಾಗಬೇಕು! ಹಾಗಿದ್ದರೂ ಹಿಂದಿಯ ಹೆಸರಿನಲ್ಲಿ ಘಾತುಕರು ಊರನ್ನೇ ಸೂರೆ ಮಾಡುತ್ತಿದ್ದರೂ, ಸುಡುತ್ತಿದ್ದರೂ ಸ್ಟಾರ್ ಹಾಗೂ ಅಶೋಕ್ ಚಿತ್ರ ಮಂದಿರಗಳಲ್ಲಿ ಹಿಂದಿ ಚಲಚಿತ್ರ ಪ್ರದರ್ಶನಕ್ಕೆ ಯಾವ ಅಡ್ಡಿಯೂ ಇರಲಿಲ್ಲ. ಇತರ ಚಿತ್ರ ಮಂದಿರಗಳಲ್ಲಿದ್ದ ಹಿಂದಿ ಚಲಚಿತ್ರ ಪ್ರದರ್ಶನದೆದುರು ಹಿಂದಿ ವಿರೋಧಿಗಳು ಪ್ರದರ್ಶನ ನಡೆಸಿದ್ದರು. ಈ ಎರಡು ಮಂದಿರಗಳ ಮುಂದೇಕೆ ಪ್ರದರ್ಶನ ನಡೆಸಲಿಲ್ಲ? ಆ ಮಂದಿರಗಳ ಮಾಲಿಕರ್ಯಾರು? ಆ ಮಂದಿರಗಳ ಸುತ್ತ ಇರುವ ಜನರ್ಯಾರು? ಇಷ್ಟರಲ್ಲಿಯೇ ಗೊತ್ತಾಗಿರಬಹುದು.

ದ್ರಾವಿಡ ಮುನ್ನೇಟ್ರ ಕಳಗಮಿನವರಿಗೆ ಹಿಂದಿ ಉತ್ತರದ ಭಾಷೆ ಹಾಗೂ ಆರ್ಯರ ಭಾಷೆ ಇದೆ. ಅದನ್ನವರು ಸಹಿಸಿಕೊಂಡಾರೇ? ಅಲ್ಲದೆ ಜನವರಿ ಇಪ್ಪತ್ತಾರು, ಆಗೋಸ್ಟ್ ಹದಿನೈದು... ಅವರ ಪಾಲಿಗೆ ಒಳ್ಳೆಯ ದಿನಗಳಲ್ಲ! ಅವು ಪ್ರತ್ಯೇಕ ತಮಿಳುನಾಡು ಅಥವಾ ದ್ರಾವಿಡ ನಾಡಾಗಿರುವ ದಿನಗಳಲ್ಲ! ಹಾಗೆಯೇ ತ್ರಿರಂಗಿಯೂ ಅವರಿಗೆ ಬೇಡವಾದ ಬಾವುಟ ಇದೆ. ದ್ರಾವಿಡ ಮುನ್ನೇಟ್ರ ಕಳಗಮಿನ ಸದಸ್ಯರು ನಗರ ಸಭಾಧ್ಯಕ್ಷರಾಗಿರುವಲ್ಲೆಲ್ಲಾ ಅವರು ಜನವರಿ ಇಪ್ಪತ್ತಾರರಂದು ಅಥವಾ ಆಗೋಸ್ಟ್ ಹದಿನೈದರಂದು ಧ್ವಜ ಹಾರಿಸಲು ನಿಲ್ಲದೆ ಬೇರೆಲ್ಲಿಗಾದರೂ ಹೋಗಿ ಬಿಡುತ್ತಾರೆ. ಹಾಗಿರುವದರಿಂದ ೧೯೬೫ರ ಜನವರಿ ಇಪ್ಪತ್ತಾರು ಅವರ ಪಾಲಿಗೆ ವಿಶೇಷದ ದಿನವಾಗಿತ್ತು. ಒಂದೇ ಕಲ್ಲಿನಿಂದ ಮೂರು ಹಣ್ಣು ಉದುರಿಸಲು ಅಂದು ಆವರೆದ್ದು ನಿಂತರು. ಒಂದು, ಹಿಂದಿಯನ್ನು ವಿರೋಧಿಸುವದು; ಎರಡು, ಜನವರಿ ಇಪ್ಪತ್ತಾರನ್ನು ಕಪ್ಪುದಿನವೆಂದು ಆಚರಿಸುವುದು;

(ಇಪ್ಪತ್ತೊಂಭತ್ತನೇ ಪುಟ ನೋಡಿರಿ)

SRINIVAS BROTHERS

CAR STREET POST BOX NO. 130

MANGALORE-1

Phone: 3449 Grams: ACTIVE

Distributors for Mysore State

M/s Seshasayee Paper & Boards Ltd.,

PALLIPALAYAM

Agents for South Kanara

1. Bamboo Brand Papers
2. Jba Printing Inks
3. Bril Ink
4. Jaykay Typewriters

SRINIVAS BROTHERS

MANGALORE-1

ನಮ್ಮ ವಜ್ರಮಹೋತ್ಸವದ ವರುಷ-1966

ಠೇವಣಾತಿಗಳು........ ಆಕರ್ಷಕ ಬಡ್ಡಿ ದರಗಳು

ಜೀವನದ ವೆಚ್ಚವು ದಿನೇ ದಿನೇ ಹೆಚ್ಚುತ್ತಲಿದ್ದರೂ, ಕಷ್ಟಪಟ್ಟು ಉಳಿಸಿದ ನಿಮ್ಮ ಉಳಿತಾಯಕ್ಕೆ — ಅಗತ್ಯವಿರುವ ಸುರಕ್ಷಿತತೆ ಮತ್ತು ಭದ್ರತೆಗಳೊಂದಿಗೆ ಅತ್ಯಾಕರ್ಷಕ ದರದಲ್ಲಿ ಬಡ್ಡಿ ಕೊಟ್ಟು ನಿಮ್ಮನ್ನು ಸಂತುಷ್ಟರಾಗಿ ಮಾಡಲು

ನಿಮ್ಮ ಠೇವಣಾತಿಗಳನ್ನು

ಕೊರ್ಪೊರೇಶನ್ ಬ್ಯಾಂಕ್

ಈ ಕೆಳಗಣ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸುತ್ತದೆ.

		ಸಾಲಿಯಾನ್ ಶೇಕಡಾ
91 ದಿನಗಳಿಂದ 5 ವರ್ಷಗಳ (ಕೆಳಗೆ ವಿವಿಧಾವಧಿಗಳಿಗೆ)	$5\frac{1}{4}$ ರಿಂದ 7	
5 ವರ್ಷಗಳಿಂದ 7 ವರ್ಷಗಳ ವರೆಗೆ	—	$7\frac{1}{2}$
ಸೇವಿಂಗ್ಸ್ ಬ್ಯಾಂಕು ಎಕೌಂಟುಗಳ ಮೇಲೆ	—	4

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿ.,

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ.

ಆಡಳಿತ ಆಫೀಸು: ಮಂಗಳೂರು.

ಶ್ರೀ ಎಂ. ರಂಗರಾವ್, ಮದ್ರಾಸು

ಈಗ ಬೆಳೆದು ಬಂದಿರುವ ಕಾರ್ಡಿಂಗ್ ಪದ್ಧತಿ, ಅದರಿಂದ ದೊರೆಯುತ್ತಿರುವ ಆವಶ್ಯಕ ಪದಾರ್ಥಗಳ ಗುಣಗಳು, ಅವನ್ನು ಪಡೆಯಲು ಮಾಡುವ ಕ್ಯೂ ಲೈನ್........ ಹೀಗೆ ಎಲ್ಲವೂ ಸಮಾನತೆಯ ಯುಗಾರಂಭದ ಕುರುಹುಗಳು ಇವನ್ನು ಪ್ರಗತಿಶೀಲರು ಪ್ರಗತಿಯ ಲಕ್ಷಣವೆನ್ನದಿರುವರೆ?

ಪ್ರಗತಿಯ ಲಕ್ಷಣ

(ವಿಡಂಬನಾತ್ಮಕ)

ಕಳೆದ ವರ್ಷದ ಕೊನೇಭಾಗದಲ್ಲಿ ಒಮ್ಮಿಂದೊಮ್ಮೆಗೇ ಮಂತ್ರ ಹಾಕಿದ ಹಾಗೆ ಅಕ್ಕಿಯೆಲ್ಲಾ ಮಟಮಾಯವಾಗಿ ದೇಶಕ್ಕೆ ದೇಶವೇ "ಅನ್ನ ಅನ್ನ" ಎಂದು ಅರಚಿಕೊಂಡಾಗ,

ದೊಡ್ಡ ದೊಡ್ಡ ಹುದ್ದೆದಾರರಿಂದ ಹಿಡಿದು ಕೂಲೀಕಾರರ ವರೆಗೆ ಭಿಕ್ಷುಕರ ಹಾಗೆ "ಅಕ್ಕಿ ಅಕ್ಕಿ" ಅಂತ ಎಲ್ಲರೂ ಏಕನಾದದಿಂದ ಕೂಗಾಡಿದಾಗ, ಧಾನ್ಯದ ಲಾರಿಗಳ, ಗಾಡಿಗಳ ಲೂಟಿ, ದೊಂಬಿ, ಸೂರೆ, ವಿನಿಮಯಗಳು ಅಲ್ಲಿ ಇಲ್ಲಿ ನಡೆಯಿತೆಂಬ ಸುದ್ದಿ ಬಂದಾಗ,

ಸರ್ಕಾರವು ಗಡಿಬಿಡಿಕೊಂಡು ಅದಕ್ಕಾಗಿ ಪ್ರತ್ಯೇಕ ತಲೆಗಳನ್ನು ಕೊಟ್ಟು ತಂತಿಗಳನ್ನು ಕಳುಹಿಸಿ, ವಿಮಾನಗಳನ್ನು ಹಾರಿಸಿ ಹೇಗಾದರೂ ಸಮಾಳಿಸಿಕೊಳ್ಳಬೇಕಾದ ಇದೊಂದು 'ಒಳ ತುರ್ತು ಪರಿಸ್ಥಿತಿ' ಬಂದಾಗ,

ಈಗ ಹಲವು ಕಡೆಗಳಲ್ಲಿ ಬಂದಿರುವ ರೇಷನಿಂಗಿನ "ತಮ್ಮ" ಫ್ಯಾಮಿಲೀ ಕಾರ್ಡಿಂಗ್ ಎಂಬವನ ಪದ್ಧತಿ ಪ್ರಾರಂಭವಾಗುವ ಮೊದಲು, ಆ ಸಂಧಿಕಾಲದಲ್ಲಿ ಪ್ರಸವ ವೇದನೆಯಂತಹ ಕ್ಷುತ್ತಿನ ನೋವಿನಿಂದ ಹೇಗೆ ಒತ್ತಾಡಿ ಹೋದರು ಪ್ರಜೆಗಳು? ಹೇಗಾಯಿತು ದೇಶ? ಹೇಗಾಯಿತು ನಗರ?

ಆ ಚಿತ್ರಗಳನ್ನೆಲ್ಲ ಚರಿತ್ರೆಯಲ್ಲಿ ಮೂಡಿಸುವುದು ಅವಮಾನಕರವಾದರೂ, ಈ ಪರಂಪರೆಯವರು ಸಾಯುವ ವರೆಗಾದರೂ ಅದನ್ನು ಮರೆಯಲು ಸಾಧ್ಯವಿಲ್ಲ.

ಯಾವುದೋ ಅಂಗಡಿಗೆ ಎಂಥದೋ ನಾಲ್ಕು ಮೂಟೆ ಬಂತಂತೆ, ಗಾಳೀವಾರ್ತೆ ಕೇಳಿದ ಕೂಡಲೇ, ಆ ಅಂಗಡಿ ತೆರೆಯುವ ಹನ್ನೆರಡು ಗಂಟೆಗಳ ಮೊದಲೇ ಕ್ಯೂ ಲೈನಿನ ಪ್ರಾರಂಭ. ಅದೊಂದು ಅನ್ನ ತಪಸ್ಸಿನ ಪದ್ಧತಿ. ದೀಪಾವಳಿ ಹಬ್ಬದ ಮುಂಜಾವಿನಲ್ಲಿಯೂ, ಕೆಲವೆಡೆ ಸುಂಪ ಜಡಿಮಳೆ ಬಿರುಗಾಳಿ ಕಡುಚಳಿಗಳಲ್ಲಿಯೂ ಆ ತಪಸ್ಸು ಭಗ್ನವಾದುದಿಲ್ಲ.

ತಪಸ್ಸೆಂದರೆ ಅದನ್ನು ಕೆಡಿಸಲು ಎಷ್ಟು ಪರೀಕ್ಷೆಗಳಿಲ್ಲ—ಪುರಾಣಗಳಲ್ಲಿ?-ಹಾಗೆ,

ಹುಡುಗರು ಶಾಲೆಗಳಿಗೆ ತಡವಾಗಿ ಹೋದರು. ಅವರಿಗಿಂತ ತಡವಾಗಿ ಮಾಸ್ತರುಗಳು ಶಾಲೆಗೆ ಬಂದರು. ಕೆಲವು ಕಡೆ ಶಾಲೆಗಳಿಗೆ ರಜೆ ಕೊಟ್ಟದ್ದೂ ಉಂಟು.

ಆಫೀಸರುಗಳೆಲ್ಲ ಕೊಪರೇಟಿವ್ ಸ್ಟೋರುಗಳಿಂದ ತಮ್ಮ ಪಾಲಿನ ಹೊಟ್ಟೆಯನ್ನು ಚೀಲದಲ್ಲಿ ಹೊತ್ತು ಕೊಂಡು ಮನೆಗೆ ಬರುವುದೊಂದು ವಾಡಿಕೆಯಾಯಿತು. ಕೂಲಿಯವನಿಗೂ ಅವನ ಹೊಟ್ಟೆಯ ಭಾರ ಹೊರಬೇಕಾಗಿರುವಾಗ ಕೂಲಿಯಾಳುಗಳು ಹೇಗೆ ಸಿಕ್ಕಿಯಾರು? ಎಲ್ಲರೂ ಸರಿಸಮಾನರು, ಜ್ಞಾನ ದೃಷ್ಟಿ ಹೇಳುವುದೂ ಇದೇ ತಾನೇ?

ಅದುವರೆಗೆ ಆಫೀಸಿನಿಂದ ಮನೆಗೆ ಬರುವಾಗ ಹೆಂಡತಿ ಕಾಫೀಟಿಫಿನು ರೆಡಿ ಮಾಡಿಟ್ಟಿರುತ್ತಿದ್ದರೆ, ಅದೆಲ್ಲ ತಾರುಮಾರಾಯಿತು. ಅಕ್ಕಿಯು ಹಾಗೆಯೇ ರವೆ ಸಕ್ಕರೆ ಮೊದಲಾದುವೂ ಕೋಪರೇಟಿವ್ ಸ್ಟೋರುಗಳ ಅಥವಾ ರೇಷನ್ನಿನ ಕ್ಯೂ ತಪಸ್ಸಿನ ಫಲಗಳಾದುದರಿಂದ, ರಾಯರು ಆಫೀಸಿನಿಂದ ಮನೆಗೆ ಬರುವಾಗ ತೂಗಾಡಿಸಿಕೊಂಡು ತರುವ ಪದಾರ್ಥಗಳ ಮೇಲಿಂದಲೇ ತಿಂಡಿ ತಯಾರಿಸಬೇಕಾಯಿತು. ನಮ್ಮಿಷ್ಟದಂತೆ ಆರಿಸಿ ಬೇಕಾದ ಬಗೆಯ ಧಾನ್ಯಗಳನ್ನು ಕೊಂಡು ಕೊಳ್ಳುವುದೂ ಇನ್ನು ಸಾಗದು. ಕಣ್ಣುಮುಚ್ಚಿ ಕೊಂಡು ಸ್ಟೋರುಗಾರ ಕೊಟ್ಟದನ್ನು ತೆಗೆದುಕೊಂಡರೆ ಸರಿ. ಚರ್ಚೆಯಿಲ್ಲ, ವಾಜ್ಯಕೆಲ್ಲ, ನಾಸ್ತಾತುರ್ಯವಿಲ್ಲ, ಏನೂ ಇಲ್ಲ.

ಹಿಂದೆ ನಾನು ವ್ಯಾಪಾರ ಮಾಡಿಕೊಂಡು ಬಂದರೆ, "ಹೆಚ್ಚು ದುಡ್ಡು ಕೊಟ್ಟೆಯಲ್ಲೋ ಪೆಂಗ! ವಾರ್ಜತು ಮಾಡ್ತಿದ್ರೆ ಇನ್ನೂ ಕಮ್ಮಿಗೆ ಸಿಕ್ತಿತ್ತು!" ಅಂತ ತಾಯಿ ನನಗೆ ಬಯ್ಯುತ್ತಿದ್ದಳು.

ಈಗ ಅದೆಲ್ಲ ಹಳೇ ಅನಾಗರಿಕ- ಪದ್ಧತಿ ಅಂತ ರುಜುವಾಯಿತಲ್ಲ! ಧಾನ್ಯಗಳಲ್ಲಿ ಒಳ್ಳೆಯದೂ ಕೆಟ್ಟದೂ ಊಹೂ ಸಾಚೂ ನೋಡುವುದೂ, ಚರ್ಚೆ ಮಾಡುವುದೂ ಒಂದು ದುರಭ್ಯಾಸದಂತೆ. ಮನುಷ್ಯರೂ ಅಂತ ಆದ ಮೇಲೆ ಎಲ್ಲರ ಹೊಟ್ಟೆಯೂ ಒಂದೇ ವಿಧ ತಾನೆ? ಸಮಾನತಾನೆ? ಒಬ್ಬರಹೊಟ್ಟೆಗೆ ಒಳ್ಳೇದು, ಒಬ್ಬರ ಹೊಟ್ಟೆಗೆ ಕೆಟ್ಟದು ಎಂಬ ಬೇಧ ಯಾಕೆ? ಅದಕ್ಕೇ ಯಾರೋ "ಇದನ್ನೇ ಕೊಂಡುಕೋ" "ಹೀಗೆ ಹೀಗೇ ತಿನ್ನು" "ಇಷ್ಟೇ ತಿನ್ನು" "ಇದನ್ನೂ ಸೇರಿಸಿ ತಿನ್ನು" ಅಂತ ಆಜ್ಞಾಪಿಸಿದ್ದನ್ನೇ ತಿನ್ನುವ, ಅಭ್ಯಾಸವೊಂದು ನಮಗೆ ದೊರೆತ ವರಪ್ರಸಾದವಾಯಿತು. ಸ್ವಂತ ರುಚಿ ಅಂತ ಇನ್ನು ಯಾವುದೂ ಇಲ್ಲ. ಅದಕ್ಕೇ ಪೂರ್ವಿಕರು ಹೇಳಿದ್ದಾರೆ— "ನನ್ನದು ಎಂಬುದೆಲ್ಲಾ ಭ್ರಮೆ, ಸುಳ್ಳು; ಎಲ್ಲರೂ ಯಾರದೋ ಎಂಥದೋ!" ಅಂತ. ಈ ಮಾತಿನ ಸತ್ಯವೇ ಪ್ರಬಲವಾದುದರಿಂದಲೇ ಊಚಾದ ಸಣ್ಣಕ್ಕಿಯನ್ನೇ ಉಣ್ಣುವವರು ಕೂಡಾ ಯಾವುದೋ ಅಕ್ಕಿ ಎಂಬುದನ್ನೇ ಪರಮಾನ್ನವೆಂದು ಭಾವಿಸಿ ಕಣ್ಣುಮುಚ್ಚಿ ನುಂಗಿ ತೃಪ್ತರಾಗುವಂತಾಯಿತು.

o o o

ಇನ್ನೊಂದು ತಮಾಷೆ ಗಮನಿಸಿದಿರಾ? ಈ ಧಾನ್ಯಗಳ ಮಾಯದ ಮುಂಚೆ ಜನರೆಲ್ಲ ಏನೆಂದರು? ಅಕ್ಕಿಗಳು ಅಂಗಡಿಗಳಲ್ಲೆಲ್ಲ ತುಂಬಿದಾಗ "ಬೆಲೆಯೇರಿತು ಬೆಲೆಯೇರಿತು" ಎಂದು ಕೂಗಾಡಿದರು. ಆಗ ಇದ್ದ ಬೆಲೆಗಿಂತ ಈಗ ನ್ಯಾಯ ನಿರ್ದಿಷ್ಟ ಬೆಲೆಯೇ ಹೆಚ್ಚಾಗಿರುವುದನ್ನು ಬಹಳ ಚೀಪ್, ಬಹಳ ಸೋವಿ, ಅಗ್ಗ ಎನ್ನುತ್ತಾರೆ. ಇದೇ ಮಾತನ್ನು ಬೇರೆ ಬೇರೆ ಬಗೆಗಳ ಅಕ್ಕಿಗೂ ಹೊಂದಿಸಿ ನೋಡಿದರೆ ಕಾಣುವುದೇನು? ಆಗ ಬೆಲೆಯೇರಿಕೆ ಎಂದು ತೋರಿದ್ದೇ ಈಗ ನ್ಯಾಯದ ಬೆಲೆಯೆಂದೂ ಅಗ್ಗವೆಂದೂ ತೋರುವ ಹಾಗಾಯಿತು. ಎಂಥಾ ವ್ಯಾಪಾರೀ ಚಮತ್ಕಾರವೋ! ತಿಮ್ಮರಸನ ತಂತ್ರ! ದೊಡ್ಡದಾಗಿ ಕಂಡ ಗೆರೆಯನ್ನು ಮುಟ್ಟದೆಯೇ ಅದನ್ನು ಚಿಕ್ಕದು ಮಾಡಿದನಂತೆ. ತಿಮ್ಮರಸು—ಪಕ್ಕದಲ್ಲೇ ಅದಕ್ಕಿಂತ ದೊಡ್ಡ ಇನ್ನೊಂದು ಗೆರೆಯನ್ನೆಳೆದು!

ಧಾನ್ಯದ ಪೇಟೆಯ ಆ ಇನ್ನೊಂದು ಗೆರೆಯಾವುದು? ಅದೇ ಕಾಳಸಂತೆ. ಅದಕ್ಕೆ ಪ್ರೋತ್ಸಾಹ ಕೊಡುವವರು ರೇಷನಿಂಗ್ ಪದ್ಧತಿಗೆ ತಮ್ಮನ್ನು ಒಳಪಡಿಸಿಕೊಳ್ಳಲು ಒಪ್ಪಿಕೊಳ್ಳದ, ಅಭ್ಯಾಸಕ್ಕೆ ಮೈಬಗ್ಗದ, ಬಗ್ಗಿಸಲೊಲ್ಲದ ಹಟಮಾರಿ ಮೊಂಡು ಜನರೇ. ಅವರು ಗೋಳಿಡುತ್ತಾ ಕಾಳ ಪೇಟೆಯಲ್ಲಿ ಹುಡುಕಾಡುವಾಗ ಕಾಳಸಂತೆಯವರು ನ್ಯಾಯವನ್ನೇ ಹೇಳುತ್ತಾರೆ, "ಜನರು ಅನ್ನನ್ನ ಅಂತ ಬಾಯಿ ಬಾಯಿ ಬಿಟ್ಟು ಕಾಲಿಗೆ ಬೀಳುತ್ತಾರೆ. ನಾ

(ಇಪ್ಪತ್ತೆಂಟನೇ ಪುಟ ನೋಡಿ)

Phone No. 3469 Estd. 1914 Grams: 'CENCOBANK,

THE SOUTH CANARA CENTRAL COOPERATIVE BANK LTD.,

KODIALBAIL. MANGALORE-3.

Branches: **At Puttur and Coondapoor**

Keep all your surplus funds in this Bank to assist Agriculture and Agro-Industries to build Nation's Economy.

		Rs.
1.	Share Capital	16.71 Lakhs
2.	Reserves	7.53 Lakhs
3.	Deposits	95.86 Lakhs
4.	Working Capital	173.05 Lakhs

We offer attractive rates of Interest on Fixed Deposit upto 7% for 4 years and above.

B. Narayana Nayak, Vice-President

B. Prabhakar Rao, M.A., B.L., President.

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್

ಸಹಕಾರದಲ್ಲಿ ಸತ್ಯಂ, ಶಿವಂ, ಸುಂದರಂ

ಭಾರತೀಯ ಸಂಸ್ಕೃತಿಯ ಉಗಮಭೂಮಿಯೇ ಸಹಕಾರ ತತ್ವೋದಯ ವೂ ಆಗಿದೆ. ಸತ್ಯಂ ಶಿವಂ ಸುಂದರಂ—ಇದೇ ಸಹಕಾರದ ಭದ್ರ ಬುನಾದಿ. ನಮ್ಮ ಗ್ರಾಮ ಪುನಾರಚನಾ ಕಾರ್ಯದಲ್ಲಿ ಸಹಕಾರ ತತ್ವವು ಮಹತ್ವದ ಪಾತ್ರ ವಹಿಸಬೇಕಾಗಿದೆ. ಇದಕ್ಕಾಗಿ ಪರಿಶ್ರಮಿಸುವುದು ಎಲ್ಲರ ಕರ್ತವ್ಯ.

ಜಗತ್ತಿನ ಜೀವನೋತ್ಸಾಹವು ಸಹಕಾರ ತತ್ವದ ತಳಹದಿಯ ಮೇಲೆ ನಿಂತಿದೆ. ಜಗತ್ತು ಸಹಕಾರ ಎಂಬ ನೌಕೆಯನ್ನೇರಿ ಪಯಣಿಗನಾಗಿ, ಈ ಭವ ಸಾಗರವನ್ನು ದಾಟುತ್ತಿದೆ. ಸಹಕಾರ ನೌಕೆಯ ಮೂಲಕ ಹೀಗೆ ಪಯಣಿಸುತ್ತಿರುವ ಜಗತ್ತು ತನ್ನ ಈ ಪ್ರಯಾಣದಲ್ಲಿ ಅನೇಕ ಎಡರು ತೊಡರುಗಳನ್ನು ಎದುರಿಸುತ್ತಲೇ ವಿಕಾಸದ ಪಥದಲ್ಲಿ ಸಾಗಿದೆ; ಸಾಗುತ್ತಿದೆ! ಇದು ಜಗತ್ತಿನ ಅಂತ್ಯವಿಲ್ಲದ ಅನಂತ ಪ್ರಯಾಣ! ಇದೇ ಜೀವನ!

ನಮ್ಮ ಪೂರ್ವಜರು ನಡೆದು ಬಂದ ದಾರಿಯಲ್ಲೇ ನಾವೂ ಮುಂದುವರಿಯುತ್ತೇವೆ. ನಮ್ಮ ಮುಂದಿನವರೂ ಸ್ವಲ್ಪ ಸುಧಾರಣೆಗೊಂಡರೂ ಅದೇ ದಾರಿಯಲ್ಲೇ ಮುಂದುವರಿಯುತ್ತಾರೆ. ನಶ್ವರವಾದ ದೇಹ ಅಳಿದರೂ, ಅಮರವಾದ ಆತ್ಮ ಮತ್ತದರ ಪಥ ಉಜ್ವಲವಾಗಿಯೇ ಇರುತ್ತದೆ. ಅದು ದಿನೇ ದಿನೇ ವಿಕಾಸಗೊಳ್ಳುತ್ತಲೇ ಇರುತ್ತದೆ. ಇದನ್ನೇ ಮಾನವನ—ಜಗತ್ತಿನ ಜೀವನೋತ್ಸಾಹವೆಂದು ಹೇಳುತ್ತಾರೆ. ಈ ಜೀವನೋತ್ಸಾಹವು ಸಹಕಾರ ತತ್ವದ ಮೇಲೆಯೇ ಭದ್ರವಾಗಿ ನಿಂತಿದೆ! ಹೀಗಲ್ಲದಿರುತ್ತಿದ್ದರೆ, ಸಾವಿರಾರು ವರ್ಷಗಳ ಹಿಂದಿನ, ನಮ್ಮ ಸಂಸ್ಕೃತಿ, ಇಂದೂ ನಮ್ಮ ಮುಂದಿರುತ್ತಿತ್ತೇ? ನೂರಾರು ವರ್ಷಗಳ ಹಿಂದೆ ಕಟ್ಟಿದ ಸಂಘ-ಸಂಸ್ಥೆಗಳ ವಿಕಾಸಹೊಂದಿದ ಬೃಹದ್ರೂಪವನ್ನು ನಾವಿಂದು ನೋಡುತ್ತಿದ್ದೆವೇ? ನಮ್ಮ ಪೂರ್ವಜರು ಗಳಿಸಿದ ಕೀರ್ತಿ, ಕಟ್ಟಿದ ರಾಜ್ಯ, ಬೆಳಗಿಸಿದ ಚಾರಿತ್ರ್ಯ, ನೀಡಿದ ಸಹಕಾರ, ತೋರಿಸಿದ ಪೌರುಷ, ಇದೆಲ್ಲವೂ ಪರಂಪರಾಗತವಾಗಿ ಬಂದಿವೆ. ಮತ್ತು ಸಹಕಾರ ತತ್ವದಿಂದಲೇ ರೂಪುಗೊಂಡಿವೆ. ಇದು ಮುಂದೆಯೂ ಇದೇ ತತ್ವದ ಪಂಚಾಂಗದ ಮೇಲೆ ಉಳಿಯುವಂತಹುವಾಗಿದೆ. ಸಹಕಾರ ತತ್ವದ ಪ್ರಾಚೀನೇತಿಹಾಸಕ್ಕೆ, ಇದಕ್ಕಿಂತ ಹೆಚ್ಚಿನ ಆಧಾರವೇನು ಬೇಕು? ನಮ್ಮ ದೃಷ್ಟಿಯನ್ನು ಇತಿಹಾಸದ ಕಡೆಗೆ ಹೊರಳಿಸಿದರೆ ಆಗ ನಾವು ಇದನ್ನು ಕಾಣುತ್ತೇವೆ:—

ಮೊದಲು ಕ್ರಾಂತಿ! ಆ ಬಳಿಕ ಶಾಂತಿ! ಮೊದಲು ಅಪಕಾರ! ಮತ್ತೆ ಉಪಕಾರ! ಮೊದಲು ಅಸಹಕಾರ! ಮತ್ತೆ ಸಹಕಾರ! ಇದು ಸಂಘರ್ಷಮಯ ಜೀವನದ ಒಂದು ಚಳವಳಿ!

ದ್ರಾವಿಡರ ರಾಜ್ಯದಲ್ಲಿ ಆರ್ಯರು ಪ್ರವೇಶಿಸಿದರು. ಅವರೊಳಗೆ ಪರಸ್ಪರ ಘರ್ಷಣೆಯೇ ನಡೆಯಿತು. ಕ್ರಾಂತಿಯೇ ನಡೆದು ಹೋಯಿತು. ಆದರೆ ಆ ಬಳಿಕ ಶಾಂತಿ ಸ್ಥಾಪನೆಯೂ ಆಯಿತು. ಮೊದಲು ಪರಸ್ಪರ ಅಸಹಕಾರವೇ ಕಾಣಿಸಿಕೊಂಡಿತಾದರೂ ಮತ್ತೆ ಸಹಕಾರ ತತ್ವವೇ ಗೆದ್ದಿತು! ಆರ್ಯ ದ್ರಾವಿಡರೊಳಗೆ ಪರಸ್ಪರ ಸಹಕಾರವುಂಟಾಗಿ ಮಧುರ ಬಾಂಧವ್ಯ ಬೆಳಗಿತು! ಆರ್ಯ ದ್ರಾವಿಡ ಸಂಸ್ಕೃತಿಗಳ ಮಿಲನವಾಗಿ ಪರಸ್ಪರ ಸಂಘ ಸಂಸ್ಥೆಗಳ ಉದಯವಾಯಿತು. ಕಾಡು ನಾಡಾಗಿ ಬೆಳಗಿತು! ಮರುಭೂಮಿ ಕೃಷಿಯಿಂದ ಕಂಗೊಳಿಸಿತು. ಗ್ರಾಮರಾಜ್ಯ, ಪಶುಪಾಲನೆ, ಸಹಕಾರೀ ಬೇಸಾಯ, ಇತ್ಯಾದಿ ಪ್ರಾರಂಭವಾಯಿತು. ಇದು ಭಾರತದ ಸಹಕಾರೀ ತತ್ವದ ಪ್ರಾಚೀನ ಭವ್ಯೇತಿಹಾಸ! ಈ ಭವ್ಯೇತಿಹಾಸದ ಕಡೆಗೆ ನಾವು ಕನ್ನಡಿಯನ್ನು ಹಿಡಿದರೆ, ಅದರ—ಭವ್ಯರೂಪ ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಅದನ್ನು ನೋಡುವಾಗ ನಾವು ಇಂದು ಹೆಮ್ಮೆಪಟ್ಟು ಕೊಳ್ಳುವ ಬದಲು ನಾಚಿಕೊಳ್ಳುವುದೇ ಲೇಸು! ಏಕೆ?....

ಅಂದು ಗ್ರಾಮ ಗ್ರಾಮಗಳೇ ಸಹಕಾರದ ಕೇಂದ್ರಗಳಾಗಿ ಅಭಿವೃದ್ಧಿಯನ್ನು ಸಾಧಿಸಿದ್ದರೆ, ಇಂದು ಪರಸ್ಪರ ಗ್ರಾಮಗಳ ಸಹಕಾರವಿರಲಿ, ಒಂದು ಕುಟುಂಬದೊಳಗೇ ಪರಸ್ಪರ ಸಹಕಾರಕ್ಕಿಂತ ಅಸಹಕಾರವೇ ಒಂದಂಶ ಹೆಚ್ಚಾಗಿ ಕಾಣಿಸುತ್ತಿದೆ. ಹಿಂದಿನ ಒಂದು ಕುಟುಂಬವೆಂದರೆ, ಒಂದೇ ಮನೆಯಲ್ಲಿ ಪರಸ್ಪರ ಸಹಕಾರದಿಂದ ವಾಸಿಸುವ ನೂರಾರು ಜನರ ಒಂದು ಗುಂಪು! ಈ ಗುಂಪಿನಲ್ಲಿ 'ತನ್ನ

(ಇಪ್ಪತ್ತೆಳನೇ ಪುಟ ನೋಡಿರಿ)

In the tradition of the famous "CANARA" Springs.

now another excellent product:

'CANARA BRAKE DRUMS'

for all popular vehicles:

They are made from quality material, modern machines and with rigid quality control under watchful eyes of a modern laboratory. These drums matching the best of the International makes are made to suit Indian Road Conditions incorporating experience gained by lengthy practical road tests.

THE CANARA WORKSHOPS LIMITED

MANGALORE-3.

ಆದಿತ್ಯ ಪುರಾಣದ ಶ್ರೀರಾಮನ ಕಥೆಯಲ್ಲಿ

ಭರತನ ಪಾತ್ರ ವೈಶಿಷ್ಟ್ಯ

ಶ್ರೀ ಕೆ. ವೆಂಕಟರಾಯಾಚಾರ್ಯ

ಶತಕೋಟಿ ರಾಮಾಯಣಗಳಿವೆಯೆಂದು ನಂಬಿಕೆ. ಭಾರತೀಯರನೂ ರಾಮಾಯಣದ ಭಾರದಲ್ಲಿ ತಿಣಕಿದನಂತೆ. 'ಆದಿತ್ಯ ಪುರಾಣ'ವೂ ಈ ರಾಮಾಯಣಗಳಲ್ಲಿ ಒಂದಾಗಿರಬಹುದು. ಸುಮಾರು ೪೦೦ ವರ್ಷಗಳ ಹಿಂದೆ ಬರೆದ ಈ ಕೃತಿಯಲ್ಲಿ ಭರತನ ಪಾತ್ರಕ್ಕೆ ಕವಿ ಕಳೆಯೇರಿಸಿದ್ದಾನೆ.

ಕನ್ನಡ ಸಾಹಿತ್ಯ ಭಂಡಾರದಲ್ಲಿ ಸ್ವತಂತ್ರ ಕೃತಿಗಳು ಅನುವಾದ ಕೃತಿಗಳು ಆಧಾರಿತ ಕೃತಿಗಳೆಂದು ಮೊದಲಾದ ನಾನಾ ವಿಧದವು ಒಳಗೊಂಡಿವೆ. ಅಂತೆ, ವೇದಾಂತ, ಜ್ಯೋತಿಷ್ಯ, ವೈದ್ಯ, ಶಾಸ್ತ್ರ-ಕಲೆಗಳು, ಕೀರ್ತನೆಗಳು ಮತ್ತು ಸಾಹಿತ್ಯ ಗ್ರಂಥಗಳೆಂದು ಮುಂತಾದ ವಿವಿಧ ರಂಗದವೂ ಇವೆ. ಇಪ್ಪತ್ತನೆಯ ಶತಕಕ್ಕಿಂತ ಹಿಂದಿನ ಕೃತಿಗಳನ್ನು ಕುರಿತು ಹೇಳುವುದಾದರೆ, ಸಾಹಿತ್ಯವೆಂದರೆ ಕಾವ್ಯಗಳು ನಾಟಕಗಳು ಪುರಾಣಗಳು ಹೆಚ್ಚಾಗಿ ಕಂಗೊಳಿಸುತ್ತವೆ. ಇಂದಿನ ಮುದ್ರಣ ಯುಗದಲ್ಲಿ ಇವುಗಳಲ್ಲಿ ಕೆಲವು ಕೃತಿ ರತ್ನಗಳು ಬೆಳಕುಗಂಡವು, ಇನ್ನೂ ಅಚ್ಚಿನ ಮೋರೆಯನ್ನೇ ಕಾಣದ ಹಲವಾರು ಅತ್ಯುತ್ತಮ ಕೃತಿಗಳು ಪುಸ್ತಕ ಭಂಡಾರಗಳಲ್ಲೋ, ಹಳ್ಳಿಗರ ಕಪಾಟು-ಅಟ್ಟಗಳಲ್ಲೋ ಒರಗಿವೆಯೆಂದರೆ ಸುಳ್ಳಾಗದು. ಪ್ರಸ್ತುತ ಆದಿತ್ಯ ಪುರಾಣವು ಅಂತಹ ಪುರಾಣ—ಸಾಹಿತ್ಯ ಕೃತಿಗಳಲ್ಲೊಂದು. ಇದರ ಕರ್ತೃವಿನ ವಿಚಾರ ಗ್ರಂಥಾಂತರಾಳದಲ್ಲಿ ಹೇಳಿಲ್ಲ. ಗ್ರಂಥದ ಕೊನೆಗೆ ಹೇಳಿದ ಪದ್ಯಗಳಿಂದ "ಕವಿರಾಜ ಕಂಠೀರವ"ನು ಇದನ್ನು ರಚಿಸಿದನೆಂದು ತಿಳಿಯುತ್ತದೆ. ಇದರಲ್ಲಿ "ವರ ತಪಸ್ತ್ರಯದೊಳಗೆ ದೀಕ್ಷೆಯನೊರೆದು ಮಂತ್ರಮುಪಿಂತಪೆಂದ ಧ್ವನಿಸಿ ನರಜನ್ಮವನು ಹರಮುಖವೆನಿಸಿ ಶಿವನೊಳಗೆ ಬೆರಸಿ ಹೆಮ್ಮನು ಮುಕ್ತಿಪದದೊಳಗಿರಿಸಿದ ಮಲಶೃಂಗಪುರ ಗುರುವರ ನಮೋ ಶ್ರೀ ರಾಮಚಂದ್ರ ಕೃಪಾಬ್ಧಿ ಸುಖಸಾಂದ್ರ"ವೆಂದರೆ, ಇವನು ಇಸ್ವಿ 1550ರ ವೇಳೆ ನವನೆಂದು ಹೇಳಬಹುದು. (ಕವಿ ಚರಿತೆಯಲ್ಲಿ 'ರಾಮಚಂದ್ರ ಗುರು ಶಿಷ್ಯ'ನೆಂದು ಇವನನ್ನು ಹೇಳಿದ್ದಾರೆ. ಇದರಲ್ಲಿ 'ಮುದಮಿಗುವೂಲಾದಿತ್ಯ ಪೌರಾಣದಲಿ ಸಾರವನುಳಿದ ಪೌರಾಣದ ಕಥಾಸಾರದಲಿ ಕೆಲವನ್ನು ಕೂಡಿ ಸಂಗ್ರಹಿಸಿ' ಬರೆದಿದೆಯಂತೆ! ಅಂದರೆ, ಈ ಕವಿಯು ಇದರಲ್ಲಿ ಹಲವು ಪುರಾಣಗಳ ಸಾರವನ್ನು ಒಳಗೊಂಡಿದ್ದಾನೆಂದರೆ ಬೇರೆ ಕೃತಿ ಬರೆದಿಲ್ಲವೆಂದೂ ತಿಳಿಯಬಹುದು. ಇಸ್ವಿ 1650ರ ಶಾಂತೇಶಲಿಂಗ ಗುರುವು ಬ್ರಹ್ಮೋತ್ತರ ಪುರಾಣದಿಂದ ಆರಿಸಿ 'ಶಿವ ಕಥಾಮೃತ ಸಾರ' ಬರೆದಿದ್ದಾನೆ. ಈ ಆದಿತ್ಯ ಪುರಾಣಕ್ಕೆ 'ಶಿವ ಕಥಾಮೃತ'ವೆಂದೂ ಈ ಕವಿಯೇ ಹೆಸರಿಸಿದ್ದಾನೆ. ಈತನನ್ನು ಅನುಸರಿಸಿ, ಅನಂತರ ಬರೆದ ಶಾಂತೇಶಲಿಂಗನು ತನ್ನ ಕೃತಿಗೆ ಆ ಹೆಸರಿಟ್ಟಿರಬಹುದೆಂದು ತೋರುತ್ತದೆ. ಸಾಧಾರಣ ಎರಡು ಸಾವಿರದ ಏಳುನೂರರ ಶತ್ಪದಿ ಸಂಖ್ಯೆಯಲ್ಲಿ ಭಾಮಿನಿ ಷಟ್ಪದಿಯಲ್ಲಿ ಬರೆದ ಇದರ ಪ್ರಥಮ ವಿಭಾಗದ ಸಂಗ್ರಹವು (18 ಸಂಧಿಗಳ ಸಂಗ್ರಹ) 1951ರಲ್ಲಿ ಬೆಂಗಳೂರು 'ಶರಣ ಸಾಹಿತ್ಯ' ಗ್ರಂಥ ಮಾಲೆಯಲ್ಲಿ ನನ್ನಿಂದ ಪ್ರಕಟವಾಗಿದೆ! ಮುಂದಿನ ವಿಭಾಗ ಪ್ರಕಟವಾಗಿಲ್ಲ. ಇದನ್ನು ಸಂಪೂರ್ಣ ಮೂಲಪ್ರತಿಯಂತೆ ಪ್ರಕಟಿಸುವುದಕ್ಕೆ ತುಸು ವ್ಯವಹಾರ ಮಾಡುತ್ತಿದೆಯೆಂದು ಮಾತ್ರ ಹೇಳಬಹುದು. ಈ ಲೇಖನದಲ್ಲಿ, ಇದರಲ್ಲಿ ಹೇಳಿದ ಶ್ರೀರಾಮನ ಕಥೆಯ ಒಂದೆರಡು ಘಟ್ಟಗಳ ಸುರಸತೆ – ವೈಶಿಷ್ಟ್ಯಗಳನ್ನು ತುಸು ವಿವರಿಸಲೆಳಸಿದ್ದೇನೆ. ಸ್ಥಾಲೀಪುಲಾಕ ನ್ಯಾಯದಿಂದ ಈ ಘಟನೆಗಳನ್ನು ಪರಿಶೀಲಿಸಿದರೆ ಈ ಕವಿಯ ಪದ ಪ್ರಯೋಗ ಚಾತುರ್ಯ ಹಾಗೂ ಕಲ್ಪನಾ ವೈಚಿತ್ರ್ಯಗಳು ತಿಳಿಯಲಾಗುತ್ತವೆಯೆಂಬುದೇ ಈ ಬರೆಹದ ಅಂತರ್ಯವಾಗಿದೆ.

ರಾಮಾಯಣದಲ್ಲಿ ಶ್ರೀರಾಮನ ಹೆಸರಿನೊಂದಿಗೆ ಲಕ್ಷ್ಮಣನ ಹೆಸರು ಸದಾ ಕೇಳಿಬರುತ್ತದೆ. ಅವರಿಬ್ಬರ ಅನ್ಯೋನ್ಯತೆ, ಅವಿಯುಕ್ತತೆಗಳೇ ಅದಕ್ಕೆ ಕಾರಣ—ಘಟಕಗಳಾಗಿವೆ. ಪರಂತು, ಶ್ರೀ ರಾಮನ ಜನನವಾದ ಮರುದಿನವೇ ಹುಟ್ಟಿದ ಭರತನು ಶ್ರೀ ರಾಮಾನುಜನೆಂದು ನಾವು ತುಸ ಮರೆಯುತ್ತೇವೆ. ಭರತನು ಮಾಡಿದ ಕಾರ್ಯಗಳ ವಿವರಗಳು ಹೆಚ್ಚು ಇಲ್ಲವಾದುದು ಇದಕ್ಕೊಂದು ನಿದಾನವಾಗಿದೆ. ಆದರೆ, ಶ್ರೀರಾಮನಲ್ಲಿ ತನಗಿದ್ದ ಭ್ರಾತೃ ಪ್ರೇಮದಿಂದ ಭರತನು ಮಾಡಿದ ಕಾರ್ಯವೇನು ಚಿಕ್ಕದಲ್ಲವೆಂದು ರಾಮಾಯಣ ವಾಚಕರಿಗೆ ತಿಳಿಯದುದಲ್ಲ. ವನವಾಸಕ್ಕೆ ಸಾಗಿದ ಶ್ರೀ ರಾಮನನ್ನು ಮರಳಿಸಬೇಕೆಂದು ಭರತನು ಸಪರಿವಾರನಾಗಿ ಶ್ರೀ ರಾಮನ ವಾಸದೆಡೆ ಗೈದಿದನು; ನಿನ್ನ ಬದಲು ನಾನೇ ವನದಲ್ಲಿರುವೆನೆಂದನು. ಇಂತು ತನಗೆ ದೊರಕಿದ ರಾಜ್ಯವನ್ನು ತೊರೆಯುವಂತಹ ಪರಮ ವಿರಾಗ ಮೂರ್ತಿಯು ಭಾರತ ದೇಶದ ಪ್ರಾಚೀನಾರ್ವಾಚೀನ ಚರಿತ್ರೆಯಲ್ಲಿ ಅತ್ಯಪೂರ್ವನೇ ಸೈ! ಪ್ರಕೃತ, ಭರತ- ಶ್ರೀ ರಾಮರುಗಳನ ಕಾಲದ ಒಂದು ವಿಶೇಷ ವಿಚಾರವನ್ನು ಉಲ್ಲೇಖಿಸಲೆಳಸಿದ್ದೇನೆ.

(ಅಸನೆಯ ಸಂಧಿ):

ಜನದ ಶೋಕಧ್ವನಿಯ ವಾದ್ಯ|
ಧ್ವನಿಗಳಾದವು, ಜನದ ಕಣ್ಣೀ |
ರೆನಿಪ ಹೊಳೆಗಳ ದಾಟುತೇಳುತ
ಮುಳುಗುತ್ತೈತರಲು||
ಘನತರದ ಧ್ವನಿಯೇನೆನುತ ರಾ
ಯನು ವಿಚಾರಿಸೆ ದೂತರು ಹಿದ
ರನುಜ ಭರತನ ಬರವನಾ
ದಶರಥನ ಮರಣವನು ||

ಆಗಮಿಸಿದ ಭರತಾದಿಯರನ್ನು ಇದಿರುಗೊಂಡು, ನಿಜ ಸಂಗತಿ ತಿಳಿದು, ಶ್ರೀ ರಾಮನು ದಶರಥನಿಗೆ ಆದಾಗಲೆ ಉತ್ತರಕ್ರಿಯೆಗಳನ್ನು ಮಾಡಿದನು. (ಯದನ್ನಃ ಪುರುಷೋ ಭವತಿ ತದನ್ನಾಸ್ತಸ್ಯ ದೇವತಾಃ-ಎಂಬುದು ವಾಲ್ಮೀಕಿಯ ಮಾತು. ಅಂತೆ ಕಾಡಿನಲ್ಲಿ ದೊರೆವ ವಸ್ತುಗಳಿಂದಲೇ ಶ್ರೀ ರಾಮನು ದಶರಥನಿಗೆ ಉತ್ತರಕ್ರಿಯೆ ಮಾಡಿದನೆಂದು ಹೇಳಿದೆ.)

ಮಾಡಿ ಸಂಸ್ಕಾರವನು ರಾಯಗೆ |
ಕೂಡೆ ಹೋದನಿಬರಿಗೆ ಶಾಸ್ತ್ರವ
ನೋಡಿ ಮರುದಿನ ಭರತನನು
ಕರೆತಂದ ನೀನಿನ್ನು||
ನಾಡ ಪಾಲಿಸು ನಡೆಯೆನಲು ವೈ |
ಗೂಡ ಬಿದ್ದನು ಪದಕೆ ನೀವಿದ|
ನಾಡುವರೆ ರಘುರಾಯ ಯೆಂದನು
ಭರತ ಕೈಮುಗಿದು||

ಭರತ:

ರವಿಯಿರಲು ತಾರೆಗಳು ಬೆಳಗುವೆ |
ಭುವನವನು ನೀವಿದ್ದು ತನಗೇ|
ಯುವನಿಯೊಡೆ ತನವೇಕೆ ಸ.ಡು
ತಾಯ್ ತಪ್ಪಿ ನುಡಿದಳದ ||
ಯುವತಿಯರಿಗವಿವೇಕವೆಂಬುದು !
ಭುವನ ಸಿದ್ಧವದಕ್ಕೆ ಬಹಳಾ |
ಟವಿಯೊಳಗೆ ನೀವ್ ತಿರುಗೆ
ರಾಜ್ಯವನಾಳ್ವನೇಯೆಂದ ||
ಧರಣಿಪತಿಯುಳಿವಿಲ್ಲವೆಂಬುದ |
ನರಿಯಿರೈಸಲೆ ಶೈವ ಮುನಿಸಿ |
ಸ್ಮರವನಾಡಿದನರಿತು ಜನನಿ
ಮಾತಿಗೊಳಗಾಗಿ ||
ಹೊರವಡಲು ಬಹುದೇ ಮಹೀಶನ |
ಮರಣ ದೊಡ್ಡಿತೊ, ಮಾರ್ಯ ಸತಿಯರ|
ಮರುಳು ದೊಡ್ಡಿತೊ. ನೀವ್ ವಿಚಾರಿಸ
ಬೇಡವೇಯೆಂದ ||

○ ○ ○ ○

ಅತ್ತ ಪೋಡೆನಲಾ ಸುದಾನಾ |
ಮುತ್ತಯನ ಪುರಕಾಗಿಯನುಜನು |
ಶತ್ರುಮರ್ದನ ಸಹಿತ ನಾನಿದ್ದಾಗ
ಲಿಂತಹುದೇ ||
ಹೆತ್ತತಾಯನ ತಿಳುಹೆನೇ ಭೂ |
ಪೋತ್ತಮಗೆ ಬಿನ್ನೈಸೆನೇ ನಿಮ |
ಗಿತ್ತ ಬರಹಹುದೇ ಶಿವಾ
ಯೆಂದೊರಲಿದನು ಭರತ ||

ರಾಮ:

ಎತ್ತಿದನು ಭರತನನು ರಘುರಾ |
ಜೋತ್ತಮನು ಕಂಬನಿಗಳಲಿ ನನೆ |
ಯುತ್ತ ತೆಗೆದಪ್ಪಿದನು ನೀನೆಂದನಿತು
ಹುಸಿ ಯಲ್ಲ ||

(ಇಪ್ಪತ್ತಾರನೇ ಪುಟ ನೋಡಿರಿ)

MYSORE GOVERNMENT SILKS

Lead in Fashion

They are—

So alluring
So smooth and
So rich in their attractive shades

Available at

THE SOUTH KANARA CENTRAL CO-OPERATIVE WHOLESALE STORES LIMITED,

"Sahakari Mahal"

MANGALORE-1.

(Authorised distributors for South Kanara.)

ಸಮ್ರಾಟ್ ಆಗಸ್ಟಸನ ಜೀವನದಲ್ಲಿ ನಡೆದ ಸ್ಮರಣೀಯವಾದ ಘಟನೆಗಳನ್ನೊಳಗೊಂಡು, ಆತನ ಗೌರವಾರ್ಥವಾಗಿ ಆಗೋಸ್ತು ಎಂದು ಹೆಸರ ಪಡೆದ ಆ ತಿಂಗಳು ಭಾರತೀಯರಿಗೆ ಒಂದು ವಿಶೇಷವಾದ ಅರ್ಥವುಳ್ಳದ್ದಾಗಿದೆ. ೧೯೪೭ನೇ ಆಗೋಸ್ತು ೧೫ನೇ ದಿನವು, ನಮ್ಮ ಗತ ಚೈತನ್ಯದ ಮತ್ತು ಜನಾಂಗಿಕ ಸ್ವಾತಂತ್ರ್ಯದ ಪ್ರಾಪ್ತಿಗಾಗಿ ಬಹು ದೀರ್ಘ ಕಾಲದಿಂದ ಮಾಡುತ್ತಿದ್ದ ಒಂದು ಹೋರಾಟದ ಅವಸಾನವನ್ನು ಗುರುತಿಸುತ್ತದೆ. ಆದರೆ ನಮ್ಮ ಜನ್ಮಸಿದ್ಧವಾದ ಹಕ್ಕನ್ನು ನಾವು ಪಡೆದುದು ಆಗೋಸ್ತು ತಿಂಗಳಿನಲ್ಲಿಯಾದರೆ, ಅದನ್ನು ನಾವು ಬಿಟ್ಟುಕೊಟ್ಟುದೂ ಅದೇ ಆಗೋಸ್ತು ತಿಂಗಳಿನಲ್ಲಿ.

ಸಮ್ರಾಟ ಷಾ ಆಲಮ್ II ನು ಪ್ರಪಂಚದಲ್ಲೇ ಅತಿ ದೊಡ್ಡ ವ್ಯಾಪಾರೀ ಸಂಸ್ಥೆಯಾದ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಗೆ ಬಂಗಾಳ, ಬಿಹಾರ್ ಮತ್ತು ಒರಿಸ್ಸಾ ಪ್ರಾಂತಗಳ ದಿವಾನಿಯನ್ನು ಕೊಟ್ಟುದೂ ೧೭೬೫ನೇ ಆಗೋಸ್ತು ತಿಂಗಳಿನಲ್ಲೇ. ಹೀಗೆ ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಆಳುವುದಕ್ಕಾಗಿ ನಿಂತುಕೊಂಡರು. ಅದೃಷ್ಟವೂ ಮತ್ತು ಸ್ವಾರ್ಥಿಗಳ ಸಂಗಡವೂ ಇದಕ್ಕೆ ಸಹಾಯಮಾಡಿದವು.

ಆದರೆ ೧೮೫೭ನೇ ದಂಗೆಯ ನಂತರ ಈಸ್ಟ್ ಇಂಡಿಯಾ ಕಂಪೆನಿಯ ಆಳಿಕೆಯು ಕೊನೆಗೊಂಡಿತು. ೧೮೫೮ನೇ ಆಗೋಸ್ತು ತಿಂಗಳಿನಲ್ಲಿ ಇಂಡಿಯದ ಉತ್ತಮ ಆಡಳಿತೆಗಾಗಿ ಒಂದು ಆಕ್ಟು ಪಾಸು ಮಾಡಲ್ಪಟ್ಟಿತು. ತದನುಸಾರವಾಗಿ ಸರಕಾರದ ಸ್ವಾಧೀನತೆಯನ್ನು ಬ್ರಿಟಿಷ್ ರಾಜ ಮುಕುಟವು ವಹಿಸಿ ಕೊಂಡಿತು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೂರ್ಯನು ಎಂದೂ ಅಸ್ತಮಿಸುವದಿಲ್ಲವೆಂದು ಭಾವಿಸಲಾಗಿತ್ತು. ಆದರೆ ಕೈಸರನ ಜಾಗತಿಕ ಯುದ್ಧದ ಒತ್ತಡದಿಂದಾಗಿ ಬ್ರಿಟಿಷ್ ಸಾರ್ವಭೌಮ ಸರಕಾರವು ೧೯೧೭ನೇ ಆಗೋಸ್ತು ೨೦ನೇ ತಾರೀಕಿನಲ್ಲಿ ಪ್ರಸಿದ್ಧವಾದೊಂದು ಘೋಷಣೆಯನ್ನು ಬಹಿರಂಗಪಡಿಸಿ, ಬ್ರಿಟಿಷ್ ಸಾಮ್ರಾಜ್ಯದ ಮುಖ್ಯ ಘಟಕವಾಗಿ ಇಂಡಿಯಕ್ಕೆ ಜವಾಬ್ದಾರೀ ಸರಕಾರವನ್ನು ಕ್ರಮೇಣ ಸಾಧಿಸಿ ಕೊಡುವುದೇ ಬ್ರಿಟಿಷ್ ಧೋರಣೆಯ ಗುರಿಯಾಗಿದೆ ಎಂದು ಸಾರಿತು.

ಈ ಘೋಷಣೆಯನ್ನು ಬಹಿರಂಗಪಡಿಸಿದ ಸ್ಟೇಟ್ ಸೆಕ್ರೆಟರಿಯಾದ ಎಡ್ವಿನ್ ಸಾಮ್ಯುವೆಲ್ ಮೊಂಟೆಗ್ಯುರವರು ಅದನ್ನು ಕಾರ್ಯಗತಗೊಳಿಸಿ ಇಂಡಿಯವನ್ನು ಸಮಾಧಾನಪಡಿಸಲು ಬಹು ಪ್ರಯತ್ನಪಟ್ಟರು. ಆದರೆ ಪಾರ್ಲಿಮೆಂಟಿನ ಕನ್ಸರ್ವೇಟಿವ್ ಪಕ್ಷದವರುಗಳ ವಿರೋಧದಿಂದಾಗಿ ಅವರ ಪ್ರಯತ್ನಗಳು ನಿರರ್ಥಕವಾದವು. ಕೊನೆಗೆ ಅವರಿಗೆ ರಾಜಿಗೊಂಡಂತೆ ಬಂದ ಮೊಂಟೆಗ್ಯೂ ಚೆಲ್ಮ್ಸ್‌ಫೋರ್ಡ್ ಸುಧಾರಣೆಗಳು ಅನೇಕ ಶರ್ತುಗಳಿಂದಲೂ ಕಂಟು ವಾಕ್ಯಗಳಿಂದಲೂ ತಡೆಯುಳ್ಳವುಗಳಾಗಿದ್ದವು. ಬ್ರಿಟನ್ನು ಅವುಗಳನ್ನು ಕೊಡುವುದೂ ಯೋಗ್ಯವಲ್ಲ, ಇಂಡಿಯವು ಸ್ವೀಕರಿಸುವುದೂ ಸರಿಯಲ್ಲವೆಂದು ಡಾ|| ಎನ್ನಿ ಬೆಸೆಂಟರು ಹೇಳಿದ್ದು ಅತ್ಯಂತ ಸಮಂಜಸವಾಗಿದೆ.

ಶ್ರೀ ಕೆ. ನಾರಾಯಣಾಚಾರ್

ಆಗೋಸ್ತು ತಿಂಗಳು

ಭಾರತವನ್ನು ನಾವು ಕಳೆದುಕೊಂಡದ್ದೂ ಮತ್ತೆ ಮರಳಿ ಪಡೆದದ್ದೂ ಆಗೋಸ್ತು ತಿಂಗಳಲ್ಲಿ. ಭಾರತದ ಇತಿಹಾಸದಲ್ಲಿ, ಈ ಆಗೋಸ್ತು ತಿಂಗಳು ಒಂದಲ್ಲ ಹಲವು ಕಾರಣಗಳಿಂದಾಗಿ ಮಹತ್ವದ ಸ್ಥಾನವನ್ನು ಗಳಿಸಿದೆ. ಇವುಗಳ ಬಗ್ಗೆ ಸಣ್ಣ ಸಮೀಕ್ಷೆಯನ್ನು ಇಲ್ಲಿ ನೀಡಲಾಗಿದೆ.

ಆದರೆ ಇಂಡಿಯದಲ್ಲಿ ಕೆಲವು ಘಟನೆಗಳು ಎಣಿಸಿದ್ದಕ್ಕಿಂತ ವೇಗವಾಗಿ ನಡೆದು ಹೋದವು. ಜಲಿಯನ್‌ವಾಲಾಬಾಗಿನ ಹತ್ಯಾಕಾಂಡ ಮತ್ತು ಖಿಲಾಫತ್ ಪ್ರಶ್ನೆಗಳು ಜನತೆಯನ್ನು ಉರಿಸಿದವು. ಮುನ್ನ ೧೯೨೦ನೇ ಆಗೋಸ್ತು ತಿಂಗಳಲ್ಲಿ ಪಂಜಾಬ್ ಮತ್ತು ಖಿಲಾಫತ್ ಅತ್ಯಾಚಾರಗಳ ಪ್ರತಿಕ್ರಿಯೆಯಾಗಿ ಮತ್ತು ಸ್ವರಾಜ್ಯವನ್ನು ಬಲಾತ್ ಸೆಳೆದು ಕೊಳ್ಳುವ ಸಲುವಾಗಿ ಗಾಂಧಿಯವರ ಮುಂದಾಳ್ತನದಲ್ಲಿ ಮಹತ್ತರವಾದ ಅಸಹಕಾರ ಚಳವಳವು ಪ್ರಾರಂಭಿಸಲ್ಪಟ್ಟಿತು. ನಮ್ಮ ರಾಜಕೀಯ ಪ್ರತಿಕ್ರಿಯೆಯು ಈ ಉದ್ವೇಗಭಾವದ ಹಾಡು ಪ್ರಬಲ ಶಕ್ತಿಯುಕ್ತವಾದ ಮತ್ತು ಕರುಣಾತ್ಮಕವಾದ ಒಂದು ನಾಟಕವಾಗಿ ಪರಿವರ್ತನೆಗೊಂಡಿತು.

ಅಸಹಕಾರ ಚಳವಳವು ಜನರನ್ನು ಜಾಗೃತಗೊಳಿಸಿತು. ಆದರೆ ೧೯೩೦ರ ಸತ್ಯಾಗ್ರಹ ಚಳವಳವು ಬೃಹತ್ಪ್ರಮಾಣದಲ್ಲಿ ನಡೆಯುವ ಅಹಿಂಸಾತ್ಮಕ ಹೋರಾಟದ ಪ್ರಬಲ ಶಕ್ತಿಯನ್ನು ಜಗತ್ತಿಗೇ ತೋರಿಸಿ ಕೊಟ್ಟಿತು. ಗಾಂಧಿ--ಇರ್ವಿನ್ ಒಪ್ಪಂದವೇ ಅದರ ಫಲಿತಾಂಶವಾಯಿತು. ೧೯೩೧ನೇ ಆಗೋಸ್ತು ೨೯ರಲ್ಲಿ ಗಾಂಧೀಜಿಯವರು ಕಾಂಗ್ರೆಸ್ಸಿನ ಏಕಮಾತ್ರ ಪ್ರತಿನಿಧಿಯಾಗಿ ಎರಡನೇ ರೌಂಡ್ ಟೇಬಲ್ ಕಾನ್ಫರೆನ್ಸಿನಲ್ಲಿ ಉಪಸ್ಥಿತರಾಗಲು ಲಂಡನಿಗೆ ಪ್ರಯಾಣ ಮಾಡಿದರು. ಆ ಪರಿಷತ್ತು ಕೇವಲ ಕಣ್ಣು ಕಟ್ಟಾಯಿತು. ಕೆಲವು ತಿಂಗಳೊಳಗೆ ಗಾಂಧಿಯವರು ಇಂಡಿಯಕ್ಕೆ ಮರಳಿ ಬಂದು ಪುನಃ ಜೈಲನ್ನು ಸೇರಿದರು.

೧೯೩೨ನೇ ಆಗೋಸ್ತು ತಿಂಗಳಿನಲ್ಲಿ ಮಹಾತ್ಮಾ ಗಾಂಧಿಯವರು ಮುಖ್ಯ ಮಂತ್ರಿಗಳಾದ ರಾಮ್ಸೇ ಮೆಗ್‌ಡೋನಲ್ಡರಿಗೆ- ಹರಿಜನರು ಹಿಂದೂ ವರ್ಗದಿಂದ ಬೇರ್ಪಟ್ಟು ಹೋಗುವುದಕ್ಕೆ ಆಸ್ಪದವೀಯುವ ಜಾತೀಯ ತೀರ್ಮಾನವನ್ನು ಆಕ್ಷೇಪಿಸಿ, ಅದನ್ನು ಸರಿಪಡಿಸದಿದ್ದರೆ ತಾನು ಮರಣಾಂತ ಉಪವಾಸವನ್ನು ಕೈಗೊಳ್ಳುವ ಅಭಿಪ್ರಾಯವನ್ನು ತಿಳಿಸಿ, ಒಂದು ಪತ್ರವನ್ನು ಬರೆದರು. ಆ ಉಪವಾಸವು ಸಪ್ಟಂಬರದಲ್ಲಿ ಪ್ರಾರಂಭವಾಗಿ, ಸುಪ್ರಸಿದ್ಧವಾದ ಯರವಾಡಾ ಒಪ್ಪಂದದಲ್ಲಿ ಫಲಿತವಾಗಿ ಕೊನೆಗೊಂಡಿತು.

೧೯೪೦ನೇ ಆಗೋಸ್ತು ೮ನೇ ತಾರೀಕು ಲೋರ್ಡ್ ಲಿನ್‌ಲಿತ್‌ಗೋರವರು ಕೊಟ್ಟ ಒಂದು ಆಮಂತ್ರಣವನ್ನು ಸ್ಮರಣೆಗೆ ತರುತ್ತದೆ. ಅವರು ಕೆಲವು ಭಾರತೀಯ ಪ್ರತಿನಿಧಿಗಳನ್ನು ಕರೆದು ತನ್ನ ಮಂತ್ರಿ ಮಂಡಲದಲ್ಲಿ ಅವರನ್ನು ಸೇರಿಸಿಕೊಂಡು ಒಂದು ಯುದ್ಧದ ಸಲಹೆಗಾರರ ಬೋರ್ಡನ್ನು ರಚಿಸಲು ಸಾರ್ವಭೌಮ ಸರಕಾರದಿಂದ ತನಗೆ ಅಧಿಕಾರವು ದೊರಕಿದೆಯೆಂದು ಬಹಿರಂಗಪಡಿಸಿದರು. ಈ ಆಮಂತ್ರಣವನ್ನು ಕಾಂಗ್ರೆಸ್ಸು ನಿರಾಕರಿಸಿಬಿಟ್ಟಿತು. ಮುಸ್ಲಿಮ್‌ಲೀಗು ಲಾಭ ಪಡೆಯುವ ಒಂದು ವ್ಯಾಪಾರವನ್ನು ಮಾಡಲು ಬಹು ಪ್ರಯತ್ನಮಾಡಿ ಸೋತು ಹೋದ ಮೇಲೆ ಅದೂ ಈ ಆಮಂತ್ರಣವನ್ನು ತಿರಸ್ಕರಿಸಿತು.

ಸರಿ, ಎರಡು ವರ್ಷಗಳ ನಂತರ ಆಗೋಸ್ತು ತಾ. ೮ನೇ ದಿನ ರಾತ್ರಿ ಬೊಂಬಾಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ಸು ಮೀಟಿಂಗು "ಇಂಡಿಯವನ್ನು ಬಿಟ್ಟು ತೊಲಗಿ" ಎಂಬ ಠರಾವನ್ನು ಪಾಸು ಮಾಡಿತು. ಹಾಗೆಯೇ ಒಂದು ಧ್ವಜವನ್ನು ಎತ್ತಿ ಹಿಡಿಯಲು ಬಿಡಿಸಿತು. ಒಂದು ಧ್ಯೇಯೋದ್ದೇಶವನ್ನು ಪೂರಯಿಸಲು ಪಣತೊಟ್ಟಿತು. ರಾಷ್ಟ್ರವು ಪುನರ್ಜನ್ಮ ಪಡೆಯಬೇಕೆಂದು ಸಾರಿತು. ಆ ಮೀಟಿಂಗಿನಲ್ಲಿ 'ಕರೇಂಗೇ ಯಾ ಮರೇಂಗೆ' (ಮಾಡುವೆವು ಇಲ್ಲವೇ ಮಡಿಯುವೆವು.) ಎಂಬ ಹುರಿದುಂಬಿಸುವ ವಾಕ್ಯದಿಂದ ಆವೇಶಗೊಳ್ಳದ ಯಾವ ಮನುಷ್ಯನಾದರೂ ಇದ್ದನೆ? ಇಲ್ಲ, ಇಲ್ಲ.

ಮರುದಿನ ಬೆಳಿಗ್ಗೆ ಬೇಗನೆ ಗಾಂಧಿಯವರು, ವರ್ಕಿಂಗ್ ಕಮಿಟಿಯ ಮೆಂಬರರು ಮತ್ತು ಇತರ ಪ್ರಮುಖ ಮುಖಂಡರು ಅಜ್ಞಾತವಾದ ಸ್ಥಳಗಳಿಗೆ ದೂರಕ್ಕೆ ಸಾಗಿಸಲ್ಪಟ್ಟರು. ಕಾಂಗ್ರೆಸ್ಸು ಮತ್ತು ಸಂಬಂಧಪಟ್ಟ ಇತರ ಸಂಸ್ಥೆಗಳು ನ್ಯಾಯಬಾಹಿರಗಳೆಂದು ಸಾರಲ್ಪಟ್ಟವು. ಬಹು ಸಂಖ್ಯೆಯಲ್ಲಿ ಕೈದುಗಳಾದರು. ಅತಿ ಕಠೋರವಾದ ಶಾಸನಗಳು ಜಾರಿಗೆ ತರಲ್ಪಟ್ಟವು. ಅದೊಂದು ಕಾಂಗ್ರೆಸ್ಸಿಗೆ ಎದುರಾದ ವಿದ್ಯುದ್ವೇಗದ ಯುದ್ಧವಾಗಿತ್ತು. ಅದು ಸಿಂಹದ ಹಿಂಸೆಯೆಂದು ಹೆಸರು ಪಡೆಯಿತು.

ಜೈಲಿಗೆ ಹಾಕಿ ಕೆಲವೇ ದಿನಗಳೊಳಗೆ ಆಗಾಖಾನ್ ಅರಮನೆಯಲ್ಲಿ (ಅರಮನೆಯಾಗಿ ಕಟ್ಟಲ್ಪಟ್ಟಿತ್ತು, ಜೈಲಾಗಿ ಉಪಯೋಗಿಸಲ್ಪಟ್ಟಿತು) ಹೃದಯದ ಬೇನೆಯಿಂದ ಮಹಾದೇವ ದೇಸಾಯಿಯವರು ಸತ್ತು ಹೋದರು. ಅವರನ್ನು ಗಾಂಧಿಯವರೊಡನೆ ಬಂಧಿಸಿ ಅಲ್ಲಿ ಇರಿಸಲಾಗಿತ್ತು. ಭಾರತವು ಆಗೋಸ್ತು ತಿಂಗಳಿನಲ್ಲೇ ತನ್ನ ಅನೇಕ ಸುಪುತ್ರರನ್ನು ಕಳ

(ಇಪ್ಪತ್ತೈದನೇ ಪುಟ ನೋಡಿರಿ)

ಸ್ವಾತಂತ್ರ್ಯ ದಿನದ ಶುಭಾಶಯಗಳು!

ಜಯಂತಿ ಟೈಲ್ ಫೇಕ್ಟರಿ

ಕಲ್ಯಾಣಪುರ, ದ. ಕನ್ನಡ.

ಉತ್ತಮ ತರದ ಬೈಸನ್ ಬ್ರಾಂಡ್ ಹಂಚು ತಯಾರಕರು

ಜಯಂತಿ ಟ್ರೇಡರ್ಸ್
ಪಾರ್ಟ್‌ನರ್ಸ್

JAYANTHI TILE FACTORY
KALLIANPUR, S. K.

MANUFACTURERS OF
BISON BRAND MANAGLORE TILES

JAYANTHI TRADERS
PARTNERS

ಶ್ರೀ ಅ. ಗೌ. ಕಿನ್ನಿಗೋಳಿ.

ಶ್ರೀ ಸಾಮಾನ್ಯನ ದೃಷ್ಟಿ

ರಾಮ ರಾಜ್ಯದಾ ಜೀವನದಲ್ಲೂ
ರಜಕರ ಬಾಯಿಗೆ ಬೀಗವೆ ಬೇಕು.
ಸ್ವಾತಂತ್ರ್ಯದ ಸೌಲಭ್ಯದ ಒಳಗೂ
ತೊಡಕಿನ ಗೊಣಗಾಟವ ಬಿಡು ಸಾಕು

— ೧ —

ರಾಮನ ಜೊತೆ ನಡೆದೂ ಲಕ್ಷ್ಮಣನನು
ಒಲಿದಿಲ್ಲವೆ ರಾವಣನನುಜೆ?
ಪಾದುಕೆ ಹೊತ್ತಪ ಭರತನಿಗೊದಗಿತು
ಸನ್ಯಾಸಿಯ ವ್ರತ—ಕಠಿನ ಸಜೆ!
ಪತಿ ಸಂದೇಹಿಸಿ ಹೊಡೆದಟ್ಟಿದರೂ
ಪತ್ನಿಯು ಮತ್ತೂ ಪತಿವ್ರತೆ;
ಶಂಭುಕ ಸಮಾಧಿ ಮಹಾತಪೋನಿಧಿ
ತಲೆ ಕಳಕೊಂಬುದು ತಪ್ಪಿತ್ತೆ?
ಈ ವೈಚಿತ್ರ್ಯವ ತಿಳಿದರೆ ನಮಗೆ
ನಮ್ಮದೆ ಬಾಳುವೆ ಲೇಸಲ್ತೆ?

ಸ್ವಾತಂತ್ರ್ಯದ ಸೌಲಭ್ಯದ ಒಳಗೂ
ತೊಡಕಿನ ಗೊಣಗಾಟವ ಬಿಡು ಸಾಕು!
ರಾಮರಾಜ್ಯದಾ ಜೀವನದಲ್ಲೂ
ರಜಕರ ಬಾಯಿಗೆ ಬೀಗವೆ ಬೇಕು!

ಂ ಂ ಂ ಂ

ಓ, ಇದು ನಾಕ! ಅಪ್ಸರ ಲೋಕ!
ಧನಪತಿ ಪಡೆವನು ಯಕ್ಷನ ಶಾಪ;
ಅಮೃತವ ಕುಡಿದೂ ಅಜೀರ್ಣ ರೋಗ,
ಮತ್ತೂ ಹಸಿವೆಯ ಪೀಡೆಯ ಪಾಪ?
ತೋಳನ ಹೊಟ್ಟೆಯು ಬೆಂಕಿಯ ಬೇಗೆಯು
ಕುರಿಗಳ ನೆತ್ತರು ತಣಿಸುವುದೆ?
ಆಳುವಿಕೆಯ ಕಸರತ್ತಿನ ನಡುವೆ
ಅಳುವಿನ ಹನಿಗಳ ಗುಣಿಸುವುದೆ?
ಛೀ ಛೀ ಸಲ್ಲ; ಮೆರೆವವರೆಲ್ಲ
ಶ್ರೀ ಸಾಮಾನ್ಯನ ದೃಷ್ಟಿಯಲಿ
ನಿರ್ಜರರಾಗಲಿ! ಮುನಿವವರೆಲ್ಲ
ದಾನವರೇ ಸ್ವೈ ಸೃಷ್ಟಿಯಲಿ!

— ೨ —

ಒಳಸಂಚಿನ ವಿದ್ರೋಹಿ ವಿಭೀಷಣ!
ಶರಣ ಶಿಖಾಮಣಿ ಸ್ತುತಿ ಪಾತ್ರ.
ಸ್ಥಾನಕ್ಕೆಂದೇ ಸಂಕ ಮುರಿವವರು
ಯೋಜಿಸಿದೀ ನ್ಯಾಯದ ಸೂತ್ರ.
ಹಳೆ ರೂಢಿಯ ತಲೆ ಮೆಟ್ಟಿದರೋ—ನರ
ವಾನರ ಬುದ್ಧಿಗೆ ಬಹು ಕೋಪ!
ಇಂದ್ರಾರಿಯ ಸಾಧನೆಗೂ ಮತ್ತೆ
ಮರಣ ಹೋಮದ ಆರೋಪ!
ಬಹು ಭಕ್ತಿಯ ಅತಿಕಾಯನು ಕೂಡಾ
ಬದುಕಲು ಸಲ್ಲದ ಬಡಜನುಮ,
ಕತ್ತೆ ಚಾಕರಿಯ ಬಿಟ್ಟಿ ಗುಲಾಮ
ನಿಯಮ ಸಿಪಾಯಿಗಳ ಹುಲುಹನುಮ

— ೩ —

ರಾವಣ ರಾಜ್ಯದೊಳಗೂ ಸೀತೆಗೆ
ಪ್ರಾಣದ ಭಯವೇ ಇರಲಿಲ್ಲ.
ನಮಗೂ ಅಷ್ಟೇ, ಮರಣದ ಭಯವೆ?
ಛೀ—ನಾವೂ ಹೇಡಿಗಳಲ್ಲ!
ಸಾವಿನ ಸುಖ ಬಂದೊದಗುವ ವರೆಗೂ
ಬದುಕಲಿಕಿದ್ದೇ ಉಂಟು ಗತಿ;
ಆದರೆ ಎಂತು?—ಎನ್ನುವ ಪ್ರಶ್ನೆ
ಮಾಡಿಸಬೇಡಪ್ಪೊ ಮಂದಮತಿ!
ಸಾಯದೆ ಇದ್ದರೆ ಬದುಕಿದ ಹಾಗೆಯೆ-
ಅಷ್ಟೂ ತಿಳಿಯದೆ ಮೂಢಮತಿ?

ಸ್ವಾತಂತ್ರ್ಯದ ಸೌಲಭ್ಯದ ಒಳಗೂ
ತೊಡಕಿನ ಗೊಣಗಾಟವ ಬಿಡು ಸಾಕು,
ರಾಮರಾಜ್ಯದಾ ಜೀವನದಲ್ಲೂ
ರಜಕರ ಬಾಯಿಗೆ ಬೀಗವೆ ಬೇಕು.

— ೪ —

ಅಶೋಕವನದಲಿ ಕುಳಿತವಳಾದರು
ಏತಕೆ ಅತ್ತಳೊ ಅಳುಬುರುಕಿ?
ಸಾಮ್ರಾಜ್ಯದ ಸಿರಿ ಆ ಮಂಡೋದರಿ
ಸಂತೈಸಿದರೂ ಸೊರಸೊರಗಿ
ನಾವೋ—ಈ ನವನಾಕದ ಒಳಗೆ
ನಗುತಿಲ್ಲವೆ ತೃಪ್ತಿಯ ತೇಗಿ?
ಸ್ಥಿತಪ್ರಜ್ಞರಿಗೆ ಮಾನದ ಭಯವೆ?
ಅಂತೆಯೆ ನಮಗಾ ಗೋಜುಂಟೆ?
ಭಯವರ್ಜಿತ ಜೀವನಕೂ ಮಿಕ್ಕಿದ
ಇಚ್ಛಾಭೋಗದ ಮೋಜುಂಟೆ?

ರಾಮರಾಜ್ಯದೀ ಜೀವನದಲ್ಲಿ
ರಜಕರ ಬಾಯಿಗೆ ಬೀಗವೆ ಬೇಕು.
ಸ್ವಾತಂತ್ರ್ಯದ ಸುಖ ಸಂಪದದಲ್ಲಿ
ಕಂಡಿದೆ ಹೊಸ ಬೆಳಕು!

ಭಾರತ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಸ್ವತಂತ್ರ ಭಾರತದಲ್ಲಿ ತಯಾರಾಗುವ

ಖೀರಾ ಉಕ್ಕಿನ ಫರ್ನಿಚರುಗಳು

ಮನೆ, ಆಫೀಸು, ಆಸ್ಪತ್ರೆಗಳಿಗೆಲ್ಲಾ ಬೇಕಾಗುವ ಕಪಾಟು, ಕುರ್ಚಿ, ಮೇಜು ಮೊದಲಾದ ಯಾವತ್ತೂ ಖೀರಾ ಉಕ್ಕಿನ ಫರ್ನಿಚರುಗಳು, ಉಪಕರಣಗಳು, ಚಿತ್ರದ ಸಾಹಿತ್ಯೋಪಕರಣಗಳು, ಕಟ್ಟಡಗಳಿಗೆ ಬೇಕಾಗುವ ಉಕ್ಕಿನ ರೋಲಿಂಗ್ ಶಟ್ಟರ್ಸ್, ಉಕ್ಕಿನ ಕಿಟಿಕಿ ಬಾಗಿಲುಗಳು, ಮಕ್ಕಳಿಗಾಗಿ ನವೀನ 'ಬೇಬಿ ವಾಕರ್' ಇತ್ಯಾದಿಗಳಿಗೆ ವಿಚಾರಿಸಿರಿ

ಇಬ್ಬಗೆಯ ಉಪಯೋಗದ 'ಸೋಫಾ-ಕಂ-ಬೆಡ್', ಬೇಕಾದಂತೆ ಶಾಖ-ತಂಪು ಕೊಡುವ ಫ್ಯಾನು

ಇತ್ಯಾದಿಗಳಿಗೆ ಹಂಪನಕಟ್ಟೆಯಲ್ಲಿರುವ ನಮ್ಮ ಶೋ ರೂಮನ್ನು ಸಂದರ್ಶಿಸಿರಿ!

ಶಾಸ್ತ್ರಿ & ಕೊ Shastry & Co.

ಹಂಪನಕಟ್ಟೆ,
ಮಂಗಳೂರು.

HAMPANKATTA,
MANGALORE.

ಫೋನ್: 3788

Telegrams: "SHASTRYCO"

ಶ್ರೀ ರಿಚರ್ಡ್ ವಿಲ್ಯಂ ಪಿಂಟೊ

ಭಾವೈಕ್ಯ ಸಾಧಿಸುವ ಬಗೆಯೆಂತು ?

[illegible] ಬೇರೆಯವರಿಗೆ ಉಪದೇಶ ಮಾಡಿದರೇನು [illegible] ಉಪದೇಶ ನಿಷ್ಪ್ರಯೋಜನ. ಪ್ರತಿ ನಾಗರಿಕನೂ [illegible] ಭಾರತೀಯತೆಯನ್ನು ಗಳಿಸಿಕೊಂಡಾಗಲೇ ಭಾವೈಕ್ಯ ಸಾಧಿತವಾಗುವುದು.

ವರಕವಿ ಬಂಕಿಮ ಚಂದ್ರರು ಭಾರತಿಯನ್ನುದ್ದೇಶಿಸಿ 'ಸುಜಲಾಂ, ಸುಫಲಾಂ ಮಲಯಜ ಶೀತಲಾಂ ಸಸ್ಯ ಶ್ಯಾಮಲಾಂ ಮಾತರಂ' ಎಂದಿದ್ದರೆ ಭಾರತಿ ಸರ್ವ ಸುಂದರವಾಗಿ ಒಳ್ಳೆ ಸಬಲ ನಿರ್ಮಲ ಗಾಳಿ, ನೀರು, ಸಾಗರಗಳಿಂದ ತುಂಬಿ ಕಂಗೊಳಿಸುತ್ತಿದ್ದಾಳೆ. ಇಂತಹ ಗೌರವದ ತಾಯಿಯ ಪುತ್ರರೆನ್ನಿಸುವ [illegible] ಭಾರತೀಯರು ಸಂತೋಷ ಪಡಲಿಕ್ಕಿಲ್ಲ? ಯಾವ ಪುರುಷ ಅಥವಾ ಸ್ತ್ರೀ ತಮ್ಮ ದೇಶದ ಐಕ್ಯಕ್ಕೆ ಧಕ್ಕೆ ತರುವ ಅಥವಾ ಐಕ್ಯವನ್ನು ಬಲಹೀನವನ್ನಾಗಿ ಮಾಡುವ ಕೃತ್ಯಗಳನ್ನು ಸಗುತ್ತಾನೋ ಅಂತಹ ವ್ಯಕ್ತಿ ರಾಷ್ಟ್ರದ್ರೋಹಿಯಾಗುತ್ತಾನೆ. ಸ್ವಾತಂತ್ರ್ಯಾನಂತರ ನವ್ಯ ರಾಷ್ಟ್ರದ ಮುಖಂಡರಲ್ಲಿ 'ಭಾವೈಕ್ಯ' 'ರಾಷ್ಟ್ರೀಯ'ತೆಯನ್ನು ಬೆಳೆಸಿ [illegible] ಭಾರತವನ್ನು [illegible] ಕಾರಣವಾಗಿ ಘಟಸರ್ಪದಂತೆ ಹೆಡೆ ಎತ್ತಿ ನಿಂತುಕೊಂಡಿತು. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಮಾತು ಯಾವ ಶತಮಾನಗಳಲ್ಲಿಯೂ ಸುಳ್ಳಾಗದು. ಭಾರತಕ್ಕೆ ಚೈನಾ, ಪಾಕಿಸ್ತಾನ— ಮೊದಲಾದ ರಾಷ್ಟ್ರಗಳ ಆಕ್ರಮಣ ಭೀತಿ ಇರುವಂತಹ ಈ ಸಂದಿಗ್ಧ ಕಾಲದಲ್ಲಿಯೂ 'ಒಗ್ಗಟ್ಟಿಲ್ಲದೆ' ನಾವು ಬದುಕಲಾರೆವು — ಉಳಿಯಲಾರೆವು — ತ್ಯಾಗ ಮಾಡಿ ಪಡೆದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾರೆವು.

೪೫ ಕೋಟಿಗೂ ಮಿಕ್ಕಿ ಜನರಿರುವ ವಿವಿಧ ಸಂಸ್ಕೃತಿಗಳನ್ನೊಳಗೊಂಡ ಭಾರತವನ್ನು ಆಡಳಿತೆಯ ಸುಗಮತೆಯ ದೃಷ್ಟಿಯಿಂದ ಭಾಷಾವಾರು ಪ್ರಾಂತ್ಯಗಳನ್ನಾಗಿ 1956ರಲ್ಲಿ ವಿಂಗಡಿಸಲಾಯಿತು. ಸದುದ್ದೇಶವುಳ್ಳ ಈ ಕಾರ್ಯ ನಮ್ಮಲ್ಲಿ ಒಡಕು ಹುಟ್ಟಿಸಿ ದ್ವೇಷ ಭಾವವನ್ನು ಉತ್ಪನ್ನ ಮಾಡಿ ನಮ್ಮ ಪ್ರಗತಿಯ ಭವ್ಯ ಮಾರ್ಗದಲ್ಲಿ ವಿಘ್ನಗಳನ್ನು ತಂದೊಡ್ಡಿತು. ಕೆಲವು ವರ್ಷಗಳ ಹಿಂದೆ ಭಾರತಕ್ಕೆ ವಿದೇಶಿ ಸಂದರ್ಶಕರೊಬ್ಬರು ಭೇಟಿಯಾದದ್ದು ಕೇರಳೀಯ, ಮಹಾರಾಷ್ಟ್ರೀಯ, ಗುಜರಾದೀ ತಮಿಳರನ್ನಲ್ಲದೆ— ಭಾರತೀಯನನ್ನಲ್ಲ. ಪ್ರತಿಯೊಬ್ಬ ವ್ಯಕ್ತಿ ತನ್ನ ಪ್ರಾಂತ್ಯದ ಹೆಸರನ್ನು ಉಚ್ಚರಿಸುವುದರಲ್ಲಿ ಹೆಮ್ಮೆ ಪಡುತ್ತಾನೆಯಲ್ಲದೆ —ತಾನು ಭಾರತೀಯನೆಂದು ಬಾಯಿಬಿಟ್ಟು ಹೇಳುವುದಿಲ್ಲ.

ಶ್ರೀ ಪೊಟ್ಟಿ ರಾಮುಲು ಉಪವಾಸ ಮಾಡಿ ಸತ್ತು ಆಂಧ್ರ ಪ್ರಾಂತ್ಯ ಪಡೆದ ಅನಂತರ ಒಂದೊಂದಾಗಿ ಕೇರಳ, ಮದ್ರಾಸು ಕರ್ನಾಟಕ ಮೊದಲಾದ ಪ್ರಾಂತ್ಯಗಳ ರಚನೆಯಾಯಿತು. ಒಂದೇ ಪ್ರಾಂತ್ಯವಾಗಿದ್ದ ಬೊಂಬಾಯಿಯನ್ನು ವಿಭಜಿಸಿ ಮಹಾರಾಷ್ಟ್ರ ಮತ್ತು ಗುಜರಾತ್‌ಗಳನ್ನಾಗಿ ವಿಂಗಡಿಸಬೇಕೆಂದು ಒಂದು ಬೃಹತ ಚಳವಳಿ ಪ್ರಾರಂಭವಾಗಿ ಒಂದೇ ದಿನದಲ್ಲಿ 120 ಜನರನ್ನು ಬಲಿತೆಗೆದುಕೊಂಡು, ಬೊಂಬಾಯಿ ಸ್ಮಶಾನದಂತಾಗಿ ಕೊನೆಗೆ ಬೊಂಬಾಯಿ ಪ್ರಾಂತ್ಯದ ವಿಭಜನೆಯಾಯಿತು. ಪಂಜಾಬು ಪ್ರಾಂತ್ಯವಾದ ಮೇಲೆ ಪಂಜಾಬಿ ಸುಬದ ರಚನೆಯಾಗಬೇಕೆಂಬ ಕೂಗೆದ್ದಿದೆ. ಭಾಷಾವಾರು ಪ್ರಾಂತ್ಯ ಪುನರ್ವಿಂಗಡನೆ ಆಗಬೇಕೆಂದು ಹೇಳುವವರಲ್ಲಿ ಮೂಲತಃ ತಪ್ಪಿಲ್ಲದಿದ್ದರೂ, ಪ್ರಜೆಗಳು ತಾನು ಬಂಗಾಳಿ, ಪಂಜಾಬಿ, ಮದ್ರಾಸಿ, ಗುಜರಾಥಿ ಎಂತೆಂತ ತಮ್ಮ ಸಂಕುಚಿತ ದೃಷ್ಟಿಯನ್ನು ಪ್ರದರ್ಶಿಸಿ ಭಾರತದ ಸರ್ವತೋಮುಖವಾದ ಏಳಿಗೆಯ ಕಡೆಗೆ ಗಮನ ಹರಿಸದಿದ್ದಲ್ಲಿ ಮಹಾ ವಿಪತ್ತನ್ನು ರಾಷ್ಟ್ರ ಎದುರಿಸಬೇಕಾದೀತು.

ಭಾರತೀಯರೆಲ್ಲರ ಒಂದಾಗಿರುವ ಮತ್ತು ಪರಸ್ಪರರಲ್ಲಿ ಭ್ರಾತೃಭಾವದಿಂದ ಇರುವ ಘಟ್ಟಿಯಾದ ಸಾಹಸೀ ರಾಷ್ಟ್ರವು ಇಂದು ನಮಗೆ ಬೇಕಾಗಿದೆ. ಬುದ್ಧಿ ಮತ್ತು ಹೃದಯದ ಐಕ್ಯ ಮತ್ತು ರಾಷ್ಟ್ರವನ್ನು ಪ್ರೇರೇಪಿಸುವ ಆಧ್ಯಾತ್ಮಿಕ ಐಕ್ಯಗಳನ್ನು ನಿರ್ಮಿಸುವುದೇ ಮುಖ್ಯವಾದ ಕೆಲಸವಾಗಿದೆ. ನಮಗೆ ಇಂದು ರಾಷ್ಟ್ರೀಯ ಭಾವೈಕ್ಯದ ಆವಶ್ಯಕತೆ ತುಂಬಾ ಇದೆ. ನಾವು ಭೌತಿಕ ಪ್ರಗತಿಯನ್ನು ಸಾಧಿಸಬಹುದು; ಆದರೆ ಮೈತ್ರಿಯಿಂದ ಬಾಳಿ ದುಡಿಯದಿದ್ದಲ್ಲಿ ಅವನತಿಯನ್ನು ಪ್ರವೇಶಿಸಬೇಕಾದೀತು.

ಈ ರಾಷ್ಟ್ರ ಅನೇಕ ಧರ್ಮ, ಪಂಥ,

(ಇಪ್ಪತ್ತಮೂರನೇ ಪುಟ ನೋಡಿರಿ)

ಸ್ವಾತಂತ್ರ್ಯ ದಿನದ ಶುಭಾಶಯಗಳು!

ರೋಯಲ್ ಮಹಾಲ್

ಉಡುಪಿ

ಸರ್ವಾನುಕೂಲತೆಗಳಿರುವ
ಮೇಲ್ತರಗತಿಯ ಭೋಜನ ಮತ್ತು ವಸತಿ ಗೃಹ

ಕೆ. ವೆಂಕಟ್ರಮಣ ಭಟ್,
ವ್ಯವಸ್ಥಾಪಕರು.

Phone 169

ROYAL MAHAL

Up-to date Boarding & Lodging

UDIPI, S. K.

With best compliments from

M/S M. L. SHETTY & SONS

NEW KARNATAK STORES

IMPERIAL TOBACCO DEALERS
&
NUMBER 30 BEEDIES STOCKISTS

KARWAR, N. Kanara.

ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

ಎಮ್. ಎಲ್. ಶೆಟ್ಟಿ ಎಂಡ್ ಸನ್ಸ್

ನ್ಯೂ ಕರ್ನಾಟಕ ಸ್ಟೋರ್ಸ್

ಕಾರವಾರ (ಎನ್. ಕೆನರಾ)

ಶ್ರೀ ಬೈಪಾಡಿ ಚಂದ್ರಶೇಖರ ಜೈನ್

ಕೆಸರಿನಲ್ಲಿ ತಾವರೆ

೧

ನಿಮ್ಮ ಲೇಂಕಾರ ದೃಷ್ಟಿ ಹೊಸ ಜನಾಂಗವೊಂದರ ಸೃಷ್ಟಿಗೆ ಕಾರಣವಾಗಬಲ್ಲುದು. ಪ್ರತಿಯೊಂದು ಸುಕೋಮಲ ಪುಷ್ಪವೂ ಇರುವುದು ನಿಬಿಡ ಮುಳ್ಳಿನ ಮಧ್ಯೆ ಅಥವಾ ಕೆಸರಿನಲ್ಲಿ .. ಆದುದರಿಂದ ನಿಮ್ಮ ತೂಗುವ ತಕ್ಕಡಿ ಬದಲಿಸಬಲ್ಲಿರಾ?

“ನನಗೆ ಸಿರಿವಂತರ ಮನೆಯ ಹೂದೋಟದಲ್ಲಿರುವ ಫಲಭರಿತ ಪುಷ್ಪಗಳಿಗಿಂತ, ಕಾಡಿನ ಹೂಗಳ ಮೇಲೆ ಪ್ರೀತಿ ಜಾಸ್ತಿ! ಅನುಕೂಲಸ್ಥರ ಮನೆಯಂಗಳದಲ್ಲಿ ಕ್ರಮಬದ್ಧವಾಗಿ ಆಯಗಳನ್ನು ತಯಾರಿಸಿ, ಬಣ್ಣ ಬಣ್ಣದ ಹೂ ಗಿಡಗಳನ್ನು ನೆಡುತ್ತಾರೆ ಅವುಗಳ ಆರೈಕೆಗಾಗಿಯೇ ಕೆಲ ಸೇವಕರನ್ನು ನೇಮಿಸುತ್ತಾರೆ ಅರಳಿದ ಪುಷ್ಪಗಳನ್ನು ಕಿತ್ತು ಮೇಜಿನ ಹೂದಾನಿಗಳಲ್ಲಿಡುತ್ತಾರೆ. ಆದರೆ ಕಾಡಿನ ಹೂಗಳು ಹಾಗಲ್ಲ! ಇಚ್ಛೆ ಬಂದಲ್ಲಿ ಮನಬಂದಂತೆ ಬೆಳೆದ, ಬೇಕಾದವರಿಗೆಲ್ಲ ಕಣ್ಣಿಗೆ ಆನಂದವನ್ನುಂಟು ಮಾಡುತ್ತವೆ. ಅಲ್ಲಿ ಮನುಷ್ಯ ನಿಯತಿಯಿಂದ ಕಲ್ಪಿತವಾದ ಸೊಗಸು. ಇಲ್ಲಿ ದೈವ ನಿಯತಿಯಿಂದ ರೂಪುಗೊಂಡ ಮಧುರವಾದ ಸೌಂದರ್ಯ!

ನಿಮ್ಮ ಮಿತ್ರರ ಆಯ್ಕೆ!!

ನಿಮಗೆ ಕಲ ಸಿರಿವಂತ ಮಿತ್ರರಿದ್ದಿರಬಹುದು. ನಿಮ್ಮ ಕುಡಿಯುವ ಕಾಫಿಯಲ್ಲಿ, ಪ್ರಯಾಣಿಸುವ ಮೋಟಾರು ಕಾರಿನಲ್ಲಿ, ಸಂತೋಷ ಕೂಟದಲ್ಲಿ ನಿಮ್ಮೊಡನೆ ತಮ್ಮದೇ ಆದ ಕುಲುಕುಲು ನಗೆಯೊಂದಿಗೆ ಭಾಗವಹಿಸಿದ್ದಿರಬಹುದು. ಆದರೆ ನಿಮ್ಮ ಕಷ್ಟದಲ್ಲಿ ಅವರು ಭಾಗಿಯಾಗಿದ್ದಾರೆಯೇ? ಅವರೊದಗಿಸಿರುವ ವಸ್ತುಗಳು ನಿಮ್ಮ ಅಗತ್ಯಕ್ಕೆ ನೆರವಾಗಿವೆಯೆ? ಕಷ್ಟದಿಂದ ಪಾರಾಗಲಾರದೆ ತೊಳಲಾಡುವ ನಿಮ್ಮ ಕುರಿತು ಎಂದಾದರೂ ಕನಿಕರದ ನುಡಿಯನ್ನಾದರೂ ನುಡಿದಿದ್ದಾರೆಯೇ? ಈಗಿನ ಕಾಲದಲ್ಲಿ ಮಿತ್ರತ್ವ ಅಷ್ಟೊಂದು ಚೆನ್ನಾದ ರೀತಿಯಲ್ಲಿ ಸಾಗಿ ಬರುವುದಿಲ್ಲ ಎಂದು, ಸಕಲ ಅಭಿರುಚಿಯನ್ನೂ ಬೆಳೆಸಿಕೊಂಡಿರುವ ನನ್ನ ಮಿತ್ರರೊಬ್ಬರು ಅಭಿಪ್ರಾಯ ಕೊಡುತ್ತಾರೆ—'ಹೆಚ್ಚಾಗಿ ಬಿಸಿ ಪಾತ್ರೆಯನ್ನು ಒಲೆಯಿಂದ ಕೆಳಗಿಡಲು ವಸ್ತ್ರವನ್ನುಪಯೋಗಿಸಿದಂತೆಯೇ ಮಿತ್ರತ್ವದ ಉಪಯೋಗವಾಗುತ್ತಿದೆಯಂತೆ.- ಆವಶ್ಯಕತೆಗಾಗಿ ಮಿತ್ರತ್ವ ಮಾಡುವವರ ಸಂಖ್ಯೆ (Timely friends)ಯೇ ಹೆಚ್ಚು—

ಕೀಳ್ಮಟ್ಟದ ಜನರಲ್ಲಿ (ನಿಮ್ಮ ಮನಸ್ಸಿನಲ್ಲಿ ಮಾತ್ರ!)ರುವಷ್ಟು ಮೇಲ್ಮಟ್ಟದ ಸಹಾಯ ಬುದ್ಧಿ, ಅತಿ ಮುಂದುವರಿದ ಜನರಲ್ಲಿರುವುದಿಲ್ಲ. ರಾತ್ರಿಯ 'ಕ್ಲಬ್'ನಲ್ಲಿ ತಮ್ಮ ವಿಶೇಷ ಜೀವನವನ್ನು ಕಳೆಯುವ ಬೊಂಬಾಯಿ ಸ್ನೇಹಿತರ ಲೆಕ್ಕದ ಪ್ರಕಾರ ಯಾವ ಸಿರಿವಂತ ಜನರ ಹೆಂಡಂದಿರೂ ತಮ್ಮ ತೋರಿಕೆಯ ಜೀವನವನ್ನು ಅಟ್ಟಹಾಸದಿಂದ ತೋರಿಸಿದರೂ, ನಿಜ ಜೀವನದಲ್ಲಿ ಅವರ ಕುರಿತು ತುಂಬಾ ಗಾಬರಿಯಾಗುತ್ತದಂತೆ! ಇದು ಎಲ್ಲರಿಗೂ ತಿಳಿದ ವಿಷಯ. ಆದರೆ ಯಾರೂ ಒಪ್ಪಲು ತಯಾರಿಲ್ಲ. ಮೇಲೆ ನೋಡಿ ಉಗುಳಿದರೆ ಬೀಳುವುದು ಮುಖದ ಮೇಲಲ್ಲವೇ? ನಿಮ್ಮ 'ತಲೆ'ಗಾಗುವ ಮಿತ್ರರು ಬೇಕಷ್ಟಿದ್ದಾರೆ. ಆದರೆ 'ಕಾಲಿ'ಗಾಗುವ ಮಿತ್ರರು ತೀರಾ ಕಡಿಮೆ.. ನಿಮ್ಮ ಜೇಬಿನ ದಪ್ಪದ ಮೇಲೆ ಅವರ ಮಿತ್ರತ್ವದ ಛಾಯೆ (Shadow of intimacy) ಹೊಂದಿಕೊಂಡಿದೆ. ಆದರದಿಂದ ಸ್ವಾಗತಿಸಿಕೊಂಡು, ಅಗಲವಾದ ಬಿಚ್ಚು ಬಾಯನ್ನು ತೆರಳಿಸಿ, ನಿಮ್ಮನ್ನು ಸ್ವಾಗತಿಸಿಕೊಳ್ಳುವ ಜನರ ಉದ್ದೇಶದ ಹಿನ್ನೆಲೆಯನ್ನು ಅರಿತುಕೊಳ್ಳಬೇಕು? ಅವರ ಮಗನಿಗೆ ಇಂಜಿನಿಯರಿಂಗ್ ಸೀಟು ಬೇಕೇ? ಅಥವಾ ಸಕಲ ವಿದ್ಯಾಪರಿಣತಳಾದ ಅವರ ಮಗಳನ್ನು ನಿಮ್ಮ ಪುತ್ರಗಿಗೆ....! ಏನಾದರೂ ಹಿನ್ನೆಲೆ ಇರಬೇಕಲ್ಲವೇ?

ಇಂಗ್ಲೇಂಡಿನಲ್ಲಿ ಕಲಿತು ಬಂದ ಸುಪ್ರಸಿದ್ಧ ಡಾಕ್ಟರರೊಬ್ಬರು ಅವರಾಗಿಯೇ ಆವರಿಂದ ಕರೆದು ಮಾತನಾಡುವುದು 'ಬಡಪದ'ಜನರನ್ನು 'ಅವರೇ ಹೇಳಿದಂತೆ' ಬಾಪದ ಜನರ ಹೃದಯ ವೈಶಾಲ್ಯ ಜೊತೆಕ್ಕಿದಾಗಿದೆ. ಆವರ ನಿರ್ಮಲ ಮನಸ್ಸಿನ ಕೃತಜ್ಞತೆಯನ್ನು ಸ್ವೀಕರಿಸಿ ವಾಗ ಸಿಕ್ಕುವ ಆನಂದ, ಸಾವಿರ ರೂಪಾಯಿ ಚೆಕ್ಕನ್ನು ಪಡೆಯುವಾಗಲೂ ಆಗುವುದಿಲ್ಲ. ಅದಲ್ಲದೆ ಅವರಿಂದ ನನಗೆ ತುಂಬಾ ಸಹಾಯವಿದೆ. ಸಿರಿವಂತರ ಜನರ ಗೆಳೆತನಕ್ಕೆ ಗುರುತು ಮಾಡಿ ಕೊಡುವ (Introduction) ಅಗತ್ಯತೆ ಇದೆ, ಆದರೆ ಬಡವನ ಗೆಳೆತನಕ್ಕೆ ಅವನ ಸುಂದರ ತಾಪತ್ರಯದಿಂದ 'ಸುಕ್ಕುಗಟ್ಟಿದ ಮುಖದ ಸಾಕ್ಷಿಯೇ ಸಾಕು' ಎನ್ನುತ್ತಾರೆ.

(ಇಪ್ಪತ್ತೆರಡನೇ ಪುಟ ನೋಡಿರಿ)

GREETING
ON A GREAT DAY

TO THE MILLIONS OF OUR PATRONS, FRIENDS AND WELL-WISHERS
WE EXTEND HEARTY INDEPENDENCE DAY GREETINGS
ON THIS MEMORABLE DAY
WE RE-DEDICATE OURSELVES TO KEEP-UP OUR TRADITION TO SERVE YOU BETTER
WITH
MORE AND MORE PROGRAMME FOR
CONSUMER PROTECTION

CHANDARANA BROTHERS

(ESTD. 1935)

WHOLESALE DEPT.		*RETAIL DEPT.*
MISSION STREET		**HAMPANKATTA,**
Phone: 3116	**MANGALORE**	**Phone: 3460**



ದಿಲ್ಲಿಯ ಔದ್ಯೋಗಿಕ ತರಬೇತಿ ಕೇಂದ್ರದಲ್ಲಿ ಮಿಲ್ಲಿಂಗ್ ಮೆಶೀನ್‌ನಲ್ಲಿ ತರಬೇತಿದಾರರು ಕೆಲಸ ಮಾಡುತ್ತಿದ್ದಾರೆ.

ಉತ್ಕರ್ಷದ ಮೂಲ-ಸಣ್ಣ ಕೈಗಾರಿಕೆಗಳು

ಸಣ್ಣ ಪ್ರಮಾಣದ ಕೈಗಾರಿಕೆಗಳು ಸ್ವರೂಪದಲ್ಲಿ ಸಹಾಯಕ ಕೈಗಾರಿಕೆಗಳಾಗಿವೆ. ಅವು ದೊಡ್ಡ ಕೈಗಾರಿಕೆಗಳಿಗೆ ಅಗತ್ಯವಾದ ವಸ್ತುಗಳನ್ನು ಉತ್ಪಾದಿಸುತ್ತವೆ. ದೇಶದ ಕೈಗಾರಿಕೋದ್ಯಮ ಮತ್ತು ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಈ ಕೈಗಾರಿಕೆಗಳ ಪಾತ್ರ ಅತ್ಯಂತ ಮಹತ್ವಪೂರ್ಣ. ಕೈಗಾರಿಕಾ ಕ್ಷೇತ್ರದಲ್ಲಿ ಮುಂದುವರಿದಿರುವ ರಾಷ್ಟ್ರಗಳಲ್ಲಿ ಬೃಹತ್ ಕೈಗಾರಿಕೆಗಳ ಜೊತೆ ಜೊತೆಗೆ ಸಣ್ಣ ಪ್ರಮಾಣದ ಕೈಗಾರಿಕೆಗಳು ಹಬ್ಬಿಕೊಂಡಿರುವುದನ್ನು ಕಾಣಬಹುದು.

ಸಣ್ಣ ಪ್ರಮಾಣದ ಕೈಗಾರಿಕೆಗಳ ವಿಕೇಂದ್ರೀಕರಣ ಸುಲಭವಾಗಿರುವುದರಿಂದ ಸರ್ವತೋಮುಖ ಆರ್ಥಿಕ ಪ್ರಗತಿ ಸಾಧ್ಯವಾಗುತ್ತದೆ. ಸರ್ಕಾರವು ಈ ದಿಶೆಯಲ್ಲಿ ಅನೇಕ ಕ್ರಮಗಳನ್ನು ಕೈಗೊಂಡಿದೆ. ಆರ್ಥಿಕ ಮತ್ತು ಹಣಕಾಸಿನ ನೆರವು, ತರಬೇತಿ ಕಾರ್ಯಕ್ರಮ, ತಾಂತ್ರಿಕ ಮಾಹಿತಿ ಪೂರೈಕೆ, ಇವು ಸರ್ಕಾರವು ಕೈಗೊಂಡ ಕ್ರಮಗಳಲ್ಲಿ ಮುಖ್ಯವಾಗಿವೆ.

ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಘಟನೆಯು ರಾಜ್ಯ ಸರ್ಕಾರಗಳ ಹೊಣೆಯಾಗಿದೆ. ಸಣ್ಣ ಪ್ರಮಾಣದ ಕೈಗಾರಿಕೋದ್ಯಮಿಗಳಿಗೆ ನೆರವಾಗಲು ರಾಜ್ಯ ಸರ್ಕಾರಗಳು ನಡೆಸಿರುವ ಯತ್ನಗಳಲ್ಲಿ ಸಹಭಾಗಿಯಾಗಲು ಕೇಂದ್ರ ಸರ್ಕಾರವು ಎರಡು ಸಂಸ್ಥೆಗಳನ್ನು ಸ್ಥಾಪಿಸಿದೆ. ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ಪೂರೈಕೆ ಮಂತ್ರಿಶಾಖೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ಕಮಿಷನರ್‌ರವರ ಕಛೇರಿಯು ಈ ಸಂಸ್ಥೆಗಳ ಪೈಕಿ ಒಂದಾಗಿದೆ. ರಾಷ್ಟ್ರೀಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಕಾರ್ಪೊರೇಶನ್ ಎರಡನೆಯ ಸಂಸ್ಥೆಯಾಗಿದೆ. ಅಭಿವೃದ್ಧಿ ಕಮಿಷನರ್‌ರವರ ಕಛೇರಿಯು ಸಣ್ಣ ಪ್ರಮಾಣದ ಕೈಗಾರಿಕೆಗಳ ಸೇವಾ ಸಂಸ್ಥೆಗಳು ಮತ್ತು ಕೈಗಾರಿಕಾ ವಿಸ್ತರಣ ಸೇವಾ ಕೇಂದ್ರಗಳ ಮೂಲಕ ನೆರವು ನೀಡುತ್ತಿದೆ. ವಿಶಿಷ್ಟ ಕೈಗಾರಿಕೆಗಳಲ್ಲಿ ಮತ್ತು ಪ್ರದೇಶಗಳಲ್ಲಿ ಆರ್ಥಿಕ ಸ್ಥಿತಿಯ ಸಮೀಕ್ಷೆ ನಡೆಸುವುದು, ಸಣ್ಣ ಪ್ರಮಾಣದ ಕೈಗಾರಿಕಾ ವಿಭಾಗಗಳಿಗೆ ಸುಧಾರಿಸಿದ ತಾಂತ್ರಿಕ ವಿಧಾನಗಳ ಬಗೆಗೆ ಸಲಹೆ ನೀಡುವುದು, ಕೈಗಾರಿಕಾ ವಿಸ್ತರಣ ಕೇಂದ್ರಗಳಲ್ಲಿ ಮತ್ತು ಸಂಚಾರಿ ಕಾರ್ಯಾಧ್ಯಯನ ವಿಭಾಗಗಳಲ್ಲಿ ಈ ವಿಧಾನಗಳ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು, ಸಣ್ಣ ಪ್ರಮಾಣದ ಕೈಗಾರಿಕೋದ್ಯಮಿಗಳಿಗೆ ಈ ಕೈಗಾರಿಕೆಗಳ ಉಸ್ತುವಾರಿಗೆ ಸಂಬಂಧಿಸಿದಂತೆ ಶಿಕ್ಷಣ ನೀಡುವುದು, ಅಭಿವೃದ್ಧಿ ಕಮಿಷನರ್‌ರವರ ಕಛೇರಿಯು ನಿರ್ವಹಿಸುವ ಮುಖ್ಯ ಕಾರ್ಯವಾಗಿದೆ.

ರಾಷ್ಟ್ರೀಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಕಾರ್ಪೊರೇಶನ್ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಅನೇಕ ವಿಧದಲ್ಲಿ ನೆರವಾಗುತ್ತಿದೆ. ಕಂತಿನ ಮೇಲೆ ಯಂತ್ರೋಪಕರಣಗಳನ್ನು ಪೂರೈಸುವುದು, ಕೆಲವು ಕೈಗಾರಿಕೆಗಳ ಉತ್ಪನ್ನಗಳನ್ನು ಮಾರಾಟ ಮಾಡುವುದು, ಕೇಂದ್ರ ಸರ್ಕಾರದ ಸಾಮಗ್ರಿಗಳನ್ನು ಕೊಳ್ಳುವ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಅವುಗಳಿಗೆ ನೆರವಾಗುವುದು, ಈ ಕೈಗಾರಿಕೆಗಳ ಉತ್ಪಾದನಾ ಕಾರ್ಯದಲ್ಲಿ ಅಗತ್ಯವಾದ ತಾಂತ್ರಿಕ ಸೇವೆಯನ್ನು ಸಲ್ಲಿಸುವುದು, ರಾಷ್ಟ್ರೀಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಕಾರ್ಪೊರೇಶನ್ ನಿರ್ವಹಿಸುತ್ತಿರುವ ಮುಖ್ಯ ಕಾರ್ಯಗಳಾಗಿವೆ.

ಹಣಕಾಸಿನ ನೆರವು

ರಾಜ್ಯಗಳಲ್ಲಿನ ಕೈಗಾರಿಕಾ ಡೈರೆಕ್ಟರೇಟುಗಳು ಕಚ್ಚಾ ವಸ್ತುಗಳು ಮತ್ತು ವಿದ್ಯುಚ್ಛಕ್ತಿಯನ್ನು ಪೂರೈಸುವ ಮೂಲಕ ಸಣ್ಣ ಕೈಗಾರಿಕೆಗಳಿಗೆ ಅಗತ್ಯವಾದ ಸಾರಿಗೆ ಸೌಲಭ್ಯಗಳನ್ನು ಮತ್ತು ಭೂಮಿಯನ್ನು ಪೂರೈಸುವ ಮೂಲಕ ಅವುಗಳ ಅಭಿವೃದ್ಧಿಗೆ ಕಾರಣವಾಗಿವೆ. ಸಣ್ಣ ಕೈಗಾರಿಕೆಗಳಿಗೆ ಆಮದು ಲೈಸನ್ಸ್ ಪಡೆಯಲು ಬೇಕಾಗುವ ಸರ್ಟಿಫಿಕೇಟುಗಳನ್ನೂ ಅವು ನೀಡುತ್ತವೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್ ಇವೇ ಮೊದಲಾದ ಸಂಸ್ಥೆಗಳು ಈ ಕೈಗಾರಿಕೆಗಳಿಗೆ ಅಗತ್ಯವಾದ ಹಣಕಾಸಿನ ನೆರವು ನೀಡುತ್ತವೆ. ರಾಜ್ಯ ಸರ್ಕಾರಗಳೂ ಸಹ ಕೈಗಾರಿಕೆಗಳಿಗೆ ಸರ್ಕಾರದ ನೆ

ಮದ್ರಾಸಿನ ಪಾದರಕ್ಷಾ ತರಬೇತಿ ಕೇಂದ್ರದಲ್ಲಿ ತರಬೇತಿದಾರರು ಅಧ್ಯಯನಶೀಲರಾಗಿದ್ದಾರೆ.

ರವು ನೀಡುವ ಸಂಬಂಧವಾದ ಕಾನೂನಿನ ಪ್ರಕಾರ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಾಲ ನೀಡುತ್ತವೆ. ಇತ್ತೀಚೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ಆರ್ಥಿಕ ನೆರವಿನ ಸಂಬಂಧವಾಗಿ ಸುನಿರ್ದಿಷ್ಟ "ಗ್ಯಾರಂಟಿ ಸ್ಕೀಂ" ಒಂದನ್ನು ಅಂತಿಮವಾಗಿ ವ್ಯವಸ್ಥೆಗೊಳಿಸಲಾಗಿದೆ. ಈ ಕಾರ್ಯ ಯೋಜನೆಯ ಪ್ರಕಾರ ಎಲ್ಲಾ ಮಟ್ಟಗಳಲ್ಲಿನ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಹಣಕಾಸಿನ ನೆರವು ದೊರೆಯುವುದು.

ಸಣ್ಣ ಪ್ರಮಾಣದ ಕೈಗಾರಿಕೆಗಳ ಕೇಂದ್ರ ಸಂಸ್ಥೆಯು ಅನೇಕ ಸಣ್ಣ ಪ್ರಮಾಣದ ಕೈಗಾರಿಕಾ ಸೇವಾ ಸಂಸ್ಥೆಗಳು, ವಿಸ್ತರಣ ಮತ್ತು ಉತ್ಪಾದನಾ ಕೇಂದ್ರಗಳ ಮೂಲಕ ಈ ತರಬೇತಿ ಸೌಲಭ್ಯಗಳನ್ನು ಒದಗಿಸುತ್ತಿದೆ.

ಸಣ್ಣ ಪ್ರಮಾಣದ ಕೈಗಾರಿಕೋದ್ಯಮಿಗಳ ಅಗತ್ಯಗಳನ್ನು ಪೂರೈಸಲು ತಾಂತ್ರಿಕ ಸಲಹಾ ಸೇವಾ ವಿಭಾಗವನ್ನು ಸ್ಥಾಪಿಸಲಾಗಿದೆ. ಕೈಗಾರಿಕೆಗಳನ್ನು ಆರಂಭಿಸಲು ಅವರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ವಿಶಿಷ್ಟ ಬಗೆಯ ವಸ್ತುಗಳಿಗೆ ಈಗ ಹಾಗೂ ಭವಿಷ್ಯದಲ್ಲಿ ಇರಬಹುದಾದ ಬೇಡಿಕೆ, ಕೈಗಾರಿಕೆಗಳ ಉತ್ಪಾದನಾ ಸಾಮರ್ಥ್ಯ ಹಾಗೂ, ವಾಸ್ತವ ಉತ್ಪಾದನೆಯ ಅಂದಾಜು ಮಾಡುವಲ್ಲಿ ಅವರಿಗೆ ನೆರವು ನೀಡಲಾಗುತ್ತಿದೆ. ಸಣ್ಣ ಪ್ರಮಾಣದ ಕೈಗಾರಿಕೋದ್ಯಮಿಗಳು ಕಚ್ಚಾ ವಸ್ತುಗಳು, ವಿದ್ಯುಚ್ಛಕ್ತಿ ಮತ್ತು ತರಬೇತಿ ಹೊಂದಿದ ಕಾರ್ಮಿಕ ಸಿಬ್ಬಂದಿ, ಮಾರುಕಟ್ಟೆ ಸಾಗಣೆ ಇವೇ ಮೊದಲಾದ ಸಂಗತಿಗಳನ್ನು ಪರಿಶೀಲಿಸಿ ಕೈಗಾರಿಕೆಯನ್ನು ಸ್ಥಾಪಿಸಲು ಸೂಕ್ತವೆಂದ ನಿವೇಶನವನ್ನು ಆರಿಸಿಕೊಳ್ಳುವಂತೆ ಅವರಿಗೆ ನೆರವಾಗುವುದು ಸಲಹಾ ಸೇವೆಯ ಮುಖ್ಯ ಕಾರ್ಯಗಳಲ್ಲೊಂದಾಗಿದೆ. ರಾಷ್ಟ್ರದ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿ ಕಾರ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಮಹತ್ವಪೂರ್ಣ ಪಾತ್ರ ನಿರ್ವಹಿಸುತ್ತವೆ. ಈ ಕೈಗಾರಿಕೆಗಳ ಅಭಿವೃದ್ಧಿಯ ಮೇಲೆಯೇ ರಾಷ್ಟ್ರದ ಉತ್ಕರ್ಷವು ಅವಲಂಬಿಸಿದೆ.

ಸೇನೆ ಸೇರಬಯಸುವ ಈ ಯುವಕ ಶಾರೀರಿಕ ದಕ್ಷತೆಯ ಪರಿಶೀಲನೆಗೆ ಗುರಿಯಾಗಿದ್ದಾನೆ.

ಸ್ವದೇಶ ರಕ್ಷಣೆಗಾಗಿ ಯೋಧರಿಗೆ ತರಬೇತಿ

ಭಾರತೀಯ ಯುವಕನು— ದೇಶದ ಯಾವುದೇ ಭಾಗದಿಂದ ಬಂದವನಾಗಿರಲಿ —ಉತ್ತಮ ಯೋಧನಾಗಿದ್ದಾನೆ. ಅಸಾಧಾರಣವಾದ ದೇಶಭಕ್ತಿಯಿಂದ ಪ್ರೇರಿತನಾಗಿ ಅವನು ರಕ್ಷಣಾ ಬಲವನ್ನು ಸೇರುತ್ತಾನೆ. ಸಾಹಸ ಪ್ರಿಯರಾದ, ಪ್ರವಾಸ ಮತ್ತು ಕ್ರೀಡಾ ಪ್ರೇಮಿಗಳಾದ ಯುವಜನರಿಗೆ ರಕ್ಷಣಾ ಬಲವು ಅನೇಕ ಸದವಕಾಶಗಳನ್ನು ಒದಗಿಸುತ್ತದೆ.

ಯೋಧನಾಗಲು ಜೀವನದುದ್ದಕ್ಕೂ ತರಬೇತಿ-ಸಿದ್ಧತೆ, ಸಂಪೂರ್ಣ ಸಮರ್ಪಣಾ ಭಾವನೆ, ಅಸಾಮಾನ್ಯ ಶಿಸ್ತು ಇವೇ ಮೊದಲಾದ ಗುಣಗಳು ಅಗತ್ಯವಾಗಿವೆ. ಈ ವೃತ್ತಿಗೆ ಬೇಕಾದ ಬೌದ್ಧಿಕ ಹಾಗೂ ದೈಹಿಕ ದಕ್ಷತೆ ನಿರಂತರವಾದ ತರಬೇತಿಯಿಂದ ಮಾತ್ರ ಸಾಧ್ಯವಾಗುತ್ತದೆ.

ರಕ್ಷಣಾ ಬಲದಲ್ಲಿ ಉತ್ತಮ ಭವಿಷ್ಯದ ಆಸೆಯಿಟ್ಟುಕೊಂಡಿರುವ ಯುವಜನರು ದೃಢಕಾಯರಾಗಿರಬೇಕಾಗುತ್ತದೆ. ವಿಜ್ಞಾನ ಮತ್ತು ತಂತ್ರ ಶಾಸ್ತ್ರದ ಪ್ರಗತಿಯಿಂದಾಗಿ ಶಸ್ತ್ರಾಸ್ತ್ರಗಳು ಮತ್ತು ಇತರ ಸಾಧನಸಾಮಗ್ರಿಗಳು ಹೆಚ್ಚು ಕ್ಲಿಷ್ಟವಾಗುತ್ತ ನಡೆದಿವೆ.

ಧೀರರಾದ, ಕುಶಾಗ್ರಮತಿಗಳಾದ ಯೋಧರು ಯುದ್ಧೋಪಕರಣಗಳ ಬಳಕೆಯ ವೇಳೆ ಹತೋಟಿಯಿಟ್ಟುಕೊಳ್ಳಬಲ್ಲರು. ಯೋಧನಲ್ಲಿ ಉತ್ಸಾಹ, ಮುಂದಾಳುತನ, ಶಿಸ್ತಿನ ಮನೋಭಾವ, ಇವೇ ಮೊದಲಾದ ಗುಣಗಳು ಅಗತ್ಯ. ಅವನು ಆಜ್ಞೆಗಳನ್ನು ನೀಡಬೇಕಾದ ಅಥವಾ ಪಾಲಿಸಬೇಕಾದ ವ್ಯಕ್ತಿಯಾಗಿರುವುದರಿಂದ ಈ ಗುಣಗಳು ಅಗತ್ಯವಾಗಿವೆ

ಯೋಧನು ದೃಢ ನಿರ್ಧಾರ, ಪ್ರಾಮಾಣಿಕ ಉದ್ದೇಶ, ಸಂಘಜೀವನಕ್ಕೆ ಹೊಂದಿಕೊಳ್ಳುವ ಮನೋಭಾವದವನಿರಬೇಕು. ಮೈತ್ರಿಯಿಂದಿರುವುದು ಮತ್ತು ಒಟ್ಟಾಗಿ ಕೆಲಸಮಾಡುವುದು ಯೋಧನ ವೈಶಿಷ್ಟ್ಯ. ಯೋಧರಲ್ಲಿ ಸಹೋದರ ಭಾವನೆ ಎಲ್ಲಕ್ಕೂ ಮಿಗಿಲಾಗಿ ಕಂಡುಬರುವ ಗುಣ.

ಮೊದಲ ಅನುಭವ

ಹೊಸದಾಗಿ ಸೇನೆಯನ್ನು ಸೇರಿದ ಅಭ್ಯರ್ಥಿಯು ರಕ್ಷಣಾ ಬಲದ ತರಬೇತಿ ಕೇಂದ್ರ ಅಥವಾ ಶಾಲೆಯಲ್ಲಿ ಸೈನಿಕ ಜೀವನದ ಮೊದಲ ಅನುಭವ ಪಡೆಯುತ್ತಾನೆ. ಅವನು ರಕ್ಷಣಾ ಬಲದ ಯಾವುದೇ ವಿಭಾಗವನ್ನೇ ಸೇರಲಿ, ಪ್ರಾರಂಭಿಕವಾಗಿ ದಕ್ಷತೆಯನ್ನು ಗಳಿಸಬೇಕಾಗುತ್ತದೆ. ಸಮವಸ್ತ್ರವನ್ನು ಹೇಗೆ ಧರಿಸಬೇಕು? ಶಸ್ತ್ರಾಸ್ತ್ರಗಳನ್ನು ಹೇಗೆ ಉಪಯೋಗಿಸಬೇಕು? ಹೇಗೆ ನಡೆಯಬೇಕು? ಹೇಗೆ ನಿಂತು ವಂದನೆ ಸಲ್ಲಿಸಬೇಕು? ಇವೇ ಮೊದಲಾದ ಸಂಗತಿಗಳನ್ನು ಯೋಧನು ಅಗತ್ಯವಾಗಿ ಅರಿತುಕೊಳ್ಳಬೇಕಾಗುತ್ತದೆ. ಮೂಲಭೂತವಾದ ಮಿಲಿಟರಿ ತಂತ್ರಗಳಲ್ಲಿ ಅವನು ನಿಪುಣನಾಗಿರಬೇಕು. ಆತ್ಮ ರಕ್ಷಣೆಗೆ, ತನ್ನ ದಳದ ರಕ್ಷಣೆಗೆ ಅಂತಿಮವಾಗಿ ದೇಶ ರಕ್ಷಣೆಗೆ ಈ ಬಗೆಯ ತಿಳುವಳಿಕೆ ಅನಿವಾರ್ಯವಾಗಿದೆ.

ತರಬೇತಿಯ ಮೂಲಕ ಯೋಧನಲ್ಲಿ ರೈಫಲ್ ಮತ್ತು ಇತರ ಸೂಕ್ಷ್ಮ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವ ವಿಷಯದಲ್ಲಿ ವಿಶ್ವಾಸವನ್ನು ವೃದ್ಧಿಗೊಳಿಸಲಾಗುತ್ತದೆ. ಕ್ರಮೇಣ ರೈಫಲ್ ಯೋಧನ ಅ

(ನಾಲ್ವತ್ತನೇ ಪುಟ ನೋಡಿರಿ)

ಪ್ರಾದೇಶಿಕ ತರಬೇತಿ ಕೇಂದ್ರವೊಂದರಲ್ಲಿ ಜವಾನರು ಸಮರ ತಂತ್ರವನ್ನು ಹಗುರವಾದ ಮೆಷಿನ್ ಗನ್‌ಗಳೊಡನೆ ಅಧ್ಯಯನ ಮಾಡುತ್ತಿದ್ದಾರೆ.

ಕೆಸರಿನಲ್ಲಿ ತಾವರೆ

(ಪತ್ತೊಂಭತ್ತನೇ ಪುಟದಿಂದ)

ಮೇಲ್ಪಟ್ಟವ ನಿಮ್ಮಲ್ಲಿ ಅವನ ಸರಳ ಜೀವನ, ಜನಪ್ರಿಯತೆ ತಲೆಸಿಡಿತವನ್ನು ತಂದರೂ, ಆವಾರಂತವರ ಆಗತ್ಯ ಈಗ ಭಾರತಕ್ಕಿದೆ ಎನ್ನುವೆ— ಮೇಲ್ಪಟ್ಟದ ನಿನಗೆ ಅನೇಕವಾದ ಹೂಲಿ ವೃದ್ಧೇ (ಅರೇ... ಗಂಡಂದಿರನ್ನು ಮನೆಗೆ ಕಳುಹಿಸಿ, ನಿಮಗಾಗಿ ಲಿಪ್‌ಸ್ಟಿಕ್ ಹಚ್ಚಿ ಕೂತ ತಾರೆಯರಿದ್ದಾರೆ.) ತಕ್ಕುದು! ನಿಮ್ಮಂಥ ಸಂಕುಚಿತ ಮನೋಮಟ್ಟದವರು ಹೆಚ್ಚಾದರೆ, ಸಿರಿವಂತರನ್ನು ದ್ವೇಷಿಸುವ ಹೊಸ ಸಮಾಜವೊಂದು ಸೃಷ್ಟಿಯಾಗುವುದರಲ್ಲಿ ಸಂಶಯವಿಲ್ಲ! ಪಾಶ್ಚಾತ್ಯ ವಿದ್ಯಾಭ್ಯಾಸವನ್ನು ಕಲಿತುಕೊಂಡ ನಾವು ಅವರ ಯಾವುದೇ ವಿಶಿಷ್ಟ ಗುಣವನ್ನೂ ಬೆಳೆಸಿಕೊಂಡಿಲ್ಲ.

ಕೆಸರಿನಲ್ಲಿ ಕಮಲ

ಗಗನ ವಿಹಾರಿಯಾಗಿ ಸಿರಿವಂತರ ಮಿತ್ರತ್ವವನ್ನೇ ಅಪೇಕ್ಷಿಸಿ ಸೋತು, ನಿಮ್ಮ ಕಿಸೆ ಬರಿದಾದ ಮೇಲೆ ಮತ್ತು ಬರಿದಾಗಿ ಮೂಲೆಸೇರಿದ ಮೇಲೆ ನಿಮ್ಮನ್ನು ಬಹು ಕೀಳ್ಮಟ್ಟದ ವ್ಯಕ್ತಿಗಳ ಜೀವನದೆಡೆಗೆ ಕೊಂಡೊಯ್ಯುವೆ! ಭಾರತೀಯ ಚಲಚಿತ್ರರಂಗದ ನೆಚ್ಚಿನ ಹಾಸ್ಯನಟನಾದ "ಜೋಹಾರ"ನನ್ನು ಕೇಳಿ. ಎಂ. ಎ. ಪದವೀಧರನಾದ ಅವನು ಎಂತಹ ಗಹನ ವಿಚಾರವನ್ನೂ ಬರೇ ತನ್ನ ತಿಳಿ ನಗೆಯಲ್ಲಿ ಕರಗಿಸಬಲ್ಲವನಾಗಿದ್ದಾನೆ – "ಜೀವಮಾನವಿಡೀ ನಗಲಾರೆವು" ಒಂದು ಶಪಥ ತೊಟ್ಟು ಅವೆಷ್ಟೋ ಆಫೀಸರುಗಳು ಅವನನ್ನು ಕಂಡ ಕೂಡಲೇ ನಗಾಡುತ್ತಾರೆ. ಉತ್ತಮ ಲೇಖಕನೂ ಆದ ಅವನು ಹೇಳುತ್ತಾನೆ 'ಬೀದಿ ಜನರ ಮಿತ್ರತ್ವದಲ್ಲಿ ಕುತೂಹಲವಿದೆ, ಸಂತೋಷವಿದೆ ಎಂದು'—ಈ ಕೆಳಗಿನ ಉದಾಹರಣೆ ಕೊಡುತ್ತಾನೆ— "ನಾಗಪುರದಿಂದ ಬಹು ದೂರದ ಹಳ್ಳಿಗೆ ನಾನೊಮ್ಮೆ ನನ್ನದೇ ಆದ ಹೀರಾ ಹಳೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದೆ. ಸಿರಿವಂತರು ನಾಯಿಗಳನ್ನು ಸಾಕುತ್ತಾರೆ ಆದರೆ ನಾನು 'ಮಂಗನ ಮರಿ'ಯನ್ನು ಸಾಕುತ್ತಿದ್ದೆ. ಕಾರಣ ನಾಯಿ ಬೊಗಳುತ್ತದೆ. ಆದರೆ ಮಂಗ ಬೊಗಳುವುದಿಲ್ಲ. ನಾನು ಮತ್ತು ಮಂಗವನ್ನು ಬಿಟ್ಟರೆ ಆ ನಿರ್ಜನ ಪ್ರದೇಶದಲ್ಲಿ ಯಾರೂ ಇರಲಿಲ್ಲ. ಉರಿ ಬಿಸಿಲಿನ ಆ ಒಂದು ಜಾಗದಲ್ಲಿ ಮೋಟಾರು ಕಾರು ನೀರಿಗಾಗಿ ಸತ್ಯಾಗ್ರಹ ಹೂಡಿತು. ಮರಗಿಡಗಳೇ ಇಲ್ಲದ ಆ ಜಾಗದಲ್ಲಿ ನೀರು ಎಲ್ಲಿಂದ ಬರಬೇಕು? ನನ್ನ ಕಾರಿನಲ್ಲಿ ನಾನು ಯಾವಾಗಲೂ ಕಾದಿರಿಸಿಕೊಂಡಿದ್ದ ಬೋರ್ಡೊಂದಿತ್ತು. ಅದನ್ನು ಹೊರತೆಗೆದು ನನ್ನ ಸೊಂಟಕ್ಕೆ ಸುತ್ತಿಕೊಂಡು, ಸಿಗರೇಟು ಸೇದುತ್ತಾ ಕಾರಿನ ಮುಂದೆ ನಿಂತೆ. ಆಗ, ಮಾರ್ಗದಲ್ಲಿ ಅತ್ತಿತ್ತ ಚಲಿಸುವ ಹಲವಾರು ಕಾರುಗಳು ನಾನು ತಗಲಿಸಿಕೊಂಡ ಬೋರ್ಡನ್ನು "(I want help)" ಓದುತ್ತಾ ಕೈ ಚಪ್ಪಾಳೆ ತಟ್ಟಿ ಮುಂದುವರಿಯುತ್ತಿದ್ದರು. ಯಾರೂ ಸಹಾಯ ಮಾಡಲಿಲ್ಲ. ಕಟ್ಟಕಡೆಗೆ ಬಹುದೂರದಿಂದ ಆರು ಮಂದಿ ಪೋಲಿಗಳು ಬರುವುದನ್ನು ಕಂಡೆ. ಸಪ್ಪಗಿನ ಮೀಸೆಯನ್ನು ಬಿಟ್ಟಿದ್ದರು. ತಲೆ ಕೆದರಿತ್ತು. ಬಣ್ಣದ ವಸ್ತ್ರವನ್ನು ಕುತ್ತಿಗೆಗೆ ಸುತ್ತಿಕೊಂಡಿದ್ದರು. ಯಾವುದೋ ಸಿನೇಮಾ ಪದ್ಯ ಹಾಡುತ್ತಿದ್ದರು. ಹತ್ತಿರದ ಕಾರ್ಖಾನೆಯಿಂದ ದುಡಿದು ಮನೆ ಸೇರುವವರಿದ್ದಿರಬೇಕು—ಅವರು ನನ್ನಿಂದಲೂ ನನ್ನ "ಮಂಗ"ನನ್ನು ತುಂಬಾ ಮೆಚ್ಚಿದರು. ಬಹುದೂರದಿಂದ ನೀರು ತಂದು ನನ್ನ ಕಾರನ್ನು ಚಲಿಸುವಂತೆ ಮಾಡಿದರು. ಮಂಗನಿಗಾಗಿ "ನೆಲಕಡಲೆ"ಯ ಕಾಯಿಗಳನ್ನೂ ಕೊಟ್ಟರು. ಅವರು ನಾನು ಕೊಟ್ಟ ಹಣವನ್ನೂ ನಿರಾಕರಿಸಿದರು. ತಾವು ಸುತ್ತಿಕೊಂಡ ಬಣ್ಣದ ಟವೆಲನ್ನು ಮೇಲಕ್ಕೆ ಹಾರಿಸಿ ನನ್ನನ್ನು ಸಂತೋಷದಿಂದ ಬೀಳ್ಕೊಟ್ಟರು.... "ಈಗ ನಾನೆನ್ನುವೆ, ಆ ಪೋಲಿಗಳ ಹೃದಯ ತುಂಬಾ ಬಿಳಿದಾಗಿತ್ತೆಂದು! ಅದೆಷ್ಟು ಬಿಳಿಯೆಂದರೆ ನೀವು ಧರಿಸಿದ ಟೊಪ್ಪಿಗಿಂತಲೂ ಬಿಳಿಯಿತ್ತು!

ತಕ್ಷಣ ಬದಲಿಸಿರಿ!!

ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಬೇಡಿ. ಕೆಲ ಸಿರಿವಂತ ಮಿತ್ರರಲ್ಲೂ ಯೋಗ್ಯ ರತ್ನಗಳಿವೆ. ಆದರೆ ಸರಿಯಾಗಿ ಪರೀಕ್ಷಿಸಿ. ನಿರಾಶ್ರಿತ ವಸತಿಯಲ್ಲಿ ಸರಕಾರದವರು ಬೆಳಗ್ಗೆ ಗಂಜಿಯನ್ನು ಹಂಚುತ್ತಾರಂತೆ! ಅಲ್ಲಿಯ ಗಡಿಬಿಡಿಯ ಜುಗುಪ್ಸೆಯ ಜೀವನದಲ್ಲೂ, ಒಬ್ಬನು ಮತ್ತೊಬ್ಬನಿಗೆ ಧೈರ್ಯ, ಆತ್ಮವಿಶ್ವಾಸವನ್ನು ಹುಟ್ಟಿಸಲು ಪ್ರೇರಕನಾಗಿದ್ದಾನೆಂದು ಬಾಪೂಜಿಯವರ ಶಿಷ್ಯರಾದ ಪ್ಯಾರೇಲಾಲರು ಕಂಡುಕೊಂಡಿದ್ದಾರೆ. ಹಿಂದೊಮ್ಮೆ 'ಬೀಡಿ' ಕಟ್ಟಿಗಾಗಿ ಹೆರವರ ಜೇಬನ್ನು ನೋಡುತ್ತಿದ್ದ ಆಸಾಮಿಯೊಬ್ಬರು ಈಗ ಭಾರಿ ಕುಬೇರರಾಗಿದ್ದಾರೆ. ಆಗ ಸಿರಿವಂತರೆಲ್ಲಾ ಅವನನ್ನು ದ್ವೇಷಿಸುತ್ತಿದ್ದರು. ಆದರೆ ಈಗ ಆ ಕುಬೇರರೊಡನೆಯೇ ಜೀವಿಸುತ್ತಿದ್ದಾರೆ. ಮತ್ತು ತಾನು ಮೊದಲಿದ್ದ ಹೀನಸ್ಥಿತಿಯನ್ನು ಮರೆತಿದ್ದಾರೆ. ಪಾಪ, ಅವರಿಗೀಗ ಹಿಂದೆ ಉಪಕಾರ ಮಾಡಿದವರ ಗುರುತೇ ಸಿಗುವುದಿಲ್ಲವಂತೆ! ಅದರೊಂದು, ಕಾಲ ಒಂದೇ ರೀತಿ ಇರುವುದಿಲ್ಲವೆನ್ನಿ! ಪ್ರತಿಯೊಂದು ಸುಕೋಮಲ ಪುಷ್ಪವೂ ಇರುವುದು ನಿಬಿಡವಾದ ಮುಳ್ಳಿನ ಮಧ್ಯೆ, ಅಥವಾ ಕೆಸರಿನಲ್ಲಿ ಎಂಬುದನ್ನು ಮಾತ್ರ ಮರೆಯದಿರಿ—

ಅದಕ್ಕೇ ಹೇಳುವುದು "Chance dispenses life with unequal justice"—ಎಂದು!

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು:

- ಶಾಸ್ತ್ರೀಯ ನೇತ್ರಪರೀಕ್ಷೆ—ಲಂಡನ್ನಿನಲ್ಲಿ ನೇತ್ರ ಪರೀಕ್ಷೆಯ ಪದವಿ ಪಡೆದವರಿಂದ
- ಮೆಳ್ಳದೃಷ್ಟಿಯ ನಿವಾರಣೆ— ಅಪರೇಷನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು ● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವುವು



ಕಾರ್ಕಳ ಮುನ್ಸೀಫ್ ಕೋರ್ಟಿನಲ್ಲಿ.

O. S. No. 117/1965.

ಅಬ್ಬಂಣ ಬೆಟ್ಟ ಪಾರ್ಶ್ವನಾಥ ಸ್ವಾಮಿ ಬಸದಿ ಮುಖಾಂತರ ಅದರ ಟ್ರಸ್ಟಿ ಜಿನರಾಜ ಇಂದ್ರ— } —ವಾದಿ

ಮತ್ತು

ಸರ್ವೋತ್ತಮ ಶೆಟ್ಟಿ ವಗೈರೆ —ಪ್ರತಿವಾದಿರು

[illegible]

೧ನೇ ಪ್ರತಿವಾದಿ, ಗುರುವಪ್ಪ ಶೆಟ್ಟಿ, [illegible] ಕಾರ್ಕಳ ತಾಲ್ಲೂಕು [illegible] ಗ್ರಾಮದ ಅಬ್ಬಂಣಬೆಟ್ಟು ಎಂಬಲ್ಲಿ ವಾಸವಾಗಿರುವವ—

ವಾದಿ ಬಸ್ತಿಗೆ ಅಸ್ತಿ ಜವಾಬ್ದಾರಿಯಿಂದ, ನಿಮ್ಮಿಂದ ಕೂಡ ಬಹಳ [illegible] ಸ್ಥಳಿಯ ಬಗ್ಗೆ ವಾದಿ ಬಸ್ತಿಯ ಕಡೆಯಿಂದ, ಅದರ ಟ್ರಸ್ಟಿಯು ಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 6-9-1965ನೇ ಬೆಳಗ್ಗೆ 10 ಗಂಟೆಗೆ ಇಟ್ಟಿರುವುದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆಯು ಇರುವಲ್ಲಿ ಸದರಿ ತಾರೀಕಿನಲ್ಲು ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದಾಗಿಯೂ, ತಪ್ಪಿದಲ್ಲಿ ಸದರಿ ದಾವೆಯು ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬ ದಾಗಿಯೂ ಮೂಲಕ ನಿಮಗೆ, ಕೋರ್ಟು ಹುಕುಮು ಪ್ರಕಾರ, ತಿಳಿಯಪಡಿಸೋಣಾಗುತ್ತದೆ—

S. Rajagopal Achar,
Advocate for Plaintiff.

Karkala,
ತಾರೀಕು 6-8-1965.

ಪುತ್ತೂರು ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟಿನಲ್ಲಿ

O. S. No. 356/1964.

ಬೊಮ್ಮ ಹೆಂಗ್ಸು ಕೂಡಾ —ವಾದಿರು.

ಮತ್ತು

ವೀರಪ್ಪ ಗೌಡ ಕೂಡಾ ಪ್ರತಿವಾದಿರು.

3ನೇ ಪ್ರತಿವಾದಿ ಭೋಜಪ್ಪ ಗೌಡ, ಓಡ್ಯಪ್ಪ ಗೌಡರ ಮಗ, ಪುತ್ತೂರು ತಾಲೂಕು ಗುತ್ತಿಗಾರು ಗ್ರಾಮದಲ್ಲಿರುವವರು— ಇವರಿಗೆ,

ಅಸ್ತಿ ಸ್ವಾಧೀನತೆ ವ ಮಿಗತೆ ವಗೈರೆ ವ್ಯಲಿ ಬಗ್ಗೆ ಸದ್ರಿ ವಾದಿರು ನಿಮ್ಮ ಮೇಲೆ ಕೂಡಾ ಮಾಡಿದ ಮೇಲ್ಕಂಡ ದಾವೆಯು ಸಾಕ್ಷ್ಯ ಹಾಜರಾತಿ ಬಗ್ಗೆ, ವಿವಾದಾಂಶವನು ನಿರ್ಧರಿಸುವ ಬಗ್ಗೆ ನಿಮ್ಮ ಕಡೆಯಿಂದ ಪ್ರತಿವಾದಿಸಲ್ಪಡುತ್ತದೋ ಇಲ್ಲವೋ ಎಂದು ತಿಳಿಯುವ ಬಗ್ಗೆ, ತಾ. 18-8-1965ಕ್ಕೆ ನ್ಯಾದೆಯಿರುವುದರಿಂದ, ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಆ ದಿನ ಬೆಳಗ್ಗೆ 11 ಗಂಟೆಗೆ ಹಾಜರಾಗಿ ಉದಾಹರಿಸತಕ್ಕದ್ದೆಂತಲೂ, ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ತೈಸಲು ಮಾಡಲಾಗುವದೆಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿದೆ.

(Sd.) K. T. BHAT.
Advocate for Pl[ff]

ಮೊಕ್ಕಾಂ ಪುತ್ತೂರು,
ತಾ. 7-8-1965.

ಭಾವೈಕ್ಯ ಸಾಧಿಸುವ ಬಗೆಯೆಂತು?

(ಹದಿನೆಂಟನೇ ಪುಟದಿಂದ)

ಸಂಗಡಗಳನ್ನೊಳಗೊಂಡಿವೆ. ಭಾರತದಲ್ಲಿರುವ ಪ್ರತಿಯೊಂದು ಧರ್ಮವೂ ನಮ್ಮ ಗೌರವಾದರಗಳಿಗೆ ಅರ್ಹವಾಗಿದೆ. ಇದು ಸಾವಿರಾರು ವರ್ಷಗಳಿಂದ ನಡೆದು ಬಂದ ನಮ್ಮ ಪರಂಪರೆ. ಆದರೆ ಪರಿಸ್ಥಿತಿ ಇಂದು ಬದಲಾಗಿದ್ದು ಜಾತಿಯ ಪೆಡಂಭೂತ ವಿವಿಧ ರಂಗಗಳಲ್ಲಿ ತಲೆ ಎತ್ತಿ ಬರುತ್ತಿರುವುದು ಗಂಡಾಂತರಕಾರಿ. ಯೋಗ್ಯತೆಯ ಜನ ಒಂದು ಜಾತಿಗೆ ಸೇರದವನಾದುದರಿಂದ ನಿಕೃಷ್ಟಾವಸ್ಥೆಯ ಜೀವನವನ್ನು ನಡೆಸಬೇಕಾಗಿ ಬಂದಿದೆ. ಭಾರತದ ಚುನಾವಣೆಗಳಲ್ಲಿ ಕೂಡಾ ಜಾತೀವಾರು ಕೋಮುವಾರುವಾಗಿ ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ನಿಲ್ಲಿಸಿ ಜಾತೀಯ ಆಧಾರದ ಮೇಲೆ ಓಟುಗಳನ್ನು ಗಿಟ್ಟಿಸಿಕೊಳ್ಳುತ್ತಿವೆ. ಯಾವ ಜಾತೀಯ ವ್ಯಕ್ತಿಯೇ ಆಗಿರಲಿ ಅವನಲ್ಲಿ ಯೋಗ್ಯತೆ ಸತ್ಯಸಂಧತೆ, ಪರೋಪಕಾರಿ ಗುಣಗಳಿದ್ದರೆ ಆ ವ್ಯಕ್ತಿ ಪೂಜಾರ್ಹನಾಗುತ್ತಾನೆ. ಸಮಾಜದಲ್ಲಿರುವ ಅಂತಹ ವ್ಯಕ್ತಿಗಳನ್ನು ಗುರುತಿಸಿ ಪ್ರೋತ್ಸಾಹಿಸಿ ಗೌರವಗಳನ್ನಿತ್ತು ಆ ವ್ಯಕ್ತಿಗಳಿಗೆ ಭಾರತ ಮಾತೆಯ ಹೆಚ್ಚಿನ ಸೇವೆ ಮಾಡುವಂತಹ ಸುಸಂದರ್ಭಗಳನ್ನು ಒದಗಿಸಿ ಕೊಟ್ಟಲ್ಲಿ ನಮ್ಮ ರಾಷ್ಟ್ರದ ಅಸಂಖ್ಯಾತ ಸಮಸ್ಯೆಗಳಿಗೆ ಪರಿಹಾರ ಒದಗಿಸಿದಂತಾಗುವುದು. ನೀವು ನಮ್ಮ ಧರ್ಮಗಳನ್ನು ಅನುಸರಿಸುತ್ತಿರುವಾಗ 'ಭಾರತ ಧರ್ಮ'ವೆಂಬ ವಿಶಾಲ ಧರ್ಮವಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಅದೇ ಧರ್ಮದೊಡನೆ ಕೂಡಿ ಬಾಳಬೇಕು; ಕೂಡಿ ದುಡಿಯಬೇಕು; ಮತ್ತು ಕೂಡಿಯೇ ಮುನ್ನಡೆಯಬೇಕು.

ಪ್ರಜೆಗಳಾದ ನಮ್ಮೊಳಗೆ ಐಕ್ಯ, ಒಗ್ಗಟ್ಟು ಇಲ್ಲದ ಭಾರತ ಖಂಡಿತ ಉಳಿಯದು. ಭೂಲೋಕ —— ಜೆಟ್ ಸೂಪರ್ ಸೋನಿಕ್—ವಿಮಾನಗಳಿಂದಾಗಿ ಬಲು ಚಿಕ್ಕದಾಗಿ ಕೆಲವೇ ಘಂಟೆಗಳಲ್ಲಿ ಲೋಕದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹೋಗಿ ತಲುಪಬಹುದು. ಎಲ್ಲಾ ರಾಷ್ಟ್ರಗಳು ಈ ಆಧುನಿಕ ಸಂಶೋಧನೆಗಳಿಂದ ಹತ್ತಿರ ಬಂದುದರಿಂದ—ಒಂದು ರಾಷ್ಟ್ರದಲ್ಲಿ ಅಶಾಂತಿ ತಲೆದೋರಿದಲ್ಲಿ ಅದರ ಪರಿಣಾಮ ಇನ್ನೊಂದು ರಾಷ್ಟ್ರದ ಮೇಲೆ ಆಗಿಯೇ ತೀರುವುದು. ರಾಷ್ಟ್ರದೊಳಗೆ ಐಕ್ಯ ಇಲ್ಲದಿದ್ದಲ್ಲಿ ಸುಲಭದಲ್ಲಿ ಆ ರಾಷ್ಟ್ರ ತನ್ನ ಸ್ವಾತಂತ್ರ್ಯ ಕಳೆದುಕೊಳ್ಳುವುದು. ೨೫ ವರ್ಷಗಳ ಹಿಂದೆ 'ಕೊಂಗೊ' ರಾಜ್ಯ ಇದೆ ಎಂಬುದಾಗಿ ಯಾರೂ ಭಾವಿಸಿರಲಿಕ್ಕಿಲ್ಲ. ಆದರೆ ಇವತ್ತು 'ಕೊಂಗೊ' ಮೊಬ್ಬುಟು, ಲುಮುಂಬಾ ಕಸವುಬು ಹೆಸರುಗಳು ಹಳ್ಳಿಹಳ್ಳಿಗಳಲ್ಲಿಯ ಜನರ ನಾಲಗೆ ತುದಿಯಲ್ಲಿಯೂ ನಲಿಯುತ್ತಿವೆ.

ಭಾರತದಲ್ಲಿ ಶಿಸ್ತು, ಸಂಯಮ ಮತ್ತು ಐಕ್ಯ ಮೊದಲು ಕಂಡು ಬರಬೇಕು. ಅದು ಹೃದಯ ಮತ್ತು ಬುದ್ಧಿಗಳ ಶಿಸ್ತು ಹಾಗೂ ಹೃದಯ ಮತ್ತು ಬುದ್ಧಿಗಳ ಸಮ್ಮಿಲನದ ಸಂಕೇತವಾಗಿರಬೇಕೇ ವಿನಃ ಕೇವಲ ಬಾಹ್ಯ ಶಿಸ್ತು ಆಗಿರಬಾರದು. ಈ ರಾಷ್ಟ್ರೀಯ ಭಾವೈಕ್ಯದ ಸಮಸ್ಯೆಯು ನಮಗೊಂದು ಪಂಥಾಹ್ವಾನವಾಗಿದೆ. ನಾವು ಇಂದು ನಮ್ಮ ಇತಿಹಾಸದಲ್ಲಿಯ ಒಂದು ಕ್ರಾಂತಿಯ ಕಾಲದಲ್ಲಿ ಸಾಗುತ್ತಿದ್ದೇವೆ. ಆದರೆ ಆ ಕ್ರಾಂತಿಯ ದಾರಿಯಲ್ಲಿ ಇಂದು ನಮಗೆ ಇಷ್ಟವಾಗದ ಹಲವು ಸಂಗತಿಗಳು ಸಂಭವಿಸುತ್ತಿರುವುದು ಸ್ವಾಭಾವಿಕವೇ ಆಗಿದೆ.

ಈ ಸಂಕ್ರಾಂತಿ ಕಾಲದ ಎದುರಿನಲ್ಲಿ ಗಂಡಾಂತರಗಳನ್ನು ನೈಮಿತ್ತಿಕವಾಗಿ ಬರುವ ಅಡೆ-ತಡೆಗಳನ್ನು ಸಹ ಎದುರಿಸದ ಹೊರತು ನಾವು ಧೈರ್ಯವಾಗಿ ನಿಲ್ಲಲಾರೆವು. ನಮ್ಮ ಕೆಲ ಸಂಘಟನೆಗಳು ಅನುವಂಶಿಕವಾಗಿ ನಡೆದು ಬಂದಿವೆ. ಆದರೆ ಉಳಿದವು ನಾವು ಈಗ ಸಾಧಿಸುತ್ತಿರುವ ಪ್ರಗತಿಯ ಫಲವೇ ಆಗಿದೆ. ಆದ್ದರಿಂದ ನಾವು ಅವುಗಳಿಂದ ಎದೆಗುಂದಬಾರದು ಆ ತೊಂದರೆಗಳಲ್ಲಿ ಮುಖ್ಯವಾದುವೆಂದರೆ ಜಾತೀಯವಾದ, ಮತೀಯವಾದ, ಪ್ರಾಂತೀಯವಾದ, ಭಾಷಾವಾದ—ಮೊದಲಾದವುಗಳು. ನಮ್ಮನ್ನು ಸಂಕುಚಿತರನ್ನಾಗಿ ಮಾಡುವ ಮೇಲಿನ ವಿಷಯಗಳನ್ನು ತೊಡೆದು ಹಾಕಿದೆ. ನಮ್ಮ ಕಾಲ ಮೇಲೆ ನಾವು ನಿಲ್ಲಲಾರೆವು. ನಾವು ಭಾರತವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಬದಲಾಯಿಸಲು ಪ್ರಯತ್ನಿಸುತ್ತಿರುವಾಗ ಇವೆಲ್ಲ ನಮ್ಮ ದಾರಿಯಲ್ಲಿ ಅಡ್ಡ ಬಂದು ನಿಲ್ಲುತ್ತವೆ, ಅವನ್ನು ಧೈರ್ಯವಾಗಿ ತೊಡೆದು ಹಾಕಬೇಕು.

ನಮ್ಮಲ್ಲಿ ರಾಷ್ಟ್ರೀಯ ಭಾವೈಕ್ಯ ಆಗುವರೆ ಬಹಳ ನಿಧಾನವಾಗಲು ಕಾರಣಗಳೇನಿರಬಹುದೆಂದು ಆಲೋಚಿಸುವ. ಪ್ರಥಮವಾಗಿ ಭಾರತದಲ್ಲಿ ೮೦%ಕ್ಕಿಂತಲೂ ಹೆಚ್ಚಿನ ಜನ ಅವಿದ್ಯಾವಂತರು. ಈ ಅವಿದ್ಯಾವಂತ ಜನರಿಗೆ ರಾಷ್ಟ್ರಪ್ರೇಮ ರಾಷ್ಟ್ರೀಯತೆ, ಭಾವೈಕ್ಯ ಎಂದರೆ ಏನೆಂದು ಸ್ವಲ್ಪವೂ ತಿಳಿದಿಲ್ಲವಾದುದರಿಂದ ನಮ್ಮ ಘಟನೆಯನ್ನು ಸಿದ್ಧ ಮಾಡುವಾಗ ೧೪ ವರ್ಷಗಳಿಂದ ಕಡಿಮೆ ಪ್ರಾಯದ ಮಕ್ಕಳಿಗೆ ಧರ್ಮಾರ್ಥ ಮತ್ತು ಖಡ್ಡಾಯ ಶಿಕ್ಷಣವನ್ನು ಒದಗಿಸಲೇ ಬೇಕೆಂದು ಘಟನೆಯಲ್ಲಿ ಸೇರಿಸಿಬಿಟ್ಟರು. ಈ ದೆಸೆಯಲ್ಲಿ ಈಗ ಕೆಲಸ ನಡೆಯುತ್ತಿದೆ. ಕ್ರಮೇಣ ವಿದ್ಯಾವಂತ ಜನರ ಸಂಖ್ಯೆ ಹೆಚ್ಚಿದಂತೆ ಭಾವೈಕ್ಯ ಉಂಟಾದೀತೆಂಬ ಧೈರ್ಯ ನಮಗಿದೆ.

ಎರಡನೆಯದಾಗಿ ಭಾರತದಲ್ಲಿ ಒಂದೇ ರಾಷ್ಟ್ರಭಾಷೆ ಇಲ್ಲದಿರುವುದು. ಜಗತ್ಪ್ರಸಿದ್ಧಿ ಪಡೆದ ಎಲ್ಲಾ ರಾಷ್ಟ್ರಗಳಲ್ಲಿ ಅವರದೇ ಆದ ರಾಷ್ಟ್ರಭಾಷೆ ಇದೆ. ಈ ಭಾಷೆಗಳಲ್ಲಿಯೇ ಸಾರ್ವಜನಿಕ ವ್ಯವಹಾರ ಸುಗಮವಾಗಿ ನಡೆದು ತತ್ಪರಿಣಾಮವಾಗಿ ಜನತೆಯೊಳಗೆ ಆತ್ಮೀಯತೆ, ಐಕ್ಯ ಸಹೋದರತೆ ಸಾಕಷ್ಟು ಬೆಳೆದಿದೆ. ನಮ್ಮಲ್ಲಿ ೧೪ಕ್ಕಿಂತಲೂ ಹೆಚ್ಚಿನ ಪ್ರಮುಖ ಭಾಷೆಗಳಿರುವುದರಿಂದ ಜನ ತನ್ನ ಭಾಷೆ ವ್ಯವಹಾರಕ್ಕೆ ಉತ್ತಮ" ಎಂಬುದಾಗಿ ಪರಸ್ಪರ ಜಗಳವಾಡುತ್ತಾರೆ. ಚರಿತ್ರೆಯಲ್ಲಿಯೇ ಯಾರೂ ಕೇಳಿರದ ದುರ್ಘಟನೆಗಳು ಮದ್ರಾಸಿನಲ್ಲಿ ಭಾಷಾ ವ್ಯಾಮೋಹದಿಂದ ನಡೆದವು.

ಮೂರನೆಯದಾಗಿ, ಭಾರತದಲ್ಲಿ ಮಹಾತ್ಮಾ ಗಾಂಧಿ ಸುಭಾಷ್‌ಚಂದ್ರ ಬೋಸ್, ನೆಹರುರಂತಹ ಜನತೆಯನ್ನು ಸಂಘಟಿಸಿ ಅವರಲ್ಲಿ ಸ್ಫೂರ್ತಿಯನ್ನಿತ್ತು ತುಂಬಬಲ್ಲ ನಿಷ್ಠಾವಂತ ನಾಯಕರುಗಳ ಕೊರತೆ ಎದ್ದು ಕಾಣುತ್ತದೆ. ಈಗಿನ ರಾಜಕಾರಣಿಗಳು [illegible] ಸ್ವಾರ್ಥಿಗಳಾಗಿದ್ದು ಜನರ ಬಲವನ್ನು ಇವರು ಕಳೆದುಕೊಂಡಿದ್ದಾರೆ. ಇಂತಹ ಮುಖಂಡರ ಪಡೆಯಿಂದ ರಾಷ್ಟ್ರದಲ್ಲಿ-ದೇಶ ಪ್ರೇಮ ಬೆಳೆಯುವಂತಿಲ್ಲ. ಬದಲಾಗಿ ಅದು ಬೆಳೆದರೂ ಸುಟ್ಟು ಭಸ್ಮವಾದೀತು. ಅಧಿಕಾರ ಮೋಹದ ಜಾಲದಲ್ಲಿ ಸಿಲುಕಿಬಿದ್ದು, ತಮ್ಮೊಳಗೆ ಕಚ್ಚಾಡಿಕೊಳ್ಳುವ ಜಾತೀಯತೆಯ ಪ್ರೋತ್ಸಾಹದಿಂದ ಮೇಲಕ್ಕೆ ಬಂದ, ಈ ಸ್ವಜನ ಪಕ್ಷ ಜಾತಿಗಳ ಸಂಖ್ಯೆ ಕಡಿಮೆಯಾಗದೆ-ಬಂಧುತ್ವ ಮತ್ತು ಐಕ್ಯ ನಮ್ಮಲ್ಲಿ ಬೆಳೆಯದು.

ಆಳ್ವಿಕೆಯ ಪಕ್ಷ, ಅಧಿಕಾರ ಮೋಹದ ದೆಸೆಯಿಂದ ತಪ್ಪುಮಾಡಿದಲ್ಲಿ ಅದನ್ನು ತಿದ್ದುವ, ಬೆರಳೆತ್ತಿ ತೋರಿಸುವ ಪ್ರಬಲ ಪ್ರತಿ ಪಕ್ಷದ ಕೊರತೆ ನಮ್ಮ ರಾಷ್ಟ್ರದಲ್ಲಿ ಎತ್ತಿ ಕಾಣುತ್ತಿದೆ. ಅಮೇರಿಕ, ಇಂಗ್ಲೆಂಡುಗಳಲ್ಲಿ ಪ್ರಬಲ ಪ್ರತಿಪಕ್ಷ ಬಂದಿದ್ದು-ಆಳ್ವಿಕೆಯ ಪಕ್ಷಕ್ಕೆ ಈ ಲಕ್ಷ ಸಿಂಹಸ್ವಪ್ನವಾಗಿದೆ. ಭಾರತದಲ್ಲಿ ಜನಕ್ಕೊಂದು ಪಕ್ಷಗಳಿರುವುದರಿಂದ—ಆಳ್ವಿಕೆಯ ಪಕ್ಷವೇ ಪುನಃ ಪುನಃ ಚುನಾವಣೆಗಳಲ್ಲಿ ಗೆದ್ದು ಬರುತ್ತಿದೆ. ಈ ಪರಿಸ್ಥಿತಿ ಬದಲಾಗುವಂತೆ, ಮತ್ತು ಪ್ರಬುದ್ಧ ವಿರೋಧ ಪಕ್ಷದ ರಚನೆಯಾಗುವಂತೆ ಪ್ರಯತ್ನಿಸದಿದ್ದಲ್ಲಿ—ನಮ್ಮ ಸ್ವಾತಂತ್ರ್ಯಕ್ಕೇನೇ ವಿಪತ್ತು ಬಂದೀತು.

ಭಾರತ ಎಲ್ಲ ದುರ್ಬಲತೆ ದುಮ್ಮಾನಗಳನ್ನು ತ್ಯಜಿಸಿ ಮೇಲೇಳಬೇಕು. ಸ್ವಾತಂತ್ರ್ಯದ ಸ್ಪಂದನ ನಮ್ಮ ಹೃದಯದಲ್ಲಿ ಮಿಡಿಯಬೇಕು. ಭಾರತ ಮಾತೆಯ ಭಕ್ತಿ ಅಭಿಮಾನಗಳ ರಕ್ತ ನಮ್ಮ ಧಮನಿಗಳಲ್ಲಿ ಹರಿಯಬೇಕು. ಅವಳ ಅಖಂಡತೆಗಾಗಿ, ಸ್ವಾತಂತ್ರ್ಯ ಸಾರ್ವಭೌಮತೆಗಳಿಗಾಗಿ ಹೋರಾಡುವ ಹುಚ್ಚು ನಮ್ಮಲ್ಲಿ ಬೆಳೆಯಬೇಕು. ಭಾರತ ಭಾರತೀಯರನ್ನು ಗೌರವಿಸುವ ಜಯ ಜಯಕಾರವು ನಮ್ಮ ಜಗತ್ತಿನಾದ್ಯಂತ ಮುಕ್ತ ಕಂಠದಿಂದ ಹೊರಟು ದಿಗಂತವಿಡೀ ಮೊಳಗುತ್ತಿರಬೇಕು. ಇದು ನಮ್ಮ ಸಾಧನೆಯ ಗುರಿ ಈ ಗುರಿ ಸಾಧನೆಗಾಗಿ ಪರೋಪದೇಶ ಮಾಡದೆ ತನ್ನಿಂದ ಎಷ್ಟು ಸಾಧ್ಯವಿದೆಯೋ ಅಷ್ಟು ಪ್ರಯತ್ನಿಸಿ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾಧಿಸುವ.

ಸ್ವಾರ್ಥ ಮತ್ತು ಸಂಕೀರ್ಣ ದೃಷ್ಟಿಯ ತಳಹದಿಯಲ್ಲಿ ನಿರ್ಮಿಸಿದ ಘನತೆ, ಕೀರ್ತಿಗಳು ಅಲ್ಪಜೀವನ ಮತ್ತು ಅವಮರ್ಯಾದೆಗಳಲ್ಲಿ ಪರ್ಯವಸಾನಗೊಳ್ಳುತ್ತವೆ.

○ ○ ○

ದೇವರೆಂಬುದು ವ್ಯಕ್ತಿಯಲ್ಲ; ಶಕ್ತಿ, ಜೀವನವಲ್ಲ; ಜೀವನಾದರ್ಶ. ಪೂಜಾ ವಿಧಿಯಲ್ಲ; ಪೂಜಾ ತತ್ವ. ನವನೂತನ. ಕಲ್ಪನೆಯಲ್ಲ; ನಿತ್ಯ ಚಿಂತನ ಸತ್ಯ.

ಕುಂದಾಪುರಕ್ಕೆ ಬಂದಾಗ

ನಗರದ ದ್ವಾರದಲ್ಲಿಯೇ ನಿಮ್ಮನ್ನು ಸ್ವಾಗತಿಸುವ

ಶಿವ ಪ್ರಸಾದ

ಕುಂದಾಪುರ, ದ. ಕ.

ಸೌಜನ್ಯ....ಸೌಕರ್ಯ....ಸೌಹಾರ್ದತೆ

ಇವೇ ಮೊದಲಾದುವುಗಳಿಂದ ಕೂಡಿದ

ಉತ್ತಮ ಊಟ, ಉಪಾಹಾರ

ಮತ್ತು ವಸತಿ ಗೃಹ

ಸುಸಜ್ಜಿತವಾದ ಕೊಠಡಿಗಳು

ಅತ್ಯಾಧುನಿಕ ಆಸನ ಸಲಕರಣೆಗಳು, ವ್ಯವಸ್ಥಿತ ಸೇವೆಯ

ವೈಶಿಷ್ಟ್ಯಪೂರ್ಣ ಪ್ರವಾಸಿ ಮಂದಿರ

ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.

ಹಗ್ಗ ಹರಿದರೆ ಹೇಗಿದೆ?

— ೧ —

ಊದಿ ಬಿಡು ನೀ
ನಾಂದಿ ಶಂಖವ
ಗರ್ಜನಿಸಲದು ಮನ್ನನ;
ಎತ್ತಿ ಹಿಡಿದೆನು
ನಿನ ಪತಾಕವ
ಶಕ್ತಿ ತುಂಬಿತು ಚೇತನ.

— ೨ —

ನೀನೆ ಸಾರಥಿ
ನಿನ್ನ [illegible]
ನಮನಾಳಿನೆ ನೀಲಾಂಜನ;
ಬಾಳ ತೇರಿದೆ
ಬೇಳವೇರಿದೆ
ನಡೆಸುವವ ನೀನನುದಿನ,

— ೩ —

ದುರಿತಮಯರೋ —
ಧನರು ನೂರ್ವರು
ಹುಟ್ಟಿನಿಂ ಬೆನ್ನಟ್ಟಲುಂ;
ಕಾಡಿಗೋಡಿದೆ
ನಾಡೊಳಡಗಿದೆ
ನಿಂದೆ ನೀ ಬೆಂಗಾವಲು.

— ೪ —

ಮೋಹ ಮೃಗಜಲ
ಹೃದಯ ದುರ್ಬಲ
ಧೈರ್ಯಧನ ಕೈಜಾರಿರೆ;
ಹೇಡಿತನವನು
ಓಡಿಸಿದೆ ನೀ
ನೀತಿ ಗೀತೆಯ ಸಾರಿದೆ

— ೫ —

ನಿನ್ನ ಗರಿಮೆಯು
ನಿನ್ನ ಮಹಿಮೆಯು
ಮೊಳಗಿತೀದಿನ ಧಂ ಧನ;
ಏಕೆ ಲೋಭವು
ಸಾಕು ಲಾಭವು
ಬೆಳಗಿತೈ ಜಯ ಜೀವನ.

— ೬ —

ನಾನೆ ವಿಜಯನು
ನಾನಜೇಯನು
ನೀನು ವಾಘೆಯ ಹಿಡಿದಿರೆ;
ನಾ ಕಿರೀಟಿಯು
ಯಾರು ಸಾಟಿಯು
ನೀನು ಚಾಟಿಯ ಬಿಡದಿರೆ.

— ೭ —

ನಾನು ಪಾತ್ರವು
ನೀನು ಸೂತ್ರವು
ಕುಣಿತ ಭಣಿತವು ಸಾಗಿದೆ;
ಬೊಂಬೆ ಮುಂಗಡೆ
ಬಿಂಬ ಹಿಂಗಡೆ
ಹಗ್ಗ ಹರಿದರೆ ಹೇಗಿದೆ?

— ೮ —

ಪುಣ್ಯ ಸ್ಪರ್ಶವೊ
ಪಾಪ ಲೇಪವೊ
ಸಾಕ್ಷಿ ನೀನೇ ಈಕ್ಷಿಸು;
ನನ್ನ ಬೆನ್ನನು
ನನ್ನ ಕಣ್ಣನು
ಸವ್ಯಸಾಚಿಸಿ ರಕ್ಷಿಸು.

○ ದಿನಾಂಕ ೨೫—೮—೬೫ರಂದು ರಾತ್ರಿ ೯-೩೦ಗೆ ಬೆಂಗಳೂರು ಭದ್ರಾವತಿ ಆಕಾಶವಾಣಿ ನಿಲಯಗಳಿಂದ ಪ್ರಸಾರವಾಗುವ 'ಕಾವ್ಯಧಾರಾ' ಕಾರ್ಯಕ್ರಮದಲ್ಲಿ ಹಾಡುವ ಪದ್ಯಗಳಲ್ಲಿ ಇದೊಂದು.

ಶ್ರೀ ಪಾಟೀಲ ಪುಂಡಲೀಕ ಹಿರೇಬಾಗೇವಾಡಿ.

ಯೋಜನಾ ಯುವತಿ

ಯೋಜನೆಯ ನವಯುವತಿ ಹೊಸಭಾಗ್ಯ
ತಂದಿಹಳು
ಭಾರತೀಯ ಜನತೆಯ ಬದುಕಿಗಾಗಿ
ಜೇನ್ನುಡಿಯ ಬಾಯ್ದೆರೆದು ಶುಭಗೀತೆ
ಹಾಡಿಹಳು
ಶುಭವನ್ನೇ ತಂದಿಹಳು ನಾಡಿಗಾಗಿ
ಬುತ್ತಿಗಂಟನು ಹೊತ್ತು ನಮಗಾಗಿ
ತಂದಿಹಳು
ಚಿತ್ತಾರದ ಕುಂಭವನು ಕಂಕುಳಲಿರಿಸಿ
ಪಯಿರುಗಳ ಹೊಲದಲ್ಲಿ ಬುತ್ತಿಗಂಟನು
ಬಿಚ್ಚಿ
ನಮಗಕ್ಕು ನೀಡುವಳು ಸುಧೆಯನ್ನೆ
ಸುರಿಸಿ
ಆ ಕನ್ನೆ ಬಂದಿಹಳು ಮಣ್ಣು
ಹೊನ್ನಾಗಿಸಲು
ಜೀವ್ವೇನು ಮಾಡಲು ದೇವಿಯಾಗಿ
ನಾಡಿನಾ ಜೀವನಕೆ ಚೇತನಾ ತುಂಬಲು
ಸಿರಿಯನ್ನೇ ತಂದಿಹಳು ಲಕ್ಷ್ಮಿಯಾಗಿ
ಕಾವೇರಿ ಕೃಷ್ಣೆಯರು ನರ್ಮದಾ
ಮಾತೆಯರು
ಕಿಲಕಿಲನೆ ನಗುತಿಹರು ಕನ್ನೆ ಕಂಡು
ಹಸಿರುಡಿಗೆ ಭೂದೇವಿ ತಿಳಿಜಲದಲಿ
ಮಿಂದು
ತೃಪ್ತಿಯನೆ ತಾಳಿಹಳು ಹಾಲ್ಜೇನು
ಉಂಡು
ಯೋಜನೆಯ ಮುಖಕಾಂತಿ ನೂರು
ಕಿರಣವ ಬೀರಿ
ನಾಡಿನಲಿ ಚೇತನವ ತುಂಬಿಹುದು
ಸಾಗಿ
ನಮ್ಮಾಶೆ ನೂರಾರು ಹಣ್ಣಿಸಲು
ಯೋಜನೆಯು
ತವಕ ಪಡುತಿಹಳಿಂದು ಉತ್ಸಾಹಿಯಾಗಿ!
ಉದ್ದಿಮೆ, ವ್ಯವಸಾಯ ಯೋಜನೆಗೆ
ಸಹಕರಿಸಿ
ಯುವಕರದೋ ದುಡಿಯುವರು
ಬೆವರು ಸುರಿಸಿ
ಮಾಗಿರುವ ಪೈರಿನಲಿ ಹೊಲದ
ಹುಡುಗೆಯರಿಂದು
ಹಾಡುವರು ಉಬ್ಬಿನಲಿ ಕೈಯ ಬೀಸಿ!
ಕೊಳೆಗಳದೋ ಹಾಡುತಿವೆ ದೀಪಗಳೋ
ಮಿಂಚುತಿವೆ
ಕುಣಿಯುತಿವೆ ಹೊಲಗದ್ದೆ
ಪೈರುದುಂಬಿ!'
ಗಿರಣಿಗಳದೋ ಕೂಗುತಿವೆ ಉತ್ಪನ್ನ
ಹೆಚ್ಚಿಸುತ
ಯೋಜನೆಯು ನಗುತಿಹಳು
ಭಾವದುಂಬಿ
ಯೋಜನಾ ಯುವತಿಯು
ಹೂಗನಸುಯಿಂದು
ಫಲಿಸಿಯೇ ನೀಡಲಿದೆ ನಮಗೆ ಬಂದು!
ಒಂದಲ್ಲ ಎರಡಲ್ಲ ನೂರು ಜೀವನ ಚಿತ್ರ
ಮೂಡುತಿವೆ ಅಲ್ಲಲ್ಲಿ ರೂಪುಗೊಂಡು!

—

ಸನ್ಯಾಸಿ ಪ್ರಯೋಗ. ಅಂಗಹೀನತೆಗೆ.
ಮಕ್ಕಳ ಚಿನ್ನೆಗೆ ಇದರಿಂದ ಮಿಕ್ಕಿದ ಔಷಧಿ ಇನ್ನೊಂದಿಲ್ಲ.

ಬಾಲವಿಷ್ಣು ತೈಲ

BEST REMEDY FOR FITS - HYSTIRIA - RECKETS - CONVALSIONS.

ಅಂಗಹೀನತೆ ಮಕ್ಕಳ ಚಿನ್ನೆಯಿಂದಲೇ ಬರುವುದಾಗಿದೆ ನಿಶ್ಚಯ. ಯಾವ ಮದ್ದಿನಲ್ಲಿಯೂ ಗುಣವಾಗದಿದ್ದರೆ ಮಕ್ಕಳ ಚಿನ್ನೆಯೆಂದು ಭಾವಿಸಿ ಇದರಿಂದ ಗುಣಹೊಂದಿರಿ— ದೇಹಪುಷ್ಟಿಗೆ ಇದು ಆಹಾರದಿಂದಲೂ ಇದು ಮುಖ್ಯ.

ನಡೆಯದಿರುವಿಕೆ, ಕೈಕಾಲು ಮುದ್ದೆ (ಪಕ್ಷಿಕಡವು) ಕೈಕಾಲು ಅದುರುವಿಕೆ, ಸೊಂಟದ ಮೇಲೆ ಪುಷ್ಟಿ ಕಳೆಗೆ ಕರ್ಪೂರ ಹದಕೆಟ್ಟ ನಿತ್ರಾಣ, ಬಾಲವಾತ ಇನ್ನಿತರ ಮಕ್ಕಳ ಚಿನ್ನೆಗೂ ಖಂಡಿತ ಗುಣಮಾಡಿ ಒಳ್ಳೇ ಪುಷ್ಟಿ ಬರಿಸುತ್ತದೆ. ಹುಟ್ಟಿದ ಎಲ್ಲಾ ಮಕ್ಕಳಿಗೆ ಹಚ್ಚಿದರೆ ಚಿನ್ನೆ ಸೋಂಕುವದೇ ಇಲ್ಲ. ಮೈ ಮೇಲೆ ಹುಡಿಗಳಿದ್ದರೆ ಕಿತ್ತು ಬಿಸಾಡಬೇಕು.

ಈ ತೈಲ ಯಾವ ವೈದ್ಯರಲ್ಲಿಯೂ ಪ್ರಕೃತ ಇರುವದಿಲ್ಲ. 3 ಕುಪ್ಪಿಯಲ್ಲಿ ಗುಣ ಸ್ಪಷ್ಟಪಡಿಸುವುದು. 3 ಕುಪ್ಪಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ. ಉತ್ತರಕ್ಕೆ 0-15 ಪೈಸೆ ಚೀಟು ಇಟ್ಟು ಬರೆಯಿರಿ. ವಿಷಯ ಪತ್ರಿಕೆ ಕಳುಹಿಸಲಾಗುವುದು.

1 ಕುಪ್ಪಿ ರೂ. 3—00 ಬಾಟ್ಲಿ, ಅಂಚೆ ಬೇರೆ.

A. S. ಪಕ್ಕಳ ಮುಗೇರು, ಬಾಲವಿಷ್ಣು ತೈಲ ಔಷಧಾಲಯ,
ಪುತ್ತೂರು ತಾಲ್ಲೂಕು ಪುತ್ತೂರು ಕಸಬಾ, ಬೀರ್‌ಮಲೆ ಹಿಲ್ಸ್ ರೋಸು ಹೌಸ್,
ಪೋಸ್ಟು ದರ್ಬೆ (S. K.)

41 ಕಡೆಗಳಲ್ಲಿ ಈಗ ಸ್ಟಾಕಿಸ್ಟರು ಇದ್ದಾರೆ. ಈ ಪೈಕಿ

1. ಶಾ ಕಂಪೆನಿ, ಮಂಗಳೂರು, S. K.
2. ಬಿ. ಕೆ. ಪ್ರಭು ಪುಸ್ತಕ ಭಂಡಾರ, ಪುತ್ತೂರು, S. K.
3. ವೆಂಕಟ ಸ್ಟೋರ್ಸ್, ಸುಳ್ಯ, S. K.
4. ಲಕ್ಷ್ಮಣ ನ್ಯಾಕ್, ಮರ್ಚೆಂಟ್, ಬಸ್ಸ್ ಸ್ಟೇಂಡ್. ಉಪ್ಪಿನಂಗಡಿ.
S. ಕೊರಗಪ್ಪ ರೈ, ಸುಂಟಿಕೊಪ್ಪ, ಕೊಡಗು.
5. ವಿ. ಪ್ರಭಾಕರ ರಾವ್, ಮರ್ಚೆಂಟ್, ವಿಟ್ಲ, S. K.
6. ಮಹಾವೀರ ಟ್ರೇಡಿಂಗ್ ಮಿಲ್ಸ್, ಬೆಳ್ತಂಗಡಿ.
7. ಆರ್. ಕೆ. ಭಟ್, ಜಯರಾಮ ಸ್ಟೋರ್, ಪೆರ್ಲ (ಕೇರಳ).

MODERN GARAGE
UDIPI

With

Service Station

attached

Undertakes **OVERHAULING & MAINTENANCE OF BENZ VEHICLES**

By

Technically Qualified Benz Expert.

Phone 65 / 234 Residence: 186

ಡಾ| ಎಂ. ಗೋಪಾಲಕೃಷ್ಣ ರಾವ್.

ಸ್ವತಂತ್ರವಿಲ್ಲದ ಸ್ವಾತಂತ್ರ್ಯ

ಸ್ವತಂತ್ರ ಭಾರತೀಯರೆಂದು, ನಮಗೆ ಸ್ವಾತಂತ್ರ್ಯ ಬಂದಿದೆಯೆಂದು ಹಿಗ್ಗಿ ನಲಿಯುವವರು ತಾವಿರುವ ಸ್ಥಿತಿಯು ನಿಜವಾಗಿಯೂ ಸ್ವತಂತ್ರವಿದೆಯೇ? ಎಂದು ನೋಡಿಕೊಳ್ಳಬೇಕು. ಪ್ರಜಾಸತ್ತೆಯ ಆರೋಗ್ಯಕ್ಕಾಗಿ ಕೆಲವೊಮ್ಮೆ ನಾಗರಿಕನು ಇಂತಹ ಪ್ರಶ್ನೆಗಳನ್ನು ತನಗೆ ತಾನೇ ಹಾಕಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಭಾರತವು ೧೯೪೭ ಆಗಸ್ಟ್ ೧೫ರಂದು ಸ್ವಾತಂತ್ರ್ಯ ಪಡೆಯಿತು. ಈ ವರ್ಷ ನಾವು ಆಚರಿಸುತ್ತಿರುವುದು ೧೯ನೆಯ ಸ್ವಾತಂತ್ರ್ಯೋತ್ಸವ.

ಹೌದು ಭಾರತವು ಸ್ವತಂತ್ರವಾಯಿತು! ಆದರೆ ಭಾರತೀಯರು ಸ್ವತಂತ್ರರಾಗಿರುವರೆ? ಎಂದರೆ ಭಾರತೀಯರು ಒಂದು ಸ್ವತಂತ್ರ ರಾಷ್ಟ್ರದ ಪ್ರಜೆಗಳಂತೆ ಬಾಳುತ್ತಿರುವರೆ? ಎಂಬ ಪ್ರಶ್ನೆಗಳಿಗೆ 'ಹೌದು' ಎಂದು ಉತ್ತರಿಸುವ ಹುಮ್ಮಸ್ಸು ಈ ಸ್ವಾತಂತ್ರ್ಯೋತ್ಸವದ ಉತ್ಸಾಹದಲ್ಲಿಯೂ ಕಂಡು ಬಾರದು. ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮಗಳಲ್ಲಿ ಕೂಡ ಭಾರತೀಯ ವೈಶಿಷ್ಟ್ಯವನ್ನು ಎತ್ತಿ ತೋರಿಸುವ ಸ್ವತಂತ್ರ ಬುದ್ಧಿಯೂ ಕಂಡು ಬರುತ್ತಿಲ್ಲ.

ಎಲ್ಲೆಡೆಗಳಲ್ಲಿಯೂ ಸೈನಿಕ ಪೆರೇಡು, ಹಿಂದಿನ ಹೆಗ್ಗಳಿಕೆಯ ಹುಂಬ ಭಾಷಣಗಳು, ಗಾಂಧಿ—ಪಟೇಲರುಗಳ ನಾಮ—ಪುರಶ್ಚರಣ, ಪದವಿ—ಪದಕಗಳ ಮೆರೆವಣಿಗೆ, ತಿಂಡಿ—ತಿನಸುಗಳ ಸೂರೆ! ಅಲ್ಲಿಗೆ ಮುಗಿದಂತಾಯಿತು ಸ್ವಾತಂತ್ರ್ಯೋತ್ಸವದ ಹುರುಪು.

ಭಾರತಕ್ಕೊಂದು ಸಂಸ್ಕೃತಿಯಿದೆ. ಬಾಳಿನ ಎಲ್ಲ ಅಂಕಣಗಳಲ್ಲಿಯೂ 'ಭಾರತೀಯತೆ' ಎಬುದೊಂದು ಬೇರೆ ವೈಶಿಷ್ಟ್ಯವೇ ಇತ್ತು. ಸಂಗೀತ, ಸಾಹಿತ್ಯ, ನೃತ್ಯ, ನಾಟಕ ವಿಜ್ಞಾನ ಶಿಷ್ಟಾಚಾರ, ಶಿಕ್ಷಣಗಳೆಲ್ಲದರಲ್ಲಿಯೂ ಭಾರತವು ಸ್ವ-ತ್ವಭರಿತವಾಗಿತ್ತು. ವಿದ್ಯೆಗಳ ಬಾಯಾರಿಕೆಯುಳ್ಳ ವಿದೇಶಿಗಳ ಭಾರತದ ಅರವಟ್ಟಿಗೆಗೆಂದು ಚೌಷಷ್ಟಿ ವಿದ್ಯೆಗಳ ಸುಧಾಪಾನವನ್ನು ಮಾಡಿ ತಣಿದು ಹೋಗುತ್ತಿದ್ದರು.

ಸ್ವಾತಂತ್ರ್ಯೋತ್ಸವಗಳಲ್ಲಿ ಕುಣಿದು ಕೇಕೆ ಹಾಕುವ ನಮಗೆ ಆ ಭಾರತೀಯತೆಯ ವೈಶಿಷ್ಟ್ಯದ ನೆನಪು ಕೊಡುವಂತಹ ಕಾರ್ಯಕ್ರಮಗಳಿರುತ್ತವೆಯೇ? ಬಾಳಿನ ಯಾವ ರಂಗದಲ್ಲಿಯೂ ಸ್ವ. ಪರರಾಷ್ಟ್ರಗಳಿಗೆ ಬಿಕ್ಕೆ ಬೇಡದೆ ನಮಗೆ ಉಳಿವು, ಏಳಿಗೆಗಳಿಲ್ಲವೆಂದು ನೆರೆನಂಬಿದವರೇ ಹೆಚ್ಚು ಜನ! ಜಗತ್ತಿನಲ್ಲಿ ಎಲ್ಲ ರಾಷ್ಟ್ರಗಳಿಗಿಂತ ನಮ್ಮ ರಾಷ್ಟ್ರದಲ್ಲಿಯ ವಾರ್ಷಿಕ ವ್ಯಯುಕ್ತಿಕ ಗಳಿಕೆ ತೀರ ಕೆಳಮಟ್ಟದಲ್ಲಿದೆ; ಎಲ್ಲ ರಾಷ್ಟ್ರಗಳಲ್ಲಿಗಿಂತ ನಮ್ಮ ರಾಷ್ಟ್ರದಲ್ಲಿಯ ತೆರಿಗೆಗಳು ಪರಮಾವಧಿಯಾಗಿವೆ. ಸಾಲದುದಕ್ಕೆ ಪರರಾಷ್ಟ್ರಗಳಿಂದ ಸಾವಿರ ಸಾವಿರ ಕೋಟಿ ಸಂಖ್ಯೆಯಲ್ಲಿ ಸಾಲ ತರುತ್ತಿದೆ ನಮ್ಮ ರಾಷ್ಟ್ರ. ಆದರೆ ಅದೆಲ್ಲದರ ವೆಚ್ಚದಿಂದ ಭಾರತ ಮಾತೆಯನ್ನು ವಿದೇಶೀಯ ರೂಪ, ಲಕ್ಷಣ, ಪ್ರಸಾಧನ, ಪ್ರಾವರಣಗಳಿಂದ ಅಲಂಕರಿಸುವ ಪ್ರಯತ್ನ ನಡೆದಿವೆಯೆ ಹೊರತು ಭಾರತೀಯತೆಯ ಪುನರುಜ್ಜೀವನವಂತೂ ಆಗುತ್ತಿಲ್ಲ; ತದ್ವಿರುದ್ಧವಾಗಿ ಅಳಿದುಳಿದಿದ್ದ ಅಲ್ಪ ಸ್ವಲ್ಪ ಭಾರತೀಯತೆ ಅಳಿಸಿ ಹೋಗುತ್ತಿದೆಯಲ್ಲವೇ!

ಭಾರತದ ಘಟನಾ ಸೂತ್ರಗಳ ರಚಯಿತರುಗಳು ಭಾರತ ಪ್ರಭುತ್ವಕ್ಕೆ 'ಸೆಕ್ಯುಲರ್' ತತ್ವವನ್ನು ನಿಯೋಜಿಸಿದರು. ಆದರೆ ಆ 'ಸೆಕ್ಯುಲರ್' ಶಬ್ದದ ಅರ್ಥವೇನೆಂಬುದನ್ನು ನಿಚ್ಚಳವಾಗಿ ಅರಿತ ಭಾರತೀಯರೆಷ್ಟು ಮಂದಿಯಿದ್ದಾರೆ! ಆ ಶಬ್ದಕ್ಕೆ ಜಾತ್ಯತೀತ, ಧರ್ಮಾತೀತ, ನಿರ್ಧರ್ಮಿ, ಎಂದು ಹಲವು ವಿಧವಾಗಿ ಅರ್ಥ ಮಾಡುವವರಿದ್ದಾರೆ. 'ಸೆಕ್ಯುಲರ್' ಎಂದರೆ ಅನಧ್ಯಾತ್ಮಿಕ, ಧರ್ಮಹೀನ' ಎಂದು ಅರ್ಥಮಾಡಿ ಭಾರತ ಘಟನಾ ಕರ್ತೃಗಳನ್ನು ಬೈಯುವ ಸನಾತನಿಗಳೂ ಇದ್ದಾರೆ. ಮತ್ತೆ ಆ ಬೈಗುಳಿಗೆ ಅರ್ಹರಾಗುವಂತಹ ಹಲವು ಕಾರ್ಯಕಲಾಪಗಳನ್ನು ರಾಜ್ಯಾಂಗದವರು ಅನೇಕ ಸಲ ಮಾಡುವುದೂ ಉಂಟು.

ಉದಾಹರಣಾರ್ಥ 'ವಿದ್ಯಾಲಯಗಳಲ್ಲಿ ಧರ್ಮ ಶಿಕ್ಷಣವನ್ನು ಕೊಡಕೂಡದು' ಎಂಬ ನೀತಿಯನ್ನು ಕೆಲವು ವಿದ್ಯಾಧಿಕಾರಿಗಳು ಅನುಸರಿಸಿ, ಧರ್ಮದ್ಯೋತಕ ರೀತಿಯಲ್ಲಿ ಪಾಠಗಳನ್ನು ಕಲಿಸುವ ಅಧ್ಯಾಪಕರ ಮೇಲೆ ವಕ್ರದೃಷ್ಟಿ ಹಾಕಿದುದುಂಟು; ಮಠ, ಮಂದಿರಗಳ ಉತ್ಪನ್ನದ ಮೇಲೆ ಕಾಕದೃಷ್ಟಿ ಹಾಕಿದುದುಂಟು. ವಿಶಿಷ್ಟ ಧರ್ಮದ ಹೆಸರನ್ನಿಟ್ಟುಕೊಂಡ ವಿದ್ಯಾಲಯ, ಸಂಘ, ಸಂಸ್ಥೆಗಳಿಗೆ ಸಹಾಯಧನ ಪಡೆಯುವಾಗ ಅನೇಕ ಕಿರುಕುಳ ಕೊಡುವುದುಂಟು. ಹಾಗೆಂದು ಆ ನಿರ್ಧರ್ಮ—ನೀತಿಯನ್ನೇ ಬಿಗುವಾಗಿ ಸರ್ವತ್ರವಾಗಿ ಅನ್ವಯಿಸಲಾಗುತ್ತಿದೆಯೇ, ಎಂದು ನೋಡಿದರೆ 'ಅದೂ ಇಲ್ಲ' ಎನ್ನಬೇಕಾಗುತ್ತದೆ. ಏಕ ಪತ್ನಿತ್ವ ಶಾಸನ, ಮದುವೆಯ ವಯಃ ಶಾಸನ, ಮಠ-ಮಂದಿರಗಳ ಉತ್ಪನ್ನಗಳ ಶಾಸನ, ಅಸ್ಪೃಶ್ಯತಾ ಶಾಸನಗಳನ್ನು ರಚಿಸುವಲ್ಲಿ, ಪ್ರಯೋಗಿಸುವಲ್ಲಿ ಕೆಲವು ಧರ್ಮದವರ ಬಗೆಗೆ ಪಕ್ಷಪಾತವನ್ನು ತೋರಿಸಲಾಗುವುದು. ಕೆಲವು ಧರ್ಮಗಳ ಮಠ-ಮಂದಿರಗಳ ಭೂಮಿ, ಉತ್ಪನ್ನಗಳ ವಿಸ್ತಾರವನ್ನು ಮೊಟಕು ಮಾಡುವ ಶಾಸನಗಳಿದ್ದರೆ ಕೆಲವು ಧರ್ಮದವರ ಧರ್ಮ ಮುದ್ರೆಗಳನ್ನೊತ್ತಿ ಕೊಂಡಿರುವ ಸಂಸ್ಥೆಗಳಿಗೆ ಅಲ್ಪ ಪ್ರಯತ್ನದಿಂದಲೆ ನೂರಾರು ಎಕರೆ ಭೂಮಿ, ಕಾಣಿಕೆಗಳು ಸಿಗುವುದೂ ಉಂಟು.

ಎಲ್ಲಕ್ಕಿಂತ ಆಶ್ಚರ್ಯದ ಸಂಗತಿಯೆಂದರೆ ಹದಿನೆಂಟು ವರ್ಷಗಳಿಂದಲೂ ಆ ಕುಂದು ಕೊರತೆಗಳು ಪೀಡಿಸುತ್ತಿದ್ದರೂ ಮಾತೆತ್ತದೆ ಸಹಿಸುತ್ತ ಬಂದಿರುವ ಜನತೆ ಸ್ವತಂತ್ರವಾಗಿದೆಯೆಂದು ನಂಬುವುದು ಹೇಗೆ! ಭ್ರಷ್ಟಾಚಾರದ ಭೂತನಾಟ್ಯದಿಂದ ಭೀತಿಗೊಂಡು ಬಳಲುತ್ತಿದ್ದರೂ ಆ ಭೂತವನ್ನು ಆವಾಹನ ಮಾಡಿದ ರಾಜ್ಯಾಂಗದ 'ನಿರ್ಧರ್ಮ ಮಂತ್ರ'ಕ್ಕೆ ಪ್ರತೀಕಾರ ಮಾಡುವ ಪ್ರಯತ್ನವನ್ನೇ ಮಾಡದೆ ಮೂಕವಾದ ಜನತೆ ಸ್ವತಂತ್ರವಾಗಿದೆಯೆಂದು ಹೇಗೆ ನಂಬುವುದು! ಸ್ವಾತಂತ್ರ್ಯೋತ್ಸವದ ಮಂಗಳಕ್ಕೆ ಅಸ್ವತಂತ್ರರಾಗಾಲಾಪನೆಯೇ!

With the compliments of the Season:

JYOTHI TALKIES

Your favourite picture House

ಆಗೋಸ್ತು ತಿಂಗಳು

(ಹದಿನಾರನೇ ಪುಟದಿಂದ)

ಕೊಂಡಿತು. ನಮಗೆ ಸ್ವರಾಜ್ಯದ ದಿವ್ಯ ಮಂತ್ರವನ್ನು ಉಪದೇಶಿಸಿದ ಲೋಕಮಾನ್ಯ ಬಾಲಗಂಗಾಧರ ತಿಲಕರು ಪರಲೋಕಕ್ಕೆ ಹೋದುದೂ ೧೯೨೦ನೇ ಆಗೋಸ್ತು ತಿಂಗಳಿನಲ್ಲೇ. ತಮ್ಮ ಅಸಾಧಾರಣವಾದ ವಾಗ್ವೈಖರಿಯಿಂದ ಸುಪ್ತವಾದ ಜನಾಂಗವನ್ನು ಜಾಗೃತಗೊಳಿಸಿದ ಬಹು ದೊಡ್ಡ ವಾಗ್ಮಿಗಳಾದ ಸುರೇಂದ್ರನಾಥ ಬ್ಯಾನರ್ಜಿಯವರು ೧೯೨೫ನೇ ಆಗೋಸ್ತು ೬ನೇ ದಿನ ದಿವಂಗತರಾದರು.

ರಾಷ್ಟ್ರೀಯ ಭಾವನೆಯ ದೀರ್ಘದರ್ಶಿಗಳೂ, ವಿಶ್ವ ಪ್ರೇಮಿಗಳೂ, ದೇಶಾಭಿಮಾನಿ ಕವಿವರ್ಯರೂ ಆದ ರವೀಂದ್ರನಾಥ ಟಾಗೋರರು ೧೯೪೧ನೇ ಆಗೋಸ್ತು ತಿಂಗಳಲ್ಲಿ ಪರಲೋಕವಾಸಿಗಳಾದರು.

ನಾಲ್ಕು ವರ್ಷಗಳ ನಂತರ ನಿರ್ಭಯ ಸ್ವಾತಂತ್ರ್ಯಯೋಧರಾದ, ಸರ್ವದಾ ಭಾರತದ ಪ್ರೀತಿಪಾತ್ರರಾದ ನೇತಾಜೀ ಸುಭಾಷಚಂದ್ರಬೋಸರು ಸತ್ತು ಹೋದರು. ವರ್ಷ ವರ್ಷವೂ ನಾವು ಸ್ವಾತಂತ್ರ್ಯ ದಿನವನ್ನು ಆಚರಿಸುವಾಗ ಭಾರತವು ಬದುಕಿ ಉಳಿಯಬೇಕೆಂದ ಕಷ್ಟಪಟ್ಟು ತ್ಯಾಗಮಾಡಿದ— ಅಗ್ರಗಾಮಿಗಳಾದ ಈ ಎಲ್ಲ ಮಹನೀಯರನ್ನು ಮರೆಯಬಾರದು.

(ಭವನ್ಸ್ ಜರ್ನಲ್ ಪತ್ರಿಕೆಯಿಂದ)

ಚುಟುಕಗಳು

ಚುನಾವಣೆ

ಚುನಾವಣೆಯು ನಾಣ್ಯ
ಹೊರಬೀಳುತಿರುವಾಗ|
ಜನಮನವು ಕಾಣುತಿದೆ ರೊಕ್ಕದಾ ವೇಗ||
ಎಡೆಬಿಡದೆ ಸಾಗಲಿದೆ ಚಲಾವಣೆ ಯೋಗ|
ಚುನಾವಣೆಯು ನೋಟುಗಳಿಗದೆ
ಪರ್ವಕಾಲ||

ಅಕ್ಕಿ ಕಂಟ್ರೋಲು

ಮಾಡಿದರು ಅಕ್ಕಿಗೆ ಬೆಲೆಯ ಕಂಟ್ರೋಲು|
ಹಾರಿತು ಗಗನಕೆ ಅದರ ಪೆಟ್ರೋಲ್||
ಆಗಲೇ ಜನರೆಲ್ಲಾ ಹಾಹಾರಾಲು|
ಮಾಡಿದರು ಖಾತೆಗಳ ಬದಲಾವಣೆ||

—ಪಳನಾಡು ಸುಬ್ರಾಯ ಭಟ್ಟ ಚೋಪಾಡಿ.

ಭರತನ ಪಾತ್ರ ವೈಶಿಷ್ಟ್ಯ

(ಹದಿನೈದನೇ ಪುಟದಿಂದ)

ಗಾತ್ರವಳಿದರೆ ಅಳಿವುದಲ್ಲದೆ |
ಇತ್ತ ವರ ಕು ಸಿಯುವುದೆ ತಂದೆಯು |
ಸತ್ಯ ಕೆಟ್ಟ ಬಳಿಕ ಗತಿ
ಯೆಲ್ಲಿಯದು ಕೇಳೆಂದ ||
ಮುನಿಯು ಶಾಪವನರಿಯೆನೇ ಮ |
ಜ್ಜನಕಗಳವಲ್ಲೆಂದು ಬಲ್ಲೆನು |
ಮನದೊಳಗೆ ಸರಿತೂಗಿ ನೋಡಲು
ಸತ್ಯ ಘನವಾಯ್ತು ||
ಜನಪನಾಡಿದ ಸತ್ಯವಳಿದರೆ |
ಜನಪತಿಗೆ ಗತಿಯಿಲ್ಲವೆಂದಾ |
ವನಕೆ ಬಂದೆನು, ಕರ್ಮಗತಿಯನು
ಮೀರ್ವರಾರೆಂದ ||
ಅವಡೆಸ್ಸಿಂದಳಿದನಲ್ಲಾ |
ಮೇದಿನೀಪತಿ ಇನ್ನು ಮುಂದಣ |
ಹಾದಿ ಬೇರಿಲ್ಲೆಮ್ಮ ವನ
ವಾಸವನು ಕಳೆವನಕ ||
ಮೇದಿನಿಯ ನೀನಾಳು, ಜನನಿಯ |
ಪಾದದಿಚ್ಛೆಯ ಸಲಿಸು, ನಮಗಾ|
ಹ್ಲಾದವಿದು ನಿನ್ನಾಣೆ ಕೌಸಲೆಯಾಣೆ
ಕೇಳೆಂದ ||

ಭರತ:

ಎಂದಡೆಂದನು ಭರತ ನಿನಗೀ |
ಬಂದ ವನವಾಸವ್ರತವ ನಾ|
ನಿಂದು ನಡಸುವೆ, ನೀವು
ನಗರಕ್ಕೈದಿ ಜನನಿಯರ ||
ಕಂಬನಿಯನು ಒಡಿಸಿ, ತಾಳಿ ವ|
ಸುಂಧರೆಯನೆನಲ್,

ರಾಮ:

ಇಂದು ಸಲ್ಲದು |
ಬಂದ ಬಳಿಕೀ ವನಕೆ,
ಪಟ್ಟಣ ಕೈದು ನೀನೆಂದ ||

ಭರತ:

ಆದರೊಲ್ಪೆತು ನಾನು ನಿಮ್ಮಯ |
ಪಾದ ಪದ್ಮವ ಬಿಟ್ಟುಹೋಪೆನೆ |
ಮೇದಿನಿಯನಾಳುವೆನೆ |
ಘೋರಾರಣ್ಯ ಮಧ್ಯದಲಿ ||
ಖೇದಗೊಂಬರೆ ನೀವು ಖರೆ, ಲೇ |
ನಾದುದೆನಗೀ ಮಾತು ನಿಮ್ಮಯ |
ಪಾದದೊಳಗ ಹಿಂಗಿ ಬದುಕಲ್ಪಾಪೆನೇ
ಯೆಂದ ||

ರಾಮ:

ಎಂದರೆಂದನು ರಾಮನಕಟಾ |
ಮುಂದೆ ರಾಜ್ಯಕ್ಕಾರು, ಭೂಸುರ |
ವೃಂದಗಳ ಸತ್ಕರ್ಮ ಚಾತುರ್ವರ್ಣ
ಧರ್ಮಗಳ ||
ಮುಂದೆ ಸಲಹುವನಾವನೈ ನೀ |
ಬಂದಡಿತ್ತಲು, ನಮ್ಮನುಳಿದೇ |
ಳೆಂದು ಪುರಕೈದೆಂದು ಗಲ್ಲವ
ಪಿಡಿದನಾ ರಾಮ ||

ಭರತ:

ಅಣ್ಣ ಚಿತ್ತೈಸೊಂದು ಬಿನ್ನಹ |
ವೆನ್ನ ಕಳುಹಿದಂಬನು ಪುರವನು |
ಮುನ್ನ ಹೊಗುವವನಲ್ಲ,
ಕರಗಳನೆತ್ತುವವನಲ್ಲ ||
ನಿನ್ನ ಪುರ ಬಾಹ್ಯಯಲಿ ಪಾದುಕೆ |
ಯನ್ನಿರಂತರ ಭಜಿಪ ... ||
ರನ್ನದಿಂ ಜೀವಿಸುವೆನೆಂದನು
ಭರತನಗ್ರಜಗೆ||

[ಮತ್ತೆ ಭರತನು, ಸೀತೆ ಹಾಗೂ ಲಕ್ಷ್ಮಣರಲ್ಲಿ ತನ್ನ ತಪ್ಪನ್ನು ಕ್ಷಮಿಸಲು ಇಷ್ಟಪಟ್ಟರು ತಕ್ಕಂತಿರಲು ದೂರಿಟ್ಟನು. ಕೈಕೆಯಿಯು ರಾಮನಲ್ಲಿ ತನ್ನ ತಪ್ಪನ್ನು ಮನ್ನಿಸಲು ನಿವೇದಿಸಿದಳು. ಈ ಘಟನೆ ಬಲು ಮಾರ್ಮಿಕವಾದುದು!

ಶ್ರೀ ರಾಮನು ಹದಿನಾಲ್ಕು ವರುಷದ ಕೊನೆಯ ದಿನದೊಳಗೆ ಬರುವೆನೆಂದು ಭರತನಿಗೆ ಮಾತು ಗೊಟ್ಟಿದ್ದನು. ಅಂತೆ, ಆ ದಿನ ಶ್ರೀರಾಮನು ಕಾಣದಿರಲು, ಭರತನು ಅಗ್ನಿಯನ್ನುರಿಸಿ ದೇಹತ್ಯಾಗಕ್ಕೆ ಅಣಿಯಾದನು. ಆ ಸಮಯಕ್ಕೆ ಶ್ರೀ ರಾಮದೂತನು ಬಂದು ಭರತನನ್ನು ಸಂತೈಸಿದನು; ಶ್ರೀ ಸೀತಾರಾಮನು ಸಪರಿವಾರನಾಗಿ ಅಯೋಧ್ಯೆಗೈದಿದನ; ಶ್ರೀ ರಾಮನು ಪಟ್ಟಾಭಿಷೇಕವಾದುದು—ಇಷ್ಟು ವಿಷಯ ನಮಗೆಲ್ಲಾ ಗೊತ್ತಿದೆ. ಆವಾಗ ನಡೆದ ಒಂದು ವಿಶೇಷವಿಲ್ಲಿ ಹೇಳಿದೆ:]

ಕರವನೆತ್ತದೆ ಊರಹೊರಗಾ |
ಭರತನಿದ್ದನು ಕಾಲು ದೇಶದಿ |
ಕರದಲಿದ್ದುದ ಕೇಳಿ, ರಘುಪತಿ
ಪ್ರಜೆಗಳನು ಕರೆಸಿ ||
ಭರವಸೀವುದೆನಬ್ಬೆ, ಪ್ರಜೆಗಳು|
ಕರವನಿತ್ತಿವು ಭರತನೆಂದ|
ಬ್ಬರಿಸಿ ಗುಬ್ಬಿಯು ಸಾಕ್ಷಿಗಳ
ನುಡಿಸಿದರು ಭೂಪತಿಗೆ ||
ಹುಸಿಯನಾಡಿದವೆಂದು ಗುಬ್ಬಿಗಳ |
ನೆಸೆವ ಸಂಕಲೆಗೂಡಿ ಹಾರುವ |
ಗಸಣಿ ಬಂದುದ ಸತ್ಯವಾರಿಗೆ
ಲೇಸು ಧರಣಿಯಲಿ ||
ಹುಸಿಯನಾಗಲಿ ದಿಟವನಾಗಲಿ |
ಪ್ರೊಸೆದು ಸಾಕ್ಷಿಯ ನುಡಿದ ಬಳಿಕಾ |
ಹುಸಿಕರಿಗೆ ಬಹುದೋಷವಲ್ಲದೆ
ಕರ್ತೃಗಿಲ್ಲೆಂದ ||
ಹಿಂದೆ ಹದಿನಾಲ್ಕರುಷ ಕರವಾ |
ಸಂದುದಪಸಾಕ್ಷಿಯಲ್ಲಿ, ಸಾಕ್ಷಿಗ |
ರಿಂದು ನೇಲಪರಾಧಿಯಾದರು,
ಪ್ರಜೆಗಳಿಂದೀಗ ||
ಮುಂದೆ ತೆರುವಾ ಕರಗಳನು ತರಿ |
ಸಿದು ಕಟ್ಟಳೆಯಾಯ್ತು ಭರತಗೆ |
ಸಿದ್ಧವರ್ಷದಲಿ ಪಾಲಿಸಿದನು
ಮಹೀ ತಳವ ||
ಗುಬ್ಬಿಗಳಿಗಾ ಪ್ರಜೆಗಳಿಗಿತ್ತರು |
ಉರ್ದಿಯೊಳು ಪೊಣಗಿರ್ದ ಹರಹಿದ |
ಸರ್ಬವನು ನೀವ್ ತಿನಲು, ಹೊಡೆಯಲು
ಸಲ್ಲ ನಿಮಗೆಂದು ||
ಗುಬ್ಬಿಗಳು ಸುಖಪಡೆದರವನಾ |
ರೆಬ್ಬಿಸಲು ಕಡುದೋಷವಿಳೆಯೊಳು |
ಸರ್ಬನಾಡವರಿತ್ತ ವೃತ್ತಿಗೆ
ಹಾನಿಯಿಲ್ಲೆಂದ ||

ಭರತನು ದಾರಿಗರನ್ನದಿಂದ ಜೀವಿಸಿದನು; ಈ ಯೆಡೆಯರಿತು ಪ್ರಜೆಗಳು ಹದಿನಾಲ್ಕು ವರುಷದಲ್ಲೂ ಕಪ್ಪ ಕಾಣಿಕೆ ಕೊಡದೆ, ಶ್ರೀ ರಾಮನು ಕರೆಸಿ ಕೇಳಿದಾಗ ಕಾಣ್ಕೆ ಕೊಟ್ಟಿದ್ದೇವೆಂದು ಗುಬ್ಬಿಗಳ ಸಾಕ್ಷಿ (ಸುಳ್ಳು ಸಾಕ್ಷಿ) ನುಡಿಸಿದರು. ಈ ಬಗ್ಗೆ ಗುಬ್ಬಿಗಳು ಎಲ್ಲೆಡೆ ಬಿದ್ದ ಕಾಳು ಹೆಕ್ಕುವಲ್ಲಿ ಯಾರೂ ಓಡಿಸಬಾರದೆಂಬ ವ್ಯತ್ತಿ ದೊರೆಯಿತು! ಅರ್ಥಾತ್, ಶ್ರೀ ರಾಮನ ರಾಜ್ಯಭಾರದಲ್ಲಿ ಮುಂದೆ ಇಂತಹ ಅಪಚಾರಗಳಾಗಿಲ್ಲ, ಅದಕ್ಕೆ ಇದೊಂದು ಅಪವಾದವು ಮೂಲವಾಯ್ತು. ಭರತನು ತಾನಾಡಿದ ಪ್ರತಿಜ್ಞೆಯಂತೆ ಕರವೆತ್ತದೆ ವಿರಾಗಿಯಾಗಿ ಪುರದ ಬಾಹ್ಯದಲ್ಲಿ (ನಂದಿಗ್ರಾಮದಲ್ಲಿ) ವಾಸಿಸುತ್ತಾ ದಿನಗಳೆದನು. ಅಂದರೆ ಅದು ಅಂತಹದೇನೂ ರಾಜ್ಯ ವಿಪ್ಲವವಾಗಿಲ್ಲ! ಆದರಿಂದ ಭರತನು ಪ್ರಜೆಗಳ ಕರವನ್ನು ಕೊಂಡಿಲ್ಲವೆಂದು ತಿಳಿಯಬಹುದು. ಒಂದು ತರವಲ್ಲಿ, ಭರತನ ರಾಜ್ಯಭಾರದ ಕಾಲವೇ ಪ್ರಜೆಗಳಿಗೆ ಅದೊಂದು ಸಂತುಷ್ಟಿಯಿತ್ತೆಂದೂಹಿಸಲಾಗುತ್ತದೆ.

ಇದರೊಂದಿಗೆ ತಿಳಿಯತಕ್ಕ ಇನ್ನೊಂದು ವಿಚಾರವೆಂದರೆ, ಗುಬ್ಬಿಗಳಿಗೆ ಪ್ರಜೆಗಳು ನಿರಾತಂಕ ಸಂಚಾರವನ್ನೊಪ್ಪಿಕೊಂಡುದು. ಗುಬ್ಬಿಗಳಿಗೆ 'ಚಟಕ'ವೆಂದು ಹೆಸರಿದೆ. ಇಂದ ಸಾಧಾರಣತಃ ಪಿತೃಗಳನ್ನು ಉದ್ದೇಶಿಸಿ ಮಾಡುವ ವಾರ್ಷಿಕ ಶ್ರಾದ್ಧಕ್ಕೆ ಚಟಕ ಶ್ರಾದ್ಧವೆಂದು ಹೇಳಿದೆ. ಅಂದರೆ, ಪಿತೃಗಳ ದಿನದಲ್ಲಿ ಚಟಕಗಳಿಗೆ ಅನ್ನಾದಿಗಳನ್ನು—ಕಾಳುಗಳನ್ನು ಇಕ್ಕುವುದು ಅವಶ್ಯವೆಂದು ವೇದ್ಯವಾಗುತ್ತದೆ. ಪರಂತು, ಈ ಚಟಕಗಳಿಗೆ ದೊರೆಯಬೇಕಾದ ಶ್ರಾದ್ಧದಿನದ ಕಾಳುಗಳು ಅವುಗಳಿಗೆ ದೊರೆಯುತ್ತಿಲ್ಲ, ಶ್ರಾದ್ಧದಿನದಲ್ಲಿ ಕಾಳುಗಳು ಅವುಗಳಿಗೆ ದೊರೆಯುತ್ತಿಲ್ಲ. ಶ್ರಾದ್ಧದಿನದಲ್ಲಿ ಕಾಳುಗಳನ್ನು ಕಾಗೆಗಳಿಗೆ ಇಕ್ಕಬೇಕೆಂದು ಬೇರೆ ನಿಯಮವಿದೆ (ಯಮನು ಕಾಗೆಗಳ ರೂಪ ಧರಿಸಿದ್ದುದರಿಂದ, ಕಾಗೆಗೆ ನೀಡಿದ ಕಾಳು ತನಗೆ ತೃಪ್ತಿಕರವೆಂದು ಆತನೆಂದ ಕತೆ ಉತ್ತರರಾಮ ಕಥೆಯಲ್ಲಿದೆ. ನಾರಾಯಣ ಕವಿ ರಚಿತವಾದ ಕನ್ನಡದ ಈ ಕೃತಿ ಸುರತ್ಕಲ್ಲು ವಿಜಯ ಸಾಹಿತ್ಯ ಮಾಲೆಯಲ್ಲಿ ನನ್ನಿಂದ ಪ್ರಕಟವಾಗಿದೆ). ಈ ಬಗ್ಗೆ ಬಲ್ಲವರು ತುಸ ವಿವೇಚಿಸಿ ಬರೆಯಬೇಕಾಗಿದೆ.

ಶ್ರೀರಾಮಾಯಣದಲ್ಲಿ ಭರತನ ಪಾತ್ರದಲ್ಲಿ ವೈಶಿಷ್ಟ್ಯವನ್ನು ಕವಿಯು ಚಿತ್ರಿಸಿದ್ದಾನೆ. ಶ್ರೀರಾಮನ ಪ್ರತಿಕೃತಿಯಾಗಿ ಪಾದುಕೆಗಳನ್ನು ತಲೆಯಲ್ಲಿ ಹೊತ್ತು ತಂದ ಭರತನು ಶ್ರೀರಾಮ ಭಕ್ತಾಗ್ರೇಸರನೆಂದು ಹೇಳಲಡ್ಡಿಯಿಲ್ಲ!

ಚುಟುಕ

ದೇಶ ಸೇವಕರು

ಉದ್ದ ಟೊಪ್ಪಿಯನ್ನಿಟ್ಟು ಖಾದಿ
ಪಂಚೆಯನುಟ್ಟು|
ಮೊರುದ್ದ ಭಾಷಣವನೆಲ್ಲ ಕೊಟ್ಟು ||
ಕಟ್ಟು ನೋಟಿನ ಕಂತೆಗೊಳ ಜೇಬಿ
ನೊಳಗಿಟ್ಟು|
ಮೆಲ್ಲ ಹೊರಳುವುದೇ ದೇಶ ಸೇವಕರ
ಗುಟ್ಟು||

ಹಳನಾಡು ಸುಬ್ರಾಯ ಭಟ್ಟ ಚೋನಾಳ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧

"ಹಿಂದೂ ಧರ್ಮದ ಮತ್ತು ನೀತಿ ಶಾಸ್ತ್ರದ ಮೂಲತತ್ತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.
ಅಥವಾ
ನವಯುಗ ಪ್ರೆಸ್, ಉಡುಪಿ.

ಸಹಕಾರದಲಿ ಸತ್ಯಂ, ಶಿವಂ, ಸುಂದರಂ

೧ ಶ್ರೀ

(ಹದಿನಾಲ್ಕನೇ ಪುಟದಿಂದ)

ದು 'ತಾನು' ಎಂಬ ಶಬ್ದಗಳೇ ಇರಲಿಲ್ಲ. ಇದ್ದರೂ ಆ ಶಬ್ದಗಳಿಗೆ ಅರ್ಥವೇ ಇರಲಿಲ್ಲ. "ನಾವು" "ನಮ್ಮವರು" ಎಂಬ ಜ್ಞಾನ ಮಾತ್ರ ಆಗ ಇರುತ್ತಿತ್ತು. ಒಂದು ಕುಟುಂಬದಲ್ಲಿ ಆ ಕುಟುಂಬದ ಮುಖ್ಯಸ್ಥನ ಮಕ್ಕಳು-ಸೊಸೆಯಂದಿರು, ಮೊಮ್ಮಕ್ಕಳು ಮರಿಮಕ್ಕಳು, ಹೀಗೆ ಆಗಿನ ಕುಟುಂಬವೆಂದರೆ, ಅದೊಂದು ಬೃಹತ್ ಸಂಸ್ಥೆ. ಆಗಿನ ಬೇಸಾಯ ವ್ಯವಹಾರ, ವ್ಯಾಪಾರ, ಇದೆಲ್ಲವೂ ಪರಸ್ಪರ ಸಹಕಾರಾವಲಂಬಿತವಾಗಿತ್ತು. ತಂತಮ್ಮ ಕುಟುಂಬದ ಕೃಷಿ, ಪಶುಪಾಲನೆ ಮೊದಲಾದ ಕೆಲಸಗಳನ್ನು, ಸಂಬಂಧಪಟ್ಟ ಮನೆಯವರೇ ಎಲ್ಲರೂ ಕೂಡಿಕೊಂಡು ಸಹಕಾರದಿಂದ ಮಾಡುತ್ತಿದ್ದರು. ಎಷ್ಟು ವಿಶಾಲವಾದ ಕೃಷಿ ಕ್ಷೇತ್ರವಾದರೂ ಆಗ ಆ ಜನರಿಗೆ ಅದು ಲಕ್ಷ್ಯವಿರಲಿಲ್ಲ. ದುಡಿಮೆಗೆ ಇಮ್ಮಡಿಯಾಗಿ ಮುಮ್ಮಡಿಯಾಗಿ— ಫಸಲು ಲಭಿಸುತ್ತಿತ್ತು. ಒಬ್ಬನ ಶ್ರಮ ಹತ್ತು ಜನರಲ್ಲಿ ಹಂಚಿ ಹೋಗಿ ಜನರು ನೂರ್ಕಾಲ ಬಾಳಿ ಬೆಳಗುತ್ತಿದ್ದರು. ಇದನ್ನೆಲ್ಲ ವಿಚಾರ ಮಾಡಿದಾಗ ಇಂದು ನಾಚಿಕೆಯಾಗದಿದ್ದೀತೇ!

ಆದರೆ.... ಇಂದು? 'ತಾನು, ತನ್ನ ಗಂಡ—ತನ್ನ ಹೆಂಡತಿ ತನ್ನ ಸ್ವಂತ ಮಕ್ಕಳು ಕುಟುಂಬವೆಂದರೆ ಇಷ್ಟೇ' ಆಗಿರುವುದು. ಏನಿದ್ದರೂ ಈಗ ತಂದು ಹಂಚಿ ತಿನ್ನುವ ವೇಳೆ ಆವರಿಸಿದೆ. ನಾಲ್ಕು ಜನರ ಶ್ರಮ ಒಬ್ಬನ ಮೇಲೆ ಬೀಳುತ್ತಿದೆ. ದುಡಿಯುವವನೊಬ್ಬನಾದರೆ ಉಣ್ಣುವವರು ಐದು ಮಂದಿ! ಹೀಗಾಗಿರುವುದು ಇದೆಲ್ಲವೂ ಅಸಹಕಾರದ ಫಲ! ದುರ್ವ್ಯಸನಗಳು ಅಂಟಿಕೊಂಡಿವೆ. ಇನ್ನೊಬ್ಬನ ಮೋಜನ್ನು ನೋಡಿ, ಅನುಕರಣೆ ಮಾಡುವ ಚಟ ಹೆಚ್ಚುತ್ತಿದೆ! ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಮುಖಕ್ಕೆ 'ಪೌಡರ್' ಬಳಿಯುವ ಮೋಹ ಮಿತಿಮೀರಿದೆ! ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕೆಲಸವನ್ನು ಶ್ರದ್ಧೆಯಿಂದ ತೃಪ್ತಿಕರವಾಗಿ ಮಾಡಲಾರದವನಾಗಿದ್ದಾನೆ! ಇದರಿಂದಾಗಿ ಬಡತನ ಆವರಿಸಿದೆ. ಈ ಪರಿಸ್ಥಿತಿಯಲ್ಲಿ ತನ್ನ ಕುಟುಂಬ ಪೋಷಣೆ ಮಾಡಲಾರದೆ ಶ್ರೀಮಂತರಿಂದ ಸಾಲಪಡೆದು, ಕೊನೆಗೆ ಅದನ್ನು ಕಾಲದಲ್ಲಿ ಮರಳಿಸಲಾಗದೆ, ಆ ಕುಟುಂಬದ ವಿನಾಶಕ್ಕೆ ಕಾರಣನಾಗುತ್ತಿದ್ದಾನೆ; ಮಧ್ಯಮ ವರ್ಗದ ಆ ಕುಟುಂಬದ ಮುಖ್ಯಸ್ಥ.

ಕೆಲವೆಡೆ ತಕ್ಕಷ್ಟು ದುಡಿಮೆ ಇಲ್ಲದೆ ಪರಿಸ್ಥಿತಿ ಹದಗೆಡುವುದಾದರೆ ಕೆಲವೆಡೆ ಸಾಕಷ್ಟು ದುಡಿದರೂ ದುಬಾರಿ ಖರ್ಚಿನಿಂದಾಗಿ ಪರಿಸ್ಥಿತಿ ಹದಗೆಡುತ್ತಿದೆ. ದುಡಿಮೆಗೆ ತಕ್ಕ ಫಲ ದೊರೆತರೂ ದುಶ್ಚಟ—ದುರ್ವ್ಯಸನಗಳಿಗೆ ಅದು ಸಾಕಾಗದೆ ದುಡಿಮೆಗೆ ತಕ್ಕ ಫಲ ದೊರೆಯುತ್ತಿಲ್ಲ!, ನೆಂಬ ಕೂಗು ಕೇಳಿಸುತ್ತಿದೆ! ಈ ಪರಿಸ್ಥಿತಿಯನ್ನು ಸುಧಾರಿಸುವುದೆಂತು? ಇದರ ನಿವಾರಣೋಪಾಯ ಯಾವುದು? ಎಂಬ ಸಮಸ್ಯೆ ಮುಂದೆ ನಿಂತಾಗ ಮಹಾತ್ಮಾ ಗಾಂಧೀಜೀಯವರೇ ಮೊದಲಾದ ರಾಷ್ಟ್ರದ ನಾಯಕರು, ಈ ಸಮಸ್ಯೆಯ ನಿವಾರಣೋಪಾಯ—ಸಹಕಾರ, ಎಂದು ಸಾರಿ, ಸಹಕಾರ ತತ್ವದ ಪ್ರಾಚೀನ ವೈಭವವನ್ನು ಎತ್ತಿ ತೋರಿಸಿದರು. "ಸಹಕಾರೀ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು, ಎಲ್ಲ ಸಮಸ್ಯೆಗಳನ್ನೂ ಸಹಕಾರದ ಬಲದಿಂದ ಬಗೆಹರಿಸಿ ಕೊಳ್ಳಬೇಕು. ತನ್ಮೂಲಕ ಒಬ್ಬನ ಕಷ್ಟವನ್ನು ಹತ್ತು ಜನರ ಹಸ್ತಗಳಿಂದ ನಿವಾರಣೆ ಮಾಡಿಕೊಂಡು ಸುಖೀರಾಜ್ಯ ಕಲ್ಯಾಣರಾಜ್ಯಗಳನ್ನು ಕಟ್ಟಬೇಕು!, ಎಂಬುದಾಗಿ ಬೋಧಿಸಿದರು. ಇದರಿಂದಾಗಿ ಜನಜಾಗೃತಿಯುಂಟಾಯಿತು. ಸಹಕಾರೀ ಸಂಘಸಂಸ್ಥೆಗಳ ಪುನರುದಯವಾಗತೊಡಗಿತು.

ಸನ್ ೧೯೦೪ ರಲ್ಲೇ ನಮ್ಮದೇಶದಲ್ಲಿ ಸಹಕಾರೀ ಆಂದೋಲನ ಪ್ರಾರಂಭವಾಗಿತ್ತಾದರೂ, ಅದರ ಪೂರ್ಣ ವಿಕಾಸ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಮೇಲೆಯೇ ಆಗತೊಡಗಿತು. ಸ್ವಾತಂತ್ರ್ಯ ದೊರೆತ ಈ ಹದಿನೆಂಟು ವರ್ಷಗಳಲ್ಲಿ ಹಲವು ಬಗೆಯ ಸಹಕಾರೀ ಸಂಘ ಸಂಸ್ಥೆಗಳು ಭಾರತದ ಹಳ್ಳಿ ಕೊಂಪೆಗಳಲ್ಲಿ ಕೂಡ ತಲೆ ಎತ್ತಿ ನಿಂತಿವೆ. ಸಹಕಾರ ರೂಪದ ಸೇವೆ ಮಾಡುತ್ತಿವೆ.

ಈ ಸಹಕಾರೀ ಸಂಸ್ಥೆಗಳಿಗೆ ಹಣವನ್ನು ಒದಗಿಸುವ ದೊಡ್ಡ ಬ್ಯಾಂಕುಗಳ ಪಾತ್ರವೂ ಮಹತ್ವದ್ದಾಗಿದೆ. ರೈತರಿಗೆ ವರ್ಷಾವಧಿ ಸಾಲವನ್ನೊದಗಿಸುವುದು, ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ಸುಲಭ ಬೆಲೆಗೆ ಕೊಡುವುದು, ಕೃಷಿಕರ ಉತ್ಪನ್ನಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವುದು ಇವೇ ಮೊದಲಾದ ಕಾರ್ಯಗಳಿಂದಾಗಿ ಇಂದು ಸಹಕಾರೀ ಸಂಸ್ಥೆಗಳು ಜನರಿಗೆ ಸುಖ ಜೀವನಕ್ಕೆ ಆಧಾರವಾಗಿವೆ. ಆದರೆ ಕಾಳಿನೊಡನೆ ಜಳ್ಳು ಕೂಡ ಸೇರಿಕೊಂಡಿರುವಂತೆ, ಕೆಲವೆಡೆ, ನಿಸ್ವಾರ್ಥೀ ಕಾರ್ಯಕರ್ತರ ಅಭಾವದಿಂದಾಗಿ, ಸಹಕಾರೀ ತತ್ವವು ಎಷ್ಟು ಉಪಕಾರಿಯಾಗಬೇಕಿತ್ತೋ ಅಷ್ಟರಮಟ್ಟಿಗೆ ಪೂರ್ಣವಾಗಿ ಆಗುತ್ತಿಲ್ಲವೆಂಬುದೂ ಗಮನಿಸ ತಕ್ಕ ವಿಚಾರವಾಗಿದೆ.

ಅವಿದ್ಯಾವಂತರ ಹಳ್ಳಿಗಳಲ್ಲಿ ಇರುವ ಗ್ರಾಮ ಸಹಕಾರೀ ಸಂಘಗಳಲ್ಲಿ ಕೆಲವೆಡೆ ನಡೆಯುತ್ತಿರುವ, ಮೋಸ, ವಂಚನೆ —ಮತ್ತು ಅನ್ಯಾಯಗಳು ಹೆಜ್ಜೆ ಹೆಜ್ಜೆಗೆಂಬಂತೆ ಅಪಾಯಕರವಾಗಿವೆ. ಕೆಲವು ಸಂಸ್ಥೆಗಳಲ್ಲಿ ನಡೆಯುವ ಸಂಘದ ಅಧ್ಯಕ್ಷರ, ಹಾಗೂ ಕಾರ್ಯ ನಿರ್ವಾಹಕರ ವ್ಯವಹಾರಗಳು ಸಹಕಾರೀ ಭಾವನೆಯನ್ನೇ ಬುಡ ಮೇಲು ಮಾಡುವಂತಿವೆ. ಇನ್ನು ಕೆಲವು ಸಂಸ್ಥೆಗಳಲ್ಲಿ ನಡೆಯುವ ಫೋರ್ಜರಿ ಪ್ರಕರಣಗಳನ್ನು ನೆನೆದಾಗ ಈ ಸಂಘ ಸಂಸ್ಥೆಗಳಲ್ಲಿ ಸೇರಿಕೊಳ್ಳುವುದೇ ಅಪಾಯಕರವೆಂದು ಜನರು ಹೆದರಿಕೊಳ್ಳುವ ಪರಿಸ್ಥಿತಿ ಬಂದೊದಗಿದೆ. ಕೆಲವು ಕಡೆಗಳಲ್ಲಿ ಈ ಪರಿಸ್ಥಿತಿ ಸಾಹುಕಾರೀ ಸಾಲವಾದರೂ ಆಗಬಹುದು—ಆದರೆ ಈ ಸಹಕಾರೀ ಸಂಘಗಳ ಸಹವಾಸವೇ ಬೇಡ! ಎಂದು ಹೇಳುತ್ತ ಅಂತಹ ಸಂಸ್ಥೆಗಳಿಗೆ ದೂರದಿಂದಲೇ ನಮಸ್ಕರಿಸುವ ಜನರೂ ನಮಗೆ ಕಾಣಸಿಗುತ್ತಾರೆ. ಇದಕ್ಕೆಲ್ಲ ಕಾರಣ ಜನರಿಗೆ ಸಹಕಾರೀ ತತ್ವದ ಪರಿಚಯವಿಲ್ಲದಿರುವುದು ಒಂದಾದರೆ, ಮತ್ತೊಂದು ಪ್ರಬಲವಾದ ಕಾರಣ—ಸಹಕಾರೀ ಕಾರ್ಯಕರ್ತರ ಅಧಿಕಾರ ಲಾಲಸೆ, ಮತ್ತು ಧನ ಸಂಚಯದ ದುರಭಿಲಾಷೆ. ಎಲ್ಲಿಯೋ ಕೆಲವು ಕಡೆಗಳಲ್ಲಿ ಹೀಗೆ ಅವ್ಯವಸ್ಥೆ ಇದೆ, ಎಂದ ಮಾತ್ರಕ್ಕೆ ಸರ್ವತ್ರ ಹೀಗೆಯೇ—ಎಂದು ಯಾರೂ ಭಾವಿಸಲಾಗದು. ಆದರೆ ಕೆಲವು ಕಡೆಗಳಲ್ಲಿ ನಡೆಯುತ್ತಿರುವ ಇಂತಹ ಅನೇಕ ದುರ್ವ್ಯವಹಾರಗಳ ಕಡೆಗೆ ಅಲಕ್ಷ್ಯ ವಹಿಸಿದರೆ, ಈ ವ್ಯಾಧಿ ಕೆಲವು ಕಡೆಗಳಿಂದ ಹಲವು ಕಡೆಗಳಿಗೆ ಹರಡಿ, ಒಳ್ಳೆಯದೂ ಕೆಟ್ಟದ್ದಾಗಿ ಮಾರ್ಪಡುವ ಸಂಭವವೂ ಇದೆ.

"ಊರಿದ್ದಲ್ಲಿ ಹೊಲಗೇರಿಯೂ ಇದೆ, ಎಂಬ ಗಾದೆಯಂತೆ, ಸಹಕಾರದೊಡನೆ ಅಸಹಕಾರವೂ ಬೆರೆತಿರುತ್ತದೆ, ಎಂದು ಸಮಾಧಾನ ಪಟ್ಟುಕೊಳ್ಳುವುದು ಸಮಂಜಸವಾಗದು. ಊರ ಹೊಲಗೇರಿಯನ್ನು ಶುದ್ಧೀಕರಿಸಿ ಅಸ್ಪೃಶ್ಯತಾ ನಿರಣೆ ಮಾಡುವಂತೆ ಸಹಕಾರದೊಡನಿರುವ ಅಸಹಕಾರೀ ಭಾವನೆಯನ್ನೂ ಸಹ ಬೇರು ಸಹಿತ ಕಿತ್ತೊಗೆದು—"ತಾವು ಕುಬೇರನ ಕುಲದವರೆಂದು, ಭಾವಿಸುವ ಸಂಘದ ಕಾರ್ಯಕರ್ತರ ಮನಸ್ಸನ್ನೂ ಪರಿವರ್ತಿಸಿ ಶುದ್ಧೀಕರಣ ನಡೆಸಬೇಕು. ಇಂತು ಸಾಧ್ಯವಾದರೆ ಆಗ ಸಹಕಾರೀ ಸಂಘಗಳು ಬಹು ಜನಪ್ರಿಯತೆಯನ್ನು ಪಡೆದು, ಗಣರಾಜ್ಯದ ಕಲ್ಯಾಣಕಾರೀ ಸಂಸ್ಥೆಗಳಾಗಿ ಬಲಗೊಳ್ಳಬಲ್ಲವು, ಎಂಬುದರಲ್ಲಿ ಸಂದೇಹವಿಲ್ಲ.

ಸಹಕಾರವೇ ಜೀವನ! ಸಹಕಾರವೇ ಸಂಪತ್ತು! ಸಹಕಾರ ಸಂಘಟನೆಯೇ ಸಮಾಜ ವಿಕಾಸದ ಮೂಲಮಂತ್ರ! ಸಹಕಾರವು ನಿತ್ಯ ಸತ್ಯ ಹಾಗೂ ಕಲ್ಯಾಣಕಾರೀ ಭಾವನೆಯ ಒಂದು ಸುಂದರ ಉದ್ಯಾನದಂತಿದೆ. ಈ ಸುಂದರವಾದ ಉದ್ಯಾನದಲ್ಲಿ ಪ್ರವೇಶಿಸಿದ ಯಾವ ವ್ಯಕ್ತಿಯೂ ಸಹ ಮೇಲು ಕೀಳೆಂಬ ಭಾವನೆಯಿಲ್ಲದೆ ವ್ಯವಹರಿಸಬಲ್ಲನು. ಆತನಿಗೆ ಅಲ್ಲಿ ಸಮಾನಾಧಿಕಾರ ಕಾದಿರಿಸಲಾಗಿದೆ. ಸಹಕಾರೀ ಸಂಘ ಸಂಸ್ಥೆಗಳು ಈ ಕಾರಣದಿಂದಲೇ ಸತ್ಯಂ ಶಿವಂ ಸುಂದರಂ ಎಂಬೀ ತತ್ವದ ಆಧಾರದ ಮೇಲೆ ನಿಂತಿದ್ದು — ನಗುಮುಖದ ಸೇವೆಯನ್ನು ಜನತೆಗೆ ನೀಡುತ್ತಿವೆ! ಸ್ವತಂತ್ರ ಭಾರತದ ಸುಖೀರಾಜ್ಯ —ರಾಮರಾಜ್ಯದ ಪುನರ್ನಿರ್ಮಾಣದಲ್ಲಿ ಸಹಕಾರೀ ಸಂಘಗಳ ಸೇವೆ—ಪ್ರಮುಖವಾಗಲಿ! ಎಂದು ಹಾರೈಸೋಣ.

Phone: 3131 ಸ್ಥಾಪನೆ: 1947 Tel. GOLDKING

ತಾಜಾ ಬ್ಲೂ ಜಾಗರ್ ವಜ್ರಗಳಿಗೂ ಮತ್ತು ಅತ್ಯಾಧುನಿಕ ಫೇಶನಿನ ಚಿನ್ನಾಭರಣಗಳಿಗೂ, ಬೆಳ್ಳಿಯ ಉಡುಗೊರೆ ವಸ್ತುಗಳಿಗೂ ಪ್ರಖ್ಯಾತಿಯಾದ

ಎಸ್. ಎಲ್. ಶೇಟ್
ಡಾಯಮಂಡ್ ಹೌಸ್

ಮನೆಯ ನಿತ್ಯೋಪಯೋಗದ ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಫೇನ್ಸಿ ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲ್ ಸೆಂಟರ್

ಮತ್ತು ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ

ಐಡಿಯಲ್ ಫೋಟೋ ಹೌಸ್

ಆಗ್ಫಾ ಕೋಡಕ್ ಮತ್ತು ಇಲ್‌ಫೋರ್ಡ್ ಇವುಗಳ ಅಧಿಕೃತ ಡೀಲರ್ಸ್,

ಕಾರ್ನಾಡ್ ಸದಾಶಿವರಾವ್ ರೋಡ್, ಹಂಪನಕಟ್ಟಾ, ಮಂಗಳೂರು—1.

Prop: **S. L. SHET.**

ನೀನಿಲ್ಲದಾರಿನ್ನೆಮಗೆ ಜವಾಹರಲಾಲ

ಶ್ರೀ ದಾಮೋದರ ಬಾಳಿಗ

ನೀನಿಲ್ಲದಾರಿನ್ನೆಮಗೆ ಜವಾಹರಲಾಲ?
ಜಾನಪದ ಹೃತ್ಕಮಲ ವಿಕಾಸ ಲೋಲ!
ಬಾರಯ್ಯ, ಭಾರತದ ಪುಣ್ಯನಿಧಿ ನೀ ಬಾ!
ಭಾರತದ ಬಾನ್ದಳದಿ ಮಗುಳೊಮ್ಮೆ ಬಾ!
ಸಾರಸ್ವತವರೇಣ್ಯಾಗ್ರಗಣ್ಯನೆ ಬಾ,
ವಾರಿಧಿಯ ತೆರೆಗಳಿಂದುರುಳಿ ಬಾ,
ಹಿಮನಗದ ಶಿಖರಗಳಿಂದಿಳಿದು ಬಾ,
ಕ್ಷೇಮ ದುತ್ಕ್ರಾಂತಿಯನೆ ಸಿಡಿಸಿ ತಾ
ಪಾವನೆ ಸುರಗಂಗೆಯೊಲು ಹರಿದು ಬಾ,
ಸೇವೆಯಲಿ ಧೃತಿಯೊಸರ ಸ್ಫುರಿಸಿ ಬಾ,
ಹರಿದೊಸರಿ, ಕರೆದೊರೆಯೋ ಜಗದೆರೆಯ!
ಸ್ಥಿರಶಾಂತಿ ಸುಖ ಸಂಪದದ ವರ ನೆರೆಯ,
ಹರಸು ಎಮ್ಮಯ ಪರಿಶ್ರಮದ ನೀ ನಿರತ
ದುರಿತ ಕೋಟಲೆಗಳಿಂದ ಕಾಯೆಮ್ಮ ಸತತ
ಕೆಂದರಳ ಗುಚ್ಛದಿಂದರಳಿ ಬಾರ!
ಮಂದಸ್ಮಿತ ವದನಾರವಿಂದ ತೋರ!
ನೆಲಜಲದ ಕಣಗಳಿಂದುಚ್ಛಳಿಸಿ ಬಾ,
ಸಲುವಳಿಯ ಜೀವನದುತ್ಸಾಹವನೆ ತಾ;
ಪಂಚಶೀಲದ ಪಾಂಚಜನ್ಯವನೂದಿ ಬಾ,
ಸಂಚಿತದ ಧರ್ಮಕರ್ಮವಾಹಿನಿಯೆ ಬಾ,
ಸಂದೇಶದೊಸಗೆಯನೆ ಮೊಳಗಿಸುತ ಬಾ,
ಒಂದೇ ಸತ್ತೆಯೊಳು ಜಗವ ಸ್ಥಾಪಿಸಿ ಬಾ,
ಲೋಕೈಕ್ಯವಾಗುತಿಪಿ ತವ ಪ್ರತಿಭೆ ಖ್ಯಾತಿ;
ನಾಕವನೆ ಧಿಕ್ಕರಿಸಿ ವ್ಯಾಪಿಸಿದ ವಿಭೂತಿ!
ಅಣ್ವಂತರ್ಯ ಶಕ್ತಿ ಯುತ 'ಅಸ್ತ್ರಂ' ಬಾ,
ಅಣ್ವಸ್ತ್ರ ಕ್ಷಿಪಣಿಗಳ ಪ್ರತಿಭಟಿಸಿ ಬಾ,
ಮನ್ವಂತರದ ಧಾತೃ ಧೀಮಂತನೆ ಬಾ,
ಅನ್ವರ್ಥನಾಮ ವಿಶ್ವದಾಭರಣ ಬಾ,
ಅಗಲದಿರು, ಅಗಲದಿರು, ನೀನೆಮ್ಮ
ನೇತಾರ ಸಹರು,
ಜಗದಗಲ ನಗೆಬೆಳೆದ ಸೌಭಾಗ್ಯ
ಕಲ್ಯಾಣ ಕಲ್ಪತರು!

ಪ್ರಗತಿಯ ಲಕ್ಷಣ

(ಹದಿಮೂರನೇ ಪುಟದಿಂದ)

ಷ್ಟ ಅವರ ಪ್ರಾಣವುಳಿಸುತ್ತೇನೆ. ನನ್ನುದು ಅನ್ಯಾಯವೆನ್ನುವವರು ಘೋರ ರಾಕ್ಷಸರು" ಅನ್ನುತ್ತಾರೆ.

ಅಸಲು ಈ ಕಾರ್ಡಿಂಗ್ ಪದ್ಧತಿ (ಅಪ್ಪಟೇಶನ್ ಆಕ್ಟ್.) ಬಂದಿದ್ದೇ ಜನತೆಯ ಹೊಟ್ಟೆಯೇ ಕಾರಣವಾಯಿತು. ಇನ್ನೂ ಹೆಚ್ಚು ಹೊಟ್ಟೆ ನೋಡಿದರೆ ಅಪ್ಪಟೇಶನ್ನೂ ಬಂದೀತು ಬರದ ಆನಕ್ಕೆ ಹೆದರಿಯೇ ಜನರು ಬಾಯಿಮುಚ್ಚಿದ ಹಾಗಿದ್ದಾರೋ ಏನು!

ಕೆಲವರಂತೂ ಆ ಬೊಟ್ಟೆಗೆ ಬದಲಾಗಿ ಇನ್ನೊಂದು ಬೊಟ್ಟೆ ಹೊಡೆಯುತ್ತದನ್ನೂ ಆಗಾಗ ಕೇಳುತ್ತಿದ್ದೇವೆ. "ಕಾರ್ಡಿಂಗ್ ಬೇಡ", "ರೇಶನಿಂಗ್ ಬೇಡ" "ಕಂಟ್ರೋಲ್ ಬೇಡ", "ಕಟ್ಟುಪಾಡು ಬೇಡ" "ಮೊದಲಿದ್ದ ಹಾಗೇ ಇರಲಿ." "ಹಿಂದಿನ ಬೆಲೆಯೇರಿಕೆಯೇ ಸಾಕು. ಸಹಿಸಿಕೊಳ್ಳುವೆ"....ಅಂತ ಕೆಲವರು ಮಕ್ಕಳ ಹಾಗೆ ತಿರುಬೊಟ್ಟೆ ಹೊಡೆಯುತ್ತಾರೆ. ಆಗಲೂ ಅಳು, ಈಗಲೂ ಅಳು, ಹಾಗಾದರೆ ಸರಕಾರವೆಂದರೇನು ಹುಡುಗಾಟವೆ? ಮುಖ್ಯವಾಗಿ ಪ್ರಜೆಗಳು ಬುದ್ಧಿ ತಂದುಕೊಂಡು ಹೊಟ್ಟೆಯನ್ನು ಸಣ್ಣದು ಮಾಡಿಕೊಳ್ಳಲು ಕಲಿಯದೆಯೇ ಹೀಗೆ ಸತಾಯಿಸುತ್ತಿದ್ದಾರೆ.

೦ ೦ ೦

"ಆಗುವುದೆಲ್ಲಾ ಒಳ್ಳೆಯದಕ್ಕೇ" ಎಂದು ಹಿರಿಯರು ಹೇಳುವುದು ಸುಳ್ಳಲ್ಲವಾದರೆ ಇವೆಲ್ಲಾ ಪ್ರಗತಿಯ ಲಕ್ಷಣವೆನ್ನಲು ಸಂದೇಹವಿಲ್ಲ. ಜನತೆಯ ಮನಸ್ಸಿನ ಹೊಯ್ಲಿನಂತೆಯೇ ಎಲ್ಲವೂ ಆಗುತ್ತದೆ. ಇದನ್ನು ತಪ್ಪಿಸಲು ಯಾರಿಂದಾದೀತು? ಈಗ ನೈತಿಕ ರಾಜ್ಯದ ಮನೋಭಾವ ಹೋಗುತ್ತಾ, ನಾಗರಿಕ ರಾಜ್ಯದ ಮನೋಭಾವ ಬೆಳೆಯುತ್ತಾ ಬರುತ್ತಿರುವ ಮಾಟವನ್ನೇ ನಾವೀಗ ಕಾಣುತ್ತಿದ್ದೇವೆ. ಹೊಟ್ಟೆಯನ್ನು ಸಣ್ಣದು ಮಾಡಿಕೊಳ್ಳುವ ಅವಕಾಶದಂತಹ ಸುವರ್ಣ ಸಮಯವಿದು. ಇದನ್ನು ಸರಿಯಾಗಿ ಸಾಧಿಸಿಬಿಟ್ಟರೆ ಪ್ರಗತಿಗೆ ಇದೊಂದು ದೊಡ್ಡ ಹಂತವೆನ್ನಿಸೀತು.

ಈಗಿನ ಆಹಾರ ಪದ್ಧತಿ ಪ್ರಾರಂಭದಲ್ಲಿ ಕಷ್ಟವೆನ್ನಿಸಿದರೂ ಮುಂದೆ ರೂಢಿಗೆ ಹತ್ತಿಕೊಂಡೇ ತೀರುತ್ತದೆ, ತೀರಬೇಕು. ಧನಿಕರ ಆಹಾರಕ್ಕೆ ಯೋಗ್ಯವೆನಿಸುವಂತಹ ಗೋದಿ (ಇದಕ್ಕೆ ಧನಿಕ ಪದಾರ್ಥವಾದ ತುಪ್ಪ ಹಾಲೂ ಭರ್ಜರಿ ಬೀಳಬೇಕು) ಯನ್ನು ಧನಿಕ ಬಡವರೆಂಬ ಭೇದವಿಲ್ಲದೆ ಎಲ್ಲರೂ ಅಭ್ಯಾಸಮಾಡಬೇಕೆನ್ನುವುದು ಬಡವರನ್ನು ಮೇಲ್ಮಟ್ಟಕ್ಕೆ ಎತ್ತಿದ ಹಾಗೆ ತಾನೆ? ಬಡವರು ತಿನ್ನುವಂಥ ಘೊಣ್ಣಕ್ಕಿಯನ್ನೇ ದೊಡ್ಡವರೂ ತಿನ್ನಬೇಕಾಗಿ ಬರುವುದೆಂದರೆ ದೊಡ್ಡವರನ್ನು ಬಡವರ ಮಟ್ಟಕ್ಕೆ ಇಳಿಸಿದ ಹಾಗೆ ಆಗದೇ ಇನ್ನೂ ಇವರ ಒಳಿತುಗಳನ್ನಿಷ್ಟು ಹೇಳಬೇಕೆ?

ಮನೆಗೆ ಆಗಾಗ ಬಂದು ರಿಕಾಣಿ ಹೊಡೆಯುವ ನೆಂಟರನ್ನು ನಿರ್ದಾಕ್ಷಿಣ್ಯವಾಗಿ "ಹೊತ್ತಾಯಿತಲ್ಲ, ಊಟಕ್ಕೆ ಹೋಗಿ ಬನ್ನಿ" ಅಂತ ಹೇಳುವುದೇ ರೂಢಿಯಾಗುತ್ತೆ; ಮರ್ಯಾದೆಯಾಗುತ್ತೆ. ಅಥವಾ ವಿವೇಕಿಗಳಾದ ನೆಂಟರು ತಮ್ಮ ಭಾಗದ ಕಾಳನ್ನು ಹೊತ್ತುಕೊಂಡೇ ಬಂದಾರು. ಅದನ್ನು ಬೇಯಿಸಿ ಬಡಿಸುವುದೇ ಅತಿಥಿ ಸತ್ಕಾರ ಬಲ್ಲೊಂದು ಗೌರವ. ಇಷ್ಟವಿದ್ದವರು ತಂತಮ್ಮ ಮನೆಯ ಮುಂದೆ ಢಣಾ ಢಂಗುರವಾಗಿ "ಇಲ್ಲಿಗೆ ಬರುವವರು ಊಟದ ವ್ಯವಸ್ಥೆ ಅವರೇ ನೋಡಿಕೊಳ್ಳತಕ್ಕದ್ದು" ಅಂತ ಬೋರ್ಡು ಬರೆದು ನೇತಾಡಿಸುವ ಪದ್ಧತಿ ಬಹು ಉತ್ತಮ. ಮುಂದೆ ಇದೆಲ್ಲ ಒಳ್ಳೆಯ ಫ್ಯಾಷನ್ನೂ ಆದೀತು. ಹಾಗೆಯೇ ಊಟತಿಂಡಿಗಳಲ್ಲಿ "ಸಾಕೇ? ಬೇಕೆ" ಮುಂತಾದ ರೋಗಕಾರಕ ಕೇಳೋಣಗಳೇ ಕೇಳಿಸಲಿಕ್ಕಿಲ್ಲ. ಮಾಡಿದ್ದನ್ನು ಇದ್ದಷ್ಟು ಮುಂದಿಗೆ ಲಕ್ಷಣವಾಗಿ ಹಂಚಿ ಚೂರೋ ಪಾರೊ 'ಪಾಲಿಗೆ ಬಂದದ್ದು ಪಂಚಾಮೃತ' ಎಂದು ಕೊಳ್ಳುವುದು ಎಷ್ಟು ಸೊಗಸು! ಹೋಟೆಲಿಗೆ ಹೋಗಿ ಇಷ್ಟೆಷ್ಟು ತಿಂದು ತೃಪ್ತಿಯಿಂದ ಬರೋದಿಲ್ಲವೇ? ಹಾಗೆ ಇನ್ನು ಮನೆಯಲ್ಲಿಯೂ. ಇದರಿಂದ ಅಜೀರ್ಣ ರೋಗಾಣುಗಳು ಕಡಮೆಯಾದಾವು. ಮನೆಯಲ್ಲಿ ಧಾನ್ಯ ಸಂಗ್ರಹವೇ ಇಲ್ಲದ್ದರಿಂದ ಇಲಿ ಹೆಗ್ಗಣಗಳ ಕಾಟ ಕಡಮೆ ಯಾದೀತು. ನಾಯಿಗಳು ಎಂಜಲೆಲೆಗಳ ಕೊಳೆಗೆ ಬಾರದೆ ಗೌರವದ ಪ್ರಾಣಿಗಳಾದಾವು. ಆಗ ಅವು ಮಾನವರ ಸ್ನೇಹಕ್ಕೆ ಇನ್ನೂ ಹೆಚ್ಚು ಹತ್ತಿರವಾದಾವು; ಆದರಿಂದ ಮಾನವರು ಸರಕಾರವನ್ನು ಒತ್ತಾಯಪಡಿಸಿ ನಾಯಿಗಳಿಗೂ ರೇಷನ್ ಮಾಡಿಸಿ ಅವುಗಳ ಜೊತೇಲೇ—ಕೆಲಸಿನಿಮಾ ತಾರೆಗಳ ಹಾಗೆ, ಎಲ್ಲರೂ ಹಾಯಾಗಿ ಕೂತುಕೊಂಡು ಊಟಮಾಡಬಹುದು. ಇನ್ನು ಮೇಲೆ ಯಾರೂ ಯಾರಿಗೂ "ತಿಂದು ಸೊಕ್ಕು" ಎಂದು ಬಯ್ಯುವಂತಿಲ್ಲ.

ಇದೆಲ್ಲಾ ಒಳ್ಳೆಯದಲ್ಲವೆಂದು ಯಾವ ಪ್ರಗತಿ ಶೀಲರೂ ಹೇಳಲಾರರು. ಹಿಂದಿನವರು ಆರೋಗ್ಯದ ಮೂಲ ಸೂತ್ರವೆನಿಸಿ ಆಚರಿಸಿಕೊಂಡು ಬಂದ ಏಕಾದಶೀ ಹಿಂದಿನಗಳ ಉಪವಾಸ ಒಪ್ಪೊತ್ತುಗಳೆಲ್ಲ ಮಾಯವಾಗಿರುವಾಗ, ಆ ಪದ್ಧತಿ ಮತ್ತೆ ಈ ಹೊಸರೂಪದಲ್ಲಿರುವುದು ಎಷ್ಟೋ ಒಳ್ಳೆಯದೆಂದು ಎದೆತಟ್ಟಿ ಬೇಕಾದರೂ ಹೇಳಬಲ್ಲೆ.

ಅಂತೂ ನಮ್ಮ ನಮ್ಮ ಹೊಟ್ಟೆಗಳಿಗೆ ಯಾವುದು ಎಷ್ಟು ಬೇಕು ಎಂಬುದಕ್ಕೆಲ್ಲ ಲೆಕ್ಕವಿದೆ, ಪಟ್ಟಿಯಿದೆ, ಕಾರ್ಡಿದೆ. ಸುಮ್ಮನೆ ಹಸಿವೆಯ ಚಿಂತೆಯನ್ನೇ ಮಾಡುತ್ತ ಹೊಟ್ಟೆ ಹೊಟ್ಟೆ ಅಂದುಕೊಂಡು ಬ್ಲಾಕ್ ಮಾರ್ಕೆಟ್ಟಿಗೆಲ್ಲ ನುಸುಳುವುದನ್ನು ಬಿಟ್ಟು, ಕಾರ್ಡಿನಲ್ಲಿರುವ ನಮ್ಮ ನಮ್ಮ ಲೆಕ್ಕದಷ್ಟನ್ನೇ ಹೊಟ್ಟೆಗೆ ಹಾಕಿಕೊಂಡು ನೆಮ್ಮದಿಯಾಗಿ ಬುದ್ಧಿಯನ್ನು ಬೆಳೆಸಿಕೊಳ್ಳುವುದೇ ಪ್ರಗತಿಯ ಲಕ್ಷಣ.

ಉತ್ತಮ ಸರಕಾರ ಹೇಗಿರಬೇಕು

ಅಮೇರಿಕಾಧ್ಯಕ್ಷ ಅಬ್ರಹಾಂ ಲಿಂಕನ್ನರ ಅಭಿಪ್ರಾಯ

೧. ಮಿತವ್ಯಯದ ತತ್ವವನ್ನು ತಳ್ಳಿದು ಅಭಿವೃದ್ಧಿಯ ಸ್ವರ್ಗಕ್ಕೇರುವುದು ಅಸಾಧ್ಯ.

೨. ಆರ್ಥಿಕ ದೃಷ್ಟಿಯ ಬಲಾಢ್ಯರನ್ನು ನಿರ್ಬಲಗೊಳಿಸುವುದರಿಂದ ನಿರ್ಬಲರು ಬಲಗೊಳ್ಳುವುದಿಲ್ಲ.

೩. ವೇತನ ಕೊಡುವವನನ್ನು ಕೆಳತಳ್ಳಿ ವೇತನ ಪಡೆಯುವವನ ಹಿತ ಸಾಧಿಸಲಾಗುವುದಿಲ್ಲ.

೪. ವರ್ಗ ಕಲಹವನ್ನು ಹೆಚ್ಚಿಸಿ ಮಾನವ ಸಹೋದರತೆಯನ್ನು ಬೆಳೆಸಲಾಗುವುದಿಲ್ಲ.

೫. ಶ್ರೀಮಂತರನ್ನು ನಾಶಮಾಡಿ ಬಡವರ ಏಳಿಗೆ ಸಾಧಿಸಲಾಗುವುದಿಲ್ಲ.

೬. ಎರವು ತಂದ ರೊಕ್ಕದಿಂದ (ಸಾಲ) ಸಾಮಾಜಿಕ ಭದ್ರತೆ ಸ್ಥಾಪಿಸುವುದು ಸಾಧ್ಯವಿಲ್ಲ.

೭ ಸಂಪಾದನೆಯ ಮಿತಿಯನ್ನು ಮೀರಿ ವೆಚ್ಚಮಾಡುವುದರಿಂದ ತೊಂದರೆಯನ್ನು ದೂರ ಮಾಡಲಾಗುದಿಲ್ಲ.

೮. ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಸ್ಫೂರ್ತಿಯನ್ನು ಹತ್ತಿಕ್ಕಿ ಧೈರ್ಯ ಮತ್ತು ಶೀಲವನ್ನು ಬೆಳೆಸಲಾಗುವುದಿಲ್ಲ.

(೯) ಪ್ರತಿ ವ್ಯಕ್ತಿ ತನಗಾಗಿ ಮತ್ತು ತಮಗಾಗಿ ಏನು ಮಾಡಿಕೊಳ್ಳಬೇಕೋ ಅದನ್ನೆಲ್ಲಾ ಮಾಡಿಕೊಡುವುದರಿಂದ ಅವರ ಪ್ರಗತಿ ಸಾಧಿಸಲಾಗುವುದಿಲ್ಲ.

ಮಕ್ಕಳ ಮಮತೆಯ
"ಬಿಕ್ಕೊ"ರವರ

ಗ್ಲುಕೋಸ್ ಕೂಡಿದ ಪೆಪ್ಪರ್ ಮಿಠಾಯಿಗಳು— ರುಚಿಕರ ಸೇವನೆಗೆ ಪ್ರಸಿದ್ಧಿಪಟ್ಟಿವೆ.

ಹಣ್ಣಿನ ಶರಬತ್ತುಗಳು ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ನಮ್ಮ ಎಲ್ಲಾ ತಯಾರಿಕೆಗಳು, ಮಂಗಳೂರು ಭವಂತಿ ರಸ್ತೆಯಲ್ಲಿರುವ ನಮ್ಮ ಡಿಪೋದಲ್ಲಿ ಸದಾ ದೊರಕುತ್ತವೆ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,

ಕಾಪು, ದ. ಕ.

ಸಾಹಿತ್ಯ • ಸಂಸ್ಕೃತಿ • ಮನರಂಜನೆ

ಸುಬೋಧ

ಸಂಪಾದಕರು: ಶ್ರೀ ಎಂ. ರಾಮರಾವ್

೨೦ ವರ್ಷಗಳಿಂದ ಬೆಂಗಳೂರಿನಿಂದ ಪ್ರಕಟವಾಗುತ್ತಿರುವ ಮಾಸಪತ್ರಿಕೆ

ವಾರ್ಷಿಕ ಚಂದಾ (ಅಂಚೆ ವೆಚ್ಚ ಸೇರಿ) ರೂ. ೩—೦೦

ಪ್ರಕಾಶಕರು:

ಸುಬೋಧ ಪ್ರಕಟನಾಲಯ,

ಚಾಮರಾಜಪೇಟೆ, ಬೆಂಗಳೂರು—೧೮

ಸ್ವದೇಶ-ಧರ್ಮ-ಧ್ವಜದ ರಕ್ಷಣೆ

(ಹನ್ನೆರಡನೇ ಪುಟದಿಂದ)

ಹಾಕುವದು; ಮೂರು, ಬಾವುಟ ಹಾರಿಸದಿರುವದು. ಕಾಂಗ್ರೆಸ್ಸಿಗರ ಕಾಲು ನಡುಗುತ್ತಿರುವದನ್ನು ಕಂಡ ದ್ರಾವಿಡ ಮುನ್ನೇಟ್ರ ಕಳ್ಗಮಿನವರ ಉತ್ಸಾಹ ಇಮ್ಮಡಿ ಆಯಿತು.

ಸ್ವತಂತ್ರ ಪಾರ್ಟಿ, ಮುಸ್ಲಿಂ ಲೀಗು, ದ್ರಾವಿಡ ಮುನ್ನೇಟ್ರ ಕಳಗಮ್‌ಗಳು ಹಿಂದಿ ವಿರೋಧಿ ಪಿಶಾಚಿಯ ರುಂಡ, ಮುಂಡ, ಕೈಕಾಲುಗಳಾಗಿದ್ದುವು. ರುಂಡದೊಳಗಿನ ಮೆದುಳಾಗಿ ವರ್ತಿಸಿದವರು ಬ್ರಿಟಿಷ್ ಕೌನ್ಸಿಲಿನವರು. ಮುಂಡದೊಳಗಿನ ಹೃದಯವಾಗಿದ್ದದ್ದು ಕಮ್ಯೂನಿಸ್ಟರು.

ಹೀಗೆ ಒಮ್ಮೆ ತಮಿಳುನಾಡು ತತ್ತರಿಸಿ ಹೋಯಿತು. ಇಲ್ಲಿ ದುಷ್ಟ ಶಕ್ತಿಗಳು ಪ್ರೇತ ನೃತ್ಯವಾಡಿದುವು. ಕಾಂಗ್ರೆಸ್ಸಿನ ಕಾಲು ನಡುಗಿತು. ಉಳಿದ ರಾಷ್ಟ್ರೀಯ ಶಕ್ತಿಗೆ ಸಹನೆ ಅಂದು ತಪ್ಪುತ್ತಿದ್ದಲ್ಲಿ ಚೈನೀ ಡ್ರ್ಯಾಗನ್ ಹಾಗೂ ಪಾಕಿಸ್ಥಾನಿ ಪಿಶಾಚಿಗಳು ದೊಪ್ಪನೆ ದಿಲ್ಲಿಯಲ್ಲಿ ಬಂದಿಳಿಯುತ್ತಿದ್ದುವು. ಪುಣ್ಯವಶಾತ್ ಹಾಗಾಗಲಿಲ್ಲ. ಕ್ರಮಶಃ ಕಾಂಗ್ರೆಸ್ಸಿಗರಿಗೆ ಪ್ರಜ್ಞೆ ಬಂತು. ಸ್ವತಂತ್ರ ಪಾರ್ಟಿ ಹಾಗೂ ಮುಸ್ಲಿಂ ಲೀಗಿನವರಿಗೆ ಮತ್ತೆ ಮುಂದಕ್ಕೆ ಬರಲು ಧೈರ್ಯವಾಗಲಿಲ್ಲ. ಆದರೂ, ಆಗೋಸ್ಟ್ ಹದಿನೈದರಂದು ಪುನಃ ತಾವು ಗಲಾಟೆ ಮಾಡುವದಾಗಿ ದ್ರಾವಿಡ ಮುನ್ನೇಟ್ರ ಕಳ್ಗಮಿನವರು ಕೂಗಾಡಿದ್ದರು. ಒಂದು ಸಲದ ಪೆಟ್ಟಿನಿಂದ ಸಾವರಿಸಿಕೊಳ್ಳಲಿಕ್ಕೇ ಅವರಿಂದ ಸಾಧ್ಯವಾಗಿರುವದಿಲ್ಲ. ಇನ್ನೊಂದು ಬಾರಿ ಎದ್ದು ನಿಲ್ಲುವದು ಕಷ್ಟದ ಕೆಲಸವೇ ಸರಿ. ಅಡಿಗೆ ಬಿದ್ದರೂ ಮೀಸೆಗೆ ಮಣ್ಣಾಗಿಲ್ಲವೆನ್ನುವ ಜಟ್ಟಿಯಂತೆ ಅವರೂ ಇನ್ನೊಂದು ಹೇಳಿಕೆಯನ್ನಿತ್ತರು: ಆಗೋಸ್ಟ್ ಹದಿನೈದರಂದು ತಾವು ಬಾಲ ಬಿಚ್ಚುವದಿಲ್ಲವೆಂದೂ, ಮುಂದಿನ ಚುನಾವಣೆಯಲ್ಲಿ ಒಂದು ಕೈನೋಡಿ ಬಿಡುವದಾಗಿಯೂ ತಿಳಿಸಿರುವರು. ಅದೇ ಒಳ್ಳೆಯದೆಂದು ಶ್ರೀ ರಾಜಾಜಿ ಉಪದೇಶವಿತ್ತಿದ್ದಾರೆ. ಅದರಂತೆ ದ್ರಾವಿಡ ಮುನ್ನೇಟ್ರ ಕಳ್ಗಮಿನ ಅಧ್ವರ್ಯುಗಳು ಅರಿಕೆ ಕೊಟ್ಟಿದ್ದಾರೆ. ಅಂದರೆ, ಅವರು ಮುಖ ಉಳಿಸಿಕೊಂಡಿದ್ದಾರೆ, ಬೆನ್ನು ತಪ್ಪಿಸಿಕೊಂಡಿದ್ದಾರೆ.

ಕಾಂಗ್ರೆಸ್ಸಿನ ಕಾಲೆಳೆಯಲು ಸ್ವತಂತ್ರ ಪಾರ್ಟಿ— ಮುಸ್ಲಿಂಲೀಗ್— ದ್ರಾವಿಡ ಮುನ್ನೇಟ್ರ ಕಳ್ಗಮಿನ ತ್ರಿಪಕ್ಷೀಯ ಕೂಟ ಹಾಗೂ ಕಮ್ಯೂನಿಸ್ಟ್ ಪಕ್ಷವು ವಾಮಾಚಾರಕ್ಕಿಳಿದಿರುವದು ಶ್ರೀ ಸಾಮಾನ್ಯನಿಗೆ ಅಥವಾ ನೈಜ ರಾಷ್ಟ್ರೀಯನಿಗೆ ಗೊತ್ತು. ಅಭ್ಯಾಸ ಬಲದಂತೆ ಇಲ್ಲೂ ಕಾಂಗ್ರೆಸ್ ತಾನಾಗಿ ಕಾಲು ಕೊಟ್ಟಿರುತ್ತದೆ, ಅಲ್ಲದೆ ಅದರ ಕಾಲು ಜಾರಿರುತ್ತದೆ. ಅದು ಹಿಂದಿನ ಘೋಷಣಾ ಪತ್ರವನ್ನು ಶ್ರೀ ಕಾಮರಾಜರ ಮಾತಿನಲ್ಲಿ ಹೇಳುವದಾದರೆ ಕಸದ ರಾಶಿಗೆಸೆದಿರುತ್ತದೆ. ಆದರೂ ತ್ರಿಭಾಷಾ ಸೂತ್ರವೆಂಬ ನುಣ್ಣನೆಯ ಜಾಲದ ಹಿಂದುಗಡೆ ಆಶ್ರಯ ಪಡೆಯಲು ಮುಂದಾಗಿರುತ್ತದೆ. ಹೀಗೆ ತನ್ನ ಕೀರ್ತಿ ಕೇತುವನ್ನು ಕಾಲು ಮೇಲೆ— ತಲೆಕೆಳಗೆ ಮಾಡಿ ಹಾರಿಸಿರುತ್ತದೆ.

ಹೀಗೆ ಊಟ— ಪಾನೀಯ— ಬಟ್ಟೆ— ಮನೆ— ಭಾಷೆಗಳಾದ ಮೇಲೆ ಒಂದು ಹೆಜ್ಜೆ ಮುಂದಿಟ್ಟಾಗ ನಮಗೇನು ಕಂಡು ಬರುತ್ತಿದೆ? ಭಾವನಾತ್ಮಕ ಏಕತೆ ಎಂದು ಎಡೆಬಿಡದೆ ಬೋರ್ಗರೆಯುತ್ತಿರುವ ಕಾಂಗ್ರೆಸ್ ಶಾಸನ ದೇಶವನ್ನು ಭಾಷೆಯ ಹೆಸರಿನ ಮೇಲೆ ಭಾಷಾವಾರು ಪ್ರಾಂತ್ಯಗಳೆಂದು ವಿಂಗಡಿಸಿರುತ್ತದೆ. ಇದು ಭಾವಾತ್ಮಕ ಏಕತೆಯ ಲಕ್ಷಣವೋ ಮೂವಾತ್ಮಕ ಏಕತೆಯ ಲಕ್ಷಣವೋ ಎನ್ನುವದು ಅವರಿಗೇನೇ ಚೆನ್ನಾಗಿ ಗೊತ್ತು. ದೇಶಕ್ಕೊಂದು ಶಾಸಕಾಂಗ ಇದ್ದರೆ ಸಾಲದೇನು? ಪಂಚಾಯತಗಳು ಇದ್ದೇ ಇವೆಯಲ್ಲಾ! ಇಲ್ಲೂ ಕಾಂಗ್ರೆಸ್ಸು ಭಾವಾತ್ಮಕ ಏಕತೆಯ ಧ್ವಜವನ್ನು ಕಾಲು ಮೇಲೆ— ತಲೆ ಕೆಳಗಾಗಿ ಹಾರಿಸಿರುತ್ತದೆ.

ದೇಶದ ರಕ್ಷಣೆಯ ವಿಷಯದಲ್ಲೂ ಅಷ್ಟೇ. ಶ್ರೀ ಅಂಕೆ, ಬ್ರಹ್ಮ ಪ್ರದೇಶ, ಪಾಕಿಸ್ಥಾನದ ವಿಷಯ ಮಾತ್ರವಲ್ಲ, ಚೈನಾ ವಿಷಯದಲ್ಲೂ ಅಷ್ಟೇ. ಗಡಿ ಪ್ರದೇಶಗಳನ್ನದು, ಸಂಧಾನ— ಶಾಂತಿಗಳೆಂಬ ನುಣ್ಣನೆಯ ನುಡಿಗಳಿಗೆ ಮರುಳಾಗಿ, ಭೂದಾನ ಮಾಡುತ್ತಿದೆ -ಅದೂ ಬಹಳ ಉದಾರತನದಿಂದ! ಪ್ರಾಮಾಣಿಕ ಹಾಗೂ ಸರಳ ಸ್ವಭಾವದ ನಮ್ಮ ಪ್ರಧಾನಿ ಶ್ರೀ ಲಾಲಬಹದೂರರು ಬಲೆಯಲ್ಲಿ ಸುಲಭವಾಗಿ ಸಿಕ್ಕಿ ಹಾಕಿಕೊಂಡರು. ಶಾಂತಿ-ಸಂಧಾನಗಳ ಹಗ್ಗವನ್ನು ಪಾಪ! ಪರಾಮರ್ಶಿಸದೇನೇ ಅವಸರ ಅವಸರವಾಗಿ ಸರಸರನೆ ಮೇಲೆಳೆದು ಬಿಡುತ್ತಾರೆ, ಧ್ವಜ ತಲೆಕೆಳಗೆ ಕಾಲು ಮೇಲಾಗಿದೆಂಬುದಾಗ ಅವರಿಗೆ ಗೊತ್ತಾಗುವುದೇ ಇಲ್ಲ.

ಹೀಗೆನೇ ಪ್ರತಿಯೊಂದು ಪಡಿಯೂ ಇದೆ. ಬಹಳ ಪ್ರಯಾಸದಿಂದ ಕಾಂಗ್ರೆಸ್ಸು ಧ್ವಜವನ್ನು ಮೇಲೇರಿಸಿರುತ್ತದೆ. ಆದರೆ ಧ್ವಜದ ತಲೆ ಕೆಳಗೆ—ಕಾಲು ಮೇಲಾಗಿರುವದು ಅದಕ್ಕೆ ಗೊತ್ತಾಗಿರುವದಿಲ್ಲ; ಗೊತ್ತಾಗಿರುವಲ್ಲಿ ಗೌರವದ ಪ್ರಶ್ನೆಯೆಂದು ಗಮ್ಮನೆ ಇದೆ.

ನಮ್ಮ ನವಾಬರು, ಪ್ರಾಂತ್ಯಪಾಲರು ಹಾಗೂ ದಿಲ್ಲೀಶರು ಭಾಗ್ಯದ - ಭವಿಷ್ಯತ್ತಿನ ಬಾವುಟವನ್ನು ತಲೆಕೆಳಗೆ-ಕಾಲುಮೇಲೆ ಮಾಡಿ ಹಾರಿಸುತ್ತಿದ್ದಾರಾದರೂ ನೈಜ ರಾಷ್ಟ್ರೀಯ ಅಥವಾ ಶ್ರೀ ಸಾಮಾನ್ಯನು ಪೂರ್ಣಿಮಾದ ಪ್ರಶಾಂತ ಪರ್ವಕಾಲದಲ್ಲಿ ಕಂಕಣಬದ್ಧನಾಗಿದ್ದಾನೆ— ಸ್ವಾತಂತ್ರ್ಯದ ಸಂರಕ್ಷಣೆಗಾಗಿ ತನು-ಮನ-ಧನ ಸರ್ವಸ್ವವನ್ನೂ ವಾತ್ಸಲ್ಯಮಯೀ ಭಾರತಾಂಬೆಯ ಪರಮ ಪವಿತ್ರ ಕಮಲ ಪದತಲದಲ್ಲಿ ನಗುನಗುತ್ತ ಸ್ವ-ಇಚ್ಛೆಯಿಂದ ಅರ್ಪಿಸಲು ಸಿದ್ಧನಿದ್ದೇನೆಂದು. ಸ್ವರಾಜ್ಯ-ಸ್ವದೇಶ-ಸ್ವಧರ್ಮ—ರಾಷ್ಟ್ರಧ್ವಜ ಇವೆಲ್ಲಾ ಒಂದಕ್ಕೊಂದು ಅಂಟಿಕೊಂಡಿರುವ ಶಬ್ದಗಳಿವೆ. ಸ್ವಾತಂತ್ರ್ಯ ಅಥವಾ ಸ್ವರಾಜ್ಯದ ಸಂರಕ್ಷಣೆ ಎಂದರೆ ಅದರಲ್ಲೇ ಎಲ್ಲಾ ಅಡಕವಾಗುತ್ತದೆ. ಸ್ವಾತಂತ್ರ್ಯವೆನ್ನುವದು ದೇಶ ಅಥವಾ ರಾಷ್ಟ್ರ ಹಾಗೂ ರಾಷ್ಟ್ರೀಯರಿಗೆ ಸಂಬಂಧಪಟ್ಟಿದ್ದಿದೆ. ಒಂದು ರಾಷ್ಟ್ರದ ಸ್ವಾತಂತ್ರ್ಯ ಸರ್ವನಾಶವಾಯಿತೆಂದರೆ ಅಲ್ಲಿ ಮತ್ತೆ ಧರ್ಮ ಹಾಗೂ ಧ್ವಜಗಳಿಗೆ ಸ್ಥಾನ ಇರುವದಿಲ್ಲ. ಅದನ್ನಲ್ಲವೇ ಗತ ಇತಿಹಾಸ ಸಾರುತ್ತಿರುವುದು. ಮಹಮ್ಮದೀಯರು ಹಾಗೂ ಕ್ರಿಶ್ಚಿಯನರು ಮಾಡಿದ್ದೇನ? ಆಕ್ರಮಣ ನಡೆಸಿ ಇಲ್ಲಿನ ಧರ್ಮ ಹಾಗೂ ಧ್ವಜದ ದಮನಕ್ಕೆ ಮುಂದಾದರು. ಭಾರತ ಇನ್ನೂ ಆ ಆಘಾತದಿಂದ ಚೇತರಿಸಿಕೊಂಡಿರುವದಿಲ್ಲ. ಅಷ್ಟರಲ್ಲಿ ಕಮ್ಯೂನಿಸಮಿನ ಕರಾಳ ಛಾಯೆ ಕಂಡು ಬರಲಾರಂಭವಾಯಿತು.

ಜಾತಿ ಜಂಜಾಟ, ಭಾಷಾಬಡಿದಾಟ, ಪ್ರಾಂತ್ಯಪಗದಾಟ, ಮತೀಯ ಮುಕ್ಕಮಕ್ಕಿ, ಅಗಣಿತ ಸಮಸ್ಯೆ ಹಾಗೂ ಬಾಹ್ಯ ಆಕ್ರಮಣ ಇಲ್ಲದೆ ವಿದ್ರೋಹಿಗಳ ಘಾತುಕತನ ಮತ್ತು ದಿಲ್ಲಿ ದೇವತೆಗಳ ಭೀರುತನ ಭ್ರಮಾಪೂರ್ಣ ತೊಯ್ದಾಟ, ಇವೆಲ್ಲವನ್ನೂ ಎದುರಿಸಿ, ಮೆಟ್ಟಿ ನಿಂತು, ಸಂಭಾಳಿಸಿಕೊಂಡು. ವಾತ್ಸಲ್ಯಮಯೀ ಮಾತೆಯ ವಿಕಸಿತ ಮುಖಾರವಿಂದವನ್ನು ಕಂಡೇ ಕಾಣುವೆನೆಂಬ ದೃಢ ಆತ್ಮವಿಶ್ವಾಸದಿಂದ ಭಾರತೀಯರು ಕಂಕಣಬದ್ಧರಾಗಿದ್ದಾರೆ.

ಅವರಿಗೆ ಪ್ರೋತ್ಸಾಹ, ಪ್ರೇರಣೆಯನ್ನುಂಟುಮಾಡುವುದಕ್ಕಾಗಿಯೇ ಎಂಬಂತೆ ಭಗವಾನ್ ಶ್ರೀ ಕೃಷ್ಣನ ಹುಟ್ಟುಹಬ್ಬವೂ ಎದುರಿಗೇನೇ ಬರುತ್ತಿದೆ. ಭಾರತೀಯನ ಎದುರಿಗೆ ಬಂದು ನಿಲ್ಲುವದು ಗೀತಾಚಾರ್ಯ ಭಗವಾನ್ ಶ್ರೀ ಕೃಷ್ಣನ ಭವ್ಯಚಿತ್ರ. ಮೋಹಾಂಧ ಪಾರ್ಥನಿಗೆ ಸಾರಥಿ ಶ್ರೀ ಕೃಷ್ಣ ದೀಪ ತೋರಿಸುತ್ತಿದ್ದಾನೆ; ಮೋಹಾಂಧಕಾರವನ್ನೋಡಿಸುತ್ತಿದ್ದಾನೆ. ಧರ್ಮಕ್ಕಾಗಿ ಹೋರಾಟವೆಸಗಲು ಉಪದೇಶಿಸುತ್ತಿದ್ದಾನೆ. ಅರಿತ ಅರ್ಜುನ ಅಲ್ಲಿಂದೆದ್ದು ಗಾಂಡೀವವನ್ನು ಕೈಗೆತ್ತಿಕೊಳ್ಳುತ್ತಾನೆ. ಅದೇ ಗಾಂಡೀವದ ಬಲದಿಂದ ಕುರುಕ್ಷೇತ್ರವನ್ನು ಮಾತ್ರ ನಡುಗಿಸಿದುದಲ್ಲ; ಇತ್ತ ಗೋವನ ಕುದುರೆಯನ್ನು ಕಟ್ಟಿಹಾಕಿದ ಚೈನೀ-ರನ್ನೂ ಹಣ್ಣುಗಾಯಿ ಮಾಡಿದ್ದನು. ನಾವಾದರೂ ಅದೇ ಪಾರ್ಥನ, ಅದೇ ಪಾರ್ಥಸಾರಥಿಯ ವಂಶಜರಲ್ಲವೇ? ಅದನ್ನೊಪ್ಪಿಕೊಂಡವರು ಆ ಧರ್ಮಧ್ವಜವನ್ನು ಬಾನೆತ್ತರಕ್ಕೇರಿಸಲು ಒಂದಾಗುವುದರಲ್ಲಿನಿತೂ ಸಂದೇಹವಿಲ್ಲ. ಸ್ವಾತಂತ್ರ್ಯದ ಸಂರಕ್ಷಣೆಗೆ ಅದುವೇ ಸಂಜೀವಿನಿ ಇದೆ: ಅದುವೇ ಸುದರ್ಶನವಿದೆ, ಅದುವೇ ಪಾಂಚಜನ್ಯವಿದೆ.

ನಚಿಕೇತ'ರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಋಣ ಯಾತ್ರೆ

ಬೆಲೆ.ರೂ. 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:

ನವಯುಗ ಪ್ರೆಸ್, ಉಡುಪಿ.

ರೂ. 1ಕ್ಕೆ ರೂ. 1,10,000 ಗೆಲ್ಲಿರಿ

	ಈಗ ಮಾರಾಟಕ್ಕಿವೆ	ಟಿಕೆಟ್ 1ಕ್ಕೆ ಬೆಲೆ	ಮೊದಲ ಬಹುಮಾನ	ಕ್ಲೋಸಿಂಗ್	ಡ್ರಾಯಿಂಗ್
1.	ಬಾರಾಬತಿ ರ್‍ಯಾಫಲ್	ರೂ. 1—00	ರೂ. 1,10,000	22-9-65	31-10-65
2.	ಡಿ. ಬಿ. ಚಾರಿಟೀಸ್	ರೂ. 2—00	ರೂ. 40,000	25-8-65	2-9-65
3.	ಕೆ. ಪಿ. ಚಾರಿಟೀಸ್	ರೂ. 1—00	ರೂ. 1,15,000	20-8-65	29-8-65
4.	ರೆಡ್ ಕ್ರಾಸ್ ಸ್ವೀಪ್	ರೂ. 1—00	30% of Collection	25-8-65	5-9-65

ಟಿಕೆಟ್‌ನ ಬೆಲೆಯೊಂದಿಗೆ ಅಂಚೆ ವೆಚ್ಚಕ್ಕಾಗಿ 15 ಪೈಸೆ ಹೆಚ್ಚಾಗಿ ಸೇರಿಸಿ ಮನಿಯಾರ್ಡರ ಅಥವಾ ಪೋಸ್ಟಲ್ ಆರ್ಡರ್ ಮುಖಾಂತರ ಹಣ ಕಳುಹಿಸಿ ಅಂಚೆ ಮೂಲಕ ಟಿಕೆಟ್ ಪಡೆಯಿರಿ. ಎಲ್ಲಾ ಲಾಟರಿಗಳೂ ಸಂಬಂಧಪಟ್ಟ ರಾಜ್ಯ ಸರಕಾರಗಳಿಂದ ಮಾನ್ಯತೆ ಪಡೆದಿವೆ. (ಏಜಂಟರೂ ಬೇಕಾಗಿದ್ದಾರೆ. ಈ ಬಗ್ಗೆ ಪ್ರತ್ಯೇಕವಾಗಿ ಬರೆಯಿರಿ).

ಅಧಿಕೃತ ಹಂಚಿಕೆದಾರರು— ವಿ. ಶಿವರಾಮ ಹೊಳ್ಳ,

ರೂಂ ನಂ. 3, ವೀನಸ್ ಹೋಟೆಲ್, S. C. ರಸ್ತೆ, ಬೆಂಗಳೂರು-9.

ಮೋತಿಲಾಲ್ ನೆಹರು

ಶ್ರೀ ವನವಿಹಾರಿ

ಮೋತಿಲಾಲ ನೆಹರು-ಪುತ್ರನೆಂಥ ಹೆಸರು
ಆತನೆ ನಮ್ಮ ಭಾರತದ ರತ್ನ
ಜವಹರಲಾಲ ನೆಹರು-ಎಂಥ ಚೆಲುವ ಹೆಸರು
ಆತನೆ ಇಡೀ ವಿಶ್ವದ ರತ್ನ

ಆ ಪೂಜ್ಯ ಮೋತಿಲಾಲ ನೆಹರು ಭಾರತ ಜ್ಯೋತಿ
ಮಹಾಮಹಿಮರ ಸಾಲಿನಲಿ ಶೋಭಿಸುತಿದೆ ಮಹಾಜ್ಯೋತಿ
ಆ ವೀರ ಜವಹರಲಾಲ ನೆಹರು ಜಗಜ್ಯೋತಿ
ವಿಶ್ವದ ರಾಜಕಾರಣಿಗಳ ಶ್ರೇಣಿಯಲಿ ಕಂಗಳಿಸುವ ದಿವ್ಯ ಜ್ಯೋತಿ

ನಿನ್ನ ಭವನವೆ ನಮಗೆಲ್ಲಾ ಆನಂದ ಭವನ
ನಿನ್ನ ಭವನವೆ ಪ್ರಜೆಗೆಲ್ಲಾ ಸ್ವರಾಜ್ಯ ಭವನ
ನಿನ್ನಮಾರ್ಗವೆ ನಮಗೆಲ್ಲಾ ಮೋಕ್ಷಪಂಕ್ತಿ
ನಿನ್ನ ಕೀರ್ತಿಯೇ ಭಾರತದ ಸುಕೀರ್ತಿ

ನಿನ್ನ ಸುತ ಆ ಲೋಕೈಕ ವೀರ
ಸ್ವಾತಂತ್ರ್ಯ ಸಮರದ ಮಹಾಶೂರ
ಇಡಿ ವಿಶ್ವದೊಳು ರಾರಾಜಿಸುವ ರತ್ನ
ನೀಡಿಹೆ ನೀನು ಭಾರತಕೆ ಮಹಾರತ್ನ

ಸಮಸ್ತ ಭಾಗ್ಯವನು ತ್ಯಾಗಮಾಡಿದ ಮಹಾಮೂರ್ತಿ ನೀನು
ಸಕಲ ಸಂಪದವ ತೊರೆದು ಸರಳ ಜೀವನ ನಡೆಸಿಹೆ ನೀನು
ಮಹಾತ್ಮಾಗಾಂಧಿಯ ತತ್ವಂಗಳನಾಚರಿಸಿಹೆ ನೀನು.
ಭಾರತದಲಿ ಮಹಾಖ್ಯಾತಿಯನು ಗಳಿಸಿಹೆ ನೀನು.

ನಿನ್ನ ಭವ್ಯ ತೇಜೋ ರಾಶಿಯನು ಕಂಡು
ಮುಗ್ಧರಾದರು ಪಾಶ್ಚಾತ್ಯ ಮೇಧಾವಿಗಳು
ಪುಣ್ಯಪೀಯೂಷ ಪ್ರತಾಪನೆಂದು
ಕೊಂಡಾಡುತಿದೆ ಭಾರತದ ಜನಸ್ತೋಮ.

ವೀರ ಜವಾಹರಲಾಲರ ಪಿತನಾಗಿ
ಧೀರೆ ವಿಜಯಲಕ್ಷ್ಮಿಗು ಪಿತನಾಗಿ
ಮಹಾಜಾಣೆ ಕೃಷ್ಣೆಯ ಪಿತನಾಗಿ
ದುಡಿದಿರುವೆ ರಾಷ್ಟ್ರ ಹಿತಕ್ಕಾಗಿ.

ನೆಹರು ಮನೆತನವೆಲ್ಲಾ ಸ್ವರಾಜ್ಯ ಸಾಧನೆಗೆಂದು
ಸ್ವಾತಂತ್ರ್ಯ ಸಮರದ ಮಹಾಯೋಧರೆಂದು
ಹೋರಾಡಿ ಭಾರತಕೆ ಧವಳ ಕೀರ್ತಿಯನು ತಂದು
ಭಾರತದ ಚರಿತೆಯಲಿ ಅಮರರಾಗಿಹರಿಂದು

ದೇಶ ಸೇವಕನಾಗಿ ಸೇರಿದೆ ಕಠಿಣ ಕಾರಾಗೃಹವನು
ಪ್ರಜಾಸೇವಕನಾಗಿ ತ್ಯಜಿಸಿದೆ ಸಕಲ ಸಂತಸವನು
ನಾಡಿನ ಸೇವಕನಾಗಿ ನೀಡಿದೆ ಚೈತನ್ಯವನು
ವಿಶ್ವದ ಬಂಧುವಾಗಿ ಪಡೆದಿಹೆ ಕೀರ್ತಿಯನು.

ನಿನ್ನಾ ಪವಿತ್ರ ಜೀವನವು ನೀಡಲೆಮಗೆ ಸ್ಫೂರ್ತಿ
ನಿನ್ನಾ ನಿರ್ಮಲ ಸಂಸ್ಕೃತಿಯು ಕೊಡಲೆಮಗೆ ಸದ್ಬುದ್ಧಿ
ನಿನ್ನಾ ತ್ಯಾಗ ಶೀಲವು ಕೊಟ್ಟಿಹುದೆಮಗೆ ಸ್ಫೂರ್ತಿ
ನಿನ್ನಾ ಭವ್ಯ ಸಂಗ್ರಾಮ ತಂದಿಹುದು ರಾಷ್ಟ್ರಕೆ ಸತ್ಕೀರ್ತಿ.

ಮೋತಿಲಾಲ ನೆಹರು! ಅಮರನಾಗಿಹೆ ನೀನು
ಗಗನದಲಿ ಬೆಳಗುತಿಹ ತಾರೆಯಾಗಿಹೆ ನೀನು
ಭಾರತ ಇತಿಹಾಸದಿ ಕಂಗೊಳಿಸುತಿಹೆ ನೀನು
ನೀನು ಮಡಿದಿಲ್ಲ; ನಿನ್ನ ಕೀರ್ತಿ ಅಳಿದಿಲ್ಲ.



Authorised Distributors:

M/S. KARKERA SONS & COMPANY
KARKERA MANSION,
MAIDAN WEST ROAD, **MANGALORE-1.**

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ., ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ:.

ನವಯುಗ ಪ್ರೆಸ್, ಉಡುಪಿ

INDIA'S MOST DURABLE & ECONOMICAL

DIESEL TRUCK & BUS CHASSIS.....

TATA - MERCEDES - BENZ

DIESEL TRUCKS & BUS CHASSIS

Rs. 250

GETS YOU A NEW 1964

himalux

By a HIMALUX the refrigerator— you can afford

HIMALUX is the registered trade mark of Himalux Private Limited

Manufactured by
VINAR LTD
Calcutta-16

ON HIRE-PURCHASE

Himalux, the quality refrigerator, can be yours now for a down payment of only Rs. 250 (plus local taxes). Pay the balance in 12 monthly instalments of Rs. 87 · 50 Paise. Lose no time—check with your nearest Himalux dealer today.

Telephone 362 & 186 Telegrams 'ARVIND'

ARVIND MOTORS

BALMATTA ROAD : : MANGALORE-1.

ಶ್ರೀ ಸರಸಕವಿ ವೈ. ಕೆ. ತಿಮ್ಮರಸಯ್ಯ

ಕನಕದಾಸ

(ಸಂಸ್ಮರಣ ಕಾವ್ಯ)

ಕನ್ನಡದ ಮನೆಮನೆಗೆ ಏಕನಾದವ ತುಂಬಿ-
ಚೆನ್ನಕೇಶವನನ್ನು ಹಾಡಿ ಪೊಗಳುತೆ ಕುಣಿದು
ಬನ್ನಿ ನನ್ನೊಂದಾಗಿ ಹರಿಯ ಕಾಣುವಿರೆಂದು
ಕಿನ್ನರಿಯ ಬಾಸರದೋ ಕನಕ ಭಕುತ||

ದೂರವಿರು ನೀ ಬೇಡ-ನಮಗೇಕೆ ಗೋಜು
ಮಕ್ಕಳಿವೆ ಹೆಂಡತಿಯು ಸಂಸಾರ ಚಿಂತೆ
ಮುಂದಿವರ ಸಾಕುವೊಡೆ ಬಂಗಾರ ಚಿಂತೆ
ಕನಕ ಬೇಕೆಮಗೀಗ ಹೋಗೊ ದಾಸಯ್ಯ||

"ತಲ್ಲಣಿಸದಿರು ಕಂಡ್ಯ ತಾಳು ಮನವೆ,
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ"
ಎಂಥ ಪದವಿದು ನಾದ ತಾಳ ಲಯ ಗೆಜ್ಜೆ!
"ಎಲ್ಲರನು ಸಲಹುವನು"....ಹೌದು ಸಂಶಯವೇಕೆ||

ಎಲ್ಲ ತಾಮಸ ಜನಕೆ ಎಂಥ ಶಾಂತಿಯ ಮಂತ್ರ
ಪುಣ್ಯಗಂಗೆಯು ಮುಂದೆ ಹರಿದು ಬಂದಂತಾಯ್ತು
ದಾಸರಾಯರ ವಚನ ಗಾನದಲಿ ತುಂಬೆಲ್ಲ
ಸಿರಿತುಂಬ ಹರಿನಾಮ ಇದಕೆ ಸಂಶಯವಿಲ್ಲ||

"ತನು ನಿನ್ನದು ದೇವ ಜೀವ ನಿನ್ನದು"
ಆಹಹ! ಎಂಥಹ ದಾಸ್ಯ ಹರಿಯ ನಾಮದೊಳು
ನಿನ್ನ ಹೊರತಾಗಂಟಿ ಹುಲುಕಡ್ಡಿಯಾಡುವುದೆ
ನೀನೆಲ್ಲೆಲ್ಲು ನೆಲೆಸಿದ ನರಹರಿಯುತಾನೆ||

ಹಾಡಿ ದಾಸರೆ ಕನಕ ವಾಣಿ ತುಂಬಲಿ ಕಿವಿಯ
ನಿಮ್ಮೊಡನೆ ನಾವೂ ಜೊತೆಯಾಗಿ ನಡೆವೆವು
ಸಾಗೋಣ ಹಾಡೋಣ ದಿವ್ಯಮೂರ್ತಿಯ ನಂಬಿ
ಕಾಲಗೆಜ್ಜೆಯ ಕುಣಿಸಿ ಕೇಶವನ ನುತಿಸಿ ||

ಸತ್ಯವಂತರ ಸಂಗವಿರಲು ತೀರ್ಥವು ಯಾಕೆ
ತೋರಿದು ಜೀವಿಸಬಹುದೆ ಹರಿ ನಿನ್ನ ಚರಣ
ನನ್ನ ದುರ್ವಾಸನೆಯ ಬಿಡಿಸೊ ಹರಿಯೆ
ಯಾರೆಂಬ ಅರಿವೀಗ ಮೂಡುತಿದೆ ಹರಿಯೆ ||

ಬನ್ನಿ ದಾಸರೆ ಮನೆಗೆ ಹಿರಿಯಾಗಿ ನೀವೆ
ಕಡೆಯ ಬನ್ನಿರಿ ನಮ್ಮ ಈ ಹೊಲಸು ಸಂಸಾರ
ಭಕ್ತಿಮಾರ್ಗದ ಸುಲಭ ಯಾತ್ರೆಯಲಿ ಕೈಹಿಡಿದು ||
ನಡೆಸಿಕೊಡಿ ಗುರುವರನೆ ಕನಕವರ್ಯ ||

ಜಪವ ಮಾಡಿದರೇನು ತಪವ ಮಾಡಿದರೇನು
ಕಪಟಗುಣ ವಿಪರೀತ ಕಲುಷವಿದ್ದವರು
ನಿಮ್ಮ ಪಾವನ ಚರಣ ದರುಶನವೆ ಮೋಕ್ಷ
ನಿಮ್ಮ ಕಿನ್ನರಿ ನಾಮ ಅದುವೆ ವೈಕುಂಠ ||

ಕಾಗಿನೆಲೆ ಕೇಶವನ ದಾಸ ಕನಕರೆ ಹಾಡಿ
ಹಾಡಿ ಮನವನು ತೊಳೆದು ಹರಸ ಬನ್ನಿ
ರಾಮ, ನರಸಿಂಹರ, ಹರಿಭಕ್ತಿ ಸಾರವನು
ತಿಳಿಸಿಕೊಡಿ ನಮಗಾಗಿ ದಾಸವರ್ಯ ||

With best compliments from

CANARA JEWELLERS,
MANGALORE
&
PALKE INDUSTRIES,
G. H. School Road,
MANGALORE.

Telegrams: 'Palkebros'. *Phone*: 356, 356A & 855

Phone: 321.

For your requirements for
Wedding etc. functions
Please step in
TEXTILE CENTRE
Opposite Canara Jewellers,
Hampankatta, Mangalore-I.

ಹುಬ್ಬಳ್ಳಿಗೆ ಆಗಮಿಸಿದಾಗ
ನೀವು ಸಂದರ್ಶಿಸಬೇಕಾದ
ಅತ್ಯಾಧುನಿಕ ಉಪಾಹಾರ ಗೃಹ

ಶ್ರೀ ಗುರುದತ್ತ ಭವನ

ಕರ್ನಾಟಕ ಮೆಡಿಕಲ್ ಕಾಲೇಜ್ ಆಸ್ಪತ್ರೆಗಳಿಗೆಲ್ಲ ಅತಿ ಸಮೀಪವಾಗಿದ್ದು, ಹುಬ್ಬಳ್ಳಿ ಧಾರವಾಡ ರಸ್ತೆಯಲ್ಲಿರುವ ಸರ್ವಜನಾದರಣೀಯ ಹಾಗೂ ಮೇಲ್ತರಗತಿಯ ಉಪಾಹಾರ ಮಂದಿರ.

ಒಮ್ಮೆ ಸಂದರ್ಶಿಸಿರಿ

ಗ್ರಾಹಕರ ಸಂತೃಪ್ತಿಯೇ ನಮ್ಮ ಧ್ಯೇಯ.

ಪ್ರೊಪ್ರೈಟರ್: ಶ್ರೀ|| ವಿ. ಸಿ. ಶೆಟ್ಟಿ.

Sri Gurudatta Bhavan
Up-to-date Restaurant
HUBLI DHARWAR ROAD
HUBLI

ಭರತ ಖಂಡದ ಜೀವಜ್ಯೋತಿ — ಶ್ರೀಕೃಷ್ಣ

(ಎಂಟನೇ ಪುಟದಿಂದ)

ಯ ಆಧಾರದಿಂದ ನಿರ್ಧರಿಸಬೇಕಾಗಿದೆ.

ಶ್ರೀ ಕೃಷ್ಣ ಜನ್ಮ ಕುಂಡಲಿ.

ರಾಹು		ಚಂದ್ರ	
			ಗುರು
			ಸೂರ್ಯ
	ಕುಜ	ಶನಿ, ಶುಕ್ರ	ಬುಧ ಕೇತು

ಮಹಾಭಾರತ ಕುಂಡಲಿ

		ರಾಹು	
			ಕುಜ
	ಕೇ. ಸೂ. ಚಂ. ಬು. ಶು.	ಗುರು ಶನಿ	

ಶನಿ—ಶನಿಯು ಒಂದು ರಾಶಿಯಲ್ಲಿ 30 ತಿಂಗಳು ಇರುತ್ತಾನೆ. ಇವನು ಮೂವತ್ತು ವರ್ಷಗಳಲ್ಲಿ ಒಂದು ಸಾರಿ ರಾಶಿಚಕ್ರಕ್ಕೆ ಸುತ್ತು ಬರುತ್ತಾನೆ. ಶ್ರೀಕೃಷ್ಣನ ಜನ್ಮಕುಂಡಲಿಯಲ್ಲಿ ಶನಿಯು ಉಚ್ಚರಾಶಿಯಾದ ತುಲೆಯಲ್ಲಿದ್ದಾನೆ. ಮಹಾಭಾರತ ಯುದ್ಧಕಾಲದಲ್ಲೂ ಶನಿಯು ತುಲೆಯಲ್ಲೇ ಇದ್ದನು. ಆದುದರಿಂದ ೩೦×೩=೯೦ ವರ್ಷಗಳಲ್ಲಿ ಮೂರನೆಯ ಸಾರಿ ಶನಿಯು ತುಲೆಗೆ ತಲಪಿದ್ದಾನೆ. ಇಲ್ಲಿ ಇರುವ ಅನುಮಾನವೇನೆಂದರೆ, ಗೀತೋಪದೇಶ ಮಾಡುವಾಗ ಶ್ರೀಕೃಷ್ಣನು ತನ್ನ ೮೮ರಿಂದ ೯೦ ವರ್ಷಗಳ ನಡಿಗಿನ ಶನಿಯಲ್ಲಿದ್ದಾನೆ. ಹಾಗಾದರೆ ಆ ಕಾಲದ ಅವನ ವಯಸ್ಸನ್ನು ನಿರ್ಧರಿಸುವುದು ಹೇಗೆ? ಇದಕ್ಕೆ ಅವನ ರಾಹು ಮತ್ತು ಗುರುಗಳ ಗೋಚಾರ ಸ್ಥಾನದಿಂದ ತಿಳಿಯಬೇಕು.

ರಾಹು— ಇದು ಅಪ್ರದಕ್ಷಿಣವಾಗಿ ತಿರುಗುವ ಗ್ರಹ, ಇದು ಪ್ರತಿಯೊಂದು ರಾಶಿಯಲ್ಲಿ ಹದಿನೆಂಟು ತಿಂಗಳು ಇರುತ್ತದೆ. ಇದರಿಂದ ರಾಶಿಚಕ್ರವನ್ನು ಸುತ್ತಲು ಇದಕ್ಕೆ ಹದಿನೆಂಟು ವರ್ಷಗಳು ಬೇಕಾಗುತ್ತವೆ. ಶ್ರೀಕೃಷ್ಣನ ಜನ್ಮಕುಂಡಲಿಯಲ್ಲಿ ರಾಹುವು ಮೀನ ರಾಶಿಯಲ್ಲಿದೆ. ಇದು ಮಹಾಭಾರತ ಯುದ್ಧಕಾಲದಲ್ಲಿ ಇದು ವೃಷಭ ರಾಶಿಯಲ್ಲಿತ್ತು. ವಕ್ರಗತಿಯ ರಾಹುವಿಗೆ ಮೀನ ರಾಶಿಗೆ ಬರಲು ಎರಡು ವರ್ಷಗಳುಳಿದಿವೆ. ಹೀಗಾಗಿ ಕೃಷ್ಣನಿಗೆ ೧೮×೫=೯೦–೨=೮೮ ವರ್ಷಗಳು. ರಾಹುವಿನ ಅಂಶಾಂಶಗಳನ್ನು ಕಲ್ಪಿಸುವಾಗ ಎರಡು ವರ್ಷ ಬಾಕಿ ಇರುವುದು ತಿಳಿಯುತ್ತದೆ.

ಗುರು – ಇದು ತನ್ನ ವಕ್ರ ಗತಿಯ ವೈಷಮ್ಯವನ್ನು ತುಂಬಿಕೊಂಡು ೧೨ ವರ್ಷಗಳಲ್ಲಿ ರಾಶಿಚಕ್ರಕ್ಕೆ ಒಂದು ಸುತ್ತು ಬರುತ್ತದೆ. ಭಗವಾನ್ ಶ್ರೀಕೃಷ್ಣನ ಜನ್ಮಾಂಗದಲ್ಲಿ ಗುರುವು ಕರ್ಕ ರಾಶಿಯಲ್ಲಿ ಉಚ್ಚಾಂಶವನ್ನು ಪಡೆದಿದೆ. ಮಹಾಭಾರತ ಯುದ್ಧಕಾಲದಲ್ಲಿ ಗುರುವು ತುಲಾ ರಾಶಿಯಲ್ಲಿತ್ತು. ಇದರಿಂದ ಇದು ೧೨×೭=೮೪ ವರ್ಷಗಳಲ್ಲಿ ಕರ್ಕದಿಂದ ಮಿಥುನ ರಾಶಿಗೆ ತಲಪಿ, ಅನಂತರ ಕರ್ಕ, ಸಿಂಹ, ಕನ್ಯಾ, ತುಲಾ ರಾಶಿಗಳ ವರೆಗೆ ನಾಲ್ಕು ವರ್ಷ ಕಳೆಯಿತು. ಇದರಿಂದ ೮೪+೪=೮೮ ವರ್ಷಗಳು ಆಗ ಕೃಷ್ಣನಿಗಾಗಿದ್ದುವು.

ಮಹಾಭಾರತ ಯುದ್ಧವು ನಡೆದ ೩೬ನೆಯ ವರ್ಷದಲ್ಲಿ ಯಾದವರಲ್ಲಿ ಪರಸ್ಪರ ಕಲಹವಾಗಿ ನಾಶವಾದೊಡನೆ ಶ್ರೀಕೃಷ್ಣನೂ ಸ್ವರ್ಗಸ್ಥನಾದನು. ಇದರಿಂದ ೮೮ + ೩೬ = ೧೨೪ ವರ್ಷಗಳ ವರೆಗೆ ಶ್ರೀಕೃಷ್ಣನು ಬದುಕಿದ್ದನೆಂದಾಗುವುದು. ಇದರಿಂದ ಕ್ರಿ. ಪೂ. ೩೧೩೮ —೩೬= ಕ್ರಿ. ಪೂ. ೩೧೦೨ರಲ್ಲಿ ಶ್ರೀಕೃಷ್ಣನು ವೈಕುಂಠವಾಸಿಯಾದನು. ಕ್ರಿ. ಪೂ. ೩೧೦೨ + ೧೨೪ = ಕ್ರಿ. ಪೂ. ೩೨೨೬ ಭಾದ್ರಪದ ಕೃಷ್ಣಾಷ್ಟಮಿಯೆಂದು, ಭೂದೇವಿಯು ಕೃಷ್ಣ ಜನನದಿಂದ ರೋಮಾಂಚನಗೊಂಡಳು; ದಿಕ್ಕುಗಳು ಪ್ರಸನ್ನವಾದುವು.

೩

ಶ್ರೀಕೃಷ್ಣನು ದಾನವ ಧ್ವಂಸಿಯಾಗಿಯೇ ಭಾರತೀಯರ ಹೃನ್ಮಂದಿರದ ಜ್ಯೋತಿಯೊದುದಲ್ಲ; ಅದೊಂದು ಸಾಮಾನ್ಯ ಕಾರಣ; ಮಾನವ ಕೋಟಿಗೆ ಪ್ರತಿನಿಧಿಯಾಗಿ ಅರ್ಜುನನನ್ನು ಇದಿರಿಟ್ಟುಕೊಂಡು, ಜಗದ ಬದ್ಧಜೀವಿಗಳಿಗೆ, ನಿರಾಶ್ರಿತರಿಗೆ, ಸಂಶಯ ತುಮುಲದಲ್ಲಿ ಸಿಕ್ಕಿ ನರಳುವವರಿಗೆ ಧರ್ಮ ಜ್ಯೋತಿಯನ್ನು ಎತ್ತಿ ಹಿಡಿದು ತೋರಿಸಿದುದೇ ಮುಖ್ಯ ಕಾರಣ. ಆಗ ಆತನು ದ್ವಾಪರ ಯುಗದ ಅಂತ್ಯವನ್ನು ಮಾತ್ರ ಕಣ್ಣು ಮುಂದೆ ಇಟ್ಟುಕೊಂಡು ಬೋಧಿಸಿದುದಲ್ಲ. ಅನೇಕ ಶತಮಾನಗಳ ಕಾಲಚಕ್ರವೇ ಅವನ ದೃಷ್ಟಿಪಥದಲ್ಲಿತ್ತು. ಅವನ ಉಪದೇಶಾಮೃತವು ಪಂಡಿತ ಪಾಮರರಿಗೂ ಯೋಗಿ ಭೋಗಿಗಳಿಗೂ, ಪೌರಸ್ತ್ಯ ಪಾಶ್ಚಾತ್ಯರಿಗೂ—ಅಷ್ಟೇಕೆ?—ಸಮಸ್ತ ಮಾನವ ಜನಾಂಗಕ್ಕೂ ಶಾಂತಿಕರವಾದುದು.

ಶ್ರೀಶಂಕರ, ಮಧ್ವ, ರಾಮಾನುಜಾಚಾರ್ಯರೂ ತಿಲಕ, ಗಾಂಧಿ, ವಿನೋಬಾ ಪ್ರಭೃತಿಗಳೂ ಈ ಗೀತೆಯನ್ನೇ ತಮ್ಮ ಬಾಳ ಬೆಳಕನಾಗಿ ಭಾವಿಸಿದ್ದರು. ಇದೇ ಪ್ರಾಚೀನ ಮನುಮುನಿಗಳಿಗೆ ಸ್ಫೂರ್ತಿಯನ್ನಿತ್ತಿತು. ಗೀತೆಯ ಸ್ಥಾನಮಾನಕ್ಕೆ ಬೆರಗಾಗಿಯೇ ರಾಮಗೀತೆ, ಗಣೇಶಗೀತೆ, ಶಿವ ಗೀತೆ, ಅವಧೂತ ಗೀತೆ ಮೊದಲಾದ ಹಲವು ಗೀತೆಗಳು ಹುಟ್ಟಿದುವು. ಸುಧಾರಿತ ರಾಷ್ಟ್ರಗಳೆಂದು ಕರೆಯಲ್ಪಡುವ ಇಂಗ್ಲೆಂಡ್, ಫ್ರಾನ್ಸ್, ಜರ್ಮನ್, ರಶ್ಯಾ, ಇಟಲಿ ಗ್ರೀಕ್, ಪರ್ಶಿಯಾ ಮೊದಲಾದ ದೇಶಗಳೂ ತಮ್ಮ ದೇಶ ಭಾಷೆಗೆ ಗೀತೆಯನ್ನು ಭಾಷಾಂತರಿಸಿಕೊಂಡವು. ಸನಾತನ ಹಿಂದೂ ಧರ್ಮದ ತಳಹದಿಯಾದ ಪ್ರಸ್ಥಾನತ್ರಯಿಗಳಲ್ಲಿ ಭಗವದ್ಗೀತೆಯೊಂದು ಪ್ರಾಮುಖ್ಯ ಗ್ರಂಥ ಈ ಪವಿತ್ರ ಗ್ರಂಥಕ್ಕೆ ಪ್ರಾಣವಾಯುವನ್ನೂದಿದವನೇ ಭಗವಾನ್ ಕೃಷ್ಣನೆಂಬುದನ್ನು ನಾವು ಯಾರೂ ಮರೆಯಬಾರದು ಗೀತಾ ತತ್ವದಲ್ಲೇ ಆತನ ವೈಶಿಷ್ಟ್ಯ — ಪ್ರತಿಭೆ— ಜ್ಞಾನಗಳಿವೆ.

ಶ್ರೀಕೃಷ್ಣನು ಭರತ ಖಂಡದ ಜೀವಜ್ಯೋತಿ ಮಾತ್ರವಲ್ಲ; ಲೋಕದ ಗುರು. ಆತನ ಧರ್ಮಬೋಧನಾ ಶಕ್ತಿಯು ಅನುಪಮವಾದುದು. ಹೃದಯ ದೌರ್ಬಲ್ಯವೇ ಹಲವು ಅನಿಷ್ಟಗಳಿಗೆ ಕಾರಣವೆಂದು ಮೊತ್ತ ಮೊದಲು 'ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ'(ಎಲೈ ಶತ್ರು ತಾಪನನೇ, ತುಚ್ಛವಾದ ಮನಸ್ಸಿನ ದೌರ್ಬಲ್ಯವನ್ನು ಬಿಟ್ಟೇಳು)ಎಂದು ದೌರ್ಬಲ್ಯವೇ ಹಿಂಸೆ, ವಂಚನೆ, ಅನ್ಯಾಯದ ಫಲಿತಾಂಶ, ಅದೇ ಪಾಪಗಳ ತೌರುಮನೆ; ಇವರು ಮಿಥ್ಯಾವಾದಿಗಳೂ, ನರ ರಾಕ್ಷಸರೂ ಹೌದೆಂದು ಮಾನವನ ಅಧೋಗತಿಯ ಮುಖ್ಯ ಕಾರಣವನ್ನು ಎತ್ತಿ ಹಿಡಿದಿದ್ದಾನೆ; ಅಲ್ಲದೆ ದುರ್ಬಲರೇ ಹೇಡಿಗಳೆಂಬುದು ಲೋಕಪ್ರಸಿದ್ಧ. ಸ್ವಾಮಿ ವಿವೇಕಾನಂದರು ಒಂದೇ ಮಾತಿನಲ್ಲಿ ಗೀತೆಯ ಏನು ಉಪದೇಶ ಮಾಡುವುದೆಂದು ಹೇಳುವಾಗ 'ಬಲ, ಬಲ'ವೆಂದು ಘೋಷಿಸಿರುವರು. ದೇಹ-ಮನ-ಆತ್ಮ ಬಲವಂತನೇ, ಸಕಲ ಗುಣಗಳ ಮಂದಿರವಾಗುವನು. ಉತ್ತಮ ಗುಣಗಳಿಂದ ಬರುವ ಬಲವೇ ನಿಜವಾದ ಬಲ. ನೈತಿಕ ಬಲವೊಂದರಿಂದಲೇ ಮನುಷ್ಯನು ಪುರುಷ ಸಿಂಹನಾಗುವನು! ಶಕ್ತಿಯಿಂದಲೇ ಮುಕ್ತಿ!

ಮನುಷ್ಯನನ್ನು ಮುಸುಕುವ ಕಷ್ಟನಷ್ಟಗಳೂ, ಸುಖದುಃಖಗಳೂ ಕ್ಷಣಿಕವಾದವು. ಅವು ಇಂದ್ರಿಯ ಜನ್ಯವಾದವು. ಆದಕ್ಕಾಗಿ ಗೀತಾಮೂರ್ತಿಯು 'ಭಾರತ, ತಾಂತಿತಿಕ್ಷಸ್ವ'(ಅರ್ಜುನನೇ ಅವುಗಳನ್ನು ಸಹಿಸಿಕೊ)ಎಂದಿದ್ದಾನೆ. ಆತನು ಮಾನವನಿಗೆ ಆಲಸ್ಯಕ್ಕೆ ಸಮಾನವಾದ ಶತ್ರುವೇ ಇಲ್ಲವೆಂದು 'ನಿಯತಂ ಕುರು ಕರ್ಮ ತ್ವಂ' (ನೀನು ನಿತ್ಯವೂ ಕರ್ಮವನ್ನು ಮಾಡು) ನಿನ್ನ ಸ್ಥಾನದಲ್ಲಿ ನಿಂತು ಸತತ ಮಾನವತ್ವವನ್ನುಳಿಸಿ ಕೊಳ್ಳಲು ಹೋರಾಡು. ಜೀವನವೊಂದು ಸಂಗ್ರಾಮರಂಗ! ದೃಷ್ಟ ಆದೃಷ್ಟವೆಂದು ಜೀವನವನ್ನು ನಿಸ್ಸಾರ ಮಾಡಿಕೊಳ್ಳಬೇಡ 'ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಂ' (ಸತ್ತರೆ ಸ್ವರ್ಗ; ಗೆದ್ದರೆ ಭೂಮಿಯ ಉಪಭೋಗ) 'ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ' (ಯಜ್ಞಕ್ಕಾಗಿ ಮಾಡಿದ ಕರ್ಮಗಳಲ್ಲದೆ ಉಳಿದವೆಲ್ಲಾ ಬಂಧನ ಕಾರಕಗಳು) ನಾವು ದೈನಂದಿನದಲ್ಲಿ ಮಾಡುವ ಎಲ್ಲಾ ಕರ್ಮಗಳನ್ನೂ ಭಗವದಾರಾಧನೆ ಎಂಬ ಭಾವನೆಯಿಂದಲೇ ಮಾಡಬೇಕು. ಈ ತತ್ವವನ್ನು ಪುಷ್ಟೀಕರಿಸಲು ಜನಕನೇ ಮೊದಲಾದ ಮುಕ್ತ ಪುರುಷರ ಉದಾಹರಣೆಯನ್ನು ಕೊಟ್ಟಿದ್ದಾನೆ. ಬಾಳು ಪದ್ಮಪತ್ರದ ಜಲದಂತಿರಬೇಕು. ಸಂಶಯವು ಸಾಧಕನ ಪರಮ ಶತ್ರು. ಸಂಶಯಾತ್ಮರಿಗೆ ಇಹಪರಗಳಲ್ಲಿ ಸುಖವಿಲ್ಲ.

ಕೊನೆಗೆ ಗೀತೆಯಲ್ಲಿ ಮಂಗಳ ಹಾಡುವಾಗ 'ಮಾಮೇಕಂ ಶರಣಂ ವ್ರಜ' (ನನ್ನೊಬ್ಬನನ್ನು ಶರಣು ಹೊಂದು.) ಇದರಿಂದ ಸರ್ವ ಪಾಪಗಳೂ ನಿನ್ನನ್ನು ಬಿಡುವುವು—ಎಂದು ಮುಗಿಸಿರುವನು.

ಶ್ಲೋ|| ಅನನ್ಯಾಶ್ಚಿಂತಯಂತೋ ಮಾಂ
ಯೇ ಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ
ಯೋಗಕ್ಷೇಮಂ ವಹಾಮ್ಯಹಮ್ ||

"ಅನನ್ಯರಾಗಿ ಧ್ಯಾನಿಸುತ್ತಾ ಯಾರು ನನ್ನನ್ನು ಉಪಾಸನೆ ಮಾಡುತ್ತಾರೋ ಅಂತಹ ಭಕ್ತರ ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ' 'ಅಪಿ ಚೇತ್ಸು ದುರಾಚಾರೋ ಭಜತೇ ಮಾಮನನ್ಯಭಾಕ್, ಸಾಧುರೇವ ಸ ಮಂತವ್ಯ.' (ಅತ್ಯಂತ ದುರಾಚಾರಿಯಾಗಿದ್ದರೂ, ಅನನ್ಯ ಭಕ್ತಿಯಿಂದ ನನ್ನನ್ನು ಭಜಿಸಿದರೆ ಅವನನ್ನು ಸಾಧುವೆಂದೇ ತಿಳಿಯ ತಕ್ಕದ್ದು' 'ಮೇ ಭಕ್ತಃ ನ ಪ್ರಣಶ್ಯತಿ' (ನನ್ನ ಭಕ್ತನು ನಾಶವಾಗುವುದಿಲ್ಲ')— ಇದಕ್ಕಿಂತ ಸಾಧಕರಿಗೆ ಹೆಚ್ಚು ಭರವಸೆಯನ್ನು ಕೊಡುವವರು ಯಾರು ?

ಸಾರಾಂಶ— ಗೋಪಾಲಕೃಷ್ಣನ ದಿವ್ಯ ಯಶಸ್ಸಿಗೆ ಗೀತೆಯೇ ಮೂಲ ಸಾಧನವಾಯಿತು. ಭಾರತದ ದಾಸ್ಯವಿಮೋಚನೆಗೆ ಪೂಜ್ಯ ಗಾಂಧೀಜಿಗೆ ಗೀತೆಯೇ ಶಕ್ತಿಯನ್ನಿತ್ತಿತು. ಪಂಡರಾಪುರದ ವಿಟ್ಠಲಾಚಾರ್ಯರೆಂಬ ವಿದ್ವತ್ಸಾಧು ಪುರುಷರಿಗೆ ಗೀತಾ ತತ್ವವೇ ಶ್ರೀಕೃಷ್ಣನ ಸಾಕ್ಷಾತ್ಕಾರವನ್ನು ಮಾಡಿಸಿತು. ಶ್ರೀಶಂಕರಾಚಾರ್ಯರು ಗೀತೆಯ ಭಾರವನ್ನು ಹೂಗಿ ಬೆರಗಾಗಿ 'ಗೇಯಂ ಗೀತಾ ನಾಮ ಸಹಸ್ರಂ' ಎಂದು ಕೊನೆಯ ತೀರ್ಮಾನವಿತ್ತಿರುವರು. ಈ ಒಂದು ದಿವ್ಯ ಗ್ರಂಥದಲ್ಲೇ ಭಾರತೀಯರ — ಜಗತ್ತಿನ ಉದ್ಧಾರದ ಮಾರ್ಗವಿದೆ. ಭಾರತೀಯರೇ, ದುಷ್ಟಶಕ್ತಿಯಿಂದ ವಸುದೇವ ದೇವಕಿಯರ ಬಿಡುಗಡೆಯೂ, ಭಾರತದ ಬಿಡುಗಡೆಯೂ ಈ ಆಗೋಸ್ತು ತಿಂಗಳಲ್ಲೇ ಆಯಿತು! ಇದಕ್ಕೆ ಗೀತೆಯೂ ಗೀತಾಮೂರ್ತಿಯೂ ಕಾರಣವೆಂಬುದನ್ನು ನೀವು ನಂಬುವಿರಾ?

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Directer of Public Instruction Madras.

ಗಾಂಧಿ - ನೆಹರೂ ಶಕ

(ನಿನ್ನೆಯ ಪುಟದಿಂದ)

ತ್ಯಕ್ಷ ನೋಡಿದುದೂ— ನಿತ್ಯವೂ ನೋಡುತ್ತಿರುವುದೂ ಆಗಿದೆ. ರಾಷ್ಟ್ರಮಾತೆಯನ್ನು ಬಂಧಿಸಿದ್ದ ಸರಪಳಿಯನ್ನು ತುಂಡರಿಸಿ ಭಾರತದೇಶವನ್ನು ಚಿರನೂತನ ಅಭಿವೃದ್ಧಿ ಕಾರ್ಯದಲ್ಲಿ ನಿಯೋಜಿಸುವ ಈ ಸಾಹಸಮಯ ಕಾರ್ಯದಲ್ಲಿ ಭಾಗವಹಿಸುವ ಸದವಕಾಶವೂ — ಸುಯೋಗವೂ ನಮ್ಮಲ್ಲೂ ಕೆಲವರ ಪಾಲಿಗೆ ದೊರಕಿದ್ದುಂಟು. ಒಂದು ದೇಶದ ಚರಿತ್ರೆಯಲ್ಲಿ ಆಗಾಗ್ಗೆ ಬರುವಂತೆ, ಇಂತಹ ಸೌಭಾಗ್ಯ ಸೂಚಕ ಕಾರ್ಯಕ್ಕೆ ಸಹಾಯಕವೆಂಬುವಂತೆ ಇತರ ಅನೇಕ ಸಹಾನುಭೂತಿಪರ ಸಂದರ್ಭಗಳೂ ಆಗಾಗ ಒದಗಿ ಬಂದುದುಂಟು. ಒಂದು ದೇಶದಲ್ಲಿ ಜನ್ಮವೆತ್ತಿದ ವೀರಾಗ್ರಣಿಗಳೇ ಮಹಾಪುರುಷರೇ ಆ ದೇಶದ ಚರಿತ್ರ ನಿರ್ಮಾಪಕರಾಗುವರೇ ಅಥವಾ ಅಂದಿನ ಆ ದೇಶದ ಸಮಯ ಸಂದರ್ಭಗಳು—ಅಂದಂದು ನಡೆಯಬೇಕಾದ ಕಾರ್ಯಗಳ ನಿರ್ವಹಣೆಗಾಗಿ ಅಂತಹ ಪ್ರಬುದ್ಧ ವ್ಯಕ್ತಿಗಳ ಜನನಕ್ಕೆ ಕಾರಣವಾಗುವುವೇ ಎಂಬುದು ಇನ್ನೂ ವಿವಾದಾಸ್ಪದವಾಗಿದೆ. ಆದರೆ ಚರಿತ್ರ ನಿರ್ಮಾಪಕರಾದ ಅಂತಹ ಅಲೌಕಿಕ ವ್ಯಕ್ತಿಗಳ ಪ್ರತಿಭೆಗಳನ್ನು ಗಳಿಸಿದ ಮಹಾಪುರುಷರನ್ನು ಅನುಸರಿಸಿ—ಹಿಂಬಾಲಕರಾಗಿ ನಡೆಯುವುದು ಮನುಷ್ಯ ಸ್ವಭಾವವೆಂಬುದು ಸರ್ವವಿದಿತ. ಏಕೆಂದರೆ ಹಾಗೆ ಅಂತಹ ಒಬ್ಬ ಮಹಾಪುರುಷನ ಹಿಂಬಾಲಕನಾಗಿ ನಡೆಯುವುದರಿಂದಲೇ ಒಬ್ಬನು ತನ್ನ ವ್ಯಕ್ತಿತ್ವವನ್ನು ಸಾರ್ಥಕ ಪಡಿಸಿಕೊಳ್ಳಬೇಕಾಗಿರುವುದರಿಂದ, ಒಂದು ನಾಟಕದಲ್ಲಿನ ಅಥವಾ ಕಾದಂಬರಿಯಲ್ಲಿನ ನಾಯಕನನ್ನು ಅನುಸರಿಸಿದಂತೆ— ದೇಶ ನಾಯಕನನ್ನೂ ಅನುಸರಿಸಿ ನಡೆಯುವುದು ಸಾಮಾನ್ಯರ ಸ್ವಭಾವವೇ ಆಗಿರುತ್ತದೆ.

ಭಾರತ ದೇಶ ಚರಿತ್ರೆಯಲ್ಲಿ ಈ ಗಾಂಧಿ— ನೆಹರೂ ಯುಗಕ್ಕೆ ಸಂಬಂಧಿಸಿದ ಇತಿಹಾಸದ ಪರಾಮರ್ಶವು ಬಹು ಸ್ವಾರಸ್ಯಮಯವಾಗಿದೆ. ಏಕೆಂದರೆ ಈ ಇಬ್ಬರು ಮಹಾನ್ ವ್ಯಕ್ತಿಗಳೂ ನಾಲ್ವತ್ತು ವರ್ಷಗಳಿಗೆ ಮೇಲ್ಪಟ್ಟು ಸಮಕಾಲೀನರಾಗಿ ದುಡಿದರು— ಮಾತ್ರವಲ್ಲ, ನಿಜಕ್ಕೂ ಅವರು ಸ್ವಾತಂತ್ರ್ಯ ಪ್ರಾಪ್ತವಾದ ತರುವಾಯವೂ ದೇಶದ ಆಡಳಿತ ಪ್ರಮುಖರೆನ್ನಿಸಿ ದುಡಿದಿದ್ದಾರೆ? ಗಾಂಧಿ ಮತ್ತು ನೆಹರೂ ಈ ಇಬ್ಬರಲ್ಲೂ ವಿದ್ಯೆ-ಜ್ಞಾನಗಳಲ್ಲಿ ಮಾತ್ರವಲ್ಲ— ವ್ಯಕ್ತಿಸ್ವಭಾವಗಳು, ಜೀವನಧ್ಯೇಯಗಳು, ಗುಣನಡತೆಗಳು ಮುಂತಾದ ಅನೇಕ ವಿಚಾರಗಳಲ್ಲಿ ಬಹುಮಟ್ಟಿನ ಭಿನ್ನತೆ ಕಂಡು ಬರುತ್ತಿತ್ತು. ಆದರೂ ಅವರು ಭಾರತದ ದಾಸ್ಯ ವಿಮೋಚನಾ ಕಾರ್ಯದಲ್ಲಿ ಎಷ್ಟು ಮಟ್ಟಿಗೆ ಏಕೀಭವಿಸಿ ಪರಸ್ಪರ ಸಹಾಯಕರಾಗಿ-ಲೇಶಮಾತ್ರವೂ ಭಿನ್ನಾಭಿಪ್ರಾಯಕ್ಕೆ ಎಡೆಗೊಡದೆ ವರ್ತಿಸಿದರೆಂಬುದು ತುಂಬಾ ಆಶ್ಚರ್ಯಕರ ವಿಚಾರ. ಈ ಯುಗ ಚರಿತ್ರೆಯನ್ನು ಬರೆಯ ತೊಡಗುವ ಲೇಖಕರಲ್ಲಿ-ಇದನ್ನು ಕೇವಲ ದೇಶ ಚರಿತ್ರೆಯನ್ನಾಗಿ ಮಾತ್ರ ಬರೆದವರು ಕೆಲವರಾದರೆ, ಇಬ್ಬರು ಮಹಾಪುರುಷರು ತಮ್ಮ ತಮ್ಮ ವೈಯಕ್ತಿಕ ಪ್ರತಿಭೆ-ಪ್ರಭಾವಗಳಿಂದ ಆ ಚರಿತ್ರೆಯ ರಚನೆಗೆ ಹೇಗೆ ಪುಷ್ಟಿಯನ್ನಿತ್ತರು ಎಂಬುದನ್ನು ವಿಮರ್ಶಿಸಿ ಬರೆದವರೂ ಕೆಲವರುಂಟು:—

ಪ್ರಕೃತ ಲೇಖನದಲ್ಲಿ ಆ ಇಬ್ಬರು ಮಹನೀಯರ ವೈಯಕ್ತಿಕ ಗುಣಧರ್ಮಗಳನ್ನು ಕುರಿತು ಆಳವಾಗಿ ವಿಮರ್ಶಿಸುವ ಉದ್ದೇಶವಿಲ್ಲ. ಆದರೂ, ಈ ಸಂದರ್ಭದಲ್ಲಿ ಐತಿಹಾಸಿಕ ವಿಮರ್ಶಕರು, ಜೀವನ ಚರಿತ್ರೆ, ಮಾನವ ಸ್ವಭಾವ, ಗುಣನಡತೆಗಳು ಪರಸ್ಪರರಲ್ಲಿ ಪೂರ್ಣವಾಗುವ ಅಥವಾ ಭಿನ್ನಿಸುವ ವಿಚಾರ ಮತ್ತು ಸಾಮಾಜಿಕ ಕಾರ್ಯಪ್ರೇರಕ ಶಕ್ತಿವಿಚಾರ ಇವುಗಳನ್ನು ಅಭ್ಯಸಿಸಿ ಒಂದು ನಿರ್ಣಾಯಕ ಸ್ಥಾನವನ್ನು ಮುಟ್ಟಲು ಇಲ್ಲೊಂದು ಅತ್ಯುತ್ತಮ ಸಂದರ್ಭವೊದಗಿದೆ ಎಂಬುದನ್ನು ಸೂಚಿಸಿ-ಮಾತ್ರ ತೃಪ್ತಿಗೊಳ್ಳಬೇಕಾಗಿದೆ.

ಭಾರತ ದೇಶ ಚರಿತ್ರೆಯನ್ನು ಮತ್ತು ಚಾರಿತ್ರಿಕ ಮಹಾಪುರುಷರನ್ನೂ ಕುರಿತು ಅಭ್ಯಸಿಸುವ ವಿಮರ್ಶಕರು, ಗಾಂಧಿ ಮತ್ತು ನೆಹರೂ ಇವರುಗಳನ್ನು ಕುರಿತೂ, ಅಲ್ಲದೆ ಗಾಂಧಿಯವರು ನಿಧನರಾದ ಮೇಲೆ—ಎಂದರೆ ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ ನೆಹರೂ ಅವರು ಗಾಂಧಿಯವರ ಸಿದ್ಧಾಂತಗಳನ್ನು ಅಥವಾ ಧ್ಯೇಯಗಳನ್ನು ಕಾರ್ಯರೂಪಕ್ಕೆ ತಂದರೆ—ಇಲ್ಲವೆ ಎಂಬ ವಿಷಯದಲ್ಲೂ ಏಕಾಭಿಪ್ರಾಯವುಳ್ಳವರಾಗಿಲ್ಲ. ಹಾಗೂ ಕಾರ್ಯಗತಗೊಳಿಸಿದ್ದರೆ ಅದು ಎಷ್ಟು ಮಟ್ಟಿಗೆ ಸಾಧ್ಯವಾಗಿದೆ ಎಂಬ ವಿಷಯದಲ್ಲೂ ವಿಮರ್ಶಕರಲ್ಲಿ ಭಿನ್ನಾಭಿಪ್ರಾಯವುಂಟು. ಆದರೆ ಅವರಿಬ್ಬರೂ ಜೀವಂತರಾಗಿದ್ದ ಕಾಲದಲ್ಲಿ ಮಾತ್ರ— ಮತ್ತೆಲ್ಲೂ ಯಾವ ದೇಶ ಚರಿತ್ರೆಯಲ್ಲೂ ದೃಷ್ಟಿಗೋಚರವಾಗದಂತಹ ಪರಸ್ಪರಸಾನುಭೂತಿ ಉಭಯರಲ್ಲೂ ಕಂಡು ಬರುತ್ತಿತ್ತು ಎಂಬ ವಿಚಾರವನ್ನು ಮಾತ್ರ ಎಲ್ಲರೂ ಒಪ್ಪತಕ್ಕದಾಗಿದೆ. ಇಬ್ಬರು ಜನಾಂಗ ನಾಯಕರಲ್ಲಿ ಇಷ್ಟು ಮಟ್ಟಿದ ನಿಕಟ ಸಹಾನುಭೂತಿ ನೆಲೆಸಿರುವುದು ಕೂಡ ಒಂದು ಅಪೂರ್ವ ವಿಚಾರ. ಕಾರ್ಯ ಸಾಧನೆಯನ್ನು ಕುರಿತು ಉಭಯರೂ ಯೋಚಿಸುವ ಯೋಚನೆ— ಮಾಡುವ ಕಾರ್ಯ ವ್ಯತ್ಯಾಸವಾಗಿದ್ದರೂ, ಭಾರತದೇಶ ಜನತೆಯನ್ನು ಕುರಿತ ಅವರ ನಿಷ್ಠಾ ಪ್ರೇಮ — ಒಂದಿಗೇ ಪ್ರಪಂಚದ ಮಾನವ ಲೋಕದ ಪ್ರೇಮ ಚಿಂತನೆಯೂ ಪ್ರಪಂಚದಲ್ಲಿ ಯುದ್ಧ ಮನೋವೃತ್ತಿ ತೊಲಗಬೇಕೆಂಬ ವಿಷಯದಲ್ಲಿದ್ದ ಅವರ ನಿರಂತರ ಪ್ರಯತ್ನ, ಮಾನವ ಸ್ವಾತಂತ್ರ್ಯದ ಮಹತ್ವ ಮತ್ತು ಮಾನವನ ಉನ್ನತ ಸ್ಥಾನ ಗೌರವ, ಮತ್ತು ಭಾರತ ದೇಶದ ಸನಾತನ ಸಂಸ್ಕೃತಿ — ಇದರ ವಿಷಯದಲ್ಲಿ ಅವರ ಹೃದಯಸ್ಥವಾಗಿದ್ದ ಹೆಮ್ಮೆ ಇವುಗಳ ವಿಷಯದಲ್ಲಿ ಲೇಶಮಾತ್ರವೂ ಭಿನ್ನಾಭಿಪ್ರಾಯವಿರಲಿಲ್ಲ- ಮಾತ್ರವಲ್ಲ, ಇವು ಮತ್ತೆ

[illegible] ಕ್ಷನ್ನಲ್ಲ. ನೆಹರೂ ಅವರ ಮಾರ್ಗವನ್ನು ಕುರಿತು ಗಾಂಧಿ ಎಷ್ಟೋ ವಿಚಾರಗಳಲ್ಲಿ ಒಪ್ಪುತ್ತಿರಲಿಲ್ಲ. ಗಾಂಧಿಯವರು ಮುಖ್ಯವಾಗಿ ಧಾರ್ಮಿಕ ಮನೋವೃತ್ತಿಯವರು. ಭಗವಂತನೆಂದರೆ "ಸತ್ಯ" ಎಂದು ಅವರು ನಂಬಿದ್ದ-ಮತ ಧರ್ಮಬದ್ಧರಾಗಿದ್ದವರು."ಸತ್ಯ"ವೇ ದೇವರೆಂಬ ಅವರ ನಿಷ್ಠೆ ಎಂದೂ ವಿಚಲಿತವಾದದಿಲ್ಲ. ಮನುಷ್ಯ ಜೀವನ ಮತ್ತು ಭಗವತ್ತತ್ವ ಈ ವಿಚಾರದಲ್ಲಿ ಅವರಿಗಿದ್ದ ಶ್ರದ್ಧೆ ಮತ್ತು ನಂಬಿಕೆ ಇವು ತಮ್ಮ ಜೀವಿತದ ಸಕಲಾನುಭವಗಳಲ್ಲೂ ಮರೆಯಾದುದಿಲ್ಲ. 'ಸತ್ಯ' ವಿಚಾರದಲ್ಲಿ ಅವರಿಗಿದ್ದ ದೃಢನಂಬಿಕೆಯೂ, ಒಲವೂ ಈಶಾವಾಸ್ಯ ಉಪನಿಷತ್ ಮತ್ತು ಗೀತ ಇವುಗಳ ಪ್ರಾಚೀನ ಬೋಧನೆಗಳಲ್ಲಿ ಆಳವಾಗಿ ನೆಲೆಸಿದ್ದುವು. ಅವರು ತಮ್ಮ ಹೃದಯಸ್ಥ ಅಂತರ್ಯಾಮಿಯನ್ನು ನಂಬಿದ್ದರು. ಮತ್ತು ಅವರ ಬಾಹ್ಯ ಕಾರ್ಯಗಳೆಲ್ಲ ದೀಪದಿಂದ ಬೆಳಕು ಪ್ರಸರಿಸುವಂತೆ ಅಂತರ್ಯ ಸ್ಫೂರ್ತಿಯಿಂದಲೆ ಹೊರಹೊಮ್ಮಿ ನಡೆಯುತ್ತಿದ್ದುವು. ಅವರಿಗೆ ಜೀವನ ಶಾಶ್ವತನು ಸನಾತನನು ಎಂಬ ವಿಚಾರದಕ್ಕಿದ್ದ ದೃಢವಾದ ನಂಬಿಕೆಯೇ ಅವರ ನಿರ್ಭಯತೆಯ ಮೂಲ ಸೂತ್ರವಾಗಿತ್ತು. ಮತ್ತು ಅಂತಹ ನಿಶ್ಚಲ ನಂಬಿಕೆಯೇ "ಸತ್ಯ"ದ ಅಂತ್ಯ ಜಯದ ಭರವಸೆಗೂ ಕಾರಣವಾಗಿತ್ತು. ಮಾನವ ಸಮುದಾಯದಲ್ಲಿ ಅವರಿಗಿದ್ದ ಅನುಪಮ ಪ್ರೇಮವೇ ಅವರು "ಅಹಿಂಸಾ" ಧರ್ಮ ಪ್ರಚಾರದ ಅಧ್ವರ್ಯುವಾಗಲು ಕಾರಣವಾಯಿತು. ಧಾರ್ಮಿಕ ಸಾಧನಕ್ಕೂ, ಧರ್ಮಾಭಿವೃದ್ಧಿಗೂ, ಸಾಮಾಜಿಕ ಕಾರ್ಯ ಚಟುವಟಿಕೆಗಳಿಗೂ, ಎಲ್ಲಕ್ಕೂ ಹೆಚ್ಚಾಗಿ ಲೋಕದಲ್ಲಿ ಶಾಂತಿ ಸ್ಥಾಪನೆ ಮತ್ತು ಮಾನವ ಜಾತಿಯ ಪ್ರೇಮಚಿಂತನೆಗೂ ಅವರ ಕೊಡುಗೆ ಶಾಶ್ವತವಾದುದು- ನಿತ್ಯವಾದುದು.—

ನೆಹರೂ ಅವರ ಮಾನವ ಪ್ರೇಮವು ಸಹಜ ಸ್ಫೂರ್ತಿಯ ಫಲವಾಗಿ ಉದಯವಾದುದು. ಅದು ಕಾಲ ಕಳೆದಂತೆಲ್ಲ ಮಿತಿಮೀರಿ ಇಲ್ಲದೆ- ಲೇಶಮಾತ್ರವೂ ಸ್ವಾರ್ಥಗಂಧವಿಲ್ಲದೆ, ಒಂದು ಜೀವನತತ್ವವೋ ಎಂಬಂತೆ ಬೆಳೆಯಿತು. ಅವರಿಗೆ, ಭಾರತದ ಪ್ರಾಚೀನ ಸಂಸ್ಕೃತಿಯಲ್ಲಿ ಆಳವಾದ, ಅಳಿಯಗೊಡದ ನಂಬಿಕೆಯಿತ್ತಾದರೂ, ಅವರ ಜೀವನದ ಶಿಸ್ತು—ಸಂಯಮಗಳು ಅವರ ದೇಶಭಕ್ತಿ, ಸಾಮಾಜಿಕ ಸೇವಾಧ್ಯೇಯ ಇವುಗಳೆಲ್ಲ ಅವರು ಪಡೆದ ಪಾಶ್ಚಾತ್ಯ ಶಿಕ್ಷಣ ಮತ್ತು ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ಅವರಿಗೆ ಹತ್ತಾರು ವರ್ಷ ಕಾಲ ನಡೆದು ಬಂದ ಸಂಬಂಧ ಇವುಗಳಿಂದ ಪ್ರಭಾವಿತವಾಗಿದ್ದುವು. ಅವರ ಶಾಂತಿಪ್ರಿಯತೆ ಮತ್ತು ಅಹಿಂಸಾಪ್ರೇಮ, ಒಂದಿಗೆ ಹಿಂಸೆ, ಕ್ರೌರ್ಯ, ಅಸತ್ಯ, ಇವುಗಳ ವಿಚಾರದಲ್ಲಿ ಅವರ ಮನಸ್ಸಿನಲ್ಲಿದ್ದ ಅಸಹನೆ ಇವು ಅವರ ಅಂತರಾತ್ಮ ಪ್ರೇರಿತವಾಗಿ, ಅವರ ಸ್ವಾಭಾವಿಕ ಸದ್ಗುಣವೆನ್ನುವಂತಿತ್ತು. ಅವರ ಸೂಕ್ಷ್ಮ ಗ್ರಹಣ ಸಾಮರ್ಥ್ಯ, ಸ್ವಾಭಿಮಾನ ಇವುಗಳೂ, ವಿಕಾರವೂ ಅಸಹಜವೂ ಆದುದರ ವಿಷಯದಲ್ಲಿ ಅವರಿಗಿದ್ದ ಅಸಹನೆ ಒಂದಿಗೇ ಪ್ರಕೃತಿಯಲ್ಲಿದ್ದ ಸತ್ಯ, ಶಾಂತಿ, ಸುಂದರ ವಸ್ತುಗಳನ್ನು ಮೆಚ್ಚಿಕೊಳ್ಳುವ ಸಾಮರ್ಥ್ಯ ಇವು ಕೇವಲ ಸ್ವಾಭಾವಿಕವಾಗಿ-ಅವರ ಜನನದೊಂದಿಗೇ ಹುಟ್ಟಿ ಬಂದ ಸುಗುಣಗಳಾಗಿದ್ದುವು. ಅವರು ಮುಖ್ಯವಾಗಿ ಮಾನವತ್ವದ ಶ್ರೇಷ್ಠ ಸ್ಥಾನಮಾನಗಳನ್ನು ಎಂತಹ ಕಷ್ಟ ಬಂದರೂ ಅವುಗಳನ್ನೆಲ್ಲಾ ಜಯಿಸಿ ಮೇಲಕ್ಕೆ ತರುವ ಅವರ ಆಂತರ್ಯ ಸಾಮರ್ಥ್ಯಪ್ರತಿಭೆಗಳನ್ನೂ, ಸ್ವಾತಂತ್ರ್ಯ ಪ್ರೇಮ ಮತ್ತು ಸ್ವಾತಂತ್ರ್ಯದ ನೆಲೆ ಇವುಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಅವರ ತ್ಯಾಗ ಕಾಣಿಕೆಯ ಮೊತ್ತವನ್ನೂ, ಪ್ರಜಾಸ್ವಾತಂತ್ರ್ಯ ಮತ್ತು ಪ್ರಜಾರಾಜ್ಯಾಧಿಕಾರ ತತ್ವಗಳಿಗೂ, ಸ್ವರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಸಂಬಂಧ ಬಾಂಧವ್ಯಗಳಿಗೂ, ಲೋಕದಲ್ಲಿ ಶಾಂತಿಸ್ಥಾಪನಾ ಕಾರ್ಯದ ಸಫಲತೆಗೂ, ಅಲ್ಲದೆ ದೇಶಾಭಿವೃದ್ಧಿ ಕಾರ್ಯವು ಆಧುನಿಕ ನಾಗರಿಕತೆಯನ್ನನುಸರಿಸಿ ಬೆಳೆದುಬಂದುದಕ್ಕೂ—ಅವರು ಸಲ್ಲಿಸಿರುವ ಸೇವೆಯ ಮೊತ್ತವನ್ನೂ ಅಳೆದು ತೋರಿಸಲು ಸಾಧ್ಯವಿಲ್ಲ. ಅಷ್ಟು ಅನುಪಮ ಸೇವೆ ಸಲ್ಲಿಸಿದ ಮಹಾನುಭಾವರವರು.

ಹೀಗೆ, ಒಬ್ಬರು ತಮ್ಮ ಅಂತರ್ಯ ಪ್ರತಿಭೆ, ಸ್ವಯಂ ಪ್ರೇರಣೆ, ಭಗವದ್ಭಕ್ತಿ, ವಿಶ್ವಾಸಗಳ ಮೂಲಕವಾಗಿಯೂ-ಇನ್ನೊಬ್ಬರು ತಮ್ಮ ವಿದ್ಯೆ, ಲೋಕಾನುಭವ, ಸೂಕ್ಷ್ಮಗ್ರಾಹಕ ಶಕ್ತಿ, ಮಾನವ ವರ್ಗದ ಮೇಲಿನ ಸಹಜ ಪ್ರೇಮ ಇವುಗಳ ಮೂಲಕವಾಗಿಯೂ 'ಗಾಂಧಿ—ನೆಹರೂ ಯುಗ' ಎಂಬೀ ಅರ್ಧ ಶತಮಾನ ಕಾಲವನ್ನು ಭಾರತ ದೇಶೀಯರ ಸ್ವಾತಂತ್ರ್ಯ ಪ್ರಾಪ್ತಿ ಮತ್ತು ಸಂರಕ್ಷಣೆ ಇವುಗಳ ಸಾಧನೆ ಮತ್ತು ಬೆಳವಣಿಗೆಗಳಿಗಾಗಿ ಉಪಯೋಗಿಸಿ—ಈ ಇಬ್ಬರು—ಅನುಪಮ ಭಾರತಮಾತೆಯ ಪುತ್ರ ರತ್ನದ್ವಯರೂ ನಮ್ಮ ದೇಶದ ಚರಿತ್ರೆಯಲ್ಲಿ ಅಜರಾಮರ ಸ್ಥಾನಗಳನ್ನು ಗಳಿಸಿಕೊಂಡಿದ್ದಾರೆ. ಈ ಇಬ್ಬರು ಮಹನೀಯರು ತಮ್ಮ ಸ್ವಪ್ರಯತ್ನಗಳಿಂದ ಮಾನವ ಲೋಕದ ರಾಜಕೀಯ ಸಾಮಾಜಿಕ ಆರ್ಥಿಕಾದಿ ವಿಚಾರಗಳಲ್ಲುಂಟಾಗುವ ತೊಡಕುಗಳನ್ನು ಸಮಾಧಾನಕರ-ಶಾಂತಿಯುತ ಮಾರ್ಗಗಳಿಂದ ಪರಿಹರಿಸಿಕೊಂಡ ಲೋಕ ಜೀವಿತವನ್ನು ಸುಖಮಯವನ್ನಾಗಿಸುವ ಒಂದು ನೂತನ ಪಥವನ್ನು ಪ್ರಪಂಚಕ್ಕೆ ಕಲಿಸಿಕೊಟ್ಟು ಮಹೋಪಕಾರ ಮಾಡಿದ್ದಾರೆ. ಈ ಕಾರಣದಿಂದ ಜಗದ್ವಂದ್ಯರಾಗಿದ್ದಾರೆ.



ಸ್ವಾತಂತ್ರ್ಯ ಹೀಗೆ ಬಂದಿತು

(ಐದನೇ ಪುಟದಿಂದ)

ದ ಅವನಂಬಿಕೆ ಅದರಲ್ಲಿಯೂ ಮುಖ್ಯವಾಗಿ ಅಟ್ಲಿಯ ಬಗ್ಗೆ ಅಪನಂಬಿಕೆ ಇದ್ದಿತ್ತು." ಎಂದು ಮೋಸ್ಲೆ ಬರೆದಿರುವರು.

ಲಾರ್ಡ್ ವೇವಲರು ದೇಶ ವಿಭಜನೆಗೆ ವಿರುದ್ಧವಾಗಿದ್ದರು. ಅವರು ವಿಭಜನೆಯ ಯೋಜನೆಯನ್ನು ಭಾರತೀಯ ಸಮಸ್ಯೆಗೆ ಸರಿಯಾದ ಪರಿಹಾರವೆಂದು ಎಂದೂ ನಂಬಿದ್ದಿಲ್ಲ. ಆದರೆ ಅವರ ಬಗ್ಗೆ ಕಾಂಗ್ರೆಸ್ ಪಕ್ಷಕ್ಕೆ ನಂಬಿಕೆಯಿದ್ದಿಲ್ಲ. ಭಾರತದ ವಿಭಜನೆಯಾದರೆ ಯುರೋಪಿನ ಬಾಲ್ಕನ್ ಪರಿಸ್ಥಿತಿ—ಚಿಕ್ಕ ಚಿಕ್ಕ ರಾಜ್ಯಗಳುಂಟು ಮಾಡುವ ಅನೈಕ್ಯ ಪರಿಸ್ಥಿತಿ—ಭಾರತದಲ್ಲಿಯೂ ತಲೆದೋರಬಹುದೆಂದು ವೇವಲ್ ಅಭಿಪ್ರಾಯಪಟ್ಟಿದ್ದರು. ಆದುದರಿಂದಲೇ ೧೯೪೭ ಮಾರ್ಚ್‌ನ ವರೆಗೆ ದೇಶವನ್ನು ಒಂದು ವೇಳೆ—ಮುಸ್ಲಿಂಲೀಗಿನ ಕೇಳಿಕೆಯಂತೆ—ವಿಭಜಿಸುವುದಾದರೆ ಏನೇನು ಮಾಡಬೇಕೆಂಬ ಯೋಜನೆಯನ್ನು ಬ್ರಿಟಿಷ್ ಸರಕಾರ ಮಾಡಿರಲಿಲ್ಲ. ಆದುದರಿಂದಲೇ—ದೇಶ ವಿಭಜನೆಯು ಅನಂತರದ ಆಲೋಚನೆಯಾಗಿದ್ದಿತ್ತು. ದೇಶವಿಭಜನೆಯನ್ನು ಮಾಡುವ ಉದ್ದೇಶವನ್ನು ಬ್ರಿಟಿಷ್ ಸರಕಾರ ಮುಂದಾಗಿಯೇ ಆಲೋಚಿಸಿದ್ದರೆ ಅಧಿಕಾರದ ವರ್ಗಾವಣೆಯನ್ನು ಇನ್ನಷ್ಟು ಸುಸೂತ್ರವನ್ನಾಗಿ ಮಾಡಬಹುದಿತ್ತು—ಸಹಸ್ರಾರು ಮಂದಿಯ ಪ್ರಾಣ ಉಳಿಯಬಹುದಿತ್ತು. ಮಾನ ಹಾನಿಯಾಗದಿರುತ್ತಿತ್ತು ಎಂದು ಮೋಸ್ಲೆ ಬರೆದಿರುವರು.

ದೇಶ ವಿಭಜನೆಯು ಮೌಂಟ್‌ಬೇಟನ್ ಕೊಡುಗೆಯಾಗಿತ್ತು. ಆದರೆ ಅದನ್ನು ಕಾಂಗ್ರೆಸ್ಸಿನ ಮುಂದಾಳುಗಳು ಯಾಕೆ ಸ್ವೀಕರಿಸಿದರು? ನೆಹರೂ, ಪಟೇಲ್ ಮುಂತಾದ ಮುಂದಾಳುಗಳು ಅದನ್ನು ಹೇಗೆ ಒಪ್ಪಿಕೊಂಡರು? ಇದಕ್ಕೆ ಲಾರ್ಡ್ ಮೌಂಟ್‌ಬೇಟನ್‌ರವರ ವ್ಯಕ್ತಿತ್ವ ಮುಖ್ಯಕಾರಣವೆಂದು ಹೇಳಲಾಗಿದೆ. ಮುಸ್ಲಿಂಲೀಗ್ ಯಾವ ಸಂಧಾನಕ್ಕೂ ಬರಲು ಒಪ್ಪದೆ ಉಳಿದ ಪರಿಸ್ಥಿತಿಯಲ್ಲಿ ದೇಶ ವಿಭಜನೆಯೇ ದೇಶದ ಮುಂದಾಳುಗಳಿಗೆ ಉಳಿದಿರುವ ದಾರಿ. ದೇಶದ ಐಕ್ಯವನ್ನು ಉಳಿಸಲು ಕಾಂಗ್ರೆಸ್ ಪಕ್ಷವು ಮುಸ್ಲಿಂಲೀಗಿನೊಡನೆ ಸಂಧಾನ ಮಾಡಬೇಕಾಗುತ್ತದೆ. ಆ ಸಂಧಾನದ ಶರ್ತಗಳು ಕಾಂಗ್ರೆಸ್ಸಿನ ತತ್ವಗಳಿಗೆ ತೀರಾ ವಿರುದ್ಧವಾದುವು. ಆದುದರಿಂದ ಸಂಧಾನವು ಅಪ್ರಯೋಜಕ, ಉಳಿದ ದಾರಿಯೊಂದೇ—ಅದು ದೇಶ ವಿಭಜನೆ ಲಾರ್ಡ್ ಮೌಂಟ್‌ಬೇಟನರು ಕಾಂಗ್ರೆಸ್ಸಿನ ಮುಂದಾಳುಗಳಿಗೆ ಬ್ರಿಟಿಷ್ ಸರಕಾರ ಕೊಡುಗೆ ಅತ್ಯಂತ ಮುಖ್ಯವಾದ, ಶಾಂತಿಕ ಹಾಗೂ ಪೂರ್ಣವಾದ ಅಧಿಕಾರ ಬದಲಾವಣೆಯ ಘಟನೆಯೆಂಬುದನ್ನು ಸ್ಪಷ್ಟಪಡಿಸಿದರು. ಭಾರತಕ್ಕೆ ಬೇಕಾದುದು ಬಲಯುತವಾದ ಕೇಂದ್ರ ಸರಕಾರ. ನಿರಂತರ ಭಿನ್ನಾಭಿಪ್ರಾಯದ ಸಮಸ್ಯೆಗಳು ದೇಶವನ್ನು ನಿಶ್ಶಕ್ತವನ್ನಾಗಿ ಮಾಡುವುವು. ಮುಸ್ಲಿಂಲೀಗಿನೊಡನೆ ಸಂಧಾನ—ಸಖ್ಯ ಸಾಧ್ಯವಿಲ್ಲದ ಕಾರಣ ಅದನ್ನು ಕೊನೆಗೊಳಿಸುವ ಕೊನೆಯ ಉಪಾಯವೇ ದೇಶ ವಿಭಜನೆಯೆಂದು ಮನದಟ್ಟುಮಾಡಿದರು. ನೆಹರೂ ಮತ್ತು ಪಟೇಲರು ಒಪ್ಪಿಕೊಂಡರು. ಅದಕ್ಕೆ ಮುಖ್ಯ ಕಾರಣ ಲಾರ್ಡ್ ಮೌಂಟ್‌ಬೇಟನ್. ಮೌಂಟ್‌ಬೇಟನ್‌ರವರ ವರ್ಚಸ್ಸು ವ್ಯಕ್ತಿತ್ವ, ಅವರ ಪತ್ನಿಯ ಪ್ರತಿಭೆ - ನೆಹರೂರವರ ನಿರ್ಧಾರದ ಮೇಲೆ ವಿಶೇಷ ಪರಿಣಾಮ ಬೀರಿತ್ತೆಂದು ಮೌಲಾನಾ ಆಜಾದರು ತನ್ನ India Win Freedom ನಲ್ಲಿ ಉಲ್ಲೇಖಿಸಿರುವರು. ನೆಹರೂ, ಪಟೇಲರ ಸಮ್ಮತಿ ಕಾಂಗ್ರೆಸ್ ಪಕ್ಷದ ನಿರ್ಧಾರವನ್ನು ರೂಪಿಸಿತ.

ದೇಶ ವಿಭಜನೆ ಹಾಗೂ ಭಾರತೀಯ ಸ್ವಾತಂತ್ರ್ಯದ ಇನ್ನೊಂದು ಚಿತ್ರಣವನ್ನು ಪಾಕಿಸ್ತಾನದ ಮುಂದಾಳುಗಳ ಅಭಿಪ್ರಾಯದಿಂದ ತಿಳಿಯಬಹುದು. ಚೌಧರಿ ಖಾಲಿಕುಜ್ಜಮಾನರವರ Pathway To Pakistan ಅಂತಹ ಒಂದು ಚಿತ್ರಣವನ್ನೊದಗಿಸುವ ವಿವರಣೆಯಾಗಿದೆ. ಬ್ರಿಟಿಷ್ ಅಧಿಕಾರಿಗಳು ಯಾವ ರೀತಿಯಲ್ಲಿ ಹಿನ್ನೆಲೆಯಲ್ಲಿ ಕೆಲಸಮಾಡಿದರು ಎಂಬುದನ್ನು ಖಾಲಿಕುಜ್ಜಮಾನರ ಪುಸ್ತಕದಿಂದ ತಿಳಿಯಬಹುದು. ಬ್ರಿಟಿಷ್ ಅಧಿಕಾರಿಗಳು, ಆಡಳಿತೆಗಾರರು ಮುಸ್ಲಿಂಲೀಗಿನ ಮುಂದಾಳುಗಳಿಗೆ, ಪ್ರತ್ಯೇಕವಾದಿಗಳಿಗೆ ಪ್ರೇರಣೆಯನ್ನೊದಗಿಸಿದ್ದರು ಎಂಬುದಕ್ಕೆ ಅನೇಕ ಸಾಕ್ಷಿಗಳಿವೆ. ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶಗಳನ್ನೊಳಗೊಂಡ ವಾಯುವ್ಯ ಹಾಗೂ ಪೂರ್ವ ಭಾರತದಲ್ಲಿ ಪ್ರತ್ಯೇಕ ರಾಷ್ಟ್ರಗಳನ್ನು ನಿರ್ಮಿಸಿದಲ್ಲಿ ಆ ರಾಷ್ಟ್ರವು ಆರ್ಥಿಕವಾಗಿ ಸ್ವಯಂಪೂರ್ಣವಾಗಿರಲು ಸಾಧ್ಯವಿದೆ ಎಂಬ ಆಯವ್ಯಯ ಪಟ್ಟಿಯನ್ನು ಮೋರಿಸ್ ಝಿನ್‌ಕಿನ (ಬ್ರಿಟಿಷ್ ಅಧಿಕಾರಿ) ತಯಾರಿಸಿ ಸರಕಾರಕ್ಕೆ ಕೊಟ್ಟಿದ್ದರು. (Reporting India-Taya Zinkin) ಆದರೆ ರಕ್ಷಣೆಯ ದೃಷ್ಟಿಯಿಂದ ಮಾತ್ರ ದೇಶ ವಿಭಜನೆಯು ಅಪಾಯಕಾರಿಯಾಗಿತ್ತು. ಅದರೂ ೧೯೪೬ರಲ್ಲಿಯೇ ಜನರಲ್ ಫ್ರಾನ್ಸಿಸ್ ಟಕರ್ ಸೈನ್ಯದ ವಿಭಜನೆಯ ಕುರಿತಾದ ಅಂದಾಜು ಪಟ್ಟಿಯನ್ನು ಸರಕಾರಕ್ಕೊಪ್ಪಿಸಲು ತಯಾರು ಮಾಡಿದ್ದರು. ಬ್ರಿಟಿಷ್ ಸರಕಾರದ ಧೋರಣೆಯು ದೇಶವಿಭಜನೆಯನ್ನು ಅನಿವಾರ್ಯವನ್ನಾಗಿ ಮಾಡಿತು. ೧೯೪೭ರಲ್ಲಿಯೇ ಬ್ರಿಟಿಷ್ ಭಾರತದ ಒಕ್ಕೂಟದ ಪ್ರಾಂತಗಳು ಪ್ರತ್ಯೇಕಗೊಳ್ಳುವ ಅಧಿಕಾರವನ್ನು ಪ್ರಾಂತೀಯ ಸರಕಾರಗಳ ಆಯ್ಕೆಗೆ ಬಿಡುವ ಘೋಷಣೆಯನ್ನು ಮಾಡಿದಾಗಲೇ ಭಾರತದ ಚಾರಿತ್ರಿಕ ಹಾಗೂ ಭೌ

With best compliments from

SRI SHANKARNARAYANA CONSTRUCTION CO.

CARGAL

ENGINEERS

and

P. W. D. CONTRACTORS

H. O. COONDAPOOR, S. K.

ಗೋಲಿಕ ಐಕ್ಯಕ್ಕೆ ಕೊಡಲಿಯೇಟು ಬಿದ್ದಿತೆಂದೂ, ಆ ಬಳಿಕ ಮೊದಲೇ ಧಾರ್ಮಿಕ ಕಾರಣಗಳಿಂದ ಭಾರತವನ್ನು ವಿಭಜಿಸಬೇಕೆಂದ ವಾದಿಸುತ್ತಿದ್ದ ಮುಸ್ಲಿಂ ಪ್ರತ್ಯೇಕವಾದಿಗಳಿಗೆ ಬೆಂಬಲದೊರಕಿತೆಂದೂ ವಿ. ಪಿ. ಮೆನನ್ ಅಭಿಪ್ರಾಯಪಟ್ಟಿರುವರು. (Tho Transfer of Power— V. P Menon) ಕಾಂಗ್ರೆಸ್ಸಿನ ಮುಂದಾಳು, ಮುಸ್ಲಿಂ ಪ್ರತ್ಯೇಕವಾದಿಗಳೊಡನೆ ಸಂಧಾನ ನಡೆಸಿ ಸೆಣಸಾಟ ಮಾಡಿ ಬೇಸರ ಹಾಗೂ ಆಯಾಸಗೊಂಡಿದ್ದರೆಂದೂ, ಅವರು ಅಧಿಕಾರದಿಂದ ಆಕರ್ಷಿತರಾಗಿ ದೇಶವಿಭಜನೆಯ ಯೋಜನೆಯನ್ನು ಅಂಗೀಕರಿಸಿದರು ಎಂಬ ಅಭಿಪ್ರಾಯವನ್ನು ಡಾ| ರಾಮಮನೋಹರ ಲೋಹಿಯಾರವರ ತಮ್ಮ The guilty Men of India's Partition ನಲ್ಲಿ ಬರೆದಿರುವರು. ಅಧಿಕಾರದ ಆಶೆಯೊಂದೇ ಆದರ ಕಾರಣವಿಲ್ಲದಿದ್ದರೂ, ಬೇರೆ ದಾರಿಗಳ ಆಯ್ಕೆಯನ್ನು ಮುಂದಾಳುಗಳು ಕಾಣದಾದರು. ಮೌಂಟ ಬೇಟನರ ಕೊಡುಗೆಯನ್ನು ನಿರಾಕರಿಸುವುದರ ಅರ್ಥ— ಆಂತಃಕಲಹವಾಗಿತ್ತು. ಹಿಂದುಗಳು ಹಾಗು ಮುಸ್ಲಿಮರು, ಶಾಂತಿಯಿಂದಿರಲು ಸಾಧ್ಯವೆಂದು ಬ್ರಿಟಿಷ್ ಸರಕಾರ ಭರವಸೆ ಪಡೆದ ಬಳಿಕವೇ ಅಧಿಕಾರ ತ್ಯಜಿಸಲು ಸಿದ್ಧವಾಗಿತ್ತು. ಹಿಂದುಗಳೂ ಮುಸ್ಲಿಮರು ಒಂದೇ ಒಕ್ಕೂಟದಲ್ಲಿರುವುದು ಅಸಾಧ್ಯವೆಂಬುದೇ ಮುಸ್ಲಿಂ ಲೀಗಿನ ಪರಮ ಪವಿತ್ರ ಘೋಷಣೆಯೊಂದಾಗಿ [illegible] ಪ್ರಧಾನ [illegible] ಸರಕಾರಕ್ಕೆ [illegible] ವುದಾಗಿದೆ [illegible] ಆಯಿಂದ [illegible] ಬಂದ ಬಲ [illegible] ಯಿತು. ಭಾರತೀಯ [illegible] ಪ್ರಮಾದ ಈ ವಿಭಜನೆಗೆ [illegible] ಇರಲಿಲ್ಲ. ರಾಜಕೀಯ [illegible] ಕೊರತೆ — ಮೇಲಿನ ಈ ಸಂದರ್ಭಕ್ಕೆ ಕಾರಣವಾಯಿತೆಂದು [illegible]. ನಾಡಿನ ರಾಜಕೀಯ [illegible] ಭಾರತೀಯ ಮುಂದಾಳುಗಳು ಮಾಡಿದ ತಪ್ಪುಗಳು ಈ ದುರಂತಕ್ಕೆ ಕಾರಣವಾಯಿತು. (Pakistan: Bisth And Early Years— Sri Prakasa)

ಭಾರತಕ್ಕೆ ಸ್ವಾತಂತ್ರ್ಯ ಬಂತು, ಸ್ವಾತಂತ್ರ್ಯ ಬಂದಿತು. ಆದರೆ ಅದನ್ನು ಪಡೆದ ರೀತಿ — ನಮ್ಮ ಮುಂದಾಳುಗಳ ಮುಂದಿದ್ದ ಆಪತ್ತಿನ ಅತ್ಯಂತ ಗಂಭೀರವಾಗಿತ್ತು. ಅವರ ನಿರ್ಧಾರ ಚಾರಿತ್ರಿಕವಾದುದಾಗಿತ್ತು. ಅದರ ಪ್ರತಿಫಲದಲ್ಲೆಲ್ಲಾ ನಾವು ಪಾಲುಗಾರರು. ಈ ನೆಲೆಯನ್ನು ತಿಳಿದು, ಬಂದಿರುವ ಸ್ವಾತಂತ್ರ್ಯವನ್ನು ಉಳಿಸುವ ಚಾರಿತ್ರಿಕ ಜವಾಬ್ದಾರಿಯನ್ನು ಪಡೆದಿದ್ದೇವೆ ಎಂದು ನಾವು ಜಾಗ್ರತರಾಗೋಣ.

ಏನು ಸ್ವಾತಂತ್ರ್ಯ

([illegible] ಪುಟದಿಂದ)

[illegible] ಲಕ್ಷ ಜನಕ್ಕೆ ಉದ್ಯೋಗ ದೊರೆಯಬಹುದು.

[illegible] ಶಿಕ್ಷಣ—ಉಚಿತ ಶಿಕ್ಷಣ, [illegible], ಸಮಾಜ ಶಿಕ್ಷಣ—ಹೀಗೆ [illegible] ಯೋಜನೆಗಳಿಂದಲೂ ನಮ್ಮ ಪ್ರಜೆಯು ಅಕ್ಷರ ಬೆಳಗಲಿಲ್ಲ.

ಸಾಕ್ಷರತೆ ಸಾಧಿಸಿದರೆ ಸಾಲದು— ಜನ ಬರೇ ಸಾಕ್ಷರರನ್ನೇ ಹೆಚ್ಚಿಸಿತು— ಸಾಧನೆ ಜನಕ್ಕಿಂತ ಹೆಚ್ಚಿನದಾಗಿರಬೇಕು.

ನಮ್ಮ ಶಿಕ್ಷಣವೂ ಸ್ವಾವಲಂಬನದ ಗುರಿಯುಳ್ಳದ್ದಾಗಬೇಕು—ನಮ್ಮ ದೇಶದಲ್ಲಿ ಜನ ಸಂಖ್ಯೆ ಹೆಚ್ಚಿದೆ—ಮಾನವ ಸಂಪತ್ತು—ಮಾನವ ಬಲ ಹೆಚ್ಚಿದೆ. ಉಣ್ಣುವ ಬಾಯಿಗಳ ಸಂಖ್ಯೆಯು ಎರಡು ಪಟ್ಟು ದುಡಿವ ಕೈಗಳೂ ಹೆಚ್ಚಿವೆ—ಈ ದುಡಿವ ಕೈಗಳಿಗೆ ಉದ್ಯೋಗ ಕೊಡುವ ಯೋಜನೆ ನಮ್ಮದಾಗಬೇಕು — ಒಮ್ಮೆ ಈ ಕೈಗಳು ದುಡಿಯಲು ಆರಂಭ ಮಾಡಿದವೆಂದರೆ ಬಾಯಿಗೆ ಅನ್ನ ತಾನಾಗಿಯೇ ದೊರೆಯುತ್ತದೆ.

ದುಡಿಮೆ, ಉತ್ಪಾದನೆ, ಇವು ಕೆಲವೇ ಜನರ ಸ್ವತ್ತಾದರೆ ಲಕ್ಷ ಬಾಯಿಗಳು ಹಸಿದಿರಬೇಕಾದೀತು—ಆಗ ಜನಸಂಖ್ಯೆ—ನಿಜವಾದ ಸಮಸ್ಯೆಯಾಗುತ್ತದೆ.

ಸಮತಾವಾದ, ಪ್ರಜಾಪ್ರಭುತ್ವ, ಕಲ್ಯಾಣ ರಾಷ್ಟ್ರ—ಮುಂತಾದ ಮಾತು ಹೇಳುವ ನಾವು ಅವು ಅರ್ಥವತ್ತಾಗುವಂತೆ ಮಾಡಬೇಕು.

ಭಾರತದಲ್ಲಿ ಇಂದು ಪ್ರಜೆ ದಡ್ಡನಾಗಿಲ್ಲ—ಅಥವಾ ಮೂಕ ಪ್ರಜೆಗಳಾಗಿಯೂ ಇಲ್ಲ. ದೇಶದ ಆಗು ಹೋಗುಗಳನ್ನು ಜನ ವಿಮರ್ಶಿಸುತ್ತಾರೆ. ಅಂದ ಮೇಲೆ ನಮ್ಮ ಆತ್ಮ ಶೋಧನೆ ನಾವು ಮಾಡಿಕೊಳ್ಳಬೇಕು

ಈ ದೇಶದ ಹೊಣೆಗಾರಿಕೆ ನಮಗೆ ಸೇರಿದ್ದು. ಈ ಪ್ರಜೆಗಳಿಗೆ ಒಳಿತು ಮಾಡುವ ಹಕ್ಕು ನಮ್ಮದಲ್ಲದೆ ಇನ್ನಾರಿಗೂ ಇದರಲ್ಲಿ ಪಾಲಿಲ್ಲ—"We can only deliver good" ಅನ್ನುವವರು—ಇನ್ನಾದರೂ ಯೋಚಿಸಲಿ. ಅವರ ಆತ್ಮ ಶೋಧನೆ ಮಾಡಿಕೊಳ್ಳಲಿ.

ಪ್ರಜಾಪ್ರಭುತ್ವದ ತಳಹದಿಯಲ್ಲಿ, ಆಧುನಿಕ ವಿಜ್ಞಾನದ ಸೌಲಭ್ಯದಿಂದ ಪಡೆದ ಸ್ವಾತಂತ್ರ್ಯ ನಾವು ಉಳಿಸಿಕೊಳ್ಳಬೇಕು —ಇದು ನಮ್ಮ—ಭಾರತದ ಪ್ರತಿಯೋರ್ವ ಶ್ರೀ ಸಾಮಾನ್ಯ ಪ್ರಜೆಯ ಆಸೆಯಾಗಿದೆ.

ಅಮೃತ ಬಿಂದು

ಕೊಡುವ ದಾನದ ಬೆಲೆಯ ಮೇಲೆ ದಾನದ ಹಿರಿಮೆ ಇಲ್ಲ. ಕೊಡುವ ರೀತಿಯ ಮೇಲೆ ದಾನದ ಹಿರಿಮೆ ಅಡಗಿದೆ.

ಂ ಂ ಂ

ಜೀವನದ ಘನತೆ ಮತ್ತು ಸಾಂಕೇಳಗೆ ಬೀಳದಿರುವುದರಲ್ಲಿಲ್ಲ. ಕೆಳಗೆ ಬಿದ್ದಾಗ ಮತ್ತೆ ದೃಢತೆಯಿಂದ ಮೇಲೆದ್ದು ಪರಿಸ್ಥಿತಿಯನ್ನೆದುರಿಸುವುದರಲ್ಲಿದೆ.

With best compliments from:

HOTEL MAYUR

The Most Modern & Uptodate

Boarding Lodging & Restaurant

Housed in a Newly constructed multi storied palacious building

"Shri Shakti Nilaya" Coen Road, HUBLI.

ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

ವ್ಯಾಪಾರಿ ಮಧ್ಯವರ್ತಿ ಸ್ಥಳದಲ್ಲಿರುವ ಭವ್ಯ ಅತ್ಯಾಧುನಿಕ ಸುಸಜ್ಜಿತ ನೂತನ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ

ಹೋಟೆಲ್ ಮಯೂರ

ಊಟ, ವಸತಿ ಮತ್ತು ಉಪಾಹಾರ ಗೃಹ

"ಶ್ರೀ ಶಕ್ತಿ ನಿಲಯ" ಕೊಯಿನ್ ರೋಡ್, ಹುಬ್ಬಳ್ಳಿ.

ನಿಮ್ಮ ಒಳಿತಿಗಾಗಿ
ಉಳಿತಾಯದ
ಮತ್ತೊಂದು ಆಕರ್ಷಕ ಯೋಜನೆ!

"ಕ್ಯುಮುಲೇಟಿವ್ ಡಿಪಾಸಿಟ್"

(ಸಂಚಯಿತ ಠೇವಣಿ)

ರೂಪಾಯಿ 10/- ಅಥವಾ ಅದೇ ಗುಣಕದ ಹೆಚ್ಚಳದಿಂದ
ನೀವು ಠೇವಣಿಯನ್ನು ಇಡಬಹುದು.

ನಮೂದಿಸಿದ ಅವಧಿ	ತಿಂಗಳಿಗೆ ರೂ. 10/- ರಂತೆ ಒಟ್ಟು ಜಮೆಯಾದ ಮೊತ್ತ	ಅವಧಿಯು ಕೊನೆಯಲ್ಲಿ ಬಡ್ಡಿ ಸಮೇತ ಮರಳಿ ಪಡೆಯುವ ಮೊತ್ತ
ತಿಂಗಳು	ರೂಪಾಯಿ	ರೂಪಾಯಿ
12	120 - 00	123 - 50
24	240 - 00	254 - 50
36	360 - 00	393 - 50
48	480 - 00	539 - 00
60	600 - 00	700 - 00

ಅವಧಿಯ ಮುಂಚೆಯೇ ಬಡ್ಡಿ ಸಹಿತ ಠೇವಣಿ ವಾಪಸಾತಿಗೆ
ಈ ಯೋಜನೆಯಲ್ಲಿ ಅವಕಾಶವಿದೆ.
ಹೆಚ್ಚಿನ ವಿವರಗಳಿಗೆ ನಮ್ಮ ಯಾವ ಶಾಖೆಯಲ್ಲಿಯೂ ವಿಚಾರಿಸಬಹುದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ
ಸಾಧನ ಸಂಪತ್ತು: ರೂ. 70 ಕೋಟಿಗೂ ಮಿಕ್ಕಿ

14 ಕೆರೆಟ್ ಚಿನ್ನದ ಆಭರಣ, ಚೊಕ್ಕ ಬೆಳ್ಳಿಯ ವಿವಿಧ ಸಾಮಾನು
ಇತ್ಯಾದಿಗಳಿಗೆ

ಶ್ರೀ ಕೃಷ್ಣಾ ಜ್ಯುವೆಲರೀ ಮಾರ್ಟ್

ತೆಂಕಪೇಟೆ - - (Phone ೮೨) - - ಉಡುಪಿ

●

ರೇಡಿಯೋ, ಟ್ರಾನ್ಸಿಸ್ಟರ್, ಇಲೆಕ್ಟ್ರಿಕಲ್ ಸಾಮಾನು,
ಸ್ಟೈನ್‌ಲೆಸ್ ಸ್ಟೀಲ್, ಸ್ಟೀಲ್ ಕೆಬಿನೆಟ್, ಸೋಫಾ ಕಂ-ಬೆಡ್
ಇತ್ಯಾದಿಗಳಿಗೆ

ಶ್ರೀ ಕೃಷ್ಣಾ ವೆರೈಟಿ ಸ್ಟೋರ್ಸ್

●

ಸುಲಭ ಕಂತುಗಳಲ್ಲಿ ಸಾಮಾನುಗಳನ್ನು ಪಡೆಯುವ
ನವೀನ ಯೋಜನೆಗೆ

ಶ್ರೀ ಕೃಷ್ಣಾ ಗಿಫ್ಟ್ ಸ್ಕೀಮ್

●

1 - 8—65ರಿಂದ ಹೊಸ ಆಡಳಿತದಲ್ಲಿ
(Phone No. 266)

ಗೋಪಾಲಾಶ್ರಮ

ಶುಚಿ-ರುಚಿ ಊಟ ಮತ್ತು ಫಲಾಹಾರ ಮಂದಿರ
ಹೆಡ್ ಪೋಸ್ಟ್ ಆಫೀಸು ರೋಡು, ಉಡುಪಿ.

ನಿಮ್ಮ ಶಿಕ್ಷಣ ಅರ್ಧಕ್ಕೆ ನಿಲ್ಲಿಸಿದ್ದೀರಾ ?

ಈಗ ನಮ್ಮ ದಕ್ಷ ಅಂಚೆ ತರಬೇತಿ ಸಹಾಯದಿಂದ ಮನೆಯಲ್ಲಿಯೇ ಬಿಡುವಿನ ವೇಳೆಯಲ್ಲಿ ಓದಿಕೊಂಡು

- ಮೈಸೂರ ಸರಕಾರದ S. S. L. C.
- ಕರ್ನಾಟಕ ವಿಶ್ವವಿದ್ಯಾಲಯದ B. A., M. A.
- ಮಧ್ಯ ಪ್ರದೇಶದ P. U. C., Inter ಮೊದಲಾದ ಪರೀಕ್ಷೆಗಳನ್ನು ಪಾಸಾಗಿ ನಿಮ್ಮ ಭವಿಷ್ಯ ಉಜ್ವಲಗೊಳಿಸಿರಿ. ನಕಲೀ ಪದವಿಗಳಲ್ಲ, ಶಿಕ್ಷಣಾಲಯಗಳಿಗೆ ಹೋಗಿ ಪಡೆಯುವ ಸರ್ಟಿಫಿಕೇಟುಗಳನ್ನು ಅವೇ ಪರೀಕ್ಷೆಗಳಿಗೆ ಕುಳಿತು ಪಡೆಯುವದು. ಪ್ರತಿ ವರ್ಷ ಉತ್ತಮ ಫಲಿತಾಂಶ.

ಯಾವದೇ ತರಗತಿಯ ಪ್ರಾಸ್ಪೆಕ್ಟಸ್ ಬೇಕಾದರೂ
1 ರೂ. M. O. ಕಳಿಸಿರಿ

S.S.C. INSTITUTE,
GADAG.

[Leading Tutorial College of the South.]

ಸ್ವಾತಂತ್ರ್ಯದಿನದ ಶುಭಾಶಯಗಳು !

ಸ್ಥಾಪನೆ: 1914
ಫೋನ್ ನಂಬ್ರ: 3428
ಟೆಲಿಗ್ರಾಂ: 'ಸುದರ್ಶನ'

ಜಗತ್ಪ್ರಸಿದ್ಧವಾದ
ಜೈ ಹಿಂದ್ ಹಂಚುಗಳನ್ನೇ
ಸದಾ ಉಪಯೋಗಿಸಿರಿ

ತಯಾರಕರು:

ಸುದರ್ಶನ ಟೈಲ್ ವರ್ಕ್ಸ್

ಬೋಳಾರ, ಮಂಗಳೂರು-೧.

ಟಿ. ಗೋಪಾಲ ಭಂಡಾರಿ
ಪ್ರೊಪ್ರೈಟರ್

ಆ ರಾಜ್ಯದಲ್ಲಿ ಕಂದಾಯವೇ ಇರಲಿಲ್ಲ!

(ಮೂರನೇ ಪುಟದಿಂದ)

ಬ್ರಾಹ್ಮಣನಿಗೆ ಬುದ್ಧಿಭ್ರಮಣೆಯಾದಂತಾಯಿತು. ಕೊನೆಗೆ ದೊರೆಯ ಬಳಿಗೂ ಹೋದ. "ದೊರೆಯ ತನಕ ದೂರು" ಎಂಬಂತೆಯೇ ಆಯಿತು. ದೊರೆ ಬಹಳ ಬುದ್ಧಿಶಾಲಿ; ಹೊಯ್ಸಳ ಅರಸರಲ್ಲಿ ಆತನೇ ಅಗ್ರಗಣ್ಯ. ನ್ಯಾಯಪಕ್ಷಪಾತಿ, ವಿ ವಿಷ್ಣುಶರ್ಮನ ಮಾತುಗಳೆಲ್ಲವನ್ನೂ ನಿಧಾನವಾಗಿ ಕೇಳಿದ. ಅವನ ಕಷ್ಟವನ್ನು ತಿಳಿದ. ಜಾಣಾಕ್ಷನಾದ ಆ ದೊರೆಗೆ ಕಮ್ಮಾರನೇ ಕುತಂತ್ರಿಯೆಂದು ಹೊಳೆದು ಹೋಯಿತು. ಆ ಕ್ಷಣವೇ ಸೇನಾಪತಿಯನ್ನು ಕರೆಸಿ, ಮಾತನಾಡಿ ಒಂದು ಆಜ್ಞೆ ಹೊರಡಿಸಲು ಅಪ್ಪಣೆ ಮಾಡಿದ 'ರಾಜಧಾನಿಯಲ್ಲಿ ಯಾರ ಮನೆಯಲ್ಲಿ ಚಿನ್ನದ ಪಾತ್ರೆಯಿದ್ದರೂ, ಈ ಕ್ಷಣವೇ ಅವರು ಅರಮನೆಗೆ ತಂದು ರಾಜನಿಗೆ ಒಪ್ಪಿಸಬೇಕು. ಇಲ್ಲವಾದರೆ ಕಠಿಣ ಶಿಕ್ಷೆವಿಧಿಸಲಾಗುತ್ತದೆ—" ಎಂದು.

ರಾಜಧಾನಿಯಲ್ಲಿದ್ದ ಬಂಗಾರದ ಪಾತ್ರೆಗಳೆಲ್ಲವೂ ಅರಮನೆಗೆ ಬಂದು ಸಾಲಾಗಿ ಕುಳಿತವು. ಆದರೆ ವಿಷ್ಣುಶರ್ಮನ ಪಾತ್ರೆ, ಈಶ್ವರ ಕೊಟ್ಟುದು— ಅದರ ಸುಳಿವೇ ಇಲ್ಲ. ದೊರೆಗೆ ಅಪಾರವಾದ ಸಿಟ್ಟು ಬಂದಿತು. ಈ ರಾಜ್ಯದಲ್ಲಿ ಯೂ ಮೋಸ ಆರಂಭವಾಯಿತೇ — ಎಂದು ರೋಷ ಉಕ್ಕಿತು. ಅಷ್ಟರಲ್ಲಿ ಒಬ್ಬಾತ ಓಡಿಬಂದ, ಬಂದವನೇ ದೊರೆಯ ಪಾದಕ್ಕೆ ಮಣಿದು ಅಂಗಲಾಚುತ್ತ ಹೇಳಿದ— "ಮಹಾಪ್ರಭೂ, ನಾನು ಬಡವ. ನನಗೆ ತಿಳಿಯದೆ ಈ ಚಿನ್ನದ ಪಾತ್ರೆಯನ್ನು ಇಟ್ಟಿದ್ದರು. ನನ್ನ ಹೆಂಡತಿಯನ್ನು ಕೇಳಿದೆ. ಅವಳು—ಪಕ್ಕದ ಮನೆಯವರಿರಬಹುದು—ಎಂದು ಬಿಟ್ಟಳು. ಇದೋ ಆ ಪಾತ್ರೆ ಇಲ್ಲಿದೆ." ಹೀಗೆ ಹೇಳಿ ಆ ಪಾತ್ರೆಯನ್ನು ರಾಜನ ಮುಂದಿಟ್ಟು ಮತ್ತೊಮ್ಮೆ ಅಡ್ಡ ಬಿದ್ದು ಎದ್ದು ನಿಂತ.

ದೊರೆ ವಿಷ್ಣುಶರ್ಮನನ್ನು ಕರೆಸಿದ. ದೂರದಿಂದಲೇ ವಿಷ್ಣುಶರ್ಮ ನನ್ನ ಪಾತ್ರೆಯನ್ನು ಗುರ್ತಿಸಿ ಹಿಗ್ಗ ತೊಡಗಿದ. ದೊರೆಗೆ ವಂದಿಸಿ, "ಮಹಾಪ್ರಭೂ, ಈ ಪಾತ್ರೆ ನನ್ನದೇ, ಇದನ್ನು ತಂದವನು ಪ್ರಾಮಾಣಿಕ. ಕದ್ದವನು ಆ ಕಮ್ಮಾರ. ಅವನ ಹೆಂಡತಿಯೇ ಇದನ್ನು ಈತನ ಮನೆಯಲ್ಲಿ ಇಟ್ಟಿರಬೇಕು. ನಾನು ಕೇಳಿದಾಗ ಗಂಡ ಹೆಂಡತಿ ಇಬ್ಬರೂ ಇಲ್ಲವೆಂದು ಸುಳ್ಳನ್ನೇ ಸಾಧಿಸಿದರು. ತಮ್ಮಂತಹ ಸತ್ಯಸಂಧರೂ ಧರ್ಮನಿಷ್ಠರೂ ರಾಜ್ಯಪಾಲಿಸುತ್ತಿರುವಾಗ ದೇಶದಲ್ಲಿ ಸುಳ್ಳು, ಮೋಸ ಇರುವುದು ನ್ಯಾಯವೇ? ಆ ಕಮ್ಮಾರ ಸುಳ್ಳು ಸಾಧಿಸುವುದು—ಎಂದರೇನು? ಗ್ರಾಮದ ಹನ್ನೆರಡು ಮಂದಿ ಆಯಗಾರರು ತಮ್ಮ ಕೆಲಸಗಳನ್ನು ಸರಿಯಾಗಿ ಪ್ರಾಮಾಣಿಕತೆಯಿಂದ ಮಾಡಿದ್ದೇ ಆದರೆ ಅದೇ ಸ್ವರ್ಗವಾದೀತು. ಗ್ರಾಮಗಳ ಬಾಳು ಈ ಹನ್ನೆರಡು ಜನರನ್ನೇ ಅವಲಂಬಿಸಿದೆ. ಅವರಲ್ಲಿ ಯಾರೊಬ್ಬರು ಹಿಂದಾದರೂ ಗ್ರಾಮಗಳ ಏಳಿಗೆ ಅಸಾಧ್ಯ. ಈಗ ಸತ್ಯವೆಲ್ಲಿಯದು? ಐಕ್ಯಮತ್ಯವೆಲ್ಲಿ? ಧರ್ಮವನ್ನು ಬಿಟ್ಟು, ಅಧರ್ಮಕ್ಕೆ ಎಂದೂ ಮನಗೊಡಬಾರದು. ಆ ಕಮ್ಮಾರನಿಗೆ ಶಿಕ್ಷೆ ವಿಧಿಸಲೇ ಬೇಕು. ಈ ಪಾತ್ರೆಯನ್ನು ತಂದಾತನಿಗೆ ಬಹುಮಾನ ಲಭಿಸಲೇ ಬೇಕು." ಎಂದು ಹೇಳಿದ.

ವಿಷ್ಣುಶರ್ಮನ ಸಲಹೆ ದೊರೆಗೆ ಒಪ್ಪಿಗೆಯಾಯಿತು. ದೊರೆ ಸಂತೋಷದಿಂದ— "ಆಯುಷ್ಮಾನ್ ಬ್ರಾಹ್ಮಣ, ನಿನ್ನ ಸಲಹೆಯಂತೆಯೇ ನಾನು ಆಜ್ಞೆ ಕೊಡುತ್ತೇನೆ. ಅದು ಹಾಗಿರಲಿ-ನೀನು ಈಶ್ವರನನ್ನು ಕುರಿತು, ತಪಸ್ಸು ಮಾಡಿ ಈ ಸಿದ್ಧರಸವನ್ನೇಕೆ ತಂದೆ?" ಎಂದು ಕೇಳಿದ. ವಿಷ್ಣುಶರ್ಮ ಮಹಾ ಬುದ್ಧಿಶಾಲಿ, ಸ್ವಲ್ಪವೂ ತಡ ಮಾಡದೆ "ಮಹಾಸ್ವಾಮಿಯವರಿಗೆ ಕೊಡುವುದಕ್ಕಾಗಿ" ಎಂದುತ್ತರ ಕೊಟ್ಟ. ದೊರೆ-"ನೀನು ಬಡವ, ಅದು ನಿನ್ನಲ್ಲಿದ್ದರೆ —ಐಶ್ವರ್ಯ ದೊರಕಿ ನಿನಗೆ ನೆಮ್ಮದಿ ಸಿಕ್ಕುವುದು." ಎಂದ. ಕೂಡಲೇ ವಿಷ್ಣುಶರ್ಮ—"ಮಹಾರಾಜ, ನಾನೇನೋ ಬಡವ ಸರಿ. ಆದರೆ ಇದರಿಂದ ದೊರಕುವ ಬಂಗಾರವನ್ನು ಕಾಪಾಡುವ ಶಕ್ತಿ ನನಗೆಲ್ಲಿ? ಈ ಪಾತ್ರೆಯನ್ನೇ ಕಾಪಾಡುವ ಶಕ್ತಿಯಿಲ್ಲದೆ ನಿಮ್ಮ ಬಳಿಗೆ ಬರಬೇಕಾಯಿತು. ಇನ್ನು ಅಷ್ಟೊಂದು ಬಂಗಾರವನ್ನು ಕಾಪಾಡಬಲ್ಲೆನೆ? ಆದ್ದರಿಂದ ಈ ಪಾತ್ರೆಯನ್ನು ತಾವೇ ಇಟ್ಟುಕೊಳ್ಳಬೇಕು" ಎಂದ.

ದೊರೆ ಒಪ್ಪಿ—"ಸರಿ, ಹಾಗಾದರೆ ನಿನಗೆ ಒಂದು ಗ್ರಾಮವನ್ನೇ ಕೊಡುತ್ತೇನೆ. ಅದರ ಉತ್ಪತ್ತಿಯಲ್ಲಿ ನೀನು ಸುಖವಾಗಿರು." ಎಂದು ಹೇಳಿ ಅಧಿಕಾರಿಯನ್ನು ಕರೆದು, ವಿಷ್ಣುಶರ್ಮನಿಗೆ ಗ್ರಾಮವೊಂದನ್ನು ಬಿಟ್ಟುಕೊಡುವಂತೆ ಆಜ್ಞೆ ಮಾಡಿದ.

ವಿಷ್ಣುಶರ್ಮ ದೊರೆಗೆ ಆಶೀರ್ವದಿಸಿ— "ಮಹಾರಾಜಾ, ನಾನು ತಮಗೆ ಕೃತಜ್ಞ" ಎಂದು ಹೇಳುತ್ತ ತನ್ನ ಊರ ಕಡೆ ಹೊರಟ.

ಅನಂತರ ದೊರೆಯು ತನಗೆ ಅವಶ್ಯಬಿದ್ದಾಗ ಆ ಸಿದ್ಧರಸದಿಂದ ಬಂಗಾರವನ್ನು ತಯಾರಿಸಿಕೊಳ್ಳುತ್ತಿದ್ದ. ಒಂದು ದಿನ ಆತನಿಗೆ ಒಂದು ವಿಚಾರ ಹೊಳೆಯಿತು. "ನಮ್ಮ ರಾಜ್ಯದಲ್ಲಿ ಸಾಗುವಳಿ ಇಲ್ಲದ ಬೀಡು ಜಮೀನು ಬೇಕಾದಷ್ಟಿದೆ. ರೈತರಿಗೆ ಕಂದಾಯದ ಭಯವೇ ಭಯ. ಆ ಭಯದಿಂದಾಗಿ ಆ ಬೀಡು ಜಮೀನನ್ನು ಉಪಯೋಗಿಸದೆ ಬಿಟ್ಟಿದ್ದಾರೆ. ಕಂದಾಯವನ್ನೇ ತಪ್ಪಿಸಿ ಬಿಟ್ಟರೆ ಎಷ್ಟು ಜಮೀನು ಬೇಕಾದರೂ ಸಾಗುವಳಿ ಮಾಡುತ್ತಾರೆ. ಆದ್ದರಿಂದ ಕಂದಾಯವನ್ನು ವಜಾ ಮಾಡಬೇಕು. ಹಾಗಾದರೆ ಕಂದಾಯಕ್ಕೆ ಬದಲು....ನಮಗೆ ಈಗ ಕಬ್ಬಿಣ ಸಿಕ್ಕಿದರೆ ಸಾಕು, ಬಂಗಾರವಾಗುತ್ತದೆ. ಆದ್ದರಿಂದ ರೈತರೆಲ್ಲರೂ ಇನ್ನು ಮುಂದೆ ಕಂದಾಯದ ಹಣ ಕೊಡುವ ಬದಲು ಸವೆದು ಹೋದ ನೇಗಿಲಿನ ಗುಳಗಳನ್ನು ಕೊಟ್ಟರೆ ಸಾಕು."

ಮಂತ್ರಿಯನ್ನೂ ಅಧಿಕಾರಿಗಳನ್ನೂ ಕರೆಸಿ, ತಾನು ಆಲೋಚಿಸಿದುದರ ಬಗ್ಗೆ ಚರ್ಚಿಸಿದ. ಎಲ್ಲರೂ ಒಪ್ಪಿದರು. ಕೂಡಲೇ ದೊರೆ ಆಜ್ಞೆಯನ್ನೂ ಹೊರಡಿಸಿಬಿಟ್ಟ—"ಪ್ರತಿಯೊಬ್ಬ ರೈತನೂ ತಾನೆಷ್ಟು
ಭೂಮಿ ಬೇಕಾದರೂ ಉಚಿತವಾಗಿ
ಗುವಳಿ ಮಾಡಬಹುದು. ಆದರೆ ಆ
ಸರ್ಕಾರಕ್ಕೆ ಕಂದಾಯವನ್ನು ಹಣದ
ಪದಲ್ಲಿ ಕೊಡಬೇಕಾಗಿಲ್ಲ. ಆದಕ್ಕೆ
ಲಾಗಿ ವರ್ಷಕ್ಕೊಂದು ಸಲ ನೇಗಿಲ
ವೆದು ಹೋದ ಗುಳಗಳನ್ನು ಅರಮ
ತಂದು ಒಪ್ಪಿಸಬೇಕು. ಇದರಿಂದ
ಬೆಳೆಯೂ ಬೆಳೆಯುವುದು."

ದೊರೆಯ ಈ ಆಜ್ಞೆ ರಾಜ್ಯದಲ್ಲಿ
ರಡಿತು. ಕಂದಾಯವಿಲ್ಲವೆಂದು
ರೈತರಿಗೆ ಕೈಗೇ ಸ್ವರ್ಗ ಸಿಕ್ಕಿದಂತೆ
ತು. ಬೀಡು ಜಮೀನುಗಳೆಲ್ಲ ಸಾಗು
ಬಂತು. ವರ್ಷ ಕಳೆದೊಡನೆ ಸಾವಿ
ನೇಗಿಲಿನ ಗುಳಗಳು ಅರಮನೆಯಲ್ಲಿ
ಮ ಬಿದ್ದವು. ದೊರೆ ಆ ಗುಳಗಳ
ಬಂಗಾರವನ್ನಾಗಿ ಮಾಡಿಕೊಳ್ಳುತ್ತಿ

ಹೀಗೆ 'ಗುಳ'ವನ್ನು ತಂದು ಕೊ
ರೈತರನ್ನು ಅರಮನೆಯ ಅಧಿಕಾರಿ
ಬಳಕೆಯಲ್ಲಿ 'ಕುಳ' ಎಂದು ಕರೆದರು.
ಗಲೂ ಆ ಹೆಸರೇ ಬಳಕೆಯಲ್ಲಿದೆ.
ದ ರೂಪದಲ್ಲಿ ಕಂದಾಯವನ್ನು ಕೊ
ವಾತನೇ 'ಕುಳ'. ಅವನು ಕೊ
ವಸ್ತುವೇ ಕುಳವಾಣ.

ಹೀಗೆ ಆ ರಾಜ್ಯದಲ್ಲಿ ಕಂದಾಯ
ಇರಲಿಲ್ಲ. ಆದರೂ ಸರ್ಕಾರದ
ಸಮರ್ಪಕ ರೀತಿಯಲ್ಲಿ ನಡೆಯುತ್ತಿ

With Best Compliments From

B. Mithradas Hegde

THE SATYANARAYANA TILE WORKS LTD.,

MANUFACTURERS OF

T. N. HEGDE TILES

KUDROLI

MANGALORE-3.

Phone No. 400

ಇನ್ನೊಮ್ಮೆ ಬೆಳಗಿ ಭಾರತದ ಜ್ಯೋತಿ

— ೧ —

ಇನ್ನೊಮ್ಮೆ ಬೆಳಗಿ ಬಾ ಭಾರತದ
ಜ್ಯೋ
ನೋಡೆ ನಿನ್ನಯ ಜನಕೆ ತಾ ಧೈರ್ಯ
ಸ್ಫೂ
ಸ್ವಾತಂತ್ರ್ಯ ಸಮರದೊಳು
ಹೋರಾಡಿ
ವಿಶ್ವಶಾಂತಿಗೆ ನಿರತ ನೀ ಶ್ರಮಿಸಿ

— ೨ —

ನಿನ್ನ ಜೀವನ ಸರಳ ನಿಷ್ಕಲ್ಮಷ!
ನಿನ್ನ ತತ್ತ್ವವು ನಿತ್ಯ ಸಂಪೂಜಿತ ।
ನಿನ್ನ ಕರೆವೆವು ನಾವು ಶಾಂತಿದೂತ
ನೀನಹುದು ನಿಜವಾಗಿ ಗಾಂಧಿ ಭಕ್ತ

— ೩ —

ನೀಬರದೆ ಅರಳಲಾರದು ಮೊಗ್ಗು
ಹೂ
ಅದುವೆ ನೀ ಅತಿಸುವ ಗುಲಾಬಿ
ಅರಸುವುದು ಅದು ನಿನ್ನ ಮೃದು
ಸ್ಪರ್ಶ
ಬಯಸುವುದು ನಿಜ ನಿನ್ನ ಸುಖಾ
ಗಮನ

— ೪ —

ಭಾರತದ ಬೆಳಕೆಂದೆ ನಿನ್ನ ಕರೆವೆ ।
ನೀ, ಭಾರಿ ಬೆಳಕೊಂದಿಗೆ ಲೀನವಾದೆ
"ನೆಹರು" ನಿನ್ನಾ ಹೆಸರು ಲೋಕವಾ
ಭಾರತದ ಪುತ್ರರೊಳು ನೀ ಅಗ್ರಗಣ

—ಶ್ರೀ ಕೆ. ಪಿ. ಆಚಾ

Telegram: SAHAKARI | Telephone: 4637

The S. K. A. C. M. Society Ltd.,

SAHAKARI MAHAL,

MANGALORE-1

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ, ಲಿಮಿಟೆಡ್

ಸಹಕಾರಿ ಮಹಲ್,

ಮಂಗಳೂರು - 1

ಅಡಿಕೆ, ಯಾಲಕ್ಕಿ, ಕಾಳುಮೆಣಸು, ಗೇರುಬೀಜ, ತೆಂಗಿನ ಕ್ಯಾ
ವಗೈರೆ (ಅಕ್ಕಿ ಭತ್ತ ಹೊರತು) ವ್ಯವಸಾಯದ ಎಲ್ಲಾ ಉತ್ಪತ್ತಿ
ಗಳನ್ನು ಕಮಿಷನ್ ವ್ಯಾಪಾರಕ್ಕೆ ಪಡಕೊಂಡು
ಯೋಗ್ಯ ಬೆಲೆಗೆ ವಿಕ್ರಯಿಸುವ

ಜಿಲ್ಲೆಯ ಪ್ರಾಮುಖ್ಯ ಸಹಕಾರಿ ಮಾರಾಟ ಸಂಘ

ಯಸ್. ನರ್ಸಪ್ಪಯ್ಯ,
B.A.B.L., M.L.C.
ಉಪಾಧ್ಯಕ್ಷ.

ಬಿ. ಪ್ರಭಾಕರ ರಾವ್,
M.A.,B.L.
ಅಧ್ಯಕ್ಷ.

SRI SHAKTHI TILE WORKS

KAVRADY

Manufacturers of:

SUN FLOWER BRAND

ROOFING TILES AND RIDGES

THE SHANKARNARAYANA CONSTRUCTION Co.

CARGAL

H. O. **COONDAPOOR, (S. K.)**

ಸ್ವಾತಂತ್ರ್ಯ ದಿನದ ಶುಭಾಶಯಗಳು !

ಶ್ರೀಕ್ಷೇತ್ರದ ಹೆಗ್ಗುರುತು—

ಉಡುಪಿ ಶ್ರೀ ಕೃಷ್ಣ ವಿಲಾಸ

ಕಾರವಾರ (ಉತ್ತರ ಕನ್ನಡ)

ವಿನಯಶೀಲ ಉಪಚಾರ
ಶುಚಿ - ರುಚಿ ಉಪಾಹಾರ

ಗ್ರಾಹಕರ ಸಂತೃಪ್ತಿಯೇ ನಮ್ಮ ಧ್ಯೇಯ.

ಕೆ. ಸಂಜೀವ ರಾವ್
ಪ್ರೊಪ್ರೈಟರ್.

ನಮ್ಮ ಗ್ರಾಹಕರಿಗೆಲ್ಲ
ಸ್ವಾತಂತ್ರ್ಯ ದಿನದ ಶುಭಾಶಯಗಳು

ಹೊಟೆಲ್ ಟೂರಿಸ್ಟ

ನಾರಾಯಣ ಸದನ, ಧಾರವಾಡ

ಬೆಂಗಳೂರು, ಪುಣೆ ಹೆದ್ದಾರಿಯಲ್ಲಿ ಉತ್ತಮವಾದ,
ಊಟ ಮತ್ತು ವಸತಿ ಸೌಕರ್ಯ.

ಮಧ್ಯವರ್ತಿ ಸ್ಥಳದಲ್ಲಿದ್ದು,
ಚಹಾ ಪಾನೀಯಗಳ ವ್ಯವಸ್ಥೆ ಸಹ ಇದೆ.

ಒಂದು ಸಲ ಸಂದರ್ಶಿಸಿ ಖಾತ್ರಿ ಪಡಕೊಳ್ಳಬೇಕಾಗಿ ವಿನಂತಿ.

ತಮ್ಮ,

ಕೆ. ರಂಗರಾವ್
ಊಟ ವಸತಿ ವಿಭಾಗ.

ಎಸ್. ರಾಮಚಂದ್ರರಾವ್
ಉಪಾಹಾರ ಗೃಹ ವಿಭಾಗ

ಸ್ವದೇಶ ರಕ್ಷಣೆಗಾಗಿ ಯೋಧರಿಗೆ ತರಬೇತಿ

(ಇಪ್ಪತ್ತೊಂದನೇ ಪುಟದಿಂದ)

ಕಾಂಕ್ಷೆಯ ಪ್ರತಿರೂಪವಾಗುತ್ತದೆಯಲ್ಲದೆ ಅವನ ಒಂದು ಸಮಗ್ರ ಅಂಗವಾಗುತ್ತದೆ. ಅನೇಕ ಮಹತ್ವಪೂರ್ಣ ವಿಷಯಗಳನ್ನು ಕುರಿತು ಯೋಧನಿಗೆ ಶಿಕ್ಷಣ ನೀಡಲಾಗುತ್ತಿದೆ. ಈ ವಿಧವಾದ ತರಬೇತಿಯಿಂದಾಗಿ ಯೋಧನಿಗೆ ಯಾವುದೇ ಬಗೆಯ ಪರಿಸ್ಥಿತಿಯಲ್ಲೇ ಆಗಲಿ ಇರಲು ಮತ್ತು ಅತ್ಯಂತ ದಕ್ಷತೆಯಿಂದ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ

ನಿರಂತರ ಕ್ರಮ

ಯುದ್ಧಕ್ಕಾಗಿ ತರಬೇತಿ ನೀಡುವುದು ಒಂದು ನಿರಂತರವಾದ ಹಾಗೂ ಕ್ರಮ ಪ್ರಧಾನವಾದ ಕ್ರಮ. ಸೇನಾ ಬಲದ— ಮುಖ್ಯವಾಗಿ ಭಾರತೀಯ ರಕ್ಷಣಾ ಬಲದಲ್ಲಿ— ಜೀವನವು, ಒಮ್ಮೊಮ್ಮೆ ಅತ್ಯಂತ ಕಠಿಣವಾಗಿ ಪರಿಣಮಿಸುತ್ತದೆ. ಭಾರತೀಯ ಯೋಧರು ಉತ್ತರದ ಗಡಿಯಲ್ಲಿನ ಹಿಮಾಲಯದ ಭವ್ಯ ಶಿಖರಗಳ ಮೇಲೆ ವ್ಯಾಪಿಸಿರುವ ಕಣಿವೆಗಳಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ.

ದುರ್ಗಮವಾದ ಪ್ರದೇಶ, ಪ್ರತಿಕೂಲವಾದ ಹವಾಮಾನ, ದಟ್ಟವಾದ ಕಾಡುಗಳು, ಮರುಭೂಮಿಗಳು, ಮುಂಗಾರು ಮಳೆಯಿಂದಾಗಿ ಭೋರ್ಗರೆಯುವ ನದಿಗಳು ಯೋಧರ ದೃಢ ನಿರ್ಧಾರವನ್ನು ಕದಲಿಸಲಾರವು. ಯೋಧನು ಇವಕ್ಕೂ ಹೆಚ್ಚಿನ ತೊಂದರೆಗಳನ್ನು ಎದುರಿಸಬೇಕಾಗುತ್ತವೆ. ತಮ್ಮ ಸಿಬ್ಬಂದಿಯ ಹಿತರಕ್ಷಣೆಯ ಅಭಿಲಾಷೆಯುಳ್ಳ ರಕ್ಷಣಾ ಬಲದವರು ಪ್ರತಿಕೂಲ ಪರಿಸ್ಥಿತಿಯಲ್ಲಿ ಯೋಧರನ್ನು ರಕ್ಷಿಸಲು ಅಗತ್ಯವಾದ ತರಬೇತಿ ಕೊಡುತ್ತಾರೆ.

ರಕ್ಷಣಾ ಬಲದ ಯೋಧನು ಪೂನಾದಲ್ಲಿನ ಆರ್ಮಿ ಕೆಡೆಟ್ ಕಾಲೇಜ್ ಪ್ರವೇಶಕ್ಕಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗುತ್ತದೆ. ಈ ಕಾಲೇಜು ಮೆಟ್ರಿಕ್‌ನಲ್ಲಿ ಉತ್ತೀರ್ಣರಾದ ಕೆಲವೇ ಆರಿಸಿದ ಅಭ್ಯರ್ಥಿಗಳಿಗೆ ಇಂಡಿಯನ್ ಮಿಲಿಟರಿ ಅಕಾಡಮಿಯ ಪ್ರವೇಶ ಪರೀಕ್ಷೆಗಾಗಿ ತರಬೇತಿ ಕೊಡುತ್ತಾರೆ. ಸರ್ವೀಸಸ್ ಸಿಲೆಕ್ಷನ್ ಬೋರ್ಡ್‌ನವರು ಆರಿಸಿದ ಈ ಅಭ್ಯರ್ಥಿಗಳು ಅಕಾಡಮಿಯಲ್ಲಿ ಪ್ರವೇಶ ಪಡೆದು ತರಬೇತಿ ಮುಗಿದ ನಂತರ ಅಧಿಕಾರಿಗಳಾಗಿ ಹೊರಬರುತ್ತಾರೆ. ಯೋಧನು ಅಧಿಕಾರಿಯಾಗಿ ತನ್ನ ಜೀವನವನ್ನು ಉತ್ತಮಗೊಳಿಸಿಕೊಳ್ಳಲು ಇಲ್ಲಿ ಸಾಕಷ್ಟು ಅವಕಾಶಗಳಿವೆ.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 74/1965.

ಕುಂಞಣ್ಣ ಗೌಡ —ವಾದಿ

&

ಪೊಕ್ಕಪ್ಪ ಕೂಡಾ —ಪ್ರತಿವಾದಿಲು.

1ನೇ ಪ್ರತಿವಾದಿ, ಪೊಕ್ಕಪ್ಪ, ಸುಕಯ್ಯ ರೈಗಳ ಸೊಸೆ, ಪುತ್ತೂರು ತಾಲೂಕು ಕೊಳ್ತಿಗೆ ಗ್ರಾಮದ ಉಂಬರ್ ಪೆರ್ಲಂದಾಡಿ ಜೊಂಬಿಲ್ಲ, ಇವರಿಗೆ,

ನಿಂಮ ಮಗ ಪ್ರಕಾಶ ಮದನಪ್ಪ ರೈಯು ವಾದಿಗೆ ಬರೆಕೊಟ್ಟ ಡಿ. ಪ್ರೊ! ನೋಟಿನ ಹಣಗಳ ವಸೂಲಿ ಬಗ್ಗೆ ವಾದಿಯು ಆತನ ವಾರಿಸ್ದಾರರಾದ ನಿಂಮ ಮೇಲೆ ಕೂಡಾ ಹೂಡಿದ ಮೇಲಿನ ದಾವೆಯು ನಿಂಮ ಹಾಜರಾತಿ ಬಗ್ಗೂ, ವಿವಾದಾಸ್ಪದಗಳಂನು ನಿರ್ಧರಿಸುವ ಬಗ್ಗೂ, ತೀರ್ಮಾನದ ಬಗ್ಗೂ ತಾ. 25.8.1965ಕ್ಕೆ ಇಟ್ಟಿದೆ ಯಿರುವುದರಿಂದ ಆ ದಿವಸ ನಿಮಗೇನಾದರೂ ಆಕ್ಷೇಪಣೆಯಿದ್ದಲ್ಲಿ ಬೆಳಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಂಮ ಗೈರು ಹಾಜರಿಯಲ್ಲಿ ಫೈಸ್ಲು ಮಾಡೋಣಾಗುವುದೆಂತಲೂ ಕೋರ್ಟು ಹುಕುಂ ಪ್ರಕಾರ ಈ ಮುಖಾ ತಿಳಿಸೋಣಾಗಿದೆ.

(Sd.) K. T. BHAT,
Advocate for Plff.

ಮೊಕ್ಕಾಂ ಪುತ್ತೂರು,
ತಾ 5.8.1965.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 78/1965

ರಾಮಕೃಷ್ಣ ಕಲ್ಕೂರ —ವಾದಿ

ವೆಂಕಟ್ರಮಣ ಉಳಿತಾಯ ಸಹಾ —ಪ್ರತಿವಾದಿಲು.

ಸದ್ರಿ ದಾವೆಯ 2-8ನೇ ಪ್ರತಿವಾದಿಲು ಕಾರ್ಕಳ ತಾಲೂಕು ಮುದ್ರಾಡಿ ಗ್ರಾಮಸ್ಥರು ವೆಂಕಟ್ರಮಣ ಉಳಿತಾಯರ ಮಕ್ಕಳು ರಾಮರಾಯ I ನಾರಾಯಣ I ಕೂಡಾ 2 ಜನರಿಗೆ.

ತಾ. 16-4-1957ರ ರಿಜಿಸ್ತ್ರಿ ಕೋರಿದ ವಿನ ತಾ. 16.4.1963 ವ 16.4.1964ಕ್ಕೆ ಸಲತಕ್ಕ 2 ವರ್ಷಗಳ ಬಡ್ಡಿ ರೂ. 384-25 ಬರಮಾಡಿಕೊಳ್ಳುವರೆ ದಾಖಲ್ಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 16-8-1965ಕ್ಕೆ ಇಟ್ಟಿದೆ. ನಿಮ್ಮ ಆಕ್ಷೇಪ ಇದ್ದಲ್ಲಿ ಸದ್ರಿ ದಿನ ಮೇಲ್ಕಂಡ ಕೋರ್ಟಿನಲ್ಲಿ ಪೂರ್ವಾಹ್ನ ಗಂಟೆ 11ಕ್ಕೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

M. S. Hegde,
Advocate for Plff.

Karkala, 4-8-1965.

ಓ ಎನ್ನ ಬಾಳುವೆಯ ಸಂಗಾತಿ!

ಯಾವ ಜನ್ಮದ ಪಾಪ-
ಪುಣ್ಯಗಳ ಪರಿಪಾಕ
ಒಂದಾಗಿ ಕೂಡಿತ್ತೊ-
ನವ್ಯಿಬ್ಬರೆಂಬ
ಎಲ್ಲಿ ಹುಟ್ಟಿದರೇನು-
ಎಲ್ಲಿ ಓದಿದರೇನು
ಮನಸುಂಟೆ ಸ್ವರ್ಗ-
ಅಲ್ಲದೊಡೆ ನರಕ

ಯಾರಮನವೆಲ್ಲಿತ್ತೊ
ಯಾರಗುಣವೆಂತಿತ್ತೊ
ಹುಟ್ಟಿದಾ ದಿನದಿಂದ
ಈ ದಿನದ ವರೆಗು
ಒಬ್ಬರೊಬ್ಬರನೆಲ್ಲು
ಕಂಡಿಲ್ಲ ಅರಿತಿಲ್ಲ
ಇಂದಿನೀ ಬಂಧನವು
ಅಂತ್ಯದಾವರೆಗು

ಬದುಕಿವಾ ದಿನವಲ್ಪ,
ಬದುಕುವಾ ದಿನವೆಷ್ಟೊ
ಬದುಕುವಾ ಕಾಲದಲಿ
ಸುಖಬೇಕು ನಮಗೆ
ಎನ್ನ ಮನ ನೀನರಿತು
ನಿನ್ನ ಮನ ನಾನರಿತು
ತಂದುಕೊಳ್ಳುವ ಸುಖದ
ಆನಂದ ಬಗೆಗೆ

ನಾ ಕೋಪ ತಾಳಿದರೆ
ಮುನಿಸಿರದಿರು ನಗುತಾರೆ
ನಿನ್ನ ನಗು ನನ್ನ
ನೋಲಿಸ ಅಸ್ತ್ರವಹುದು
ನಾ ದುಃಖಗೊಂಡಾಗ
ಮಾತೆಯಾಕರವ ನೀಡು
ನಿನ್ನ ಸಾಂತ್ವನದಲ್ಲಿ
ದುಃಖವಡಗುವುದು
ಹಿರಿಯರಾ ಶುಭ ಹರಕೆ
ನಮ್ಮ ನಲ್ಮೆಯ ಮನಸು
ಬಾಳ್ವೆಯಾ ತೇಜಕ್ಕೆ
ಇಟ್ಟ ಮಕುಟಮಣಿ
ಓ ಎನ್ನ ಬಾಳ್ವೆಯಾ
ಸಂಗಾತಿ ನೀನೆನಗೆ
ಆನಂದ ಸೌಂದರ್ಯ
ಸುಖದ ದಿವ್ಯ ಖನಿ!

—ಎ. ಬಾಲಕೃಷ್ಣ ಶೆಟ್ಟಿ, ಪೊಳಲಿ.

With the Season's Greetings

To all our Patrons & Well-wishers

From.—



K. VASUDEVA KINI

Proprietor

SHARADA INDUSTRIES

RICE, OIL, FLOUR & SAW MILLS

KATAPADI, S. KANARA.

Phone: 132.

ಚಂದಾದಾರರಲ್ಲಿ ವಿನಂತಿ.

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 45ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಅದಷ್ಟು ತ್ವರ್ಯ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿಗೆ ಸಮೀಪದ ಶಾಖೆಯಲ್ಲಿ "ನವಯುಗದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್
ನವಯುಗ, ಉಡುಪಿ.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 252 of 1965
In O. S. 3 of 1963

ಯನ್. ಕೆ. ರಾಮಚಂದ್ರ ಭಟ್ —ವಾದಿ-ಅರ್ಜಿದಾರ

ಮತ್ತು

ಯಂ ಶಂಕರನಾರಾಯಣ ಮಯ್ಯ ಕೂಡಾ —ಎದ್ರಿಯರು-ಪ್ರತಿವಾದಿಲು.

4. ಯಂ. ಪರಮೇಶ್ವರ ಮಯ್ಯ, ಲಿಂಗಯ್ಯ ಮಯ್ಯರ ಮಗ, ಕಾಸರಗೋಡು ತಾಲ್ಲೂಕು ಬಾಯಾರು ಗ್ರಾಮದ ಕನಿಯಾಲ ಹಯ್ಯರ್ ಎಲಿಮೆಂಟರಿ ಶಾಲಾ ಉಪಾಧ್ಯಾಯರು.

5. ಯಂ. ಶಿವರಾಮ ಮಯ್ಯ, ಸುಬ್ರಾಯ ಮಯ್ಯರ ಮಗ, ಕಾಸರಗೋಡು ತಾಲೂಕು ಬಾಯಾರು ಗ್ರಾಮದ ಮಂಚಿತ್ತೋಡಿ ಮನೆಯಲ್ಲಿರುವವರು.

ಸದ್ರಿ 4 ಮತ್ತು 5ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಮೇಲಿನ ದಾವೆಯಲ್ಲಿ ಆದ ಪ್ರಿಲಿಮಿನರಿ ಡಿಕ್ರಿ ವಿಧಿ ಪ್ರಕಾರ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಗೈರೆ ಕಾರಣ ವಾದಿ ಅರ್ಜಿ ದಾಖಲ್ಲು ಮಾಡಿರುವದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ತಾ. 21.8 1965ನೇ ದಿವಸ ಹಗಲು ಘಂಟೆ 11ಕ್ಕೆ ಈ ಕೋರ್ಟಿನಲ್ಲಿ ದಾಖಲ್ಲು ಮಾಡಿಕೊಳ್ಳತಕ್ಕದ್ದೆಂತಲೂ ಇಲ್ಲವಾದರೆ ಸದ್ರಿ ಅರ್ಜಿಯನ್ನು ನಿಂಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದೆಂತಲೂ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗಿಯದೆ.

(Sd.) N. R. BHAT,
Advocate for Petitioner.

ಪುತ್ತೂರು, ತಾ. 7.8.65.

PHONE 49

SREE KRISHNA MOTOR SERVICE,

HASSAN (MYSORE STATE)

BRANCHES: KADUR AND BIRUR

After arrival of all Important Trains, we run the following routes with LUXURIOUS type buses for the convenience of Travelling Public, without EXCHANGE AT CHARMADY-GADY.

I. BIRUR TO MANGALORE & BACK

L.	BIRUR	12.00 NOON	R.	MANGALORE	8.05 P. M.
L.	MANGALORE	05.45 A. M.	R.	BIRUR	1.30 P. M.

II. BIRUR TO MANGALORE & BACK (EXPRESS)

L.	BIRUR	4.10 A. M.	R.	MANGALORE	11.15 A. M.
L.	MANGALORE	4.00 P. M.	R.	BIRUR	10.55 P. M.

III. BIRUR TO UDIPI VIA DHARMASTALA & BACK

L.	BIRUR	5.20 A. M.	R.	UDIPI	05.55 P. M.
L.	UDIPI	9.00 A. M.	R.	BIRUR	08.50 P. M.

and gives Connection to all important Trains.

M. Krishna,
Proprietor,
SREE KRISHNA MOTOR SERVICE,
HASSAN.

NAVAYUGA
12th August, 1965

REGD. No. B. G. 176
LICENCE No. 31
Licensed to Post without Prepayment

ಕೃಷಿ, ಕೈಗಾರಿಕೆ, ವ್ಯಾಪಾರೋದ್ಯಮ
ಮತ್ತು ರಾಷ್ಟ್ರಾಭಿವೃದ್ಧಿಯ
ಅವಶ್ಯಕತೆಗಳಿಗೆ ಸಜ್ಜಾಗಿ, ನಿಮ್ಮ ಸೇವೆಗೆ
ಸಿದ್ಧವಾಗಿರುವ **ಈ ಬ್ಯಾಂಕು**



FAITHFUL SB FRIENDLY

ಬ್ಯಾಂಕಿಂಗ್ ಕ್ಷೇತ್ರದ ಹಲವಾರು ವಿಭಾಗಗಳಲ್ಲಿ ಕಾರ್ಯಶಾಲಿಯಾದ ಆದ್ಯ ಸಂಸ್ಥೆಯಾಗಿದೆ. ದಿನಾ ಉಳಿತಾಯದ ಚಿಕ್ಕ ಯೋಜನೆಗಳು, ಇನ್ವೆಸ್ಟರ್ಸ್ ಏಜನ್ಸಿ, ಗ್ರಾಮೀಣ ಬ್ಯಾಂಕಿಂಗ್ ಮತ್ತು ಹಲವು ಇತರ ಯೋಜನೆಗಳು. ಈಗ ಅದು ಕೃಷಿ ಆರ್ಥಿಕ ವಿಭಾಗದಲ್ಲಿ ನೂತನ ಪ್ರಯತ್ನವನ್ನು ಕೈಗೊಂಡಿದ್ದು ಕೃಷಿಯ ಅಭಿವೃದ್ಧಿಗಾಗಿ ಅಲ್ಪಕಾಲಿಕ, ಮಧ್ಯಕಾಲಿಕ ಮತ್ತು ದೀರ್ಘಕಾಲಿಕ ಉತ್ಪಾದನಾ ಸಾಲಗಳ ವ್ಯವಸ್ಥೆಯನ್ನು ರೂಪಿಸಿದೆ. ಅಧಿಕ ಉತ್ಪಾದನೆಯ ಪ್ರಯತ್ನದಲ್ಲಿ ಸಿಂಡಿಕೇಟು ತನ್ನ ಸಂಪೂರ್ಣ ಸಹಕಾರ ಮತ್ತು ಬೆಂಬಲವನ್ನು ನೀಡುವುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮಣಿಪಾಲ, ಮೈಸೂರು ರಾಜ್ಯ.

Edited, Printed & Published by K. H. Shetty at the Navayuga Press, Udipi, S. India

ನವಯುಗ

ಸಂಪುಟ ೪೪] ಅಗೋಸ್ತು ೧೯, ೬೫ [ಸಂಚಿಕೆ ೫೧



Phone No
ಫೋನ್ ಸಂಖ್ಯೆ: 226

leading nationalist weekly

೧೦

ಸಂಗಾತ್ ಸಂಜಾಯತೇ

ಬರೆದವರು: ಶ್ರೀ ವಿ. ವಿ. ಗುಳೂರ್

ಧ್ಯಾಯತೋ ವಿಷಯಾನ್ ಪುಂಸಃ |
ಸಂಗಸ್ತೇಷೂಪಜಾಯತೇ |
ಸಂಗಾತ್ ಸಂಜಾಯತೇ ಕಾಮಃ |
ಕಾಮಾತ್ ಕ್ರೋಧೋಽಭಿಜಾಯತೇ ||
ಕ್ರೋಧಾದ್ಭವತಿ ಸಂಮೋಹಃ |
ಸಂಮೋಹಾತ್ ಸ್ಮೃತಿ ವಿಭ್ರಮಃ |
ಸ್ಮೃತಿ ಭ್ರಂಶಾದ್ಬುದ್ಧಿ ನಾಶೋ |
ಬುದ್ಧಿನಾಶಾತ್ ಪ್ರಣಶ್ಯತಿ. ||

ಭಗವದ್ಗೀತೆ, ಎರಡನೇ ಅಧ್ಯಾಯ ೬೨ ಮತ್ತು ೬೩.

ಇದರಲ್ಲಿ ನನ್ನ ತಪ್ಪಾದರು ಏನಿದೆ? ನಾನೂ ಬದುಕಬೇಡವೆ? ಮಹಡಿಯ ಮೇಲೆ ರೂಮು ಕಟ್ಟಿಸಿದ್ದು ನನ್ನ ತಪ್ಪಂತೆ. ಕೆಳಗಡೆ ವಾಸದ ಮನೆ ಇರುವಾಗ ಮೇಲೆ ಹುಡುಗರಿಗೆ ರೂಮು ಬಾಡಿಗೆಗೆ ಕೊಡಬಾರದಂತೆ. ಅದರಲ್ಲೂ ಆ ಗೋಪಾಲ ರಾಯರು, ಮುದುಕಿ ಪಾರ್ವತಜ್ಜಿ, ಬಹಳ ಬಯ್ತಾರೆ. ಏನು ಮಾಡೋದು? ನಾನು ದಹೀ ಇದ್ದ ಅಸ್ತಿಯೆಲ್ಲಾ ಮಾರಿ ಈ ಮನೆ ಕಟ್ಟಿಸಿದೆ. ಕೆಳಗಡೆಯ ಎರಡು ಸಣ್ಣ ಮನೆಗಳು, ಮೇಲ್ಗಡೆಯ ಐದು ರೂಮು ಇವೇ ನನ್ನ ಸರ್ವಸ್ವ. ಇಷ್ಟು ಮಾತಾಡುವ ಈ ಜನ ಬಾಡಿಗೇನಾದರೂ ಏನು ಬಹಳ ಸಲೀಸಾಗಿ ಕೊಡ್ತಾರ್ಯೇ? ಮೇಲ್ಗಡೆ ಐದನೇ ರೂಮಿನ ಬಾಡ್ಗೆ ಬಂದು ಆರು ತಿಂಗಳೇ ಆಯ್ತು. ಆ ರೂಮಿಗಂತೂ ಯಾವಾಗಲೂ ವಿಚಿತ್ರ ವ್ಯಕ್ತಿಗಳೇ ಬರ್ತಾರೆ. ಹೋದ ಸಲ ಆ ರೂಮಿನಲ್ಲಿದ್ದ ಮನುಷ್ಯನಿಂದ ಬಹಳ ನಷ್ಟವೇ ಆಯಿತು. ರೂಮಿಗೆ ಬೀಗ ಹಾಕಿಕೊಂಡು ಹೋದಾತ ಮೂರು-ನಾಲ್ಕು ತಿಂಗಳಾದರೂ ಬರಲೇ ಇಲ್ವೇ! ಕಡೆಗೆ ಹೋದವಾರ ಬೀಗ ಒಡೆದು ಒಳಕ್ಕೆ ಹೋಗಬೇಕಾಯ್ತು. ರೂಮಿನೊಳಕ್ಕೆ ಹೋದ ತಕ್ಷಣ ನನಗೆ ಉಸಿರು ಕಟ್ಟಿದ ಹಾಗಾಯ್ತು. ಗಾಳಿ ಒಳಕ್ಕೆ ಬಂದು ಎಷ್ಟೋ ತಿಂಗಳೇ ಆಗಿತ್ತು. ಜೇಡ ರೂಮಿನ ತುಂಬಾ ತನ್ನ ಬಲೆಯನ್ನು ಬೀಸಿತ್ತು. ಹಾಸಿದ ಹಾಸಿಗೆ ಹಾಗೆಯೇ ಇತ್ತು. ಅದರ ಮೇಲೆ ಧೂಳು ಒಂದು ಗೇಣಿನಷ್ಟು ಕೂತಿತ್ತು. ಹಾಸಿಗೆ, ಆ ಮೂಲೆಯಲ್ಲೊಂದು, ಈ ಮೂಲೆಯಲ್ಲೊಂದು ಬಿದ್ದಿದ್ದ ಹರಕು ಬೂಟು, ಗೂಟದ ಮೇಲೆ ಬಿದ್ದಿದ್ದ ಒಂದು ಹರಕಲು ಅಂಗಿ, ಇಷ್ಟು ಬಿಟ್ಟರೆ ಮತ್ತಿನ್ನೇನೂ ಇರಲಿಲ್ಲ.

ಇಷ್ಟು ದಿವಸ ಹೋಗುವಾತ ಎಲ್ಲಿಗೆ ಹೋಗುತ್ತೇನೆಂದು ಹೇಳಿ ಹೋಗಬೇಡವೆ? ಎಲ್ಲಾದರೂ ಖಾಲಿಯಾಗಿ ಹೋಗಲಿ. ರೂಮಿಗೆ ಬೀಗ ಹಾಕಿಕೊಂಡು ಯಾಕೆ ಹೋಗಬೇಕಿತ್ತು? ಛೆ.. ಛೆ.... ಹಾಳಾಗಿ ಹೋಗಲಿ? ಬೇಡ, ಬೇಡ ಹುಡುಗ ಒಳ್ಳೆಯವನು. ಯಾತಕ್ಕೆ ಹೋದನೊ? ಎಲ್ಲಿ ಹೋದನೋ? ಮಹಡಿಯ ಮೇಲಿದ್ದ ಹುಡುಗರಲ್ಲೆಲ್ಲಾ ಅವನೇ ಬಹಳ ಗಂಭೀರವಾದ ವ್ಯಕ್ತಿ. ಒಬ್ಬರ ಜತೆ ಸೇರುತ್ತಿರಲಿಲ್ಲ. ತಾನಾಯಿತು, ತನ್ನ ಆಫೀಸಾಯಿತು, ಒಂದನೇ ತಾರೀಖು ಸರಿಯಾಗಿ ಬಾಡಿಗೆ ತಂದುಕೊಟ್ಟು ಬಿಡುತ್ತಿದ್ದ. ಅಂತಹವನಿಗೆ ಏನಾಯಿತು?

ಕಿಟಕಿಯ ಬಾಗಿಲುಗಳನ್ನೆಲ್ಲಾ ತೆಗೆದು, ಮುಖಕ್ಕೆ, ಮೈಗೆ ಅಂಟಿಕೊಂಡ ಜೇಡರ ಬಲೆಯನ್ನು ಬಿಡಿಸುತ್ತಾ, ಧೂಳಿನ ಘಾಟಿನಿಂದ ಕೆಮ್ಮುತ್ತಾ ಮತ್ತೇನಾದರೂ ಅವನನ್ನು ಪತ್ತೆ ಹಚ್ಚಬಹುದಾದ ಸುಳುಹು ಸಿಕ್ಕಬಹುದೇನೋ ಎಂದು ಹುಡುಕಿದೆ.

ಹಾಸಿಗೆಯ ಮೇಲೆಲ್ಲಾ ಅನೇಕ ಕಾಗದಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಅವುಗಳೆಲ್ಲಾ ಬರೆಯಲ್ಪಟ್ಟಿದ್ದವು. ಅವುಗಳನ್ನು ಓದಿದರೆ ಅವನ ವಿಷಯವಾಗಿ ಏನಾದರೂ ತಿಳಿಯಬಹುದೆಂದು ಆ ಕಾಗದಗಳ ಮೇಲಿದ್ದ ಧೂಳನ್ನೆಲ್ಲಾ ಕೊಡೆದು, ರೂಮನ್ನು ಸ್ವಚ್ಛ ಮಾಡುವುದಕ್ಕೆ ಹೇಳಿ, ಆ ಕಾಗದಗಳನ್ನು ಮನೆಗೆ ತೆಗೆದುಕೊಂಡು ಬಂದೆ. ಅವುಗಳದು ಒಂದು ದೊಡ್ಡ ಕಂತೆಯೇ ಆಯಿತು.

ಆ ಸಂಗ್ರಹದಲ್ಲಿ ಪೆನ್ಸಿಲಿನಿಂದ ಗೀಚಿದ್ದ ಅನೇಕ ಚಿತ್ರಗಳಿದ್ದವು. ಪ್ರತಿ ಚಿತ್ರಗಳ ಕೆಳಗೂ ಒಂದೊಂದು ಸುಂದರವಾದ, ಇಲ್ಲ ವ್ಯಂಗ್ಯವಾದ ಹೆಸರನ್ನು ಬರೆಯಲ್ಪಟ್ಟಿತ್ತು. ಉದಾಹರಣೆಗೆ ಒಂದು ಚಿತ್ರದಲ್ಲಿ ಒಬ್ಬ ತರುಣಿ ಪುಸ್ತಕವನ್ನು ಓದುತ್ತಾ ಕುಳಿತಿದ್ದಾಳೆ. ಆ ಚಿತ್ರದ ಕೆಳಗಡೆ "ಕಾದಂಬರೀ" ಎಂದು ಬರೆದಿತ್ತು. ಮತ್ತೊಂದರಲ್ಲಿ ಅದೇ ತರಹ ಕನ್ಯೆ ವೃತ್ತಾಂತ ಪತ್ರಿಕೆಯನ್ನು ಹಿಡಿದು ನಿಂತಿದ್ದಾಳೆ. ಅದರ ಮೇಲೆ "ವಾರ್ತಾ ವಿನೋದಿನಿ" ಎಂದು ಬರೆದಿತ್ತು. ಇನ್ನೊಂದರಲ್ಲಿ ನಾಯಿಯೊಡನೆ ಆಟವಾಡುತ್ತಿದ್ದಾಳೆ. ಅದರಡಿಯಲ್ಲಿ, "ಶುನಕ—ಶಂಕರೀ" ಎಂದು ಬರೆಯಲ್ಪಟ್ಟಿತು. ಮತ್ತೊಂದರಲ್ಲಿ ಸೈಕಲ್ ಸವಾರಿ ಮಾಡುತ್ತಿದ್ದಾಳೆ, ಅದರ ನಾಮ 'ಸೈಕಲ್ ಸುಂದರಿ' ಎಂದಿತ್ತು. ಇಂತಹವು ಇನ್ನೂ ಎಷ್ಟೋ ಚಿತ್ರಗಳಿದ್ದವು. ನೋಡುವುದಕ್ಕೆ ಅಂತಹ ಚೆನ್ನಾಗಿರದಿದ್ದರೂ ಎಲ್ಲದರಲ್ಲೂ ಒಂದೇ ಹೆಣ್ಣನ್ನು ಬರೆಯಲಾಗಿದೆ ಎನ್ನುವಂತೆ ಕಾಣುತ್ತಿತ್ತು. ಕೆಲವು ಚಿತ್ರಗಳು ಅಶ್ಲೀಲದ ಅಂಚಿಗೂ ಹೋಗಿದ್ದವು.

ಮತ್ತೆ ಕೆಲವು, ಎರಡು ಮೂರು ಸಾಲು ಗೀಚಿ ಅಷ್ಟಕ್ಕೆ ಬಿಟ್ಟಿದ್ದ ಕವನಗಳಿದ್ದವು. ಒಂದೂ ಸಹ ಪೂರ್ಣವಾಗಿದ್ದಂತೆ ತೋರುತ್ತಿರಲಿಲ್ಲ.

ಬೋ ದಿಪ್ಪಿದಿಂದ
ಕನಸ್ನಾಗ ಬಂದು
ಮನಸ್ನಾಗ ನಿಂತು
ನಲಿಸ್ತಿತ್ತು ಒಂದ್ರೂಪ
ನಿನ್ನನ್ ನೋಡಿದ್ಮ್ಯಾಗೆ
ಅರ್ಥವಾತ್ ನಂಗೆ
ಅದೇ, ಅದೇ ನಿನ್ರೂಪ.

ಇದು ಅದರಲ್ಲಿ ಒಂದು ಕವನದ ತುಣುಕು.

ನಿನ್ನ ನಾನೋಡಿ ತಣಿದೆ
ನಿನ್ನ ಗಾನವ ಕೇಳಿ ನಲಿದೆ
ನಿನ್ನ ರೂಪಕೆ ಸೋತು ಒಲಿದೆ

ಇದು ಮತ್ತೊಂದು ಚೂರು. ಹೀಗೆಯೇ ಅನೇಕ ಅಪೂರ್ಣ ಕವನಗಳಿದ್ದವು.

ಇನ್ನೊಂದು ದೊಡ್ಡ ಕಟ್ಟು ಸೂತ್ರಗಳದಾಗಿತ್ತು. ಅವುಗಳಿಂದಾದರೂ ಆತ ಎಲ್ಲಿಗೆ ಹೋದ ಎನ್ನುವುದನ್ನು ತಿಳಿಸುತ್ತವೆಯೇನೋ ನೋಡೋಣವೆಂದು ಓದಲು ಪ್ರಾರಂಭಿಸಿದೆ. ಮೊದಲನೆಯದು ಹೀಗೆ ಪ್ರಾರಂಭವಾಗಿತ್ತು

20—2—64

ಪ್ರಿಯ ದರ್ಶಿನಿ,

ನಾನು ಕವಿಯಲ್ಲ, ನಾಟಕಗಾರನೂ ಅಲ್ಲ. ಕಡೆಗೆ ಒಂದೂವರೆ ರೂಪಾಯಿ ಕಾದಂಬರಿಯ ಕರ್ತೃವೂ ಅಲ್ಲ. ನನಗೆ ಪ್ರೇಮ ಪತ್ರ ಬರೆಯುವುದಕ್ಕೆ ಬರುವುದಿಲ್ಲ. ಆದರೆ ಈ ಸಂದರ್ಭದಲ್ಲಿ ಬರವಣಿಗೆಯ ಆವಶ್ಯಕತೆ ಏನು? ಬರವಣಿಗೆಗೂ ಮೀರಿದುದು ನಮ್ಮ ಭಾಷೆ. ಎಷ್ಟೋ ಹೆಣ್ಣುಗಳನ್ನು ನೋಡಿದ್ದೇನೆ. ನನ್ನ ವಯಸ್ಸಿನ ಕಣ್ಣುಗಳು ಅವುಗಳಿಗೆ ವಿವಿಧ ಭಾವ, ಭಂಗಿಗಳನ್ನು ತೋರಿಸಿ ನೋಡಿವೆ. ನಿನ್ನ ನೋಡಿದ ಮೇಲೆ ಅವೆಲ್ಲಾ ಒಂದು ಘಳಿಗೆಯೂ ನಿಲ್ಲದೆ ಈ ಸ್ಮೃತಿಯಿಂದ, ಗಾಳಿಗೆ ಚೆದುರುವ ಮೋಡದಂತೆ ಚೆದುರಿ ಹೋಗಿವೆ. ನಿನ್ನ ರೂಪು ಮಾತ್ರ ನನ್ನ ಇರುವನ್ನೇ ಮರೆಸೀತೇ ವಿನಾ ನಿನ್ನನ್ನು ಮರೆಯಲು ಅವಕಾಶ ಕೊಡುವುದಿಲ್ಲ. ಈಗಲೂ ನನಗೆ ಜ್ಞಾಪಕವಿದೆ. ಅಂದು ನಾನು ಬಾಡಿಗೆಗೆ ರೂಮು ಕೇಳಲು ಬಂದಾಗ ನೀನು ಯಜಮಾನರ ಮನೆಯ ನಾಯಿಯ ಜೊತೆ ಆಟವಾಡುತ್ತಿದ್ದೆ. ನೀನೇನೂ ಅಲಂಕಾರ ಮಾಡಿಕೊಳ್ಳದಿದ್ದರೂ ಎಷ್ಟು ಚೆನ್ನಾಗಿ ಕಾಣುತ್ತಿದ್ದೆ! ಆ ನಾಯಿಯನ್ನು ನೋಡಿ ನನಗೆ ಅಸೂಯೆಯೇ ಆಯಿತು. ಆ ಕ್ಷಣದಿಂದಲೇ ನನ್ನದೂ ಎನ್ನುವುದೆಲ್ಲಾ ನಿನ್ನ ಪಾದಾರ್ಪಣವಾಯಿತು. ಕನಸಿನಲ್ಲಿ, ರೂಮಿನಲ್ಲಿ, ಮನಸಿನಲ್ಲಿ, ಆಫೀಸಿನಲ್ಲಿ ಒಂದೇ ಚಿತ್ರ—ಸದಾ ನಿನ್ನ ಚೆಲುವು. ರೂಮಿನ ಬಾಡಿಗೆ ಜಾಸ್ತಿಯಾದರೂ ನಿನ್ನ ಕಿಟಕಿಗೆ ಎದುರಾಗಿರುವ ರೂಮನ್ನೇ ಹಿಡಿದೆ. ಈಗ ಆಫೀಸನ್ನು ನಾನು ದ್ವೇಷಿಸುವಷ್ಟು ಮತ್ತಿನ್ನಾರೂ ದ್ವೇಷಿಸಲಾರರು. ನನ್ನ ಕಾಲವೆಲ್ಲಾ ಅಲ್ಲಿಯೇ ಹಾಳಾಗಿ ಬಿಡುತ್ತದೆ. ನೀನು ಬಾಗಿಲಿಗೆ ಬಂದು ನಿಂತಾಗ, ನನ್ನ ಕಿಟಕಿಯಿಂದ ನಾನು ಇಣಿಕಿ ನೋಡಿದಾಗ—ಅಯ್ಯೋ ಶಾರಿ—ಹಾಳು ಪದಗಳು ಅವಕ್ಕೆ ಆನಂದವನ್ನು ವರ್ಣಿಸುವ ಶಕ್ತಿಯಾದರೂ ಎಲ್ಲಿದೆ?

21-2-64—ನಿನ್ನೆ ಈ ಕಾಗದವನ್ನು ಅರ್ಧ ಬರೆದಿದ್ದಾಗ ನಿನ್ನ ನೋಟದ ನೆನ

(ಹನ್ನೊಂದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Phone No. 226.

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿಂದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣ ಧ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣಕಾರ್ಯವು ಸಾಮಾನ್ಯವಾಗಿ ಮುಂಗಡವಾಗಿಯೇ ಮುಗಿಯುವುದರಿಂದ ಬಾರ್ಕೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರ ಸಂಜೆಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ದಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಕ್ಯಾಂಬೆಯ ತೈಲಕ್ಷೇತ್ರದಲ್ಲಿ ಮೊತ್ತ ಮೊದಲು ಎಣ್ಣೆ (೧೯೬೦ರಲ್ಲಿ) ನೆಲದಡಿಯಿಂದ ಚಿಮ್ಮಿ ಹಾರಿತು.

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೫೧	೧೯—೮—೧೯೬೫	No. 51

ಮತ್ತೊಂದು ಪರೀಕ್ಷೆ

ಕಚ್ಛ-ರಣದಲ್ಲಿ ಪಾಕಿಸ್ತಾನದೊಂದಿಗೆ ಒಪ್ಪಂದ ಮಾಡಿಕೊಂಡ ನೀತಿಯನ್ನು ಭಾರತದಲ್ಲಿ ಇನ್ನೂ ಖಂಡಿಸುವವರಿದ್ದಾರೆ. ಪ್ರಧಾನಿ ಶಾಸ್ತ್ರಿ ಮತ್ತು ಕಾಮರಾಜರು ಅದೆಷ್ಟೇ ಸಮರ್ಥ ರೀತಿಯಿಂದ ಸರಕಾರದ ನಿಲುವೆಯನ್ನು ಸಮರ್ಥಿಸುತ್ತ ಬಂದರೂ ಈ ಒಡಂಬಡಿಕೆಯು ಭಾರತದ ಶರಣಾಗತಿಯೆಂದು ಅರ್ಭಟಿಸುವವರಿದ್ದಾರೆ. ದುರಂತ ಇಲ್ಲಿಗೇನೇ ಮುಗಿಯಲಿಲ್ಲ. ಇತ್ತ ಕಾಶ್ಮೀರದ ಕೊಳ್ಳದಲ್ಲಿ ಪಾಕಿಸ್ತಾನವು ಮಾಡಿದ ಸೀಮೋಲ್ಲಂಘನೆಯು ಅದರ ಮನೀಷೆಯನ್ನು ವ್ಯಕ್ತಪಡಿಸುವುದಿಲ್ಲವೆ? ಭಾರತದೊಡನೆ ಸ್ನೇಹದಿಂದಿರುವ ಅಭಿಲಾಷೆ ಪಾಕಿಸ್ತಾನಕ್ಕಿದೆಯೆ? ಇದ್ದರೆ ಕಚ್ಛ-ರಣದಲ್ಲಿ ಸಮರ ವಿರಾಮವನ್ನು ಬಯಸಿ ಕಾಶ್ಮೀರದಲ್ಲಿ ಏತಕ್ಕೆ ಕ್ರಾಂತಿಯೆಬ್ಬಿಸಬೇಕು?

ಪಾಕ್ ಅಧಿಕಾರಿಗಳು ಕಾಶ್ಮೀರವನ್ನು ಕಬಳಿಸುವ ಏಕಮೇವ ಉದ್ದೇಶದಿಂದ ಭಾರತಕ್ಕೆ ತೊಂದರೆಗಳನ್ನುಂಟು ಮಾಡುತ್ತ ಬಂದಿದ್ದಾರೆ. ೧೯೪೮ರಿಂದಲೂ ಅಲ್ಲಿ ಪಾಕಿಸ್ತಾನಿಗಳು ಸಮರ ವಿರಾಮ ರೇಖೆಯನ್ನು ದಾಟುತ್ತಲೇ ಬಂದಿದ್ದಾರೆ. ಭಾರತೀಯ ಕಾವಲು ಪಡೆಯು ಅವರನ್ನು ಹಿಂದಕ್ಕೆ ಓಡಿಸುತ್ತ ಬಂದಿದೆ. ಇತ್ತೀಚೆಗೆ ಮಾತ್ರ ಇದು ಪರಾಯಿತರ ಕ್ರಮದಂತಾಗಿದೆ. ಪಾಕ್ ಸೈನಿಕರು ಕಾಶ್ಮೀರ ಕೊಳ್ಳಗಳಲ್ಲಿ ನುಗ್ಗಿ, ಲೂಟಿಮಾಡಿ ಗಡಿ ಪ್ರದೇಶದಲ್ಲಿ ಭೀತಿಯ, ಅಭದ್ರತೆಯ ವಾತಾವರಣವನ್ನುಂಟು ಮಾಡಿ, ಕಾಶ್ಮೀರಿಗಳಿಗೆ ಭಾರತದ ಮೇಲಿರುವ ವಿಶ್ವಾಸ, ಗೌರವ ಭಾವನೆಗಳನ್ನು ದೂರು ಮಾಡುವ ನಾನಾ ಪ್ರಯತ್ನಗಳನ್ನು ಮಾಡುತ್ತ ಬಂದಿದ್ದಾರೆ. ಹಾಗಿದ್ದರೂ ಅಲ್ಲಿನವರ ನೈತಿಕ ಸ್ಥೈರ್ಯ ಅದ್ವಿತೀಯವಾಗಿಯೇ ಉಳಿದು ಬಂದಿದೆ. ಈ ವರುಷ ಸ್ವಾತಂತ್ರ್ಯ ದಿನಕ್ಕೆ ಕೆಲದಿನ ಮೊದಲು ಪಾಕಿಸ್ತಾನಿಗಳ ಕೋಟಲೆ ಅಸದಳವಾಗಿರುವುದು ವಿವಂಚನೆಗೆ ಕಾರಣವಾಗದಿದ್ದರೂ ಪಾಕಿಸ್ತಾನದೊಡನೆ ಭಾರತವು ಯಾವರೀತಿಯಿಂದ ವರ್ತಿಸಬೇಕೆಂಬುದನ್ನು ಪುನರ್ವಿಮರ್ಶಿಸಬೇಕಾದ ಅಗತ್ಯವನ್ನು ಪ್ರತಿಪಾದಿಸುತ್ತದೆ. ಇದುವರೆಗೂ ಭಾರತವು ಪಾಕಿಸ್ತಾನದೊಡನೆ ಅದಾವ ವಿವಾದಗಳೇ ಇದ್ದರೂ ಸಹ ಅಸ್ತಿತ್ವದ ತತ್ವವನ್ನು ಅವಲಂಬಿಸುತ್ತ ಬಂದಿದೆ. ನೆರೆಯ ರಾಷ್ಟ್ರಗಳೊಡನೆ ತಂಟೆಗಳಿರುವುದು ಸಹಜವಾದುದರಿಂದ ಮಾತುಕತೆಯ ಮೇಜನೆದುರಿಗೇ ಸೌಹಾರ್ದಮಯ ವಾತಾವರಣದಲ್ಲಿ ಅವನ್ನು ಬಗೆಹರಿಸುವ ಧ್ಯೇಯವನ್ನಿಟ್ಟುಕೊಂಡಿದೆ. ಆದರೆ, ಪ್ರತಿಪಕ್ಷಿಯ ಮನೋಭಾವನೆ ಈ ರೀತಿಯಿಲ್ಲವೆಂಬುದೀಗ ಮತ್ತೂ ಮತ್ತೂ ಬಹಿರಂಗವಾಗಿದೆ. ಹಾಗಿರುವಾಗ ಭಾರತ ಮಾತ್ರ ಏಕಪಕ್ಷೀಯವಾಗಿ ಶಾಂತಿಸಾಧ ಜಪಿಸುತ್ತ ಕೂರುವುದು ನ್ಯಾಯವಲ್ಲ. ಪಾಕಿಸ್ತಾನದ ಕಪಟ ಪಾಶಗಳಿಗೆ ಪವಿತ್ರ ಭಾರತದ ಒಂದಂಗುಲ ನೆಲವೂ ಆಹುತಿಯಾಗಬಾರದು. ಆತ್ಮರಕ್ಷಣೆಗಾಗಿ ಕೊಲೆ ಮಾಡಿದರೂ ಅದು ಕೊಲೆಯೆನಿಸದು, ನಾವೆಕೊಂದರೆ ಅದರಿಂದ ಪಾಪದ ಲೇಶ ಅಂಟಲಾರದು.

ನ್ಯಾಯಕ್ಕೆ ಸತ್ಯಕ್ಕೆ ತಲೆವಾಗಬೇಕು. ಅನ್ಯಾಯ, ಅಸತ್ಯಗಳ ಮುಂದೆ ತಲೆ ತಗ್ಗಿಸುವುದೆಂದರೆ, ಅದು ನಾಚಿಕೆಗೇಡು. ಪಾಕಿಸ್ತಾನವು ದುರುದ್ದೇಶ ಪೂರಿತವಾಗಿ ಸೀಮೋಲ್ಲಂಘನೆಯಲ್ಲಿ ತೊಡಗಿದೆ. ಪೂರ್ವ-ಪಶ್ಚಿಮಗಳೆರಡೂ ದಿಕ್ಕಿನಲ್ಲಿ ಅಲ್ಲಲ್ಲಿ ಗುಂಡಿನ ಪ್ರತಿಧ್ವನಿ ಕೇಳಿಸುತ್ತಿದೆ. ಅದು ಕಾಶ್ಮೀರದಲ್ಲಿರಲಿ, ತ್ರಿಪುರಾದಲ್ಲಿರಲಿ, ಚಕಮಕಿ ಚಕಮಕಿಯೇ. ಬಾಯಲ್ಲಿ ಶಾಂತಿಯನ್ನು ಜಪಿಸಿ ಕಾರ್ಯದಲ್ಲಿ ಆಕ್ರಮಣ ಶೀಲತೆಯನ್ನು ತೋರಿಸುವ ಪಾಕಿಸ್ತಾನಿಗಳಿಗೆ ಕೆಂಪು ಚೀನದಿಂದ ಪಾಠ ಪ್ರವಚನ ನಡೆದಿವೆಯೆಂದೂ ತಿಳಿಯುತ್ತದೆ. ಕನ್ನಡಿ ಮತ್ತು ಕಟ್ಟಿನ ಹಾವುಗಳು ಒಂದುಗೂಡಿ ಭಾರತ ಮಾತೆಯನ್ನು ಕಡಿಯಲು ಮುಂದಾಗ ಬೇಗ ನಾವು ನಮ್ಮ ಮಾತೃಭೂಮಿಯನ್ನು ರಕ್ಷಿಸಬೇಡವೆ? ಆದುದರಿಂದ ಪಾಕ್ ವರ್ತನೆಗೆ ಸರಿಯಾದ ನೀತಿಯನ್ನು ನಾವೂ ಕೈಗೊಳ್ಳಬೇಕು. ಈ ಕುತಂತ್ರಿಗಳ ಬಲಪ್ರಯೋಗವನ್ನು ಬಲದಿಂದಲೇ ಎದುರಿಸಬೇಕು. ನಮ್ಮ ಸೇನೆಯ ಶಕ್ತಿಯ ರುಚಿಯನ್ನೊಮ್ಮೆ ಪಾಕಿಸ್ತಾನಿಗಳಿಗೆ ಉಣಿಸಬೇಕು; ಮುಂದಾದರೂ ವೃಥಾ ಕೀಟಲೆಗೊಡುವ ಮೂರ್ಖತನವನ್ನವರು ತೋರಿಸಬಾರದು. ಸಮರ ವಿರಾಮ ರೇಖೆಯು ಇರುವುದು ಬರಿಯ ಭಾರತೀಯರಿಗೆ ಮಾತ್ರವಲ್ಲ. ಕೆಸರನ್ನು ತೊಣಕುವ ಪಾಕ್ ಪ್ರವೃತ್ತಿಗೆ ಮುಟ್ಟುಗೋಲು ಹಾಕದೆ ಹೋದರೆ, ಸುತ್ತಲೆಲ್ಲ ಕೆಸರು ಚೆಲ್ಲುತ್ತದೆ. ನಮ್ಮ ಸರಕಾರ ಈ ದಿಸೆಯಲ್ಲಿ ಅಂತಾರಾಷ್ಟ್ರೀಯ ನೀತಿ-ನಡಾವಳಿಗೆ ಅಗೌರವ ತಾರದಂತೆ ಪಾಕ್ ದುಷ್ಪ್ರವೃತ್ತಿ ದೂರ ಮಾಡುವ ಉಪಾಯವರಸಬೇಕು. ಅದಕ್ಕೆ ಸಕಲ ಭಾರತೀಯರೂ ಬೆಂಬಲಕೊಡಬೇಕು.

ವಚನಸುಧೆ

ಸತ್ಯೇನ ರಕ್ಷ್ಯತೇ ಧರ್ಮೋ
ವಿದ್ಯಾ ಯೋಗೇನ ರಕ್ಷ್ಯತೇ||
ಮೃಜಯಾ ರಕ್ಷ್ಯತೇ ರೂಪಂ
ಕುಲಂ ವೃತ್ತೇನ ರಕ್ಷ್ಯತೇ||

೦ ಸತ್ಯದಿಂದ ಧರ್ಮವೂ ಯೋಗದಿಂದ ವಿದ್ಯೆಯೂ ಸ್ನಾನದಿಂದ ರೂಪವೂ ಸದಾಚಾರದಿಂದ ಕುಲವೂ ರಕ್ಷಿಸಲ್ಪಡುತ್ತವೆ.

೦೦ ಮಾನವನು ಸತ್ಯಮಾರ್ಗವನ್ನು ಅವಲಂಬಿಸಿ ಧಾರ್ಮಿಕನಾಗಬೇಕು. ಅಭ್ಯಾಸವನ್ನು ಮುಂದುವರಿಸಿ ವಿದ್ಯಾವಂತನಾಗಬೇಕು. ಶರೀರವನ್ನು ಚೊಕ್ಕಟವಾಗಿರಿಸಿ ಸ್ಫುರದ್ರೂಪಿಯಾಗಬೇಕು. ಸದಾಚಾರ ಸಂಪನ್ನನಾಗಿ ಕುಲಕ್ಕೆ ಗೌರವತಂದುಕೊಡಬೇಕು.

ಆಹಾರ ನೀತಿ

ರಾಜ್ಯದ ಆಹಾರ ಸಚಿವ ಬಿ. ಡಿ. ಜತ್ತಿಯವರು ಈ ವರ್ಷ ಆಹಾರ ಧಾನ್ಯಗಳನ್ನು ಸಂಗ್ರಹಿಸುವ ಧೋರಣೆಯ ರೂಪರೇಷೆಗಳನ್ನು ಪತ್ರಿಕಾ ಪರಿಷತ್ತಿನಲ್ಲಿ ಸಡಿಲು ಬಿಟ್ಟಿದ್ದಾರೆ. ಇವುಗಳನ್ವಯ ಸರಕಾರವು ಸಹಕಾರಿ ಸಂಘಗಳ ಮೂಲಕ ಅಥವಾ ವರ್ತಕರ ಮೂಲಕ ರೈತನಿಂದ ಎಕ್ರೆವಾರು ಭತ್ತ ಅಥವಾ ಜೋಳವನ್ನು ಸಂಗ್ರಹಿಸುವುದು. ಭಾರಿ ನೀರಾವರಿ ಯೋಜನಾ ಪ್ರದೇಶದಲ್ಲಿ ಒಂದೆಕರೆಗೆ ಎತ್ತುವಳಿಯಿಲ್ಲ. ಎರಡರಿಂದ ಐದೆಕರೆ ವರೆಗೆ ಎರಡು ಕ್ವಿಂಟಲ್, ಆರರಿಂದ ಹತ್ತೆಕರೆ ವರೆಗೆ ಎಕರೆಗೆ ನಾಲ್ಕು ಕ್ವಿಂಟಲ್ ಹನ್ನೊಂದರಿಂದ ಹೆಚ್ಚಿಗಿದ್ದರೆ ಪ್ರತಿ ಎಕರೆಗೆ ಆರು ಕ್ವಿಂಟಲ್ ಭತ್ತ ಸರಕಾರಕ್ಕೆ ಕೊಡಬೇಕು. ಉಳಿದೆಡೆಯಲ್ಲಿ ಎರಡರಿಂದ ಐದೆಕರೆ ವರೆಗೆ ಎಕರೆಗೆ ಒಂಟು ಕ್ವಿಂಟಲ್, ಆರರಿಂದ ಹತ್ತೆಕರೆ ವರೆಗೆ ಎಕರೆಗೆ ಎರಡು ಕ್ವಿಂಟಲ್, ಹನ್ನೊಂದೆಕರೆ ಮೀರಿದ್ದರೆ ಎಕರೆಗೆ ಮೂರು ಕ್ವಿಂಟಲ್ ಭತ್ತ ಸರಕಾರ ಕೈಗೊಪ್ಪಿಸಬೇಕು. ಈ ಪ್ರಮಾಣವು ಹೆಚ್ಚೆಂದು ಹೇಳಲು ಸಾಧ್ಯವಿಲ್ಲ. ಸರಕಾರವು ನಿಗದಿ ಮಾಡಿದ ಬೆಲೆಯು ಆಕರ್ಷಕವಾಗಿದ್ದರೂ ಅದಕ್ಕಿಂತ ಹೆಚ್ಚಿಗೆ ತೆತ್ತು ರೈತರಿಂದ ಪಡೆಯಬಹುದಾದ ವರ್ತಕರ ಮೇಲೆ ತಕ್ಕ ಹತೋಟಿಯಿಡಬೇಕು. ಇಲ್ಲವಾದರೆ, ಈಗಾಗಲೇ ಗಗನ ಮುಟ್ಟಿರುವ ಆಹಾರ ಧಾನ್ಯಗಳ ಬೆಲೆಯು ಸೌರವ್ಯೂಹವನ್ನೂ ಮೀರಿ ಏರಿ ಹೋದೀತು; ಜನ ಬದುಕುವುದೇ ಅಸಾಧ್ಯವಾಗುತ್ತದೆ.

ನರಸಣ್ಣನ ಸರಸ

'ಲಾಲ ಬಹದೂರ ಪಾರ್ಥ, ಕಾಮರಾಜ ಪಾರ್ಥಸಾರಥಿಯಂತೆ...'

'ಬಯಲು ಆಲಯದೊಳಗೊ ಆಲಯವು ಬಯಲೊಳಗೋ ಬಯಲು ಆಲಯಗಳೆರಡು...ಒಳಗೊ?'

ಗೇಹ ರಾಜ್ಯದಲ್ಲಿ

ಇದು ರಾಮಾಯಣವಲ್ಲ, ಮಹಾಭಾರತ

೧

'ಮತ್ತೂ ಸುರು ಮಾಡಿದ್ರಲ್ಲಾ?"

'ಏನನ್ನ?'

"ಮತ್ತ್ಯಾವುದನ್ನ? ರಾ ಮಾ ಯ ಣ ವನ್ನ.'

'ಅಂದ್ರೆ?'

"ರಾವಣನು ರಾಮನ ಮೇಲೆ ಆಕ್ರಮಣ ಮಾಡಿಯೇ ಬಿಟ್ಟ ನೋಡಿ....'

'ಅಲ್ವೆ ರಾಮ—ರಾವಣರ ಯುದ್ಧ ಆಗಿ ರಾವಣ ಮಣ್ಣುಮುಕ್ಕಿದ್ದು ತ್ರೇತಾ ಯುಗದಲ್ಲಿ. ಈ ಕಲಿಯುಗದಲ್ಲಿ ಮತ್ತೆ ಅವರು....'

"ಅಯ್ಯೋ, ನೀವೇ! ರಾಮ-ರಾವಣರು ಈಗ ಇಲ್ಲಾಂತನ್ನಿ. ಬೇಕಾದ್ರೆ, ಅವ್ರ ಜಾತಿಯವರು ಇಲ್ಲದೆ ಎಲ್ಲಿ ಹೋಗಿದ್ದಾರೆ?"

'ಎಲ್ಲಿದ್ದಾರೆ?"

'ಎಲ್ಲಿ ಅಂದ್ರೆ? ಭಾರತದ ಉಪಖಂಡದಲ್ಲಿ....'

"ಅರ್ಥವಾಗಲಿಲ್ಲ ನೋಡು..."

"ನೋಡೋದೇನು ಬಂತು? ಸೋಲೊಪ್ಪಿಕೊಳ್ಳಿ.'

'ಒಳ್ಳೆ ಕಥೆಯಾಯ್ತಲ್ಲ ಇದು?"

"ಮತ್ತೆ ಅರ್ಥವಾಗ್ಲಿಲ್ಲಾಂತೀರಿ, ಸೋಲೊಪ್ಪಿಕೊಂಡ್ರೆ ಏನಂತೆ ಅಪಮಾನ?'

'ಅಪಮಾನವೇನು ಬಂತೆ? ಅದೂ ನಾನು ನಿನ್ನ ಮುಂದೆ ಸೋಲೊಪ್ಪಿಕೊಳ್ಳೋದ್ರಲ್ಲೇನು ದೋಷ!"

'ಈಗಂತೂ ಪೂರಾ ಪೂರಾ ಕಲಿಯುಗ ನೋಡಿ...'

"ಕಲಿಯುಗವೋ, ದ್ವಾಪರಯುಗವೋ ಅದೊಂದೂ ನನಗರಿಯದು. ಆದರೂ ಎಲ್ಲಾ ಯುಗದಲ್ಲೂ ಹೆಂಡಂದಿರು ಇರೋದೇ ಗಂಡಂದಿರನ್ನು ಸತಾಯಿಸೋಕೆ ಎಂತ ಯಾರಾದರೂ ಹೇಳಬಹುದು."

"ಇದು ಶುದ್ಧ ಸುಳ್ಳು. ಗಂಡಂದಿರೇ ಹೆಂಡಂದಿರನ್ನು ಗೋಳು ಹೊಯ್ಕೋಂಡು. ನೋಡಿ, ದೂರ ಯಾಕೆ ಹೋಗಬೇಕು? ನನ್ನನ್ನೇ ನೋಡಿದ್ರೆ ತಿಳೀಯುತ್ತೆ..."

"ನಿನಗಾಗಿರೋದು ಏನಂತೆ? ನಿನ್ನ ಲಾಗೋವನ್ನು ಮುಚ್ಚಿ ಬಗಿ ಹಿಡಿಯುತ್ತಿ. ಪಾಪ, ಈ ಪ್ರಾಣಿ ಮಾತ್ರ ಅದಕ್ಕೆ ಸಿಕ್ಕಿಬಿದ್ದ ಸಂದರ್ಭ ಬಹಳ ಕಡಮೆ. ಬಿದ್ರೂ ನೋಡು, ಇತಿಹಾಸವನ್ನೇ ತೆಗೆದು ನೋಡು. ವಿಶ್ವಾಮಿತ್ರ—ಮೇನಕೆ, ದುಶ್ಯಂತ—ಶಕುಂತಲೆ, ರಾಮ—ಸೀತೆ, ಪಾಂಡವರು—ದ್ರೌಪದಿ, ಕೃಷ್ಣ—ರುಕ್ಮಿಣಿ— ಹೀಗೆ ಎಲ್ಲೆಂದರಲ್ಲಿ ನಡೆದಿರೋದಾದ್ರೂ ಏನಂತೆ?' ಆ ಹೆಂಡಂದಿರ ಕಾರಣದಿಂದ ಗಂಡಂದಿರು ಪಟ್ಟಿರೋ ಬವಣೆ ಯಾರಿಗ ಬೇಕು?"

'ಹೌದಪ್ಪ, ಇನ್ಯಾರೂ ಇಲ್ವೆ?'

'ಇಲ್ಲದೆ ಮತ್ತೆ?"

"ಹೇಳಿ ಬಿಡಿ...."

"ಅಹಲ್ಯೆ ಗೌತಮರನ್ನ ಮೋಸಮಾಡಿದಳಲ್ಲಾ? ತಾರೆ— ಮಂಡೋದರಿಯವರು ತಮ್ಮ ಪತಿಯಂದಿರು ಯುದ್ಧಕ್ಕೆ ಹೋಗುವಾಗ ಪೂಜೆಗೆಯ್ಯುವುದಕ್ಕೆ ಬದಲು ಉಪದೇಶಿಸ ಹೋದರು ನೋಡು.

ಸಾವಿತ್ರಿ—ಮಹಾಸಾಧ್ವಿ—ಮಾಡಿನ ಶಿರಸ್ಥಾನ!"

'ಹೌದು, ಸತ್ತ ಪತಿಯನ್ನ ಪಾಪ ಆ ಯಮರಾಯನ ಕಾಲುಹಿಡಿದು. ಹಿಡಿದು ದಮ್ಮಯ್ಯ ಹಾಕಿ ಮತ್ತೆ ಬದುಕಿಸಿ ತಂದದ್ದು ತಪ್ಪಾಯ್ತು..."

"ಇಲ್ಲವೇ ಮತ್ತೆ? ಆಕೆ ತಾರದೆ ಇರುತಿದ್ರೆ, ಸತ್ಯವಾನನ ಪಾಪಿ ಜನ್ಮ ಅಲ್ಲಿಗೇ ಮುಗಿದು ಹೋಗುತಿತ್ತು. ಮುಂದೆ ನೂರಾರು ವರ್ಷ ಬದುಕಿ ಪಡೋ ಯಾತನೆ, ಮಾಡೋ ಪಾಪ, ಇವೆಲ್ಲಾ ಇರುತ್ತಿರಲಿಲ್ಲ...."

ಒಳ್ಳೆ ತಮಾಷೆ ಮಾತಾಡ್ತಾ ಇದ್ದೀರಲ್ಲಾ? ಯಾರನ್ನ ಮಹಾ ಪತಿವ್ರತೆಯರೆಂದು ಲೋಕ ಕೊಂಡಾಡುತ್ತದೋ ಯಾರ ನಾಮೋಚ್ಚಾರ ಮಾತ್ರದಿಂದ ಸರ್ವ ಪಾಪ ನಾಶವಾಗುತ್ತದೋ ಅಂಥವರ ಮುಖಕ್ಕೆ ಮಸಿ ಬಳಿಯ ಹೊರಟಿದ್ದೀರಲ್ಲಾ?'

"ಅವರ ಮಟ್ಟಿಗೆ ಅವರು ಪತಿವ್ರತೆಯರಿರಬಹುದು. ಆದರೆ, ಅವರ ಕೈಹಿಡಿದ ಗಂಡಂದಿರಿಗೆ ಅವರಿಂದೊದಗಿದ ಕಷ್ಟನಷ್ಟಗಳು ಒಂದೇ ಎರಡೆ? ಅವಕ್ಕೆಲ್ಲಾ ಹೊಣೆ ಯಾರು?"

"ಗಂಡ—ಹೆಂಡಿರಲ್ಲಿ ಭೇದವೇನಪ್ಪಾ? ಗಂಡ ಕೀರ್ತಿವಂತನಾದ್ರೆ, ಹೆಂಡ್ತೀಗೂ ಪಾಲಿದೆ ನೋಡಿ."

"ಹೌದು ಹೌದು. ಸಾಹೇಬ್ರ ಅಮ್ಮ ಅಂತಾರೆ ಜನ.'

"ಹಾಗೇ ಹೆಂಡ್ತಿನೂ ಹೆಸ್ರು ಪಡೆದ್ರೆ ಗಂಡ....'

'ಅಮ್ಮಾವ್ರ ಗಂಡ ಆಗ್ತಾನೆ...."

'ಅದೆಲ್ಲಾ ಇರ್ಲಿ. ನಿಮ್ಮ ಆಧುನಿಕ ರಾಮಾಯಣಕ್ಕೆ ಏನು ಮಾಡೋದ್ರ?"

'ಏನದು?"

'ಅಲ್ಲ, ರಾಮನ ಹೆಂಡ್ತಿ ಸೀತೆಯ ಮೇಲೆ ರಾವಣ ಕೈಮಾಡ್ತಾ ಇದ್ದಾನಲ್ಲಾ?"

"ಅಂದ್ರೆ....?"

'ರಾವಣನ ಕುಲದವ್ರು ರಾಮನ ಕುಲದವ್ರ ಮೇಲೆ...."

"ಏನು ಹೇಳ್ತೀಯೋ ನೀನು? ರಾವಣನ ರಾಜಧಾನಿ ಲಂಕೆಯಂತೆ. ಆತ ದ್ರಾವಿಡ ಜನಾಂಗದವನಂತೆ. ರಾವಣ ವಶವಿಮುನನ್ನು ಆಜ್ಞೆ ಪ್ರಾವಿಡರು ಆಚರಿಸುವುದಿಲ್ಲವಂತೆ ರಾಮ. ಸೀತೆಯರು ಶುದ್ಧ ಆರ್ಯ ಜನಾಂಗದವರಂತೆ ಹಾಗಿರುವಾಗ...."

"ಅದೆಲ್ಲಾ ನನಗೆ ಗೊತ್ತಿಲ್ಲ...."

"ನಿನ್ನ ಮಾತಿನಲ್ಲಿ ದಕ್ಷಿಣ—ಉತ್ತರ ಭಾರತಗಳು ಹೋರಾಡುತ್ತಿರುವಂತೆ ತೋರುತ್ತೆ. ಅಲ್ಲ ಇಂತಹ ಹೋರಾಟ ಒಳಗಿಂದೊಳಗೇ ಇದ್ದರೂ ಅದು ಬೂದಿಮುಚ್ಚಿನ ಕೆಂಡವಾಗೇ ಇದೆ ಹೊರತು ತೋರಿ ಬರುತ್ತಿಲ್ಲ. ನೋಡು....'

ಅದಲ್ರೀ....ನಾನು ಅಂದಿರೋದು ಪಾಕ್...'

'ಓ, ಹಾಗೆ. ಪಾಕಿಸ್ತಾನವು ಕಾಶ್ಮೀರದ ಮೇಲೆ ಆಕ್ರಮಣ ಮಾಡುತ್ತಿದೆಯೆಂತ ಅಲ್ವೆ?"

'ಹ್ಞಾಂ...'

"ಮತ್ತೆ ನೀನು ಹುಲಿಯ ಚರ್ಮಕ್ಕೆ ಮೈ ಸುತ್ತಿಕೊಳ್ಳೋಕೆ ಹೊರಟ್ರಿ..."

'ಅಂದ್ರೆ....'

"ವಕ್ರೋಕ್ತಿ, ಅನ್ಯೋಕ್ತಿಗಳನ್ನೆಲ್ಲಾ ಬಳಸೋಕ್ಕೆ ಹೊರಟ್ರೆ ಹೇಗೆ?"

"ಅಂದ್ರೆ?"

'ಮತ್ತೇನೂ ಇಲ್ಲ. ಹೇಳಬೇಕಾದ್ದನ್ನ ದ್ರಾವಿಡ ಪ್ರಾಣಾಯಾಮ ಮಾಡದೆ....

"ಮತ್ತೆ ಆರ್ಯ ಪ್ರಾಣಾಯಾಮ ಮಾಡಬೇಕೆ?"

'ಹಾಗಲ್ವೆ, ಸುಲಭದಲ್ಲಿ ಅರ್ಥವಾಗುವಂತೆ ನೇರವಾಗಿ ಹೇಳಬಿಡಬೇಕು. ಪಾಯಸದಲ್ಲಿ ಪಾಪಾಸು ಅಂದ್ರೆ ಇಂದು ಯಾರಿಗೆ ಅರ್ಥವಾಗುತ್ತೆ?"

'ಮತ್ತೆ?"

"ಪಾಯಸದಲ್ಲಿ ಬೂಟೇಸು ಅನ್ನಬೇಕು."

'ಒಳ್ಳೇದಾಯ್ತು ಈಗ. ಅದಿರ್ಲಿ. ಅಲ್ರಿ, ಪಾಕಿಸ್ತಾನಿಗಳು ರಾವಣನ ಕುಲದವ್ರೇ ಇರಬೇಕು...."

"ನಿನ್ನ ಸಂಶೋಧನೆ ಸಾಗಲಿ. ಅದು ಸಿದ್ಧವಾಗೋ ವರೆಗೂ ಅದನ್ನು ಒಪ್ಪೋಕೆ ಸಾಧ್ಯವಿಲ್ಲ'.

'ಸಿದ್ಧವಾಗೋದು ಅಂದ್ರೆ?"

"ನಿನ್ನ ಹಾಗೇನೇ ಮತ್ತೆ ಹತ್ತು ಜನ ರಾವಣನ ಕುಲದವ್ರೇ ಅಂತ ಉದ್ದುದ್ದ ಭಾಷಣ ಬಿಗಿದು ಸಮರ್ಥಿಸಿ ಗ್ರಂಥ ಬರೆದು ಪಿ. ಎಚ್. ಡಿ. ಪಡೆಯೋದು...."

"ನಿಮ್ಮ ತಮಾಷೆ ಬಿಡಿ."

'ತಮಾಷೆಯಲ್ವೆ ಇದು. ಗುಣದಲ್ಲಿ ರಾವಣ, ರಾಮ ಎಂತ ಅನ್ಯೋನ್ಯಾಲ ಹೋಯ್ತು. ಮಾನವ್ರ ತಮ್ಮ ಅಲಂಕಾರ, ತಮ್ಮ ಗುಣ, ತಮ್ಮ ರೀತಿ ತಮ್ಮ ಧ್ವನಿ, ತಮ್ಮ ಚಂದವನ್ನೇ ಮಾಡಿಕೊಳ್ಳಲು ಬಿಡುವಲ್ಲದೆ ತತ್ತರಿಸುತ್ತಿರುವಾಗ ಪತಿ ಭಾಷಾ ನಾರಿಯನ್ನು ಹೇಗೆ ಅಲಂಕರಿಸಿಯಾರು? ತಮ್ಮ ಅಲಂಕಾರಾದಿಗಳ ಅರ್ಥವನ್ನೇ ಮಾಡಿಕೊಳ್ಳಲಾರದವರು ಕಾವ್ಯದ ಅಲಂಕಾರಾದಿಗಳನ್ನು ಹೇಗೆ ಗುರುತಿಸಿಯಾರು?'

'ನಿಮ್ಮ ಲೆಕ್ಚರ್ ಸಾಕು ಬಿಡಿ. ನೀವನ್ನೋದಾದ್ರು ಏನು?'

"ಮತ್ತೇನು? ನೀನು ರಾವಣ —ರಾಮ—ಸೀತೆ—ರಾಮಾಯಣಾಂತ ಅಂದ್ರೆ ಯಾರಿಗೂ ಅರ್ಥವಾಗೋಲ್ಲಾಂದೆ. ಬಾಯಿ ಬಿಟ್ಟು ಸ್ಪಷ್ಟವಾಗಿ ಹೇಳದ್ರೇ ತಿಳಿದು ಕೊಳ್ಳಲಾರದವ್ರು ಮತ್ತೇನು ಮಾಡ್ಯಾರು?"

'ಅಯ್ತಪ್ಪ. ಈಗ ಪಾಕ್ ಆಕ್ರಮಣಕಾರರ ಬಗ್ಗೆ ಏನು ಮಾಡ್ತಾರಂತೆ?"

'ಇನ್ನು ಮಾಡೋದಾದ್ರೂ ಉಳಿದಿರೋದೇನು?"

'ಯಾಕೆ?"

'ನೋಡು, ನೀನು ಏನೇ ಹೇಳು, ಭಾರತ—ಪಾಕಿಸ್ತಾನಗಳು ಅಣ್ಣತಮ್ಮಂದಿರು ಇವುಗಳೇ ಹೋರಾಡುವುದೆಂದರೆ, ರಾಮಾಯಣವಲ್ಲ, ಮಹಾ ಭಾರತ. ಪಾಕಿಸ್ತಾನಿಗಳು ಮುಸಲ್ಮಾನರೆಂದು ಹೇಳಬಹುದಾದರೂ ಅವರೆಲ್ಲರೂ ಭಾರತೀಯ ಮೂಲದವರೇ, ಮತಾಂತರಗೊಂಡವ್ರೇ...ಹಾಗಿರುವಾಗ ಕುರುಕ್ಷೇತ್ರ ನಡೆಯುತ್ತಿದೆ. ಶಾಸ್ತ್ರಗಳ ಮಾತು ನಿಜವಾಗುವುದಾದರೆ, ಧರ್ಮವೇ ಜಯಿಸುತ್ತದೆ...."

"ಹೌದಪ್ಪ ಈಗ ಧರ್ಮ ಯಾರದ್ದೂಂತ?"

'ಯಾಕೆ?'

'ಅವರವರು ತಂತಮ್ಮದೇ ಧರ್ಮ-ನ್ಯಾಯ ಅಂತ....'

'ಅದು ಏನೇ ಇರಲಿ; ಶಾಸ್ತ್ರಗಳನ್ನು ನಂಬುವುದಾದರೆ, ಪರಮಾತ್ಮ ನೋಡ್ತಾನೇ ಇದ್ದಾನೆ; ಯಾರದ್ದು ಧರ್ಮವೆಂತ....'

'ಅಂತೂ ಇದೇ ಸಮಾಧಾನದಿಂದ ನಾವು ಮುಳ್ಳಿನ ಮೇಲೆ ಇನ್ನೂ ಎಷ್ಟು ಕಾಲ ನಡೆಯಬೇಕು?'

'ಧರ್ಮವು ಗೆಲ್ಲುವ ತನಕ...'

'ಇದು ಕಲಿಯುಗ ನೋಡಿ....'

'ಯುಗ ಕಲಿಯಾದ್ರೂ ಇರೋದು ಮಾನವರು ಮತ್ತು ಅಮಾನವರು ಮಾತ್ರ...'

'ನೋಡಿ ಮತ್ತೆ ನೀವು ಅಲಂಕಾರಿಕ ಭಾಷೆ ಸುರು ಮಾಡಿದ್ರಿ....'

'ನನಗೆ ಅರ್ಥವಾಯ್ತು ನೋಡು....'

'ನಿಮ್ಮ ಹತ್ರ ಮಾತಿಗೆ ಕೂತ್ರೆ ಬರ್ತ್ತೀ ಇಲ್ಲ.'

'ಬೇಡ, ಊಟಕ್ಕೆ ಕೂತುಕೋ...'

'ಹ್ಞಾಂ...ನೀರು ತಂದಿಟ್ಟಿದ್ದೇನೆ. ಬನ್ನಿ ಮತ್ತೆ....'

'ಬಾರದೇನಂತೆ? ಬಂದೇ ಬಿಟ್ಟೆ....'

'ಹ್ಞಾಂ...'

—ಗೋರಾ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಭಾರತಕ್ಕಾಗಿ ನೀವೇನು ಮಾಡಬಲ್ಲಿರಿ?

ಜಾಗೃತಿ

ಶ್ರೀ ಸ. ನಾರಾಯಣ.

ಪ್ರತಿ ವರ್ಷದ ಆಗಸ್ಟ್ ಹದಿನೈದನೆಯ ತಾರೀಕು ಭಾರತದ ಜನಕೋಟಿಯ ಮನದಲ್ಲಿ ನವಶಕ್ತಿಯನ್ನು ಮೂಡಿಸುವ ದಿನ. ಭಾರತದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ಪವಿತ್ರ ದಿನ.

೧೯೪೭ನೆಯ ಆಗಸ್ಟ್ ೧೫ನೇ ದಿನಾಂಕ ಭಾರತ ದಾಸ್ಯ ಶೃಂಖಲೆಯಿಂದ ಬಿಡುಗಡೆ ಹೊಂದಿ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿ ವಿಶ್ವದ ವಿವಿಧ ಸ್ವತಂತ್ರ ರಾಷ್ಟ್ರಗಳ ಸಾಲಿನಲ್ಲಿ ತಲೆ ಎತ್ತಿ ನಿಂತಿತು.

ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದ ರಾಷ್ಟ್ರ ಭಕ್ತರ ಆಸೆ ನೆರವೇರಿತು. ನಲ್ವತ್ತೇಳರ ಆಗಸ್ಟ್ ೧೫ರಂದು, ಸ್ವಾತಂತ್ರ್ಯ ಪ್ರಿಯರ ತ್ಯಾಗ, ಬಲಿದಾನ ಮತ್ತು ತನು ಮನ ಧನಗಳ ಅರ್ಪಣೆ ಫಲಕಾರಿಯಾಯಿತು. ಅಸೇತು ಹಿಮಾಚಲ ಪರ್ಯಂತ ಸ್ವಾತಂತ್ರ್ಯ ಜ್ಯೋತಿ ತನ್ನ ಬೆಳಕನ್ನು ಬೀರಿ ರಾಷ್ಟ್ರಕ್ಕೆ ನವಶಕ್ತಿಯನ್ನು ನೀಡಿತು.

ಪ್ರತಿ ವರ್ಷದಂತೆ ಈ ವರ್ಷವೂ ಸ್ವಾತಂತ್ರ್ಯ ದಿನೋತ್ಸವವನ್ನು ವೈಭವದಿಂದಲೇ ಆಚರಿಸುತ್ತೇವೆ. ಇದು ಹತ್ತೊಂಭತ್ತನೆಯ ಸ್ವಾತಂತ್ರ್ಯ ದಿನೋತ್ಸವ. ಭಾರತ ಸ್ವಾತಂತ್ರ್ಯ ಗಳಿಸಿ ಹದಿನೆಂಟು ವರ್ಷಗಳು ಸಂದವು. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಚರಿತ್ರೆ ಒಂದು ಬಗೆಯದು. ನಲವತ್ತೇಳನೆಯ ಆಗಸ್ಟ್ ೧೫ರಿಂದ ಹೊಸ ಅಧ್ಯಾಯ ಒಂದು ಆರಂಭವಾಯಿತು.

ಕಳೆದ ಹದಿನೆಂಟು ವರ್ಷಗಳು ಉಜ್ವಲವಾದುವು. ರಾಷ್ಟ್ರದ ಉನ್ನತಿ, ಜನತೆಯ ಸುಖ ಶಾಂತಿಯನ್ನೇ ಏಕತ್ರ ಮಂತ್ರವಾಗಿಟ್ಟುಕೊಂಡಿರುವ ಆಡಳಿತ ಪಕ್ಷ ಕಾಂಗ್ರೆಸ್ಸು ರಾಷ್ಟ್ರಕ್ಕೆ ಸ್ವಾತಂತ್ರ್ಯ ತಂದು ಕೊಡಲು ಹೋರಾಟ ನಡೆಸಿದಂತೆಯೇ ರಾಷ್ಟ್ರೋದ್ಧಾರ ಕಾರ್ಯದಲ್ಲಿಯೂ ಪ್ರಮುಖ ಪಾತ್ರ ವಹಿಸಿದೆ.

ರಾಷ್ಟ್ರಪಿತ ಗಾಂಧಿ, ದಕ್ಷ ಜನನಾಯಕ ನೆಹರೂರಂತಹ ಹಿರಿಯ ವ್ಯಕ್ತಿಗಳ ಕಾಂಗ್ರೆಸು ಇತ್ತೀಚಿನ ವರ್ಷಗಳು ದುರ್ಬಲವಾಗುತ್ತಿರುವುದು ಶೋಚನೀಯ, ದಕ್ಷ ನಾಯಕರು, ನಿಷ್ಠಾವಂತ ವ್ಯಕ್ತಿಗಳಿಲ್ಲದೆ ಪಕ್ಷ ದುರ್ಬಲವಾಗಿದೆ.

ಕಳೆದ ಹದಿನೆಂಟು ವರ್ಷಗಳಲ್ಲಿ ಸಾಕಷ್ಟು ಸಾಧನೆಯೂ ನಡೆದಿದೆ, ಪ್ರಗತಿಯೂ ಕಾಣಬರುತ್ತಿದೆ; ಸಮಸ್ಯೆಗಳೂ ಪ್ರಬಲವಾಗಿವೆ. ನಿರೀಕ್ಷಿತ-ಅನಿರೀಕ್ಷಿತ ಘಟನೆಗಳೂ ಸಾಲುಸಾಲಾಗಿ ನಡೆದು ಹೋಗಿವೆ. ಎಲ್ಲವನ್ನೂ ಸಹಿಸಿಕೊಂಡು ಅರೆಜೀವ ಕೂಡಿ ಜೀವವಾಗಿ ಬದುಕಿದ್ದಾನೆ ಬಡ ಭಾರತೀಯ.

ಔದ್ಯೋಗಿಕ, ವ್ಯಾಪಾರ-ವ್ಯವಹಾರ, ಶಿಕ್ಷಣ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಅದ್ಭುತ ಪ್ರಗತಿ ಕಾಣಬರುತ್ತಿದೆ. ಸ್ವಶಕ್ತಿಯಿಂದ ಅಲ್ಪವಾದರೂ ನೆರೆಯ ಮಿತ್ರರಾಷ್ಟ್ರಗಳಿಂದ ಸಾಲದ ರೂಪದಲ್ಲಿ, ಉದಾರ ನೆರವಿನ ಹೆಸರಿನಲ್ಲಿ ಹಣ ಪಡೆದು ಪ್ರಗತಿಗಾಗಿ ಪ್ರಯತ್ನಿಸುತ್ತಿದ್ದೇವೆ. ಪ್ರಗತಿಯ ಹಾದಿಯಲ್ಲಿ ಸಾಗುತ್ತಿರುವೆವಾದರೂ ಬವಣೆ ತೊಲಗಿಲ್ಲ.

ದಾಮೋದರ, ಭದ್ರಾ—ನಂಗಾಲ್, ಹೀರಾಕುಡ್, ತುಂಗಭದ್ರಾದಂತಹ ನೀರಾವರಿ ಯೋಜನೆಗಳು, ಅಸ್ಸಾಂ, ಬಿಹಾರ್‌ನಲ್ಲಿಯ ಪೆಟ್ರೋಲಿಯಂ ಉತ್ಪಾದನೆ, ಚಿತ್ತರಂಜನ್, ದುರ್ಗಾಪುರ, ಸಿಂಧ್ರಿ, ಭಿಲಾಯ್, ಬೆಂಗಳೂರು ಮೊದಲಾದ ಸ್ಥಳಗಳ ಕಾರ್ಖಾನೆಗಳು ನಮ್ಮ ಸಾಧನೆಯ ಪ್ರತೀಕ. ಅದಷ್ಟೇ ಹೆಮ್ಮೆ.

ಆಸೆಯನ್ನು ಕೈ ಬಿಟ್ಟ ಸಂದರ್ಭದಲ್ಲಿಯೂ ಭಾರತೀಯ ನಿರಾಶನಾಗಿಲ್ಲ. ಅದಷ್ಟೇ ಸಮಾಧಾನ. ನಮಗೆ ದೊರಕಿದುದು ಕೇವಲ ರಾಜಕೀಯ ಸ್ವಾತಂತ್ರ್ಯವಷ್ಟೆ. ಆರ್ಥಿಕವಾಗಿಯೇ ಆಗಲಿ, ಔದ್ಯೋಗಿಕ ಕ್ಷೇತ್ರದಲ್ಲಿಯೇ ಆಗಲಿ, ಉತ್ಪಾದನೆಯ ರಂಗದಲ್ಲಿಯೇ ಆಗಲಿ ಪರಿಪೂರ್ಣರಾಗಿಲ್ಲ. ಎಲ್ಲಕ್ಕೂ ನೆರೆ ರಾಷ್ಟ್ರಗಳ ಕಡೆಗೆ ಹಸ್ತ ಚಾಚಲೇ ಬೇಕಾಗಿದೆ.

ಕೃಷಿಯ ನಾಡಾದ ಭಾರತದಲ್ಲಿ ಜನತೆಗೆ ಸಾಕಷ್ಟು ಅನ್ನವೂ ದೊರೆಯುವ ಪರರಾಷ್ಟ್ರಗಳಿಂದ ಆಹಾರ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿರುವುದು ಎಲ್ಲರೂ ಅರಿತ ವಿಷಯ. ಇದು ದುರದೃಷ್ಟ. ಕಾರಣ ಅಂಧಶ್ರದ್ಧೆಯ ಪ್ರಭಾವವೇ? ಅಥವಾ ನೂತನ ವೈಜ್ಞಾನಿಕ ರೀತಿಯ ವ್ಯವಸಾಯವನ್ನು ನಡೆಸದಿರುವುದೆ?

ನಮ್ಮ ಸಮಸ್ಯೆಗಳು, ಒಂದಲ್ಲ, ಹತ್ತು, ಪ್ರಕೃತಿಯ ಪ್ರಕೋಪ, ವಿಶ್ವಾಸಘಾತುಕ, ನೆರೆ ರಾಷ್ಟ್ರಗಳ ಹಾವಳಿ, ಹಣದಾಸೆಗೆ, ಹೆಸರಿನ ಬಯಕೆಗೆ, ಅಧಿಕಾರದ ಪಿಶಾಚಿಗೆ ಬಲಿಯಾಗಿ ತಮ್ಮನ್ನು ತಮ್ಮ ರಾಷ್ಟ್ರವನ್ನು ಮಾರಿಕೊಳ್ಳಲು ಸಿದ್ಧವಿರುವ ರಾಷ್ಟ್ರ ಘಾತುಕರು — ಸಮಾಜ ಕಂಟಕರು, ದೇಶಭಕ್ತಿಯ ಹೆಸರಿನಲ್ಲಿ ದೇಶ ತಿನ್ನುವ ಪುಢಾರಿಗಳ, ಅಧ್ಯಕ್ಷ ಅಧಿಕಾರಿಗಳು-ಎಲ್ಲವೂ ಬಟ್ಟೆದ ಆಕಾರ.

ಎಲ್ಲಕ್ಕೂ ಮೂಲ ಸಮಸ್ಯೆ. ಅನ್ನ, ವಸ್ತ್ರ, ವಸತಿ, ವಿದ್ಯೆ ಉಚಿತವಾಗಿ ಎಲ್ಲರಿಗೂ ದೊರೆಯಬೇಕು. ಎಲ್ಲರ ಬಯಕೆಯೂ ಇದೇ. ಜನ ನಿಬಿಡವಾದ ಬಡ ಭಾರತದಲ್ಲಿ ಮೂಲತಃ ಈ ಸಮಸ್ಯೆಗಳು ಬಗೆಹರಿಯಬೇಕು. ಈ ಸಮಸ್ಯೆಗಳನ್ನು ಹರಿಸಲು ಸರ್ಕಾರ ಪ್ರಯತ್ನಿಸಿದೆ. ಈ ಸಮಸ್ಯೆ ಕಳೆದು ಸರ್ಕಾರ ಗುರಿಮುಟ್ಟಲು ಎಲ್ಲರ ಸಹಕಾರವೂ ಅವಶ್ಯಕ. ಬಯಸಿದುದು ಬೇಕೆಂದೊಡನೆಯೇ ಸಿದ್ಧವಾಗಿ ನಿಲ್ಲಲು ಸರ್ಕಾರ ಮಾಂತ್ರ ದಂಡವನ್ನು ಹಿಡಿದು ನಿಂತಿಲ್ಲ ಎಂಬುದು ಜನ ಮನಕ್ಕೆ ತಿಳಿಯಬೇಕು.

ಸಂಸಾರ, ಸಮಾಜ, ಸರಕಾರ ಎಲ್ಲೆಡೆಯಲ್ಲಿಯೂ ಭ್ರಷ್ಟಾಚಾರ. ಭ್ರಷ್ಟಾಚಾರ ಕಾನೂನಿನಿಂದ ಸದಾಚಾರ ಸಮಿತಿಯ ಮೂಲಕ, ಪೋಲೀಸ್ ಇಲಾಖೆಯ ಮೂಲಕ ನಿರ್ಮೂಲವಾಗುವುದೇ? ರಾಷ್ಟ್ರದ್ಯಂತ ಹಬ್ಬಿರುವ ಈ ಪ್ರಬಲ ರೋಗ ನಿವಾರಣೆಯಾಗುವುದೇ? ಇದಕ್ಕೆ ಔಷಧಿ ಚಿಕಿತ್ಸೆ ಇದೆಯೆ? ಗಾಂಧಿ ಮಂಡಿಸಿದ ತತ್ವಗಳೇನು? ನೆಹರೂ ಅನುಸರಿಸಿದ ಮಾರ್ಗ ಯಾವುದು?

ಪ್ರತಿ ವ್ಯಕ್ತಿಯ ಕೈ, ಮನ, ಮನೆಗಳು ಶುದ್ಧವಾಗಬೇಕು. ಅನ್ಯಾಯ—ಅನೀತಿಗಳನ್ನು ಖಂಡಿಸುವ, ನಿರೋಧಿಸುವ ಮನೋಧರ್ಮ ಬೆಳೆಯಬೇಕು. ಇನ್ನೊಬ್ಬರಿಗೆ ವಿವೇಕ ಹೇಳಲು ಹೋಗುವ ಬದಲು ನಮ್ಮನ್ನೂ ನಾವು ಶುದ್ಧಿ ಮಾಡಿಕೊಂಡು ನ್ಯಾಯವಾಗಿ ಬಾಳುವುದನ್ನು ಕಲಿಯಬೇಕು.

ಭಾಷಣಗಳಿಗಾಗಲಿ, ಭಾಷಣಕಾರರಿಗಾಗಲಿ ಕೊರತೆ ಇಲ್ಲ. ಉಪದೇಶ ಮುಖ್ಯವಲ್ಲ ಆಚರಣೆ ಮುಖ್ಯ ಗಾಂಧಿ ನುಡಿಯುವುದಕ್ಕಿಂತಲೂ ಮುಖ್ಯವಾಗಿ ಉತ್ತಮ ಸತ್ಯ ಸಂಗತಿಗಳನ್ನು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದರು. ಅನುಸರಿಸಿದರು. ಅದರಿಂದಲೇ "ಮಹಾತ್ಮ" ಅನ್ನಿಸಿಕೊಂಡರು.

ನಾವು ಅನುಕರಣೆ ಮಾಡಿದ್ದೇವೆ. ಬೇರೆಯವರಿಂದ ನಮಗೆ ಯಾವುದು ಅಗತ್ಯವಿತ್ತೋ ಅದನ್ನು ಬಿಟ್ಟು ಅನಾವಶ್ಯಕವಾದುದನ್ನು ಸುಲಭವಾಗಿ ಗ್ರಹಿಸಿ ಅಳವಡಿಸಿಕೊಂಡಿದ್ದೇವೆ. ನಮ್ಮ ಶಕ್ತಿ ನಮಗಿಲ್ಲವಾಯಿತು. ಬೇರೆಯವರ ಶಕ್ತಿ ಬಾರದಾಯಿತು ಒಟ್ಟಿನಲ್ಲಿ ತ್ರಿಶಂಕು ಸ್ವರ್ಗ.

ಹೊರಲಾರದ ಹೊರೆಗಳಿಂದ ಭಾರತೀಯನ ಬೆನ್ನು ಬಾಗಿದೆ. ಬದುಕಿ ಸತ್ತಿರುವ ಮನುಷ್ಯ ಆವನು!

ಯಾವ ಬಗೆಯ ಶಕ್ತಿ ನಮ್ಮಲ್ಲಿ ಅಡಗಿದೆ ಎಂಬುದು ತಿಳಿಯದಾಗಿದೆ. ಹಲವು ಸಮಸ್ಯೆ, ಹತ್ತು ಬಗೆಯ ಶೋಷಣೆಗಳಿಂದ ನಿಶ್ಯಕ್ತರಾಗಿದ್ದೇವೆ. ಚೀನಾ ಪಾಕಿಸ್ತಾನಗಳ ದುರಾಕ್ರಮಣ, ರಾಷ್ಟ್ರದ ಜನತೆಯ ಎದುರಿನಲ್ಲಿ ನಿಂತಿರುವ ಅನ್ನ, ವಸ್ತ್ರ, ವಸತಿಗಳ ಹಾಹಾಕಾರ ಇವು ಸಮಸ್ಯೆಯ ಅಗ್ನಿಜ್ವಾಲೆ. ಇದಕ್ಕೆ ಪರಿಹಾರ?

ನಮ್ಮ ಮೈ ನರನಾಡಿಗಳಲ್ಲಿ ಹರಿದಿರುವ ಪವಿತ್ರ ರಕ್ತದಲ್ಲಿ ಅದೇನೂ ಒಂದು ಬಗೆಯ ಜಡತೆ. ದಾಸ್ಯಭಾವ ನೆಲೆಯೂರಿದೆ. ಹನುಮ-ಭೀಮರ ಪರಾಕ್ರಮ, ರಾಮನ ಸತ್ಯನಿಷ್ಠೆ, ಶಿವಾಜಿ, ಝಾನ್ಸಿ ರಾಣಿ, ನೇತಾಜಿ, ವೀರಭಗತ್ ಇವರ ದೇಶಪ್ರೇಮದ ಹೊನಲು ಉಕ್ಕಿ ಹರಿಯಬೇಕು. ಜಡತೆಯನ್ನು ದೂರಮಾಡಿ ಭಾರತೀಯ ಸಿಂಹದಂತೆ ಒಮ್ಮೆ ಎದ್ದು ನಿಲ್ಲಬೇಕು. ಸಿಂಹ ಬಲ ನಮ್ಮಲ್ಲಿಯೋ ಇದೆ. ಅದು ಜಾಗೃತವಾಗಬೇಕಷ್ಟೆ.

ನಾಡಿನ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿದ ಭಾರತೀಯ ಬಂಧುಗಳ ಶ್ರಮ ನಿರರ್ಥಕವಾಗಬಾರದು ಗಾಂಧೀಜಿ ಕಂಡಿದ್ದ ರಾಮರಾಜ್ಯದ-ಸುಖೀರಾಜ್ಯದ ಕನಸು ಕಣ್ಮರೆಯಾಗಬಾರದು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣತೆತ್ತ ಪ್ರತಿ ವ್ಯಕ್ತಿಯ ಆತ್ಮವೂ ಆನಂದಿಸಬೇಕು. ಅವರ ಬಲಿದಾನ ಸಾರ್ಥಕವಾಗಬೇಕು.

ವಿಶ್ವದ ಹಿರಿಯ ರಾಜಕಾರಣಿ ಶಾಂತಿ ಪ್ರಿಯ ಮುತ್ಸದ್ದಿ ಭಾರತದ ಆಶಾ ಜ್ಯೋತಿ, ಜನ ನಾಯಕ ನೆಹರೂ ನಮ್ಮನ್ನಗಲಿ ಒಂದು ವರ್ಷ ಕಳೆದು ಹೋಯಿತ

(ಎಂಟನೇ ಪುಟ ನೋಡಿರಿ)

ಮತ್ತೊಂದು ಅಪೂರ್ವ
ಉಳಿತಾಯ ಯೋಜನೆ

"ಜೈಂಟ್
ಕ್ಯಾಶ್ ಸರ್ಟಿಫಿಕೇಟುಗಳು"

ಲಾಭದಾಯಕ ವೈಶಿಷ್ಟ್ಯಗಳು........

- 100/- ರೂಪಾಯಿ ಮತ್ತು 1,000/- ರೂಪಾಯಿ ಮೊತ್ತಗಳಲ್ಲಿ ಸಿಗುವುದು.
- ಸರ್ಟಿಫಿಕೇಟುಗಳನ್ನು ಪೂರ್ಣಾವಧಿಯ ಮುಂಚಿತವಾಗಿ ನಮೂದಿಸಲ್ಪಟ್ಟ ಬಡ್ಡಿಯೊಡನೆ ನಗದು ಮಾಡಬಹುದು.
- ಆರು ತಿಂಗಳು ದಾಟಿದ ಮೇಲೆ ನೀವು ತೊಡಗಿಸಿದ ಹಣ ಬೆಳೆಯಲಾರಂಭವಾಗುತ್ತದೆ. ಈಗ ತೊಡಗಿಸಿದ 100/- ರೂಪಾಯಿ 60 ತಿಂಗಳಲ್ಲಿ ರೂಪಾಯಿ 136-30 ಆಗುವದು.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಜಿಸ್ಟರ್ಡ್ ಆಫೀಸು: ಮಣಿಪಾಲ.

— ಅತ್ಯುತ್ತಮ ಬ್ಯಾಂಕಿಂಗ್ ಸೇವೆಗೆ —

ಭಾರತ ದರ್ಶನ

ದೇಶದಲ್ಲಿ ತೈಲೋದ್ಯಮಕ್ಕೆ ಉತ್ತಮ ಭವಿಷ್ಯ

ಆಧುನಿಕ ಜಗತ್ತಿನಲ್ಲಿ ಮೊತ್ತಮೊದಲನೆಯ ಬಾರಿ ಪೆಟ್ರೋಲಿಯಂ ತೈಲವನ್ನು ಮಾನವ ಬಳಸಿಕೊಂಡಿದ್ದು ದೀಪ ಹಚ್ಚುವುದಕ್ಕಾಗಿ ಮಾತ್ರ. ಈ ಶತಮಾನದ ಆದಿಯಲ್ಲಿ ಸೀಮೆ ಎಣ್ಣೆ ಮುಮ್ಮೂಲೆಯ ಕುಗ್ರಾಮಗಳಿಗೂ ಮುಟ್ಟಿತು. ಆದರೆ ತೈಲೋದ್ಯಮದ ಉತ್ಕರ್ಷಕ್ಕೆ ಮುಖ್ಯ ಕಾರಣ ಕಾರ್ ಎಂಜಿನ್‌ನ ಆವಿಷ್ಕಾರವೆಂದೇ ಹೇಳಬಹುದು. ಭಾರತದಲ್ಲಿ ಸರಿಯಾಗಿ ರಸ್ತೆಗಳೂ ಇರಲಿಲ್ಲ, ಮತ್ತು ಮೋಟಾರು ಕಾರ್‌ಗಳಂತೂ ಇರಲೇ ಇಲ್ಲ. ಹೀಗಾಗಿ ಜಗತ್ತಿನ ಇತರ ಭಾಗಗಳಲ್ಲಿ ತೈಲೋದ್ಯಮವು ಪ್ರಗತಿ ಸಾಧಿಸಿದಂತೆ ಭಾರತದಲ್ಲಿ ಅದು ಸಾಧ್ಯವಾಗಲಿಲ್ಲ.

ಪ್ರಾರಂಭದಲ್ಲಿ ದೇಶದಲ್ಲಿ ತೈಲ ಶೋಧನಾ ಕಾರ್ಯಗಳನ್ನು ಅಡಿವ ನಷ್ಟಿನಿಂದ ಮಾತ್ರ ಕೈಗೊಳ್ಳಲಾಯಿತು.

ಅಷ್ಟೇಕೆ ೧೯೫೦ರ ವರೆಗೆ ಬ್ರಿಟನ್ನಿನ ಭೂಗರ್ಭ ಶಾಸ್ತ್ರಜ್ಞರು ಅಸ್ಸಾಂನಲ್ಲಿ ಕೇವಲ ೫೦ ಲಕ್ಷ ಮೆಟ್ರಿಕ್ ಟನ್‌ಗಳಷ್ಟು ತೈಲ ನಿಕ್ಷೇಪ ಮಾತ್ರವಿರುವುದಾಗಿ ಅಂದಾಜು ಮಾಡಿದ್ದರು. ದೇಶದ ಉಳಿದ ಭಾಗಗಳಲ್ಲಿ ತೈಲ ಶೋಧನೆ ನಡೆಸುವುದು ನಿಷ್ಪ್ರಯೋಜನವೆಂದೂ ಆ ತಜ್ಞರು ಸಾರಿದ್ದರು. ಆದರೆ ರಾಷ್ಟ್ರೀಯ ಸರ್ಕಾರವು ದೇಶದ ಆಗುಹೋಗುಗಳ ಹೊಣೆ ಹೊತ್ತ ನಂತರ ತೈಲಾನ್ವೇಷಣೆ ಕಾರ್ಯ ಚುರುಕುಗೊಂಡಿತು.



ಇಂಡಿಯನ್ ಓಯಿಲ್ ಕಂಪೆನಿಯ ವ್ಯಾನು ತೈಲ ತುಂಬಿಸಿಕೊಳ್ಳುತ್ತಿದೆ.



ಅಂಕಲೇಶ್ವರದಲ್ಲಿ ತೈಲ ನಿಕ್ಷೇಪವನ್ನು ಪತ್ತೆಮಾಡಿದ ಯಂತ್ರ ಸ್ಥಾವರ.

ತೈಲ ನಿಕ್ಷೇಪಗಳು

೧೯೫೬ರಲ್ಲಿ ತೈಲ ಮತ್ತು ಪ್ರಾಕೃತಿಕ ಅನಿಲ ಆಯೋಗ ಸ್ಥಾಪನೆಗೊಂಡಿತು. ಅನೇಕ ದೇಶಗಳ ತಜ್ಞರ ನೆರವಿನೊಂದಿಗೆ ತೈಲ ಶೋಧನೆ ಕಾರ್ಯ ನಡೆಸಿದಾಗ ದೇಶದಲ್ಲಿ ಭಾರಿ ಪ್ರಮಾಣದಲ್ಲಿ ತೈಲ ನಿಕ್ಷೇಪಗಳಿವೆ ಎಂಬ ವಿಷಯ ಗೊತ್ತಾಯಿತು. ಗುಜರಾತ್ ಪ್ರದೇಶವೊಂದರಲ್ಲಿಯೇ ೫ ಕೋಟಿ ಮೆಟ್ರಿಕ್ ಟನ್‌ಗಳಷ್ಟು ತೈಲವಿರುವುದಾಗಿ ಅಂದಾಜು ಮಾಡಿದ್ದಾರೆ. ಅಸ್ಸಾಂನಲ್ಲಿ ೫ ಕೋಟಿ ಮೆಟ್ರಿಕ್ ಟನ್‌ಗಳಿಗೂ ಅಧಿಕ ಪ್ರಮಾಣದ ತೈಲವಿರುವುದಾಗಿ ರುಜುವಾತು ದೊರಕಿದೆ. ಜೊತೆಗೆ ಗುಜರಾತಿನಲ್ಲಿ ಸುಮಾರು ೧,೧೦೦ ಕೋಟಿ, ಅಸ್ಸಾಂನಲ್ಲಿ ೩,೨೦೦ ಕೋಟಿ ಘನ ಅಡಿಗಳಷ್ಟು ಅನಿಲವಿರುವುದಾಗಿ ಖಚಿತವಾಗಿದೆ.

ತೈಲೋತ್ಪಾದನೆ

ದೇಶದಲ್ಲಿ ತೈಲೋತ್ಪಾದನೆ ತೀವ್ರವಾಗಿ ಏರುತ್ತಿದೆ. ಆದರೂ ದೇಶದ ಅಗತ್ಯಗಳಿಗೆ ತಕ್ಕಷ್ಟು ತೈಲ ಮಾತ್ರ ಉತ್ಪಾದನೆಯಾಗುತ್ತಿಲ್ಲ. ತೈಲ ಮತ್ತು ಪ್ರಾಕೃತಿಕ ಅನಿಲ ಆಯೋಗವು ೧೯೬೩–೬೪ರಲ್ಲಿ ಸುಮಾರು ೧೦ ಲಕ್ಷ ಮೆಟ್ರಿಕ್ ಟನ್‌ಗಳಷ್ಟು ತೈಲವನ್ನು ಉತ್ಪಾದಿಸಿದೆ. ೧೯೬೬ರ ವೇಳೆಗೆ ಆಯೋಗವು ಸುಮಾರು ೩೦ ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಮತ್ತು ೧೯೭೦ರ ವೇಳೆಗೆ ಸುಮಾರು ೧ ಕೋಟಿ ಮೆಟ್ರಿಕ್ ಟನ್‌ಗಳಷ್ಟು ತೈಲವನ್ನು ಉತ್ಪಾದಿಸುವ ನಿರೀಕ್ಷೆಯಿದೆ.

ತೈಲ ಶುದ್ಧೀಕರಣ ಕಾರ್ಖಾನೆಗಳ ಸಾಮರ್ಥ್ಯ

ಈ ಶತಮಾನದ ಆದಿಭಾಗದಲ್ಲಿ ದಿ



ಅಸ್ಸಾಂನ ನೂನಮತಿ ತೈಲ ಶುದ್ಧೀಕರಣ ಕೇಂದ್ರದ ಒಂದು ನೋಟ.



ರೈಲ್ವೆ ತೈಲ ಟ್ಯಾಂಕರುಗಳಿಗೆ ಅಂಕಲೇಶ್ವರದ ಎಣ್ಣೆ ತುಂಬಿಸಲಾಗುತ್ತಿದೆ.

ಇತಿಹಾಸದತ್ತ ಒಂದು ದೃಷ್ಟಿ

ಅಮರ ಆಗಸ್ಟ್

ಲೇಖಕರು: ಶ್ರೀ ಬ. ನ. ಸುಂದರರಾಯರು.

ಆಗಸ್ಟ್ ಮಾಹೆ; ೧೯೪೭ರ ಆಗಸ್ಟ್ ಮಾಹೆ— ಭಾರತದ ಇತಿಹಾಸದಲ್ಲಿ ನವ ಸ್ವರ್ಣಾಕ್ಷರಗಳಲ್ಲಿ ಕಂಗೊಳಿಸುತ್ತಿರುವ ಮಾಹೆ, ಆಗಸ್ಟ್ ಮಾಹೆಯ ಹದಿನೈದನೆಯ ತೇದಿ— ಭಾರತೀಯರ ಪವಿತ್ರ ಸ್ಮರಣೆಯ ದಿನ……

ಇಂದಿಗೆ ಹದಿನೆಂಟು ವರ್ಷಗಳ ಹಿಂದೆ – ಮಹಾತ್ಮಾ ಗಾಂಧೀಜಿಯವರ ಅಹಿಂಸಾತ್ಮಕವಾದ ಸುಗಾಗ ಅವಿಶ್ರಾಂತವಾದ ಹೋರಾಟದ ಫಲವಾಗಿ ಭಾರತ ಸ್ವಾತಂತ್ರ್ಯ ಕಂಡಿತು. ಎರಡು ಶತಮಾನಗಳ ಕಾಲ ಆಂಗ್ಲರ ಮುಷ್ಟಿಯಲ್ಲಿದ್ದ ಭಾರತ ಅಂದು ಬಿಡುಗಡೆ ಹೊಂದಿತು.

೧೯೪೭ನೆಯ ಇಸವಿಯ ಒಂಭತ್ತು ದಶಕಗಳ ಹಿಂದೆ— ಅಂದರೆ ೧೮೫೭ನೆಯ ಇಸವಿ, ಅದಕ್ಕೂ ಹತ್ತು ದಶಕಗಳ ಹಿಂದೆ ಅಂದರೆ ೧೭೫೭ನೆಯ ಇಸವಿ— ಈ ಮೂರು ಇಸವಿಗಳೂ ಭಾರತದ ಚರಿತ್ರೆಯಲ್ಲಿ ಪ್ರಾಮುಖ್ಯ ಸ್ಥಾನವನ್ನು ಗಳಿಸಿವೆ.

ವ್ಯಾಪಾರಕ್ಕೆಂದು ಬಂದ ಇಂಗ್ಲಿಷರು ದಿನಕ್ರಮೇಣ ಇಲ್ಲಿಯೇ ನೆಲೆ ನಿಂತು, ಬಲವಾದ ಕೋಟೆಗಳನ್ನು ಕಟ್ಟಿ, ಸೈನ್ಯವನ್ನೂ ಸಜ್ಜುಗೊಳಿಸಿ ಕೊಟ್ಟರು. ಇಷ್ಟಾದ ಮೇಲೆ ತಾವ ಬಂದ ಉದ್ದೇಶವನ್ನೇ ಬದಿಗಿಟ್ಟು ಇಲ್ಲಿಯ ನೆಲದ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸತೊಡಗಿದರು. ಇದಕ್ಕೆ ಕಾರಣವಾವರೂ ಅವರಿಗೆ ಅನಾಯಾಸವಾಗಿಯೇ ಒದಗಿ ಬಂತು. ಕಜ್ಜಾದ ಸೈನ್ಯಕ್ಕೆ ಯುದ್ಧ ಮಾಡುವ ಕಾತುರ. ಆದಕ್ಕಾಗಿ ಆ ಸೈನ್ಯ ಹೆಚ್ಚು ಕಾಲ ಕಾಯಬೇಕಾಗಲಿಲ್ಲ. ಇಂಗ್ಲಿಷರು ಕಲ್ಕತ್ತೆಯಲ್ಲಿ ಕೋಟೆ ಕಟ್ಟಿದುದನ್ನು ವಿರೋಧಿಸಿದ ಬಂಗಾಳದ ನವಾಬ ಸಿರಾಜುದ್ದೀನನ ಮೇಲೆ ಈ ಸಜ್ಜಾದ ಸೈನ್ಯ ಯುದ್ಧವನ್ನು ಹೂಡಿತು. ಇದೇ ಸೈನ್ಯ ಯುದ್ಧವನ್ನು ಹೂಡಿತು. ಇದೇ ಕದನವೇ ಬ್ರಿಟಿಷ್ ಇತಿಹಾಸದಲ್ಲಿ "ಪ್ಲಾಸೀ ಕದನ"ವೆಂದು ಹೆಸರೊಂದಿದೆ. ರಾಬರ್ಟ್ ಕ್ಲೈವನ ಕಾಲದಲ್ಲಿ ಈ ಕದನ ನಡೆಯಿತು. ಇದು ನಡೆದುದು ೧೭೫೭ರಲ್ಲಿ.

ಪ್ಲಾಸೀ ಕದನ ನಡೆದ ನೂರು ವರ್ಷಕ್ಕೆ ಸರಿಯಾಗಿ, ಅಂದರೆ ೧೮೫೭ರಲ್ಲಿ ಭಾರತದಾದ್ಯಂತ ರಾಜಕೀಯ ಆಂದೋಲನವೇ ನಡೆದು ಹೋಯಿತು. ಈ ಆಂದೋಲನವನ್ನು ಆಂಗ್ಲ ಲೇಖಕರು ಸಿಪಾಯಿಗಳ ಬಂಡಾಯ, ಸಿಪಾಯಿಗಳ ದಂಗೆ, ದೊಡ್ಡ ದಂಗೆ—ಎಂದು ಮುಂತಾಗಿ ಕರೆದರು. ಬ್ರಿಟಿಷರ ಮೇಲೆ ತಿರುಗಿಬಿದ್ದವರು ಸೈನಿಕರೇ ಆಗಿದ್ದುದರಿಂದ ಆ ಸಂದರ್ಭಕ್ಕೆ ಆ ಹೆಸರು ಒಂದು ದೃಷ್ಟಿಯಿಂದ ಸರಿಯಾಗಿ ಕಂಡಿತಾದರೂ ವಾಸ್ತವವಾಗಿ ಹಾಗಲ್ಲ.

೧೮೫೭ರ ರಾಜಕೀಯ ಕ್ರಾಂತಿಯ ಬಗ್ಗೆ ಇತಿಹಾಸ ರೂಪವಾದ ವ್ಯಾಖ್ಯೆಯನ್ನು ಬರೆದ ಭಾರತೀಯರಲ್ಲಿ ವೀರ ಸಾವರ್ಕರರೇ ಮೊದಲಿಗರು. ತಮ್ಮ ಪುಸ್ತಕಕ್ಕೆ ಅವರು ಇಟ್ಟಿರುವ ಶಿರೋನಾಮೆಯೇ ಆಕರ್ಷಕವಾಗಿದೆ, "ಭಾರತದ ಸ್ವಾತಂತ್ರ್ಯ ಸಮರ"— ಈ ಶಿರೋನಾಮೆ ಎಷ್ಟು ಆಕರ್ಷಕ!!

'೧೮೫೭ರಲ್ಲಿ ಏನು ವಿಶೇಷ ನಡೆಯಿತು?' ಎಂದು ಯಾರನ್ನು ಕೇಳಿದರೂ ಥಟ್ಟನೆ ಅವರಿಂದ ನಮಗೆ ಸಿಕ್ಕುವ ಉತ್ತರ—"ಸಿಪಾಯಿ ದಂಗೆ"—ಎಂದು. ಹಾಗಾದರೆ ಅದು ಸಿಪಾಯಿಗಳ ದಂಗೆಯೇ? ಅಲ್ಲ, ಎಂದಿಗೂ ಅಲ್ಲ, ಬಂಡಾಯ ಹೂಡಿದವರು ಸಿಪಾಯಿಗಳೇ ಸರಿ. ಅವರು ಹೂಡಿದಾದರೂ ಏತಕ್ಕೆ? ಬ್ರಿಟಿಷ್ ಮುಷ್ಟಿಯಿಂದ ಪಾರಾಗಿ, ಸ್ವಾತಂತ್ರ್ಯಗಳಿಸುವುದಕ್ಕೆಂದು. ೧೮೫೭ರಲ್ಲಿ ನಡೆದ ಕ್ರಾಂತಿಗೆ ಯಾವ ಹೆಸರನ್ನಿಡಬೇಕೆಂಬ ವಿಚಾರದಲ್ಲಿ ಸಾಕಷ್ಟು ವಾದ ವಿವಾದ ನಡೆಯಿತು. ಈ ಬಗ್ಗೆ ಸಾವರ್ಕರರು ಬಹಳವಾಗಿ ಚರ್ಚೆ ನಡೆಸಿದ್ದಾರೆ. ಈ ಗ್ರಂಥ ಪ್ರಕಟವಾದುದಾದರೂ ಎಲ್ಲಿ? ಇದೇ ಒಂದು ಆಶ್ಚರ್ಯದ ಸುದ್ದಿ. ಇಂಗ್ಲೆಂಡಿನಲ್ಲಿಯೇ ಪ್ರಥಮತಃ ಪ್ರಕಟಣೆಗೊಂಡ ಈ ಗ್ರಂಥ ಗುಪ್ತವಾಗಿ ಭಾರತಕ್ಕೆ ಬಂದಿತು.

ಮಾಜಿ ರಾಜ್ಯಪಾಲರಾದ ಶ್ರೀ ರಂಗನಾಥ ದಿವಾಕರರ ಸ್ವಾತಂತ್ರ್ಯ ಯುದ್ಧ ಎಂಬ ಗ್ರಂಥದಲ್ಲಿಯೂ ಈ ಬಗ್ಗೆ ಸಾಕಷ್ಟು ವಿವರಣೆ ದೊರೆಯುತ್ತದೆ. ಅವರ ಮಾತುಗಳಲ್ಲಿಯೇ ನೋಡೋಣ – "೧೮೫೭ರ ಪರಿಸ್ಥಿತಿಯೇ ಬೇರೆಯಾಗಿತ್ತು. ಅಂದಿನ ಬ್ರಿಟಿಷ್ ಆಳ್ವಿಕೆಯ ರೂಪವೂ ಬೇರೆಯಾಗಿತ್ತು. ಸಿಪಾಯಿ ಬಂಡಾಯದ ಕಥೆಯು ರೋಮಾಂಚಕಾರಿಯಾದಷ್ಟೇ ಬಹು ರೂಪಿಯೂ ಆಗಿದೆ; ಬಹು ಮುಖಿಯೂ ಆಗಿದೆ. ಸಹಸ್ರ ಹೆಡೆಗಳನ್ನುಳ್ಳ ಸರ್ಪಕ್ಕೆ ಇದನ್ನು ನಾವು ಹೋಲಿಸಬಹುದು. ಕಾಲ ಪುರುಷನ ಈ ವಿಶ್ವರೂಪ ದರ್ಶನಕ್ಕೆ ಅರ್ಥಮಾಡಲು ಅನೇಕರು ತಂತಮ್ಮ ಭಾಷ್ಯಗಳನ್ನು ಬರೆದಿದ್ದಾರೆ. ೧೮೫೭ರಿಂದ ೧೯೪೭ರ ವರೆಗೆ ಅತ್ಯಂತ ಮಹತ್ವದ ಘಟನೆ ಯಾವುದು—ಎಂದರೆ 'ಸಿಪಾಯಿ ಬಂಡಾಯ'—ಎಂದೇ ಜನರು ಸಹಜ ಉತ್ತರ ಹೇಳುವರು."

ಕರ್ನಾಟಕದಲ್ಲಿ ಬಹಳ ಬೇಗ ಇಂಗ್ಲಿಷರ ಕುಟಿಲ ನೀತಿಯನ್ನು ಅರಿತವರೆಂದರೆ ಹೈದರಾಲಿ ಮತ್ತು ಟಿಪ್ಪುಸುಲ್ತಾನ್, ಇವರು ಜೀವಂತರಾಗಿರುವ ವರೆಗೂ ತಮ್ಮ ರಾಜ್ಯದಲ್ಲಿ ಕಾಲಿಡಲು ಇಂಗ್ಲಿಷರಿಗೆ ಅವಕಾಶ ಕೊಡಲಿಲ್ಲ. ಇಂಗ್ಲಿಷರ ಬೇಧ ನೀತಿಗಳನ್ನು ಇವರು ಮೊದಲೇ ಅರಿತಿದ್ದರು. ಎಂದಾದರೊಂದು ದಿನ ಇಂಗ್ಲಿಷರು ಎಲ್ಲಾ ರಾಜ್ಯಗಳನ್ನೂ ಕಬಳಿಸುವರೆಂಬುದನ್ನು ಇವರು ಊಹಿಸಿಯೇ ಇದ್ದರು. ಇಂಗ್ಲಿಷರಿಗೆ ಸಹಿಸಲಾರದ ಕಿರುಕುಳಕೊಟ್ಟು, ಅವರ ಸೊಕ್ಕನ್ನು ಮುರಿದವನೆಂದರೆ ಹೈದರನೊಬ್ಬನೇ. ಅವನು ಬದುಕಿರುವ ವರೆಗೂ ಇಂಗ್ಲಿಷರಿಗೆ ತಲೆ ನೋವೇ ಆಗಿದ್ದ. ಅತನೆಯ ಅವನ ಮಗನೂ ರಣಭಯಂಕರ ಟೀಪೂ ಸುಲ್ತಾನ್. ಇಂಗ್ಲಿಷರಿಗೆ ಶರಣಾಗತರಾಗದ ವೀರರೆಂದರೆ ಈ ತಂದೆ ಮಗ—ಮಾತ್ರ. ಟೀಪೂಸುಲ್ತಾನನ ಪ್ರತಿಯೊಂದು ರಕ್ತಕಣಗಳಲ್ಲಿಯೂ ಬ್ರಿಟಿಷರ ಶತ್ರುತ್ವದ ಲಕ್ಷಣಗಳು ತುಂಬಿ ತುಳುಕಾಡುತ್ತಿದ್ದುವು. ಇಂಗ್ಲಿಷರೊಡನೆ ತನ್ನ ರಾಜ್ಯಕ್ಕಾಗಿ ಹೋರಾಡಿದ ಟಿಪ್ಪು ರಣರಂಗದಲ್ಲಿಯೇ ಮಡಿದ.

ಉತ್ತರ ಭಾರತದಲ್ಲಿ ಸ್ವಾತಂತ್ರ್ಯ ಸಮರ ಆರಂಭವಾದುದು ೧೮೫೭ರಲ್ಲಿ. ಆದರೆ ಕರ್ನಾಟಕದಲ್ಲಿ ಅದಕ್ಕಿಂತ ಮೊದಲು ವರ್ಷಗಳ ಹಿಂದೆಯೇ ಸ್ವಾತಂತ್ರ್ಯ ಸಮರದ ನಾಂದಿ ಹಾಡಿ ಆಗಿತ್ತು. ಈ ಸಮರಕ್ಕೆ ಮೊಟ್ಟಮೊದಲು ನಾಂದಿ ಹಾಡಿದವಳೆಂದರೆ ಕಿತ್ತೂರು ಚೆನ್ನಮ್ಮ. ಕಿತ್ತೂರಿನಲ್ಲಿ ಮೊಟ್ಟಮೊದಲು ಸ್ವಾತಂತ್ರ್ಯ

ಲೇಖಕರು

ಕಾಳಗ ೧೮೨೪ರಲ್ಲಿಯೇ ನಡೆದು ಥ್ಯಾಕರೆ ಅದಕ್ಕೆ ಬಲಿಯಾದ. ಇದಾದ ಐದು ವರ್ಷಗಳ ಮೇಲೆ ಸಂಗೊಳ್ಳಿ ರಾಯಣ್ಣ ನಾಡಿಗಾಗಿ ಹೋರಾಡಿದ. ಹಿಂದೆಯೇ ಸುರಪುರ, ಸಂಗೊಳ್ಳಿ, ಹಿಂದಗಿ, ಬಾದಾಮಿ, ಹಲಗಲಿ, ಮುಂಡರಗಿ ನರಗುಂದಗಳಲ್ಲಿ ಸಮರಗಳು ನಡೆದುವು.

ಕರ್ನಾಟಕದಲ್ಲಿ ಬಂಡಾಯ ಸಮಾಪ್ತಿಯಾದದು ೧೮೫೮–೫೯ರಲ್ಲಿ ಆ ವೇಳೆಗೆ ಕೇವಲ ಒಂದು ವರ್ಷಗಳ ಹಿಂದಷ್ಟೇ ಅಂದರೆ ೧೮೫೭–೫೮ರಲ್ಲಿ ಉತ್ತರ ಭಾರತದ ಮೀರತ್‌ನಲ್ಲಿ ಸ್ವಾತಂತ್ರ್ಯ ಸಮರ ಆರಂಭವಾಯಿತು. ಈ ಸಮರ ೧೮೫೮ನೆಯ ವರ್ಷ ಪೂರ್ತಿ ಅಂದರೆ ಒಂದುವರೆ ವರ್ಷಗಳ ಕಾಲ ನಡೆಯಿತು. ಆ ಸಮರವನ್ನಡಗಿಸಿ ಇಂಗ್ಲಿಷರು ಸಾಮ್ರಾಜ್ಯ ಸ್ಥಾಪನೆ ಮಾಡಿದರು. ವಿಕ್ಟೋರಿಯಾ ರಾಣಿ ಈ ಸಾಮ್ರಾಜ್ಯದ ಚಕ್ರವರ್ತಿನಿಯಾಗಿ ಮೆರೆದಳು.

ಆ ಘಟನೆಯಾಗಿ ಐವತ್ತು ವರ್ಷಗಳು ಕಳೆದ ನಂತರ ಭಾರತೀಯರ ಮತ್ತೆ ಎಚ್ಚರಗೊಳ್ಳುವ ಸೂಚನೆ ಕಂಡುಬರತೊಡಗಿತು. 'ಸ್ವರಾಜ್ಯ ಜನ್ಮಸಿದ್ಧ ಹಕ್ಕು' ಎಂಬ ವಾದವನ್ನು ಲೋಕಮಾನ್ಯ ತಿಲಕರು ೧೯೦೫ರಲ್ಲಿ ಜನತೆಯ ಮುಂದಿಟ್ಟರು. ಇದೇ ತತ್ವಕ್ಕಾಗಿಯೇ ಮಹಾತ್ಮಾ ಗಾಂಧೀಜಿಯವರು ಬಹುಮಾಗಿ ಹೋರಾಡಿ ಸಫಲರಾದರು. ಹಿಂದೆ ನಡೆದ ಸ್ವಾತಂತ್ರ್ಯ ಸಮರಗಳಂತೆ ಗಾಂಧೀಜಿಯವರಂತೆ ಯಾವ ಸೈನಿಕನೂ ನೆರವಾಗಲಿಲ್ಲ. ಅಹಿಂಸೆ, ಸತ್ಯಾಗ್ರಹ—ಎಂಬ ಇಬ್ಬರು ಸೈನಿಕರನ್ನು ಮಾತ್ರ ಗಾಂಧೀಜಿ ದೃಢವಾಗಿ ನಂಬಿ ತಾವು ಹೂಡಿದ ಸ್ವಾತಂತ್ರ್ಯ ಸಮರದಲ್ಲಿ ಸಂಪೂರ್ಣವಾಗಿ ಜಯಶಾಲಿಗಳಾದರು.

ತತ್ಫಲವಾಗಿ ಭಾರತ ೧೯೪೭ರ ಆಗಸ್ಟ್ ತಿಂಗಳಿನಲ್ಲಿ ಬಂಧನದಿಂದ ಬಿಡುಗಡೆಯಾಯಿತು. ಇಂಗ್ಲಿಷರ ಸಾಮ್ರಾಜ್ಯಶಾಹಿ ತೊಂಭತ್ತು ವರ್ಷಗಳ ಆಡಳಿತವನ್ನು ಸಂಹರಿಸಿ ಭಾರತದಿಂದ ಕಾಲ್ಕಿತ್ತಿತು. ಇಂದೀಗ ನಾವು ಸ್ವಾತಂತ್ರ್ಯ ಕಂಡು ಹದಿನೆಂಟು ವರ್ಷಗಳು ಸಂದಿವೆ. ಹತ್ತೊಂಭತ್ತನೆಯ ವರ್ಷ ಕಾಲಿಟ್ಟಿದೆ.

ಈ ಸ್ವಾತಂತ್ರ್ಯವನ್ನುಳಿಸಿಕೊಂಡು, ಭಾರತವನ್ನು ಉನ್ನತ ರೀತಿಯಲ್ಲಿ ನಿಲ್ಲಿಸಲು ಹೋರಾಡಬೇಕಾದುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.

ಗ್ವಾಹಟಿನಲ್ಲಿ ತೈಲ ಶುದ್ಧೀಕರಣ ಕಾರ್ಖಾನೆಯೊಂದನ್ನು ಸ್ಥಾಪಿಸಲಾಯಿತು. ಐದನೇ ದಶಕದಲ್ಲಿ ಖಾಸಗಿ ಕ್ಷೇತ್ರದಲ್ಲಿ ಮೂರು ತೈಲ ಶುದ್ಧೀಕರಣ ಕಾರ್ಖಾನೆಗಳನ್ನು ಸ್ಥಾಪಿಸುವ ವರೆಗೂ ದಿಗ್ಬಾಯ್ ತೈಲ ಶುದ್ಧೀಕರಣ ಕಾರ್ಖಾನೆಯ ಸಾಮರ್ಥ್ಯವನ್ನು ಹೆಚ್ಚಿಸಲು ಸಾಧ್ಯವಾಗಲಿಲ್ಲ. ೧೯೬೦ರ ಆದಿಭಾಗದ ವೇಳೆಗೆ ಈ ಕಾರ್ಖಾನೆಗಳ ಉತ್ಪಾದನಾ ಸಾಮರ್ಥ್ಯವನ್ನು ಸುಮಾರು ೬ ಲಕ್ಷ ಮೆಟ್ರಿಕ್ ಟನ್‌ಗಳಿಗೆ ಹೆಚ್ಚಿಸಲಾಯಿತು. ೧೯೬೦ರಲ್ಲಿ ಸರ್ಕಾರಿ ಕ್ಷೇತ್ರದಲ್ಲಿ ಮೊದಲನೆಯ ಬಾರಿ ನೂನ್‌ಮಟಿಯಲ್ಲಿ ತೈಲ ಶುದ್ಧೀಕರಣ ಕಾರ್ಖಾನೆಯೊಂದನ್ನು ಸ್ಥಾಪಿಸಲಾಯಿತು. ಈ ವರ್ಷ ಬರೌನಿಯಲ್ಲಿ ೨೦ ಲಕ್ಷ ಟನ್‌ಗಳಷ್ಟು ಉತ್ಪಾದನಾ ಸಾಮರ್ಥ್ಯವುಳ್ಳ ಕಾರ್ಖಾನೆಯೊಂದನ್ನು ಪ್ರಾರಂಭಿಸಲಾಯಿತು.

ಅಂಕ್ಲೇಶ್ವರದಲ್ಲಿ ಪತ್ತೆ ಮಾಡಿದ ತೈಲದ ಶುದ್ಧೀಕರಣಕ್ಕಾಗಿ ಗುಜರಾತಿನಲ್ಲಿ ಮೂರನೆಯ ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತಿದೆ, ಈ ಕಾರ್ಖಾನೆಯು ವರ್ಷಂಪ್ರತಿ ೩೦ ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಉತ್ಪಾದನಾ ಸಾಮರ್ಥ್ಯ ಪಡೆದಿರುವುದು. ಈ ಕಾರ್ಖಾನೆಯ ಮೊದಲನೆಯ ಯಂತ್ರ ಭಾಗವನ್ನು ಇದೀಗ ಕಾರ್ಯಾಚರಣೆಗೆ ತೊಡಗಿಸಲಾಗುತ್ತಿದೆ. ಈ ಎಲ್ಲ ತೈಲ ಶುದ್ಧೀಕರಣ ಕಾರ್ಖಾನೆಗಳು ಇಡೀಯಾಗಿ ಸರ್ಕಾರಿ ಉದ್ಯಮಗಳಾಗಿವೆ. ಕೊಚಿನ್‌ನಲ್ಲಿ ತೈಲ ಶುದ್ಧೀಕರಣ ಕಾರ್ಖಾನೆಯೊಂದನ್ನು ನಿರ್ಮಿಸಲಾಗಿದೆ. ಇನ್ನೊಂದು ಕಾರ್ಖಾನೆಯನ್ನು ಮದರಾಸ್‌ನಲ್ಲೂ ಸ್ಥಾಪಿಸುವ ಉದ್ದೇಶವಿದೆ. ನಾಲ್ಕನೆಯ ಯೋಜನೆಯಲ್ಲಿ ಪೂರ್ವಭಾರತದಲ್ಲಿ ಹಲ್ದಿಯಾ ಬಂದರಿಗೆ ಸಮೀಪದಲ್ಲಿ ಒಂದು ತೈಲ ಶುದ್ಧೀಕರಣ ಕಾರ್ಖಾನೆಯನ್ನೂ ವಾಯುವ್ಯ ಭಾಗದಲ್ಲಿ ಒಂದು ಕಾರ್ಖಾನೆಯನ್ನೂ ಸ್ಥಾಪಿಸುವ ಉದ್ದೇಶವಿದೆ. ಈ ಎಲ್ಲ ಹೊಸ ಕಾರ್ಖಾನೆಗಳು ಮತ್ತು ಈಗಿರುವ ಕಾರ್ಖಾನೆಗಳ ವಿಸ್ತರಣೆಯಿಂದಾಗಿ ದೇಶದ ತೈಲ ಆಗತ್ಯಗಳನ್ನು ಬಹು ಮಟ್ಟಿಗೆ ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆಂದು ನಿರೀಕ್ಷಿಸಲಾಗಿದೆ. ಈ ದಿಶೆಯಲ್ಲಿ ಭಾರತವು ಬಹುಮಟ್ಟಿಗೆ ಸ್ವಾವಲಂಬನೆ ಸಾಧಿಸುತ್ತಿರುವುದು ಸಂತೋಷದಾಯಕ ವಿಷಯವಾಗಿದೆ.

ಜಾಗೃತಿ

(ಐದನೇ ಪುಟದಿಂದ)

ಆ ಮಹಾಪುರುಷನ ನಿಸ್ವಾರ್ಥ ಪೂರ್ಣ ದೇಶ ನಿಷ್ಠೆ, ಜನಸೇವೆ, ಶಾಂತಿ ಬಯಕೆ ನಮ್ಮ ಮನಸ್ಸಿಗೆ ಹೊಸ ಶಕ್ತಿ ನೀಡಬೇಕು. ದಿ. ನೆಹರೂರವರ ಮನದಾಸೆ ಆಕಾಂಕ್ಷೆಗಳು ನಿಜವಾಗಬೇಕು.

ಸ್ವಾತಂತ್ರ್ಯ ಪೂರ್ವದ "ಒಂದೇ ಮಾತರಂ"ಧ್ವನಿ ಮತ್ತೊಮ್ಮೆ ಭಾರತೀಯರ ಹೃದಯದಲ್ಲಿ ಪ್ರತಿಧ್ವನಿಸಬೇಕು. ಭಾರತದ ಸ್ವಾತಂತ್ರ್ಯ ಜ್ಯೋತಿ ಶತ ಶತ ಸಂವತ್ಸರಗಳ ವರೆಗೆ ಬೆಳಗುತ್ತಿರಬೇಕು.

ಸ್ವಾತಂತ್ರ್ಯ ದಿನದ ಶುಭ ಸಂದರ್ಭದಲ್ಲಿ ಎಲ್ಲರ ಮನದಲ್ಲಿಯೂ ಒಂದು ಪ್ರತಿಜ್ಞಾ ವಿಧಿ ನಡೆಯಬೇಕು. 'ಭಾರತಕ್ಕಾಗಿ ಬದುಕುತ್ತೇನೆ; ಭಾರತೀಯನಾಗಿ ಬಾಳುತ್ತೇನೆ"—ಎಂದು.

ಭಾರತ ನನಗೆ ಏನನ್ನು ಮಾಡಿದೆ; ಏನು ಮಾಡಲಿದೆ ಎಂದು ಪ್ರಶ್ನಿಸಬೇಡಿ. 'ಭಾರತಕ್ಕಾಗಿ ನೀವೇನು ಮಾಡಬಲ್ಲಿರಿ, ಏನು ಮಾಡಿದ್ದೀರಿ?" ಎಂಬುದಕ್ಕೆ ಉತ್ತರಿಸಿ.

ರಾಷ್ಟ್ರಕ್ಕೆ ಕಷ್ಟ ಪ್ರಶ್ನೆಗಳೂ ಇವೆ. ಸಮಸ್ಯೆಗಳೂ ಇವೆ. ಪರಿಹಾರವೂ ಇವೆ.

ನಮ್ಮನ್ನು ರಕ್ಷಿಸಿಕೊಳ್ಳುವ ಶಕ್ತಿ ಮೊದಲು ನಮಗೆ ಬರಬೇಕು. ಹೇಡಿಯ ಕೈಯಲ್ಲಿ ಶಕ್ತಿ, ಕೋವಿ ಇದ್ದರೂ ಅದ್ಕೇ ಇಲ್ಲದಾದವರು ಕಷ್ಟ. ವೀರನಿಗೆ, ಧೈರ್ಯಶಾಲಿಗೆ ಯಾವ ಆಯುಧ ಇಲ್ಲವಾದರೂ ಹೋರಾಡುತ್ತೇನೆ ಎಂಬ ಆತ್ಮ ಶಕ್ತಿ, ಸ್ವಾಭಿಮಾನ ಮಾತ್ರ ಇದ್ದರೆ ಸಾಕು. ಆ ವನು ಗೆಲ್ಲಲೂ ಬಲ್ಲ; ಬದುಕಲೂ ಬಲ್ಲ.

ರಾಷ್ಟ್ರಭಕ್ತಿ, ರಾಷ್ಟ್ರಾಭಿಮಾನ, ಸತ್ಯ, ಶಾಂತಿ, ಅಹಿಂಸೆಗಳ ಅಭಿಮಾನ ಮೂಡಿ ಬರಬೇಕು. ಎಲ್ಲ ಶಕ್ತಿಗಳಿಗೂ ಮೊದಲು ಆತ್ಮ ಶಕ್ತಿ ಬೆಳೆಯಬೇಕು. ನೂರು ಆಟಂಬಾಂಬುಗಳಿಗಿಂತಲೂ ಮಿಗಿಲಾದುದು ಆತ್ಮ ಶಕ್ತಿ. ನವಜಾಗೃತಿ. ಭಾರತೀಯರ ಮನೆ— ಮನೆಗಳಲ್ಲಿ ಮೂಡಿ ಬರಲಿ. ಸ್ವಾತಂತ್ರ್ಯ ಜ್ಯೋತಿ ಭಾರತೀಯರೆಲ್ಲರಿಗೆ ಸತ್ಯದ ಹಾದಿಯನ್ನು ತೋರಲಿ ಎಂದು ಮನಸಾರ ಹಾರೈಸೋಣ-

"ವಂದೇ ಮಾತರಂ"

ಚಾಲಕರಿಗೆ ಜೀವ ಭಾರವಾಗಿರಬಹುದು ಆದರೆ, ಬೀದಿ ಹೋಕರ ಜೀವಕ್ಕೆ ಬೆಲೆ ಬೇಡವೆ?

ನೀವು ಯಾವುದೇ ಒಂದು ದಿನಪತ್ರಿಕೆಯನ್ನಾದರೂ ತೆಗೆದು ನೋಡಿ. ಅದರಲ್ಲಿ ಅಪಘಾತಕ್ಕೊಳಗಾಗಿ ಸತ್ತವರ ಸುದ್ದಿಯೋ, ಆಸ್ಪತ್ರೆಗಳಿಗೆ ಸೇರಿಸಲ್ಪಟ್ಟು, ಚಿಂತಾಜನಕವಾಗಿರುವವರ ಸುದ್ದಿಯೋ ಇದ್ದೇ ತೀರಬೇಕು. ಅಪಘಾತ ಎನ್ನುವುದು ಅಷ್ಟು ಸರ್ವಸಾಧಾರಣವಾಗಿ ಹೋಗಿದೆ. ವಾಹನ ಓಡಿಸುವವರ ತಲೆ ಸರಿಯಾಗಿದ್ದಲ್ಲಿ ಪಾದಚಾರಿಗಳ ಜೀವಕ್ಕೆ ಬೆಲೆ ಕೊಡದೇ ಇರುವುದಿಲ್ಲ. ತನ್ನ ಹೆಂಡತಿ ಮೋರೆ ತಿವಿದಿದ್ದನ್ನೋ, ತಲೆ ಸಣ್ಣಗೆ ನೋಯುತ್ತಿರುವುದನ್ನೋ ಚಿಂತಿಸುತ್ತಾ, ಮೊಗಲೇ-ಅಜಂತೆ ಧೂಮಪಾನ ಮಾಡುತ್ತಾ, ರಸ್ತೆ ಎಂದರೆ ಇವರ ಕಾಕನ ಸ್ವತ್ತು ಎಂಬಂತೆಯೇ ಬೇಜವಾಬ್ದಾರಿಯಿಂದ ವಾಹನಗಳನ್ನೋಡಿಸುವದರಿಂದ ಎಷ್ಟೋ ಜನ ನಿರಪರಾಧಿಗಳು ತಾವು ಯಾವ ತಪ್ಪನ್ನೂ ಮಾಡದಿದ್ದರೂ ಮರಣ ದಂಡನೆಯನ್ನು ಅನುಭವಿಸುತ್ತಿದ್ದಾರೆ.

ಕೈಲಿಗೆ ಸಿಕ್ಕು ಮರಣ.....ಲಾರಿ ಹರಿದು ಸಾವು—ಟ್ರಕ್ಕಿನ ಬಾಯಿಗೆ ಸಿಕ್ಕು ಬಾಲಕನ ಮೃತ್ಯು....ಗಾಡಿಗೂ, ಬಸ್ಸಿಗೂ ಢಿಕ್ಕಿ; ಗಾಡಿಯಲ್ಲಿದ್ದವನ ಎತ್ತುಗಳ ಸಾವು ...!!!-ಒಂದೇ, ಎರಡೇ. ದಿನ ಬೆಳಗಾದರೆ ಇದೇ ದಂದಿ. ಹೀಗೆ, ಇಡೀ ಜಗತ್ತಿನಲ್ಲಿ ಅಪಘಾತಕ್ಕೊಳಗಾಗಿ ದಿನವೊಂದಕ್ಕೆ ಸಾಯುವವರ ಸರಾಸರಿ ಸಂಖ್ಯೆ ಎಷ್ಟು? ಕೈಯನ್ನೋ, ಕಾಲನ್ನೋ ಕಳೆದುಕೊಂಡು ಮುಗಿದೇ ಹೋಯಿತೆನ್ನುವ ಸ್ಥಿತಿಯಲ್ಲಿ ಆಸ್ಪತ್ರೆಗೆ ಸೇರಿಸಲ್ಪಟ್ಟವರ ಸಂಖ್ಯೆ ಎಷ್ಟು ಎಂಬುದನ್ನು ಕೇಳುವುದರಿಂದಲೇ ಹೃದಯ ಸ್ಪಂದನವು ನಿಂತು ಹೋದೀತು.

೧೨೦೦ ಮರಣಗಳು ...೪೦,೦೦೦ ಜನರಿಗೆ ಗಾಯ!!

ಇದು ಜಗತ್ತಿನ ಸಂಖ್ಯೆ. ಈ ಸಂಖ್ಯೆ ಹೆಚ್ಚಬಹುದೇ ವಿನಾ ಕುಗ್ಗಲಾರದು, ಈ ಉರಿಯುವ ಸಮಸ್ಯೆಗೆ ಕಾರಣವೇನು? ಇದಕ್ಕೆ ಪರಿಹಾರವೆಂಬುದೇ ಇಲ್ಲವೇ? ಇದೆಯೋ, ಏನೋ! ಆದರೆ, ಇನ್ನೇ ಇದೆ ಎಂದು ಧೈರ್ಯವಾಗಿ ಹೇಳುವುದು ಬಲು ಕಷ್ಟ.

ಜಗತ್ತಿನ ವೈದ್ಯ ಪಂಡಿತರೆಲ್ಲಾ ಅಪಘಾತಗಳಿಗೆ ಕಾರಣಗಳೇನು ಎಂದು ಕಂಡು ಹಿಡಿಯುವುದರಲ್ಲಿ ತೀವ್ರವಾಗಿ ತೊಡಗಿದ್ದಾರೆ. ದೇಹಸ್ವಾಸ್ಥ್ಯವಿಲ್ಲದವರೂ, ಎಂದೂ ನರಳುತ್ತಿರುವವರೂ ವಾಹನಗಳನ್ನು ಓಡಿಸಲು ತೊಡಗುವುದರಿಂದಲೇ ರಸ್ತೆ ದುರಂತಗಳಲ್ಲಿ ನೇಕಡಾ ಐವರಷ್ಟು ನಡೆಯುತ್ತಿವೆಯೆಂದು ತಜ್ಞರು ತಿಳಿಸುತ್ತಾರೆ. "ನಿಮ್ಮಂತಹ ರೋಗಿಗಳು, ಆರೋಗ್ಯಭಾಗ್ಯವಿಲ್ಲದವರು ಕಾರನ್ನು ಓಡಿಸುವುದು ಬಹಳ ತಪ್ಪು. ಇದರಿಂದ ನಿಮಗೂ ಅಪಾಯ, ನಿಮಗಿಂತ ಹೆಚ್ಚಾಗಿ ಬೀದಿಗಳಲ್ಲಿ ನಡೆದಾಡುವವರಿಗೆ ಇನ್ನೂ ಹೆಚ್ಚಿನ ಅಪಾಯ"ವೆಂದು ವೈದ್ಯರು ತಮ್ಮಲ್ಲಿಗೆ ಬರುವ ರೋಗಿಗಳಿಗೆ ಉಪದೇಶ ಮಾಡುತ್ತಾರೆ. ಆದರೆ ಅವರ ದಪ್ಪ ತಲೆಗಳಲ್ಲಿ ಈ ಹಿತೋಪದೇಶ ನುಗ್ಗಲು ಸಾಧ್ಯವಾದರಷ್ಟೇ? ಕೊನೆಯ ಪಕ್ಷ ಇಂತಿಷ್ಟು ಕಾಲವಾದರೂ ನೀವು ಸಾರಥ್ಯ ಕೈಕೊಳ್ಳಬೇಡಿ" ಎಂದು ಕೇಳಿಕೊಳ್ಳುವ ವೈದ್ಯರೂ ಇದ್ದಾರೆ.

ವುರ್ಜ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ವಿಶೇಷ ತಜ್ಞರಾಗಿರುವ ಪಶ್ಚಿಮ ಜರ್ಮನಿಯ ಡಾ|| ಹೆಚ್. ಫ್ರಾಂಕ್ ಎಂಬುವರು ಈ ವಿಷಯದಲ್ಲಿ ತಾವು ನಡೆಸಿದ ಪರಿಶೀಲನೆಗಳ, ಅವುಗಳ ಫಲಿತಾಂಶಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ. ಮನುಷ್ಯನಲ್ಲಿ ಮನೆಮಾಡಿಕೊಂಡಿರುವ ವ್ಯಾಧಿಗಳಿಗೂ, ಅಪಘಾತಗಳಿಗೂ ಯಾವ ರೀತಿಯ ಸಂಬಂಧವಿದೆಯೆಂಬುದರಲ್ಲಿ ಪೂರ್ಣ ವಿವರಗಳಿವೆ.

ಹೃದಯದ ಸಂಬಂಧದ, ಮತ್ತು ರಕ್ತ ಪರಿಚಲನೆಗೆ ಸಂಬಂಧಿಸಿದ ವ್ಯಾಧಿಗಳಿಂದ ಬಳಲುತ್ತಿರುವರು ವಾಹನಗಳಿಂದ ಬಲು ದೂರವಿರಬೇಕೆಂದು ಫ್ರಾಂಕರ ಅಭಿಪ್ರಾಯ. ಹೃದಯ ವಿಕಾರಕ್ಕೊಳಗಾದವರು ಚೇತರಿಸಿಕೊಳ್ಳಲು ಕನಿಷ್ಠ ಪಕ್ಷ ಆರುತಿಂಗಳುಗಳ ಅವಧಿ ಬೇಕು. ಹೃದಯ ಮಾಯುವುದಕ್ಕೆ ಈ ಅವಧಿ ಅತ್ಯಾವಶ್ಯಕ. ಅವರು ಪೂರ್ಣ ವಿಶ್ರಾಂತಿ ಪಡೆಯದಿದ್ದಲ್ಲಿ, ಮತ್ತೆ ಅಘಾತವುಂಟಾಗುವ ಸಂಭವ ಅತಿ ಹೆಚ್ಚಾಗಿರುತ್ತದೆ. ಇಂತಹ ರೋಗಿಗಳು ಈ ಉಪದೇಶವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಅಲಕ್ಷ್ಯಮಾಡಿ ಹೋಗುವವರು ತಮ್ಮ ಜೀವನಕ್ಕೆ ಬೆಲೆ ಕೊಡದೇ ಇರಬಹುದು. ಆದರೆ, ಬೀದಿಯಲ್ಲಿ ಹೋಗುತ್ತಿರುವ ಜನರ ಜೀವನಕ್ಕೆ ಬೆಲೆಯಿದೆ ಎಂಬುದನ್ನು ಅವರು ಮರೆಯಬಾರದು. ಅಂತಹವರ ಪಾಲಿಗೆ ಯಮನಾಗಲು ಇವರಿಗೆ ಯಾವ ಅಧಿಕಾರವೂ ಇರುವುದಿಲ್ಲ!

ಮಧುಮೇಹ ಪೀಡಿತರದ್ದೂ ಇದೇ ಕಥೆ. ಥಕ್ಕನೆ ರೋಗದಿಂದ ಬಳಲುತ್ತಿರುವವರಾರೂ ಸಾರಥ್ಯ ನಡೆಸಕೂಡದೆಂದು ಹೇಳಲು ಸಾಧ್ಯವಾಗದು. ಆದರೂ ಹದಿನೈದು ವರ್ಷಗಳಿಗಿಂತ ಹೆಚ್ಚಾಗಿ ಡೈಯಾಬಿಟೀಸ್ ಮೆಲ್ಲಿಟಸ್ ಎಂಬ ರೋಗದಿಂದ ನರಳುತ್ತಿರುವವರು ಖಂಡಿತ ಡ್ರೈವರನ ಸ್ಥಾನವನ್ನೇರಕೂಡದು. ಅವರ ದೇಹ ಸಮತೋಲನ ಸ್ಥಿತಿಯಲ್ಲಿರುತ್ತದೆಂದು ನಿಖರವಾಗಿ ನುಡಿಯಲು ಸಾಧ್ಯವೇ ಇಲ್ಲ. ಯಾವಾಗ ಏನಾದರೂ, ತಾವು ವಾಹನವನ್ನು ಓಡಿಸುತ್ತಿದ್ದೇವೆಂಬುದನ್ನೇ ಅವರಿಂದ ಮರೆಸುವಂತಹ ರೀತಿಯಲ್ಲಿ ಬದಲಾವಣೆಗಳು ನಡೆದು ಹೋದರೂ ಅಚ್ಚರಿಯಿಲ್ಲ.

ಪಶ್ಚಿಮ ಜರ್ಮನಿಯಲ್ಲಿ ೩೫,೦೦೦ ಕ್ಕೂ ಹೆಚ್ಚಿನ ಸಾರಥಿಗಳು ದಿನವೂ ಇನ್‌ಸೂಲಿನ್ ಅನ್ನೇ ನಂಬಿದ್ದಾರೆ. ದೀರ್ಘ ಪ್ರಯಾಣಾನಂತರ ದೇಹದಲ್ಲಿನ ರಕ್ತ, ಸಕ್ಕರೆ ಇವುಗಳ ಮಟ್ಟ ಕುಗ್ಗಬಹುದು. ಆಘಾತಕ್ಕೊಳಗಾಗುವ ಸೂಚನೆಗಳು ಕಂಡು ಬರಬಹುದು. ಹೀಗಾದಲ್ಲಿ ಸಕ್ಕರೆ ರೋಗದವರು ಅತಿ ಗಡಿಬಿಡಿಯ ರಸ್ತೆಗಳಲ್ಲಿ ಹತೋಟಿ ತಪ್ಪುವುದರಲ್ಲಿ ಅಚ್ಚರಿಯೇ ಇಲ್ಲ. ಇನ್‌ಸೂಲಿನ್ನನ್ನು ತೆಗೆದುಕೊಳ್ಳುವುದರ ಮಾತ್ರಕ್ಕೆ ಕಾರನ್ನು ಓಡಿಸಬಹುದೆಂಬರ್ಥವಿಲ್ಲ. ಇಂಥ ರೋಗಿಗಳು ರಾತ್ರಿ ಕಾಲದಲ್ಲಂತೂ ಸಾರಥ್ಯವನ್ನು ಕೈಗೊಳ್ಳಲೇ ಕೂಡದು. ಮಧುಮೇಹಿಗಳು ವೇಗವಾಗಿ ವಾಹನವನ್ನು ಓಡಿಸಕೂಡದು. ಇಂತಹವರು ಜಾಹೀರಾತುಗಳಲ್ಲಿರುವ ಔಷಧಗಳನ್ನೆಲ್ಲಾ ನುಂಗುತ್ತಿರಬಾರದು. ಅಂತಹವುಗಳನ್ನು ತೆಗೆದುಕೊಳ್ಳುವ ಮುನ್ನ ವೈದ್ಯರನ್ನು ಕೇಳುವುದು ಅತ್ಯಾವಶ್ಯಕ. ಏನೇ ಆಗಲಿ ತಮಗಾಗಿ ಅಲ್ಲದಿದ್ದರೂ, ಬೀದಿಯ ನಾಗರಿಕರಿಗಾಗಿಯಾದರೂ ಇವರು ಸಾರಥ್ಯ ಬಿಡುವುದೊಳ್ಳೆಯದು.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪುಟ್ಟನ ಡೈರಿಯಿಂದ

—ಕೆ. ಜಿ. ಶೆಟ್ಟಿ, ಕಡಂದಲೆ.

●

ಅನಾವರಣ

ತಾವು ಮಾಡಿದ ಕುಂಬಳ ಕಾಯಿ ಗಾತ್ರದ ಅಪರಾಧಕ್ಕೆ ಮುಸುಕೆಳೆದು, ಇನ್ನೊಬ್ಬರ ಸಾಸಿವೆ ಕಾಳು ಗಾತ್ರದ ತಪ್ಪುಗಳ ಅನಾವರಣ ಸಮಾರಂಭ ನೆರವೇರಿಸಿ ತಾವು ಸಂಭಾವಿತರೆನ್ನಿಸಿಕೊಳ್ಳುತ್ತಾರೆ!

o o o

ಹಣ ಮತ್ತು ಚಿಂತೆ

ಕೈಯಲ್ಲಿ ಕಾಸಿಲ್ಲದಾಗ ಮನುಷ್ಯ ತಲೆ ಕೆರೆದು ಕೊಳ್ಳುತ್ತಾನೆ—ಹಣಕ್ಕಾಗಿ ಏನು ಮಾಡಲಿ? ಅಂತ. ಕಾಸಿದ್ದಾಗ? ಆಗಲೂ ಅದೇ ತಲೆಯನ್ನು ಕೆರೆದುಕೊಂಡೇ ಇರುತ್ತಾನೆ—ಇದ್ದುದಕ್ಕೆ ಇನ್ನಷ್ಟು ಹೇಗೆ ಕೂಡಿಸಲಿ? ಅಂತ.

o o o

ಮಾತು ಮತ್ತು ಕೃತಿ

ಮಹಾತ್ಮಾ ಗಾಂಧಿಯವರು ನೀಡಿದ ತತ್ವ-ನೀತಿಗಳ ಎಂಜಲನ್ನೇ ಮೆಲುಕಾಡಿ ಸುಖವಾಗಿ ಬದುಕಿದವರೆಷ್ಟೋ ಮಂದಿ ಇದ್ದಾರೆ ನಮ್ಮಲ್ಲಿ. ಆದರೆ ಅವರು ನಡೆದ ದಾರಿಯಲ್ಲೇ ಮುಂದೆ ನಡೆವ ಬದುಕಿದವರಿಲ್ಲ!

o o o

ಸುಖ—ದುಃಖ

ಸುಖವನ್ನು ಹುಡುಕಿಕೊಂಡು ಹೋಗುವವರು ಹೆಚ್ಚು ಹೆಚ್ಚಾಗಿ ದುಃಖದ ದಾರಿಯನ್ನೇ ತುಳಿಯುತ್ತಾರೆ.—ಜೇನಿನ ಸಿಹಿಯನ್ನು ಸವಿಯಬೇಕೆಂದು ಬಯಸುವವರು ಒಂದೆರಡು ಜೇನುನೊಣಗಳ ಹೊಡೆತವನ್ನಾದರೂ ತಿನ್ನಲೇಬೇಕು!

o o o

ಪ್ರಚಾರಕಾರ್ಯ

ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಮೊದಲೇ ನಾವು ಪ್ರಚಾರ ಕಾರ್ಯ ಪ್ರಾರಂಭಿಸುತ್ತೇವೆ. ಆದರೆ, ಕೆಟ್ಟ ಕೆಲಸಗಳನ್ನು ಮಾಡಿದ ಮೇಲೂ ಅದು ನನ್ನಿಂದಾಯಿತೆಂದು ಹೇಳಿಕೊಳ್ಳುವುದಿಲ್ಲ.

o o o

ಒಂದಕ್ಕೊಂದು

ನಮ್ಮಲ್ಲಿ ನ್ಯಾಯವಾಗಿ ಆಗಬೇಕಾದ ಕೆಲಸಗಳೆಲ್ಲ, ಗರ್ಭದೊಳಗೇ ಇವೆ. ಅವಕ್ಕಿನ್ನೂ ಪ್ರಸವ ಮುಹೂರ್ತ ಬರಲಿಲ್ಲ!-ಆಗಬಾರದ್ದು ತಿಂಗಳು ಭರ್ತಿಯಾಗುವುದಕ್ಕೆ ಮೊದಲೇ ಹೊಟ್ಟೆಯೊಳಗಿಂದ ಹೊರಗೆ ಬರುತ್ತವೆ!

o o o

ಮೂಢ ನಂಬಿಕೆ

ಕಲ್ಲಿನ ವಿಗ್ರಹವನ್ನೇ ದೇವರೆಂದು ನಂಬಿ ಎಲ್ಲರೂ ಸುತ್ತು ಬಂದು ಅಡ್ಡ ಬೀಳುತ್ತಾರೆ ಆದರೆ, ಆ ಕಲ್ಲು ದೇವರಲ್ಲವೆಂದು ಎಲ್ಲರಿಗೂ ಗೊತ್ತಿದೆ!

o o o

ಹಣ ಮತ್ತು ಗುಣ

ಕಿಸೆಯಲ್ಲಿ ಕಾಸಿಲ್ಲದಾಗ ಕಣ್ಣಿಗೆ ಕಾಣದವರ ಕಷ್ಟಗಳನ್ನೂ ನೆನೆದು ಮನುಷ್ಯ ಕನಿಕರಪಡುತ್ತಾನೆ. ಕಿಸೆ ತುಂಬ ಕಾಸು ಇದ್ದಾಗ? ಕಣ್ಣೆದುರಲ್ಲೇ ಕಾಡಿ, ಬೇಡಿ ಕಾಲಾಡುವವನನ್ನೂ ಒದೆವ ಕಲ್ಲೆದೆಯವನಾಗುತ್ತಾನೆ!

o o o

ಯೋಗ್ಯತೆಯ ಬೆಲೆ

ಮನೆ ಬಾಗಿಲಿಗೆ ಬೇಡಲು ಬಂದವರಿಂದ "ಅಯ್ಯಾ ಪುಣ್ಯಾತ್ಮರೇ" ಎಂದು ಕರೆಯಿಸಿಕೊಳ್ಳುವ ಯೋಗ್ಯತೆ ದೊಡ್ಡದಲ್ಲ. ಮನೆಯಲ್ಲೇ ಹೊಂದಿ ಬಾಳುವವರಿಂದ "ಪುಣ್ಯಾತ್ಮನಪ್ಪಾ" ಎಂದು ಹೇಳಿಸಿಕೊಳ್ಳುವ ಯೋಗ್ಯತೆ ಹೆಚ್ಚಿನದು!

ಮುಂಬೈ ಪತ್ರ

ಮುಂಬೈ, ಆಗಸ್ಟ್ 1ರಂದು ಮುಂಬೈಯ ಸುಪ್ರಸಿದ್ಧ ಷಣ್ಮುಗಾನಂದ ಸಭಾಗಾರದಲ್ಲಿ ಬಂಟರ ಯಾನೆ ನಾಡವರ ಸಂಘದವರು ನಿರ್ಮಿಸಲಿರುವ ತಾಂತ್ರಿಕ ಶಾಲಾ ಕಟ್ಟಡದ ಧನಸಹಾಯಾರ್ಥವಾಗಿ ಏರ್ಪಡಿಸಿದ ಯಕ್ಷಗಾನ ನಾಟಕ ಮಹೋತ್ಸವದ ಮೊತ್ತಮೊದಲನೇ ಪ್ರದರ್ಶನ ಮುಂಬೈಯ ಮೇಯರ್ ಶ್ರೀ ಮಾಧವನ್ ಅವರಿಂದ ಉದ್ಘಾಟಿಸಲ್ಪಟ್ಟಿತು. ದಕ್ಷಿಣ ಕನ್ನಡ ಜಿಲ್ಲೆಯ ಸುಪ್ರಸಿದ್ಧ ವೇಷಧಾರಿಗಳೆನಿಸಿದ ಸರ್ವಶ್ರೀ ಅಳಿಕೆ ರಾಮಯ್ಯ ರೈ, ಬೋಳಾರ ನಾರಾಯಣ ಶೆಟ್ಟಿ, ನಾರಾಯಣ ಹೆಗ್ಡೆ, ಮುಂತಾದವರ ಕೂಡುವಿಕೆಯಿಂದ ಮುಂಬೈಯ ನರಸಿಂಹ ಯಕ್ಷಗಾನ ಮಂಡಳಿ ಅವರು "ಕುರುಕ್ಷೇತ್ರ" ಎಂಬ ಯಕ್ಷಗಾನ ಬಯಲಾಟವನ್ನು ಆಡಿ ತೋರಿಸಿದರು. ಮುಂಬೈಯ ವಿವಿಧ ಭಾಗಗಳಲ್ಲಿ ಪ್ರದರ್ಶಿತವಾಗಲಿರುವ ಎಳೆಂಟು ಬಯಲಾಟಗಳಲ್ಲಿ ಇದು ಮೊತ್ತಮೊದಲನೆಯದು. ಮುಂಬೈಯ ಅಧ್ಯಮಾನ್ಯನೀಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಒಂದು ಉತ್ತಮ ಕಾರ್ಯವನ್ನು ಸಫಲಗೊಳಿಸಿದುದು ಸ್ಮರಣೀಯ.

ಕರ್ನಾಟಕ ಫ್ರೀ ನೈಟ್ ಹೈಸ್ಕೂಲ್, ಬಂಟರ ಯಾನೆ ನಾಡವರ ಸಂಘದ ಧರ್ಮಾರ್ಥ ವಾಚನಾಲಯ ಮುಂತಾದ ಬಹುವಿಧ ಕಾರ್ಯಗಳಿಂದ ಈಗಾಗಲೇ ಮುಂಬೈಯಲ್ಲಿ ಪ್ರಸಿದ್ಧವಾಗಿರುವ ಬಂಟರ ಯಾನೆ ನಾಡವರ ಸಂಘ ಇದೀಗ ಮುಂಬೈಯಲ್ಲಿ ತನ್ನದೇ ಆದ ಒಂದು ತಾಂತ್ರಿಕ ಶಾಲೆ, ಸಭಾಭವನಗಳನ್ನು ನಿರ್ಮಿಸಲು ನಿಶ್ಚಯಿಸಿದುದು ಉಲ್ಲೇಖನೀಯ. ಇದಕ್ಕಾಗಿ ಸ್ಥಳದಾನಗೈದ ಶ್ರೀಯುತ ಎಚ್. ಟಿ. ಭಂಡಾರಿ ಅವರು ಪ್ರಶಂಸಾಪಾತ್ರರು. ಡಾಕ್ಟರ್ ಯಚ್. ಬಾಲಕೃಷ್ಣ ಶೆಟ್ಟರ ನೇತೃತ್ವದಲ್ಲಿ ದುಡಿಯುತ್ತಿರುವ ಕಾರ್ಯಕಾರೀ ಸಮಿತಿ ಅಭಿನಂದನೀಯ.

ಈ ಸಮಾರಂಭದಲ್ಲಿಯೇ ಯಕ್ಷಗಾನ ಬಯಲಾಟಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟ ಶ್ರೀ ಕಲ್ಲಾಡಿ ಕೊರಗ ಶೆಟ್ಟರಿಗೆ ಪುಷ್ಪಹಾರ ಸಮರ್ಪಿಸಿ ಸನ್ಮಾನಗೈದುದು ಬಹು ಉಚಿತ ಕಾರ್ಯವೇ ಸರಿ.

—ಚಿರಂಜೀವಿ.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ

ಮೈಸೂರಲ್ಲಿರುವ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳ ಸಭೆಯು ತಾ. 26-7-65ರಂದು ನಿಲಯದ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ಸೇರಿ, ವಿದ್ಯಾರ್ಥಿ ಸಂಘಕ್ಕೆ ಈ ಕೆಳಗಿನ ಅಧಿಕಾರಿ ವರ್ಗವನ್ನು ಚುನಾಯಿಸಿತು.

ಪ್ಯಾಟ್ರನ್‌ರವರು ಅಧ್ಯಕ್ಷರು, ಶ್ರೀ ಎ. ಹೇಮನಾಥ ಶೆಟ್ಟಿ, ಉಪಾಧ್ಯಕ್ಷರು ಶ್ರೀ ಎಸ್. ನಾರಾಯಣ ಗೌಡ, ಕಾರ್ಯದರ್ಶಿ; ಶ್ರೀ ಬಿ. ಜಯಪ್ರಕಾಶ ಪೂಂಜ, ಜೊತೆ ಕಾರ್ಯದರ್ಶಿ, ಶ್ರೀ ಜಯ ಅಮೀನ್, ಕ್ರೀಡಾ ಕಾರ್ಯದರ್ಶಿ, ಶ್ರೀ ಕೆ. ಸತೀಶ ರೈ, ವಾಚನಾಲಯ ಕಾರ್ಯದರ್ಶಿ.

ಆತ್ತಾವರ ವಿಠಲ ಪೂಂಜರ ನಿಧನ

ಜಿಲ್ಲೆಯ ಪ್ರಸಿದ್ಧ ಬಂಟರ ಯಾನೆ ನಾಡವರ ಮುರಕಡ ಗುತ್ತು ಮನೆತನದ ಶ್ರೀ ಅತ್ತಾವರ ವಿಠಲ ಪೂಂಜರು ತಾ. 2-8-65ರಂದು ಮಂಗಳೂರಲ್ಲಿ ತಮ್ಮ 70ನೇ ವಯಸ್ಸಿನಲ್ಲಿ ನಿಧನರಾದರೆನ್ನಲು ವಿಷಾದಿಸುತ್ತೇವೆ. ದಿವಂಗತರು ಕಟ್ಟುನಿಟ್ಟಿನ, ಶಿಸ್ತು ನಿಯಮದ ಕ್ರಮಬದ್ಧ ಹಾಗೂ ಜನಪ್ರಿಯ ಸುಪ್ರತಿಷ್ಠಿತ ವ್ಯಕ್ತಿಯಾಗಿದ್ದರು. ಬಂಟರ ಯಾನೆ ನಾಡವರ ಸಂಘದ ಕೋಶಾಧಿಕಾರಿಯಾಗಿ ಹಲವು ವರ್ಷ ಸೇವೆ ಸಲ್ಲಿಸಿದರಲ್ಲದೆ ಸಮಾಜೋನ್ನತಿಗಾಗಿ ಶ್ರಮಿಸಿದ್ದರು. ಉತ್ತಮ ಕೃಷಿಕರೂ ಬೇಟೆಗಾರರೂ ಆಗಿದ್ದರು. ದಿವಂತರು ಪತ್ನಿ, ಓರ್ವ ಪುತ್ರಿ ಮತ್ತು ಓರ್ವ ಪುತ್ರ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿರುವರು.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. No. 137/65.

ಕೆ. ಸದಾಶಿವರಾವ್—ಜನ್ರಲ ಏಜಂಟ್—ಕೆ. ರಾಮರಾವ್ —ವಾದಿ,

ಮತ್ತು

ಚಂದ್ರಮೌಳಿ ರಾವ್ ಕೂಡಾ—ಪ್ರತಿವಾದಿರು

ಇವರೊಳಗೆ

3ನೇ ಪ್ರತಿವಾದಿ ಚಂದ್ರತಿಲಕ ರಾವ್, 5 ನೀಲಾಬಾಯಿ—ಕೊಜಕುಳಿ ವೆಂಕಟರಾಯರ ಮಕ್ಕಳು—ಉಡುಪಿ ತಾಲ್ಲೂಕು ಕೆಳ ಅಕ್ಕೋಳಿಬೆಟ್ಟು ಗ್ರಾಮ—ಇವರಿಗೆ ತಿಳಿಸುವದೇನಂದರೆ—

ಮೇಲ್ಕಂಡ ವಾದಿಗೆ ಬರತಕ್ಕ ಮೂಲಗೇಣಿ ಬಾಕಿ ಅಯಿವೇಜಿಗೆ ಮಾಡಿದ ಮೇಲ್ಕಂಡ ದಾವೆಯು 3, 5ನೆ ಪ್ರತಿವಾದಿರು ಆಫೀರ ನೋಟೀಸು ಬಗ್ಗೆ ತಾ. 9-9-65ಕ್ಕೆ ಮುಂದೋಡಾಗಿಯದೆ. ಆ ಕುರಿತು ಸದ್ರಿ 3, 5ನೆ ಪ್ರತಿವಾದಿರಿಗೆ ಆಕ್ಷೇಪ ಹೇಳತಕ್ಕದ್ದು ಇದ್ದರೆ ಸದ್ರಿ ದಿವಸ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ತಿಳಿಸೋಣಾಗಿಯದೆ

V. R. Kidiyur,
Advocate for Plaintiff.

ಉಡುಪಿ, 12-8-65.

ಚಂದಾದಾರರಲ್ಲಿ ವಿನಂತಿ.

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೇ ವರ್ಷವು ಕೊನೆಗೊಂಡು ಸಪ್ಟಂಬರಾರಿಂದ 45ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿಗೆ ಸಮೀಪದ ಶಾಖೆಯಲ್ಲಿ "ನವಯುಗದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್
ನವಯುಗ, ಉಡುಪಿ.

ಮುಂಬೈಯಲ್ಲಿ ತಾಂತ್ರಿಕ ಶಾಲಾ ಕಟ್ಟಡದ ನಿರ್ಮಾಣಕ್ಕಾಗಿ ಧನಸಂಗ್ರಹ ಗೈಯಲು ಬಂಟರ ಯಾನೆ ನಾಡವರ ಸಂಘ ಏರ್ಪಡಿಸಿದ ಯಕ್ಷಗಾನ ನಾಟಕ ಮಹೋತ್ಸವದ ಉದ್ಘಾಟನೆಯ ದೃಶ್ಯ.

ಎಡದಿಂದ ಬಲಕ್ಕೆ:— ಸರ್ವಶ್ರೀ ಕಕ್ಕ ಕರುಣಾಕರ ಶೆಟ್ಟಿ, ವಾಸು ಶೆಟ್ಟಿ, ಎಸ್. ಗೋಪಾಲ ಶೆಟ್ಟಿ (ಕಾರ್ಯದರ್ಶಿ), ಡಾ. ಬಾಲಕೃಷ್ಣ ಶೆಟ್ಟಿ (ಅಧ್ಯಕ್ಷ), ಮಾಧವನ್ (ಮುಂಬೈಯ ಮೇಯರ್), ಕಲ್ಲಾಡಿ ಕೊರಗ ಶೆಟ್ಟಿ.

ಅಲ್ಲಲ್ಲಿಯ ಸುದ್ದಿ ಸಾರ

ಚೆಶ್ಯೈರ್ ಹೋಂ ಉದ್ಘಾಟನೆ

ಮೈಸೂರು ರಾಜ್ಯ ಸಮಾಜ ಕಲ್ಯಾಣ ಸಚಿವೆ ಶ್ರೀಮತಿ ಯಶೋಧರಮ್ಮ ದಾಸಪ್ಪರವರು ಕಳೆದ ತಾ. ೮ರಂದು ಮಂಗಳೂರಿನ ಕಂಕನಾಡಿಯಲ್ಲಿನ ಚೆಶ್ಯೈರ್ ಹೋಮಿನ ಉದ್ಘಾಟನೆಯನ್ನು, ಸ್ಪೀಕರ್ ಶ್ರೀ ಬಿ. ವೈಕುಂಠ ಬಾಳಿಗಾರವರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಪ್ರಾರಂಭದಲ್ಲಿ ಸಮಾಜ ಕಲ್ಯಾಣ ಸಮಿತಿ ಅಧ್ಯಕ್ಷರಾದ, ದ. ಕ. ಜಿಲ್ಲಾಧಿಕಾರಿ ಶ್ರೀ ನಾಗೇಗೌಡರು ಸ್ವಾಗತಿಸಿದ ಬಳಿಕ, ಶ್ರೀಮತಿ ಜಕ್ವೇಲಿಯಾ ಬಲ್ಟ್ರಕರ್ ರವರು ವರದಿ ವಾಚನಗೈಯುತ್ತಾ, ಚೆಶ್ಯೈರ್ ಹೋಮಿನ ಸದುದ್ದೇಶಗಳನ್ನು ವಿವರಿಸಿದರು. ಶ್ರೀಮತಿ ದಾಸಪ್ಪನವರು ತಮ್ಮ ಭಾಷಣದಲ್ಲಿ, ಚೆಶ್ಯೈರ್ ಹೋಂನಂತಹ ಉಪಯುಕ್ತ, ಸಮಾಜ ಸೇವಾ ಸಂಸ್ಥೆಗಳ ನಿರ್ಮಾಣವಾಗುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿ, ಇಂತಹ ಸಂಸ್ಥೆಗಳ ಆವಶ್ಯಕತೆಗಳನ್ನು ವಿವರಿಸಿದರು. ಈ ಸಮಾರಂಭಕ್ಕೆ ಮಂಗಳೂರಿನ ಮಾನ್ಯ ಬಿಶಪರು ಹೃದಯಸ್ಪರ್ಶಿ ಭಾಷಣವಿತ್ತರು. ಕೊನೆಯಲ್ಲಿ ಶ್ರೀ ಎಸ್. ಎಲ್. ಲೋಬೋರವರು ವಂದನಾರ್ಪಣೆಗೈದರು.

ನಾಯಕ್ ಬ್ಯಾಂಕಿಗೆ ಪ್ರೈಜ್ ಬೋಂಡಿನಲ್ಲಿ ರೂ. 50 ಸಾವಿರ

1964ರ ಪ್ರೀಮಿಯರ್ ಪ್ರೈಜ್ ಬಾಂಡಿನಲ್ಲಿ, ಉಡುಪಿ ಮಾಂಗಾಳ ನಾಯಕ್ ಬ್ಯಾಂಕಿಗೆ ರೂ. 50 ಸಾವಿರ ಬಹುಮಾನ ದೊರಕಿರುತ್ತದೆ. ಈ ಮೊದಲು 1961ರ ಪ್ರೈಜ್ ಬಾಂಡಿನಲ್ಲಿ ಕೂಡಾ ಈ ಬ್ಯಾಂಕಿಗೆ ರೂ. 25 ಸಾವಿರ ದೊರಕಿತ್ತು.

ವಿದಾಯ ಸತ್ಕಾರ

ಶಂಕರನಾರಾಯಣ, ಜುಲೈ, 26.ಸಿದ್ದಾಪುರ ಬೋರ್ಡ್ ಹೈಸ್ಕೂಲಿನ ಮು. ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಎಂ. ಪುಂಡಲೀಕ ಕಾಮತರು ಬಸ್ರೂರು ಹೈಯರ್ ಸೆಕೆಂಡರಿ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ವರ್ಗಾಯಿಸಲ್ಪಟ್ಟದ್ದರಿಂದ ಅವರನ್ನು ಬೀಳ್ಕೊಡುವ ಸಮಾರಂಭವನ್ನು ಸ್ಥಳೀಯ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಪಿ. ಎಸ್. ಕಾರಂತರ ಅಧ್ಯಕ್ಷತೆಯಲ್ಲಿ ಸಭಾಭವನದಲ್ಲಿ ಜರಗಿ ಹಲವರ ಭಾಷಣಗಳಾದುವು.

ಜಿಲ್ಲೆಯಲ್ಲಿ ತಾಲೂಕು ಬೋರ್ಡ್ ಚುನಾವಣೆಗಳು.

ಚುನಾವಣೆಗೆ ಸಂಬಂಧಿಸಿದ ಕಾರ್ಯಕ್ರಮಗಳು ಈ ಕೆಳಗಿನಂತಿವೆ.

ಚುನಾವಣಾ ನೋಟೀಸಿನ ಪ್ರಕಟನೆ ಕುಂದಾಪುರ ಮತ್ತು ಬಂಟ್ವಾಳ ತಾಲೂಕುಗಳು 8.11.65; ಉಡುಪಿ ಮತ್ತು ಪುತ್ತೂರು 10.11.65, ಕಾರ್ಕಳ ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳು 17.11.65,

ನಾಮಪತ್ರ ಸಲ್ಲಿಸಲು ಕೊನೆಯ ದಿನ ಕುಂದಾಪುರ ಮತ್ತು ಬಂಟ್ವಾಳ 8_11.65; ಉಡುಪಿ ಮತ್ತು ಪುತ್ತೂರು 15_11.65; ಕಾರ್ಕಳ, ಮಂಗಳೂರು ಮತ್ತು ಬೆಳ್ತಂಗಡಿ 22.11.65.

ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನ ಕುಂದಾಪುರ ಮತ್ತು ಬಂಟ್ವಾಳ 15.11.65 ಉಡುಪಿ ಮತ್ತು ಪುತ್ತೂರು_22_11.65; ಕಾರ್ಕಳ, ಮಂಗಳೂರು ಮತ್ತು ಬೆಳ್ತಂಗಡಿ 29_11_65.

ಮತದಾನದ ದಿನ: ಬಂಟ್ವಾಳ ಮತ್ತು ಕುಂದಾಪುರ ತಾಲೂಕು— 13_12_65; ಉಡುಪಿ ಮತ್ತು ಪುತ್ತೂರು — 20.12_65, ಕಾರ್ಕಳ, ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳು — 27_12.65.

ಈ ಸಂಬಂಧ ಹೆಚ್ಚಿನ ವಿವರಗಳು ಚುನಾವಣಾ ಅಧಿಕಾರಿಗಳಾದ ಆಯಾಯ ತಾಲೂಕು ತಹಸಿಲ್ದಾರರಿಂದ ದೊರೆಯುವವು.

ವಾರ್ಷಿಕ ಮಹಾಸಭೆ

ಕುಂತೂರು—"ಪೆರಾಬೆ ಕುಂತೂರು ಯುವಕ ಮಂಡಲ"ದ ಮಹಾಸಭೆಯು ತಾ. 8 ರಲ್ಲಿ ಅಧ್ಯಕ್ಷರಾದ ಶ್ರೀ ಕೆ. ಕಯ್ಯಾಪ್ಪ ರೈ (ಚೆಯರ್ ಮೇನ್, ಕುಂತೂರು ಪಂಚಾಯತ್) ಇವರ ಅಧ್ಯಕ್ಷತೆಯಲ್ಲಿ ನಡೆದು ಚಾಲ್ತಿ ವರ್ಷಕ್ಕೆ ಶ್ರೀ ಗುತ್ತುಪಾಲು ನಾರ್ಣಪ್ಪ ರೈ (ಅಧ್ಯಕ್ಷ), ಶ್ರೀ ಜಿ. ಜಿ. ಚಕ್ರಂ (ಕಾರ್ಯದರ್ಶಿ), ಶ್ರೀ ಐ. ಶ್ರೀನಿವಾಸ ಪ್ರಭು (ಉ. ಕಾ.) ಹಾಗೂ ಸದಸ್ಯರಾಗಿ ಶ್ರೀ ಕೆ. ಪಿ. ಅಬ್ದುಲ್ ಕಾದರ್, ಶ್ರೀ ಎ. ಸಂಜೀವ ಪೂಜಾರಿ, ಶ್ರೀ ಅರ್ಬಿ ಕೊರಗಪ್ಪ ಗೌಡ, ಶ್ರೀ ಪಟ್ಟೆ ಮಾಸಪ್ಪ ರೈ—ಇವರನ್ನು ಆರಿಸಲ್ಪಟ್ಟಿತು. ಸಲಹೆಗಾರರನ್ನಾಗಿ ಶ್ರೀ ಐ. ದಾಮೋದರ ಪ್ರಭು (ಅಧ್ಯಕ್ಷ, ಸೇವಾ ಸಹಕಾರಿ ಸಂಘ, ಕುಂತೂರು) ಮತ್ತು ಶ್ರೀ ಕೆ. ಕೆ. ರೈ ಮನವಳಿಕೆ ಇವರನ್ನು ಕೇಳಿಕೊಳ್ಳಲ್ಪಟ್ಟಿತು. ಕುಂತೂರು ಗ್ರಾಮಸೇವಕರಾದ ಶ್ರೀ ಶ್ರೀಪಾದ ಕೃಷ್ಣ ಜೋಶಿಯವರು ಸೂಕ್ತ ಸಲಹೆಯನ್ನಿತ್ತರು.

ನಂತರ ಮಂಡಲದ ನೇತೃತ್ವದಲ್ಲಿ ಕುಂತೂರು ಭಜನಾ ಮಂಡಲಿಯವರು ಭಜನಾ ಕಾರ್ಯವನ್ನು ನೆರವೇರಿಸಿದರು.

ಪೂರ್ಣಪ್ರಜ್ಞ ಕಾಲೇಜಿನ ಲಲಿತ ಕಲಾ ಸಂಘದ ಉದ್ಘಾಟನೆ

ಕನ್ನಡನಾಡಿನ ಸುಪ್ರಸಿದ್ಧ ಸಾಹಿತಿ ಡಾ| ಕೆ. ಶಿವರಾಮ ಕಾರಂತರು ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಲಲಿತಕಲಾ ಸಂಘವನ್ನು ಪ್ರಿನ್ಸಿಪಾಲ್ ಶ್ರೀ ವಿ. ಎಂ. ಇನಾಂದಾರರ ಅಧ್ಯಕ್ಷತೆಯಲ್ಲಿ ತಾ. 7ರಂದು ಉದ್ಘಾಟಿಸುತ್ತಾ ನಮ್ಮ ಬದುಕು ಹಿಂದಿನವರ ಅಣಕಾಟವಲ್ಲ; ಕಾಲ ಹಾಗೂ ವಾತಾವರಣವನ್ನು ಹೊಂದಿಕೊಂಡು ಅದು ಬದಲಾವಣೆ ಹೊಂದಿದ ಹಾಗೆಯೇ, ಚಿತ್ರ ಕಲೆಯೂ ಹಿಂದಿನ ಸಂಪ್ರದಾಯವನ್ನು ಬಿಟ್ಟು, ನಾವೀನ್ಯತೆಯನ್ನು ಹೊಂದುವುದು ಸ್ವಾಭಾವಿಕ" ಎಂದು ನುಡಿದರು.

ಆರಂಭದಲ್ಲಿ ಪ್ರೊ| ಎಂ. ರಾಜಗೋಪಾಲ ಆಚಾರ್ಯರು ಸ್ವಾಗತಿಸಿ, ಮಾನ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ವಿದ್ಯಾರ್ಥಿನಿಯರಿಂದ ಲಘುಗೀತೆ ಹಾಡಲ್ಪಟ್ಟ ಬಳಿಕ, ಕಾರ್ಯದರ್ಶಿ ಶ್ರೀ ವಿ. ಜಯರಾಮ ಚೊಳ್ಳರು ವಂದನಾರ್ಪಣೆಗೈದರು.

ಕಾಲೇಜ್ ಯೂನಿಯನ್

ಉಡುಪಿ ಶ್ರೀ ಪೂರ್ಣಪ್ರಜ್ಞ ಕಾಲೇಜ್ ಯೂನಿಯನ್ನಿನ ಚುನಾವಣೆಯು ಇತ್ತೀಚೆಗೆ ಜರಗಿ, ಶ್ರೀಗಳಾದ ಕೆ. ಸಚ್ಚಿದಾನಂದ ಶೆಟ್ಟಿ, ಯೂನಿಯನ್ ಕಾರ್ಯದರ್ಶಿ; ಜಯಂತ್ ರಾಜ್ ಸಾಲಿಕ್ಕಾರ್, ಭಾಷಾಸಂಘದ ಕಾರ್ಯದರ್ಶಿ; ಎಸ್. ನಾಗಪ್ಪ ಭಟ್ಟ, ಸಹಾಯಕ ಕಾರ್ಯದರ್ಶಿ; ಕೆ. ದಯಾನಂದ ಶೆಟ್ಟಿ, ಪಂದ್ಯಾಟಗಳ ಕಾರ್ಯದರ್ಶಿ ಮತ್ತು ಕುಮಾರಿ ಗೀತಾ, ಮಹಿಳಾ ಪ್ರತಿನಿಧಿಗಳಾಗಿ ಆಯ್ಕೆ ಹೊಂದಿರುವರು.

'ಕಂದನ ಕಾಣಿಕೆ'— ಮಕ್ಕಳ ಚಿತ್ರ ಪ್ರದರ್ಶನದ ಆರಂಭೋತ್ಸವ

ಉಡುಪಿ, ತಾ. 15, ಚಿಲ್ಡ್ರನ್ಸ್ ಫಿಲ್ಮ್ ಸೊಸೈಟಿ, ಇಂಡಿಯಾ ಇವರು ಮಕ್ಕಳಿಗಾಗಿ ತಯಾರಿಸಿದ 'ಕಂದನ ಕಾಣಿಕೆ' ಎಂಬ ಚಿತ್ರ ಪ್ರದರ್ಶನ ಪ್ರಾರಂಭೋತ್ಸವವು ಅಲಂಕಾರ್ ಥಿಯೇಟರಿನಲ್ಲಿ ಸ್ಯಾಂಟ್ ಸಿಸಿಲೀಸ್ ಕೋನ್ವೆಂಟ್ ಹೈಸ್ಕೂಲಿನ ವಿದ್ಯಾರ್ಥಿನಿ ಕುಮಾರಿ ಬಿ. ಸುರೇಖಾ ಇವರ ಅಧ್ಯಕ್ಷತೆಯಲ್ಲಿ ಪದ್ಮಶ್ರೀ ಡಾ| ಟಿ.ಎಂ.ಎ. ಪೈಗಳಿಂದ ನೆರವೇರಿಸಲ್ಪಟ್ಟಿತು. ಮಣಿಪಾಲ ಹೈಸ್ಕೂಲಿನ ವಿದ್ಯಾರ್ಥಿನಿಯರಾದ ಕು| ಯು. ವಿ. ಇಂದಿರಾ ಮತ್ತು ಕು| ಎಸ್. ಸತ್ಯಭಾಮಾ ದೇವಿ ಇವರಿಂದ ಪ್ರಾರ್ಥನೆಯಾದ ಬಳಿಕ ಶ್ರೀ ಎ. ಜೆ. ಅಲ್ಸೆಯವರು ಸ್ವಾಗತ ಭಾಷಣ ಮಾಡಿದರು. ಡಾ| ಪೈಗಳು ಉದ್ಘಾಟನಾ ಭಾಷಣ ಮಾಡುತ್ತ ಮಕ್ಕಳ ಚಿತ್ರಪ್ರದರ್ಶನದ ಉಪಕ್ರಮವನ್ನು ಕೊಂಡಾಡಿದರು. ಕು| ಸುರೇಖಾ ಅಧ್ಯಕ್ಷ ಭಾಷಣ ಮಾಡುತ್ತ ಮಕ್ಕಳ ಚಿತ್ರಪ್ರದರ್ಶನದ ಉದ್ಘಾಟನಾ ಸಮಾರಂಭದ ತನಗಿತ್ತ ಅಧ್ಯಕ್ಷತೆಯು ಹೊಣೆ ಎಲ್ಲ ಮಕ್ಕಳನ್ನು ಗೌರವಿಸಿದಂತೆ ಎಂದರು. ಚಿಲ್ಡ್ರನ್ಸ್ ಫಿಲ್ಮ್ ಸೊಸೈಟಿ ಮತ್ತು ಯುನಿಸ್ಕೋ ಎಂಟರ್‌ಪ್ರೈಸಸಿನ ಪ್ರತಿನಿಧಿ ಶ್ರೀ ಕೆ. ಎಲ್. ನಾಯಕರು ಧನ್ಯವಾದಗಳನ್ನರ್ಪಿಸಿದರು. ಅನಂತರ ಶಾಲಾ ಮಕ್ಕಳಿಗಾಗಿ ಚಿತ್ರಪ್ರದರ್ಶನ ನಡೆಯಿತು.

ಮೂಡಿ ಮುದುಡಿತು

ನಾ ನೆಟ್ಟ ನಂಗಿಡವೊಂದು
ಹಚ್ಚ ಹಸುರಾಗಿ ಚಿಗುರಿಂಲು
ತಳಿರುಡುಗೆಯ ತೊಟ್ಟು—
ಮರೆಯಾಗಿ,
ಪ್ರಕೃತಿ ಸೌಂದರ್ಯವನು
ಈಕ್ಷಿಸುತಿತ್ತೊಂದು ಮೊಗ್ಗು!
ಸಂತಸದಿ ನೀರೆರೆದೆ
ಸುಮನವರಳುವ ದಿನವ
ನಾ ಕಾಯ್ದಿದ್ದೆ!
ದಿನದಿಂದ ದಿನಕೆ
ತಳಿರುಡುಗೆಯ ತೊರೆದು
ಭೇದಿಸುತ 'ಕವಚ'ವನು
ರಕ್ತವರ್ಣವ ತಾಳಿ
ಬಲಿತ ಮೊಗ್ಗು
ಸೌಂದರ್ಯ ಸೋಪಾನವೇರುತ್ತಿತ್ತು!
ತಂಗಾಳಿಯ ತೀಟಕ್ಕೆ
ಹೊಂಬಿಸಿಲ ಸೋಂಕಿಂಗೆ
ನಡುಗಿ, ಬಾಡಿರಲು ಸುಮನ
ಮರುಗಿತ್ತು ಎನ್ನ ಹೃದಯ!
ಬಿಸಿಲ ಜಳ ನೀಗಿರಲು
ತಲೆಯೆತ್ತಿ ನಿಂತಿತ್ತು—
ಕೋಮಲ ದಳಗಳಿರುವ
ಸೌರಭವ ಸೂಸಲಿಹ
ಕೆಂಪಾಗಿ ಬಿರಿಯಲಿಹ ಸುಮನ!

೦ ೦ ೦

ಅರುಣೋದಯದ ಸಂಧಿಯಲು
ದಳಗಳನು ವಿಮಿರಿಸುತ ಸುಮನ
'ವರುಣ'ನಿಗೆ ಸ್ವಾಗತವ ನೀಡುತಿತ್ತು!
ಸೂಸುತಿದೆ ಸೌರಭವ
ಚೆಲುವಿನಾಗರ ಸುಮನ—
ಎನ್ನನವ ಶಾಂತಿಯಲಿ ಅದ್ದುತಿತ್ತು!
ಉದರ ಪೋಷಣೆಗಾಗಿ,
ಸುಮನಗಳ ನರಸುತಲಿ
ಗಾಳಿಯಲಿ ತೇಲಾಡಿ
ಬರುತಿದ್ದ ಬಂಡುಣಿಯು
'ಆ ಸುಮನ'ದ ಬಳಿಯಲ್ಲಿ
ಝೇಂಕರಿಸಿ ನಗೆಯುತಿತ್ತು!
(ಇರಿಯುತಿತ್ತು ಎನ್ನ ಹೃದಯವ)
ಮಧುವನಾಘ್ರಾಣಿಸಿತು!
ಬೀಸಿದ ಗಾಳಿಗೆ
ಎತ್ತಲೋ ತೇಲಿತು!
ಸುಮನ...
ಬರೀ ಸುಮನ....!
ಅನುಭವಿಸಿತು ನರಕಯಾತನೆ
'ಇದು ಅನ್ಯಾಯ....'
ಕೇಳುವವರಾರು....?
ತನ್ನ ತಾ ಮರೆತು
ಹೊಂಗನಸು ಕಾಣುತಲಿ
ವಿಚಿತ್ರ ಪ್ರಪಂಚದಲಿ
ಆ ಸುಮನ—
ಮೂಡಿ ಮುದುಡಿತು

—ಕಾ. ರಾ. ಸಾರಂಗ,
ಕಾಸರಗೋಡು.

ಸ್ವಾತಂತ್ರ್ಯ ದಿನಾಚರಣೆ

ಉಡುಪಿ, ಯಕ್ಷಗಾನ ಕಲಾಮಂಡಲದ ಪ್ರಧಾನ ಕಾರ್ಯಾಲಯದಲ್ಲಿ ಮಟ್ಟಿಲ್ಲ ಕೃಷ್ಣಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಕೆ. ರಾಮ ಶೆಟ್ರಿಂದ ಧ್ವಜಾರೋಹಣದ ಬಳಿಕ ಕಾರ್ಯದರ್ಶಿ ಕೆ. ನಾರಾಯಣ ಶೆಟ್ರ ಚಿಕ್ಕ ಭಾಷಣ, ಲಘು ಉಪಹಾರದೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಬನ್ನಿ ದೇಶ ಸೇವೆಗೆ!

ಬನ್ನಿರಿ ಬನ್ನಿರೀ! ಬನ್ನಿರೀ!
ನಮ್ಮ ನಾಡ
ನಮ್ಮ ಬೀಡ
ನಮ್ಮ ಜನರ ಸೇವೆಗೆ!
|| ಬನ್ನಿರೀ ||

ದೇಶ ಸೇವೆ
ಈಶ ಸೇವೆ
ಅರಿಯುತೀಗ ಬನ್ನಿರೀ |
ಕ್ಲೇಶ ಮನದ
ತೊರೆದು ಐಕ್ಯ
ದಿಂದ ಮುಂದೆ ಸಾಗಿರಿ!
|| ಬನ್ನಿರೀ ||

ಪರಮ ಪೂಜ್ಯ
ಗಾಂಧಿ ತಾತ
ನಿತ್ಯ ದುಡಿಮೆ ದುಡಿದನು!
ದೇಶಕಾಗಿ
ತನುವ ನೀಗಿ
ಅಮರ ಕೀರ್ತಿ ಪಡೆದನು!
|| ಬನ್ನಿರೀ ||

ಮರೆಯುತೇನೊ
'ಕುರಿ'ಗಳಾಗಿ
ಇದ್ದ ಅಂದಿನಾ ದಿನ?!
ತೊರೆದು ಸಕಲ
ಭೇದವನ್ನು
ಗೈವ ಸೇವೆ ನಾಡಿನ!
|| ಬನ್ನಿರೀ ||

ಕನ್ನಡಾಂಬೆ
ಯುದರದಲ್ಲಿ
ಜನಿಸಿದಂಥ ಶೂರರೇ!
ತನ್ನ ಮಾತೆ
ಯನ್ನು ಪೊರೆಯ
ಲೇನು ನೀವು ಸಿದ್ಧರೇ!?
"ಸಿದ್ಧರೂ....ಸಿದ್ಧರೂ! ಸಿದ್ಧರೂ!!...!
ನಾಡಿಗಾಗಿ ನೀಡೆ ಪ್ರಾಣ ನಾವು ನಿತ್ಯ
ಬದ್ಧರೂ!"

ನೋಡಿ ಮೇಲೆ
ಮೆರೆಯುವಂಥ
ಶಾಂತಿ ವರ್ಣ ಕೇಸರಿ!
ಶಾಂತಿಗಾಗಿ
ಸಾಧು ಜನರು
ದುಡಿದರೆಂಬ ಮೂದಲ!
|| ಬನ್ನಿರೀ ||

ಮಧ್ಯ ಬಿಳಿದು
ಶುದ್ಧ ಹೃದಯ
ತೋರುತಿಹುದು ಗೆಳೆಯರೇ!
ಬಿದ್ದು ಪ್ರಗತಿ
ಗಾಗಿ ಚಕ್ರ
ಉರುಳುತಿಹುದು ಶೂರರೇ!
|| ಬನ್ನಿರೀ ||

ಶೌರ್ಯವನ್ನು
ಸಾರುತಿಹುದು
ಹಸುರು ಭಾರತೀಯರೇ!
ಶೌರ್ಯಯುತರೆ
ಧ್ವಜವ ಪೊರೆಯೆ
ಅಸುವ ತೊರೆಯೆ, ಸಿದ್ಧರೇ?
"ಸಿದ್ಧರೂ.....ಸಿದ್ಧರೂ!.....ಸಿದ್ಧರೂ!!
ನಾಡ ಗುಡಿಯ ಮಾನವುಳಿಸೆ ನೀಡೆ
ಪ್ರಾಣ ಬದ್ಧರೂ"
ಬನ್ನಿರೀ....ಬನ್ನಿರೀ!....ಬನ್ನಿರೀ!!
—ಶ್ರೀ ಮಜಿಬೈಲು ಭಾಸ್ಕರ
ಭಂಡಾರಿ.

ಸಂಗಾತ್ ಸಂಜಾಯತೇ

(ಎರಡನೇ ಪುಟದಿಂದ)

ಪತ್ರ ಬರೆಯಲು ಪ್ರಾರಂಭಿಸಿದಾಗ ಆದ ಉದ್ವೇಗದಿಂದ ಪೆನ್ನಿನ ಮುಳ್ಳೇ ಮುರಿದು ಹೋಯಿತು. ಆದುದರಿಂದ ಮತ್ತೆ ಇವತ್ತು ಬರೆಯಲು ಪ್ರಾರಂಭ ಮಾಡಿದ್ದೇನೆ. ಅಯ್ಯೊ! ನೀನು ಎದುರಿಗೇ ಇದ್ದಿದ್ದರೆ!

ನೀನು ಸೊಂಟದ ಮೇಲೆ ಕೈಯಿಟ್ಟು ನಿಲ್ಲುವ ಭಂಗಿ, ವೃತ್ತಾಂತ ಪತ್ರಿಕೆಯನ್ನು ಓದುತ್ತಾ ನಿಲ್ಲುವ ನಿಲುವು, ನಾಯಿಯೊಡನೆ ಆಡುವ ಚೇಷ್ಟೆ, ಸೈಕಲ್ ಸವಾರಿ ಮಾಡುವಾಗ ಕೊಡುವ ಠೀವಿ-ಅಯ್ಯೊ ಒಂದೇ, ಎರಡೇ ಶಾರಿ. ಇವನ್ನೆಲ್ಲಾ ನೋಡಿ ಆನಂದಿಸಬೇಕೆನಿಸಿವೆ: ಬರೆದು ಅವುಗಳ ಸೌಂದರ್ಯವನ್ನು ಕೆಡಿಸಬಾರದು.

ನಿದ್ದೆ ಬರುತ್ತಿದೆ. ಕನಸಿನಲ್ಲಿ ಮತ್ತೆ ಭೇಟಿಯಾಗುವ.

ಗುಡ್‌ನೈಟ್ ಡಾರ್ಲಿಂಗ್.

ಇತಿ, ಸದಾ ನಿನ್ನ ದರ್ಶನಾಕಾಂಕ್ಷಿ,

ಮತ್ತೊಂದು ಕಾಗದದ ಪ್ರಾರಂಭ ಹೀಗೆ, ಮನು ಮನ ಮೋಹಿನಿ,

ನನ್ನ ಮನಸ್ಸಿನಲ್ಲಾಡುವ ಹಂಸವೇ ಬಹಳ ದಿನಗಳಾದ ಮೇಲೆ ಇವತ್ತು ಈ ಕಾಗದ ಬರೆಯಲು ಪ್ರಾರಂಭಿಸಿದ್ದೇನೆ.

ಥೂ ಹಾಳು, ಹೊರಗಡೆ ಏನು ಗಲಾಟೆ. ಎಂತಹ ಹೊಲಸು ಜನ. "ತೇರಿ ಪ್ಯಾರಿ ಪ್ಯಾರಿ...", "ತೇರಿ ಸೂರತ್ ಮೇರೆ ಅಂಖೆ— ಎಷ್ಟು ಅಪಸ್ವರದಲ್ಲಿ ಕಿರುಚುತ್ತಿದ್ದಾರೆ! ನೀನು ಪಾಠ ಕಲಿಯಲು ಹೊರಗಡೆ ಕುಳಿತರೆ ಸಾಕು. ಅಷ್ಟೆ ಏಕೆ, ನೀನು ಕಿಟಿಕಿಗೆ ತಲೆಹಾಕಿದರೂ ಸಾಕು ಈ ಅಸಭ್ಯ ಜನಾಂಗ ಬಂದು ಬಿಡುತ್ತವೆ. ನಾಯಿಗಳಂತೆ ಸಿಳ್ಳುಹಾಕುವುದೇನು? ನಗುವಿನ ಹೇಷಾರವವೇನು? ಕತ್ತೆಗಳೂ ನಾಚಿ ಓಡಬೇಕು? ಹೊಲಸು ಹಾಡುಗಳ ಅಪಸ್ವರವೇನು? ಅಬ್ಬ! ಏನು ನಾಚಿಕೆಗೆಟ್ಟ ಜನ! ನಿನಗೆ ಅವರಿಟ್ಟಿರುವ ಹೆಸರುಗಳನ್ನು ಕೇಳಿದರೆ ನೀನು ಕಿವಿ ಮುಚ್ಚಿಕೊಳ್ಳುತ್ತೀಯಷ್ಟೆ. 'ಬಿಳೀ ಬೆಕ್ಕು', 'ಡೂಲಿ ಡಾರ್ಲಿಂಗ್'—'ಶಾರಿ, ಶಾರಿ'—ಅಮೆ ಜಾನ್ ಅಮ್ಮಯ್ಯ'—ಸಾಕು, ಸಾಕು, ಈ ಹಾಳು ಹೆಸರುಗಳ ಎಣಿಕೆ. ಇನ್ನೂ ಇಂತಹ ಅಸಭ್ಯವಾದ ಹೆಸರುಗಳ ಮಾಲೆಯನ್ನೇ ಹೆಣೆದಿದ್ದಾರೆ. ಯಜಮಾನರ ಮನೆಯ ನಾಯಿ ಡೂಲಿಯೇ ಇವರಿಗಿಂತ ಎಷ್ಟೋ ಪಾಲು ಮೇಲು. ಅವರು ಹೊರಗಡೆ ನಿಂತು ಗಲಾಟೆ ಮಾಡಿದಾಗಲೆಲ್ಲಾ ಅವರನ್ನು ಒಂದೇ ಏಟಿಗೆ ಸಿಗಿದು ಬಿಡಲೇ ಎನ್ನುವಷ್ಟು ಕೋಪ ಬರುತ್ತದೆ. ಆದರೆ ಏನು ಮಾಡಲಿ? ಅದು ಸಭ್ಯತೆಯ ಲಕ್ಷಣ ಎಂದು ನನಗೆ ತೋರುವುದಿಲ್ಲ. ಅಂತಹ ಕೀಳು ಜನರನ್ನು ಮಾತಾಡಿಸುವುದೇ ನನಗೆ ತಕ್ಕದಲ್ಲ. ನೀನು ಏನೇ ಹೇಳು ಆ ಜನ ಬಂದು ನಿಂತಾಗ ಮೇಲ್ಗಡೆ ನೀನು ನೋಡುವುದು ನನಗೆ ಹಿಡಿಸುವುದಿಲ್ಲ. ಅದರಲ್ಲೂ ಪಕ್ಕದ ರೂಮಿನ ರಹೀಮನಿದ್ದಾನಲ್ಲ ಅವನು ನಿನ್ನನ್ನು ನುಂಗುವಂತೆ ನೋಡುತ್ತಾನೆ. ಅವನನ್ನು ಕಂಡರೆ ನನಗೆಷ್ಟು ಕೋಪ ಗೊತ್ತೇ?

ಅವರ ವಿಷಯ ಹಾಳಾಗಲಿ. ಮೊನ್ನೆ ನಿನ್ನ ಅಚಾತುರ್ಯದಿಂದ ನಿಮ್ಮ ಅಟ್ಟಕ್ಕೆ ಬೆಂಕಿ ಬಿದ್ದಿತ್ತಲ್ಲ ಆಗ ಬಂದು ಸಹಾಯ ಮಾಡಬೇಕೆಂದು ಎಷ್ಟು ಯೋಚಿಸಿದೆ. ನನಗೆ ಒಂದು ರೀತಿಯ ಸಂಕೋಚ ವೇಳು. ಅಲ್ಲ, ಆ ಪಕ್ಕದ ರೂಮಿನ ರಹೀಮ ಬಂದು ಸಹಾಯ ಮಾಡೋಣವೆ? ನಾನು ಹೊರಟೇ ಬಿಡೋಣವೆಂದು ನಿಶ್ಚಯ ಮಾಡುವ ಹೊತ್ತಿಗೆ ಜನ ಬಹಳ ಸೇರಿದ್ದರು. ನಾನು ಹೋಗಿ ಮಾಡುವುದೇನೆಂದು ಸುಮ್ಮನಾದೆ. ಏನೂ ತಿಳಿದುಕೊಳ್ಳಬೇಡ ಎನ್ನ ಮುದ್ದು ಶಾರಿ.

ಗುಡ್ ನೈಟ್ ಮೈ ಲವ್.

ಇತಿ ನಿನ್ನ ಪ್ರಣಯ ಭಿಕ್ಷಾಕಾಂಕ್ಷಿ.

ಅರ್ಧ ಗೀಚಿ ಎಸೆದಿದ್ದ ಅನೇಕ ಪತ್ರಗಳೂ ಇದ್ದವು. ಅಂತಹವುಗಳಲ್ಲಿ ಒಂದು ಹೀಗಿತ್ತು.

My Dear,

ಹೇ ಚಕೋರಿ, ಮಾಧುರಿ, ಮೀನಾಕ್ಷಿ

....

ಯಾವ ಪದಗಳೂ ನಿನ್ನ ಸೌಂದರ್ಯವನ್ನು ಭಾಷಾಂತರಿಸಲಾರವು. ನನ್ನ ಪ್ರೇಮದ ಕಾಣಿಕೆಯನ್ನು ನಿನಗರ್ಪಿಸುವ ಅವಕಾಶ ಒಂದು ವರ್ಷದಿಂದಲೂ ಸಿಕ್ಕಲೇ ಇಲ್ಲ. ಓ! ಆಗಲೇ ಒಂದು ವರ್ಷ ಕಳೆದು ಹೋಯಿತು. ಬರೀ ಮೂಕ ಭಾಷೆಯಲ್ಲಿಯೇ ಸಂಭಾಷಣೆ ನಡೆಸಬೇಕಾಗಿದೆ. ಬರೀ ಕಣ್ಣುಗಳೇ ಸಂಕೇತ ಸೂಚಿಸಬೇಕಾಗಿದೆ. ನಿನ್ನನ್ನು ನೆನೆಸಿಕೊಂಡರೆ ಸಾಕು ಮೈಯಲ್ಲಿ ರಕ್ತ ಚಲನೆ ಜಾಸ್ತಿಯಾಗುತ್ತದೆ. ನರ ನರವೂ ನಿನ್ನನ್ನು ಬಯಸುತ್ತದೆ. ಓ ಆ ಹವಳದಂತಹ ನಿನ್ನ ಚೆಂದುಟಗಳಿಗೆ ಇಲ್ಲಿಂದಲೇ ನನ್ನ ಕಾಣಿಕೆ. ಇನ್ನೂ, ಎಷ್ಟು ದಿವಸ ಈ ಮೂಕನಾಟಕ. ನನ್ನನ್ನು ಹೇಡಿ ಎಂದು ಕರೆಯುವೆಯಾ? ಇಲ್ಲ....ಇಲ್ಲ ...ನಾನು ಹೇಡಿಯಲ್ಲ ಆದರೂ ಮುಂದಕ್ಕೆ ಹೆಜ್ಜೆ ಇಡಲು ದಾರಿ ಕಾಣದಾಗಿದೆ. ನನಗೆ ಗೊತ್ತು ನೀನು ನನ್ನನ್ನು ಪ್ರೀತಿಸುತ್ತಿಯೆಂದು. ನಿನ್ನ ಕಣ್ಣೇ ಅದಕ್ಕೆ ಸಾಕ್ಷಿ. ಸ್ವಲ್ಪ ದಿವಸ ನಿಲ್ಲು ಏನಾದರೂ ದಾರಿ ಹುಡುಕುತ್ತೇನೆ.

ಈ ಕಾಗದ ಇಷ್ಟಕ್ಕೆ ನಿಂತುಹೋಗಿತ್ತು. ಇನ್ನೂ ಅನೇಕ ಕಾಗದಗಳಿದ್ದುವು. ಕೆಲವುಗಳ ಮೇಲೆ ಮಸಿ ಬಿದ್ದು ಚಿತ್ತಾಗಿತ್ತು. ಅವುಗಳನ್ನು ಓದುವುದಕ್ಕೆ ಸಾಧ್ಯವೇ ಆಗುತ್ತಿರಲಿಲ್ಲ. ಮಾತ್ರ ಕೆಲವು ನೀರು, ಕಾಫಿ, ಟೀ, ಮುಂತಾದ ಎಲ್ಲಾ ದ್ರವ, ಪಾನೀಯಗಳಲ್ಲೂ ಸ್ನಾನ ಮಾಡಿ ಸ್ವಚ್ಛವಾಗಿದ್ದವು.

ಇವನ್ನೆಲ್ಲಾ ಓದಿದ ಮೇಲೆ ನನಗೆ ವಿಷಯವೇನೋ ಅರ್ಧ ಅರ್ಥವಾಯ್ತು. ಅವಳಿಂದಲೂ ಏನಾದರೂ ಕಾಗದಗಳು ಬಂದಿರಬಹುದೆಂದು ರೂಮೆಲ್ಲಾ ಹುಡುಕಿದೆ. ಇವನು ಈ ಕಾಗದಗಳನ್ನು ಅವಳಿಗೆ ಕೊಟ್ಟಿದ್ದರೆ ತಾನೇ ಅವಳಿಂದ ಕಾಗದಗಳು ಬರುವುದಕ್ಕೆ! ಇದು ಒಂದೇ ಕೈಯ ಚಪ್ಪಾಳೆಯಾಗಿತ್ತು. ಬಹುಶಃ ಇವನು ಅವಳನ್ನು ನೋಡುತ್ತಿದ್ದುದೇ ಅವಳಿಗೆ ಗೊತ್ತಿಲ್ಲವೆಂದು ತೋರುತ್ತದೆ. ಇವನು ಇಷ್ಟೆಲ್ಲಾ ಬೇಡಿರುವ, ಹೊಗಳಿರುವ, ಅಂಗಲಾಚಿರುವ, ಪ್ರೀತಿಸಿರುವ, ವ್ಯಕ್ತಿ ನನ್ನ ಬಾಡಿಗೆ ಮನೆಯಲ್ಲಿ ವಾಸವಾಗಿರುವ ಗೋಪಾಲರಾಯರ ಮಗಳು ಶಾರದೆ. ಅವಳು ಇವನು ವರ್ಣಿಸಿರುವಷ್ಟು ರೂಪವತಿಯೆಂದು ಒಪ್ಪಲಾಗದಿದ್ದರೂ ಬೆಳ್ಳಗೆ, ತೆಳ್ಳಗೆ ನೋಡಲು ಅಂದವಾಗಿದ್ದಳು. ಪ್ರೀಯೂನಿವರ್ಸಿಟಿಯಲ್ಲಿ ಓದುತ್ತಿದ್ದಳು. ರೂಪವನ್ನು ನೋಡುವ ದೃಷ್ಟಿ ವಯಸ್ಸಿಗೆ ಅನುಗುಣವಾಗಿರುತ್ತದಲ್ಲವೆ. ಇಪ್ಪತ್ತೈದರ ತರುಣನಿಗೆ 'ಹೆಣ್ಣು' ಎನ್ನುವ ಶಬ್ದವೇ ಸೌಂದರ್ಯದ ಖಣಿ. ಅವನಿಗೆ ಶಾರದೆ ರೂಪವತಿಯಾಗಿ ಕಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಅವಳ ಒಂದೊಂದು ಚಲನವಲನವೂ ಅವನನ್ನು ಇಷ್ಟೊಂದು ಬಂಧಿಸಿತ್ತು ಎನ್ನುವುದು ನಮ್ಮ ವಠಾರದಲ್ಲಿ ಯಾರಿಗೂ ಕಡೆಗೆ ಪಾಕಜ್ಜಿಗೂ ತಿಳಿದಿರಲಿಲ್ಲ.

ಅವನ ಕಡೆಯ ಕಾಗದದ ಕಡೆಯ ಭಾಗ ಹೀಗಿತ್ತು.

"ಎಲ್ಲಾ ಪೂರ್ಣವಾಗಿ ಹೋಯಿತು. ನನ್ನ ಕಾಲೇಜ್ ಜೀವನದಲ್ಲಿ ಹ್ಯಾಮ್ಲೆಟ್ ಕುರಿತಾದ ನನ್ನ ಟೀಕೆ ಹೀಗಿತ್ತು—ಅವನು ಒಬ್ಬ ಹೇಡಿ—ಹಠವನ್ನು ಸಾಧಿಸಲಾರದ, ಕಡೆಗೆ ತನ್ನ ಕರ್ತವ್ಯವನ್ನೂ ನಿರ್ವಹಿಸಲಾರದೆ, ಬರೀ ನೆವಗಳಿಂದಲೇ ಬದುಕಿದ ಅಂಜುಬುರುಕ. ಆದರೆ ನನ್ನ ಜೀವನ ಅದಕ್ಕಿಂತ ಏನೂ ಉತ್ತಮವಾಗಲಿಲ್ಲ. ಅವನಿಗಿಂತ ಏಕೆ? ಕೆಲಸಕ್ಕೆ ಬಾರದ ಆ ಸಾಬಿ ರಹೀಮನಿಗಿಂತ ನಾನು ಹೇಡಿ, ಘೋರ ಹೇಡಿ."

ಈ ರೀತಿ ಬರೆಯುವುದಕ್ಕೆ ಕಾರಣ ಹೀಗಿತ್ತು. ಆರು ತಿಂಗಳ ಹಿಂದೆ ಗೋಪಾಲರಾಯರ ಮಗಳು ಶಾರದಾ ನನ್ನ ಮಹಡಿಯ ಮೇಲಣ ನಾಲ್ಕನೇ ರೂಮಿನಲ್ಲಿದ್ದ ರಹೀಮನ ಜತೆ ಓಡಿಹೋಗಿ ರಿಜಿಸ್ಟರ್ ಮ್ಯಾರೇಜ್ ಮಾಡಿಕೊಂಡಿದ್ದಳು. ಅವರು ಹೊರಟು ಹೋದ ಕೆಲವೇ ದಿನಗಳಲ್ಲೇ ಈ ಐದನೇ ರೂಮಿನ ಯುವಕನೂ ಎಲ್ಲಿಗೋ ಹೊರಟುಹೋದ.

o o o o

ಬರಿದೋ ತಮ್ಮ ಬರಿದು,
ಬರಿದೋ ಅಯ್ಯ ಬರಿದು;
ಈ ಬಾಳೆಲ್ಲಾ ವ್ಯರ್ಥ
ಇದಕೆಹುದೇನೋ ಅರ್ಥ!
ಮೋಹವೆಲ್ಲವು ಜಾಲ,
ಪ್ರೇಮವೆಲ್ಲವು ಮಾಯೆ;
ಬರಿದೋ ತಮ್ಮ ಬರಿದು.

ಮೊನ್ನೆ ನನ್ನ ಚಿಕ್ಕ ಮಗಳು ವಂದನಾಗೆ ಬೂಟು ತೆಗೆದು ಕೊಡಲು ಹೋಗಿದ್ದಾಗ ಚೌಕದ ಹತ್ತಿರ ಒಬ್ಬ ವ್ಯಕ್ತಿ ನಿಂತು ಕಿರಿಚುತ್ತಿದ್ದ. ಹತ್ತಿರದಲ್ಲಿ ಹೋಗುತ್ತಿದ್ದ ಯುವತಿಯರನ್ನು 'ಶಾರಿ, ಶಾರಿ' ಎಂದು ಕೂಗುತ್ತಿದ್ದ. ಅವರು ಹೆದರಿ ಓಡಿ ಹೋದರೆ ಇವನು ನಗುತ್ತಿದ್ದ. ನಗುತ್ತಿದ್ದ. ನಕ್ಕು ನಕ್ಕು ಅಳು ಬರುವ ವರೆವಿಗೂ ನಗುತ್ತಿದ್ದ. ಅವನ ಸ್ಥಿತಿಯನ್ನು ನೋಡಿ ನನ್ನ ಕಣ್ಣಲ್ಲೂ ಒಂದು ಹನಿ ನೀರು ಬಂತು.

ತನ್ಮೊಂತು

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಲಕ್ಷಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ.

ಇದೀಗ ಪ್ರಕಟವಾಗಿದೆ—

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ........................ .."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ!

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ವ.ಪಿ.ಆರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಯುಗ ಪ್ರೆಸ್, ಉಡುಪಿ	ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.

NAVAYUGA 19—8—1965

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೧೯-೮-೬೫ರಿಂದ ೨೫-೮-೬೫ರ ವರೆಗೆ

೧. ಮೇಷ

ಕಳೆದ ದಿನಗಳಿಗಿಂತ ಇಂದಿನ ದಿನಗಳು ಸ್ವಲ್ಪ ಉತ್ತಮವಾಗಿ ಕಾಣಲಿವೆ. ಆರ್ಥಿಕ ಬಿಕ್ಕಟ್ಟು ಹಿಂದಿಗಿಂತ ಕಡಿಮೆಯಾಗುವದು. ಮಾತ್ರವಲ್ಲ ಗೃಹಕೃತ್ಯದಲ್ಲಿನ ಅವ್ಯವಸ್ಥೆಗಳು ದೂರವಾಗುವವು. ಕೆಲವೊಮ್ಮೆ ನಿಮ್ಮರಿಗಳಾಗಿ ಪರಿಚಿತ ಆತ್ಮೀಯರ ವಿರೋಧಕ್ಕೆ ಗುರಿಯಾಗುವಿರಿ. ವ್ಯಾಪಾರೀ ವರ್ಗದವರಿಗೂ ಕುಶಲಕಲಾ ಜೀವಿಗಳಿಗೂ ಕೂಡ ಸ್ವಲ್ಪ ಮಟ್ಟಿನ ಬಿಕ್ಕಟ್ಟು ಕಾಣಿಸಲಿದೆ. ಶತ್ರು ಕಾಟದಿಂದ ಮುಕ್ತರಾದ ನಿಮಗೆ ತಾ. 19, 22, 23 ಅನುಕೂಲವಾಗಿವೆ.

೨. ವೃಷಭ

ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆಯೊಂದಿರಲೆಂದು ನೀವಿಂದು ಕರ್ತವ್ಯಪಥದಲ್ಲಿ ದಿಟ್ಟ ಹೆಜ್ಜೆಯನ್ನಿಡಿರಿ. ಸದ್ಯ ನಿಮ್ಮನ್ನಾರೂ ಇದಿರಿಸಲಾರರು. ಬಯಕೆಯಂತೆ ಕಾರ್ಯವೂ ನೆರವೇರಲಿದೆ. ಒಂದೊಮ್ಮೆ ಕೈಯಿನ್ನಿನ ತುತ್ತು ಬಾಯಿಗೆ ಬಂದಿಲ್ಲವೆಂಬ ಪರಿಸ್ಥಿತಿ ಕಾಣಿಸಿದರೂ ನೀವು ಚಿಂತಿಸಬೇಕಾಗಿಲ್ಲ. ಬಂಧುವರ್ಗದವರ ವಿಯೋಗವುಂಟಾಗುವ ಸಂಭವವಿದೆ. ತಾ. 20, 21, 24, 25 ಈ ದಿನಗಳಲ್ಲಿ ಭೋಗ ವಿಲಾಸ ಲಾಭ ಕೀರ್ತಿಗಳಂ ಪಡೆವಿರಿ.

೩. ಮಿಥುನ

ನಾನಾ ತರದ ಎಡರು ತೊಡರುಗಳನ್ನು ನೀವಿಂದು ಇದಿರಿಸಬೇಕಾಗಿ ಬರಲಿದೆ. ವಿರೋಧಿವೃಂದದವರು ನಿಮ್ಮ ಗೃಹಕೃತ್ಯದಲ್ಲಿ ಕಲಹದ ಬೀಜವಂ ಬಿತ್ತುವರು. ಆರ್ಥಿಕ ತಗಾದೆಯು ನಿಮಗಿಲ್ಲವಾದರೂ ಮನೋರೋಗದಿಂದ ನರಳಬೇಕಾಗುವಿರಿ. ದುಡಿಮೆಯು ಹೆಚ್ಚಿನಂಶ ಅಪವ್ಯಯವಾಗಲಿದೆ. ಶ್ರಮಜೀವಿಗಳಿಗೀ ವಾರವು ಸ್ವಲ್ಪ ಕ್ಲೇಶದಾಯಿಯಾಗಿ ಪರಿಣಮಿಸೀತು. ತಾ. 19, 22, 23ರಲ್ಲಿ ಹೆಚ್ಚಿನ ದೋಷಗಳು ಕಾಣಿಸಲಾರವು.

೪. ಕರ್ಕಾಟ

ದೈವವು ತೀರಾ ದುರ್ಬಲವಿಹುದು. ನಿಮ್ಮಲ್ಲಿಯ ಶಕ್ತಿ ಸಾಹಸಗಳು ಇಂದು ಕಾಣಲಾರವು. ಹೆರವರ ನೆರವಿಲ್ಲದೆ ಒಂದು ಹೆಜ್ಜೆಯನ್ನು ಕೂಡ ಮುಂದಿಡಲಾರಿರಿ. ಕೆಲವೊಂದು ಕುಜನರ ಬಲೆಗೆ ಸಿಲುಕಿ ಕಷ್ಟನಷ್ಟ ಅಪವಾದಗಳಿಗೂ ನೀವಿಂದು ಗುರಿಯಾಗಲಿರುವಿರಿ. ಅನಿರೀಕ್ಷಿತ ಪ್ರವಾಸ ದೇಹಾಲಸ್ಯ ಆರ್ಥಿಕ ದುರವಸ್ಥೆ ಇತ್ಯಾದಿಗಳಿಂದ ಸತತ ಚಿಂತಾಕುಲಿತರಾದ ನಿಮಗೆ 19, 20, 21, 24, 25 ಈ ದಿನಗಳು ಕಿಂಚಿತ್ ಸಹ್ಯವೆನಿಸುವವು.

೫. ಸಿಂಹ

ವಿಕ್ರಮಕಾರಕನೂ ಭಾಗ್ಯಪತಿಯೂ ಆದ ಅಂಗಾರಕನು ವಿಕ್ರಮಸ್ಥಾನದಲ್ಲಿದ್ದು ಸುರಗುರುಗಳು ಲಾಭಸ್ಥಾನಕ್ಕೆ ಬಂದಿರುವುದರಿಂದ ನೀವಿಂದು ಸ್ವತಂತ್ರವಾದ ಉದ್ಯಮದಲ್ಲಿ ಹೆಚ್ಚಿನ ಲಾಭ ಗಳಿಸಲಿರುವಿರಿ. ನಿಮ್ಮ ಶಕ್ತಿಯುಕ್ತಿಗಳಂ ಕಂಡ ವಿರೋಧಿಯೂ ಕೂಡ ಒಂದೊಮ್ಮೆಗೆ ಮೂಗಿನ ಮೇಲೆ ಬೆರಳಿಡುವನು. ವ್ಯವಹಾರ ಕುಶಲರೂ ಕಾರ್ಯಸಾಧಕರೂ ಆದ ನಿಮಗೆ ತಾ. 20ರಿಂದ 23ರ ವರೆಗಿನ ದಿನಗಳು ತುಂಬ ಅನುಕೂಲವಾಗಿವೆ.

೬. ಕನ್ಯಾ

ನಿಮ್ಮ ಪರಿಶ್ರಮವಿಂದು ಸಾರ್ಥಕವಾಗುವದು. ಅಧಿಕಾರಿ ಜನರ ಅನುಗ್ರಹಕ್ಕೆ ಪಾತ್ರರಾದ ನಿಮಗೆ ಉದ್ಯೋಗದಲ್ಲಿ ಪ್ರಗತಿಯ ಚಿಹ್ನೆಗಳು ಕಾಣಿಸುತ್ತಿವೆ. ಸ್ವಂತ ಸುಖಭೋಗಗಳಿಗೇನೂ ನೀವಿಂದು ಕೊರತೆ ಮಾಡಿಕೊಳ್ಳಲಾರಿರಿ. ಸದ್ಯ ರಾಜಕೀಯಕ್ಕೆ ಮಾತ್ರ ಪ್ರವೇಶಿಸಬೇಡಿರಿ. ಪರಿಣಾಮ ನೆಟ್ಟಗಾಗದು. ನಿರೋಗಿಗಳೂ ನಿಶ್ಚಿಂತರೂ ಆದ ನಿಮಗೆ ವಾರಾಂತ್ಯದ 4 ದಿನಗಳು ತುಂಬ ಅನುಕೂಲವಾಗಿವೆ.

೭. ತುಲಾ

ಕನ್ಯಾಂಗಾರಕರನ್ನುಳಿದು ಇತರ ಎಲ್ಲಾ ಗ್ರಹರ ಕೃಪೆಗೆ ಪಾತ್ರರಾದ ನಿಮಗೆ ಇಂದು ದಿನಗಳು ಕಳೆದು ಹೋದುದೇ ತಿಳಿಯಲೊಲ್ಲದು. ಕಾರಣ ಬಂಧುಮಿತ್ರಾದಿ ಪರಿವಾರ ವರ್ಗದವರಿಂದ ಕೂಡಿ ನೀವಿಂದು ಸಂತೋಷದಿಂದ ಕಾಲ ಕಳೆವಿರಿ. ಸಾಕ್ಷ್ಯಗಿಂತಲೂ ಅಧಿಕವಾಗಿ ಫಲ ಲಭಿಸೋಣದರಿಂದ ಹಿಂದಿನ ಸಾಲ ಕಡಗಳೆಲ್ಲವನ್ನೂ ಇಂದು ನಿಶ್ಶೇಷವನ್ನಾಗಿ ಮಾಡುವಿರಿ. ನಿಮ್ಮೊ ಉತ್ಕರ್ಷವನ್ನು ಸಹಿಸದ ಶತ್ರುವೃಂದವು ಪ್ರತೀಕಾರಕ್ಕಾಗಿ ಸಮಯ ಸಾಧಿಸುತಿಹುದು, ಜಾಗ್ರತರಾಗಿರಿ. ತಾ. 19, 24, 25 ತುಂಬ ಅನುಕೂಲ.

೮. ವೃಶ್ಚಿಕ

ನೀವು ನಿಮ್ಮ ಉದ್ಯೋಗ ವ್ಯವಹಾರಗಳಲ್ಲಿ ಮುಂದರಿಯಬೇಕೆಂದು ಯತ್ನಿಸಿದರೂ ಅದಾವುದೋ ಅದೃಶ್ಯವಾದ ಕೈವಾಡವು ನಿಮ್ಮನ್ನು ಹಿಂದಕ್ಕೆ ತಳ್ಳುತ್ತಿದೆ. ಕಫಪಿತ್ತ ದೋಷದಿಂದ ಆರೋಗ್ಯವು ಕೆಡುವದು. ಆತ್ಮೀಯರೆನ್ನುವವರು ಕೃತಘ್ನರಾಗಿ ವರ್ತಿಸುವರು. ಮನೋದೌರ್ಬಲ್ಯವು ನಿಮ್ಮನ್ನು ವಿಶೇಷವಾಗಿ ಕಾಡುವುದರಿಂದ ಹೇಳಿಕೊಳ್ಳುವಂತಹ ಕಾರ್ಯವೇನನ್ನೂ ನೀವಿಂದು ಸಾಧಿಸಲಾರಿರಿ. ಕಫಪಿತ್ತ ದೋಷ ದೂಷಿತರಾದ ನಿಮಗೆ, ತಾ. 19, 24, 25 ಈ ದಿನಗಳು ಸ್ವಲ್ಪ ಅನುಕೂಲವಾಗಿ ಪರಿಣಮಿಸೀತು.

೯. ಧನು

ನಿಮ್ಮ ಭಾಗ್ಯ ರವಿಯಿಂದು ಆಯ ೧೧ ಯನ್ನೇರುತಿಹನು. ಸದ್ಯ ನೀವು ಯಾವ ಕಾರ್ಯವನ್ನೇ ಕೈಗೊಳ್ಳಿರಿ ಅದು ನಿರರ್ಗಳವಾಗಿ ಮುಂದೆ ಸಾಗಲಿದೆ. ಮಾತ್ರವಲ್ಲ ನೀವು ಎಣಿಸಿದುದಕ್ಕಿಂತಲೂ ಅಧಿಕವಾದ ಫಲವು ಅನಾಯಾಸದಿಂದ ಲಭಿಸೀತು. ಪಶು ಭೃತ್ಯಾದಿ ಗ್ರಹ ಪರಿವಾರದಿಂದ ಕೂಡಿರತಕ್ಕ ನಿಮ್ಮ ಸಂಸಾರದಲ್ಲಿ ಸದಾ ಸುಖ ಸಂತಸಗಳು ನೆಲೆಸುವವು. ಹಣದ ವ್ಯವಹಾರದಲ್ಲಿ ಸ್ವಲ್ಪ ನಿಷ್ಠುರ ವಿರೋಧಗಳು ಸಂಭವಿಸಲಿವೆ. ತಾರೀಕು 20ರಿಂದ 23ರ ವರೆಗಿನ ದಿನಗಳು ಅತೀವ ಉತ್ತಮವಾದವುಗಳು.

೧೦. ಮಕರ

ಸೀದಾ ಮಾರ್ಗಕ್ಕಿಂತ ವಾಮ ಮಾರ್ಗವೇ ನಿಮಗಿಂದು ಹೆಚ್ಚಿನ ಪ್ರಯೋಜನಕಾರಿಯಾಗಲಿದೆ. ಕುಜನರ ಸಹವಾಸದಿಂದಾಗಿ ಸ್ವಜನರಿಂದ ದೂರವಾಗಲಿರುವಿರಿ. ದೇಹಾಲಸ್ಯ ಮನೋರೋಗಗಳು ಸದಾ ನಿಮ್ಮನ್ನು ಕಾಡುತ್ತಲಿರುವವು. ಆದರೂ ನೀವಿಂದು ನಿಮ್ಮ ಕರ್ತವ್ಯದಿಂದ ಪರಾಙ್ಮುಖರಾಗಲಾರಿರಿ. ಗೃಹ ತಾಪತ್ರಯ ಅರ್ಧಾಂಗಿಯ ವಿರೋಧಕ್ಕೆ ಕಾರಣರಾದ ನಿಮಗೆ ವಾರಾಂತ್ಯದ 4 ದಿನಗಳು ಹೆಚ್ಚಿನ ಅನಿಷ್ಟಗಳನ್ನುಂಟು ಮಾಡಲಾರವು.

೧೧ ಕುಂಭ.

ಒಂದೊಮ್ಮೆಗೆ ಇಂದು ನಿಮ್ಮ ತಾಪತ್ರಯಗಳಿಂದು ದೂರವಾದುವೆನ್ನಬಹುದು. ಮನಸ್ತಾಪದಿಂದಾಗಿ ದೂರವಾದ ಬಂಧು ಜನರೂ ಕೂಡ ಇಂದು ನಿಮ್ಮೊಂದಿಗೆ ಕೂಡಿ ನಡೆಯುವರು. ಅಧಿಕಾರಿಗಳ ಅನುಗ್ರಹಕ್ಕೆ ಪಾತ್ರರಾದ ನಿಮಗೆ ಉದ್ಯೋಗದಲ್ಲಿ ಭಡತಿಯುಂಟಾದೀತು. ವಾತ ಪಿತ್ತ ದೋಷದಿಂದಾಗಿ ಆರೋಗ್ಯಕ್ಕೆ ಸ್ವಲ್ಪ ಆತಂಕವುಂಟಾದೀತು. ಆದರೂ ಜನಸಾಮಾನ್ಯರಿಂದ ಮಾನಿತರಾದ ನಿಮಗೆ ತಾ. 19, 24, 25 ತುಂಬ ಅನುಕೂಲವಾಗಿವೆ.

೧೨. ಮೀನ

ಉಪಜೀವನ ಸ್ಥಾನದಲ್ಲಿ ಸ್ವಕ್ಷೇತ್ರದಲ್ಲಿಹ ರವಿಯೊರ್ವನನ್ನುಳಿದು ಇತರ ಗ್ರಹವೃಂದವೇ ನಿಮ್ಮ ಮೇಲೆ ಮುನಿದಿರುವೆಂದರೆನು ಅತಿಶಯೋಕ್ತಿಯೆನಿಸದು. ಬಿಗ್ಗಿದವನಿಗೊಂದ ಗುದ್ದು ಎಂಬ ಗಾದೆಯಂತೆ ಎಲ್ಲರೂ ನಿಮ್ಮ ಮೇಲಿಂದು ಪ್ರತೀಕಾರವೆಸಗಲು ಹವಣಿಸುವರು. ಗೃಹಕೃತ್ಯದಲ್ಲಿನ ಅವ್ಯವಸ್ಥೆ, ಶತ್ರುಜನ ಉಪಟಳ, ಆರ್ಥಿಕ ಬಿಕ್ಕಟ್ಟು ಇತ್ಯಾದಿಗಳಿಂದಾಗಿ ನೊಂದಿಹ ನಿಮ್ಮ ಮನಕೆ ತಾ. 20, 21 ಮಾತ್ರ ನೆಮ್ಮದಿಯನ್ನಿತ್ತೀತು.

ಲೇಖಕ ಮಿತ್ರರಲ್ಲಿ ಕರ್ನಾಟಕ ಲೇಖಕರ ಸಂಘದ ಮನವಿ

ಕನಕದಾಸರ ನಾಲ್ಕನೆಯ ಪುಣ್ಯ ಶತಮಾನೋತ್ಸವದ ಸಂದರ್ಭದಲ್ಲಿ ಅವರು ಕನ್ನಡ ಸಾಹಿತ್ಯಕ್ಕೆ, ಜನಜೀವನಕ್ಕೆ ಮಾಡಿದ ಸೇವೆಯ ನಾನಾ ಮುಖಗಳನ್ನು ಕುರಿತ ಲೇಖನಗಳನ್ನೂ ವಾಚನಮಾಲಿಕೆಯನ್ನು ನಡೆಸಬೇಕೆಂದು ಸಂಘವು ನಿರ್ಧರಿಸಿದೆ. ಕನ್ನಡಕ್ಕೆ ಕನಕದಾಸರ ಸಾಹಿತ್ಯ ಸೇವೆ, ಅವರ ಕೃತಿರಚನೆಗಳನ್ನು ಕುರಿತ ವಿಮರ್ಶೆಗಳು, ಅವರ ಧಾರ್ಮಿಕ ಸೇವೆ, ಸಾಮಾಜಿಕ ಸೇವೆ ಇತ್ಯಾದಿ ವಿವಿಧ ಮುಖಗಳನ್ನು ಕುರಿತ ಲೇಖಕ ಮಿತ್ರರು ರಚಿಸಿದ ಪ್ರಬುದ್ಧ ಲೇಖನಗಳನ್ನು ವಿಮರ್ಶಿಸಿ, ಸಾರ್ವಜನಿಕ ಸಭೆಗಳಲ್ಲಿ ವಾಚನ ಮಾಡಿಸಿ, ಪ್ರಕಟನ ರೂಪದಲ್ಲಿ ತರಬೇಕೆಂದು ಸಂಘವು ನಿರ್ಧರಿಸಿದೆ.

ಆದ್ದರಿಂದ, ಲೇಖಕ ಮಿತ್ರರು ಉತ್ತಮ ಮಟ್ಟದ ಲೇಖನಗಳನ್ನು ಆಗಸ್ಟ್ 65ರ ಅಂತ್ಯದೊಳಗೆ "ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಲೇಖಕರ ಸಂಘ, ನಂ. 40, ಚಿಕ್ಕಪೇಟೆ, ಬೆಂಗಳೂರು-2" ಇವರಿಗೆ ಕಳುಹಿಸಬೇಕೆಂದು ಪ್ರಾರ್ಥಿಸಲಾಗಿದೆ.

ನವಯುಗಕ್ಕೆ,
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ —
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

— ಪ್ರತಿಗಳಿಗೆ ಬರೆಯಿರಿ —
ನವಭಾರತ ಪುಸ್ತಕ ಭಂಡಾರ, ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty at the Navayuga Press, Udipi, S. India,

నవయుగ

NAVAYUGA

౧౦ పై

ಕಥಾ ಪ್ರಪಂಚ

ಸುಂಟರಗಾಳಿ

ಬರೆದವರು

ಶ್ರೀ ಕಾ. ರಾ. ಸಾರಂಗ, ಕಾಸರಗೋಡು.

ಪತಿಯ ಪರ್ಸಿನಲ್ಲಿ ಹೆಣ್ಣಿನ ಭಾವಚಿತ್ರವೊಂದನ್ನು ನೋಡಿದ ಲತಾಳಿಗೆ ಪತಿಯ ಮೇಲೆ ಕ್ರೋಧವು ಉಕ್ಕೇರಿ ಬಂತು. ತಾನಿಷ್ಟು ಸುಂದರಿಯಾಗಿದ್ದು ಅವರ ಆಶೆ, ಆಕಾಂಕ್ಷೆಗಳನ್ನೆಲ್ಲ ಪೂರೈಸಿದರೂ ಅವರಿಗೆ ತೃಪ್ತಿಯಿಲ್ಲವೇ? ಇನ್ನೊಬ್ಬಳ ಭಾವಚಿತ್ರವನ್ನು 'ಪರ್ಸ್'ನಲ್ಲಿ ಇಟ್ಟಿರುವುದನ್ನು ನೋಡುವಾಗ ನಮ್ಮಿಬ್ಬರ ವಿವಾಹವಾಗುವ ಮೊದಲೇ ಅವಳು, ಅವರ ಹೃದಯರಾಣಿಯಾಗಿದ್ದಿರಬಹುದೆಂದು ಲತಾ ಊಹಿಸಿದಳು. ಗಂಡಸರು ಹೀಗೇನೆ! ಸಿಕ್ಕಿದ ಹೆಣ್ಣುಗಳೊಂದಿಗೆ ಸರಸವಾಡಿಕೊಂಡು ಮನೆಗೆ ಬರುತ್ತಾರೆ. ಅಡುಗೆ ಮನೆಯ ಹೊಗೆಯನ್ನೇ ಸೇವಿಸುತ್ತಿರುವ ಪತ್ನಿಗೆ ಅದು ಹೇಗೆ ತಿಳಿಯಬೇಕು?

ಲತಾಳ ತಾಳ್ಮೆ ಮೇರೆ ಮೀರಿ ಸಾಗಿತು. ಆಕೆಯ ಹೃದಯದಲ್ಲಿ ಆ ಭಾವಚಿತ್ರ ಆಗಾಗ ಚಿತ್ರಿಸಲ್ಪಡುತ್ತಲೇ ಇತ್ತು. ಸುತ್ತೊಮ್ಮೆ ಸಿಟ್ಟನ್ನು ತಾಳಲಾರದೆ 'ಟೇಬಲ್'ನ ಡ್ರಾಯರನ್ನು ಎಳೆದು ಅದರಲ್ಲಿದ್ದ ಪರ್ಸನ್ನು ಕೈಗೆತ್ತಿ ಆ ಭಾವಚಿತ್ರವನ್ನೊಮ್ಮೆ ಹಲ್ಲು ಕಡಿಯುತ್ತ ನೋಡಿದಳು. ಮದುವೆಯಾಗಿ ತಿಂಗಳು ದಾಟುವುದರೊಳಗೆ ಕಂಡ ಪತಿಯ ಮನೋದೇವತೆಯೆಂದೆನಿಸಿದ ಆ ಯುವತಿಯ ಭಾವಚಿತ್ರ ಆಕೆಯನ್ನು ಉದ್ರೇಕಿಸಿತು. ಅವಳಿಂದ ಸಹಿಸಲಾಗಲಿಲ್ಲ. ಅದನ್ನು ನೆಲದ ಮೇಲೆ ಹಾಕಿ ಹಲವು ಬಾರಿ ಕಾಲಿನಿಂದ ಒದ್ದಳು. ಅವಳ ಚಂಚಲ ಹೃದಯದಲ್ಲಿ ಉದ್ಭವಿಸಿದ ಸುಂಟರಗಾಳಿಗೆ ಯೋಚನಾ ಲಹರಿಗಳು ಒಂದರ ಮೇಲೊಂದರಂತೆ ಕುಪ್ಪಳಿಸತೊಡಗಿದವು. ಕಣ್ಣುಗಳಲ್ಲಿ ಅಶ್ರು ಧಾರಾಕಾರವಾಗಿ ಸುರಿಯತೊಡಗಿತು.

ಅಡುಗೆ ಮನೆಯಿಂದ ಹಾಲಿನ ಪಾತ್ರೆ ಮಗುಚಿದಂತೆ ಸದ್ದಾಯಿತು. ಬೆಕ್ಕು ಹಾಲು ಕುಡಿಯಲು ಯತ್ನಿಸುತ್ತಿರಬೇಕು. ಲತಾಳಿಗೆ ಈಗ ಅದೊಂದೂ ತಲೆಗೆ ಹೊಕ್ಕುತ್ತಿರಲಿಲ್ಲ. ಮದುವೆಯಾದ ಪತ್ನಿಯಿರುವಾಗ ಪರಸ್ತ್ರೀಯನ್ನು ಪೂಜಿಸುವ ಪತಿಗೆ ಸರಿಯಾದ ಪಾಠ ಕಲಿಸಬೇಕೆಂದೆಣಿಸಿಕೊಂಡಳು. ಒಮ್ಮೊಮ್ಮೆ ಯೋಚನೆಗಳು ಮೇರೆ ಮೀರಿ ಸಾಗಿದಾಗ ಆತ್ಮಹತ್ಯೆ ಮಾಡಿಕೊಳ್ಳಲೇ ಎಂದೆಣಿಸುತ್ತಿದ್ದಳು.

ಹೃದಯ ಮತ್ತೊಮ್ಮೆ ಸ್ಥಿಮಿತಕ್ಕೆ ಬಂದಾಗ—ತಾನು ಸಾಯಬಾರದು; ಸತ್ತರೆ ಅವರಿಗೆ ಒಳತಾಗಬಹುದು. ಬಳಿಕ ಆ ಅವಳನ್ನು ತನ್ನ ಮನೆಯಲ್ಲಿಯೇ ಇರಿಸಿಕೊಂಡಾರು.... ನನ್ನ ಆಭರಣಗಳನ್ನೆಲ್ಲಾ ಆಕೆ ತೊಟ್ಟುಕೊಂಡು ಮೆರೆವಾಳು....! ನಾನು ಜೀವಂತಳಾಗಿದ್ದು ಅವರಿಗೆ ಸರಿಯಾದ ಪಾಠವನ್ನು ಕಲಿಸಲೇಬೇಕು. ಯೋಚಿಸಿ, ಯೋಚಿಸಿ ಲತಾ ಕಣ್ಣೀರು ಒರಸಿಕೊಂಡಳು.

ನೆಲದ ಮೇಲೆ ಬಿದ್ದಿದ್ದ ಆ ಭಾವಚಿತ್ರ ಆಕೆಯನ್ನು ಅಣಕಿಸುವಂತೆ ಕಂಡಿತವಳಿಗೆ. ಅದನ್ನು ಹರಿದು ಚೂರು, ಚೂರು ಮಾಡಿದಳು. ಆಗಲೂ ಲತಾಳ ಕೋಪಾಗ್ನಿ ತಣಿಯಲಿಲ್ಲ. ಆ ಚೂರುಗಳನ್ನು ಸುಡಲೆಂದು ಅಡುಗೆಯ ಮನೆಗೆ ನಡೆದಳು.

ಒಲೆಯಲ್ಲಿ ಬೆಂಕಿ ಧಗಧಗನೆ ಉರಿಯುತಿತ್ತು. ಗಂಡನಿಗಾಗಿ ಕುದಿಸಿಟ್ಟಿದ್ದ ಹಾಲಿನ ಪಾತ್ರೆಯನ್ನು ಮಗುಚಿ ಹಾಕಿ ಬೆಕ್ಕು ಹಾಲು ನೆಕ್ಕುತಿತ್ತು. ಹಾಲು ಹೋಯಿತೆಂಬ ಹೊಟ್ಟೆಉರಿ ಬಂದರೂ, ಮಗುಕ್ಕೂ(?)ದಲ್ಲಿ ಇಂತಹ ಪ್ರೇಮವಂಚಕರಿಗೆ ಹಾಲೇ ಕೊಡಬಾರದು; ಆ ವೇಶ್ಯೆಯಲ್ಲಿಗೆ ಹೋಗಿ ಕುಡಿಯಲಿ ಎಂದು ಗೊಣಗಿಕೊಂಡಳು. ಆಕೆಯನ್ನು ಕಾಣುತ್ತಲೇ ಬೆಕ್ಕು ಓಡಿಹೋಯಿತು. ಕೈಯಲ್ಲಿದ್ದ ಆ ಯುವತಿಯ ಭಾವಚಿತ್ರದ ಚೂರುಗಳನ್ನು ಒಲೆಯಲ್ಲಿ ಎಸೆದು, ಸಿಡುಕಿನಿಂದ ತನ್ನ ಮಲಗುವ ಕೊಠಡಿಗೆ ನಡೆದಳು. ಲತಾಳ ಕೋಪಕ್ಕೆ ತುತ್ತಾದ ಆ ಭಾವಚಿತ್ರದ ಚೂರುಗಳನ್ನು ಸಂತೋಷದಿಂದ ಬೆಂಕಿ ಜೀರ್ಣಿಸಿಕೊಂಡಿತು.

ಮಲಗುಮಂಚದಲ್ಲಿ ಹಾಸುಗೆಯನ್ನು ಹಾಸಿ ಕಂಬನಿ ಮಿಡಿಯುತ್ತ ಲತಾ ಮಲಗಿದಳು. ಪತಿಯ ದುರ್ನಡತೆಯನ್ನು ನೆನೆದು ಅತ್ತಾಗ ಆಕೆಯ ಕಣ್ಣುಗೊಂಬೆ ಕೆಂಪಿಟ್ಟಿತು. ಮಧ್ಯಾಹ್ನವಾದರೂ ಆಕೆಯ ಅಳು ನಿಲ್ಲಲಿಲ್ಲ.

ಬೆಳಗಿನ ಕಾಫಿ ಮುಗಿಸಿ ಆಫೀಸಿಗೆಂದು ಹೋಗಿದ್ದ ರವಿ ಮಧ್ಯಾಹ್ನವಾಗುತ್ತಲೇ ತಿರುಗಿ ಬರುವಾಗ ಎಂದಿನಂತೆ ನಗುಮುಖದಿಂದ ಎದುರಾಗುವ ಲತಾ ಇಂದು ಇರದಿರಲು ಆತನ ಹೃದಯ ಪ್ರಶ್ನಿಸಿತು—ಇಂದೇಕೆ ಹೀಗಾಯಿತು? ಮನೆಗೆಲಸದಲ್ಲಿ ತೊಡಗಿರಬಹುದೆಂದು ಸಮಾಧಾನಪಟ್ಟುಕೊಂಡ.

ರವಿ ಅಡುಗೆಮನೆಯನ್ನು ಪ್ರವೇಶಿಸುವಾಗ ಅಲ್ಲಿಯ ವಾತಾವರಣವೇ ಅತನಲ್ಲಿ ಹಾಸ್ಯವಾಡುತಿತ್ತು. ಹಾಲಿನ ಪಾತ್ರೆ ಅಡ್ಡಬಿದ್ದಿತು. ಚೆಲ್ಲಿದ ಹಾಲನ್ನು ಬೆಕ್ಕು ಕುಡಿದಿದೆಯೆನ್ನುವುದನ್ನು ನೆಲದಲ್ಲಿ(?) ಹಾಲಿನಿಂದ ತೋಯಿಸಲ್ಪಟ್ಟ ಅದರ ಹೆಜ್ಜೆಯ ಗುರುತುಗಳು ನೆಲದಲ್ಲಿ ಮೂಡಿತ್ತು. ಒಲೆಯಲ್ಲಿ ಬೇಯುತ್ತಿದ್ದ ಅನ್ನದ ಪಾತ್ರದ ತಿಳಿನೀರು ಉಕ್ಕಿ ಹರಿದು ಒಲೆಯ ಸುತ್ತಲೂ ಬಿಳಿ ಲೇಪನ ಹಾಕಿದಂತಿತ್ತು. ಒಲೆಯಲ್ಲಿದ್ದ ಕಟ್ಟಿಗೆಗಳು ಉದ್ದಕ್ಕೆ ಉರಿದು ಬೆಂಕಿ ಒಲೆಯಿಂದ ಹೊರಗೆ ಬಂದಿತ್ತು. ನೀರಿಲ್ಲದೆ ಪಾತ್ರೆಯಲ್ಲಿದ್ದ ಅನ್ನ ಹೊಗೆ ನಾರುತ್ತಿತ್ತು. ರವಿಯ ಎದೆಯಲ್ಲಿ ಎಂಟು ಒನಕೆಗಳ ನೃತ್ಯ ಆರಂಭವಾಗಿತ್ತು. ಉಸಿರನ್ನು ಸಹ ಗಟ್ಟಿಯಾಗಿ ಬಿಡದೆ ಗಾಬರಿಯಿಂದ ಆತ ಗರಹೊಡೆದವರಂತೆ ನಿಂತುಬಿಟ್ಟ. ಹಾಗಾದರೆ ಲತಾ ಎಲ್ಲಿ ಹೋದಳು...?—ಆತನ ಅಂತರಾತ್ಮ ಪ್ರಶ್ನಿಸುತಿತ್ತು.

ಭಯಭೀತನಾದ ರವಿ ನೇರವಾಗಿ ಮಲಗುವ ಮನೆಯನ್ನು ಪ್ರವೇಶಿಸಿದ. ಲತಾ ಮಂಚದ ಮೇಲೆ ಮಲಗಿದ್ದಳು. ಆಕೆಯ ವಸ್ತ್ರ ಅಸ್ತವ್ಯಸ್ತವಾಗಿತ್ತು; ರಕ್ಕಸಿಯಂತೆ ಕೂದಲು ಕೆದರಿತ್ತು; ಮುಖ ಕಳೆಗುಂದಿತ್ತು; ಕಣ್ಣುಗಳು ರಕ್ತಕಾರುತಿದ್ದವು.

"ಏನಿದು ಲತಾ! ಆರೋಗ್ಯ ಚೆನ್ನಾಗಿಲ್ಲವೇ....?"—ರವಿ ಪ್ರಶ್ನಿಸಿದ.

ಆದರೆ ಉತ್ತರ ಬರಲಿಲ್ಲ. ತಲೆದಿಂಬಿನಲ್ಲಿ ಮುಖವಿಟ್ಟು ಆಕೆ ಮತ್ತಷ್ಟು ಅತ್ತಳು. ರವಿಯ ಹೃದಯ ಕರಗಿತು. ವಿಷಯವರಿಯದೆ ಆಕೆಗೆ ಅಸ್ವಾಸ್ಥತೆಯಿರಬಹುದೆಂದು ಸಂತೈಸತೊಡಗಿದ.

"ಅಳಬೇಡ ಲತಾ! ಡಾಕ್ಟರರನ್ನು ಕರೆತರುವೆ... ನಿನಗೇನಾಗುತ್ತಿದೆಯೆಂದು ಬಾಯಿಬಿಟ್ಟು ಹೇಳಿ ಬಿಡು...."

ಆತನ ಯಾವ ಮಾತಿಗೂ ಆಕೆ ಮರುಮಾತಾಡಲಿಲ್ಲ—ಅಳುತ್ತಲೇ ಇದ್ದಳು. ಬೇರೆ ದಾರಿಗಾಣದೆ ರವಿ ಅಲ್ಲಿಂದೆದ್ದು ಆಫೀಸಿಗೆ ನಡೆದ. ಊಟದ ಸಮಯವಾದುದರಿಂದ ಹೊಟ್ಟೆ ಚುರ್, ಚುರ್ ಅನ್ನುತಿತ್ತು.

ಆಫೀಸಿಗೆ ಎರಡು ದಿನದ ಸಿ. ಎಲ್. ಹಾಕಿದ ರವಿ, ಡಾಕ್ಟರರನ್ನು ಕರೆದುಕೊಂಡು ಮನೆಗೆ ಬಂದ. ಡಾಕ್ಟ್ರು ಲತಾಳ ನಾಡಿಯನ್ನು ಪರೀಕ್ಷಿಸಿದ ಬಳಿಕ 'ಸ್ಟೆತೊಸ್ಕೋಪ್'ನ್ನು ಇಟ್ಟು ನೋಡಿದರು. ಬಳಿಕ ಬ್ಯಾಗಿನಿಂದ 'ಇಂಜೆಕ್ಷನ್' ಸಿರಂಜಿಯನ್ನು ತೆಗೆದು ಲತಾಳ ಕೈಗೊಂದು ಇಂಜೆಕ್ಷನ್ ಚುಚ್ಚಿದರು. ಭಯಗೊಂಡ ರವಿ, ಏನಾಗಿದೆಯೋ....? ಎಂದು

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6¼
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	... ...	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ., ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಪ್ರೇಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಮಹಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Phone No. 226.

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ

ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಹಾಳು ಹಾಳಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಫೋಟೋ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಒಂದು ಪ್ರಾಚೀನ ಶಿಲ್ಪ ಕಲೆ

ನವಯುಗ

ಸಂಪುಟ ೪೪	ಉಡುಪಿ	Vol. 44
ಸಂಚಿಕೆ ೫೨	೨೬—೮—೧೯೬೫	No. 52

ನವಯುಗಕ್ಕೆ ನಲುವತ್ತೈದು

ಈ ಸಂಚಿಕೆಯು 'ನವಯುಗ'ದ ನಲ್ವತ್ತನಾಲ್ಕನೆಯ ವರ್ಷದ ಕೊನೆಯ ಸಂಚಿಕೆ. ಮುಂದಿನ ವಾರದಿಂದ ನಿಮ್ಮ 'ನವಯುಗ'ವು ನಲ್ವತ್ತೈದನೆಯ ವರ್ಷಕ್ಕೆ ಪಾದಾರ್ಪಣ ಮಾಡುತ್ತದೆ. ಪತ್ರಿಕಾ ಪ್ರಪಂಚದಲ್ಲಿ, ಅದರಲ್ಲೂ ಕನ್ನಡದ ಪತ್ರಿಕಾರಂಗದಲ್ಲಿ, ಒಂದು ಪತ್ರಿಕೆ ನಲ್ವತ್ತನಾಲ್ಕು ವರ್ಷಗಳಷ್ಟು ಕಾಲ ಅವಿಚ್ಛಿನ್ನವಾಗಿ ನಡೆದು ಬರುತ್ತಿರುವುದೆಂದರೆ ಬಹಳ ಸಾಹಸದ ಸಂಗತಿಯೆಂದು ಬಲ್ಲವರು ಬಲ್ಲರು. ಈ ಸುದೀರ್ಘಾವಧಿಯಲ್ಲಿ ಅನೇಕ ಪತ್ರಿಕೆಗಳು ಜನಿಸಿವೆ; ಮರಣಹೊಂದಿವೆ! ಕೆಲವು ಕುಂಟುತ್ತ ಸಾಗುತ್ತಿವೆ, ಮತ್ತೆ ತಲೆಯೆತ್ತುತ್ತಿವೆ. ಹಲವು ಬಗೆಯ ಬಿರುಗಾಳಿಯ ಸುಳಿಗಾಳಿಯ ಹೊಡೆತಕ್ಕೆ ಸಿಕ್ಕು ತಲೆ ತಗ್ಗಿಸಿವೆ ಮುಗ್ಗರಿಸಿವೆ; ಮತ್ತೆ ಚೇತನ ಪಡೆದಿವೆ 'ನವಯುಗ'ದ ಮೇಲೆಯೂ ಇಂತಹ ಸುಂಟರ ಗಾಳಿಯ ಹೊಡೆತಗಳು ಬಿದ್ದಿವೆ; ಆದರೂ ಅವನ್ನು ಸಹಿಸಿಕೊಂಡು ತಲೆಯೆತ್ತಿಯೇ ಮುಂದುವರಿಯುತ್ತಿದೆ. ಇದು ನಮಗೂ ನಮ್ಮ ನೆಚ್ಚಿನ ಹಿತೈಷಿಗಳಾದ ನಿಮಗೂ ಅಭಿಮಾನದ ಸಂಗತಿ.

ಹಾಗಿದ್ದರೂ ಸಹನೆಗೂ ಒಂದು ಮಿತಿಯಿದೆ. ಈ ಮೇರೆ ತಪ್ಪಿತೆಂದರೆ, ಸಹನೆಯು ಅಸಹನೆಯಲ್ಲಿ ರೂಪಾಂತರಗೊಳ್ಳುವುದು ಸಹಜ. ಅಂತಹ ದುರ್ದೆಸೆ ಯಾರಿಗೂ ಬಾರದಿರಲಿ. ನಾವು ಇದು ವರೆಗೂ ಪತ್ರಿಕೆಯನ್ನು ನಡೆಸುತ್ತ ಬಂದಿರುವುದು. ಅದು ಯಾವ ಬವಣೆಯನ್ನು ಅನುಭವಿಸಿಯೇ ಇರಲಿ, ನಿಮೆಲ್ಲರ ಆಶೀರ್ವಾದ, ಸಹಕಾರಗಳ ಬಲದಿಂದ. ನಮ್ಮ ಬೆಂಬಲ 'ನವಯುಗ'ಕ್ಕೆ ಇದ ಎಂತಲೇ ಅದು ಕುಗ್ಗದೆ ಮುಂದುವರಿಯುತ್ತಿದೆ. 'ನವಯುಗ'ದ ಹಿತಾಕಾಂಕ್ಷಿಗಳಾದ ಚಂದಾದಾರರಿಗೂ, ಜಾಹಿರಾತುದಾರರಿಗೂ ಓದುಗರಿಗೂ ಈ ಸಂದರ್ಭದಲ್ಲಿ ನಮ್ಮ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ; ಇನ್ನು ಮುಂದೆಯೂ ಇದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ನಿಮ್ಮ ಒಲವು-ಬಲವು ನಮಗಿರಲಿ. ಪ್ರೀತಿ-ವಿಶ್ವಾಸಗಳು ಬೆಳೆಯಲಿ; 'ನವಯುಗ' ಕನ್ನಡ ಜನತೆಯನ್ನು ನವಯುಗಕ್ಕೆ ಕೊಂಡೊಯ್ಯುವಂತಾಗಲಿ.

ಪತ್ರಿಕಾ ವ್ಯವಸಾಯವು ವ್ಯಾಪಾರದ ದೃಷ್ಟಿಯಿಂದ ಕನ್ನಡದಲ್ಲಿ ಯಶಸ್ವಿಯಾದ ಸಂದರ್ಭಗಳು ಅತಿವಿರಳ. ಆದರೂ ಆಯ—ವೆಚ್ಚಗಳ ಬಾಯಿಯನ್ನು ಕೂಡಿಸದೆ ಹೋದರೆ, ಅಂತಹ ವ್ಯವಸಾಯವು ಪ್ರಯೋಜನವಿಲ್ಲ. ನಮ್ಮ ನಿಜವಾದ ಬೆಂಬಲಿಗರೆಂದರೆ ಚಂದಾದಾರರು ಮತ್ತು ಜಾಹಿರಾತುದಾರರು. 'ನವಯುಗ'ದಲ್ಲಿ ಜಾಹಿರಾತುಗಳನ್ನಿತ್ತು ಉಪಕರಿಸಿದ ಸಂಘ-ಸಂಸ್ಥೆಗಳು ಹಲವಿವೆ. ಅವುಗಳಿಗೆ ನಾವು ಸದಾ ಋಣಿಗಳಾಗಿದ್ದೇವೆ. ಅಂತೆಯೇ ನಮ್ಮ ಚಂದಾದಾರರಲ್ಲಿ ಹೆಚ್ಚಿನವರು ಕ್ರಮವಾಗಿ ಚಂದಾ ಹಣವನ್ನು ಪಾವತಿ ಮಾಡುತ್ತ ಬಂದಿದ್ದಾರೆ. ಇದರಿಂದಾಗಿಯೇ ಪತ್ರಿಕೆ ನಿಯತಕಾಲದಲ್ಲಿ ಹೊರ ಬರುವುದು ಸಾಧ್ಯವಾಗುತ್ತದೆ. ಆದರೆ ಕೆಲವರು ತಮ್ಮಿಂದ ಪತ್ರಿಕೆಗೆ ಬರಬೇಕಾದ ಚಂದಾ ಹಣವನ್ನು ಬಾಕಿ ಮಾಡಿಕೊಂಡವರೂ ಇದ್ದಾರೆಂದ ಖೇದದಿಂದಲೇ ಬರೆಯ ಬೇಕಾಗಿದೆ. ಇಂತಹವರೆಲ್ಲರೂ ಪತ್ರಿಕೆಯ ದೀರ್ಘಾಯುಷ್ಯಕ್ಕಾಗಿ ತಮ್ಮ ಬಾಕಿಯನ್ನು ಕೂಡಲೇ ಕಳಿಸಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ. ನಮ್ಮ ವಿನಂತಿಯನ್ನು ಕಡೆಗಣಿಸದ ಪುರಸ್ಕರಿಸುವರೆಂಬ ಸದಾಶಯ ನಮ್ಮದು.

ಆರಂಭದಿಂದಲೂ 'ನವಯುಗ' ಜನಾಭಿರುಚಿಗನುಸಾರ ತನ್ನ ರೂಪ—ಪ್ರಕಾಶನದಲ್ಲಿ ಸುಧಾರಣ ಹೊಂದುತ್ತ ಬಂದಿದೆ. ಈ ಒಂದು ವರ್ಷದಿಂದ ಮತ್ತೆ ಸುಧಾರಣಾ ಪಥದಲ್ಲಿ ಇನ್ನೊಂದು ಹೆಜ್ಜೆ ಇಟ್ಟಿದೆ. ಪರಿಷ್ಕರಣದ ಹಲವು ಯೋಜನೆಗಳಲ್ಲಿ ಕೆಲವನ್ನು ಕಾರ್ಯರೂಪಕ್ಕೆ ತಂದಿದೆ. ಇನ್ನೂ ಹಲವು ಬರಿಯ ಕನಸಾಗಿಯೇ ಉಳಿದಿವೆ. ಇವನ್ನೂ ಕೃತಿಗಿಳಿಸಲು ನಮಗೆ ನಿಮ್ಮ ಬೆಂಬಲ ಬೇಕು. ಸರಿಯಾಗಿ ಚಂದಾಹಣ ಪಾವತಿ ಮಾಡುವ ಚಂದಾದಾರರೇ ನಮ್ಮ ಊರುಗೋಲು. ಇಂತಹರ ಸಂಖ್ಯೆ ಹೆಚ್ಚಾದಂತೆ ಪತ್ರಿಕೆಯ ಬಲವೂ ಹೆಚ್ಚುವುದು. ಆದ್ದರಿಂದ ಚಂದಾದಾರರ ಸಂಖ್ಯೆಯಲ್ಲಿ ಹೆಚ್ಚಳವನ್ನು ಸಾಧಿಸಲು ನಾವು ಹಲವಾರು ಊರುಗಳಲ್ಲಿ ಸಂಚಾರ ಮಾಡಿದ್ದೇವೆ. ಆ ವೇಳೆ ಕನ್ನಡದ ಜನತೆ 'ನವಯುಗ'ದ ಮೇಲೆ ವ್ಯಕ್ತಪಡಿಸಿದ ಗೌರವಾದರ ಭಾವನೆಗಳಿಗೆ ನಾವು ಚಿರಋಣಿಗಳು. ಹಲವರು 'ನವಯುಗ'ದ ಹೊಸ ಚಂದಾದಾರರಾಗಿದ್ದಾರೆ; ಕೆಲವರು ಮತ್ತೆ ಚಂದಾದಾರರಾಗಿದ್ದಾರೆ. ಇವರೆಲ್ಲರೂ ತಮ್ಮ ಚಂದಾದ ಅವಧಿ ಮುಗಿದೊಡನೆಯೇ ಹೊಸ ವರ್ಷದ ಚಂದಾ ಹಣವನ್ನು ಕಳಿಸಿಕೊಡಬೇಕು; 'ನವಯುಗ'ದ ಬಲವನ್ನು ಹೆಚ್ಚಿಸಬೇಕು.

ನಮ್ಮ ಲೇಖಕರ ಬಳಗವನ್ನು ನಾವೆಂದಿಗೂ ಮರೆಯುವುದಿಲ್ಲ. ಪತ್ರಿಕೆಯ ಧ್ಯೇಯ ಧೋರಣೆಗಳಿಗೆ, ಜನಾಭಿರುಚಿಗೆ ಹೊಂದಿಕೊಳ್ಳುವ ಲೇಖನಾದಿಗಳನ್ನು ಇವರು ನಿರಪೇಕ್ಷ ಬುದ್ಧಿಯಿಂದ ಬರೆಯುತ್ತಿದ್ದಾರೆ. "ನವಯುಗ"ವು ಅವರ ಕೃತಿಗಳಿಗೆ ಮನ್ನಣೆ ನೀಡುತ್ತ ಬರುತ್ತಿದೆ; ಹೊಸ ಉದಯೋನ್ಮುಖ ಲೇಖಕರಿಗೂ ಪ್ರೋತ್ಸಾಹ ಕೊಡುತ್ತಿದೆ. ದೇಶದ ಸ್ವಾತಂತ್ರ್ಯ ಸಂಗ್ರಾಮದ ವೇಳೆಯಲ್ಲಿ ಕನ್ನಡ ಜನತೆಯಲ್ಲಿ ಸ್ವಾತಂತ್ರ್ಯ ಪ್ರೇಮ ಭಾವನೆಯನ್ನು ಕೆರಳಿಸಿದ "ನವಯುಗ" ಸ್ವಾತಂತ್ರ್ಯಾನಂತರ ಸ್ವಾತಂತ್ರ್ಯ ರಕ್ಷಣೆ, ದೇಶ ಪುನಾರಚನೆ, ನಾಗರಿಕ ಉತ್ಥಾನಾದಿ ಹಿರಿಯ ಆವಶ್ಯಕ ಗುಣಗಳನ್ನು ಜನತೆಗೆ ಮನಗಾಣಿಸಲು ಮಾಡುವುದರೊಡನೆ ಉನ್ನತತರದ ಅಭಿರುಚಿಯನ್ನೂ ಹುಟ್ಟಿಸುವ ಪ್ರಯತ್ನ ಪಥಗಾಮಿಯಾಗಿದೆ. ಈ ದಿಸೆಯಲ್ಲಿ ನಮ್ಮ ವಾಚಕ ಗಣವು ತೃಪ್ತಿಯನ್ನು ಪ್ರಕಟಿಸಿರುವುದು ನಮಗೆ ಅಭಿಮಾನಾಸ್ಪದವೇ. "ನವಯುಗ"ದ ಶ್ರೇಯೋಭಿವೃದ್ಧಿ ಬಯಸುವ ನೀವು ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ಆಗಿಂದಾಗ್ಗೆ ತಿಳಿಸುತ್ತ ಪತ್ರಿಕೆಯ ಆದರ್ಶಪಾಲನೆಯಲ್ಲಿ ನೆರವಾಗಬೇಕು.

ಕೊನೆಯದಾಗಿ "ನವಯುಗ" ನಿಮ್ಮ ಪತ್ರಿಕೆ. ಅದಕ್ಕೆ ಸಕಾಲದಲ್ಲಿ ನೀರೆರೆದು ಬೆಳೆಸಿಕೊಂಡು ಬರುವಂತೆ ನೋಡುವ ಹೊಣೆಗಾರಿಕೆ ನಿಮ್ಮದು. ನಿಮ್ಮ ತನುಮನಧನಗಳ ಬೆಂಬಲದಿಂದಲೇ ಅದು ಬೆಳೆದು ಬರುವುದು. ತಥಾಸ್ತು.

ವಚನ ಸುಧೆ

ಮಹಾನ್ಸಪೇಕ ಜೋ ವೃಕ್ಷೋ
ಬಲವಾನ್ ಸುಪ್ರತಿಷ್ಠಿತಃ
ಪ್ರಸಹ್ಯ ಏವ ವಾತೇನ
ಸಸ್ಕಂಧೋ ಮರ್ದಿತುಂ ಕ್ಷಣಾತ್॥

೦ ಮರವು ಅದೆಷ್ಟೇ ದೃಢವಾಗಿರಲಿ, ದೊಡ್ಡದಾಗಿರಲಿ, ಅದನ್ನು ಬಿರುಗಾಳಿಯು ಒಂದೇ ಕ್ಷಣದಲ್ಲಿ ಬೇರು ಸಹಿತ ಉರುಳಿಸಿ ಬಿಡಬಲ್ಲುದು.

೦೦ ಸರಕಾರವಿರಲಿ, ಸೇನೆಯಿರಲಿ, ಪ್ರಜೆಗಳ ಬೆಂಬಲವಿಲ್ಲದೆ ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ಮಾಡಲಾರವು ಆದುದರಿಂದ ನಾಗರಿಕರೆಲ್ಲರೂ ಒಂದಾಗಿ ದೇಶಕ್ಕೆ ಬಂದಿರುವ ಗಂಡಾಂತರವನ್ನೆದುರಿಸುವಲ್ಲಿ ಬದ್ಧಕಂಕಣರಾಗಬೇಕು.

ನರಸಣ್ಣನ ಸರಸ



"ಖಾಕಿಸ್ತಾನ ಯು. ಥಾಂಟರನ್ನು ಕಾಶ್ಮೀರದ ಸಂಬಂಧದಲ್ಲಿ ಹೇಳಿಕೆ ಕೊಡದಂತೆ ತಡೆಯುತ್ತಲಿದೆಯಂತೆ ..'

"ಹೋಗ್ಲಿ ಬಿಡೋ, ನಮ್ಮ ಕಂಟ್ರಾಕ್ಟರು ಇಂಜನಿಯರುಗಳನ್ನ ತಡೆಯೋದಿಲ್ವೆ?....'

ಗೇಪ ರಾಜ್ಯದಲ್ಲಿ

ಸಮರವಿರಾಮ ರೇಖೆಯಿದಲ್ಲ

೧

"ಹೌದ್ರೀ..."

"ಹೌದು..."

'ಏನು?'

'ಎಲ್ಲಿ?"

"ಅಲ್ರಿ ..."

"ಅಲ್ಲ..."

"ಸಾಕು ಬಿಡೀಂದ್ರೆ....'

"ಮತ್ತೆ ಯಾರು ಹಿಡ್ಕೋತಾರೇಂತ?"

"ಏನನ್ನ?"

"ಬೇಡವಾದದ್ದನ್ನ..."

"ಯಾವುದೀಗ ಬೇಡವಾಗಿರೋದು?'

"ಯಾರಿಗೆ ಗೊತ್ತು?"

"ಮತ್ತೆ ಬೇಡವಾದದ್ದನ್ನ ಯಾರು ಹಿಡ್ಕೋತಾರೇಂತ ಅಂದ್ರಲ್ಲ?"

"ಹೌದು."

"ಈಗ ಹೇಳಿ ಯಾವುದು ಬೇಡವಾದ್ದೂಂತ!"

"ಯಾರಿಗೆ?"

"ಯಾರಿಗೇಂದ್ರೆ?"

"ಯಾರಿಗೆ ಬೇಡವಾದ್ದೂಂತ?"

"ಮತ್ಯಾರಿಗೆ? ಬೇಡಾಂತ ಅನ್ನೋವ್ರಿಗೆ...."

"ಅದೇ ಯಾರು ಅಂದ್ರೂಂತ?"

"ಯಾರಿಗ್ಗೊತ್ತು?'

"ಒಳ್ಳೆ ಪಜೀತಿಯಾಯ್ತಲ್ಲ?"

"ಏನು?"

'ಅಲ್ಲಾ, ಬಿಡೀಂದಿ ನೀನು. ಬೇಡವಾದ್ದನ್ನು ಯಾರು ಹಿಡ್ಕೋತಾರೇಂದೆ ನಾನು..."

"ಹ್ಞಾಂ, ಅಂತೂ ತಿಕೀತು ಬಿಡಿ...."

"ಏಕೆ? ಏನಾಯ್ತು?"

"ಇನ್ನೇನಾಗ್ಬೇಕು"

'ಅಯ್ಯೋ, ಇದೇನೇ ಹೀಗೆ?"

"ಏನೂ ಇಲ್ಲ..."

"ಅಬ್ಬ, ಏನೂ ಇಲ್ಲಾಂತನ್ನೋ ಭರದಲ್ಲಿ ಎಲ್ಲಾ ಇದೇಂತ ತಿಳಿಯುತ್ತೆ...."

"ಏನದು ಹೇಳಿ?"

'ಎಲ್ಲಾನೂ ಇದೆ...."

"ಹಾಗೆಂದ್ರೆ...."

"ಎಲ್ಲಾ ಶಬ್ದದ ಅರ್ಥ ಆಗ್ಲಿಲ್ವೆ?'

."ಅಯ್ಯೋ ನಿನ್ನ. ಆ ದು ಸರ್ವನಾಮ ಅಲ್ವೆ?'

'ಹಂಗ್ಯಾಕಿಲ್ಲ ಕಣೆ, ವ್ಯಾಕರಣ ಸರಿಯಾಗಿ ಪಾಠವಾಗಿದೇಂತಾಯ್ತು...."

'ಆಗದ ಮತ್ತೆ....ಅದು ಯಾವ ನಾಮಪದದ ಒಳ್ಗೆ ಬಂದಿದೇಂತ ಹೇಳಿ...."

'ಹೇಳ್ಲೇ ಬೇಕೇನು?"

"ನಾನು ಹೇಳೀಂದೆ. ಇನ್ನು ಹೇಳೋದು ಬಿಡೋದು ನಿಮ್ಗೆ ಸಂಬಂಧಿಸಿದ ವಿಚಾರ..."

"ಅಲ್ವೇ, ಹೇಳ್ಬಿಟ್ರೆ ಮತ್ತೆ..."

"ಮತ್ತೂ ಇಲ್ಲ ಗಿತ್ತೂ ಇಲ್ಲ...."

"ನಿನ್ನ ಮಾತ್ನಲ್ಲೇ ಇದೆ ನೋಡು ಗೊತ್ತು."

'ಹೌದು, ನಾನು ಮಾತಾಡೋದಿಲ್ಲಾ ಗೊತ್ತು...."

"ಅದಿಲ್ಲ, ನೀನು ಹೇಳ್ಲೇಬೇಕೂಂತ ತಕರಾರು ಮಾಡೋದಿದ್ರೆ..."

"ಅಯ್ಯೋ ನಿನ್ನ, ಪೀಲಿ ತಕರಾರು ಮಾಡೋಕೆ ನಾನೆಷ್ಟರವಳೂಂತ...."

"ಎಷ್ಟರವಳೂಂದ್ರೆ? ಅಂತೂ ಇಷ್ಟ ತೆನ್ನಾಂದರವಳು ಕಂಡಿತ..."

"ಸಾಕು ಬಿಡೀಂದ್ರೆ...."

"ನೋಡು, ಮತ್ತೆ ಸುರು ಮಾಡಿದಿ.."

"ಏನು?"

"ಬಿಡಿ ಬಿಡಿ ಅಂತೀಯಲ್ಲ, ಬಿಡೋಕೇನು ನಾನು ಹಿಡ್ಕೊಂಡದ್ದು?"

"ಸ್ವಲ್ಪ ಹಿಡ್ಕೊಂಡಿದ್ರೂ ಭರವಸೆ ಬಂತಲ್ಲಿ..."

"ನೊದ್ಲು ಇದ್ದಿಲ್ಲ ಹಾಗಾದ್ರೆ..."

"ಹ್ಞಾಂ, ಇತ್ತು ನಿನ್ನ. ಅಷ್ಟೆಲ್ಲಾ ಇಲ್ಲಾದ್ರೆ ಯಾರು ಬರ್ತಿದ್ರು ನಿನ್ನೊತೆಗೆ..."

'ಗಿದ್ದೇನು ಹಾಗಾದ್ರೆ...'

"ಯಾರು ಗಿದ್ದದ್ದು?'

'ನಾನು ಮತ್ತೆ ನೀನು ..."

"ಅದ್ರಲ್ಲೂ ಸಮಪಾಲು ಕೊಟ್ರಲ್ಲಾ ...."

"ಕೊಡದೆ ಉಂಟೆ ಸುಖದುಃಖ ಎಲ್ಲದ್ರಲ್ಲೂ ಸಮ ಪಾಲಲ್ವೆ?"

"ಅದೆಲ್ಲಾ ಬರಿಯ ವೇದಾಂತ...'

'ಸಾಕು ನಿನ್ನ ವೇದಾಂತದ ಪಾಠ, ಮತ್ತೆ ಏನು ನೀನು ಕೇಳಿದ್ದು?'

"ನಾನು ಹೌದೇ ಬಸವಣ್ಣ ಅಂದ್ರೆ ಹೌದು ಅಂದ್ರಿ, ಅಲ್ವೇ ಬಸವಣ್ಣ ಅಂದ್ರೆ ಅಲ್ಲ ಅಂದ್ರಿ...."

'ಹಂಗ್ಯಾಕಿಲ್ವೆ ನೀನು, ನನ್ನನ್ನ ಬಸವಣ್ಣನಿಗೆ ಸಮನಾಗಿ ಮಾಡಿದೆಯಲ್ಲಾ, ಅಬ್ಬ ನಿನ್ನ ಸೊಕ್ಕೆ?'

"ಹಾಗೆ ಹೇಳಿದ್ರೆ ಕೋಪವೇಕೆ?"

"ಹೌದಪ್ಪ, ಪಾಕಿಸ್ತಾನದವ್ರು ಕಾಶ್ಮೀರದಲ್ಲಿ ಸಮರ ವಿರಾಮ ರೇಖೆಯನ್ನ ದಾಟೋದೂ ನೀನು ನನ್ನ ಸಹನಾ ಶಕ್ತಿಯನ್ನ ಮೀರಿಸೋದೂ ಬರೀ ಮಾತಿಗ, ಏನೋದಕ್ಕೆ, ಅಷ್ಟೆ ನೋಡು. ಬೆಕ್ಕಿಗೆ ವಿನೋದದ ವಿಷ್ಯವಾದ್ರೂ ಇಲಿಗೆ ಪ್ರಾಣ ಸಂಕಟವಲ್ವೆ...'

"ನಮ್ಮ ನಮ್ಮ ಕಥೆ ಹಾಗಿರ್ಲಿ, ಪಾಕಿಸ್ತಾನದ ಕಥೆಯೇನು?"

"ಏನು?"

"ಅಲ್ರಿ ಕಚ್ಛ ಗಡಿಯಲ್ಲಿ ಸಮರ ವಿರಾಮ ಮಾಡಿಕೊಂಡವ್ರು ಕಾಶ್ಮೀರದಲ್ಲಿ ಯಾಕೆ ಪಿರಿಪಿರಿ ಮಾಡ್ತಾರೇಂತ?"

"ಪ್ರಾಯಃ ಪಾಕ್ ಸೇನೆಗೆ ತಿಂದ ಅನ್ನ ಜೀರ್ಣವಾಗಿಲ್ಲ ತೋರುತ್ತೆ...."

"ಸಾಕು ಬಿಡೀಂದ್ರೆ...."

"ನೋಡು ಮತ್ತೆ ಸುರು ಮಾಡಿದಿ...."

"ಹಾಗಿಲ್ರಿ, ಅಲ್ಲಾ ಇದ್ರಲ್ಲೂ ನೀವು ತಮಾಷೆಗೆ ಹೊಂಟ್ರಲ್ಲಾಂತ..."

"ಅಲ್ಲಾ, ಮತ್ತೆ ಅನ್ನೋದಾದ್ರೂ ಏನು? ಕಚ್ಛದಲ್ಲಿ ಸಮರ ವಿರಾಮ ಪಾದ ಬ್ಬಿಂದ ಅಲ್ಲಿ ನಿಂತ್ರೆ ತಿಂದದ್ದು ಜೀರ್ಣವಾಗೋದು ಹೇಗೆ? ಅದಕ್ಕೆ ಕಾಶ್ಮೀರದ ಕೊಳ್ಳಕ್ಕೆ ನುಗ್ಗಿದ್ರು..."

"ಜೀರ್ಣವಾಗದಿದ್ರೆ ತಿನ್ನೋದಾದ್ರೂ ಯಾಕೇಂತ...?

'ತಿನ್ಬೇಕೂಂತ ಅನ್ನಿಸ್ತದೆ....'

'ಹೌದು, ಭಾರತವನ್ನೆ ಬಟ್ರೆ ತಿನ್ನೋಣಾಂತ. ಅಲ್ಲಾದ್ರೆ ತಾವು ನ್ಯಾಯನಿಷ್ಠುರರೂಂತ ಹೇಳಿಕೊಳ್ಳೋವ್ರು ಯಾಕೆ ಕಾಶ್ಮೀರದಲ್ಲಿ ಆಕ್ರಮಣ ಮಾಡಬೇಕು? ಭಾರತದೊಡನೆ ಸ್ನೇಹವನ್ನು ಬಯಸುವವರೂಂತ ಹೇಳಿಕೊಂಡು ಯಾಕೆ ದ್ವೇಷ ಕಾರಬೇಕು?'

"ಅದಕ್ಕೇ ನೋಡು, ಕಚ್ಛ ಸಮರ ವಿರಾಮ ಒಡಂಬಡಿಕೆಯನ್ವಯ ನಡೆಯಬೇಕಾಗಿದ್ದ ವಿದೇಶ ಮಂತ್ರಿ ಪರಿಷತ್ತು ರದ್ದಾದದ್ದು?'

"ಯಾರು ಮಾಡಿದ್ದು?"

'ಭಾರತ ಮಾಡಿತು. ಭುಟ್ಟೋ ಒಪ್ಪಿದ್ದು."

'ಹಂಗ್ಯಾಗಿಲ್ರಿ, ಕಚ್ಛ ಒಪ್ಪಂದ ಹಾಗಾದ್ರೆ ಒಪ್ಪಂದವಾಗೇ ಉಳೀತು.'

'ಏನಾಗುತ್ತೋ ನೋಡೋಣ, ಮಧ್ಯಸ್ಥಿಕೆಗೆ ಕೊಡುವುದಂತೆ ಇನ್ನು...."

"ಅದು ಏನಾದ್ರೂ ಆಗಲಿ, ಪಾಕಿಸ್ತಾನ ಅನ್ಯಾಯ ಮಾಡೋದನ್ನ ಕಂಡೂ ಕಂಡೂ ಪಾಶ್ಚಾತ್ಯರು ಯಾಕೆ ಸುಮ್ಮನಿದ್ದಾರೇಂತ?'

"ಅಲ್ವೆ, ಪಾಕಿಸ್ತಾನ ಕಾಶ್ಮೀರದಲ್ಲಿ ಗೊಂದಲ ಎಬ್ಬಿಸಿದ್ದು ಯಾಕೆ ಗೊತ್ತೆ?'

'ಯಾಕೆ?'

'ಮತ್ಯಾಕೂ ಇಲ್ಲ. ಕಚ್ಛ ಗಡಿ ತಂಟೆಯು ಒಡಂಬಡಿಕೆಯೊಡನೆ ಎಲ್ಲಾ ಗಡಿ ತಂಟೆಗಳೂ ಅಡಕವಾಗ್ಬೇಕೂಂತ ಅಯ್ಯೂಬರ ವಾದವಿತ್ತು.

"ಅವರ್ಬಿಟ್ರಿ; ಆದ್ರೆ ನಾವು ಒಪ್ಲಿಲ್ಲವಲ್ಲ?'

'ಅದಕ್ಕೇ ನೋಡ, ಕಚ್ಛದಲ್ಲಿ ಶಾಂತಿ, ಕಾಶ್ಮೀರದಲ್ಲಿ ದಾಳಿ, ತ್ರಿಪುರಾದಲ್ಲಿ ಸೈನ್ಯ ಸಂಗ್ರಹ....'

"ಅಂದ್ರೆ?

"ಮತ್ತೇನೂ ಇಲ್ಲ. ಕಾಶ್ಮೀರವನ್ನು ಭಾರತ ಪಾಕಿಸ್ತಾನಕ್ಕೆ ಕಾಣಿಕೆ ಕೊಡೋದಕ್ಕೆ ಸಿದ್ಧವಿದ್ರೆ ಮತ್ತೆ ಶಾಂತಿ ಶಾಂತಿ, ಸರ್ವತ್ರ ಶಾಂತಿ...."

"ಅಯ್ಯೋ, ಅದ್ರಲ್ಲಿ ಅರ್ಥವೇನು?"

ಅದ್ರಲ್ಲಿ ಅನರ್ಥವೇ ತುಂಬಿರ್ಲಿ. ಅದ್ರಿಂದ ಪಾಕಿಗೇನೂ ತೊಂದ್ರೆಯಿಲ್ಲ..."

"ಅಯ್ಯೂಬರು ಬೊಗಳುತ್ತಾರೇಂತ ನಾವು ಸುಮ್ಮನಿರೋಕಾಗುತ್ತೆ?"

"ಬೊಗಳುವ ನಾಯಿ ಬೊಗಳುತ್ತಲೇ ಇರುತ್ತೆ. ಅದನ್ನ ತಡೆಯೋಕಾಗದಿದ್ರೆ ನಾವು ದೊಣ್ಣೆ ಹಿಡಿಯಲೇ ಬೇಕಲ್ಲಾ?"

"ಹಿಡಿಯುದ ಮತ್ತೆ? ಅದನ್ನು ಓಡಿಸೋದು ಮಾತ್ರವಲ್ಲ, ಕೊಂದೇ ಬಿಡ್ಬೇಕು...."

'ಅಷ್ಟು ದೂರ ಹೋಗಬೇಡ. ಅಂತಹ ಸಾಹಸವನ್ನೂ ಮಾಡ ಬೇಡ. ನಾವು ಬುದ್ಧನ ದೇಶದವ್ರು..."

'ಹೌದು. ಒಂದು ಕೆನ್ನೆಗೆ ಹೊಡೆದರೆ ಮತ್ತೊಂದನ್ನ ತೋರಿಸುವವರು....ಆದ್ರೆ ನೋಡಿ, ಅದೆಲ್ಲಾ ರಾಜ್ಯ ಪಾಲನೆಯಲ್ಲಿ ಏನು ಪ್ರಯೋಜನಕ್ಕೆ ಬಂದೀತು? ಪುಸ್ತಕದ ಬದನೆ ಕಾಯಿ ಹಾಗೆ...'

"ಅದು ಸರೀನ್ನು. ಹಾಗೆಯೇ ನೋಡ, ಎಲ್ಲವೂ ಪುಸ್ತಕದ ಬದನೆ ಕಾಯಿಯೇ..."

"ಯಾವುದು?'

"ಕಾಶ್ಮೀರದಲ್ಲಿನ ಸಮರ ವಿರಾಮ ರೇಖೆ....'

"ಹ್ಞಾಂ...."

'ನೇಫಾದ ಮ್ಯಾಕಮಹೋನ ರೇಖೆ ...'

'ಹ್ಞಾಂ...'

'ಸಹ ಅಸ್ತಿತ್ವದ ತತ್ವ....'

'ಮತ್ತೆ?"

'ಮತ್ತೇನು....?"

'ನಿಮ್ಮ ಅಭಿವೃದ್ಧಿ, ಪ್ರಗತಿ ಸಾಧನೆ, ಜನಜೀವನ ಮಟ್ಟದ ಉನ್ನತಿ, ಅಧಿಕ ಆಹಾರೋತ್ಪಾದನೆ...'

'ಅಬ್ಬಬ್ಬ ನೀನೆ? ಬೆರಳು ತೋರಿಸಿದ್ರೆ ಕೈಯನ್ನೇ ನುಂಗುವವಳು ಕಣೇ ನೀನು..'

"ನಾನೂತೇನೂ ಎಲ್ರೂ ಹಾಗೇನೇ ಅನ್ನಿ__'

'ಅನ್ನುವ್ರ ಲಾಭಕ್ಕೇಂತ ನೀನ್ನು...."

"ಅದನ್ನ ಬೇರೆ ಹೇಳಬೇಕೆ?"

"ಬೇಡಪ್ಪ ಬೇಡ. ಈಗ ಹೇಳಬೇಕಾಗಿರೋದಲ್ಲ, ಏಳಬೇಕಾಗಿರೋದು...."

"ಯಾಕೇಂತ?'

"ಯಾಕೆ ಅಂದ್ರೆ? ಪಾಕಿಸ್ತಾನಕ್ಕೆ ಬುದ್ಧಿ ಹೇಳಿ ಹೇಳಿ ಸಾಕಾಯ್ತು. ಇನ್ನು ಯುದ್ಧಕ್ಕೆ ಏಳೋದೊಂದೇ ದಾರಿ..."

"ಅಲ್ರೆ...."

"ಅವಸರಾನ್ನ ಇಲ್ಲ. ನೋಡೋಣ ಏನಾಗುತ್ತೇಂತ. ಏನಿದ್ರೂ..."

"ನಾಯಿಗೆ ಸಲುಗೆ ಕೊಟ್ರೆ ಅದು ನೊಸಲು ನೆಕ್ಕದೆ ಇರುತ್ಯೆ? ಅದಕ್ಕೆ ಬುದ್ಧಿ ಕಲಿಸೋದಕ್ಕೂ ಗೊತ್ತಿದೇನ್ನ..."

"ಆ ಬುದ್ಧಿ ಟೋಪಿಯಿಂದ ಹೊರಗೆ ಬರಬೇಕಲ್ಲಾ?"

"ಕಾಲ ಬಂದಾಗ ಬಂದೇ ಬರುತ್ತೆನ್ನು."

(ಹದಿಮೂರನೇ ಪುಟ ನೋಡಿ)

ಬಂಟರ ಯಾನೆ ನಾಡವರ ಸಂಘ, ಮುಂಬಯಿ

4/34 Navayug Nivas, Opp: Minerva Cinema,
Lamington Road, Bombay 7.

ನಿಯೋಜಿತ ಶಾಲಾ ಕಟ್ಟಡದ ಸಹಾಯಾರ್ಥವಾಗಿ

ದಕ್ಷಿಣ ಕನ್ನಡದ ಸುಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ
ಶ್ರೀ ನರಸಿಂಹ ದಶಾವತಾರ ಯಕ್ಷಗಾನ ಮಿತ್ರ ಮಂಡಳಿ, ಮುಂಬಯಿ
ಇವರಿಂದ **ಕಾಂತಾಬಾರೆ—ಬುಧಾಬಾರೆಯವರ ಪ್ರತಾಪ** ಎಂಬ
ರಸಭರಿತವಾದ ಪ್ರಸಂಗವನ್ನು ತುಳು ಭಾಷೆಯಲ್ಲಿ ಇದೇ ತಾ. 30—8—65ನೇ
ಸೋಮವಾರ (ರಜಾದಿನ) ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ
ಕಿಂಗ್ಸ್ ಸರ್ಕಲ್‌ನಲ್ಲಿರುವ ಷಣ್ಮುಖಾನಂದ ಹಾಲ್ (Air Conditioned)
ನಲ್ಲಿ ಅಭಿನಯಿಸಲಿರುವುದು.

ಅತ್ಯಂತ ಮನಮೆಚ್ಚಿನ ಕೊನೆಯ ಈ ಆಟವನ್ನು ಸಕಲರೂ ನೋಡಲು ಮರೆಯದಿರಿ. ಟಿಕೇಟು ಈ ಮೊದಲು ಕರಪತ್ರಗಳಲ್ಲಿ ತಿಳಿಸಿದ ಹೊಟೇಲುಗಳಲ್ಲಿಯೂ, ಆಟದ ದಿನ ಹಾಲ್‌ನಲ್ಲಿಯೂ ದೊರೆಯುವುದು.

ದರ: ರೂ. 10/-, 5/-, 3/- ಮತ್ತು 2/-

ರಕ್ತದ ನದಿಯೊಂದಿಗೆ ಹರಿದು ಬಂದ

ಮೊದಲ ಸ್ವಾತಂತ್ರ್ಯ ದಿನ

ಅನುವಾದ ಶ್ರೀ ಶಿವರುಂಜೆ ಪರಾರಿ.

ಇಂದು ನಮ್ಮ ರಾಷ್ಟ್ರೀಯ ಜೀವನದಲ್ಲಿ ಭ್ರಷ್ಟಮಾಕ ಹಾಗೂ ಮಿಥ್ಯಾ ಖ್ಯಾತಿಗಳನ್ನು ಸತತ ಪ್ರಚಾರಗೊಳಿಸಲಾಗುತ್ತಿದೆ! "ನಾವು ಅಹಿಂಸಾತ್ಮಕ ಕ್ರಾಂತಿಯ ಮೂಲಕ, ಒಂದು ತೊಟ್ಟು ರಕ್ತವನ್ನು ಹಾಸಿಗ್ಗೆ ಬಿಡದೆ ಸ್ವದೇಶವನ್ನು ಸ್ವತಂತ್ರಗೊಳಿಸಿದವು" ಎನ್ನುವುದೂ ಒಂದು ಪ್ರಚಾರ ಆದರೆ ೧೫ನೇ ಆಗಸ್ಟ ೧೯೪೭ ರಿಂದ ೧೯೪೭ರ ಜಂತ್ಯದ ತನಕ ಬಂಗಾಲ, ಪಂಜಾಬ, ಪಶ್ಚಿಮೋತ್ತರ ಪ್ರಾಂತ್ಯಗಳಲ್ಲಿ ಹಾಗೂ ಕಾಶ್ಮೀರದಲ್ಲಿ ಮತ್ತು ಸಿಂಧದಲ್ಲಿ ಆಬಾಲವೃದ್ಧ ನರನಾರಿಯರಗೈದ ಬಲಿದಾನ ಇದೇ ಮಾತನ್ನು ಸಿದ್ಧಗೊಳಿಸುತ್ತದೆಯೇ? ಈ ಕಾಲದಲ್ಲಿ ನಡೆದ ನರಸಂಹಾರ ಅಗ್ನಿಕಾಂಡ, ಅಪಹರಣ, ಬಲಾತ್ಕಾರದ ಕಥೆ, ಸಂಪತ್ತಿನಾಶಗೈದ ಘಟನೆಗಳು ತೈಮೂರಲಂಗ, ಚಂಗೇಜ್ ಖಾನ್, ಮತ್ತು ನಾದಿರ್ ಶಾನ ಕ್ರೂರತೆಯನ್ನು ನಾಚಿಸುವಂತಿಲ್ಲವೇ? ಸಾವಿರಗಟ್ಟಲೆಯಲ್ಲ, ಲಕ್ಷಾಂತರವಲ್ಲ ಕೋಟ್ಯಾಂತರ ಸ್ವದೇಶವಾಸಿಗಳ ಹೆಣಗಳ ಮೇಲೆ ಖಂಡಿತ ಸ್ವಾತಂತ್ರ್ಯದ ಭವನ ನಿಂತಿದೆ ಎಂದೆನ್ನುವುದು ಎಂದೂ ಅನುಚಿತವೆನಿಸಲಾರದು. ಆ ಹುತಾತ್ಮರ ಅಜ್ಞಾತ ಮೂಕ ಬಲಿದಾನಕ್ಕೆ ಶ್ರದ್ಧಾಂಜಲಿಯನ್ನರ್ಪಿಸುವ ಬದಲು ಅದಕ್ಕೆ ವಿರೋಧವಾಗಿ ಒಂದು ಕಣ ರಕ್ತವನ್ನೂ ಚೆಲ್ಲದೆ ನಾವು ಸ್ವತಂತ್ರ್ಯ ಗಳಿಸಿದ್ದೇವೆ ಎಂದೆನ್ನುತ್ತಾ ತಿರುಗುವುದು ನಮ್ಮ ಕೃತಘ್ನತಾ ಬುದ್ಧಿಯ ಪರಾಕಾಷ್ಠೆಯ ಪರಿಸೀಮೆಯೆನಿಸಲಾರದೆ?

೧೯೪೭ರಲ್ಲಿ ನಡೆದ ಬಲಿದಾನಗಳಿಗೆ ತಮ್ಮದೇ ಆದ ಒಂದು ವಿಶೇಷತೆಯಿದೆ. ಅವುಗಳು ನಿಯೋಜಿತವಾಗಿರುವ ಬದಲು ಆಕಸ್ಮಿಕವಾಗಿದ್ದುವು; ವ್ಯಕ್ತಿಗತವಾಗಿದ್ದಿಲ್ಲ, ಸಾಮೂಹಿಕವಾಗಿದ್ದುವು. ಹಿಚ್ಚಿನ ಬಲಿದಾನಕ್ಕೆ ತತ್ಕಾಲೀನ ನೇತಾ ವರ್ಗದ ಅದೂರದರ್ಶಿ, ಅವ್ಯಾವಹಾರಿಕ ಹಾಗೂ ಹೇಡಿತನದ ರೀತಿ ನೀತಿಗಳ ಪರಿಣಾಮವೇ ಕಾರಣವಾಯ್ತು. ಮುಸ್ಲಿಂ ಲೀಗಿನ ಹಿಂಸಾತ್ಮಕ ಕಾರ್ಯಾಚರಣೆಗಳಿಂದ ಹಾಗೂ ಗೂಂಡಾಗಿರಿಯ ದುರಭಿಸಂಧಿಗಳಿಂದ ಭಯ-ಭೀತರಾದ ದೇಶದ ನಾಯಕರು, ದೇಶದ ವಿಭಜನೆಯ ವಿಷಯವನ್ನು ಅಂಗೀಕರಿಸಿದರು. ೧೫ನೇ ಆಗಸ್ಟ್ ೧೯೪೭ರ ಮೊದಲೇ ನೆಲೆಗೂ ಅದಲು ಬದಲುಗಳ ಸಿದ್ಧಾಂತವನ್ನಿದು ವಿರೋಧಿಸಿತು —ಫಲಸ್ವರೂಪವಾಗಿ ದೇಶದ ವಿಭಿನ್ನ ಭಾಗಗಳಲ್ಲಿ ದಂಗೆಗಳು ನಡೆದುವು ಈ ದಂಗೆಗಳಲ್ಲಿ ಕಂಡು ಬಂದ ಕ್ರೂರತೆ, ನೃಶಂಸತೆ ಮತ್ತು ಪಾಶವೀಯತೆಯ ದೃಶ್ಯಗಳಂತೂ ಅಭೂತಪೂರ್ವವಾಗಿದ್ದುವು. ಅದರ ಸ್ಪಷ್ಟ ಹಾಗೂ ಅಧಿಕೃತ ವಿವರಣೆಯಂತೂ ಇಂದಿನ ತನಕವೂ ಉಪಲಬ್ಧವಾಗಿಲ್ಲ. ಅದರ ಅಂದಿನ ಸಮಾಚಾರ ಪತ್ರಿಕೆಗಳಲ್ಲಿ ಚೆಲ್ಲಿ ಹರಡಿ ಬಿದ್ದಿರುವ, ಪ್ರತ್ಯಕ್ಷದರ್ಶೀ ತಥ್ಯ ಪ್ರಾಮಾಣಿಕ ವಕ್ತವ್ಯಗಳಿಂದ ಅಂದಿನ ಆ ಭೀಷಣತೆಯ ಯತ್ಕಿಂಚಿತ್ ಅನುಭವಗಳಿಸುವುದು ಸಾಧ್ಯವಿದೆ. ನಾವು ಬರೇ ಪಶ್ಚಿಮ ಪಂಜಾಬದ ಹಿಂದುಗಳ ಅವಸ್ಥೆಯನ್ನಷ್ಟೇ ಗಮನಿಸಿದರೂ ನಮ್ಮ ಕಣ್ಣು ತೆರೆಯಬಹುದು. ಈ ಸಮಯದಲ್ಲಿ ಪ್ರಕಾಶಿತವಾದ ಕೆಲವು ಗೈರ್ ಸರಕಾರೀ ತಥ್ಯಗಳನುಸಾರವಾಗಿ [illegible] ಮಂದಿ ಶರಣಾರ್ಥಿ ಶಿಬಿರದಲ್ಲಿ [illegible] ಮಂದಿ ಕೊಲ್ಲಲ್ಪಟ್ಟರು [illegible] ಸ್ತ್ರೀಯರ [illegible] ಮೊದಲು ಸಾರ್ವಜನಿಕ [illegible] ಸಿಂಧಿಯಲ್ಲಿ ನಡೆದ [illegible] ಸಾಕ್ಷಾತ್ ರಕ್ತದ ನದಿ ಹರಿಯಿತು [illegible] ಗಾಂಧೀಜಿಯವರ [illegible] ತರಾಗಿ ಅಲ್ಲಿಯ [illegible] ಕಣ್ಣೀರು ಸುರಿಸಿದರು [illegible] ಸ್ವರೂಪದಲ್ಲಿ [illegible] ಬಾಯಲ್ಲಿ ನಡೆದ ಭೀಷಣ ಕೃತ್ಯಗಳ ಕುರಿತು ಸಾಕಷ್ಟು ಅನುಭವವನ್ನು ಪಡೆಯಬಹುದು. ಅಂದಿನ ಪೂರ್ವ ಪಂಜಾಬದ ಪ್ರಖ್ಯಾತ ರಾಜನೈತಿಕ ವ್ಯಕ್ತಿಗಳಾಗಿದ್ದ ಶ್ರೀ ಕೃಷ್ಣಲಾಲ ಎಂಬವರು ತತ್ಕಾಲೀನ ಸ್ಥಿತಿಯನ್ನು ತಮ್ಮ "ಆಪ್‌ಬೀತಿ" ಎಂಬ ಗ್ರಂಥದಲ್ಲಿ ಹೀಗೆ ಉಲ್ಲೇಖಿಸಿದ್ದಾರೆ—

"ಪಿಂಡವಾದನ" ಖಾನದಿಂದ ೨೩ನೇ ಸಪ್ಟಂಬರ ೧೯೪೭ರಂದು ನಾವು ಮೂವತ್ತು ಮೂರು ನೂರು ಮಂದಿ ಹಿಂದುಗಳು ಸ್ಪೆಶಲ್ ಗಾಡಿಯಿಂದ ಹಿಂದುಸ್ತಾನದತ್ತ ಹೊರಟೆವು. ಗಾಡಿಯ ರಕ್ಷಣೆಗಾಗಿ ಒಂದು ಸಣ್ಣ ಮುಸಲ್ಮಾನ ಸೈನ್ಯದ ತುಕಡಿಯೊಂದು ನಮ್ಮ ಜೊತೆಯಲ್ಲಿತ್ತು ... ... ಬಾಜೀರಬಾದದಿಂದ ಹೊರಟ ಗಾಡಿ ರಾತ್ರಿ ಹನ್ನೊಂದು ಗಂಟೆಗೆ ಕಾಮೋಕಿ ಸ್ಟೇಶನಿನಲ್ಲಿ ನಿಂತಿತು. ಸ್ಟೇಶನಿನ ಸುತ್ತ ಮುತ್ತ ನಿಂತಿದ್ದ ಮುಸಲ್ಮಾನ್ ಗೂಂಡಾಗಳು ಜಯ ಘೋಷಣೆಗೈಯುತ್ತಿದ್ದರು. ೫೦ ಮಂದಿ ಸಶಸ್ತ್ರ ಸೈನಿಕರು ಹಾಗೂ ೧೨ ಮಂದಿ ಇನ್ಸ್‌ಪೆಕ್ಟರರು ಪ್ಲಾಟ್‌ಫಾರ್ಮಿಗೆ ಬಂದರು. ಅವರು ಪ್ರತಿಯೊಬ್ಬ ನಿರಾಶ್ರಿತನ ತಲಾಶಿ ತೆಗೊಂಡರು. ಬಂಗಾರ, ಬೆಳ್ಳಿ, ಹಣ ಆಭರಣಗಳು, ರೇಶಿಮೆ ಮತ್ತು ಉಣ್ಣೆಯ ವಸ್ತ್ರಗಳನ್ನು ಕೂಡಾ ನಮ್ಮಿಂದ ಕಸಿದುಕೊಳ್ಳಲಾಯ್ತು. ಲೈಸೆನ್ಸ್ ಪಡೆದಿದ್ದ ಶಸ್ತ್ರಾಸ್ತ್ರಗಳನ್ನೂ ಕಿತ್ತುಕೊಳ್ಳಲಾಯಿತು. ಸಣ್ಣ ಸಣ್ಣ ಚೂರಿಗಳನ್ನೂ ನಮ್ಮಿಂದ ಸೆಳೆದುಕೊಳ್ಳಲಾಯಿತು. ಅನಂತರ ಗೂಂಡಾಗಳಿಗೆ ಸಂಕೇತಗೈದು ಪೋಲೀಸರು ಪ್ಲಾಟ್‌ಫಾರ್ಮಿನಿಂದ ಹೊರಟು ಹೋದರು. ಒಬ್ಬ ಇಸ್ಲಾಮೀಯ ಗೂಂಡಾ ಒಬ್ಬ ತಾಯಿಯು ತೊಡೆಯಲ್ಲಿ ಹಾಲುಣ್ಣುತ್ತಾ ಮಲಗಿದ್ದ ಶಿಶುವನ್ನು ಸೆಳೆದನು. ಹತ್ತಿರವೇ ಬಿದ್ದಿದ್ದ ಇಟ್ಟಿಗೆಯೊಂದನ್ನೆತ್ತಿ ಆ ತಾಯಿ ಅವನ ತಲೆಗೆಸೆದಳು. ಇಷ್ಟರೊಳಗಾಗಿ ಆಕ್ರಮಣಕಾರಿಗಳೆಲ್ಲರೂ ಎಲ್ಲಾ ಬೋಗಿಗಳನ್ನು ಪ್ರವೇಶಿಸಿ ಖಡ್ಗ, ಚೂರಿ ಮತ್ತು ಕೊಡಲಿಗಳಿಂದ ನರಮೇಧಗೈಯಲು ಆರಂಭಿಸಿದ್ದರು. ಪ್ರಾಣ ಉಳಿಸಿಕೊಳ್ಳಲಿಕ್ಕಾಗಿ ತಪ್ಪಿಸಿಕೊಂಡು ಓಡುತ್ತಿದ್ದ ಹಿಂದುಗಳನ್ನು ನಮ್ಮ ರಕ್ಷಣೆಗಾಗಿ ಬಂದಿದ್ದ ಸೈನ್ಯವೇ ಗುಂಡಿಟ್ಟು ಬೇಟೆಯಾಡಿತು ಮಕ್ಕಳು ಮುದುಕರು ಮತ್ತು ತರುಣರನ್ನು ನಾಶಗೈದ ಬಳಿಕ ತರುಣಿಯರನ್ನು ಮುಸಲ್ಮಾನರು ಬಂಧಿಸಿದರು. ದಂಡೋಬಾದ ಪ್ರಸಿದ್ಧ ಗುತ್ತೇದಾರರಾಗಿದ್ದ ಲಾಲಾ ಗೋಕುಲಚಂದರ ಪತ್ನಿ ತನ್ನ ಮಗುವಿನೊಡನೆ ಪ್ಲಾಟ್ ಫಾರ್ಮಿನಲ್ಲಿ ಕಣ್ಣು ಬಾಯಿ ಬಿಡುತ್ತಾ ನಿಂತಿದ್ದಳು ಮುಸಲ್ಮಾನರು ಮೊದಲು ಮಗುವನ್ನು ಇರಿದರು, ಅನಂತರ ತಾಯಿಯನ್ನು ಕೊಂದರು ಗಾಯಗೊಂಡು ಒದ್ದಾಡುತ್ತಿದ್ದ ಆ ಮಗುವಿನ ಕಾಲಿಗೆ ಹಗ್ಗ ಕಟ್ಟಿ ಎಳೆದುಕೊಂಡು ಹೋಗಿ ಹತ್ತಿರದಲ್ಲಿಯೇ ಇದ್ದ ಹಾಳು ಬಾವಿಗೆ ಎಸೆಯಲಾಯ್ತು. ಇದೆಲ್ಲವನ್ನು ಕಣ್ಣಾರೆ ಕಂಡು ನನಗೆ ಕಣ್ಣು ಕತ್ತಲೆ ಬಂದು ಬಿಟ್ಟಿತು ನಾನು ಸ್ಮೃತಿ ತಪ್ಪಿ ಬಿದ್ದು ಬಿಟ್ಟೆನು. ಹೆಣಗಳ ಮಧ್ಯೆ ನಾನ ಬಿದ್ದುದರಿಂದ ಗೂಂಡಾಗಳಿಗೆ ನಾನು ಜೀವಂತವಿದ್ದುದು ತಿಳಿದಿರಲಿಲ್ಲ ಸಾಯಂಕಾಲ ೫ ಗಂಟೆಗೆ "ಡೋಗ್ರಾ" ಸೈನ್ಯ ಬಂದು ಆಕ್ರಮಣಕಾರಿಗಳ ಮೇಲೆ ಗುಂಡೆಸೆತಗೈದಾಗಲೇ ಅವರು ಪರಾರಿಯಾದರು."

(ಹನ್ನೆರಡನೇ ಪುಟ ನೋಡಿರಿ)

ನಿಮಗಾಗಿ ಮತ್ತೊಂದು ಆಕರ್ಷಕ ಯೋಜನೆ!

ಕ್ಯಾಮುಲೇಟಿವ್ ಎನ್ಯುಟಿ ಠೇವಣಾತಿಗಳು

ಕೆಲವು ವೈಶಿಷ್ಟ್ಯಗಳು......

- ಪ್ರತಿ ತಿಂಗಳಿಗೂ ರೂಪಾಯಿ 10/- ಪ್ರಕಾರ 24 ತಿಂಗಳ ಠೇವಣಿ.
- ತಿಂಗಳಿಗೆ ರೂಪಾಯಿ 10/-ರಂತೆ 27 ತಿಂಗಳ ಮರುಪಾವತಿ. ಅಂದರೆ 30 ರೂಪಾಯಿ ಬಡ್ಡಿ ಲಭಿಸುವುದು.
- ಹಣ ಪಾವತಿ ಸ್ವೀಕರಿಸಲು ನೀವು ಪ್ರತೀ ಸಾರಿ ಬರಬೇಕಾಗಿಲ್ಲ. ನಿಮ್ಮ ಸೇವಿಂಗ್ಸ್ ಖಾತೆಗೆ ಸದರಿ ಮೊತ್ತವನ್ನು ಜಮಾಗೊಳ್ಳುವ ವ್ಯವಸ್ಥೆಯು ಸಾಧ್ಯವಾಗುವುದು.
- ನೀವು ಅಪೇಕ್ಷೆ ಪಟ್ಟಿದ್ದಾದರೆ, ಪೂರ್ಣಾವಧಿಯ ನಂತರವೂ ಠೇವಣಿಯನ್ನು ಪುನರಾವರ್ತಿಸಬಹುದು
- ಅಂತಹ ಸಂದರ್ಭದಲ್ಲಿ ಹೊಸ ಠೇವಣಿಯ ತಿಂಗಳ ಕಂತುಗಳು ಪೂರ್ಣವಾದ ಹಳೇ ಠೇವಣಿಯಿಂದ ತಾನಾಗಿಯೇ ಪಾವತಿಯಾಗುವುವು.

ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ವಿಚಾರಿಸಿರಿ.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರೆಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು, 200ಕ್ಕೂ ಮಿಕ್ಕಿ | ಠೇವಣಿ ನಿಧಿ ರೂ 70 ಕೋಟಿಗೂ ಮಿಕ್ಕಿ

ಚಂದಾದಾರರಲ್ಲಿ ವಿನಂತಿ.

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 14ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 45ನೇ ಹೊಸ ವರ್ಷಾರಂಭವಾಗುವುದು. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಆರ್ಡರು ದ್ವಾರಾ ಯಾ ಸಿಂಡಿಕೇಟ್ ಬ್ಯಾಂಕಿಗೆ ಸಮೀಪದ ಶಾಖೆಯಲ್ಲಿ "ನವಯುಗದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇವೆ.

ಮೆನೇಜರ್
ನವಯುಗ, ಉಡುಪಿ.

ಕಚ್ಛ್ ಒಪ್ಪಂದದಲ್ಲಿರುವ ಒಪ್ಪಲಾಗದಂತಹ ವಿಷಯಗಳೇನು?

ಬರೆದವರು: ಶ್ರೀ ಶಿವಶಂಕರ.

ಭಾರತದ ಪ್ರಧಾನಿಯವರು ವಿಲಾಯತಿಯಿಂದ ಹಿಂತಿರುಗುವಾಗ ವಿಲ್ಸನ್‌ರಿತ್ರ ಸಮರ ಸಂಧಾನ ಸ್ತ್ರೀಯನ್ನು ಜೊತೆಯಲ್ಲೇ ಕರೆದುಕೊಂಡು ಬಂದರು. ತನಗೊಪ್ಪಿಗೆಯಾಗದಂತಹ, ವಿಚಿತ್ರ ವಿಲಾಯತಿ ವನಿತೆಯನ್ನು ಕರೆದುಕೊಂಡು ಬಂದಾಗ ತಾಯಿ-ತಂದೆ, ಅಣ್ಣ-ತಮ್ಮ, ಅಕ್ಕ-ತಂಗಿ ....ಹೀಗೆ ಎಲ್ಲರೂ ಒಮ್ಮೆಲೇ ಕೋಪದಿಂದ ರೇಗಾಡುವದು ಸ್ವಾಭಾವಿಕ. ಅವರ ಕೋಪಾಗ್ನಿಯಲ್ಲಾಕೆ ಸುಟವಿಟ್ಟ ಚಿನ್ನಾದಂತೆ ಕಂಡು ಬಂದಲ್ಲಿ ಆಗ ಅವರೆಲ್ಲರೂ ತಮ್ಮ ಮೂರ್ಖತನಕ್ಕೋ ಭೋಳೇತನಕ್ಕೋ ಛೀಮಾರಿ ಹಾಕಿಕೊಳ್ಳುವದುಂಟು....ಅಲ್ಲಿವರೆಗೆ ಆಕೆಯನ್ನು ಸಂಶಯಪೂರ್ಣ ದೃಷ್ಟಿಯಿಂದ ಕಾಣಲಾಗುತ್ತದೆ. ಹಾಗಾಗಿದೆ ಇಂದು ನಮ್ಮ ಪ್ರಧಾನಿ ಶ್ರೀ ಲಾಲಬಹದೂರಜೀಯವರು ವಿಲಾಯತಿಯಿಂದ ತಂದಿರುವ ಕಚ್ಛ್ ಕದನ ವಿರಾಮ ಒಪ್ಪಂದದ ಸ್ಥಿತಿ.

ಪಾಕಿಸ್ಥಾನ ಹಾಗೂ ಚೈನಾವೊಂದಿಗೆ ಒಪ್ಪಂದ ಮಾಡಿಕೊಳ್ಳುವದಿದ್ದಲ್ಲಿ ಸಂಸತ್ ಸದಸ್ಯರಿಗೆ ತಿಳಿಸಿಯೇ ಮುಂವಡಿಯಿಡುವದಾಗಿ ಪ್ರಧಾನಿಯವರು ಸ್ಪಷ್ಟವಾಗಿ ಸೂಚಿಸಿದ್ದರೂ, ಲಂಡನ್ನಿಗೆ ಗಟ್ಟಿ ಮನಸ್ಸಿನಿಂದ ಹೋದ ತರುಣಾಂಗ ತಳಕು ಬೆಳಕಿನ ಬಿಳಿ ಚರ್ಮಕ್ಕೆ ಮರುಳಾಗಿ, ಹಿಂತಿರುಗುವಾಗ ಜೊತೆಯಲ್ಲಿ ಧಿನ್ನಾಣಗಿತ್ತಿಯನ್ನು ಅಥವಾ ತಮ್ಮ ಪ್ರೇಮ ಪ್ರತ್ಥಿಗಳನ್ನು ಕರೆದುಕೊಂಡು ಬರುವಂತೆ, ಸಂಧಾನ ಸ್ತ್ರೀಯನ್ನು ಕರೆದುಕೊಂಡೇ ಬಂದು ಬಿಟ್ಟರು. ಇದರಿಂದ ಇಡೀ ಸಂಸತ್ ಸಭೆಯು [ಲೋಕ ಸಭೆ ಹಾಗೂ ರಾಜ್ಯ ಸಭೆ] ಸದಸ್ಯರು ಸಿಡಿದೇಳುವದು ಸಹಜವೇ ಸರಿ.

ಒಪ್ಪಂದದ ಸಮಯ ಇತ್ತಂಡದವರೂ ಗಮನಿಸುವ ವಿಷಯವೊಂದಿದೆ—ಅದುವೇ ತಮ್ಮ ಸ್ವದೇಶ ಬಾಂಧವರ ಸಂಗತಿ; ಯುದ್ಧ ಕೈದಿಗಳಾಗಿ ವಿರೋಧಿಗಳ ಕಾರಗೃಹದ ನರಕದಲ್ಲಿ ಕೊಳೆಯುತ್ತಿರುವ ಸಹೋದರರ ಬಿಡುಗಡೆಗಾಗಿ ಪ್ರಯತ್ನಿಸುವದು. ಆದರೆ ಈ ಒಪ್ಪಂದದ ಸಮಯ ಅಂತಹ ಮಾತು ಮೇಲೆದ್ದಿತ್ತೇ ಎನ್ನುವದೇ ಸಂದೇಹಕ್ಕೆಡೆ ಕೊಡುತ್ತಿದೆ. ಒಪ್ಪಂದದಲ್ಲಂತೂ ಅದರ ಉಲ್ಲೇಖವೇ ಇಲ್ಲ. ಅಂದರೆ, ನಮ್ಮ ಸ್ವದೇಶ ಬಾಂಧವರ್ಯಾರೂ—ಇತರೆಡೆಗಳಲ್ಲಿ ಹಾಗಿರಲಿ, ಕಚ್ಛ್ ಕದನ ಕಣದಲ್ಲಿ ಬಂಧಿತರಾಗಿ ಪಾಕಿಸ್ಥಾನಿ ಪ್ರೇತಗಳ ಕೈಗೆ ಸಿಕ್ಕಿ ಬಿದ್ದಿಲ್ಲವೇನು? ಬಂಧಿತರಾಗಿ ಪಾಕಿಸ್ಥಾನ್ ಪ್ರೇತಾಗಾರದಲ್ಲಿ ಬಂಧಿತ ಭಾರತೀಯರು ಬವಣೆ ಪಡುತ್ತಿದ್ದಾರೆ. ಅಲ್ಲದೆ ಇತ್ತೀಚೆಗೊರ್ವ ಭಾರತೀಯ ವೈಮಾನಿಕನನ್ನು ಉಪಾಯದಿಂದ ಪಾಕಿಸ್ಥಾನಿಗಳು ಸೆರೆ ಹಿಡಿದಿರುವ ಸಮಾಚಾರವನ್ನು ಸಹೋದರರು ಮರೆತಿರಲಿಕ್ಕಿಲ್ಲ. ಹಾಗಿದ್ದರೂ ಸಂಧಾನ ಶಾಸ್ತ್ರಿ ಶ್ರೀ ಲಾಲಬಹದೂರಜೀಯವರು ಸ್ವದೇಶ ಬಾಂಧವರ ಬಿಡುಗಡೆಗಾಗಿ ಏಕೆ ಪ್ರಯತ್ನಿಸಲಿಲ್ಲ?—ಪಾಕಿಸ್ಥಾನಿಗಳಿಗೆ ಅದೆಲ್ಲ ಕೋಪ ಬರುತ್ತದೋ ಎನ್ನುವ ಭಯ. ಒಪ್ಪಂದದಲ್ಲೆಲ್ಲೂ ಅವರ ಉಲ್ಲೇಖವೇ ಇಲ್ಲದಿರುವಾಗ ಶಾಂತಿದೂತ ಶ್ರೀ ಲಾಲಬಹದೂರಜೀ ಸಂಧಾನ ಸರೋವರಕ್ಕೆ ಯುದ್ಧಕ್ಕೆ ದೀರ್ಘ ಬಿಡುಗಡೆಯ ಕಲ್ಲನ್ನೆಸೆದಾರೇ? ಕಲ್ಲನೆಸೆದಲ್ಲಿ ನೀರು ಕದಡುತ್ತದೆ. ಶಾಂತ ಜಲ ಕದಡಿದರೆ ಹೇಗಾದೀತು? ಇದರಿಂದ ನಮ್ಮ ಸೈನಿಕರು ಅದೆಷ್ಟು ಪಾಕಿಸ್ಥಾನಿ ಆಕ್ರಮಣಗಾರರನ್ನು ಬಂಧಿಸಿರುವರೆಂಬ ಸಂಗತಿ ಹೊರ ಬರುತ್ತದೆ. ನಮ್ಮ ಬಳಿ ಕೇವಲ ಕೆಲವೇ ಕೈದಿಗಳಿರುವದರಿಂದ, ಅಥವಾ, ನಮ್ಮ ಬಳಿ ಅವರ ಸೈನಿಕರೇ ಇಲ್ಲವೆಂದರೂ ತಪ್ಪಲ್ಲ, ಅಯೂಬಖಾನ ಅತ್ತ ಕಿವಿಗೊಡದಿರುವದು. ಅತ ಕಿವಿಗೊಡಲಿ, ಕಿವಿಗೊಡದಿರಲಿ ಶ್ರೀ ಲಾಲಬಹದೂರರಿಗೆ ಒಪ್ಪಂದ ಮಾಡಿಕೊಳ್ಳಬೇಕಾಗಿತ್ತು. ರೂಪ, ವರದಕ್ಷಿಣೆ, ಜಾತಿ, ಪಂಥ ವಗೈರೆಗಳ ಅಡ್ಡಿ ಬಂದು ಹರೆಯಕ್ಕೆ ಬಂದಿದ್ದರೂ ಮದುವೆಯಾಗದೆ ಉಳಿದಿರುವ ಹೆಣ್ಣು ಕೊನೆಯಲ್ಲಿ ಯಾರನ್ನಾದರೂ ಕಟ್ಟಿಕೊಳ್ಳುವಂತೆ ಅಥವಾ ಧನದಾಹದಿಂದ ತತ್ತರಿಸುತ್ತಿರುವಾತ ಹಣ ಯಾವ ರೀತಿಯಿಂದ ಬಂದರೂ ಕೈಯೊಡ್ಡುವಂತೆ ನಮ್ಮ ಪ್ರಧಾನಿಯವರೂ ಅದೆಂತಹ ಸಂಧಾನವಾದರೂ ಸೈ ಎಂದರು. ವಿಚಿತ್ರ ವಿಲ್ಸನರ ಸಲಹೆಗಳಿಗೆ ಕೈಯೊಡ್ಡಿದರು ಹೀಗೆ ಆರಂಭದಿಂದಲೇ ಶ್ರೀ ಲಾಲಬಹದೂರಜೀ ದುಃಖಿಸುತ್ತಿರುವುದನ್ನು ಕಾಣಬಹುದು. ಅದನ್ನೇ ಅವರ ಮಾತುಗಳಲ್ಲೂ ಕಾಣಬಹುದು.

ಒಪ್ಪಂದವನ್ನೊಪ್ಪದ ಭಾರತೀಯರು ಪ್ರತಿಭಟಿಸಲಾರಂಭಿಸಿದಾಗ, ತನ್ನ ಸಂಧಾನ ಚತುರತೆಗೆ ತಾನೇ ಪ್ರಶಂಸಾ ಪತ್ರವನ್ನೀಯುತ್ತ ಪ್ರಧಾನಿಯವರು ಇಂದು ಸರಕಾರವು ಕುಟುಂಬ ಯೋಜನೆ ಹಾಗೂ ಜನಸಂಖ್ಯಾ ಹತೋಟಿಯತ್ತ ಅಧಿಕಾಧಿಕ ಗಮನ ಕೊಡಬೇಕಾಗಿರುತ್ತದೆಂದರು. ಕಚ್ಛ ಕದನ ಒಡಂಬಡಿಕೆಯ ಕುರಿತು ಅವರು ಮಾತಾಡುತ್ತಿದ್ದರೆಂಬುದು ಇಲ್ಲಿ ಗಮನೀಯ ವಿಷಯವಿದೆ. ಒಂದು ದೊಡ್ಡ ರಾಷ್ಟ್ರದ ಪ್ರಧಾನಿಯವರು ಈ ರೀತಿ ಹೇಳುತ್ತಿದ್ದಾರೆ! ಆಕ್ರಮಣಗಾರರನ್ನು ಹಿಂದಟ್ಟುವ ಕಾರ್ಯಕ್ಕಿಂತಲೂ ಕುಟುಂಬ ಯೋಜನೆ ಹಾಗೂ ಜನಸಂಖ್ಯಾ ಹತೋಟಿಯ ಕಾರ್ಯ ಮುಖ್ಯವೇನು? ನಮ್ಮ ಸ್ವಲಾಭದ ಕಾರ್ಯಕ್ಕಾಗಿ ರಾಷ್ಟ್ರದ ಸ್ವಾಭಿಮಾನ ಹಾಗೂ ಗೌರವವನ್ನು ಗಾಳಿಪಾಲು ಮಾಡಿಬಿಡುವದೇ? ಜನಸಂಖ್ಯೆ ಜಾಸ್ತಿಯಾದಲ್ಲಿ ಅವರಿಗೆ ಸರಕಾರ ನಡೆಸಲು ಸಾಧ್ಯವಾಗಲಿಕ್ಕಿಲ್ಲವೇ? ಹಿಂಜರಿಯುವ ಈ ಮನೋಭಾವನೆಯ ಪೂರ್ಣ ಲಾಭವನ್ನು ಆಕ್ರಮಣಗಾರರು ಪಡೆಯುತ್ತಿದ್ದಾರೆ, ನಮ್ಮನ್ನು ನಾವೇ ನಾಶಮಾಡಿಕೊಳ್ಳುತ್ತಿದ್ದೇವೆ, ಅಲ್ಲದೆ ಇನ್ನವರು ನಾಶಮಾಡಿಕೊಳ್ಳುವುದಕ್ಕೆ ಆಸರೆ ಕೊಡುತ್ತಿದ್ದೇವೆ! ಹೀಗೆ ತಲೆಯನ್ನು, ಕಾಲನ್ನೂ ಬಾಕೀ ಕತ್ತರಿಯ ಬಾಯಿಗೆ ಸ್ವಸಂತೋಷದಿಂದ ನಾವೇ ಕೊಡುತ್ತಿದ್ದೇವೆ! ಅದಕ್ಕಿಂತ ಅವರು ಇನ್ನೊಂದು ರೀತಿಯ "ಕಾಮರಾಜ ಯೋಜನೆ"ಯನ್ನು ಕಾರ್ಯರೂಪಕ್ಕೆ ತರಬಹುದಾಗಿತ್ತು. [ಆದರಿಂದು "ಕಾಮರಾಜಯೋಜನೆ" ಯೆಂಬುದು ಹಾಸ್ಯದ ಮಾತಾಗಿಬಿಟ್ಟಿದೆ. ಸ್ವತಃ ಕಾಮರಾಜರವರೇ ತನ್ನ ಸೂತ್ರಗಳಿಗೆ ಗೌರವ ಕೊಡದಿದ್ದಲ್ಲಿ ಇನ್ನಾವನು ಕೊಡುವನು?] ತಂಪಿ ರಕ್ತದ ಮುದುಕರು ತಮ್ಮ ಸ್ಥಳ –ಪದವಿಗಳನ್ನು ಬಿಸಿ ರಕ್ತದ ತರುಣರಿಗೆ ಬಿಟ್ಟು ಕೊಡಬೇಕೆಂದು ಕಾಮರಾಜರು ಹೇಳುತ್ತ ಬಂದಿದ್ದಾರೆ. ಶ್ರೀ ಶಾಸ್ತ್ರೀಜೀಯವರು ಪಂಡಿತರಿದ್ದಾರೆ. ಅವರಿಗೆ ಶ್ರೀಮದ್ಭಗವದ್ಗೀತೆಯ ಶ್ಲೋಕಗಳು ಬಾಯಿಪಾಠ ಬರುತ್ತವೆ. ಇವೆರಡರ ಸುಮಧುರ ಸಂಗಮ ಕಾರ್ಯವನ್ನು ಶ್ರೀ ಲಾಲಬಹದೂರಜೀಯವರು ನಡೆಸಬಹುದಾಗಿತ್ತು. ಗುಣವಾಗದಂತಹ ಹಾಗೂ ಪಸರುವ ಭೀಕರ ರೋಗಗ್ರಸ್ಥರನ್ನು ಹಾಗೂ ಕೈಲಾಗದಂತಹ ಮುದುಕ–ಮುದುಕಿಯರನ್ನು ಅಲ್ಲದೆ ಇಂದು ಕಚ್ಛ್ ಕದನಕ್ಕೆ ಕಾರಣವಾಗಿರುವ ಪಾಕಿಸ್ಥಾನದ ನಿರ್ಮಾಣಕ್ಕೆ ಕಾರಣವೆನಿಸಿಕೊಂಡಿರುವ ಆಕ್ರಮಣಗಾರರಿಗೆ ಸ್ವಾಗತವೀಯಲಿರುವ ಎಲ್ಲಾ ವಿಷಜಂತುಗಳನ್ನು, ಅಂತೆಯೇ ನಾಗಾಲೇಂಡ್, ಗೋವಾಲೇಂಡ್, ಮಿಶ್ರೋಲೇಂಡ್‌ಗಳೆಂದು ಪ್ರತ್ಯೇಕ ಲೇಂಡ್‌ಗಳಿಗಾಗಿ ಗೊಂದಲವೆಬ್ಬಿಸುತ್ತಿರುವ ಲಂಡರನ್ನು ಮತ್ತು ಚೈನಾ-ರಷ್ಯಾದ ಆಕ್ರಮಣವನ್ನು ಸ್ವಾಗತಿಸುತ್ತಿರುವ ಸರ್ವ ರಾಷ್ಟ್ರ ವಿರೋಧಿ ವಿಷಜಂತುಗಳ ಸಂಪೂರ್ಣ ದಮನ ಕಾರ್ಯ ಮಾಡಬಹುದಾಗಿತ್ತು. ಇದರಿಂದ ಇನ್ನು ಮುಂದೆ ಕೂಡಾ ಇಂತಹ ಸಮಸ್ಯೆ ತಲೆದೋರುವದೂ ತಪ್ಪುತ್ತದೆ. ಶ್ರೀ ಕಾಮರಾಜರ ಸೂತ್ರಕ್ಕನುಸಾರವಾಗಿ ಹೇಳುವುದಿದ್ದಲ್ಲಿ ಈ ರಾಷ್ಟ್ರವಿರೋಧಿಗಳ ಸ್ಥಾನವನ್ನು ಭಾವೀಪ್ರಜೆಗಳಿಗೆ ಅಂದರೆ ಭಾರತದ ಸುಭದ್ರತೆಗಾಗಿ ತೆರವು ಮಾಡಬಹುದು. ಶ್ರೀ ಗೀತಾಚಾರ್ಯರ ಮಾತಿನಲ್ಲಿ ಹೇಳುವದಿದ್ದಲ್ಲಿ ರಾಷ್ಟ್ರ ವಿರೋಧಿ ದುಷ್ಟರ ದಮನಗೈದು, ನೈಜರಾಷ್ಟ್ರೀಯ ಶಿಷ್ಟರನ್ನು ಪರಿಪಾಲಿಸಬಹುದು. ಆದರೆ ಶ್ರೀ ಲಾಲ ಬಹದೂರ ಶಾಸ್ತ್ರೀಜೀ ಅವೆರಡರಿಂದಲೂ ಬಹು ದೂರ ಹೋಗಿಬಿಟ್ಟರು. ಕೆಂಪು ಅಥವಾ ರಕ್ತದಿಂದ ಅವರು ಬಹುದೂರ ಜಾರಲು ಪ್ರಯತ್ನಿಸಿರುವರು. ಒಪ್ಪಂದಕ್ಕೆ ಒಪ್ಪಿಯೇ ಬಿಟ್ಟಿರುವರು. ಲಾಲ್‌ದಿಂದ ದೂರ ಹೋಗುವ ಬದಲು ಅವರು ಸ್ವದೇಶ ಬಾಂಧವರ ರಕ್ತ ಮಡುವಿನಲ್ಲಿಯೇ ಮುಳುಗುವಂತಾಯಿತು. ತನ್ನ ವಿದ್ಯಾರ್ಥಿ ಜೀವನದಲ್ಲಿ ಕಡವಿಗೆ ಕಾಸುಕೊಡಲು ಸಾಧ್ಯವಾಗದೆ ಈಜಾಡಿಕೊಂಡು ಹೋಗಿ ವಿದ್ಯಾರ್ಜನೆಯಲ್ಲಿ ಶ್ರೀ ಲಾಲ್‌ಬಹದೂರ್‌ಜೀ ಸಫಲರಾಗಿರಬಹುದು. ಇಲ್ಲಿ ಹಾಗಲ್ಲ. ಅವರು ಈಜಾಡಿದ್ದು ಪವಿತ್ರ ಜಲದಲ್ಲಿ. ಗಂಗಾಮಾತೆ ಅವರನ್ನು ರಕ್ಷಿಸಿರುವಳು. ಸ್ವದೇಶ ಬಾಂಧವರ ರಕ್ತದ ಮಡು ಗಂಗೆ ಇರುವದಿಲ್ಲ. ಈ ರಕ್ತದ ಮಡುವಿನಲ್ಲಿ ಈಜಾಡಿ ಹೋಗಿ ಸಂಧಾನ ಕಾರ್ಯದಲ್ಲಿ ಸಫಲನಾಗುವೆನೆಂಬುದು ಅವರ ಮನಸ್ಸಿನ ಮಂಡಿಗೆಯೇ ಸರಿ, ಗಾಳಿ ಗೋಪುರವೇ ಸರಿ. ಇರಲಿ.

ಶಾಂತಿ-ಸಂಧಾನದ ವ್ಯಾಗ ಮರೀಚಿಕೆಯ ಹಿಂದುಗಡೆ ಓಡುವ ರಭಸದಲ್ಲಿ ಶ್ರೀ ಲಾಲಬಹದೂರ ಶಾಸ್ತ್ರೀಜೀ ಭಾರತದ ಸಂಸತ್ತನ್ನು ಮರೆಬಿಟ್ಟರೆಂದರೂ ತಪ್ಪಾಗಲಿಕ್ಕಿಲ್ಲ. ಹಿಂದೆಯೇ ತಿಳಿಸಿರುವಂತೆ ಆ ವೇಳೆಯಲ್ಲಿ ಸಂಧಾನ ಪತ್ರಕ್ಕೆ ಸಹಿಹಾಕಲಾಗಿರುತ್ತದೆ. ಇವೆಲ್ಲಾ ಶ್ರೀ ಲಾಲಬಹದೂರ ಶಾಸ್ತ್ರೀಜೀಯ ಸಂಧಾನ ಸಾಗರದ ಕರೆಯಲ್ಲಿರುವ ಮರಳ ರಾಶಿ. ಇನ್ನು ಆ ಸಂಧಾನಸಾಗರದಲ್ಲಿರುವದಾದರೂ ಏನು? ಅದೆಷ್ಟು ಆಳಕ್ಕಿಳಿದು ಹೋಗಿ ನೋಡಿದರೂ, ಹುಡುಕಾಡಿದರೂ ಅಲ್ಲಿ ಸಿಗುವದು ಕೇವಲ ಚಿಪ್ಪು, ಅಷ್ಟೇ. ಅಲ್ಲಿ ಮುತ್ತುರತ್ನಗಳಿರುವದಿಲ್ಲ, ಅದು ನಿಜವೇ ?

ಒಪ್ಪಂದ ನಡೆದಾಗ ಸಂಸತ್ತ್ ಸದಸ್ಯರು ಹಲವಾರೆಡೆಗಳಿಗೆ ಹೋಗಿದ್ದರು. ಅಂದರೆ ರಾಜ್ಯಸಭೆ ಹಾಗೂ ಲೋಕಸಭೆಯ ಅಧಿವೇಶನ ನಡೆಯುತ್ತಿರಲಿಲ್ಲ. ಶ್ರೀ ಲಾಲಬಹದೂರ ಶಾಸ್ತ್ರೀಜೀಯವ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ "ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು– "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ವಿಚಾರ ವೀಚಿ

ಆಯುರ್ವೇದದ ಪ್ರಗತಿ ಎಂದು ಸಾಧ್ಯ?

ಬರೆದವರು:
ಡಾ॥ ಕೆ. ಎಮ್. ಬಲ್ಲಾಳ, ಡಿ. ಎಸ್. ಎ. ಸಿ. ಕಿನ್ನಿಮೂಲ್ಕಿ.

ಪ್ರಾಚೀನ ವೈದ್ಯಕೀಯ ಶಾಸ್ತ್ರವಾದ ಆಯುರ್ವೇದವು ಹಿಂದೆ ರಾಜಾಶ್ರಯದಲ್ಲಿ ದೊಂಗುಡಿ ಇಡುತ್ತಿದ್ದ ಕಾಲವೊಂದಿತ್ತು; ಬರು ಬರುತ್ತಾ ಆಂಗ್ಲೇಯರ ದಾಸ್ಯ ಶೃಂಖಲೆಯಿಂದ ಭಾರತ ದೇವಿ ಪ್ರತಿಬದ್ಧಳಾದಾಗ ಆಯುರ್ವೇದವೂ ನರಳುತ್ತಾ ಬಂತು; ಆದಾಗ್ಯೂ ಸ್ವಾತಂತ್ರ್ಯ ಸಂಪ್ರಾಪ್ತಿಯಾದ ತರುವಾಯ ತಗ್ಗಿದ ತಲೆಯನ್ನು ಎತ್ತಲೆತ್ನಿಸಿತು ಆಯುರ್ವೇದ; ಇಂದು ಸರಕಾರವೂ ಅದಕ್ಕೆ ಸಂಪೂರ್ಣ ಸಹಕಾರವನ್ನೀಯದಿದ್ದರೂ, ತುಸು ಮಟ್ಟಿಗೆ ಸಹಾಯ ತೋರುವುದು ಒಂದು ಪುಣ್ಯವೆನ್ನಬೇಕು; ಇದಕ್ಕಿಂತಲೂ ಹೆಚ್ಚಿನದಾದ ಸಹಕಾರವೀಯಬೇಕು.

ಆಯುರ್ವೇದ, ಅಲೋಪಥಿ; ಶುದ್ಧಾಯುರ್ವೇದ; ಮಿಶ್ರಾಯುರ್ವೇದ ಎಂಬೀ ತುಮುಲ ವಿಪ್ಲವ ಇಂದು ಸದಾ ನಡೆಯುತ್ತಾ ಇದೆ. ಪ್ರಾಚೀನ ಕಾಲದಿಂದಲೂ ಅನೂಚಾನವಾಗಿ ನಡೆದು ಬಂದ ಈ ಆಯುರ್ವೇದವು ಶಕ್ತಿಹೀನವೆಂದು ಹಲವರ ಅಭಿಪ್ರಾಯವಾಗಿದೆಯಾದರೂ, ವಾಸ್ತವಿಕವಾಗಿ ಆಯುರ್ವೇದವು ಚಿಕಿತ್ಸಾ ಶಾಸ್ತ್ರಗಳೆಲ್ಲಕ್ಕೂ ಮೂಲಭೂತವಾದ ಆಧಾರ ಸ್ತಂಭವಾಗಿದೆ; ಆಯುರ್ವೇದವು ಸಹಜವಾಗಿ ಸತ್ವಹೀನ, ಶಕ್ತಿಹೀನವಾಗಿದ್ದರೆ, ಇಂದದು ತನ್ನ ಮೇಲೆ ಬಂದೆರಗುತ್ತಾ ಇರುವ ಅಭೇದ್ಯ ಧಾಳಿಯಿಂದ ನುಚ್ಚುನೂರಾಗಿ, ಹೇಳ ಹೆಸರಿಲ್ಲದಾಗಬೇಕಿತ್ತಾದರೂ, ಅದು ಮತ್ತೂ ಮತ್ತೂ ಬೆಳೆಯುತ್ತಾ ಇದೆ; ಇನ್ನೂ ಇನ್ನೂ ಘನ ವ್ಯಾಧಿ ಪರಂಪರೆಗಳನ್ನು ಹತಗೊಳಿಸುತ್ತಾ ಇದೆ. ದೇಶದಾದ್ಯಂತ ಆಯುರ್ವೇದ ಕಾಲೇಜುಗಳು ಕಾಣಿಸಿಗೊಳ್ಳುತ್ತಾ ಇವೆ; ನೂರಾರು ವಿದ್ಯಾರ್ಥಿಗಳು ಹೊರ ಬಂದು ಯಶಸ್ವೀ ಚಿಕಿತ್ಸಕರಾಗಿದ್ದಾರೆ. ಹಾಗಾದರೆ ಈ ಆಯುರ್ವೇದದ ಬಗ್ಗೆ ಕೆಲ ಜನರಿಗೆ ಅಷ್ಟು ತಾತ್ಸಾರವೇಕೆ? ಅದೇಕೇ ಪಾಶ್ಚಾತ್ಯ ಚಿಕಿತ್ಸಾ ಕ್ರಮದಂತೆ ಪ್ರಗತಿಯಾಗಲಿಲ್ಲದು? ಈ ಎಲ್ಲಾ ಸಮಸ್ಯೆಗಳಿಗೆ ಸಂಕ್ಷೇಪವಾಗಿ, ಸಾಧ್ಯವಿದ್ದಷ್ಟು ಉತ್ತರಿಸುವುದು ಈ ಲೇಖನ ಉದ್ದೇಶವಾಗಿದೆ.

ತೀವ್ರ ವೇಗದಿಂದ, ಬಾಹ್ಯ ಸೌಂದರ್ಯದಿಂದ, ಸರ್ವತೋಮುಖ ಸಹಕಾರದಿಂದ, ಶೀಘ್ರ ಗುಣಕಾರಿಯಾದ (Rapid in action) ಜನತೆಯ ಮನ ಸೆಳೆದ ಪಾಶ್ಚಾತ್ಯ ವೈದ್ಯಕೀಯ ವರ್ತುಲದ ಪ್ರಾಬಲ್ಯವು ಆಯುರ್ವೇದದ ಅಲ್ಪ ಕುಂಠಿತತನಕ್ಕೆ ಹೇತುವಾಗಿದೆ. ಇನರಂತೆ ಆಯುರ್ವೇದದಲ್ಲೂ ಶೀಘ್ರಗತಿಯಲ್ಲಿ ಸುಧಾರಣೆಯಾಗುವುದು ಭಾರತೀಯ ವೈದ್ಯ ದೃಷ್ಟಿಯಲ್ಲಿ ಸಮಂಜಸವಾಗಿದೆ; ಈಗ ಆಯುರ್ವೇದ ಪ್ರಗತಿಗೆ ಕಾರಣಗಳನ್ನು, ಅದರ ಸುಧಾರಣೆಗೆ ಅತ್ಯಗತ್ಯವಾದ ಅನುಕೂಲತೆಗಳನ್ನ ಆಮೂಲಾಗ್ರವಾಗಿ ವಿವೇಚಿಸುವ; ಅದರಂತೇ ಮುಂದರಿಯೋಣ.

ನಾವು ಭಾರತೀಯರಾಗಿ, ಭಾರತದ ನೆಲದಲ್ಲಿ ಜನಿಸಿ, ನಮ್ಮ ಪ್ರಕೃತಿ; ದೇಹಕ್ಕನುಸರಿಸಿ ಸೃಜಿಸಲ್ಪಟ್ಟ ಭಾರತ ನೆಲದಲ್ಲೇ ಬೆಳೆದ ಬೃಹತ್ ಮಹತ್ ಪ್ರಯೋಜನೆಗಳಿನ್ನೂ ದಿನಂಪ್ರತಿ ಅಗ್ಗದಲ್ಲಿ ಸಿಗುವ ಗಿಡ ಮೂಲಾದಿಗಳನ್ನೂ ಕಡೆಗಣಿಸಿ, ಸಹಸ್ರಾರು ರೂಪಾಯಿಗಳನ್ನು ಪರದೇಶದ ಔಷಧಿಗಳಿಗೆ ವಿನಿಯೋಗಿಸುತ್ತಿದ್ದೇವೆ; ಹಾಗೆಂದು ಪಾಶ್ಚಾತ್ಯ ವೈದ್ಯಕವನ್ನು ನಾವು ದೂರುವುದು; ದೂಷಿಸುದೆಂದಲ್ಲ; ಅದರ ಪ್ರಯೋಜನ ಕೂಡಾ ನಮಗೆ ಅತ್ಯಾವಶ್ಯಕ. ಆದರೆ, ನಿಂತ ಪಕ್ಕೆ; ಕೂತುದ್ದಕ್ಕೆ, ಅಲೋಪಥಿ ಚಿಕಿತ್ಸೆಗೆ ಮೊರೆ ಹೋಗುವ 'ಫ್ಯಾಶನೇಬಲ್'' ಮನೋವೃತ್ತಿ ಮಾತ್ರ ಒಳ್ಳೇದಲ್ಲ; ಆಧುನಿಕ ಯುಗದ ಪರಿಸ್ಥಿತಿಗನುಸಾರವಾಗಿ ಆಯುರ್ವೇದದೊಂದಿಗೆ ಪಾಶ್ಚಾತ್ಯ ಚಿಕಿತ್ಸಾ ಕ್ರಮವನ್ನ ಸ್ವಲ್ಪ ಮಟ್ಟಿಗೆ ಬಳಸಿಕೊಳ್ಳುವುದು ರೋಗಿಗಳ ಹಾಗೂ ವೈದ್ಯರ ಹಿತದೃಷ್ಟಿಯಲ್ಲಿ ಸರ್ವಸೂಕ್ತವೆಂದು ನನ್ನ ಅಭಿಮತ. ಕಾರಣ, ಒಬ್ಬರು ಹೇಳಿದಂತೆ "Now a days the paticst has got no patience" ಇಂದು ರೋಗಿಗೆ ವ್ಯಾಧಿ ಬಕ್ಕನೆ ಗುಣವಾಗಬೇಕಾಗಿದೆ. ಉದಾ: ಒಬ್ಬಾತ ಗಂಟು ನೋವಿನಿಂದ ತೀವ್ರವಾಗಿ ನರಳುವಾಗ, ಪ್ರಥಮವಾಗಿ ಅವನ ನೋವು ಕಡಿಮೆಯಾಗಲು ವೇದನಾಹರವಾದ ಇಂಜಕ್ಷನ್; ಗುಳಿಗೆಗಳನ್ನ ಕೊಟ್ಟು, ತದನಂತರ ಸಾವಧಾನವಾಗಿ ಆಯುರ್ವೇದ ಚಿಕಿತ್ಸೆಗೈದು, ರೋಗವನ್ನು ನಿರ್ಮೂಲನಗೈಯ್ಯುವುದು ಹಿತಕರ. ಇದರಿಂದ ರೋಗಿಗೂ ವೈದ್ಯರ ಮೇಲೆ ತುಂಬ ಭರವಸೆ ಉಂಟಾಗುತ್ತದೆ. ಬದಲು ಆರಂಭದಲ್ಲೇ ವೈದ್ಯ ಆಯುರ್ವೇದ ಚಿಕಿತ್ಸೆಗೈಯ್ಯಲು ಉಪಕ್ರಮಿಸಿದಾಗ, ರೋಗಿಯು ತಾಳ್ಮೆ ಸತ್ತು ಆತ ಬೇರೆ ಡಾಕ್ಟರ ಮೊರೆ ಹೋಗುವುದು ಅನಿವಾರ್ಯ. ಪಾಪದ ಈ ಶುದ್ಧಾಯುರ್ವೇದ ವೈದ್ಯನ ಪಾಡು ನೊಣ ಓಡಿಸುತ್ತಾ ರೋಗಿಗಳನ್ನು ಕಾಯುವುದು ದಿನ ನಿತ್ಯದ ಕಸುಬಾಗುತ್ತದೆ. ಆದುದರಿಂದ ಆಯುರ್ವೇದದೊಂದಿಗೆ ಅಲೋಪಥಿ ಚಿಕಿತ್ಸೆಯನ್ನು ಉಪಯೋಗಿಸಲು ಇಂಬು ದೊರಕಿಸಿ ಕೊಟ್ಟರೆ, ತುಂಬಾ ಪ್ರಯೋಜನವಿದೆ. ಇದರಿಂದ ಆಯುರ್ವೇದಕ್ಕೆ ಎಂದೂ ಅಪಕಾರವಾಗದು; ಅಪಚಾರವಾಗದು. ಬದಲಾಗಿ ಆಯುರ್ವೇದದ ಹಿರಿಮೆ; ಗರಿಮೆ; ಉಚ್ಛ್ರಾಯವಾಗುತ್ತದೆ; ಮಾನ್ಯ ಸರಕಾರವೂ ಈ ಬಗ್ಗೆ ತುಂಬಾ ನೆರವು ನೀಡುವುದು ಅತ್ಯಗತ್ಯ.

ರಾಜಾಶ್ರಯವಿಲ್ಲದೆ, ಆಯುರ್ವೇದವು ಇಂದು ಇಳಿಮುಖವಾಗಿದೆ. ಸಾಮಾನ್ಯ ವ್ಯಕ್ತಿಯೊಬ್ಬ ತನ್ನ ಉದರಂಭರಣಕೋಸುಗ ಅದನ್ನು ಬಳಸಿದುದರಿಂದ ಅದರ ಸತ್ವ ಇಳಿಮುಖವಾದುವು. ಅಂದರೆ, ಆಯುರ್ವೇದದ ಶಾಸ್ತ್ರದ ಅನುಭವವಿಲ್ಲದೆ, ಕೆಟಲಗ್ ನೋಡಿಕೊಂಡು ಔಷಧಿ ಕೊಡುವ ಕುವೈದ್ಯ ಸಂಖ್ಯಾ ಬಾಹುಲ್ಯದಿಂದ ಈ ಆಯುರ್ವೇದವು ತನ್ನ ಬಲವನ್ನು ಕಳೆದುಕೊಂಡಿತು.— ಹಳ್ಳಿಯಲ್ಲಿ ಆನುವಂಶಿಕವಾಗಿ ಒಬ್ಬಾತನಿಗೆ ತಿಳಿದಿದ್ದ ಮಹತ್ ಯೋಗದಿಂದ ಸಾವಿರಾರು 'ಕಾಮಿಲಾ' (Jaundice) ರೋಗ ಗುಣವಾಗುತ್ತಿದ್ದರೂ, ಆತ ಅಸು ನೀಗುವಾಗ, ಅದನ್ನು ಮಾತ್ರ ತನ್ನ ಕರುಳಿನ ಭಾಗವಾದ ಮಗನಿಗೂ ಹೇಳದೆ, ಸತ್ತಾಗ ಅದರಿಂದ ಬಂದ ಪ್ರಯೋಜನವೇನು? ಹೀಗೆಯೇ ಅಪ್ರತಿಮ ಏಕಮೂಲಿಕಾದಿ ಪ್ರಯೋಗಗಳು 'ಗುಟ್ಟು ಗುಟ್ಟೆಂಬ' ಸಂಕುಚಿತ ಪ್ರವೃತ್ತಿಯಿಂದ ಹೇಳ ಹೆಸರಿಲ್ಲದೆ ನಾಶವಾದುವು. ಅಪ್ರತಿಮ ಗ್ರಂಥಾದಿಗಳು ಕೆಲವು ಔರಂಗಜೇಬನ ರಾಜ್ಯಕಾಲದಲ್ಲಿ ಅಗ್ನಿಗೆ ಆಹುತಿಯಾದುವು. ಇನ್ನು ಕೆಲವು ಬ್ರಿಟಿಷರ ಅಧಿಕಾರ ದರ್ಪದಿಂದ ಭಸ್ಮೀಭೂತವಾದುವು, ಕೆಲವು ಮಂಗನ ಕೈಯಲ್ಲಿನ ಮಾಣಿಕ್ಯದಂತೇ ಆಯುರ್ವೇದ ಪರಿಜ್ಞಾನ ರಹಿತರ ಕೈಯಲ್ಲಿ ಸಿಕ್ಕು ಧೂಳೀ ಧೂಸರಿತವಾದುವು. ಇದರ ಮಧ್ಯೆ ಆಯುರ್ವೇದದಲ್ಲೇ ಅಲ್ಲಲ್ಲಿ ಅಂತಃಕಲಹದ ಗಾಢ ಧೂಮ ದಟ್ಟವಾಗಿ ಹಬ್ಬಲಾರಂಭಿಸಿತು; ವೈದ್ಯ—ವೈದ್ಯರೊಳಗೆ ವಿದ್ವೇಷದ ಉರಿಗಾಳಿ, ದಟ್ಟ ಹಾವಳಿ ನೆಲೆಸಿತು; ಮಾತ್ಸರ ತಲೆ ಹಾಕಿತು. ಇದೇ ಸುವರ್ಣ ಸಂದರ್ಭವೆಂದು ಎಲೋಪಥಿ ತನ್ನ ತಲೆ ನುಗ್ಗಿಸಿತು ಆಕರ್ಷಕ ಬಣ್ಣ; ರುಚಿ; ಶೀಘ್ರ ಗುಣದಾಯಕವಾಗಿ ಕಂಡು ಬಂದ ಅಲೋಪಥಿಕ್ ಜನರನ್ನು ತನ್ನೆಡೆಗೆ ಆಕರ್ಷಿಸಿತು; ತಾಳ್ಮೆ ರಹಿತರಾದ ಕೆಲ ಜನ ಎಲೋಪಥಿಯ ಮಹಾಭಕ್ತರಾದರು —

ದೊಡ್ಡ ದೊಡ್ಡ ಸಂಶೋಧನಾಲಯಗಳೂ ವ್ಯಾಪಾರಿ ಕೇಂದ್ರಗಳೂ; ಕಂಪೆನಿಗಳೂ ವಿಶೇಷ ಜಾಹೀರಾತುಗಳ ಮೂಲಕ ಜನರನ್ನು ಮರುಳುಗೊಳಿಸಿದುವು. ಅಲ್ಪ ಸಹನೆಯ ಸೂತ್ರದ ಗೊಂಬೆಗಳಾಗಿದ್ದ ನಾವು ವಿದೇಶ ಔಷಧದ ಗಿರಾಕಿಗಳಾದೆವು. ನಮ್ಮದು ನಮಗೆ ಹೇಸಿಗೆಯಾದುವು; ಆಯುರ್ವೇದವು ಹಾಸ್ಯಾಸ್ಪದವಾಯಿತು; ತ್ರಿದೋಷ ತತ್ವವು ಗಾಳಿ ದೀಪವಾಯಿತು, ತ್ರಿಕಾಲಾಬಾಧಿತವಾದ, ಋಷಿ ಪ್ರಣೀತವಾದ ವೇದ, ಹಳೆಯ ಕಂದಾಚಾರಗಳಾದುವು ಯಾರಿಗೂ ಬೇಡವೆನಿಸಿದ್ದ ಆಯುರ್ವೇದವು ಮಾತ್ರ ತನ್ನ ಸ್ವಯಂ ಶಕ್ತಿಯಿಂದ ಇನ್ನೂ ತಲೆ ಎತ್ತಿ ರಾರಾಜಿಸುತ್ತಿದೆ.

ಆಯುರ್ವೇದದ ಉತ್ಕರ್ಷೆಯಾಗಬೇಕು. ದೇಶಿಯ ವೈದ್ಯಕವು ಸರ್ವಾಂಗೀಣ ತನ್ನ ಪ್ರಭೆ ಪ್ರತಿಭೆಯಿಂದ ಪ್ರಾಜ್ವಲ್ಯಮಾನವಾಗಿ ವಿರಾಜಿಸಬೇಕು; ಎಲ್ಲೆಡೆಯಲ್ಲೂ ತನ್ನ ಅದ್ಭುತ ಚಿಕಿತ್ಸೆಯಿಂದ ಮೆರೆಯಬೇಕು; ಘನವಾದ ವ್ಯಾಧಿಗಳನ್ನು ಇದು ಕಿತ್ತೊಗೆಯಬೇಕು ರಾಷ್ಟ್ರದ ಆಬಾಲವೃದ್ಧರಿಗೆ ಅದರಲ್ಲಿ ಒಲವು ಮೂಡಬೇಕು; ವಿಶ್ವಾಸ ಹುಟ್ಟಬೇಕು. ಸರಕಾರದ ತುಂಬು ಬೆಂಬಲ ಅದಕ್ಕೆ ಲಭ್ಯವಾಗಬೇಕು; ಆಯುರ್ವೇದವು ಮನೆಮಾತಾಗಬೇಕು; ಜನತೆ ಕೊಂಡಾಡಬೇಕು. ಅದಕ್ಕಾಗಿ ಏನು ಮಾಡಬೇಕು?—

ಮೂಲೆ ಮೂಲೆಯಲ್ಲಿ ಅಡಗಿದ್ದ ಗ್ರಂಥಗಳನ್ನರಸಬೇಕು. ಅವುಗಳಲ್ಲಡಕವಾದ ಏಕಮೂಲಿಕಾ ಬಹುಮೂಲಿಕಾ ಪ್ರಯೋಗಗಳು ತಜ್ಞ ವೈದ್ಯರ ಸಮ್ಮುಖದಲ್ಲಿ ತಜ್ಞ ಸಂಶೋಧನಾಲಯದಲ್ಲಿ ಸಂಶೋಧನೆ ನಡೆದು, ಜಯಶೀಲವಾದ ಆ ಪ್ರಸಿದ್ಧ ಯೋಗಗಳನ್ನು ರೋಗಗಳಲ್ಲಿ ಪ್ರಯೋಗಿಸುವಂತಾಗಬೇಕು; ಆ ಯೋಗಾದಿಗಳು ಕೆಲವರ ಸ್ವತ್ತೆಂಬ ಭಾವನೆ ಸಂಪೂರ್ಣ ತೊಲಗಿ, ಸಾರ್ವಜನಿಕರ ಹಿತದೃಷ್ಟಿಯಲ್ಲಿ ಅವು ಬೆಳಕು ಕಾಣಬೇಕು. ಆನುವಂಶಿಕವಾಗಿ ಬಂದ ಯೋಗಾದಿಗಳು ಕೂಡಾ ವಿವಿಧ ಹಳೆಯ ರೋಗಗಳಲ್ಲಿ ಪ್ರಯೋಗಿಸಬೇಕು. ಆಯುರ್ವೇದದ ಇದೆಷ್ಟೋ ಅಪ್ರಸಿದ್ಧ ಗಿಡಮೂಲಿಕೆಗಳ ಶೋಧ ನಡೆಯಬೇಕು. ವಿವಿಧ ನೂತನೆಗಳ ಮೇಲೆ ಅವುಗಳ ಪ್ರಯೋಗ ಹಲವಾರು ಭಾರಿ ನಡೆಯಿಸಿ, ಫಲ ಯಶಸ್ವಿಯಾದಾಗ ಅವನ್ನು ದ್ರವ್ಯಗುಣ ಶಾಸ್ತ್ರ (Metira - Medica)ದಲ್ಲಿ ಅಳವಡಿಸಬೇಕು. ಬೇರೆ ಬೇರೆ ಭಾಷೆಗಳ ಹೆಸರು; ಗುರುತು ಸಹಾ ಸೇರಿಸಬೇಕು. ಆ ಗಿಡ ಮೂಲಿಕೆಗಳ ಹೊಸ ಪ್ರಭಾವದಿಂದ ನವ್ಯ ಔಷಧಿಯ ಆವಿಷ್ಕಾರವಾಗುವುದು ಒಳಿತು.

ದೇಶದಾದ್ಯಂತ ಆಯುರ್ವೇದ ವಿದ್ಯಾಲಯಗಳು ತೆರೆಯಲ್ಪಡಬೇಕು; ಅಲ್ಲಿ ಅಷ್ಟಾಂಗಗಳ ಬಗ್ಗೆ, ಪಂಚಕರ್ಮಗಳ ಬಗ್ಗೆ ಪ್ರಾತ್ಯಕ್ಷಿಕ ವಿಪುಲ ಜ್ಞಾನವಾಗಬೇಕ; ಶಾಸ್ತ್ರೀಯವಾಗಿ ಅಲ್ಲಿ ಪಾಠಗಳು ಪ್ರಾತ್ಯಕ್ಷಿಕವಾಗಿ ನಡೆಯಬೇಕು.

(ಹತ್ತನೇ ಪುಟ ನೋಡಿರಿ)

ಪುತ್ತೂರು IInd A. ಮುನ್ಸಿಫ್ ಕೋರ್ಟಿನಲ್ಲಿ

RIA 1415/64 OS 219/64

ವೆಂಕಪ್ಪ ಗೌಡ —ಅರ್ಜಿದಾರ

ಕುಂಞಣ್ಣಗೌಡ, ಮಂಜಣ್ಣ ಗೌಡರ ಮಗ, ಕುಟ್ರುಪಾಡಿ ಗ್ರಾಮದ ಬಣೆಡ್ಕ —ಎದ್ರಿ.

ಸದ್ರಿ ಎದ್ರಿಗೆ—

ಮೇಲಿನ ವ್ಯವಹಾರದಲ್ಲಿ ಅರ್ಜಿದಾರನು ತನ್ನ ಗುಣಕ್ಕೆ ಫೈನಲ್ ಡಿಕ್ರಿ ಕೊಡಬೇಕಾಗಿ ಮಾಡಿದ ಅರ್ಜಿಯು ಎದ್ರಿಯ ಹಾಜರಾತಿ ಬಗ್ಗೆ ತಾ. 31-8-65ಕ್ಕೆ ಇಟ್ಟಿರುವುದರಿಂದ ಆ ಕುರಿತು ಎದ್ರಿಯು ಆ ದಿನ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪ ಇದ್ದಲ್ಲಿ ಹೇಳದಿದ್ದಲ್ಲಿ ಆತನನ್ನು ಬಿಟ್ಟುಮಾಡಿ ಫೈನಲ್ ಡಿಕ್ರಿ ಕೊಡಲಾಗುವುದು.

B. Chidananda Rao,
Vakil for Petnr. Plaintiff.

Puttur, 18-8-65.

ಕೆನಡಿ ಕಗ್ಗೊಲೆಯ ಕಗ್ಗಂ

೧೦ ತಿಂಗಳ ಸತತ ಪರಿಶ್ರಮ

೧

೨

೩

ಅದೊಂದು ಭಯಾನಕ ಶುಕ್ರವಾರ. ಅಮೆರಿಕನ್ ಅಧ್ಯಕ್ಷ ಜಾನ್ ಎಫ್. ಕೆನೆಡಿಯವರು ಟೆಕ್ಸಾಸ್ ರಾಜ್ಯದ ಡಲ್ಲಸ್ ನಗರದಲ್ಲಿ ಸಂಚಾರಕ್ಕೆ ಹೊರಟಿದ್ದರು. ಸನಿಯದಲ್ಲೇ ಶ್ರೀಮತಿ ಕೆನೆಡಿಯವರೂ ಇದ್ದರು. ಗುಂಡಿನ ಸ್ಫೋಟ ನಡೆದು ಕೆನೆಡಿಯವರು ಅಲ್ಲೇ ಒರಗಿದರು. ಕೆಲವೇ ನಿಮಿಷಗಳಲ್ಲಿ ಅವರ ಪ್ರಾಣ ಪಕ್ಷಿ ಹಾರಿ ಹೋಯಿತು; ಅಮೆರಿಕನ್ ಅಧ್ಯಕ್ಷರ ಕೊಲೆಯಿಂದಾಗಿ ಮಾನವತಾ ವಾದಿಗಳೆಲ್ಲ ಶೋಕ ಸಾಗರದಲ್ಲಿ ಮುಳುಗಿದರು. ಅಷ್ಟರಲ್ಲೇ ಕೊಲೆ ಪಾತಕ ಲೀ ಓಸ್ವಾಲ್ಡನನ್ನು ಪೋಲೀಸರು ಬಂಧಿಸಿದರು. ಆದರೆ ಎರಡನೆ ದಿನವೇ ಆತನನ್ನೂ ಜಾಕ್ ರುಬಿಯೆಂಬವನು ಕೊಲೆ ಮಾಡಿದನು. ಅಧ್ಯಕ್ಷರ ಕೊಲೆಗೆ ಏನು ಕಾರಣವೆಂಬುದಿನ್ನೂ ಅರಿಯುವುದಕ್ಕೆ ಮೊದಲೇ ಕೊಲೆಪಾತಕಿಯ ಕೊಲೆಯೂ ನಡೆಯಿತು. ಇದರಿಂದಾಗಿ ಭಯಂಕರ ಸಮಸ್ಯೆಯೊಂದು ತಲೆದೋರಿತು. ಅಧ್ಯಕ್ಷರ ಕೊಲೆಯು ಓರ್ವ ವ್ಯಕ್ತಿಯು ಸ್ವಯಂ ಪ್ರೇರಿತನಾಗಿ ಮಾಡಿರದೆ ಅತನ ಹಿಂದೆ ಗುಂಪುಗಾರಿಕೆಯು ಬಲವಿದೆಯೆಂಬ ಊಹನೆಯೂ ಹುಟ್ಟಿಕೊಂಡಿತು. ಅನ್ಯದೇಶೀಯರ ಕೈವಾಡವು ಇದ್ದರೂ ಇರಬಹುದೆಂಬ ಸಂದೇಹವೂ ಹುಟ್ಟಿತು. ಕಗ್ಗೊಲೆಯು ಒಂದು ಕಗ್ಗಂಟಾಯಿತು.

೧೯೬೩ನೆ ನವಂಬರ ೨೨ರಂದು ಅಧ್ಯಕ್ಷ ಕೆನೆಡಿಯವರು ಕೊಲೆಗೀಡಾದರು. ಅದಾದ ಒಂದು ವಾರದ ನಂತರ, ಕೊಲೆಗೆ ಸಂಬಂಧಿಸಿದ ಸತ್ಯ ಸಂಗತಿಗಳನ್ನು ಕಂಡು ಹಿಡಿದು ವರದಿ ಮಾಡಲು ಅಧ್ಯಕ್ಷ ಲಿಂಡನ ಬಿ. ಜಾನ್ಸನ್ನರೊಂದು ಸಮಿತಿಯನ್ನು ನೇಮಿಸಿದರು. ಅಧ್ಯಕ್ಷರ ಕೊಲೆಯ ಆರೋಪಿಯಾದ ಲೀ ಹಾರ್ವೆ ಓಸ್ವಾಲ್ಡನು ಕೊಲೆಗೊಂಡುದರಿಂದ ಈ ಸಂಬಂಧದಲ್ಲಿಯೂ ಪರಿಶೀಲನೆ ನಡೆಸಲು ಸಮಿತಿಗೆ ಅಧಿಕಾರ ನೀಡಿದರು.

ನಿಯುಕ್ತ ಸಮಿತಿಗೆ ಮುಖ್ಯ ನ್ಯಾಯಾಧೀಶ ಅರ್ಲ್ ವಾರನ್ನರು ಅಧ್ಯಕ್ಷರಾಗಿದ್ದರು. ೭೩ ವರ್ಷ ಪ್ರಾಯದ ವಾರನ್ ೫೦ ವರ್ಷ ಕಾಲ ಅಟರ್ನಿ ಆಗಿದ್ದರು. ನ್ಯಾಯ ಪರಿಶೋಧನೆಯ ಎಲ್ಲ ರಂಗಗಳಲ್ಲಿಯೂ ಇವರು ಸೇವೆಸಲ್ಲಿಸಿದ್ದರು; ಅಥವಾ ಭಾಗವಹಿಸಿದ್ದರು. ಮೂರು ಬಾರಿ ಕೆಲಿಫೋರ್ನಿಯಾದ ಗವರ್ನರರಾಗಿ ಆಯ್ಕೆಗೊಂಡ ಏಕಮೇವ ಮಹಾವ್ಯಕ್ತಿಯಿವರು. ೧೯೪೮ರಲ್ಲಿ ಅಮೇರಿಕೆಯ ಉಪಾಧ್ಯಕ್ಷ ಸ್ಥಾನದ ಅಭ್ಯರ್ಥಿಯಾದಾಗ ತಮ್ಮ ಜೀವನದಲ್ಲಿ ಒಂದೇ ಒಂದು ಬಾರಿ ಇವರು ಸೋತರು. ಮುಂದೆ ಮಾಜಿ ಅಧ್ಯಕ್ಷ ಐಸನ್ ಹಾವರರು ರಾಷ್ಟ್ರದ ಅತ್ಯುಚ್ಚ ನ್ಯಾಯಾಂಗ ಹುದ್ದೆಗೆ ನಾಮಕರಣ ಮಾಡಿದರು. "ನಿಷ್ಪಕ್ಷ, ಸತ್ಯಪ್ರಿಯತೆ, ತತ್ವನಿಷ್ಠೆ, ನ್ಯಾಯಾಂಗದ ಭಾವ'ಗಳಿಂದ ತುಂಬಿ ತುಳುಕಾಡುವ ಈ ವ್ಯಕ್ತಿಯಿಂದ ಐಸನ್ ಹಾವರ್ ಪ್ರಭಾವಿತರಾಗಿದ್ದರೆ ಸಂದೇಹವಿಲ್ಲ.

ಜಾನ್ ಕೆನೆಡಿ

●

೬೭ ವರ್ಷದ ರಿಚಾರ್ಡ್ ಬಿ. ರಸ್ಸೆಲರು ಕಾಂಗ್ರೆಸ್‌ನಲ್ಲಿ ಪ್ರಭಾವಿ ಗೌರವಾಸ್ಪದ ಶಾಸಕರು. ೧೯೩೧ರಲ್ಲಿ ಜಾರ್ಜಿಯಾದ ಗವರ್ನರರಾಗಿ ಆಯ್ಕೆಯಾದ ರಿಚಾರ್ಡ್ ೩೩ನೆ ವರ್ಷದಲ್ಲಿಯೇ ಅಧಿಕಾರ ಗದ್ದುಗೆ ಗೇರಿದರು. ೩೫ನೆ ಪ್ರಾಯದಲ್ಲಿ ಆ ಸಮಯದ ಅತಿ ಎಳೆಯ ಸೆನೇಟರಾದರು.

೨೦ ವರ್ಷ ಕಾಲ ಕಾಂಗ್ರೆಸ್ ಸದಸ್ಯರಾದ ಟಿ. ಹೇಲ್ ಬೋಗ್ಸರಿಗೆ ೫೦ ವರ್ಷ ಪ್ರಾಯ. ತನ್ನ ೨೬ನೆಯ ವಯಸ್ಸಿನಲ್ಲಿ, ೧೯೪೦ರಲ್ಲಿಯೇ, ಅಮೆರಿಕೆಯ ಪ್ರತಿನಿಧಿ ಸಭೆಗೆ ಮೊತ್ತಮೊದಲು ಆಯ್ಕೆಯಾದಾಗ ಅತಿ ಚಿಕ್ಕ ಡೆಮೊಕ್ರೆಟಿಕ್ ಕಾಂಗ್ರೆಸಿಗರಾಗಿದ್ದರು. ೧೯೬೨ರಲ್ಲಿ 'ಮೆಜೆರಿಟಿ ವಿಪ್' ಆದರು.

೪೭ ವರ್ಷಗಳಿಂದ ಬ್ಯಾಂಕರ್ ಮತ್ತು ಅಟರ್ನಿಯಾಗಿದ್ದು ತಮ್ಮ ೬೯ನೆಯ ವಯಸ್ಸಿನಲ್ಲಿಯೂ ಚಟುವಟಿಕೆ ತೋರಿಸುತ್ತಿರುವ ಜಾನ್ ಜೆ. ಮೆಕ್ಲೋಯಿಯವರು

೧೯೪೭—೪೯ರ ಅವಧಿಯಲ್ಲಿ
ಬ್ಯಾಂಕಿನ ಅಧ್ಯಕ್ಷರಾಗಿದ್ದರು.
ಯು ವಿದೇಶಾಂಗ ರಂಗದಲ್ಲಿ
ಪೂರ್ಣವಾದ ಶಕ್ತಿಯು ಜ
ಹೈಕಮಿಶನರ್ ಆಗಿ ೧೯೪೯ರಿಂ
ವರೆಗೆ ಇವರು ಸೇವೆ ಸಲ್ಲಿಸಿದ್ದರ

ಜಾನ್ ಶೆರ್ಮನ್ ಕೂಪರ
ವರ್ಷ ಪ್ರಾಯ. ಕೆಂಟುಕ್ಕಿಯಿಂ
ಟಗೆ ಚುನಾಯಿತರಾದವರಿವರು.
ದಲ್ಲಿ ಕೃಷಿಕ ರಾಯಭಾರಿಯಾ
ರು ಸೆನೇಟ್ ಸದಸ್ಯತ್ವಕ್ಕಾಗಿ
ದ್ದೆಗೆ ರಾಜೀನಾಮೆ ಯಿತ್ತವರು.
ನರಾಗಿದ್ದರೂ ಅಧ್ಯಕ್ಷ ಟ್ರೂ
೧೯೪೯—೫೧ರ ಅವಧಿಯಲ್ಲಿ ಸ
ರಾಷ್ಟ್ರ ಸಂಘದಲ್ಲಿ ಇವರನ್ನು
ಯ ಪ್ರತಿನಿಧಿಯಾಗಿ ನೇಮಿಸಿ

೧೯೪೧ರಿಂದ ಅಟರ್ನಿಯಾ
ರಾಲ್ಡ್ ಆರ್. ಫೋರ್ಡರು ಹ
ವರ್ಷಗಳಿಂದ ಕಾಂಗ್ರೆಸ್ಸಿನಲ್ಲಿ
ಇವರ ಕಾರ್ಯಕ್ರಮಗಳು
ಸ್ಮರಣೀಯವಾಗಿವೆ. ಅ
ಕಾಂಗ್ರೆಸಿಗರನ್ನು ಶ್ರೇಷ್ಠ
ಪತ್ರಿಕಾ ಪ್ರತಿನಿಧಿಗಳಲ್ಲಿ ಚುನಾ
ಡೆದಾಗ ೧೯೬೧ರಲ್ಲಿ ಇವರು
ಸ್ಥಾನ ಗಳಿಸಿದ್ದರು. ಇವರ ಪ್ರಾ
ಯ ೫೧.

ಸೆಂಟ್ರಲ್ ಇಂಟೆಲಿಜೆನ್ಸ್
ಮಾಜಿ ಡೈರೆಕ್ಟರ್ ಅಲ್ಲೆನ್
ಡಲ್ಲಸ್ ಸರಳರಾದ ಒಳಗೂ
ಬಹುಮುಖ ಪ್ರತಿಭೆಯುಳ್ಳವರು
ಮತ್ತು ನಿಶ್ಶಸ್ತ್ರೀಕರಣ ಸಮ್ಮೇ
ಗೆ ನ್ಯಾಯಾಂಗ ಸಲಹೆಗಾರರು
ಎರಡೂ ಜಾಗತಿಕ ಸಮರಾವಧಿ
ವರು ಇಂಟೆಲಿಜೆನ್ಸ್ ಕಾರ್ಯದಲ್ಲಿ
ಕ್ಷೀಣರಾಗಿದ್ದರು. ಇವರ ಪ್ರಾಯ
ವಾರೆನ್‌ರ ಅಧ್ಯಕ್ಷತೆಯಲ್ಲಿ

ಬಿಚ್ಚಿದ ಮಹಾಪುರುಷರು

ಸತ್ಯಶೋಧನೆಯ ಲಕ್ಷ್ಯಭೇದನ

ಲಿಂಡನ್ ಜಾನ್ಸನ್

●

ವಾದ ಕೆನಡಿ ಕೊಲೆ ಪರಿಶೀಲಕ ಸಮಿತಿಯಲ್ಲಿ ಮೇಲಿನ ಆರ್ವರೂ ಸದಸ್ಯರಾಗಿದ್ದರು. ಸಮಿತಿಯ ಸದಸ್ಯರ ಸರಾಸರಿ ಪ್ರಾಯ ೬೩.

೧೯೬೩ನೆ ನವಂಬರ ೨೯ರಿಂದ ಸಮಿತಿಯ ಸದಸ್ಯರೂ ನ್ಯಾಯಾಂಗ ಕಾರ್ಯಕರ್ತರೂ ಒಟ್ಟು ಸೇರಿ ತಿಳುವಳಿಕೆಗಳನ್ನು ಸಂಗ್ರಹಿಸಿ ವಿಮರ್ಶಿಸತೊಡಗಿದರು; ಸಾಕ್ಷಿಗಳನ್ನು ಪ್ರಶ್ನಿಸುವುದ, ಅಂತಿಮ ವರದಿಗಾಗಿ ಟಿಪ್ಪಣಿಗಳನ್ನು ಬರೆಯುವುದು ಇವರ ದೈನಂದಿನ ಕಾರ್ಯಕ್ರಮವಾಗಿತ್ತು.

ಅಧ್ಯಕ್ಷ ಕೆನಡಿಯವರು ೨೨-೧೧-೬೩ರಂದು ಕೊಲೆಯಾದರು. ಅದೇ ದಿವಸ ಕೊನೆಯಲ್ಲಿ ಡಲ್ಲಾಸ್ ಪೋಲೀಸರು ಲೀ ಓಸ್ವಾಲ್ಡನನ್ನು ಕೊಲೆಯ ಆರೋಪ ಹೊರಿಸಿ ಬಂಧಿಸಿದರು. ನವಂಬರ ೨೪ರಂದು ಅವನೂ ಕೊಲೆಗೆ ಗುರಿಯಾದನು. ಆ ಕೂಡಲೇ ಪೋಲೀಸರು ಜಾಕ್ ರೂಬಿಯನ್ನು ಕೊಲೆಗಾರನೆಂದು ಬಂಧಿಸಿದರು.

ಎರಡೂ ಕೊಲೆಗಳ ಸಂಶೋಧನೆಯನ್ನು ಡಲ್ಲಾಸ್ ಪೋಲೀಸರೂ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಶನ್ನೂ ಮಾಡಿದುವು. ಆದರೆ, ಕೊಲೆಗಾರ ಓಸ್ವಾಲ್ಡನ ಮೃತ್ಯುವಿನಿಂದಾಗಿ ಒಂದಲ್ಲ ನೂರು ಪ್ರಶ್ನೆಗಳು ಉತ್ತರ ದೊರೆಯದೆ ಹಾಗೆಯೇ ಉಳಿದಿವೆ.

ಅಧ್ಯಕ್ಷ ಜಾನ್ಸನ್ನರು ಅಧಿಕ ಸಂಖ್ಯಾಕ ಪಕ್ಷ ಡೆಮೊಕ್ರೆಟಿಕ್ ಮತ್ತು ಅಲ್ಪಸಂಖ್ಯಾಕ ರಿಪಬ್ಲಿಕನ್ ಪಕ್ಷಗಳೊಡನೆ, ಸಿನೇಟ್ ಮತ್ತು ಪ್ರತಿನಿಧಿ ಸಭೆಗಳು, ಇನ್ನಿತರ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿದ ನಂತರವೇ ಕಮಿಶನ್ನಿನ ಸದಸ್ಯರನ್ನು ನಾಮಕರಣ ಮಾಡಿದರು. ಸರಾಸರಿ, ಪ್ರಾಯ ೬೩ ಇದ್ದ ಈ ಸದಸ್ಯರೆಲ್ಲರೂ ಅಮೆರಿಕೆಯಲ್ಲಿ ಅದ್ವಿತೀಯ ಸೇವೆ ಸಲ್ಲಿಸಿದವರೆಂದು ಹೆಸರು ಪಡೆದಿದ್ದಾರೆ.

ಪರಿಶೀಲನೆಗೆ ಸಂಬಂಧ ಪಟ್ಟ ವಿಷಯದ ಬಗ್ಗೆ ಲಭ್ಯವಿರುವ ಎಲ್ಲ ಸಂಗತಿಗಳನ್ನೂ ಕಲೆಹಾಕಬೇಕು, ಮತ್ತು ಪರಿಶೀಲಿಸಬೇಕೆಂದು ಅಧ್ಯಕ್ಷರು ಆಜ್ಞೆ ಮಾಡಿದ್ದರ, ಕಮಿಶನ್ನಿಗೆ ಅದಕ್ಕೆ ತನ್ನದೇ ಆದ ಕಾರ್ಯವಿಧಾನವನ್ನು ರಚಿಸುವ, ಅನುಷ್ಠಾನಕ್ಕೆ ತರುವ ಮತ್ತು ಅಗತ್ಯವೆನಿಸಿದಲ್ಲಿ ಸಹಾಯಕರನ್ನು ನೇಮಿಸಿಕೊಳ್ಳುವ ಅಧಿಕಾರವಿತ್ತು. ಕಮಿಶನ್‌ನ ಮೊದಲ ಸಭೆಗಳು ನೇಶನಲ್ ಆರ್ಕೈವ್ಸ್ ಕಟ್ಟಡದಲ್ಲಿ ಸೇರಿದುವು; ಮುಂದೆ ಸರ್ವೋಚ್ಚ ನ್ಯಾಯಾಲಯದ ಬಳಿಯಲ್ಲೇ ಪ್ರತ್ಯೇಕ ಕಾರ್ಯಾಲಯವೊಂದು ಸ್ಥಾಪಿತವಾಯಿತು.

ಈ ಕಮಿಶನ್ನು ನ್ಯಾಯಾಂಗ ಮಂಡಳಿಯಾಗಿರಲಿಲ್ಲ. ಆದರೆ, ಸತ್ಯ ಸಂಶೋಧನೆಗೆ ಅಗತ್ಯವಿರುವ ಎಲ್ಲ ಅಧಿಕಾರ ಪಡೆದ ಅಧ್ಯಕ್ಷರಿಂದ ನಿಯುಕ್ತವಾದ ಮಂಡಳಿಯಾಗಿತ್ತು. ಎಲ್ಲ ಫೆಡರಲ್ ಪ್ರಾತಿನಿಧಿಕ್ಯಗಳನ್ನೂ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಶನನ್ನೂ ಸಹಾಯ ಮತ್ತು ಬೆಂಬಲಕ್ಕಾಗಿ ಕರೆಯುವ ಅಧಿಕಾರ ಇದ್ದಿತ್ತು. ಸಾಕ್ಷಿಗಳನ್ನು ಕರೆಯುವ, ವಿಚಾರಣೆ ಮಾಡುವ ಸ್ಥಳ ವಿವರಣೆ ತಿಳಿಯುವ ಮತ್ತು ಪರಿಶೀಲನೆ ಮಾಡುವ ಅಧಿಕಾರವಿತ್ತು. ಕೊಲೆಯಾದ ಟೆಕ್ಸಾಸ್ ರಾಜ್ಯದ ಪೋಲೀಸು ಅಧಿಕಾರಿಗಳು ಮತ್ತು ಅಟರ್ನಿ ಜನರಲ್ಲರ ಸಂಪೂರ್ಣ ಸಹಕಾರ ಪಡೆಯಿತು.

ವಾರೆನ್ ಸಮಿತಿಯ ವರದಿಯು ಸುಮಾರು ೩ ಲಕ್ಷ ಪದಗಳಷ್ಟು ವಿಸ್ತೃತವಾಗಿದೆ. ಈ ಸಮಿತಿಯು ೧೦ ತಿಂಗಳುಗಳ ಕಾಲ ಅಹರ್ನಿಶಿ ದುಡಿಯಿತು. ಸಾಕ್ಷಿಗಳನ್ನು ಕೇಳಿತು. ಇತರ ಪರಿಶೀಲನಾ ಪ್ರಾತಿನಿಧಿತ್ವಗಳು ವರದಿ ಮಾಡಿದ ಸಂಗತಿಗಳನ್ನು ಪರಿಶೀಲಿಸಿತು. ಲೀ ಹಾರ್ವೆ ಓಸ್ವಾಲ್ಡನೊಡನೆ ಸಂಪರ್ಕವಿರಿಸಿದ್ದ ವ್ಯಕ್ತಿಗಳನ್ನು ಹಲವು ಬಾರಿ ಭೆಟ್ಟಿ ಮಾಡಿತು. ಜಾಕ್ ರೂಬಿಯನ್ನು ಮುಖ್ಯ ನ್ಯಾಯಾಧೀಶ ವಾರೆನ್ನರ ಮೂಲಕ ವಿಚಾರಣೆ ನಡೆಸಿತು. ಅಪಾದಿತ ಕೊಲೆ ಘಾತುಕರ ಶಾಯಿ ಮತ್ತಾತನ ವಿಧವೆಯನ್ನು ಪರಿಶೀಲಿಸಿತು ಒಮ್ಮೆ ಬಂದ ನಿರ್ಧಾರಗಳನ್ನು ಮತ್ತೆ ಮತ್ತೆ ವಿಮರ್ಶಿಸಿ ನೋಡಿತು. ಕೊಲೆಯ ಪ್ರತಿಯೊಂದು ಸಂಗತಿಯನ್ನೂ ಅದಕ್ಕೆ ಸಂಬಂಧಿಸಿದ ಪ್ರದೇಶಗಳನ್ನೂ ಸೂಕ್ಷ್ಮಾತಿ ಸೂಕ್ಷ್ಮವಾಗಿ ವಿವೇಚಿಸಿತು.

ಕೊಲೆಗೆ ಅಥವಾ ಅದರ ನಂತರದ ಘಟನೆಗಳಿಗೆ ಸಂಬಂಧಿಸಿದ ಪ್ರತಿ ವ್ಯಕ್ತಿಗಳನ್ನೂ ಪ್ರಶ್ನಿಸಿತು. ಈ ವಿಷಯದಲ್ಲಿ ರಾಷ್ಟ್ರದ ಬೇರೆ ಬೇರೆಡೆಯ ನಿಷ್ಣಾತ ವಕೀಲರ ಸಹಾಯವನ್ನೂ ಪಡೆದು ಕೊಂಡಿತು.

ಹೀಗೆ ಸಾಕಷ್ಟು ಪರಿಶೀಲನೆ ನಡೆಸಿದ ನಂತರವೇ ಕಮಿಶನ್ ತನ್ನ ವರದಿಯನ್ನು ಅಧ್ಯಕ್ಷ ಜಾನ್ಸನ್ನರಿಗೆ ಒಪ್ಪಿಸಿತು. ಸರಕಾರಿ ವಲಯದಲ್ಲಿ ಕೈಗೊಂಡ ಅತಿ ಪ್ರಮುಖವಾದ ಈ ಪರಿಶೀಲನಾ ತಂತ್ರವು ಲೀ ಓಸ್ವಾಲ್ಡನೇ ಕೊಲೆಗಾರನೆಂಬ ತೀರ್ಮಾನಿಸಿದೆ. ಈ ಕೊಲೆಯ ಹಿಂದೆ ದೇಶೀಯ ಅಥವಾ ಅನ್ಯದೇಶೀಯರ ಕೈವಾಡವಿರಲಿಲ್ಲವೆಂದೂ ಓಸ್ವಾಲ್ಡನೇ ವೈಯಕ್ತಿಕ ದ್ವೇಷದಿಂದ ಕೊಲೆಗೈದ್ದನೆಂದೂ ನಿರ್ಧಾರಕ್ಕೆ ಬಂದಿದೆ. ಕೆಲ ಸಮಯದ ಹಿಂದೆಯೇ ಆತನು ಅಧ್ಯಕ್ಷ ಕೆನ್ನೆಡಿಯವರನ್ನು ವ್ಯಕ್ತಿಶಃ ದ್ವೇಷಿಸುತ್ತಿದ್ದನೆಂಬುದಕ್ಕೆ ಪುರಾವೆಗಳು ದೊರಕಿವೆ.

ಪರಿಶೀಲನಾ ಕಮಿಶನ್‌ನ ವಿಶೇಷ ಪರಿಶ್ರಮದಿಂದಾಗಿ ಬರೇ ೧೦ ತಿಂಗಳ ಕಾಲಾವಧಿಯಲ್ಲಿಯೇ ಕಗ್ಗೊಲೆಯ ಕಗ್ಗಂಟು ಬಿಚ್ಚಿ ಹೋಯಿತು.

೪



೫

೬

೭



೮

ಚಿತ್ರಗಳು

೧. ಮುಖ್ಯ ನ್ಯಾಯಾಧೀಶ ಅರ್ಲ್ ವಾರೆನ್
೨. ರಿಚಾರ್ಡ್ ರಸ್ಸೆಲ್
೩. ಹೇಲ್ ಬೋಗ್ಸ್
೪. ಜಾನ್ ಮೆಕ್ಲೋಯ್
೫. ಜಾನ್ ಶೆರ್ಮನ್ ಕೂಪರ್
೬. ಜೆರೋಲ್ಡ್ ಫೋರ್ಡ್
೭. ಅಲ್ಲೆನ್ ಡಲ್ಲಸ್
೮. ಪರಿಶೀಲನಾ ಕಮಿಶನ್ ತನ್ನ ಕರ್ತವ್ಯದಲ್ಲಿ ತಲ್ಲೀನವಾಗಿರುವ ದೃಶ್ಯ

ಆಯುರ್ವೇದದ ಪ್ರಗತಿ ಎಂದು ಸಾಧ್ಯ?

(೨ನೇ ಪುಟದಿಂದ)

ಅಲ್ಲಿ ಅಪಾರ ಪಾಂಡಿತ್ಯವುಳ್ಳ ಪ್ರಧ್ಯಾಪಕರ ನೇಮಕವಾಗಬೇಕು; ಅವರು ವಿಶಾಲ ಹೃದಯಿಗಳೂ; ಅನುಭವಿಕರೂ ಆಗಿರುವುದು ಒಳಿತು, ಅಲ್ಲಿಯೂ ಒಂದು ಸಣ್ಣದಾದ ಸಂಶೋಧನಾಲಯವಿರಬೇಕು. ವಿದ್ಯಾಲಯದಲ್ಲಿ ಸಂಬಂಧಪಟ್ಟ ಚಿಕಿತ್ಸಾಗೃಹವಿರಬೇಕು; ಅಲ್ಲಿ ಹಲವಾರು ರೋಗಗಳ ಬಗ್ಗೆ ಚಿಕಿತ್ಸೆ ನಡೆಯಬೇಕು; ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕ ಅನುಭವಕ್ಕಾಗಿ ಶವಚ್ಛೇದನ ವ್ಯವಸ್ಥೆ ಇರಬೇಕು; ಅದರ ಬಗ್ಗೆ ಯೋಗ್ಯ ವೈದ್ಯರನ್ನು ನೇಮಿಸಬೇಕು; ಇಂದಿನ ನವಯುಗದ ಕ್ರಮಕ್ಕನುಸಾರವಾಗಿ, ಅನುಕೂಲಕ್ಕಾಗಿ, ವಿದ್ಯಾಲಯದಲ್ಲಿ ಸೇಕಡಾ ೩೦ರಷ್ಟಾದ್ರೂ ಪಾಶ್ಚಾತ್ಯ ಚಿಕಿತ್ಸಾ ಶಾಸ್ತ್ರದ ಅಂಗವಾದ ಶಸ್ತ್ರಕ್ರಿಯೆ; ಔಷಧಿಯ ಗುಣಾದಿಗಳು, ಶವಚ್ಛೇದನ; ದೇಹದ ವಿಚಾರ, ರೋಗದ ವಿಚಾರ ಇತ್ಯಾದಿಗಳನ್ನು ಕಲಿಸುವಂತಾದರೆ, ಮಹತ್ ಪ್ರಯೋಜನವಾಗುತ್ತದೆ. ಸಂಸ್ಕೃತ, ಇಂಗ್ಲಿಷ್; ಹಾಗೂ ಸ್ಥಳೀಯ ಭಾಷೆಗಳಲ್ಲಿ ಆಯುರ್ವೇದೀಯ ಗ್ರಂಥಗಳು ಮುದ್ರಿಸಲ್ಪಡಬೇಕು; ಜೀರ್ಣ ಶೀರ್ಣವಾದ ಹಸಿಯ ಓಲೆಗರಿಗಳು ಮುದ್ರಿಸಲ್ಪಡಬೇಕು; ರಾಜ್ಯದಲ್ಲಿ ಅಲ್ಲಲ್ಲಿ ಗಿಡಮೂಲಿಕೆಗಳ ಉದ್ಯಾನವಿದ್ದು, ಅವುಗಳಿಂದ ವೈದ್ಯರಿಗೆ ತುಂಬಾ ಪ್ರಯೋಜನವಿದೆ; ಸರಕಾರದ ವತಿಯಿಂದ ದೇಶದಲ್ಲೆಲ್ಲಾ ವನಮೂಲಿಕೋದ್ಯಾನಗಳೂ, ಔಷಧಿ ಕಾರ್ಖಾನೆಗಳೂ, ಬನಸ್ಪತಿ ಆಗರಗಳೂ, ಸಂಶೋಧನಾಲಯಗಳೂ ತೆರೆಯಲ್ಪಡಬೇಕು; ರಾಜ್ಯದ ಸರಕಾರಿ ಆಸ್ಪತ್ರೆಯಲ್ಲಿ ಆಯುರ್ವೇದ ಚಿಕಿತ್ಸೆಯೂ ನಡೆಯಬೇಕು, ಅಲ್ಲಲ್ಲಿ ಆಯುರ್ವೇದ ಆಸ್ಪತ್ರೆಯೂ ತೆರೆಯಲ್ಪಟ್ಟು ಅಲ್ಲಿ ಚಿಕಿತ್ಸೆ ಹಳ್ಳಿ ರೋಗಿಗಳಿಗೆ ನಡೆದು ಯಶಸ್ವಿಯಾಗಬೇಕು; ಆಸ್ಪತ್ರೆಗಳಲ್ಲಿ ಬಾಹ್ಯ ರುಗ್ಣಾಲಯ, ಅಂತಃರುಗ್ಣಾಲಯಗಳಿರಬೇಕು, ಔಷಧಿಗಳ ಖನಿಜ ತಯಾರಿ ಎಲ್ಲಾ ಶಾಸ್ತ್ರೀಯವಾಗಿರಬೇಕು ಆಯುರ್ವೇದದ ಆಮೂಲಾಗ್ರ ವಿಚಾರದ ಪ್ರಭೋಧನೆಗಾಗಿ ಕೈ ಹೊತ್ತಿಗೆಗಳು ಪ್ರಕಟವಾಗಬೇಕು. ಆರೋಗ್ಯ ಸೂತ್ರಗಳನ್ನು ಶಾಲೆ, ಕಾಲೇಜುಗಳಲ್ಲಿ ಕಲಿಸುವಂತಾಗಬೇಕು. ಅಂಟು ರೋಗಗಳು ಬಾರದ ರೀತಿಯಲ್ಲಿ ತಿಳಿಸುವ ಸೈನ್ಯದ ಬಗ್ಗೆ ಜಾಗ್ರತೆ ತೆಕ್ಕೊಳ್ಳಬೇಕು. ಆಯುರ್ವೇದದ ಬಗ್ಗೆ ಸಾಕಷ್ಟು ಪ್ರಚಾರವಾಗಲು ದೇಶವ್ಯಾಪ್ತಂತ ಆಯುರ್ವೇದ ಪತ್ರಿಕೆಗಳು ಹೊರಡಬೇಕು; ಅದರಲ್ಲಿ ಹೊಸ ಹೊಸ ವಿಚಾರಗಳಿರಬೇಕು; ನಮ ಸ್ವಾಸ್ಥ್ಯದ ವಿಜ್ಞಾನ ವ್ಯೂಹ ಅದರಿಂದ ಪರಿಪಾಲನವಾಗಬೇಕು: ಆಯುರ್ವೇದದಲ್ಲಿ ವಿದ್ಯಾಸಕ್ತಿ ಹುಟ್ಟಿಸುವ ವಿಚಾರಪೂರಿತ ಲೇಖನಗಳಿರಬೇಕು, ಕೊನೆಯದಾಗಿ—

ಆಯುರ್ವೇದ ಔಷಧಿಗಳು ಎಲೋಪತಿಯ ಔಷಧಗಳಂತೆ, ರುಚಿ, ಬಣ್ಣ, ಗುಣ, ಆಕರ್ಷಣೆ, ಹಾಗೂ ಒಂದೇ ಮಾದರಿಯ ಕ್ರಮಗಳಿಂದ ಕೂಡಿರಬೇಕು; ಅವುಗಳ ಧಾರಣೆ; ತಯಾರಿ, ಮಾರಾಟ ಕ್ರಮ ಎಲ್ಲೆಡೆಗಳಲ್ಲೂ ಏಕ ಪ್ರಕಾರವಾಗಿರಬೇಕು; ಆಯುರ್ವೇದದೊಂದಿಗೆ ಸ್ವಲ್ಪ ಮಟ್ಟಿಗೆ ಪಾಶ್ಚಾತ್ಯ ಚಿಕಿತ್ಸೆಯ ಅನುಭವ ಸಿಗುವಂತಾದರೆ, ಅನೂಚಾನವಾಗಿ ನಡೆದು ಬಂದ ಆಯುರ್ವೇದ ಶಾಸ್ತ್ರವು ಪುನರಪಿ ಖ್ಯಾತಿ, ಪ್ರೀತಿ, ದೀಪ್ತಿಯು ಉತ್ತುಂಗ ಶೃಂಗವನ್ನಡರಿ ರಾರಾಜಿಸೀತು.

ತಾ। ಬೋ। ಅಧ್ಯಕ್ಷರ ಅಧಿಕಾರ ಸ್ವೀಕಾರ

ಕಳೆದ ತಾ. 10ರಂದು ಕುಂದಾಪುರ ತಾಲೂಕು ಬೋರ್ಡಿನ ಸಾಮಾನ್ಯ ಸಭೆಯು ಸೇರಿ, ನೂತನ ಅಧ್ಯಕ್ಷ ಎಡ್ವಕೇಟ್ ಶ್ರೀ ಎಂ. ಎಂ. ಹೆಗ್ಡೆಯವರು ಅಧಿಕಾರ ಸ್ವೀಕರಿಸಿದರು. ಉಪಾಧ್ಯಕ್ಷ ಶ್ರೀ ಜಿ. ಎಂ. ಕೊಡ್ಗಿಯವರು ಅಧ್ಯಕ್ಷರನ್ನು ಸ್ವಾಗತಿಸಿ, ಅವರ ಗುಣಗಾನಗೈದರು. ಶ್ರೀ ಆರ್. ಕೆ. ಸಂಜೀವರಾಯರು ಬೋರ್ಡಿನ ಪರವಾಗಿ ಹಾರ ಸಮರ್ಪಿಸಿ, ಬೋರ್ಡಿನ ಸಹಕಾರ ಸದಾ ಅಧ್ಯಕ್ಷರಿಗಿದೆಯೆಂದು ಸಾರಿದರು. ಸಿಬ್ಬಂದಿಯ ಪರವಾಗಿ ಶ್ರೀ ಟಿ. ಶೀನಪ್ಪ ಸೆಟ್ಟರು ಹಾರಾರ್ಪಣೆಗೈದು, ತಮ್ಮೆಲ್ಲರ ಸಹಕಾರದ ಕುರಿತು ಭರವಸೆಯಿತ್ತರು. ಶ್ರೀ ಬಿ. ಸುಬ್ಬಣ್ಣ ಸೆಟ್ರು ಮಾತಾಡಿದ ಮೇಲೆ ಅಧ್ಯಕ್ಷರು ಮಾತನಾಡಿ ಸರ್ವರ ಸಹಕಾರವನ್ನು ಕೋರಿ ಅಧಿಕಾರ ಸ್ವೀಕರಿಸಿದರು.

ರೋಟರಿ ಸಭೆಯಲ್ಲಿ ಜಿಲ್ಲಾಧಿಕಾರಿಗಳು

ಮಂಗಳೂರು, ಸ್ವಾತಂತ್ರ್ಯ ದಿನದಂದು ಸೇರಿದ ರೋಟರಿ ಸಭೆಯಲ್ಲಿ ಮಾತನಾಡುತ್ತ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇಗೌಡರು, ಆಹಾರ ಸಮಸ್ಯೆಯನ್ನು ನೀಗಿಸುವಲ್ಲಿ ಜನರು, ಮುಖ್ಯವಾಗಿ ವ್ಯಾಪಾರಿಗಳು ಅಧಿಕಾರಿಗಳೊಂದು ಸಹಕಾರ ನೀಡಬೇಕೆಂದರು. ಈ ಸಂದರ್ಭದಲ್ಲಿ, ಶ್ರೀಗಳಾದ ರಾಜಾರಾಮ ಮಲ್ಯ, ಮಣೇಲ್ ಶ್ರೀನಿವಾಸ ನಾಯಕ್ ಇವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ.

RIA 764/64 in OS 57/57 (Sub Court).

ಮುತ್ತಮ್ಮ ಕೂಡಾ ... . ಅರ್ಜಿದಾರರು

ವೆಂಕಪ್ಪ ರೈ ಕೂಡಾ ... . ಯೆದ್ರಿರು

1. ವೆಂಕಪ್ಪ ರೈ, ಲಕ್ಷ್ಮಿ ಮಗ, ಬೆಳ್ಳಿಪಾಡಿ ಗ್ರಾಮ;
21. ಸೋಮು, ಸಿದ್ದಮ್ಮನ ಮಗಳು, ಅರ್ಕುಳ ಗ್ರಾಮದ ಮುಚ್ಚೂರು;
24. ಚೆನ್ನಮ್ಮ, — ದಿ — ಮಂಗಳೂರು ತಾಲ್ಲೂಕು ಸೋಮೇಶ್ವರ ಗ್ರಾಮದ ಸಚ್ಚ ಲಕ್ಷ್ಮಣ ರೈಗಳ ಮನೆಯಲ್ಲಿ;

28. ಯಮುನಾ } ಸೋಮುವಿನ ಮಕ್ಕಳು—28;
29. ಜಯ } 29ನೇಯವರು, ಅರ್ಕುಳ ಗ್ರಾಮದ ಮುಚ್ಚೂರು;
30. ಸರಸ್ವತಿ } 30ನೆಯವಳು ಉಡುಪಿ ತಾಲ್ಲೂಕು ಜಿಗರ್ ಗ್ರಾಮ;

31. ಸುಬ್ಬಯ 32. ಸತೀಶ
33. ಶೋಭಾ 34. ಅರುಣ
35. ವೇದ } 28ನೇ ಯಮುನನ ಮ್ಯೂನರ ಮಕ್ಕಳು, ಗಾರ್ಡಿಯನ್ 28ನೇ ಯಮುನಾ.

36. ಅರುಣ—ಜಯನ ಮಗಳು, ಅರ್ಕುಳ ಗ್ರಾಮದ ಕುಚ್ಚೂರು.

37. ಹೆಣ್ಣು ಮಗು; 38. ಹೆಣ್ಣು ಮಗು,
39. ಹೆಣ್ಣು ಮಗು; } 29ನೇ ಜಯನ ಮಕ್ಕಳು, ಗಾರ್ಡಿಯನ್ 29ನೇ ಜಯ;

40. ಹೆಣ್ಣು ಮಗು;
41. ಹೆಣ್ಣು ಮಗು; } 30ನೇ ಸರಸ್ವತಿಯ ಮ್ಯೂನರ್ ಮಕ್ಕಳು, ಗಾರ್ಡಿಯನ್ 30ನೇ ಸರಸ್ವತಿ;

42. ದಾಸ ರೈ
43. ಕೋಚಣ್ಣ ರೈ } 24ನೇ ಚೆನ್ನಮ್ಮನ ಮಕ್ಕಳು, ಮಂಗಳೂರು ತಾಲ್ಲೂಕು ಸೋಮೇಶ್ವರ ಗ್ರಾಮ;

44. ರಘುನಾಥ 45. ಸಿದ್ಧು ಯಾನೆ ಸುನಂದಾ
46. ಲೀಲಾವತಿ } 24ನೆಯವಳ ಮ್ಯೂನರ ಮಕ್ಕಳು, ಗಾರ್ಡಿಯನ್ 24ನೇ ಚೆನ್ನಮ್ಮ;

56. ಚೆನ್ನಮ್ಮ, 20ನೇ ಲಕ್ಷ್ಮಿ ಮಗಳು—ಪುತ್ತೂರು ತಾಲ್ಲೂಕು ಕೋಡಿಂಬಾಡಿ ಗ್ರಾಮದ ಕೈಪ,
58. ಶಾಮು, 56ನೆಯವಳ ಮಗಳು, ಕೋಡಿಂಬಾಡಿ ಗ್ರಾಮದ ಕೈಪ;

59. ಹೇಮಲತ 60. ವಿಜಯಲಕ್ಷ್ಮಿ
61. ಸುಧಾ } 56ನೆಯವಳ ಮ್ಯೂನರ ಮಕ್ಕಳು, ಗಾರ್ಡಿಯನ್ ತಾಯಿ 56ನೇ ಚೆನ್ನಮ್ಮ,

70. ಲಲಿತ
71. ಸೀತಾರಾಮ ರೈ } ಪರಮೇಶ್ವರಿಯ ಮಕ್ಕಳು, ಪುತ್ತೂರು ಕಸಬಾ ಗ್ರಾಮದ ಏಳ್ಮುಡಿ.

74. ಬಾಗಿರಥಿ—ಕಾವೇರಿ ಹೆಂಗ್ಸಿನ ಮಗಳು, ಮಂಗಳೂರು ಶಹರ ಉರ್ವ ಮುನ್ಸಿಪಾಲ್ ಶಾಲೆಯ ಬಳಿ;

76. ಕೃಷ್ಣ ರೈ
77. ಯಮುನಾ } ಕಾವೇರಿ ಹೆಂಗ್ಸಿನ ಮಕ್ಕಳು, 76ನೆಯವ ಪುತ್ತೂರು ಕಸಬಾ, 77ನೆಯವಳು ಕವತಾರು ಗ್ರಾಮದ ಶೀನಪ್ಪ ಅಚಿಲರ ಮನೆಯಲ್ಲಿ, ಮಂಗಳೂರು ತಾಲ್ಲೂಕು,

81. ಭಾರತಿ—74ಯವಳ ಮಗಳು, ಮಂಗಳೂರು ಶಹರ ಉರ್ವ ಶಾಲೆ ಬಳಿ.
82. ಗಂಡು ಮಗು—77ನೆಯವಳ ಮ್ಯೂನರ ಮಗು—ಗಾರ್ಡಿಯನ್ 77ನೆಯವಳು.

83. ರಾಜರಾಮ 84. ನೇಮಿರಾಜ
85. ರಾಜೇಂದ್ರ 86. ಅಶೋಕ ಕುಮಾರ
87. ಅಮಲತ } ಬಾವ ಮಹಾಬಲ ರೈಗಳ ಮ್ಯೂನರ ಮಕ್ಕಳು ಗಾರ್ಡಿಯನ್ ತಂದೆ ಮಹಾಬಲ ರೈ, ಬೆಳ್ತಂಗಡಿ ತಾಲ್ಲೂಕು ಇರ [ಗ್ರಾಮ;

95. ಸುರೇಶ—58ನೆಯವಳ ಮ್ಯೂನರ ಮಗ—ಗಾರ್ಡಿಯನ್ 58ನೇಯವಳು.

ಇವರಿಗೆ.

ಮೇಲ್ಕಾಣುವ ವ್ಯವಹರಣೆಯಲ್ಲಿ ಫೈನಲ್ ಡಿಕ್ರಿ ಕೊಡಬೇಕೆಂತ ವಗೈರೆ ಮಾಡಿದ ಅರ್ಜಿಯು ವಿಲಂಬ ಮಾಡಬೇಕೆಂತ ವಗೈರೆ ಕೊಟ್ಟ RIA 764/64ನೇ ಅರ್ಜಿಯು ತಾ. 16-9-65ಕ್ಕೆ ಈ ಕೋರ್ಟಿನಲ್ಲಿ ಇಟ್ಟಿರುವದರಿಂದ ಆ ದಿವಸ ಬೆಳಗ್ಗೆ 11 ಘಂಟೆಗೆ ನೀವು ಸ್ವತಹಾ ಯಾ ವಕೀಲ್ ದ್ವಾರ ಹಾಜರಾಗಿ ಉಜರಿಸದಿದ್ದರೆ ನಿಮ್ಮನ್ನು ಏಕಪಕ್ಷ ಮಾಡಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವದು.

By order of Court

ಪುತ್ತೂರು, 16-8-65.

AMMU SHETTY A.
Advocate for Petitioner.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S No 153/1965.

V. V. Upadhyaya (Recr.) — ವಾದಿ.

ವಿಟ್ಠಲ ಶೆಟ್ಟಿ —ಪ್ರತಿವಾದಿ.

ಪ್ರತಿವಾದಿ-ಶ್ರೀ ವಿಟ್ಠಲ ಶೆಟ್ಟಿ, ವೆಂಕಪ್ಪ ಶೆಟ್ಟಿರ ಮಗ, ಕಾರ್ಕಳ ತಾಲೂಕು ಶಿರ್ಲಾಲು ಗ್ರಾಮದಲ್ಲಿರುವವ.

ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿಯು ನಿಮ್ಮ ಮೇಲೆ ಚಾಲಗೇಣಿ ಗೇಣಿ ಬಾಕಿ ರೂಪಾಯಿ 781—12ನ್ನು ಬರಮಾಡಿಕೊಳ್ಳುವರೆ ದಾಖಲ್ಲ ಮಾಡಿದ ಮೇಲ್ಕಂಡ ದಾವೆಯನ್ನು ನಿಮಗೆ ನೋಟೀಸಿನ ಬಗ್ಗೆ ತಾರೀಕು 10-9-1965ಕ್ಕೆ ಇಟ್ಟಿರುವದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಆ ದಿವಸ ಬೆಳಗ್ಗೆ ಘಂಟೆ 11ರ ಸಮಯ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉಜರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರ್‌ಹಾಜರಿಯಲ್ಲಿ ಸದ್ರಿ ದಾವಾ ತೀರ್ಮಾನಿಸಲ್ಪಡುವದು.

(ಕೋರ್ಟು ಹುಕುಂ ಪ್ರಕಾರ).

V. V. Upadhyaya,
Plaintiff (Receiver).

Karkala, 18—8—65.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. S 110/1965.

V. V. Upadhyaya (Recr.) — ವಾದಿ

ಮತ್ತು

ಕೊರಗ ಪೂಜಾರಿ ಕೂಡಾ —ಪ್ರತಿವಾದಿರು

2ನೇ ಪ್ರತಿವಾದಿ ಶ್ರೀ ನಾರಾಯಣ ಪೂಜಾರಿ, ಕೊರಗ ಪೂಜಾರಿ ಅಳಿಯ, ಕಾರ್ಕಳ ತಾಲೂಕು ಶಿರ್ಲಾಲು ಗ್ರಾಮದ ಮಿತ್ತೊಟ್ಟು ಎಂಬಲ್ಲಿರುವವ—

ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ

ವಾದಿಯು ನಿಮ್ಮ ಮೇಲೆ ಕೂಡಾ ಚಾಲಗೇಣಿ ಗೇಣಿ ಬಾಕಿ ರೂಪಾಯಿ 119.60ನ್ನು ಬರಮಾಡಿಕೊಳ್ಳುವರೆ ದಾಖಲ್ಲ ಮಾಡಿದ ಮೇಲ್ಕಂಡ ದಾವೆಯನ್ನು ನಿಮಗೆ ನೋಟೀಸಿನ ಬಗ್ಗೆ ತಾರೀಕು 8-9-1965ಕ್ಕೆ ಇಟ್ಟಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪವೇನಾದರೂ ಇದ್ದಲ್ಲಿ ಸದ್ರಿ ದಿವಸ ಬೆಳಗ್ಗೆ ಘಂಟೆ 11ರ ಸಮಯ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉಜರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರ್‌ಹಾಜರಿಯಲ್ಲಿ ಸದ್ರಿ ದಾವಾ ತೀರ್ಮಾನಿಸಲ್ಪಡುವದು.

(ಕೋರ್ಟು ಹುಕುಂ ಪ್ರಕಾರ)

V. V. Upadhyaya,
Plaintiff (Recr.)

Karkala, 18-8-1965.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ಕಚ್ಛ್ ಒಪ್ಪಂದದಲ್ಲಿರುವ ಒಪ್ಪಲಾಗದಂತಹ ವಿಷಯಗಳೇನು ?

(ಆರನೇ ಪುಟದಿಂದ)

ರಿಗೆ ಮನಸ್ಸಿದ್ದಲ್ಲಿ ಅವರು ಜನಪರದ ಸಭೆಯನ್ನು ಕರೆಯಬಹುದಾಗಿತ್ತು. ಆದರೆ ಅವರು ಹಿಂದಿನ ಅಧಿವೇಶನದ ಸಮಯ ಇನ್ನೊಂದು ವಿಷಯವನ್ನೂ ಹೇಳಿದ್ದರು. ಅದುವೇ ಇಂದಿನ ಸಂಧಾನದ ಮುಖ್ಯ ವಿಷಯವಾಗಿದೆ. ಸಾವಿರದೊಂಭೈನೂರ ಅರುವತ್ತನಾಲ್ಕು ದಶಂಬರ ಮುವ್ವತ್ತೊಂದರಂದು ಪಾಕಿಸ್ಥಾನ ಹಾಗೂ ಭಾರತ ಎಲ್ಲೆಲ್ಲಿ ಸೈನ್ಯಗಳನ್ನು ನಿಲ್ಲಿಸಿದ್ದವೋ ಅಲ್ಲಿಗೆ ಹಿಂದಿರುಗುವ ಶರ್ತದ ಮೇಲೆ ಮಾತ್ರ ಒಪ್ಪಂದ ನಡೆದೀತೆಂದು ಅವರು ಹಿಂದಿನ ಅಧಿವೇಶನದಲ್ಲಿ ಹೇಳಿದ್ದರು. ಹಾಗೆ ಆದಲ್ಲಿ ಮಾತ್ರ ಸಂಧಾನಕ್ಕೊಪ್ಪಬೇಕೆಂದು ಆಗ ಎದುರು ಪಕ್ಷಗಳೂ ಸ್ವರ ಸೇರಿದ್ದವು. ಆದೇ ಸಮಯದಲ್ಲಿ ಭಾರತದ ಪ್ರಧಾನಿ ಹಾಗೂ ರಕ್ಷಣಾ ಮಂತ್ರಿಯವರು ಒಂದು ವಿಷಯವನ್ನು ರಹಸ್ಯವಾಗಿಟ್ಟಿದ್ದರು. ಅಂದಿನವರೆಗೆ ಆಕ್ರಮಣ ನಡೆದೇ ಇಲ್ಲವೆಂದು ಅವರು ಘಂಟಾಘೋಷವಾಗಿ ಕೇಳಿದ್ದವರಿಗೆಲ್ಲಾ ಹೇಳಿದ್ದರು. ಈಗ? ಒಪ್ಪಂದದ ಪ್ರಕಾರ ಯಾವಯಾವ ಸ್ಥಳದಲ್ಲಿ ಪಾಕಿಸ್ತಾನ ಪಹರೆ ನಡೆಸಬಹುದೋ ಭಾರತೀಯ ಸೇನೆ ಇರಬಾರದೋ ಆ ಸ್ಥಳಗಳನ್ನು ಪಾಕಿಸ್ತಾನ ಆದಾಗಲೇ ಆಕ್ರಮಿಸಿಕೊಂಡಿತ್ತೆಂದು ಈಗ ಪ್ರಧಾನಿಯವರು ಹೇಳುತ್ತಿದ್ದಾರೆ! ಈ ಸಂಗತಿಗಳನ್ನು ಗುಜರಾಥ ಸರಕಾರ ಕೇಂದ್ರಕ್ಕೆ ತಿಳಿಸುವದರಲ್ಲಿ ತಪ್ಪಿದೆಯೆಂದೂ ಅವರು ಹೊಣೆಯನ್ನು ಹಗುರ ಮಾಡಿಕೊಳ್ಳಲು ಹೇಳುತ್ತಿದ್ದಾರೆ. ಗುಜರಾತ ಸರಕಾರವಾದರೋ ತಾವು ಈ ವಿಷಯವನ್ನು ಆದಾಗಲೇ ಕೇಂದ್ರಕ್ಕೆ ತಿಳಿಸಿದ್ದಾಗಿಯೂ, ಎಚ್ಚರಿಕೆ ವಹಿಸಿಕೊಳ್ಳಲು ಕೇಳಿಕೊಂಡದ್ದಾಗಿಯೂ, ಸಹಾಯ ನೆರವನ್ನು ಯಾಚಿಸಿದ್ದೇವೆಂದು ಹೇಳಿಬಿಟ್ಟು ಕೇಂದ್ರ ಸರಕಾರವನ್ನು ಹಗುರ ಮಾಡಿಬಿಟ್ಟಿದೆ. ಗುಜರಾಥಿನಲ್ಲಿರುವದೂ ಕಾಂಗ್ರೆಸ್ ಸರಕಾರವೇ, ಕೇಂದ್ರದಲ್ಲಿರುವದೂ ಕಾಂಗ್ರೆಸ್ ಶಾಸನವೇ! ಹೀಗಿದ್ದೂ ಈ ರೀತಿ ವಿರೋಧಾಭಾಸ. ಆಕ್ರಮಣವೆಸೆದದ್ದು ತನಗೆ ಗೊತ್ತೇ ಇಲ್ಲವೆಂದೂ, ಆ ಸ್ಥಳವನ್ನು ಮಾತುಕತೆಗಳ ಮೂಲಕ ಹಿಂದಕ್ಕೆ ಪಡೆದುಕೊಳ್ಳಲು ಸಾಧ್ಯವೆಂದೂ ಶ್ರೀ ಲಾಲ್‌ಬಹದೂರ ಶಾಸ್ತ್ರೀಜೀ ಭಾರತೀಯರನ್ನು ಸಂತೈಸಲು ಪ್ರಯತ್ನಿಸುತ್ತಿದ್ದಾರೆ. ಹಿಂದೊಮ್ಮೆ ಒಬ್ಬ ಪ್ರಧಾನಿಯವರಿದ್ದರು. ಅವರು ಬೇರುಬಾರಿ ಒಪ್ಪಂದಕ್ಕೆ 'ಸೈ' ಎಂದು ಬಿಟ್ಟರು ಯಾಕೆ ಒಪ್ಪಿದಿರೆಂದು ಕೇಳಿದ್ದಕ್ಕೆ, "ಬೇರುಬಾರಿಯಲ್ಲಿ ಜನರಿರುವದು ತನಗೆ ಗೊತ್ತಿರಲಿಲ್ಲವೆಂದು ಹೇಳಿದರು. ಇಂದೋರ್ವ ಪ್ರಧಾನಿಯವರಿದ್ದಾರೆ. ಆಕ್ರಮಣ ನಡೆದದ್ದು ತನಗೆ ಗೊತ್ತೇ ಇಲ್ಲವೆಂದು ಹೇಳುತ್ತಿದ್ದಾರೆ. ತನ್ನ "ತಪ್ಪ"ನ್ನೊಪ್ಪಿಕೊಳ್ಳುವ ಅವರ ಔದಾರ್ಯ, ಪ್ರಾಮಾಣಿಕತನವನ್ನು ಹೊಗಳಲೇ ಬೇಕು. ಇಂತಹ 'ಅಜ್ಞ' ಅಥವಾ ಗೊತ್ತಿಲ್ಲದ ಪ್ರಧಾನಿಗಳ ಕೈಯಲ್ಲೇ ಭಾರತದ ಶಾಸನಾಲಗಾಮು ಇರಬೇಕೇನು? ಇನ್ನೆಷ್ಟು ದಿನ ನಡೆದಿದ್ದೀತೋ ಇಂತಹ ಗೊತ್ತಿಲ್ಲದ ಶಾಸನ! ಈ ಗೊಂದಲದಿಂದ ಪಾರಾಗಲು ಶ್ರೀ ಲಾಲಬಹದೂರರು ಸಭೆಯನ್ನು ಕರೆಯದೆ ತೆರೆಯ ಮರೆಯಲ್ಲಿ ಸಂಧಾನ ನಾಟಕವನ್ನಾಡಿ ಬಿಟ್ಟರು. ಶ್ರೀ ಲಾಲಬಹದೂರ ಶಾಸ್ತ್ರೀಜೀ ವಿಶ್ವಾಮಿತ್ರರು ಸಂಧಾನ ಮೇನಕೆಯನ್ನು ಪಡೆದರು. ಇನ್ನು ಆ ಕಚ್ಛ್ ಒಪ್ಪಂದ ಶಿಶುವಿನ ಅವಸ್ಥೆ ಏನು?

ಗುಜರಾಥ—ಸಿಂಧ ಅಥವಾ ಭಾರತ–ಪಾಕಿಸ್ತಾನದ ನಡುವೆ ಗಡಿ ಪ್ರದೇಶ ನಿರ್ಧಾರವಾಗಿರುತ್ತದೆಂದು ಗೊಂದಲ ಉಂಟು ಮಾಡುವವರು ಆಕ್ರಮಣಗಾರರಾಗುತ್ತಾರೆಂದೂ, ಆಕ್ರಮಣವನ್ನು ಭಾರತ ಸಹಿಸದೆಂದು ನಮ್ಮ ಪ್ರಧಾನಿಗಳು ಎಡೆಬಿಡದೆ ಹೇಳುತ್ತ ಬರುತ್ತಿದ್ದರು. ಒಪ್ಪಂದದ ಪ್ರಕಾರ ಸುರ್ಯಾ-ಡಿಂಗ್ ಗಡಿ ಪ್ರದೇಶದಲ್ಲಿ ಪಾಕಿಸ್ತಾನದ ಪಹರೆ ಇರಬೇಕಾಗುತ್ತದೆ! ಈ ಪ್ರದೇಶ ಭಾರತದ್ದೆಂಬುದನ್ನು ಭಾರತ ಸರಕಾರ ಅಲ್ಲಗಳೆದಿರುವದಿಲ್ಲ. ನಮ್ಮ ಪ್ರದೇಶದಲ್ಲಿ ಇತರರ ಪಹರೆಯನ್ನು ಯಾರಾದರೂ ಸಹಿಸಿಕೊಳ್ಳುವದುಂಟೇ? ಇನ್ನು ಶೃಂಗ ಸಭೆ ನಡೆದು ಅದು ತೀರ್ಮಾನ ಕೊಡಬೇಕು—ಅದು ಯಾರಿಗೆ ಸೇರಿದ್ದೆಂಬುದು. ಅಲ್ಲಿಯ ವರೆಗೆ ಅದು ತ್ರಿಶಂಕು ಸ್ವರ್ಗ! ಈ ರೀತಿ ಆ ಪ್ರದೇಶವನ್ನು ಭಾರತ ಸರಕಾರವೇ ವಿವಾದಾಸ್ಪದ ಪ್ರದೇಶವೆಂದು ಒಪ್ಪಿಕೊಂಡಿದೆಯಾದರೂ, ತನ್ನ ಉದ್ಯೋಗಸ್ಥರಿಗೆ ಸ್ಪಷ್ಟ ಸೂಚನೆ ಕೊಟ್ಟಿರುತ್ತದೆ— ಅದನ್ನು ವಿವಾದಾಸ್ಪದ ಪ್ರದೇಶವೆಂದು ಹೇಳಕೂಡದೆಂದು. ಎಷ್ಟು ವಿಚಿತ್ರ! ವಿವಾದಾಸ್ಪದ ಪ್ರದೇಶವೆಂದರೇನೆಂಬುದಕ್ಕೆ ಸರಕಾರವೇ ವಿವರಣೆಯನ್ನೀಯ ಬೇಕಾಗುತ್ತದೆ.

ಒಪ್ಪಂದದ ಪ್ರಕಾರ ಸುಸ್ಪಷ್ಟವಾಗುವ ಇನ್ನೊಂದು ವಿಷಯವೆಂದರೆ ಗುಜರಾಥ ಗಡಿಯಲ್ಲಿ ಪೋಲಿಸರಿದ್ದರೆಂಬುದು. ಪೋಲಿಸರಿದ್ದದ್ದು ನಮ್ಮ ಗಡಿಯಲ್ಲಿ. ಅತ್ತ ಇದ್ದದ್ದು ಪಾಕ್ ಸೈನಿಕರು. ಏನು ವಿಚಿತ್ರ! ಪೋಲೀಸರಿಂದಾದರೂ ಗಡಿ ರಕ್ಷಣೆಯ ಕೆಲಸ ಮಾಡುವುದುಂಟೇ? ಸೈನ್ಯ ಇರುವದಾದರೂ ಏತಕ್ಕೆ? ಕಾಂಗ್ರೆಸ್ ಡೊಂಬರಲಾಗ ಹಾಕುವಾಗ ಸಹಾಯ ಮಾಡಲಿಕ್ಕೇನು? ಇನ್ನಾದರೂ ಭಾರತ ಸರಕಾರ ಎಚ್ಚತ್ತೆದ್ದೀತೇ? ಗಡಿ ರಕ್ಷಣೆಯ ಜವಾಬ್ದಾರಿಯನ್ನು ಸಂಪೂರ್ಣವಾಗಿ ಸೈನ್ಯಕ್ಕೆ ಬಿಟ್ಟುಕೊಟ್ಟೀತೇ? ಒಪ್ಪಂದದ ಪ್ರಕಾರ ಅದನ್ನು ಸಾಧ್ಯವೇ ಇಲ್ಲ. ಸಾವಿರದೊಂಭೈನೂರಅರುವತ್ತನಾಲ್ಕು ದಶಂಬರ ಮುವ್ವತ್ತೊಂದರಂದು ಅಲ್ಲಿ ನಮ್ಮ ಸೇನೆ ಇರಲಿಲ್ಲ. ಆದುದರಿಂದ ಇನ್ನು ಮುಂದೆ (ವಾದ-ವಿವಾದ ಮುಗಿಯುವ ವರೆಗೆ?) ಅಲ್ಲಿ ಇರಬಾರದು. ನಮ್ಮ ಕಾಲಿನ ಮೇಲೆ ನಾವೇ ಕಲ್ಲನ್ನು ಹಾಕಿ ಕೊಂಡಿದ್ದೇವೆ. ಹೀಗಿದೆ ನಮ್ಮ ರಾಜಕೀಯ.

ಒಪ್ಪಂದಕ್ಕೆ ಸಹಿ ಹಾಕುವಂತಾದರೂ ಇತರೆಡೆಗಳಲ್ಲಿ ಆಕ್ರಮಣ ನಡೆಸುವದನ್ನು ಪಾಕಿಸ್ತಾನ ನಿಲ್ಲಿಸಿತ್ತೇ? ಇಲ್ಲ. ಆಕ್ರಮಣ ನಡೆಸುವದು ಅವರ ರಕ್ತಗತ ಅಭ್ಯಾಸ. ಅದನ್ನು 'ಬಿಟ್ಟು ಬಿಡಲು ಸಾಧ್ಯವೇನು? ಅತ್ತ ನಮ್ಮ ಪ್ರಧಾನಿಯವರಿನ್ನಾದರೂ ಲಕ್ಷ್ಯವಿತ್ತಿರುವರೇ?

ಭಾರತಮಾತೆಯ ಗೌರವ ಬಾವುಟವನ್ನು ಬಾನೆತ್ತರಕ್ಕೇರಿಸುವ ಧೃಡ ಸಂಕಲ್ಪ ನಮ್ಮದಾಗಲಿ. ಭಾರತದ ಪ್ರಧಾನಿ ಹಾಗೂ ರಕ್ಷಣಾ ಮಂತ್ರಿ ಅತ್ತ ಗಮನ ಕೊಡಲಿ, ಕೊಡದಿರಲಿ, ಭಾರತೀಯ ಪ್ರಜೆಗಳು, ಇನ್ನು ಸೈ ಮರೆಯುವಂತಿಲ್ಲ.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು–೧

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ಸ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು.ಶಿ.ಹರಿದಾಸ ಭಟ್)	1=75
ಕುಲವಿಲ್ಲದ ಹೆಣ್ಣು	(ಪಿ. ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಪುಣ್ಯಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಕೆಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ತುಮಕೂರಿನಲ್ಲಿ ಕನ್ನಡ ಕಥಾಸ್ಪರ್ಧೆ

ದಿವಂಗತ ಗೋಪಿನಾಥರ ಸ್ಮಾರಕಾರ್ಥವಾಗಿ ತುಮಕೂರಿನಲ್ಲಿ ಕನ್ನಡ ಕಥಾಸ್ಪರ್ಧೆ ಈಗ ಏಳು ವರ್ಷದಿಂದ ನಡೆಯುತ್ತಿದೆ. ಸ್ಪರ್ಧೆಯಲ್ಲಿ ಜಯಶೀಲರಾದವರಿಗೆ ಬಹುಮಾನ ಕೊಡಲಾಗುವುದು. ಪ್ರಥಮ ಬಹುಮಾನ ೫೦ ರೂ. ಎರಡನೆ ಬಹುಮಾನ ೩೫ ರೂ. ಮೂರನೆ ಬಹುಮಾನ ೧೫ ರೂ. ನಾಲ್ಕನೆ ಬಹುಮಾನ ೧೦ ರೂ. ಪ್ರವೇಶ ಧನವಿಲ್ಲ. ಭಾಷಾಂತರವಿಲ್ಲದ ಸ್ವಂತ ಕೃತಿಯಾದ ೩೦೦೦ ಪದಗಳಿಗೆ ಮೀರದ, ಇದುವರೆಗೆ ಎಲ್ಲೂ ಪ್ರಕಟವಾಗದ ಕನ್ನಡದಲ್ಲಿ ಬರೆದ ಕಥೆಗಳನ್ನು ಸ್ವೀಕರಿಸಲಾಗುವುದು. ಬಿಳೀ ಕಾಗದದ ಒಂದೇ ಪಕ್ಕದಲ್ಲಿ ಕಥೆಯನ್ನು ಬರೆದು ಸಂಪಾದಕರು, ವಿಜಯವಾಣಿ ವಾರಪತ್ರಿಕೆ, ತುಮಕೂರು—ಎಂಬ ವಿಳಾಸಕ್ಕೆ ಆಗಸ್ಟ ೩೧ರೊಳಗಾಗಿ ಕಳುಹಿಸಬಹುದು.

ವಿಜ್ಞಾನ ಸಂಘದ ಉದ್ಘಾಟನೆ

ಮಣಿಪಾಲ ಹೈಸ್ಕೂಲಿನ ವಿಜ್ಞಾನ ಸಂಘದ ಉದ್ಘಾಟನೆಯು ಇದೇ ತಾ 7 ರಂದು ಶ್ರೀ ಎನ್. ಎಸ್. ಪ್ರಭು ಅವರಿಂದ ನೆರವೇರಿತು. ಮುಖ್ಯೋಪಾಧ್ಯಾಯ ಶ್ರೀ ಕಲ್ಲಾಡಿ ರಾಮರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಎನ್. ಪ್ರಭು ತಮ್ಮ ಉದ್ಘಾಟನಾ ಭಾಷಣದಲ್ಲಿ ವಿದ್ಯಾರ್ಥಿಗಳು ವಿಜ್ಞಾನದೊಂದಿಗೆ ಮಾನವೀಯತೆಯನ್ನು ಪ್ರಚೋದಿಸುವ ಪಾಠಗಳನ್ನೂ ಅಳವಡಿಸಿಕೊಳ್ಳಬೇಕೆಂದು ತಿಳಿಸಿ, ಈ ಸಂಘವು ಪ್ರಗತಿ ಪಥದಲ್ಲಿ ಸಾಗಲೆಂದು ಹಾರೈಸಿದರು. ಶ್ರೀಗಳಾದ ದಾಮೋದರ ಮತ್ತು ಲಕ್ಷ್ಮೀನಾರಾಯಣ ಭಟ್ಟರು ಸೂಚಕಗಳು, ಹಾಗೂ ಕಿರಣಗಳು ಮತ್ತು ಸಂಯುಕ್ತಗಳು. ಈ ವಿಷಯಗಳಲ್ಲಿ ಪ್ರಯೋಗಿಕ ವಿವರಣೆಯನ್ನು ಕೊಟ್ಟರು. ಶ್ರೀ ಗೋಪಾಲಕೃಷ್ಣ ನಾಯಕರಿಂದ ಧನ್ಯವಾದ ಅರ್ಪಣೆಯಾಯಿತು.

ಪುತ್ತೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 165/65.

ಸಿಂಡಿಕೇಟ್ ಬ್ಯಾಂಕ್ — ವಾದಿ

Vs.

ಶಂಕರನಾರಾಯಣ ಬಟ್ರಬೈಲು ಕೂಡಾ — ಎದ್ರಿರು.

೩ನೇ ಪ್ರತಿವಾದಿ ಪುತ್ತೂರು ತಾಲೂಕು ನೆಲ್ಲೂರು ಕೆಮ್ರಾಜೆ ಗ್ರಾಮದ ಎಲಿಮಲೆಯಲ್ಲಿರುವ ದೇವಯ್ಯ ನಾಯ್ಕರ ಮಗ ಕೆ. ಕೃಷ್ಣ ನಾಯ್ಕರಿಂಗೆ ತಿಳಿಸುವದೇನೆಂದ್ರೆ—

ವಾದಿಯು ರೂ. 689 51 ಮತ್ತು ಕೋರ್ಟು ಖರ್ಚು ಮುಂದಿನ ಬಡ್ಡಿಗೆ ಸಹಾ ನಿಮ್ಮ ಮೇಲೆ ಕೂಡಾ ವ್ಯಾಜ್ಯ ದಾಖಲು ಮಾಡಿದ್ದು ನಿಮ್ಮ ಉಪಾಹರಣೆಗೆ ತಾ. 9–9–65ಕ್ಕೆ ಈ ಕೋರ್ಟಿನಲ್ಲಿ ಇಟ್ಟಿರುತ್ತದೆ. ಆ ದಿವಸ 10 ಗಂಟೆಗೆ ನೀವು ಖುದ್ದಾಗಲೀ, ವಕೀಲ್ ದ್ವಾರವಾಗಲೀ ಹಾಜರಾಗದಿದ್ದಲ್ಲಿ ನಿಮ್ಮನ್ನು [illegible] ಮಾಡಲಾದೀತು. ತಿಳಿದಿರಲಿ.

(By order of Court).

ಕೆ. ರಾಮಕೃಷ್ಣ,
ಎಡ್ವಕೇಟ್.

ಪುತ್ತೂರು, 9–8–65.

ಮೊದಲ ಸ್ವಾತಂತ್ರ್ಯ ದಿನ

(ಐದನೇ ಪುಟದಿಂದ)

ಈ ರೀತಿಯ ಘಟನೆಗಳ ಪುನರಾವೃತ್ತಿ ಅನೇಕ ಸ್ಥಾನಗಳಲ್ಲಿ ನಡೆಯಿತು. ಕರಾಚಿಯಲ್ಲಿ ನಡೆದ ಹತ್ಯಾಕಾಂಡದಲ್ಲಿ ಸಾವಿರಾರು ಹಿಂದುಗಳು ನಿರ್ದಯವಾಗಿ ಕೊಲ್ಲಲ್ಪಟ್ಟರು. ಅದು ಕೂಡಾ ಪಾಕಿಸ್ಥಾನೀ ಪೋಲೀಸರ ಹಾಗೂ ಮುಂದಾಳುಗಳ ಛತ್ರ ಛಾಯೆಯಡಿಯಲ್ಲಿ. ೫೦ ಸಾವಿರ ಮುಸಲ್ಮಾನರ ಗುಂಪೊಂದು ಕರಾಚಿಯ ಓಣಿ ಓಣಿಗಳಿಗೆ ನುಗ್ಗಿ ಹಿಂದುಗಳನ್ನು ಸದೆ ಬಡಿಯಿತು, ಹಿಂದುಗಳ ಅಂಗಡಿ—ಮನೆಗಳನ್ನು ದರೋಡೆ ಮಾಡಿತು ಹಾಗೂ ಅನಂತರ ಅವುಗಳಿಗೆ ಬೆಂಕಿಯಿತ್ತಿತ್ತು. ಗುರುದ್ವಾರ, ಆರ್ಯಸಮಾಜ, ಸ್ವರಾಜ ಭವನ ಮತ್ತು ಶಿವ ಮಂದಿರವೊಂದನು ಅಗ್ನಿಗರ್ಪಿಸಲಾಯಿತು. ಈ ಕೊಲೆ ಸುಲಿಗೆಗಳು ನಾಲ್ಕು ಗಂಟೆಗಳ ತನಕ ಒಂದೇ ಸವನೆ ನಡೆದವು.

ಭಾರತ ಮಾತೆಯ ೫೦ ಸಾವಿರ ಪುತ್ರಿಯರು ಮುಸಲ್ಮಾನರಿಂದ ಅಪಹರಿಸಲ್ಪಟ್ಟರು. ಅತ್ಯಂತ ಘೃಣಿತ ಜೀವನಯಾಪನೆ ಮಾಡಲಿಕ್ಕಾಗಿ ಅವರನ್ನು ವಿವಶಗೊಳಿಸಲಾಯ್ತು, ಎಂದು ಪಂಜಾಬದ ಪ್ರಸಿದ್ಧ ಮುಂದಾಳು ಜತ್ತೇದಾರ ಬಾಘಮುಸಿಂಹ ಸ್ಪಷ್ಟೋಕ್ತಿಯಿತ್ತಿದ್ದರು. ಕಬಾಲಿಗಳಲ್ಲಿ ಆಕ್ರಮಣದ ಆವೇಶವನ್ನು ಹುಟ್ಟಿಸಲಿಕ್ಕೆ [illegible] ಕಾಶ್ಮೀರದಿಂದ ಅಪಹರಿಸಲ್ಪಟ್ಟ ೨೦೦೦ ಸ್ತ್ರೀಯರನ್ನು ಪೇಶಾವರದ ನಗರಗಳಲ್ಲಿ ಮೆರವಣಿಗೆ ಮಾಡಲಾಯ್ತು— ಎಂದು ಇವರು ತಮ್ಮ ಮಾತನ್ನು ಸ್ಪಷ್ಟೀಕರಿಸುತ್ತ ಸೂಚಿಸಿದ್ದರು. ಈ ೨೦೦೦ ಮಂದಿ ಅಪಹೃತ ಕನ್ಯೆಯರನ್ನು ಮೂರು ಮೂರು ಬಾರಿ ಮಾರಲಾಯ್ತು.

ಕಾಶ್ಮೀರದ ಮೇಲೆ ಪಾಕಿಸ್ತಾನಿಗಳ ಆಕ್ರಮಣ ನಡೆದಾಗ ಅಲ್ಲಿ ಜನ ಎಂತಹ ಬರ್ಬರತೆಯನ್ನೆದುರಿಸಬೇಕಾಯ್ತು ಎಂಬುದರ ಬಗೆಗೆ ಅಧಿಕೃತ ವಿವರಣೆ ಉಪಲಬ್ಧವಿಲ್ಲವಾದರೂ ಅದರ ಸಾಮಾನ್ಯ ಚಿತ್ರವನ್ನು ನಾವು ಇಂದೂ ನೋಡಬಹುದಾಗಿದೆ. ಜಮ್ಮೂ-ಕಾಶ್ಮೀರದ ಪ್ರಜಾಪರಿಷತ್ತಿನ ತತ್ಕಾಲೀನ ಮಂತ್ರಿಗಳಾಗಿದ್ದ ಪ್ರೊ— ಬಲರಾಜ್ ಮೋಧಕ್ ಅವರು ಒಮ್ಮೆ ಭಾಷಣಗೈಯುತ್ತಾ— ಆಕ್ರಮಣದ ಸಮಯದಲ್ಲಿ ಬೌದ್ಧ ಲದ್ದಾಖ್ ಕ್ಷೇತ್ರದ ನಿವಾಸಿಗಳಲ್ಲಿ ಸುಮಾರು ೫೦ ಸಾವಿರಮಂದಿ ಹಿಂದುಗಳು ಕೊಲ್ಲಲ್ಪಟ್ಟಿದ್ದರು ಎಂದಿದ್ದರು. ಮುಜಫ್ಫರಾಬಾದದ ಒಟ್ಟು ಸಂಖ್ಯೆ ೨೨ ಸಾವಿರ. ಆಕ್ರಮಣದ ಹಿಂದಿನ ದಿನ ಇಲ್ಲಿಯ ಕೌಮಾರಿಯವರು ತಮ್ಮ ಸತೀತ್ವದ ರಕ್ಷಣೆಗಾಗಿ ಕಿಶನ್‌ಗಂಗಾ ಮತ್ತು ಝೇಲಮ್ ನದಿಯಲ್ಲಿ ಹಾರಿ ಪ್ರಾಣಾರ್ಪಣೆಗೈದರು. ಈ ಆಕ್ರಮಣದ ಬಳಿಕ ಉಳಿದ ಮಂದಿ ನೂರು ಮಾತ್ರ! ಇದೇ ರೀತಿಯಲ್ಲಿ ಶಿಶ್ತಿ ವಾರದಲ್ಲಿ ಕೂಡಾ ಹಿಂದುಗಳ ಸಂಹಾರ ಗೈಯಲಾಯ್ತು. ಆಕ್ರಮಣಕಾರಿಗಳು ೨೮ ಹಳ್ಳಿಗಳನ್ನೇ ಸುಟ್ಟು ಬಿಟ್ಟರು. ೨ ಸಾವಿರ ಸ್ತ್ರೀಯರನ್ನು ಅಪಹರಿಸಲಾಯ್ತು. ಲಕ್ಷಾಂತರ ರೂಪಾಯಿ ಸಂಪತ್ತನ್ನು ಭಸ್ಮಗೊಳಿಸಲಾಯಿತು. [illegible] ಹೀಲ್— ಕಲಾ ಪೋಟದಲ್ಲಿ ೫೦ಗಳ ಮಂದಿ ಹಿಂದುಗಳನ್ನು ಒಟ್ಟು ಮಾಡಿ ಒಂದೇ ಸಲ ಸುಡಲಾಯ್ತು. ಪುಲಂಧಂ, ಬ್ರಹ್ಮಪುರ, ಮತ್ತು ಗೋರಾಯಹಳ್ಳಿಗಳಲ್ಲಿ ಸಾವಿರಾರು ಹಿಂದಿಗಳನ್ನು ಕ್ರೂರತಾಪೂರ್ವಕವಾಗಿ ವಧಿಸಲಾಯ್ತು. ಬರೀ, ಪೂಂಛ, ಸುಚೇತಗಢ, ಕಂಬಾ, ಸಕ್‌ವಾರೀ, ಮೀರ್‌ಪುರ ಮುಂತಾದ ಅನೇಕ ಸ್ಥಾನಗಳಲ್ಲಿ ಇದೇ ರೋಮಾಂಚನೀಯ ಘಟನೆಗಳ ಪುನರಾವೃತ್ತಿ ನಡೆಯಿತು. ಇದಕ್ಕತಿರಿಕ್ತವಾಗಿ ಆಕ್ರಮಣಕಾರಿಗಳಿಗೆ ಪ್ರತಿರೋಧಗೈಯುತ್ತ ವೀರ ಉಸ್ಮಾನನಂತಹ ಅದೆಷ್ಟು ಭಾರತೀಯ ಸೈನಿಕರು ಬಲಿದಾನವಾದರೋ ಯಾರು ಬಲ್ಲರು? ಅವರ ಸಂಖ್ಯೆಯೂ ಸಾವಿರಗಟ್ಟಲೆಗಿಂತ ಕಡಿಮೆ ಖಂಡಿತಕ್ಕೂ ಇರಲಿಕ್ಕಿಲ್ಲ!

ಕಾಶ್ಮೀರದಂತೆ ಅಲ್ಲವಾದರೂ ಹೈದರಾಬಾದದಲ್ಲಿ ಕೂಡಾ ವಿಲೀನೀಕರಣಕ್ಕೆ ಮುಂಚೆ ಆದ ಬಲಿದಾನಗಳ ಸಂಖ್ಯೆ ಕಡಿಮೆಯಿಲ್ಲ. ಹೈದರಾಬಾದ ರಾಜ್ಯ ಕಾಂಗ್ರೆಸ್‌ನ ಕಾರ್ಯಕಾರೀ ಸಮಿತಿಯ ಸದಸ್ಯರಾದ ಡಾ. ಮೇನ್ ಕೋಟಿಯವರ ಮಾತಿನನುಸಾರವಾಗಿ ಕೇವಲ ೨೫ನೇ ನವೆಂಬರದಿಂದ ೧೫ನೇ ದಶಂಬರದೊಳಗಾಗಿಯೇ ಇಲ್ಲಿ ೩ ಸಾವಿರ ಮನೆಗಳನ್ನು ಸುಡಲಾಯ್ತು. ೨೮೦ ಮಂದಿ ಸ್ತ್ರೀಯರನ್ನು ಅಪಹರಿಸಲಾಯ್ತು. ೬೦೦ ಮಂದಿಯನ್ನು ಗುಂಡಿಟ್ಟು ಕೊಲ್ಲಲಾಯ್ತು. ೩೦ ಲಕ್ಷ ರೂಪಾಯಿ ಬೆಲೆ ಬಾಳುವ ಸಂಪತ್ತನ್ನು ದರೋಡೆಗೈಯಲಾಯ್ತು. ಜುನಾಗಢದಲ್ಲಿಯೂ ಹೆಚ್ಚು ಕಡಿಮೆ ಇದೇ ರೀತಿಯ ಹತ್ಯಾಕಾಂಡ ಜರುಗಿತ್ತು.

ಭಾರತದ ಈ ಅಸ್ವಾಭಾವಿಕ ವಿಭಜನೆಯು ಸಹೋದರನಿಂದ—ಸಹೋದರನನ್ನು, ರಕ್ತದಿಂದ ರಕ್ತವನ್ನು ಬಲಾತ್ಕಾರವಾಗಿ ವಿಂಗಡಿಸಿತು. ೧೯೪೮ರ ಜುಲೈ ತಿಂಗಳ "ಸರಸ್ವತಿ"ಯಲ್ಲಿ ಪ್ರಕಟವಾದ ಶ್ರೀ ಚಂದ್ರ ಬಲಿಯವರ ಒಂದು ಪತ್ರದಿಂದ ವಿಭಜನೆಯ ಭಯಾನಕ ಮರ್ಮಭೇದೀ ದೃಶ್ಯ ಕಣ್ಣ ಮುಂದಾಡತೊಡಗುತ್ತದೆ. ಆ ಪತ್ರದ ಸಣ್ಣ ಭಾಗವೊಂದನ್ನಿಲ್ಲಿ ಉದ್ಧರಿಸಲಾಗಿದೆ—

"ಪ್ರಿಯ ಬಂಧು! ಅಂತಿಮ ಪ್ರಣಾಮಗಳು!

ಕಳೆದ ೧೯೪೭ರಿಂದ ಯಾವುದು ನಮಗೆ ತಲೆಭಾರವಾಗಿತ್ತೋ, ಬೇಡವಾಗಿತ್ತೋ ಅದು ಇಂದು ಆಗಿಬಿಟ್ಟಿದೆ...... ಭಾರತದ ಗುಂಡಾ ಶಕ್ತಿ ಪ್ರಭಾವಕಾರಿಯಾಗಿದೆ ಎಂದು ಸಿದ್ಧವಾಯಿತು. ನಮ್ಮನ್ನು ನೃಶಂಸಗೊಳಿಸಿ ರಾಷ್ಟ್ರ ವಿರೋಧಿಗಳು, ಭಾರತದ ಮುಂದಾಳುಗಳನ್ನು ದೇಶದ ವಿಭಜನೆಗೆ ವಿವಶಗೊಳಿಸಿಯೇ ಬಿಟ್ಟರು. ಪಾಕಿಸ್ತಾನದ ಹಿಂದು ಇಂದು ತನ್ನ ಜನ್ಮಭೂಮಿಯಲ್ಲಿಯೇ ಪರದೇಶಿಯಾಗಿ ಬಿಟ್ಟನು....... ಹಿಂದುಸ್ತಾನವು ಎರಡು ಕೋಟಿ ಪಾಕಿಸ್ತಾನೀ ನಿವಾಸಿ ಹಿಂದುಗಳ ಹೆಣದ ಮೇಲೆ ತಮ್ಮ ಸ್ವಾತಂತ್ರ್ಯದ ಸ್ಥಾಪನೆಗೈಯಿತು. ಈ ಗೌರವ ನಮಗೆ ಅನಾಯಾಸವಾಗಿಯೇ ಪ್ರಾಪ್ತವಾಯಿತು. ಆ ಗೌರವ ಸ್ವರ್ಣಮಯವಾಗಿಲ್ಲ. ಅದರ ಬದಲು ಕಲಂಕಿತವಾಗಿದೆ! ಗೃಹಯುದ್ಧದ ಕಿಡಿಗಳಾಗಿರುತ್ತಿದ್ದರೆ ಆ ಗೌರವ ಸ್ವರ್ಣಮಯವಾಗುತ್ತಿತ್ತೋ ಏನೋ? ಆದರೆ ಈ ಗೌರವ ಸದಾ ಮರ್ಮವನ್ನು ಚುಚ್ಚುವ ಮುಳ್ಳಾಗಿ ಬಿಟ್ಟಿದೆ.

ಹೇ ಗಂಗೇ, ಯಮುನೇ ಮಧುರಾ, ಕಾಶೀ, ಪ್ರಯಾಗ, ರಾಮೇಶ್ವರವೇ, ನಿಮಗೆಲ್ಲರಿಗೂ ಅಂತಿಮ ಪ್ರಣಾಮಗಳು. ಪಾಸ್‌ಪೋರ್ಟನ್ನು ಪಡೆದು ನಮ್ಮ ಅಸ್ಥಿಗಳು ಹರಿದ್ವಾರಕ್ಕೆ ಬಂದಾವು ತೀರ್ಥ ದರ್ಶನದ ಭಾಗ್ಯವಂತೂ ಎಂದೆಂದಿಗೂ ಅನಾಥಗೊಳಿಸಿ ಬಿಟ್ಟು ಹೋಯ್ತು." ಈ ಪತ್ರ ಖಂಡಿತ ಭಾರತದ ಪ್ರತಿಯೊಬ್ಬ ಹಿಂದೂವಿನ ಬಲಿದಾನ ಕಥೆಯನ್ನು ಕಿರುಚಿ, ಕಿರುಚಿ ನಮಗೆ ಅನ್ನುತ್ತದೆ.

ಪಾಕಿಸ್ತಾನದ ವಿಭಿನ್ನ ಭಾಗಗಳಲ್ಲಿ ಮುಸ್ಲಿಂ ಗುಂಡಾಗಳಿಂದ, ಪೋಲೀಸರಿಂದ ತಥಾ ಸೈನ್ಯದಿಂದ ಮಾಡಲ್ಪಟ್ಟ ಅತ್ಯಾಚಾರವನ್ನು ಕೇಳಿದಾಗ ಭಾರತೀಯ ಜನತೆ ಕೂಡಾ ಸಿಡಿದೆದ್ದಿತು. ಅಲ್ಪ ಸ್ವಲ್ಪ ಪ್ರತಿಕ್ರಿಯೆ ಇಲ್ಲಿ ಕೂಡಾ ಜರುಗಿತು. ಕಿಂತು ಭಾರತ ಸರಕಾರ ಕಠೋರತಾಪೂರ್ವಕವಾಗಿ ಇದನ್ನು ಅದುಮಿ ಬಿಟ್ಟಿತು! ಆದರೂ ಅನೇಕ ನಿರ್ದೋಷೀ ಮುಸಲ್ಮಾನ ಸ್ತ್ರೀ ಪುರುಷರೂ ಈ ದಾವಾನಲದಿಂದ ಅಸ್ಪೃಶ್ಯರಾಗಿ ಉಳಿಯಲಿಲ್ಲ ಎಂದು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಅವರೂ ಧನ ಜನಗಳ ಹಾನಿ ಸಹಿಸಬೇಕಾಯ್ತು. ಪಾಕಿಸ್ತಾನದಲ್ಲಿ ಹಿಂದುಗಳ ಮೇಲೆ ಎಷ್ಟು ಅತ್ಯಾಚಾರ ಅನಾಚಾರಗಳನ್ನು ಗೈಯಲಾಯ್ತೋ ಅದನ್ನು ತುಲನೆ ಮಾಡಿ ನೋಡುವಾಗ ಭಾರತದಲ್ಲಿದ್ದ ಮುಸ್ಲಿಮ್ ಸಮಾಜಕ್ಕಾದ ಹಾನಿ ಅಗಣ್ಯ ಎಂದರೆ ಅನುಚಿತವಾಗಲಾರದು.

(ಮೂಲ:— ಶ್ರೀ ಗಿರೀಶಚಂದ್ರ ಮಿಶ್ರ— ಜ್ಞಾನ ಭಾರತಿಯಿಂದ).

ಇದೀಗ ಪ್ರಕಟವಾಗಿದೆ—

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ........................"

(ಶ್ರೀ ಕೆ. ಸಿ. ಪೈಗಳ ಮುನ್ನುಡಿಯಿಂದ)

ಕಣ್ಣಿನ ಸೆಳೆವ ತ್ರಿವರ್ಣ ಮುಖಪತ್ರ!

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಯುಗ ಪ್ರೆಸ್, ಉಡುಪಿ | ನವಭಾರತ ಬುಕ್ ಡಿಪೊ, ಪಾಲುಕೋಟೆ, ಉಡುಪಿ.

....ಹುಣ್ಣಿಮೆ....

ರಜನಿಕನ್ನೆ ಮುಸುಕಿಯಿಂದ
ಬೆಡಗಿನಿಂದ ಬಂದಳು
ಬೆಳ್ಳಿಯಂಬ ಚಂದ್ರನನ್ನು
ಹೊತ್ತುಕೊಂಡು ತಂದಳು
ಜೀವಕೋಟಿ ರಸಿಕ ಜನಕೆ
ಜೊನ್ನ ಮಳೆ ಸುರಿದಳು
ಶಿವಸೃಷ್ಟಿ ಸೊಬಗಿಗಾಗಿ
ಬೆರಳು ಕಚ್ಚಿ ನಕ್ಕಳು
ಬಾನುಪಾತ್ರೆಯಲ್ಲಿ ತಾರೆ
ನೊರೆಯು ಹಾಗೆ ಕೊಳೆಯಿತು
ಹಾಲುಗಿನೆ ತೇಲುವಂತೆ
ಬಿಳಿಯ ಮೋಡ ತೇಲಿತು
ಬಾನುಪಾತ್ರೆ ತುಂಬಿ ಸೂಸಿ
ಹಾಲು ಇಳೆಗೆ ಹರಿಯಿತು
ಇಳೆಯ ಪ್ರಾಣಿ ಕೋಟಿಗೆಲ್ಲ
ಸರಸ ಬುಗ್ಗೆ ಚಿಮ್ಮಿತು
ಜ್ಯೋತ್ಸ್ನೆಯಿಂದ ಕುಡಿಲತೆ
ಮಿರಿಮಿರಿ ಮಿಂಚಿತು
ಹಾಲು ಹೊಳೆಯ ತೀರ ಬೆಳ್ಳಿ
ಥಳಥಳ ಹೊಳೆಯಿತು
ಅರಳಿ ನಿಂತ ಚೆಲ್ವ ಕುಸುಮ
ಹಾಲು ಸ್ನಾನ ಮಾಡಿತು
ಗಾಳಿಕೈಯ ರಮಿಸುತಿರಲು
ಮುದುಡಿ ನಲುಗಿ ನಾಚಿತು
ತೆಂಗುವೊಂದು ಗೋಣು ಹಾಕಿ
ಗಾಳಿ ಕೊಳಲ ಊದಿತು
ಪಾಲ್ಗಡಲ ಚೆಲುವು ತೀರ
ತನನ ಗೀತ ಹಾಡಿತು
ಜೊನ್ನವಕ್ಕಿ ಜೊನ್ನ ಕುಡಿದು
ಹಾಲಿನಲ್ಲಿ ಈಜಿತು.
ಭೂಮಿ ತುಂಬ ಎನಿತೋ ಜೀವ
ಹಿಗ್ಗ ಸೊಗವ ಪಡೆಯಿತು
ಹಾಲ ಸ್ನಾನ ಮಾಡಿ ಹಿಗ್ಗಿ
ಭೂರಮೆಯು ನಲಿದಳು
ಶ್ವೇತ ಸೀರೆ ಧರಿಸಿ ನಿಂತು
ಪರಮ ಪೂಜ್ಯೆಯಾದಳು.

— ಪಾಟೀಲ ಪುಂಡಲೀಕ,
ಹಿರೇಬಾಗೇವಾಡಿ.

ನಾವು ಸ್ವೀಕರಿಸುತ್ತೇವೆ

೧. **ಭಾರತೀಯ ಸಂಸ್ಕೃತಿ ವಿದ್ಯಾಪೀಠ, ಬೆಂಗಳೂರು— ಇದರ ವಾರ್ಷಿಕ ಸಂಚಿಕೆ:**

ಶ್ರೀ ನಾಗೇಶ ಹತ್ವಾರರ ನಿರ್ದೇಶನದಲ್ಲಿ ಸಾಮಾನ್ಯ ಶಿಕ್ಷಣ, ಹಿಂದೀ, ಸಂಸ್ಕೃತ ಭಾಷಾ ಶಿಕ್ಷಣ, ನರ್ಸರಿ ಇತ್ಯಾದಿ ಹಲವು ವಿಭಾಗಗಳಿಂದ ಶಿಕ್ಷಣರಂಗದಲ್ಲಿ ಸೇವೆ ಸಲ್ಲಿಸುತ್ತ ಬರುತ್ತಿರುವ ಸಂಸ್ಥೆಯ ೧೯೬೪ನೆ ಇಸವಿಯ ಸಂಚಿಕೆ ಇದು. ವಿದ್ಯಾರ್ಥಿಗಳ ಲೇಖನಗಳೊಂದಿಗೆ ವಿದ್ಯಾ ಪೀಠದ ಚಟುವಟಿಕೆಗಳ ಪರಿಚಯವೂ ನಮಗೆ ತಿಳಿಸುತ್ತದೆ. ವಿದ್ಯಾಪೀಠದ ಕಾರ್ಯ ಕ್ರಮ ಪ್ರಶಂಸನೀಯ.

೨. **ತಿರ್ವಲೋಕಲ್ ಫಂಡ್ ಆಸ್ಪತ್ರೆಯ ಕ್ಷಯ ಚಿಕಿತ್ಸಾ ವಿಭಾಗದ ಉದ್ಘಾಟನಾ ಸಮಾರಂಭದಲ್ಲಿ ಪ್ರಕಟಿಸಲಾದ ಇಂಗ್ಲಿಷ್ ಮತ್ತು ಕನ್ನಡ ಸ್ಮಾರಕ ಸಂಚಿಕೆಗಳು:—** ಈ ಎರಡೂ ಸಂಚಿಕೆಗಳಲ್ಲಿ ಕ್ಷಯರೋಗದ ಮೇಲೆ ಹಲವಾರು ಪ್ರಸಿದ್ಧ ಡಾಕ್ಟರರು ಕ್ಷ—ಕಿರಣವನ್ನು ಬೀರಿ ಬರೆದ ಲೇಖನಗಳಿವೆ. ಸಂಚಿಕೆಗಳು ಕ್ಷಯರೋಗದ ಬಗ್ಗೆ ನಮಗೆ ವಿಶೇಷ ಮಾಹಿತಿಯನ್ನು ಕೊಡುವುದರಿಂದ ಅಮೂಲ್ಯ ಹಾಗೂ ಸಂಗ್ರಾಹ್ಯವಾಗಿವೆ. ಒಂದು ರೂಪಾಯಿಯ ಅಂಚೆಚೀಟಿನ್ನು ಎಸೋಸಿಯೇಶನಿನ ಕಾರ್ಯದರ್ಶಿಗಳಿಗೆ ಕಳಿಸಿ ಸಂಚಿಕೆಯನ್ನು ಪಡೆದು ಕೊಳ್ಳಬಹುದು, ಅಪೇಕ್ಷಿತರು.

೩ **ತತ್ತ್ವವಾದ:—** ಅಖಿಲಭಾರತ ಮಾಧ್ವ ಮಹಾಮಂಡಲದ ಪತ್ರಿಕೆಯಿದು. ಮಧ್ವ ನವಮಿ ವಿಶೇಷಾಂಕದಲ್ಲಿ ಶ್ರೀ ಮಧ್ವಾಚಾರ್ಯರ ದ್ವೈತ ಸಿದ್ಧಾಂತದ ಪ್ರಚಾರ ಮತ್ತು ಪರಿಜ್ಞಾನಕ್ಕೆ ಸಂಬಂಧಿಸಿದ ಅನೇಕ ಲೇಖನಗಳು ವಿದ್ವಾಂಸರಿಂದ ಬರೆಯಲ್ಪಟ್ಟವೆ. ಹಿಂದೂ ಧರ್ಮದ ಮತತ್ರಯಗಳಲ್ಲಿ ದ್ವೈತವು ಅರ್ವಾಚೀನವಾದುದು; ಅಧಿಕ ಸಾಧುವೆಂದು ತೋರುವುದು. ಜನಸಾಮಾನ್ಯರಿಗೂ ಈ ಸಿದ್ಧಾಂತವು ಅರಿವಾಗುವಂತೆ ಮಾಡುವ ಮಂಡಳದ ಪ್ರಯತ್ನ ಯಶಸ್ವಿಯಾಗಲಿ. ಪತ್ರಿಕೆಯ ವಾರ್ಷಿಕ ಚಂದಾ ರೂ. ೪-೦೦, ಕಾರ್ಯಾಲಯ ಗದಗ.

೪. **ದಕ್ಷಿಣ ಕನ್ನಡ ಕೇಂದ್ರ ಸಹಕಾರಿ ಬೇಂಕ್, ಲಿ., ಮಂಗಳೂರು-೩.**

ಬ್ಯಾಂಕಿನ ಸುವರ್ಣ ಮಹೋತ್ಸವದ ಸುಸಂದರ್ಭದಲ್ಲಿ ಪ್ರಕಟಿಸಿದ ಈ ಸ್ಮಾರಕ ಸಂಚಿಕೆಯಲ್ಲಿ ವ್ಯಾವಸಾಯಿಕ ರಂಗ ಮತ್ತು ಸಹಕಾರ ತತ್ವಗಳಿಗೆ ಸಂಬಂಧಪಟ್ಟ ಅನುಭವಿಗಳ ಲೇಖನಗಳಿವೆ. ಬತ್ತ; ಪೈನ್ ಎಪಲ್ ಕಬ್ಬು ಗೇರುಬೀಜ, ತೆಂಗು ಮೊದಲಾದ ಬೆಳೆಗಳನ್ನು ಬೆಳೆಸುವುದರ ಬಗ್ಗೆ ಕೃಷಿಕ ತಜ್ಞರ ಲೇಖನಗಳು ಮಾರ್ಗದರ್ಶಿಯಾಗಿವೆ, ಕೃಷಿಕ ಜನತೆ ಈ ಸಂಚಿಕೆಯನ್ನು ಅವಶ್ಯ ಸಂಗ್ರಹಿಸಬೇಕು.

೫. **ಯಕ್ಷಗಾನ ಕಲಾಕ್ಷೇತ್ರ, ಶಿರಿಬೀಡು, ಉಡುಪಿ—** ಇದರ ೧೫ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಕಾಶಿಕೆಯೊಂದನ್ನು ಪ್ರಕಟಿಸಿದೆ. ಕನ್ನಡ ಜಿಲ್ಲೆಯ ಜಾನಪದ ಕಲೆಗಳಲ್ಲಿ ಯಕ್ಷಗಾನದ ಸ್ಥಾನಮಾನಗಳು ಹಿಂದೂ ಹಿರಿದು. ಬರಿಯ ಅಶಿಕ್ಷಿತರ ಕೈಯಲ್ಲಿಯೇ ಒದ್ದಾಡುತಿದ್ದ ಈ ಕಲೆ ಸುಶಿಕ್ಷಿತರ ಕೈಗಳಿಗೆ ಹಸ್ತಾಂತರವಾಗುವ ಸಂಕ್ರಾಂತಿ ಕಾಲವಿದೆನ್ನಬಹುದು. ಆದುದರಿಂದ ಇಲ್ಲಿ ಕೋಲಾಹಲಕ್ಕೆ ಆಸ್ಪದವೂ ಇದೆ. ಪ್ರಸ್ತುತ ಸಂಚಿಕೆಯಲ್ಲಿ ಹಲವು ಯಕ್ಷಗಾನ ಕಲಾಸಂಶೋಧಕರು, ಕಲಾವಿದರು ಮತ್ತು ಕಲಾ ಪ್ರೇಮಿಗಳ ವಿಚಾರ ವೀಚಿಯನ್ನು ನಾವು ಕಾಣಬಹುದು.

೬. **ನವೋದಯ:—** ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ವಿದ್ಯಾರ್ಥಿ ಪತ್ರಿಕೆಯಿದು. ಪ್ರತಿವರ್ಷದಂತೆಯೇ ಈ ವರ್ಷವೂ ಸಂಚಿಕೆಯು ಆದರ್ಶಪ್ರಾಯವಾಗಿಯೇ ಪ್ರಕಟವಾಗಿದೆ. 'ಪಣಂಬೂರು ಬಂದರ ಮಹಾತ್ಮೆ'ಯೆಂಬ ಲೇಖನವನ್ನು ಓದುವಾಗ ನಮ್ಮ ಹೈಸ್ಕೂಲ್ ವಿದ್ಯಾರ್ಥಿಗಳು ಜನಾಭಿಪ್ರಾಯವನ್ನು ಸಂಗ್ರಹಿಸಿ ಹೇಗೆ ಅದನ್ನು ವ್ಯಕ್ತಪಡಿಸಬಲ್ಲರೆಂದು ವ್ಯಕ್ತಪಡಿಸಬಲ್ಲರೆಂದು ವ್ಯಕ್ತವಾಗುವುದು. ವಿದ್ಯಾರ್ಥಿಗಳ ಸುಪ್ತ ಭಾವನೆಗಳಿಗೆ ಅರಳುವ ಅವಕಾಶ ದೊರೆತರೆ, ಅದು ಸೌರಭ ಬೀರದುಳಿಯದು. ಜಿಲ್ಲೆಯ ಉತ್ತಮ ಹೈಸ್ಕೂಲ್‌ಗಳಲ್ಲಿ ವಿದ್ಯಾದಾಯಿನೀ ಒಂದಾಗಿರುವಂತೆಯೇ 'ನವೋದಯ'ವೂ ಅದೇ ಸ್ಥಾನದಲ್ಲಿ ಶೋಭಿಸುತ್ತದೆ.

೭. **ನಾಡಪ್ರೇಮಿ:—** ಕಾಸರಗೋಡಿನ ಕನ್ನಡ ವಾರಪತ್ರಿಕೆ ನಾಡಪ್ರೇಮಿಯ ಸ್ವಾತಂತ್ರ್ಯ ವಿಶೇಷಾಂಕ ಕೈಸೇರಿದೆ. ಸಂದರ್ಭೋಚಿತವಾದ ನಾಲ್ಕಾರು ಉತ್ತಮ ಲೇಖನಗಳೊಡನೆ ಭಾರತೀಯ ಸಂಸ್ಕೃತಿಯ ಪರಿಚಯಾತ್ಮಕವಾದ ಲೇಖನವೂ ಕಯ್ಯಾರ ಮತ್ತು ರಾಧಾಕೃಷ್ಣ ರಾಯರ ಕವಿತೆಗಳೂ ಇವೆ. ಸಂಚಿಕೆಯು ಸರಳ ಸುಂದರವಾಗಿದೆ.

೮. **ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಪತ್ರಿಕೆ ೧೯೬೫:—** ಇಂಗ್ಲಿಷ್, ಹಿಂದಿ, ಕನ್ನಡ ಮತ್ತು ಸಂಸ್ಕೃತಭಾಷೆಗಳಲ್ಲಿ ವಿದ್ಯಾರ್ಥಿಗಳಿಂದ ಬರೆಯಲಾದ ಹಲವು ಮನಮೆಚ್ಚುವ ಲೇಖನಗಳು ಪತ್ರಿಕೆಯಲ್ಲಿವೆ. ಈ ಕೃತಿಗಳೊಂದಿಗೆ ಪ್ರಾಧ್ಯಾಪಕರವೂ ಇಲ್ಲಿ ಕೂಡಿಕೊಂಡಿದೆ. 'ಶಾಂತಿಗಾಗಿ ಅಣುಶಕ್ತಿ' 'ನೆಹರೂ ನಂತರದ ಭಾರತ' ಎಂದು ಮುಂತಾದ ಕೆಲವು ವಿಚಾರ ಪ್ರಚೋದಕ ಲೇಖಗಳೂ ವಿದ್ಯಾರ್ಥಿಗಳಿಂದಲೇ ಬರೆಯಲ್ಪಟ್ಟಿರುವುದು ಸ್ವಾಗತಾರ್ಹವಿದೆ. ಪತ್ರಿಕೆಯು ತನ್ನ ಉದ್ದೇಶದಲ್ಲಿ ಸಫಲವಾಗಿದೆಯೆಂದರೆ ಅತಿಶಯೋಕ್ತಿಯಿಲ್ಲ.

ಸಮರವಿರಾಮ ರೇಖೆಯಿದಲ್ಲ

(ನಾಲ್ಕನೇ ಪುಟದಿಂದ)

"ಹೇಗೆ?"

"ಹಸಿವೆಯಾದಾಗ ಅನ್ನ ಸೇರೋದಿಲ್ವೆ ಹಾಗೆ..."

"ಕಡೆಗೂ ನೀವು ಬಂದದ್ದು ಅಲ್ಲಿಗೇನೇ..."

"ಎಲ್ಲಿ ಹೋದ್ರೂ ಬುದ್ಧಿವಂತ ಮನೆಗೆ ಬಪ್ಪ..."

'ಯಾರು ಬುದ್ಧಿವಂತ್ರಾಂತ?'

"ಮತ್ಯಾರು? ಮನೆಗೆ ಬಂದವ್ರು...."

'ನಾನೂನೂ ಚಿಕ್ಕತ್ತೆ ಮನೆಗೆ ಹೋಗಿ ಬಂದಿದ್ದೇನೆ ಇವತ್ತು....'

'ಹಾಗಾದ್ರೆ ನೀನೂನು...'

"ಅಗ್ಲಪ್ಪ, ನನ್ನನ್ನೂ ಬುದ್ಧಿವಂತ ಎಂದು ಒಪ್ಪಿದ್ರಲ್ಲಾ ಇವತ್ತಾದ್ರೂ....'

'ಅಯ್ಯೋ, ಇವತ್ತೆಂದೇನು? ಯಾವಾಗ್ಲೂ ಹಾಗೇನೇ...'

"ಖಂಡಿತಕ್ಕೂ...."

'ಖಂಡಿತಕ್ಕೂ ಅಲ್ವೇ, ಕಂಡಿತಕ್ಕೂ..."

"ಅಷ್ಟಾದ್ರೂ ಅಭಿಮಾನವಿದೆಯಲ್ಲಾ ಸದ್ಯ....'

'ಇನ್ನೇ ಇದೇನ್ನು. ಅಲ್ಲ; ನಾನು ನಿನ್ನಲ್ಲಿ ಅಭಿಮಾನಪಡದಿದ್ರೆ ಮತ್ಯಾರಲ್ಲಿ....'

'ಶ್ಯೂ....ಮತ್ಯಾರಲ್ಲೂ ಬೇಡ; ನನ್ನಲ್ಲೇ ಇಟ್ಟು ಬಿಡಿ....ನಾನೂನೂ...."

"ತಿಳೀತು ಬಿಡು, ಸಾಕು, ಇಲ್ಲಿ ಹೀಗೆ ಬಾ....ಹಾಗೆ....ಈ ಅಭಿಮಾನ ಎಂದೂ ಹೋಗೋಲ್ಲ.....ಭಾರತ —ಪಾಕಿಸ್ತಾನಗಳ ಸಮರ ವಿರಾಮ ರೇಖೆಯಲ್ಲ ಇದು, ಗಂಗಾ — ಯಮುನಾಗಳ ಸಂಗಮ ಏನೂ...'

'........ ....'

'ಇನ್ನು ಹೋಗು, ಮುಂದಿನ ತಯಾರಿ ಮಾಡು, ಆಗದೆ?"

"ಹ್ಞಾಂ...."

"ಹ್ಞ ಹ್ಞ ಹ್ಞ..."

— ಗೋರಾ.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ರಿಜಿಸ್ಟರ್ಡ್ ಆಫೀಸು:—ಲೈಟ್‌ಹೌಸ್ ಹಿಲ್ ರೋಡ್, ಮಂಗಳೂರು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಶಾಖೆಯಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ವ್ಯಾದೆಗೆ ಸರಿಯಾಗಿ ಮರುಪಾವತಿ ಮಾಡದಿರುವುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿ ಕೊಂಡಾಗ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜ್ಯಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವ ಕ್ರಮವನ್ನೂ ಕೈಗೊಳ್ಳದಿರುವುದರಿಂದಲೂ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ತಾರೀಕು 31—8—65 ರೊಳಗೆ ಮರುಪಾವತಿ ಮಾಡಲು ತಪ್ಪಿದ್ದಲ್ಲಿ ಸದ್ರಿ ಅಡವಿಟ್ಟ ನಗಗಳನ್ನು ತಾರೀಕು 7—9—65 ಅಪರಾಹ್ನ ಗಂಟೆ 1ಕ್ಕೆ ನಮ್ಮ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಬೇಂಕಿನ ವಠಾರದಲ್ಲಿ ಬಹಿರಂಗ ಏಲಂ ಮಾಡಲಾದೀತು. ಈ ಸಮ್ಬಂಧ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟಕ್ಕೆ ಸಾಲಗಾರರು ಜವಾಬ್ದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ಖಾತಾ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ	ಮೊಬಲಗು ತಾ 30-6-65ರ ವರೆಗಿನ ಬಡ್ಡಿ ಕೂಡಿ ರೂಪಾಯಿ
98/63	ಬೋಜ ಎಸ್. ಸುವರ್ಣ, ಸೋಮಯ್ಯ ಕೋಟಿಯಾನ್‌ರ ಮಗ, ಮಂಜು ಮರಕಾಲರ ಮನೆ, ಉಳಿಯಾರಗೋಳಿ ಗ್ರಾಮ, ಪೋಸ್ಟು ಕಾಪು	96 = 75
129/63	Mrs. ರಾಧು ನಾಯ್ತಿ, ಡಾನಮ್ಮ ನಾಯ್ತಿಯ ಮಗಳು, ಮಂಗಳ ಪೇಟೆ, ಪೋಸ್ಟು ಉಚ್ಚಿಲ.	61 = 65
241/63	— do. —	31 = 10

K. Bhoja Raja Hegde,
Manager.

ಕಾಪು, 19—8—65.

ಸ್ವಾತಂತ್ರ್ಯೋತ್ಸವಗಳು

ಮಂಗಳೂರು, ಮಂಗಳೂರಿನ ನೆಹರೂ ಮೈದಾನಿನಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ದ.ಕ. ಜಿಲ್ಲಾಧಿಕಾರಿ ಶ್ರೀ ಎಚ್.ಎಲ್. ನಾಗೇಗೌಡರು ಧ್ವಜಾರೋಹಣಗೈದು ಮಾತನಾಡುತ್ತಾ ಮಂಗಳೂರು ಸರ್ವತೋಮುಖ ಅಭಿವೃದ್ಧಿ ಪಥದಲ್ಲಿ ನಡೆಯುತ್ತಿದೆ. ಆದರೆ, ಆಹಾರದ ಸ್ವಯಂಪೂರ್ಣತೆಯಲ್ಲಿ ಹಿಂದೆ ಬಿದ್ದಿದೆ, ಇದನ್ನು ಆಧುನಿಕ ಕೃಷಿಪದ್ಧತಿಗಳಿಂದ ಸುಧಾರಿಸಲು ಸಾಧ್ಯವಿದೆ, ಜನತೆ ಇದನ್ನು ಕಂಡುಕೊಂಡು, ಸರಕಾರದೊಡನೆ ಕೂಡಿ ದುಡಿದರೆ ಸ್ವಪರಿಪೂರ್ಣತೆಯನ್ನು ಪಡೆಯಬಹುದು ಎಂದರು. ಅಲ್ಲದೆ ದೇಶದ ಅಭಿವೃದ್ಧಿಯಲ್ಲಿ ಪ್ರತಿಯೊಬ್ಬನ ಸಾಧನೆಯೂ ಮಹತ್ವವಾದುದು ಎಂದರು.

ಸಂಜೆ ನೆಹರೂ ಮೈದಾನಿನಲ್ಲಿ ಶ್ರೀ ಬಿ. ವಿಠಲದಾಸ ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ, ಶ್ರೀ ಎಂ, ರಮಾನಾಥನವರು ಸ್ವಾಗತಿಸಿದರು. ಈ ಸಭೆಯಲ್ಲಿ ಶ್ರೀಗಳಾದ ಕೆ. ಕೆ. ಶೆಟ್ಟಿ, ಕೆ. ಸೂರ್ಯನಾರಾಯಣ ಅಡಿಗ, ಮಂಜೇಲ್ ಶ್ರೀನಿವಾಸ ನಾಯಕ್ ಮೊದಲಾದವರು ಸ್ವಾತಂತ್ರ್ಯ ದಿನದಿಂದ ಈ ವರೆಗೆ ನಡೆದ ದೇಶದ ಪ್ರಗತಿಯ ವಿವಿಧ ಹಂತಗಳನ್ನು ವಿವರಿಸಿದರು. ಕೊನೆಯಲ್ಲಿ ಶ್ರೀ ಬಿ. ನಾರಾಯಣರಾವ್‌ರವರು ವಂದನಾರ್ಪಣೆಗೈದರು. ಬಳಿಕ ವಿವಿಧ ವಿನೋದಾವಳಿ ಕಾರ್ಯಕ್ರಮವೂ ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತು.

ಅಳಿಕೆ, ಲೋಕಸೇವಾ ವೃಂದದ ಲೋಕಸೇವಾ ಹೈಸ್ಕೂಲ್ ಮತ್ತು ಹಾ॥ ಪ್ರಾ॥ ಶಾಲೆಗಳ ಜಂಟಿ ಸ್ವಾತಂತ್ರ್ಯೋತ್ಸವವು ಧ್ವಜವಂದನೆ, ಮೆರವಣಿಗೆ, ಭಾಷಣ ಸ್ಪರ್ಧೆಗಳೊಂದಿಗೆ ಜರಗಿತು. ಸಂಜೆ ಬಂಟ್ವಾಳ ತಾಲೂಕಿನ ತಹಶೀಲ್ದಾರ್ ಶ್ರೀ ಕೆ. ಸಂಜೀವರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಹಲವರ ಭಾಷಣಗಳಾದುವು. ಸಭಾಧ್ಯಕ್ಷರು ಮಾತನಾಡುತ್ತಾ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ, ಈ ದಿನದ ವಿಶೇಷತೆ, ವಿದ್ಯಾರ್ಥಿಗಳು ಮಾಡಬೇಕಾದ ಕರ್ತವ್ಯಗಳನ್ನು ವಿವರಿಸಿದರು. ಅವರು ಮುಂದುವರಿಸುತ್ತಾ ದೇಶದಿಂದ ನಮಗೇನು ದೊರೆಯುವುದೆಂದು ನಿರೀಕ್ಷಿಸುವ ಬದಲು ನಾವು ದೇಶಕ್ಕೇನು ನೀಡಬೇಕು ಎಂಬ ಯೋಚನೆ ಮಾಡಬೇಕೆಂದರು. ತರುವಾಯ ವಿವಿಧ ವಿನೋದಾವಳಿಗಳಾದುವು.

ನಚಿಕೇತ'ರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ: ರೂ. ಎರಡು.

ಋಣ ಯಾತ್ರೆ

ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 2—00

ಪ್ರತಿಗಳು ಸಿಗುವ ಸ್ಥಳ:

ನವಯುಗ ಪ್ರೆಸ್, ಉಡುಪಿ.

ಅಲ್ಲಲ್ಲಿಯ ಸುದ್ದಿ ಸಾರ

ಸ್ವಾತಂತ್ರ್ಯೋತ್ಸವಗಳು

ಉಡುಪಿ, ಉಡುಪಿಯ ಹಲವಾರು ಸಂಘ ಸಂಸ್ಥೆಗಳು ಸ್ವಾತಂತ್ರ್ಯ ದಿನಾಚರಣೆಯನ್ನು ವೈಭವಯುಕ್ತವಾಗಿ ನೆರವೇರಿಸಿದವು.

ನಗರಸಭೆ ಹಾಗೂ ಸಾರ್ವಜನಿಕರ ವತಿಯಿಂದ ಉಡುಪಿ ಜೀವವಿಮಾ ಸಂಸ್ಥೆಯ ಡಿವಿಜನಲ್ ಮೆನೇಜರ್ ಶ್ರೀ ಪಿ. ಎಸ್. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ, ಜನತಾ ಭವನದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣೈಯವರು ಸ್ವಾಗತಿಸಿದ ಬಳಿಕ ಶ್ರೀಗಳಾದ ವಿ. ಜಿ. ಕೆದ್ಲಾಯ ಮತ್ತು ಬಾಲಕೃಷ್ಣ ಬಾಂಗಣ್ಣಾಯರು ಸ್ವಾತಂತ್ರ್ಯ ದಿನಾಚರಣೆಯ ಕುರಿತು ವಿವರಿಸಿದರು. ಅಧ್ಯಕ್ಷರು ಮಾತನಾಡಿದ ಬಳಿಕ ವಿವಿಧ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದುವು. ಕೊನೆಯಲ್ಲಿ ಶ್ರೀ ಕೆ. ಕೇಶವ ಕುಡ್ವರು ಧನ್ಯವಾದ ಸಮರ್ಪಿಸಿದರು.

ಮುಂಜಾನೆ ಗಾಂಧಿ ಮೈದಾನದಲ್ಲಿ ಶ್ರೀ ಪಿ. ರಂಗನಾಥ ಶೆಣೈಯವರು ಧ್ವಜಾರೋಹಣಗೈದರು.

ನಿಡಂಬೂರು, ಪಂಚಾಯತದ ವತಿಯಿಂದ ಸ್ವಾತಂತ್ರ್ಯೋತ್ಸವವು ಪಂಚಾಯತದೊಳಗಿನ ಎಲ್ಲಾ ಶಾಲೆಗಳ ಒಟ್ಟು ಕೂಡುವಿಕೆಯಿಂದ ಉಡುಪಿಯ ಅಸಿಸ್ಟೆಂಟ್ ವಿದ್ಯಾಧಿಕಾರಿ ಶ್ರೀ ಜೆ. ವಿ. ಸಿದ್ದೇಶ್ವರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ ಚೇರ್‌ಮೆನ್ ಶ್ರೀ ಕೆ. ಜ್ಞಾನ ಶೆಟ್ಟರು ಸ್ವಾಗತಿಸಿದರು. ಶ್ರೀಗಳಾದ ಕೃಷ್ಣಶಾಸ್ತ್ರಿ, ಎಸ್. ವಿ. ಭಂಡಾರಿ ಮತ್ತು ಸಂಜೀವ ಶೆಟ್ಟಿ ಸ್ವಾತಂತ್ರ್ಯದ ಕುರಿತು ವಿವರಿಸಿದ ಮೇಲೆ ಅಧ್ಯಕ್ಷರ ಹಸ್ತದಿಂದಲೇ ಪಂಚಾಯತದಿಂದ ಒದಗಿಸಲಾದ ರೂ. 400ರ ಬೆಲೆಯ ಉ.ಪ.ಪು, ಪುಸ್ತಕ ಮತ್ತು ಸ್ಲೇಟುಗಳ ವಿತರಣೆ ಮಾಡಿದ ತರುವಾಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪಂಚಾಯತ್ ಶಾಲಾ ಮಕ್ಕಳ ಬಗ್ಗೆ ಕೈಗೊಂಡಿರುವ ಕೆಲಸವನ್ನು ಶ್ಲಾಘಿಸಿದ್ದು ಈ ಮೇಲ್ಪಂಕ್ತಿಯನ್ನು ಇತರ ಪಂಚಾಯತುಗಳು ಕೂಡಾ ಆಚರಣೆಗೆ ತರುವುದು ಒಳ್ಳೇದೆಂದರು. ಶಾಲಾ ಮಕ್ಕಳಿಗೆ ಪಂಚಾಯತದಿಂದ ಒದಗಿಸಲಾದ ಸಿಹಿತಿಂಡಿ ಹಂಚೋಣದ ನಂತರ ಪಂಚಾಯತ ಸೆಕ್ರೆಟರಿ ಶ್ರೀ ಮಹಾಬಲನವರು ಧನ್ಯವಾದ ಸಮರ್ಪಣೆ ಮಾಡಿದರು.

ಸುರತ್ಕಲ್, ಮುಕ್ಕ ಮಿತ್ರ ಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲೆ ಮತ್ತು ಸುರತ್ಕಲ್ ಅಗ್ಗಿದಕರಿ ಹಾ| ಪ್ರಾ| ಶಾಲೆಗಳ ಒಡನಾಟದಿಂದ ಸ್ವಾತಂತ್ರ್ಯ ದಿನಾಚರಣೆಯು ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ, ಧ್ವಜವಂದನೆ, ವಿವಿಧ ವಿನೋದಾವಳಿ, ಭಾಷಣ, ತಿಂಡಿ ಹಂಚೋಣ, ವಂದನಾರ್ಪಣೆಗಳೊಂದಿಗೆ ಜರಗಿತು. ಸಭಿಕರಲ್ಲಿ ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀ ಟಿ. ಕೇಶವ ಕಾರಂತ ಇವರು ಸಮಯೋಚಿತ ಭಾಷಣವನ್ನಿತ್ತರು.

ಶಿರ್ವ, ಶಿರ್ವ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬೆಳಗ್ಗೆ ರಾಷ್ಟ್ರಧ್ವಜವನ್ನು ಡಾ| ವೈ. ಆರ್. ಶೆಟ್ಟಿ ಅರಳಿಸಿದರು. ಡಾ| ಯು. ಕೆ. ಆಚಾರ್ಯರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಡಾ| ವೈ. ಆರ್. ಶೆಟ್ಟಿ, ಶ್ರೀ ಕೆ.ಎಂ. ಹೊಳ್ಳ, ಶ್ರೀ ಎಲ್. ಮೆಂಡೋನ್ಸ, ಡಾ| ಯು. ಕೆ. ಆಚಾರ್ ಭಾಷಣಗೈದರು. ಕೊನೆಯದಾಗಿ ಆಸ್ಪತ್ರೆಯ ವೈದ್ಯಾಧಿಕಾರಿಣಿ ಶ್ರೀಮತಿ ಡಾ| ಶ್ರೀದೇವಿ ನಂಗಿಯಾರರಿಂದ ಧನ್ಯವಾದ ಸಮರ್ಪಣೆಯಾಯಿತು.

ಬೈಕಂಪಾಡಿ, ಗ್ರಾಮ ಪಂಚಾಯತದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬೆಳಗ್ಗೆ ಪಂಚಾಯತ್ ಚೇರ್ಮೆನ್ ಶ್ರೀ ಜಿ. ಯನ್. ಅತ್ತಾವರರಿಂದ ಧ್ವಜಾರೋಹಣವಾಗಿ ಸಿಹಿತಿಂಡಿ ಹಂಚಲ್ಪಟ್ಟಿತು. ಸಂಜೆ ಶ್ರೀ ಪಿ. ವಿ. ಅತ್ತಾವರ್ ಎಡ್ವೋಕೇಟ್ ಇವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಸ್ವಾತಂತ್ರ್ಯೋತ್ಸವದ ವಿವರಣೆಗಳನ್ನಿತ್ತು ಲಘು ಉಪಾಹಾರದೊಂದಿಗೆ ಸಭಾಂತ್ಯವಾಯಿತು.

ಯಕ್ಷಗಾನ

ಉಡುಪಿ, ತಾ. 19—ಶ್ರೀಕೃಷ್ಣ ಜಯಂತಿಯ ಅಂಗವಾಗಿ ಯಕ್ಷಗಾನ ಕಲಾಮಂಡಲ (ರಿ) ಇದರ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ಶ್ರೀಮದನಂತೇಶ್ವರ ದೇವಸ್ಥಾನದ ಹೊರಪೌಳಿಯಲ್ಲಿ ಶ್ರೀ ಕೃಷ್ಣ ಶಮಂತಕೋಪಾಖ್ಯಾನ ಎಂಬ ಯಕ್ಷಗಾನ ಕೂಟವು ಶ್ರೀ ಕೆ. ನಾರಾಯಣ ಶೆಟ್ಟರ ಹಾಡುಗಾರಿಕೆ, ಸಗ್ರಿ ಶೆಟ್ಟಿಗಾರಿ ಇವರ ಮೃದಂಗವಾದನ, ಸರ್ವಶ್ರೀ ಸೀತಾನದಿ ಗಣಪಯ್ಯ ಶೆಟ್ಟಿ, ವೆಂಕಟಾಚಲ ಭಟ್, ಮಟ್ಟಿಲ್ಲ ಕೃಷ್ಣಯ್ಯ ಶೆಟ್ಟಿ, ಕೆ. ರಾಮ ಶೆಟ್ಟಿ, ವೆಂಕಪ್ಪ ಶೆಟ್ಟಿ, ದೇವದಾಸ ಪ್ರಭು ಇವರೇ ಮೊದಲಾದ ಅರ್ಥಧಾರಿಗಳಿಂದ ಜರಗಿದ ಬಳಿಕ ಸೀತಾನದಿ ಗಣಪಯ್ಯ ಶೆಟ್ಟರು ಶ್ರೀಕೃಷ್ಣ ಜಯಂತಿಯ ಮಹತ್ವವನ್ನು ವಿವರಿಸಿದ ನಂತರ ಧನ್ಯವಾದದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಶ್ರಮದಾನ ಕಾರ್ಯಕ್ರಮ

ಕಡಿಯಾಳಿ, ಉಡುಪಿ—ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲಾ ಹಳೆ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಪೂರ್ಣಶಾಲೆ ಹಾಗೂ ಯು. ಕಮಲಾ ಬಾಯಿ ಹೈಸ್ಕೂಲಿನ ಆಟದ ಬಯಲನ್ನು ಶ್ರಮದಾನದ ಮೂಲಕ ಸಮತಟ್ಟು ಮಾಡುವ ಕಾರ್ಯಕ್ರಮವು ಕಳೆದ ತಾ. 22ರಂದು ಶಾಲಾ ವ್ಯವಸ್ಥಾಪಕರಾದ ಶ್ರೀ ವಿ. ನಾರ್ಣಪ್ಪಯ್ಯನವರಿಂದ ಉದ್ಘಾಟಿಸಲ್ಪಟ್ಟಿತು. ಈ ಕಾರ್ಯಕ್ರಮದಲ್ಲಿ ಉಭಯ ಶಾಲೆಗಳ ಅಧ್ಯಾಪಕರೂ, ಹಳೆ ವಿದ್ಯಾರ್ಥಿಗಳೂ, ವಿದ್ಯಾರ್ಥಿಗಳೂ ಅತಿ ಉತ್ಸಾಹದಿಂದ ಭಾಗವಹಿಸಿದ್ದರು.

ಶ್ರಮದಾನದ ಕಾರ್ಯಕ್ರಮವು ಪ್ರತಿ ಆದಿತ್ಯವಾರ ಮುಂಜಾನೆ 7ರಿಂದ 9ರ ವರೆಗೆ ನಡೆಯುವುದೆಂದೂ, ಈ ಕಾರ್ಯಕ್ರಮದಲ್ಲಿ ಹಳೆ ವಿದ್ಯಾರ್ಥಿಗಳೂ, ಊರ ಮಹನೀಯರೂ ಹೆಚ್ಚು ಹೆಚ್ಚಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಂಘದ ಕಾರ್ಯದರ್ಶಿ ಶ್ರೀ ಯು. ಸದಾಶಿವ ರಾಯರು ತಿಳಿಸುತ್ತಾರೆ.

ಶ್ರೀ ಕೆ. ರಾಮಚಂದ್ರ ಶೆಣೈಯವರ ನಿಧನ

ಉಡುಪಿ, ಇದೇ ತಾ. 21ರಂದು ಶ್ರೀ ಕಟಪಾಡಿ ರಾಮಚಂದ್ರ ಶೆಣೈಯವರು ತಮ್ಮ 63ನೇ ವಯಸ್ಸಿನಲ್ಲಿ ಹೃತ್ಕ್ರಿಯೆ ನಿಂತು ನಿಧನರಾದರು. ಇವರು ಕಟಪಾಡಿಯ ಎಸ್. ವಿ. ಎಸ್. ಹಾ| ಪ್ರಾ| ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ 20 ವರ್ಷಗಳ ಕಾಲವೂ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ 10 ವರ್ಷಗಳ ಕಾಲವೂ ಸೇವೆ ಸಲ್ಲಿಸಿದ ಅನುಭವಶಾಲಿ ಹಾಗೂ ದಕ್ಷ ಉಪಾಧ್ಯಾಯರಾಗಿದ್ದರು. ಉಡುಪಿ ನಗರಸಭೆಯ ಸದಸ್ಯರಾಗಿಯೂ, ಸಹಕಾರಿ ಸಂಘ, ಯೂನಿಯನ್‌ಗಳ ಡೈರೆಕ್ಟರ್ ಹಾಗೂ ಕಾರ್ಯದರ್ಶಿಯಾಗಿಯೂ ಹಲವಾರು ಸಾಮಾಜಿಕ ಮತ್ತು ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿಯೂ ಇವರು ಅಪಾರ ಸೇವೆ ಸಲ್ಲಿಸಿದ್ದರು. "ಬಾಲಚಂದ್ರ" ಶೈಕ್ಷಣಿಕ ಮಾಸಪತ್ರಿಕೆಯ ಸಂಪಾದಕರಾಗಿಯೂ ದುಡಿದಿದ್ದರು. ಇವರಿಗೆ 1 ಮಂದಿ ಹೆಣ್ಣು ಮತ್ತು ಮೂವರು ಗಂಡು ಮಕ್ಕಳಿದ್ದಾರೆ.

ವಿದ್ಯಾರ್ಥಿ ವೇತನ

ಎಂದಿನಂತೆ ಈ ವರ್ಷವೂ ಮುಂಬಯಿ ಕಾಲೇಜುಗಳಲ್ಲಿ ಕಲಿಯುತ್ತಿರುವ ಬಂಟರ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೊಡಲಾಗುವದು. ಅರ್ಹರು ಇದೇ ತಾ. 31.8.65ರೊಳಗಾಗಿ ಮುಂಬಯಿ ಬಂಟರ ಯಾನೆ ನಾಡವರ ಸಂಘದ ಕಾರ್ಯದರ್ಶಿಯವರಿಗೆ ಅರ್ಜಿ ಹಾಕಬೇಕಾಗಿ ಕೋರಲಾಗಿದೆ.

ಪ್ರೇಮಾ ಮೆಡಿಕಲ್ ಹಾಲ್ ಉದ್ಘಾಟನೆ

ತಾ. 16-8-65ರಂದು ಹಿರಿಯಡ್ಕದಲ್ಲಿ ಡಾ| ಯು. ಚಂದ್ರಶೇಖರ ಇವರ "ಪ್ರೇಮಾ ಮೆಡಿಕಲ್ ಹಾಲ್" ಎಂಬ ವೈದ್ಯಕೀಯ ಮಂದಿರವನ್ನು ಡಾ| ಟಿ. ಚಂದಯ್ಯ ಹೆಗ್ಡೆ ಇವರು ಉದ್ಘಾಟಿಸಿದರು. ಉದ್ಘಾಟಕರೂ ಮತ್ತು ಎಸ್. ಗಣಪಯ್ಯ ಶೆಟ್ಟರೂ ಡಾ| ಚಂದ್ರಶೇಖರರಿಗೆ ಶ್ರೇಯೋಭಿವೃದ್ಧಿಯನ್ನು ಹಾರೈಸಿ ಮಾತನಾಡಿದರು. ಡಾ| ಯು. ಚಂದ್ರಶೇಖರ ಇವರು ವಂದನಾರ್ಪಣೆ ಮಾಡಿದರು. ಆ ಮೊದಲು ಹಿರಿಯಡ್ಕ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ಜರಗಿತ್ತು.

ನೃತ್ಯ ಕಲಾವಿದ ಶ್ರೀ ಕೆ.ಎಸ್. ಮಧ್ಯಸ್ಥರಿಗೆ ಸತ್ಕಾರ ಸಮಾರಂಭ

ಸುರತ್ಕಲ್, ಆಗಸ್ಟ್ 15.—"ಎಲೆಮರೆಯ ಕಾಯಿಯಂತೆ ಇದುವರೆಗೆ ನಿಷ್ಕಾಮ ಕಲಾಸೇವೆಗೈಯುತ್ತಿದ್ದ ಪ್ರತಿಭಾವಂತ ನೃತ್ಯ ಕಲಾವಿದ ಶ್ರೀ ಮಧ್ಯಸ್ಥರವರಿಗೆ ರಾಜ್ಯ ಪ್ರಶಸ್ತಿಯೂ ರಾಷ್ಟ್ರ ಪ್ರಶಸ್ತಿಯೂ ದೊರೆಯುವ ಸುಯೋಗವು ಒದಗಿ ಬರಲಿ" ಎಂದು ಸ್ಥಳೀಯ ವಿದ್ಯಾದಾಯಿನೀ ಹಾ| ಪ್ರಾ| ಶಾಲಾ ಭವನದಲ್ಲಿ ಶ್ರೀ ಕೆ. ಶ್ರೀನಿವಾಸ ಮಧ್ಯಸ್ಥರವರ ಗೌರವಾರ್ಥವಾಗಿ ಏರ್ಪಡಿಸಲಾದ ಸತ್ಕಾರ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ವಿದ್ಯಾದಾಯಿನೀ ಸೆಕೆಂಡರಿ ಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎಂ. ವಾಸುದೇವ ರಾವ್ ಇವರು ನುಡಿದರು.

ಶ್ರೀ ಪಿ. ಸಿ. ವಾಸುದೇವರಾಯರು ಸ್ವಾಗತಿಸಿದ ಬಳಿಕ ಶ್ರೀಗಳಾದ ಪಿ. ನಾರಾಯಣ ಆಚಾರ್, ಐ. ಕೆ. ನಾರಾಯಣ ರಾವ್ ಮತ್ತು ಪಿ. ಸಿ. ವಾಸುದೇವರಾಯರು ಸತ್ಕೃತರ ಸರಳ ಜೀವನ, ಸೇವಾ ಮನೋವೃತ್ತಿ ಹಾಗೂ ನೃತ್ಯ ಕಲೆಯಲ್ಲಿ ಅವರ ಈ ವರೆಗಿನ ಸಾಧನೆಗಳ ಕುರಿತು ಮಾತನಾಡಿದರು. ಗೆಳೆಯರ ಬಳಗದವರಿಂದ ಶ್ರೀ ಮಧ್ಯಸ್ಥರಿಗೆ ನಿಲುಗನ್ನಡಿಯೊಂದನ್ನು ಸಮರ್ಪಿಸಲಾಯಿತು. ಶ್ರೀಯುತರು ಉತ್ತರವಾಗಿ ತಮ್ಮ ಕಲೆಯನ್ನು ಬೆಳೆಸಿಕೊಂಡು ಬಂದ ವಿಧಾನವನ್ನೂ ಪಟ್ಟ ಕಷ್ಟನಷ್ಟಗಳನ್ನೂ ನಿರೂಪಿಸಿದರು. ಶ್ರೀ ಎಚ್. ವಾಸುದೇವರಾಯರು ಧನ್ಯವಾದಾರ್ಪಣೆಗೈದರು.

ಶ್ರೀ ಕೃಷ್ಣ ಜನ್ಮಾಷ್ಟಮಿ

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ ದಿನಾಂಕ 19ನೇ ರಾತ್ರಿ "ಶ್ರೀ ಕೃಷ್ಣ ಜನನ" ಎಂಬ ಯಕ್ಷಗಾನ ತಾಳಮದ್ದಳೆಯು ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ಆಶ್ರಯದಲ್ಲಿ ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಡಾ| ಬನಾರಿಯವರು ಸ್ವಾಗತಿಸಿದ್ದು—ಕೊನೆಯಲ್ಲಿ ಶ್ರೀ ಕೆ. ಬಾಬು ರೈಗಳು ಧನ್ಯವಾದವಿತ್ತರು.

ಶ್ರೀ ಗೋಪಾಲ ಸಾಲ್ಯೆನ್ನರ ನಿಧನ

ಜಿಲ್ಲೆಯ ಹರಿಜನ ಮುಖಂಡರಲ್ಲೊಬ್ಬರೂ ಮೂಡಬಿದ್ರೆಯ ಹರಿಜನ ಎಂ. ಎಲ್. ಎ. ಗಳೂ ಆಗಿದ್ದ ಶ್ರೀ ಎಸ್. ಗೋಪಾಲ ಸಾಲ್ಯೆನ್ನರು ತಾ. 3ರಂದು ಕರುಳು ಬೇನೆಯಿಂದ ನಿಧನರಾದರು. ದಿವಂಗತರು ಆರಂಭದಲ್ಲಿ ಕಾಂಗ್ರೆಸಿಗರಾಗಿಯೂ ಅನಂತರ ಸ್ವತಂತ್ರ ಪಕ್ಷದವರಾಗಿಯೂ ಜನಸೇವೆ ಸಲ್ಲಿಸಿದ್ದರಲ್ಲದೆ ದಲಿತ ಬಂಧು ಮೊದಲಾದ ಹರಿಜನೋದ್ಧಾರದ ಪತ್ರಿಕೆಗಳ ಸಂಪಾದಕರಾಗಿಯೂ ಇದ್ದರು.

ಪಣಂಬೂರು ಸತ್ಯಾಗ್ರಹಿಗಳ ನಿರ್ಧಾರ

ಬಂದರ ನಿರ್ಮಾಣಕ್ಕಾಗಿ ೧,೩೦೦ ಎಕ್ರೆ ಭೂಮಿಯನ್ನು ಈಗಾಗಲೇ ನಾವು ಬಿಟ್ಟುಕೊಟ್ಟಿದ್ದೇವೆ. ಈಗ ಕೇಳಲಾಗುತ್ತಿರುವ ೧,೫೦೦ ಎಕ್ರೆ ಏತಕ್ಕಾಗಿ. ಎಂಬುದನ್ನು ನಮಗೆ ಖಚಿತಪಡಿಸಿ ಕೊಡುವ ವರೆಗೆ ನಾವು ಈ ಭೂಮಿ ಬಿಟ್ಟು ಕೊಡುವಂತಿಲ್ಲ—ಎಂಬರ್ಥದ ನಿರ್ಣಯವನ್ನು ತಾ. ೨೦ರಂದು ಪಣಂಬೂರಲ್ಲಿ ಶ್ರೀ ಬಿ. ಪಿ. ಐತಾಳರ ಅಧ್ಯಕ್ಷತೆಯಲ್ಲಿ ಜರಗಿದ ಮಹಾ ಸಾರ್ವಜನಿಕರ ಸಭೆಯಲ್ಲಿ ಕೈಕೊಳ್ಳಲಾಯಿತು. ಈ ಸಭೆಯಲ್ಲಿ ಶ್ರೀಗಳಾದ ಡಿ. ಮೋಹನ್ ರಾವ್, ಶಾಸಕ ಸಂಜೀವನಾಥ ಐಕಳ್, ಜಿನರಾಜ ಹೆಗ್ಡೆ, ಕೆ. ಉಗ್ಗಪ್ಪ ಶೆಟ್ಟಿ, ಜೋಬೊ ಪ್ರಭು, ಕೆ. ಆರ್. ಆಚಾರ್, ಮೊದಲಾದವರು ಮಾತನಾಡಿ, ಕಳೆದ ಒಂದು ವರ್ಷದಿಂದ ನೊಂದ ಅಪಾರ ಜನರಿಂದ ಇಲ್ಲಿ ನಡೆಯುತ್ತಿರುವ ಚಳವಳದ ಬಗ್ಗೆ ಸರಕಾರವು ಈ ತನಕವೂ—ಯಾಕೆ, ಏನು ಎಂದು ಒಂದು ಮಾತು ಕೂಡಾ ಕೇಳದಿದ್ದುದಕ್ಕಾಗಿ ವಿಷಾದ ವ್ಯಕ್ತಪಡಿಸಿದರು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 54/65.

ಎನ್. ಅನಂತರಾಜ ಶೆಟ್ಟಿ —ವಾದಿ

ನೇಮಿರಾಜ ಹೆಗ್ಡೆ ವಗೈರಾ —ಪ್ರತಿವಾದಿ

1ನೇ ಪ್ರತಿವಾದಿ ನೇಮಿರಾಜ ಹೆಗ್ಡೆ, ಬೆಳ್ತಂಗಡಿ ತಾಲೂಕು ಆರಂಬೋಡಿ ಗ್ರಾಮದ ಮಜಡಾಲು ಎಂಬಲ್ಲಿರುವವರು.

ವಾದಿಯು ಪ್ರತಿವಾದಿರ ಮೇಲೆ ಮಾಡಿದ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 8-9-65ಕ್ಕೆ ಇಟ್ಟಿರುತ್ತದೆ. ಆ ದಿವಸ ನೀವು ಸ್ವತಃ ಯಾ ವಕೀಲರ ಮುಖಾಂತರವಾಗಾಲೀ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು [illegible] ಮಾಡಿ ಮುಂದಿನ ತನಿಖೆಯಿಂದ ತೀರ್ಮಾನಿಸಲಾಗುವುದು ಎಂಬುದಾಗಿ ಕೋರ್ಟು ಹುಕುಂ ಪ್ರಕಾರ ಮಾಡಿದ ನೋಟಿಸು.

(*Sd.*) N. J. Kadamba,
Advocate for Plaintiff.

ಬೆಳ್ತಂಗಡಿ, 18-8-1965.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ವಾಚಕರಲ್ಲಿ

ಕಳೆದವಾರ ಅನಿರೀಕ್ಷಿತ ಅನಾನುಕೂಲತೆಗಳಿಂದಾಗಿ 12 ಪುಟಗಳನ್ನಷ್ಟೇ ಕೊಡುವಂತಾಯಿತು, ಈ ವಾರ ಎಂದಿನಂತೆ 16 ಪುಟಗಳನ್ನು ಕೊಡಲಾಗಿದೆ.

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ಚಂದಾದಾರರಿಗೆ ಬರುವ ವಾರದಿಂದ ಕ್ರಮಶಃ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸುತ್ತೇವೆ, ಸರ್ವರೂ ವಿ. ಪಿ.ಯನ್ನು ಸ್ವೀಕರಿಸಿ ಪ್ರೋತ್ಸಾಹಿಸುವಂತೆ ಮುಂದಾಗಿ ವಿನಂತಿಸಿಕೊಳ್ಳುತ್ತೇವೆ.—**ಮೆನೇಜರ್.**

ಸುಂಟರಗಾಳಿ

(ಎರಡನೇ ಪುಟದಿಂದ)

ಪ್ರಶ್ನಾರ್ಥಕ ದೃಷ್ಟಿಯಿಂದ ಡಾಕ್ಟರರನ್ನು ನೋಡಿದ.

"ಭಯಪಡಬೇಡಿ ಮಿ! ರವೀ...ಸ್ವಲ್ಪ 'ಹಾರ್ಟ್ ವೀಕ್‌ನೆಸ್' ಇದೆ"—ಎಂದು ಹೇಳಿ ಡಾಕ್ಟ್ರು ಹೊರಟು ಹೋದರು.

ರವಿಗೆ ಸ್ವಲ್ಪ ಸಮಾಧಾನವಾಯಿತು. ಪತ್ನಿಯನ್ನು ಸಂತೈಸಲೆಂದು ಪುನಃ ಆಕೆಯ ಬಳಿಯಲ್ಲಿ ಬಂದು ಕುಳಿತ. ಆಕೆಯ ಕಣ್ಣುಗಳಲ್ಲಿ ಇನ್ನೂ ಕಂಬನಿಯು ಕೋಡಿ ಹರಿಯುತಿತ್ತು.

"ಅಳ ಬೇಡ ಲತಾ! ಡಾಕ್ಟ್ರು ಹೇಳಿದ್ದಾರೆ 'ಹಾರ್ಟ್ ವೀಕ್‌ನೆಸ್' ಅಂತ".

ಬೇರೆ ಸನ್ನಿವೇಶವಾಗಿರುತಿದ್ದರೆ, ಆತನ ಮಾತು ಕೇಳಿ ಲತಾ ನಗುತಿದ್ದಳು. ಆದರೆ, ಈಗಾಕೆ ನಗಲಿಲ್ಲ. ಅದನ್ನೇ ತನ್ನ ಕಾರ್ಯ ಸಾಧನೆಯೆಂದು ಸಾಧಿಸ ತೊಡಗಿದಳು.

"ಆಗಲಿ ನಾನು 'ಹಾರ್ಟ್ ವೀಕ್‌ನೆಸ್'ನಿಂದ ಸಾಯ್ತೇನೆ...!"

"ನಿನಗೆಂದು ಏನಾಗಿದೆ ಲತಾ! ಹೇಳು ...ಸುಮ್ಮನೆ ನನ್ನ ಹೃದಯವನ್ನು ಕೊರೆಯ ಬೇಡ. ನಿನ್ನನ್ನು ತೊರೆದು ನಾನೊಂದು ಅರೆ ಗಳಿಗೆಯೂ ಬದುಕಿರಲಾರೆ.ಹೇಳು ....ನಿನ್ನ ಆಸೆ, ಆಕಾಂಕ್ಷೆಗಳನ್ನೆಲ್ಲ ಪೂರೈಸುವೆ...."

"ಓಹೋ! ನಾನು ಸತ್ತರೆ ಒಂದರೆ ಗಳಿಗೆಯೂ ಬದುಕಲಾರರಂತೆ....! ನನ್ನ ಮೇಲೆ ಎಷ್ಟು ಪ್ರೀತಿ....!"—ಲತಾ ವ್ಯಂಗ್ಯವಾಗಿ ನುಡಿದಳು.

"ಲತಾ....! ನನಗೆ ನಿನ್ನ ಮೇಲೆ ಪ್ರೇಮವಿಲ್ಲವೇ...." ನಿನಗೆ ಯಾವುದರಲ್ಲಿ ಕಡಿಮೆ ಮಾಡಿದ್ದೇನೆ ಹೇಳು... ನೀನು ಬಯಸಿದ ಸೀರೆಗಳನ್ನು ತಂದು ಕೊಡಲಿಲ್ಲವೇ ....? ನೀನು ಹೇಳಿದಂತಹ ಆಭರಣಗಳನ್ನು ಮಾಡಿಸಲಿಲ್ಲವೇ....? ನೀನು ಆಶಿಸಿದ ಟ್ರಿಪ್ಪಿಗೆ ಕರೆದುಕೊಂಡು ಹೋಗಲಿಲ್ಲವೇ ...? ಅದೆಷ್ಟು ಬಾರಿ ನಿನ್ನನ್ನು 'ವಾಕಿಂಗ್'ಗೆ ಕರೆದುಕೊಂಡು ಹೋಗಿದ್ದೆ...!

"ಹೌದು! ಅದೆಲ್ಲ ನಾನೀಗ ಇಲ್ಲವೆಂದೆನೇ...?"

"ಮತ್ತೆ...."

"ಆದರೆ ನೀವು ನನ್ನನ್ನು ವಂಚಿಸಬಹುದೇ...?"

"ನಾನು ವಂಚಿಸಿದೆನೇ....? ನಿನ್ನನ್ನು ನಾನು ವಂಚಿಸಿದೆನೇ....!? ಅಯ್ಯೋ! ನಾನಿದನ್ನು ಕೇಳಲಾರೆ ಲತಾ...! ನಾನಿದನ್ನು ಕೇಳಲಾರೆ!"

"ನಿಮ್ಮ ಈ ರಹಸ್ಯ ಪ್ರೇಮ ನನಗೆ ತಿಳಿಯಲಿಲ್ಲವೆಂದು ಭಾವಿಸಿದಿರಾ...?"

"ರಹಸ್ಯ ಪ್ರೇಮ!???"

"ಹೌದು! ರಹಸ್ಯ ಪ್ರೇಮವಲ್ಲದೆ ಮತ್ತೇನು? ಮದುವೆಯಾದ ಮಡದಿಯಿರುವಾಗಲೂ ಬೇರೊಬ್ಬಳನ್ನು ಆರಾಧಿಸುವ ನಿಮ್ಮ ಪ್ರೇಮವನ್ನು ಬೇರೆ ಅಳೆದು ನೋಡಬೇಕೇ....?"

"ಲತಾ! ನೀನು ಹೇಳುತ್ತಿರುವುದನ್ನು ಕೇಳುವಾಗ ನನಗೇ ಆಶ್ಚರ್ಯವಾಗುತ್ತಿದೆ. ಈ ವಿಷಯ ನಿನಗಾರು ಹೇಳಿದರು? ಅಗ್ನಿಸಾಕ್ಷಿಯಾಗಿ ಮದುವೆಯಾದ ನಿನ್ನನಲ್ಲದೆ, ಬೇರೆ ಯಾವ ಹೆಣ್ಣನ್ನೂ ನಾನು ಪ್ರೇಮಿಸಿರಲಾರೆನೆಂದು ಆಣೆಯಿಡಬಲ್ಲೆ.!"

"ಓಹೋ! ಆಣೆ ಬೇರೆ ಇಡುತ್ತೀರಾ....? ನಾನು ಕಣ್ಣಾರೆ ನೋಡಿದ ಮೇಲೆ ನಿಮ್ಮ ಆಣೆಗೆ ಏನು ಬೆಲೆವುಳಿಯಿತು...? ಆಕೆಯ ಭಾವಚಿತ್ರವೂ ನನ್ನಲ್ಲಿತ್ತು..."

"ಎಲ್ಲಿದೆ ನೋಡುವಾ....?"— ಉತ್ಸಾಹದಿಂದ ಕೇಳಿದ ರವಿ.

"ನನಗವಳ ಮುಖವನ್ನು ನೋಡಲೂ ನಾಚುಗೆಯಾಯಿತು. ಹಾಗೆ ಹರಿದು ಒಲೆಗೆ ಹಾಕಿಬಿಟ್ಟೆ!"

"ಏನು ಅಚಾತುರ್ಯ! ಆ ಭಾವಚಿತ್ರವಾದರೂ ಇರುತಿದ್ದರೆ, ಅವಳಾರೆಂಬುದನ್ನು ತಿಳಿಯಬಹುದಿತ್ತು; ನಿನ್ನ ಭ್ರಮೆಯನ್ನು ಹೋಗಲಾಡಿಸಬಹುದಿತ್ತು."

"ಯಾರಿಗೆ ಭ್ರಮೆ! ನನಗೋ, ನಿಮಗೋ....? ಪರಸ್ತ್ರೀಯ ಭಾವಚಿತ್ರವನ್ನು ತನ್ನ ವಶವಿರಿಸಿಕೊಳ್ಳುವ ನಿಮಗಲ್ಲವೇ ಭ್ರಮೆ...?"

"ನನ್ನ ಕೈಯಲ್ಲಿತ್ತೇ ಆ ಭಾವಚಿತ್ರ...!?"

"ಹೌದು! ನಿಮ್ಮ ಪರ್ಸಿನಲ್ಲಿ....!"

"ಹೇ ಲತಾ! ತಿಳಿಯದೆ ಮೋಸ ಹೋದೆಯಲ್ಲವೇ....? ಅದು ನನ್ನದೇ ಭಾವಚಿತ್ರ...!"

"ನೀವೇನು ಹೆಣ್ಣೆ! ನಿಮ್ಮ ಪರ್ಸಿನಲ್ಲಿದ್ದುದು ಹೆಣ್ಣಿನ ಭಾವಚಿತ್ರ!"

"ನಾನೂ ಅದೇ ಹೇಳಿದ್ದು! ಅದು ನನ್ನ ಭಾವಚಿತ್ರ, ನಾನು ಚಿಕ್ಕವನಾಗಿದ್ದಾಗ ನಾಟಕದಲ್ಲಿ ಹೆಣ್ಣಾಗಿ ಪಾರ್ಟು ಮಾಡಿ ತೆಗೆದ ಚಿತ್ರ!"

"ಛೀ! ಅದು ಸಾಧ್ಯವೇ ಇಲ್ಲ. ಅದು ಹೆಂಗಸಿನದೇ ಮುಖ; ಅದೇ ವೈಯ್ಯಾರ! ಅವಳಾರೋ ವೇಶ್ಯೆಯಿರಬೇಕು. ಅಬ್ಬಾ! ನನಗೆ ಮಂಕುಬೂದಿಯೆರಚುವ ನಿಮ್ಮ ಸಾಹಸ!"

"ಇನ್ನೂ ನನ್ನಲ್ಲಿ ವಿಶ್ವಾಸವಿಲ್ಲವೇ ನಿನಗೆ....? ಬೇಕಾದರೆ ಇನ್ನೊಮ್ಮೆ ಆ ಭಾವ ಚಿತ್ರವನ್ನು ನೀನು ನೋಡು...."

ತನ್ನ 'ಟೇಬಲ್'ನ ಒಳಗಿದ್ದ ಇನ್ನೊಂದು ಭಾವಚಿತ್ರವನ್ನು ಹುಡುಕಿ ತಂದು ಕೊಡುವನು ರವಿ. ಲತಾ ಅದನ್ನು ಕೈಗೆತ್ತಿ ನೋಡಿದಾಗ ಅವಳ ಮುಖದಲ್ಲಿ ಬದಲಾವಣೆಗಳಾಗತೊಡಗಿತು. ಕೋಪದ ಕಿಡಿ ಕಾರುತಿದ್ದ ಮುಖದಲ್ಲಿ ಮುಂದಹಾಸದ ರೇಖೆಗಳು ಮೂಡತೊಡಗಿದುವು. ತನ್ನ ತಿಳಿಗೇಡಿತನಕ್ಕೆ ಆಕೆಗೇ ಪಶ್ಚಾತ್ತಾಪವಾಯಿತು. ಆಕೆಯ ಹೃದಯದಲ್ಲಿ ಕೋಲಾಹಲವೆಬ್ಬಿಸಿದ ಸುಂಟರಗಾಳಿ ನಿಂತಾಗ ಹೃದಯವನ್ನು ಮತ್ತೊಮ್ಮೆ ಶಾಂತಿಯೂ ವರಿಸಿತು.

"ನನ್ನನ್ನು ಕ್ಷಮಿಸಿ ಸ್ವಾಮಿ...."—ಲತಾ ಬೇಡಿದಳ.

"ಕ್ಷಮಿಸಲು ನಾನೇನು ಮಾಡಿದೆ...? ಅಸ್ವಾಸ್ಥತೆಯಿದ್ದ ನೀನು ದುಃಖಿಸುವಂತೆ ಮಾಡಿದ ನಾನಲ್ಲವೇ ಕ್ಷಮೆ ಯಾಚಿಸಬೇಕಾದ್ದು...?"

"ನನಗೆ ಯಾವ ಅಸ್ವಾಸ್ಥತೆಯೂ ಇಲ್ಲ. ಆ ಡಾಕ್ಟರರಿಗೇ "ಹಾರ್ಟ ವೀಕ್‌ನೆಸ್" ಇರಬೇಕು! ಇಂಜೆಕ್ಷನ್ ಚುಚ್ಚಿ ಕೈ ನೋಯುತ್ತಿದೆ...."

"ಲತಾ...!"

"ಸ್ವಾಮಿ! ನಿಮ್ಮನ್ನು ತಪ್ಪಾಗಿ ತಿಳಿದು, ನಿಮ್ಮ ಹೃದಯಕ್ಕೆ ಆಘಾತವನ್ನು ಉಂಟು ಮಾಡಿದ ನನ್ನನ್ನು ಕ್ಷಮಿಸಿ ಸ್ವಾಮಿ..."

"ಎನ್ನ ಮನೋದೇವತೆ! ಇದೋ ನನ್ನ ಹೊಟ್ಟೆ ಹಸಿವಿನಿಂದ ನೋಯುತ್ತಿದೆ.... ಅದಕ್ಕಾಗಿ ಕ್ಷಮಿಸುತಿದ್ದೇನೆ...!"—ಹಾಸ್ಯಕ್ಕಾಗಿ ಹೇಳಿದ ರವಿ.

ಸುಂಟರಗಾಳಿಗೆ ಬಲಿಯಾದ ಅವರ ಜೀವನ ನೌಕೆ, ಅದರ ಹಿಡಿತದಿಂದ ತಪ್ಪಿಸಿಕೊಂಡು ಸುಖದ ದಡವನ್ನು ಕಂಡಿತು.

ವರದಿ

ನಿನ್ನ ವರ ಪರಿಯನ್ನು ಏನೆಂದೆ ಏಲೆ ತಂದೆ!
ನಿನ್ನ ಟೋಪಿಯು ತೊಟ್ಟು, ಟೋಪಿಯು
ಇಡುತಿಹರೆಂದೆ|
ಜನವ ಕಾಡಲು ಖಾದಿಬಟ್ಟೆಧರಿಸಿಹರೆಂದೆ
ನಿನ್ನ ಮಂತ್ರವ ಜಪಿಸಿ ಜಗ
ಕೆಡಿಸುತಿಹರೆಂದೆ ||
ಶ್ರದ್ಧೆಯೂ ಮಂತ್ರವದು ನಿನ್ನಿಂದೆ
ಕೊರಟಿಹುದು
ನಡೆದಿಹುದು ನಿನ್ನತ್ತ ಸತ್ಯತೆಯು
ನುಡಿಯದು |
ಪಿಡಿದಿಹರು ಅಣ್ವಸ್ತ್ರವ ಅಹಿಂಸೆಯನು
ಬಿಟ್ಟು
ಮುಡಿಯುತಿಹರು ಕ್ರಾಂತಿಯನು
ಶಾಂತಿಯನು ಬಿಟ್ಟು ||
ಬಿರುಗಾಳಿ ಎದ್ದಿಹುದು ಶಾಂತ
ಸಾಗರದಲಿಂದು
ಮುರಿದಿಹರು ಮಿತ್ರತ್ವದಾ
ಬಂಧನವನಿಂದು |
ಬರುತಿಹರು ಜಂಡೆತ್ತಿ ಉತ್ತರದ
ಗಡಿಯಿಂದ
ಸಿರಿಮಣ್ಣಿಗಾಗಿ ಮುನ್ನುಗ್ಗುತ್ತಿಹರು
ಕಾಶ್ಮೀರದ ||
ಭಾರತದ ನಾರಿಯರು ಬಾಗಿದರು ಅನ್ಯ
ಸಂಸ್ಕೃತಿಗೆ
ಬರಬರುತ್ತ ಬಂದಿಹರು ಮನೆಬಿಟ್ಟು
ಕಚೇರಿಗೆ |
ಅಧರಗಳು ಮುಳುಗಿಹವು ಕೆಂಬಣ್ಣದಿ
ನರನಾರಿಯರ ಅಂತರವು
ತೋರದಿಹುದೀಗ ||
ಓರ್ವ ತಾನುಳಿದಿಹನು ಶಿಷ್ಯವರ್ಗದಿ ನಿನ್ನ
ತಿರುಗುವನು ನಾಡೆಲ್ಲ ಕಾಲ್ಬಲದಿಂದ
ತನ್ನ |
ಮರುಗುತಿಹನಾತನು ಕಳಕಳಿಯಿಂದ
ಭಾರತಕೆ ಬಂದಿರುವ ಈ ಹೀನಸ್ಥಿತಿಗಾಗಿ||

—"ಮಟ್ಪಾಡಿ"

ತಾರೆ

ಬಾನತಾರೆ ಇಳಿದು ಬಾರೆ
ಗಾನವಾಡುತೆ
ಬರುವ ಮುಂದೆ ಸ್ವರ್ಗತಾರೆ
ದೇವಲೋಕದಿಂದಯೆ ||೧||

ನೀನು ಅಲ್ಲಿ! ನಾನು ಇಲ್ಲಿ!!
ಯಾವ ಪಾಶ ಬಂದಿದೆ
ದೇವನಿಂದ ವರವ ಪಡೆದೆ
ನನ್ನ ನಿನ್ನ ಮಿಲನತೆ ||೨||

ನೆನೆದು ನೆನೆದು ಬಳಲಿ ಬೆಂದೆ
ಜೀವ ತುಂಬು ನನ್ನಲಿ
ಬಾಡಿಹೋದ ಹೃದಯ ಹೂವಿಗೆ
ಮಧುವ ತುಂಬು ನನ್ನಲಿ||೩||

ತಾರೆಯಂತೆ ಬೆಳಗು ನೀನು
ಕನಲದಂತೆ ಅರಳಿಸು
ಮಯೂರಿಯಂತೆ ಕುಣಿದು ನೀನು
ಮಯೂರನನ್ನು ಕರೆಯುತಿರು||

ರಚನೆ: ಕನುಲಾಪಸಯಕೃಷ್ಣ
ಗೋವಾ.

NAVAYUGA 26-8-1965
Registered with the Registrar of News Papers for India under No. R. N. 3646/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೬-೮-೬೫ರಿಂದ ೧-೯-೬೫ರ ವರೆಗೆ

೧ ಮೇಷ

ಲಾಭ ಸ್ಥಾನದಲ್ಲಿದ್ದ ಶನಿಯೊಬ್ಬನನ್ನುಳಿದು ಇತರರೆಲ್ಲರೂ ನಿಮಗೆ ಪ್ರತಿಕೂಲರಾಗಿರುವರು. ಧನಪತಿಯಾದ ಶುಕ್ರನು ನೀಚನಾಗಿದ್ದು ಧನಸ್ಥಾನವನ್ನು ಅಂಗಾರಕನು ವಿಶೇಷ ದೃಷ್ಟಿಯಿಂದ ನೋಡುವುದರಿಂದ ಕಳ್ಳಕಾಕರ ಭಯ ನೀಚ ಜನರಿಂದಾಗಿ ಧನಹಾನಿಯಾಗುವ ಸಂಭವವಿದೆ. ಗೃಹತಾಪತ್ರಯಗಳು ಹಿಂದಿಗಿಂತ ಕಡಿಮೆಯಾದರೂ ಮನಸ್ಸಿಗೆ ನೆಮ್ಮದಿಯಿರದು. ಅಸಹಾಯ ಸ್ಥಿತಿಯಲ್ಲಿದ್ದು ಕಷ್ಟದಿಂದ ಕಾಲಯಾಪನೆ ಮಾಡುವ ನಿಮಗೆ ವಾರಾಂತ್ಯದ 4 ದಿನಗಳು ಕೊಂಚ ಸಮಾಧಾನವೆನಿಸುವುದು.

೨. ವೃಷಭ

ಯಾವೊಂದು ತೊಡಕು ತೊಂದರೆಗಳೂ ನಿಮಗಿಂದು ಪ್ರಾಪ್ತವಾಗಲಾರವು. ಸ್ವಯಂಶಕ್ತರಾದ ನಿಮಗೆ ದೈವವು ಅನುಕೂಲವಾಗಿರುವುದರಿಂದ ದಿನಗಳು ಕ್ಷಣದಂತೆ ಕಳೆಯಲಿವೆ. ನಿಮ್ಮ ಸಂಕಲ್ಪಗಳೆಂದು ಅನಾಯಾಸದಿಂದ ಕಾರ್ಯರೂಪಕ್ಕೆ ಬರುವವು. ಪ್ರವಾಸಕ್ಕೀ ಕಾಲವು ಚೆನ್ನಾಗಿಲ್ಲವು. ಆಪ್ತ ಜನರ ವಿಯೋಗದಿಂದಾಗಿ ಮನಸ್ಸಿನ ಮೇಲೆ ಹೆಚ್ಚಿನ ಆಘಾತವುಂಟಾದೀತು. ಬಂಧು ಮಿತ್ರಾದಿ ಪರಿವಾರ ವರ್ಗದಿಂದ ಕೂಡಿದ ನಿಮ್ಮ ಸಂಸಾರ ರಥವು ಸುಸೂತ್ರವಾಗಿ ಸಾಗಲಿದೆ. ವಾರಾಂತ್ಯದ 2 ದಿನಗಳು ತುಂಬ ಅನುಕೂಲ.

೩. ಮಿಥುನ

ನಿಮ್ಮ ಪರಿಸ್ಥಿತಿಯಿಂದು ಹಿಂದಿಗಿಂತ ಎಷ್ಟೋ ಸುಧಾರಿಸಲಿದೆ. ಪ್ರಯತ್ನಕ್ಕೆ ತಕ್ಕ ಫಲವು ಲಭಿಸುವದಾದರೂ ಅಯಾಧಿಕ ವ್ಯಯವಾಗುವ ಯೋಗವಿರುವ ಕಾರಣ ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾಗಲಾರಿರಿ. ಶ್ರಮಜೀವಿಗಳಿಗೀ ಕಾಲವು ಅಷ್ಟೊಂದು ಹಿತಕರವೆನಿಸದು. ಕಫ ದೋಷವು ಆಗಾಗ ಕಾಣಿಸಿಕೊಳ್ಳಲಿದೆ. ಗೃಹತಾಪತ್ರಯಗಳಿಂದ ಮುಕ್ತರಾದ ನಿಮಗೆ ವಾರಾದಿಯ 2 ದಿನಗಳು ವಿಜಯ ಕೀರ್ತಿ ಲಾಭಗಳನ್ನುಂಟುಮಾಡುವವು.

೪ ಕರ್ಕಟ

ನಿಮ್ಮ ಭಾಗ್ಯಪತಿಯಾದ ಗುರುವು ವ್ಯಯಕ್ಕೆ ಬಂದಿಹನು. ಅಲ್ಲದೆ ಸುಖ ಲಾಭಪತಿಯಾದ ಶುಕ್ರನೂ ನೀಚತ್ವವಂ ಹೊಂದಿಹನು. ಆಂದ ಮೇಲೆ ಕೇಳಬೇಕೇ? ಇಂದು ನಿಮ್ಮ ಆರ್ಥಿಕ ಮಟ್ಟವು ತೀರ ಕೆಳಗಿಳಿಯಲಿದೆ. ಕುಜನರ ಸಹವಾಸದಿಂದಾಗಿ ಅನೀತಿ ಅನಾಚಾರ ಚಟಪ್ರವೃತ್ತರಾಗುವ ಭಯವಿದೆ. ಉದ್ಯೋಗದಲ್ಲಿ ನಿರಾಶರಾದ ನಿಮಗೆ ತಾ. 28-29-30 ಸ್ವಲ್ಪ ಆಶಾದಾಯಿಯಾಗಿ ಪರಿಣಮಿಸೀತು.

೫. ಸಿಂಹ

ಸಾಧಿಸಿದರೆ ನಿಮಗಿಂದು ಅಶಕ್ಯವೆಂಬುದಾವುದೂ ಇರಲಾರದು. ಬಂಧುಮಿತ್ರರ ನೆರವು ಜನತೆಯ ಸಹಕಾರವು ನಿಮಗೆ ಸಾಕಷ್ಟಿದ್ದ ಕಾರಣ ಅಲ್ಲದೆ ಸ್ವಯಂಶಕ್ತರೂ ನೀವಾಗಿದ್ದ ಕಾರಣ ಎಂದೆಂದಿಗೂ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಲಾರಿರಿ. ಇಂದು ನಿಮ್ಮ ಆರ್ಥಿಕ ಪರಿಸ್ಥಿತಿಯು ತುಂಬ ಸುಧಾರಿಸುವುದು. ವಾತಪ್ರಕೋಪದಿಂದಾಗಿ ನಿಮ್ಮ ಆರೋಗ್ಯ ಕೆಡಲಿದೆ. ತಾ|| 26-27-31-1 ಈ ದಿನಗಳು ತುಂಬ ಅನುಕೂಲವಾಗಿವೆ.

೬. ಕನ್ಯಾ

ನಿಮ್ಮ ಕಾರ್ಯಕಲಾಪಗಳಿಗೆ ಎಂತಹ ವಿಘ್ನ ವಿದ್ರೂರಗಳೇ ಬರಲಿ, ವಾ ಅದರಿಂದಾಗಿ ನಿಮಗೆ ಲಾಭವಾಗಲಿ ಯಾ ನಷ್ಟವಾಗಲಿ ನೀವು ಹಿಡಿದ ಕಾರ್ಯವನ್ನು ಮಧ್ಯದಲ್ಲಿ ಕೈ ಬಿಡಲಾರಿರಿ. ಆದರೆ ನಿಮ್ಮ ಬಂಧು ವರ್ಗವು ಮಧ್ಯದಲ್ಲೇ ಕೈಬಿಟ್ಟೀತು. ಅನಿರೀಕ್ಷಿತ ರಾಜಕಾರಣದಿಂದಾಗಿ ಹೆಚ್ಚಿನ ನಷ್ಟವುಂಟಾದೀತು. ಸ್ವಂತ ಆರೋಗ್ಯದತ್ತ ಹೆಚ್ಚಿನ ಗಮನವಿರಲಿ. ತಾ. 29—30 ಇದ್ದುದರಲ್ಲಿ ಅನುಕೂಲವಾಗಿವೆ.

೭. ತುಲಾ

ನಿಮ್ಮ ಲಾಭಪತಿಯಾದ ರವಿಯು ಲಾಭದಲ್ಲೂ ಸುಖಪತಿಯಾದ ಗುರುವು ಭಾಗ್ಯದಲ್ಲೂ ನಿಂತಿಹರು. ಈ ಕಾರಣದಿಂದಾಗಿ ನಿಮ್ಮ ಹಿಂದಿನ ತಾಪತ್ರಯಗಳೆಲ್ಲವು ಇಂದು ಮಾಯವಾಗಲಿವೆ. ನಿಶ್ಚಿಂತೆಯಿಂದ ಕಾಲ ಕಳೆವಿರಿ. ಆರ್ಥಿಕ ದುರವಸ್ಥೆ ಮನೋರೋಗಾದಿಗಳಿಂದ ನೀವಿಂದು ಮುಕ್ತರಾದರೂ ಆರೋಗ್ಯ ವಿಚಾರದಲ್ಲಿ ಕೊಂಚ ಜಾಗರೂಕರಾಗಿರಬೇಕಾದೀತು. ಪಿತ್ತ ಪ್ರಕೋಪವು ಆಗಾಗ ಕಾಣಲಿದೆ. ತಾ. 26, 27, 31, 1 ತುಂಬ ಅನುಕೂಲವಾಗಿವೆ.

೮. ವೃಶ್ಚಿಕ

ಮನೋದೌರ್ಬಲ್ಯ ಆರ್ಥಿಕ ಬಿಕ್ಕಟ್ಟುಗಳಿಂದಾಗಿ ನೀವಿಂದು ಯಾವೊಂದೂ ಕಾರ್ಯಪ್ರವೃತ್ತರಾಗದೆ ನಿರುದ್ಯೋಗದಿಂದ ಕಾಲಯಾಪನೆ ಮಾಡುವಿರಿ. ಗುರುಹಿರಿಯರ ಕೂಡೆ ಕಲಹಗಳು ಹೆಚ್ಚುವವು ಅಲ್ಲದೆ ಭೂ ಸಂಸಂಬಂಧವಾದ ವ್ಯವಹಾರದಲ್ಲಿ ಧನಹಾನಿ ಪರಾಜಯಗಳನ್ನು ಹೊಂದಬೇಕಾಗಿ ಬಂದೀತು. ಶ್ರಮಜೀವಿಗಳಿಗೀ ಕಾಲವು ತೀರ ಪ್ರತಿಕೂಲವಾಗಿದೆ. ದ್ಯೂತಪ್ರಿಯರಿಗೆ ಆಕಸ್ಮಿಕ ಧನಲಾಭದ ಯೋಗವಿದೆ. ವಾರಾದಿಯ ಮೂರು ದಿನಗಳು ಅನುಕೂಲವಾಗಿವೆ.

೯. ಧನು

ಸಾಹಸಿಗಳಾದ ನಿಮಗೆ ಜನತೆಯ ಸಹಕಾರವೂ ದೈವದೊಲುಮೆಯೂ ಲಭಿಸುವುದರಿಂದ ಸದ್ಯ ನಿಮ್ಮ ಬಯಕೆಗಳು ಪೂರ್ಣವಾಗಲಿವೆ. ನಿರೀಕ್ಷೆಗಿಂತಲೂ ಅಧಿಕವಾದ ಫಲವು ಸರ್ವತ್ರ ಲಭಿಸುವದಲ್ಲದೆ ವಿಜಯ ದುಂದುಭಿಯನ್ನೇ ಭಾರಿಸುವಿರಿ. ಎಂತಹ ಪ್ರಬಲ ಇದಿರಾಳಿಯೂ ಕೂಡ ಮುಂಗುಸಿಯಂ ಕಂಡ ಸರ್ಪದಂತೆ ತಲೆ ಬಾಗಲಿರುವನು. ವಾರಾಂತ್ಯದ 4 ದಿನಗಳು ನಿಮ್ಮ ಬಯಕೆಗಳು ಪೂರ್ಣವಾಹವು.

೧೦. ಮಕರ

ಹಲವಾರು ತರದ ವಿಘ್ನ ವಿದ್ರೂರಗಳನ್ನು ನೀವಿಂದು ಎದುರಿಸಬೇಕಾಗಿ ಬರಲಿದೆ. ಅಂತಹ ಮಹತ್ಕಾರ್ಯವನ್ನು ಇಂದು ನೀವು ಸಾಧಿಸಲಾರಿರಾದರೂ ದಿನನಿತ್ಯದ ಆಗುಹೋಗುಗಳ ಸಲುವಾಗಿ ಹರಸಾಹಸ್ರ ಶ್ರಮಿಸಲಾರಿರಿ. ಕಫ ದೋಷದಿಂದ ಆರೋಗ್ಯಕ್ಕೆ ಹಾನಿಯಿದೆ. ಅಧಿಕಾರಿ ವರ್ಗದವರ ವಕ್ರದೃಷ್ಟಿಗೆ ಗುರಿಯಾದ ನಿಮಗೆ ವಾರಾಂತ್ಯದ 2 ದಿನಗಳು ಸುಗಮವಾಗಲಿವೆ.

೧೧ ಕುಂಭ

ಜೀರಾವ ಭಾಗದಲ್ಲಿ ನೀವಿಂದು ಸುಧಾರಿಸಲಾರಿರಾದರೂ ಆರ್ಥಿಕ ಭಾಗದಲ್ಲಿ ನಿಶ್ಚಿಂತೆಯಿಂದಿರುವಿರಿ, ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಯಂತೆ ಫಲಲಾಭವಾಗುವದು. ಪ್ರವಾಸದಲ್ಲಿ ಅನಿರೀಕ್ಷಿತ ಅಪಾಯದ ಯೋಗವಿದೆ. ರಾಜಕೀಯದಲ್ಲಿ ಇದಿರಾಳಿಗಳಿಂದ ಪರಾಜಿತರಾಗುವಿರಿ. ವಾತಪ್ರಕೋಪದಿಂದಾಗಿ ಆರೋಗ್ಯಕ್ಕೆ ಕೊಂಚ ಧಕ್ಕೆಯಿದೆ. ವಾರಾದಿಯ 3 ದಿನಗಳು ಅನುಕೂಲವಾಗಿವೆ.

೧೨. ಮೀನ

ಇಂದಿನ ಪರಿಸ್ಥಿತಿಯು ನಿಮ್ಮನ್ನು ತೀರ ಬಿಕ್ಕಟ್ಟಿಗೆ ಸಿಲುಕಿಸಲಿದೆ. ಯಾವ ಕಾರ್ಯವನ್ನೇ ಮಾಡಿದರೂ ಅದರಲ್ಲಿ ಆಯಕ್ಕಿಂತ ಅಧಿಕ ವ್ಯಯವೇ ಕಂಡುಬಂದೀತು. ಹೆಚ್ಚೇಕೆ ಕೈಯಲ್ಲಿ ಹೊನ್ನು ಹಿಡಿದರು ಅದು ಮಣ್ಣಾಗಿ ಪರಿಣಮಿಸಿತೆಂದರೂ ತಪ್ಪಾಗದು. ಗೃಹತಾಪತ್ರಯ ಆರ್ಥಿಕ ಬಿಕ್ಕಟ್ಟುಗಳಿಂದಾಗಿ ನಿಮಗೆ ಸ್ವಪ್ನದಲ್ಲೂ ಕೂಡ ಸುಖವು ದುರ್ಲಭವಾದೀತು. ವಾರಾದಿಯ 5 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ ಎರಡೂವರೆ(ಟ ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ,ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ
0-30 ಪೈಸೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಿಯಾಯಿತಿ ಪ್ರತಿಗಳಿಗೆ ವಿಚಾರಿಸಿರಿ:-
ನವಯುಗ ಪ್ರೆಸ್, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

సవంటుుస

1965 - 1966

1.9.65 - 30.8.66

NAVAYUGA

leading nationalist weekly

నవయుగ

2—9—1965

226

NAVAYUGA

leading nationalist weekly

ಕಥಾ ಪ್ರಪಂಚ

ಕಣ್ಣು ತೆರೆಯಿತು

ಬರೆದವರು
ಶ್ರೀ ಎಚ್. ಸುಬ್ರಾಯ ಭಟ್ಟ.

ಸಂತಾನ ನಿಯಂತ್ರಣಕ್ಕೆ ಒಳಗಾದ ಹೆಣ್ಣೊಬ್ಬಳ ಹೃದಯ ವಿದ್ರಾವಕ ಕಥೆಯಿದು. ರಾಜನಿಂದಾಗಿ ಶಾಂತೆಯ ಸಂಸಾರ ಮತ್ತೆ ಕೂಡಿತು, ಆದರೆ ಎಲ್ಲ ಶಾಂತೆಯರಿಗೂ ರಾಜ ದೊರಕುವುದು ಸಾಧ್ಯವಾದೀತೆ?

ಆಫೀಸಿನಿಂದ ಹೊರಟಿದ್ದವನು ಹಾಗೆಯೇ ಸ್ಟೇಶನಿನತ್ತ ತೆರಳಿದ. ಯಾರೋ ಸ್ನೇಹಿತರು ಬಂದು ಅಲ್ಲಿ ಸಿಗುವೆನೆಂಬ ಭರವಸೆಯನ್ನಿತ್ತಿದ್ದರು.

ರಾತ್ರಿ ಸಮಯ ಎಂಟರ ವರೆಗೂ ಅಲ್ಲಲ್ಲಿ ಸುತ್ತಾಡಿ ಕಾಲ ಕಳೆದೆ. ಆದರೆ ಬರುವೆನೆಂದವರು ಬರಲಿಲ್ಲ. ಮತ್ತೆ ಕಾದು ಕುಳಿತರೆ ಪ್ರಯೋಜನವಿಲ್ಲೆಂದು ಮನೆಯತ್ತ ಹೊರಟೆ.

ಅಂದು ಅಮಾವಾಸ್ಯೆಯಾದ್ದರಿಂದ ಹೋಗುವಾಗ ಬ್ಯಾಟ್ರಿ ಕೊಂಡು ಹೋಗಲು ಮರೆತಿರಲಿಲ್ಲ. ಕೆಲದೂರ ರೈಲುದಾರಿ ಬದಿಯಲ್ಲಿಯೇ ಸಾಗಬೇಕಿತ್ತು. ಸುಮಾರು ಅರ್ಧ ಮೈಲು ದೂರ ನಡೆದಿರುವೆನಷ್ಟೆ. ಆಗಲೇ ಬಲುದೂರದಿಂದ ರೈಲಿನ ಸಿಳ್ಳು ಕೇಳಬಂತೊಡಗಿತು. ನಾಲ್ಕು ಹೆಜ್ಜೆ ಮುಂದಿರಿಸುವಾಗಲೇ ಅದೇನೋ ರೈಲು ದಾರಿಗಡ್ಡವಾಗಿ ಬಿದ್ದಂತೆ ಕಾಣಿಸಿತು. ಬೆಳಕು ಹಿಡಿದು ಹತ್ತಿರ ಸಾಗಿದೆ. ಒಮ್ಮೆ ಮೈಯಲ್ಲಾ ರೋಮಾಂಚನವಾಯಿತು. ಮೈತುಂಬ ಬಟ್ಟೆ ಹೊದೆದು ಬಿದ್ದಿರುವ ದೇಹ ಹೆಂಗಸಿನದೆಂಬುದು ಅರಿವಾಗಲು ತಡವಾಗಲಿಲ್ಲ. ಅಚೀಚೆ ನೋಡಿದ. ಹತ್ತಿರ ಯಾರೂ ಇರಲಿಲ್ಲ. ಕೂಗಿ ಕರೆಯುವ ಅವಕಾಶವೂ ಇರಲಿಲ್ಲ. ಕ್ಷಣಕಾಲ ಏನು ಮಾಡುವುದೆಂದು ತೋಚದೆ ದಿಗ್ಭ್ರಾಂತನಾದೆ. ಇನ್ನು ಕೇವಲ ಹತ್ತು ನಿಮಿಷದಲ್ಲಿ ಆ ದೇಹ ರೈಲಿನ ಗಾಲಿಗೆ ಸಿಕ್ಕಿ ನುಚ್ಚುನೂರಾಗುತ್ತಿತ್ತು.

ಕೊಲೆ ಎಂದು ಯೋಚಿಸುವ ವ್ಯವಧಾನವೂ ಇಲ್ಲದೆ ಬಲ ಪ್ರಯೋಗಿಸಿ ಮೇಲೆತ್ತಿದೆ. ಆಗ ನನಗೆ ಮತ್ತೂ ವಿಸ್ಮಿತವಾಯಿತು. ನಾನು ಯೋಚಿಸಿದಂತೆ ಅದು ಕೊಲೆಯಾದ ಹೆಣವಾಗಿರಲಿಲ್ಲ. ಆತ್ಮಹತ್ಯಕ್ಕೆ ಸಂಕಲ್ಪಿಸಿದ ನಿಸ್ಸಹಾಯಕ ಜೀವವಾಗಿತ್ತು.

ನಾನು ಬಡಿದೆಬ್ಬಿಸಿದಾಗಲೇ ಕೈ ತಪ್ಪಿಸಿಕೊಂಡು ಓಡುವ ಹವಣಿಕೆಯಲ್ಲಿತ್ತು. ಆದರೆ ನನ್ನ ಹಿಡಿತ ಬಿಗಿಯಾದುದರಿಂದ ಮತ್ತೆ ಅಲುಗಾಡಲಿಲ್ಲ.

ದುಃಖಿಸುವ ಹೆಣ್ಣಿನ ಮೇಲೆ ಕನಿಕರ ಉಂಟಾಗದೆ ಉಳಿಯಲಿಲ್ಲ. ಬೆಳಕು ಮುಖದತ್ತ ಹರಿಯಿಸಿದೆ. ಮುಸುಕಿನೊಳಗೇ ಮುಖದ ಪರಿಚಯವಾಗಿ ಕ್ಷಣಕಾಲ ಸ್ತಂಭೀಭೂತನಾದೆ.

ಮಾರ್ಗದ ಮಧ್ಯದಲ್ಲಿ ಮಾತನಾಡಿಸುವ ಗೋಜಿಗೆ ಹೋಗದೆ ಒತ್ತಾಯದಿಂದಲೇ ಮನೆಗೆ ಕರೆತಂದೆ.

ಸರಿರಾತ್ರಿಯಲ್ಲಿ ಹೆಣ್ಣಿನ ಜೊತೆಗೆ ಮನೆಗೆ ಮರಳಿದಾಗ ಮೊದಲು ನನ್ನ ಮಡದಿ ಶಾಲಿನಿಯ ಮುಖ ಬಿಗುಮಾನವಾಗಿಯೇ ಇತ್ತು.

ಆ ಮೇಲೆ ನಿಜಸ್ಥಿತಿ ತಿಳಿದಾಗ ಅವಳೂ ಕನಿಕರಗೊಂಡಳು. ಮನೆಗೆ ಕರೆತಂದಾಗಲೂ ಆಕೆಯ ಅಳು ನಿಂತಿರಲಿಲ್ಲ. ಊಟೋಪಚಾರದ ಮೇಲೆಯೇ ಮಾತಿಗಾರಂಭಿಸುವುದೆಂದು ಸುಮ್ಮನುಳಿದೆ.

ಶಾಲಿನಿ ಆವಳಿಗೆ ಉಡಲು ಬೇರೆ ವಸ್ತ್ರ ಲು ತಂದಿತ್ತಳು. ಮೊದಲು ಕಾಫಿಯನ್ನೇ ಮಾಡಿ ಕೈಗಿತ್ತಳು. ನಮ್ಮಿಬ್ಬರಿಗೆ ಮಾತ್ರ ಅನ್ನ ಮಾಡಿರುವುದರಿಂದ ಅದು ಮೂವರಿಗೆ ಸಾಕಾಗುವಂತಿರಲಿಲ್ಲ. ಹಾಗಾಗಿ ಹೊಸ ಅಡಿಗೆಗೆ ಅಣಿಯಾದಳು.

ನಾನು ಆರಾಮ ಕುರ್ಚಿಯಲ್ಲಿ ಕುಳಿತುಕೊಂಡೆ. ದೇಹ ಸುಮ್ಮನುಳಿದಿದ್ದರೂ ಮನ ಯೋಚನೆಯಲ್ಲಿ ತಲ್ಲೀನವಾಗತೊಡಗಿತು.

ಜೇನಿನ ಸವಿಯಷ್ಟು ಮಧುರವಾಗಿತ್ತು ನನ್ನ ಗೆಳೆಯ ಸುಂದರನ ಸಂಸಾರ. ಪೇಟೆಗೆ ಕೆಲದೂರದ ಹಳ್ಳಿಯ. ಸಮೀಪವೇ ಆತನ ಮನೆ. ನಾನು ಆಗಾಗ್ಯ ಹೋಗಿ ಬರುವ ವಾಡಿಕೆಯೂ ಇತ್ತು.

ಆ ಮನೆಯಲ್ಲಿ ನನಗೆ ಸಿಗುವ ಆದರ ಮಾವನ ಮನೆಯಲ್ಲಿಯೂ ಸಿಗುತ್ತಿರಲಿಲ್ಲ. ಆತನ ಪತ್ನಿ ಶಾಂತ ಹೆಸರಿಗೆ ತಕ್ಕಂತೆ ಉತ್ತಮ ಗೃಹಿಣಿಯಾಗಿದ್ದಳು. ಆತನಿಗೆ ನಾಲ್ಕು ಮಕ್ಕಳು. ಎಲ್ಲರೂ ಶಾಲೆಗೆ ಹೋಗುವವರೇ. ತಿಂಗಳಿಗೊಮ್ಮೆಯಾದರೂ ನಾನತ್ತ ಸುಳಿಯದಿದ್ದರೆ ಗೆಳೆಯನ ಆಕ್ಷೇಪಕ್ಕೆ ಗುರಿಯಾಗಬೇಕಾಗುತಿತ್ತು.

ಶಾಂತನ ಆದರೋಪಚಾರಗಳಿಗೆ ನಾನೇ ಬೇಸತ್ತು ಹೋಗುತ್ತಿದ್ದೆನು. 'ಬರುವ ನೆಂಟರಿಗಿಂತಲೂ ಹೆಚ್ಚಿನ ಆದರ ನನಗೆ ಬೇಕಾಗಿಲ್ಲ'ವೆಂದು ಮುನಿಸುಗೊಂಡರೆ 'ನಾವು ನೆಂಟರಿಗೆ ಆಗಾಗ ಬರ ಹೇಳುವುದೇ ಇಲ್ಲ'ವೆಂದು ಮಾತು ತೇಲಿಸಿ ಬಿಡುತ್ತಿದ್ದಳು.

ನಾನು ಎಲ್ಲಿಯಾದರು ನನ್ನ ಮಡದಿ ಶಾಲಿನಿಯ ವಿಚಾರ ಆಕ್ಷೇಪಕರ ಮಾತೆತ್ತಿದರೆ 'ಗಂಡಸರಿಗೆ ಹೆಣ್ಣಿನ ಹೃದಯವೇ ತಿಳಿದಿಲ್ಲ'ವೆಂದು ಮಾತಿನ ದಾಟಿಯನ್ನೇ ಬದಲಿಸುವಳು.

ಹಾಲಿನಂತಹ ಸಂಸಾರದಲ್ಲಿ ವಿಷ ಬೆರೆಯಲು ಕಾರಣ ತಿಳಿಯದಾಯಿತು. ಮೃದು ಸ್ವಭಾವದ ಸುಂದರನೆಂದೂ ಕಠೋರನಾಗಲಾರನೆಂಬೇ ನನ್ನ ಭಾವನೆ. ನಾಲ್ಕು ಮಕ್ಕಳ ತಾಯಿ ಆತ್ಮಹತ್ಯಕ್ಕೆ ಇಳಿಯ ಬೇಕಾದರೆ ಕಾರಣವೆಂದೂ ಚಿಕ್ಕದಾಗಲಾರದು.

ಆದರೆ ನಾನಂದು ಆ ದಾರಿಯಾಗಿ ಸಾಗದಿದ್ದರೆ ಶಾಂತನ ದೇಹ ಅದಾವಾಗಲೋ ನುಚ್ಚು ನೂರಾಗುತಿತ್ತು. ಹರಿಯಾರಾಡ್ಯವಂತೆ ವಿಧಿಲಿಖಿತ ಮೀರಲು ಅದಾರಿಂದಲೂ ಸಾಧ್ಯವಿಲ್ಲವೆಂಬ ಮಾತು ನೆನಪಿಗೆ ಬಾರದೆ ಹೋಗಲಿಲ್ಲ.

ಆಗಲೇ ಶಾಲಿನಿಯ ಕರೆಬಂದದ್ದರಿಂದ ಮೇಲೆದ್ದು ಅಡಿಗೆ ಮನೆಯತ್ತ ಸಾಗಿದೆ.

ಅಂದು ಮೌನವಾಗಿಯೇ ಊಟ ಸಾಗಿತು. ಶಾಂತ ಬರೇ ನಾಲ್ಕು ತುತ್ತು ತಿಂದು ಊಟದ ಶಾಸ್ತ್ರ ಪೂರೈಸಿ ಮೇಲೆದ್ದಳು.

ನಾನು ಊಟದ ಪರಿವೆ ಇಲ್ಲದೆ ಯೋಚನೆಯಲ್ಲಿಯೇ ತಲ್ಲೀನನಾಗಿರಲು ಹುಳಿಯ ಅನ್ನದ ಜೊತೆಗೆ ಪಲ್ಯವನ್ನು ಸೇರಿಸುವಾಗ ಶಾಲಿನಿಯೇ ಎಚ್ಚರಿಸಬೇಕಾಯ್ತು. ನನ್ನಲ್ಲಿಯೇ ನಾನು ನಾಚಿಕೊಂಡು ಊಟ ಪೂರೈಸಿದೆ.

ಶಾಂತ ಒಳ ಮನೆಯಲ್ಲಿ ಕುಳಿತಿದ್ದಳು. ಅಲ್ಲಿಗೇನೆ ನಾನೂ ಸಾಗಿದೆ. ಆಗ ಶಾಲಿನಿಯೂ ಕೆಲಸ ಪೂರೈಸಿ ಬಂದಳು.

ಮಾತು ಮೊದಲಿಸುವುದು ಹೇಗೆಂದು ಯೋಚಿಸುವಾಗಲೇ ಶಾಲಿನಿಯೇ ಮಾತು ಮೊದಲು ಮಾಡಿದಳು. ಅದಕ್ಕಾಗಿ ಅವಳನ್ನು ಮನದಲ್ಲಿಯೇ ಹೊಗಳಿದೆ.

'ಶಾಂತಕ್ಕ, ನೀವು ಇಂತಹ ಕೆಲಸಕ್ಕೆ ಕೈಹಾಕ ಬಹುದೇ? ನಿಮ್ಮನ್ನೇ ನಂಬಿರುವ ಮಕ್ಕಳು ಮತ್ತು ಪತಿಯ ಬಗ್ಗೆ ಒಂದಿಷ್ಟಾದರೂ ಯೋಚಿಸಿದಿರಾ?"

ಮಾತನಾಡದೆ ಶೂನ್ಯ ಮುಖಭಾವದಿಂದ ಕುಳಿತೇ ಇದ್ದಳು, ಶಾಂತ.

ಆಗ ನಾನೇ ಶಾಲಿನಿಯ ಮಾತು ಮುಂದುವರಿಸಿದೆ—

"ನೋಡು ಶಾಂತ! ನಿಮ್ಮ ಮನೆಯವರಲ್ಲಿ ನಾನೊಬ್ಬನಾಗಿರುವೆ. ನನ್ನಲ್ಲಿಯೂ ಮುಚ್ಚುಮರೆ ಏಕೆ? ನಡೆದ ವಿಚಾರವೇನು? ಇತ್ತೀಚೆಗೆ ನಿಮ್ಮಿಬ್ಬರಲ್ಲಿ ಯಾವುದೋ ಮನಸ್ತಾಪ ಬೆಳೆದಿದ ಎಂಬ ಊಹೆ ನನಗೂ ಆಗಿತ್ತು. ಆದರೆ ಅದು ಇಷ್ಟೊಂದು ಮುಂದುವರಿಯ ಬಹುದೆಂದು ನಾನೆಂದೂ ಯೋಚಿಸಿರಲಿಲ್ಲ. ಶಾಂತ, ಇದರ ಕಾರಣವೇನು?

ಉತ್ತರದ ಬದಲು ಕಣ್ಣೀರುಕ್ಕಿ ಬಂತು.

"ಕಣ್ಣೀರೆಂದೂ ಉತ್ತರ ನೀಡಲಾರದು ಶಾಂತ. ಎಷ್ಟು ಕಠಿಣ ಸಮಸ್ಯೆಯನ್ನಾದರೂ ಅದರ ಮೂಲ ತಿಳಿದರೆ ಬಗೆಹರಿಸಬಹುದು. ಏನು ವಿಚಾರ?" ಒತ್ತಾಯಿಸಿ ಕೇಳಿದೆ.

"ನನ್ನನ್ನೆಂದೂ ಕೇಳಬೇಡಿ. ಅಯ್ಯೋ! ನಾಚಿಕೆ....ಹೇಯ...ನಾನೆಂದೂ ಬಾಳಬಾರದು". ಬಿಕ್ಕಿ ಬಿಕ್ಕಿ ಅಳತೊಡಗಿದಳು.

(ಹದಿನ್ನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7¾
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ	ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.



Telephone 226.

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ರಿಪೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ವಿಘ್ನವಿನಾಶಕ, ವಿಜಯ ಪ್ರದಾಯಕ ವಿಘ್ನೇಶ್ವರ.

(ಕೃಪೆ—'ಪ್ರಕಾಶಿನಿ')

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೧	೨—೯—೧೯೬೫	No. 1

ವಚನ ಸುಧೆ

ಕೃಷೋಲ್ಕಯೊ ಜ್ಞಾಯತೇ ಜಾತರೂಪಂ
ವೃತ್ತೇನ ಭದ್ರೋ ವ್ಯವಹಾರೇಣ ಸಾಧುಃ॥

ಉರಿಯುವ ಬೆಂಕಿಯಿಂದ ಬಂಗಾರ, ಸದಾಚಾರದಿಂದ ಸತ್ಪುರುಷ, ವ್ಯವಹಾರದಿಂದ ಸಾಧುಗಳ ಪರೀಕ್ಷೆಯಾಗುತ್ತದೆ.

ಗಾಯದ ಮೇಲೆ ಬೊಕ್ಕೆ ಏಳದಿರಲಿ

ಅಧಿಕೃತ ಭಾಷಾ ಮಸೂದೆಯೊಡನೆ ತ್ರಿಭಾಷಾ ಸೂತ್ರವನ್ನು ವ್ಯವಹಾರಕ್ಕೆ ತರಬೇಕೆಂಬ ಗೊತ್ತುವಳಿಯನ್ನು ಲೋಕಸಭೆಯ ಮುಂದಿಡಲು ಅನುಮತಿ ದೊರೆತಿದೆ. ಕಳೆದ ಜೂನ್ ತಿಂಗಳಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಧಿಕೃತ ಭಾಷಾ ಸಂಬಂಧದಲ್ಲಿ ಗೊತ್ತುವಳಿ ಸ್ವೀಕರಿಸಿದ ಬಳಿಕ ಹಲವು ವಾರ ಪ್ರಯತ್ನಪಟ್ಟು ತಯಾರಿಸಿದ ಮಸೂದೆಯ ಕರಡು ಹೇಗಿರುವುದೆಂದು ಇನ್ನೂ ಸರಿಯಾಗಿ ತಿಳಿದು ಬಂದಿಲ್ಲ. ದಿ| ಪ್ರಧಾನ ಮಂತ್ರಿ ಜವಾಹರಲಾಲ ನೆಹರುರವರು ಅಹಿಂದೀ ಭಾಷಾ ಪ್ರದೇಶಿಗಳಿಗೆ ಭರವಸೆಯಿತ್ತಿರುವಂತೆ, ಅವರು ಬಯಸುವವರೆಗೆ ಹಿಂದಿಯೊಡನೆ ಇಂಗ್ಲಿಷ್ ಭಾಷೆಯು ಉಪಯೋಗವು ನಿರಂತರವಾಗಿ ಸಾಗುವುದಕ್ಕೆ ಅಗತ್ಯವಾದ ಅವಕಾಶಗಳಿರಬಹುದೆಂದು ನಂಬಬಹುದು. ಯಾವುದಾದರೂ ಒಂದು ದಿನವನ್ನು ಗೊತ್ತು ಮಾಡಿ ಅಂದು ಇಂಗ್ಲಿಷ್ ಭಾಷೆಯು ಸ್ಥಾನವನ್ನು ಹಿಂದೀ ಭಾಷೆಯು ಸಂಪೂರ್ಣವಾಗಿ ತುಂಬುವಂತಾಗಬೇಕಾದರೆ, ಹಿಂದಿಯ ಸರ್ವಾಂಗೀಣ ಉನ್ನತಿಯೊಡನೆ ಅದರ ಸುವಿಸ್ತೃತ ಪ್ರಚಾರವೂ ಆಗಬೇಕಾದುದು ಅಗತ್ಯ. ಹಾಗಾದರೂ ಮೊನ್ನೆ ಎದುರಿಸಿದಂತಹ ಗಂಡಾಂತರಗಳನ್ನು ಮತ್ತೊಮ್ಮೆ ಎದುರಿಸಬೇಕಾಗಿ ಬಂದರೂ ಬರಬಹುದು.

ಹಿಂದಿಯನ್ನು ಆಡಳಿತೆ ಭಾಷೆಯನ್ನಾಗಿ ಸ್ವೀಕರಿಸುವುದಕ್ಕೆ ಹೆದರುವುದಕ್ಕಿಂತ ಹೆಚ್ಚಾಗಿ ಅಹಿಂದೀ ಪ್ರದೇಶದಲ್ಲಿ ಅದರಿಂದ ತಮ್ಮ ಹಿತಕ್ಕೆಲ್ಲಿ ಬಾಧೆಯಾಗುವುದೋ ಎಂಬ ಭೀತಿಯೇ ಹೆಚ್ಚು. ಇದರಿಂದಾಗಿಯೇ ಈ ವರ್ಷದ ಆದಿಯಲ್ಲಿ ದಕ್ಷಿಣ ಭಾರತ, ಬಂಗಾಳ-ಅಸ್ಸಾಮು ಮೊದಲಾದೆಡೆಗಳಲ್ಲಿ ಗೊಂದಲ ನಡೆಯಿತು. ತಪ್ಪು ತಿಳುವಳಿಕೆಯನ್ನು ದೂರ ಮಾಡುವುದರಿಂದ ಕೆಲವಂಶವಾದರೂ ಅಪಾಯ ದೂರವಾಗಬಹುದು. ಹಿಂದೀ ಭಾಷೆಯ ಅಭಿವೃದ್ಧಿ ಮತ್ತು ಪ್ರಚಾರ, ಕೇಂದ್ರ ಸರಕಾರದಲ್ಲಿ ಅದು ಬಳಕೆಯಾಗುವ ಹಲವಾರು ಉದ್ದೇಶಗಳು, ತ್ರಿಭಾಷಾ ಸೂತ್ರವನ್ನು ಕಟ್ಟುನಿಟ್ಟಾಗಿ ಆಚರಣೆಯಲ್ಲಿ ತರುವ ಅಗತ್ಯ ಇದರೊಡನೆ, ಕೇಂದ್ರೀಯ ಲೋಕಸೇವೆಗಳಲ್ಲಿ ಸೇರಿಕೊಳ್ಳುವ ಹೆಚ್ಚಿನ ಸಂದರ್ಭಗಳಲ್ಲಿ ಹಿಂದೀ ಭಾಷಾ ಜ್ಞಾನವು ಬೇಕಿಲ್ಲವೆಂಬ ಭರವಸೆಗಳು ಈಗ ತಯಾರಿಸಿದ ಗೊತ್ತುವಳಿಯಲ್ಲಿವೆ. ಕೇಂದ್ರ ಸರಕಾರದ ನೌಕರಿಯಲ್ಲಿ ಸೇರಿದ ಮೇಲೆ, ಸೇವೆಯಲ್ಲಿ ಮುಂದುವರಿಯಲು ಮತ್ತು ಭಡ್ತಿ ಹೊಂದಲು ಹಿಂದಿಯ ಜ್ಞಾನವು ಬೇಕು; ಆದರೆ, ಈ ಜ್ಞಾನದ ಮಟ್ಟವು ಎಷ್ಟಿರಬೇಕು? ಇಲ್ಲಿ ಖಚಿತತೆ ವ್ಯಕ್ತಪಡದೆ ಹೋದರೆ ಮತ್ತೂ ಅಪಾಯದ ಸ್ಥಿತಿ ತಲೆದೋರಬಹುದು.

ತ್ರಿಭಾಷಾ ಸೂತ್ರವನ್ನು ಕಾಂಗ್ರೆಸ್ಸು ಸ್ವೀಕರಿಸಿ ಬಹುಕಾಲವಾಯಿತು. ರಾಜ್ಯಗಳ ಮುಖ್ಯಮಂತ್ರಿಗಳೆಲ್ಲರೂ ಅದನ್ನು ಒಪ್ಪಿದ್ದಾರೆ. ಸಾಮಾನ್ಯವಾಗಿ ದಕ್ಷಿಣದ ರಾಜ್ಯಗಳ ನಾವು ಮಾತ್ರವಾದರೂ ಅದನ್ನು ಕಾರ್ಯರೂಪಕ್ಕೆ ತಂದಿವೆ. ಈ ಸೂತ್ರದಂತೆ ಅಹಿಂದೀ ರಾಜ್ಯಗಳಲ್ಲಿ ಮಾತ್ರ ಭಾಷೆಯೊಡನೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಕಲಿಯಬೇಕು. ಹಿಂದೀ ರಾಜ್ಯದಲ್ಲಿ ಹಿಂದಿಯೊಡನೆ ಇಂಗ್ಲಿಷ್ ಮತ್ತೊಂದು ಆಧುನಿಕ ಭಾರತೀಯ ಭಾಷೆಯನ್ನು ಕಲಿಯಬೇಕು. ಆಧುನಿಕ ಭಾರತೀಯ ಭಾಷೆಗಳಲ್ಲಿ ದಕ್ಷಿಣದವುಗಳಿಗೆ ಅಗ್ರಸ್ಥಾನ ನೀಡಬೇಕು. ಆದರೆ, ದುರ್ದೈವವೆಂದರೆ, ಉತ್ತರದವರು ದಕ್ಷಿಣದ ಭಾಷೆಗಳನ್ನು ಕಲಿಯಲು ಆತುರರಾಗಿಲ್ಲ, ಆದರೆ, ದಕ್ಷಿಣದವರು ಹಿಂದೀ ಕಲಿಯಬೇಕೆನ್ನುವುದರಲ್ಲಿ ಮಾತ್ರ ಮುಂದಾಗಿದ್ದಾರೆ. ಅವರ ಈ ಪ್ರವೃತ್ತಿಯಿಂದಲೇ "ಹಿಂದೀಯು ತಮ್ಮ ಮೇಲೆ ಹೇರಲಾಗುತ್ತಿದೆ" ಎಂಬ ಭಾವನೆ ದಕ್ಷಿಣ ಭಾರತೀಯರ ಮನಸ್ಸಿನಲ್ಲಿ ಮೂಡಿದರೆ, ಅನೇನೂ ತಪ್ಪಲ್ಲ. ಪಾರ್ಲಿಮೆಂಟಿನಲ್ಲಿ ತ್ರಿಭಾಷಾ ಸೂತ್ರ ಸಂಬಂಧದ ಗೊತ್ತುವಳಿ ಸ್ವೀಕೃತವಾದರೆ, ಅದನ್ನು ಎಲ್ಲ ರಾಜ್ಯಗಳೂ ಕಾರ್ಯರೂಪಕ್ಕೆ ತಂದು, ಉತ್ತರದವರು ದಕ್ಷಿಣದ ಭಾಷೆಗಳನ್ನು ಕಲಿಯುವಲ್ಲಿ ಉತ್ಸಾಹ ತೋರಿಸಿದರೆ, ವ್ಯಾಪ್ತವಾದ ಭಯ ದೂರವಾಗಬಹುದು.

ಲೋಕಸೇವಾ ಆಯೋಗದ ಪರೀಕ್ಷಾ ಮಾಧ್ಯಮವು ಕೇಂದ್ರ ಮಟ್ಟದಲ್ಲಿ ಹಿಂದಿಯಾಗಬೇಕಾದರೆ, ಉಳಿದ ಪ್ರಾದೇಶಿಕ ಭಾಷೆಗಳಲ್ಲೂ ಉತ್ತರ ಬರೆಯುವ ಅವಕಾಶವಿರಬೇಕು. ಎನ್ನುವ ಅಭಿಪ್ರಾಯವಿಂದು ಸರ್ವತ್ರ ವ್ಯಾಪಿಸಿದೆ. ಈ ಸಂಬಂಧದಲ್ಲಿ ಕೇಂದ್ರ ಸರಕಾರವು ಏನನ್ನೂ ಮಾಡಲಾಗದು; ಆಯೋಗದ ಅಭಿಪ್ರಾಯವನ್ನು ಕೇಳದೆ ಮುಂದುವರಿಯುವುದು ಸಾಧ್ಯವಿಲ್ಲ. ಹಿಂದಿಯೇ ಇರಲಿ, ಇತರ ಪ್ರಾದೇಶಿಕ ಭಾಷೆಗಳೇ ಇರಲಿ, ಆಯೋಗದ ಪರೀಕ್ಷಾ ಮಾಧ್ಯಮವಾಗಬೇಕಾದರೆ, ಅವು ಸಾಕಷ್ಟು ಬೆಳೆದು ಬರಬೇಕು, ಇದಕ್ಕಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿಯೂ ಅವು ಬೋಧ ಭಾಷೆಯಾಗಬೇಕು. ಭಾಷೆ ಬೆಳೆಯುವುದು ಮೊದಲೋ ಎಂಬ ಪ್ರಶ್ನೆಗೆ ಸರಿಯಾದ ಉತ್ತರವಿದುವರೆಗೂ ಹೊಳೆದಿದಿಲ್ಲ. ಆದರೂ ಅದು ಬೋಧ ಭಾಷೆಯಾಗಿ ಕಾಲೇಜು ಮಟ್ಟದಲ್ಲಿ ಉಪಯೋಗಿಸಲ್ಪಡಲು ಆರಂಭವಾದರೆ, ಸ್ವತಃ ಬೆಳೆಯುವುದಕ್ಕೆ ತೊಡಗುವುದು. ಆವಶ್ಯಕತೆಯೇ ಬೆಳವಣಿಗೆಗೆ ನಾಂದಿ. ಆದುದರಿಂದ ವಿಶ್ವವಿದ್ಯಾಲಯಗಳ ಸುದೃಷ್ಟಿ ಈ ಕಡೆಗೆ ಹರಿಯಬೇಕು. ಇಂಗ್ಲಿಷ್ ಭಾಷೆಯ ಅಧ್ಯಯನವನ್ನು ಖಡ್ಡಾಯ ಮಾಡಿರುವುದರಿಂದ ತ್ರಿಭಾಷಾ ಸೂತ್ರಕ್ಕಿಂತ ಸೂಕ್ತ ಪರಿಹಾರ ನಮ್ಮ ದೇಶದ ಭಾಷಾ ಸಮಸ್ಯೆಗೆ ಇಲ್ಲ. ದೇಶವು ಹೊರಗೂ ಒಳಗೂ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವ ಇಂದಿನ ದಿನಗಳಲ್ಲಿ ಜನತೆಯ ಮನಸ್ಸಿಗೆ ಮತ್ತೊಂದು ಗಾಯವಾಗದಂತೆ ನೋಡಿಕೊಳ್ಳುವತ್ತ ನಮ್ಮ ನಾಯಕರೂ ಶಾಸಕರೂ ಎಚ್ಚರಾಗಿರಬೇಕು.

ಚಂದಾದಾರರಲ್ಲಿ ವಿನಂತಿ.

ಇದೇ ಕಳೆದ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ 44ನೇ ವರ್ಷವು ಕೊನೆಗೊಂಡು ಸಪ್ಟಂಬರಾದಿಯಿಂದ 45ನೇ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವ, ಹಾಗೂ ಚಂದಾ ಹಣ ಬಾಕಿಯಿರುವ ನಮ್ಮ ಚಂದಾದಾರ ಬಂಧುಗಳು ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ತ್ವರಿತ ಮನಿಯಾರ್ಡರು ದ್ವಾರಾ, ಯಾ ಸಿಂಡಿಕೇಟ್ ಬ್ಯಾಂಕಿನ ಸಮೀಪದ ಶಾಖೆಯಲ್ಲಿ "ನವಯುಗದ ಖಾತೆಗೆ ಜಮೆಮಾಡುವುದರ ಮೂಲಕ ಕಳುಹಿಸಿಕೊಟ್ಟು ಸಹಕರಿಸುವಂತೆ ವಿನಂತಿಸುತ್ತೇನೆ.

ಮೆನೇಜರ್
ನವಯುಗ, ಉಡುಪಿ.

ನರಸಣ್ಣನ ಸರಸ



"ನನ್ನಪ್ಪ ಹಿಂದಿ ಕಲೀಲಿಲ್ಲ, ನನಗೆ ಕಲಿಸಲಿಲ್ಲ, ನನ್ನ ಮಗ ಕಲಿಯೋಲ್ಲ. ಆದ್ರಿಂದ ನಮಗೆ ಬಿಟ್ಟು ಬೇರೆಯವ್ರಿಗೆ ಹಿಂದೀಯನ್ನೇ ಅಧಿಕೃತ ಭಾಷೆ ಮಾಡ್ಲಿ, ನಾನು ವಿರೋಧಿಸೋಲ್ಲ. ಅಯ್ತಲ್ಲ......."

ಗೇಹ ರಾಜ್ಯದಲ್ಲಿ

ತ್ರಿರಂಗ—ತ್ರಿರಂಗಿನ ಮಹಾನಾಯಕರು

"ನೋಡೀಂದ್ರೆ...."

"ನೋಡುತ್ತಲೇ ಇದ್ದೇನಲ್ಲಾ...."

'ಏನನ್ನು?"

'ಮತ್ಯಾವುದನ್ನಲ್ಲವಾದ್ರೂ ನಿನ್ನ ಸಿರಿಮೊಗವನ್ನು...'

"ಅಯ್ಯೋ ಪಾಪವೇ!"

'ಯಾಕೆ? ಏನಾಯ್ತು?"

"ಮತ್ತಿನ್ನೇನಾಗಬೇಕ?"

"ಈಗ ಆದುದಾದ್ರೂ ಏನೂಂತ?"

"ಎಲ್ಲ ಆಗೋಕ್ಕೆ ಬಾಕಿಯಿರೋದಾದ್ರೂ ಯಾವುದೂಂತ?"

"ಬಾಕಿಯೇನಿದೇಂತ ಬಾಕಿಯಿರೋವ್ರಿಗೆ ಗೊತ್ತು. ಮತ್ತೆ ಯಾರ್ಯಾರನ್ನ ಕೇಳಿದ್ರೆ ಅವ್ರಾದ್ರೂ ಏನೂಂತ ಹೇಳಿಯಾರು?"

'ಹ್ಞೂಂ...ಗೊತ್ತಾಯ್ತು ಬಿಡಿ.'

"ನಿನಗೆ ಗೊತ್ತಾದ್ರೆ, ನನಗೇನೂಂತ? ಈಗ ಅಯ್ಯೋ ಪಾಪವೇ ಅಂತ ಅಂದೆಯಲ್ಲಾ, ಯಾರು ಪಾಪ, ಯಾಕೆ ಪಾಪ, ಯಾವ ಸಂದರ್ಭದಲ್ಲಿ ಪಾಪ?"

"ಅಲ್ರಿ, ಶಾಲೆಯಲ್ಲಿ ಮಕ್ಕಿಗೆ ಕೇಳೋಹಾಗೆ ಕೇಳ್ತಾ ಇದ್ದೀರಲ್ಲಾ!"

'ಹ್ಞೂಂ ಆಗ್ಲಿ ಬಿಡು. ನನ್ಮುಂದೆ ನೀನು ಮಗೂನೇ ಅನ್ನು....'

"ಅದಕ್ಕೇ ಅಂದದ್ದು ನೋಡಿ ಪಾಪಾಂತ...."

"ಯಾರು?"

'ನೀವು...'

'ಯಾಕೆ? ಮಗುವನ್ನ ಕೈ ಹಿಡಿದು ಇಬ್ರು ಬದುಕನ್ನೂ ಹಾಳುಮಾಡಿಕೊಂಡಿರೀಂತ...'

'ಅಯ್ಯಯ್ಯ. ನನ್ನ ಮಗು ಇಷ್ಟು ಮಾತನ್ನ ಅರ್ಥಮಾಡಿಕೊಳ್ಳುತ್ತೆ, ಪಾಪ ದೊಡ್ಡ ಮಗುವಲ್ವೆ..."

"ಸಾಕು ಸುಮ್ಮನಿರೀಂದ್ರೆ.... ಯಾರಾದ್ರೂ ನೋಡಿದ್ರೆ ಕೇಳಿದ್ರೆ...."

'ಏನಂತೆ? ಅದ್ರಿಂದ ಆಗೋದಾದ್ರು ಏನು?'

"ನಿಮ್ಮ ಗಂಡಸ್ರ ಮಾತೇ ಹಾಗೆ? ಏನಂದ್ರೂ ಏನಾಗುತ್ತೆ ನೋಡೋಣಾಂತನ್ನೋದು...."

"ಮತ್ತೇನು, ನಿಮ್ಮ ಹಾಗೆ ಅನ್ನೋದಕ್ಕಿಂತ ನಾಲ್ಕು ಮಾರು ಹಿಂದೆ ಹಾರ್ಬೇಕೇನು? ನಮ್ಮ ಜಂತಹ ಪ್ರವೃತ್ತಿಯಿದ್ಲೇ ನಮಗೆ ಗಂಡಸ್ರೂಂತ ಹೆಸ್ರು. ಆ ಬಗೆಯ ಗಂಡುತನ ನಮ್ಮಲ್ಲಿಲ್ಲಾಂತಾಗ್ಲಿದ್ರೆ ನಮ್ಮನ್ನ ಹೆಂಗಸ್ರೂಂತ ಕರೆಯುತಿದ್ರು, ನಾವೂ ಅಬಲರಾಗುತಿದ್ದೆವು..."

'ಗೊತ್ತಪ್ಪ ನಿಮ್ಮ ಬಲ, ಶಕ್ತಿ, ಚಾತುರ್ಯ, ಕಾರ್ಯ ಕೌಶಲ....'

'ಗೊತ್ತೇಂತೆ ಗೊತ್ತು, ಏನು ಗೊತ್ತೂಂತ?'

'ಏನನ್ನೋದು? ಹೇಳಿದ್ರೆ ನಿಮ್ಗೆ ಬೇಜಾರವಾಗಬಹುದು..."

'ಏನಿಲ್ಲ, ನೋಡು, ಸೇನೆಯಲ್ಲಿರೋ ಕಿಲ್ಲಾ ಗಂಡಸ್ರೇ ನೋಡು. ಅಂತಹ ಸೇನೆ ಯಾವ ರೀತಿ ಗಂಡಸ್ತನ ತೋರಿಸುತ್ತೇಂತ ನೋಡ್ತಾ ಇದ್ದೀಯಲ್ಲಾ?'

"ಇಲ್ಲದೆ ಉಂಟೆ? ಪಾಪದ ಅಬಲೆಯ ಮುಂದೆ ಮಾತಿನ ಚಳಮತಿ ತಾರಿಸೋದ್ರಲ್ಲಿ ಆ ಗಂಡಸಿನದು ಎತ್ತಿದ ಕೈ ...."

"ಭಾರಿ ಸಮರ್ಥುದಾರಿ ಕಣೆ ನೀನು ...ಅಲ್ಲಾ, ನಾನು ನಮ್ಮ ಸೇನೆಯ ವಿಚಾರ ಅಂದ್ರೆ ನೀನು ನನ್ನತ್ತ ಬೊಟ್ಟು ಮಾಡುತ್ತಿಯಲ್ಲಾ...."

'ಸೇನೆಯ ಕತೆಯೆ? ನೋಡಿ, ಚೀನಾದವ್ರು ನೇಫಾದಲ್ಲಿ ಆಕ್ರಮಣ ಮಾಡಿದಾಗ ಧೈರ್ಯದಿಂದಲೇ ಹಿಮ್ಮೆಟ್ಟಿಸು ನೋಡಿ...'

"ಏನಂತಿಯಾ ನೀನು? ನೇಫಾವನ್ನ ನೀನೊಮ್ಮೆ ನೋಡುತಿದ್ರೆ, ಆಗ ಹೇಳುತಿದ್ದಿ ಅಂತಹ ದುರ್ಗಮ ಪ್ರದೇಶದಲ್ಲಿ ಯಾರು ಯುದ್ಧ ಮಾಡ್ತಾರೆಯೇಂತ....'

'ಸರಿ ಹಾಗದ್ರೆ ಒಂದ್ಸಲ ಕರ್ಕೊಂಡು ಹೋಗಿ'

'ಇದು ಒಳ್ಳೆ ಪಚೀತಿಯಾಯ್ತಲ್ಲ....'

'ಯಾಕೆ?'

'ಯಾರ್ಯಾರ ಕಷ್ಟ ಏನೂಂತ ಯಾರಿಗೆ ಗೊತ್ತು?'

"ಯಾರಿಗಲ್ಲವಾದ್ರೂ ಕಷ್ಟ ಪಡುವವ್ರಿಗೆ ಗೊತ್ತಲ್ಲ...."

"ಹಾಗೇ ನೋಡು ಗುಡ್ಡಕಾಡು ಕಣಿವೆ ಮೊದಲಾದುವುಗಳಿಂದ ತುಂಬಿದ ಪ್ರದೇಶದಲ್ಲಿ ಶತ್ರುಗಳನ್ನು ಪ್ರತಿಭಟಿಸುವದು ಅಂದ್ರೆ..."

'ಅಯ್ಯಪ್ಪ, ನಿಮ್ದು ಯಾವಾಗ್ಲೂ ಹೀಗೇನೆ..."

"ನೋಡು, ಅಲ್ಲಿಯ ಭೌಗೋಳಿಕ ಪರಿಸ್ಥಿತಿಯನ್ನು ಕಣ್ಣಾರೆ ಕಾಣ ಬೇಕು; ಆಗ ಅದರ ಅರಿವಾಗುತ್ತೆ. ಆದ್ರೆ ನೋಡು, ಎಲ್ರೂ ನಿನ್ನ ಹಾಗೇನೇ ನೇಫಾವನ್ನು, ಕಾಶ್ಮೀರದ ಕೊಳ್ಳವನ್ನು, ಕಚ್ಛ—ರಣ ಗಡಿ ಪ್ರದೇಶವನ್ನು ಕಾಣಬೇಕೆಂದ್ರೆ ಅದು ಸಾಧ್ಯವಾಗುತ್ಯೆ?"

'ಅದಕ್ಕೆ ಏನು ಮಾಡಬೇಕೂಂತ....?'

"ನೋಡು, ಅಡುಗೆ ಮಾಡಿದಳೂಂತ ಅನ್ನೋದು ಎಷ್ಟು ಸುಲಭ? ಆದ್ರೆ..."

"ಮಾಡಿನೋಡ್ಬೇಕು ಒಂದು ದಿನ..."

"ಹಾಗೇ ನೋಡು, ನೀನು ಹೇಳಬಹುದು. ನಮ್ಮಲ್ಲಿ ಸೇನೆ ಇದೆ ಕಾಶ್ಮೀರದಿಂದ ಪಾಕಿಸ್ತಾನಿಗಳನ್ನ ಒಂದೇ ದಿನದೊಳಗೆ ಹೊರಗಟ್ಟಬೇಕೂಂತ...."

"ಏನಂತೆ? ಆಕ್ರಮಣಕಾರರನ್ನು ಹೊಡೆಯುವುದು ತಪ್ಪೆ?"

"ತಪ್ಪಲ್ಲವಾದರೂ ಒಪ್ಪೂ ಅಲ್ಲ...."

"ಯಾಕೆ?"

'ನೋಡು, ಚೀನಾದವ್ರು ನೇಫಾದಲ್ಲಿ ಆಕ್ರಮಣ ಮಾಡಿದ ಸಮಯ ಆಗಿನ ಪ್ರಧಾನಿ ಜವಾಹರರು ಒಂದು ಮಾತನ್ನ ಶಾಂತಿ ನಿಕೇತನದಲ್ಲಿ ಅಂದಿದ್ದರು..'

'ಏನದು?'

'ನಮಗೆ ಚೀನೀಯ ಜನತೆಯೊಂದಿಗೆ ಹಗೆತನವಿಲ್ಲ...'

"ಯಾಕಂತೆ? ಆಕ್ರಮಣಗಾರರು ಹಗೆಯುಳ್ಳವರೇನು?"

'ನೋಡು, ಚೀನೀಯ ಜನತೆಯ ಮನಸ್ಸಿನಲ್ಲಿ ಭಾರತದ ಮೇಲೆ ಆಕ್ರಮಣ ಮಾಡಬೇಕೆಂಬ ಇಚ್ಛೆ ಇರಲಾರದು ...."

"ಮತ್ತೆ?"

"ಆಳುವವರ ದುರಹಂಕಾರ, ಸಾಮ್ರಾಜ್ಯವಾದದಿಂದಾಗಿ ಅವರು ಆಕ್ರಮಣ ಮಾಡುತ್ತಾರೆ, ಮಾಡಿಸುತ್ತಾರೆ. ಅವರ ಆಶ್ರಯದಲ್ಲಿ ಬೆಳೆದು ಬಂದಿರುವ ಸೇನೆ ಅನಿವಾರ್ಯವಾಗಿ ತಲೆಬಾಗಲೇಬೇಕಾಗುತ್ತದೆ...."

"ಅಲ್ರಿ, ಸೇನೆಯಲ್ಲಿರುವವರೂ ಆ ದೇಶದ ಜನತೆಯೇ ಆಗಿರುವುದರಿಂದ ಅವರಿಗೆ ಯುದ್ಧ ಬೇಡವಾದರೆ, ಶಸ್ತ್ರ ಸನ್ಯಾಸ ಮಾಡಬಹುದಲ್ಲಾ?"

"ಅದು ಯಾವ ನ್ಯಾಯ? ನೋಡು ಒಂದು ದೊಡ್ಡ ದೇಶದಲ್ಲಿ, ಉದಾಹರಣೆಗೆ ಭಾರತವನ್ನೇ ತೆಗೆದುಕೋ, ಯಾವುದೇ ವಿಚಾರದಲ್ಲಿ ಒಮ್ಮತದ ನಿರ್ಧಾರವಾಗುವುದೆಂಬುದಿದೆಯೆ? ವ್ಯಕ್ತಿ ಭಿನ್ನತೆಯಿರುವಷ್ಟೇ ಅಭಿಪ್ರಾಯದಲ್ಲಿ ಭಿನ್ನತೆಯಿದೆ. ಅದು ಸ್ವಾಭಾವಿಕ..."

"ಅದು ಸರೀನ್ನಿ. ಈಗ ನನಗೂ ನಿಮಗೂ ಒಮ್ಮತ ಎಷ್ಟು ವಿಷಯದಲ್ಲಿದೆ?"

'ಹಾಗೆಯೇ ನೋಡು, ತಮ್ಮ ಜನತೆಗೆ, ತಮಗೆ ಮನಸ್ಸಿಲ್ಲವಾದ್ರೂ, ಅಧಿಕಾರದಲ್ಲಿರುವವರ ಮಾತಿನ ಮುಂದೆ ಶಿರಬಾಗುವುದು ದೇಶ ಪ್ರೇಮಿಯ ಆದ್ಯ ಕರ್ತವ್ಯ; ಅದೇ ದೇಶನಿಷ್ಠೆ."

'ದೇಶನಿಷ್ಠೆಯ ಹೆಸರಿನಲ್ಲಿ ಆತ್ಮದ್ರೋಹ ಮಾಡಬೇಕಾಗಿ ಬಂದರೆ?"

'ರಾಷ್ಟ್ರ ಪುರುಷನ ಆತ್ಮದ ಮುಂದೆ ಪ್ರಜೆಯ ಆತ್ಮಕ್ಕೆ ಬೆಲೆಯಿಲ್ಲ. ರಾಷ್ಟ್ರದ ಹಿತ ಹೀಗಾದೀತೆಂದೇ ಅಹರ್ನಿಶಿ ಚಿಂತಿಸುತ್ತ ಸರಕಾರದ ನೀತಿ—ಧೋರಣೆಗಳನ್ನು ರೂಪಿಸುತ್ತಿರುವ ನಾಯಕರ ಮುಂದೆ ನನ್ನ ನಿನ್ನಂತಹರ ಮೆದುಳು ಎಲ್ಲಿಯವರೆಗೆ ಓಡೀತು?"

"ಅದು ಸರೀನ್ನಿ. ಅದರೂ ಸರಕಾರಕ್ಕೆ ಬುದ್ಧಿ ಕಡಿಮೆಯಾದರೆ?"

"ಹ್ಹ ಹ್ಹ..."

"ಏಕೆ ನಗುತ್ತೀರಿ?"

"ಅಲ್ಲಿ ಮತ್ತೆ ಮಾಡಬೇಕಾದ್ದೂ ಏನು? ಅಲ್ಲ, ಸರಕಾರ ಅಂದ್ರೆ ಅದ್ರ ಶಕ್ತಿ ಎಷ್ಟು? ಅದೇನು ಒಬ್ಬನಿಂದ ಇಬ್ಬರಿಂದ ನಡೆಯುವಂತಹ ಕೆಲಸ?'

"ಅದು ಹೌದೂನ್ನಿ, ಅಂದ್ರೆ ಎಲ್ಲ ಬಗೆಯ ವಿಚಾರ ವಿನಿಮಯ ನಡೆಸಿ ಯೋಗ್ಯಕ್ರಮ ಕೈಗೊಳ್ಳೋ ವ್ಯವಸ್ಥೆ ಅಲ್ಲಿದೇಂತ್ಲ...'

'ಹೌದು...'

"ಹಾಗಿದ್ರೂ ನೋಡಿ, ಕೆಲವೊಮ್ಮೆ ಸರಕಾರ ಇಟ್ಟ ಹೆಜ್ಜೆ ತಪ್ಪಿ ಹೋಗುತ್ತ, ಕಾಯದೆ ಆಕ್ರಮವಾಗುತ್ತೆ, ಯುದ್ಧ ಪರಾಜಯದಲ್ಲಿ ಪರ್ಯವಸಾನ ಹೊಂದುತ್ತಲ್ಲಾ?"

"ಹ್ಞೂಂ, ಕೆಲವೊಮ್ಮೆ ಹಾಗೂ ಆಗುತ್ತೆ. ಯುದ್ಧದಲ್ಲಿ ಜಯಾಪಜಯಗಳು ದೈವಾಯತ್ತವಲ್ಲವೆ?'

"ಕೆಲವೊಮ್ಮೆ ಅನ್ಯಾಯದ ಯುದ್ಧಗಳೂ ಆಗುತ್ತವಲ್ಲಾ..."

"ಅನ್ಯಾಯಿಗಳ ಕೈಯಲ್ಲಿ ಅಧಿಕಾರ ದೊರೆತರೆ ಕೆಲವೊಮ್ಮೆ ಹಾಗೆ ಆಗುವುದುಂಟು....'

"ಅದಿರ್ಲಿ, ಈಗ ಕಾಶ್ಮೀರದಲ್ಲಿ ಪಾಕಿಸ್ತಾನ ಮಾಡುತ್ತಿರುವ ಆಕ್ರಮಣ ಅನ್ಯಾಯ ತಾನೆ?"

"ಯಾರು ಅಲ್ಲಾಂತಾರೆ?

'ಪಾಕಿಸ್ತಾನದವ್ರು.."

'ಅವ್ರೇ? ನೋಡು, ಸಮರ ವಿರಾಮ ರೇಖೆಯನ್ನ ಮೀರಬಾರದೂಂತ ನಿಯಮವಿರುವಾಗ, ಅದನ್ನು ಉಭಯತರರೂ ಒಪ್ಪಿರುವಾಗ ಪಾಕಿಸ್ತಾನ ಕಾಶ್ಮೀರದ ಕೊಳ್ಳದಲ್ಲಿ ಆಕ್ರಮಣ ಮಾಡಿದರೆ, ಅದು ಅನ್ಯಾಯವಲ್ಲದೆ ಮತ್ತೇನು?"

"ಅವರು ದಾರಿತಪ್ಪಿ ಬಂದ್ತಾರೆ...'

"ಹೌದಮ್ಮ, ಪ್ರತಿ ಸಿಕ್ಕವೂ ದಾರಿ ತಪ್ಪಿ ಹೋಗುತ್ತೆ ಅವ್ರಿಗೆ. ಗುಂಡಿನ ಸಂಗ್ರಹ ತುಂಬ ಇರುತ್ತೆ ಅವರಲ್ಲಿ. ಭಾರತೀಯರನ್ನು ಪರದೇಶಿಗಳನ್ನಾಗಿ ಮಾಡುವುದರಿಂದ ಅವರಿಗೆ ಮನಸ್ಸಂತೋಷವಾಗುತ್ತದೆ ಅಲ್ವೆ?'

'ಅದು ಹಾಗಾಯ್ತು. ನೋಡಿ, ನಮ್ಮ ಸಂರಕ್ಷಣಾ ಪಡೆಯೂ ಸಮರವಿರಾಮ ರೇಖೆಯನ್ನು ದಾಟಿ ಪಾಕ್ ಕೈಯ ಆಜಾದ ಕಾಶ್ಮೀರದಲ್ಲಿ ಎರಡು ಠಾಣೆಗಳನ್ನು ಹಿಡಿದು ಕೊಂಡಿದೆಯಲ್ಲಾ?'

"ಕೇಳು, ಪಾಕಿಸ್ತಾನ ಸಮರ ವಿರಾಮ ರೇಖೆಯನ್ನು ದಾಟಿ ಭಾರತಕ್ಕೆ ಕಿರುಕುಳ ಕೊಡುವುದನ್ನೇ ತನ್ನ ಸಂಪ್ರದಾಯವೆಂಬಂತೆ ಮಾಡುತ್ತ ಬಂದಿತು. ವಿರಾಮ ರೇಖೆಯನ್ನು ಕಾಯುತ್ತಿರುವ ಅಂತರಾಷ್ಟ್ರೀಯ ಸೇನಾ ನಾಯಕ ನಿಮ್ಮೊರವರು ಪ್ರತಿ ವರದಿಯಲ್ಲಿಯೂ ಇದನ್ನು ಉಲ್ಲೇಖಿಸುತ್ತಾರೆ. ಆದರೂ ಪಾಕಿಸ್ತಾನಕ್ಕೆ ತನ್ನ ತಪ್ಪಿನ ಮನವರಿಕೆಯಾಗುವುದಿಲ್ಲ. ಅದು ಮತ್ತೂ ಮತ್ತೂ ಇದೇ ರೀತಿಯ ಉಪದ್ರವ ಕೊಡುವಾಗ ಸಂಯುಕ್ತರಾಷ್ಟ್ರ ಸಂಘವು ಸುಮ್ಮನಿರುವಾಗ, ಸ್ವರಕ್ಷಣೆ ಮಾಡಿಕೊಳ್ಳುವುದು ನಮ್ಮ ಕರ್ತವ್ಯ ತಾನೆ?'

'ಅಲ್ಲವೇ ಮತ್ತೆ?'

'ಅದಕ್ಕಾಗಿಯೇ ಪಾಕಿಸ್ತಾನದಿಂದ ಇನ್ನೂ ಹೆಚ್ಚಿನ ಆಕ್ರಮಣಕಾರರು ಭಾರತವನ್ನು ನುಗ್ಗದಂತೆ ನೋಡಿಕೊಳ್ಳಲೆಂದೇ ಭಾರತವು ಈ ಸಾಹಸ ಮಾಡಿತು.."

'ಅಲ್ರಿ, ಇಷ್ಟು ವರ್ಷಗಳ ಮೇಲಾದ್ರೂ ನಿಮ್ಮ ಟೋಪಿ ಸರಕಾರ ಗಂಡಸ್ತನ ತೋರಿಸಿತು...'

'ಯಾವುದೇ ಒಂದು ಕೆಲಸ ಮಾಡಬೇಕಾದ್ರೆ ಮೊದಲು ನೂರು ಬಾರಿ ಆಲೋಚಿಸಿ ನೋಡಬೇಕು.... ...ನೋಡು, ಶಿಶುಪಾಲ ನೂರು ಬಾರಿ ಬೈದ ಮೇಲೆ ತಾನೇ ಕೃಷ್ಣ ಚಕ್ರ ಎತ್ತಿದ್ದು?"

'ಆ ಹ ಹ ಹಾ...."

'ಯಾಕೆ"

'ಅಲ್ಲಾ ಇದಲ್ಲಿ ಸರಿಯಾಗುತ್ತೇಂತ?"

"ಯಾಕೆ?'

'ಕೃಷ್ಣ ಶಿಶುಪಾಲನ ತಾಯಿಗೆ ಹಾಗೆ ಮಾತು ಕೊಟ್ಟಿದ್ದ; ಅದ್ರಿಂದ...."

'ಯಾಕೆ ಮಾತು ಕೊಟ್ಟ? ಅದು ಸಂಪ್ರದಾಯೂಂತ, ಕಾರಿ ಕೊಂದರೆ ಪಾಪ ಎಲ್ಲ ನೋಡು..."

'ಆತ್ಮ ಸಮರ್ಥನೆಗಾಗಿ ಏನೂ ಮಾಡ್ತೀರಿ, ಅಡ್ತೀರಿ."

"ಇಲ್ಲಿ ಅದೋ ಮಾತು ಮುಗೀತು. ಇನ್ನು ಮಾಡೋದು ಮಾತ್ರ ಇರೋದು. ನಿಷ್ಕ್ರಿಯವಾದ ಸಂಯುಕ್ತ ರಾಷ್ಟ್ರ

(ಹದಿಮೂರನೇ ಪುಟ ನೋಡಿರಿ)

ಯಕ್ಷಗಾನ ಕೂಟ – ಬಯಲಾಟಗಳಲ್ಲಿ
ನವೀನ ಸುಧೋರಣಗಳು

ಬರೆದವರು
ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್, ಸುರತ್ಕಲ್ಲು

ಮಲೆನಾಡಿನ ಜನಾಂಗದವರು ಹೆಚ್ಚಾಗಿ ಬಳಸುವ ಜಾನಪದ ಕಲೆಯಾದ ಯಕ್ಷಗಾನ ಕೂಟ–ಬಯಲಾಟಗಳಲ್ಲಿ ಅನೇಕ ವಿಧಗಳಿವೆ. ಪಡು ಕಡಲ ತಡಿಯವರು ತೆಂಕು ತಿಟ್ಟು—ಬಡಗು ತಿಟ್ಟುಗಳನ್ನು ಬಳಸುವರು. ಬಡಗು ತಿಟ್ಟಿನಲ್ಲೂ ಉಡುಪಿ-ಕುಂದಾಪುರಗಳ ತರಕ್ಕಿಂತಲೂ ಉತ್ತರ ಕನ್ನಡ ಜಿಲ್ಲೆಯ ತಿಟ್ಟು ಮತ್ತೂ ಪ್ರಾಚೀನ ರೂಪದಲ್ಲಿದೆ. ಕವಿರಾಜಮಾರ್ಗವೆಂಬ ಅಲಂಕಾರ ಗ್ರಂಥದಲ್ಲಿ ಭಾಷಾ ವಿಚಾರ ಹೇಳುವಾಗ ದಕ್ಷಿಣ ಮಾರ್ಗ, ಉತ್ತರ ಮಾರ್ಗ, ಉತ್ತರೋತ್ತರ ಮಾರ್ಗಗಳೆಂಬ ಮೂರು ಹೆಸರುಗಳಿವೆ ಅಂತೆ ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಕೂಟ—ಬಯಲಾಟಗಳು ಉತ್ತರೋತ್ತರ ಕ್ರಮದವೆನ್ನಬಹುದು. ಪಡು ತಡಿಯ ಮೂಡಲು 'ಮೂಡಲಪಾಯ' ಇತ್ಯಾದಿ ವಿಭೇದಗಳಿವೆ. ಇವೆಲ್ಲವುಗಳ ಸ್ಥೂಲಿಕ ವಿಷಯ, ಅಂತರಂಗಿಕ ವಿಚಾರಗಳೆಲ್ಲಾ ಒಂದೇ ಆಗಿವೆಯೆಂಬುದು ಸ್ಮರಣೀಯವಾಗಿದೆ. ಪ್ರಕೃತ ಲೇಖನದಲ್ಲಿ, ತೆಂಕು ತಿಟ್ಟಿನ ಬಗೆಗೆ ಇತ್ತೀಚೆಗೆ ತೊಡಗಿದ ನವಸುಧೋರಣಗಳ ಬಗ್ಗೆ ತುಸ ಬರೆಯಲೆಳಸಿದೆ. ಬಡಗು ತಿಟ್ಟಿನಲ್ಲಿ ಇದರಷ್ಟು ಸುಧೋರಣಗಳು ಒಡಗೂಡಿಲ್ಲವೆಂದೂ, ಕೆಲವೊಮ್ಮೆ ಇಂತಹ ಸುಧೋರಣಗಳ ಕೆಲವನ್ನು ಅಲ್ಲಿನ ಹಿರಿಯರು ಹಾಗೂ ಶ್ರೀ ಶಿವರಾಮ ಕಾರಂತರಂತಹವರು ತಡೆಗಟ್ಟಿದ್ದರಿಂದೂ ಇಲ್ಲಿ ಗಮನೀಯ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇಂತಹ ಸುಧೋರಣಗಳು ಸೋಕಿಲ್ಲ. ಇತ್ತೀಚೆಗೆ ಅವರು ತೆಂಕುತಿಟ್ಟಿನವರಂತೆ ಕೇವಲ ಧನ ಸಂಗ್ರಹಕ್ಕಾಗಿ ಈ ಕಲೆಯನ್ನು ಬಳಸಿಲ್ಲದಿರುವುದೇ ಸುಧಾರಣವಿಲ್ಲದಿರಲು ಒಂದು ಕಾರಣವಾಗಿದೆ.

ಬಡಗು ತಿಟ್ಟಿನ (ಉಡುಪಿ—ಕುಂದಾಪುರ) ಯಕ್ಷಗಾನ—ಬಯಲಾಟಗಳ ಬಗೆಗೆ ಶ್ರೀ ಶಿವರಾಮ ಕಾರಂತರು ಬರೆದ 'ಯಕ್ಷಗಾನ ಬಯಲಾಟ'ವೆಂಬ ಗ್ರಂಥದ ದ್ವಿತೀಯ ಮುದ್ರಣವನ್ನು ಕಾಣಬಹುದು. ಉತ್ತರ ಕನ್ನಡದ ಕ್ರಮದ ಬಗ್ಗೆ ಆಗಾಗ ಕೆಲವು ಲೇಖನಗಳು ಪ್ರಕಟವಾಗುತ್ತಿವೆಯಷ್ಟೆ! (ಕುಮಟದ ಯಕ್ಷಗಾನ ಪತ್ರಿಕೆ, ಹೊನ್ನಾವರದ ಶೃಂಗಾರ ಪತ್ರಿಕೆಗಳನ್ನು ನೋಡಿರಿ). ತೆಂಕು ತಿಟ್ಟಿನ ಬಗೆಗೆ ಇಂತಹ ವಿವರಣ—ವಿವೇಚನ ಲೇಖನಗಳು ಅಷ್ಟು ಹೆಚ್ಚಾಗಿ ಪ್ರಕಟವಾಗಿಲ್ಲ. ಇತ್ತೀಚೆಗೆ ಶ್ರೀ ಕುಕ್ಕಿಲ ಕೃಷ್ಣ ಭಟ್ಟರು ತೆಂಕು ತಿಟ್ಟಿನ ಬಗೆಗೆ ವಿಸ್ತಾರವಾಗಿ ಬರೆವ ಸುದ್ದಿಯಿತ್ತು, ಒಂದೆರಡು ವರ್ಷಗಳಲ್ಲೂ ಆ ಸುದ್ದಿ ಮಾತ್ರ ಉಳಿದಿದೆ, ಮುನ್ನಡೆದ ಹಾಗಿಲ್ಲ, ಈ ತಿಟ್ಟಿನ ಮೊದಲಲ್ಲಿ ಉಡುಪಿಯ ಯಕ್ಷಗಾನ ಕಲಾಕ್ಷೇತ್ರದ "ಪ್ರಕಾಶಿಕೆ"ಯಲ್ಲಿ ಅವರು ಬರೆದುದು ಸಾಕಷ್ಟು ಪ್ರಬಲಾಧಾರ ಯುಕ್ತವಾಗಿಲ್ಲೆಂದು ಬಲ್ಲವರಲ್ಲಿ ಕೆಲವರ ಅಭಿಪ್ರಾಯ. ಅವರು ಆದಷ್ಟು ಬೇಗನೆ ತಮ್ಮ ಗ್ರಂಥ ಮುದ್ರಣಕ್ಕೆಳಸಿ, ಸಂಸ್ಕೃತ ನಾಟಕಾದಿಗಳಿಗೆ ಹೇಳಿದ ಪ್ರಾಚೀನ ಗ್ರಂಥಗಳ ಆಧಾರಕ್ಕಿಂತಲೂ ಹೆಚ್ಚಾಗಿ ಜಾನಪದ ಕಲೆಗಳ ಪರಿಶೀಲನೆ-ಹೊಂದಾಣಿಕೆ-ಬೆಳೆಗೆಗಳನ್ನು ವಿವರಿಸಿ ವಿವೇಚಿಸಿ ಬರೆಯುವರೆಂದು ಆಶಿಸಬೇಕಾಗಿದೆ.

ಇನ್ನೀಗ ತೆಂಕುತಿಟ್ಟಿನವರ ನವಧೋರಣೆಗಳಲ್ಲಿ ಕೆಲವನ್ನು ಸೂಚಿಸಿ ಬರೆಯಲಾಗಿದೆ. ಯಕ್ಷಗಾನ ಕೂಟವೆಂದರೆ ತಾಳಮದ್ದಳೆಯೆಂದು ನಾಮಾಂತರವುಳ್ಳ, ಬಣ್ಣದ ವೇಷ ಭೂಷಣ ನಾಟ್ಯಾಭಿನಯಗಳಿಲ್ಲದ, ಬೈಠಕ್ ರೂಪದಲ್ಲಿರುವ ಕೂಟವಾಗಿದೆ. ಭಾಗವತನು ಯಕ್ಷಗಾನ ರೀತಿಯಲ್ಲಿ ಹಾಡುಗಳನ್ನು ಹೇಳುತ್ತಾನೆ (ಕರ್ಣಾಟಕದ ಗತ್ತುಗಳಿಗೆ ಬೇಕಾದ ನಾದಸ್ವರಗಳನ್ನು ಬಳಸುವುದಿಲ್ಲ). ಅದಕ್ಕೆ ತಕ್ಕ ಮದ್ದಳೆ ಚೆಂಡೆ ಚಕ್ರತಾಳಗಳನ್ನು ಪಕ್ಕದ ವಾದ್ಯಗಾರರು ಬಾರಿಸುತ್ತಾರೆ. ಅಂದಿನ ಪ್ರಸಂಗದ ಕತೆಗೆ ಒಳಪಟ್ಟ ಪಾತ್ರ-ವ್ಯಕ್ತಿಗಳ ಅರ್ಥವನ್ನು ಪ್ರತ್ಯೇಕಶಃ ಇದಿರುಬದಿರಾಗಿ ಕುಳಿತ ಮಂದಿ ವಿವರಿಸುತ್ತಾರೆ.

ಬಯಲಾಟದಲ್ಲಿ ಈ ಪಾತ್ರ-ವ್ಯಕ್ತಿಗಳು ಬೇರೆ ಬೇರೆ ತರದ ವೇಷಭೂಷಣ ಸಾಧನೆಗಳನ್ನು ಧರಿಸಿ ಪದ್ಯದ ಹಾಡಿಕೆಯ ಹೊತ್ತಿನಲ್ಲಿ ನಾಟ್ಯಾಭಿನಯನಗಳ ಮೂಲಕ ಜನರಿಗೆ ತಿಳಿವಂತೆ ಪದ್ಯಾರ್ಥವನ್ನು ತುಸ ಅಭಿವ್ಯಂಜಿಸುತ್ತಾ, ಪದ್ಯಾಭಿನಯಗಳಾದ ಮೇಲೆ ತುಸ ವಿವರಿಸಿದ ಅರ್ಥಗಾರಿಕೆಯಿಂದ ಜನರನ್ನು ಮತ್ತಷ್ಟು ರಂಜಿಸುತ್ತಾರೆ. ಇವೆರಡು ಕಡೆಯ ಯಕ್ಷಗಾನವೆಂದರೆ ಸಂಗೀತ ಶಾಸ್ತ್ರ ರೀತಿಯ ಗಂಧರ್ವ ಗಾಯನವಲ್ಲೆಂದು ಆ ಹೆಸರಿಂದಲೆ ತಿಳಿಯುತ್ತದೆ. ಶಾರ್ಙ್ಗದೇವನ ಸಂಗೀತ ರತ್ನಾಕರ ಮೊದಲಾದ ಕೃತಿಗಳಲ್ಲಿ ಇವುಗಳ ಪ್ರತ್ಯೇಕತೆ ಹೇಳಿರುವುದನ್ನು ನಾವು ಅವಶ್ಯ ಗಮನಿಸಬೇಕು. (ಶ್ರೀ ಮುಳಗೂರು ಕೃಷ್ಣಾಚಾರ್ಯರು ಬರೆದ 'ಕರ್ನಾಟಕ ಸಂಗೀತವೂ ಹರಿದಾಸ ಕೂಟವೂ' ಎಂಬ ಪುಸ್ತಕವನ್ನೂ ಈ ಮೇಲೆ ಹೆಸರಿಸಿದ "ಪ್ರಕಾಶಿಕೆ"ಯಲ್ಲಿರುವ ನನ್ನ ಲೇಖನವನ್ನೂ ನೋಡಬಹುದು).

ಅಂದ ಮೇಲೆ, ಇದೀಗ ಕೆಲವು ಮಂದಿ ಭಾಗವತರು ಅತ್ತ ಗಾಂಧರ್ವ ಗಾಯನವೂ ಅಲ್ಲ, ಇತ್ತ ಯಕ್ಷಗಾನವೂ ಅಲ್ಲವೆಂಬ ತರದಲ್ಲಿ ಹಾಡುವುದಕ್ಕೇಳಿಸಿದರೇನೆನ್ನಬೇಕು? ಇವರು ಗಾಂಧರ್ವ ಗಾಯನವನ್ನು ಸ್ವಯಂ ಹಾಡುವಂತಿಲ್ಲ; ಯಕ್ಷಗಾನದ ಮೂಲ ತತ್ವ-ಸತ್ವ-ಸ್ವತ್ವಗಳ ಬಗೆಗೆ ಪ್ರಾಚೀನ ಗ್ರಂಥಗಳನ್ನು ನೋಡುವಂತಿಲ್ಲ; ಪ್ರಾಚೀನ ಪರಂಪರೆಯಲ್ಲಿ ಸಾಗಿದವರೊಂದಿಗೆ ಅಭ್ಯಾಸದಿಂದ ಸಾಗುವಂತಿಲ್ಲ! ಶಾಸ್ತ್ರ ಹಾಡಿದುದನ್ನು ಎಲ್ಲೆಡೆ ಲೌಕಿಕವಾಗಿ ನವನವೀನ ಸುಧೋರಣಗಳು ಆಗುತ್ತಿರುವಾಗ ಈ ಯಕ್ಷಗಾನದಲ್ಲೂ ನವಧೋರಣವೇಕಿರಬಾರದೆಂಬ ತತ್ವವಾದಕ್ಕೆ ಇವರು ತೊಡಗುವರು. ಜ್ಯೋತಿಷ್ಯ, ವೈದ್ಯಪದ್ಧತಿಗಳಲ್ಲಿ ಇಂತಹ ನವೀನ ಸುಧಾರಣೆಗೆ ಯಾರೂ ಕೂಡಗುವಂತಿಲ್ಲವೆಂದ, ಕೆಲವು ವಿಶಿಷ್ಟಾಂಶಗಳ ಬಗೆ ಸೇರ್ಪಡೆಯಾಗಬಲ್ಲುದಷ್ಟೆ—ಎಂದು, ಇವರಿಗೆ ತಿಳಿದಿಲ್ಲ? ಆ ಮೇರೆಗೆ, ಸಂಗೀತ ಶಾಸ್ತ್ರದಲ್ಲಿಯೂ ಮೂಲ ತತ್ವಗಳನ್ನು ಆಧರಿಸಿ ಕೆಲವು ಹೊಸ ಪದ್ಧತಿಗಳು ಕಾಣುತ್ತವೆಯಲ್ಲದೆ; ಮೌಲಿಕಾಂಶರಾಹಿತ್ಯದ ಯಾವುದೇ ರಾಗಾಲಾಪಾದಿಗಳು ಸಲ್ಲವೆಂದು ಬಲ್ಲವರಿಗೆ ತಿಳಿದ ವಿಚಾರವಾಗಿದೆ. ಆದುದರಿಂದ, ಯಕ್ಷಗಾನ ಕ್ರಮದಲ್ಲೂ ಕೇವಲ ಅಧುನಿಕತೆಯ ಸೋಗಿನಲ್ಲಿ ಸಾಗುವುದು ತರವಲ್ಲೆಂದು ಪ್ರತ್ಯೇಕಶಃ ಹೇಳಬೇಕಾಗಿದೆ. ಗಾನವನ್ನು ಅನುಸರಿಸಿಯೇ ಪಕ್ಕದ ವಾದ್ಯಗಳ ಬಾಜನೆಯೂ ಸಾಗಬೇಕೆಂಬ ನ್ಯಾಯದಂತೆ, ಈ ಮೇಲೆ ಹೇಳಿದಂತೆ ಯಕ್ಷಗಾನ ಕ್ರಮಾನುಸಾರವೇ ಮದ್ದಳೆ—ಚೆಂಡೆಗಳು ದನಿಗೂಡಿಸಬೇಕಾಗಿವೆಯೆಂದು ಹೇಳಿದರೆ ಸಾಕಾದೀತು! ಕೆಲವೊಮ್ಮೆ ಧ್ವನಿವಿಶೇಷಗಳ ಆವಶ್ಯಕತೆಯಲ್ಲಿ, ಕುಂಗಿ ಕೊಳಲು, ಚಿಕ್ಕ ಡೋಲು ಮೊದಲಾದವು ಬಳಸಬೇಕಾದೀತು.

ಇನ್ನು, ಬಯಲಾಟದ ವೇಷ ಭೂಷಣಗಳ ವಿಚಾರ ತುಸ ಇಲ್ಲಿ ಹೇಳಬೇಕು. ಹತ್ತಿಪ್ಪತ್ತು ವರ್ಷಗಳ ಹಿಂದಿನ ವೇಷಭೂಷಣಗಳು ಇಂದು ಕಣ್ಣಿಗೆ ಕಾಣಸಿಗುತ್ತಿಲ್ಲವೆಂದರೆ ಸುಳ್ಳಲ್ಲ. ಧರ್ಮಸ್ಥಳದ ಮೇಳದ ಹಳೆಯ ಪಟ್ಟಿಗೆಯಲ್ಲಿ ಹಲವು ಹಳೆಯ ಕಿರೀಟಾದಿಗಳು ಹಾಗೇ ಬಿದ್ದಿವೆಯೆಂದು ಶ್ರೀ ಮಲ್ಪೆ ಶಂಕರನಾರಾಯಣ ಸಾಮಗರು ಒಮ್ಮೆ ಬರೆದಿದ್ದರೆ (ಯಕ್ಷಗಾನ ಪತ್ರಿಕೆ) ಹತ್ತು ವರ್ಷಗಳಲ್ಲಿ ಅವುಗಳ ಹೆಸರೇ ಕೇಳದಾಗಿವೆ. ಇತ್ತೀಚಿನ ಐವತ್ತು ವರುಷದಲ್ಲಂತೂ, ನಾಟಕದ ವೇಷಭೂಷಣಗಳನ್ನೋ ಚಿತ್ರವಾಣಿ (ಸಿನೇಮಾ)ಯ ಉಡುಪು ತೊಡುವುಗಳನ್ನೋ ಅನುಕರಿಸಲು ಹತ್ತಿದುದನ್ನು ಕಾಣುವಾಗ, ಶ್ರೀ ಸಾಮಗರಂತಹ ಹಳಬರು ಬಾಯ್ಮುಚ್ಚಿ ಸಾಗುತ್ತಿರುವರೆಂದರೆ ವಿಚಿತ್ರವೆನ್ನಿಸುತ್ತದೆ. ಬಯಲಾಟದ ಮೇಳದ ಯಜಮಾನರು ಹೇಳಿದಂತೆ ಇದ್ದರೆ ತಾನೇ ವೇಷಧಾರಿಗಳನ್ನು ಅವರು ಕರೆಯುವರು! ಜನತೆಯಾದರೋ ಈ ಬಗ್ಗೆ ಮೌನನೀತಿಯನ್ನು ನಿರ್ವಹಿಸುತ್ತಿದೆ. ಅಶ್ಲೀಲ ಚಿತ್ರವಾಣಿಗಳನ್ನು ಪ್ರದರ್ಶಿಸಬಾರದೆಂದು ಸರ್ಕಾರವೇ ಶಾಸನ ಮಾಡಬೇಕಾಗಿಲ್ಲವಾದರೆ,

(ಹನ್ನೆರಡನೇ ಪುಟ ನೋಡಿ)

'ಸೇವಿಂಗ್ಸ್ ಬ್ಯಾಂಕ್' ಖಾತೆಯವರಿಗೊಂದು
ಸಂತಸದ ಸುದ್ದಿ

ವಿಶೇಷ ಸವಲತ್ತುಗಳು



- ನಿಮ್ಮ ಖಾತೆಯಲ್ಲಿರುವ ಹಣದ ಮೊತ್ತ 4%ರ ಸರೆಯಲ್ಲಿ ಬಡ್ಡಿಯನ್ನು ಗಳಿಸುತ್ತದೆ.
- ಹಣವನ್ನು ಮರಳಿ ಪಡೆಯುವಾಗ ಅಧಿಕವೆಂದರೆ ಇಂತಿಷ್ಟೇ ಪಡೆಯಬೇಕು ಎನ್ನುವ ನಿರ್ಬಂಧವಿಲ್ಲ; ಮುಂಚಿತವಾಗಿ ಸೂಚಿಸಬೇಕಾದ ಆವಶ್ಯವೂ ಇಲ್ಲ. ಒಂದ ವರ್ಷದಲ್ಲಿ 150 ಬಾರಿ ಹಣವನ್ನು ಮರಳಿ ಪಡೆಯಬಹುದು ಎಂದು ಮಾತ್ರ ನಿಯಮಿತಗೊಳಿಸಲಾಗಿದೆ.
- ಕನಿಷ್ಠ 5 ರೂ.ಗಳ ಮೊತ್ತದಿಂದಲೂ ನಿಮ್ಮ ಖಾತೆಯನ್ನು ತೆರೆಯಬಹುದು ಮತ್ತು ನಿಮ್ಮ ಖಾತೆಗೆ ಸೀಫ ಬರೇ 25 ಪೈಸೆಗಳನ್ನು ಕೂಡಾ ಜಮಾ ಮಾಡಬಹುದು.
- ಒಂದು ದಿನದಲ್ಲಿ ರೂ. 2,500/-ಗಳ ತನಕ ಮೊತ್ತಕ್ಕೆ ಪ್ರಕಟ ರವಾನೆಯ ವ್ಯವಸ್ಥೆಯನ್ನು ಮಾಡಲಾಗಿದೆ.
- ಚೆಕ್ ಮೂಲಕ ವ್ಯವಹಾರದ ಸೌಕರ್ಯಗಳನ್ನು ಒದವಿಸಲಾಗಿದೆ. ನಿಮ್ಮ ಎಲ್ಲಾ ಪಾವತಿಗಳನ್ನೂ ನೀವು ನಿರಾಯಾಸವಾಗಿ ಚೆಕ್ಕುಗಳ ಮೂಲಕವೇ ಮಾಡಬಹುದು.
- ನಮ್ಮ ಅಧಿಕಾರಿಗಳು ನಿಮಗೆ ಶೀಘ್ರ ಮತ್ತು ಸೌಜನ್ಯ ಪೂರ್ಣವಾದ ಸೇವೆಯನ್ನು ಸಲ್ಲಿಸಬಲ್ಲರು.

ವಿವರಗಳಿಗಾಗಿ ದಯವಿಟ್ಟು ನಿಮ್ಮ ಸಮೀಪದ
— ಶಾಖೆಯಲ್ಲಿ ವಿಚಾರಿಸಿರಿ —

FAITHFUL SB FRIENDLY
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ
ಚಲಾವಣಾ ನಿಧಿ: ರೂ. 70 ಕೋಟಿಗೂ ಮಿಕ್ಕಿ

ವಿವೇಚನೆ

ಗೃಹಸ್ಥಾಶ್ರಮ ಧರ್ಮ ವೈಶಿಷ್ಟ್ಯ

ಲೇಖಕರು
ಶ್ರೀ ಉ. ಜೈ. ಭಾಸ್ಕರಾಚಾರ್ಯ.

ಗೃಹಸ್ಥಾಶ್ರಮ ನಿಯಮಗಳನ್ನು ಉಚಿತವರಿತು ಪರಿಪಾಲಿಸಿದರೆ, ನಮ್ಮ ಹಲವು ಸಮಸ್ಯೆಗಳು ಪರಿಹಾರಗೊಳ್ಳುವುವು. ಭೋಗ ಭೂಮಿಯಿಂದೆದ್ದು ಯೋಗ ಭೂಮಿಗಿಳಿಯಬೇಕು, ನಾವು.

ಪಂಚಭೂತಾತ್ಮಕವಾದ ಈ ಸೃಷ್ಟಿಯು ಪುರುಷ ಹಾಗೂ ಸ್ತ್ರೀ ಎಂಬ ನೈಸರ್ಗಿಕ ಪ್ರಭೇದಗಳಿಂದೊಡಗೂಡಿದೆ. ಈ ಎರಡು ಶಕ್ತಿಗಳ ಸಂಯೋಗ ಬಲದಿಂದಲೇ ಸೃಷ್ಟಿಯು ವಿಕಾಸಗೊಳ್ಳುತ್ತಿದೆ. ಸೃಷ್ಟಿಕರ್ತನು ಈ ಎರಡು ಶಕ್ತಿಗಳಲ್ಲಿ ಒಂದು ವಿಶಿಷ್ಟವಾದ, ಪರಸ್ಪರ ಆಕರ್ಷಣೀಯವಾದ ಚಮತ್ಕೃತಿಯನ್ನು ಸಂಯೋಜಿಸಿರುವನು. ಈ ವೈಶಿಷ್ಟ್ಯವು ಕೇವಲ ಮಾನವರಲ್ಲಿ ಮಾತ್ರವಲ್ಲದೆ, ಸರ್ವ ಮೃಗ ಜಂತುಗಳಲ್ಲೂ ಸ್ವಾಭಾವಿಕವಾಗಿದೆ. ಪರಂತು ಮಾನವರ ಹಾಗೂ ಮೃಗ ಜಂತುಗಳ ನಡವಳಿಕೆಯಲ್ಲಿ ಬಹಳಷ್ಟು ವ್ಯತ್ಯಾಸಗಳು ಕಂಡು ಬರುತ್ತವೆ. ಮಾನವರಿಗೆ ವಿವೇಕ, ಜ್ಞಾನವು ದೈವದತ್ತವಾಗಿದ್ದು, ಕರ್ಮ ಸ್ವಾತಂತ್ರ್ಯವು ಅನುಗ್ರಹೀತವಾಗಿರುವುದು. ಮಾನವೇತರ ಪ್ರಾಣಿಗಳಾದರೋ ವಿಚಾರಹೀನವಾಗಿದ್ದು ಕೇವಲ ಭೋಗಯೋನಿ ಪರಿಮಿತವಾದುವುಗಳಾಗಿರುತ್ತವೆ.

ಪ್ರಕೃತಿ ನಿಯಮದಂತೆ ಮಾನವ ಸಮಾಜವು ಸ್ತ್ರೀ ಪುರುಷ ಸಂಬಂಧದಿಂದ ಬಂಧಿಸಲ್ಪಟ್ಟಿರುತ್ತದೆ. ಈ ಸಂಬಂಧವು ಪರಸ್ಪರ ಸಹಾಯಕವಾಗಿ ಮಾನವ ಜೀವನವು ಸಾಫಲ್ಯ ಹೊಂದಲೆಂದೇ ಜಗತ್ಕರ್ತನು ಸ್ತ್ರೀಪುರುಷ ಉಭಯರಲ್ಲಿ ಒಂದು ಸೂಕ್ಷ್ಮ ಶಕ್ತಿಯನ್ನು ಅಳವಡಿಸಿರುವನು. ಈ ಶಕ್ತಿಯು ಸ್ತ್ರೀ-ಪುರುಷರು ಪ್ರಾಪ್ತ ವಯಸ್ಕರಾಗಿ ಭವಿಷ್ಯತ್ಚಿಂತನಾಪರರಾದಾಗ ನವಚೇತನಗೊಂಡು ಪರಸ್ಪರ ಆಕರ್ಷಿಸುವಂತೆ ಅನುವಾಗುತ್ತದೆ. ಇಂತಹ ಸನ್ನಿವೇಶವೇ ಇವರಿಬ್ಬರನ್ನೂ ಒಂದು ವಿಶಿಷ್ಟ ಸಂಸ್ಕಾರಪ್ರದರನ್ನಾಗಿ ಮಾಡುತ್ತದೆ. ಇದೇ ಗೃಹಸ್ಥಾಶ್ರಮವೆನ್ನಲ್ಪಡುತ್ತದೆ. ಗೃಹಸ್ಥಾಶ್ರಮ ಪ್ರಾಪ್ತಿಯಾದ ನಂತರವೇ ಸ್ತ್ರೀ-ಪುರುಷರು ತಮ್ಮ ಪರಸ್ಪರ ಸಂಬಂಧವನ್ನು ಕ್ರಿಯಾರೂಪಕ್ಕೆ ತರಲು ಅರ್ಹತೆಯುಳ್ಳವರಾಗುವರು. ಈ ಸಂಬಂಧವು ಒಂದು ವಿಶಿಷ್ಟ ನಿಯಮ ಬದ್ಧವಾಗಿ ಸಾಗಲೆಂದೇ ಅದಕ್ಕೆ ವಿವಾಹವೆಂಬ ಹೆಸರನ್ನು ನಮ್ಮ ಪೂರ್ವಾಚಾರ್ಯರು ವಿಧಿಸಿರುವರು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಸಾಧಿಸುವುದೇ ವಿವಾಹದ ಮುಖ್ಯ ಗುರಿ.

ವೇದ, ವಿದ್ಯಾ ಮಂತ್ರಗಳ ಸ್ನಾತಕನಾಗಿ ಗುರ್ವಾಶೀರ್ವಾದ ಪಡೆದ ಬಳಿಕ ಬ್ರಹ್ಮಚಾರಿಯು ಕಾಶೀಯಾತ್ರೆಯನ್ನು ಮಾಡಲು ಹೊರಟು, ಆ ಕಾರಣದಿಂದ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ ತೀರ್ಥಸ್ನಾನ, ವಿದ್ವಾಂಸರಲ್ಲಿ ಸಂಭಾಷಣೆ, ಲೋಕ ಸಚ್ಚರಿತ್ರಾನುಭವ ಜಗತ್ಸೃಷ್ಟಿಯ ಲೀಲಾವಿಚಿತ್ರ ರಹಸ್ಯ ಪರಿಜ್ಞಾನ ಲಾಭವನ್ನು ಗಳಿಸಿ ತನ್ನ ಆಶ್ರಮಕ್ಕೆ ಹಿಂತಿರುಗಿ ಬಂದು, ಗುರುಹಿರಿಯರ ಸನ್ನಿಧಿಯಲ್ಲಿ ಅವರ ಅಪ್ಪಣೆಯಂತೆ, ತನಗೆ ಅನುರೂಪಳೂ, ಗುಣ ಹಾಗೂ ಕುಲಧರ್ಮದಲ್ಲಿ ಸಮಾನ ಯೋಗ್ಯತೆ ಯಿರುವವಳೂ, ತನ್ನ ಗೋತ್ರ—ಸೂತ್ರ—ಪ್ರವರಗಳಿಗೆ ಭಿನ್ನಳಾದವಳೂ ಆದ ಕನ್ಯಾರತ್ನವನ್ನು ಹಿರಿಯರ ಮುಖಾಂತರ ಪರೀಕ್ಷಿಸಿ, ಸುಮುಹೂರ್ತವನ್ನು ಜೋತಿಷ್ಯರಿಂದ ತಿಳಿದು ಆ ಕಾಲದಲ್ಲಿ ವಿವಾಹವನ್ನು ಮಾಡಿಕೊಳ್ಳತಕ್ಕದ್ದು. ವಿವಾಹ ಸಮಯದಲ್ಲಿ ಪುರೋಹಿತರು ಪಠಿಸುವ ದಂಪತಿ ಸೂಕ್ತದ ಈ ಕೆಳಗಿನ ಮಂತ್ರದ ಉಪದೇಶ ಸಾರವು ಗಮನೀಯವಾದುದು:—

ಶ್ರುತಿಃ|| ತೇನ ಭೂತೇನ ಹವಿಷಾಯು
ಮಾಪ್ಯಾಯ ತಾಂ ಪುನಃ |
ಜಾಯಾಂ ಯಾಮಸ್ಮಾ ಆವಕ್ಷು
ಸ್ತಾಂ ರಸೇನಾಭಿ ವರ್ಧತಾಮ್ ||
ಅಭಿವರ್ಧತಾಂ ಪಯಸಾಭಿ
ರಾಷ್ಟ್ರೇಣ ವರ್ಧತಾಮ್ |
ರಯ್ಯಾ ಸಹಸ್ರ ವರ್ಚಸೇ
ಮಾವಸ್ತಾಮನು ಪಕ್ಷಿತೌ ||
ತ್ವಷ್ಟಾಜಾಯಾಮ ಜನಯ
ತ್ವಷ್ಟಾಸ್ಯೈ ತ್ವಾಂ ಪತಿಮ್ |
ತ್ವಷ್ಟಾಸಹಸ್ರ ಮಾಯೂಂಷಿದೀರ್ಘ
ಮಾಯುಃ ಕೃಣೋತುವಾಮ್ ||

ಈ ಸುಸಂಸ್ಕೃತ ಅನ್ನದಿಂದ ಈ ವರನು ಪ್ರಗತಿಪಥದಲ್ಲಿ ಮುನ್ನಡೆಯಲಿ. ಈ ವರನು ತಾನು ಹೊಂದಿದ ವಧುವನ್ನು ಷಡ್ರಸಾತ್ಮಕ ಅನ್ನದಿಂದ ಪೋಷಿಸಿ ಮುಂದೆ ಸಾಗಲಿ. ರಾಷ್ಟ್ರಹಿತವನ್ನು ಸಾಧಿಸುತ್ತ ಈ ಹಾಲಿನಿಂದ ಮುಂದೆ ಸಾಗಲಿ. ಈ ವಧೂವರರು ಸಹಸ್ರಾರು ಬಗೆಯ ಧನ ಕನಕ ಸಂಪತ್ತಿನಿಂದ ಮೆರೆಯಲಿ. ಎಲೈ ವರನೇ! ಈ ವಧುವನ್ನು ನಿನಗೋಸ್ಕರ ತ್ವಷ್ಟಾ ನಾಮಕ ಜಗದೀಶ್ವರನು ಸೃಷ್ಟಿಸಿರುವನು. ಎಲೈ ವಧುವೇ! ತ್ವಷ್ಟಾ ನಾಮಕ ಜಗದೀಶ್ವರನೇ ನಿನಗೋಸ್ಕರ ಈ ವರನನ್ನು ನಿರ್ಮಾಣಮಾಡಿ ಅನುಗ್ರಹಿಸಿರುವನು. ಆ ಜಗದೀಶ್ವರನೇ ಸಹಸ್ರ ಶಕ್ತಿಗಳಿಂದ ಯುಕ್ತವಾದ ಜೀವನವನ್ನು ನೀಡಿ ನಿಮ್ಮನ್ನು ಪೋಷಿಸಲಿ, ಹಾಗೂ ನಿಮಗೆ ದೀರ್ಘಾಯುಷ್ಯವನ್ನು ಕರುಣಿಸಲಿ.

ಸ್ತ್ರೀ ಧರ್ಮವನ್ನು ಬೋಧಿಸುತ್ತ ಸುಭಾಷಿತ ನೀತಿ ಶಾಸ್ತ್ರವು ಹೇಳುತ್ತದೆ ಏನೆಂದರೆ:—

ಶ್ಲೋ|| ಕಾರ್ಯೇಷು ದಾಸೀ ಕರ್ಣೇಷು ಮಂತ್ರೀ । ರೂಪೇಚ ಲಕ್ಷ್ಮೀ ಕ್ಷಮಯಾ ಧರಿತ್ರೀ || ಭೋಜ್ಯೇಷು ಮಾತಾ ಶಯನೇಷು ರಂಭಾ ! ಷಾಡ್ಗುಣ್ಯ ಭಾರ್ಯಾ ಕುಲಮುದ್ಧರಿತ್ರೀ ||

ಪತಿವ್ರತೆಯಾದ ಸ್ತ್ರೀಯು ಪತಿಗೆ ಸೇವೆಯಲ್ಲಿ ದಾಸಿಯಂತೆಯೂ, ಕರ್ತವ್ಯವನ್ನು ತಿಳಿಸುವುದರಲ್ಲಿ ಮಂತ್ರಿಯಂತೆಯೂ, ರೂಪದಲ್ಲಿ ಲಕ್ಷ್ಮಿಯಂತೆಯೂ, ಕ್ಷಮಾಗುಣದಲ್ಲಿ ಧರಿತ್ರಿಯಂತೆಯೂ, ಅನ್ನಪಾನಾದಿ ಶುಶ್ರೂಷೆಯಲ್ಲಿ ತಾಯಿಯಂತೆಯೂ, ಶಯನ ಕಾಲದಲ್ಲಿ ಅಪ್ಸರೆಯಂತೆಯೂ—ಹೀಗೆ ಆರು ಗುಣವಿಶೇಷಗಳಿಂದ ಕೂಡಿದವಳಾಗಿರತಕ್ಕದ್ದು.

ಅಲ್ಲದೆ ದುರ್ವ್ಯವಹಾರವುಳ್ಳ ಸ್ತ್ರೀಯರ ಕುರಿತಾಗಿ ಹೇಳಿರುವುದೇನೆಂದರೆ:—

ಶ್ಲೋ|| ವಿವಾದ ಶೀಲಾಂ ಸ್ವಯಮರ್ಥ ಚೋರಿಣೀಂ ಪರಾನುಕೂಲಾಂ ಪರಿಹಾಸ ಭಾಷಿಣೀಂ | ಅಗ್ರಾಶಿನೀಮನ್ಯ ಗೃಹ ಪ್ರವೇಶಿನೀಂ ತ್ಯಜಂತಿ ಭಾರ್ಯಾಂ ದಶಪುತ್ರ ಮಾತರಂ ||

ಜಗಳಾಡುವ ಸ್ವಭಾವವುಳ್ಳವಳು, ಮನೆಯ ಸೊತ್ತನ್ನು ಅಪಹರಿಸುವವಳು, ಅನ್ಯ ಪುರುಷರಿಗೆ ಅನುಕೂಲೆಯಾಗಿರುವವಳು, ಪತಿಯನ್ನು ಪರಿಹಾಸ ಮಾಡುವವಳು, ಪತಿಗಿಂತಲೂ ಮುಂಚಿತವಾಗಿ ಭುಂಜಿಸುವವಳು, ಅನ್ಯರ ಗೃಹಗಳನ್ನು ಪ್ರವೇಶಿಸುವವಳು—ಇಂಥಾ ಪತ್ನಿಯು ಹತ್ತು ಮಕ್ಕಳ ತಾಯಿಯಾಗಿದ್ದರೂ, ಅವಳನ್ನು ತ್ಯಜಿಸಬೇಕು.

ಪ್ರಜಾಕಾಮನಾದ ಗೃಹಸ್ಥಾಶ್ರಮೀ ಪುರುಷನ ಅರ್ಧ ದೇಹವು ವಿಧ್ಯುಕ್ತವಾಗಿ ವಿವಾಹವಾದ ಧರ್ಮಪತ್ನಿಯಿಂದಲೇ ಪೂರ್ಣವಾಗುವುದು. ಆ ಧರ್ಮಪತ್ನಿಯೇ ಗೃಹಿಣಿಯು. ಆ ಗೃಹಿಣಿಯೇ ನಿಜವಾದ ಗೃಹವೆಂತ ಶಾಸ್ತ್ರ ಸಮ್ಮತವಿದೆ. ಅದನ್ನು ಹೊಂದಿದವನೇ ಗೃಹಸ್ಥನು. ಗೃಹಸ್ಥಾಶ್ರಮದಲ್ಲಿ ಪತಿ-ಪತ್ನಿಯರ ಅನ್ಯೋನ್ಯತೆಯು ಅವರ ಆಜೀವಪರ್ಯಂತವಿರತಕ್ಕದ್ದೆಂದು ಧಾರ್ಮಿಕನಾದ ಮನುಮಹರ್ಷಿಯ ಆಜ್ಞೆ. ತಾತ್ವಿಕ ದೃಷ್ಟಿಯಿಂದಲೂ, ಮನುವಿನ ಆಜ್ಞೆಯಂತೆಯೂ ಪತಿ-ಪತ್ನಿಯರ ಅನ್ಯೋನ್ಯ ಸಂಬಂಧವು ಒಂದು ದೇಹದ ಬಲ-ಎಡ ಭಾಗಗಳಂತೆ ಅವಿಚ್ಛಿನ್ನವಾದುದೆಂಬ ವಿವೇಕವು ಯಾವಾತನಲ್ಲಿ ಉದಯವಾಗುವುದೋ ಆತನು ವಿವಾಹವಿಚ್ಛೇದನ, ಪುನರ್ವಿವಾಹ, ಅಸವರ್ಣ ವಿವಾಹೇತ್ಯಾದಿಗಳಿಗೆ ಎಂದೆಂದಿಗೂ ಹಾತೊರೆಯಲಾರನು ಮನುಸ್ಮೃತಿಯಲ್ಲಿ.

"ಶಾಸ್ತ್ರೋಕ್ತ ವಿವಾಹಗಳನ್ನು ತ್ಯಜಿಸಿ, ಉಳಿದ ತುಚ್ಛ ವಿವಾಹಗಳಿಂದ ಉತ್ಪನ್ನವಾದ ಪ್ರಜೆಯು ಕ್ರೂರವಾಗಿಯೂ, ಅನೃತವಾದಿಯಾಗಿಯೂ, ವೇದ ವಿದ್ವೇಷ ಶೀಲನಾಗಿಯೂ, ಧರ್ಮ ದ್ವೇಷಿಯಾಗಿಯೂ ಆಗುವನು. ಹೀನ ಕುಲದ ಸ್ತ್ರೀಯೊಂದಿಗೆ ಮೋಹಕ ವಿವಾಹ ಮಾಡಿಕೊಂಡರೆ ಆ ಎಲ್ಲಾ ಕುಲಗಳೂ, ಎಲ್ಲಾ ಸಂತತಿ ಸಹಿತವಾಗಿ ಮಲಿನಗೊಳ್ಳುವುವು. ಹೀನ ಕುಲದ ಸ್ತ್ರೀಯೊಂದಿಗೆ ವಿವಾಹವಾದವನಿಗೆ ದೇವ, ಪಿತೃ, ಅತಿಥಿ ಪ್ರಧಾನವಾಗಿರುವಂಥ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗದು. ಅವನ ಕೈಯಿಂದ ಪ್ರಾಪ್ತವಾದ ಹವ್ಯ ಕವ್ಯಗಳನ್ನು ದೇವತೆಗಳೂ, ಪಿತೃಗಳೂ ಸ್ವೀಕರಿಸಲಾರರು, ಅತಿಥಿಗಳೂ, ಇಷ್ಟಮಿತ್ರ, ಬಂಧುಗಳೂ ಅವನ ಮನೆಗೆ ಬರಲಾರರು. ಈ ಪ್ರಕಾರ ಎಲ್ಲಾ ಸತ್ಕ್ರಿಯೆಗಳ ಲೋಪನಾಗಿಯೂ ನಿಂದಿತನಾಗಿಯೂ, ಪತಿತನಾಗಿಯೂ, ಅವನು ಸ್ವರ್ಗವನ್ನು ಸಂಪಾದಿಸಲಾರದೆ ನರಕದಲ್ಲಿ ಬೀಳುವನು." ಎಂದು ಹೇಳಿದೆ.

ಭಗವದ್ಗೀತೆಯ ಪ್ರಥಮಾಧ್ಯಾಯದಲ್ಲಿ ಹೇಳಿರುವುದೇನೆಂದರೆ: -

"ಜಾತಿ ಮಿಶ್ರಣವು, ಆ ಜಾತಿಯನ್ನು ಹಾಳು ಮಾಡಿದವರಿಗೂ, ಜಾತಿಗೂ ನರಕಕ್ಕೇ ದಾರಿಯಾಗುವುದು. ಅದರಿಂದ ಕುಲನಾಶಕರ ಹಿರಿಯರು (ಪಿತೃ, ಪಿತಾಮಹ, ಪ್ರಪಿತಾಮಹಾದಿಗಳು) ಪಿಂಡ ಪ್ರದಾನವೂ, ಜಲತರ್ಪಣವೂ ಇಲ್ಲದವರಾಗಿ ಕೆಳಕ್ಕೆ ಉರುಳುವರು. ಜಾತಿ ಮಿಶ್ರಣವನ್ನು ಮಾಡುವ ಈ ಕುಲ ನಾಶಕರ ದೋಷಗಳಿಂದಾಗಿ ಎಷ್ಟೋ ಹಿಂದಿನಿಂದ ಪಾರಂಪರ್ಯವಾಗಿ ಬಂದಿರುವ ಕುಲಧರ್ಮಗಳು ನಿರ್ಮೂಲವಾಗುತ್ತವೆ.'

ಇಂತಹ ಸಂಕರ ಪ್ರಜೆಯು ತನ್ನ ಗೋತ್ರ ಸೂತ್ರ ಪ್ರವರ ಯಾವುದೆಂದು ಹೇಳಬಲ್ಲನು? ಯಾವ ಕುಲದವನೆಂದು ಅಭಿಮಾನ ಪಡಬಲ್ಲನು? ಯಾವ ಪಿತೃ, ಪಿತಾಮಹ, ಪ್ರಪಿತಾಮಹಾದಿಗಳಿಗೆ ಪಿಂಡೋದಕವನ್ನರ್ಪಿಸಬಲ್ಲನು?—ಈ ಅಪಚಾರವು ಅಕ್ಷಮ್ಯವಲ್ಲದಿನ್ನೇನು!

ವಿವಾಹದಿಂದ ಮುಖ್ಯವಾಗಿ ವಂಶಾಭಿವೃದ್ಧಿ ಮತ್ತು ಪ್ರಾಕೃತಿಕವಾಗಿ ಬಂದಿರುವ ಸ್ವಾಭಾವಿಕ ಇಚ್ಛೆಯನ್ನು ನಿಯಮಿತ ರೀತಿಯಲ್ಲಿ ಪೂರ್ತಿಗೊಳಿಸುವ ಎರಡು ವಿಧದ ಪ್ರಯೋಜನಗಳಿವೆ. ಸ್ತ್ರೀಪುರುಷರಲ್ಲಿ ಪರಸ್ಪರ ಆಕರ್ಷಣೀಯವಾದ ಒಂದು ಸೂಕ್ಷ್ಮ ತತ್ವವನ್ನೂ, ಅದಕ್ಕೆ ಪೂರಕವಾಗಿ ಬಾಹ್ಯಸೌಂದರ್ಯವನ್ನೂ ಜಗತ್ಕರ್ತನು ಅನುಗ್ರಹಿಸಿರುವನು. ಅದರಲ್ಲೂ ಸ್ತ್ರೀಯರ ಸೌಂದರ್ಯ ರಚನೆ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½% ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು- "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಭಾರತದ ವಿದ್ಯಾರತ್ನ

ಈಶ್ವರಚಂದ್ರ ವಿದ್ಯಾಸಾಗರ

ಬರೆದವರು
ಶ್ರೀ ಬೇಕಲ್ ನರಸಿಂಗ ರಾವ್

ಬಂಗಾಳಿ ಸಾಹಿತ್ಯಕ್ಕೆ ಆಧುನಿಕ ರೂಪವಿತ್ತ ವಿದ್ಯಾಸಾಗರರು ವಿದ್ಯಾಸಾಗರರೇ ಆಗಿದ್ದರು. ಇವರ ಕ್ರಿಯಾ ತತ್ಪರತೆ ಭಾರತೀಯರಿಗೆ ಸದಾ ಸ್ಫೂರ್ತಿದಾಯಕವಾಗಿದೆ.

ಭಾರತವರ್ಷ ಶಿಕ್ಷಣ ತಜ್ಞರಿಗೂ, ಸಮಾಜ ಸುಧಾರಕರಿಗೂ ಏನೂ ಕೊರತೆಯಿಲ್ಲ. ಆದರೂ ಮಾನವ ರತ್ನವಾದ ಈಶ್ವರಚಂದ್ರ ವಿದ್ಯಾಸಾಗರರ ಹೆಸರೆತ್ತುತ್ತಲೆ ಉತ್ಸಾಹ, ಆದರ್ಶ ಜೀವನ, ದುಡಿಯುವ ಪ್ರೇರಣೆ, ನೂತನ ಉತ್ತೇಜನ ದೊರೆಯುತ್ತವೆ. ಈಶ್ವರಚಂದ್ರರ ಜೀವನವು ಆದರ್ಶವೂ ಅನುಕರಣೀಯವೂ ಆಗಿದೆ ಎಂದರೆ ಉತ್ಪ್ರೇಕ್ಷೆಯಾಗದು. ಜನನದಿಂದ ತೊಡಗಿ ಮೃತ್ಯು ಪರ್ಯಂತ ಜೀವನದ ಪ್ರತಿಯೊಂದು ಕ್ಷಣವನ್ನೂ ಲೋಕಸೇವೆಗೆ, ಪರೋಪಕಾರಕ್ಕೆ ವಿನಿಯೋಗಿಸಿ, ತಾನೇ ಹಸಿದಿದ್ದರೂ ರೋಗಗ್ರಸ್ತ ಬಡವರ ಹೊಟ್ಟೆಯುರಿಯನ್ನು ತಣಿಸಿ, ಸ್ವತಃ ಅರೆಬತ್ತಲೆ ಇದ್ದು ತನ್ನ ಬಟ್ಟೆಯನ್ನು ಬಡವರ ಮೈ ಮುಚ್ಚಲು ದಾನಮಾಡಿ, ಸ್ವತಃ ದುಃಖಿಯಾದರೂ ದುಃಖಗ್ರಸ್ತರ ಕಷ್ಟವನ್ನೋಡಿಸಲು ಅಹೋ—ರಾತ್ರಿ ದುಡಿದ ವಿದ್ಯಾಸಾಗರರು ವಂದನೀಯರು, ಅವರ ಹೆಸರು ಸ್ತುತ್ಯರ್ಹ. ಶ್ರೀಯುತರು ಒಬ್ಬ ಸಾಹಸಿ, ಸ್ವಾವಲಂಬಿ, ಕರ್ತವ್ಯನಿಷ್ಠ ಹಾಗೂ ಕರ್ಮಶೀಲ ವ್ಯಕ್ತಿಯಾಗಿದ್ದರು. ದೀನ-ದರಿದ್ರರನ್ನು ಕಾಣುತ್ತಲೆ ಅವರ ಹೃದಯ ಕರಗಿ ನೀರಾಗುವುದು ಮತ್ತು ಆ ದರಿದ್ರ ನಾರಾಯಣನ ಸೇವೆಯಲ್ಲಿ ತಮ್ಮ ತನು-ಮನ-ಧನಗಳನ್ನು ಅರ್ಪಿಸತೊಡಗುತ್ತಿದ್ದರು. ಇದೇ ಕಾರಣ ಪ್ರತಿಯೊಬ್ಬ ಭಾರತೀಯನೂ ಅವರ ಹೆಸರನ್ನು ಆದರ ಪೂರ್ವಕ ಎತ್ತುತ್ತಾನೆ.

ಈಶ್ವರ್ ಚಂದ್ರರ ಜನನವು ೧೮೨೦ನೇ ಇಸವಿಯಲ್ಲಿ ಬಂಗಾಲ ಪ್ರಾಂತದ ಮೇದಿನಿಪುರ ಜಿಲ್ಲೆಯ ವೀರಸಿಂಹ ಎಂಬ ಹಳ್ಳಿಯಲ್ಲಿ ಆಯಿತು. ಇವರ ಪಿತ ಶ್ರೀ ಠಾಕುರ್‌ದಾಸ್ ವಂದ್ಯೋಪಾಧ್ಯಾಯರು ನಿರ್ಧನರಾದರೂ ಹಸನ್ಮುಖಿ ಘನವಂತ ಬ್ರಾಹ್ಮಣರಾಗಿದ್ದರು. ಆ ಕುಟುಂಬದಲ್ಲಿ ನ್ಯಾಯ, ಕರ್ತವ್ಯನಿಷ್ಠೆ, ಪರೋಪಕಾರ, ದಯೆ, ನಮ್ರತೆ, ಪರಿಶ್ರಮ ಹಾಗೂ ಸ್ವಾವಲಂಬನ ಮುಂತಾದ ಗುಣಗಳು ಪರಂಪರಾಗತವಾಗಿದ್ದುವು. ಆದುದರಿಂದಲೇ ಈಶ್ವರಚಂದ್ರರೂ ಸಮಸ್ತ ಗುಣಸಂಪನ್ನರಾದರು.

ಲಾಲನೆಯಿಂದ ಮುದ್ದಿಸಿ ಪಾಲನೆ-ಪೋಷಣೆ ಮಾಡಿದ್ದರಿಂದ ಬಾಲಕ ಈಶ್ವರ ಭಾರೀ ಚಂಚಲನೂ, ತುಂಟನೂ ಆದನು. ಐದು ವರ್ಷ ಪ್ರಾಯವಾಗುತ್ತಲೆ ಇವನನ್ನು ಗ್ರಾಮದ ಪಾಠಶಾಲೆಯಲ್ಲಿ ದಾಖಲು ಮಾಡಲಾಯಿತು. ಚಿಕ್ಕಂದಿನಲ್ಲೇ ಈತನ ಬುದ್ಧಿ ಪ್ರಖರತೆಯೂ, ಸ್ಮರಣಶಕ್ತಿಯೂ ತೀವ್ರವಾಗಿತ್ತು. ತನ್ನ ಯೋಗ್ಯತೆ ಹಾಗೂ ಬುದ್ಧಿಬಲದಿಂದ ಈಶ್ವರ್ ಮೂರು ವರ್ಷಗಳಲ್ಲಿ ಶಾಲೆಯ ಶಿಕ್ಷಣ ಮುಗಿಸಿದನು. ಕಲ್ಕತ್ತದಲ್ಲಿ ಎಂಟು ರೂಪಾಯಿ ಮಾಸಿಕ ವೇತನದಲ್ಲಿ ದುಡಿಯುತ್ತಿದ್ದ ತಂದೆಯೊಡನೆ ಈಶ್ವರನೂ ವಿದ್ಯಾರ್ಜನೆಗೆ ತೆರಳಿದನು. ಅಲ್ಲಿ ಒಂದು ಶಾಲೆಯಲ್ಲಿ ಈಶ್ವರನನ್ನು ಸೇರಿಸಿದರು. ಕೇವಲ ಮೂರು ತಿಂಗಳಲ್ಲೆ ಅಲ್ಲಿಯೂ ವಿದ್ಯೆಯನ್ನು ಸಮಾಪ್ತಿಗೊಳಿಸಿದರು! ತದನಂತರ ೧೮೨೯ ಜೂನ್ ಮಾಹೆಯಲ್ಲಿ ಈಶ್ವರನನ್ನು ಸಂಸ್ಕೃತ ಕಾಲೇಜಿಗೆ ಸೇರಿಸಲಾಯಿತು. ಅಲ್ಲಿ ವ್ಯಾಕರಣದ ಮೂರನೇ ತರಗತಿಯಲ್ಲಿ ಇವನು ಓದುತ್ತಿದ್ದನು. ಇವನ ಬುದ್ಧಿ ಪ್ರಖರತೆಯಿಂದ ಪ್ರಥಮ ವಾರ್ಷಿಕ ಪರೀಕ್ಷೆಯಲ್ಲೇ ರೂಪಾಯಿ ೫|- ವಿದ್ಯಾರ್ಥಿವೇತನ ದೊರೆಯಿತು. ತನ್ನನ್ನು ಇತರ ವಿದ್ಯಾರ್ಥಿಗಳು ಮೀರಿಸದಂತೆ ಈಶ್ವರನು ಸದಾ ಪ್ರಯತ್ನಶೀಲನಾಗಿದ್ದನು. ಸದಾ ತನ್ನ ಸ್ವಾತಂತ್ರ್ಯವನ್ನೂ ಗೌರವವನ್ನೂ ಒಂದುಗೂಡಿಸಲು ಯತ್ನಿಸುತ್ತಿದ್ದನು.

ಈಶ್ವರನ ಕುಟುಂಬ ಬಹಳೇ ದೊಡ್ಡದಿದ್ದು ತಂದೆಯವರು ನಿರ್ಧನರಾಗಿದ್ದರು. ಕೆಲವೊಮ್ಮೆ ಇಡೀ ಕುಟುಂಬವೇ ಉಪವಾಸಬೀಳುತ್ತಿತ್ತು. ಈಶ್ವರನೂ ಎಂದಾದರೂ ವೇತನ ದೊರೆತಲ್ಲಿ ಅದನ್ನು ತಮ್ಮ ಸಹೋದರರಿಗೋಸ್ಕರ ವಿನಿಯೋಗಿಸುತ್ತಿದ್ದನು. ಯಾರಾದರೂ ಸಹಪಾಠಿ ಅನಾರೋಗ್ಯ ಬಿದ್ದಲ್ಲಿ ಈಶ್ವರನು ಮದ್ದು ತರುವ ವ್ಯವಸ್ಥೆ ಮಾಡುತ್ತಿದ್ದನು. ಸ್ವತಃ ದಪ್ಪವಾದ ದೊರಗು ಬಟ್ಟೆಯುಟ್ಟು ಬಡ ಮಿತ್ರರಿಗೆ ಒಳ್ಳೆಯ ಬಟ್ಟೆಯನ್ನು ದೊರಕಿಸಿಕೊಡುತ್ತಿದ್ದನು. ಈ ರೀತಿ ಪರೋಪಕಾರ, ತ್ಯಾಗದ ಮಹಾ ಗುಣಗಳು ಬಾಲ್ಯದಲ್ಲಿ ಇವನಲ್ಲಿ ವಿಕಸಿತವಾಗತೊಡಗಿದುವು.

ಹನ್ನೆರಡು ವರ್ಷ ಪ್ರಾಯದಲ್ಲೇ "ವ್ಯಾಕರಣ ವಿದ್ಯೆ"ಯನ್ನು ಮುಗಿಸಿ ಇವರು "ಸಾಹಿತ್ಯ ಪರೀಕ್ಷೆ"ಗೋಸ್ಕರ ಓದತೊಡಗಿದರು. ಸಾಹಿತ್ಯದ ವಾರ್ಷಿಕ ಪರೀಕ್ಷೆಯಲ್ಲಿ ಸರ್ವಪ್ರಥಮವಾಗಿ ಉತ್ತೀರ್ಣರಾದ ಇವರು ವಿದ್ಯಾರ್ಥಿ ವೇತನಕ್ಕೆ ಅರ್ಹರಾದರು. ತಮ್ಮ ಅಸಾಧಾರಣ ಪ್ರತಿಭೆಯಿಂದ, ಯೋಗ್ಯತೆಯಿಂದ, ಎಲ್ಲರನ್ನೂ ಚಕಿತಗೊಳಿಸಿದರು. ಸಾಹಿತ್ಯ ವಿದ್ಯೆಯನ್ನು ಮುಗಿಸಿ ೧೫ ವರ್ಷ ಪ್ರಾಯದ ಈಶ್ವರ್ ಅಲಂಕಾರ ಶ್ರೇಣಿಯಲ್ಲಿ ಓದತೊಡಗಿದರು. ಒಂದೇ ವರ್ಷದೊಳಗಾಗಿ ಅಲಂಕಾರ ಗ್ರಂಥಗಳನ್ನೆಲ್ಲಾ ಓದಿ ಮುಗಿಸಿದರು. ಅನಂತರ ೬ ತಿಂಗಳೊಳಗಾಗಿ ಧರ್ಮಶಾಸ್ತ್ರ ಪರೀಕ್ಷೆಯನ್ನು ಪಾಸು ಮಾಡಿ ವೇದಾಂತ ಪಠಣಕ್ಕೆ ತೊಡಗಿದರು.

ಮನೆಯ ಸ್ಥಿತಿ ಉತ್ತಮವಿಲ್ಲದಿದ್ದರೂ, ಹೊಟ್ಟೆ ತುಂಬ ಊಟ ದೊರಕದಿದ್ದರೂ, ಮನೆಯಲ್ಲಿ ಪಾತ್ರೆ ತೊಳೆಯಬೇಕಿದ್ದರೂ ಈಶ್ವರ ದರ್ಜೆಯಲ್ಲಿ ಕಠಿಣ ಪರಿಶ್ರಮದಿಂದ ಸರ್ವಪ್ರಥಮರಾಗಿ ಉತ್ತೀರ್ಣರಾಗಿ 'ನ್ಯಾಯ ಮತ್ತು ತತ್ವ'ದ ಪರೀಕ್ಷೆಯಲ್ಲಿ ಒಂದನೆಯ ಸ್ಥಾನ ಗಳಿಸಿದರು. ಈ ಕಾರಣದಿಂದ ಅವರಿಗೆ ೧೦೦ ರೂಪಾಯಿ ಬಹುಮಾನವೂ ದೊರಕಿತು.

ಅನೇಕ ಕಷ್ಟಗಳನ್ನೂ, ವಿಘ್ನಗಳನ್ನೂ ಗೆದ್ದು ವಿದ್ಯಾಸಾಗರ ಪ್ರತ್ಯೇಕ ವಿಷಯದಲ್ಲಿ ಸಫಲತೆಯನ್ನು ಹೊಂದುತ್ತಿದ್ದರು. ಒಂದೊಂದು ವಿಷಯದಲ್ಲಿ ಯಾರಾದರೂ ಅದ್ವಿತೀಯನಿರುತ್ತಾನೆ. ಆದರೆ ಪ್ರತಿಯೊಂದೂ ವಿಷಯದಲ್ಲೂ ಅದ್ವಿತೀಯನು ಭಾರೀ ವಿರಳವಾಗಿಯೇ ಕಾಣಬರುತ್ತಾನೆ. ೧೮೪೧ರಲ್ಲಿ ೨೧ ವರ್ಷದ ಈಶ್ವರ್‌ಗೆ ಕಾಲೇಜ್‌ನಿಂದ 'ವಿದ್ಯಾಸಾಗರ್' ಪ್ರಶಸ್ತಿ ದೊರಕಿತು.

೧೮೪೧ರಲ್ಲಿ ಕಾಲೇಜ್ ಶಿಕ್ಷಣ ಮುಗಿಯುತ್ತಲೆ ಮಾರ್ಷಲ್ ಮಹಾಶಯನು ಅವರಿಗೆ ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ಅಧ್ಯಾಪಕರ ಹುದ್ದೆಯಿತ್ತನು. ಉದ್ಯೋಗದಲ್ಲಿರುವಾಗಲೇ ವಿದ್ಯಾಸಾಗರರು ಹಿಂದಿ ಕಲಿಯಲೂ ಶುರು ಮಾಡಿದರು. ಅದೇ ಸಮಯದಲ್ಲಿ ಅವರು ತನ್ನೊಬ್ಬ ಮಿತ್ರನಿಗೆ ಶಿಕ್ಷಣವೀಯಲು ಒಂದೇ ದಿನದೊಳಗಾಗಿ ಒಂದು ವ್ಯಾಕರಣವನ್ನು ರಚಿಸಿದನು. ಈ ವ್ಯಾಕರಣವೇ ಅನಂತರ 'ಉಪಕ್ರಮಣಿಕಾ' ಎಂಬ ಹೆಸರಲ್ಲಿ ಪ್ರಕಾಶಿತವಾಗಿ ಪ್ರಸಿದ್ಧಿಗೆ ಬಂತು.

೧೮೪೪ರಲ್ಲಿ ಹಾರ್ಡಿಂಗ್ ಪ್ರಭುಗಳ ಮುಖಾಂತರ ಬಂಗಾಳದಲ್ಲಿ ಬಂಗಾಳೀ ಭಾಷೆಯ ೧೦೧ ಶಾಲೆಗಳನ್ನು ವಿದ್ಯಾಸಾಗರರು ತೆರೆದರು. ಇಲ್ಲಿ ಮಾತೃಭಾಷೆಯ ಶಿಕ್ಷಣವು ಮಕ್ಕಳಿಗೆ ದೊರೆಯಿತು. ಈ ಶಾಲೆಗಳಲ್ಲಿ ವಿದ್ಯಾ ವ್ಯವಸ್ಥೆಯ ಕಾರ್ಯವನ್ನೂ ವಿದ್ಯಾಸಾಗರರೇ ಸ್ವತಃ ಮಾಡತೊಡಗಿದರು. ಈ ಎಲ್ಲಾ ಕಾರ್ಯಗಳಲ್ಲಿ ಭಾಗವಹಿಸಿ ಸಮಯ ದೊರೆತಾಗಲೆಲ್ಲ ದೀನ-ದುಃಖಿಗಳ ಸೇವೆ ಸಹಾಯ ಮಾಡಿದರು. ಇದರಿಂದಲೂ ಸಮಯ ಉಳಿಸಿ ಫೋರ್ಟ್ ವಿಲಿಯಂ ಮಹಾಶಯರಿಗೆ ಬಂಗಾಳಿ, ಹಿಂದಿ ಹಾಗೂ ಸಂಸ್ಕೃತ ಕಲಿಸುತ್ತಿದ್ದರು!

ಇದಾದ ಕೆಲವು ದಿನಗಳಲ್ಲೆ ಕಾಲೇಜಿನ ಕಾರ್ಯ ಪ್ರಣಾಲಿಯಲ್ಲಿ ವಿಚಾರ ಭೇದ ಉಂಟಾದ ಕಾರಣ ಇವರು ತಮ್ಮ ಹುದ್ದೆಯನ್ನು ತ್ಯಜಿಸಿದರು. ದೊಡ್ಡ ದೊಡ್ಡ ಅಧಿಕಾರಿಗಳನ್ನು ಭೇಟಿಯಾಗಿದ್ದರೂ ತಮ್ಮ ವಿಶ್ವಾಸದಿಂದ ಅವರು ದೂರವಾಗಲಿಲ್ಲ. ಜನರು ನೌಕರಿ ಬಿಟ್ಟ ಕಾರಣ ಕೇಳುತ್ತಲೆ ವಿದ್ಯಾಸಾಗರರು ಈ ರೀತಿ ಉತ್ತರ ಕೊಡುತ್ತಿದ್ದರು—"ಆಲೂ—ಟೊಮೆಟೊ ಮಾರುವೆನು, ಕೋಮಟಿಯ ವ್ಯಾಪಾರ ಮಾಡುವೆನು, ಆದರೆ ನನ್ನ ಘನತೆಗೆ ಕುಂದು ತರುವಂತಹ ಕೆಲಸವನ್ನೆಂದಿಗೂ ಮಾಡಲಾರೆ". ವಿದ್ಯಾಸಾಗರರು ವಿನಮ್ರರಾಗಿದ್ದಷ್ಟೆ ಉದಾರರಾಗಿದ್ದರು, ಸ್ವಾವಲಂಬಿಯಾಗಿದ್ದಷ್ಟೆ ಸ್ವಾಭಿಮಾನಿಯೂ ಆಗಿದ್ದರು.

ಉದ್ಯೋಗವನ್ನು ಬಿಟ್ಟ ಕಾರಣ ಇವರು ಕೆಲವು ದಿನ ನಿರುದ್ಯೋಗಿಗಳಾಗಿದ್ದರು. ಆದರೆ ಶೀಘ್ರವೇ ಕೆಲವು ಮಿತ್ರರ ಆಗ್ರಹಗಳಿಗಾಗಿ ವಿದ್ಯಾಸಾಗರರು ಸಂಸ್ಕೃತ ಕಾಲೇಜಿನ ಸಾಹಿತ್ಯ ವಿಭಾಗದಲ್ಲಿ ಅಧ್ಯಾಪಕರಾಗಿ ನೇಮಿತವಾದರು. ಈ ಸ್ಥಾನದಲ್ಲಿದ್ದು ಸಂಸ್ಕೃತದ ದುರ್ಲಭ ಗ್ರಂಥಗಳ ಜೀರ್ಣೋದ್ಧಾರ ಮಾಡಿದರು. ಘೋರ ಆಂದೋಲನ ನಡೆಸಿ ಶೂದ್ರರಿಗೂ ಸಂಸ್ಕೃತ ಕಾಲೇಜಿಗೆ ಪ್ರವೇಶ ದೊರಕಿಸಿ ಕೊಟ್ಟರು. ಬಡ ವಿದ್ಯಾರ್ಥಿಗಳಿಗೆ 2: ಶುಲ್ಕ ವಿಧಿಯನ್ನೀಯುವ ರೂಢಿಯನ್ನು ಆಚರಣೆಗೆ ತಂದರು. ಸಂಸ್ಕೃತ ಕಾಲೇಜಿನಲ್ಲಿ ಇಂಗ್ಲೀಷ್ ಶಿಕ್ಷಣವನ್ನು ಕಡ್ಡಾಯ ಮಾಡಿದರು. ಹಲವಾರು "ನಾರ್ಮಲ್ ಸ್ಕೂಲ್"ಗಳನ್ನು ತೆರೆದು ಅದರ ನಿರೀಕ್ಷಣೆಯ ಭಾರವನ್ನೂ ತಾವೇ ಹೊತ್ತರು.

೧೮೫೭ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯ ಸ್ಥಾಪನೆಯಾಗುತ್ತಲೇ ಶ್ರೀಯುತರು ನಾಲ್ಕು ಸಭೆ ದಲ್ಲಿ ಪರೀಕ್ಷಕರಾಗಿ ದುಡಿದರು. ಪರೀಕ್ಷಾ ಸಮಿತಿಯ ಸದಸ್ಯರಾಗಿ ಇವರಿಗೆ ೫೦೦ ರೂಪಾಯಿ ವೇತನ ದೊರೆಯಿತು. ತಮ್ಮ ನಿಶ್ಚಯದ ಮೇಲೆ ಸದೈವ ದೃಢರಾಗಿದ್ದರು ಇವರು. ಲೌಕಿಕವಾದ ಯಾವ ಶಕ್ತಿಗೂ ಇವರನ್ನು ಕಾರ್ಯ ದಕ್ಷತೆಯಿಂದ ವಿಚಲಿತಗೊಳಿಸಲಾಗಲಿಲ್ಲ. ಒಂದು ಬಾರಿ ಕಾಲೇಜಿನ ಡೈರೆಕ್ಟರ್ ಯಂಗ್ ಮಹಾಶಯರು ಇವರಲ್ಲಿ ಶಾಲೆಯ ಒಂದು ರಿಪೋರ್ಟ್ ಬರೆಯಲು ಕೇಳಿದರು. ಆದರೆ ಈ ಕೆಲಸ ಮಾಡಲು ಶ್ರೀಯುತರು ಒಪ್ಪದ ಕೊನೆಗೆ ನೌಕರಿಗೆ ತಿಲಾಂಜಲಿಯಿತ್ತರು.

೧೮೬೫ರಲ್ಲಿ ಬಂಗಾಲದಲ್ಲಿ ಘೋರ ಬರಗಾಲ ತಲೆದೋರಿತು. ಅಹರ್ನಿಶಿ ವಿದ್ಯಾಸಾಗರರು ಬಡಬಗ್ಗರ ಸೇವೆಯಲ್ಲಿ ನಿರತರಾದರು. ಸ್ವತಃ ತಮ್ಮ ಗ್ರಾಮದಲ್ಲಿ ಅನ್ನ ಭಂಡಾರವನ್ನು ತೆರೆದರು. ಅಸ್ವಸ್ಥರ, ರೋಗಗ್ರಸ್ತರ ಸೇವೆಯಲ್ಲಿ ನಿರತರಾಗಿ ಹಲವಾರು ಜನರ ಪ್ರಾಣ ರಕ್ಷಣೆಯ ಪುಣ್ಯ ಗಳಿಸಿದರು.

ಒಂದು ದಿನ ಬೆಳಿಗ್ಗೆ ಒಬ್ಬ ಭಂಗಿಯು ತನ್ನ ಪತ್ನಿಗೆ ಪ್ಲೇಗು ತಗಲಿದ್ದಕ್ಕಾಗಿ ವಿದ್ಯಾಸಾಗರರೊಡನೆ ಸಹಾಯ ಯಾಚಿಸಿದನು. ಆ ಕೂಡಲೆ ಮದ್ದು ಸಮೇತ ವಿದ್ಯಾಸಾಗರರು ಅವನ ಮನೆಗೆ ಧಾವಿಸಿದರು. ದಿನವಿಡೀ ಅವಳ ಪಕ್ಕದಲ್ಲಿ ಕುಳಿತು ಮದ್ದು ಪ್ರಯೋಗಿಸಿದರು. ಸಂಜೆ ಅವಳಿಗೆ ಕೊಂಚ ಗುಣವಾಗುತ್ತಲೆ ಮನೆಗೆ ಬಂದು ಊಟ ಸ್ವೀಕರಿಸಿದರು.

ವಿದ್ಯಾಸಾಗರರ ಲೋಕಸೇವೆಯ, ದಾನಶೀಲದ ಹಲವಾರು ಕತೆಗಳು ಪ್ರಚಾರದಲ್ಲಿವೆ. ತನ್ನ ಸರ್ವಸ್ವವನ್ನೂ ತ್ಯಜಿಸಿ

(ಹತ್ತನೇ ಪುಟ ನೋಡಿರಿ)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. [illegible]
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ —
ನವಭಾರತ ಪುಸ್ತಕ ಭಂಡಾರ ಉಡುಪಿ.



೧



೩

ಇದೇ ವರ್ಷದ ಜನವರಿ ೩೧ನೆಯ ದಿನದಂದು ಪ್ರಧಾನ ಮಂತ್ರಿ ಲಾಲಬಹದ್ದೂರ್ ಶಾಸ್ತ್ರಿಯವರು ದಕ್ಷಿಣ ಏಶ್ಯದ ಬೃಹತ್ ಜಲವಿದ್ಯುದಾಲಯ ಶರಾವತಿ ಯೋಜನೆಯ ವಿದ್ಯುದುತ್ಪಾದಕವನ್ನು ಉದ್ಘಾಟಿಸಿದರು. ಆಂದಿನಿಂದಲೂ ಶರಾವತಿಯ ಜಲವಿದ್ಯುತ್ತು ಔದ್ಯೋಗಿಕ ಮತ್ತು ಗ್ರಾಮೀಣ ಅರ್ಥ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರವಹಿಸುತ್ತ ಬಂದಿದೆ. ಇದರ ಲಾಭವು ಬರಿಯ ಮೈಸೂರು ರಾಜ್ಯಕ್ಕೆ ಮಾತ್ರ ಸೀಮಿತವಾಗಿರದೆ ನೆರೆಯ ಕೇರಳ, ಗೋವಾ, ಆಂಧ್ರ ಪ್ರದೇಶ, ಮಹಾರಾಷ್ಟ್ರ ರಾಜ್ಯಗಳಿಗೂ ದೊರೆಯುವಂತಾಗುವ ಸುದಿನವೊಂದು ನಿಕಟಭವಿಷ್ಯದಲ್ಲಿಯೇ ಬರಲಿದೆ. ಹೀಗೆ ದಕ್ಷಿಣದ ರಾಜ್ಯಗಳೆಲ್ಲವೂ ಶರಾವತಿಯಿಂದಾಗಿ ಬೆಳಗುವ ಸದಾಶಯವಿದೆ; ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವ ನಿರೀಕ್ಷೆಯಿದೆ.

ಶರಾವತಿಯು ಶಕ್ತಿ ಕೇಂದ್ರವಾಗಿದೆಯೆಂದು ತಿಳಿದು ಬರುವುದಕ್ಕೆ ಮೊದಲು ಅದರ ಹೆಸರು ಯಾರು ಅರಿತಿದ್ದರು? ಗಂಗಾ, ಯಮುನಾಗಳಂತೆ ತೀರ್ಥ ಜಲ ಅದರಲ್ಲಿ ಹರಿಯುವುದಿಲ್ಲ. ಸಿಂಧು ಬ್ರಹ್ಮಪುತ್ರಗಳಂತೆ ಪ್ರಮಾಣವೂ ದೊಡ್ಡದಿಲ್ಲ. ಸಾವಿರಾರು ಮೈಲುದ್ದದ ನದೀಪಂಕ್ತಿಯಲ್ಲಿ ಪಶ್ಚಿಮ ಘಟ್ಟಗಳ ಮರೆಯಲ್ಲಿ ಹುಟ್ಟಿ ನೆಗೆದು ೮೨ ಮೈಲು ಅಡ್ಡತಿಡ್ಡ ಹರಿದು ಪಶ್ಚಿಮ ಸಮುದ್ರ ಸೇರುವ ಶರಾವತಿಯ ಹೆಸರು ಯಾರು ಯಾಕೆ ತಿಳಿಯ ಬೇಕಾಗಿತ್ತು? ನದೀ ತಟದಲ್ಲಿ ನೆಲಸುತಿದ್ದ ಕೆಲವು ಕನ್ನಡಿಗರು, ಚಿರಳಿಣಿಕೆಯ ಪರರಾಜ್ಯದವರು ಮಾತ್ರ ಅರಿತಿದ್ದರು. ಆದರೆ, ಇಂದು ಮೂರ್ತಿ ಸಣ್ಣದಾದರೂ ಶರಾವತಿಯ ಕೀರ್ತಿ ದೊಡ್ಡದಾಗಿದೆ; ಅದು ದಿಗಂತ ವಿಶ್ರಾಮವಾಗಿದೆ.

ಕನ್ನಡ ರಾಜ್ಯದ ಇಂಜನಿಯರುಗಳು ಮಲೆನಾಡಿನಲ್ಲಿ ಹುಟ್ಟಿ ಹರಿಯುವ ಶರಾವತಿಯ ನೀರಿನ ಶಕ್ತಿಯನ್ನು ಸಂಗ್ರಹಿಸಬಹುದೆಂದು ಯೋಜಿಸಿದರು. ಅವರ ಕಾರ್ಯಕುಶಲತೆಯಿಂದಾಗಿ ಸಾವಿರಾರು ಗಂಡಸರು ಹೆಂಗಸರ ಕಾಯಕಷ್ಟದಿಂದಾಗಿ ಏಳು ವರ್ಷಗಳ ಸುದೀರ್ಘ ಪರಿಶ್ರಮದ ಪ್ರತೀಕವಾಗಿ ಶರಾವತಿ ಯೋಜನೆಯು ರೂಪಿತವಾಯಿತು. ಭಾರತದಲ್ಲಿ ಮಾತ್ರವಲ್ಲ, ಇಡಿಯ ದಕ್ಷಿಣ ಏಶ್ಯದಲ್ಲಿಯೇ ಅತಿ ದೊಡ್ಡ ವಿದ್ಯುದಾಗಾರವಾಯಿತು.

ಶರಾವತಿಯ ಉತ್ಪಾದನಾಶಕ್ತಿ ಎಷ್ಟು? ೪,೭೦೦ ಮಿಲಿಯ ಕಿಲೋವಾಟ್ ತಾಸುಗಳಷ್ಟು! ಅಂದರೆ, ಬಾಕ್ರ ನಂಗಲ್ ಯೋಜನೆಯ ಉತ್ಪಾದನೆಯ ಇಮ್ಮಡಿಗೂ ಹೆಚ್ಚು! ಯೋಜನೆಯ ಎಲ್ಲಾ ಹಂತಗಳೂ ಪೂರ್ಣವಾದ ಮೇಲೆ ಅದು ೧೪ ಲಕ್ಷ ಕಿಲೋವಾಟ್ ಶಕ್ತಿ ಹುಟ್ಟಿಸಬಲ್ಲದು. ಲಿಂಗನಮಕ್ಕಿ ಜಲಾಶಯದಲ್ಲಿ ಸಂಗ್ರಹಿಸಿದ ನೀರು ಟರ್ಬನ್‌ಗಳ ಮೇಲೆ ಹರಿಯುವುದಕ್ಕೆ ಮೊದಲು ೧,೫೦೦ ಅಡಿ ಕೆಳಗೆ ದುಮುಕುತ್ತದೆ. ಇದರಿಂದಾಗಿಯೇ ಅದರ ಶಕ್ತಿಯೂ ದೈತ್ಯ ಶಕ್ತಿಯೆನಿಸಿದೆ.

ಶರಾವತಿಯು ಭಾರತದ ಹೆಮ್ಮೆಯ

೨

೪

...ಚಿಕ್ಕದಾದರೂ ಕೀರ್ತಿ ದೊಡ್ಡದು

...ಉದ್ದದ ಶರಾವತಿ ೧೪ ಲಕ್ಷ ಕಿಲೋವಾಟ್ ಶಕ್ತಿಯನ್ನು ಉತ್ಪಾದಿಸಿ ದಕ್ಷಿಣ ರಾಜ್ಯಗಳ ಉದ್ದಿಮೆಗೆ ಶಕ್ತಿ ಪೂರೈಸಬಲ್ಲಳು

ಯೋಜನೆ. ಅದರ ಕಾರ್ಯರೂಪಕ್ಕೆ ಅಮೇರಿಕೆಯು ರೂ. ೪೮.೭ ಕೋಟಿಗಳ ಸಹಾಯವನ್ನು ನೀಡಿರುವುದರಿಂದ, ಇದರ ಕೀರ್ತಿಯಲ್ಲಿ ಅಮೇರಿಕೆಗೂ ಸಮಪಾಲಿದೆ. ಭಾರತ—ಅಮೇರಿಕೆಗಳ ಸ್ನೇಹವನ್ನು, ಅದರ ಫಲವನ್ನು ಇಡಿಯ ಜಗತ್ತಿಗೆ ತೋರಿಸಿಕೊಡುವ ಜೀವಂತ ಮೂರ್ತಿ ಶರಾವತಿ. ದಿ| ಪ್ರಧಾನ ಮಂತ್ರಿ ಜವಾಹರಲಾಲರು ಹೇಳುವಂತೆ ಆಧುನಿಕ ಭಾರತದ ಕಾಶಿಯೇ ಶರಾವತಿ.

ಶರಾವತಿಯ ವಿದ್ಯುತ್ ಇಂದು ಕರ್ನಾಟಕದ ಬೇರೆ ಬೇರೆ ಹಳ್ಳಿಗಳಿಗೆ ಹರಿದಿದೆ. ನೆರೆಯ ಗೋವೆಗೂ ಅದು ಕರ್ನಾಟಕದಿಂದ ಕೊಡಲ್ಪಟ್ಟಿದೆ. ದಕ್ಷಿಣ ಗ್ರಿಡ್ ಒಂದನ್ನು ನಿರ್ಮಿಸಿ ದಕ್ಷಿಣದ ರಾಜ್ಯಗಳ ವಿದ್ಯುನ್ಮಂಡಲ ರಚಿಸುವಾಗ ಶರಾವತಿಯೇ ಅದರ ರಾಜನಾಗುವುದು. ಈ ಶಕ್ತಿಯ ಕಾರಣದಿಂದಾಗಿ ಉದ್ಯಮ ಮತ್ತು ಜನ ಜೀವನರಂಗದಲ್ಲಾದ ಹಲವಾರು ರೂಪಾಂತರಗಳನ್ನು ಇಲ್ಲಿನ ಚಿತ್ರಗಳಲ್ಲಿ ಕಾಣಬಹುದು.



೬



೭



೫

ಚಿತ್ರಗಳು

೧. ಶರಾವತಿ ಯೋಜನೆಯ ಪ್ರಧಾನ ಅಣೆಕಟ್ಟು, ಲಿಂಗನ ಮಕ್ಕಿ.

೨. ಕರ್ನಾಟಕದ ಪುಟ್ಟ ಹಳ್ಳಿ ಗೋಟಕನಪುರ. ವಿದ್ಯುದ್ದೀಪಗಳು ಕನಸಿನ ಮಂಡಿಗೆಯಾಗಿದ್ದ ಇಲ್ಲಿ ಶರಾವತಿಯ ಶಕ್ತಿ ಅದನ್ನು ನೆನಸು ಮಾಡಿವೆ.

೩. ಶರಾವತಿಯ ವಿದ್ಯುಚ್ಛಕ್ತಿ ಬೆಂಗಳೂರಿನ ಕಿರ್ಲೋಸ್ಕರ ಸ್ಥಾವರದಲ್ಲಿ ರೋಟರ್ ಯಂತ್ರವನ್ನು ತಿರುಗಿಸುತ್ತದೆ.

೪. ಭಾರತದಲ್ಲಿ ಅಮೇರಿಕೆಯ ರಾಯಭಾರಿ ಚೆಸ್ಟರ್ ಬೌಲ್ಸ್ ಮತ್ತು ಭಾರತೀಯ ಪ್ರಧಾನಿ ಲಾಲ ಬಹದೂರ್ ಶರಾವತಿಯನ್ನು ಕಂಡು ಸಹರ್ಷಚಕಿತ ಮಾನಸದಲ್ಲಿ....

೫. ಬೆಂಗಳೂರಿನ 'ರಮ್ಕೊ' ಶರಾವತಿಯ ಕಾರಣದಿಂದ ತನ್ನ ಕಾರ್ಯಕಲಾಪಗಳನ್ನು ವಿಸ್ತರಿಸುವುದು ಸಾಧ್ಯವಾಗಿದೆ.

೬. ಮದ್ರಾಸಕ್ಕೂ ಶರಾವತಿಯ ಶಕ್ತಿ ಹರಿಯುವುದು ಆಗಕ್ಕೆಂದು ಪೋಲಿಟೆಕ್ನಿಕ್ ವಿದ್ಯಾರ್ಥಿಗಳು ಉದ್ಯೋಗಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ.

೭. ಸಾಕಷ್ಟು ವಿದ್ಯುತ್ ಪೂರೈಕೆಯಾದುದರಿಂದ ಬೆಂಗಳೂರಿನ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಸಂಸ್ಥೆಯು ತನ್ನ ಕಾರ್ಯಕಲಾಪವನ್ನೂ ತ್ವರಿತಗತಿಯಲ್ಲಿ ವಿಸ್ತರಿಸತೊಡಗಿದೆ.

(ಹದಿಮೂರನೇ ಪುಟ ನೋಡಿರಿ.)

ಸಾಮಾಜಿಕ ಸಮಸ್ಯೆ

ಗೃಹಿಣಿ ನೌಕರಿ ಮಾಡಬಹುದೇ ?

ಲೇ— ಕುಮಾರಿ ರಾಣಿ ಅಪ್ಪಚ್ಚು, ಕಡಂಗ.

ಮಹಿಳೆಯು ಮನೆಗೆ ಭೂಷಣವಲ್ಲವೇ? ತನಗೆ ದೊರೆತ ಶಿಕ್ಷಣ-ಸಂಸ್ಕಾರ, ಹಕ್ಕು ಬಾಧ್ಯತೆಗಳ ಬಲದಿಂದಲೋ, ಆರ್ಥಿಕ ಮುಗ್ಗಟ್ಟಿನಿಂದಲೋ ನಮ್ಮ ಮಹಿಳೆಯರಲ್ಲಿ ನೌಕರಿಯ ಹಂಬಲ ಹೆಚ್ಚಾಗಿ ಈಗ ಮಹಿಳೆ ತುಂಬಾ ಬದಲಾಗಿದ್ದಾಳೆ. ಮೊದಲಿನ ಸಂಕೋಚ, ಸಂಕುಚಿತ ಪ್ರವೃತ್ತಿಗಳನ್ನು ತೊರೆದು ಆಕೆ ಸಮಾಜದ ನೂರೆಂಟು ಕ್ಷೇತ್ರಗಳಲ್ಲಿ ಧುಮುಕಿದ್ದಾಳೆ. ಅಂತೂ ಮಹಿಳಾ ದೃಷ್ಟಿಕೋನದಲ್ಲಿ ಕ್ರಾಂತಿಯಾಗುತ್ತಿದೆ. ನವವಿಚಾರಧಾರೆ ಆಧುನಿಕ ಮಹಿಳೆಯ ದೈನಂದಿನ ಚಟುವಟಿಕೆಯ ಮೂರ್ತ ಸ್ವರೂಪವನ್ನೇ ಬದಲಿಸುತ್ತಿದೆ. ನಿಜಕ್ಕೂ ಇದು ಶುಭಲಕ್ಷಣ. "ನಾಡು ಬೆಳೆಯ ಬೇಕಾದರೆ ಮೊದಲು ನಮ್ಮ ಮಹಿಳೆಯರ ಸ್ಥಿತಿ ಸುಧಾರಿಸಬೇಕು, ಅವರಲ್ಲಿ ವಿಶಾಲ ಭಾವನೆಗಳು ಜಾಗೃತವಾಗಬೇಕು." ಎಂದು ಗಾಂಧೀಜಿ ಹೇಳಿದ ಮಾತು ನೂರಕ್ಕೆ ನೂರು ಸತ್ಯ. ಈಗಿನ ಕಾಲದ ಬೆಲೆ ಏರಿಕೆ, ಬೆಳೆಯುತ್ತಿರುವ ಜನಸಂಖ್ಯೆ, ಕುಟುಂಬದ ಆರ್ಥಿಕ ಮುಗ್ಗಟ್ಟು, ಹೀಗೆ ಹಲವಾರು ಕಾರಣಗಳ ಪ್ರಬಲ ಪ್ರಚೋದನೆಯಿಂದ, ನಮ್ಮ ಮಹಿಳೆಯರು ನೌಕರಿಗೆ ಸೇರುತ್ತಾರೆ, ನೂರೆಂಟು ಅಡ್ಡ ಆತಂಕಗಳನ್ನು ಎದುರಿಸಿ ಹೋರಾಡುತ್ತಾರೆ. ಮಹಿಳೆಯರು ದುಡಿಯಲಿ, ದುಡಿಮೆ ಕೀಳಲ್ಲ, ತಪ್ಪಲ್ಲ, ಅದು ಜನ್ಮ ಕರ್ತವ್ಯ. ಆದರೆ ಮಹಿಳೆ ವಿವಾಹ ನಂತರವೂ ಉದ್ಯೋಗವನ್ನೇ ಜೀವನವನ್ನಾಗಿಸಿಕೊಂಡರೆ ಹೇಗೆ? ಗೃಹಿಣಿ ನೌಕರಿ ಮಾಡಿದರೆ—ಸೌಖ್ಯ ಸಾಫಲ್ಯಗಳು ದೊರೆತಾವೆಯೇ? ಇದು ವಿಚಾರ ಮಾಡಬೇಕಾದ ವಿಷಯ.

ಐವತ್ತು ವರುಷದ ಹಿಂದಿನ ಸಂಯುಕ್ತ ಕುಟುಂಬದ ಪದ್ಧತಿ ಇಂದು ನಮ್ಮಲ್ಲಿಲ್ಲ. ಎಲ್ಲರೂ ಪಾಲಾಗಿದ್ದಾರೆ. ಮನೆಯ ಪ್ರತಿಯೊಂದು ಕೆಲಸದ ಭಾರವು ಒಬ್ಬಳ ಮೇಲೆಯೇ ಬೀಳುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಗೃಹಿಣಿ ನೌಕರಿಗೆ ಸೇರಿದರೆ ಮನೆಗೆಲಸಗಳಿಗಾಗಿ ದಾಯಿಯನ್ನು ಸೇರಿಸಿಕೊಳ್ಳಬೇಕು. ಪ್ರತಿಯೊಂದಕ್ಕೂ ಹಣ ಸುರಿಯಲು ಸಿದ್ಧಳಾಗಬೇಕು. ನೌಕರಿ ಮಾಡಿ ಬರುವ ಆದಾಯವನ್ನೆಲ್ಲಾ ಆಳು-ಕಾಳುಗಳಿಗಾಗಿ, ದಾಯಾದಿ ಬಂಧುಗಳಿಗಾಗಿ ವೆಚ್ಚ ಮಾಡಬೇಕು. ಇಷ್ಟು ಮಾಡಿದರೂ ತಮ್ಮ ಇಷ್ಟದಂತೆ ಕೆಲಸವೂ ಸರಿಯಾಗಿ ನಡೆಯೋದಿಲ್ಲ. ಗೃಹಿಣಿಯು ಮನೆಯನ್ನು "ಓರಣ" ವಾಗಿಸುವ ಆ ಸೊಗಸುಗಾರಿಕೆ—ಇವು ಎಷ್ಟು ಹಣ ಖರ್ಚು ಮಾಡಿದರೆ ತಾನೇ ದೊರೆತಾವು. ಮನೆಯ ಪೂರ್ತಿ ಸ್ವಾಮ್ಯ ವಹಿಸಿಕೊಟ್ಟ ಮೇಲೆ ದಾಯಿ ಶೋಷಿಸದಿರುವಳೇ? ಈ ವಂಚನೆಯನ್ನು, ಈ ವೆಚ್ಚವನ್ನು ಸಹಿಸಿಕೊಂಡು, ಮಹಿಳೆಗೆ ಉಳಿಯಬಹುದಾದ ಮೊತ್ತ ತೀರಾ ಕಡಿಮೆ. ಈ ದಾಯಿಯರ ಉಪಚಾರ ಗಂಡನಿಗೆ ಹಿಡಿಸಬಹುದೇ? ಆತ ಬಯಸುವುದು ತನ್ನ ಒಲವಿನ ರಾಣಿಯ ಗೆಲುವಿನ ಮುಖವನ್ನು, ಮಧು ಸರಸವನ್ನು ಅಲ್ಲವೆ? ಬೆಳಗ್ಗೆಯಿಂದ ಸಾಯಂಕಾಲದ ವರೆಗೆ ಗೃಹಿಣಿ ದುಡಿದು ಬಂದು ಗಂಡನನ್ನು ಉಪಚರಿಸಲು ಸಾಧ್ಯವೆ?

ಅದೇ ಅತ್ತ-ಗೃಹಿಣಿ ದುಡಿಯ ನಿಂತರೆ, ತನ್ನ ಇಷ್ಟದ ತಿಂಡಿತಿನಸು ಮತ್ತು ಇನ್ನು ಏನೇನೋ ಗಂಡನ ಬಯಕೆಗಳನ್ನು ಈಡೇರಿಸಲು ಸಮರ್ಥಳೇ? ಅದನ್ನು ಸಾಧ್ಯವಿದ್ದಷ್ಟು ಪೂರೈಸುವುದು ಸತೀ ಧರ್ಮ. ಗೃಹ ಸೌಖ್ಯದ ಗುಟ್ಟದು. ಅದು ಸಾಧ್ಯವಿಲ್ಲದಿದ್ದರೆ, ಆಗ ಗಂಡನ ಆಶೋತ್ತರಗಳು ಭಗ್ನವಾಗುವುದು ಸ್ವಾಭಾವಿಕ. ಹೀಗಾಗಿ ಮನಸ್ಸಿಗೆ ನೆಮ್ಮದಿ ಇಬ್ಬರಿಗೂ ಇರುವುದಿಲ್ಲ. ಇದರಿಂದ ಅವರ ದಾಂಪತ್ಯ ಜೀವನದಲ್ಲಿ ತಪ್ಪು ತಿಳುವಳಿಕೆಯು ಕಿಡಿಯೆದ್ದು ಕೋಲಾಹಲವೆಬ್ಬಿಸಬಹುದು. ಒಟ್ಟಿನಲ್ಲಿ ಇಬ್ಬರಿಗೂ ಸುಖವಿಲ್ಲ. ಸಂತೃಪ್ತಿ ಇಲ್ಲ.

ಅದೂ ಅಲ್ಲದೆ, ದಿನವಿಡೀ ದಂಪತಿಗಳು ನೌಕರಿ ಮಾಡುತ್ತಾ ಇದ್ದರೆ, ಮನೆಯಲ್ಲಿ ಮಕ್ಕಳ ಪರಿಸ್ಥಿತಿ ಏನಾದೀತು? ಮಾತೆಯ ಮಮತೆ ಇಲ್ಲದ, ತಾಯಿಯ ಶುಶ್ರೂಷೆ ದೊರೆಯದ ಆ ಮಗುವಿನಲ್ಲಿ ವಿಲಕ್ಷಣ ಬದಲಾವಣೆಯಾಗಬಹುದು. "ಮನೆಯೇ ಮೊದಲ ಪಾಠಶಾಲೆ, ಮಾತೆಯೇ ಮಗುವಿನ ಮೊದಲ ಗುರು" ಎಂದು ತಿಳಿದವರು ಎನ್ನುತ್ತಾರೆ. ಈ ಮಾತೆ ಸದಾ ಹೊರಗಿದ್ದರೆ, ಆ ಮಗುವಿನಲ್ಲಿ ನೀತಿ-ನಡತೆಗಳನ್ನು ರೂಪಿಸುವವರಾರು? ಅವರ ಆರೋಗ್ಯ ಶಿಕ್ಷಣಗಳತ್ತ ಗಮನಹರಿಸಿ ಮಗುವಿನ ವ್ಯಕ್ತಿತ್ವ ನಿರ್ಮಾಣದ ಮುಖ್ಯ ಹೊಣೆಯನ್ನು ನಿರ್ವಹಿಸುವವರಾರು? ಎಳೆ ಮಗುವಿನ ಶೀಲ—ಸಂವರ್ಧನೆಯ ಮುಖ್ಯ ಹೊಣೆ ತಾಯಿಯದು ದಾಯಿಯದಲ್ಲ. ಮಾತೃ—ವಾತ್ಸಲ್ಯ, ವಿಹೀನವಾದ ಮಗುವಿನಿಂದ ಕರುಣೆ, ಅಂತಃಕರಣ, ದಯೆ, ಪ್ರೀತಿ, ಅಭಿಮಾನ ಆದರಗಳನ್ನು ಹೇಗೆ ತಾನೇ ನಿರೀಕ್ಷಿಸಬಹುದು? ತಾಯಿ, ತಂದೆಯ ಪ್ರೀತಿ ಬಾಹಿರನಾದ ಮಗು, ನಾಳೆ ಅವರಲ್ಲಿ ಪೂಜ್ಯ ಭಾವನೆಗಳನ್ನು ಇರಿಸಬಹುದೇ? ಯಾವ ನೌಕರಸ್ಥ ಗೃಹಿಣಿ ತಾನೇ ಆ ಮಗುವಿನ ಸಮಸ್ಯೆಗೆ ಯೋಗ್ಯ ಪರಿಹಾರ ನೀಡಬಲ್ಲಳು? ಆದುದರಿಂದ ಗೃಹ ಸೌಖ್ಯವನ್ನೇ ಬಲಿದಾನ ಮಾಡಿ ದುಡಿಮೆಗೆ ನಿಲ್ಲುವುದು, ಭಾರತೀಯ ನಾರೀಮಣಿಯ ಧರ್ಮವಲ್ಲ. ಮಹಿಳೆಯರು ಮುಂದೆ ಬರಲಿ, ಕಲಿಯಲಿ, ಸಮೃದ್ಧ ಭಾರತದ ಪ್ರಗತಿ ಪಥದಲ್ಲಿ ತಾನು ಮುಂದಡಿ ಇರಿಸಲಿ. ಆದರೆ ವಿವಾಹ ನಂತರವೂ ಗೃಹಿಣಿ ನೌಕರಿ ಮಾಡುವುದು ಹಿತಕರವಲ್ಲ. ಮನೆಯನ್ನು ಅಂದವಾಗಿರಿಸುವ, ಗೋಕುಲವಾಗಿ ಮಾರ್ಪಡಿಸುವ ಧ್ಯೇಯವಿರಿಸಿಕೊಂಡರೆ ಕೂಡ ಶಿಕ್ಷಣದ ಸದುಪಯೋಗವಾಗಬಲ್ಲದು— ಎಂಬುದನ್ನು ನಮ್ಮ ಮಹಿಳೆಯರು ಅರಿತುಕೊಳ್ಳುವುದು ಅಗತ್ಯ.

ಈಶ್ವರಚಂದ್ರ ವಿದ್ಯಾಸಾಗರ

(೨ನೇ ಪುಟದಿಂದ)

ದೀನ-ದಲಿತರ ಸೇವೆಯನ್ನು ಕೈಗೊಂಡರು. ಅವರು ಕಲ್ಕತ್ತಾ, ಬಂಗಾಲದ ಅಸಂಖ್ಯ ಬಡ ಬಾಂಧವರಿಗೆ ೧, ೨, ೩, ೪ ರೂಪಾಯಿ ಎಂಬಂತೆ ತಿಂಗಳು-ತಿಂಗಳೂ ಸಹಾಯ ನೀಡುತ್ತಿದ್ದರು; ಅವರನ್ನು ಸಂಧಿಸಿ ಅವರ ಕಷ್ಟವನ್ನು ನೀಗಿಸಲು ಪ್ರಯತ್ನಿಸುತ್ತಿದ್ದರು. ಅವರ ಸರಳ ಉದಾರ ಹೃದಯದ ಸಾಗರವು ಸದಾ ಉಕ್ಕಿ ಹರಿಯುತಿತ್ತು. ಮನುಷ್ಯ ಜಾತಿಯ ಸೇವೆಗೋಸ್ಕರ ಅವರ ಹೃದಯದ ದ್ವಾರವು ಸದಾ ತೆರೆದೇ ಇರುತಿತ್ತು.

ಸಮಾಜ ಸುಧಾರಣೆಯಲ್ಲಿ ವಿದ್ಯಾಸಾಗರರು ಅದ್ವಿತೀಯ ಕ್ರಾಂತಿಕಾರಿಯೆನಿಸಿಯು. ವಿಧವೆಯರ ಶೋಚನೀಯ ಸ್ಥಿತಿಯಿಂದ ಅವರ ಹೃದಯ ಕರಗಿ ನೀರಾಗುತಿತ್ತು. ಮಹಾ-ಮಹಾ ಪಂಡಿತರೊಡನೆ ಶಾಸ್ತ್ರಾರ್ಥ ಮಾಡಿ ವಿಧವಾ-ವಿವಾಹವನ್ನು ಶಾಸ್ತ್ರಾನುಕೂಲ ಸಿದ್ಧ ಮಾಡಿ ತೋರಿಸಿದರು. ಈ ಕುರಿತು ಒಂದೆರಡು ಪುಸ್ತಕವನ್ನು ಪ್ರಕಾಶಿಸಿ ಪ್ರಚಾರ ಮಾಡಿದರು. ಅಖಂಡ ಸಾಧನೆಯಿಂದ ವಿಧವಾ ವಿವಾಹದ ಬಗ್ಗೆ ಕಾನೂನು ಜಾರಿ ಮಾಡಿಸಿದರು; ವಿಧವೆಯರ ಬರಡು ಜೀವನವು ಪುನಃ ಚೇತರಿಸುವಂತೆ ಮಾಡಿದರು. ಇದೇ ಅಲ್ಲದೆ 'ಸ್ತ್ರೀ ಶಿಕ್ಷಣ'ದ ಕುರಿತ ಸಲಹೆ ಮಾಡಿದರು.

ಈಶ್ವರ್‌ಚಂದ್ರರು ಮಾಡಿದ ಸಾಹಿತ್ಯ ಸೇವೆಯೇನೂ ಕಿರಿದಲ್ಲ. ಹಿಂದೀ ಸಾಹಿತ್ಯ ಭಾರತೇಂದುವಿನಂತೆ ಆಧುನಿಕ ಬಂಗಾಲೀ ಗದ್ಯಸಾಹಿತ್ಯ ಜನಕರು ವಿದ್ಯಾಸಾಗರ್ ಆಗಿದ್ದಾರೆ. ಅವರ ಪ್ರಥಮ ಹಸ್ತಲಿಖಿತ ಪತ್ರಿಕೆ 'ವಾಸುದೇವ ಚರಿತೆ' ಆಗಿದೆ. ಅವರ 'ಸೀತಾವನವಾಸ' ಇಂದು ಕೂಡ ಹಾಯಸ್ಕೂಲಿನಲ್ಲಿ ಓದಲ್ಪಡುತ್ತದೆ. ಇಂಗ್ಲೀಷ್‌ನಲ್ಲಿ ೫ ಮತ್ತು ಬಂಗಾಲೀಯಲ್ಲಿ ೫೨ ಪುಸ್ತಕಗಳನ್ನು ವಿದ್ಯಾಸಾಗರರು ಬರೆದಿರುತ್ತಾರೆ. ಬಂಗಾಲದ ಸರ್ವಶ್ರೇಷ್ಠ ಪತ್ರಿಕೆ "ಸಂವಾದ ಪ್ರಭಾಕರ"ವನ್ನು ಇವರೇ ಹೊರಡಿಸಿದರು. ಅಂತೆಯೇ "ಸೋಮ ಪ್ರಕಾಶ"ವೆಂಬ ಮಾಸ ಪತ್ರಿಕೆಗೆ ವಿದ್ಯಾಸಾಗರರೇ ಜನ್ಮವಿತ್ತರು. ವಿದ್ಯಾಸಾಗರರು ತಮ್ಮ ಕೊನೆಯ ದಿನಗಳಲ್ಲೂ ವಿದ್ಯಾ ಪ್ರಚಾರ ಮಾಡುತ್ತಿದ್ದರು.

೧೮೮೮ರಲ್ಲಿ ಅವರ ಧರ್ಮಪತ್ನಿಯು ಅಸೌಖ್ಯ ಪಡ್ಡಳು. ಬಹಳ ಚಿಕಿತ್ಸೆ ಕೈಗೊಂಡರೂ ಕೊನೆಗೆ ಆತ್ಮೀಯ ಜನರನ್ನು ಮರೆತು ಇಹಲೋಕವನ್ನು ತ್ಯಜಿಸಿದರು. ವಿದ್ಯಾಸಾಗರರು ಪತ್ನೀ ವಿಯೋಗದಿಂದ ಅತಿ ವ್ಯಾಕುಲಗೊಂಡರು.

ಅಂದಿನ ದಿನದಿಂದ ಅವರಿಗೆ ಯಾವುದೋ ರೋಗ ತಗಲಿತು. ಆರೋಗ್ಯವನ್ನು ಸುಧಾರಿಸಲು ಆಗಾಗ ಅವರು ವ್ಯಾಯಾಮ ಶಾಲೆಗೂ ತೆರಳುತ್ತಿದ್ದರು. ಆದರೆ ಯಾವ ಪ್ರಯೋಜನವೂ ಉಂಟಾಗಲಿಲ್ಲ. ಕೊನೆಗೆ ಕಲ್ಕತ್ತಾಗೆ ಚಿಕಿತ್ಸೆ ಪಡೆಯಲು ಹೊರಟ ಇವರು ಬಂಗಾಲೀ ವರ್ಷ ೧೨೯೮ರ ಶ್ರಾವಣ ೧೩ರಲ್ಲಿ ರಾತ್ರಿ ೧೨ ಘಂಟೆಗೆ ಸ್ವರ್ಗಸ್ಥರಾದರು; ಭಾರತವನ್ನು ತಬ್ಬಲಿ ಮಾಡಿ ಹೊರಟೇ ಹೋದರು. ದೇಶವಿಡೀ ಈ ಶೋಕ ವಾರ್ತೆಯಿಂದ ತಲ್ಲಣಿಸಿತು. ದೇಶದಲ್ಲೆಲ್ಲಾ ಸಂತಾಪ ಸೂಚಕ ಸಭೆಗಳು ಜರುಗಿ ಜನರು ಆ ಮಹಾತ್ಮನಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಈಶ್ವರಚಂದ್ರ ವಿದ್ಯಾಸಾಗರರು ನಿಜವಾಗಿಯೂ ಭಾರತದ ಒಂದು ಅನುಪಮ ಪುತ್ರರತ್ನ. ತಮ್ಮ ದಾನಶೀಲತೆ, ಕರ್ತವ್ಯನಿಷ್ಠೆ, ನ್ಯಾಯ ಪಾಲನ ಹಾಗೂ ಕ್ರಿಯಾಶೀಲತೆಯ ಆದರ್ಶವು ಎಂದೆಂದಿಗೂ ತರುಣ ಭಾರತದ ಯುವ ಜನಾಂಗಕ್ಕೆ ಮಾರ್ಗದರ್ಶನ ನೀಡುವುದರಲ್ಲಿ ಸಂದೇಹವಿಲ್ಲ.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ

ಹಗಲೆನ್ನದೆ · ಇರುಳೆನ್ನದೆ
ಋತುಭೇದ ವೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು

ಹನ್ನೆರಡು ಕಥೆಗಳ ಸಂಕಲನ

ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ. ರೂ. 1-50

ರೂ. 1-75 ಮನಿಯೂರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ಸೀಟಿಲ್ ವಿಶ್ವಮೇಳ

ಇಲ್ಲಿ ಭವಿಷ್ಯದ ಚಿಂತನೆ ನಡೆಯುತ್ತದೆ

ಬರೆದವರು
ಶ್ರೀಮತಿ ಲಲಿತಾ ರೈ, ಮದ್ರಾಸ್

ಶ್ರೀಮತಿ ಲಲಿತಾ ರೈ ಅವರು ತಮ್ಮ ಪತಿ ಡಾ| ಮಂಜುನಾಥ ರೈಯವರೊಡನೆ ಸೀಟಲ್ ವಿಶ್ವಮೇಳಕ್ಕೆ ಹೋಗಿ ಕಂಡ ಅನುಭವವನ್ನು ಶ್ರೀಮತಿ ದೇವಕಿ ಎಂ. ಶೆಟ್ಟರಿಗೆ ತಿಳಿಸಿದರು. ಶ್ರೀಮತಿ ಶೆಟ್ಟರು ನವಯುಗದ ವಾಚಕರಿಗೆ ವಿಶ್ವಮೇಳವನ್ನು ಪರಿಚಯ ಮಾಡಿ ಕೊಡುತ್ತಾರೆ.

ಸೀಟಿಲ್ ವಿಶ್ವಮೇಳವು ಆಧುನಿಕ ಯುಗದ ವಿಜ್ಞಾನಿಗಳ ರಚನಾತ್ಮಕ ಬುದ್ಧಿಮತ್ತೆಯ ಅತಿ ಅದ್ಭುತ ಹಾಗೂ ಅನರ್ಘ್ಯ ರತ್ನದಂತಿರುವ ಭವ್ಯ ಭವಿಷ್ಯತ್ ವಿಶ್ವಚಿತ್ರದ ವಾಸ್ತುಶಿಲ್ಪ ವಿಜ್ಞಾನಿಗಳ ಕಲಾಕಾರರ ಮತ್ತು ಭವಿಷ್ಯತ್ತಿನ ದಿವ್ಯ ದೃಷ್ಟಿಯುಳ್ಳವರ ಮಾನಸಿಕ ಶಿಶು ಎಲ್ಲ ದೇಶಗಳ ಎಲ್ಲ ವಯೋಪರಿಮಿತಿಯವರಿಗೆ ಮನೋರಂಜಕವಾಗಿದ್ದ ಈ ಜಾತ್ರೆ ಗಗನಯಾನ ಯುಗ ಮಾನವನಿಗೆ ಮುಡುಪಾಗಿವೆ. ಬಹಿರ್ಲೋಕದ ಆಕ್ರಮಣದಲ್ಲಿ ತೊಡಗಿರುವ ಅತಿಮಾನವ ಪ್ರಯತ್ನಗಳ ಸಂಕೇತವಾಗಿ ಆರುನೂರು ಅಡಿಗಳೆತ್ತರದ ಗಗನಶೂಲ (Space needle) ಎದ್ದು ರಾರಾಜಿಸುತ್ತದು ಈ ಸೀಟಲ್ ಮಹಾ ಕ್ಷೇತ್ರದಲ್ಲಿ.

ಈಗ ಸುಮಾರು ೬೦ ವರುಷಗಳ ಹಿಂದೆ ಇದೇ ಸೀಟಲ್ ಕ್ಷೇತ್ರದಲ್ಲಿ ಪಾಶ್ಚಾತ್ಯರ ನಾಡಹಬ್ಬವೊಂದು ಉಸ್ತವಾಗಿತ್ತು. ವಾಶಿಂಗ್‌ಟನ್ ರಾಜ್ಯಾಂಗ ಸಭೆಯ ಉತ್ತೇಜನದಿಂದ ಅನೇಕ ದಶಲಕ್ಷ ಡಾಲರ್ ವೆಚ್ಚದಲ್ಲಿ ಭವ್ಯ ಕಟ್ಟಡಗಳ ನಿರ್ಮಾಣ ಕಾರ್ಯದಿಂದ "ಇಪ್ಪತ್ತೊಂದನೇ ಶತಮಾನದ ವಿಶ್ವದರ್ಶನದ" ಈ ಯೋಜನೆಯು ನಿಯೋಜಿಸಲ್ಪಟ್ಟಿತು. ೧೯೫೬ರ ಸುಮಾರಿಗೆ ಅಧ್ಯಕ್ಷ ಐಸನ್ ಹೋವರು ಈ ಯೋಜನೆಯ ಶಂಕುಸ್ಥಾಪನೆಯನ್ನು ಮಾಡಿದಾರಂಭ್ಯ ಸತತವಾಗಿ ನಿರ್ಮಾಣ ಕಾರ್ಯ ನಡೆದು, ೧೯೬೨ರ ಎಪ್ರಿಲ್ ೨೧ರಿಂದ ಸೀಟಲ್ ವಿಶ್ವಮೇಳ ಪ್ರಾರಂಭವಾಯಿತು. ಇದರಲ್ಲಿ ವಿಶ್ವದ ೩೦ ಸದಸ್ಯ ರಾಷ್ಟ್ರಗಳು ಭಾಗವಹಿಸಿದ್ದವು. ಈ ಸೀಟಲ್ ವಿಶ್ವಮೇಳವು 7 ಪ್ರಮುಖ್ಯ ವಿಷಯ ಕ್ಷೇತ್ರಗಳ ಮಹಾ ಪ್ರದರ್ಶನವಾಗಿದೆ. ಈ ಏಳು ವಿಷಯಗಳು ಯಾವುವೆಂದರೆ 1) ವಿಜ್ಞಾನ ಪ್ರಪಂಚ 2) ೨೧ನೇ ಶತಮಾನದ ವಿಶ್ವ ೩) ಭಿನ್ನ ರಾಷ್ಟ್ರಗಳ ವಾಣಿಜ್ಯ ಹಾಗೂ ಕೈಗಾರಿಕಾ ಪ್ರಪಂಚ 4) ಅಮೇರಿಕದ ವಾಣಿಜ್ಯ ಮತ್ತು ಕೈಗಾರಿಕಾ ಪ್ರಪಂಚ 5) ಕಲಾ ಪ್ರಪಂಚ ೬) ಮನೋರಂಜನೆಯ ಪ್ರಪಂಚ ೭) ಪ್ರಪಂಚದ ವಿಶಾಲ ಪಥಗಳು.

ವಿಜ್ಞಾನ ಪ್ರಪಂಚವು ಅಮೇರಿಕ, ಸಂಯುಕ್ತಸಂಸ್ಥಾನಗಳ ವಿಜ್ಞಾನ ವಿಭಾಗದಿಂದ ರಾಷ್ಟ್ರೀಯ ವೈಮಾನಿಕ ಮತ್ತು ಗಗನಯಾನ ನಿಯಂತ್ರಣ ವಿಭಾಗ ಇವುಗಳಿಂದ ಕೂಡಿರುವುದು. ಈ ಪ್ರಮುಖ ವಿಭಾಗದ ಆರಂಭ್ಯ ಕಟ್ಟಡಗಳು 5 ಉಪವಿಭಾಗಗಳಾಗಿ ವಿಂಗಡಿಸಲ್ಪಟ್ಟಿದ್ದು ಅವು ವಿಜ್ಞಾನ ಸೌಧ, ವಿಜ್ಞಾನದ ಬೆಳವಣಿಗೆ, ಗ್ರಹಲೋಕ, ವಿಜ್ಞಾನದ ವಿಧಾನಗಳು ಮತ್ತು ವಿಜ್ಞಾನದ ಕ್ಷಿತಿಜಗಳು ಈ ಸ್ಥೂಲ ವಿಭಾಗಗಳು ನಾಳಿನ ವಿಶ್ವದ ಪಾತ್ರದ ಪ್ರದರ್ಶನಗಳು ಅಲ್ಲದೆ ಇಂದಿನ ಮಕ್ಕಳಿಗೆ ಸಂಶೋಧನೆ ನಡೆಸಲು ಸಹಾಯಕವಾಗಿ, ಪ್ರಾಯೋಗಿಕ ಭಾಗ ಮತ್ತು ವಿಜ್ಞಾನ ಮಂದಿರಗಳಿಂದ ಕೂಡಿದ್ದಾಗಿದೆ.

21ನೇ ಶತಮಾನದ ಕಾಲ್ಪನಿಕ ದೃಶ್ಯ ನಾಟಕದ ವಿವರವು ಕೌತುಕಪೂರ್ಣವಾಗಿದೆ. ಈ ನಾಟಕ ಶಾಲೆಯ ಮಧ್ಯ ರಂಗದಲ್ಲಿ ನಿರ್ಮಿತವಾಗಿರುವ ಘನಾಕೃತಿಯ ಉನ್ನತ ಸೌಧದಲ್ಲಿ ಶತಮಾನ 21ರ ವಿಶ್ವದ ಭವಿಷ್ಯದ ಚಿತ್ರರೂಪಗೊಂಡಿರುತ್ತದೆ.—ಕ್ರಿ. ಶ 2000... ಜೀವನ ತಂತ್ರ, ಬಹು ಜಟಿಲವಾದರೂ ಜೀವನಕ್ರಮ ಸರಳವಾದುದಾಗಿದೆ—ಸರಳ ಸಂಸಾರಿಕ ಗೃಹಜೀವನ ಮಟ್ಟ ಅತ್ಯುನ್ನತವಾದದ್ದು. ಮನೆಯಿಂದ ಹೊರ ಬಂದರೆ ಅವ್ಯಾಹತ ವಿದ್ಯುಚ್ಚಾಲಿತ ಯಾಂತ್ರಿಕ ಜೀವನ ನಾಡಿಯ ಶೀಘ್ರ ಸ್ಪಂದನ. ಇವೆಲ್ಲದರ ಪ್ರತ್ಯಕ್ಷಾನುಭವವನ್ನು ಒಂದು ಸಲಕ್ಕೆ ನೂರು ಜನರು ನೋಡಲು ಅನುಕೂಲವಿದೆ. ನಾಳಿನ ಜೀವಕ್ರಮದ 21 ನಿಮಿಷಗಳ ನಾಟಕವನ್ನು ಒಂದು ಗೋಲ ಕೃತಿಯ ಉತ್ಥಾಪಕ (elevator) ದಲ್ಲಿ ಇದ್ದುಕೊಂಡು ಪಾದದಿಂದ ಮೇಲಿನವರೆಗೂ ನೋಡುತ್ತಾ ಹೋಗಬಹುದು. ಈ ಘನಾಕೃತಿಯ ಸೌಧದ ಸುತ್ತಲೂ ಭೂಮಟ್ಟದಲ್ಲಿ ಅನೇಕಾನೇಕ ವಿಚಿತ್ರ ಪ್ರದರ್ಶನಗಳ ಏರ್ಪಾಟು ನಡೆದಿತ್ತು— ಜನರಲ್ ಮೋಟರ್ಸ್ ಕೋರ್ಪರೇಶನ್‌ನವರ ಅತಿ ಆಶ್ಚರ್ಯಕರವಾದ ನಾಳಿನ ಸೌಕರ್ಯ ವಿಧಾನಗಳು Pan ಅಮೇರಿಕನ್ Airways ರವರ ಸಬರ್ಬನ್ ಗಗನ ಸಂಚಾರವೂ ಕಲವೇ ನಿಮಿಷಗಳಲ್ಲಿ ವಿಶ್ವ ಪ್ರದರ್ಶನದ ಕನಸು ನನಸಾಗುವುದೆಂಬ ಭವಿಷ್ಯತ್ತನ್ನ ಘೋಷಿಸುತ್ತವೆ.

ವಾಣಿಜ್ಯ ಮತ್ತು ಕೈಗಾರಿಕಾ ವಿಭಾಗವು ಎರಡು ಗೋಲಾರ್ಧವಾಗಿ ನಿರ್ಮಿತವಾಗಿತ್ತು. ಸ್ವದೇಶ ಮತ್ತು ಪರದೇಶಗಳ Friendship mall, American way, Boulward—21 ವಿಭಾಗಗಳಲ್ಲಿ ಅಮೇರಿಕದ ವಾಣಿಜ್ಯ ಹಾಗೂ ಕೈಗಾರಿಕಾ ವಿಧಾನದ ಭವಿಷ್ಯತ್ ಚಿತ್ರವು ರೂಪುಗೊಂಡಿದೆ. ಅತೀ ಆಕರ್ಷಣವಾಗುವಂತ ಪುಟ್ಟೀಲಿಗಳ ಪ್ರದರ್ಶನಗಳು, ಈ ವಿಭಾಗದ ಪ್ರಗತಿಯ ಊಹಾ ಚಿತ್ರಗಳನ್ನ ಪ್ರತಿಬಿಂಬಿಸುತ್ತದೆ. ಇವು ಅಂತರರಾಷ್ಟ್ರೀಯ ಮಹಾ ಪಥಗಳಲ್ಲ ಹಾಗೂ Inter National Mallನ ಸುತ್ತಲೂ ಪ್ರದರ್ಶಿಸಲ್ಪಟ್ಟಿದ್ದವು.

ಇನ್ನು ವಿಜ್ಞಾನ ಪ್ರಗತಿಗೆ ಯಾವ ರೀತಿಯಲ್ಲಿಯೂ ಕಡಿಮೆಯಾಗದೆ ಸಂಸ್ಕೃತಿಯ ಸಾಧನೆಗಳನ್ನು ತೋರಿಸುವ ಕಲಾಪ್ರಪಂಚವು ಪ್ರಮುಖ ಸ್ಥಾನವನ್ನು ಹೊಂದಿದೆ. ಮನೋರಂಜನಾ ವಿಶ್ವದಲ್ಲಿ, ಅಸಂಖ್ಯಾತ ಕಲಾ ಪ್ರದರ್ಶನಗಳು, ಸಂಗೀತ, ನೃತ್ಯ ಮಂದಿರಗಳು, ಸ್ಪರ್ಧಾ ರಂಗ, ನಾಟಕ ಮಂದಿರ ಮತ್ತು ಕ್ರೀಡಾ ರಂಗ ಇವುಗಳನ್ನು ಒಳಗೊಂಡಿದೆ.

ಕೊನೆಯದಾಗಿ ಕಿರಿಯರಿಗೆ ಮತ್ತು ಹಿರಿಯರಿಗೆ ಅತ್ಯಂತ ಆಕರ್ಷಣೀಯವಾದ ಮನರಂಜನಾ ಪ್ರಪಂಚವು ಕ್ರಮವಾಗಿ gay way ಮತ್ತು Show Street ಗಳಲ್ಲಿ ತಾಂಡವವಾಡುತ್ತಿದ್ದವು.

ಮಕ್ಕಳಿಗಾಗಿ gay way ನಲ್ಲಿ ಅರ್ವಾಚೀನ ಯುಗದ ವೈಭವಯುಕ್ತ ಆಟದ ಸಾಮಾನುಗಳಾದರೆ ದೊಡ್ಡವರಿಗಾಗಿ Show Street ನಲ್ಲಿ ಸ್ವರ್ಗ ಸಮಾನವೆಂಬ ಭ್ರಮೆಯನ್ನುಂಟು ಮಾಡುವ ಮೆರುಗು. ಬೆಡಗಿನ ಲೋಕದಂತೆ ಕಾಣುವುದು. ಪ್ರಪಂಚದ ನಾನಾ ಮೂಲೆಗಳಿಂದ ಬಂದಿರುವ ಸುಂದರಿಯರ ಹಾವಭಾವ, ವಿಲಾಸ ವಿಭ್ರಮಗಳ ವೈಭವವೇ Show Streetನ ಜೀವಾಂಶವಾಗಿದೆ. ಈ Show Streetನ ಈ ವೈಭವ ತೀರಾ ಸಭ್ಯರೆಂದವರಿಗೆ ಮಾತ್ರ ಸ್ವಲ್ಪ ಕಳ ಮಟ್ಟದ್ದಂತೆ ಕಾಣಬಹುದು. ಸಾಮಾನ್ಯರಿಗೆ ಸ್ವರ್ಗದ ಭ್ರಮೆಯನ್ನೇ ಉಂಟುಮಾಡುವಂತಹುದಾಗಿದೆ.

ಇನ್ನೂ ಅರ್ಥವಾಗಬೇಕಾದರೆ ಕೆಲವನ್ನು ನಾನಿಲ್ಲಿ ತಿಳಿಸುತ್ತೇನೆ

ಅಲ್ಲಿ India Stall, U. S A. Stall, Italy Stall, ಇತ್ಯಾದಿ ಬೇರೆ ಬೇರೆ ದೇಶಗಳ Stallಗಳೆಲ್ಲಾ ಇವೆ. ಅದರಲ್ಲಿ U.S.A. Stallನಲ್ಲಿ 21ನೇ ಶತಮಾನದಲ್ಲ ಬರುವ ಕಾರಿನ Model ನ್ನು ತಯಾರಿಸಿ ಇಟ್ಟಿರುವರು. ಆ ಕಾರಿನ ಎಲ್ಲ ಕೆಲಸಗಳೂ ಬಟನ್ ಮೂಲಕವೇ ನಡೆಯುತ್ತದೆ. ಎಲ್ಲವೂ ಬಟನ್‌ಗಳೂ Switch ಮೂಲಕವೇ ಕೆಲಸ ನಡೆಯುತ್ತದೆ. Driver ಅಥವಾ ಒಬರ ಯಾವುದರೊಬ್ಬರು ಮಾತ್ರ ಸಹಾಯಕ್ಕೆ ಬೇಕಾಗುತ್ತದೆ. ಅವರೆ ಮನುಷ್ಯನಿಗೆ ಸ್ವಲ್ಪವೂ ಶ್ರಮವಿಲ್ಲ. ಅನಂತರ lift ನಲ್ಲ ಮೇಲೆ Space needleಗೆ ಹೋದೆವು. ಅಲ್ಲಿಗೆ ತೊಟ್ಟಿಲಿನಲ್ಲಿ ಇಬ್ಬರಾಗಿ ಕುಳಿತು ಕೂಡಾ ಹೋಗಬಹುದು. ಆದರೆ ಭಯವಾಗುತ್ತದೆ. ಮೇಲೆ ತುದಿಯಲ್ಲಿ ಒಂದು ಹೋಟೆಲ್ ಅಲ್ಲಿಯೇ ಒಂದು Science Hall ಇದೆ. ಅಲ್ಲಿ Space Drama ಆಕಾಶದ ಚಂದ್ರ, ನಕ್ಷತ್ರದಲ್ಲಿ ಏನಿದೆ ಎಂಬುದನ್ನು ತೋರಿಸುತ್ತಾರೆ. ಇನ್ನೊಂದು Food Circus— ಅಲ್ಲಿ 25,000 ಪೌಂಡು ಭಾರದ ದೊಡ್ಡದೊಂದು ಕೇಕ್ ತಯಾರಿಸಿ ಇಟ್ಟಿರುವರು. ದೊಡ್ಡ ಒಂದು ಗುಡಿಸಲಿನಷ್ಟು ದೊಡ್ಡದಾಗಿದೆ. ಮತ್ತು ಬೇರೆ ಬೇರೆ ತಿಂಡಿ ತಿನಸು ಇವು ಮತ್ತು Bell telephone, Tele-Star Sistone ಒಟ್ಟಿನಲ್ಲಿ ಇನ್ನು 40 50 ವರ್ಷದೊಳಗೆ ಮನುಷ್ಯನೇ ಒಂದು ಯಂತ್ರದಂತೆ ಚಲಿಸಲು ಸಾಧ್ಯವಾಗುವ ಹಾಗೆ ಮಾಡುತ್ತಾರೆ.

ಗೃಹಸ್ಥಾಶ್ರಮ ಧರ್ಮ ವೈಶಿಷ್ಟ್ಯ

(ಆರನೇ ಪುಟದಿಂದ)

ಯಲ್ಲಿ ತನ್ನ ಸೃಷ್ಟಿ ವೈಚಿತ್ರ್ಯದ ಪರಿಪೂರ್ಣತೆಯನ್ನು ವ್ಯಕ್ತಗೊಳಿಸಿರುವನೋ ಎಂಬಂತ ಭಾಸವಾಗುತ್ತದೆ. ಈ ಗುಣಾತಿಶಯದಿಂದ ಉತ್ಪನ್ನವಾಗುವ ಇಚ್ಛೆಯನ್ನು ಉದ್ದೇಶಿಸುವ ಸಲುವಾಗಿ ನಡಿಸುವ ಪರಸ್ಪರ ಸಮಾಗಮವೇ ವಿವಾಹದ ಪ್ರಯೋಜನಗಳಲ್ಲಿ ಒಂದಾಗಿರುತ್ತದೆ. ಪರಂತು ನಿಯಮವನ್ನು ಅತಿಕ್ರಮಿಸಿ ಉಂಡುತಿಂದು ತನ್ನ ಆರೋಗ್ಯವನ್ನು ಕೆಡಿಸಿಕೊಳ್ಳುವಂತೆ ಸತಿಪತಿಯರ ಸಂಸರ್ಗದಲ್ಲಿ ನಿಯಮವಿಲ್ಲದಿದ್ದರೆ, ಅವರ ವ್ಯಾಧಿ ಹಾಗೂ ಮಾನಸಿಕ ಅವನತಿಯು ತಲೆದೋರಿ ದುರಂತಕ್ಕೀಡಾಗಬಹುದು. ಹೀಗಾಗಬಾರದೆಂದೇ ಧರ್ಮಿಕರಾದ ನಮ್ಮ ಪೂರ್ವಾಚಾರ್ಯರು ವಿವಾಹವೆಂಬ ಅಗ್ನಿ ಸಾಕ್ಷಿಯಾದ ಶ್ರೇಷ್ಠ ಸಂಸ್ಕಾರವನ್ನು ನಿರ್ಣಯಿಸಿರುವರು. ಸತಿ-ಪತಿಯರು ಸಮ್ಮಿಳಿತರಾಗಿ ಛಲ, ಕಪಟಾದಿಗಳನ್ನು ವರ್ಜಿಸಿ, ಪರಸ್ಪರ ಪ್ರೀತಿಯಿಂದ ಸರಳ ಜೀವನವನ್ನು ನಡೆಸಿ, ಯಾವ ಪ್ರಾಣಿಗೂ ಹಿಂಸೆಯನ್ನುಂಟು ಮಾಡದೆ, ಆಸೂರಿ ತ್ರಿ ವಿಶ್ವದ ಹಿತವನ್ನೇ ಚಿಂತಿಸುತ್ತಾ ಗೃಹಸ್ಥಾಶ್ರಮ ಧರ್ಮಕರ್ಮವನ್ನು ನಿಯಮದಂತೆ ಪಾಲಿಸತಕ್ಕದ್ದೆಂತ ವೇದವು ಉಪ್ಪಾಟಿಸುತ್ತಲಿದೆ. ಆದುದರಿಂದ ವಿವಾಹಕ್ಕೆ ಇಷ್ಟೊಂದು ಮಹತ್ವ, ಪಾವಿತ್ರ್ಯತೆಯಿದೆ ಎಂಬುದು ಖಚಿತವಾಗುವುದು.

ವಿವಾಹಿತ ಸ್ತ್ರೀ ಪುರುಷರಿಗೆ ಪರಸ್ಪರ ಸಂಸರ್ಗದ ಸಂಪೂರ್ಣ ಸ್ವಾತಂತ್ರ್ಯವಿರುವುದಾದರೂ, ನಿತ್ಯಾನಿತ್ಯ ವಸ್ತು ವಿವೇಕ ಹಾಗೂ ಇಂದ್ರಿಯ ನಿಗ್ರಹ ಸಿದ್ಧಾಂತವನ್ನು ಒಪ್ಪಿರುವ ಕೇವಲ ಸಂತಾನೋತ್ಪತ್ತಿಗಾಗಿ ಮಾತ್ರ ಮಾಡಿ ತಮ್ಮ ಕುಲದ ವಂಶಾಭಿವೃದ್ಧಿಗೆ ಕಾರಣರಾಗುತ್ತಾರೆ ವಿವಾಹ ಸುಖವು ಸತಿ ಪತಿಯರಿಗೆ ಮಾತ್ರ ಮೀಸಲು. ಪರಂತು ತಾತ್ವಿಕ ದೃಷ್ಟಿಯಿಂದ ವಿವೇಚಿಸಿದಲ್ಲಿ ಅದು ಅಷ್ಟುಮಾತ್ರವಾಗಿರದೆ, ಮುಂದಿನ ಪೀಳಿಗೆಯ ಸುಖ ಶಾಂತಿಗೂ, ಅದೃಷ್ಟಕ್ಕೂ ಮಾರ್ಗದರ್ಶಿಯಾಗಿರುತ್ತದೆ.

ಮಿತ ಸಂತತಿಗೆ ಇಂದ್ರಿಯ ನಿಗ್ರಹಕ್ಕಿಂತ ಅತಿಶಯವಾದ ಪ್ರಯೋಗವು ಇನ್ನೊಂದಿರಲಾರದು. ಪ್ರಾಚೀನ ಕಾಲದ ಧಾರ್ಮಿಕ ಮನೋಭಾವದ ನಮ್ಮ ಪೂರ್ವಜರಲ್ಲಿದ್ದಂತಹ ಇಂದ್ರಿಯ ನಿಗ್ರಹದ ಉನ್ನತ ತತ್ವವಿಚಾರ ಧಾರೆಯನ್ನು ಅನುಷ್ಠಾನಕ್ಕೆ ತರಲು ಅಸಮರ್ಥರೆಂದು ಇಂದಿನ ವಿಲಾಸ ಪ್ರಿಯ ಜನಾಂಗಕ್ಕೆ ಮಿತ ಸಂತತಿಯ ನವೀನದಿಂದ ಹಾಗೂ ಸ್ವಾಸ್ಥ್ಯ-ಯೌವನ-ಸೌಂದರ್ಯಗಳ ಅಪಶ್ರಂ ತರಂಭೋಗಸಾಧನಾರ್ಥವಾಗಿ ಕುಟುಂಬ ಯೋಜನೆಯೇ ಮುಂತಾದ ಕೃತ್ರಿಮ ವಿಧಾನಗಳನ್ನು ಸ್ವಾಗತಿಸುತ್ತಿರುವರು. ಪರಂತು ಈ ಕೃತ್ರಿಮ ವಿಧಾನವೇ ಇಂದು ದ್ವಿತ್ರ್ಯಾರಾಮಾಗಿ ಬೆಳೆಯುತ್ತಿರುವ ಜಗತ್ತಿನ ಜನಸಂಖ್ಯೆಯನ್ನು ಕಡಿಮೆಯಲು ಏಕಮಾತ್ರ ಸಾಧನವಾಗಿ ಪರಿಣಮಿಸಿರುವದು. ಅದುಕಾರಣದಿಂದಲೇ ಧರ್ಮಭೂಮಿ ಯೆನಿಸಿಗ ನಮ್ಮ ಭಾರತದಲ್ಲೂ ಮುಂದಿನ ಇಂದಿನ ದಿನಗಳಲ್ಲಿ ಕುಟುಂಬ ಯೋಜನೆಯನ್ನು ಸ್ವಾಗತಿಸುವುದು ಅನಿವಾರ್ಯವಾಗಿದೆ.

ಶ್ಲೋ|| ಸರ್ವೇಶ್ವರ ಪ್ರಾಣಿನಾಮಾಧಾರಂ
ಗೃಹಸ್ಥಾಶ್ರಮ ಮೇವಚ |
ತೃಪ್ಯಂ ತಸ್ಮಾದ್ಭಕಾನಿ ದೇವರ್ಷಿ
ಪಿತೃ ಮಾನವಾ ||

|| ಓಂ ಸ್ವಸ್ತಿ ||

ನವೀನ ಸುಧಾರಣಗಳು

(ಐದನೇ ಪುಟದಿಂದ)

ಪಾಶ್ಚಾತ್ಯರ ಕೇವಲ ಅಂಧಾನುಕರಣವು ಅಲ್ಲೂ ಮುನ್ನುಗ್ಗುತ್ತಿತ್ತು. ಅಂತೆ ಜನತೆಯ ಪ್ರತಿನಿಧಿಗಳಾದ ಲೇಖಕರು ಈ ಬಗ್ಗೆ ಆಗಾಗ ಕೆಲವೊಂದು ಲೇಖನ ಬರೆಯುತ್ತಾರೆ. ಆದರೆ, ಈ ಬಗ್ಗೆ ಆವೊಂದು ಶಾಸನಸಂಸ್ಥೆಯಿಂದಲಾದರೂ, ಅವೊಂದು ಬಗೆಯ ಚಳವಳಿಯಿಂದಲೂ, ನವಸುಧಾರಣದ ಬಯಲಾಟದ ವೇಷ ಭೂಷಣದ ಉಚ್ಚಾಟನೆಗೆಳಸುವುದು ಆಲೋಚಿತವಾಗಿದೆ.

ಇದರ ಅಭಿನಯ–ನಾಟ್ಯಗಳ ಬಗೆಯೂ ಈ ಮೇಲಿನಂತಾಗಿದೆ. ನಾವು ಪರಿಚಿತನೊಂದಿಗೆ ನಮ್ಮ ಬೇಕು- ಬೇಡಗಳ ಅನಿಸಿಕೆಯನ್ನು ಚಿತ್ರಿಸುವಾಗಲೂ ತಲೆ ಕೈ ಮೊದಲಾದವುಗಳ ಚಲನವಲನವನ್ನು ಬಳಸುತ್ತೇವೆ. ಅಂದ ಮೇಲೆ, ಭಾಗವತನು ಹಾಡುವ ಪದ್ಯದ ಭಾವಗಳನ್ನು ಕುರಿತು ತಲೆ ಕೈ ಮೊದಲಾದ ಅಂಗಗಳ ಅಭಿನಯವೇ ಬೇಡವಾದರೆ, ಬೊಂಬೆಯಾಟಕ್ಕೂ ಜೀವಂತ ಮಾನವರ ವೇಷಕ್ಕೂ ಅಂತರವೇನಿದೆಯೆಂದು ಹೇಳಬಹುದಲ್ಲವು. ಬಯಲಾಟವು ನಾಗನೃತ್ಯ, ಭೂತದ ಕೋಲಗಳಂತೆ ನೃತ್ತರೂಪವೂ ಅಲ್ಲ, ನೃತ್ಯರೂಪವೂ ಅಲ್ಲ; ಇದು ನಾಟ್ಯರೂಪವಾಗಿದೆ. ಅಂದರೆ, ಪದ್ಯದ ಹಾಡಿಕೆಯ ಮೊತ್ತಿನಲ್ಲಿ ಬರಿಸುವ ವ್ಯಾಪಾರಾಂಗಣ ವ್ಯಾಗಳ ಸಂಭಾಷಣೆಗಳ ಅನುಸಾರವಾಗಿ ಅಭಿನಯಿಸುವುದು. ಬಯಲಾಟದಲ್ಲಿ ಅತ್ಯವಶ್ಯ – ಅನಿವಾರ್ಯಾಂಗವಾಗಿದೆ. 'ಬಯಲಾಟ' ಎಂಬ ಹೆಸರೇ ಇದನ್ನು ಸೂಚಿಸುತ್ತದೆ. ಹಾಗೆಂದರೆ, ಭರತ ನಾಟ್ಯದಂತಾಗಲೀ, ಕೇರಳದ ಕಥಕ್ಕಳಿಯಂತಾಗಲಿ ಮುದ್ರೆಗಳಿಗೇ ಇಲ್ಲಿ ಪ್ರಾಧಾನ್ಯವಿಲ್ಲ! ಸುಖ-ದುಃಖ, ಕೋಪ-ಶಾಂತ, ಶೃಂಗಾರ-ವೀರ ಭಯ-ಜುಗುಪ್ಸೆಗಳ ವಸ್ತು-ಶಬ್ದಗಳನ್ನು ಕಂಡಾಗ ನಾವು ಹೇಗೆ ಚಲಿಸಬಲ್ಲೆವೆಂಬುದನ್ನು ಆಬಾಲವೃದ್ಧರಲ್ಲಿ ಮೂಲತಃ ಪರಿಶೀಲಿಸಬೇಕು. ಬಯಲಾಟದ ಸೀಮಿತವಾದ ರಂಗಭೂಮಿಯಲ್ಲಿ ಕಲಾತ್ಮಕವಾಗಿ ಆಯಾ ಸಂದರ್ಭಾನುಸಾರ ಕುಣಿತಗಳನ್ನು ಬಳಸುವುದೇ ಇಲ್ಲಿನ ಧ್ಯೇಯವಾಗಿದೆ. ಚೆಂದದ ವೇಷಭೂಷಣಗಳನ್ನು ತೊಟ್ಟು, ರಂಗಭೂಮಿಯ ಎತ್ತರದ ಪೀಠದಲ್ಲಿ ಮಂಡಿಸಿ, ಪುರಾಣಿಕನಂತೆ ಅರ್ಥವನ್ನು ಮಾತ್ರ ವಿಸ್ತರಿಸುವುದು ಬಯಲಾಟಕ್ಕೆ ಮಾಡುವ ಅಪಚಾರವಾದೀತು!

ಕನ್ನಡದ ಯಕ್ಷಗಾನ ಕೂಟ—ಬಯಲಾಟಗಳಲ್ಲಿ ಅರ್ಥಗಾರಿಕೆಯು ಬೇಕೇ, ಬೇಡವೇ ಎಂಬುದು ದೊಡ್ಡ ಪ್ರಶ್ನೆಯೆಂದು ಕೆಲವರು ಅಭಿಪ್ರಾಯಿಸುತ್ತಾರೆ. "ಈ ಕಲೆ ಮಾತೇ ಪ್ರಧಾನವಾದ ಕಲೆಯಲ್ಲ—ಮಾತಿನ ಕೆಲಸವನ್ನು ಬರೀ ನಾಟ್ಯ ನೃತ್ಯ ಮಾಡಬಲ್ಲದು—ಭಾವ ಪ್ರಕಟನೆಗೆ ಮಾತೇ ಅಡ್ಡಿ. ರಸ ಪ್ರತಿಪಾದನೆ ಮತ್ತು ಪಾತ್ರಗಳ ಪೋಷಣೆಯ ದೃಷ್ಟಿಯಿಂದ ಸಂಗೀತ ನೃತ್ಯ ಮಾಡಬಹುದಾದ ಕೆಲಸ ಮಾತು ಮಾಡಲಾರದು. ಮಾತು ಕೇವಲ ಪಾಮರ ವರ್ಗದ ರಂಜನೆಯ ಸಾಧನ" ವೆಂದು ಹೇಳುತ್ತದೆ (ಸುಧಾ—ಪತ್ರಿಕೆ: 4—7—(೬೨ರ ಸಂಚಿಕೆ) ಆ ಲೇಖಕರು ಅದಾವುದೋ ಒಂದನ್ನು ಅಲ್ಲಿ ಹೇಳಬಯಸಿ, ಇನ್ನಾವುದೂ ಬೇಡವೆಂದು ಹೇಳಿದಂತಾಗಿದೆ. ವಿದೇಶೀಯರಿಗೆ ಈ ಕಲೆಯನ್ನು ಪ್ರದರ್ಶಿಸುವಲ್ಲಿ ಈ ಕನ್ನಡ ಮಾತುಗಾರಿಕೆ ಅವರಿಗೆ ಅರ್ಥವಾಗದು, ಕಾಲಹರಣವಾದೀತೆಂದು; ಅತಏವ ಅರ್ಥವಿಲ್ಲದ ಬಯಲಾಟವೇ ವಿದೇಶೀಯರಿಗೆ ಕಾಣಲು ಸೊಗಸುವುದೆಂದು ಇಲ್ಲಿ ಒಂದು ಬಗೆತವಿದೆ. ಪರಂತು, ಸ್ವದೇಶೀಯರಿಗೂ ಅಂತೆ ಅರ್ಥವಿಲ್ಲದ ಬಯಲಾಟ ಸಾಕೆಂದು ಹೇಳುವುದು ನಿರರ್ಥಕವಾದುದು! ಏಕೆಂದರೆ, ಯಕ್ಷಗಾನ ಕೂಟದಲ್ಲಿ ಅರ್ಥಗಾರಿಕೆಗೆಡೆಯು ಅತ್ಯವಶ್ಯವಷ್ಟೆ? ಕನ್ನಡ ಪ್ರಸಂಗಗಳ ಹಳೆಯ ಪ್ರತಿಗಳಲ್ಲಿ (ಕೈಬರಹಗಳಲ್ಲಿ) ಅಲ್ಲಲ್ಲಿ ಬರುವ ಪದ್ಯವಾದ ಮೇಲಿನ ವಚನಗಳನ್ನೂ, ಪದ್ಯದ ಕೊನೆಗೆ 'ಹೀಗೆಂದನು' ಎಂಬ ವಾಚಕನನ್ನೂ ಗಮನಿಸಿದರೆ, ಪದ್ಯವು ಕೇವಲ ಅಭಿನಯ ಮಾಧ್ಯಮವಾಗಿರಬಲ್ಲುದಲ್ಲ, ಪದ್ಯದ ಅರ್ಥವನ್ನು ಅಭಿನಯದಿಂದ ತುಸ ಸೂಚಿಸುತ್ತಾ ಮತ್ತೆ ಬಾಯ್ದೆರೆದು—ಅತಿ ವಿಸ್ತಾರವಾಗದಂತೆ—ಅತಿ ಸಂಕ್ಷೇಪವಾಗದಂತೆ—ಸಂದರ್ಭೋಚಿತವಾಗಿ ಮೂಲಗ್ರಂಥಗಳ ವರ್ಣನೆ-ವಾದಗಳನ್ನು ಸಂಯೋಜಿಸಿ, ಅರ್ಥವಿಸುವುದು ಅತ್ಯವಶ್ಯ ಅವಿಭಾಜ್ಯವಾಗಿದೆಯೆಂಬುದು ಪ್ರಾಚೀನಾರ್ವಾಚೀನ ಜನರಿಗೆ ತಿಳಿಯುತ್ತದೆ.

"ಯಕ್ಷಗಾನ ನೃತ್ಯ ಪ್ರಧಾನವಾದ ಕಲೆ—ಇದರ ಸಮಕಾಲೀನ ಕಲೆಗಳಾದ "ಭೂತದ ಕೋಲ", "ನಾಗ ನೃತ್ಯ" ಇವೂ ಮಾತಿನಿಂದ ಯುಕ್ತವಾಗಿ ನೃತ್ಯ ಪ್ರಧಾನವಾದ ಕಲೆಗಳಾಗಿವೆ"ಯೆಂದೂ ಬೇರೆ ಕೇಳುತ್ತದೆ. ಯಕ್ಷಗಾನ ಕೂಟ, ಬಯಲಾಟಗಳ ಹಿನ್ನೆಲೆಗಳಾದ ಆ ಕಲೆಗಳಲ್ಲೂ; ಅವುಗಳಂತೆ, ಕನ್ನಡದ ಜಾನಪದ ಕಲೆಗಳಾದ ಆಟಿಕಳಂಜ, ಸಿಂಗಾರಿ, ಮೊದಲಾದುವುಗಳಲ್ಲೂ ಬಾಯ್ದೆರೆದು ತನ್ನ ಹಿನ್ನೆಲೆ ಮುನ್ನಡೆಗಳನ್ನು ಸೂಚಿಸಿ, ಮತ್ತೆ ಪ್ರಸ್ತುತ ದಿನ ವಿಚಾರಕ್ಕೆಳಸುವುದನ್ನು (ವಿವರಿಸುವುದನ್ನು) ನಾವೆಂದೂ ಮರೆಯುವಂತಿಲ್ಲ. ಅಂದ ಮೇಲೆ, ಬಯಲಾಟಕ್ಕೆ ಕುಣಿತವೇ ಬೇಕಾಗಿಲ್ಲವೆಂಬ ಬೇರೆಯವರಂತೆ, ಬಯಲಾಟಕ್ಕೆ ಅರ್ಥಗಾರಿಕೆಯೇ ಬೇಕಾಗಿಲ್ಲವೆಂಬುದೂ ಅಪಹಾಸ್ಯಕರವಾದ ಮಾತಾಗುವುದಿಲ್ಲವೇ?

ಇದೀಗ ಒಂದೆರಡು ವರ್ಷಗಳ ಹಿಂದಿನಿಂದ ತೊಡಗಿದ ಪ್ರಸಂಗದ (ಪ್ರಬಂಧದ—ಕಥೆಯ) ಆಯ್ಕೆಯ ಬಗ್ಗೆ ಆಧುನಿಕ ಕಥೆಯನ್ನು ಹೇಳದ ಈ ಲೇಖನ ಅಪೂರ್ಣವಾದೀತು. ಪುರಾಣ ಪುರುಷರ ದಿವ್ಯ ಕಥೆಗಳನ್ನು ಆರಿಸಿ ಬರೆದ ಪದ್ಯಾತ್ಮಕ ಪ್ರಸಂಗಗಳೇ ಹೆಚ್ಚಾಗಿ ಪ್ರಾಚೀನದಿಂದ ಇದುವರೆಗೆ ಬಳಕೆಗೆ ಬಂದಿವೆ. ಅವುಗಳಲ್ಲದೆ, ಭೂತಗಳ—ಕಾರಣಿಕ ಪುರುಷರ ಹೆಸರಲ್ಲಿ, ಹಿಂದೂ-ಮುಸಲ್ಮಾನ-ಕ್ರಿಸ್ತ-ಜೈನ ಪಾತ್ರಗಳ ಕಲ್ಪನೆಯಿಂದ ಎಷ್ಟೋ ಕಾಲ್ಪನಿಕ ಕತೆಗಳು ಹೊಸತಾಗಿ ಬರೆಯಲಾಗುತ್ತವೆ. ಒಂದು ವರ್ಷದ ಈ ಹೊಸ ಪ್ರಸಂಗವು ಮುಂದಿನ ವರ್ಷದಲ್ಲಿ ಬಳಸಲಾಗುವುದಿಲ್ಲೆಂದರೇನೇ ಇದರ ಮೌಲಿಕತೆಯು ಸುವೇದ್ಯವಾಗುತ್ತದೆ! ಕಥೆ-ಪಾತ್ರ-ಘಟನೆಗಳಲ್ಲಿ ಹೊಂದಾಣಿಕೆಯಿಲ್ಲ ಮಾತ್ರವಲ್ಲ, ಒಬ್ಬೊಬ್ಬರು ಒಂದೊಂದಾಗಿ ಕಲ್ಪಿಸುವುದೂ ಇದೆ. ಪೌರಾಣಿಕ ಘಟನೆಗಳಿಗೆ ಚಾರಿತ್ರಿಕ ನಿರೂಪಣೆಯನ್ನೋ, ಸಾಮಾಜಿಕ ವಿಷಯಗಳನ್ನೋ, ದಂತಕತೆಗಳನ್ನೋ ಹೊಸೆದರೆ. ಇಂತಹ ಅಧಿಕಪ್ರಸಂಗಗಳು ಆರೆಂಟು ತಿಂಗಳಲ್ಲಿ ಮರೆಯಾಗಿ ವಿಸ್ಮೃತಿಗೊಳ್ಳುವುದು ತಪ್ಪಿಗದು! ಆದರೂ ಪ್ರತಿ ವರ್ಷಕ್ಕೆ ಒಂದೆರಡು 'ಅಣಬೆ'ಗಳಂತೆ ಹುಟ್ಟುವ ಇವುಗಳು ಧನ ಸಂಗ್ರಹದ ಕಾರಣಕ್ಕಾಗಿ ಆದರಿಸಲ್ಪಡುವುದು ಭೂಷಣವಾಗದೆಂದು ಬಲ್ಲವರಿಗೆ ಹೇಳಬೇಕಾಗಿಲ್ಲ! ಯಕ್ಷಗಾನ ಕೂಟ-ಬಯಲಾಟಗಳಲ್ಲಿ ಸುಧಾರಣೆಯನ್ನು ಬಯಸದೆ, ಬಳಸದೆ, ಇನ್ನಾದರೂ ಪ್ರಾಚೀನ ಪರಂಪರೆಯಂತೆ ನಡೆಯಲು ಶ್ರಮಿಸಬೇಕಾಗಿದೆ! ಇತ್ಯಲಂ!

ಜಯಧ್ವನಿ

ಜಯ ಭೇರಿ ಕೇಳುತಿದೆ ಜಯವಾಣಿ ಮೊಳಗುತಿದೆ |
ಜಯಧ್ವನಿಗೆ ಜಯವೆಂದು ಹೃದಯದೇ ಮಿಡಿಯುತಿದೆ ||
ಒಗ್ಗಟ್ಟಿನಾ ರೀತಿ ವೈರಿಗದು ಭೀತಿ |
ಹೊಸೆದು ಹೊಮ್ಮಲಿ ಸ್ಫೂರ್ತಿ ಬಹುದಯ್ಯ ಕೀರ್ತಿ || ಜಯ ಭೇರಿ ||
ಅಮ್ಮ ಕರೆವಳು ಇಲ್ಲಿ ವೈರಿಯನು ಗೆಲ್ಲಿ |
ನೋಡು ದೈತ್ಯನ ಅಲ್ಲಿ ಕಾವಲಿನ ಗಡಿಯಲ್ಲಿ ||
ನಮ್ಮ ಸೇನೆಯಲ್ಲಿ ಅಮರ ಕೀರ್ತಿಗೆ ಚೆಲ್ಲಿ |
ಮಾನವಂತರೆ ನಿಲ್ಲಿ ದುರುಳ ದೈತ್ಯನ ಕೊಲ್ಲಿ || ಜಯ ಭೇರಿ ||
ಉತ್ತರದ ಗಡಿಯಲ್ಲಿ ಎತ್ತರದ ಶಿಖರದಲಿ |
ಭಾರತದ ಜಯವಿಯುವ ಹಿಡಿ ಬಾವುಟದಲ್ಲಿ ||
ಧನವನರ್ಪಿಸಿ ಇಂದು ತನುವನರ್ಪಿಸಿ ಬಂದು |
ಜೀವನವ ಪಾವನವು ನಮ್ಮ ಕೀರ್ತಿಯಲಿಂದು || ಜಯ ಭೇರಿ ||
ಸ್ವಾತಂತ್ರ್ಯದುದಯದಲಿ ಸಮರ ಸಂಗ್ರಾಮದಲಿ |
ಗಿರಿ ಶೃಂಗ ತುದಿಯಲ್ಲಿ ಹಿಮಶಿರಿಯ ಬಯಲಲ್ಲಿ ||
ಸ್ವರ್ಗ ಸೋಪಾನದ ಮಾರ್ಗವಿದು ಮುಂದೆ |
ದುರ್ಗರಿಪುವನು ಗೆಲ್ಲಿ ಸನ್ಮಾರ್ಗವಿದೆ ಇಂದೇ || ಜಯ ಭೇರಿ ||
ನರರಿಂದ ನಮಗಿಂದು ಭಯವು ಏತರದೆಂದು |
ಸುರರು ಜಯ ಜಯವೆಂದು ಪಾಡುತಿಹರಿಂದು ||
ಜಯ ಸುಧೆಯು ಹರಿಯುತಿದೆ ಜಯವೆಂದು ಮೊಳಗುತಿದೆ |
ಜಯ ನಮೋ ಭಾರತಿಯೆ ಜಯ ನಮಗೆ ಮಾತೆಯೇ ||ಜಯಭೇರಿ||

— ಬಿ. ಎ. ಶೆಟ್ಟಿ, ಬೆಂಗಾನ್ತಿಮಾರ್.

ಕನ್ನಡಕದ ವ್ಯಾಪಾರದಲ್ಲಿ ೨೫ ವರ್ಷಗಳ ದೀರ್ಘಕಾಲದ ಅನುಭವ!

ಮುಂಬೈಗೆ ಬಂದಾಗ ನಮ್ಮ ನವ್ಯ ಹಾಗೂ ಭವ್ಯವಾಗಿ ನಿರ್ಮಿಸಲಾದ "ಶೋರೂಮ್"ನ್ನು ಸಂದರ್ಶಿಸಲು ಮರೆಯದಿರಿ:

ಕರ್ನಾಟಕ ಒಪ್ಟಿಕಲ್ ಕಂ.,

[London Qualified Optometrist.]

11-ಬಿ, ಗನ್‌ಬೋ ಸ್ಟ್ರೀಟ್, ಮುಂಬೈ—1.



ನಮ್ಮ ವೈಶಿಷ್ಟ್ಯಗಳು..

- ಶಾಸ್ತ್ರೀಯ ನೇತ್ರಪರೀಕ್ಷೆ—ಲಂಡನ್ನಿನಲ್ಲಿ ನೇತ್ರ ಪರೀಕ್ಷೆಯ ಪದವಿ ಪಡೆದವರಿಂದ
- ಮೆಳ್ಳುದೃಷ್ಟಿಯ ನಿವಾರಣೆ— ಆಪರೇಶನ್ನು ಮಾಡಬೇಕಾಗಿಲ್ಲ

ಇವಲ್ಲದೆ, ● ಅತ್ಯಾಧುನಿಕ ಫ್ರೇಮುಗಳು ● ಅತ್ಯುತ್ತಮ ಗ್ಲಾಸುಗಳು
● ವಿವಿಧ ಗೋಗಲ್ಸುಗಳು— ಯೋಗ್ಯ ಬೆಲೆಗೆ ದೊರಕುವವು.

ಶ್ರೀ ಕೆ. ಜೆ. ಶೆಟ್ಟಿ, ಎಂ.ಎಲ್.ಸಿ., ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ್ನು ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:–
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು



ಭದ್ರಾವತಿಯ ಉಕ್ಕಿನ ಕಾರಖಾನೆಯ ವಿಸ್ತರಣೆಗಾಗಿ ವಿದ್ಯುತ್ತನ್ನು ಶರಾವತಿ ಪೂರೈಸುವುದರೊಡನೆ ದೇಶಕ್ಕೆ ವಿದೇಶ ವಿನಿಮಯವನ್ನೂ ಸಂಪಾದಿಸಿ ಕೊಡುತ್ತದೆ.



ಕೃಷ್ಣರಾಜೇಂದ್ರ ಮಿಲ್ಸ್‌ನಲ್ಲಿ ಬಟ್ಟೆಯ ಉತ್ಪಾದನೆ ಹೆಚ್ಚಲು ಶರಾವತಿ ಕಾರಣವಾಗಿದೆ.

ಶರಾವತಿ ಯೋಜನೆಯ ಮುಖ್ಯ ಇಂಜಿನಿಯರ್ ಮೈಸೂರು ರಾಜ್ಯದ ವಿದ್ಯುತ್ ಮಂಡಲದ ಅಧ್ಯಕ್ಷ ಶ್ರೀ ಜಿ. ಸಾಂಬಶಿವಯ್ಯ.

ತ್ರಿರಂಗ—ತ್ರಿರಂಗಿನ ಮಹಾನಾಯಕರು

(ನಾಲ್ಕನೇ ಪುಟದಿಂದ)

ಸಂಘವಾದ್ರೂ ಏನೂ ಮಾಡೋಕಾಗೋಲ್ಲ. ಸಂಯಮವೆಂಬುದು ಭಾರತಕ್ಕೇ ಮಾತ್ರ ಮೀಸಲಾಗಿರೋದಲ್ಲ. ಪಾಕಿಸ್ತಾನ ಕದನವಿರಾಮ ರೇಖೆಯನ್ನು ಪಾಲಿಸದೆ ಹೋದರೆ ಭಾರತದ ಪ್ರದೇಶದಲ್ಲಿ ನೆಮ್ಮದಿಯಾದೀತೆ? ಅದಕ್ಕೆಂದೇ ಆಕ್ರಮಣಕಾರರ ಚಲನವಲನಗಳನ್ನು ತಡೆಯುವ ಏಕಮೇವ ಉದ್ದೇಶದಿಂದ ಹೀಗೆ ಮಾಡಿತು...”

‘ಇಷ್ಟು ಸಾಹಸ ತೋರಿಸ ಬೇಕಾದ್ರೆ ಬಾರಿ ಆಲೋಚನೆ ಮಾಡಿರ ಬೇಕು...’

‘ರಾಷ್ಟ್ರಪತಿಯವರು ಸಹಾ ಆಕ್ರಾಂತ ಪ್ರದೇಶವನ್ನು ಸುತ್ತಾಡಿ, ಧೈರ್ಯ ತುಂಬಿ ಬಂದರು ನೋಡು...’

‘ಅದು ಸರಿ. ಅವರು ನೇಫಾದಲ್ಲೂ ತಿರುಗಾಡಿದ್ರಲ್ಲ...’

“ಎಷ್ಟಾದ್ರೂ ತ್ರಿರಂಗದ ಮಹಾಸೇನಾನಾಯಕರಲ್ಲವೆ?”

‘ತ್ರಿರಂಗಿನ ಮಹಾ ನಾಯಕರೂ ಹೌದು....’

‘ಹ್ಞೂ.... ಬುದ್ಧಿವಂತೆ ನೀನನ್ನೋದು ನಿಜ...’

‘ಬುದ್ಧಿವಂತರ ಕೈಹಿಡಿಯೋಕೆ ಹಾಗೆಯೇ ಇರಬೇಕು ನೋಡಿ...’

‘ನಿನ್ನ ಹೊಟ್ಟೆಯಲ್ಲಿ ಕಬಡ್ಡಿ ಆಟ ನಡೆಯುತ್ತಯೆ?’

‘ಅಂದ್ರೆ...’

‘.... ....’

‘ಓ.... ಆಗದೆ ಉಂಟೆ ಮತ್ತೆ? ಮೊದ್ಲೇ ಬರುವಾಗ ಗಂಟೆ ಎಂಟು ದಾಟಿದೆ..’

‘ಈಗ ನೋಡು ಒಂಬತ್ತೂ ವರೆಯಾಯ್ತು...’

‘ಕಣ್ಣು ತೂಕಡಿಸುತ್ತೆ.... ಬೇಗ ಬನ್ನೀಂದ್ರೆ....’

‘ಮತ್ತ್ಯಾಕೆ ಅನಾವಶ್ಯಕ ಮಾತಿಗೆ ತೊಡಗೋದು?’

‘ಅದೂ ಆವಶ್ಯಕವಾಗಿಯೇ ಪರಿಣಮಿಸಿದೆ ನೋಡಿ....’

‘ಹೌದಮ್ಮ, ಕಷ್ಟದಲ್ಲಿಯೇ ಸುಖವನ್ನರಸುವಂತೆ...’

‘ಬನ್ನಿ ಬೇಗ...ಬಚ್ಚಲು ಮನೇ ಬಾಲ್ದಿಯಲ್ಲಿದೆ ನೀರು...’

“ಅಷ್ಟನ್ನೋದೇ ತಡ....”

—ಗೋರಾ.

ಮಣಿಪಾಲ ಇಂಜಿನಿಯರಿಂಗ್ ಕಾಲೇಜ್ ಸಂಘದ ಉದ್ಘಾಟನೆ

ಮಣಿಪಾಲ, ಆ. ೨೬–ಮೈಸೂರು ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸದಸ್ಯ ಶ್ರೀ ಜೆ. ಮಹಮ್ಮದ್ ಇಮಾಂರವರು ಮಣಿಪಾಲ ಇಂಜಿನಿಯರಿಂಗ್ ಕಾಲೇಜ್ ಸಂಘವನ್ನು ಉದ್ಘಾಟಿಸುತ್ತಾ ವಿದ್ಯಾರ್ಥಿಗಳು ಶಿಸ್ತು ಹಾಗೂ ಪ್ರಾಮಾಣಿಕತೆಯನ್ನು ಪಾಲಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ವಿದ್ಯಾರ್ಥಿಗಳು ದೇಶದ ಬಗ್ಗೆ ಆಲೋಚಿಸದಿದ್ದರೆ ಪ್ರಜಾಪ್ರಭುತ್ವ ಯಶಸ್ವಿಯಾಗದೆಂದೂ, ದೇಶದ ಅಭಿವೃದ್ಧಿಗಾಗಿ ಶ್ರಮಿಸಿ ಜನರಲ್ಲಿ ಸಂತೋಷವನ್ನುಂಟುಮಾಡಬೇಕಾದುದು ಅವರನ್ನು ಆವಲಂಬಿಸಿದೆ ಎಂದೂ ಕಳೆದ ೧೦ ವರ್ಷಗಳಿಂದ ಡಾ॥ ಪೈಯವರು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಪ್ರಜಾಪ್ರಭುತ್ವದಲ್ಲ ಅನುಸರಿಸಬೇಕಾದುದೆಂದೂ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಡಾ॥ ಟಿ. ಎ. ಎ. ಪೈಯವರು ಈ ಸಂಘವು ವಿದ್ಯಾರ್ಥಿಗಳನ್ನು ಎಲ್ಲ ರೀತಿಯಲ್ಲೂ ಉತ್ತಮ ಪ್ರಜೆಗಳನ್ನಾಗಿ ಮಾಡುವುದೆಂದೂ ನಿಮ್ಮ ವಿದ್ಯಾರ್ಥಿಗಳನ್ನು [illegible] ವೆಲ್ಲ ಎದುರು ನೋಡುತ್ತಿರುವ ಭವ್ಯ ಭವಿಷ್ಯತ್ತಿನ ತಳಪಾಯವಾಗಲಿ ಎಂದು ಹಾರೈಸಿದರು.

ಕಾಲೇಜಿನ ಪ್ರಿನ್ಸಿಪಾಲ್ ಹಾಗೂ ಸಂಘದ ಅಧ್ಯಕ್ಷ ಶ್ರೀ ಸಿ. ವೆಂಕಟರಮಣ ಭಟ್ಟರವರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಕೆ. ಎಸ್. ಕೆ. ವಾಸುದೇವ ರಾವ್‌ರವರು ವಂದನೆಗಳನ್ನರ್ಪಿಸಿದರು.

ಹಿಂದಿ ಪ್ರಮಾಣ ಪತ್ರ ವಿತರಣೆ

ಮೂಡಿ, ಆ. ೨೨ – “ದ. ಭಾ. ಹಿಂದಿ ಪ್ರಚಾರ ಸಭಾ, ಮದ್ರಾಸು” ಇವರಿಂದ ಜರುಗಿಸಲ್ಪಡುವ ಪ್ರಾರಂಭಿಕ ಪರೀಕ್ಷೆಯಲ್ಲಿ [illegible] ಕೇಂದ್ರದಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣ ಪತ್ರ ವಿತರಣೆಯು ತಾ. ೨೦ರಂದು, ಡಾ॥ ಬಾಲಕೃಷ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ; ಶ್ರೀ ಎ. ಶಿವಪ್ಪ ಪೂಜಾರಿಗಳವರಿಂದ ನೆರವೇರಿತೆಂದು ತಿಳಿದುಬಂದಿದೆ.

ಜಟಿಪುರು

ಅಲ್ಲಲ್ಲಿಯ ಸುದ್ದಿಸಾರ

ಸುರತ್ಕಲ್ಲಿನ ಕಾಲೇಜ್ ಸಂಘ ಮತ್ತು ಹಾಸ್ಟೆಲ್ ಬ್ಲಾಕ್ ಉದ್ಘಾಟನೆ

ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಕಳೆದ ತಾ. 25ರಂದು ಸುರತ್ಕಲ್ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ಸಂಘ ಮತ್ತು ಮೂರನೇ ಹಾಸ್ಟೆಲ್ ಬ್ಲಾಕ್‌ನ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ಕರ್ ಶ್ರೀ ಬಿ. ವೈಕುಂಠ ಬಾಳಿಗಾರವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಯುನಿವರ್ಸಿಟಿಯ ವೈಸ್ ಚಾನ್ಸಲರ್ ಡಾ| ಕೆ. ಎಲ್. ಶ್ರೀಮಾಲಿಯವರು ಮುಖ್ಯ ಅತಿಥಿಗಳಾಗಿದ್ದರು.

ಪ್ರಾರಂಭದಲ್ಲಿ ಪ್ರಾರ್ಥನೆ ನಡೆದ ಬಳಿಕ ಪ್ರಿನ್ಸಿಪಾಲ್ ಎ. ಎಸ್. ಅಯ್ಯರವರು ಸ್ವಾಗತಿಸಿ, ಕಾಲೇಜು ಸಾಧಿಸಿದ ಪ್ರಗತಿಯನ್ನು ವಿವರಿಸಿದರು. ಸಂಘದ ಅಧ್ಯಕ್ಷ ಶ್ರೀ ಡಿ. ಕೆ. ಗೋಯಲ್‌ರವರು ಸಂಘದ ಉದ್ದೇಶಗಳನ್ನು ವಿವರಿಸಿದರು.

ಶ್ರೀ ಶ್ರೀಮಾಲಿಯವರು ಮಾತಾಡುತ್ತಾ ಕಾಲೇಜಿನ ಪ್ರಗತಿಯನ್ನು ಪ್ರಶಂಸಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಸರ್ವೋತ್ಕೃಷ್ಟ ವಿದ್ಯಾರ್ಥಿಯೆಂದು ಶ್ರೀ ಸುರೇಶ ಕಿಣಿಯವರಿಗೆ ಕ್ರಿಸನ್ ಮೋರಿಸನ್ ಸ್ವರ್ಣ ಪದಕ ನೀಡಲಾಗಿದೆ.

ಮೈಸೂರು ವಿ.ವಿ. ನಿಲಯದ ಸುವರ್ಣೋತ್ಸವದ ನಿಧಿಗೆ ಜಿಲ್ಲೆಯಿಂದ ಚಂದಾ ಸಂಗ್ರಹ

ಸದ್ಯದಲ್ಲಿಯೇ ಜರಗಲಿರುವ ಮೈಸೂರು ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವಕ್ಕೆ ರೂ. 5 ಕೋಟಿಯ ನಿಧಿಯೊಂದನ್ನು ಸಂಗ್ರಹಿಸುವ ಉದ್ದೇಶದಿಂದ ಮಂಗಳೂರಿನಲ್ಲಿ ಸೇರಿದ ಸಭೆಯ ಪ್ರಾರಂಭದಲ್ಲಿ ಶ್ರೀ ಕೆ. ಎಸ್. ಎನ್ ಅಡಿಗರು ಸ್ವಾಗತಿಸಿದರು. ಮಾತ್ರವಲ್ಲದೆ ಅತಿಥಿಗಳಾದ ಡಾ| ಶ್ರೀಮಾಲಿ, ಶ್ರೀ ನಿಜಲಿಂಗಪ್ಪ, ಶ್ರೀ ವೈಕುಂಠ ಬಾಳಿಗಾ ಹಾಗೂ ಶ್ರೀ ಕೆ. ಆರ್ ರಾಮಚಂದ್ರನ್‌ರವರ ಸಮಾಗಮನ ಉದ್ದೇಶವನ್ನು ವಿವರಿಸಿದರು. ಅತಿಥಿಗಳೆಲ್ಲರೂ ಉದಾರ ದೇಣಿಗೆ ನೀಡುವಂತೆ ವಿನಂತಿಸಿದರು. ಶ್ರೀಮಾಲಿಯವರು ಜಿಲ್ಲೆಯಲ್ಲಿ ಸ್ನಾತಕೋತ್ತರ ಶಿಕ್ಷಣ ಸೌಲಭ್ಯ ಒದಗಿಸುವ ಭರವಸೆ ವ್ಯಕ್ತಪಡಿಸಿದರು.

ಸಭೆಯಲ್ಲಿ ಜಿಲ್ಲೆಯ ಅನೇಕ ಸಂಘ ಸಂಸ್ಥೆಗಳ ವತಿಯಿಂದ ಸುಮಾರು 3 ಲಕ್ಷ ರೂಪಾಯಿಗಳೂ ವೈಯಕ್ತಿಕವಾಗಿ ಸುಮಾರು 16 ಸಾವಿರ ರೂಪಾಯಿಗಳೂ ವಾಗ್ದಾನವಾಗಿರುವುದಾಗಿ ತಿಳಿದು ಬಂದಿದೆ.

ವಿದಾಯ ಸತ್ಕಾರ ಕೂಟ

ಪುಣೆ, ಆ. 33— ಸ್ಥಳೀಯ ಡಾ| ಎ| ಶಾಲಾ ಹಿಂದಿ ಅಧ್ಯಾಪಕ ಶ್ರೀ ಎ. ಶಿವಪ್ಪ ಪೂಜಾರಿಯವರು ಭಡ್ತಿ ಹೊಂದಿ ಬೆಂಜನಪದವು ಬೋರ್ಡ್ ಹೈಸ್ಕೂಲಿಗೆ ಹೋಗುವ ನಿಮಿತ್ತ ಅವರನ್ನು ಸತ್ಕರಿಸುವ ಸಮಾರಂಭವು ತಾ 20ರಂದು, ಪುಣೆ ಆಸ್ಪತ್ರೆಯ ಡಾ| ಬಾಲಕೃಷ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿನಿಯರಲ್ಲಿ ಕುಮಾರಿಯರಾದ ಎ. ಕೆ. ದೀಪಿಕ ಭಂಡಾರಿ, ಸ್ವಪ್ನ, ಸತ್ಯವತಿ, ರೇವತಿ ಹಾಗೂ ವಿದ್ಯಾರ್ಥಿಗಳಲ್ಲಿ ಪ್ರಕಾಶ್ ಕಾಮತ್, ಚಂದಪ್ಪ, ಸಾಂತಪ್ಪನವರೂ, ಇತರರ ಪೈಕಿ ಯಂ. ಅಣ್ಣು ಗೌಡ, ಕೆ. ಜನಾರ್ಧನ್, ಕೆ. ವಿಶ್ವನಾಥ ಶೆಟ್ಟಿ, ಚಂದ್ರರಾಜ್, ಪಾರ್ಶಕಜೆ ಈಶ್ವರ ಭಟ್‌ರವರು ಅತಿಥಿಗಳಿಗೆ ಶುಭಕೋರಿ ಮಾತಾಡಿದರು.

ಅದಲ್ಲದೆ ಶಾಲಾ ವಿದ್ಯಾರ್ಥಿಗಳೂ, ಮಹಿಳಾ ಸಮಾಜದ ಹಿಂದಿ ವಿದ್ಯಾರ್ಥಿನಿಯರೂ ಮತ್ತು ಕುಮಾರಿಯವರಾದ ಸತ್ಯವತಿ, ರೇವತಿ, ಯಂ. ಉಪಾಧ್ಯಾಯರು ಉಡುಗೊರೆಗಳನ್ನಿತ್ತು ಗೌರವಿಸಿದರು.

ಕೊನೆಗೆ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಯಂ. ಅಣ್ಣುಗೌಡರವರು ಧನ್ಯವಾದ ಸಮರ್ಪಿಸಿದರು.

ಸಂತಾಪ ಸೂಚಕ ಸಭೆ

ಮಣಿಪಾಲ, ದಿ| ಶ್ರೀ ಕೆ. ರಾಮಚಂದ್ರ ಶ್ಯಾನಭೋಗರ ನಿಧನದ ಬಗ್ಗೆ ಸಂತಾಪ ಸೂಚಿಸುವ ಮಣಿಪಾಲ ಹೈಸ್ಕೂಲು ಶಾಲಾ ಉಪಾಧ್ಯಾಯರ ಮತ್ತು ಮಕ್ಕಳ ಸಭೆಯು ತಾ. 23.8.1965ರಲ್ಲಿ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಹೈಸ್ಕೂಲಿನ ವರಾಂಡದಲ್ಲಿ ಜರಗಿತು.

ಅಧ್ಯಕ್ಷರು ದಿವಂಗತರ ಗುಣಕಥನ ಮಾಡಿದ ನಂತರ ಸಂತಾಪ ಸೂಚಕ ಠರಾವೊಂದು ಸರ್ವಾನುಮತದಿಂದ ಮಾನ್ಯವಾಯಿತು. ದಿವಂಗತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಕೋರಿ ಮೌನ ಪ್ರಾರ್ಥನೆಯಾದ ಬಳಿಕ ಸಭೆಯು ಮುಕ್ತಾಯವಾಯಿತು.

ಕೃಷಿಕರ ಸಮಸ್ಯೆ ತಿಳಿಯದೆ ಆಹಾರ ಸಮಸ್ಯೆ ಬಗೆಹರಿಯದೆಂದು ಶ್ರೀ ಟಿ. ಎ. ಪೈ

ಮೈಸೂರು, ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯವರು ಏರ್ಪಡಿಸಿದ ಅಕ್ಕಿ ಮತ್ತು ಅದರ ಉತ್ಪನ್ನಗಳ ವಿಚಾರಗೋಷ್ಠಿಯನ್ನು ಉಪಸಂಹರಿಸುತ್ತಾ ಆಹಾರ ಕೊರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು, ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಲು, ಆಧುನಿಕ ಸಲಕರಣೆ ಉತ್ತಮ ಬೀಜ, ಸುಧಾರಿತ ವ್ಯವಸ್ಥೆಗಳ ಕಡೆಗೆ ಕೃಷಿಕರು ಗಮನಹರಿಸಬೇಕೆಂದೂ ಕೃಷಿಕರ ಕುರಿತು ರಾಷ್ಟ್ರದ ನಿಲುವಿನಲ್ಲಿ ಬದಲಾವಣೆಯಾಗಿದೆ ಮತ್ತು ಅವರ ಸಮಸ್ಯೆಗಳ ಕುರಿತು ಪರಿಚಯ ಮಾಡಿಕೊಳ್ಳದೆ ಸದ್ಯದ ಆಹಾರ ಸಮಸ್ಯೆಯಲ್ಲಿ ಯಾವುದೇ ಮಹತ್ವದ ಬದಲಾವಣೆಯಾಗಲಾರದೆಂದೂ ತಿಳಿಸಿದ್ದಾರೆ.

ವಿಜಯಾ ಬ್ಯಾಂಕಿನ ಸಲಹೆಗಾರ ಶ್ರೀ ವಿ. ಆರ್. ಕಾಮತರಿಗೆ ವಿದಾಯ ಸತ್ಕಾರ

ಮಂಗಳೂರು, ಆ. 22— ವಿಜಯಾ ಬ್ಯಾಂಕಿನ ಸಲಹೆಗಾರರಾಗಿ ಮೂರು ವರ್ಷಗಳವರೆಗೆ ಸೇವೆ ಸಲ್ಲಿಸಿದ ಶ್ರೀ ವಿ. ಆರ್. ಕಾಮತ್‌ರವರ ಸೇವಾ ಅವಧಿಯು ಮುಗಿಯುತ್ತಾ ಬಂದ ಪ್ರಯುಕ್ತ ಅವರನ್ನು ಗೌರವಿಸಲು ವಿಜಯಾ ಬ್ಯಾಂಕಿನ ಡೈರೆಕ್ಟರರು ಹಾಗೂ ಸಿಬ್ಬಂದಿಯವರು ವಿದಾಯ ಸತ್ಕಾರವೊಂದನ್ನು ಏರ್ಪಡಿಸಿದ್ದರು.

ಬ್ಯಾಂಕಿನ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟರು ಮಾತಾಡುತ್ತಾ ಶ್ರೀ ಕಾಮತರು ಸಲಹೆಗಾರರಾಗಿ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ಅವರಿಗೆ ದೀರ್ಘಾಯುಷ್ಯವನ್ನು ಕೋರಿದರು. ಡೈರೆಕ್ಟರರಲ್ಲೊಬ್ಬರಾದ ಡಾ| ಕೆ. ಬಾಲಪ್ಪ ಶೆಟ್ಟರು ಶ್ರೀ ಕಾಮತರ ಬಹುಮುಖ ಸಲಹೆ ಬ್ಯಾಂಕಿನ ಪ್ರಗತಿಗೆ ತುಂಬಾ ಸಹಕಾರಿಯಾಗಿತ್ತೆಂದು ಹೇಳಿದರು. ಶ್ರೀ ವಿ. ಆರ್ ಕಾಮತರು ತಮ್ಮ ಉತ್ತರದಲ್ಲಿ ತಮ್ಮ ಸೇವಾವಧಿಯಲ್ಲಿ ಸಹಕರಿಸಿದವರೆಲ್ಲರಿಗೂ ಕೃತಜ್ಞತೆ ಸಲ್ಲಿಸಿ, ಬ್ಯಾಂಕಿನ ಸರ್ವತೋಮುಖ ಏಳಿಗೆ, ಭದ್ರತೆ ಸ್ಥಿರತೆಗಾಗಿ ಸಂತೋಷ ವ್ಯಕ್ತಪಡಿಸಿದರಲ್ಲದೆ ಬ್ಯಾಂಕು ಭಾರತದ ಪ್ರಮುಖ ಬ್ಯಾಂಕುಗಳಲ್ಲೊಂದಾಗಲೆಂದು ಹಾರೈಸಿದರು. ಕಾರ್ಯದರ್ಶಿ ಶ್ರೀ ಪಿ. ಜಯರಾಮ ಶೆಟ್ಟರು ಧನ್ಯವಾದಗಳನ್ನರ್ಪಿಸುತ್ತಾ ಉತ್ತಮ ಸಂಗಾತಿಯನ್ನು ಅಗಲುವುದು ವಿಷಾದಕರವಾದರೂ ಶ್ರೀ ವಿ. ಆರ್. ಕಾಮತರು ಮಾಡಿರುವ ಕಾರ್ಯವು ಶಾಶ್ವತವಾಗಿ ಉಳಿಯುವುದೆಂದೂ ಅದಕ್ಕಾಗಿ ನಾವೆಲ್ಲ ಚಿರಋಣಿಗಳೆಂದು ಹೇಳಿದರು. ಲಘೂಪಹಾರ ಮತ್ತು ಗ್ರೂಪ್ ಫೋಟೊದೊಂದಿಗೆ ಸಮಾರಂಭ ಸಮಾಪ್ತಿಯಾಯಿತು.

ಎಣ್ಣೆ ಮತ್ತು ಉದ್ದು ದಾನ

ಮುಲ್ಕಿ, ಶ್ರೀ ಕೆ. ಎಂ. ಸೋಮಪ್ಪನವರ ಸ್ಮಾರಕಾರ್ಥವಾಗಿ ವರ್ಷಂಪ್ರತಿ ಶ್ರೀ ಕೃಷ್ಣಾಷ್ಟಮಿಯ ಕಾಲಕ್ಕೆ ಧರ್ಮಾರ್ಥವಾಗಿ ಎಣ್ಣೆ ಮತ್ತು ಉದ್ದು ದಾನಮಾಡುತ್ತಾ ಬಂದಂತೆ ಈ ಸಲವೂ, ಅವರ ಪುತ್ರ ಶ್ರೀ, ಎ. ಕೆ. ಶ್ರೀನಿವಾಸರವರು ಶ್ರೀ ಎಂ. ಮಧ್ವರಾಜರೊಂದಿಗೆ ಮುಲ್ಕಿ ಕೊರೋನೆಟ್ ಕ್ಯಾನಿಂಗ್ ಫ್ಯಾಕ್ಟರಿಯ ವಠಾರದಲ್ಲಿ ಸುಮಾರು ನಾಲ್ಕು ಸಾವಿರ ಮಂದಿ ಬಡಬಗ್ಗರಿಗೆ, ತಾ. 18ರಂದು ಉದ್ದು ಮತ್ತು ಎಣ್ಣೆಯನ್ನು ಹಂಚಿದರು.

ಕುದುರೆಮುಖ — ಗಂಗಾಮೂಲಗಳಲ್ಲಿ ಕಬ್ಬಿಣ ನಿಕ್ಷೇಪ

ಮಂಗಳೂರು ಬಂದರದ ಸಮೀಪ ಪಶ್ಚಿಮ ಘಟ್ಟಗಳಲ್ಲಿ ವಿಸ್ತೃತ ಕಬ್ಬಿಣದ ಅದುರು ಕಂಡುಕೊಳ್ಳಲಾಗಿದೆ. ಹಾಗೆಯೇ 60 ಮೈಲು ದೂರ ಕುದುರೆಮುಖ ಮತ್ತು ಗಂಗಾಮೂಲಗಳಲ್ಲಿಯೂ ನಿಕ್ಷೇಪಗಳಿರುವುದಾಗಿ ತಿಳಿದು ಬಂದಿದೆ. ಈ ಪ್ರದೇಶದಿಂದ ಕಬ್ಬಿಣದ ಅದುರು ನಿರ್ಯಾತದ ಸಾಧ್ಯತೆ ಅಧಿಕವಾಗಿದ್ದು, ಅದುರು ತರಗತಿ ಹೆಚ್ಚಿಸುವ ವೆಚ್ಚವು ಹೊಸಪೇಟೆಯಿಂದ ಅದುರು ಸಾಗಿಸುವ ವೆಚ್ಚಕ್ಕಿಂತ ಕಡಿಮೆಯಾಗಿದೆ ಎಂದು ಗೊತ್ತಾಗಿದೆ.

ವೈದ್ಯ ರಘುನಾಥ ಪ್ರಭುಗಳ ನಿಧನ

ಕುಂಜಾಲಿನ ಸ್ವದೇಶಿ ಔಷಧ ಭಂಡಾರದ ಸಂಸ್ಥಾಪಕರೂ ಬಹುಕಾಲ ವೈದ್ಯಕೀಯ ಸೇವೆ ಸಲ್ಲಿಸಿ ಜನಪ್ರಿಯರಾದವರೂ ಆದ ಶ್ರೀ ಕೆ. ರಘುನಾಥ ಪ್ರಭುಗಳು ತಾ. 19.8.65ರಂದು ಕುಂಜಾಲಿನ ಸ್ವಗೃಹದಲ್ಲಿ ನಿಧನರಾದರು. ದಿವಂಗತರು ಸಾತ್ವಿಕ ಹಾಗೂ ಸರಳ ಸ್ವಭಾವದವರೂ ಅನುಭವಶಾಲಿಗಳೂ ಆಗಿದ್ದರು.

ನರಗುಂದದಲ್ಲಿ ನೀರು ಪೂರೈಕೆ

ಮೈಸೂರು ಸರಕಾರವು ನರಗುಂದ ಪೌರಸಮಿತಿಗೆ ನೀರು ಪೂರೈಕೆಯ ಸಂಬಂಧದಲ್ಲಿ ಯೋಜನೆ ಮತ್ತು ಅಂದಾಜುಗಳಿಗಾಗಿ 2,65,000 ರೂಪಾಯಿಗಳನ್ನು ಮಂಜೂರು ಮಾಡಿದೆ. ಇದಲ್ಲದೆ ಇದೇ ಉದ್ದೇಶಕ್ಕಾಗಿ 60,000 ರೂಪಾಯಿ ಸಾಲವನ್ನೂ ಮಂಜೂರು ಮಾಡಲಾಗಿದೆ.

ರಾಷ್ಟ್ರೀಯ ನೀರು ಪೂರೈಕೆ ಕಾರ್ಯಕ್ರಮ

ಮೈಸೂರು ಸರಕಾರವು ರಾಷ್ಟ್ರೀಯ ನೀರು ಪೂರೈಕೆ ಮತ್ತು ನೈರ್ಮಲ್ಯ ಕಾರ್ಯಕ್ರಮದ ಅಂಗವಾಗಿ ಒಟ್ಟು 2·90 ಲಕ್ಷ ರೂಪಾಯಿ ವೆಚ್ಚದಿಂದ ರಾಯಚೂರ ಜಿಲ್ಲೆಯ ಸಿಂಧನೂರು ತಾಲೂಕಿನ ಜವಳಗೇರಿ, ಬೀದರ ಜಿಲ್ಲೆಯ ಅವರಾದ ತಾಲೂಕಿನ ಕಮಾಲನಗರ, ಮತ್ತು ಯಮನಾಬಾದ್ ತಾಲೂಕಿನ ಹುಡುಗಿ ಈ ಗ್ರಾಮಗಳಲ್ಲಿ ಒಂದೊಂದರಂತೆ ಮೂರು ಗ್ರಾಮಾಂತರ ನೀರು ಪೂರೈಕೆ ಯೋಜನೆಗಳನ್ನು ಕಾರ್ಯಾಚರಣೆಯಲ್ಲಿ ತರಲು ಮಂಜೂರಾತಿಯನ್ನಿತ್ತಿದೆ.

ಗೋವಿಂದ ಪೈ ವಾಙ್ಮಯ ದರ್ಶನ

ಶ್ರೀ ಮು. ವಿ. ನಾಯಕ ಮತ್ತು ಶ್ರೀ ಹಾವನೂರ ಶ್ರೀನಿವಾಸರು ಈ ರೀತಿ ವಿನಂತಿಸುತ್ತಾರೆ:

ದಿವಂಗತ ಎಂ. ಗೋವಿಂದ ಪೈಯವರ ಎಲ್ಲ ಲೇಖನಗಳ ಪರಿಚಯಾತ್ಮಕ ಸೂಚಿಯನ್ನು ನಾವು ಸಿದ್ಧಗೊಳಿಸುತ್ತಿದ್ದು, ಇದವರೆಗೆ ಅವರ ೧೯೦ ಗದ್ಯ ಲೇಖನಗಳ ಮತ್ತು ೧೨೦ ಕವಿತೆಗಳ ವಿವರಗಳನ್ನು ಕಲೆಹಾಕಿದ್ದೇವೆ. ಪ್ರಕೃತ ಈ ಕೆಳಗಿನ ಲೇಖನಗಳು ನಮಗೆ ದೊರೆತಿಲ್ಲವಾದ್ದರಿಂದ, ಇವುಗಳ ವಿಷಯ ಸಾರವನ್ನು ೫-೬ ವಾಕ್ಯಗಳಲ್ಲಿ ಯಾರಾದರೂ ಬರೆದು ಕಳುಹಿದರೆ ಉಪಕೃತರಾಗುವೆವು.

೧. ಪ್ರೊಸ್ಸನ ಭುವನೈಕ ರಾಮಾಭ್ಯುದಯ (ಕಂಠೀರವ, ದಸರಾ ೧೯೩೪).

೨. ಶಿಶುಮಾಯಣನ ಕಾಲವಿಚಾರ (ಸ್ವದೇಶಾಭಿಮಾನಿ, ಅಕ್ಟೋ.೧೯೪೧).

೩. ಜೈನರಲ್ಲಿಯ... ಕುರಿತು (ಪ್ರಭಾತ ಯುಗಾದಿ ೧೯೩೬).

೪. ಕನ್ನಡ ಭಾರತದ ದುರ್ಯೋಧನ (ಪ್ರಭಾತ, ೧೯೪೯)

೫. ಷಡಕ್ಷರಿದೇವನ ಕಾಲವಿಚಾರ (ಶರಣ ಸಾಹಿತ್ಯ).

೬. ಉದ್ದಂಡ ಷಟ್ಪದಿಯನ್ನು ಕುರಿತು (ಶರಣ ಸಾಹಿತ್ಯ).

೭. ೨ನೇ ಪುಲಿಕೇಶಿಯ ಆಳಿಕೆಯ ಕೊನೆಗಾಲ (ಸುಬೋಧ ?).

೮. ರೆವರೆಂಡ್ ಡಾ| ಕಿಟ್ಟೆಲರು (ಎಲ್ಲಿ ಪ್ರಕಟಿತ?)

೯. Note on Saraswats & Gouda Saraswats (South Canara Gazetteer).

[ಮಾಹಿತಿಯನ್ನು ಕಳಿಸಬೇಕಾದ ವಿಳಾಸ: ಶ್ರೀನಿವಾಸ ಹಾವನೂರ, ಟಾಟಾ ಇನ್ಸ್‌ಟಿಟ್ಯೂಟ್ ಫಂಡಾಮೆಂಟಲ್ ರಿಸರ್ಚ, ಬಾಂಬೆ-5, BR].



ಗವರ್ನಮೆಂಟ್ ಪೋರ್ಸೆಲೈನ್ ಫ್ಯಾಕ್ಟರಿ, ಬೆಂಗಳೂರು ಶರಾವತಿಯ ಶಕ್ತಿಯಿಂದ ಬೆಳೆದು ಬಂದಿದೆ.
(ವಿವರಕ್ಕೆ ಎಂಟು ಮತ್ತು ಒಂಭತ್ತನೇ ಪ.ಟ ನೋಡಿರಿ)

ಕಣ್ಣು ತೆರೆಯಿತು

(ಎರಡನೇ ಪುಟದಿಂದ)

"ನನಗೂ ಆಶ್ಚರ್ಯ. ಹೆಣ್ಣು ಹೇಳಲೂ ಹೇಸುವ ಯಾವುದೋ ಅಚಾತುರ್ಯ ಸುಂದರನಿಂದ ನಡೆದಿರಬೇಕೆಂದೇ ಊಹಿಸಿದೆನು.

ಕೆದಕಿ ಕೇಳಲು ಮನಸ್ಸಾಗದೆ ಅಲ್ಲಿಗೆ ಮಾತನ್ನು ಕೊನೆ ಮುಟ್ಟಿಸಿ ಮಲಗಲು ತೆರಳಿದೆ.

ಹೆಂಗಸರಿಬ್ಬರೇ ಸೇರಿದಾಗ ಏನಾದರೂ ರಹಸ್ಯ ಬಯಲಾಗಬಹುದೆಂಬ ಕಿರಿಯಾಸೆಯಿಂದಲೇ ಶಾಲಿನಿಗೆ ಕಣ್ಣು ಮಿಟುಕಿಸಿ ಹೊರಟು ಹೋದೆ.

ರಾತ್ರಿ ಅದಾವಾಗ ನಿದ್ದೆ ಬಂತೆಂಬುದೇ ನನಗೆ ತಿಳಿದಿರಲಿಲ್ಲ.

ಬೆಳಗ್ಗೆ ಬೇಗನೆದ್ದು ಮತ್ತೆ ಮಡದಿಯನ್ನು ಸಂಧಿಸಿದೆ. ಆದರೆ ಅಳುವಿನ ಹೊರತು ಮತ್ತೇನೂ ನುಡಿದಿಲ್ಲವೆಂಬ ವಿಚಾರ ತಿಳಿದು ನಿಜ ತಿಳಿಯಲು ಕಾಫಿ ಕುಡಿದು ಹೊರ ಹೊರಟೆ.

ಮನೆ ಬಿಟ್ಟು ಹೊರ ಬರುವಾಗಲೇ ಬಸ್ಸು ಬುಸುಗುಟ್ಟುತ್ತಾ ಬಂತು. ಅದನ್ನು ಮೇಲೇರಿ ಕುಳಿತಾಗಲೇ ಮತ್ತೆ ಹೊರಟಿತು.

ಕೈಕಂಬದ ಬದಿಯಲ್ಲಿಯೇ ಕೆಳಗಿಳಿದು ಸುಂದರನ ಮನೆಯ ದಾರಿ ಹಿಡಿದೆ. ಆಗಲೇ ಗಂಟೆ ಸುಮಾರು ಹತ್ತಕ್ಕೆ ಸಮೀಪಿಸಿರಬಹುದು.

ಅರ್ಧ ಮೈಲು ದೂರ ಸಾಗಿದಾಗಲೇ ಸುಂದರನ ಮನೆ ಕಾಣಿಸಿತು. ಕಾಸು ದೂರ ಸಾಗಿದಾಗ ಮನೆಯ ಮುಂದಿನ ತೋಟದ ಬಳಿಗಾಗಿ ಬಂದಿದ್ದೆ. ನೆಟ್ಟ ಗಿಡಗಳೆಲ್ಲಾ ಬಾಡಿದ್ದುವು. ಮುಂದೆ ದೃಷ್ಟಿ ಹರಿಯಿಸಿದಾಗ ಸುಂದರವಾದ ಹೊರಾಂಗಣ ಕಸಕಡ್ಡಿಯಿಂದ ತುಂಬಿತ್ತು. ಎಲ್ಲಿಯಾದರೂ ಗೆಳೆಯ ಇಲ್ಲಿಂದ ವಾಸ್ತವ್ಯ ಬದಲಾಯಿಸಿರಬಹುದೇ ಎಂಬ ಅನುಮಾನ ಬಂತು.

ಹೇಗೂ ಇರಲಿ, ನೋಡಿಯೇ ತಿಳಿಯೋಣವೆಂದು ಅಂಗಣ ದಾಟಿ ಜಗಲಿ ಸೇರಿದೆ.

ಆಗ ಆರಾಮ ಕುರ್ಚಿಯಲ್ಲಿ ಕುಳಿತು ಯೋಚಿಸುತ್ತಿದ್ದ ಸುಂದರನ ರೂಪ ನೋಡಿ ಭಯಾಶ್ಚರ್ಯಗಳು ಒಮ್ಮೆಲೇ ಉದ್ಭವಿಸಿದುವು.

ಕ್ಷೌರ ಕಾಣದ ಮುಖ, ಎಣ್ಣೆ ಕಾಣದ ಕೂದಲು; ಗುಳಿಬಿದ್ದ ಕಣ್ಣಲ್ಲಿಯೂ ಹೊರ ಸೂಸುವ ಕೋಪದ ಕಿಡಿಗಳು, ಅರೆನಗ್ನವಾಗಿ ಧರಿಸಿದ ಬಟ್ಟೆಯೂ ಕೊಳೆಯಿಂದಲೇ ತುಂಬಿತ್ತು.

ಮೊದಲು ಮಾತು ಹೊರಡದಾಯಿತು, ಆದರೂ ಅಲಕ್ಷ್ಯ ಸಲ್ಲದೆಂದು —

"ಸುಂದರ ಇದೇನು ನಿನ್ನ ಅವಸ್ಥೆ" ಎಂದೆ.

ಒಮ್ಮೆ ನನ್ನ ಸ್ವರ ಕೇಳಿ ಬೆಚ್ಚಿ ಬಿದ್ದನು, ಸುಂದರ.

"ಓಹೋ ರಾಜ, ಬಾ ಇಲ್ಲಿ ಕುಳಿತುಕೋ" ಎಂದು ಆದರಿಸಿದನು.

ಆದರೆ ಮಾತಿನಲ್ಲಿ ಮೊದಲಿನ ಮಾಧುರ್ಯ ನನಗೆ ಕಂಡು ಬರಲಿಲ್ಲ.

"ಸುಂದರ, ನಿನ್ನ ವಿಚಾರವೇನಿದು?" ನನಗೇನೂ ಅರ್ಥವಾಗುತ್ತಿಲ್ಲ. ನಿನ್ನ ಜೀವನದಲ್ಲಿ ಒಮ್ಮೆಲೇ ಬೀಸಿದ ಬಿರುಗಾಳಿ ಯಾವುದು? ಎಲ್ಲಿ ಶಾಂತ ಕಂಡು ಬರುತ್ತಿಲ್ಲ? ಏನು ತೌರಿಗೆ ಹೋಗಿದ್ದಾಳೆಯೇ?" ಎಂದೆನು.

ಶಾಂತನ ಹೆಸರು ಕೇಳಿದಾಗ ಉರಿಯುವ ಅಗ್ನಿಗೆ ತುಪ್ಪ ಹಾಕಿದಂತಾಯಿತು.

"ರಾಜ, ಮಾತನಾಡಲು ಮತ್ತೇನೂ ವಿಷಯವಿಲ್ಲವೇ?" ಎಂದನು.

"ಸುಂದರ ನೀನು ಏಕೆ ಇಷ್ಟೊಂದು ಕೋಪಗೊಳ್ಳುವೆ? ಸಮಾಧಾನ ತಂದುಕೊ. ಗೆಳೆಯನಲ್ಲಿಯೂ ಮುಚ್ಚುಮರೆ ಮಾಡಬೇಡ."

"ಸತ್ತು ಹೋದ ವಿಷಯವನ್ನು ಮತ್ತೊಮ್ಮೆ ಎತ್ತಬಾರದು."

"ಅಂದರೆ ನಿನ್ನ ಮಾತೇ ನನಗೆ ಅರ್ಥವಾಗುತ್ತಿಲ್ಲ."

"ನನ್ನ ಜೀವನದಲ್ಲಿ ಶಾಂತ ಸತ್ತುಹೋಗಿ ಅದೆಷ್ಟೋ ಸಮಯವಾಯ್ತು"

"ನಿನಗೆ ಬುದ್ಧಿಭ್ರಮೆಯಾಗಿಲ್ಲವಷ್ಟೇ?"

"ಇನ್ನು ನನಗೆ ಅದೊಂದೇ ಬಾಕಿ ಉಳಿದಿದೆ. ಆ ಮೇಲೆ...."

"ಸುಂದರ ಉದ್ರೇಕಗೊಳ್ಳದೆ ಸಮಾಧಾನ ತಂದುಕೊಳ್ಳು... ನಿಮ್ಮಿಬ್ಬರಲ್ಲಿ ನಡೆದ ವಿರಸದ ಕಾರಣವನ್ನಾದರೂ ಹೇಳುವೆಯಾ?"

"ಅದನ್ನು ಕೇಳಿ ನಿನಗೆ ಆಗಬೇಕಾದುದೇನು?"

"ಅದಕ್ಕೆ ಪರಿಹಾರ ಹುಡುಕಲು ಬೇಕಾಗಿದೆ. ಅದಕ್ಕಾಗಿಯೇ ಕೇಳಿದೆ."

"ಅದು ಪರಿಹಾರವಿಲ್ಲದ ಸಮಸ್ಯೆ ರಾಜ! ಆ ಬಗ್ಗೆ ಕೇಳುವುದರಿಂದ ಏನೂ ಪ್ರಯೋಜನವಿಲ್ಲ".

"ನಾನು ಕಿವಿಯಿಂದಲೂ ಕೇಳಬಾರದ ವಿಚಾರವೇ?"

"ರಾಜ! ನನ್ನ ಬಾಯಿಂದ ಹೇಳಿ ಹೊಲಸು ಮಾಡಿಕೊಳ್ಳಲಾರೆ. ನೀನು ಆ ವಿಚಾರ ಕೇಳಲೇ ಬಾರದು."

"ಸುಂದರ! ನಿಜಾಂಶ ತಿಳಿಯುವುದಕ್ಕಾಗಿಯೇ ನಾನಿಂದು ಬಂದಿರುವೆ. ನೀನು ಹೇಳದಿದ್ದರೆ ನನ್ನಾಣೆಯಾಗಿದೆ.

ಕ್ಷಣಕಾಲ ಅದೇನನ್ನೋ ಯೋಚಿಸಿ ಮತ್ತೆ ಮಾತು ಆರಂಭಿಸಿದನು.

"ಹಾಗಾದರೆ ಕೇಳು! ಅವಳು ವ್ಯಭಿಚಾರಿ.... ಹಾದರದ ಹೆಣ್ಣು....ಬೀದಿಯ ಬಸವಿ....ಮಾನ...."

"ಸಾಕು ಮಾಡು ಸುಂದರ, ನಿನಗೆ ಹೇಳಲು ನಾಚಿಕೆಯಾಗುವುದಿಲ್ಲವೇ?" ಅಬ್ಬರಿಸಿದೆ.

ನಾನೇ ಮಾತು ಮುಂದುವರಿಸಿದೆ —

"ಮನೆಯ ಮಾಂಗಲ್ಯ ದೇವತೆಯ ಮೇಲೆ ಇಂತಹ ಆರೋಪ ಹೊರಿಸಲು ನಿನಗೆ ಮನ ಹೇಗೆ ಬಂತು? ನಿನ್ನ ಆರೋಪಕ್ಕೆ ಆಧಾರವೇನಿದೆ?"

"ರಾಜ! ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೂ ಬೇರೆಯವರಿಗೆ ಕಾಣುವುದಿಲ್ಲವೇ? ಪಾಪ ಪಿಂಡವನ್ನು ಹೊಟ್ಟೆಯಲ್ಲಿ ಹೊತ್ತಿರುವಾಗ ಬೇರೆ ಸಾಕ್ಷಿ ಬೇಕೆ?"

ಆಗಲೇ ನನಗೆ ಚಾಟಿಯಿಂದ ಹೊಡೆದಂತಾಯಿತು. ನಾಲ್ಕು ವರ್ಷಗಳ ಹಿಂದೆ ಸುಂದರ ಕುಟುಂಬ ಯೋಜನೆ ಮಾಡಿಸಿಕೊಂಡಿದ್ದ. ಆ ಮೇಲೆ ಶಾಂತ ಮತ್ತೆ ಗರ್ಭ ಧರಿಸಿರಲಿಲ್ಲ. ಆದರೆ ಈಗ ಮತ್ತೆ ಗರ್ಭಿಣಿಯಾಗಿದ್ದಾಳೆ. ಸುಂದರನ ಸಂಶಯಕ್ಕೆ ಆಧಾರ ದೊರಕಿದೆ ಹಾಗಾದರೆ....

"ಏಕೆ ರಾಜ, ಮೌನವಾದೆ. ಎಲ್ಲವೂ ಅರ್ಥವಾಯಿತೆ? ಮಾರುದ್ದ ಭಾಷಣ ಮುಗಿಯಿತೇ?"

"ಸುಂದರ ನಾನಾವುದನ್ನು ಖಚಿತವಾಗಿ ಹೇಳಲಾರೆ. ಆದರೆ ಈಗ ನನ್ನ ಜೊತೆ ನೀನು ಹೊರಡಬೇಕು. ಆ ಮೇಲೆ ಬಾಕಿ ವಿಚಾರ".

"ಎಲ್ಲಿಗೆ? ಏಕೆ?" ಒಲ್ಲದ ಮನದಿಂದಲೇ ಕೇಳಿದನು.

"ಮೊದಲು ಹೊರಡು, ಆ ಮೇಲೆ ನಿನಗೆ ತಿಳಿಸುವೆ." ಎಂದು ಒತ್ತಾಯಿಸಿದೆನು. ಕೊನೆಗೆ ನನ್ನ ಬಲವಂತಕ್ಕೆ ಬಟ್ಟೆಯುಟ್ಟು ಹೊರಟನು.

o o o o

ಅಂದು ಸುಂದರನ ಮನೆಯಲ್ಲಿ ವಿಶೇಷ ಸಂಭ್ರಮ. ಅಷ್ಟೊಂದು ವಿಜೃಂಭಣೆ ಇತರ ಮಕ್ಕಳ ನಾಮಕರಣಕ್ಕೆ ಉಪಯೋಗಿಸಿರಲಿಲ್ಲ ಅದರ ಕಾರಣ ಪತಿ-ಪತ್ನಿಯರಿಬ್ಬರಿಗೂ ಚೆನ್ನಾಗಿಯೇ ಅರಿವಾಗಿತ್ತು.

ಸುಂದರನ ಐದನೇ ಗಂಡು ಮಗು ತಂದೆ-ತಾಯಿಗಳ ಜೀವನದಲ್ಲಿ ಒಮ್ಮೆ ಬಿರುಗಾಳಿ ಎಬ್ಬಿಸಿ ಮತ್ತೆ ಒಂದುಗೂಡಿಸಿದನೆಂದೇ ಅಷ್ಟೊಂದು ಸಂಭ್ರಮವಾಗಿತ್ತು.

ನಾನೂ ಹೋಗದೆ ಉಳಿಯಲಿಲ್ಲ. ನನಗೆ ದೊರೆತ ಮನ್ನಣೆಯನ್ನು ನಾನೆಂದೂ ಮರೆಯಲಾರೆ.

ಅಂದು ಅವರಿಬ್ಬರಲ್ಲಿ ತಲೆದೋರಿದ್ದ ಸಂಶಯ ಪಿಶಾಚಿಯನ್ನು ನಾನು ಡಾ| ಸುರೇಶರಿಂದ ಬಗೆಹರಿಸಿದ್ದೆ. ಸಂಶಯ ಪಿಶಾಚಿ ದೂರ ಸರಿದಾಗ ಸುಂದರನ ಕಣ್ಣು ತಾನಾಗಿಯೇ ತೆರೆಯಿತು. ಶಾಂತನಂತೂ ನನ್ನನ್ನು ದೇವರೆಂದೇ ತಿಳಿದಿದ್ದಳು. ಅಂದು ನಾನಲ್ಲಿ ಸುಳಿಯದಿದ್ದರೆ — ಅವಳ ಜೀವ ಎಂದೋ ಇಹಲೋಕ ಬಿಡುತ್ತಿತ್ತೆಂಬುದೇ ಅದಕ್ಕೆ ಕಾರಣ.

ಇಬ್ಬರ ಆದರಕ್ಕೂ ಪಾತ್ರನಾದ ನಾನೇ ಧನ್ಯನೆಂದು ಭಾವಿಸಿ ಮಗು ಶಂಕರನಿಗೆ ಬಣ್ಣದ ಬೊಂಬೆಯನ್ನೇ ಉಡುಗೊರೆಯಾಗಿತ್ತು ಶಾಲಿನಿಯೊಡನೆ ಆ ದಿನ ಅಲ್ಲೇ ಕಳೆದೆನು.

ಕವಿತಾವಿತಾನ

ಭಾವರಾಣಿ

ನೀನಿರದ ಈ ಬದುಕು ಎಂತು ಏನು?
ನೀನಿರಲು ಮನಕೆಲ್ಲ ಮಧುರ ಜೇನು!
ಮಲ್ಲಿಗೆಯ ಮಕರಂದ, ಹೂಕನ್ನೆ ನೀನು
ನೀಯೆನಗೆ ಹಗಲಿರುಳು ಸ್ವರ್ಗ ಕಾನು!

ಜೀವನದಿ ನೂರೆಂಟು ಕಷ್ಟಗಳೇ ಬರಲಿ
ನೀನಿರಲು ಮರೆಯುವೆನು ಏನೇ ಇರಲಿ
ಚೆಲು ನೀರೆ ನೀನೆಂದೂ ಇಂಬೇಡ ಅಗಲಿ
ಹಾಗಿರಲು ಸಾಯುವೆನು ತೊಳಲಿ ಬಳಲಿ

ನನ್ನಾತ್ಮರಂಗದಲಿ ನೀನಲಿವ ದೇವಿ!
ಕುಡಿನೋಟ ನಗೆಮಾಟ ಸುರಲೋಕ—
ಚೆಲುವಿ
ನೆನೆದಷ್ಟು ಎನ್ಮನಕೆ ಸೊಗವನ್ನೇ ತರುವಿ
ಮಾರುದ್ದ ದೇಹಕ್ಕೆ ಗುಂಗು ಹಿಡಿಸಿರುವಿ

ನೀನಿಲ್ಲದಿರೆ ಇಲ್ಲಿ ಸುಖವೇ ಇಲ್ಲ
ಈ ಸೃಷ್ಟಿ ಈ ಸೊಬಗು ಶೂನ್ಯವೆಲ್ಲ!
ಈ ಬಾಳು ಮಾಡಣಿಕೆ ಉಷೆಯಾಗಿ ನಿಲ್ಲು
ಆಗ ಲಭಿಸುವದೆನಗೆ ಹಾಲು ಬೆಲ್ಲ!

ನೀಬಾರೆ ಎನ್ನೆದೆಯ ಕಾರಂಜಿ ಯಾಗಿ!
ಕಾವ್ಯ ದುಕುರಿನ ಭಾವಲೋರೆಯಾಗಿ!!
ಗರಿಗೆದರಿ ಕುಣಿಯುವ ನವಿಲು ನೀನಾಗಿ!
ಕುಸುಮ ದುಡಿಗೆಯ ಭಾವರಾಣಿಯಾಗಿ!!

— ಪಾಟೀಲ ಪುಂಡಲೀಕ
ಹೀರೇಬಾಗೇವಾಡಿ

ಇದೀಗ ಪ್ರಕಟವಾಗಿದೆ–

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚುಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ........................."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಮನ ಸೆಳೆವ ತ್ರಿವರ್ಣ ಮುಖಪತ್ರ!

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1–75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಯುಗ ಪ್ರೆಸ್, ಉಡುಪಿ | ನವಭಾರತ ಬುಕ್ ಡಿಪ್ಪೊ, ಪಾಲುಕೋಟೆ, ಉಡುಪಿ.

NAVAYUGA 2-9-1965
Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨-೯-೬೫ರಿಂದ ೮-೯-೬೫ರ ವರೆಗೆ

೧. ಮೇಷ

ನಿಮ್ಮ ಅದೃಷ್ಟವಿರಿದು ತೀರ ದುರ್ಬಲವಾಗಿರುವುದರಿಂದಲೂ ನಿಮ್ಮಲ್ಲಿ ಕೂಡ ಪೌರುಷದ ಅಭಾವವಿರುವುದರಿಂದಲೂ ಇಂದು ನಿಮ್ಮ ಆಶಾಶಕ್ತಿಗಳು ತಿರಸ್ಕೃತ ಕನಸಿನಂತೆ ವಿಫಲಗಳಾಗಲಿವೆ. ದಿನದ ದುಡಿಮೆಯು ಖರ್ಚು ವೆಚ್ಚಗಳಿಗೆ ಸಾಲದೆ ಆಪತ್ತಿಗಾಗಿಟ್ಟ ಧನವನ್ನು ವ್ಯಯಿಸಬೇಕಾಗಿ ಬರಲಿದೆ. ಸ್ವಜನ ವಿರೋಧ, ಅರ್ಧಾಂಗಿಯ ಕೂಡೆ ನಿತ್ಯ ಕಲಹಗಳು ತಪ್ಪಿದ್ದಲ್ಲ. ವ್ಯಾಪಾರೀ ವರ್ಗಕ್ಕೆ ಹೆಚ್ಚಿನ ನಷ್ಟ ಸಂಭವಿಸಲಿದೆ. ವಾರಾಂತ್ಯದ 2 ದಿನಗಳು ಹೆಚ್ಚಿನ ದೋಷಕಾರಿಗಳಾಗಲಾರವು.

೨. ವೃಷಭ

ವ್ಯಾಪಾರ ವ್ಯವಹಾರ ಚತುರರಾದ ನಿಮಗೆ ಉದ್ಯೋಗದಲ್ಲಿ ಸಾಕಷ್ಟು ಧನಲಾಭವಾಗುವದಾದರೂ ಇಂದಿನ ದಿನಗಳಲ್ಲಿ ಅವು ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆಯಂತಾದೀತು. ಖರ್ಚಿನ ಭಾಗಗಳು ಬೃಹದ್ರೂಪವನ್ನು ತಾಳಲಿವೆ. ಗೃಹತಾಪತ್ರಯಗಳಿಂದ ಮನಸ್ಸಿಗೆ ನೆಮ್ಮದಿಯಿಲ್ಲವಾದರೂ ಶತ್ರುಗಳ ಕಾಟದಿಂದ ಮುಕ್ತರಾದ ನಿಮಗೆ ರಾಜಕೀಯದಲ್ಲಿ ಒಳ್ಳೆಯ ಭವಿತವ್ಯವಿದೆ. ಶ್ರಮ ಸಹಿಷ್ಣುಗಳಾದ ನಿಮಗೆ ವಾರಾದಿಯ 2 ದಿನಗಳು ತುಂಬ ಲಾಭದಾಯಿಗಳಾಗಿ ಪರಿಣಮಿಸಲಿವೆ.

೩. ಮಿಥುನ

ಮಾತಾಪಿತೃಗಳ ಕೂಡೆ ವಿರೋಧವುಂಟಾದೀತು. ಅಧಿಕಾರಿ ವರ್ಗದವರಿಂದ ಅನುದಿನ ಪೀಡೆಗಳು ತಪ್ಪಲಾರವು. ಕಫಪಿತ್ತ ಪ್ರಕೋಪದಿಂದಾಗಿ ಹೆಂಡತಿ ಮಕ್ಕಳ ಆರೋಗ್ಯಕ್ಕೆ ಹಾನಿಯಿರುವುದು. ಶ್ರಮವಹಿಸಿ ದುಡಿದರೂ ನಿರೀಕ್ಷಿಸಿದ ಗುರಿಯನ್ನು ಸೇರಲಾಗದ ನಿಮಗೆ ದಿನಯಾಪನೆಯು ದುಸ್ತರವಾಗಲಿದೆ. ಮನೋರೋಗದಿಂದ ಸದಾ ಪೀಡಿತರಾದ ನಿಮಗೆ ವಾರಾದಿಯ 5 ದಿನಗಳಲ್ಲಿ ಹೆಚ್ಚಿನ ದೋಷಗಳು ಕಾಣಲಾರವು.

೪. ಕರ್ಕಾಟ

ನೀವೆಷ್ಟೇ ಪೌರುಷಶಾಲಿಗಳಿದ್ದರೂ ದೈವಬಲದಿಂದ ವಂಚಿತರಾದ ಕಾರಣ ತಾನೊಂದು ಬಗೆದರೆ ದೈವವೊಂದೆಣಿಸಿತೆಂಬ ಗಾದೆಯಂತೆ ಫಲವೆಲ್ಲವೂ ವಿಪರೀತದಲ್ಲಿ ಪರ್ಯವಸಾನ ಹೊಂದಲಿವೆ. ಕುಜನರ ಮಾಯಾಜಾಲಕ್ಕೆ ಸಿಲುಕಿ ಕಷ್ಟನಷ್ಟಗಳಿಗೀಡಾಗುವದಲ್ಲದೆ ಜನನಿಂದೆಗೂ ಪಾತ್ರರಾದೀರಿ. ಆದರೂ ನಿಮ್ಮ ಸ್ವಂತ ಆರೋಗ್ಯ ವಿಚಾರದಲ್ಲಿ ನಿಶ್ಚಿಂತರಾಗಿ. ನಿಮಗೆ ವಾರಾಂತ್ಯದ 5 ದಿನಗಳು ಅನುಕೂಲವಾಗಿ ಪರಿಣಮಿಸಲಿವೆ.

೫. ಸಿಂಹ

ಸುಖದುಃಖ ಲಾಭನಷ್ಟಗಳು ನಿಮಗಿಂದು ಸಮತೂಕದಲ್ಲಿ ನಿಲ್ಲುವುದರಿಂದ ಸದ್ಯದ ದಿನಗಳು ಸುಗಮವಾಗಿ ಸಾಗಲಿವೆ. ಎಂತಹ ಕಾರ್ಯವನ್ನೂ ಹೆರವರ ನೆರವಿಲ್ಲದೆ ಸ್ವತಃ ಸಾಧಿಸಲು ಸಮರ್ಥರಾದ ನಿಮಗೆ ರಾಜಕೀಯ ರಂಗದಲ್ಲಿ ಒಳ್ಳೆಯ ಭವಿತವ್ಯವಿದೆ. ಅರ್ಧಾಂಗಿಯ ಆರೋಗ್ಯವು ಚೆನ್ನಾಗಿರದಿದ್ದರೂ ಬೇರಾವ ಕುಂದುಕೊರತೆಗಳು ಸದ್ಯ ನಿಮ್ಮ ಸಂಸಾರದಲ್ಲಿ ಕಾಣಲಾರವು. ವಾರಾಂತ್ಯದ 2 ದಿನಗಳು ತುಂಬ ಅನುಕೂಲವಾಗಿವೆ.

೬. ಕನ್ಯಾ

ಎಂತಹ ವಿಘ್ನವಿಡಂಬರಗಳು ಬಂದರೂ ನೀವು ಹಿಡಿದ ಕಾರ್ಯದಿಂದ ಪರಾಙ್ಮುಖರಾಗಲಾರಿರಿ. ಆದರೆ ದೈವವಿಂದು ನಿಮ್ಮ ಮೇಲೆ ಸ್ವಲ್ಪ ವಕ್ರದೃಷ್ಟಿಯನ್ನಿಟ್ಟ ಕಾರಣ ನಿರೀಕ್ಷಿಸಿದ ಫಲವು ಲಭಿಸಲೊಲ್ಲದು. ಅಧಿಕಾರಿ ವರ್ಗದವರಿಂದ ಇಲ್ಲಸಲ್ಲದ ಕಿರುಕುಳಗಳು ಬರಲಿವೆ. ಮೂತ್ರನಾಳ ಪಿತ್ತದೋಷದಿಂದ ನಿಮ್ಮ ಆರೋಗ್ಯಕ್ಕೂ ಹಾನಿಯುಂಟಾದೀತು. ವಾರಾದಿಯ 2 ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

೭. ತುಲಾ

"ದುಃಖಸ್ಯಾ ನಂತರಂ ಸುಖಂ" ಎಂಬ ಗಾದೆಯ ಮಾತು ಇಂದು ನಿಮ್ಮ ಸ್ವಂತ ಅನುಭವಕ್ಕೆ ಬರಲಿದೆ. ಹಲವಾರು ಸಮಯದಿಂದ ವಿಪತ್ಪರಂಪರೆಗಳಲ್ಲಿ ಮುಳುಗೇಳುತ್ತಿದ್ದ ನಿಮಗೆ ಇಂದು ಸುದಿನಗಳು ಸನ್ನಿಹಿತವಾಗಿವೆ. ಕಾರ್ಯಕ್ಷೇತ್ರದಲ್ಲಿ ಮುಂದಡಿಯಿಟ್ಟು ಕೃತಕೃತ್ಯರಾಗಿರಿ. ಗೃಹತಾಪತ್ರಯ ಆರ್ಥಿಕ ದುರವಸ್ಥೆಗಳಿಂದ ಮುಕ್ತರಾದ ನಿಮಗೆ ತಾ. 4, 5, 6ರಂದು ವಿಜಯ ಧನಲಾಭ ಗೃಹಸುಖಗಳು ದೊರೆಯುವವು.

೮. ವೃಶ್ಚಿಕ

ಮನೋದೌರ್ಬಲ್ಯ ಆರ್ಥಿಕ ದುರವಸ್ಥೆ ಮತ್ತು ನಿರುತ್ಸಾಹಗಳಿಂದಾಗಿ ನೀವಿಂದು ನಿರುದ್ಯೋಗದಿಂದ ಕಾಲ ಕಳೆವಿರಿ. ಅಧಿಕಾರಿವರ್ಗ ಮತ್ತು ಗುರುಹಿರಿಯರ ಕೂಡೆ ಸದಾ ಕಲಹ ವಿರೋಧಗಳುಂಟಾದಾವು. ವಿಷಯಾದಿಗಳ ಚಾಪಲ್ಯಕ್ಕೆ ಸಿಲುಕಿ ಆರೋಗ್ಯವನ್ನು ಕೂಡ ಕೆಡಿಸಿಕೊಳ್ಳುವ ಸಂಭವವಿದೆ. ವ್ಯಾಪಾರೀ ಜನತೆಗೆ ವಾಮಮಾರ್ಗದಿಂದ ಹೆಚ್ಚಿನ ಲಾಭವಾಗುವದು. ತಾ. 2, 3, 7, 8 ಈ ದಿನಗಳು ಉಳಿದ ದಿನಗಳಿಗಿಂತ ಲೇಸು.

೯. ಧನು

ಕರ್ತವ್ಯದಕ್ಷರೆನಿಸಿದ ನಿಮಗೆ ಬಂಧುಗಳ ಸಹಕಾರವೂ ಮಿತ್ರಜನರ ನೆರವೂ ಇಂದು ತುಂಬಾ ಲಭಿಸುವದು. ನಿಮ್ಮ ಪ್ರಯತ್ನಕ್ಕಿಂತಲೂ ಹೆಚ್ಚಿನ ಫಲವು ಅನಾಯಾಸದಿಂದ ಲಭಿಸಲಿದೆ. ಆತಏವ ಇಂದಿನ ದಿನಗಳನ್ನು ನೀವು ಸುಖನೆಮ್ಮದಿಯಿಂದ ಕಳೆವಿರಿ. ನಷ್ಟವೆಂದು ಪರಿಗಣಿಸಲ್ಪಟ್ಟ ಧನಕನಕಾದಿಗಳೂ ಪುನಃ ತಾವಾಗಿ ಬಂದು ನಿಮ್ಮ ಕೈಸೇರಲಿವೆ. ತಾ. 4, 5, 6ರಲ್ಲಿ ಬೇಕಾದ ಸುಖಭೋಗಗಳನ್ನು ಪಡೆವಿರಿ.

೧೦. ಮಕರ

ಅರ್ಥ ಸ್ಥಾನಪತಿಯಾಗಿ ಅಲ್ಲೇ ನೆಲೆಸಿದ ಶನೈಶ್ಚರನು ಹಲವಾರು ಖರ್ಚುಗಳಿಗೆ ನಿಮ್ಮನ್ನಿಂದು ಗುರಿಪಡಿಸಲಿರುವನು. ಎಷ್ಟೇ ಶ್ರಮವಹಿಸಿ ದುಡಿದರೂ ದಿನಾಂತ್ಯದಲ್ಲಿ ಕೈ ಬರಿದಾಗಿಯೇ ಉಳಿವದು. ದೇಹಾಲಸ್ಯಕ್ಕಿಂತಲೂ ಮನೋರೋಗವಧಿಕವಾದೀತು. ಬಂಧುಜನರ ಕೂಡೆ ವಿನಾಕಾರಣ ಕಲಹ ಮನಸ್ತಾಪಗಳುಂಟಾಗಲಿವೆ. ತಾ. 2, 3, 7, 8 ಈ ದಿನಗಳಲ್ಲಿ ನಿಮಗೆ ಸ್ವಲ್ಪ ನೆಮ್ಮದಿ ದೊರೆತೀತು.

೧೧. ಕುಂಭ

ಸದ್ಯ ನಿಮ್ಮ ಆರೋಗ್ಯವು ಅಷ್ಟೊಂದು ಉತ್ತಮವಾಗಿಲ್ಲವಾದರೂ ಆರ್ಥಿಕ ಭಾಗವು ತುಂಬ ತೃಪ್ತಿಕರವಿರುವದು. ನಿಮ್ಮ ಪುತ್ರಮಕ್ಕಳೂ ಮಿಕ್ಕ ಫಲವ ಲಭಿಸುವದಲ್ಲದೆ ಜನಮನ್ನಣೆಗೂ ನೀವಿಂದು ಪಾತ್ರರಾಗುವಿರಿ. ಆದರೆ ರಾಜಕೀಯದಲ್ಲಿ ಮಾತ್ರ ಪ್ರತಿಸ್ಪರ್ಧಿಗಳ ಕೈಯೇ ಮೇಲಾಗುವ ಸಂಭವವಿದೆ. ಗೃಹತಾಪತ್ರಯಗಳು ಮನಸ್ಸಿಗೆ ನೆಮ್ಮದಿಯನ್ನೀಯಲಾರವು. ವಾರಾದಿಯ 5 ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

೧೨. ಮೀನ

ಉಪಚಯಗತರಾದ ರವಿಬುಧರನ್ನುಳಿದು ಇತರರೆಲ್ಲರೂ ವಿಮುಖರಾಗಿರುವುದರಿಂದ ಹಲವರ ಕೂಡೆ ನಿಷ್ಠುರ ವಿರೋಧಗಳನ್ನು ಕಟ್ಟಿಕೊಳ್ಳುವಿರಿ. ನಿಮ್ಮ ಇಂದಿನ ಪರಿಸ್ಥಿತಿಯನ್ನು ಶತ್ರುಜನರು ಸದುಪಯೋಗಪಡಿಸಿಕೊಳ್ಳುವರು. ಸ್ತ್ರೀ ಸಂಬಂಧವಾದ ವ್ಯವಹಾರದಿಂದಾಗಿ ಧನಹಾನಿ ಜನಾಪವಾದಕ್ಕೂ ಕೂಡ ಗುರಿಯಾಗಲಿರುವಿರಿ. ದುಡಿಮೆಯು ಅತ್ಯಲ್ಪವಾಗಿದ್ದರೂ ಸದ್ಯ ಸಾಲ ಕಡಗಳಿಗೆ ಮನ ಮಾಡುವುದಿಲ್ಲವು. ವಾರಾಂತ್ಯದ 5 ದಿನಗಳು ಸಾಕಷ್ಟು ಅನುಕೂಲವಾಗಿವೆ.

ನಚಿಕೇತ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು.

ಋಣ ಯಾತ್ರೆ
ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ
ಬೆಲೆ ರೂ. 2-00

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ
LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧

ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ಪ್ರೆಸ್, ಉಡುಪಿ. ನವಯುಗ

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?
ಚಂಚಲವಾದ ಮನಸ್ಸನ್ನು ಶುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರರಾಗುವಂತೆ ಮಾಡುವ ಕೃತಿ.
ಬೆಲೆ: 0-19 ಪೈಸೆ.
0-30 ಪೈಸೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.
ರಖಂ ಪ್ರತಿಗಳಿಗೆ ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

నవయుగ

9—9—1965



lephone 226

NAVAYUGA

leading nationalist weekly

౨౦ పైసె

ಕಥಾ ಪ್ರಪಂಚ

ಕಾಲು ಜಾರಿದಾಗ . . .

ಬರೆದವರು

ಶ್ರೀ ಪಿ. ಕುಞ್ಞಣ್ಣ ಶೆಟ್ಟಿ

ಕಾಲು ಯಾರಿಗೂ ಜಾರಬಹುದು; ಅದರ ನೋವನ್ನು ಗಂಡು ಕೆಲವೇ ದಿನಗಳಲ್ಲಿ ಮರೆಯಬಲ್ಲ, ಆದರೆ ಹೆಣ್ಣು......?

ಪ್ರಯಾಣಿಕರಿಂದ ತುಂಬಿದ ಬಸ್ಸು ತನ್ನ ವೇಗವನ್ನು ಮಿತಿಗೊಳಿಸಿ ನಿಲ್ದಾಣವನ್ನು ತಲಪಿ ನಿಂತಿತು. ಪ್ರಯಾಣಿಕರು ತಾನು ಮುಂದು ತಾನು ಮುಂದೆಂದು ಎದ್ದು ಇಳಿಯತೊಡಗಿದರು. ನಾನೂ ಇಳಿದವನಿಂದ ಹೊರಡಾಗುವುದು ಬೇಡವೆಂಬಂತೆ ಆ ನೂಕಾಟದಲ್ಲೇ ಕೆಳಗಿಳಿದೆ.

ಬಸ್ಸು ಅಲ್ಲಿಗೆ ಬಂದು ತಲಪುವ ನಿರೀಕ್ಷಣೆಯಲ್ಲೇ ಇದ್ದ ಸೋಡಾ—ಬೀಡಾ, ಬೀಡಿ, ಶರಬತ್ ವ್ಯಾಪಾರಿಗಳು ಒಬ್ಬನಿಗಿಂತ ಇನ್ನೊಬ್ಬನೇ ಹೆಚ್ಚೆನ್ನುವಂತೆ ಅರಚತೊಡಗಿದ್ದರು. ಪತ್ರಿಕೆಗಳ ಮಾರಾಟವೂ ನಡೆಯುತ್ತಿತ್ತು.

ಅಷ್ಟರಲ್ಲಿ, ಬೇಡುವವರು ತಾವೇನು ಕಡಿಮೆಯಲ್ಲ ಎನ್ನುವಂತೆ ಕೈಯಿಲ್ಲ, ಕಾಲಿಲ್ಲ, ಕಣ್ಣಿಲ್ಲವೆನ್ನುವುದರೊಂದಿಗೆ ಧರ್ಮ ಕೊಟ್ಟವರಿಗೆ ದೇವರು ಒಳ್ಳೆದು ಮಾಡಲೆಂದೂ, ಮನೆಯಲ್ಲಿ ಮಡದಿ ಮಕ್ಕಳು ತಣ್ಣಗಿರಲೆಂದೂ ದೇವರ ನಾಮವನ್ನೇ ಬಂಡವಾಳ ಮಾಡಿಕೊಂಡು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವ ವ್ಯಾಪಾರ ಸಾಗಿಸಿದ್ದರು; ಕೆಲವು ಭಿಕ್ಷುಕರಂತೂ ಕೆಲವು ಪೈಸೆಗಳನ್ನು ಗಿಟ್ಟಿಸಿಯೇ ಬಿಟ್ಟಿದ್ದರು.

ಅದೇ ಭಿಕ್ಷುಕರ ಸಾಲಿಗೆ ಸೇರಬಹುದಾದ ಓರ್ವ ಹೆಂಗಸು. ಮಾತ್ರ ಒಂದು ಬದಿಯಲ್ಲಿ ಒಂದು ಕಂಬಕ್ಕೆ ತನ್ನ ದೇಹದ ಭಾರವನ್ನು ಆನಿಸಿ, ದೀನಳಾಗಿ ಜನಸಂದಣಿಯನ್ನು ಮ್ಲಾನವದನದಿಂದ ನೋಡುತ್ತಿದ್ದಳು.

ಎಣ್ಣೆ—ಸ್ನಾನಗಳನ್ನು ಕಾಣದ ಕೆದರಿದ ಗುಂಗುರು ಕೂದಲು ಧೂಳು ಸ್ನಾನದಿಂದ ಕೆಂಗೂದಲಾಗಿತ್ತು. ಮುಖದಲ್ಲಿ ನಿರಾಶೆಯ ಮೋಡ ಕವಿದಿತ್ತು. ಉಟ್ಟ ಉಡುಪು ಕೊಳೆಯಿಂದ ಅಸಹ್ಯವನ್ನುಂಟು ಮಾಡುತ್ತಿತ್ತು. ಕೈಯಲ್ಲಿದ್ದ ಊಟದ ತಟ್ಟೆ ಹಿಡಿದಿದ್ದ ದೈನ್ಯತೆಯ ಪ್ರತಿಮೂರ್ತಿಯಾದ ಆಕೆ ತುಂಬು ಗರ್ಭಿಣಿಯೆನ್ನುವಾಗ ಅವಳ ಆಗಿನ ಆ ಸ್ಥಿತಿ ಎಂತಹ ಕಲ್ಲು ಹೃದಯವನ್ನೂ ಕನಿಕರಗೊಳ್ಳುವಂತಿತ್ತು! ಆಕೆಯ ಶರೀರ ಪ್ರಕೃತಿ "ಆಕೆ ಅಂದು ಅನ್ನ ಕಂಡಿಲ್ಲ"ವೆಂದು ಸಾರಿ ಹೇಳುತ್ತಿತ್ತು. ವಾರ್ಧಕ್ಯದ ಬಿಸಿಲ ಝಳಕ್ಕೆ ಕಾದ ನೆಲದಲ್ಲಿ ನಡೆದು ಪ್ರಯಾಣಿಕರಿಂದ ಭಿಕ್ಷೆ ಯಾಚಿಸುವಷ್ಟು ಶಕ್ತಿ ಇರದುದರಿಂದಲೋ ಏನೋ ಆಕೆ ಹಾಗೆ ಕಂಬಕ್ಕೊರಗಿ ನಿಂತಿರಬೇಕು.

ಕೈಕಾಲುಗಳು ಸರಿಯಿದ್ದು ಸ್ಥೂಲಕಾಯರಾದ ಸೋಮಾರಿಗಳೇ ಇಂದು ಭಿಕ್ಷೆಯೆತ್ತಿ ಹೊಟ್ಟೆ ಹೊರೆಯುತ್ತಾರೆ. ಅಂತಹವರಿಗೂ ಜನರು ಭಿಕ್ಷೆ ನೀಡುತ್ತಾರಲ್ಲ! ಭಿಕ್ಷುಕರ ಬದ್ಧ ವಿರೋಧಿಯಾದ ನಾನು, ಅಂದು ಆ ಅಸಹಾಯಕಳಾದ ಭಿಕ್ಷುಕಿಯೆಡೆಗೆ ಅನಿರೀಕ್ಷಿತವಾಗಿ ದೃಷ್ಟಿ ಹರಿಸಿದಾಗ—ಏನೋ ಒಂದು ರೀತಿಯಲ್ಲಿ ನನ್ನ ಮನ ನುಡಿಯಿತು, "ಆಕೆ ಅನಾಥೆ, ಕುಸು ನೀಡು" ಎಂಬುದಾಗಿ. ಆವಳ ಅತಿ ಸಮೀಪದಿಂದಲೇ ಹಾದು ಹೋದ ನಾನು, ತಿರುಗಿ ಅವಳ ಬಳಿಗೆ ಬಂದು ಧಾರಾಳ ಮನದಿಂದ ಅರ್ಧ ರೂಪಾಯಿಯ ನಾಣ್ಯವೊಂದನ್ನು ಅವಳ ಬಳಿ ನೀಡಲು—ಅವಳು ತಟ್ಟೆಯನ್ನು ಮುಂದೊಡ್ಡಿದಳು. ನಾಣ್ಯ "ಟಣ್"ನೆ ತಟ್ಟೆಗೆ ಬಿತ್ತು.

ಆಕೆ ಅಗಲವಾಗಿ ಕಣ್ದೆರೆದು ತಟ್ಟೆಯನ್ನು ನೋಡಿದಳು. ಆಕೆಯ ಮುಖದಲ್ಲಿ ಗೆಲುವಿನ ಗೆರೆ ಮೂಡಿ ತುಟಿಯಂಚಿನಲ್ಲಿ ನಗು ಮಿನುಗಿ ಮಾಯವಾಯಿತು. ನನ್ನೆಡೆಗೆ ಅದೇ ದೃಷ್ಟಿಯಲ್ಲಿ ಕೃತಜ್ಞತೆಯ ಭಾವವನ್ನು ಬೀರಿದಳು.

ಬಿಸಿಲ ಬೇಗೆಗೆ ಬಹುವಾಗಿ ಆಯಾಸಗೊಂಡಿದ್ದ ನಾನು, ತುಸು ವಿಶ್ರಾಂತಿಗಾಗಿ ನಿಲ್ದಾಣದೊಳಗೆ ಇದ್ದ ಬೆಂಚೊಂದರಲ್ಲಿ ಕುಳಿತೆ. ವಿವಿಧ ಬಗೆಯ ಜನರು ವಿವಿಧ ಕೆಲಸಗಳಲ್ಲಿ ನಿರತರಾಗಿರುವುದನ್ನು ನೋಡುತ್ತಾ ಕುಳಿತಿದ್ದೆ. ಹೊಟ್ಟೆ ಹೊರೆಯುವುದಕ್ಕಾಗಿ ಏನೆಲ್ಲ ನಾಟಕಗಳನ್ನು ಜನರು ಆಡಬೇಕಾಗುತ್ತದೆಂಬುದನ್ನು ಎಣಿಕೆ ಹಾಕುವಾಗ, ನನ್ನ ಬಗೆಗೆ ನನಗೆ ಹೇಳಲಾರದ ತೃಪ್ತಿಯಾಯಿತು. ಹಿರಿಯರ ಆಸ್ತಿಗೆ, ಅಪಾರ ಐಶ್ವರ್ಯಕ್ಕೆ ಬೇರೆ ಯಾವ ಪಾಲುದಾರರೂ ಇರಲಿಲ್ಲ. ಆದುದರಿಂದ ಸುಖವಾದ ವಿಲಾಸ ಜೀವನ ಸಾಗಿಸುತ್ತಿರುವ ನಾನೇ ಧನ್ಯನೆಂದುಕೊಂಡೆ ಮನಸ್ಸಿನಲ್ಲಿ. ನಾನು ಹಾಗೆಯೇ ಜನಸಂದಣಿಯನ್ನು ನೋಡುತ್ತಿದ್ದಂತೆ ಅದೇ ಭಿಕ್ಷುಕಿ ಅಲ್ಲಿಂದೆದ್ದು ಅಲ್ಲೇ ಹತ್ತಿರದಲ್ಲಿದ್ದ ಒಂದು ಭೋಜನ ಗೃಹದೆಡೆಗೆ ಸಾಗಿದಳು—ತನ್ನ ತಟ್ಟೆಯೊಂದಿಗೆ.

ಭೋಜನ ಗೃಹದ ದ್ವಾರದ ಬಳಿ ಗಲ್ಲೆಯಲ್ಲಿ ಆಸೀನನಾಗಿದ್ದ ಅದರ ಯಜಮಾನ.

ಭಿಕ್ಷುಕಿ ತನ್ನಲ್ಲಿರುವ ಒಂದೇ ಒಂದು ನಾಣ್ಯವನ್ನು ಯಜಮಾನನ ಮುಂದಿಟ್ಟು ಊಟ ಬೇಕೆಂದು ಕೇಳಿದಳು.

ಯಜಮಾನ, "ಇಷ್ಟಕ್ಕೆ ಊಟ ಇಲ್ಲ; ಇನ್ನೂ ಇಷ್ಟು ಕೊಡು" ಎಂದು ಹತ್ತು ತಿಂಗಳ ಗಾತ್ರದ ತನ್ನ ಡೊಂಬೊಟ್ಟೆಯನ್ನು ಸವರುತ್ತಾ.

"ಬೇರೆ ಹಣ ನನ್ನ ಕೈಯಲ್ಲಿ ಇಲ್ಲ ಸ್ವಾಮೀ, ಇರುವುದೇ ಇಷ್ಟು." ಎಂದಳಾಕೆ ವಿನೀತಳಾಗಿ.

ಕೊನೆಗೆ, ಸಿಕ್ಕಿದುದನ್ನು ಬಿಡಲು ಮನಸ್ಸು ಬಾರದ ಆ ಯಜಮಾನ ನಾಣ್ಯವನ್ನು ತನ್ನ ಡ್ರಾಯರಿಗೆ ಸೇರಿಸುತ್ತಾ ಮಾಣಿಯನ್ನು ಕರೆದು ಅವಳಿಗೆ ಅರ್ಧ ಊಟ ಹಾಕುವಂತೆ ಆಜ್ಞೆಯಿತ್ತ. ಧನಿಯಿಂದ ಆಜ್ಞೆ ಪಡೆದ ಮಾಣಿ ಒಳಗೆ ನಡೆದು, ಒಂದು ಎಲೆಯಲ್ಲಿ ಅನ್ನ-ಪಲ್ಯ—ಪದಾರ್ಥಗಳನ್ನೆಲ್ಲಾ ಬಡಿಸಿ ತಂದು ಆಕೆಯ ತಟ್ಟೆಯ ಮೇಲಿಟ್ಟೊಡನೆ, ಆಕೆ ಅಲ್ಲಿ ನಿಲ್ಲದೆ ಬೀದಿಗಿಳಿದಳು. ಹೆಜ್ಜೆ ಹಾಕುತ್ತಿದ್ದಂತೆ ಅವಳ ದೃಷ್ಟಿ ಅನ್ನದ ತಟ್ಟೆಯಲ್ಲೇ ತದೇಕವಾಗಿತ್ತು.

ಆಕೆ ತಾನು ಮೊದಲು ನಿಂತು ಕೊಂಡಿದ್ದಲ್ಲಿಗೇ ಬಂದು ಅನ್ನದ ಬಟ್ಟಲನ್ನು ಮೆಲ್ಲನೆ ಕೆಳಗಿಟ್ಟು, ತಾನೂ ಲಗುವಾಗಿ ಬಾಗಿ ನೆಲಕ್ಕೆ ಕೈಯೂರಿ ಬಟ್ಟಲ ಬಳಿ ಕುಳಿತುಕೊಂಡು ಅನ್ನವನ್ನು ಗಬಗಬನೆ ತಿನ್ನತೊಡಗಿದಳು. ಇಷ್ಟೇ ಹಸಿವಾಗಿರಬಹುದೆಂದು ಆಕೆ ಉಣ್ಣುವಾಗ ಗುರುತಿಸಬಹುದಿತ್ತು. ಉಣ್ಣುತ್ತಿದ್ದಂತೆ ಆಗಾಗ ಗಂಟಲಲ್ಲಿ ಅನ್ನದ ತುತ್ತು ಸಿಕ್ಕಿಕೊಳ್ಳುತ್ತಿದ್ದುದರಿಂದ ಹಸಿವಾಗಿದ್ದರೂ ಗಬಗಬನೆ ಉಣ್ಣಲು ಅಡ್ಡಿಯಾಗುತ್ತಿತ್ತು. ಒಂದೈದು ನಿಮಿಷಗಳಲ್ಲಿ ಆಕೆಯ ಊಟದ ಆಟ ಮುಗಿಯಿತು. ಕೈತೊಳೆಯುವುದಕ್ಕಾಗಿ ಆಕೆ ಅಲ್ಲಿಯೇ ಇದ್ದ ನಳ್ಳಿಯ ಬಳಿಗೆ ಹೋಗಿ ನಳ್ಳಿ ತಿರುಗಿಸಿ ಬಟ್ಟಲಲ್ಲಿ ತುಂಬ ನೀರು ತುಂಬಿಸಿಕೊಂಡು ಮೊದಲು ಎರಡು ಗುಟುಕು ನೀರನ್ನು 'ಗಟ ಗಟ'ನೆ ಕುಡಿದು ನೀರಡಿಕೆಯನ್ನೂ ತಣಿಸಿಕೊಂಡಳು. ಬಟ್ಟಲನ್ನು ಶುಚಿಯಾಗಿ ತೊಳೆದು ಅದೇ ಕಂಬದ ಬಳಿಗೆ ಬಂದು, ಕಾಲು ನೀಡಿ ಕುಳಿತು ಕೊಂಡಳು.

ಅವಳ ಮುಗ್ಧತೆಗೆ ಮಾರು ಹೋದ ಮರುಕಗೊಂಡ ನನ್ನ ಮನಸ್ಸು, ಆಕೆಯನ್ನು ಮಾತಾಡಿಸಿ ಅವಳ ಬಗೆಗೆ ಹೆಚ್ಚಿನ ವಿವರವನ್ನು ಸಂಗ್ರಹಿಸುವ ಪ್ರೇರಣೆಯನ್ನು ನನಗಿತ್ತಿತು. ನಾನು ಅಲ್ಲಿಂದೆದ್ದು ಆಕೆಯ ಬಳಿ ಸಾರಿ ಆಕೆಯನ್ನು ನುಡಿಸತೊಡಗಿದೆ.

(ಹದಿನೈದನೇ ಪುಟ ನೋಡಿರಿ)



8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	5½
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	6½
24 ತಿಂಗಳಿಂದ	36 ತಿಂಗಳ ಕೆಳಗೆ	6¾
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	7¼
60 ತಿಂಗಳಿಂದ	84 ತಿಂಗಳ ಕೆಳಗೆ	7½
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ	ಮೇಲೆ	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ., ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೋ, ಉಡುಪಿ.

Telephone 220.

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೮

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ತಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನು ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಫೋಟೋ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ' ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಜೆಮಿನಿಯ ಚಾಲಕರು

(ಎಡ) ಎಡ್ವರ್ಡ್ ವೈಟ್ ಮತ್ತು (ಬಲ) ಜೇಮ್ಸ್ ಮೆಕ್‌ಡಿವಿಟ್. ಅವರ ಮುಂದಿರುವುದು ಇಬ್ಬರು ಗಗನ ಯಾತ್ರಿಗಳು ಪ್ರಯಾಣಿಸಬಲ್ಲ ಜೆಮಿನಿ ಉಪಗ್ರಹ. ಮೂವರು ಯಾತ್ರಿಕರನ್ನು ಕೊಂಡೊಯ್ಯುವ ಉಪಗ್ರಹಗಳ ತಯಾರಿಯ ಪ್ರಯತ್ನ ನಡೆಯುತ್ತಿದ.

ನವಯುಗ

ಸಂಪುಟ ೪೫ | ಉಡುಪಿ | Vol. 45

ಸಂಚಿಕೆ ೨ | ೯—೯—೧೯೬೫ | No. 2

ವಚನ ಸುಧೆ

ಶೂರೋ ಭಯೇಷ್ವರ್ಥ ಕೃಚ್ಛ್ರೇಷು ಧೀರಃ
ಕೃಚ್ಛ್ರೇಷ್ವಾಪತ್ಸು ಸುಹೃದಶ್ಚಾರಯಶ್ಚ ॥

ಭಯಪ್ರದ ಸನ್ನಿವೇಶದಲ್ಲಿ ಶೂರನೂ ಆರ್ಥಿಕ ಬಿಕ್ಕಟ್ಟಿನಲ್ಲಿ ಧೀರನೂ ಕಠಿನ ಆಪತ್ತು ಸಂಭವಿಸಿದಾಗ ಶತ್ರು ಮತ್ತು ಮಿತ್ರರೂ ಪರೀಕ್ಷೆಗೆ ಗುರಿಯಾಗುವರು.

ಕಾಶ್ಮೀರದ ಕೊಳ್ಳ ನಮ್ಮದೇ

ಕಾಶ್ಮೀರದ ಕೊಳ್ಳದಲ್ಲಿ ಪಾಕಿಸ್ತಾನ ಹೊತ್ತಿಸಿದ ಬೆಂಕಿಯನ್ನು ನಂದಿಸುವುದು ಭಾರತದ ಪರಮ ಕರ್ತವ್ಯ. ಶಾಸ್ತ್ರಿ ಸರಕಾರವು ಈ ಕರ್ತವ್ಯಕ್ಕೆ ಅಗ್ರಗಣ್ಯ ಸ್ಥಾನವನ್ನು ನೀಡಿದ್ದು ಇದಕ್ಕೆ ಸಮಸ್ತ ಭಾರತೀಯರ ಬೆಂಬಲ ಇದ್ದೇ ಇದೆ. ಮೊತ್ತಮೊದಲ ಬಾರಿಗೆ ಭಾರತವು ಸ್ವರಕ್ಷಣೆಗಾಗಿ, ಪಾಕ್ ಅತಿಕ್ರಮಣಕಾರರು ಭಾರತದಲ್ಲಿ ನುಸುಳದಂತೆ ನೋಡಿಕೊಳ್ಳುವುದಕ್ಕಾಗಿ ಸಮರ ವಿರಾಮ ರೇಖೆಯನ್ನು ದಾಟಿ ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಕೆಲವು ಪಾಕ್ ಸೇನಾ ಠಾಣ್ಯಗಳನ್ನು ವಶಪಡಿಸಿಕೊಂಡಿರುವುದು ಸರ್ವಥಾ ಸಮರ್ಥನೀಯ. ಕಳೆದ ಹದಿನೆಂಟು ವರ್ಷಗಳಲ್ಲಿ ಪಾಕಿಸ್ತಾನವು ಸಮರವಿರಾಮ ರೇಖೆಯನ್ನು ನೂರಾರು ಬಾರಿ ಉಲ್ಲಂಘಿಸಿದೆ; ಇದಕ್ಕೆ ಸಂಯುಕ್ತ ರಾಷ್ಟ್ರಸಂಘದ ವೀಕ್ಷಕ ಜನರಲ್ ನಿಮ್ಮೋರವರ ವರದಿಗಳೇ ಸಾಕ್ಷಿ. ಹಾಗಿದ್ದರೂ ಇದಕ್ಕೆ ಮೊದಲು ಭಾರತವು ಕಾರ್ಯಾಚರಣೆಗೆ ತೊಡಗಿರಲಿಲ್ಲ. ಅದು ತಾಳ್ಮೆಯಿಂದಿದ್ದು ಸತ್ಯ, ನ್ಯಾಯ ಮತ್ತು ಧರ್ಮಗಳನ್ನು ಪಾಕಿಸ್ತಾನವು ಕಲಿತುಕೊಂಡೀತು, ಅದರ ಮಿತ್ರರಾದರೂ ಕಲಿಸಿಯಾರು ಎಂದುಕೊಂಡಿದ್ದರೆ, ಭಾರತಕ್ಕೀಗ ಭ್ರಮನಿರಸನವಾಗಿದೆ. ಹಾಗಾಗಿ ಬೇಡವಾಗಿದ್ದರೂ ರಾಷ್ಟ್ರದ ಸುಭದ್ರತೆ ಮತ್ತು ಸಾರ್ವಭೌಮತೆಯ ರಕ್ಷಣೆಗೋಸುಗ ಇಂತಹ ಕ್ರಮ ಕೈಗೊಳ್ಳದೆ ಗತ್ಯಂತರವಿರಲಿಲ್ಲ.

ಕಾಶ್ಮೀರದ ಕೊಳ್ಳದಲ್ಲಿ ಪಾಕ್—ಭಾರತಗಳ ನಡುವೆ ತೀವ್ರವಾದ ಹೋರಾಟ ನಡೆಯುತ್ತಿದೆ. ನಮ್ಮ ಸೈನಿಕರು ತಮ್ಮ ಸಹಜ ವೀರ್ಯ, ಧೈರ್ಯ ಮತ್ತು ಚಾಣಾಕ್ಷತನದಿಂದ ಮಾತೃಭೂಮಿಯ ರಕ್ಷಣಾ ಕಾರ್ಯದಲ್ಲಿ ಯಶದ ದಾರಿ ಹಿಡಿಯುತ್ತಿದ್ದಾರೆ. ಅತಿಕ್ರಮಣಕಾರರು ಬಾರದಂತೆ ತಡೆಯುವುದರೊಂದಿಗೆ ನುಗ್ಗಿ ಬಂದಿರುವವರನ್ನು ಅರಸಿ ತೆಗೆಯುವುದು ಕಠಿನದಲ್ಲಿ ಕಠಿನವಾದ ಕೆಲಸ. ಆದರೂ ನಮ್ಮ ವೀರಯೋಧರು ಈ ಕಾರ್ಯದಲ್ಲಿ ಎಂಟೆದೆಯಿಂದಲೇ ಮುಂದುವರಿಯುತ್ತಿದ್ದಾರೆ. ಇದು ನಮಗೊಂದು ಹೆಮ್ಮೆಯ ಸಂಗತಿ. ಮೂರು ವರ್ಷಗಳಿಗೆ ಮೊದಲು ಕೆಂಪು ಚೀನವು ಉತ್ತರದ ಗಡಿಯಲ್ಲಿ ಆಕ್ರಮಣ ಮಾಡಿದ ವೇಳೆಯಲ್ಲಿದ್ದ ಗಂಡಾಂತರ ಪರಿಸ್ಥಿತಿ ಮತ್ತೆ ದೇಶದ ಮುಂದಿದೆ. ಇದನ್ನು ನಾವು ಎದುರಿಸಿಯೇ ತೀರಬೇಕು.

ಜನರಲ್ ನಿಮ್ಮೋರವರ ವರದಿಯು ಪಾಕಿಸ್ತಾನವು ಅತಿಕ್ರಮಣ ಮಾಡಿದೆಯೆಂದು ಸ್ಪಷ್ಟವಾಗಿ ಹೇಳುತ್ತದೆ. ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯು ಥಾಂಟರೂ ಇದನ್ನು ಒಪ್ಪಿಕೊಂಡಿದ್ದಾರೆ. ಪಾಕಿಸ್ತಾನದಿಂದ ಸಮರ ವಿರಾಮ ರೇಖೆಯನ್ನು ಪಾಲಿಸುವ ಸಂಬಂಧದಲ್ಲಿ ಸ್ಪಷ್ಟವಾದ ವಿಶ್ವಾಸ ಪಡೆಯುವಲ್ಲಿ ತಾನು ಅಸಮರ್ಥರಾಗಿರುವುದಾಗಿ ಅವರು ಒಪ್ಪಿಕೊಂಡಿದ್ದಾರೆ. ಇಷ್ಟರಿಂದಲೇ ಪಾಕಿಸ್ತಾನದ ಇರಾದೆಯೇನು ಎಂಬುದನ್ನು ಯಾರಾದರೂ ಅರಿತುಕೊಳ್ಳಬಹುದು. ಭದ್ರತಾ ಮಂಡಲವೂ ಈ ದುರ್ಧರ ಪ್ರಸಂಗದ ಬಗ್ಗೆ ಚರ್ಚಿಸಿ ಉಭಯ ದೇಶಗಳೂ ಸಮರ ವಿರಾಮವನ್ನು ಮಾಡಿಕೊಳ್ಳಬೇಕೆಂದು ಕರೆಯಿತ್ತಿದೆ. ಆದರೆ, ಒಂದರ ಮೇಲೊಂದು ಸಮರ ವಿರಾಮ ಒಡಂಬಡಿಕೆಯನ್ನು ಮಾಡಿಕೊಳ್ಳುವುದು ಮತ್ತದರ ಹಿಂದೆ ಆಕ್ರಮಣಕ್ಕೆ ತೊಡಗುವುದು ಪಾಕ್ ಮನೋವೃತ್ತಿ. ಇದಕ್ಕೆ ಸೂಕ್ತವಾದ ಮುಟ್ಟುಗೋಲು ಹಾಕದೆ ಹೋದರೆ ಭಾರತದ ಸಾರ್ವಭೌಮತೆಗೇನೇ ಕುಂದು. ಇದೇ ಮಾತನ್ನು ಪ್ರಧಾನಿ ಲಾಲಬಹದೂರರೂ ಘೋಷಿಸಿದ್ದಾರೆ. ಪಾಕ್ ಅತಿಕ್ರಮಣಕ್ಕೊಂದು ಕೊನೆಯನ್ನು ತರುವುದು ಭದ್ರತಾ ಸಮಿತಿಯಿಂದ ಸಾಧ್ಯವಾದೀತೆ? ಪಾಕಿಸ್ತಾನವು ಆಕ್ರಮಣಕಾರ ರಾಷ್ಟ್ರವೆಂಬುದನ್ನು ಅದು ಒಪ್ಪಿಕೊಂಡೀತೆ? ಪ್ರಚಲಿತ ಪ್ರಸಂಗದಲ್ಲಿ ಇದಕ್ಕೆ ಬೇಕಾದ ಸಾಕಷ್ಟು ಪುರಾವೆಗಳಿದ್ದರೂ ಭದ್ರತಾ ಮಂಡಳವೇಕೆ ಹಿಂಜರಿಯುತ್ತಿದೆ? ಭದ್ರತಾ ಮಂಡಲವು, ಮುಖ್ಯವಾಗಿ, ಅದರ ಪಾಶ್ಚಾತ್ಯ ಸದಸ್ಯ ರಾಷ್ಟ್ರಗಳು, ಕಾಶ್ಮೀರದಲ್ಲಿ ಉದ್ಭೂತವಾಗಿರುವ ಮೂಲ ಸಂಗತಿಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿರುವುದಿಲ್ಲ. ಈ ಕಾರಣದಿಂದಾಗಿಯೇ ಈ ಹದಿನೆಂಟು ವರ್ಷಗಳಲ್ಲೂ ಅದು ನನೆಗುದಿಗೆ ಬಿದ್ದಿದೆ. ಪಾಕಿಸ್ತಾನವು ಮೊದಲೇ ಆಕ್ರಮಣಕಾರ ರಾಷ್ಟ್ರ. ಇದನ್ನು ಒಪ್ಪಿಕೊಳ್ಳಲು ಅವರು ಸಿದ್ಧರಿಲ್ಲ, ಪ್ರಶ್ನೆಯನ್ನೇ ಅರ್ಥ ಮಾಡಿಕೊಳ್ಳಲಾರದವರು ಅದನ್ನು ಹೇಗೆ ತಾನೇ ಉತ್ತರಿಸಿಯಾರು?

ಪಾಕಿಸ್ತಾನವು ತನ್ನ ಅತಿಕ್ರಮಣಕಾರರನ್ನು ಸಂಪೂರ್ಣವಾಗಿ ಭಾರತದ ರಾಜ್ಯದಿಂದ ಹಿಂದೆಗೆದುಕೊಳ್ಳದ ಹೊರತು ಯಾವುದೇ ರೀತಿಯಲ್ಲಿ ಸಮರ ವಿರಾಮವು ಸಾಧ್ಯವಾಗದು.— ಇದು ಭಾರತದ ಸ್ಪಷ್ಟಾಭಿಪ್ರಾಯ. ಇದು ಸಾಧಿಸಿದರೆ, ಸಮರ ವಿರಾಮ ರೇಖೆಯನ್ನು ಕಟ್ಟುನಿಟ್ಟಾಗಿ ಪಾಕಿಸ್ತಾನವು ಪಾಲಿಸುವ ಬಗ್ಗೆ ಸಂಪೂರ್ಣ ಆಶ್ವಾಸನ ದೊರೆಯಬೇಕು. ಮೊದಲನೆಯದಕ್ಕೆ ಪಾಕ್ ಒಮ್ಮೆಗೆ ಒಪ್ಪಿದರೂ ಎರಡನೆಯದಕ್ಕೆ ಒಪ್ಪುವ ಲಕ್ಷಣಗಳಿಲ್ಲ. ಭಾರತದ ಶತ್ರು ಕೆಂಪು ಚೀನಾದ ವರದ ಸ್ನೇಹಹಸ್ತ ಪಾಕಿಸ್ತಾನದ ಮೇಲಿದೆ. ಇಂಡೋನೇಶ್ಯವೂ ಪಾಕ್ ಕಾಶ್ಮೀರ ನೀತಿಯನ್ನು ಸಮರ್ಥಿಸುತ್ತದೆ. ಅಮೆರಿಕೆಯಿಂದ ಕಮ್ಯೂನಿಜಂ ವಿರುದ್ಧ ಹೋರಾಡಲು ಬಂದ ಸೈನಿಕ ಶಸ್ತ್ರಾಸ್ತ್ರಗಳು, ಪಾಕಿಸ್ತಾನದೊಡನೆ ಬೇಕಾದಷ್ಟಿವೆ. ಸೀಟೋ ಮತ್ತು ಸೆಂಟೋ ಸೈನಿಕ ಒಡಂಬಡಿಕೆಗಳಿಂದಲೂ ಅದರ ಸೈನಿಕ ಶಕ್ತಿ ಹೆಚ್ಚಿದೆ. ಹೀಗೆ ಶಸ್ತ್ರಾಸ್ತ್ರಗಳು ಕೈಯಲ್ಲಿರುವಾಗ, ಅವುಗಳನ್ನು ಉದ್ದೇಶಕ್ಕೆ ವಿರುದ್ಧವಾಗಿ ಬಳಸಲು ಯಾರ ಆತಂಕ? ಕಚ್ಛ ರಣದಲ್ಲಿ ಅದು ಅಮೆರಿಕನ್ ಪ್ಯಾಟನ್ ಟ್ಯಾಂಕುಗಳನ್ನು ಬಳಸಿತು; ಭಾರತವೇನೋ ಅಮೇರಿಕೆಗೆ ಪ್ರತಿಭಟನೆ ಕಳಿಸಿತು; ಸಾಕ್ಷಿ ಪುರಾವೆಯೊದಗಿಸಿತು. ಆದರೆ, ಅಮೆರಿಕೆ ಯಾವ ಎಚ್ಚರಿಕೆ ನೀಡಿತ್ತು? ಧೈರ್ಯದಿಂದಲೇ ಈಗ ಮತ್ತೆ ಕಾಶ್ಮೀರದಲ್ಲಿ ಅಮೆರಿಕನ್ ಶಸ್ತ್ರಾಸ್ತ್ರಗಳ ಚಮತ್ಕಾರ ಮಾಡುತ್ತಿದೆ ಅದು!

ಪಾಕಿಸ್ತಾನವು ಮಾಡಿದ್ದು ನಗ್ನಾಕ್ರಮಣ. ಇದನ್ನು ಇಂದು ಜಗತ್ತಿಗೆ ಜಗತ್ತೇ ಅರಿದಿದೆ. ಹಾಗಿದ್ದರೂ ಕಣ್ಣಿದ್ದೂ ಕುರುಡರಂತದು ನಡೆದುಕೊಳ್ಳುತ್ತಿದೆ. ಅದೇನೇ ಇರಲಿ, ನಮ್ಮದು ರಕ್ಷಣೆಯ ಪಕ್ಷ. ಆಕ್ರಮಣಕ್ಕಿಂತ ಹೆಚ್ಚು ಎಚ್ಚರಾಗಿರುವುದು ನಮ್ಮ ಕರ್ತವ್ಯ. ನಾವು ನಮ್ಮ ಕರ್ತವ್ಯ ಪಾಲನೆಯಲ್ಲಿ ಚ್ಯುತಿತಾರದೆ

(ಹದಿನಾಲ್ಕನೇ ಪುಟ ನೋಡಿರಿ)

ಬರುವ ವಾರ ರಜೆ

ನಾವು ವರ್ಷಕ್ಕೊಮ್ಮೆ ರಜೆ ಪಡೆಯುವ ವಾಡಿಕೆಯಂತೆ ಬರುವ ವಾರದ (ತಾ.16-9-65ರ) ನವಯುಗ ಸಂಚಿಕೆಯನ್ನು ನಿಲ್ಲಿಸಿದ್ದೇವೆ. ತಾ. 23ರ ಸಂಚಿಕೆಯು ಎಂದಿನಂತೆ ಸಕಾಲದಲ್ಲಿ ವಾಚಕರ ಕೈಸೇರುವುದು.

ಮೆನೇಜರ್, ನವಯುಗ.

ನರಸಣ್ಣನ ಸರಸ



'ಸಿಮೆಂಟು ಸಕ್ರೆ ಅಕ್ಕಿಗಳ ರೇಶನಿಂಗ್ ಇನ್ನೈದು ವರ್ಷ ತೆಗೆಯೋದಿಲ್ಲಾಂತ ವಾಗ್ದಾನ ಮಾಡ್ತಾರಾದ್ರೆ, ಕಾಶ್ಮೀರ ರಕ್ಷಣಾ ನಿಧಿ ಮಾಡ್ಲಿ, ಇನ್ನೇನೋ ಮಾಡ್ಲಿ ನಮ್ಮ ಕಾಣಿಕೇಂತ ಐದು ಸಾವಿರ ರೂಪಾಯಿ ಈಗ್ಲೇ ಕೊಟ್ಟು ಬಿಡ್ತೇನೆ...'

ಗೇಹ ರಾಜ್ಯದಲ್ಲಿ

ಬುದ್ಧಿಜೀವಿಗಳ ಮಾತು ನಿಜವಾಯಿತು



"ಏನು ಇವತ್ತು ಭಾರಿ ಬೇಗನೇ ಬಂದು ಬಿಟ್ರಿ?"

"ಎಲ್ಲಿಯೇ, ಗಂಟೆ ಈಗತಾನೇ ಎಂಟು ಬಡಿಯಿತು."

"ಅಲ್ಲ, ಯಾವಾಗ್ಲೂ ಒಂಭತ್ತು ದಾಟದೆ ಮನೆ ಮುಖ ನೋಡದಿರುವವರು ಇವತ್ತು ಮಾತ್ರ..."

"ಅಂತೂ ನಿನ್ನದೊಂದು ಗೊಣಗಾಟ ಇದ್ದೇ ಇದೆ ಎನ್ನು...."

"ಗೊಣಗಾಟವಂತೆ. ಇದ್ದದ್ದನ್ನ ಇದ್ದಂತೆ ಅಂದ್ರೆ ಅದು ಗೊಣಗಾಟವಾಗುತ್ತೆ ಅಲ್ವೆ?"

"ಅಲ್ಲ, ಪ್ರತಿ ದಿನಾ ನಿನಗೊಂದು ಏನಾದ್ರೂ ಆಡಿಕೊಳ್ಳೋಕೆ ಸಿಕ್ಕುತ್ತೆ. ನೋಡು, ಮಾತಾಡಿದ್ರೆ ಯಾಕೆ ಮಾತಾಡಿದ್ರೀಂತಿ. ಸುಮ್ಮನಿದ್ರೆ ಬಾಯಿ ಬರೋಲ್ವೇಂತಿ...."

"ಅಯ್ಯೋ ಸುಮ್ಮನ್ನೇ ಹಾಗೆಲ್ಲಾ ಅನ್ನ ಬೇಡಿ ಮತ್ತೆ. ನಾನೆಲ್ಲಿ ಹಾಗಂದಿದ್ದೇನೆ? ಒಂದ್ವೇಳೆ ಅಂದೇಂತ ಇಟ್ಕೊಳ್ಳಿ..."

"ಆ ಇಟ್ಕೊಳ್ಳೋ ಮಾತೆಲ್ಲಾ ಬೇಡ. ಅಂದೇ ಅಂದಿದ್ದಿ."

"ಆಯ್ತಪ್ಪ. ಇದೆ. ಅದ್ಕಿರಿಂದ ಕಿತ್ತು ಹೋದ ಮೂಸಿಗಾದ್ರೂ ಏನು?"

"ಓ ಈಗ ತಿಳಿಯಿತು ಬಿಡು...."

"ಏನು?"

"ಮೂಸೆ ಬೆಳೆಯೋದಿಲ್ಲ ಯಾಕೇಂತ."

"ಯಾಕೆ?"

"ಮತ್ಯಾಕೆ? ನಿನ್ನಂತಹ ಹೆಂಡಂದಿರ ಕೈ ಹಿಡಿದಿರೋವಾಗ, ಅದು ಬೆಳೆದಂತೆಯೇ ಉದುರಿ ಹೋಗುತ್ತೆ. ಸುಮ್ಮನ್ನೆ ಅನ್ನಿಲ್ಲ ನೋಡು ಒಬ್ಬ ಕವಿ..."

"ಏನೂಂತ?"

'ಮೂಸೆ ಹೊತ್ತವರಿಲ್ಲದಾಯಿತೆಂದು ಎಂದು. ಪ್ರಾಯಶಃ ಆ ಕವಿ ಮಹಾದ್ರಷ್ಟಾ ಕನಿರಬೇಕು. ಕಲಿಕಾಲದ ಇತಿಗತಿಗಳನ್ನು ಇಂದು ಕೊಂಡು ಆಗಲೇ ಹಾಡಿರಬೇಕು. ಹೆಂಗಳೆಯರೆಲ್ಲಾ ನಿನ್ನ ಹಾಗೆ, ಗಂಡಸರೆಲ್ಲಾ ನನ್ನ ಹಾಗೆ ಆಗುವರೆಂದು ಆತ ಆದಾಗಲೇ ತನ್ನ ಬುದ್ಧಿಮತ್ತೆಯಿಂದ ತಿಳಿದು ಕೊಂಡಿದ್ದಾನೆ.'

'ಓ ಹೋ ಹೋ! ಆ ಮಹಾ ಕವಿಯ ಪ್ರಶಸ್ತಿಗೆ ಯಾರಾದರೂ ಡಾಕ್ಟರೇಟ್ ಕೊಡುವವರಿಲ್ಲ ನೋಡಿ.'

'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ.'

"ಸರಿಯಪ್ಪ. ಒಳ್ಳೆಯ ಉದರ ವೈರಾಗ್ಯವಿದು."

'ಉದರವೈರಾಗ್ಯವೇನು ಬಂತೆ? ನಿನಗೆ ಕೊಡೋ ಮನಸ್ಸಿದ್ದರೆ ನೀನೇ ಕೊಡು. ಇಲ್ಲವಾದರೆ ಬೇಡ.'

"ಡಾಕ್ಟರೇಟ್ ನೀಡಬೇಕಾದರೆ ನಿಮ್ಮ ಥೀಸಿಸ್ ಸರಿಯಾಗಿ ಮನನ ಮಾಡ ಬೇಕಲ್ಲ... ಸದ್ಯ ಅದನ್ನು ಪರಿಶೀಲಕ ಸಮಿತಿಗೆ ಒಪ್ಪಿಸೋಣ .."

'ಹಾಗಾದರೆ ಹಾಗೆ. ದೇವಿಗೆ ಹೇಗೆ ದೇವರು ಬುದ್ಧಿ ದಯ ಪಾಲಿಸುತ್ತಾನೋ ಹಾಗೆ....'

'ನೀವೆಲ್ಲಿ ನನಗೆ ಬುದ್ಧಿ ಕೊಡ್ತೀರಿ?'

"ಮತ್ಯಾರು ನೀನೇ ನನಗೆ ಕೊಡೂದೂಂತಿಯ?"

"ಕ್ಷ್ಣಾಂ........"

"ಆದರ, ಇದನ್ನ ಯಾರೂ ನಂಬಲಿಕ್ಕಿಲ್ಲ....'

"ಯಾಕೆ?'

"ಅಲ್ಲ, ತನ್ನಲ್ಲಿಲ್ಲದುದನ್ನು ಒಬ್ಬ ಮತ್ತೊಬ್ಬನಿಗೆ ಏನು ತಾನೇ ಕೊಟ್ಟಾನು?"

'ಓ.... ಅಂತೂ ನಾನು ಬುದ್ಧಿಹೀನೆ ಅಂತ ತಾನೇ ನೀವನ್ನೋದು? ಅಯ್ಯಪ್ಪ.... ಆಯ್ತು ..."

"ಅಯ್ಯೋ, ನಿನ್ನ ಈ ಮಾತನ್ನು ಕೇಳಿದ ಮೇಲೆ ನಿನ್ನ ಬುದ್ಧಿಹೀನೆಯನ್ನೋ ಏವನೇ ತಿಳಿಗೇಡಿ...."

"ಅಯ್ತಪ್ಪ. ನಿನಗಿಂತ ನಾನು ಮೇಲು, ಅನ್ನೋರೂ, ನನಗಿಂತ ನೀನು ಮೇಲು ಎನ್ನೋರೂ ನೀವೇ. ಅದಿರ್ಲಿ. ಸದ್ಯ ನೀವು ಬೇಗ ಬಂದಿರೋದು....'

"ಬೇಗ ಅಂದ್ರೆ..."

'ಬೇಗ ಅಂದ್ರೆ ಬೇಗ...."

"ಸುಮ್ಮ ಸುಮ್ಮನೆ ವಾದವೇಕೆ? ನೋಡು. ಕಾಶ್ಮೀರದಲ್ಲಿ ಪಾಕಿಸ್ತಾನಿಗಳು ಬಾಂಬು ದಾಳಿ ಮಾಡಿದ್ದಾರಂತೆ. ಎಲ್ಲಾದ್ರೂ ಈ ಸುದ್ದಿಯನ್ನು ರೇಡಿಯೋದಲ್ಲಿ ಕೇಳಿ ಕಂಗಾಲಾಗಿ ಅಳುತ್ತ ಕೂತುಕೊಂಡರೆ ಏನು ಗತಿ ಅಂತ ಎಣಿಸಿ ತುಸು ಬೇಗ ಬಂದೆ.."

"ಹೌದೆ? ಬಾಂಬು ಹಾಕಿದರೆ?"

"ಬಾಂಬು ಅಂದರೆ ಹೇಳಿಕೊಳ್ಳುವ ಅಣುಬಾಂಬಿನಂತಹವಲ್ಲ. ಈ ಬಾಂಬು ದಾಳಿಯಿಂದ ಒಂದು ಮಸೀದಿ ಹಾಳಾಗಿದೆಯಂತೆ..."

"ಅಲ್ರಿ, ಹಾಗಾದರೆ, ಕಾಶ್ಮೀರದಲ್ಲಿ ಯುದ್ಧ ಪ್ರಾರಂಭವಾಯ್ತೂಂತಾಯ್ತು."

"ಯುದ್ಧ ಅಂತ ಹೇಳಿ ಯುದ್ಧ ಮಾಡುತ್ತಿಲ್ಲ. ಆದರೂ ಕಾರ್ಯಾಚರಣೆಯ ಹೆಸರಿನಲ್ಲಿ ಭೀಕರ ಹೋರಾಟ ನಡೆಯುತ್ತಿದೆ."

"ಅಲ್ರಿ, ಕಾರ್ಯಾಚರಣೆಗೂ ಯುದ್ಧಕ್ಕೂ ವ್ಯತ್ಯಾಸವೇನಿದೇಂತ?"

"ಪರಿಣಾಮದಲ್ಲಿ ಏನೂ ಇಲ್ಲ. ಭಾರತದ ಅವಿಭಾಜ್ಯ ಅಂಗ ಕಾಶ್ಮೀರದ ಮೇಲೆ ಬಯಸಿದಾಗ ಅತಿಕ್ರಮಣ ಮಾಡುವ ಪಾಕಿಸ್ತಾನಿಗಳ ನೀತಿಯನ್ನು ಪ್ರತಿಭಟಿಸಿ, ಪಾಕ್ ಅತಿಕ್ರಮಣಗಾರರು ಇನ್ನು ಮುಂದೆ ಭಾರತದ ನೆಲದಲ್ಲಿ ಕಾಲಿಡದಂತೆ ಮಾಡುತ್ತಿರುವುದೇ ಕಾರ್ಯಾಚರಣೆ. ಇದು ಸಂರಕ್ಷಣೆಯ ಸಿದ್ಧಾಂತವಲ್ಲದೆ, ಆಕ್ರಮಣದ ನೀತಿಯಲ್ಲ .."

'ಹ್ಞಾಂ.... ನೋಡಿ. ಅಮೆರಿಕೆಯು ಪಾಕಿಸ್ತಾನಕ್ಕೆ ಕೊಟ್ಟ ಶಸ್ತ್ರಾಸ್ತ್ರಗಳನ್ನು ಅದು ಕಚ್ಛ ರಣದಲ್ಲಿ ಭಾರತದ ವಿರುದ್ಧ ಬಳಸಿದಂತೆ ಇಲ್ಲಿಯೂ...'

'ಇಲ್ಲದೆ ಉಂಟೆ? ಬರಿಯ ಕಮ್ಯುನಿಸ್ಟ್ ಆಕ್ರಮಣವನ್ನೆದುರಿಸಲು ಅಮೆರಿಕೆ ನೀಡಿದ ಸೈನಿಕ ಶಕ್ತಿಯನ್ನು ಅದು ಮನಸ್ವಿಯಾಗಿ ಕಾಶ್ಮೀರದ ಕೊಳ್ಳದಲ್ಲಿ ಉಪಯೋಗಿಸುತ್ತಿದೆ. ಅಮೆರಿಕೆಯಾದರೋ ತೆಪ್ಪಗೆ ಕುಳಿತಿದೆ...?'

"ಏಕೆ?'

"ಪ್ರಾಯಶಃ ಪಾಕಿಸ್ತಾನದೊಡನೆ ವೈರ ಕಟ್ಟಿಕೊಳ್ಳಲು ಅದು ಸಿದ್ಧವಿಲ್ಲ...'

'ಅದು ಸರಿಯೇ ಅನ್ನಿ. ನೋಡಿ, ಅಯ್ಯೂಬಖಾನರು ಒಂದು ಮಾತಾಡಿದ್ದರು. ಗೊತ್ತೇನು?'

"ಅಯ್ಯೋ, ಈ ರಾಜಕಾರಣಿಗಳು ಆಡೋ ಮಾತುಗಳನ್ನ ಯಾರು ನೆನಪಿಡೋಕಾಗುತ್ತೆ?"

'ಮತ್ತೆ ಇಲ್ಲಿ ನೋಡಿ..."

"ಏನದು?... ಮಂತ್ರಿಗಳ ಭಾಷಣವನ್ನು ಬಾಯಿಪಾಠ ಮಾಡಿಯಾದರೂ ಪಾಸಾದಾನು... ಹ್ಞ...ಹ್ಞ.... ಆದ್ರೆ ನೋಡು, ಛಂದೋಬದ್ಧವಾಗಿರೋ ನಾಲ್ಕು ಗೀಟು ಬಾಯಿಪಾಠ ಕಲಿಯದವರು ಇನ್ನು ತಾಸುದ್ದದ ಮಂತ್ರಿ ಭಾಷಣಗಳನ್ನು ಕಂಠಪಾಠ ಮಾಡುವುದಲ್ಲಿ ಸಾಧ್ಯ?'

'ಅದೆಲ್ಲಾ ಇರ್ಲಿ. ನೋಡಿ, ಸ್ಕೂಲಿನ ಮಕ್ಳು ಸತ್ಯಾಗ್ರಹ ಮಾಡಿದ್ದಾರಂತೆ...."

"ಎಲ್ಲಿ? ಯಾಕೆ?"

"ದೊಡ್ಡಬಳ್ಳಾಪುರದಲ್ಲಿ. ಅಲ್ಲಿನ ಸ್ಕೂಲಲ್ಲಿ ಐದು ತಿಂಗಳುಗಳಿಂದ ಒಬ್ರೆ ಅಧ್ಯಾಪಕರು ಪಾಠ ಮಾಡಿದ್ದಾರಂತೆ..."

"ಅಯ್ಯೋ, ಸತ್ಯಾಗ್ರಹ ಮಾಡಬೇಕಿತ್ತು ಆ ಉಪಾಧ್ಯಾಯರು...."

"ಯಾಕೆ?"

"ಒಂದೋ ಸಾಕಷ್ಟು ಅಧ್ಯಾಪಕರನ್ನು ಕೊಡಿ, ಇಲ್ಲಾದ್ರೆ ನನಗೂ ವರ್ಗ ಮಾಡಿ. ಮಕ್ಳಾದ್ರೂ ಹಾಯಾಗಿ ಶಾಲೆಯಲ್ಲಾಗ್ಲೀ ಮನೆಯಲ್ಲಾಗ್ಲೀ ಇರೋಕೆ ಬಿಡೀಂತ...ಅದೆಲ್ಲಾ ಇರ್ಲಿ. ಅಯ್ಯೂಬರು ಅಂದಿರೋದಾದ್ರೂ ಏನು?"

"ಕಮ್ಯುನಿಸಂಗಿಂತಲೂ ನಮಗೆ ಕಾಶ್ಮೀರ ಪ್ರಶ್ನೆಯು ಬಹು ಮುಖ್ಯವಾದುದೂಂತ..."

"ನಮಗೆ .?

"ನಮಗೆ ಅಂದ್ರೆ ಪಾಕಿಸ್ತಾನಿಗಳಿಗೆ...'

"ಹಾಗ! ಸರಿಯೇ ತಾನೇ? ಕೆಂಪು ಚೀನಾದ ಹೆಂಗಳೆಯರನ್ನು ಮದುವೆಯಾಗೋ ಅವಸರದಲ್ಲಿರೋವಾಗ ಹುಡುಗಿ ಬೇಕು, ಕಮ್ಯುನಿಜಂ ಬೇಡ ಅನ್ನೋಕಾಗುತ್ಯೇ."

"ಇಲ್ಲಾನ್ನಿ. ಹಾಗೆಯೇ ಮತ್ತೊಂದನ್ನೂ ಅಂದಿದ್ದಾರೆ...."

"ಏನಂತೆ?"

"ಏಶ್ಯದಲ್ಲಿರುವ ಏಕಮೇವ ಅಮೆರಿಕನ್ ಮಿತ್ರ ಅಂದರೆ ಪಾಕಿಸ್ತಾನ್ ಅಂತೆ.'

"ಆದ್ದರಿಂದ್ಲೆ ನೋಡು ಅಮೆರಿಕೆಯವರು ದಕ್ಕೆ ಸೈನಿಕ ನೆರವು ನೀಡಿರೋದು....'

'ಆದ್ರೂ ಅದನ್ನ ಭಾರತ ವಿರುದ್ಧವಾಗಿ ಬಳಸಲಾಗುವುದಿಲ್ಲಂತ ಆಶ್ವಾಸನ ವಿದೆಯಲ್ಲಾ?"

"ಆಶ್ವಾಸನವಿರುವುದು ಭಾರತದೊಡನೆ. ಶಸ್ತ್ರಾಸ್ತ್ರವಿರುವುದು ಪಾಕಿಸ್ತಾನದೊಡನೆ. ಎರಡನ್ನೂ ಕೊಟ್ಟಿರುವುದು ಅಮೆರಿಕೆ. ನೋಡಿಕೊಳ್ಳಲಿ ಈಗ ತಾವು ಪಡೆದಿರುವುದರ ಬಲಾಬಲ, ಏನು ..."

"ನೋಡಿ, ಆಗಿನ ಪ್ರಧಾನಿ ಜವಾಹರಲಾಲರು ಒಂದಲ್ಲ ಹಲವು ಬಾರಿ ಅಮೆರಿಕೆಯನ್ನು ಎಚ್ಚರಿಸಿದ್ದರು..."

'ಹೌದು....'

'ಪಾಕಿಸ್ತಾನದ ಕೈಯಲ್ಲಿ ಶಸ್ತ್ರಾಸ್ತ್ರವಿರುವುದೆಂದರೆ, ಭಾರತದ ಮೇಲೆ ಆಕ್ರಮಣಕ್ಕೆ ಪ್ರೋತ್ಸಾಹ ನೀಡಿದಂತೆ ಎಂದರು."

"ಹ್ಞಾಂ.. ಅದಕ್ಕೇ ನೋಡು, ಭಾರತಕ್ಕೆ ಆಶ್ವಾಸನ ಬಂದದ್ದು?"

"ಬರಿಯ ಜವಹರರಲ್ಲ, ಅಮೆರಿಕೆ

(ಹದಿನಾರನೇ ಪುಟ ನೋಡಿರಿ)

ಮುಂದಿನ ವಾರದಿಂದ

ಬಹುಜನ ವಾಚಕರ ಅಪೇಕ್ಷೆ ಮೇರೆಗೆ

ಪ್ರಸಿದ್ಧ ಕಾದಂಬರಿಕಾರ

ಕೆ. ಎಸ್. ವೆಂಕಟರಮಣಿಯವರ

ರೈತ ಮುರುಗ

ಕಾದಂಬರಿ ಧಾರಾವಾಹಿಯಾಗಿ ಪ್ರಕಟವಾಗುವುದು.

ಕನ್ನಡದಲ್ಲಿ ಅನುವಾದ: ಶಿವಶಂಕರ.

ಇದು ಒಂದು ತಲೆಹರಟೆ

ನೀವು ಜಗಳಕ್ಕೆ ನಿಂತೀರಾ?

ಬರೆದವರು

ಶ್ರೀ ಕೆ ಎಸ್ ಪುರಾಣಿಕ.

ಜಗಳಕ್ಕೆ ವಿಷಯ ಬೇಕೆ? ವಿಷಯವಿಲ್ಲದಿರುವುದೇ ಜಗಳಕ್ಕೆ ವಿಷಯವಾಗಲೂ ಬಹುದು.

ಯಾವನೇ ಮಾನವನಾಗಲೀ ತನ್ನ ಜೀವಮಾನದಲ್ಲೊಮ್ಮೆಯಾದರೂ ಜಗಳ ಮಾಡದೆ ಇರಲಿಕ್ಕಿಲ್ಲ. ಜಗಳವಿಲ್ಲದ ಜೀವನವೇ ಅಸಾಧ್ಯ. ಅಪ್ಪಿತಪ್ಪಿಯಾದರೂ ಜಗಳವಾಡದವರು ಇಲ್ಲವೇ ಇಲ್ಲ. ಇದಕ್ಕೆ ಉದಾಹರಣೆಯನ್ನು ಎಲ್ಲಾ ಕಡೆಗಳಲ್ಲೂ ಕಾಣಬಹುದು. ಜನ ಜಂಗುಳಿ ಸೇರಿದಲ್ಲಿ, ಹೋಟೆಲುಗಳಲ್ಲಿ ಮಾಣಿಯೊಡನೆ, ಶಾಲೆಗಳಲ್ಲಿ ಪ್ರಾಧ್ಯಾಪಕರೊಡನೆ, ಸಹಪಾಠಿಯ ಸಹೋದ್ಯೋಗಿಗಳೊಡನೆ, ಹೀಗೆ ಹಲವಾರು ಸಂದರ್ಭಗಳಲ್ಲಿ ಚಿಲ್ಲರೆ ವಿಷಯಕ್ಕಾಗಿ ಚಿಕ್ಕ ತರದ ಜಗಳವಾದರೂ ಹುಟ್ಟದಿರುವುದಿಲ್ಲ.

"ಸ್ವಾತಂತ್ರ್ಯವೇ ನಮ್ಮ ಜನ್ಮಸಿದ್ಧ ಹಕ್ಕು" ಎಂದು ಹೇಳಿದ ತಿಲಕರು "ಜಗಳವೇ ನಮ್ಮ ಜನ್ಮ ಸಿದ್ಧಹಕ್ಕು" ಎಂದು ಹೇಳಿರಲೂ ಸಾಕು. ಆದರೆ ಆಗ ಸ್ವಾತಂತ್ರ್ಯದ ಹೋರಾಟವು ಬಹಳ ಬಿಗಿಯಾದುದರಿಂದ ಮೊದಲಿನ ವಾಕ್ಯ ಮಾತ್ರ ಸ್ಥಾನ ಪಡೆಯಿತು. ಆಗ ಈಗಿನಂತೆ ಜಗಳಕ್ಕೆ ಎಡೆಯೇ ಇರಲಿಲ್ಲ ಇದ್ದರೂ ಅದು ಅಲ್ಲಲ್ಲಿಗೇ ಸಪ್ಪೆಯಾಗುತ್ತಿತ್ತು. ಆದರೆ ಎರಡನೆಯ ವಾಕ್ಯವನ್ನು ಅದೇ ತಿಲಕರು ಈಗಿನ ಕಾಲದಲ್ಲಿ, ಅದೂ ನಮ್ಮ ದೇಶದಲ್ಲಿ ಹೇಳಿದ್ದರೆ ಅವರು ಖಂಡಿತವಾಗಿ ನಮ್ಮ ಪ್ರಧಾನಿಯಾಗುತ್ತಿದ್ದರೋ ಏನೋ! ಅಂತೂ ತಿಲಕರ ದುರಾದೃಷ್ಟ. ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲಿಕ್ಕಾದರೂ ತುಂಬಾ ಜನರಿದ್ದರು. ಆದರೆ ಈಗ ಜಗಳವೇ ಮುಖ್ಯವಾಗಿರುವ ನಮ್ಮ ದೇಶದಲ್ಲಿ ಅಂತಹ ವೇದ ವಾಕ್ಯಗಳನ್ನು ಉದ್ಗರಿಸಿ ನಮ್ಮ ಜನರನ್ನು ಎಚ್ಚರಿಸುವ ಮಹಾತ್ಮರು ಯಾರೂ ಇಲ್ಲ.

ನಮ್ಮ ದೇಶದಲ್ಲೀಗ ಪ್ರಾಯೋಗಿಕ ಜ್ಞಾನವನ್ನು ಬಯಸುವ ಜನರು ತುಂಬಾ ಇದ್ದಾರೆ. ಸೈದ್ಧಾಂತಿಕ ಜ್ಞಾನ ಅವರಿಗೆ ಅಗತ್ಯವಿಲ್ಲದಾಗಿದೆ. ಆದುದರಿಂದ ಅಂತಹವರು ಬಾಯಿಯಿಂದ ಮಾತನಾಡದೆ ಬರೇ ಕೆಲಸದಲ್ಲಿ ತಮ್ಮ ಪೌರುಷವನ್ನು ತೋರಿಸುತ್ತಾರೆ ಎಲ್ಲಿ ನೋಡಿದರಲ್ಲಿ ಜಗಳ. ಇದು ನಮ್ಮ ದೇಶದ ಒಂದು ಲಾಂಛನವಾಗಿದೆ. ರಾಷ್ಟ್ರ ಪಕ್ಷಿ, ರಾಷ್ಟ್ರಭಾಷೆ ಎಂಬಿತ್ಯಾದಿಗಳು ಇದ್ದ ಹಾಗೆ ರಾಷ್ಟ್ರ ಲಾಂಛನವಾಗಿ ಜಗಳವನ್ನು ಆರಿಸಿದರೆ ಅದು ತಪ್ಪೆನಿಸಲಾರದು

ಛೆ! ವಿಷಯ ಎಲ್ಲಿಂದ ಎಲ್ಲಿಗೆ ಹೋಯಿತು. ಪುನಃ ಜಗಳಕ್ಕೆ ತಯಾರಾಗೋಣ. ಜಗಳವು ಪ್ರಾರಂಭವಾಗುವುದು ಯಾವ ರೀತಿಯಿಂದ ಎಂದು ಇದುವರೆಗೆ ಕಂಡು ಹಿಡಿದವರು ಯಾರೂ ಇಲ್ಲ. ಆದರೆ ಅದರ ಫಲಿತಾಂಶ ಹಾಗೂ ಅನಾಹುತಗಳನ್ನು ತಿಳಿದ ಜನ ಬಹಳ ಇದ್ದಾರೆ. ಬರೇ ಮಾತಿನಿಂದ ಜಗಳ ಪ್ರಾರಂಭವಾಗುವುದು ಎಂದು ಕೆಲವರ ಅಂಬೋಣ ಹಾಗಾದರೆ ಬಾಯಿಯಿಲ್ಲದವರೂ ಜಗಳವಾಡುವುದಿಲ್ಲವೇ! ಅಂತೂ ಇಂತೂ ಜಗಳದ ಆದಿಯನ್ನು ಕಂಡುಹಿಡಿಯಲು ಅಸಾಧ್ಯವಾಗಿದೆ.

ಆದರೆ ಜಗಳದ ಫಲಿತಾಂಶಗಳನ್ನು ಹಾಗೂ ಅದರ ಮುಂದಿನ ಆಗುಹೋಗುಗಳನ್ನು ಯಾರು ಬೇಕಾದರೂ ಹೇಳಬಹುದು "ಯುದ್ಧ" ಎಂಬ ದರ ಆದಿಶಕ್ತಿಯು ಜಗಳವಾಗಿದೆ. ರಾಮಾಯಣ ಮತ್ತು ಮಹಾಭಾರತಗಳ ಕಾಲದಿಂದ ಹಿಡಿದು ಇಂದಿನ ದಿನದ ವರೆಗ ನಡೆದ ಯುದ್ಧಗಳೆಗೆಲ್ಲ ಒಂದಲ್ಲ ಒಂದು ಸಣ್ಣ ಜಗಳವೇ ಕಾರಣವಾಗಿರುತ್ತದೆ. ಐದು ಗ್ರಾಮಗಳನ್ನು ಪಾಂಡವರಿಗೆ ಕೊಟ್ಟಿದ್ದರೆ ಮಹಾಭಾರತದ ಕಥೆಯು ಅಲ್ಲಿಗೇ ಮುಗಿಯುತ್ತಿತ್ತಲ್ಲವೇ? ಕವಿಯೂ ಬೇಕೆಂದೇ ಹದಿನೆಂಟು ದಿನ ಪಾಂಡವರಿಗೂ ಕೌರವರಿಗೂ ಯುದ್ಧಮಾಡಿಸಿ ಬೇಡವಾದ ಅನಾಹುತಗಳನ್ನೆಲ್ಲ ಮಾಡಿಸಿಬಿಟ್ಟನಲ್ಲ? ಬಹುಶ ಆ ಕಾವ್ಯಕಾರನು ಯುದ್ಧಪ್ರಿಯನಾಗಿರಬೇಕು. ಅಂದರೆ ಜಗಳಗಂಟನಾಗಿದ್ದಿರಬೇಕು. ಇಲ್ಲದಿದ್ದರೆ ಅಷ್ಟು ದಿನಗಳನ್ನು, ಜನಗಳನ್ನು ಶಕ್ತಿಯನ್ನು ವ್ಯರ್ಥ ಪಡಿಸಲು ಆತನಿಗೆ ಖಂಡಿತ ಮನಸ್ಸು ಬರುತ್ತಿರಲಿಲ್ಲ. ಯುದ್ಧವಾದುದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು ಹಲವು ಪ್ರಾಯಸಂದ ಜನರಿಗೆ ಕೌರವರ ಉದಾಹರಣೆ ತೋರಿಸಿ ಬುದ್ಧಿ ಹೇಳಲು ಒಳ್ಳೆಯದಾಯಿತು. ಹಾಗೇ ರಾವಣನು ಸೀತೆಯನ್ನು ತೆಗೆದುಕೊಂಡು ಹೋಗದಿದ್ದರೆ ಅಷ್ಟೆಲ್ಲ ಅನಾಹುತವಾಗುತ್ತಿತ್ತೆ? ಇದನ್ನು ಓದಿ ಕೆಲವು ಹನುಮಂತನ ಭಕ್ತರು ನನ್ನನ್ನು ಬಯ್ಯಲು ಸಾಕು. ಯಾಕೆಂದರೆ ರಾವಣನು ಸೀತೆಯನ್ನು ಒಯ್ಯದಿದ್ದರೆ ಹನುಮಂತನು ರಾಮಾಯಣದಲ್ಲಿ ಬರುತ್ತಿರಲೇ ಇಲ್ಲ ಅವನ ಪತ್ತೆಯೇ ಇರುತ್ತಿರಲಿಲ್ಲ ಆದರೂ ಕ್ಷಮಿಸಿ ಜಗಳವು ಏನೆನನ್ನೆಲ್ಲ ಮಾಡುತ್ತದೆಂದು ನಾನು ಉದಾಹರಣೆ ಕೊಡುವುದು ರಾವಣನನ್ನು ಸಂಹರಿಸಿದನೆಂದಾದರೂ ಸುಖವುಂಟೇ? ಸೀತೆಯೊಡನೆ ಬಾಳಲು ರಾಮನಿಗೆ ಯೋಗವಿರಲಿಲ್ಲ. ಆದುದರಿಂದ ರಾಮಾಯಣವು ಬರೇ ಜಗಳದ ಅನಾಹುತಗಳನ್ನು ತೋರಿಸುವಂತಹ ಒಂದ ಗ್ರಂಥವಾಗಿದೆ ಎಂದು ಹೇಳಿದರೆ ತುಂಬಾ ಬಯ್ಗುಳು ಖಂಡಿತವಾಗಿ ನನಗೆ ಬರುತ್ತನೆ

ಜಗಳವು ಏನೇನನ್ನೆಲ್ಲ ಮಾಡಿ ಬಿಡುತ್ತದೆ. ಮೊಳೆ ಇದ್ದಲ್ಲೇ ಚಿವುಟಿದರೆ ರಾಜಿಯಾಗಿ ಅಲ್ಲೇ ಸಮಾಧಾನವಾಗಬಹುದು ಹಾಗೇ ಬೆಳೆಯ ಗೊಟ್ಟರೆ ಏನೇನೆಲ್ಲ ಮಾಡಬಹುದು. ಜಗಳದ ಅನಾಹುತಗಳನ್ನೆಲ್ಲ ಇದುವರೆಗೆ ಬರೆದಿಟ್ಟಿದ್ದರ ನಾನೊಬ್ಬ ಸಣ್ಣ ತರದ ವಾಲ್ಮೀಕಿಯೋ, ಶೇಕ್ಸ್‌ಪಿಯರನೋ ಅಥವಾ ಅಂತಹದೇ ದೊಡ್ಡ ಕವಿಯೋ ಆಗಬಹುದಿತ್ತು. ಆದರೆ ನಾನೊಬ್ಬ ದುರದೃಷ್ಟವಂತನಾದವನಾಗಿದ್ದೇನೆ.

(ಹನ್ನೆರಡನೇ ಪುಟ ನೋಡಿರಿ)

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಭಾಗೀದಾರ ಬ್ಯಾಂಕುಗಳ ಮೊತ್ತಮೊದಲಿನ ಒಬ್ಬನೇ ಮನುಷ್ಯನು ನಿರ್ವಹಿಸುವ ಹಳ್ಳಿಯ ಆಫೀಸಿನ ಉದ್ಘಾಟನೆ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಭಾಗೀದಾರ ಬ್ಯಾಂಕುಗಳಲ್ಲಿ ಒಂದಾದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಒಬ್ಬನೇ ಮನುಷ್ಯನು ನಿರ್ವಹಿಸುವ, ತನ್ನ ಹಳ್ಳಿಯ ಆಫೀಸನ್ನು ಸೆಪ್ಟೆಂಬರ್ 2, 1966ರಂದು ಉದ್ಘಾಟಿಸುತ್ತದೆ ಭಾರತದ ಹೃದಯಾಂತರಾಳಕ್ಕೆ ಇನ್ನೂ ಬ್ಯಾಂಕನ್ನು ಕೊಂಡೊಯ್ಯುವ ಮೊತ್ತಮೊದಲಿನ ಹೆಜ್ಜೆ ಇದು—ಬ್ಯಾಂಕಿಂಗ್ ಸೇವೆಯನ್ನು ಅದರ ಸುಳಿವೇ ಇಲ್ಲದ ಸ್ಥಳಕ್ಕೆ ತರುವ ಯೋಜನೆ!

ಬ್ಯಾಂಕಿಗಿಂತಲೂ ಮಿಗಿಲಾದುದು ಹಳ್ಳಿಯ ಈ 'ಒಬ್ಬ ವ್ಯಕ್ತಿಯ ಆಫೀಸು' ಬ್ಯಾಂಕಿಗಿಂತಲೂ ಮಿಗಿಲಾದುದು ಅದು ಸ್ನೇಹಿತನಂತೆಯೂ, ಹಿತೋಪದೇಶಕನಂತೆಯೂ, ಮಾರ್ಗದರ್ಶಕನಂತೆಯೂ ವರ್ತಿಸುವುದು—ಹಳ್ಳಿಯ ಸಮಾಜದ ಒಂದು ಭಾಗವಾಗುವುದು! ಬ್ಯಾಂಕಿನ ಮನುಷ್ಯನು ಆ ಜನರನ್ನೂ, ಅವರ ಅವಶ್ಯಕತೆಗಳನ್ನೂ, ಅವರಿಗೆ ಯಾವ ರೀತಿಯಲ್ಲಿ ಸಹಾಯ ನೀಡಬೇಕೆಂಬುದನ್ನೂ ತಿಳಿದುಕೊಳ್ಳುತ್ತಾನೆ

ಬ್ಯಾಂಕಿಂಗ್ ಸೇವೆ ಈ ಒಬ್ಬ ವ್ಯಕ್ತಿಯ ಆಫೀಸು' ಕಾಯಂ ಠೇವಣಾತಿ ಸೇವಿಂಗ್ಸ್ ಬ್ಯಾಂಕ್ ಠೇವಣಾತಿ, ಡ್ರಾಫ್ಟ್‌ಗಳನ್ನು ಒದಗಿಸುವುದು ರೂ 5000/ದ ವರೆಗಿನ ಮುಂಗಡಗಳನ್ನು ಕೊಡುವುದು—ಇತ್ಯಾದಿ ಮೂಲ ಸೇವೆಗಳನ್ನು ನೀಡುವುದು

ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್

ಸಾಹಿತ್ಯ ರಂಗ

ರಾಘವಾಂಕನ ಹರಿಶ್ಚಂದ್ರ

ಚಿತ್ರಿಸಿದವರು
ಶ್ರೀ ಸ. ನಾರಾಯಣ.

ಸತ್ಯವೆಂಬುದೇ ಹರನು ಹರನೆಂಬುದೇ ಸತ್ಯವೆಂದು ಘೋಷಿಸಿದ ಕನ್ನಡ ಕವಿಕುಲರತ್ನ ರಾಘವಾಂಕನು ಚಿತ್ರಿಸಿದ ಹರಿಶ್ಚಂದ್ರ ತ್ರಿಕಾಲಕ್ಕೂ ಆದರ್ಶ ಪುರುಷನಾಗಿ ನಿಂತಿದ್ದಾನೆ.

ಕನ್ನಡ ನಾಡಿನ ಸಾಹಿತ್ಯಪ್ರಿಯರಿಗೆ ನಾರಣಪ್ಪನ "ಗದುಗಿನ ಭಾರತ", ನರಹರಿಯ "ತೊರವೆ ರಾಮಾಯಣ", ಲಕ್ಷ್ಮೀಶನ "ಜೈಮಿನಿ ಭಾರತ", ಪಂಪನ "ವಿಕ್ರಮಾರ್ಜುನ ವಿಜಯ", ರನ್ನನ "ಗದಾಯುದ್ಧ" ಈ ಮೊದಲಾದ ಕೃತಿಗಳು ಅಪ್ಯಾಯಮಾನವಾಗಿರುವಂತೆ, ಇವುಗಳ ಶ್ರೇಣಿಯಲ್ಲಿಯೇ ಇರುವ ಮತ್ತೊಂದು ಮಹೋನ್ನತ ಕೃತಿ ಕವಿ ರಾಘವಾಂಕನ "ಹರಿಶ್ಚಂದ್ರ ಕಾವ್ಯ".

ಕವಿ ರಾಘವಾಂಕ ಕನ್ನಡ ಜನಕೋಟಿಗೆ ಅಪರಿಚಿತನಲ್ಲ; ಹರಿಶ್ಚಂದ್ರ ಕಾವ್ಯ ಅವನ ಅಮೂಲ್ಯ ಕೃತಿ. ಕನ್ನಡ ಸಾಹಿತ್ಯ ಸಾಗರದ ಅನರ್ಘ್ಯರತ್ನ. ಕವಿಯ ಕವಿತಾಶಕ್ತಿ, ಸಹಜ ಮನೋಧರ್ಮ, ಸತ್ಯಪ್ರಿಯತೆ, ನಾಡು ನುಡಿಗಳ ಅಭಿಮಾನವನ್ನು ಪ್ರತಿಬಿಂಬಿಸುವ ಏಕೈಕ ಕೃತಿ "ಹರಿಶ್ಚಂದ್ರ ಕಾವ್ಯ" ಎಂದೂ ಹೇಳಬಹುದು.

ರಾಘವಾಂಕ ಹಂಪೆಯ ಹರಿಹರನ ಸೋದರಳಿಯ ಮೇಲಾಗಿ ಶಿಷ್ಯ. ಕವಿ ಹರಿಹರ ಕನ್ನಡ ಸಾಹಿತ್ಯ ರಂಗದಲ್ಲಿ ತನ್ನದೇ ಸಂಪ್ರದಾಯವನ್ನು ಸೃಷ್ಟಿಸಿ ರಗಳೆಯ ಕವಿ ಎಂದು ಕೀರ್ತಿ ಪಡೆದಂತೆ ಅವನಳಿಯ ರಾಘವಾಂಕ ಷಟ್ಪದಿಯ ಜನಕನಾಗಿ ವಿನೂತನ ಮಾರ್ಗವನ್ನೂ ಅನುಸರಿಸಿ ತನ್ನ ನಂತರದ ಕವಿಗಳಿಗೆ ಮಾರ್ಗದರ್ಶಕನಾಗಿದ್ದಾನೆ.

ರಾಘವಾಂಕ ಹರಿಶ್ಚಂದ್ರ ಕಾವ್ಯವನ್ನಲ್ಲದೆ ಸೋಮನಾಥ ಚರಿತ್ರೆ, ಸಿದ್ಧರಾಮ ಪುರಾಣ, ವೀರೇಶ ಚರಿತ್ರೆ, ಶರಭ ಚಾರಿತ್ರ, ಹರಿಹರ ಮಹತ್ವ ಎಂಬ ಕೃತಿಗಳನ್ನೂ ಬರೆದಿದ್ದಾನೆ. ಆದರೆ ಕವಿಯ ಪ್ರೌಢಿಮೆ ಅರಿಯುತಸಕ್ಕೆ ಹರಿಶ್ಚಂದ್ರ ಕಾವ್ಯ ಒಂದು ಸಾಕ್ಷಿ. ಪಂಡಿತ ಪಾಮರರ ಹೃದಯವನ್ನು ಮರುಳುಗೊಳಿಸುವಂತಹ ಸತ್ವಪೂರ್ಣ ಕಾವ್ಯ.

ಕವಿಯ ಕಾಲ ೧೨೨೫ ಎಂದು ಹೇಳಬಹುದು. ಇವನ ಕಾರ್ಯಕ್ಷೇತ್ರ ವಿಜಯನಗರದ ದೇವರಾಯನ ಆಸ್ಥಾನ ಮತ್ತು ಹೊಯ್ಸಳ ಅರಸು ನರಸಿಂಹ ಬಲ್ಲಾಳನ ಆಸ್ಥಾನ. ಕವಿ ತನ್ನ ಗುರುವಿನ ಆಜ್ಞೆಯಂತೆ ತನ್ನ ಅಂತಿಮ ಕಾಲವನ್ನು ಬೇಲೂರಿನಲ್ಲಿಯೇ ಕಳೆಯುತ್ತಾನೆ. ನಾಡು ನುಡಿಗಳ ಬಗ್ಗೆ ಕವಿಗಿದ್ದ ಅನಾಥ ಪ್ರೇಮವನ್ನು ಅವನ ಕೃತಿಗಳಿಂದ ಅರಿಯಬಹುದಾಗಿದೆ.

ಹರಿಹರನಂತೆ ರಾಘವಾಂಕನೂ "ಹಂಪೆಯರಸನ ಪೊಗಳ್ವ ನಾಲಿಗೆಯೊಳನ್ಯದೈವವ ಕೀರ್ತಿಸೆ" ಎಂದು ದಿಟ್ಟತನದಿಂದ ಹೇಳಿಕೊಂಡಿದ್ದಾನೆ. ರಾಘವಾಂಕನಿಗೆ ಮುಂಚೆ ಅಚ್ಚ ಕನ್ನಡ ಛಂದಸ್ಸಿನ ಷಟ್ಪದಿಯನ್ನು ಬಳಸಿಕೊಂಡವರಿಗೆ ಕೊರತೆ ಇಲ್ಲ. ಹಾಗೆಯೇ ಹರಿಶ್ಚಂದ್ರನ ಕಥೆಯನ್ನು ನಿರೂಪಿಸಲು ಹೊರಟ ಕವಿಗಳಿಗೂ ಬಿಡುವಿಲ್ಲ; ಆದರೆ ಅವನ ಷಟ್ಪದಿಯ ಬಳಕೆ 'ಜೇನ ಹನಿ'. ಅವನ ಕೃತಿಯಲ್ಲಿ ಕಾಣಬರುವ ಹರಿಶ್ಚಂದ್ರ ಲೋಕವಂದಿತ ಸತ್ಯನಿಷ್ಠ ವ್ಯಕ್ತಿ.

ಕವಿ ಸಂಸ್ಕೃತ ಭಾಷೆಯಲ್ಲಿ ಉದ್ದಾಮ ಪಂಡಿತ; ಸಂಸ್ಕೃತ ಛಂದಸ್ಸಿನಲ್ಲಿ ಪ್ರವೀಣ — ಸಾಕಷ್ಟು ಹಳಗನ್ನಡ ಕಾವ್ಯಗಳನ್ನು ಅಭ್ಯಸಿಸಿ ಸಾಕಷ್ಟು ಪಾಂಡಿತ್ಯ ಪಡೆದಿದ್ದನೆಂದು ತೋರುತ್ತದೆ. ತನ್ನ ಕಾವ್ಯದಲ್ಲಿ ಬರುವ ವ್ಯಕ್ತಿಗಳನ್ನು ಕಣ್ಣೆದುರಿನಲ್ಲಿಯೇ ತಂದು ನಿಲ್ಲಿಸಿದ್ದಾನೆ ರಾಘವಾಂಕ.

ರಾಘವಾಂಕ ಶ್ರೇಷ್ಠಮಟ್ಟದ ಕವಿ. ಹಂಪೆಯೊಡೆಯನ ನಿಷ್ಠಾವಂತ ಭಕ್ತ. ಅಲ್ಲದೆ ಅವನ ಸತ್ಯಸಂಕಲ್ಪವೂ ಹಿರಿದಾದುದು. ಅವನ ಹಿರಿಮೆ ಪ್ರತಿ ಕೃತಿಯಲ್ಲಿಯೂ ತೋರಿಬರುತ್ತಿದೆ.

ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ನಾಯಕ ಹರಿಶ್ಚಂದ್ರ. ಆದರೆ ಕವಿಯ ಮಾತಿನಂತೆಯೇ ಹೇಳುವುದಾದರೆ "ಕೃತಿಗೊಡೆಯ ನಮ್ಮ ಪಂಪಾ ವಿರೂಪಾಕ್ಷನ್" ಅವನ ಪಾವನ ಗಂಗೆ 'ತುಂಗ ಭದ್ರೆ' ಕಥಾನಿರೂಪಣೆ, ವಸ್ತು ಸಂಗ್ರಹಣೆ, ವಿವರಣೆ ಉಪಮಾ ಕೌಶಲ್ಯ, ಭಾಷಾ ಪ್ರೌಢಿಮೆ, ಹಿತಮಿತವಾದ ಹಾಸ್ಯ ಎಲ್ಲವೂ ಕವಿಗೆ ಸಿದ್ಧಿಸಿತ್ತು. ಕಾವ್ಯದ ರಸಮಯ ಸನ್ನಿವೇಶ ಓದುಗನ ಹೃದಯವನ್ನೂ ಹಿಡಿಯುವ ಮಟ್ಟಿಗೆ ನಿರೂಪಿಸಿದ್ದಾನ ಕವಿ ರಾಘವಾಂಕ.

ಹರಿಶ್ಚಂದ್ರನ ಕಥೆ ಯಾರಿಗೂ ಪರಿಚಯವಿಲ್ಲದಿಲ್ಲ. ಹರಿಶ್ಚಂದ್ರ ಇಕ್ಷ್ವಾಕು ವಂಶದ ದೊರೆ. ಅವನ ಪತ್ನಿ ಚಂದ್ರಮತಿ, ಮಗ ಲೋಹಿತಾಶ್ವ ಅವನ ರಾಜಧಾನಿ ಅಯೋಧ್ಯೆ ದೊರೆ ಸತ್ಯ ನಿಷ್ಠೆಯಿಂದ ಪ್ರಜಾನುರಾಗಿಯಾಗಿ ಆದರ್ಶ ಅರಸನಾಗಿ ರಾಜ್ಯವಾಳುತ್ತಿರುತ್ತಾನೆ.

ಒಂದು ಬಾರಿ ದೇವಲೋಕದಲ್ಲಿ ಮಹೇಂದ್ರ 'ಮನವಚನ ಕಾಯದೊಳಗೊಮ್ಮೆಯುಂ ಹುಸಿ ಹೊಂದದಂತೆ ನಡೆವ ಕಲಿಗಳಾರಯ್ಯ' ಎಂದು ವಶಿಷ್ಠರನ್ನು ಪ್ರಶ್ನಿಸುತ್ತಾನೆ. ಗುರುವಶಿಷ್ಠರು ತಮ್ಮ ಸಹಜ ಗಂಭೀರ ವಾಣಿಯಲ್ಲಿ 'ಹರಿಶ್ಚಂದ್ರ'ನ ಸಂಗತಿಯನ್ನು ತಿಳಿಸುತ್ತಾರೆ. ಆಸೀನರಾಗಿದ್ದ ವಿಶ್ವಾಮಿತ್ರರು ಎದ್ದು ಗುಡುಗುಡಿಸುತ್ತಾರೆ ಅದೇನು ಕಾರಣವೋ?

ದೇವೇಂದ್ರನ ಪ್ರಶ್ನೆಯೂ ಸಹಜ, ಆ ಪರಂಪರೆಯ ವಶಿಷ್ಠ ಗುರುಗಳ ಉತ್ತರವೂ ಸಮಂಜಸ. ಆದರೆ 'ತನ್ನನ್ನು ಮೊದಲು ಪ್ರಶ್ನಿಸಲಿಲ್ಲ ಮತ್ತು ವಶಿಷ್ಠರು ಉತ್ತರಿಸಿದರು' ಎಂಬ ಎರಡು ಕಾರಣದಿಂದ ವಿಶ್ವಾಮಿತ್ರರು ದೇವಸಭೆಯಲ್ಲಿ ಹರಿಶ್ಚಂದ್ರನನ್ನು ಸತ್ಯಭ್ರಷ್ಟನನ್ನಾಗಿ ಮಾಡುತ್ತೇನೆಂದು ಪ್ರತಿಜ್ಞೆ ಮಾಡುತ್ತಾರೆ, ಈ ಮಹಾನುಭಾವ.

ಹರಿಶ್ಚಂದ್ರನ ಸತ್ಯ ಸಂಧತೆಯಲ್ಲಿ ಪೂರ್ಣ ನಂಬಿಕೆಯನ್ನು ಇಟ್ಟುಕೊಂಡಿದ್ದ ಗುರು ವಶಿಷ್ಠರು ಅಚಲರಾಗಿದ್ದು ದೊರೆಗೆ ಶುಭವಾಗಲೆಂದು ಹಾರೈಸುತ್ತಾರೆ.

ವಿಶ್ವಾಮಿತ್ರರ ಪರೀಕ್ಷೆ ಆರಂಭವಾಗುತ್ತದೆ. ಯಾಗಕ್ಕೆ ಹಣವನ್ನು ಹರಿಶ್ಚಂದ್ರನಿಂದ ಯಾಚಿಸಿ ಬೇಕಾದಾಗ ಪಡೆಯುವೆನೆಂದು ಅವನ ಬಳಿಯೇ ಬಿಟ್ಟು ಹೋಗುತ್ತಾರೆ. ಮಾಯಾ ಮೃಗಗಳ ಹಾವಳಿ ತಪ್ಪಿಸಲು ರಾಜಧಾನಿಯಿಂದ ಹರಿಶ್ಚಂದ್ರನನ್ನು ದೂರಮಾಡಿ ತಮ್ಮ ಮಾತಂಗ ಕನ್ಯೆಯರ ಗಾಯನ-ನರ್ತನಗಳ ಮೂಲಕ ಆತನನ್ನು ಗೆಲ್ಲಲು ಪ್ರಯತ್ನಿಸುತ್ತಾರೆ. ಕನ್ಯೆಯರನ್ನು ವಿವಾಹವಾಗುವಂತೆ ಒತ್ತಾಯ ಮಾಡುತ್ತಾರೆ. ಆಕಸ್ಮಿಕವಾಗಿ ಹೇಳಿದ 'ಎಡವಿಡದೆ ಬೇಡಿ ಕಾಡುವಿರಾದಡೆನ್ನ ಕೇಳ ಕಡೆಗೆನ್ನ ಸರ್ವ ರಾಜ್ಯವನ್ನಾದೊಡಂ ನಿಮಗೆ ಕೊಡುಹಡೆವೆನ್ನೈ ಸಲ್ಲದೀಯೊಂದು ತೇಜವಂ ಕೊಡೆನೆ'ಂದು ಹರಿಶ್ಚಂದ್ರ ಹೇಳಿದಾಗ ಗುರುನಾಥ "ತಥಾಸ್ತು" ಅನ್ನುತ್ತಾರೆ. ಸಿರಿ—ಸಂಪತ್ತು ಎಲ್ಲವೂ ವಿಶ್ವಾಮಿತ್ರರ ಪಾಲಾಗುತ್ತದೆ. ಪತ್ನಿ–ಪುತ್ರರೊಂದಿಗೆ ಹರಿಶ್ಚಂದ್ರ ಅಯೋಧ್ಯೆ ಬಿಡುತ್ತಾನೆ. ಹಿಂದಿನ ಬೇಡಿಕೆಯಂತೆ ಉಳಿದಿದ್ದ ಸಾಲ ತೀರಿಸಲು ಅ ದಿನಗಳ ಅವಧಿ ಪಡೆದು ಕಾಶಿಗೆ ಪ್ರಯಾಣ ಬೆಳೆಸುತ್ತಾನೆ ಹರಿಶ್ಚಂದ್ರ. ಗಡುವಿನೊಳಗೆ ಹಣ ಪಡೆಯಲು ನಕ್ಷತ್ರಕ ಸಾಕಷ್ಟು ಕಿರುಕುಳ ಕೊಡಲು ಗುರು ವಿಶ್ವಾಮಿತ್ರರ ಅಪ್ಪಣೆಯಂತೆ ಹಿಂಬಾಲಿಸುತ್ತಾನೆ.

ಯಾವ ಪಾಪವನ್ನೂ ಅರಿಯದ ನಿರಪರಾಧಿ ಹರಿಶ್ಚಂದ್ರ, ಚಂದ್ರಮತಿ, ಲೋಹಿತಾಶ್ವ ಅನುಭವಿಸುವ ವೇದನೆ ಅಲ್ಪವಲ್ಲ. ಕಾಶಿಯಲ್ಲಿ ನಿಯಮಿತ ಕಾಲಾವಧಿ ಮೀರುವುದರೊಳಗೆ ಹೆಂಡತಿ ಮಗನನ್ನು ಮಾರಿ ಕೊನೆಗೆ ತನನ್ನು ಸ್ಮಶಾನದೊಡೆಯ ವೀರಬಾಹುವಿಗೆ ಮಾರಿಕೊಳ್ಳುತ್ತಾನೆ ಹರಿಶ್ಚಂದ್ರ.

ವಿಶ್ವಮಿತ್ರನ ಪರೀಕ್ಷೆ ಮುಗಿಯಲಿಲ್ಲ. ವಿಧಿಯ ನಾಟಕವಿನ್ನೂ ಕ್ರೂರವಾಗಿತ್ತು. ಹರಿಶ್ಚಂದ್ರನ ಬಾಳಿನಲ್ಲಿ ಯಜಮಾನ ಕಾಲ ಕೌಶಿಕನ ಕಿರುಕುಳದಿಂದ ಚಂದ್ರಮತಿ ಲೋಹಿತಾಶ್ವ ಕಣ್ಣೀರು ಹರಿಸಬೇಕಾಗುತ್ತದೆ. ಹರಿಶ್ಚಂದ್ರ ಚಂಡಲನಾಗಿ ಸ್ಮಶಾನದ ಕಾವಲುಗಾರನಾಗುತ್ತಾನೆ.

ಸತ್ಯವನ್ನೇ ನಂಬಿದ ಸಾಹಸಿಯ ಜೀವನ ಶೋಷಣೆಗೆ ಒಳಗಾದಷ್ಟು ಪ್ರಕಾಶಮಾನವಾಗುತ್ತಾ ಹೋಗುತ್ತದೆ. ಹರಿಶ್ಚಂದ್ರನಿಂದ ಅನೃತವನ್ನು ಆಡಿಸಬೇಕೆಂದು ಪಣ ತೊಟ್ಟಿದ್ದ ವಿಶ್ವಾಮಿತ್ರ ತನ್ನ ಹೋರಾಟವನ್ನು ಮುಂದುವರಿಸಿದರು.

ಕಾಡಿಗೆ ಗೆಳೆಯರೊಂದಿಗೆ ಸಮಿತ್ತು ತರಲು ಹೋಗಿದ್ದ ಲೋಹಿತಾಶ್ವ ಹಾವು ಕಚ್ಚಿ ಸಾಯುತ್ತಾನೆ. ಚಂದ್ರಮತಿಗೆ ಮಗನ ಮರಣದ ಸುದ್ದಿ ಕೇಳಿ ಅಳಲೂ ವೇಳೆಯಿಲ್ಲ. ಕತ್ತಲಲ್ಲಿ ಕಾಡಿಗೆ ತೆರಳಿ ಶವ ಹುಡುಕಿ, ಶೋಧಿಸಿ ಅಂತಿಮ ಯಾತ್ರೆಗೆ ಸ್ಮಶಾನಕ್ಕೆ ಬರುತ್ತಾಳೆ. ಕಾವಲುಗಾರ ತೆರ ಕೊಡದೆ ಸಂಸ್ಕಾರ ನಡೆಸಬಾರದೆಂದು ಎಚ್ಚರಿಸುತ್ತಾನೆ. ಚಂದ್ರಮತಿ ಗೋಳಿಟ್ಟು ಅನುಮತಿ ಬೇಡುತ್ತಾಳೆ. 'ಮಾಂಗಲ್ಯ ಮಾರಿ' ಹಣ ತಂದು ಕೊಡೆಂದು ಹೇಳುತ್ತಾನೆ ಸತ್ಯವಾದಿ. ತನ್ನ ಪತಿಗೆ ನಿಜ ಸಂಗತಿಯನ್ನು ತಿಳಿಸಿ ರೋಧಿಸುತ್ತಾಳೆ ಚಂದ್ರಮತಿ. ಸತ್ಯವಾದಿಯ ಮುಂದೆ ವಾದ ಬೆಳೆಸದೆ ಹಣ ತರಲು ನಗರಕ್ಕೆ ಹೊರಟಾಗ ಕಾಶಿ ರಾಜಕುಮಾರನ ಕೊಲೆಯ ಅಪವಾದ ಚಂದ್ರಮತಿ

(ಹನ್ನೊಂದನೇ ಪುಟ ನೋಡಿರಿ)

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

O. S. 29/65.

ಪಿ. ವಿ. ಉಪಾಧ್ಯಾಯ (ರಿಸೀವರ್)—ವಾದಿ

ಮತ್ತು

ಶೀರಪ್ಪ ಪೂಜಾರಿ ಸಹಾ —ಪ್ರತಿವಾದಿ

೨ನೇ ಪ್ರತಿವಾದಿ ಅಮ್ಮು ಪೂಜಾರಿ, ನಾಗು ಹೆಂಗ್ಸಿನ ಮಗ, ಬೆಳ್ತಂಗಡಿ ತಾಲೂಕು, ಹೊಸಂಗಡಿ ಗ್ರಾಮದ ಮೇಗಿನ ಬೆಟ್ಟು ಎಂಬಲ್ಲಿರುವವ.

ವಾದಿಯು ಪ್ರತಿವಾದಿರ ಮೇಲೆ ಮಾಡಿದ ದಾವೆಯು ವಿಸ್ತಾ ಹಾಜರಾತಿ ಬಗ್ಗೆ ತಾ. 21-9-1965ಕ್ಕೆ ಇಟ್ಟಿರುತ್ತದೆ. ಆ ದಿವಸ ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಮುಂದಿನ ತಕ್ಕಿಯಿಂದ ತೀರ್ಮಾನಿಸಲಾಗುವುದು ಎಂಬುದಾಗಿ ಕೋರ್ಟಿನ ಹುಕುಂ ಪ್ರಕಾರ ಮಾಡಿದ ನೋಟೀಸು.

(Sd.) N. J. Kadamba,
Advocate for Plaintiff.

ಬೆಳ್ತಂಗಡಿ, 27-8-65.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ನಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು– "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಪ್ರೌಢ ವಿದ್ಯಾರ್ಥಿಗಳಿಗೊಂದು ಕಿವಿಮಾತು

ದುಡಿಯಲು ಅವಕಾಶ ಕಲ್ಪಿಸಿಕೊಳ್ಳಿರಿ

ಮೂಲ: ಡಾ। ಎಸ್. ರಾಧಾಕೃಷ್ಣನ್.
ಸಂಗ್ರಹ: ಶ್ರೀ ಬೇಕಲ್ ನರಸಿಂಗ ರಾವ್.

ಸಾಮಾಜಿಕ ನ್ಯಾಯ ಪಾಲಿಸಲು, ದೇಶಸೇವೆ ಮಾಡಲು ಎಲ್ಲರಿಗೂ ಸಮಾನಾವಕಾಶವಿದೆ. ಇವನ್ನು ಸಾಧಿಸುವಲ್ಲಿ ಧೈರ್ಯಗೆಡದೆ ಮುಂದುವರಿಯ ಬೇಕು.

ನಾನು ತಿಳಿದಿರುವ ಮಟ್ಟಿಗೆ ವಿಶ್ವವಿದ್ಯಾಲಯಗಳ ಪ್ರಧಾನ ಕರ್ತವ್ಯ — ಸಾಮುದಾಯಿಕ ಜೀವನ ನಡೆಸಲು ಸರ್ವೋತ್ತಮ ಕಲಾಭ್ಯಾಸ ನೀಡುವುದಾಗಿದೆ. ಜಗತ್ತು ಇಂದು ಆದಿಮಾನವನೆಡೆಗೆ ಹಿಂದುವರಿಯುತ್ತಿರುವ ಈ ಸಂಕಟಮಯ ಪರಿಸ್ಥಿತಿಯಲ್ಲಿ, ಆವಾಂತರಕಾರಿ ವಾತಾವರಣದಲ್ಲಿ ಈ ಕಲಾಭ್ಯಾಸವು ಕೊಂಚ ಕಠಿಣವಾಗಿಯೇ ತೋರಬಹುದು. ಸಮಾಜಕ್ಕೆ ಇಂದು ಉದ್ದೇಶವೂ ಗುರಿಯೆಂಬುದು ಬೇಕಿಲ್ಲ. ಹೊಟ್ಟೆ-ಬಟ್ಟೆಗಳಿಗಾಗಿ ಪರಿತಪಿಸುವ ಜನರೊಡನೆ ನಾವು ರಾಜಕೀಯ ಸ್ವಾಧೀನತೆ, ಸಾಂಸ್ಕೃತಿಕ ಸ್ವಾತಂತ್ರ್ಯದ ಕುರಿತು ಚರ್ಚಿಸುವುದೆಂದರೆ ಅವರನ್ನು ಗೇಲಿ ಮಾಡಿದಂತೆ ಸರಿ! ನಮ್ಮ ಸಮಸ್ಯೆಯು ಯಾವ ರೀತಿಯದು? ಎಂದು ನಾನು ಯಾವುದಾದರೂ ನಿಶ್ಚಿತ ಸಿದ್ಧಾಂತವನ್ನು ನಿಮ್ಮ ಮುಂದಿಡ ಬಯಸುವುದಿಲ್ಲ. ಆದರೆ ಸಾಮಾಜಿಕ ವ್ಯವಸ್ಥೆಯು ಮೂಲದಲ್ಲೆಲ್ಲೋ ಅವ್ಯವಸ್ಥೆಯಿದ್ದಂತೆ ಕಾಣುವುದಿಲ್ಲವೇ? ಮಾನವನ ಪಾರಸ್ಪರಿಕ ಸಂಬಂಧದಲ್ಲೆಲ್ಲೋ ಅರಾಜಕ ಅನವಸ್ಥೆಯು ಮನೆ ಮಾಡಿದಂತಿಲ್ಲವೇ? ಮೂಕ—ಕಿವುಡರಿಗೆ, ಹೆಳವ — ಕುರುಡರಿಗೆ ನಾವು ಕೊಂಚ ದಯೆ ತೋರಿಸಿದರೂ ಬಡವರಿಗೂ, ನಿರುದ್ಯೋಗಿಗಳಿಗೂ ನಾವೇನೂ ಸಹಾಯ ಹಸ್ತ ನೀಡುವುದಿಲ್ಲ; ಇವರ ಸಂಖ್ಯೆಯಿಂದು ಅಧಿಕವಾಗುತ್ತಾ ಇದೆ. ನಾವು ಪ್ರಕೃತಿಯ ಔದಾಸೀನ್ಯದ ಕುರಿತು ದೂರುತ್ತೇವೆ, ಆದರೆ ಮನುಷ್ಯರ ದುರ್ಬಲತೆಯನ್ನು ಮೌನವಾಗಿಯೇ ಒಪ್ಪಿಕೊಳ್ಳುತ್ತೇವೆ. ಪ್ರಸ್ಥಿತಿಯನ್ನು ಗುಣದಲ್ಲಿ ಮಾತ್ರವೇ ಅಲ್ಲ, ಸ್ವಯಂ ಅದನ್ನ ಹೊಂದಿಯೇ ಇರದಂತೆ ಆಶಿಸುತ್ತೇವೆ.

ಭಾರತ ಸಂಸ್ಕಾರದ ನೂತನ ಕಾಯಿದೆಯಲ್ಲಿ ರಾಜಕೀಯ ಅಧಿಕಾರದ ಪ್ರಯೋಗದ ಕುರಿತು ಕೆಲ ಪ್ರತಿಬಂಧಗಳನ್ನು ಹೇರಲಾಗಿದ್ದು ಇದರಿಂದ ಜನರು ಮನಸಿದ್ದಂತೆ ಸ್ವೇಚ್ಛೆಯಿಂದ ರಾಜಕೀಯವನ್ನು ಉಪಯೋಗಿಸಲಾಗದು, ಆರ್ಥಿಕ ಕ್ಷೇತ್ರದಲ್ಲಂತೂ ಪ್ರತಿಬಂಧಕದ ಆವಶ್ಯಕತೆಯನ್ನೂ ಹೆಚ್ಚಿದೆ. ನಮ್ಮ ಸಾಮಾಜಿಕ ಪರಿಸ್ಥಿತಿಯಲ್ಲಿ ಆರ್ಥಿಕ ಸ್ವಾತಂತ್ರ್ಯದ ರಕ್ಷಣೆಗೋಸ್ಕರ ಆರ್ಥಿಕ ಶಕ್ತಿಯನ್ನು ಪ್ರತಿಬಂಧಕ ಪೂರ್ವಕವಾಗಿಯೇ ಕಾಪಾಡಬೇಕು. ಇದರಿಂದ ಸಭ್ಯ ಜೀವನಕ್ಕಾಗಿ ನಿತ್ಯೋಪಯೋಗಿ ಸಾಮಾನ್ಯ ಸುಖ ಸಾಧನಗಳೆಲ್ಲರಿಗೂ ದೊರೆಯುವುವು. ವಾಸ್ತವಿಕವಾಗಿ ಸ್ವಾತಂತ್ರ್ಯವು ಸಮಾಜ ಬಂಧನವನ್ನು ಮುರಿದು ವ್ಯಕ್ತಿಯನ್ನು ಬೇರೆ ಮಾಡಲು ಇರುವುದಲ್ಲ; ಎಲ್ಲರಿಗೂ ಉಚಿತ ವಿಕಾಸ ದೊರೆಯುವಂತೆ ಬುದ್ಧಿಪೂರ್ವಕವಾಗಿ ಸಾಮಾಜಿಕ ಶಕ್ತಿಗಳನ್ನು ಒಂದುಗೂಡಿಸುವುದೇ ಆಗಿದೆ. ಇದರಿಂದ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಾಮಾಜಿಕ ನಿಯಂತ್ರಣದ ಆವಶ್ಯಕತೆಯ ನಡುವೆ ಭೇದ ವುಂಟಾಗದು. ಸಮಾಜಕ್ಕೆ ಅಂಟಿಕೊಂಡ ದುರಭಿಲಾಷೆಯು ಅಂತ್ಯವಾಗಲು ಒಂದು ನವೀನ ದೃಷ್ಟಿ ಕೋಣದಿಂದ ಸಂಪೂರ್ಣ ಸಮಾಜದಲ್ಲಿ ಐಕ್ಯತಾ ಭಾವನೆಯನ್ನು ಬಡಿದೆಬ್ಬಿಸಬೇಕು.

ಆದರೆ ನಾವು ರಾಜಕೀಯ ರಹಸ್ಯವಾದವನ್ನು ಸಂಪೂರ್ಣ ಮನಸಾ—ವಾಚಾ-ಕರ್ಮಣಾ ಸ್ವೀಕರಿಸಿದ್ದೇವೆಂದು ಇದರರ್ಥವಲ್ಲ. ಜಗತ್ತಿನ ಕೆಲವೊಂದು ದೇಶಗಳಲ್ಲಿ ಸಮಾಜವೊಂದು ಸೆರೆಮನೆಯಾಗಿದೆ. ಈ ತರದ ಅವಸ್ಥೆಯನ್ನು ಕಂಡರಿತ ಓರ್ವ ಬುದ್ಧಿವಂತ ಫ್ರೆಂಚರವನಿಗೆ ನ್ಯೂಯಾರ್ಕ್ ಬಂದರಿನ ಸ್ವಾತಂತ್ರ್ಯ ಮೂರ್ತಿಯನ್ನು (Statue of Liberty) ಕಾಣಿಸುತ್ತಲೇ, ಅವನೆಂದನು, "ನಾವು ಕೂಡ ನಮ್ಮಲ್ಲಿ ಹುತಾತ್ಮರ ಸಮಾಧಿಗಳನ್ನು ಕಟ್ಟುವವರಿದ್ದೇವೆ." ಇಂದಿನ ಆಧುನಿಕ ಗುಲಾಮತನದಲ್ಲಿ ಮನುಷ್ಯರಿಗೆ ಮಾತಾಡುವ ಯಾ ಸ್ವತಂತ್ರವಾಗಿ ಆಲೋಚಿಸುವ ಅಧಿಕಾರವೇ ಇಲ್ಲವಾಗಿದೆ. ಯಾವುದಾದರೂ ಸಾಮಾಜಿಕ ವ್ಯವಸ್ಥೆಯು ನೈಜ ಜ್ಞಾನದಿಂದ ಆ ಸಮಾಜದ ನಾಗರಿಕರ ರಚನಾತ್ಮಕ ಶಕ್ತಿಯ ವಿಕಾಸ ಉಂಟಾಗುತ್ತದೆ. ನಾವು ನಮ್ಮ ಆರ್ಥಿಕ ಜೀವನದಲ್ಲಿ ಸುಧಾರಣೆ ಮಾಡುವುದರಿಂದ ವ್ಯಕ್ತಿಯ ಹೊಣೆಗಾರಿಕೆ ಹೆಚ್ಚಬೇಕೇ ಹೊರತು ಕಡಿಮೆಯಾಗ ಕೂಡದು. ನೈಜ ಸಮಾಜವು ಗುಲಾಮರಿಂದಲ್ಲ, ಸ್ವತಂತ್ರ, ಸ್ವಾಭಿಮಾನಿ, ಸುಶಿಕ್ಷಿತ ಸ್ತ್ರೀ-ಪುರುಷರಿಂದ ಉದ್ಭವಿಸುತ್ತದೆ.

ಯಾವ ರೀತಿಯಲ್ಲಿ ಉತ್ತಮ ಸಾಮಾಜಿಕ ವ್ಯವಸ್ಥೆಯು ಗುಲಾಮರಿಂದಾಗದೋ ಅಂತೆಯೇ ಸಂಪೂರ್ಣ ಜಗತ್ತಿನ ಮಿತ್ರ ರಾಷ್ಟ್ರಗಳ ಸಂಘವೂ ಪರಾಧೀನ ರಾಷ್ಟ್ರದೊಂದಿಗೆ ಸೇರುವುದರಿಂದಾಗದು. ಯಾವ ರೀತಿಯಲ್ಲಿ ಸಾಮಾಜಿಕ ಸ್ವಾತಂತ್ರ್ಯ ಹಾಗೂ ಸ್ವಯಂ ಅಧಿಕಾರ ಒಂದು ರಾಷ್ಟ್ರದ ಆಧಾರವೋ ಅದೇ ರೀತಿ ಅಂತಾರಾಷ್ಟ್ರೀಯ ಸ್ವಾತಂತ್ರ್ಯ ವಿಶ್ವ ಶಾಂತಿಯ ಆವಶ್ಯಕತೆಯಾಗಿದೆ. ಸ್ವತಂತ್ರ ರಾಷ್ಟ್ರಗಳ ಸಂಘವು ಶಾಂತಿ ಮತ್ತು ಸ್ವಾತಂತ್ರ್ಯದ ಕೇಂದ್ರವಾಗಿದೆ. ಇದು ಇಂದೆಂದು ಕನಸಾಗಿರಬಹುದು, ಆದರೆ ಈ ಕನಸೇ ದೊಡ್ಡ ದೊಡ್ಡ ವಿಚಾರಗಳಿಗೆ ಉತ್ತೇಜನವಿತ್ತಿದೆ, ಮಹಾ ಮಹಾ ಕಾರ್ಯಗಳಿಗೆ ಪ್ರೋತ್ಸಾಹವಿತ್ತಿದೆ ಮತ್ತು ಮುಂದಕ್ಕೂ ಪ್ರೋತ್ಸಾಹವಿತ್ತೀತ.

ಆಧುನಿಕ ವಿಶ್ವವಿದ್ಯಾಲಯಗಳ ಶಿಕ್ಷಣವು ಕುಳಿತಲ್ಲೇ ಕುಳಿತು ಗಾಳಿಗೋಪುರ ಕಟ್ಟುವುದಕ್ಕಷ್ಟೇ ಸೀಮಿತವಾಗಿರಬಾರದು. ಅದು ನಮ್ಮಿಂದ ಕೊಂಚ ದುಡಿತವನ್ನು ಬಯಸುವಂತಿರಬೇಕು. ಅದು ನಮಗೆ ಅಸಂಬದ್ಧ, ಅಸ್ಪಷ್ಟ ವಿಚಾರಗಳನ್ನೂ, ಆಲಸ್ಯ— ಹೇಡಿತನದಿಂದಲೂ ಉಂಟಾಗುವ ಅಪಾಯಕಾರೀ ಪರಿಣಾಮಗಳನ್ನು ತಿಳಿಯ ಹೇಳಿ ಎಚ್ಚರಿಕೆ ನೀಡುವಂತಿರಬೇಕು. ಅದು ನಮಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಮಾನತೆಯನ್ನು ಭ್ರಾತೃತ್ವ ಭಾವವನ್ನೂ ಅದಕ್ಕನುಕೂಲ ಕಾರ್ಯ ಮಾಡಲು ಉತ್ಸಾಹವನ್ನೂ ನೀಡಬೇಕು. ಮಹಾನ್ ಆದರ್ಶಗಳು ಸಂಪತ್ತಾದನೆಯಿಂದಲೇ ಸಾಧ್ಯ. ಪ್ರಜಾಪ್ರಭುತ್ವದಲ್ಲಿ ಬಲಾತ್ಕಾರಕ್ಕೆ ಸ್ಥಾನವಿಲ್ಲ, ಯುಕ್ತಿಯಿಂದ ಸಂತೈಸಿ ರಾಜಿಯಿಂದಲೇ ಕಾರ್ಯ ನಡೆಯುತ್ತದೆ. ಪ್ರಜಾಪ್ರಭುತ್ವದಲ್ಲಿ ನಮ್ಮ ನಮ್ಮ ಹೊಣೆಗಾರಿಕೆಯನ್ನು ನಾವು ಅರಿತಿರಬೇಕು. ಈ ಮೇಲೆ ಹೇಳಿದ ಸಿದ್ಧಾಂತಗಳನ್ನು ಚೆನ್ನಾಗಿ ತಿಳಿದು ಆಚರಣೆಗೆ ತಂದಲ್ಲಿ ರಕ್ತಪಾತವಿಲ್ಲದೆ, ಕ್ರಾಂತಿಯಿಲ್ಲದೆ, ವರ್ತಮಾನ ಸಮಾಜದಲ್ಲಿ ಮಹಾ ಪರಿವರ್ತನೆಯುಂಟು ಮಾಡಬಹುದು. ಪ್ರಜಾಪ್ರಭುತ್ವವು ವಿಶಿಷ್ಟ ಜನಶಾಸನದಿಂದಲೇ ತನ್ನನ್ನು ರಕ್ಷಿಸಿಕೊಳ್ಳಬೇಕು. ಆಳುವ ಅಧಿಕಾರಿಗಳು ಬುದ್ಧಿವಂತರೂ, ಸತ್ಯವಂತರೂ ಆಗಿರಬೇಕು. ಎಂದಾದರೂ ಚತುರ, ಸಿದ್ಧಾಂತಶೂನ್ಯ ರಾಜಕಾರಣಿಯು ಜನತೆಯನ್ನು ತಪ್ಪೆಡೆ ಸೆಳೆದು ತನ್ನ ಸ್ವಾರ್ಥ ಸಾಧನೆಗೋಸ್ಕರ ಜನತೆಯನ್ನು ಶೋಷಿಸಿದಲ್ಲಿ ಅದು ಪ್ರಾತ್ಯಕ್ಷಿಕ ಜನಶಾಸನವಾದೀತೆ ಹೊರತು ಪ್ರಜಾಪ್ರಭುತ್ವವೆನಿಸದು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬನೂ ತನ್ನ ಹಿತವ, ತನ್ನ ಏಳಿಗೆಯ ಕುರಿತು ಎಷ್ಟು ಚಿಂತಿಸುತ್ತಾನೆಂದರೆ ಅವನು ಇತರರ ಒಳಿತನ್ನೂ ಬಯಸುತ್ತಾ ಕೆಲಸಮಾಡುತ್ತಾನೆ. ಶಿಕ್ಷಿತರೆನಿಸಿಕೊಳ್ಳುವವರಲ್ಲೂ ಬಾಹ್ಯ ನಿಯಂತ್ರಣವಿಲ್ಲದೆ ಸ್ವತಂತ್ರ ವಿಚಾರಗಳು ಸಾಕಷ್ಟು ದೊರೆಯವು. ಆದುದರಿಂದ ನಾವು ನಮ್ಮ ಮುಖಂಡರನ್ನು ಈ ಸಂಬಂಧವಾಗ ಬುದ್ಧಿವಂತಿಕೆಯಿಂದ ಹಾಗೂ ಸಾವಧಾನದಿಂದ ಆಲೋಚಿಸಬೇಕು.

ಪ್ರಜಾಪ್ರಭುತ್ವ ಸಂಸ್ಥೆಗಳು ತಾವು ಅನುಸರಿಸಬೇಕಾದ ನೀತಿಯನ್ನು ಮೊದಲೇ ತಯಾರು ಮಾಡಿರುತ್ತವೆ. ಆದರೆ ಆ ನೀತಿಯನ್ನ ಕಾರ್ಯಾನ್ವಿತವನ್ನಾಗಿಸಲು ವಿ

(ಹತ್ತನೇ ಪುಟ ನೋಡಿರಿ)

'ಸೇವಿಂಗ್ಸ್ ಬ್ಯಾಂಕ್' ಖಾತೆಯುವರಿಗೊಂದು
ಸಂತಸದ ಸುದ್ದಿ

ವಿಶೇಷ ಸವಲತ್ತುಗಳು



- ನಿಮ್ಮ ಖಾತೆಯಲ್ಲಿರುವ ಹಣದ ಮೊತ್ತ 4% ರ ಸಲೆಯಲ್ಲಿ ಬಡ್ಡಿಯನ್ನು ಗಳಿಸುತ್ತದೆ.
- ಹಣವನ್ನು ಮರಳಿ ಪಡೆಯುವಾಗ ಅಧಿಕವೆಂದರೆ ಇಂತಿಷ್ಟೇ ಪಡೆಯಬೇಕು ಎನ್ನುವ ನಿರ್ಬಂಧವಿಲ್ಲ; ಮುಂಚಿತವಾಗಿ ಸೂಚಿಸಬೇಕಾದ ಆಗತ್ಯವೂ ಇಲ್ಲ. ಒಂದು ವರ್ಷದಲ್ಲಿ 150 ಬಾರಿ ಹಣವನ್ನು ಮರಳಿ ಪಡೆಯಬಹುದು ಎಂದು ಮಾತ್ರ ನಿಯಮಿತಗೊಳಿಸಲಾಗಿದೆ.
- ಕನಿಷ್ಟ 5 ರೂ.ಗಳ ಮೊತ್ತದಿಂದಲೂ ನಿಮ್ಮ ಖಾತೆಯನ್ನು ತೆರೆಯಬಹುದು ಮತ್ತು ನಿಮ್ಮ ಖಾತೆಗೆ ನೀವು ಬರೇ 25 ಪೈಸೆಗಳನ್ನು ಕೂಡಾ ಜಮಾ ಮಾಡಬಹುದು.
- ಒಂದು ದಿನದಲ್ಲಿ ರೂ. 2,500/-ಗಳ ತನಕ ಮೊತ್ತಕ್ಕೆ ಪುಕ್ಕಟೆ ರವಾನೆಯ ವ್ಯವಸ್ಥೆಯನ್ನು ಮಾಡಲಾಗಿದೆ.
- ಚೆಕ್ ಮೂಲಕ ವ್ಯವಹಾರದ ಸೌಕರ್ಯಗಳನ್ನು ಒದವಿಸಲಾಗಿದೆ. ನಿಮ್ಮ ಎಲ್ಲಾ ಪಾವತಿಗಳನ್ನೂ ನೀವು ನಿರಾಯಾಸವಾಗಿ ಚೆಕ್ಕುಗಳ ಮೂಲಕವೇ ಮಾಡಬಹುದು.
- ನಮ್ಮ ಅಧಿಕಾರಿಗಳು ನಿಮಗೆ ಶೀಘ್ರ ಮತ್ತು ಸೌಜನ್ಯ ಪೂರ್ಣವಾದ ಸೇವೆಯನ್ನು ಸಲ್ಲಿಸಬಲ್ಲರು.

ವಿವರಗಳಿಗಾಗಿ ದಯವಿಟ್ಟು ನಿಮ್ಮ ಸಮೀಪದ
— ಶಾಖೆಯಲ್ಲಿ ವಿಚಾರಿಸಿರಿ —

FAITHFUL SB FRIENDLY
ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ
ಚಲಾವಣಾ ನಿಧಿ. ರೂ. 70 ಕೋಟಿಗೂ ಮಿಕ್ಕಿ

ಚಂದ್ರನ ತೊಡೆ

ಜೆಮಿನಿ ಉಪಗ್ರಹದ ಮಹತ್ವಪೂ

ಲಾಸ್ ಏಂಜೆಲಿಸ್‌ನ ... ವಿಮಾನ ಕಾರಖಾನೆಯಲ್ಲಿ ಒಂದು ನಿರೀಕ್ಷಣಾಲಯವನ್ನು ಸ್ಥಾಪಿಸಲಾಗಿದೆ. ಆಕಾಶ ಯಾನಗಳ ಪರಿಶೀಲನೆಗೆ ಇದು ಸಹಾಯಕವಾಗುತ್ತದೆ. ... ದಶಕಾಂತ್ಯದಲ್ಲಿ ಅಮೆರಿಕೆಯು ಪ್ರಾರಂಭಿಸುವ 'ಅಪೊಲೊ ಕಾರ್ಯಕ್ರಮ'ದ ... ಚಂದ್ರನ ಮೇಲೆ ಸುರಕ್ಷಿತವಾಗಿ ಇಳಿಯುವುದಕ್ಕೂ ಅಲ್ಲಿಂದ ವರ್ತಮಾನ... ಕಳಿಸುವುದಕ್ಕೂ ಅನುಕೂಲವಾಗುವಂತೆ ಇದರ ರಚನೆಯಾಗಿದೆ. ಇದು ಒಂದು ನಿರೀಕ್ಷಣಾಲಯದ ಮಾದರಿ ಚಿತ್ರ

ಕಳೆದ ತಿಂಗಳ ೧೫ರಂದು ಅಮೆರಿಕೆಯು ಜೆಮಿನಿ ಉಪಗ್ರಹವನ್ನು ಆಕಾಶದಲ್ಲಿ ಹಾರಿಸಿ ಚಂದ್ರಲೋಕ ಗಮನದಲ್ಲೊಂದು ಹೆಜ್ಜೆಯಿಟ್ಟಿತು. ಚಂದ್ರಲೋಕವನ್ನು ಮುಟ್ಟಿ ಹಿಂದಿರುಗಲು ೮ ದಿನಗಳು ಸಾಕಾಗಬಹುದು. ಆದರೆ, ಯಾಂತ್ರಿಕ ದೋಷದಿಂದ ಈ ಯಾತ್ರಿಕರು ಚಂದ್ರನನ್ನು ಇಳಿಯಲಿಲ್ಲ. ರಾಷ್ಟ್ರೀಯ ಉಡ್ಡಾಣ ಮತ್ತು ಅಂತರಿಕ್ಷ ಪ್ರಶಾಸನ ಸಂಸ್ಥೆಯು ಮೊದಲೇ ಹೇಳಿತ್ತು 'ಹವಾಮಾನ ಮತ್ತು ಸಂದರ್ಭಗಳ ಪ್ರತಿಕೂಲವಾಗದಿದ್ದರೆ ಗಗನಯಾತ್ರಿ ಗಾರ್ಡನ್ ಕೂಪರ್ ಮತ್ತು ಚಾರ್ಲ್ಸ್ ಕಾನರೇಡರು ಎಂಟು ದಿನಗಳ ತನಕ ಭ್ರಮಣ ಮಾಡುವರು.' ಆದರೆ, ದೈವೇಚ್ಛೆ ಇದಕ್ಕೆ ವ್ಯತಿರಿಕ್ತವಾಯಿತು.

ಪೂರ್ವ ನಿಯೋಜಿತ ಯೋಜನೆಯಂತೆ ಕೂಪರ ಮತ್ತು ಚಾರ್ಲ್ಸರವರು ಭೂಮಿಗೆ ೧೨೧ ಸುತ್ತು ಬಂದು ಸೋವಿಯತ್ತಿನ ದಾಖಲೆಯನ್ನು ಮುರಿದು ಬಿಡಬೇಕಾಗಿತ್ತು. ಆಗಸ್ಟ್ ೨೭ರಂದು ಅಮೆರಿಕೆಯ ಆಗ್ನೇಯ ತಟದ ಅಟ್ಲಾಂತಿಕ ಸಾಗರದ ಬಳಿ ಉಪಗ್ರಹ ಇಳಿಯಬೇಕಿತ್ತು.

ಜೆಮಿನಿ ೫ ಉಪಗ್ರಹದ ಅಂತರಿಕ್ಷ ಯಾತ್ರೆಯ ಪ್ರಧಾನ ಗುರಿಯೆಂದರೆ, ಇದೇ ವರ್ಷದಲ್ಲಿ ಹಾರಿಸಲಾಗುವ ಜೆಮಿನಿ ೬ ಉಪಗ್ರಹದ ಹಾರಿಕೆಗೆ ಅನುಕೂಲವಾದ ಪರಿಸ್ಥಿತಿಗಳನ್ನು ಮುನ್ನಣೆ ಮಾಡಿಕೊಳ್ಳುವುದು ಮತ್ತು ಜೆಮಿನಿ ರಾಡರ್ ವ್ಯವಸ್ಥೆಯನ್ನು ಪರಿಶೀಲಿಸುವುದು. ಜೆಮಿನಿ ೬ ... ಮಾರಿಕೆಯು ಸ್ಥಾಪಿಸುವ ಮೊತ್ತ ಮೊದಲ ಎಜೆನಾ ರಾಕೆಟ್ ಎಸಿಸುವುದು.

ಅಂತರಿಕ್ಷದಲ್ಲಿ ಎರಡು ಬೇರೆ ಬೇರೆ ಉಪಗ್ರಹಗಳು ಒಟ್ಟು ಸೇರುವುದು ಚಂದ್ರಲೋಕದಲ್ಲಿ ಮಾನವನು ಇಳಿಯುವುದಕ್ಕೆ ಮತ್ತು ಅಂತರಿಕ್ಷದಲ್ಲಿ ವಿಶಾಲ ಮಾನವಯುಕ್ತ ಪ್ರಯೋಗ ಶಾಲೆಗಳನ್ನು ಸ್ಥಾಪಿಸುವುದಕ್ಕೆ ಅಗತ್ಯವಾಗಿದೆ.

ಅಂತರಿಕ್ಷದಲ್ಲಿ ಒಟ್ಟು ಸೇರುವ ಸಂಬಂಧದ ಪರಿಶೀಲನಗಳಾಗಿ ಅಂತರಿಕ್ಷಯಾನದಲ್ಲಿ ಭಾರದ ವಿದ್ಯುದ್ದೀಪಕ ಯಂತ್ರ ಪುಂಜವನ್ನೊಯ್ಯುವರು. ಭೂಮಿಯ ಸುತ್ತು ಬರುತ್ತಿರುವಾಗ ಇದನ್ನು ಮತ್ತೊಂದು ಉಪಗ್ರಹದಂತೆ ಹಾರಿಸಿ ಬಿಡುವರು. ಅಂತರಿಕ್ಷಯಾನ ಚಾಲಕರು ಗಗನದಲ್ಲಿನ ರಾಡರ್ ಮತ್ತು ಗಣನಾ ಯಂತ್ರಗಳ ಸಹಾಯದಿಂದ ಈ ಯಂತ್ರ ಪುಂಜ ಎತ್ತ ಸರಿಯುತ್ತಿರುವುದೆಂಬುದನ್ನು ನೋಡುವರು.

ರೇಡಾರ ತರಂಗಗಳನ್ನು ಟ್ರಾನ್ಸ್‌ಮಿಟರ್ ಕಳಿಸುತ್ತಿರಲು, ಗಣನಾ ಯಂತ್ರ ಪುಂಜದ ಗತಿಯನ್ನೂ ಅದಕ್ಕೂ ಜೆಮಿನಿಗೂ ಇರುವ ದೂರವನ್ನೂ ಈ ಮಧ್ಯೆ ಇ

ಅಮೆರಿಕೆಯು ಚಂದ್ರನನ್ನು ಮಾತ್ರ ನೋಡುತ್ತಿಲ್ಲ, ಸಮುದ್ರತಳವನ್ನೂ ಪರಿಶೀಲಿಸಲು ಪ್ರಾರಂಭಿಸುತ್ತದೆ. ಅಮೆರಿಕದ ನೌಕಾಪಡೆಯು ಧ್ರುವ ಪರಿಶೀಲನೆಯ ಕಾರ್ಯವನ್ನು ಕೈಗೊಂಡು ಹಲವು ಸಬ್‌ಮೆರಿನ್‌ಗಳನ್ನು ಕಳಿಸಿದೆ. ಸರ್ ರೋಗರ್ಸ್ ಈ ಮಾಲೆಯಲ್ಲಿ ಕೊನೆಯದು.



ಮಿಚಿಗನ್‌ನ ಡೆಟ್ರಾಯಿಟ್‌ನ ಕಾರಖಾನೆಯ ಸ್ವಯಂಚಾಲಿತ ಯಂತ್ರವೊಂದು. ಈ ಬಗೆಯ ಯಂತ್ರೋದ್ಯಮ ಪರ್ವತಾಕಾರ ತಳೆದುದರಿಂದಲೇ ಅಮೆರಿಕೆಯು ದೃಷ್ಟಿಯಿಂದ ಭೂಲೋಕದಿಂದ ಪಾತಾಳಕ್ಕೂ, ಅಂತರಿಕ್ಷಕ್ಕೂ ಸೇರಿದೆ.

...ಆಡಬಹುದು

...ಧನೆ— ಅಮೆರಿಕೆಯ ಸಾಹಸ

...ರುವ ಸ್ಥಿತಿಯನ್ನೂ ಕೂಡಲೇ ತಿಳಿಸುವುದು.

ಅಂತರಿಕ್ಷಯಾನ ಚಾಲಕನು ಯಂತ್ರ ಪುಂಜವನ್ನು ಮೆಲ್ಲನೆ ಕೆಲದೂರ ಹೋಗುವಂತೆ ಮಾಡುತ್ತಾನೆ ಮತ್ತು ಸಮೀಪ ಕೈಕೊಳ್ಳಲು ಪ್ರಯತ್ನಿಸುತ್ತಾನೆ. ಹೀಗೆ ಸುದೀರ್ಘವಾದ ಉಡ್ಡಾಣದಲ್ಲಿ ಅಂತರಿಕ್ಷಯಾನ ಮತ್ತು ಯಂತ್ರ ಪುಂಜಗಳ ಸ...

ಅಧ್ಯಕ್ಷ ಲಿಂಡನ್ ಜಾನ್ಸನ್ನರು ೧,೩೦೦ ಮಿಲಿಯ ಡಾಲರುಗಳ ಶಿಕ್ಷಣ ಮಸೂದೆಗೆ ಸಹಿ ಹಾಕಿದರು. ಈ ಸಮಾರಂಭವು ಜಾನ್ಸನ್ ಮೊದಲಿಗೆ ಪಾಠ ಕಲಿತ ಶಾಲೆಯ ಮುಂದುಗಡೆ ನಡೆಯಿತು. ಇದು ಇರುವುದು ಟೆಕ್ಸಾಸಿನ ಜಾನ್ಸನ್ ನಗರದಲ್ಲಿ. ತಾನು ಸಹಿ ಹಾಕಿದ ಪೆನ್ನನ್ನು ತನಗೆ ಪಾಠ ಕಲಿಸಿದ್ದ ೭೨ ವರ್ಷದ ಶ್ರೀಮತಿ ಕತೆ ಡೆಡ್ರಿಚ್ ಲೋನಿಯವರಿಗೆ ಕೊಟ್ಟುಬಿಟ್ಟರು. ಇದೇನು ದೊಡ್ಡಸ್ತಿಕೆಯೋ, ಉದಾತ್ತತೆಯೋ? ಸರಳತೆಯೋ?

ಕೊರಿಯಾದ ಸಿಯೋಲ್‌ನ ಅನಾಥಾಲಯದಲ್ಲಿ ಇರುತ್ತಿದ್ದ ಕಿಮ್ ಅಮೆರಿಕನ್ ನಾಗರಿಕತೆಯನ್ನೀಗ ಪಡೆದಿದ್ದಾಳೆ. ಆಕೆಯನ್ನು ಶ್ರೀಮತಿ ಮತ್ತು ಶ್ರೀ ವಿಲ್ಲಿಯಂ ಗ್ರಾಹಂ ತಮ್ಮ ಮಗಳೆಂದ ಸ್ವೀಕರಿಸಿದ್ದಾರೆ. ಚಿತ್ರದಲ್ಲಿ ಕಿಮ್ ತನ್ನ ಮೂವರು ಹೊಸ ಸಹೋದರಿಯರ ತೆಕ್ಕೆಯಲ್ಲಿ ಆನಂದಿಸುತ್ತಿದ್ದಾಳೆ. ಅಮೆರಿಕೆಯ ಉತ್ಥಾನದ ದಾರಿಗ ಇಂತಹ ಪ್ರೇಮವೂ ಒಂದು ಕಾರಣವಾಗಿರಬಹುದೇ?

...ವಿಸ್ಫೋಟನವಾಗುವಂತ ಹಲವು ಯತ್ನಗಳನ್ನು ಮಾಡತ್ತಿದ್ದಾನೆ. ಈ ಪ್ರಯತ್ನಗಳ ಮಾದರಿಯ ೧ ಭಿನ್ನ ಭಿನ್ನವಾಗಿದ ಕೃಷಿ.

ಮಿಲನದ ಪ್ರಯೋಗಗಳಿಗಾಗಿ ಉಪಗ್ರಹದಲ್ಲಿಟ್ಟಿರುವ ಇಂಧನದಲ್ಲಿ ...ಉಪಯೋಗಿಸುವುದು ಸಾಧ್ಯವಾಗಿದ್ದರೂ ... ಯಾನದಲ್ಲಿ ... ಕೋಶವನ್ನೊಯ್ಯಲಾಗುವುದು. ಇದರಿಂದ ಬೇರಾವುದಕ್ಕಿಂತ ಹೆಚ್ಚು ಇಂಧನ ದೊರೆವಂತಾಗುವುದು. ... ಜಲಜನಕಗಳ ಪ್ರತಿಕ್ರಿಯೆಯಿಂದ ವಿದ್ಯುದುತ್ಪಾದನೆಯಾಗುವ ... ಹಡಿಯಲ್ಲಿ ಈ ಇಂಧನ ಕೋಶ ...ವಾಗಿದೆ.

...ಗಳು ವೈಜ್ಞಾನಿಕ ಮತ್ತು ವೈದ್ಯಕ ಪರಿಶೀಲನೆಗಳನ್ನು ಮಾಡುವರು. ಚಂದ್ರಲೋಕ ತಲುಪುವಾಗ ವ್ಯಕ್ತಿ ...ದ ಮರಳುವಾಗ ಭಾರಹೀನತೆಯ ಪರಿಸ್ಥಿತಿಯನ್ನು ಎದುರಿಸುವುದು ಸಾಧ್ಯವಾದೀತೇ ಎಂದು ವೈದ್ಯಕ ಪರಿಶೀಲನೆಗಳಿಂದ ...ಳಿಯುವುದು.

...ಉಪಗ್ರಹದ ಚಕ್ರ ... ಆಸ್ಟ್ರೇಲಿಯಾದ ಭೂಮಿಯ ... ಕೆಲವು ವಿಶಿಷ್ಟ ಸ್ಥಳಗಳನ್ನು ... ತೆಗೆಯುವ ಇಚ್ಛೆ ... ಇವರಿಗಿದೆ.

...ಉಪಗ್ರಹ ಯಾತ್ರೆಯು ನಡೆಯುತ್ತ ಬಂದು ಅದು ಯಶಸ್ವಿಯಾಗ ... ವರಿಯುತ್ತಿದೆ. ಒಂದು ದಿನ ಬರಬಹುದು, ಮಾನವ ... ಚಂದ್ರಲೋಕದಲ್ಲಿ ಆಡುವ ಸುದಿನ!

ಕೃಷಿಕ ಕ್ಷೇತ್ರ

ರಾಸಾಯನಿಕ ಗೊಬ್ಬರ ಬಳಕೆ

ಬಹಳಾಗಿ ಏರುತ್ತಿರುವ ಜನಸಂಖ್ಯೆಗನುಗುಣವಾಗಿ ಉತ್ಪಾದನೆಯನ್ನು ಹೆಚ್ಚಿಸಲು ನಮ್ಮ ರೈತರು ರಾಸಾಯನಿಕ ಗೊಬ್ಬರಗಳನ್ನು ಬಳಸಲೇ ಬೇಕು. ಡಾ। ಟಿ. ಆರ್. ಮುಕರ್ಜಿಯವರ ಅಭಿಪ್ರಾಯವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ

ಆಹಾರ ... ಸಮಸ್ಯೆಯನ್ನು ನಾವೆ ಎದುರಿಸಬೇಕು. ಇದಕ್ಕಾಗಿ ಅಧಿಕ ಉತ್ಪಾದನೆಗಾಗಿ ... ಗೊಬ್ಬರಗಳನ್ನು ಉಪಯೋಗಿಸಬೇಕು. ನಮಗೆ ... ಗೊಬ್ಬರ ... ಕಡಿಮೆ ... ಭೂಮಿಯನ್ನು ಸಂವೃದ್ಧಗೊಳಿಸುವುದು ಸಾಧ್ಯವಿಲ್ಲ.

ದೇಶದಲ್ಲಿ ದೊರೆಯುವ ಸೆಗಣಿಯನ್ನು ಉರುವಲಿಗಾಗಿ ... ಗೊಬ್ಬರವನ್ನಾಗಿ ಪರಿವರ್ತಿಸಿದಲ್ಲಿ ಇದು ಕೃಷಿ ಹುಟ್ಟುವಳಿಯನ್ನು ಹೆಚ್ಚಿಸಲು ಬೇಕಾಗುವ ಗೊಬ್ಬರದ ಪ್ರಮಾಣದಲ್ಲಿ ... ಗೊಬ್ಬರವನ್ನು ಪೂರೈಸಬಹುದು. ನಮ್ಮ ರೈತರು ದೊಡ್ಡ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಬೇಕು ... ಈ ಸಂಗತಿಯ ... ಇದೆಯೇ?

ಅಧಿಕ ಉತ್ಪಾದನೆಯಲ್ಲಿ ... ಬಳಕೆ ... ಕೀಟ ... ಸಂತತಿ ... ಬೇರೆ ಬೇರೆ ಬಗೆಗಳನ್ನೊಳಗೊಂಡ ಇತರ ಆಧುನಿಕ ಕೃಷಿ ವಿಧಾನಗಳು, ... ಪ್ರಮಾಣದ ... ಬೆಳೆಯನ್ನು ... ದರ ... ಎರಡು ಮೂರು ... ಕೊಂಡರೆ ಒಕ್ಕಲುತನದ ಹುಟ್ಟುವಳಿ ಹೆಚ್ಚುವುದು.

... ತನ್ನಲ್ಲಿ ಬೆಳೆ ಉತ್ಪಾದನ ... ದೆ ... ಭೂಮಿಯು ... ಯಾಗಿರುವುದೇ ಇದಕ್ಕೆ ಕಾರಣ. ಜಗತ್ತಿನಲ್ಲಿಯೇ ಅತ್ಯುತ್ತಮ ಪ್ರಕಾರದ ಮಣ್ಣು ನಮ್ಮಲ್ಲಿದೆ ... ಮಳೆ ... ದೊರೆಯುತ್ತವೆ. ಬೆಳೆ ಬೆಳೆಯಲು ಒಳ್ಳೆಯ ಹವಾಮಾನವೂ ಇದೆ. ಭಾರತದ ಭೂ ಪ್ರದೇಶ ... ಹಿಂದೊಮ್ಮೆ ಧಾನ್ಯದ ಕಣಜಗಳಾಗಿದ್ದವು. ಜಗತ್ತಿನ ಯಾವ ರಾಷ್ಟ್ರದಲ್ಲಿಯೂ ಇಷ್ಟು ಹೆಚ್ಚು ಭೂಮಿ ... ನಮ್ಮ ದೇಶದಲ್ಲಿ ಬೇಸಾಯ...ಗಾಗಿದೆ.

ನಿರಾಶಾದಾಯಕ

ಇಷ್ಟಿದ್ದರೂ ನಮ್ಮ ದೇಶದ ... ಎಕರೆವಾರು ಹುಟ್ಟುವಳಿಯ ಪ್ರಮಾಣ ನಿರಾಶಾದಾಯಕವೆನಿಸುವಷ್ಟು ಕಡಿಮೆಯಿದೆ. ಎಕರೆಗೆ ಎರಡು ಟನ್ ಅಥವಾ ಅದಕ್ಕೂ ಹೆಚ್ಚು ಭತ್ತವನ್ನು ಉತ್ಪಾದಿಸುವಲ್ಲಿ ನಾವು ಎರಡು ಎಕರೆಗೆ ಒಂದು ಟನ್ ಭತ್ತವನ್ನೂ ಬೆಳೆಯುತ್ತಿಲ್ಲ! ಗೋಧಿಯ ಉತ್ಪಾದನೆಯಂತೂ ಇನ್ನೂ ಕಡಿಮೆ.

ನಮ್ಮ ರೈತರಿಗೆ ಬೆಳೆ ಬೆಳೆಯುವುದು ಹೇಗೆಂದು ಗೊತ್ತಿಲ್ಲ ಎಂಬುದು ಇದರ ಅರ್ಥವಲ್ಲ. ಅನೇಕ ... ಗಳಿಂದಲೂ ... ಗೊಬ್ಬರವಿಲ್ಲದೆ ಬೆಳೆಗಳನ್ನು ಕೊಡುತ್ತಿರುವ ನಮ್ಮ ದೇಶದ ಮಣ್ಣಿನ ... ಕಡಿಮೆಯಾಗಿರುವುದೇ ಇದಕ್ಕೆ ಕಾರಣ. ... ಕಳೆದು ... ಭೂಮಿಗೆ ... ಗೊಬ್ಬರವನ್ನು ಹಾಕಿದ್ದಲ್ಲಿ ಆ ಪ್ರದೇಶಗಳು ಅಧಿಕ ಉತ್ಪಾದನೆ ಕೊಡುವ ಸಂಭವವಿರುವುದು.

... ಉತ್ಪಾದನೆಯನ್ನು ಕೂಡಲೇ ಹೆಚ್ಚಿಸಬೇಕೆಂದು ನಾವು ಬಯಸುತ್ತಿದ್ದ ... ಉತ್ಪಾದನೆಯನ್ನು ಹೆಚ್ಚಿಸಬಲ್ಲಂತಹ ಗೊಬ್ಬರವನ್ನು ದೊಡ್ಡ ಪ್ರಮಾಣದಲ್ಲಿ ಪೂರೈಸಬಲ್ಲ ಸಾಧನದ ಕಾರ್ಯಕ್ರಮವನ್ನು ... ಹಿಂದಿನ ಕಾಲದ ... ನಮ್ಮ ರೈತರು ಗೊಬ್ಬರಕ್ಕಾಗಿ ಪ್ರಾಣಿಜನ್ಯ ಸಾರಗಳನ್ನೇ ಹೆಚ್ಚಾಗಿ ಅವಲಂಬಿಸಿರ ಬೇಕಾಗಿತ್ತು.

ಆದರೆ, ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಿ ಭೂಮಿಯ ಸಾರವನ್ನು ಹೆಚ್ಚಿಸಬಹುದೆಂಬ ಅರಿವು ಮಾನವ

(ಅದಿಮೂರನೇ ಪುಟ ನೋಡಿರಿ)

ದುಡಿಯಲು ಅವಕಾಶ ಕಲ್ಪಿಸಿಕೊಳ್ಳಿರಿ

(ಏಳನೇ ಪುಟದಿಂದ)

ಶೇಕ್ಸ್‌ಪಿಯರ ಮೇಲ್ನೋಟದಲ್ಲಿ ಅದನ್ನು ಬಿಡಬೇಕು. ಯಾಕೆಂದರೆ ಸಾಧಾರಣ ಜನತೆಯು ಶಾಸನ ಮಾಡುವುದೆಂದರೆ ಶಾಲೆಯ ಅಧಿಕಾರವನ್ನು ವಿದ್ಯಾರ್ಥಿಗಳ ಕೈಯಲ್ಲಿಟ್ಟಂತೆ, ಕೈಲು ಬಂಡಿಯನ್ನು ಓಡಿಸಲು ಪ್ರಯಾಣಿಕರನ್ನು ಕೇಳಿಕೊಂಡಂತೆ ಆದೀತು.

ಭಾರತೀಯ ವಿಶ್ವವಿದ್ಯಾಲಯದ ಸ್ನಾತಕರಿಗೆ ಶೀಘ್ರದಲ್ಲೆ ದಕ್ಷ ಹಾಗೂ ಉತ್ತರ ದಾಯಿತ್ವದ ಪದವಿಯನ್ನಲಂಕರಿಸಬೇಕಾಗುವದು. ದರ್ಜೆಯಲ್ಲಿ ಚರ್ಚಾ ಸಭೆಗಳಲ್ಲಿ, ವಿದ್ಯಾರ್ಥಿ ಭವನದಲ್ಲಿ, ಆಟದ ಬಯಲಲ್ಲಿ ಒಬ್ಬರಿನ್ನೊಬ್ಬರ ಮನಸ್ಸನ್ನು ಪ್ರಭಾವಿತಗೊಳಿಸಿ, ವಿಚಾರ ಹಾಗೂ ಮಾತಿನ ಪೂರ್ಣ ಸ್ವಾತಂತ್ರ್ಯವಿತ್ತು ಅವರನ್ನು ಪ್ರಾಮಾಣಿಕ, ಸಹಿಷ್ಣು ಹಾಗೂ ಸ್ನೇಹ ಶೀಲರನ್ನಾಗಿ ಪಡೆಬೇಕು. ಇದರಿಂದಾಗಿ ಅವರಿಗೆ ಒಳಿತನ್ನೆ ಕಾಣುವ ದೃಷ್ಟಿಯುಂಟಾದೀತು. ವಿಚಾರ ಸ್ವಾತಂತ್ರ್ಯದ ವಿಕಾಸ, ಉದಾರತೆ ಹಾಗೂ ತಮ್ಮಿಂದ ಭಿನ್ನ ಸಿದ್ಧಾಂತವಿಟ್ಟುಕೊಂಡವರ ವಿಚಾರವನ್ನು ತಿಳಿಯು ಶಕ್ತಿಯು ಅವನಲ್ಲಿರಬೇಕು. ಸ್ಪಿನೋಜಾ ಹೇಳುತ್ತಾನೆ "ನಾನು ಬಹಳ ಪರಿಶ್ರಮಪಟ್ಟು, ಬಹಳಷ್ಟು ಎಚ್ಚತ್ತು ದುಡಿಯಲು ಕಲಿತಿದ್ದೇನೆ, ಅದನ್ನು ಹೀಯಾಳಿಸಲು, ಅದರ ಕುರಿತು ದುಃಖಿಸಲು, ಅಥವಾ ಅದನ್ನು ತಿರಸ್ಕರಿಸಲು ಅಲ್ಲ". ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಂದ ನಾನಿಷ್ಟನ್ನೆ ಆಶಿಸುತ್ತೇನೆ—"ಆತ್ಮ ಸಂಯಮದಿಂದ, ಧರ್ಮಾಂಧ ಪುರುಷರ ಅಸಹಿಷ್ಣುತೆಯನ್ನು ತಮ್ಮದನ್ನಾಗಿಸದೆ, ಘಟನೆಗಳನ್ನು ಅಥವಾ ಸಿದ್ಧಾಂತಗಳನ್ನು ವೀಕ್ಷಿಸಿ ತಿಳಿಯಲು, ಸಾಮಾಜಿಕ ರೀತಿಗಳನ್ನೂ, ಸಾಂಪ್ರದಾಯಿಕ ಒಳ ಜಗಳವನ್ನು, ಬಡತನ ಹಾಗೂ ನಿರುದ್ಯೋಗಗಳನ್ನೂ ಎದುರಿಸಲು ಕಲಿಯಿರಿ." ನಮ್ಮ ದೇಶದ ಈ ದುಃಸ್ಥಿತಿಯಲ್ಲಿ ಬುದ್ಧಿವಂತ, ಸಾಹಸಿ ಹಾಗೂ ಆತ್ಮತ್ಯಾಗಿ ನವಯುವಕರಿಗೆ ದುಡಿಯಲು ಸಾಕಷ್ಟು ಸಂದರ್ಭಗಳು ದೊರೆತಾವು. ದೇಶಸೇವೆ ಮಾಡುವುದರಲ್ಲಿ ಸಾಮಾಜಿಕ ನ್ಯಾಯ ಪಾಲಿಸುವುದರಲ್ಲಿ, ಶುದ್ಧ ರಾಜ ನೀತಿ ಸ್ಥಾಪಿಸುವುದರಲ್ಲಿ, ರಾಜ ನೀತಿ ಹಾಗೂ ಸ್ತ್ರೀ ಪುರುಷರಲ್ಲಿ ಉಚಿತ ಸಂಬಂಧ ಸ್ಥಾಪಿಸುವುದರಲ್ಲಿ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. "ಅಸಫಲತೆಯಲ್ಲಿ ಧೈರ್ಯಗೆಡದೆ ಮುಂದಡಿಯಿಟ್ಟಲ್ಲಿ ನಮಗೇನೂ ನಷ್ಟವಿಲ್ಲ. ಹೌದು, ಧೈರ್ಯವನ್ನು ತ್ಯಜಿಸಿದಲ್ಲಿ ಖಂಡಿತವಾಗಿಯೂ ಅಪಾಯ ಸಿದ್ಧ"—ಎಂಬ ಸಿದ್ಧಾಂತವನ್ನು ನೆನಪಿನಲ್ಲಿಟ್ಟು ಮುಂದಡಿಯಿಡಿ ಎಂದಿಷ್ಟೇ ಹಾರೈಸುತ್ತೇನೆ.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. No. 67/64.

ರುಕ್ಮಿಣಿ ಶೆಡ್ತಿ . . . ವಾದಿಳು

ಮತ್ತು

1. ಕೊರಾತಿ ಸೆಡ್ತಿ; 2. ಕಾಳಮ್ಮ ಸೆಡ್ತಿ; 3. ಮಹಾಲಿಂಗ ಸೆಟ್ಟಿ (ಹಾಲಿ ಜೀವಿತ); 4. ಕೃಷ್ಣದೇವ; 5. ನಾಗೇಂದ್ರ; 6. ಲಕ್ಷ್ಮಿ; 7. ಶಾರದ; 8. ಪರಮೇಶ್ವರ; 9. ಲೋಕನಾಥ; 10. ಆಜಾನಿಜ. 4ರಿಂದ 10ನೇ ವರೇಗಿನವರು ಮೈನರರು, ಗಾರ್ಡಿಯನ್ ತಾಯಿ, 2ನೇ ಪ್ರತಿವಾದಿಳು. 11. ರತ್ನಮ್ಮ ಸೆಡ್ತಿ; 12. ಬಾಬು (ಮೈನರ್), ಗಾರ್ಡಿಯನ್ ಈ ಕೋರ್ಟಿನ ಎಡ್ವಕೇಟ್, Sri T. K. Kalkur, ಉಡುಪಿ; 11, 12 ನೇಯವರು ಸಿಟ್ಲಪುಂಟಲ್ ಪ್ರತಿವಾದಿಳು.

—ಪ್ರತಿವಾದಿಳು

ಇವರೊಳಗೆ

ಮೇಲಿನ ಕ್ರ. ಮ. 11ನೇ ಪ್ರತಿವಾದಿಳು ರತ್ನಮ್ಮ ಸೆಡ್ತಿ 3ನೇ ಪ್ರತಿವಾದಿ ಮಹಾಲಿಂಗ ಶೆಟ್ರ ಹೆಂಡ್ತಿ ಕಾರ್ಕಳ ತಾಲೂಕು ನಾಡಪಾಲ್ ಗ್ರಾಮದ ಮೇಗದ್ದೆ ಎಂಬಲ್ಲಿರುವವಳು. ಇವಳಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ, ವಾದಿಳಿಗೆ ಕೂಡಿನ ಬಾಬ್ತು ಬರಹ ಹಣಲು ಬಡ್ಡಿ ಖವೇಜಿಗೆ ವಾದಿಳು ಹೂಡಿದ ಮೇಲ್ಕಂಡ ದಾವೆಯು 11ನೇ ಪ್ರತಿವಾದಿಳ ಅಡ್ರೆಸ್ಸು ನೋಟೀಸು ಬಗ್ಗೆ ತಾ. 17-9-65ಕ್ಕೆ ತಗಲಿಗೆ ಇಟ್ಟಿರುವದರಿಂದ ಅ ಕ್ಷೇಪ ಹೇಳತಕ್ಕದ್ದಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

B. ANANDA SHETTY,
Advocate for Plaintiff.

Udipi,
Dated 1-9-65.

ಹನಿಗತೆ

ಜನನ—ಮರಣ

'ಹೇ ದೇವಾ, ನೀನೇ ರಚಿಸಿದ ರಚನೆಯನ್ನು ನಾಶಮಾಡಲೇಕೆ? ಸುಂದರ ಆಕೃತಿಗಳನ್ನು ನೀನು ರಚಿಸುವೆ. ಪ್ರಾಣಿ, ಪಕ್ಷಿ, ಜಲಚರಗಳನ್ನೂ, ಮಾನವರನ್ನೂ ಹೆಣ್ಣು-ಗಂಡು ಆದಿಯಾಗಿ ವೈವಿಧ್ಯಪೂರ್ಣವಾಗಿ ರಚಿಸುವೆ. ಅವುಗಳಿಗೆ ಸಾವನ್ನೂ ತರುವೆ ಏಕೆ, ಈ ನಾಶ?' ಭಕ್ತನಾದ ಮೋಸಸ್ ಕೂಗಿಕೊಂಡ.

'ನಿನ್ನ ಪ್ರಶ್ನೆಯು ನನ್ನ ಮೇಲಿನ ಅವಿಶ್ವಾಸ. ಅಪನಂಬಿಕೆ ಯಾ ನಿರ್ಲಕ್ಷ್ಯತೆಯಿಂದ ಹುಟ್ಟಿಲ್ಲ. ಹಾಗಾಗಿದ್ದರೆ ನಿನಗೆ ತಕ್ಕ ಬುದ್ಧಿ ಕಲಿಸುತ್ತಿದ್ದೆ. ಆದರೆ ನನ್ನ ವರ್ತನೆ, ಕ್ರಿಯೆಗಳಲ್ಲಡಗಿರುವ ರಹಸ್ಯವನ್ನು ಅರಿಯುವ ಉತ್ಸುಕತೆಯಿಂದ ಕೂಡಿದವನಾದ್ದರಿಂದ ಉತ್ತರಿಸುವೆನು. ಅಜ್ಞಾನಿಯಾಗಿರುವ ಮನುಷ್ಯನು ಜ್ಞಾನಸಂಪನ್ನನಾಗಲು ಪಕ್ವಗೊಳ್ಳುವ ದಾರಿ ಇದು. ತಿಳಿಗೇಡಿಯಾದವನು ತಿಳುವಳಿಕೆ ಪಡೆಯುವ ಹಾದಿ ಇದು. ಏಕೆಂದರೆ ಪ್ರಶ್ನೆ ಕೇಳುವದರಲ್ಲಿಯೇ ಉತ್ತರದ ಅರ್ಧ ಮತಿತಾರ್ಥ ಅಡಗಿರುತ್ತದೆ. ನೀನು ತಿಳುವಳಿಕೆಯುಳ್ಳವನಾಗಿ, ಇನ್ನೂ ತಿಳಿಯುವ ಹಂಬಲಿಕೆಯಿಂದ ಪ್ರಶ್ನಿಸಿರುವಿ. ಆದ್ದರಿಂದ ಮೋಸಸ್, ನೀನು ಒಂದು ಹಿಡಿ ಧಾನ್ಯವನ್ನು ಹಸನಾದ ಭೂಮಿಯಲ್ಲಿ ಬಿತ್ತಿ ಬೆಳೆಸು. ನಿನ್ನ ಪ್ರಶ್ನೆಗೆ ಅಲ್ಲಿಯೇ ಉತ್ತರ ದೊರೆಯುವದು' ಭಗವಂತನು ಹೇಳಿದನು.

ಭಗವಂತನು ಆಜ್ಞಾಪಿಸಿದಂತೆ ಮೋಸಸನು, ಧಾನ್ಯ ಬಿತ್ತಿ ಬೆಳೆಸಿದನು. ಹುಲುಸಾಗಿ ಬೆಳೆಬಂತು. ಅದು ಬೆಳೆದು ಹಣ್ಣಾದಾಗ ಮೋಸಸನು ಕತ್ತಿ ತೆಗೆದುಕೊಂಡು ಹೋಗಿ ಕುಯ್ಯತೊಡಗಿದನು. ಆಗ ಅಶರೀರವಾಣಿಯೊಂದು ಆತನಿಗೆ ಕೇಳಿಸಿತು.

"ನೀನೇ ಸಾಕಿ ಬೆಳೆಸಿದ ಧಾನ್ಯ ಹಣ್ಣಾಗಿ, ಪರಿಪಕ್ವಗೊಂಡು ನಿಂತಿರುವಾಗ ಅದನ್ನೇಕೆ ಕುಯ್ದು ನಾಶ ಮಾಡುತ್ತಿರುವೆ?"

ಮೋಸಸ್ ಉತ್ತರಿಸಿದ, "ಪ್ರಭೂ, ಅವುಗಳನ್ನು ಕುಯ್ದು ನಾಶಮಾಡಿ ಧಾನ್ಯವನ್ನೂ ಹುಲ್ಲನ್ನೂ ಬೇರ್ಪಡಿಸುವೆ. ಧಾನ್ಯ ಹುಲ್ಲಿನೊಂದಿಗೆ ಚೆನ್ನಾಗಿರದು. ಹುಲ್ಲು ಧಾನ್ಯದೊಂದಿಗೆ ಇರಲಾರದು. ಎರಡನ್ನೂ ಮಿಶ್ರ ಮಾಡುವದು ಬುದ್ಧಿವಂತಿಕೆಯಲ್ಲ. ಆದ್ದರಿಂದ ಅದನ್ನು ಬಡಿದು, ಜೊಳ್ಳು ಧೂಳನ್ನು ತೆಗೆದು ಇಡಬೇಕಾಗುತ್ತದೆ. ಹಾಗಿಟ್ಟರೇನೇ ಮುಂದಿನ ವರ್ಷ ಬೆಳೆ ಬಿತ್ತಲು ಸಹಾಯವಾಗುವದು."

"ಈ ಜ್ಞಾನ ನಿನಗೆ ಹೇಗೆ ಬಂತು. ಯಾವ ದೂರಾಲೋಚನೆಯಿಂದ ಬತ್ತ ಬಡಿದು ಹುಲ್ಲನ್ನೂ ಕಾಳನ್ನೂ ಬೇರ್ಪಡಿಸಲು ಈ ಕಣ ರಚಿಸಿದೆ?" ಭಗವಂತನು ಪ್ರಶ್ನಿಸಿದ.

"ಪ್ರಭೂ, ಈ ಬುದ್ಧಿಯನ್ನು ನೀನೇ ಕೊಟ್ಟೆ" ಮೋಸಸ್ ಎಂದ.

"ಹಾಗಾದರೆ ನಾನು ಸೃಷ್ಟಿಸಿದ ಪ್ರಪಂಚದ ಬಗ್ಗೆ, ಜಲಚರ, ಸ್ಥಾವರ ಜಂಗಮಗಳ ಬಗ್ಗೆ ಅದೇ ಮಾರ್ಗ ಅನುಸರಿಸುತ್ತಿರುವ ನನ್ನನ್ನೇಕೆ ಪ್ರಶ್ನಿಸುತ್ತಿರುವೆ? ಮಾನವರ ವ್ಯಕ್ತಿಗಾಗಿ ಏಕೆ ಕಳವಳಪಡುತ್ತಿರುವೆ?" ಭಗವಂತನು ಕೇಳಿದನು. ಮೋಸಸ್ ಮೌನ ಧರಿಸಿ ಆಲೋಚನಾಮಗ್ನನಾದನು.

ಟೆಲಿಗ್ರಾಂ: 'ಸುದರ್ಶನ'. ಸ್ಥಾಪಿತ: 1914. ಫೋನ್ ನಂಬ್ರ: 3428

ಜಗತ್ಪ್ರಸಿದ್ಧವಾದ **ಜೈಹಿಂದ್ ಹಂಚು**ಗಳನ್ನೇ

ಸದಾ ಉಪಯೋಗಿಸಿರಿ.

ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-1

ನಿರೀಕ್ಷಿಸಿರಿ!

ಎಂದಿನಂತೆ ನವಯುಗದ

ದೀಪಾವಳಿ ಸಂಚಿಕೆಯು

ಮನಮೆಚ್ಚುವಂತೆ ಪ್ರಕಟವಾಗಲಿದೆ.

ಹೆಚ್ಚು ಪುಟಗಳಿಂದ ಆಕರ್ಷಣೀಯವಾಗಿ ಪ್ರಕಟವಾಗುವ

ಈ ಸಂಚಿಕೆಯು

ಜಾಹೀರಾತಿಗೆ ಉತ್ತಮ ಮಾಧ್ಯಮವಾಗಿದೆ.

ಆಗಲೆ ಉಳಿದೀತು ಭಾರತವರುಷ!!

ಭಾರತಿ ಸುತರೆ ಎಂಟೆದೆಯ ವೀರರೆ|
ಮುಂದಾಗಿಯೇ ಜಾಗೃತರಾಗೋಣ|
ಶತ್ರುವಿನ ತಂತ್ರವು ದಿನದಿನಕೆ ಬೆಳೆದಿದೆ|
ಇನ್ನಾದರೂ ಜಾಗೃತರಾಗೋಣ||

ಮತ ಜಾತಿ ಒಳಜಗಳ ಮರೆಯೋಣ|
ಜನತೆಯಲಿ ಚೇತನವ ತುಂಬೋಣ|
ಅಧಿಕಾರ ಮಮಕಾರ ತೀರೋಣ|
ವೀರತೆಯ ಸಭ್ಯತೆಯ ಮೆರೆಸೋಣ||

ಮತಭೇದ ಪಥಭೇದ ಇನ್ನಿಲ್ಲವೆನ್ನೋಣ|
ವಿರಸವ ತರುವವರ ಶಿರವ ತರಿಯೋಣ|
ಮೇಲು ಕೀಳೆಂಬುವರ ದೂರ ಸರಿಸೋಣ|
ಸರ್ವರಲಿ ಜಾಗೃತಿಯ ಬೀಜ ಹರಡೋಣ||

ತಿಲಕರ ಬೋಸರ ದಿವ್ಯಾದರ್ಶ|
ಸ್ವಂತಂತ ನಡೆಸುವ ಶತ್ರು ಸಂಘರ್ಷ|
ಹಿಂದೆಜ್ಜೆ ಹಾಕದೆ ನುಗ್ಗಿದರೆ ಹರುಷ|
ಆಗಲೆ ಉಳಿದೀತು ಭಾರತವರುಷ||

ದೇಶದಿ ಭಾಷೆಯ ಗೊಂದಲ ಬೇಡ|
ಅಮರಗಾನ ಸುಧೆಯ ಸವಿಯೋಣ|
ಅರಿಮರ್ದನವೆ ಇಷ್ಟ ಜನಾರ್ಧನಗೆ|
ಅವನಿಂದನುಗ್ರಹವ ಪಡೆಯೋಣ||

—ಬಿ. ಭಾಸ್ಕರ ಪೈ, ಬ್ರಹ್ಮಾವರ.

ನಡೆ ಮುಂದೆ ವೀರ

ನಡೆ ಮುಂದೆ ನಡೆ ಮುಂದೆ
ನಡೆ ಮುಂದೆ ವೀರ |
ನಡೆ ಮುಂದೆ ಇಡು ಹೆಜ್ಜೆ
ಹಡೆ ಜಯವ ಧೀರ ||

ನಮ್ಮ ಈ ಭಾರತೆ
ವೀರರಧಿ ದೇವತೆ |
ಅಮ್ಮ ಜಗನ್ಮಾತೆ
ನಮ್ಮ ಹರಸುವಳಂತೆ ।

ಓ ಶೂರ ಏಕೆ ಭಯ
ಬಾ ವೀರ ನಮಗೆ ಜಯ ।
ಹಿಡಿದು ನಡೆ ಜಯ ಪಥವ
ನಡೆ ಮುಂದೆ ಧೀರ ॥

ಮೂಡು ಪಡು ದಕ್ಷಿಣದಿ
ವಾರಿಧಿಯು ಮೆರೆಯುತಿದೆ|
ಉತ್ತರದ ಹಿಮಗಿರಿಯು
ಮುಗುಳ್ನಕ್ಕು ನಲಿಯುತಿದೆ।

ಸಿರಿಬನದ ಸೊಬಗಿಂದ
ಹೊಳೆ ಬೆಳೆಯ ಬೆಳಗಿಂದ |
ಮೆರೆಸು ನಿನ್ನ ಕೀರ್ತಿ ಪಥ
ನಡೆಯು ಮುಂದೆ ಗೆಲ್ಲುತ ||

ಧರ್ಮ ಕರ್ಮ ತಪೋ ಭೂಮಿ
ಎನುತ ಮೆರೆದ ಭಾರತ ।
ಸಧರ್ಮ ಶಾಂತಿ ಸಮತೆಗೆಡದೆ
ಬೆಳಗುತಿರಲಿ ಸತತ ।

ಪಡೆದ ಜನನಿ ಸೇವೆಗಾಗಿ
ದುಡಿಯು ನೀನು ನಿರತ ।
ಭಾರತೀಯ ಹೃದ್ಗತ
ಸಮರ ಜಯವು ಶಾಶ್ವತ ||

—ಬಿ. ಎ. ಶೆಟ್ಟಿ, ಬೆಂಗಾನ್ತಿಮಾರ್.

ರಾಘವಾಂಕನ ಹರಿಶ್ಚಂದ್ರ

(ಆರನೇ ಪುಟದಿಂದ)

ಮ ಮೇಲೆ ಬಂದು, ರಾಜನಿಂದ ಶಿರಚ್ಛೇದನದ ಆಜ್ಞೆ ದೊರೆಯುತ್ತದೆ. ವೀರಬಾಹು ಹರಿಶ್ಚಂದ್ರನಿಗೆ ಆ ಕೆಲಸ ಒಪ್ಪಿಸುತ್ತಾನೆ.

ಚಂದ್ರಮತಿ ತನ್ನ ಅಂತಿಮ ಪ್ರಾರ್ಥನೆಯಲ್ಲಿ "ಆ ಹರಿಶ್ಚಂದ್ರರಾಯ ಸತ್ಯವೆರಸಿ ಬಾಳಲಿ ಮಗಂ ಮುಕ್ತನಾಗಲಿ ...." ಎಂದು ಹೇಳಿದಾಗ ಹರಿಶ್ಚಂದ್ರನ ಹೃದಯ ತತ್ತರಿಸಿ ಹೋಗುತ್ತದೆ. ಸ್ತ್ರೀ ಹತ್ಯೆ, ಅದರಲ್ಲಿಯೂ ತನ್ನ ಧರ್ಮಪತ್ನಿಯನ್ನೇ ಕೈಯಾರ ಕೊಲ್ಲುವ ಸಂದರ್ಭವನ್ನು ತಂದೊಡ್ಡಿರುತ್ತದೆ ವಿಧಿ. ಹರಿಶ್ಚಂದ್ರನ ಹೃದಯ ನಿರ್ಮಲ. ಆದರೆ ಅವನದು ಅಚಲ ನಿರ್ಧಾರ. ತ್ರಿಕರಣಪೂರ್ವಕವಾಗಿ ಸತ್ಯವನ್ನೇ ನಂಬಿದ್ದ ಹರಿಶ್ಚಂದ್ರ ಕಡೆಗೆ ಸ್ತ್ರೀ ಹತ್ಯೆಗೂ ನಿಲ್ಲುತ್ತಾನೆ. ವಿಶ್ವಾಮಿತ್ರರ ಹಂಚಿಕೆ ಫಲಿಸಲಿಲ್ಲ. ಓಡಿಬಂದು ಪ್ರಲೋಭ ಒಡ್ಡುತ್ತಾರೆ. 'ನನ್ನ ಕುವರಿಯರನ್ನು ಮದುವೆಯಾಗು, ಸಮಸ್ತ ಸುಖ, ಸಂತೋಷ, ಸಿರಿ ಕೊಡುವೆನೆಂದು". ಹರಿಶ್ಚಂದ್ರ ಗುರು ವಿಶ್ವಾಮಿತ್ರರಿಗೆ ಒಂದೇ ಸಾಲಿನ ಉತ್ತರ ಕೊಡುತ್ತಾನೆ— "ಸತ್ಯವನು ಬಿಟ್ಟರೆ ನೆನಿಸಿದಡೆ ನಾಕು" ಎಂದು. ಲೋಕವೇ ತಲೆ ಬಾಗಬೇಕು ಅಂತಹ ಅಮೃತವಾಣಿ ಆ ಮಹಾನುಭಾವನದು.

ವಿಶ್ವಾಮಿತ್ರರು ಪ್ರಯತ್ನದಲ್ಲಿ ಪರಾಜಿತರಾಗಲೇ ಬೇಕಾಗುತ್ತದೆ. ಹರಿಶ್ಚಂದ್ರನ ಜೀವನದಲ್ಲಿ ಬಂದ ಕಡೆಯ ದುರಂತ ದೃಶ್ಯ ಕಂಡು ಕಣ್ಣೀರು ಕರೆಯಬೇಕಾಗುತ್ತದೆ. ಹರಿಶ್ಚಂದ್ರ ಖಡ್ಗವನ್ನೆತ್ತಿ ಚಂದ್ರಮತಿಯ ಕೊರಳಿಗೆ ಹೊಡೆಯುತ್ತಾನೆ, ಕಾಶೀರಮಣ ಪತ್ನೀಸಮೇತನಾಗಿ ಪ್ರತ್ಯಕ್ಷನಾಗುತ್ತಾನೆ. ದೇವತೆಗಳೂ ಗಂಧರ್ವರು, ವಶಿಷ್ಠರಾದಿಯಾಗಿ ಮುನಿಗಳು ನಿಲ್ಲುತ್ತಾರೆ. ಸತ್ಯಸ್ವರೂಪನಾದ ಶಿವ ಎಲ್ಲರನ್ನೂ ಹರಸುತ್ತಾನೆ. ಹರಿಶ್ಚಂದ್ರ ಸತ್ಯ ನಂಬಿ ಗೆಲ್ಲುತ್ತಾನೆ.

ಇದಿಷ್ಟು ಕಥೆಯನ್ನು ರಾಘವಾಂಕ ತನ್ನ ಪ್ರತಿಭಾಪೂರ್ಣ ಕವಿತಾ ಶಕ್ತಿಯಿಂದ ಮನಮುಟ್ಟುವಂತೆ ನಿರೂಪಿಸಿದ್ದಾನೆ. ರಸಮಯ ಸನ್ನಿವೇಶಗಳು, ಘಟನೆಗಳು ಓದುಗರ ಹೃದಯವನ್ನು ಸೆರೆ ಹಿಡಿಯುತ್ತಲೆ ರಾಘವಾಂಕನ ಶೈಲಿ-ಅಪೂರ್ವವಾದ ಶೈಲಿ. ಕವಿ ಬೇರೊಬ್ಬರ ಶೈಲಿಯನ್ನು ಅನುಕರಿಸಲಿಲ್ಲ ಅವನ ಶೈಲಿಯನ್ನು ಅನುಕರಿಸಲೂ ಸಾಧ್ಯವಿಲ್ಲ. ಹರಿಶ್ಚಂದ್ರ ಕಾವ್ಯವನ್ನು ಓದಲಾರಂಭಿಸಿದರೆ ಕಣ್ಣಿಗೆ ಕಟ್ಟುವಂತಹ ಪಾತ್ರಗಳು. ಸನ್ನಿವೇಶ ಘಟನೆಗಳು ತೋರಿ ಬರುತ್ತವೆ.

ರಸ, ರೀತಿ, ಕಾವ್ಯ ಶಕ್ತಿಗೆ ಎಲ್ಲೂ ಕುಂದು ಬಂದಿಲ್ಲ. ಹರಿಶ್ಚಂದ್ರ ಚಂದ್ರಮತಿ, ವಿಶ್ವಾಮಿತ್ರರ ಪಾತ್ರಗಳು ಅಸದೃಶ ಪಾತ್ರಗಳು. ಅಲ್ಲದೆ ಶಾಂತಿ ಗಾಂಭೀರ್ಯವೇ ಮೈವೆತ್ತು ನಿಂತ ವಶಿಷ್ಠರ ಮೂರ್ತಿಯನ್ನು ಮರೆಯುವಂತಿಲ್ಲ.

ಚಂದ್ರಮತಿಯ ಪಾತ್ರ ಮರೆಯಲಾಗದ ಪಾತ್ರ. ಮಹಾರಾಣಿಯಾಗಿ ಸುಖದ ಸುಪ್ಪತ್ತಿಗೆಯಲ್ಲಿದ್ದ ಚಂದ್ರಮತಿ ಪಡಬಾರದ ಕಷ್ಟ ಪಡುತ್ತಾಳೆ. ಆದರೆ ಆಕೆಗನುಗುಣವಾದ ಸತ್ಯ ನಿಷ್ಠೆ ಅಳಿಯದು. ಒಮ್ಮೆಯೂ ಆಕೆಯ ಸತ್ಯ ಸಂಕಲ್ಪ ಬದಲಾಗದು. ಆದರ್ಶ ಪತ್ನಿಯಾಗಿ, ಗೃಹಿಣಿಯಾಗಿ, ಸ್ತ್ರೀಯಾಗಿ ಕಂಗೊಳಿಸುತ್ತಾಳೆ. ಹರಿಶ್ಚಂದ್ರನ ಮನ ಒಂದೆರಡು ಬಾರಿ ಹೊಯ್ದಾಡಿದಾಗಲೂ ಹಿಂದೂ ಮಹಿಳೆಗೆ ಅನುಗುಣವಾದ ಆದರ್ಶ ನುಡಿ ಆಕೆಯ ಬಾಯಿಂದ ಬರುತ್ತದೆ. 'ನನ್ನ ಹರಣಕ್ಕೆ ಕೇಡು ಬಂದರೆ ಬರಲಿ ಮಾತಿಗೆ ಸತ್ಯವಂ ಬಿಟ್ಟು ಕೆಡದಿರವನೀಶ" ಎಂದು ಚಂದ್ರಮತಿ ಪತಿಗೆ ಹೇಳುತ್ತಾಳೆ. ಇದು ಹೃದಯ ತುಂಬುವ ಮಾತು.

ಸಾಹಿತ್ಯ ಸರಸ್ವತಿಯ ಪರಮ ಭಕ್ತನಾದ ರಾಘವಾಂಕನದು ಅಪಾರ ಕವಿತಾ ಶಕ್ತಿ. ಅನನ್ಯ ಭಕ್ತಿ, ಶ್ರದ್ಧೆ, ವಿಶ್ವಾಸಗಳಿಂದ ನಡೆಸಿದ ಅವನ ಸೇವೆ ಸಾರ್ಥಕವಾಗಿದೆ. ಬಳಸಿರುವ ಪದ ವೈಖರಿ, ಸರಳ ಭಾಷೆ—ಓದುಗನ ಹೃದಯಕ್ಕೆ ಆನಂದ ನೀಡುವ ದೇವಗಂಗೆ.

ಹರಿಶ್ಚಂದ್ರ ರಾಜಾಧಿರಾಜ. ಸಾಮ್ರಾಜ್ಯದ ಅಧಿಪತಿ. ಅಂತಹ ರಾಜ ವಿಧಿಯ ನಾಟಕದಲ್ಲಿ ವಿಚಿತ್ರ ವೇಷ ತಾಳಿ ಕೊನೆಗೆ ಚಂಡಾಲನಾಗಿ ಸ್ಮಶಾನದ ಕಾವಲುಗಾರನಾಗ ಬೇಕಾಯಿತು. ಇದೊಂದು ರುದ್ರ ಭೀಕರ ದೃಶ್ಯ. ಹರಿಶ್ಚಂದ್ರನ ದೊರೆತನದ—ಸ್ಮಶಾನದ ಕಾವಲಿನ ಬಾಳುವೆಯ ಸಾಮರಸ್ಯ ಹೇಗಿತ್ತು ಎಂಬುದನ್ನು ಕವಿ ಹೃದಯಂಗಮವಾಗಿ ವರ್ಣಿಸಿದ್ದಾನೆ.

"ವರ ವಾರಣಾಸಿ ಮಧ್ಯವೆಲಾಳ ದೇಶವ, ಜ್ವರಿಯ ಕಾಶೀಪುರವಯೋಧ್ಯೆ ಸ್ಮಶಾನಧರೆ, ಯರಮನೆ ಪ್ರೇತಗಾಹಿನ ತವಗ ಮಣಿಪೀಠ ಪರಿಣಾಮವಾರೋಗಣೆ"

ಪರಮಧೃತಿ ಚದುರಂಗ ಸೇನೆ ಸಂಬಳಿಗೋಲು, ಕರಟ್ಟು ಸತ್ಯ ಭಂಡಾರ ಪತಿಯೊಳ್ಳೆ ಭಾಸುರತರ ಕ್ಷತ್ರ ಧರ್ಮಂಗಳಿಂದೇ ರಾಣುತಿರ್ದನು ಹರಿಶ್ಚಂದ್ರನು"

ಕವಿಯ ಕವಿತಾ ಶಕ್ತಿಗೊಂದು ಉತ್ತಮ ಉದಾಹರಣೆ ಮೇಲಿನ ಪದ್ಯ.

ಕಷ್ಟ ಬಂದಾಗ ಹರಿಶ್ಚಂದ್ರನ ಹೃದಯ ಕುಗ್ಗಲಿಲ್ಲ; ಸಿರಿ ಬಂದಾಗ ಹಿಗ್ಗಲಿಲ್ಲ. ಮಳೆಗಾಳಿ ಬಿಸಿಲು ಗುಡುಗು ಸಿಡಿಲುಗಳಿಗೂ ಅಂಜದೆ ಅಚಲವಾಗಿ ನಿಂತ ಗಿರಿಯಂತೆ ಹರಿಶ್ಚಂದ್ರನದೂ ಅಚಲ ನಿರ್ಧಾರ, ಸತ್ಯನಿಷ್ಠೆ. ಹರಿಶ್ಚಂದ್ರನ ಸಂಯಮ, ಸರಳ ಭಾವನೆ, ಶಾಂತಿ ಸೂರ್ಯಪ್ರಕಾಶದಷ್ಟು ತೇಜೋಪೂರ್ಣ. ಕವಿ ತನ್ನ ಅಂತರಂಗದ ಭಾವನೆಯನ್ನು ತೊಡಕಿಲ್ಲದೆ ಬಿಚ್ಚಿ ತೋರಿಸಿದ್ದಾನೆ.

ತನಗೆ ಗೋಚರವಾದ ಶಕ್ತಿಯನ್ನು ಸಂಗ್ರಹಿಸಿ ಓರ್ವ ವ್ಯಕ್ತಿಯಲ್ಲಿ ತುಂಬಿ ಆ ವ್ಯಕ್ತಿಗೆ ಹರಿಶ್ಚಂದ್ರ ಎಂಬ ಹೆಸರಿಟ್ಟು ನಿಲ್ಲಿಸಿದ್ದಾನೆ ಕವಿ ರಾಘವಾಂಕ.

ಹರಿಶ್ಚಂದ್ರನ ಹಿರಿಮೆಗೆ ಕಾರಣರಾದ ವ್ಯಕ್ತಿಗಳಿಬ್ಬರು. ಮೊದಲಿಗೆ ಚಂದ್ರಮತಿ. ಆಕೆಯ ಸತ್ಯಾಭಿಮಾನ, ಶಾಂತ ಭಾವ, ಸುಶೀಲತೆ ಆದರ್ಶ ನಾರಿಯ ಗುಣಗಳು. ಹರಿಶ್ಚಂದ್ರನನ್ನು ಪರೀಕ್ಷಿಸಿ ಅವನ ಸತ್ಯ ನಿಷ್ಠೆಯನ್ನು ಲೋಕಕ್ಕೆ ಸಾರಿದ್ದ ಮತ್ತೊಬ್ಬ ಮಹಾಪುರುಷ ವಿಶ್ವಾಮಿತ್ರ. ಈ ಮುನಿಯ ಸಾಹಸದಿಂದಲೇ ಹರಿಶ್ಚಂದ್ರನ ಸತ್ಯಪ್ರಿಯತೆ ಲೋಕಕ್ಕೆ ಗೋಚರವಾದುದು.

ಸತ್ಯವೇ ನಿತ್ಯವೆಂದ ನಂಬಿದ ಮಹಾನುಭಾವ ಹರಿಶ್ಚಂದ್ರ. ಹರಿಶ್ಚಂದ್ರ ನಂಬಿದ ಸತ್ಯವೇ ಅವನನ್ನು ತಳೆಗಾದ ಶಕ್ತಿ. ಕೊನೆಗೆ ಕವಿ 'ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರ' ಎಂಬ ನಿತ್ಯ ಸತ್ಯವನ್ನು ಸಾರುತ್ತಾನೆ.

'ಹರಿಶ್ಚಂದ್ರ ಕಾವ್ಯ' ಕನ್ನಡ ಸಾಹಿತ್ಯ ಭಂಡಾರಕ್ಕೆ ರಾಘವಾಂಕನ ಅಮೂಲ್ಯ ಕೊಡುಗೆ. ಈ ಸಾಹಿತ್ಯದ ತೇಜಸ್ಸಿನಿಂದ ಕನ್ನಡ ಸಾಹಿತ್ಯ ಸುಂದರವಾಗಿದೆ; ಶ್ರೀಮಂತವಾಗಿದೆ.

ಸಮುದ್ರವನ್ನು ಬಾಯ್ತುಂಬ ಹೊಗಳಬಹುದು; ಆದರೆ ಕಾಲ ಮಾತ್ರ ಒಡದ ನೆಲದಲ್ಲಿ ಗಟ್ಟಿ ನಿಂತಿರಬೇಕು.

o o o

ಬೇರೆ ಯಾವ ಕ್ಷೇತ್ರದಲ್ಲೂ ದಕ್ಷತೆಯಿಂದ ದುಡಿಯಲಾರದವನು ಸಾರ್ವಜನಿಕ ಸೇವಕನಾಗುತ್ತಾನೆ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

S.C. 73/65.

ಸರಸ್ವತಿಯಮ್ಮ — ವಾದಿ

ಮತ್ತು

ದೂಗು ಪೂಜಾರಿ ಸಹಾ — ಪ್ರತಿವಾದಿ

3ನೇ ಪ್ರತಿವಾದಿ ನೇಮು ಪೂಜಾರಿ, ಪಕೀರ ಪೂಜಾರಿ ಮಗ, ಅರಂಬೋಡಿ ಗ್ರಾಮದ ಬೈಲ್‌ಬರಿ ಎಂಬಲ್ಲಿರುವವ—

ವಾದಿಯು ಪ್ರತಿವಾದಿರ ಮೇಲೆ ಮಾಡಿದ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 30-9-1965ಕ್ಕೆ ಇಟ್ಟಿರುತ್ತದೆ. ಆ ದಿವಸ ನೀವು ಸ್ವತಹಾ ಯಾ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವಾಯ್ ಮಾಡಿ ಮುಂದಿನ ತನಿಖೆಯಿಂದ ತೀರ್ಮಾನಿಸಲಾಗುವುದು ಎಂಬುದಾಗಿ ಕೋರ್ಟಿನ ಹುಕುಂ ಪ್ರಕಾರ ಮಾಡಿದ ನೋಟೀಸು.

(*Sd.*) **N. J. Kadamba,**
Advocate for Plaintiff.

ಬೆಳ್ತಂಗಡಿ, 27.8.65.

NAVAYUGA
Deepavali Special 1965
ANNOUNCEMENT

HAPPY DEEPAVALI, the great Indian festival of lights, is fast approaching. Rightly do the people rejoice on this day, what with hundred illuminations at home and in the market place.

NAVAYUGA, the premier Kannada Weekly, shares with the people this joy and serves them with a SPECIAL DEEPAVALI ISSUE to illumine their minds. It will contain rich food for thought and entertainment for the masses. Thousands of Kannada people read this issue with relish.

It would be a happy idea for you to use the Navayuga Deepavali Special, as a medium for advertising your goods; for, Navayuga is able to carry your message to every home.

Kindly send your advertisement before 15—10—65.

ADVERTISEMENT RATES

Full Page	... Rs. 200/-	Back Cover Page	.. Rs 500/-
Half Page	... Rs 100/-	Inside 1st Cover Page	... Rs. 400/-
Quarter Page	... Rs. 50/-	Inside 2nd Cover Page	... Rs 300/-

MECHANICAL DATA

Paper Size ... 15" × 10" (37.5 Cm. × 25 Cm.)
Size of type page 13" × 8" (32.5 Cm × 20 Cm.)

Date of publication 21—10—1965

ನೀವು ಜಗಳಕ್ಕೆ ನಿಂತೀರಾ?

(ಐದನೇ ಪುಟದಿಂದ)

ಜಗಳದಲ್ಲಿ ಹಲವು ವಿಧ. ಬಾಯಿ ಮಾತಿನ ಜಗಳ ಮತ್ತು ವ್ಯಕ್ತಿಗಳನ್ನು ಉಪಯೋಗಿಸಿ ಹೂಡುವ ಜಗಳ. ಇವುಗಳು ಬಹು ಮುಖ್ಯವಾದವುಗಳಾಗಿವೆ. ಬಾಯಿ ಮಾತಿನ ಜಗಳವೇ ಮುಂದೆ ಬೆಳೆದು ಮುಂದಿನ ಹಂತವನ್ನು ತಲಪುತ್ತದೆ. ಅಲ್ಲಿಯೇ ಮುರುಟಿ ಹಾಕಿದರೆ ಏನೂ ಅನಾಹುತವಿಲ್ಲ. ಇಲ್ಲದಿದ್ದರೆ ಮುಂದಿನ ಅನಾಹುತಗಳು ಹೇಳಲಸಾಧ್ಯ. ಬಾಯಿ ಮಾತಿನ ಜಗಳದಲ್ಲೂ ಹಲವು ವಿಧದವು ಇವೆ ಸಣ್ಣ ತರದ ಜಗಳ, ಮತ್ತು ದೊಡ್ಡ ತರದ ಜಗಳಗಳು ಇವುಗಳ ಮುಖ್ಯವಾದ ಶಾಖೆಗಳಾಗಿವೆ ದೊಡ್ಡ ತರದ ಜಗಳಗಳು ಹೆಚ್ಚಾಗಿ ಸಾರ್ವಜನಿಕ ರಸ್ತೆಗಳಲ್ಲಿ ಕಾಣಸಿಗುತ್ತವೆ. ಸಣ್ಣ ತರದ ಜಗಳಗಳು ಬರೀ ಮನೆಯಲ್ಲಿ. ಮನೆಯ ಜಗಳವಾದರೂ ಕೆಲವೊಮ್ಮೆ ಶಾಂತವಾಗುವ ಸಂಭವವಿದೆ. ಅದುದರಿಂದಲೇ "ಗಂಡ ಹೆಂಡಿರ ಜಗಳ........" ಎಂದು ಗಾದೆಯಿದೆ. ಆದರೆ ರಸ್ತೆಯ ಜಗಳಗಳು ಪೆಟ್ಟು ಬೀಳದ ವಿನಃ ನಿಲ್ಲುವ ಸಂಭವ ಬಹಳ ಕಡಿಮೆ. ಹಾಗೆಯೇ ಪೆಟ್ಟು ಬಿದ್ದರೆ ಕೆಲವೊಮ್ಮೆ ಜಗಳದ ಇತಿಶ್ರೀಯಾಗುತ್ತದೆ. ಆದರೆ ಹೆಚ್ಚಾಗಿ ಅಂತಹ ಜಗಳಗಳು ಬೆಳೆದು ಇನ್ನೂ ಮುಂದಿನ ಹಂತಕ್ಕೆ ಹೋಗುವ ಸಂಭವ ಹೆಚ್ಚಿದೆ. ಅದುದರಿಂದ ಜಗಳದ ಆದಿ ಎಲ್ಲಿ ಎಂದು ತಿಳಿಯುವುದಿಲ್ಲವೋ ಹಾಗೆಯೇ ಜಗಳದ ಅಂತ್ಯ ಎಲ್ಲಿ ಎಂದು ತಿಳಿಯಲಾಗುವುದಿಲ್ಲ.

ಲೋಕದಲ್ಲಿ ಜಗಳ ಪ್ರಿಯರ ಒಂದು ಗುಂಪು ಬೇರೆಯೇ ಇದೆ. ಆದರೆ ಹೆಚ್ಚಿನ ಜನರು ತಮ್ಮ ಜಗಳಗಂಟತನವನ್ನು ಹೊರ ತೋರಿಸಲು ಎಂದಿಗೂ ಇಚ್ಛಿಸುವುದಿಲ್ಲ ಕೆಲವರು ಎಲ್ಲಿ ಸಿಕ್ಕಿದರಲ್ಲ ತಮ್ಮ ಪೌರುಷವನ್ನು ತೋರಿಸಲು ಯತ್ನಿಸುತ್ತಾರೆ. ಅಂತಹವರು ನಮ್ಮ ದೇಶದ ಜೀವಾಳ ಎಂದೂ ಹೇಳಬಹುದು. ಸಣ್ಣ ಮಗುವಿನಿಂದ ಹಿಡಿದು ಮುದುಕರ ವರೆಗೆ ಎಲ್ಲರೂ ಒಂದಲ್ಲ ಒಂದು ಕಾರಣಕ್ಕಾಗಿ ಜಗಳವಾಡುತ್ತಲೇ ಇರುತ್ತಾರೆ.

ಜಗಳವಾಡದೆ ಇರಲು ಸಾಧ್ಯವಿಲ್ಲವೇ ಎಂದು ಕೇಳಬಹುದು. ಜಗಳವಾಡದೆ, ಅದನ್ನು ಬಿಡುವುದೆಂದರೆ ಕಾರಣವಿಲ್ಲದೆ ಆತ್ಮಹತ್ಯೆ ಮಾಡಿಕೊಂಡಂತೆ ಎಂದು ನನ್ನ ಭಾವನೆ. ಜಗಳವನ್ನು ಬಿಡಲು ಯಾರೂ ಇಚ್ಛಿಸುವುದಿಲ್ಲ. ಸರಾಗವಾಗಿ ಸಿಗರೇಟು ಸೇದುತ್ತಿದ್ದವನು ಸಿಗರೇಟು ಬಿಟ್ಟ ಹಾಗೆ ಜಗಳದ ಪರಿಸ್ಥಿತಿ.

ಹೆಂಗಸರು (ದಯವಿಟ್ಟು ಕ್ಷಮಿಸಿ) ಜಗಳದ ಮೂಲ ಕಾರಣ, ಅಂದರೆ ಆದಿಶಕ್ತಿ ಎನ್ನಬಹುದು. ಅದುದರಿಂದ ಜಗಳದ ಮೂಲ ಸಾಧಾರಣ ತಿಳಿದಂತಾಯಿತು. ಅವರು ಕಾರಣವಿಲ್ಲದೇನೇ ಜಗಳವನ್ನು ಹುಟ್ಟಿಸ ಬಲ್ಲರು. ಅದನ್ನು ಕೊನೆಗಾಣಿಸಲೂ ಬಲ್ಲರು. ಬಹುಶಃ ಮಹಾಭಾರತವನ್ನು ಬರೆದ ಕವಿ ಅಥವಾ ಶೇಕ್ಸ್‌ಪಿಯರ ಇವರು ಹೆಂಗಸರೊಳಗಿನ ಜಗಳವನ್ನು ಕಣ್ಣಾರೆ ಕಂಡಿರಲಿಕ್ಕಿಲ್ಲ. ನೋಡಿದ್ದರೆ ಖಂಡಿತವಾಗಿಯೂ ಮಹಾಭಾರತವು ಮೂಲೆ ಪಾಲಾಗುತ್ತಿತ್ತು. ಅಷ್ಟೆಲ್ಲ ಕೃತಿಗಳನ್ನು ಬರೆಯುವ ಅವಶ್ಯಕತೆಯು ಶೇಕ್ಸ್‌ಪಿಯರನಿಗೆ ಇರುತ್ತಿರಲಿಲ್ಲ. ಹೆಂಗಸರೊಳಗಿನ ಜಗಳವನ್ನು ಕಂಡರೆ, ಬಾಯಿಯಿಂದ ಹೊರ ಬರುವ ಮಾತುಗಳನ್ನು ಕೇಳಿದರೆ ಖಂಡಿತವಾಗಿ ಒಂದು ದೊಡ್ಡ ಗ್ರಂಥವನ್ನು ಬರೆಯಬಹುದು. ಎಷ್ಟೇ ಗುಟ್ಟಿನ ಅಥವಾ ತಿಳಿಯದ ಸಂಗತಿ ಇರಲಿ, ಹೆಂಗಸರ ಜಗಳದಲ್ಲಿ, ಅವುಗಳೆಲ್ಲ ಕಂಡಿತವಾಗಿ ಎದುರು ಬರುತ್ತವೆ. ಗಂಡಸರೂ ಏನೂ ಅಲ್ಲವೆಂದಿಲ್ಲ. ಆದರೆ ಹೆಂಗಸರಲ್ಲಿ ಆ ಗುಣ ಒಂದು ತೂಕ ಹೆಚ್ಚಿದೆ. ಬಹುಶಃ ದೈವದತ್ತವಾದ ವರವಾಗಿರ ಬೇಕು.

ಜಗಳವನ್ನು ತಡೆಗಟ್ಟಲು ಉಪಾಯವೇ ಇಲ್ಲವೇ? ಮಲೇರಿಯಾ ನಿರ್ಮೂಲನ, ಪ್ಲೇಗು ನಿರ್ಮೂಲನಗಳಂತೆ ಇದು ಮದ್ದಿನಿಂದಾಗುವಂತಹ ಕೆಲಸವಲ್ಲ! ಇದಕ್ಕೆ ಇರುವುದಾದರೆ ಒಂದು ಮದ್ದು. ಎಲ್ಲರೂ, ವಿಷ....ಇನ್ನು ಮುಂದೆ ಹೇಳಲಾರೆ ಕಾರಣವೇನೆಂದರೆ ನಾನೂ ಸಹ ತಗೆದುಕೊಳ್ಳಬೇಕಾಗುತ್ತದೆ. ಲಂಚ ನಿರ್ಮೂಲನದಂತೆ (ಅದು ಅಯಶಸ್ವಿಯಾದರೂ) ಕಡ್ಡಾಯವಾದ ನಿಯಮಗಳನ್ನು ಜ್ಯಾರಿಗೊಳಿಸಿ ಜಗಳ ಮಾಡಿದರೆ ಇಂತಹ ರೀತಿಯ ಜಗಳಕ್ಕೆ ಇಂತಹ ಶಿಕ್ಷೆ ಎಂಬಿತ್ಯಾದಿ ರೀತಿಗಳಲ್ಲಿ ಜಗಳಗಳ ವಿಷಯವಾಗಿಯೇ ಕಾನೂನು ಜ್ಯಾರಿಗೊಳಿಸಿದಲ್ಲಿ ಜಗಳ ನಿಲ್ಲುವ ಸಂಭವವಿದೆ. ಆದರೆ ಒಂದು ಭೀತಿ. ಮುಷ್ಕರ ಹಾಗೂ ಸತ್ಯಾಗ್ರಹಗಳು ಹೆಚ್ಚಿರುವ ಈ ಕಾಲದಲ್ಲಿ ಅಂತಹ ಕಾನೂನಿಗೆ ಬದ್ಧರಾಗಿರಲು ಕೆಲವರು ಒಪ್ಪಲಿಕ್ಕಿಲ್ಲ, ಕಡ್ಡಾಯ ಪಡಿಸಿದಲ್ಲಿ ಅದಕ್ಕೋಸ್ಕರ ಜಗಳವಾಡಲೂ ಬಹುದು. ಇದು ಬಹಳ ಕಷ್ಟದ ಪ್ರಸಂಗ. ಅದಕ್ಕೆ ಬೇರೆಯೇ ಕಾನೂನು ತಯಾರಿಸಿದರೆ ಸರಿ. ಇದು ಹನುಮಂತನ ಬಾಲದಂತೆ ಉದ್ದುದ್ದವಾಗಿ ಲೆಕ್ಕದ ಗಂಧಗಾಳಿಯೇ ಇಲ್ಲದ ವಿದ್ಯಾರ್ಥಿಯು ಬಹಳ ಕಷ್ಟದ ಲೆಕ್ಕವೊಂದನ್ನು ಪ್ರಾರಂಭಿಸಿ ಅರ್ಧದಲ್ಲಿಯೇ ಬಿಟ್ಟ ಪರಿಸ್ಥಿತಿಯುಂಟಾಗಬಹುದು. ಅದೂ ಕಷ್ಟ. ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ, ಉದಾಹರಣೆಗೆ ರೈಲುಗಳಲ್ಲಿ ಸಿನೇಮಾ ಥಿಯೇಟರುಗಳಲ್ಲಿ, ಬಸ್ಸುಗಳಲ್ಲಿಯೂ ಅಂತಹ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಜಗಳ ಮಾಡಿದಲ್ಲಿ ಶಿಕ್ಷೆಯೆಂದು ಕಾನೂನು ಜ್ಯಾರಿ ಮಾಡಬಹುದು. ಆದರೆ ಸಹ ಬಹಳ ಕಷ್ಟ. ನಾವೇನು ಹಣ ಕೊಡುವುದಿಲ್ಲವೇ? ಏನು ಪುಕ್ಕಟೆ ಬರುತ್ತಿದ್ದೇವೆಯೇ!" ಎಂದು ಅದಕ್ಕೂ ಜಗಳ ಹೂಡಬಹುದು.

'ಜಗಳವು ಗಾಳಿಯಂತೆ, ಎಲ್ಲೆಲ್ಲಿಯೂ ಇದೆ ಯಾರಲ್ಲಿಯೂ ಇದೆ. ಗಾಳಿಗೆ ಒಂದು ಮಿತಿ ಇದೆ. ಆದರೆ 'ಜಗಳಕ್ಕಿಲ್ಲ' ಜಗಳದ ನಿಘಂಟಿನಲ್ಲಿ ಪರಿಮಾಣ ಮತ್ತು ಗುಣ ಎಂಬ ಎರಡು ಶಬ್ದಗಳು ಎಲ್ಲಿಯೂ ಕಾಣಸಿಗುವುದಿಲ್ಲ ಪರಿಮಾಣ ಹೇಗೂ ಇಲ್ಲವೆಂದು ಹಿಂದೆ ನೋಡಿದ್ದೇವೆ. ಗುಣವೂ ಇಲ್ಲ. ಯಾರೊಡನೆಯೂ ಆಗುತ್ತದೆ. ಎಂತಹದೇ ತರದ ಮನುಷ್ಯನಿಲ್ಲಿ ಯಾವುದೇ ಭಾಷೆಯಲ್ಲಾಗಲಿ ಜಗಳವು ಇದ್ದೇ ಇರುತ್ತದೆ. ಆದರೂ ಭಾಷೆಗಿಂತ ಮುಖ್ಯ ಮನುಷ್ಯರು ನೋಡಿ. ಉದಾಹರಣೆಗಾಗಿ ನನ್ನ ತಮ್ಮನೊಬ್ಬನಿದ್ದಾನೆ. ಆತನಿಗೆ ಜಗಳವೆಂದರೆ ಕುಲ ದೇವರಿಗಿಂತ ಮೇಲು. ನನ್ನ ತಮ್ಮನನ್ನು ತೆಗಳಿ ನನ್ನನ್ನು ಹೊಗಳಿಕೊಳ್ಳುತ್ತಿದ್ದೇನೆಂದು ಭಾವಿಸಬೇಡಿ. ನನ್ನ ತಮ್ಮನಂತಹವರು ಅಸಂಖ್ಯಾತರಿದ್ದಾರೆ. ಎಷ್ಟೋ ಜನರಿಗೆ ಜಗಳವೇ ಜೀವಾಳವಾಗಿರಲಿಕ್ಕೆ ಸಾಕು. ಅವರನ್ನು ನಾವು ಬಯ್ಯಬಾರದು. ಕಾರಣ ಅದು ಅವರವರ ಹಣೆಬರಹ.

"For every action there is a.........." ಏನೋ ನನಗೆ ಮುಂದೆ ತಿಳಿಯದು. ಇಂತಹ ಕಷ್ಟತರವಾದ ಗಾದೆಗಳನ್ನೆಲ್ಲ ಯಾರು ಹುಟ್ಟಿಸಿದರೋ! ಅಂತಹವರನ್ನು ದೇವರು ಯಾಕೆ ಹುಟ್ಟಿಸಿದರೋ; ಸುಮ್ಮಸುಮ್ಮನೆ ನಮ್ಮಂಥವರಿಗೆ ಕಷ್ಟ ಕೊಡಲಿಕ್ಕೆ ಅಂತಹ ಗಾದೆಗಳನ್ನು ಸೃಷ್ಟಿಸಿದ್ದಾರೆ. ಅವರು ಎಲ್ಲಿಗಾದರೂ ಹೋಗಲಿ. ಅಂದ ಹಾಗೆ ಆ ಗಾದೆಯ ಮಾತು ಇಲ್ಲೇಕೆ ಬಂತು? ಹಾಂ, ನೋಡಿ. ನಾವು ಜಗಳವನ್ನು ತಡೆಗಟ್ಟಲು ಎಷ್ಟು ಪ್ರಯತ್ನಿಸುತ್ತೇವೋ ಅಷ್ಟೇ ಅದರ ಫಲಿತಾಂಶಗಳು ವಿಪರ್ಯಾಸಗಳಾಗುತ್ತವೆ ಎಂದು ನಾನು ಹೇಳ ಹೊರಟದ್ದು. ಅವರು ಇದನ್ನು ಓದಿದರೆ ಖಂಡಿತವಾಗಿ ನನ್ನೊಡನೆ ಜಗಳಕ್ಕೆ ಬರಬಹುದು. ಅವರು ಇಂತಹ ಲೇಖನಗಳನ್ನೆಲ್ಲ ಕಂಡಿತವಾಗಿ ಓದಲಾರರು. ಏಕೆಂದರೆ ನೀವು (ನಿಮ್ಮನ್ನು ತೆಗಳುವುದಲ್ಲ) ಇದನ್ನು ಓದುವಾಗ ಅನಾಸಿನ್ ಅಥವಾ ಆಸ್ಪ್ರೋ ಹಿಡಿದುಕೊಂಡು ಯಾ ತಗೆದುಕೊಂಡು ಕುಳಿತಿದ್ದಿರಬಹುದು. ಅಥವಾ ತೆಗೆದುಕೊಳ್ಳಲು ತಯಾರು ಮಾಡಿದ್ದಿರಬಹುದು. ಈಗಲೂ ಸಹ ನೀವು ನನ್ನೊಡನೆ ಆಸ್ಪ್ರೋ ಅಥವಾ ಸಾರಿಡಾನ್ ಯಾ ವಿಕ್ಸ್ ಎಂದು ಜಗಳ ಮಾಡಬಹುದು. ಕೊನೆಗೆ ಜಗಳಾಡುವಾ, ಮೊದಲು ಓದಿಕೊಳ್ಳಿ. "ಈ ಕ್ಷುಲ್ಲಕವಾದ ಜಗಳದ ವಿಷಯ ಈ ಮಂಗ ಯಾಕೆ ನಮ್ಮ ತಲೆ ಸಿಡಿಸುತ್ತಾನೆ?" ಎಂದು ನೀವು ತಿಳಿಯಬಹುದು. ಚಿಂತಿಲ್ಲ. ಎಣಿಸಿ. ಏಕೆಂದರೆ ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಎಂಬಂತೆ ಈಗ ನಿಮ್ಮ ಕಾಲವಾಗಿದೆ. ಮುಂದೆ ನನಗೂ ಕಾಲ ಬರಬಹುದು. ಈಗಲೇ ನಾನ ನೀವು ಎಣಿಸಿದಂತೆ ಎಣಿಸಿದರೆ ನನಗೆ ಹೆದರಿಕೆ ಇದೆ. ಕಾರಣ ನೀವೆಲ್ಲರೂದರೂ ಬೇಕೆಂದೇ ಅಥವಾ ಅಪ್ಪಿ ತಪ್ಪಿಯಾದರೂ ಈ ಬಡ ಪ್ರಾಣಿಯೊಂದಿಗೆ ಜಗಳಕ್ಕೆ ....?

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ, ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್. ಬಿತಾಳ, ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸಚಿತ್ರ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಪಡೆಕ್ಕಿಲ ಕೃಷ್ಣ ಭಟ್ಟ. ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಇದೀಗ ಪ್ರಕಟವಾಗಿದೆ—

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎನ್. ಭಟ್, ಶಿರಾಡಿಪಾಲ್.

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ............................"

(ಶ್ರೀ ಕೆ. ೯. ಪೈಗಳ ಮುನ್ನುಡಿಯಿಂದ)

ಕಣ್ಣಿನ ಸೆಳೆವ ತ್ರಿವರ್ಣ ಮುಖಪತ್ರ!

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1–75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಯುಗ ಪ್ರೆಸ್, ಉಡುಪಿ | **ನವಭಾರತ ಬುಕ್ ಡಿಪೊ,** ಪಾಲುಕೋಟೆ, ಉಡುಪಿ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ರಾಸಾಯನಿಕ ಗೊಬ್ಬರ ಬಳಕೆ

(ಒಂಬತ್ತನೇ ಪುಟದಿಂದ)

ನಿಗಾದ ಬಳಿಕ ಹಾಗೂ ಯುರೋಪಿನ ಅನೇಕ ದೇಶಗಳಲ್ಲಿ ಅದರ ಬಳಕೆಯಾದ ನಂತರ ಭೂಮಿಯ ಸಾರವನ್ನು ರಾಸಾಯನಿಕ ಗೊಬ್ಬರಗಳಿಂದ ಅತಿಶಯವಾಗಿ ಹೆಚ್ಚಿಸಬಹುದೆಂಬುದು ಸ್ಪಷ್ಟವಾಗಿದೆ. ರಾಸಾಯನಿಕ ಗೊಬ್ಬರವನ್ನು ಸಾಕಷ್ಟು ಪ್ರಮಾಣದಲ್ಲಿ ಪೂರಯಿಸಿದರೆ ನಮ್ಮ ಭೂಮಿಯೂ ಎಕ್ರೆಗೆ ಒಂದು ಟನ್ ಗೋದಿ ಮತ್ತು ಎರಡು ಟನ್ ಬತ್ತವನ್ನು ಕೊಡಬಲ್ಲುವ.

ದೊಡ್ಡ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುವುದರಿಂದ ಮಾತ್ರ ಇದು ಸಾಧ್ಯ. ಈ ರಾಸಾಯನಿಕ ಗೊಬ್ಬರಗಳು ಬೆಳೆಗಳಿಗೆ ಅವಶ್ಯಕವಾದ ಪೋಷಕ ಆಹಾರವನ್ನು ಒದಗಿಸುವುದಲ್ಲದೆ ಭೂಮಿಯನ್ನು ಹೆಚ್ಚು ಫಲವತ್ತಾಗುವಂತೆ ಮಾಡುವುವು.

ಕಂಪೋಸ್ಟ್ ಮತ್ತು ಹಸುರು ಗೊಬ್ಬರ

ಕಂಪೋಸ್ಟ್ ಮತ್ತು ಹಸುರು ಗೊಬ್ಬರಗಳ ಬಳಕೆಯು ನಿಧಾನವಾಗಿ ಸಾಗಿದೆ. ಅವುಗಳಿಂದ ನಮ್ಮ ದೇಶಕ್ಕೆ ಬೇಕಾದಷ್ಟು ಅಗತ್ಯವಿರುವ ಪ್ರಮಾಣದ ಸಾರ ಲಭ್ಯವಾಗುತ್ತಿಲ್ಲ. ನಮ್ಮ ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವಲ್ಲಿ ನಾವು ಇತರ ಯೋಗ್ಯ ಭೂ ರಕ್ಷಣಾ ವಿಧಾನಗಳೊಂದಿಗೆ ರಾಸಾಯನಿಕ ಗೊಬ್ಬರಗಳ ಪೂರೈಕೆಯನ್ನೂ ಹೆಚ್ಚಾಗಿ ಅವಲಂಬಿಸಬೇಕಾಗುತ್ತದೆ.

ಈಗಿರುವುದಕ್ಕಿಂತಲೂ ಅನೇಕ ಪಟ್ಟು ಅಧಿಕ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆ, ಸಾಕಷ್ಟು ನೀರನ್ನು ರಾಯ್ದಿಟ್ಟುಕೊಳ್ಳುವುದು ಹಾಗೂ ಮಣ್ಣಿನ ಸವಕಳನ್ನು ತಡೆಯುವುದು—ಇವು ಮೂರು ವಿಚಾರಗಳೂ ಭೂಮಿಯ ಹುಟ್ಟುವಳಿಗೆ ಹೆಚ್ಚಾಗಿ ಸಹಾಯ ಮಾಡುವ ಅಂಶಗಳಾಗಿವೆ.

ದ್ವಿತೀಯ ಜಾಗತಿಕ ಸಮರಾನಂತರ ಭಾರತದಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆ ಹೆಚ್ಚಿದೆಯೆಂಬುದೇನೋ ನಿಜ. ಆದರೆ, ಬಳಸುವ ಪ್ರಮಾಣ ಮಾತ್ರ ಕಡಿಮೆಯಾಗಿದೆ. ರಾಸಾಯನಿಕ ಗೊಬ್ಬರಗಳ ಉತ್ಪಾದನ ಮತ್ತು ಬಳಕೆಗಳ ಕಾರ್ಯಕ್ರಮಕ್ಕೆ ನಾವು ಹೆಚ್ಚಿನ ಪ್ರಾಮುಖ್ಯ ಕೊಡದಿದ್ದುದೇ ಇದಕ್ಕೆ ಕಾರಣ. ನಮ್ಮ ರೈತರಲ್ಲಿ ಬಹು ಸಂಖ್ಯಾಕರು ಇಂದಿಗೂ ತಮಗೆ ದೊರೆಯುವ ಬೇರೆ ಬೇರೆ ಬಗೆಯ ಗೊಬ್ಬರಗಳ ಕೊರತೆಯ್ಕೆ ಕಡಿಮೆ ಪ್ರಮಾಣದಲ್ಲಿದ್ದರೂ ರಾಸಾಯನಿಕ ಗೊಬ್ಬರಗಳನ್ನು ಬಳಸದೇನೇ ಬೆಳೆ ಬೆಳೆಯುತ್ತಾರೆ. ಈ ಗೊಬ್ಬರಗಳನ್ನು ಬಳಸುವ ವಿಷಯದಲ್ಲಿ ಅವರಿಗಿನ್ನೂ ಸಾಕಷ್ಟು ಶಿಕ್ಷಣ ದೊರೆಯಬೇಕಾಗಿದೆ.

ಪ್ರೋತ್ಸಾಹ ಅಗತ್ಯ

ಅಗತ್ಯವಿರುವ ಶಿಕ್ಷಣದೊಂದಿಗೆ ರಾಸಾಯನಿಕ ಗೊಬ್ಬರಗಳ ಸಂಗ್ರಹ, ವಿತರಣೆ ಮತ್ತು ಮಾರಾಟಗಳ ಸಮಸ್ಯೆಗಳೂ ಸೇರಿಕೊಂಡಿವೆ. ರಾಸಾಯನಿಕ ಗೊಬ್ಬರಗಳನ್ನು ಸಂಗ್ರಹಿಸಿಡಲು ಅನುಕೂಲತೆ ಕಡಿಮೆ. ಅದನ್ನು ವಿತರಣ ಮಾಡುವ ಕ್ರಮವೂ ಅತೃಪ್ತಿಕರವಿದೆ ರಾಸಾಯನಿಕ ಗೊಬ್ಬರವನ್ನು ಹೆಚ್ಚು ಬಳಸುವಂತೆ ರೈತರಿಗೆ ಆರ್ಥಿಕ ಪ್ರೋತ್ಸಾಹ ಸೌಲಭ್ಯಗಳ ಅಭಾವವೂ ಇದೆ.

ಜಾಗತಿಕ ಬೇಸಾಯದಲ್ಲಿ ರಾಸಾಯನಿಕ ಗೊಬ್ಬರಗಳ ಉಪಯೋಗವು ೧೯ನೇ ಶತಮಾನದಲ್ಲಿಯೇ ಪ್ರಾರಂಭವಾಯಿತು. ಮೊದಮೊದಲು ನಿಧಾನವಾಗಿ, ಅನಂತರ ಶೀಘ್ರಗತಿಯಿಂದ ಅದರ ಬಳಕೆ ಹೆಚ್ಚಾಯಿತು. ಎರಡನೆಯ ಮಹಾಯುದ್ಧಕ್ಕೆ ಮೊದಲು ಇಡಿಯ ಪ್ರಪಂಚದಲ್ಲಿ ೯೦ ಲಕ್ಷ ಟನ್ ರಾಸಾಯನಿಕ ಗೊಬ್ಬರವನ್ನು ಬಳಸಲಾಗುತ್ತಿತ್ತು. ಯುದ್ಧಾನಂತರ ಅಂದರೆ, ಸುಮಾರು ೧೯೬೦ರ ಹೊತ್ತಿನಲ್ಲಿ ಈ ಪ್ರಮಾಣವು ೨ ಕೋಟಿ ೯೦ ಲಕ್ಷ ಟನ್‌ಗಳಿಗೇರಿತು.

ಆದರೆ, ಇದರಲ್ಲಿ ಹೆಚ್ಚಿನ ಗೊಬ್ಬರವು ಕೃಷಿ ಅಭಿವೃದ್ಧಿಯನ್ನು ಸಾಧಿಸಿದ ಯುರೋಪ್ ಮತ್ತು ಉತ್ತರ ಅಮೇರಿಕೆಗಳಲ್ಲೇ ಉಪಯೋಗಿಸಲ್ಪಡುತ್ತಿದೆ. ಲ್ಯಾಟಿನ್ ಅಮೇರಿಕೆ, ದೂರ ಪ್ರಾಚ್ಯ, ರಷ್ಯಾ, ಆಫ್ರಿಕಾ ಮೊದಲಾದ ಕಡೆಗಳಲ್ಲಿ ಇದರ ಬಳಕೆ ತೀರ ಕಡಿಮೆ.

ಈ ದೇಶಗಳಲ್ಲಿ ಬಳಸುವ ಸರ್ವಸಾಧಾರಣ ಪ್ರಮಾಣಕ್ಕೆ ಹೋಲಿಸಿ ನೋಡಿದರೆ ಭಾರತದಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯು ಸಮಾಧಾನಕರವಾಗಿರುವುದೆಂಬುದು ಗೊತ್ತಾಗುತ್ತದೆ. ಆದರೆ, ಆಹಾರ ರಂಗದಲ್ಲಿ ನಾವು ಎದುರಿಸಬೇಕಾಗಿರುವ ಕೊರತೆಯನ್ನು ತುಂಬಿಕೊಳ್ಳಲು ಈ ಪ್ರಮಾಣವು ಸಾಕಷ್ಟಾಗಿರುವುದಿಲ್ಲ. ಮುಂಬರುವ ಹತ್ತು ವರ್ಷಗಳಲ್ಲಿ ನಾವು ಈಗಿನದಕ್ಕಿಂತ ಎಷ್ಟೋ ಪಟ್ಟು ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುವುದು ಅತ್ಯಗತ್ಯ.

ಇದನ್ನು ಸಾಧಿಸಬೇಕಾದರೆ ನಮ್ಮ ದೇಶದಲ್ಲಿ ರಾಸಾಯನಿಕ ಗೊಬ್ಬರದ ಉತ್ಪಾದನೆ ಹೆಚ್ಚಾಗಬೇಕು. ಉತ್ಪಾದಿತವಾದ ರಾಸಾಯನಿಕ ಗೊಬ್ಬರವನ್ನು ಸರಿಯಾದ ಸ್ಥಿತಿಯಲ್ಲಿ ಸಂಗ್ರಹಿಸಿಡುವುದು, ಅದರ ಮಾರಾಟ, ರೈತರಿಗೆ ಅದರ ಮಹತ್ವವನ್ನು ತಿಳಿಸಿ ಮಾರಾಟ ಮಾಡಲು ಯೋಗ್ಯ ಮಾರಾಟಗಾರರ ತರಬೇತಿ, ರಾಸಾಯನಿಕ ಗೊಬ್ಬರವನ್ನು ಹೇಗೆ ಬಳಸಬೇಕೆಂಬ ಬಗೆಗೆ ರೈತರಿಗೆ ತಿಳುವಳಿಕೆ ಕೊಡುವುದು, ಕಾಲಕಾಲಕ್ಕೆ ಪ್ರಾತ್ಯಕ್ಷಿಕೆಗಳನ್ನು ಮಾಡಿ ತೋರಿಸುವುದು — ಇವೆಲ್ಲವೂ ದೊಡ್ಡ ಪ್ರಮಾಣದಲ್ಲಿ ನಡೆಯುವುದು ಅವಶ್ಯ. ಯಾವ ಬೆಳೆಗೆ ಯಾವ ಪ್ರಕಾರದ ಗೊಬ್ಬರ ಅಗತ್ಯವೆಂಬುದನ್ನು ರೈತರಿಗೆ ತಿಳಿಸಿ ಕೊಡಬೇಕು. ಅದಿಲ್ಲವಾದರೆ, ರಾಸಾಯನಿಕ ಗೊಬ್ಬರಗಳ ಬಳಕೆ ನಿರೀಕ್ಷಿತ ಫಲ ನೀಡಲಾರದು.

ಬುದ್ಧಿಜೀವಿಗಳ ಮಾತು ನಿಜವಾಯಿತು

(ನಾಲ್ಕನೇ ಪುಟದಿಂದ)

ಯಲ್ಲಿಯೂ ಕೆಲವು ಬುದ್ಧಿ ಜೀವಿಗಳು ಈ ನೀತಿಯನ್ನು ಟೀಕಿಸಿದ್ದರು. ಅವರ ಟೀಕೆಗಳು ಈಗ ಸತ್ಯವಾಗುತ್ತ ಬರುತ್ತಿವೆ..."

"ಏನಿದ್ದರೂ ಈಗ ಮಾಡುವುದೇನು?"

"ಎಲ್ಲ ಅಮೇರಿಕೆಯ ಪಾಶ್ಚಾತ್ಯ ದೇಶಗಳ ಕುತಂತ್ರ..ಅದಕ್ಕೇ ಮಹಾನಾಯಕನೆಹರೂ ನಿರ್ಲಿಪ್ತ ನೀತಿಯ ಹೆಸರಿನಲ್ಲಿ ಯಾವ ಬಣವನ್ನೂ ಸೇರಲಿಲ್ಲ.."

"ಓ, ಇದು ಸಂಶೋಧನೆಯೋ ಸರಿ."

"ಅಂದರೆ ..."

"ಒಳ್ಳೆಯ ಸಂಶೋಧನೆ. ಪತ್ರಿಕೆಯಲ್ಲಿ ಬಂದಿರೋ, ಬಾರದಿರೋ ಸುದ್ದಿಯನ್ನೆಲ್ಲಾ ಬಡಬಡಿಸಿದ್ರೂ ಡಾಕ್ಟರೇಟ್ ಅವಶ್ಯ ಕೊಡಬೇಕು..."

"ಕೊಡಿ ಹಾಗಾದ್ರೆ."

"ಕೊಡ ಬಹುದಿತ್ತು. ಆದರೆ, ನನಗೆ ಬರಬೇಕಾದದ್ದು .."

"ಅಯ್ಯೋ ನಿಮ್ಮದಿನ್ನೂ ಪರಿಶೀಲನೆಯಲ್ಲಿದೆ ತಾನೆ?"

'ಅಂತೂ ಸೋತವನು ನಾನೇ ಅಲ್ಲವೆ? ಇಗೋ. ... ನಿನ್ನ ಪ್ರಜ್ಞಾಶಕ್ತಿಗೆ ಸೂಕ್ತ ಡಾಕ್ಟರೇಟ್...'

'ಪರಿಶೀಲಕ ಸಮಿತಿಯ ಶಿಫಾರಸು ಈಗತಾನೇ ಕೈ ಸೇರಿದೆ. ತೆಗೆದುಗೊಳ್ಳಿ, ನಿಮಗೆ........'

'ಹ್ಞ ಹ್ಞ....ಹ್ಞ...'

'ನಾಕು ಬಡೀಂದ್ರೆ ..."

'ಹ್ಞಾಂ ....'

—ಗೋರಾ.

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ನ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು. ಕು.ಶಿ.ಹರಿದಾಸ ಭಟ್)	1=75
ಕುಲವಿಲ್ಲದ ಹೆಣ್ಣು	(ಪಿ. ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಜನೆ	(ನಚಿಕೇತ)	1=25
ಋಣಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಪಟಲಾಗಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ದಿಗಂತವು ಬೆಳಗಿತು!

ಬರೆದವರು:
ಕುತ್ಯಾರುಗುತ್ತು ರವೀಂದ್ರ ಶೆಟ್ಟಿ.

ಶ್ರೀ ದಿಗಂತವು ಬೆಳಗಿತು!
ಗೀತೆ ಸುಧೆಯನದು ಉಂಡಿತು!!

ಜೀವ ಕಾಣುವ ಆತ್ಮ ತಂಬುವ
ಮನದ ಮುಕ್ತಿಯ ಪ್ರೇರಕ
ಸುಧೆಯ ಹೀರುವ ವಿಷವ ಕಾರುವ
ಆತ್ಮನಿಗೆ ಅದು ಸಾಧಕ ॥ ೧ ॥

ಮಾತೃ ಪ್ರೇಮದ ಪರಂಜ್ಯೋತಿಯ
ನಿನ್ನ ಎದುರಲಿ ನಿಲ್ಲಿಸಿ
ಪಾಂಚ ಜನ್ಯದಿ, ಅಭಯ ಹಸ್ತದಿ
ಮೆರೆವ ನಿನ್ನನೆ ಪಾಡಿಸಿ ॥ ೨ ॥

ಇದುವೆ ಸತ್ವವು ಇದುವೆ ಸತ್ಯವು
ವಿಶ್ವರೂಪನ ದರುಶನ
ಏರಿತೇರಿತು, ಗಗನ ತಲುಪಿತು
ಧನ್ಯ ನನ್ನಯ ಜನ್ಮನ ॥ ೩ ॥

ನಿನ್ನ ಚರಣವು ಎನ್ನ ಆತ್ಮಕೆ
ಪುಣ್ಯ ಸ್ಪರ್ಶವನೀಯಲಿ
ನಿನ್ನ ಸ್ಪರ್ಶದಿ ಪಾಪಿ ಜನ ಮವು
ಪುಣ್ಯ ಜನಮಕೆ ತಿರುಗಲಿ ॥ ೪ ॥

ಗೀತೆ ಸಾಗರ ಸುಧೆಯ ಆಗರ
ಶ್ರೀ ದಿಗಂತವು ಬೆಳಗಿತು
ಕಾಮ ಕ್ರೋಧವು, ಮದವು ಮೋಹವು
ಆತ್ಮದೊಳ್ ಹೊರ ನೆಲಸಿತು. ॥ ೫ ॥

ಬೆಂದ ಬಾಳಿಗೆ ಜ್ಞಾನದೀಪಗೆ
ಇತ್ತು ನನ್ನನೆ ರಕ್ಷಿಸು
ನಗುವ ವದನವ ಅಭಯ ಹಸ್ತವ
ವರಪ್ರಸಾದವ ಕರುಣಿಸು. ॥ ೬ ॥

ಕಣ್ಗೆ ಕಾಣದ ರತ್ನ ರೂಪದ
ನಗುತ ವದನದಿ ನಿಂತಿರೆ
ಪ್ರೇಮ ಹಾರವ ಹೊವ ಧಾರೆವ
ಶ್ರೀ- ಮತಿಯು ಎಂತು ಚಂದಿರೆ॥ ೭ ॥

ನಿನ್ನ ಮೂರುತಿ ಲೋಕ ಕೀರುತಿ
ವಿಶ್ವರೂಪನೆ ಧನ್ಯನಾ
ಮನದ ಮೋಹವ ಕೊಳೆತ ಕಾಮವ
ಇದೋ ಇಂದಿಗೆ ತೊರೆದೆ ನಾ ॥ ೮ ॥

ಶ್ರೀ ದಿಗಂತವು ಬೆಳಗಿತು!
ಮನದಿ ತೇಜವು ತುಳುಕಿತು!!
ಗೀತೆ ಸುಧೆಯನು ಉಂಡಿತು!!!

ಅಲ್ಲಲ್ಲಿಯ ಸುದ್ದಿಸಾರ

ವೈಕುಂಠ್‌ಭಾಯಿ ಮೆಹತಾ ಸ್ಮಾರಕ ಸಮಿತಿಯ ವಿಜ್ಞಾಪನೆ

ಕೆಲವು ತಿಂಗಳ ಹಿಂದೆ ಶ್ರೀ ವೈಕುಂಠ್‌ಭಾಯಿ ಎಲ್. ಮೆಹತಾ ಅವರು ನಿಧನ ಹೊಂದಿದರು. ಅವರ ಘನತೆಯನ್ನು ತಿಳಿದುಕೊಂಡು ಅವರನ್ನು ಗೌರವಿಸುತ್ತಿದ್ದವರೆಲ್ಲರಿಗೂ ಅಪಾರ ದುಃಖವುಂಟಾಯಿತು. ಅವರು ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಕುರಿತು ದೇಶದ ಎಲ್ಲಾ ಭಾಗಗಳಲ್ಲಿಯೂ ಪ್ರಶಂಸೋದ್ಗಾರಗಳು ಕೇಳಬಂದುವು. ಮತ್ತು ಅವರ ನಿಧನದಿಂದ ದೇಶಕ್ಕುಂಟಾದ ಅಪಾರ ನಷ್ಟದ ಬಗ್ಗೆ ವಿಷಾದವು ವ್ಯಕ್ತಪಡಿಸಲ್ಪಟ್ಟಿತು. ಶ್ರೀ ವೈಕುಂಠ್‌ಭಾಯಿಯವರು ಅನೇಕ ವಿಧಗಳಲ್ಲಿ ಓರ್ವ ಅಪೂರ್ವ ವ್ಯಕ್ತಿಯಾಗಿದ್ದರು. ಅವರು ನಮ್ರತೆಯ ಪ್ರತಿಮೂರ್ತಿಯೇ ಆಗಿದ್ದರು. ಅವರ ಮನೋನಿರ್ಧಾರಗಳು ಅಚಲವಾಗಿರುತ್ತಿದ್ದುವು. ಅತ್ಯಂತ ಸರಳ ಸ್ವಭಾವದವರಾಗಿದ್ದ ಅವರು ನಾನಾ ವಿಧಗಳಲ್ಲಿ ತಮ್ಮ ಕೆಲಸದ ಮೂಲಕವೂ, ಲೇಖನಗಳ ಮೂಲಕವೂ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ದೃಢವಾಗಿರುವಂತೆ ಮಾಡಲು ಅಪಾರ ಸೇವೆ ಸಲ್ಲಿಸಿದ್ದರು. ಸಹಕಾರೀ ಚಳವಳದ ಪ್ರಗತಿಗೆ ಅವರಿಂದಾದ ಸಹಾಯ ಅಸಾಮಾನ್ಯವಾಗಿತ್ತು. ಅವರಿಗೆ ನಮ್ಮ ದೇಶದ ಆರ್ಥಿಕ ಹಾಗೂ ಸಾಮಾಜಿಕ ಅವ್ಯವಸ್ಥೆಗಳ ಕುರಿತು ಎಷ್ಟೊಂದು ಯೋಚನೆಯಿತ್ತು ಎಂಬುದು ವಿಕೇಂದ್ರೀಕೃತ ಕ್ಷೇತ್ರಗಳಲ್ಲಿ ಅಭಿವೃದ್ಧಿಯುಂಟಾಗುವುದಕ್ಕೆ ಅವರು ಮಾಡಿದ ಸೇವೆಯಿಂದ ಗೊತ್ತಾಗುತ್ತದೆ. ನಮ್ಮ ಕುಂದುಕೊರತೆಗಳು ಯಾವುವು ಎಂದು ಜಾಗರೂಕತೆಯಿಂದ ತಿಳಿದುಕೊಂಡು ಅವುಗಳನ್ನು ಪರಿಹರಿಸಲು ಸರಿಯಾದ ದಾರಿಯನ್ನು, ಬಹಳ ತಾಳ್ಮೆಯಿಂದ, ಕಂಡುಹಿಡಿಯಲು ಯತ್ನಿಸುತ್ತಿದ್ದರು. ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ಸ್ಪಷ್ಟವಾಗಿ, ಸಂಪೂರ್ಣವಾಗಿ ತಿಳಿದುಕೊಳ್ಳುವ ಸಾಮರ್ಥ್ಯ ಅವರಲ್ಲಿತ್ತು. ಗ್ರಾಮ ಪ್ರದೇಶಗಳ ಜನರ ಮನೋಭಾವವನ್ನು ಸರಿಯಾಗಿ ಊಹಿಸಿಕೊಂಡು, ಸಾಮಾಜಿಕ ಸಮತೆಯನ್ನು ತಮ್ಮ ಧ್ಯೇಯವನ್ನಾಗಿಟ್ಟುಕೊಂಡು, ಸಹಕಾರೀ ಚಳವಳದ ಹಾಗೂ ಗ್ರಾಮೋದ್ಯೋಗಗಳ ಮೂಲಕ ಆರ್ಥಿಕ ಅಭಿವೃದ್ಧಿಯನ್ನೂ ಸಮಾಜ ಸುಧಾರಣೆಯನ್ನೂ ಸಾಧಿಸುವ ಕೆಲಸದಲ್ಲಿ ನಿರತರಾಗಿದ್ದರು. ಅವರ ಈ ಸೇವೆ ಇಡೀ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಬಹಳ ನೆರವಾಯಿತು.

ವೈಕುಂಠ್‌ಭಾಯಿಯವರಿಗೆ ಹೆಸರು ಪಡೆಯಬೇಕೆಂದಾಗಲೀ, ತಮ್ಮ ಖ್ಯಾತಿ ಎಲ್ಲೆಡೆಯಲ್ಲಿಯೂ ಹರಡಬೇಕೆಂದಾಗಲೀ ಆಸೆ ಇದ್ದಿರಲಿಲ್ಲ. ಆದರೆ ಅವರ ನೆನಪು ಚಿರಸ್ಥಾಯಿಯಾಗುವಂತೆ ಮಾಡುವ ಹೊಣೆ ನಮ್ಮದು. ಆದುದರಿಂದಲೇ ಅವರ ನಿಸ್ವಾರ್ಥ ಸೇವೆಯ ನೆನಪಿಗಾಗಿ ಒಂದು ಯೋಗ್ಯ ಸ್ಮಾರಕವನ್ನು ನಿರ್ಮಿಸಬೇಕೆಂದು ನಿಶ್ಚಯಿಸಲ್ಪಟ್ಟಿದೆ. ಅದಕ್ಕಾಗಿ ಈ ಕೆಳಗಿನ ಟ್ರಸ್ಟಿಗಳನ್ನೊಳಗೊಂಡ ಒಂದು ಟ್ರಸ್ಟ್ ನಿಯೋಜಿಸಲ್ಪಟ್ಟಿದೆ.

ಶ್ರೀ ಯು. ಎನ್. ಧೇಬರ್ — ಛೇರ್‌ಮನ; ಪ್ರೊ| ಡಿ. ಆರ್. ಗಾಡ್ಗಿಲ್ — ವೈಸ್-ಛೇರ್ಮನ್; ಶ್ರೀ ಬಿ. ವೆಂಕಟಪ್ಪಯ್ಯ — ಕೋಶಾಧಿಕಾರಿ; ಶ್ರೀ ಶಾಂತಿಲಾಲ್ ಎಚ್. ಶಾಹ, ಶ್ರೀ ಧ್ವಜಪ್ರಸಾದ್ ಸಾಹು, ಶ್ರೀ ವಿ. ಪಿ. ವರ್ದೆ, ಶ್ರೀ ಮೋತಿಲಾಲ್ ಡಗ್ಲಿ — ಕಾರ್ಯದರ್ಶಿ.

ಇಂತಹ ಸ್ಮಾರಕವನ್ನು ನಿರ್ಮಿಸಲು ಬೇಕಾಗುವ ಹಣವನ್ನು ಒಟ್ಟುಗೂಡಿಸುವುದು ನಮ್ಮ ಆದ್ಯಕರ್ತವ್ಯವಾಗಿದೆ. ಆದುದರಿಂದ ಸಾರ್ವಜನಿಕರು, ವಿಶೇಷವಾಗಿ, ವೈಕುಂಠ್‌ಭಾಯಿಯವರು ತಮ್ಮ ಜೀವನದ ಉದ್ದೇಶವನ್ನಾಗಿ ಮಾಡಿಕೊಂಡಿದ್ದ ಕೆಲಸದಲ್ಲಿ ನಿರತರಾದವರು, ತಮ್ಮಿಂದಾದಷ್ಟು ಧನಸಹಾಯವನ್ನು ಮಾಡಬೇಕೆಂದು ಕೋರುತ್ತೇವೆ. ವಂತಿಗೆಯ ಹಣವನ್ನು ಈ ವಿಳಾಸಕ್ಕೆ ಕಳುಹಿಸಬಹುದು:—

ಕೋಶಾಧಿಕಾರಿ, ವೈಕುಂಠ್‌ಭಾಯಿ ಮೆಹತಾ ಸ್ಮಾರಕ ಟ್ರಸ್ಟ್, ರೋಯಲ್ ಇನ್ಶ್ಯೂರೆನ್ಸ್ ಬಿಲ್ಡಿಂಗ್, 4ನೆಯ ಮಾಳಿಗೆ, 14, ಜೇಮ್‌ಶೆಡ್ಜಿ ಟಾಟಾ ರೋಡ್, ಬೊಂಬಾಯಿ-1, ಬಿ ಆರ್.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 166/1965.

ಶ್ರೀ ಕೂಷ್ಮಾಂಡಿನಿ ಅಮ್ಮ ದೇವರ ಭಂಡಾರ, ಇದರ ಟ್ರಸ್ಟಿ ಸ್ವಸ್ತಿ ಶ್ರೀ ಲಲಿತ ಕೀರ್ತಿ ಭಟ್ಟಾರಕ ಜೀಯ ಸ್ವಾಮಿಯರ. ಯವರ ಜನರಲ್ ಪವರ್ ಓಫ್ ಎಟೋರ್ನಿ ಹೋಲ್ಡರ M. J. ಪಡಿವಾಳ.

ವಾದಿರು.

ಕೆ. ಭೀಮೋಜಿರಾವ್ ಸುಬ್ರ್ಹೋಜಿರಾಯರ ಮಗ, ಕಾರ್ಕಳ ಕಸಬಾ ಹಿರಿಯಂಗಡಿಯಲ್ಲಿರುವವ — ಪ್ರತಿವಾದಿ

ಸದ್ರಿ ಪ್ರತಿವಾದಿ ಆದ ನಿಮಗೆ ತಿಳಿಸುವುದೇನೆಂದ್ರೆ ನೀವು ವಾದಿರ ಮಠದ ವಳಗೆ ಚಾಲಗೇಣಿಗೆ ಅನುಭವಿಸಿ ಬರುವ ಆಸ್ತಿ ಬಾಬ್ತು ನಿಮ್ಮಿಂದ ವಾದಿಗೆ ತಾ. 31-3-65ಕ್ಕೆ ಬರತಕ್ಕ ಚಾಲಗೇಣಿ ಗೇಣಿ ಬಡ್ಡಿ ರೂಪಾಯಿ 773-00ಕ್ಕೆ ವಾದಿರು ನಿಮ್ಮ ಮೇಲೆ ದಾಖಲು ಮಾಡಿದ ಸದ್ರಿ ದಾವೆಯು ತಾ. 20-9-65ಕ್ಕೆ ನಿಮಗೆ ಹಾಜ್ರಿ ಬಗ್ಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗ್ಯೆರುಹಾಜ್ರಿಯಲ್ಲಿ ದಾವಾ ತೀರ್ಮಾನ ಮಾಡೋದಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. S. Kamath,
Advocate for Pltf.

ಕಾರ್ಕಳ 8—9—65.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R E P No 119/64.
(O. S. 342/63 of Karkal Munsif Court.)

ಶ್ರೀ ಮೂಡಬಿದ್ರಿ ದಿಗಂಬರ್ ಜೈನ್ ವಿದ್ಯಾವರ್ಧಕ ಸಂಘ — ಅರ್ಜಿದಾರ.

ಅಣ್ಣಪ್ಪ ಹೆಗಡೆ ಕೂಡಾ ರೆಸ್ಪಾಂಡೆಂಟರು ಎದ್ರಿರು
2) ಸೀತಮ್ಮ ಹೆಗ್ಗಡ್ತಿ
3) ಚರಿಯಮ್ಮ ಹೆಗ್ಗಡ್ತಿ
1 ನೇ ರೆಸ್ಪಾಂಡೆಂಟ ಅಣ್ಣಪ್ಪ ಹೆಗ್ಡೆ ಕೊಸಯಿಂದಿರು.

ಬೆಳ್ತಂಗಡಿ ತಾಲ್ಲೂಕು ಹೊಸಂಗಡಿ ಗ್ರಾಮಸ್ಥರು.

ಯಿವರೀಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ಮೇಲ್ಕಂಡ ಅಮಲ್ಜಾರಿಯಲ್ಲಿ ಜಪ್ತಾದ 1, 2, 3, ನೇ ರೆಸ್ಪಾಂಡೆಂಟರ ವ ಅವರ ಕುಟುಂಬದ ಹಕ್ಕಿನ ಸ್ಥಿರಾಸ್ತಿ ಯೇಲಂ ಬಗ್ಗೆ ಅರ್ಜಿದಾರ ಹಾಜರು ಪಡ್ಸಿದ ಯಿಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ, ಸದ್ರಿ ಯೇಲಂನಲ್ಲಿ ದರಖಾಸ್ತಿಗೆ ನಿಲ್ಲುವರೇ ತನಗೂ ಪರ್ಮಿಶನ್ ಕೊಡ್ಲಿ ಬೇಕೆಂತ ಅರ್ಜಿದಾರ ಕೊಟ್ಟ ಅರ್ಜಿಗೂ ಆಕ್ಷೇಪಣೆ ಯಿದ್ರೆ ಅ ಕುರಿತು ತಾ. 20-9-65ಕ್ಕೆ ವ್ಯಾದೆ ಯಿಟ್ಟಿರುತ್ತದೆ. ಅದ್ರಿಂದ ಈ ಕುರಿತು ನಿಮಗೆ ಆಕ್ಷೇಪಯಿದ್ರೆ ನೀವು ಸದ್ರಿ ವ್ಯಾದೆ ದಿನ ಪೂರ್ವಾಹ್ನ ಗಂಟೆ 10ಕ್ಕೆ ಕೋರ್ಟು ಮುಂದೆ ಸ್ವತಃ ವ ಯಾ ವಕೀಲ ದ್ವಾರಾ ಹಾಜ್ರಾಗಿ ಉದಹರಿಸ ತಕ್ಕದ್ದು. ತಪ್ಪಿದ್ರೆ ಯುಕ್ತ ಕಂಡಂತೆ ತೀರ್ಮಾನಿಸಲ್ಪಡಲಾದೀತು.

By order of court

B. K. Soorya Narayana Rao,
Advocate for Petitioner.

ಬೆಳ್ತಂಗಡಿ ತಾ. 30-8-1965.

(ಮೂರನೇ ಪುಟದಿಂದ)

ದೇಶದ ಸಾರ್ವಭೌಮತೆಗೆ ಬಂದೊದಗಿದ ಗಂಡಾಂತರವನ್ನು ಎಂಟೆದೆಯಿಂದ ಎದುರಿಸಬೇಕು; ಅದೆಷ್ಟೇ ಕಠಿನವಾಗಲಿ, ಸತ್ಯದ ದಾರಿ ಎಂದೂ ಗುರಿ ಸೇರದಿರುವುದಿಲ್ಲ. ಪಾಕಿಸ್ತಾನದ ಕಾಶ್ಮೀರಾಕ್ರಮಣವನ್ನು ಹಿಂಬಾಲಿಸಿ ಬಂದು ಚೀನೀಯರೂ ಹಿಮಾಲಯದ ತಪ್ಪಲಲ್ಲಿ ಕಿರುಕುಳ ಎಬ್ಬಿಸಬಹುದು. ಚೀನೀಯ ವಿದೇಶ ಮಂತ್ರಿ ಚೆನ್-ಯಿ ಮತ್ತು ಭುಟ್ಟೋ ಭೆಟ್ಟಿಯು ಹೆರುವ ಕೂಸು ಇದಾಗಬಹುದು. ಶತ್ರುವನ್ನೂ ಹಿತಶತ್ರುವನ್ನೂ ಎದುರಿಸುವ ಕೆಚ್ಚು ವೀರ ಭಾರತೀಯರಲ್ಲಿವೆ. ತಮ್ಮ ದೇಶವನ್ನು ಪರಾಕ್ರಮಣದಿಂದ ಮುಕ್ತಗೊಳಿಸುವ ಶಕ್ತಿ ನಮ್ಮಲ್ಲಿದೆ. ಈ ಆತ್ಮವಿಶ್ವಾಸದಿಂದ ಹೋರಾಡಿದಾಗಲೇ ನಮ್ಮ ಗುರಿ ಸಿದ್ಧಿಸುವುದು. ಇದು ಖಂಡಿತ.

ಇಡೀ ಕುಟುಂಬದವರಿಂದ ಅನ್ನ ಸತ್ಯಾಗ್ರಹ

ಪಣಂಬೂರು, ಆ. 29—ಪಣಂಬೂರು ಬೈಕಂಪಾಡಿ ಗ್ರಾಮ ರಕ್ಷಣಾ ಸಮಿತಿಯ ನೇತೃತ್ವದಲ್ಲಿ ನಡೆಯುತ್ತಿರುವ ಅನ್ನ ಸತ್ಯಾಗ್ರಹದ 80ನೇ ದಿನದಂದು ಬೈಕಂಪಾಡಿಯ ಒಂದು ಇಡೀ ಕುಟುಂಬದವರು ಅನ್ನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಈ ಕುಟುಂಬದ ಯಜಮಾನ ಶ್ರೀ ಸೋಮಯ ಜೋಗಿಯವರು ಗಾಂಧಿ ಭಕ್ತರು, ಸೇವಾನಿಷ್ಠರು ಹಾಗೂ ನಿವೃತ್ತ ಉಪಾಧ್ಯಾಯರು. ಸತ್ಯಾಗ್ರಹದಲ್ಲಿ ಭಾಗವಹಿಸಿರುವವರ ಹೆಸರುಗಳು ಈ ಕೆಳಗಿನಂತಿವೆ.

ಶ್ರೀ ಸೋಮಯ ಜೋಗಿ (ಪ್ರಾಯ 58 ವರ್ಷ, ಕುಟುಂಬದ ಯಜಮಾನ); ಶ್ರೀಮತಿ ಕಮಲ ಜೋಗಿ (40 ವರ್ಷ, ಕುಟುಂಬದ ಯಜಮಾನಿ); ಕುಮಾರಿ ಗಿರಿಜ ಜೋಗಿ (11 ವರ್ಷ, ವಿದ್ಯಾರ್ಥಿನಿ); ಕುಮಾರಿ ಮಹಾದೇವಿ ಜೋಗಿ (7 ವರ್ಷ, ವಿದ್ಯಾರ್ಥಿನಿ); ಮಾಸ್ಟರ್ ಮೋಹನದಾಸ್ ಜೋಗಿ (5 ವರ್ಷ, ವಿದ್ಯಾರ್ಥಿ); ಮಾಸ್ಟರ್ ಶಶಿಧರ ಜೋಗಿ (1½ ವರ್ಷ, ಮೊಲೆ ಉಣ್ಣುವ ಹಸುಗೂಸು).

ಯಕ್ಷಗಾನ

ಉಡುಪಿ, ಶ್ರೀ ಗಣೇಶ ಚತುರ್ಥಿ ಪುಣ್ಯ ದಿನದ ಸಲುವಾಗಿ ಯಕ್ಷಗಾನ ಕಲಾ ಮಂಡಲ ಇದರ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ "ಸುಧನ್ವ ಮೋಕ್ಷ" ಎಂಬ ಯಕ್ಷಗಾನ ಕೂಟವು ಸಾರಸ್ವತ ಶಂಕರನಾರಾಯಣ ದೇವಸ್ಥಾನದ ಅಂಗಣದಲ್ಲಿ ಶ್ರೀ ಕೆ. ನಾರಾಯಣ ಶೆಟ್ರು ಹಾಡುಗಾರಿಕೆ, ಸಗ್ರಿ ಕಿಟ್ಟಾಚಾರಿಯವರ ಮೃದಂಗವಾದನ, ಸರ್ವಶ್ರೀ ಸೀತಾನದಿ ಗಣಪಯ್ಯ ಶೆಟ್ಟಿ, ಲಕ್ಷ್ಮೀಜನಾರ್ಧನ ಭಟ್, ವೆಂಕಟಾಚಲ ಭಟ್, ಶೇಖರ ಶೆಟ್ಟಿ, ವೈ. ರಾಘವೇಂದ್ರ, ಕೆ. ರಾಮ ಶೆಟ್ಟಿ, ಕೆ. ಮಂಕಪ್ಪ ಶೆಟ್ಟಿ, ದೇವರಾಯ ಪ್ರಭು, ಇವರೇ ಮೊದಲಾದವರಿಂದ ಯಶಸ್ವಿಯಾಗಿ ಜರಗಿದ ಬಳಿಕ ಸಂಘದ ಉಪಾಧ್ಯಕ್ಷ ಸೀತಾನದಿ ಗಣಪಯ್ಯ ಶೆಟ್ರು ಭಕ್ತಿಶ್ರದ್ಧೆಗಳಿಂದ ಆಚರಿಸುವ ಗಣೇಶ ಚತುರ್ಥಿಯ ದಿನ ಜರಗಿದ ಯಕ್ಷಗಾನ ಕಲಾಸೇವೆಗೆ ಪ್ರೋತ್ಸಾಹಿಸಿದವರನ್ನು ಅಭಿನಂದಿಸಿ ಧನ್ಯವಾದ ಸಮರ್ಪಿಸಿದರು.

ಹೆಬ್ರಿಯಲ್ಲಿ ಗಿರಿಜನ ಮಹಿಳೋದ್ಧಾರ ಕೇಂದ್ರದ ಉದ್ಘಾಟನೆ

ಇದೇ ಕಳೆದ ತಾ. 8ರಂದು, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ತೆರೆಯಲ್ಪಟ್ಟಿರುವ ಗಿರಿಜನ ಮಹಿಳೋದ್ಧಾರ ಕೇಂದ್ರದ ಉದ್ಘಾಟನಾ ಸಮಾರಂಭವು, ಜಿಲ್ಲಾಧಿಕಾರಿ ಶ್ರೀ ಹೆಚ್. ಎಲ್. ನಾಗೇ ಗೌಡರಿಂದ, ಶ್ರೀ ಬೇಳಂಜೆ ಮೋನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರ್ಥನೆಯಾದ ಬಳಿಕ, ಶ್ರೀ ಬೇಳಂಜೆ ವಿಟ್ಠಲ ಹೆಗ್ಡೆಯವರು ಸ್ವಾಗತಿಸಿದರು. ಶ್ರೀ ಎಚ್. ಅನಂತ ಹೆಗ್ಡೆಯವರು ಜಿಲ್ಲಾಧಿಕಾರಿಯವರಿಗೆ, ರೈತ ಸಂಘದ ಪರವಾಗಿ ಮನವಿಯೊಂದನ್ನು ಅರ್ಪಿಸಿದರು. ಗಿರಿಜನರ ಕೇಂದ್ರದ ಬಗ್ಗೆ, ಸಲಹೆ ಸೂಚನೆಗಳೊಂದಿಗೆ ಶ್ರೀಗಳಾದ ಎಚ್. ಜಗನ್ನಾಥ ಹೆಗ್ಡೆ, ಎಂ. ಕೃಷ್ಣಯ್ಯ ಶೆಟ್ಟಿ, ಬಿ. ಪಿ. ಸೋಮಯಾಜಿ, ಎಂ. ಎ. ಪದ್ಮನಾಭ ಮತ್ತು ಕಿಟ್ಟ ಆಚಾರ್ಯರು ಭಾಷಣವಿತ್ತರು.

ಶ್ರೀ ಗೌಡರು ಮಾತನಾಡುತ್ತಾ, ಮಹಾತ್ಮಾ ಗಾಂಧಿಯವರಿಂದ ಪ್ರಾರಂಭಿಸಲ್ಪಟ್ಟ ಹರಿಜನೋದ್ಧಾರ ಕಾರ್ಯಕ್ರಮವು ಈಗ ಬಹು ತುಂಬಾ ಪ್ರೋತ್ಸಾಹದೊಂದಿಗೆ ಮುಂದುವರಿಯುತ್ತಿದೆ, ಎಂದಲ್ಲದೆ ಇಂತಹ ಕೇಂದ್ರಗಳ ಮುಖ್ಯ ಕೆಲಸಗಳನ್ನು ವಿವರಿಸಿದರು. ಕೊನೆಯಲ್ಲಿ ಎಲ್ಲರೂ ನಿಸ್ವಾರ್ಥತೆಯಿಂದ ದುಡಿಯಬೇಕೆಂದು ಒತ್ತಿ ಹೇಳಿದರು. ಸಮಯೋಚಿತವಾಗಿ ಅಧ್ಯಕ್ಷರು ಭಾಷಣ ಮಾಡಿದ ಬಳಿಕ ಶ್ರೀ ಬಿ. ವಿಟ್ಠಲ ಹೆಗ್ಡೆಯವರು ವಂದನಾರ್ಪಣೆಗೈದರು.

ಉಡುಪಿಯಲ್ಲಿ ಇಂಡಿಯನ್ ಓಯಿಲ್ ಸರ್ವಿಸ್ ಸ್ಟೇಶನಿನ ಆರಂಭೋತ್ಸವ

ಮಂಜುನಾಥ ಮೋಟರ್ಸ್‌ನ ಶ್ರೀ ಕೆ. ನಾರಾಯಣ ಶೆಟ್ಟಿ, ತಾಲೂಕು ಬೋರ್ಡ್ ಸದಸ್ಯ ಶ್ರೀ ಬಿ. ಕಾಳಪ್ಪ ಶೆಟ್ಟಿ ಇವರು ಪಾರ್ಟ್ನರರಾಗಿ ಇರುವ ಶೆಟ್ಟಿ ಮತ್ತು ಕಂಪೆನಿ ಇವರು ಉಡುಪಿ ಚರ್ಚ್ ರೋಡಿನಲ್ಲಿ (ಮೊದಲಿನ ಕೆನರಾ ಮ್ಯೂಚುವಲ್ ಕಂಪೌಂಡಿನಲ್ಲಿ) ಆರಂಭಿಸಿರುವ ಇಂಡಿಯನ್ ಓಯಿಲ್ ಸರ್ವಿಸ್ ಸ್ಟೇಶನಿನ ಆರಂಭೋತ್ಸವವನ್ನು ತಾ. 5-9-65ನೇ ಬೆಳಿಗ್ಗೆ ಫುಡ್ ಕಾರ್ಪೊರೇಶನ್ ಆಫ್ ಇಂಡಿಯಾದ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ವಿಜೃಂಭಣೆಯಿಂದ ನೆರವೇರಿಸಿದರು. ಅನಂತರ ಕಲ್ಪನಾ ಥಿಯೇಟರಿನಲ್ಲಿ ಜಿಲ್ಲಾಧಿಕಾರಿ ಶ್ರೀ ಎಚ್. ಎಲ್. ನಾಗೇ ಗೌಡರ ಅಧ್ಯಕ್ಷತೆಯಲ್ಲಿ ಸಭಾ ಸಮಾರಂಭ ಜರಗಿತು.

ಜಿಲ್ಲಾ ಸೇಲ್ಸ್ ಮೆನೇಜರ್ ಶ್ರೀ ಬಿ. ಎ. ರಾಯರು ಸ್ವಾಗತಿಸಿ ಜಿಲ್ಲೆಯಲ್ಲಿ ಇಂಡಿಯನ್ ಓಯಿಲ್‌ನ ವಿಸ್ತರಣೆಯನ್ನು ವಿವರಿಸಿ ಉಡುಪಿಯಲ್ಲಿ ಇದೀಗ ಪ್ರಥಮವಾಗಿ ಆರಂಭವಾಗಿರುವ ಸರ್ವಿಸ್ ಸ್ಟೇಶನಿಗೆ ಸರ್ವರ ಸಹಕಾರ ಕೋರಿದರು. ಶ್ರೀ ಕೆ. ಎಸ್. ನಾಯರ್‌ರು ಸಂದೇಶಗಳನ್ನು ಓದಿದರು. ಶ್ರೀ ಟಿ. ಎ. ಪೈಗಳು ಭಾಷಣ ಮಾಡುತ್ತಾ ಸ್ವಾತಂತ್ರ್ಯಪೂರ್ವದಲ್ಲಿ ನಾವು ಪೆಟ್ರೋಲ್ ತೈಲಾದಿಗಳಿಗೆ ಪರಕೀಯರನ್ನೇ ಅವಲಂಬಿಸಿರಬೇಕಾಗಿತ್ತೆಂದೂ ಸ್ವಾತಂತ್ರ್ಯಾನಂತರ ನಮ್ಮಲ್ಲಿಯ ಪ್ರಾಕೃತಿಕ ಸಂಪತ್ತಿನ ಅನ್ವೇಷಣೆಗೆ ಪ್ರೋತ್ಸಾಹ ದೊರೆಯುತ್ತಿದೆ ಎಂದರು. ಅಲ್ಲದೆ ಇಂಡಿಯನ್ ಓಯಿಲ್ ಕಾರ್ಪೊರೇಶನ್ ಸಾಧಿಸಿರುವ ಸಾಧನೆಯನ್ನು ಕೊಂಡಾಡಿದರು. ಶೆಟ್ಟಿ ಮತ್ತು ಕಂಪೆನಿಯ ಉತ್ಸಾಹೀ ಮತ್ತು ವ್ಯವಹಾರ ದಕ್ಷರಾದ ಶೆಟ್ಟಿದ್ವಯರನ್ನು ಶ್ಲಾಘಿಸಿ ಅವರ ಹೊಸ ಉದ್ಯಮಕ್ಕೆ ಶುಭಕೋರಿದರು. ಸಭಿಕರ ಪರವಾಗಿ ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ., ನಗರ ಸಭಾಪತಿ ಶ್ರೀ ಪಿ. ರಂಗನಾಥ ಶೆಣ್ಯ ಇವರು ಮಾತನಾಡಿ ನೂತನ ಸರ್ವಿಸ್ ಸ್ಟೇಶನಿಗೆ ಶುಭಾಕಾಂಕ್ಷೆ ಸಲ್ಲಿಸಿದರು. ಅಧ್ಯಕ್ಷ ಶ್ರೀ ನಾಗೇ ಗೌಡರು ಮಾತನಾಡುತ್ತಾ ಹತ್ತು ವರ್ಷಗಳೊಳಗೆ ಜಿಲ್ಲೆಯಲ್ಲಿ ತುಂಬಾ ಸರ್ವಿಸ್ ಸ್ಟೇಶನ್‌ಗಳು ಆಗಬಹುದೆಂದೂ ಅವುಗಳು ಮಹತ್ವದ ಪಾತ್ರವನ್ನು ವಹಿಸಬೇಕಾಗುವುದೆಂದೂ ಹೇಳಿ ಕೆಲವೊಂದು ಸಲಹೆ ಸೂಚನೆಗಳನ್ನಿತ್ತರು. ಶ್ರೀ ಕೆ. ನಾರಾಯಣ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು. ಆರಂಭದಲ್ಲಿ ಉಪಾಹಾರವಿತ್ತು.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

S. C. No. 116/1965.

J. ಭೋಜರಾಜ ಹೆಗ್ಡೆ — ವಾದಿ
ಕರಿಯ ಪೂಜಾರಿ — ಪ್ರತಿವಾದಿ

ಈ ಮೂಲಕ ಸದ್ರಿ ಪ್ರತಿವಾದಿ, ಕರಿಯ ಪೂಜಾರಿ, ಕಾಂತು ಪೂಜಾರಿ ಮಗ, ಕಾರ್ಕಳ ತಾಲ್ಲೂಕು ಎರ್ಲಪಾಡಿ ಗ್ರಾಮದ ಜಾರ್ಕಳ ಕೊಪ್ಪಲದಲ್ಲಿರುವವರಿಗೆ ತಿಳಿಸುವದೇನೆಂದ್ರೆ.

ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವೆ ನಿಮ್ಮ ಹಾಜರಾತಿ ಬಗ್ಗೆ ತಾರೀಕು 13-10-1965ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಸ್ವತಃ ಯಾ ವಕೀಲರ ದ್ವಾರಾ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ಮೇಲಿನ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the court.

N. Mohandas Adyanthya,
Advocate for Plaintiff

Karkala 4-9-65.

ಕಾಲು ಜಾರಿದಾಗ.......

(ಎರಡನೇ ಪುಟದಿಂದ)

"ಯಾವೂರಮ್ಮ ನಿನ್ನದು"? ಎಂಬುದಾಗಿ ಭಿಕ್ಷುಕರನ್ನು ನುಡಿಸುವ ದಾಟಿಯಿಂದಲೇ ನುಡಿಸಿದೆ.

'ಕಾಲುಗಳು ಒಯ್ದೆಡೆ ನನ್ನ ಊರು' ಅದೇ ಧಾಟಿಯಲ್ಲಿ ಅವಳ ಉತ್ತರ.

'ಹಾಗಲ್ಲ, ನೀನು ಹುಟ್ಟಿ ಬೆಳೆದುದೆಲ್ಲಿ? ನಿನ್ನ ತಂದೆ ತಾಯಿಗಳು ಎಲ್ಲಿದ್ದಾರೆ? ನೀನು ಹೀಗಿರುವುದೇಕೆ?' ಎಂದು ಒಂದೇ ಬಾರಿಗೆ ಹಲವು ಪ್ರಶ್ನೆಗಳನ್ನೇ ಕೇಳಿದೆ.

ಆಗ ಅವಳು ಯಾವುದೋ ಒಂದು ಬಗೆಯ ನೋವನ್ನು ಅನುಭವಿಸುವಂತೆ ನನಗೆ ಭಾಸವಾಯಿತು.

'ಅದೆಲ್ಲವನ್ನೂ ಕೇಳಿ ತಮಗೇನಾಗಬೇಕಾಗಿದೆ ಸ್ವಾಮೀ? ಅದನ್ನು ಹೇಳಲು ನನಗೆ ಬಾಯಿಯೇ ಬಾರದು. ನಾ ಮಾಡಿದ ಕರ್ಮದ ಫಲದಿಂದ ನನಗೆ ಈ ಗತಿ ಬಂದೊದಗಿತು.' —ಎನ್ನುವಾಗ ಅವಳ ಕಣ್ಣುಗಳೆರಡರಿಂದಲೂ ಕಣ್ಣೀರ ಹನಿಗಳು ಉರುಳಿದುವು.

ಆದರೂ ನನ್ನ ಒತ್ತಾಯಕ್ಕೆ ಕಟ್ಟುಬಿದ್ದ ಆಕೆ ತನ್ನ ಕತೆಯನ್ನು ಹೇಳತೊಡಗಿದಳು—ನಿಧಾನವಾಗಿ.

'ನನ್ನೂರು ಇಲ್ಲಿಂದ ಬಹುದೂರ. ನನಗೆ ತಾಯಿ—ತಂದೆಯರೂ ಒಡಹುಟ್ಟಿದ ಅಣ್ಣನೂ, ಒಬ್ಬಳು ತಂಗಿಯೂ ಇದ್ದಾರೆ. ಮಧ್ಯಮ ವರ್ಗದ ಮರ್ಯಾದಸ್ಥ, ಸಂಪ್ರದಾಯ ಶರಣ ಕುಟುಂಬ ನಮ್ಮದು. ನಮ್ಮ ತಾಯಿಯಂತೂ ಬಹಳ ಮಡಿದಂತೆ! ಅಣ್ಣನೊಬ್ಬ ಒಂದು ವ್ಯಾಪಾರೀ ಕಂಪೆನಿಯಲ್ಲಿ ಮ್ಯಾನೇಜರ. ತಂಗಿಯೊಬ್ಬಳು ಹೈಸ್ಕೂಲಿನಲ್ಲಿ ಓದುತ್ತಿದ್ದಾಳೆ. ಜೀವನ ವೆಚ್ಚ ಸರಿದೂಗಿಸಲು ಸಾಕಾಗುವಷ್ಟು ಹೊಲ ನಮಗಿದೆ. ನನ್ನ ಗತಿ ಮಾತ್ರ ಹೀಗೆ" — ಎನ್ನುವಾಗ ಇನ್ನೊಮ್ಮೆ ಅವಳ ಕಂಠ ಬಿಗಿದು ಬಂದು ಕಣ್ಣುಗಳು ನೀರಿನಿಂದ ತುಂಬಿ ಮಿನುಗತೊಡಗಿದುವು.

"ತಾಯಿಗೆ ಮನೆಯಲ್ಲಿ ಕೈ ತುಂಬ ಕೆಲಸ. ಅದರಲ್ಲೂ ಆಕೆ ಬಡಕಲು. ಇದನ್ನು ಗಮನಿಸಿದ ನಮ್ಮ ತಂದೆಯವರು, ಪ್ರಾಥಮಿಕ ವಿದ್ಯಾಭ್ಯಾಸದ ಕೊನೆಗೆ ನನ್ನನ್ನು ಮನೆಗೆಲಸಗಳಿಗೆ ನೇಮಿಸಿ, ನನ್ನ ವಿದ್ಯಾರ್ಜನೆಗೆ ಕೊನೆಯನ್ನಿತ್ತರು. ನಾನು ಮನೆಯಲ್ಲಿದ್ದು ತಾಯಿಯ ಎಲ್ಲಾ ಕೆಲಸಗಳಲ್ಲೂ ಸಹಕರಿಸತೊಡಗಿದೆ. ಕೊನೆ ಕೊನೆಗೆ ತಾಯಿಯವರಿಂದ ಯಾವ ಕೆಲಸವನ್ನೂ ಮಾಡಲು ಬಾರದಾಯಿತು. ಆಗ ಎಲ್ಲ ಕೆಲಸಗಳನ್ನೂ ನಾನೇ ನಿರ್ವಹಿಸುತ್ತಿದ್ದೆ.

ಅದಾಗಲೇ ನಾನು ಬೆಳೆದು ನಿಂತೆ. ತಂದೆಯವರಿಗೆ ನನ್ನ ಮದುವೆಯ ಚಿಂತೆಯೂ ಪ್ರಾರಂಭವಾಯಿತು. ಕೆಲವು ಬಾರಿ ತಾಯಿಯವರೊಡನೆ ಮಾತಾಡುವಾಗ, "ನಮ್ಮ ಸುಮಾ ದೊಡ್ಡವಳಾದಳು ದೇವರು ಕಣ್ಣು ಬಿಟ್ಟು ಆಕೆಯ ಲಗ್ನವೊಂದ ಬೇಗನೇ ಒದಗಿ ಬರುತ್ತಿದ್ದರೆ.......' ಎಂದು ಆಡುತ್ತಿದ್ದುದನ್ನು ನಾನು ಮರೆಯಲ್ಲಿ ನಿಂತು ಹಲವು ಸಲ ಕೇಳಿದ್ದೆ. ಆದರೆ ವರದಕ್ಷಿಣೆಯ ದೆಸೆಯಿಂದ ಅವರ ಆಸೆ ಕೂಡಲೇ ಕೂಡಿಬರಲಿಲ್ಲ.

ನಮ್ಮ ನೆರೆಮನೆಯಲ್ಲಿ ನಮ್ಮ ಜಾತಿಯವರದೇ ಒಂದು ಶ್ರೀಮಂತರ ಮನೆ. ಗೋಪಾಲರಾಯರು ಆ ಮನೆಯ ಯಜಮಾನ. ಅವರ ಮಗ ಕಿಶೋರನೆಂದರೆ ನಮ್ಮ ತಾಯಿ—ತಂದೆಯರಿಗೆಲ್ಲ ಬಹಳ ಮೆಚ್ಚು. ದಿನಕ್ಕೊಮ್ಮೆಯಾದರೂ ಕಿಶೋರ ನಮ್ಮ ಮನೆಗೆ ಬಾರದುಳಿದರೆ ನಮಗಾಗದು. ನನ್ನಣ್ಣನಿಗೂ ಕಿಶೋರನಿಗೂ ಒಂದೇ ಪ್ರಾಯವಂತೆ. ಅಣ್ಣ ಪರವೂರಿನಲ್ಲಿ ದುಡಿಯುತ್ತಿದ್ದುದರಿಂದ ನನ್ನ ಹೆತ್ತವರಿಗೆ ಕಿಶೋರ ನಮ್ಮ ಮನೆಗೆ ಬಂದಾಗ ನನ್ನಣ್ಣ ಬಂದಷ್ಟೆ ಸಂತಸ. ಹೀಗಾಗಿ, ಪ್ರತಿದಿನ, ಕಿಶೋರ ಒಂದು ಬಾರಿಯಾದರೂ ನಮ್ಮ ಮನೆಗೆ ಬಂದು ಹೋಗದಿರುತ್ತಿರಲಿಲ್ಲ.

ಕಾಲದ ಗಟ್ಟಳೆಯೊ ಕರ್ಮದ ಫಲವೋ' ಎನ್ನುವಂತೆ ಬರ ಬರುತ್ತಾ ಕಿಶೋರನ ದೃಷ್ಟಿ ನನ್ನೆಡೆಗೆ ಹರಿಯಿತ. ನನ್ನ ಒಲವು ಅವನೆಡೆಗೆ ಹರಿಯಿತು. ನಾವಿಬ್ಬರೂ ಸಮಯ-ಸಾಧಿಸಿ ಇತರರ ಕಣ್ಣಿಗೆ ಬೀಳದಂತೆ ಮಾತುಕತೆಗೆ ತೊಡಗುವುದು ಅತಿಯಾಯಿತು. ಕೊನೆಗೆ ಏಕಾಂತ ನಮ್ಮನ್ನು ಆಕರ್ಷಿಸಿತು. ಆಗ ನಮ್ಮದಿದು ಅಕ್ರಮ ವ್ಯವಹಾರವೆಂದು ನಮ್ಮಿಬ್ಬರಿಗೂ ಅರಿವಾಗಿರಲಿಲ್ಲ. ನಾವಿಬ್ಬರೂ ಹಿರಿಯರ ಆದರ್ಶದ ಪಥದಲ್ಲಿ ನಡೆಯಲಾರದೆ ಕಾಲು ಜಾರಿ ಬಿದ್ದಿದ್ದೆವು. ಕ್ಷಣಿಕ ಸುಖದ ಕತ್ತಲೆ ನಮ್ಮ ಕಣ್ಣುಗಳನ್ನು ಕುರುಡಾಗಿಸಿತ್ತು.

ಯಾರ ಆಜ್ಞೆಯನ್ನೂ ಕಾಯದೆ ದಿನಗಳು ಉರುಳುತ್ತಿದ್ದವು. ನಾವು ಹಾದಿ ತಪ್ಪಿ ನಡೆಯುತ್ತಿದ್ದರೂ ಪ್ರಕೃತಿ ತನ್ನ ನಿಯಮದಲ್ಲಿ ತಪ್ಪಿ ಬೀಳಲೇ ಇಲ್ಲ. ತಿಂಗಳ ಸೂತಕ ನಿಂತು ಎರಡು ತಿಂಗಳ ಅವಧಿಯೂ ಕಳೆಯಿತು. ತಾಯಿ ಗಾಬರಿಯಾಗಿ ವಿಚಾರಿಸಿದರು. ನಾನು, "ಅಂತಹದೇನೂ ಇಲ್ಲಮ್ಮ" ಎಂದು ಸಮಜಾಯಿಸಿದೆ. ಒಂದೆರಡು ಸಲ ನನ್ನನ್ನೆ "ನಾನು ಮುಟ್ಟು" ಎಂದು ಹೊರಗೆ ಕುಳಿತು ತಾಯಿಯವರ ಕಣ್ಣಿಗೆ ಮಣ್ಣೆರಚಿದೆ. ಆದರೆ ಎಷ್ಟು ಬಾರಿ ಕಪಟಾಚರಣೆಯಲ್ಲಿರಬಹುದು? ಸುಮಾರು ಐದನೇ ತಿಂಗಳು ಕಳೆಯುತ್ತಿರುವಾಗ ನನ್ನ ಗುಟ್ಟು ಬಯಲಾಗದಿರಲಿಲ್ಲ.

ಕಿಶೋರ ನಮ್ಮ ಮನೆಯ ಹಾದಿಯನ್ನೇ ಮರೆಯತೊಡಗಿದ್ದ. ಒಂದು ದಿನ ಅವನು ಮನೆಯಿಂದ ಹೇಳದೆ ಎಲ್ಲಿಗೋ ಹೋದನೆಂದು ಕೇಳಿದೆ. ನಾನು ಮುಖವೆತ್ತಿ ಯಾರನ್ನೂ ನೋಡಲಾರದೆ ಮನೆಯೊಳಗೇ ಕುಳಿತುಕೊಂಡೆ. ಆದರದು ಮುಳ್ಳಿನ ಮಂಚದಂತೆ ಕಂಡಿತು—ನನಗೆ. ನಾನು ಕಣ್ಣಿಗೆ ಬಿದ್ದಾಗಲೆಲ್ಲಾ ತಾಯಿಯೂ ತಂದೆಯೂ ಬೈದು ಛಂಗಿಸುವುದನ್ನು ಸಹಿಸದಾದೆ. ತಂದೆಯವರಿಂದ ಒದೆತ—ಬಡಿತಗಳೂ ಬಾಕಿಯಾಗಲಿಲ್ಲ.

ಇನ್ನು ನಾನು ಇಲ್ಲಿ ಇರಬಾರದು—ಎಂದು ದೃಢವಾಗಿ ನಾನು ನನ್ನಲ್ಲೇ ನಿಶ್ಚೈಸಿಕೊಂಡೆ. ಆದರೆ ಸಾಯಲು ಮನಸ್ಸು ಒಪ್ಪಲಿಲ್ಲ. ಹೊಟ್ಟೆಯಲ್ಲಿ ಬೆಳೆಯುತ್ತಿದ್ದ ಪಾಪದ ಪಿಂಡವನ್ನೂ ಹರಿಸಿಕೊಂಡು ಪಾಪದ್ವಯಗಳಿಗೆ ತಲೆಯೊಡ್ಡಲು ನಾನು ಹಿಂಜರಿದೆ. ಅದದ್ದಾಗಲೆಂದು ಒಂದು ಇರುಳು ಮನೆ ಬಿಟ್ಟು ಹೊರಟೆ. ಹಲವು ಪಟ್ಟಣಗಳಲ್ಲಿ, ಕೇರಿ-ಕೇರಿಗಳಲ್ಲಿ ಅಲೆದೆ. ಹಸಿವಾದಾಗ ಹಲವು ಮನೆಗಳನ್ನು ಸುತ್ತಾಡಿ ಒಂದು ಮುಷ್ಟಿ ಅನ್ನವನ್ನು ಬೇಡಿ ಹಸಿವು ತಣಿಸಿಕೊಂಡೆ. ಕೆಲವೊಮ್ಮೆ ನೀರೇ ನನ್ನ ಹಸಿವು ನೀರಡಿಕೆಗಳನ್ನು ತಣಿಸಬೇಕಿತ್ತು. ಅಂತು ನಾ ಮಾಡಿದ ಕರ್ಮದ ದೆಸೆಗಾಗಿ, ಮನೆಯ ವಿರೋಧ ವಾತಾವರಣದಿಂದ ಯಾರ ಹಂಗೂ ಇಲ್ಲದ ಈ ಬೀದಿಯ ಜೀವನ ನನ್ನನಾಕರ್ಷಿಸಿತು

ಇಂದು ಹಸಿವಿಂದ ನಡೆಯಲೂ ಶಕ್ತಿಯಿಲ್ಲದೆ ಅಸಹಾಯಕಳಾಗಿದ್ದ ವೇಳೆಗಾಗಲೇ ದೇವರು ನಿಮ್ಮನ್ನು ಕಳುಹಿಸಿಕೊಟ್ಟು ನನ್ನನ್ನು ಉಳಿಸುವ ಉಪಕಾರ ಮಾಡದಿದ್ದರೆ ನಾನಿಲ್ಲಿಂದ ಎದ್ದು ಹೋಗುತ್ತಿದ್ದೆನೋ ಇಲ್ಲವೋ!" ಎಂದು ದೀರ್ಘ ನಿಟ್ಟುಸಿರು ಬಿಡುತ್ತಿದ್ದ, ಸಜಲನಯನೆಯಾದ ಆಕೆಯನ್ನು ನೋಡಿ ನನಗೆ ನಿಜವಾಗಿಯೂ ಮನದಲ್ಲಿ ಎಲ್ಲಿಲ್ಲದ ಅನುಕಂಪವುಂಟಾಯಿತು.

ಅವಳನ್ನು ಆ ಸ್ಥಿತಿಯಲ್ಲಿ ಬಿಟ್ಟು ಹೋಗಲು ನನಗೆ ಮನಸ್ಸು ಬರಲಿಲ್ಲ. ನನ್ನ ಮನೆಗಂತೂ ಒಯ್ಯುವ ಯೋಚನೆ ಅಸಂಭವ. ನಾನು ತುಸು ಯೋಚನೆಯಲ್ಲೇ ಬಿದ್ದೆ.

ನನಗೊಂದು ದಾರಿ ಹೊಳೆಯಿತು. ಅದರಂತೆ ನೇರವಾಗಿ ಅಲ್ಲೇ ಸಮೀಪದಲ್ಲಿದ್ದ ಅನಾಥಾಶ್ರಮದ ಕಾರ್ಯದರ್ಶಿಯವರನ್ನು ಭೇಟಿಯಾಗಿ ವಿಷಯವನ್ನು ವಿವರಿಸಿದೆ. ಅವರಿಗೂ ನನಗೂ ನಿಕಟ ಸ್ನೇಹವಿತ್ತು. ಸುಮಾಳ ಕರುಣಕತೆ ಕಾರ್ಯದರ್ಶಿಯವರ ಕಣ್ಣನ್ನೂ ತೋಯಿಸದೆ ಬಿಡಲಿಲ್ಲ. ಆಕೆಯನ್ನು ಆಶ್ರಮಕ್ಕೆ ಕರೆದೊಯ್ಯುವಂತೆ ಅವರೇ ಸೂಚಿಸಿದರು. ನನಗೆ ಬಹು ದೊಡ್ಡ ನಿಧಿಯೇ ಸಿಕ್ಕಿದಂತಾಯಿತು.

ಸುಮಾ ಅಂದೇ ಆಶ್ರಮದ ಅನಾಥರಲ್ಲಿ ಒಬ್ಬಳಾದಳು.

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.
ವಾರ್ಷಿಕ ಚಂದಾ ರೂ. ೧೦

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ
ಹಗಲೆನ್ನದೆ ಇರುಳೆನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ
ಬರೆದವರು
ಶ್ರೀ ಎಸ್. ಗೋಪೀಚಂದ ರಾವ್
ಪುಟಗಳು 126 ಬೆಲೆ. ರೂ. 1-50
ರೂ. 1-75 ಮನಿಯೊರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.
ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S.R. BEEDI WORKS,
UDIPI, S.K.

NAVAYUGA 9-9-1965
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯಶಿರೋಮಣಿ, ಸಾಲಿಗ್ರಾಮ.

೯-೯-೬೫ರಿಂದ ೧೫-೯-೬೫ರ ವರೆಗೆ

೧ ಮೇಷ

ಮೇಲಿಂದ ಮೇಲೆ ಬರತಕ್ಕ ವಿಪತ್ಪರಂಪರೆಗಳಿಂದಾಗಿ ನಿಮ್ಮ ಮನಸ್ಸಿಗಿಂದು ಸ್ವಲ್ಪವೂ ನೆಮ್ಮದಿಯಿರಲಾರದು. ಆರ್ಥಿಕ ಬಿಕ್ಕಟ್ಟಿನಿಂದಾಗಿ ಮರ್ಯಾದೆಯಿಂದ ದಿನಗಳೆಯಲಾಗದು. ಗೃಹಕೃತ್ಯವಲ್ಲಿ ಪರಸ್ಪರ ದ್ವೇಷಾಸೂಯೆಗಳು ಹೆಚ್ಚಿ ನಿತ್ಯ ಕಲಹಕ್ಕೆಡೆಯುಂಟಾಗಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟ ಸೋಲುಗಳು ಪ್ರಾಪ್ತವಾಗುವುವು. ನಿರೋಗಿಗಳೂ ಕಷ್ಟ ಸಹಿಷ್ಣುಗಳೂ ಆದ ನಿಮಗೆ ತಾ. 9, 10, 14, 15 ಸ್ವಲ್ಪ ಉತ್ತಮವೆನಿಸೀತು.

೨. ವೃಷಭ

ಕರ್ತವ್ಯದಕ್ಷರೂ ಕಾರ್ಯ ಚತುರರೂ ಆದ ನಿಮಗೆ ದೈವದೊಲುಮೆಯೂ ಜನತೆಯ ಸಹಕಾರವೂ ಕೂಡ ಸಾಕಷ್ಟು ಲಭಿಸುವುದರಿಂದ ನಿರೀಕ್ಷಿಸಿದ ಕಾರ್ಯಗಳೆಲ್ಲವೂ ಸಿದ್ಧಿಯಾಗಿ ಕೊನೆಗಾಣುವವು. ಬೇಕುಬೇಕಾದಷ್ಟು ವಸ್ತು ಒಡವೆಗಳು ಸಾಕಷ್ಟು ನಿಮ್ಮಲ್ಲಿದ್ದರೂ ಊಟಕ್ಕಿಲ್ಲದ ಉಪ್ಪಿನಕಾಯಿಯಂತೆ ಸಮಯಕ್ಕೆ ದೊರೆಯಲಾರವು. ವ್ಯಾಪಾರವು ಚೆನ್ನಾಗಿದ್ದರೂ ತಕ್ಕುದಾದ ಲಾಭವಿರದು. ಆಪ್ತಜನ ವಿಯೋಗ ದುಃಖಿತರಾದ ನಿಮಗೆ ವಾರಾದಿಯ 5 ದಿನಗಳು ಅನುಕೂಲವಾಗಿವೆ.

೩. ಮಿಥುನ

ಮನೋದೌರ್ಬಲ್ಯದಿಂದ ಪೀಡಿತರಾದ ನಿಮಗೆ ಯಾವ ಕಾರ್ಯವನ್ನೂ ಆರಂಭದಿಂದ ಅಂತ್ಯದ ವರೆಗೆ ಸಾಧಿಸುವ ಚಿತ್ತಸ್ವಾಸ್ಥ್ಯವಿರದು. ಆಯಕ್ಕಿಂತ ದ್ವಿಗುಣ ವ್ಯಯವಾಗುವುದರಿಂದ ಹೆರವರ ಕೂಡೆ ಸಾಲ ಮಾಡುವ ಪರಿಸ್ಥಿತಿ ಬರಲಿದೆ. ಬೇಳ್ಗಿದ್ದುದೆಲ್ಲಾ ಹಾಲೆಂದು ನಂಬಿದ ನಿಮಗೆ ಹಿತೈಷಿಗಳೆಂದು ಸೋಗು ಹಾಕಿದ ಕುಜನರಿಂದಾಗಿ ನಷ್ಟ ಮೋಸಗಳು ಪ್ರಾಪ್ತವಾಗುವವು. ಹೆಂಡಿರು ಮಕ್ಕಳ ಆರೋಗ್ಯವು ಚೆನ್ನಾಗಿರದ ನಿಮಗೆ ವಾರಾಂತ್ಯದ 3 ದಿನಗಳು ಕೊಂಚ ನೆಮ್ಮದಿಯನ್ನೀಯಲಿವೆ.

೪ ಕರ್ಕಾಟಕ

ವಿರೋಧಿ ವರ್ಗದವರ ಉಪಟಳವು ಹೇಳತೀರದು. ಆಕಸ್ಮಿಕವಾಗಿ ಪ್ರಾಪ್ತವಾಗತಕ್ಕ ಪ್ರವಾಸದಿಂದಾಗಿ ಧನಹಾನಿಯಲ್ಲದೆ ಆರೋಗ್ಯವು ಕೆಡಲಿದೆ. ಆತ್ಮೀಯರೆನ್ನುವವರೇ ನಿಮಗಿಂದು ದ್ರೋಹವೆಸಗಲಿರುವರು. ಉದ್ಯೋಗದಲ್ಲಿ ಪರಿಶ್ರಮಕ್ಕೆ ತಕ್ಕ ಫಲ ಲಭಿಸದು. ಆಹಾರ ದೋಷದಿಂದಾಗಿ ಅಜೀರ್ಣ ಉದರ ಶೂಲೆ ಇತ್ಯಾದಿಗಳು ಕಾಣಿಸಲಿವೆ. ದೈವದೇವರುಗಳಲ್ಲಿ ಹೆಚ್ಚಿನ ನಂಬಿಕೆಯುಳ್ಳ ನಿಮಗೆ ತಾ. 14, 15 ಸ್ವಲ್ಪ ಚೆನ್ನಾಗಿದೆ.

೫. ಸಿಂಹ

ಉತ್ಸಾಹಿಗಳಾದ ನಿಮಗೆ ದೈವವೂ ನೆರವಾಗುವದು. ಮಾಡಿದ ಕಾರ್ಯಗಳೆಲ್ಲವೂ ಸಫಲಗಳಾಗುವವು. ಮಹಾತ್ಮರ ಸ್ನೇಹ ಅಧಿಕಾರಿಗಳ ಕೃಪೆಗಳನ್ನು ಹೊಂದಿದ ನಿಮಗೆ ಸಮಾಜದಲ್ಲೂ ರಾಜಕೀಯದಲ್ಲೂ ಒಳ್ಳೆಯ ಭವಿತವ್ಯವಿದೆ. ಆರ್ಥಿಕ ತಗಾದೆಯಿಂದ ಮುಕ್ತರಾದ ನಿಮಗೆ ಆರೋಗ್ಯವೇ ಚೆನ್ನಾಗಿರದೊಲ್ಲದು. ನಿಷ್ಕಾರಣ ವಾಕ್ಕಲಹವುಂಟಾದೀತು. ಮುಖತಃ ಭೆಟ್ಟಿಗಿಂತಲೂ ಪತ್ರ ವ್ಯವಹಾರವು ಒಳ್ಳೇ ಪರಿಣಾಮಕಾರಿಯಾಗಲಿದೆ. ವಾರಾದಿಯ 3 ದಿನಗಳು ತುಂಬ ಅನುಕೂಲವಾಗಿವೆ.

೬. ಕನ್ಯಾ

ನೀವೆಷ್ಟೇ ಮಿತಭಾಷಿಗಳಾಗಿದ್ದರೂ ಮಾತನಾಡಿದವರ ಕೂಡೆ ಕಲಹ ನಿಷ್ಠೂರಗಳು ಅನಿವಾರ್ಯವಾಗಿವೆ. ಸ್ವಯಂಶಕ್ತರಾದ ನಿಮಗೆ ವ್ಯಾಪಾರ ಮತ್ತು ಕಂಟ್ರಾಕ್ಟು ಮೊದಲಾದ ಉದ್ಯಮಗಳಲ್ಲಿ ಒಳ್ಳೆಯ ಲಾಭವಿರುವುದು. ಪಿತ್ತೋಷ್ಣ ದೋಷದಿಂದ ಆರೋಗ್ಯ ಕೆಟ್ಟೀತು. ರಾಜಕೀಯರಂಗಕ್ಕಿಂದು ಸದ್ಯ ಪ್ರವೇಶ ಮಾಡಬೇಡಿರಿ. ಅಧಿಕಾರಿಗಳ ಅನುಗ್ರಹವಂ ಪಡೆದ ನಿಮಗೆ ಉದ್ಯೋಗದಲ್ಲಿ ಭಡತಿ ದೊರೆತೀತು. ವಾರಾದಿಯ 5 ದಿನಗಳು ಅಭೀಷ್ಟಪ್ರದಗಳಿವೆ.

೭. ತುಲಾ

ಭಾಗ್ಯಲಾಭಪತಿಗಳು ಲಾಭಸ್ಥಾನದಲ್ಲೇ ಪರಿವರ್ತಿತರಾಗಿ ಭಾಗ್ಯದಲ್ಲಿ ಸುರಗುರುಗಳಿದ್ದು ಜನ್ಮರಾಶಿಯಲ್ಲಿ ತತ್ಪತಿಗಳಿಂದ ಶುಕ್ರಾಚಾರ್ಯರೂ ಅಸೀನರಾಗಿ ಸದಾ ನಿಮ್ಮ ಶ್ರೇಯಸ್ಸನ್ನು ಹಾರೈಸುತಿಹರು. ಇಂತಹ ಸುಸಂಧಿಯನ್ನು ವ್ಯರ್ಥ ಮಾಡದೆ ಉದ್ಯೋಗರಂಗದಲ್ಲಿ ಧೈರ್ಯದಿಂದ ಮುಂದೆ ಸಾಗಿರಿ. ನಿಮ್ಮ ಮನೋರಥವು ಏನೊಂದೂ ಎಡರುತೊಡರುಗಳಿಗೆ ಸಿಲುಕದೆ ಸೀದಾ ಗುರಿಯನ್ನು ಸೇರಲಿದೆ. ಹೆಂಡತಿ ಮಕ್ಕಳ ಸಲುವಾಗಿ ಹೆಚ್ಚಿನ ಧನ ವ್ಯಯಿಸುವಿರಿ. ನಿರಾಮಯರಾದ ನಿಮಗೆ ವಾರಾಂತ್ಯದ 5 ದಿನಗಳು ತುಂಬ ಅನುಕೂಲವಾಗಿವೆ.

೮. ವೃಶ್ಚಿಕ

ನಿಮ್ಮ ಆರೋಗ್ಯ ಮತ್ತು ಅದೃಷ್ಟಗಳು ಚೆನ್ನಾಗಿಲ್ಲವು. ಅತಃಪರ ಮನಸ್ಸು ಸದಾ ಗಾಳಿಗೆದುರಾಗಿಟ್ಟ ದೀಪದಂತೆ ಚಂಚಲವಾಗಿಹುದು. ಆದರೂ ನೀವೆಂದು ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಶ್ರದ್ಧೆವಹಿಸುವಿರಿ. ಪರಿಶ್ರಮವು ವಿಫಲವಾಗದು. ಖರ್ಚಿಗೆ ತಕ್ಕುದಾದ ಆದಾಯವೂ ಇರೋಣದರಿಂದ ಹಣದ ತಗಾದೆಯಿರದು. ಗುರುಹಿರಿಯರ ಕೂಡೆ ಕೆಲವೊಮ್ಮೆ ಮನಸ್ತಾಪಗಳುಂಟಾದಾವು. ವಾರಾಂತ್ಯದ 3 ದಿನಗಳು ಇದ್ದುದರಲ್ಲುತ್ತಮ.

೯. ಧನು

ದೈವಬಲ ಸಂಪನ್ನರಾದ ನಿಮಗೆ ಅಷ್ಟು ಬಲವು ಸಾಕಷ್ಟಿರೋಣದರಿಂದ ಸದ್ಯ ಯಾವ ಭಾಗದಲ್ಲೂ ನಿಮ್ಮನ್ಯಾರೂ ಇದಿರಿಸಲಾರರು. ಎಂತಹ ದುಃಸಾಧ್ಯವಾದ ಕಾರ್ಯವಾದರೂ ಕೂಡ ನಿಮಗಿಂದು ತೃಣಸಮವೆನಿಸೀತು. ಕಾರ್ಯದಕ್ಷರೂ ವ್ಯವಹಾರ ಕುಶಲರೂ ಆದ ನಿಮಗೆ ಜನತೆಯು ತಾನಾಗಿ ಬಂದು ನೆರವಾಗುವದು. ಯಾವ ಭಾಗದಲ್ಲೂ ನಿಮಗಿಂದು ಕೊರತೆ ಕಾಣದು. ಹಣದ ಲೇವಾದೇವಿ ನಿಮಿತ್ತ ಚಿಕ್ಕಪುಟ್ಟ ಕಲಹಗಳುದಿಸುವಂತಿವೆ. ವಾರಾದಿಯ 2 ದಿನಗಳು ತುಂಬ ಅನುಕೂಲವಾಗಿವೆ.

೧೦. ಮಕರ

ಸುಖ ಲಾಭಪತಿಯಾದ ಕುಜನು ಕರ್ಮಸ್ಥಾನದಲ್ಲಿದ್ದು ಗುರುವಿನ ಪೂರ್ಣದೃಷ್ಟಿಯನ್ನು ಪಡೆದಿರುವುದರಿಂದ ನಿಮ್ಮ ಕರ್ತವ್ಯವು ನಿರಾಯಾಸದಿಂದ ಪೂರ್ಣವಾಗಲಿದೆ. ನೀಚ ಜನರ ಮುಖಾಂತರ ಹೆಚ್ಚಿನ ಫಲ ಲಾಭವಾಗುವದು. ದ್ಯೂತ ಪ್ರಿಯರಿಗೆ ಅನಿರೀಕ್ಷಿತವಾಗಿ ಧನ ಲಭಿಸಲಿದೆ. ಎಷ್ಟೇ ಮಿತಭಾಷಿಯಾಗಿದ್ದರೂ ವಾಕ್ಕಲಹವಾಗದಿರದು. ದೇಹಾರೋಗ್ಯವು ಉತ್ತಮವಾಗಿದ್ದರೂ ಮನೋರೋಗದಿಂದ ಸದಾ ಬಳಲುವಿರಿ. ತಾ. 11—12—13 ಈ ದಿನಗಳು ಇತರ ದಿನಗಳಿಗಿಂತ ಲೇಸಾಗಿವೆ.

೧೧ ಕುಂಭ

ಧನ ಸುಖಲಾಭಪತಿಗಳ ಪೂರ್ಣ ಅನುಗ್ರಹಕ್ಕೆ ಪಾತ್ರರಾದ ನಿಮಗೆ ಇಂದಿನ ದಿನಗಳು ತುಂಬ ಅನುಕೂಲವಾಗಿವೆ. ನಿಮ್ಮ ಕೆಲಸಕ್ಕಿಂತಲೂ ಅಧಿಕವಾದ ಫಲವನ್ನು ಪಡೆವಿರಿ. ಆದರೆ ಕೋರ್ಟು ಕಚೇರಿ ಮೊದಲಾದ ಕ್ಷೇತ್ರಗಳಲ್ಲಿ ನಿಮಗೆ ವಿಜಯವಿರದು. ಆರ್ಥಿಕ ತಗಾದೆಯಿಂದ ಮುಕ್ತರಾದ ನಿಮಗೆ ಸಮಾಜದಲ್ಲಿ ಗಣ್ಯ ಸ್ಥಾನ ಲಾಭವಾಗಲಿದೆ. ಹೆಂಡಿರು ಮಕ್ಕಳೊಂದಾಗಿ ನಿಮ್ಮ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುವರು. ತಾರೀಕು 9.10.14.15 ಉತ್ತಮ.

೧೨. ಮೀನ

ವಿರೋಧಿ ವರ್ಗದವರಿಂದ ವಿಪತ್ಪರಂಪರೆಗಳು ಬರಲಿವೆ. ಮಾತ್ರವಲ್ಲ ನಿಮ್ಮ ಧನಮಾನಾದಿಗಳಿಗೂ ಹಾನಿ ಸಂಭವಿಸೀತು. ಧನ ಭಾಗ್ಯಪನಾದ ಅಂಗಾರಕನು ಅನಿಷ್ಟಸ್ಥಾನವಾದ ಅಷ್ಟಮದಲ್ಲಿರೋಣದರಿಂದ ಆಕಸ್ಮಿಕ ಅಪಘಾತಗಳು ಕಚ್ಚಿ ಹುಣ್ಣು ನಗ್ಗರೆ ಚರ್ಮರೋಗಗಳೂ ಕಾಣಿಸಬಹುದು. ಆರ್ಥಿಕ ತಗಾದೆಯಿಂದ ದಿನದೂಡುವೆಯು ದುಸ್ತರವಾಗಲಿದೆ. ಉತ್ತಮ ಶೀಲರಿಗೆ ಶ್ರಮಕ್ಕೆ ತಕ್ಕ ಫಲ ಲಭಿಸಲಿದೆ. ತಾ. 11.12.13 ಈ ದಿನಗಳಲ್ಲಿ ದೇಹಸ್ವಾಸ್ಥ್ಯ ಮನೋನೆಮ್ಮದಿ ದೊರೆತೀತು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ:ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ನಟಿಕೇಶ'ರ
ಹೃದಯಸ್ಪರ್ಶಿ
ನವೀನ ಕಾದಂಬರಿಗಳು

ಹಸುರು ಹಂಸ
ಬೆಲೆ: ರೂ. ಎರಡು.

ಋಣ ಯಾತ್ರೆ
ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ
ಬೆಲೆ ರೂ. 2—00
ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ.

READ &
ADVERTISE IN
NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.



NAVAYUGA

ಕಥಾ ಪ್ರಪಂಚ

ಪ್ರತೀಕಾರ

ಕಥೆಗಾರರು: ಶ್ರೀ ಮಾಮಾ ವನಾಸಕರ್.

ಮುಗ್ಧ ಜೀವಿಗಳನ್ನು ಕೊಲ್ಲುವ ಕ್ರೂರ ಪ್ರಾಣಿಗಳ ರಕ್ತ ಗುಣ. ಈ ಶಿಕಾರಿಯ ರೋಮಾಂಚಕ ಸನ್ನಿವೇಶವನ್ನು ಇಲ್ಲಿ ಓದಿ ತಿಳಿಯಿರಿ.

ನನಗಾಗ ಎಂಟೋ-ಹತ್ತೋ ವರ್ಷಗಳಾಗಿದ್ದಿರಬಹುದು. ಅಂದರೆ ಇಂದಿಗೆ ಇಪ್ಪತ್ತೈದು ವರ್ಷದ ಹಿಂದಿನ ಕಥೆ!

ಈಗಿನಂತೆ ಆಗಿನ ಹಳ್ಳಿಗಳು ಮುಂದುವರಿದಿದ್ದಿರಲಿಲ್ಲ. ಹಳ್ಳಿ ಎಂದರೆ ಬರೀ ಕಾಡು-ಗುಡ್ಡಗಳಿಂದ ತುಂಬಿದ್ದಿತ್ತು. ಅಲ್ಲೊಂದು-ಇಲ್ಲೊಂದು ಎಂಬಂತೆ ಮನೆ ಇರುತಿತ್ತು. ನಾನೂ ಒಂದು ಹಳ್ಳಿಯ ವಾಸಿಯಾಗಿದ್ದೆ. ನಾನು—ನನ್ನ ತಂದೆ-ತಾಯಿ—ಅಜ್ಜ, ಅಣ್ಣ ಹಾಗೂ ನನ್ನ ಕಿರಿಯ ತಂಗಿ ಇಷ್ಟೇ ಜನರ ಒಂದು ಸಂಸಾರ.

ನನ್ನ ಅಜ್ಜ—ಅಪ್ಪ ಇವರಿಗೆ ಶಿಕಾರಿ ಎಂದರೆ ಬಲು ಪ್ರೀತಿ. ಇವರು ಜತೆಗೂಡಿ ಅನೇಕ ಹುಲಿಗಳನ್ನೂ ಚಿರತೆಗಳನ್ನೂ ಕೊಂದಿದ್ದರು.

ನಮ್ಮ ಮನೆಯು ಒಂದು ನದಿಯ ಹತ್ತಿರವೇ ಇದ್ದಿತ್ತು. ಬಳಿಯಲ್ಲಿಯೇ ಹಾಡಿ—ಹಾಡಿಯಾಚೆ ಕಾಡು. ಆ ಕಾಡು ತುಂಬಾ ಹುಲಿಗಳು.

ರಾತ್ರಿಯ ಹೊತ್ತು ಹುಲಿಗಳು ನದಿಯ ನೀರನ್ನು ಕುಡಿಯಲು ಬರುತ್ತಿದ್ದುವು. ಅಪ್ಪಿ ತಪ್ಪಿ ನನ್ನ ಅಜ್ಜ—ಅಪ್ಪ—ಇವರ ಕಣ್ಣಿಗೆ ಬಿದ್ದೆಂದರೆ ಆ ಹುಲಿಯು ಆ ನದಿಯ ನೀರನ್ನು ಅದೇ ಕೊನೆಯದಾಗಿ ಕುಡಿಯುವುದಾಗಿತ್ತು.

ಅದೊಂದು ದಿನ ರಾತ್ರಿ ಸುಮಾರು ಹತ್ತು ಘಂಟೆ ನಿಶಿಯಲ್ಲಿ ಚಂದಿರ ತನ್ನ ಬೆಳಕನ್ನು ಬೀರಿ ನಸುನಗುತ್ತಿದ್ದ. ನಮ್ಮ ಮನೆಯ ಕಿಂಡಿಯಲ್ಲಿ ನಾನು ನದಿಯ ನೆಳಲನ್ನು ಈಕ್ಷಿಸುತ್ತಾ ಇದ್ದೆ. ಆಗ ಒಂದು ಪಟ್ಟೆ ಹುಲಿಯು ಹೂಂಕರಿಸುತ್ತಾ ನದಿಯ ಬಳಿ ಬಂದಿತು. ನೋಡಲು ಬಹು ಸುಂದರವಾಗಿತ್ತು. ಹೊಟ್ಟೆಯು ಒಂದು ದೊಡ್ಡ ಗುಡಾಣದಂತೆ ಬೆಳದಿತ್ತು.

ನಾನು ಕೂಡಲೆ "ಅಪ್ಪಾ, ಅಜ್ಜಾ" ಎಂದು ಕೂಗಿದೆ. ಅವರಿಬ್ಬರೂ ತಕ್ಷಣ ಬಳಿಗೆ ಬಂದರು. ನಾನು ಕೈಸನ್ನೆ ಮಾಡಿ "ಹುಲಿ ಹುಲಿ" ಎಂದೆ.

ಅಪ್ಪ-ಅಜ್ಜ ನಾನು ತೋರಿಸಿದೆಡೆ ನೋಡಿದರು, ಆದರೆ ಎಂದಿನಂತೆ ಕೋವಿ ಕೈಗೆತ್ತಿಕೊಳ್ಳಲಿಲ್ಲ. ಶಾಂತ ಭಾವದಿಂದೆಂಬಂತೆ— "ಇರಲಿ, ನೀರು ಕುಡಿದು ಹೋಗಲಿ" ಎಂದು ಹೇಳಿ ಹಿಂದೆ ಬಂದರು.

ನನಗಾಶ್ಚರ್ಯ ವಾಯಿತು. ಕೇಳಿದೆ— "ಏನಜ್ಜ, ಹುಲಿ ನೋಡಿದ ಕ್ಷಣ ಕೋವಿ ಹಿಡಿದು ಗುಂಡು ತಪ್ಪದಂತೆ ಕೊಲ್ಲುವ ನೀನು ಇಂದು— "ಇರಲಿ, ನೀರು ಕುಡಿದು ಹೋಗಲಿ ಎನ್ನುವೆಯಲ್ಲ? ಏನು?" ಎಂದು ಮುಗಿಸುವನೊ ಇಲ್ಲವೊ ಅಜ್ಜ ಹೇಳಿದ—

"ಮಗೂ— ಅದು ಬಸುರಿ. ಅದರ ಹೊಟ್ಟೆಯಲ್ಲಿ ಒಂದು ಮರಿಯೊ ಎರಡು ಮರಿಯೊ ಇದೆ. ಏನೆಂದರೂ ಅದು ತಾಯಾಗುವ ಹುಲಿ. ಅಂತಹ ಹುಲಿಯನ್ನು ನಾನು ಕೊಲ್ಲುವುದಿಲ್ಲ. ಪಾಪ, ಅದರ ಪಾಡಿಗೆ ಅದು ಹೋಗಲಿ. ಇಂದೊ ನಾಳೆಯೊ ಮರಿ ಇಡಬಹುದು. ಮರಿ ದೊಡ್ಡದಾದ ಮೇಲೆ ಆ ಹುಲಿ ಸಿಕ್ಕರೆ ಕೊಲ್ಲುವ."

ನನಗೆ ಅಜ್ಜನ ಮೇಲೆ ತುಂಬಾ ಅಭಿಮಾನ ಉಕ್ಕಿಬಂತು. ಪ್ರಾಣಿ ದಯೆ! ಅದೂ ದುಷ್ಟ ಪ್ರಾಣಿಗಳ ಮೇಲೆ ದಯೆ! ಇಂದೇ ಆ ಹುಲಿಯನ್ನು ಕೊಂದಿದ್ದರೆ ಮುಂದು ಹುಟ್ಟುವ ಹುಲಿಗಳೆಂದೂ ಸಾಯುತ್ತಿದ್ದುವು. ಈಗ ಆ ಹುಲಿಯನ್ನು ಕೊಲ್ಲದಿರುವುದರಿಂದ ಒಂದಕ್ಕೆ ಮೂರೊ ನಾಲ್ಕೊ ಹುಲಿಗಳಾದಾವು. ಆದರೂ ಅಜ್ಜನಿಗೆ ಪ್ರಾಣಿದಯೆ ಎಲ್ಲಿಂದ ಉದ್ಭವವಾಯ್ತೊ ಎನಿಸಿಕೊಂಡೆ. ಆ ಬಗ್ಗೆ ಹೆಚ್ಚಿನ ಆಲೋಚನೆ ಮಾಡಲವಕಾಶವಿರಲಿಲ್ಲ. ರಾತ್ರಿ ಹೊತ್ತಾದುದರಿಂದ ನಿದ್ದೆಯ ದೆಸೆಯಿಂದ ಕಣ್ಣು ಮುಚ್ಚಲಾರಂಭಿಸಿದವು. ಆಗಾಗಲೇ ಬಸುರಿ ಹುಲಿ ನೀರು ಕುಡಿದು ಎಲ್ಲೋ ಮರೆಯಾಗಿತ್ತು. ನಾನು ಮಲಗಿದೆ. ಎಚ್ಚರವಾದಾಗ ಬೆಳಗಾಗಿತ್ತು.

ಹಿಂದಿನ ದಿನದ ಆ ಘಟನೆ ಮಾತ್ರ ನನ್ನ ಚಿತ್ತಭಿತ್ತಿಯಲ್ಲಿ ಅಚ್ಚಳಿಯದೆ ನಿಂತಿತ್ತು.

ಎಂದಿನಂತೆ ನಾನು ನನ್ನ ಮನೆಯ ಎರಡು ಹಸುಗಳನ್ನು ಮೇಯಿಸಲು ಹಾಡಿ ಕಡೆ, ಆ ಕಡೆ ಈ ಕಡೆ ಎಂದು ಅಟ್ಟಿಕೊಂಡು ಹೋಗಿದ್ದೆ. ದಟ್ಟನೆ ಬೆಳೆದ ಹಸುರು ಹುಲ್ಲನ್ನು ಮೇಯುತ್ತಾ ದನಗಳು ತಮ್ಮ ಕೆಲಸವನ್ನು ಮುಂದುವರಿಸುತ್ತಿದ್ದುವು. ನಾನೂ ಉಲ್ಲಾಸದಿಂದ ನನ್ನಷ್ಟಕ್ಕೆ ಯಾವುದೊ ಒಂದು ಹಾಡನ್ನು ಗುಣುಗುಟ್ಟುತ್ತಿದ್ದೆ. ಒಂದು ಹುಲಿ ಎಲ್ಲಿಂದಲೊ ಬಂದಿತು. ನಾನಂತೂ ಘಾಬರಿಯಿಂದ ಪಕ್ಕದಲ್ಲಿರುವ ಒಂದು ಮರವನ್ನೇರಿ ಕುಳಿತೆ.

ದನಗಳೂ ಏನೂ ಘಾಬರಿ ಪಟ್ಟಂತೆ ನನಗೆ ತೋರಲಿಲ್ಲ. ಅಥವ ನನ್ನ ಅಜ್ಜ ಪ್ರೀತಿಯಿಂದ ಸಾಕಿದ್ದರಿಂದ ಕೊಬ್ಬಿದ್ದವು. ಅವುಗಳ ಮೊನೆಯಾದ ಕೊಂಬನ್ನು ನೋಡಿದರೆ ಎಂತಹವನಿಗೂ ಹೆದರಿಕೆಯಾಗದಿರದು. ಬಂದ ಹುಲಿ ಹಿಂದಿನ ರಾತ್ರಿ ಬಂದ ಹುಲಿಯೇ ಆಗಿತ್ತಾದರೂ ಹಿಂದಿನ ರಾತ್ರಿಯಲ್ಲಿದ್ದಂತಹ ಹೊಟ್ಟೆ ಮಾತ್ರ ಇರಲಿಲ್ಲ. ಹೊಟ್ಟೆ ಇಳಿದಿತ್ತು. ಬಹುಶಃ ಅದು ಪ್ರಸವಿಸಿದ್ದಿರಬೇಕು.

ನನ್ನ ಮನಸ್ಸಿನಲ್ಲಿ ಎಂತೆಂತಹವೋ ವಿಚಾರ ಸುಳಿದು ಮಾಯವಾಗತೊಡಗಿದುವು. ಆದರೆ ಆ ನಮ್ಮ ದನಗಳು ಮಾತ್ರ ಕದಲದೆ ಯುದ್ಧಕ್ಕೆ ಸನ್ನದ್ಧರಾದಂತೆ ಕಾಲ್ಕೆರೆಯ ಹತ್ತಿದ್ದವು. ಹುಲಿಯೂ ಜಾಗ್ರತೆಯಿಂದ ಒಂದೊಂದೇ ಹೆಜ್ಜೆ ಮುಂದೆ ಇಡುತ್ತಿತ್ತು. ಒಂದು ದನವಂತೂ ಅತಿ ವೇಗದಲ್ಲಿ ಒಮ್ಮೆಲೆ ಹುಲಿಯನ್ನು ತನ ಚೂಪಾದ ಕೋಡುಗಳಿಂದ ತಿವಿಯಲು ಪ್ರಯತ್ನಿಸಿತು. ಇನ್ನೊಂದು ದನ ಮಾತ್ರ ಸುಮ್ಮನೆ—ಆದರೆ ಸದಾ ಜಾಗ್ರತೆಯಿಂದ ಇರುವಂತೆ ಸನ್ನದ್ಧವಾಗಿತ್ತು.

ಐದಾರು ನಿಮಿಷಗಳು ಪರಸ್ಪರ ಘರ್ಷಣೆಗಳುಂಟಾದನಂತರ ಕೊನೆಗೂ ನಮ್ಮ ಮನೆಯ ದನ ಸೋತಿತು. ದನದ ಕೊರಳು ಮುರಿಯಿತು. ಅವನ್ನು ನೋಡುವ ನನ್ನ ಕಣ್ಣುಗಳು ಮುಚ್ಚಿದವು. ಬೊಬ್ಬೆ ಹಾಕಬಹುದಿತ್ತು. ಆದರೆ ಅಕ್ಕ ಪಕ್ಕದಲ್ಲಿ ಯಾರೊಬ್ಬರ ಮನೆಯೂ ಇದ್ದಿಲ್ಲ ಇದ್ದರೂ ಬಹು ದೂರ. ಕೂಗು ಕೇಳಿಸದಿರಬಹುದಾದಷ್ಟು ದೂರ.

ಮುಚ್ಚಿದ ಕಣ್ಣು ತೆರೆಯುವಾಗ ಸಮಯ ಬಹಳ ಮೀರಿತ್ತು. ನಮ್ಮ ಇನ್ನೊಂದು ದನ ಅಲ್ಲಿದ್ದಿರಲಿಲ್ಲ. ಸತ್ತ ದನದ ಕೆಲವು ಭಾಗಗಳು ಮಾತ್ರ ರಕ್ತದಲ್ಲಿ ತೊಯ್ದು ಅಲ್ಲಿ ಬಿದ್ದಿತ್ತು. ಹುಲಿಯಂತೂ ಅಲ್ಲಿ ಇರಲೇ ಇಲ್ಲ. ಇನ್ನೊಂದು ದನವನ್ನೂ ಆ ಹುಲಿ ಅಪಹರಿಸಿಕೊಂಡು ಹೋಯಿತೆ ಎಂಬ ವಿಚಾರ ಸುಳಿಯಿತು. ಆದರೆ ನಿಶ್ಚಯವಾಗಿ ಹೇಳುವಷ್ಟು ನನಗೆ ತಿಳಿದಿರಲಿಲ್ಲ.

ಕೊಂಚ ಹೊತ್ತಿನ ಮೇಲೆ ಧೈರ್ಯದಿಂದ ಮರವಿಳಿದು ನನ್ನ ಮನೆ ಕಡೆ ಓಡಿದೆ. ಆದರೆ ಎಂದಿನಂತೆ ನನ್ನೊಡನೆ ನಮ್ಮ ಮನೆಯ ಎರಡು ದನಗಳಿರಲಿಲ್ಲ. ಬರಿ ಕೈಯಿಂದ ಬಂದಿದ್ದೆ. ಅಜ್ಜ—ಅಪ್ಪ—ಅಮ್ಮ ಎಲ್ಲರೂ ಈಗ ನನಗೆ ಗದರಿಸಿಯಾರು ಎಂಬ ಭೀತಿಯು ತಲೆದೋರಿತು.

ಆದರೆ ಮನೆ ಸೇರುತ್ತಲೆ ನನಗೆ ಕೊಂಚ ಸಮಾಧಾನವಾಯಿತು. ಕಳೆದು ಹೋದ ಇನ್ನೊಂದು ದನ ಅಲ್ಲಿಗೆ ಬಂದಿತ್ತು. ಬಹುಶಃ ಜತೆಗಾತಿ ದನ ಹುಲಿಯ ಬಾಯಿಗೆ ಸಿಕ್ಕಿದ್ದನ್ನು ಕಂಡು ಓಡಿ ಬಂದಿರಬೇಕು.

ಅಜ್ಜನೇ ಮುಂದಾಗಿ ಕೇಳಿದ— "ಎಲೊ ಪೈದ, ಇನ್ನೊಂದು ದನವೇನಾಯ್ತು? ಹುಲಿ ತಿಂತೊ?"

ನಾನು "ಹೌದು" ಎಂಬಂತೆ ತಲೆಯಲ್ಲಾಡಿಸಿದೆ ವಿನಃ ತುಟಿ ಪಿಟಕ್ಕೆನ್ನಲಿಲ್ಲ. ಹೆಚ್ಚೇಕೆ ಬಾಯಲ್ಲಿ ಮಾತೇ ಹೊರಡುತ್ತಿರಲಿಲ್ಲ.

"ಪರವಾ ಇಲ್ಲ. ನೀನು ಬದುಕುಳಿದು ಬಂದೆಯಲ್ಲ" ಎಂದು ಅಪ್ಪ—ಅಮ್ಮ ಹೇಳಿದರು. ನಾನು ನಡೆದುದನ್ನು—ಕಣ್ಣಾರೆ ಕಂಡದ್ದನ್ನು ಇದ್ದಂತೆ ಹೇಳಿದೆ.

ನಮ್ಮ ದನವೊಂದರ ಪ್ರಾಣ ಹೋದ ದುಃಖವಿದ್ದರೂ ನನ್ನ ಉಳಿವಿನ ಬಗ್ಗೆ ಸಂತೋಷದಿಂದಾಗಿ ಅದೆಲ್ಲಾ ಮರೆಯುವಂತಾಗಿ ಹೋಯ್ತು.

o o o

ದಿನಗಳುರುಳಿ ತಿಂಗಳು ಕಳೆಯಿತು. ದೀಪಾವಳಿ ಬಂದಿತ್ತು. ಹಬ್ಬದ ದಿನ ನಮ್ಮ ಮನೆಯಲ್ಲಿ ನಾಲ್ಕೈದು ಮಂದಿ ಅತಿಥಿಗಳಾಗಿ ಬಂದಿದ್ದರು. ಅವರ ಜತೆಯಲ್ಲಿ ನನ್ನ ಪ್ರಾಯದವರೂ ಇದ್ದರು.

ನಾವು—ಸಮವಯಸ್ಕರು, ಒಂದೆಡೆ ಸೇರಿ ಆಡುತ್ತಿದ್ದಂತೆ ನಮಗೆ ಒಂದು ಹುಲಿ ಮರಿ ಸಿಕ್ಕಿತು. ಕೊಬ್ಬಿದ ಬೆಕ್ಕಿನಂತಿದ್ದ ಆ ಹುಲಿ ಮರಿಯನ್ನು ಸುಲಭವಾಗಿ ಹಿಡಿಸಿ, ನಾವು-ಹುಡುಗರೆಲ್ಲಾ ಸಂತೋಷದಿಂದ ಆ ಹುಲಿ ಮರಿ ಸಹಿತ ಮನೆ ಸೇರಿದೆವು.

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ ಹೊಸ ಬಡ್ಡಿ ದರಗಳು

		ಸೇಕಡಾ
91 ದಿನಗಳಿಂದ	6 ತಿಂಗಳ ಕೆಳಗೆ	$5\frac{1}{2}$
6 ತಿಂಗಳಿಂದ	12 ತಿಂಗಳ ಕೆಳಗೆ	6
12 ತಿಂಗಳಿಂದ	24 ತಿಂಗಳ ಕೆಳಗೆ	$6\frac{1}{4}$
24 ತಿಂಗಳಿಂದ	36 ತಿಂಗಳ ಕೆಳಗೆ	$6\frac{1}{2}$
36 ತಿಂಗಳಿಂದ	48 ತಿಂಗಳ ಕೆಳಗೆ	7
48 ತಿಂಗಳಿಂದ	60 ತಿಂಗಳ ಕೆಳಗೆ	$7\frac{1}{4}$
60 ತಿಂಗಳಿಂದ	84 ತಿಂಗಳ ಕೆಳಗೆ	$7\frac{1}{2}$
84 ತಿಂಗಳಿಂದ	120 ತಿಂಗಳ ಕೆಳಗೆ	8
ಸೇವಿಂಗ್ಸ್ ಖಾತೆಯ ಮೇಲೆ	....	4

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬ್ಯಾಂಕ್

ರಿಜಿಸ್ಟರ್ಡ್ ಆಫೀಸು: ಉಡುಪಿ.

ಸ್ಥಾಪನೆ: 1920.

Telephone 226.

Estd: 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

ಸಂಚಾಲಕ—ಸಂಪಾದಕ:

ಕೆ. ಹೊನ್ನಯ್ಯ ಶೆಟ್ಟಿ

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ. 1-50

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು. ಕಾಲು ಕಾಪಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು. ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅದನ್ನು ಚುಟುಕಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣಕಾರ್ಯವು ಸಾಮಾನ್ಯವಾಗಿ ಮಂಗಳವಾರವೇ ಮುಗಿಯುವುದರಿಂದ ವಾರ್ತೆ, ಕೋರ್ಟು ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಲೆಕ್ಕಕ್ಕೆ ಜಮೆ ಮಾಡುವ ಸೌಕರ್ಯವಿರುವುದು. ಚಂದಾದಾರರು ಹಣ ಪಾವತಿ ಮಾಡುವಾಗಲಾಗಲೀ ಪತ್ರವ್ಯವಹಾರ ಮಾಡುವಾಗಲಾಗಲೀ ತಮ್ಮ ಚಂದಾ ಸಂಖ್ಯೆಯನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಮೇಲೆ:— ಕಾಶ್ಮೀರದೊಳಗೆ ನುಗ್ಗಿದ ಪಾಕ್ ಆಕ್ರಮಣಕಾರರನ್ನು ಸೆರೆ ಹಿಡಿಯಲಾಗಿದೆ.

ಕೆಳಗೆ:— ಬಾಂಬು ದಾಳಿಯ ಭೀತಿಯ ನಡುವೆಯೂ ಶ್ರೀನಗರ ಶಾಂತವಾಗಿದೆ. ಹಜರತ್ ಬಾಲ್ ಮಂದಿರದಲ್ಲಿ ಜನ ಯಥಾರೀತಿ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ.

ನವಯುಗ

ಸಂಪುಟ ೪೫ | ಉಡುಪಿ | Vol. 45

ಸಂಚಿಕೆ ೩. | ೨೩—೯—೧೯೬೫ | No. 3

ವಚನ ಸುಧೆ

ಸುಲಭಾಃ ಪುರುಷಾಃ ರಾಜನ್
ಸತತಂ ಪ್ರಿಯ ವಾದಿನಃ
ಅಪ್ರಿಯಸ್ಯ ಚ ಪಥ್ಯಸ್ಯ
ವಕ್ತಾ ಶ್ರೋತಾ ಚದುರ್ಲಭಃ|

ಸದಾಕಾಲ ಪ್ರಿಯತರವಾದ ಮಾತುಗಳನ್ನು ಆಡುವವರು ಎಲ್ಲೆಲ್ಲಿಯೂ ದೊರೆಯುತ್ತಾರೆ. ಮುಖಸ್ತುತಿ ಮಾಡುವವರೂ ಮಾಡಿಸಿಕೊಳ್ಳುವವರೂ ಇರುತ್ತಾರೆ. ಆದರೆ, ಅಪ್ರಿಯವಾದರೂ ಹಿತಕರವಾದ ಮಾತುಗಳನ್ನು ಆಡುವವರೂ ಕೇಳುವವರೂ ಬಹಳ ಅಪರೂಪ.

ಮತ್ತೊಂದು ಆಹ್ವಾನ

ಭಾರತದ ಒಂದು ರಾಜ್ಯ ಕಾಶ್ಮೀರವನ್ನು ಕಬಳಿಸಲು ಬಂದ ಪಾಕ್ ಸರ್ಪವೀಗ ತನ್ನ ವಿಷದ ಹಲ್ಲುಗಳನ್ನು ಕಳೆದುಕೊಳ್ಳುವ ಹಂತದಲ್ಲಿದೆ. ಭಾರತೀಯ ಮುಂಗಾಪಿಯು ಅದಕ್ಕಡ್ಡವಾಗಿ ಗೀಟೆಳೆದಿದೆ. ಅಮೇರಿಕೆಯು ಕಮ್ಯುನಿಸ್ಟ್ ಆಕ್ರಮಣವನ್ನೆದುರಿಸಲು ನೀಡಿದ ಸೈನಿಕ ಶಕ್ತಿಯಿಂದ ಮದಾಂಧವಾದ ಪಾಕಿಸ್ತಾನ ತನ್ನ ಶಕ್ತಿಯನ್ನು ಕಳೆದುಕೊಂಡೀಗ ಧೃತಿಗೆಟ್ಟಿದೆ. ಹಾಗಿದ್ದರೂ ಹೋರಾಟವನ್ನು ನಿಲ್ಲಿಸಲು ಅದಕ್ಕೆ ಮನಸ್ಸಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯು ಥಾಂಟರ ಮುಂದೆ ಅಯ್ಯೂಬಖಾನರು ಮೂರು ಶರ್ತಗಳ ಆಧಾರದ ಮೇಲೆ ಸಮರವಿರಾಮಕ್ಕೆ ಒಪ್ಪಿದರು ಭಾರತವಾದರೂ ನಿಶ್ಶರ್ತವಾಗಿ ಒಪ್ಪಿದೆ. ಭದ್ರತಾ ಸಮಿತಿಯು ಮುಂದೆ ಯಾವ ಕ್ರಮಗಳನ್ನು ಕೈಗೊಳ್ಳುವುದೆಂಬುದು ಇಷ್ಟರಲ್ಲಿಯೇ ವ್ಯಕ್ತವಾಗುತ್ತದೆ. ತನ್ನ ತಾಪ್ರುಪಟದನ್ವಯ ಉಭಯ ದೇಶಗಳಿಗೂ ಕೂಡಲೇ ಹೋರಾಟ ನಿಲ್ಲಿಸುವ ಕರೆ ಕೊಡಬಹುದು; ಇನ್ನಿತರ ಕ್ರಮ ಕೈಗೊಳ್ಳಬಹುದು.

ಕಾಶ್ಮೀರದ ಮೇಲೆ ಪಾಕಿಸ್ತಾನವೇ ಮೊದಲಿಗೆ ಸಶಸ್ತ್ರ ಆಕ್ರಮಣ ಮಾಡಿದೆ; ಭಾರತವು ತನ್ನ ಸಮಗ್ರತೆಯನ್ನೂ, ಸಾರ್ವಭೌಮತೆಯನ್ನೂ ಉಳಿಸುವ ಸಲುವಾಗಿ ಹೋರಾಡುತ್ತದೆ. ಪಾಕ್ ದೇಶವನ್ನು ಆಕ್ರಮಿಸುವ ಇರಾದೆ ನಮ್ಮದಲ್ಲ. ಪಾಕ್ ಸೈನಿಕ ಮೂಲಗಳನ್ನು ಹಿಡಿಯುವುದು ಮಾತ್ರ ನಮ್ಮ ಗುರಿ. ಮತ್ತೆ ಮತ್ತೆ ಪಾಕ್ ಆಕ್ರಮಣಗಾರರು ನಮ್ಮ ನೆಲೆಗಳಿಗೆ ನುಗ್ಗಿ ಬಾರದಂತೆ ಮಾಡಲು ಅನುಕೂಲವಾಗುವುದು. ಆಕ್ರಮಣಗಾರ ಪಾಕಿಸ್ತಾನವೆಂಬುದೀಗ ಬಹಿರಂಗವಾದರೂ, ಜ| ನಿಮ್ಮೋ, ಯು ಥಾಂಟರು ಇದನ್ನು ಘೋಷಿಸಿದರೂ ಭದ್ರತಾ ಸಮಿತಿಯು ಇದನ್ನು ಒಪ್ಪಿಕೊಳ್ಳಲು ಸಿದ್ಧವಿರುವುದಿಲ್ಲವೆಂದು ತೋರುತ್ತದೆ. ಬ್ರಿಟನ್ನಿನಲ್ಲಿ ಭಾರತದ ವಿರುದ್ಧ ಅಪಪ್ರಚಾರವನ್ನು ಪತ್ರಿಕೆಗಳು ಮಾಡುತ್ತಲಿವೆಯೆಂದು ವಾರ್ತೆಗಳು ಬಂದಿವೆ. ಅಮೇರಿಕೆಯಾದರೂ ಆಕ್ರಮಣಕಾರನು ಯಾರೆಂದು ಸುಸ್ಪಷ್ಟವಿದ್ದರೂ ಆತನನ್ನು ಹೆಸರಿಸಲು ಮನಮಾಡಿರುವುದಿಲ್ಲ. ಒಟ್ಟಿನಲ್ಲಿ ಹಿರಿಯ ರಾಷ್ಟ್ರಗಳಿಗೆ ಪಾಕಿಸ್ತಾನವನ್ನು ನೋಯಿಸುವ, ಅದರ ಗೌರವ (?)ಕ್ಕೆ ಕುಂದುತರುವ ಪ್ರತ್ಯಕ್ಷವಾದ ಇರಾದೆಯಿಲ್ಲ; ಏಕೆಂದರೆ, ತಾವೇ ವಿಷವೆರೆದು ಬೆಳೆಸಿರುವ ವಿಷವೃಕ್ಷವದು ತಾನೆ? ಹಾಗಿದ್ದರೂ ಹೋರಾಟ ಮುಂದುವರಿಯ ಬಾರದು ಎಂದವುಗಳ ಮನದಾಶಯ.

ಪಾಕಿಸ್ತಾನವು ಭಾರತದ ಮೇಲೆ ನಗ್ನಾಕ್ರಮಣ ಮಾಡುವುದಕ್ಕೆ ಮೊದಲು ತನ್ನ ಮಾವ ಕೆಂಗು ಚೀನಾದೊಡನೆ ಕೇಳಿಕೊಂಡಿದೆ. ಅಲ್ಲಿನ ವಿದೇಶ ಮಂತ್ರಿಯು ಹೋರಾಟದ ವೇಳೆ ಪಾಕಿಸ್ತಾನಕ್ಕೆ ಬಂದುದು ಸುಮ್ಮನಲ್ಲ. ಈಗಿನ ಹೋರಾಟದಲ್ಲಿ ಭಾರತವು ಪಾಕ್ ಸೇನೆಯಿಂದ ಅಮೇರಿಕನ್ ಶಸ್ತ್ರಾಸ್ತ್ರಗಳನ್ನಲ್ಲದೆ ಚೀನೀಯ ಶಸ್ತ್ರಗಳನ್ನೂ ವಶಪಡಿಸಿಕೊಂಡಿದೆ. ಸಮರವನ್ನು ಘೋಷಿಸುವ ಎಂಟೆದೆ ಅಯ್ಯೂಬ ಖಾನರಿಗೆ ಬರಬೇಕಾದರೆ ಮಾವನ ಪೂರ್ಣಾನುಗ್ರಹ ಸಿಕ್ಕಿಯೇ ತೀರಬೇಕು. ಆದುದರಿಂದಲೇ ಪಾಕ್ ಪರಾಜಯವಾಗುತ್ತಿರುವಾಗ ಚೀನಾವು ಭಾರತಕ್ಕೆ ಬೆದರಿಕೆ ಹಾಕಿದೆ. ಸಿಕ್ಕಿಂ ಗಡಿಯಲ್ಲಿನ ಭಾರತೀಯ ಸೇನಾ ನೆಲೆಗಳನ್ನು ಮೂರು ದಿನಗಳೊಳಗಾಗಿ ಹಿಂದೆಗೆಯಬೇಕು ಎಂಬ ಗಂಭೀರ ಎಚ್ಚರಿಕೆ ಭಾರತಕ್ಕೆ! ಅಲ್ಲಿ ಅಂತಾರಾಷ್ಟ್ರೀಯ ಗಡಿಯ ಭಾರತೀಯ ಭಾಗದಲ್ಲಿಯಲ್ಲದೆ ಮತ್ತೆಲ್ಲಿಯೂ ನೆಲೆ ಇಲ್ಲ. ಇಂದರೆ, ಸೀನನಲ್ಲವಾದರೆ ಸಿನ್ನಪ್ಪ ಎಂದ ತೋಳನ ವರ್ತನೆಯನ್ನು ಚೀನಾ ತೋರಿದೆ. ಈ ಹೆಬ್ಬಾವಿನ ಬುಸುಗುಟ್ಟುವಿಕೆಯಿಂದ ನಾವು ತತ್ತರಿಸಿಲ್ಲ. ೭೨ ತಾಸುಗಳ ಅವಧಿಯನ್ನು ಅದು ಮತ್ತೆ ಅಷ್ಟರಿಂದಲೇ ಮುಂದುವರಿಸಿರುವುದು, ಆಕ್ರಮಣ ಮಾಡುವ ಇರಾದೆಯಿದ್ದರೆ, ಪೂರ್ವ ಸೂಚನೆಯನ್ನು ಕೊಟ್ಟಿರುವುದು ಚೀನಾದ ಸೋಜಿಗದ ಕೃತಿಗಳು. ಹಾಗಿದ್ದರೂ ಅದು ಕಚ್ಚುವುದಿಲ್ಲವೆಂದಾಗಲೀ ಕಚ್ಚಿಯೇ ಕಚ್ಚುತ್ತದೆಂದಾಗಲೀ ಯಾರಿಗೂ ಹೇಳಲು ಸಾಧ್ಯವಿಲ್ಲ. ಅಂತೂ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಬೆಂಬಲವನ್ನು ನೀಡಲು ಇದಿರಾದ ಚೀನಾ ಈ ಬಗೆಯ (ಅ)ನೈತಿಕ ಬೆಂಬಲ ನೀಡಿದ್ದೂ ಸಾಕು. ಭಾರತವನ್ನು ಬೆದರಿಸಿದರೆ, ಅದರ ಶಕ್ತಿಯನ್ನು ಪಶ್ಚಿಮದಿಂದ ವಿಭಾಗಿಸಿದಂತಾಗುವುದು. ಭಾರತ—ಚೀನಾಗಳ ೨೦೦೦ ಮೈಲುದ್ದದ ಗಡಿಯ ಲಕ್ಷ್ಮಣರೇಖೆಯನ್ನು ಭಾರತೀಯ ಸೇನೆಯು ಕಾಯಬೇಕಾದರೆ, ಪಾಕಿಸ್ತಾನದಿಂದ ಕಾಲು ಕೀಳಲೇ ಬೇಕಾದೀತು— ಏಕೆಂದರೆ, ತಾನೆಲ್ಲಿ ಹೋರಾಟ ನಡೆಸುವೆನೆಂಬುದನ್ನು ಚೀನಾ ಹೇಳಿರುವುದಿಲ್ಲ —ಇದು ಅದರ ಕಲ್ಪನೆ. ಅಷ್ಟರೊಳಗೆ ಭದ್ರತಾ ಮಂಡಳಿಯು ಭಾರತ ಪಾಕ್ ಸಮರವಿರಾಮ ಸಾಧಿಸಿದರೆ, ಅಳಿಯನ ಮುಂದೆ ಮಾವ ಮೀಸೆ ಹುರಿ ಮಾಡಲೂಬಹುದು.

ಒಂದು ಮಾತು ನಿಜ. ಚೀನಾದೊಡನೆ ಸಾಕಷ್ಟು ಸಮಾಲೋಚನೆ ನಡೆಸಿಯೇ ಪಾಕ್ ತನ್ನ ಕುಕೃತ್ಯಕ್ಕೆ ತೊಡಗಿದೆ. ಭಾರತದ ಮೇಲೆ ಚೀನಾವು ಆಕ್ರಮಣ ಮಾಡಿತೆಂದರೆ, ಭಾರತಕ್ಕೆ ಪಾಶ್ಚಾತ್ಯ ದೇಶಗಳು ನೆರವನ್ನು ಕಂಡಿತವಾಗಿ ಕೊಡುತ್ತವೆ. ಪರಿಸ್ಥಿತಿ ತೀರ ವಿಕೋಪಕ್ಕೆ ಹೋಗುತ್ತದೆ. ಇದನ್ನರಿತೇ ಭಾರತ-ಪಾಕ್‌ಗಳಲ್ಲಿ ಯಾರೊಬ್ಬರಿಗಾದರೂ ಸಹಾಯಕ್ಕೆ ಹೋಗಬಾರದೆಂದೂ ಅವರವರ ವಿವಾದವನ್ನು ಅವರವರೇ ನಿರ್ಣಯಿಸಲೆಂದೂ ಹೆಚ್ಚಿನವರು ಸುಮ್ಮನುಳಿದು ಶಾಂತಿಗೆ ಕರೆ ನೀಡಿದುದು. ಕೆಂಪು ಚೀನಾ ಈ ಎಚ್ಚರಿಕೆಯನ್ನು ಕಡೆಗಣಿಸಿ ಭಾರತದ ಮೇಲೆ ಆಕ್ರಮಣವನ್ನು ಮಾಡಲು ತೊಡಗಿತೆಂದರೆ, ಪ್ರಾದೇಶಿಕ ಸಮಗ್ರತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಲು ಪ್ರಾಣತೆತ್ತು ಹೋರಾಡುವ ಭಾರತೀಯರಿಗೆ ಸ್ವಾತಂತ್ರ್ಯ ಪ್ರೇಮಿ ರಾಷ್ಟ್ರಗಳೆಲ್ಲವುಗಳ ದೃಢ ಬೆಂಬಲ ದೊರೆತೇ ದೊರೆಯುತ್ತದೆ.

ಕಳೆದು ಹೋದ ದಿನಗಳಿಗಿಂತ ಬರಲಿರುವ ದಿನಗಳು ಕಠಿನವಾದುವುಗಳು. ಅವುಗಳನ್ನು ಎದುರಿಸುವ ಕೆಚ್ಚು ನಮ್ಮ ನರನಾಡಿಗಳಲ್ಲಿ ಉಕ್ಕಿ ಬರಲಿ.

ಚಂದಾದಾರರಲ್ಲಿ

ಅನಿರೀಕ್ಷಿತ ಅನಾನುಕೂಲತೆಗಳಿಂದಾಗಿ ಈ ಸಂಚಿಕೆಯಲ್ಲಿ 4 ಪುಟಗಳನ್ನು ಕಡಿಮೆ ಮಾಡಬೇಕಾಗಿ ಬಂದುದಕ್ಕೆ ವಿಷಾದಿಸುತ್ತೇವೆ.

—ಮೆನೇಜರ್, ನವಯುಗ.

ನರಸಣ್ಣನ ಸರಸ

"ಚೀನಾ ಸೇನಾ ಠಾಣೆಗಳನ್ನು ಕೀಳಲು ಭಾರತಕ್ಕಿತ್ತ ಅವಧಿಯನ್ನು ಮೂರು ದಿನಗಳಷ್ಟು ಹೆಚ್ಚಿಸಿತಂತೆ.."

"ಹ್ಹೂಂ, ತನ್ನ ದಿವಿಜನ್ನುಗಳನ್ನು ೨೦೦೦ ಮೈಲುದ್ದದ ವರೆಗೂ ಸಾಲಾಗಿ ನಿಲ್ಲಿಸಲು ಬರಿಯ ಮೂರು ದಿನ ಸಾಲದಾಯಿತೋ ಏನೋ...."

ಗೇಹ ರಾಜ್ಯದಲ್ಲಿ

ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು

"ಏನಂತೆ ವಿಶೇಷ?"

"ಅಲ್ವೇ, ಮನೇಲಿ ಬೇಕಾದ ಹಾಗೆ ರೇಡಿಯೋ ತಿರುಗಿಸಿ ಕೇಳುವವಳು ನೀನು, ಹಾಗಿರುವಾಗ .?"

"ಏನು ನೀವು ವಾರ್ತೆಗಳನ್ನ ಕೇಳಿಲ್ಲ ವೇನು?"

'ಕೇಳದೆ ಉಂಟೆ? ಆದರೆ ನೋಡು, ಯಾರ್‍ಯಾರದೋ ರೇಡಿಯೋವಲ್ಲಿ . ."

"ಒಳ್ಳೇ ಕತೆಯಿದು ತಲ್ಲ, ಕೇಳುವ ರೇಡಿಯೋ ಬೇರೆ ಬೇರೆಯಾದರೂ ಬಿತ್ತರಿಸುವ ವಾರ್ತೆ ಒಂದೇ ತಾನೆ?"

'ಅದು ಸರಿಯೇ. ಆದರೂ ಅವರವರ ರೇಡಿಯೋವಿನ ಗುಣ ಧರ್ಮ ಪರಿಸ್ಥಿತಿಗಳಿಗನುಸಾರವಾಗಿ ಸುದ್ದಿ ಕೇಳಿಸುತ್ತೆ ."

'ಹ್ಞಾಂ .'

'ಎರಡನ್ನೂ ಸೇನೆಯೆನ್ನುವುದು, ಆದರೂ ಗೆಲ್ಲುವವರು ಒಂದೇ ಕಡೆಯವರು....'

"ಅಲ್ರೀ, ನಮ್ಮ ಸೇನೆ ವಿಜಯ ಸಾಧಿಸುತ್ತ ಮುಂದುವರಿಯುತ್ತಲ್ಲ, ಆಜಾದ ಕಾಶ್ಮೀರವನ್ನು ಬೇಕಾದರೆ ತಮ್ಮ ವಶಕ್ಕೆ ತಂದುಕೊಳ್ಳಲಿ, ಪಾಕಿಸ್ತಾನದ ನಗರಗಳತ್ತ ಯಾಕೆ ದಾಳಿ?"

"ಅಯ್ಯೋ ಹುಚ್ಚೀ, ನಾವೆಲ್ಲಿ ದಾಳಿ ಮಾಡಿದ್ದೇವೆ?"

'ತಾಳಿ, ದಾಳಿಯಲ್ಲ, ಆತ್ಮ ರಕ್ಷಣೆಯ ಕಾರ್ಯ ಕ್ರಮವನ್ನು ಮುಂದು ವರಿಸಿದ್ದೇವೆ?'

"ನೋಡು, ನಮ್ಮದು ಒಂದೇ ನೀತಿ, ಪಾಕ್ ಆಕ್ರಮಣಕಾರರು ಭಾರತದ ಅವಿಭಾಜ್ಯ ಅಂಗ ಭಾರತದ ಮೇಲೆ ನುಗ್ಗಿಬಂದಿದ್ದರು. ಅವರನ್ನು ಹೊಡೆದೋಡಿಸುವುದರೊಡನೆ ಇನ್ನು ಮುಂದೆ ಅವರು ಬಾರದಂತೆ ಅವರ ಮೂಲವನ್ನೇ ನೆಲೆಯನ್ನೇ ಹಿಡಿದುಕೊಳ್ಳುವುದು . ."

"ಅಲ್ರೀ, ನಮ್ಮ ಉದ್ದೇಶ ಸಫಲವಾಗಿದೆ ಯೆನ್ನುತ್ತಾರಲ್ಲ. ಮತ್ಯಾಕೆ ಹೋರಾಟ ಮುಂದರಿಯ ಬೇಕು?"

"ಶತ್ರುಗಳು ಹೇಳಿ ಕೇಳಿ ಬರುವುದಿಲ್ಲ. ೧೯೪೭ರಲ್ಲಿ ನಡೆದ ಆಕ್ರಮಣದ ಪುನರಾವೃತ್ತಿ ಈಗ ಆಯಿತು. ಇದು ಮುಂದೆಂದೂ ಆಗಬಾರದು. ತನ್ನ ಪ್ರಾದೇಶಿಕ ಸಮಗ್ರತೆಯನ್ನು ಕಾಯ್ದುಕೊಳ್ಳಲು ಯಾವ ಬೆಲೆಯನ್ನಾದರೂ ಭಾರತವು ತೆರಲು ಸಿದ್ಧವಿದೆಯೆಂಬುದನ್ನು ಪಾಕಿಸ್ತಾನದ ನಾಯಕರಿಗೆ ಮನಗಾಣಿಸಿ ಕೊಡಬೇಕು. ಅವರು ಇನ್ನು ಮುಂದೆ ಈ ಬಗೆಯ ಹುಚ್ಚು ಕಾರ್ಯಕ್ಕೆ ಎಳಸಬಾರದು. ."

'ಹ್ಞಾಂ, ಇನ್ನೇನು ನೋಡಿ, ಪಾಕಿಸ್ತಾನದ ಟ್ಯಾಂಕುಗಳಲ್ಲಿ ಅರ್ಧಾಂಶಕ್ಕಿಂತ ಹೆಚ್ಚು ಹಾಳಾದುವಂತೆ, ನಾಲ್ಕರಲ್ಲೊಂದು ವಿಮಾನವೂ ನಾಶವಾದುವಂತೆ, ಅವರ ಶಕ್ತಿ ಕುಂದುತ್ತ ಬಂದಂತೆಯೇ ಸರಿ ."

"ಆನು ಸರಿಯೇ. ಆರುವ ದೀಪಕ್ಕೆ ಪ್ರಕಾಶ ಹೆಚ್ಚು. ನಿಜವಾದ ಸೇನೆಯಾದರೆ ಕಟ್ಟನಿಂದ ಹೋರಾಡಬಹುದು, ನಾವೂ ಘೋರ ಕದನವನ್ನೆದುರಿಸ ಬೇಕಾಗಬಹುದು ಆದರೂ ನಮ್ಮ ಸೇನೆಯ ನೈತಿಕ ಮಟ್ಟ, ಕೆಚ್ಚು, ಸಾಹಸಗಳು ಉನ್ನತವಾಗಿವೆ, ಜಯವಧುವಂತೂ ನಮ್ಮ ಪಾಲಿಗೆ."

'ಹ್ಞಾಂ, ಅಲ್ಲ, ಅಯೂಬಖಾನರು ತಾನು ಪತನದ ಹಂತದಲ್ಲಿರುವೆನೆಂದು ತಿಳಿ ತಿಳಿದೂ ಯು ಥಾಂಟರೊಡನೆ ಯಾಕೆ ಹಟ ಹಿಡಿದರು? ಸಮರ ವಿರಾಮಕ್ಕೆ ಒಪ್ಪಿಕೊಳ್ಳ ಬಹುದಿತ್ತಲ್ಲ?'

"ಅಯ್ಯೋ ಅದ್ಯಾಕೆ ಒಪ್ತಾರು? ಒಪ್ಪಿ ಬಿಟ್ಟನೆಂದರೆ, ಪಾಕಿಸ್ತಾನದ ಅವಸ್ಥೆ ಶೋಚನೀಯವೇ. ಕಾಶ್ಮೀರದ ಸಂಬಂಧವಾಗಿಯೇ ಯುದ್ಧ ಸಾರಿರುವ ಅಯೂಬಖಾನರು ಭಾರತದ ಮೇಲೆ ಯಾವ ಕಡೆಯಲ್ಲಾದರೂ ಒತ್ತಾಯ ಬಂದಿತೋ ಎಂದು ಕಾಯುತ್ತಾರೆ. ಅತ್ತ ಚೀನೀಯು ಮಾವನೂ ತನ್ನ ಬಾಲ ಅಲ್ಲಾಡಿಸಿದ್ದಾನೆ....'

"ಅಂದರೆ, ಕಚ್ಛ ರಣದ ತಂಟೆಯಲ್ಲಿ ಬ್ರಿಟನ್ನು ಮಧ್ಯೆ ಬಂದಂತೆ ..'

"ಹೌದು, ಅದಕ್ಕಾಗಿಯೇ ಅಯ್ಯೂಬರು ಅಮೇರಿಕೆಯನ್ನು ಕರೆದಿದ್ದಾರೆ."

"ಆದರೆ ಅಮೇರಿಕೆ ಸಿದ್ಧವಿಲ್ಲವಂತೆ ನೋಡಿ. ಭದ್ರತಾ ಸಮಿತಿಯೇ ಸಮರ ವಿರಾಮ ಸಾಧಿಸ ಬಲ್ಲುದು ಅನ್ನುತ್ತದೆ ಅದು "

"ಥಾಂಟರಂತೂ ಹಿಂದಿರುಗಿದರು."

"ಬರಿಗೈಯಲ್ಲಿ "

"ಎಲ್ಲಿ? ಅವರ ಮಾತಿನಲ್ಲೇ ಹೇಳುವುದಾದರೆ, ಸಮರ ವಿರಾಮದ ಬಗ್ಗೆ ಉಭಯ ರಾಷ್ಟ್ರಗಳಲ್ಲೂ ಇರುವ ಆಸಕ್ತಿಯನ್ನು ಕಂಡು ಕೊಂಡು . ."

'ಇನ್ನೇನು ಮಾಡುತ್ತಾರೆ?"

"ಭದ್ರತಾ ಮಂಡಲಿಯು ಏನು ನಿರ್ಧರಿಸುತ್ತದೆಯೋ ನೋಡಬೇಕು...."

"ಅದು ಏನು ಮಾಡೀತು?"

"ಭಾರತದ ಪ್ರತಿನಿಧಿ ನಿಯೋಗವು ಭಾರತದ ನೀತಿಯನ್ನು ಸರಿಯಾಗಿ ಮನಗಾಣಿಸಕೊಡಗಿದೆ. ವಿದೇಶಗಳಲ್ಲಿಯೂ ರಾಯಭಾರಿಗಳು ಇದೇ ಕೆಲಸವನ್ನು ಮಾಡುತ್ತಿದ್ದಾರೆ. ಏನಿದ್ದರೂ .."

'ಏನು?'

"ಮತ್ತೇನೂ ಇಲ್ಲ. ಪಾಕಿಸ್ತಾನವನ್ನು ಆಕ್ರಮಣಗಾರ ಎಂದು ಭದ್ರತಾ ಸಮಿತಿ ಕರೆಯಬಹುದೇಂತ?"

"ಅದಕ್ಕೆ ಇನ್ನೇನು ಸಂಕೋಚ? ಜನಿವಾ ಹೇಳಿದ್ದಾರೆ, ಯು ಥಾಂಟರು ದಿದ್ದಾರೆ...."

'ಅವರಂದರೂ ಇವರನ್ನಬೇಕಲ್ಲ?"

"ಯಾಕೆ ಅನ್ನುವುದಿಲ್ಲ?"

'ಅದೇ ರಾಜಕೀಯ ರಹಸ್ಯ....'

'ಹಾಗಾದರೆ?'

"ಹಾಗಾದರೇನು? ಕಾದು ನೋಡಬೇಕಷ್ಟೆ...."

'ಅಲ್ರೀ, ಯು ಥಾಂಟರೊಡನೆ ಶಾಸ್ತ್ರಿ ಏನು ಹೇಳಿದರಂತೆ?'

'ಏನೇ ಹೇಳ್ಲಿ, ಭಾರತ ಸಮರ ವಿರಾಮಕ್ಕೆ ಸಿದ್ಧವಿದೇಂತ ಅಂದ್ರಂತೆ ಆದರೆ, ಪಾಕಿಸ್ತಾನದ ಪೂರ್ವ ಶರ್ತಗಳನ್ನು ಮಾತ್ರ ಒಪ್ಪಿಕೊಳ್ಳಲಿಕ್ಕಿಲ್ಲವಂತೆ..."

'ಅಂದ್ರೆ .. ಅದೇ ಕಾಶ್ಮೀರದಲ್ಲಿ ಜನಮತಗಣನೆ ಮಾಡುವುದು....'

"ಹ್ಞಾಂ...."

"ಅದೀಗ ಸರಿಯಾಗದು. ನಮ್ಮ ದೇಶದ ಒಂದು ರಾಜ್ಯದಲ್ಲಿ ಜನಮತಗಣನೆಯಾಗಬೇಕೆಂದು ಹೇಳುವ ಅಧಿಕಾರ ಪಾಕಿಸ್ತಾನಕ್ಕೆ ಕೊಟ್ಟವರು ಯಾರು"

"ಅದೇ ಅನ್ನುವುದು, ಭಾರತದ ಒಂದು ರಾಜ್ಯ ಜಮ್ಮು ಮತ್ತು ಕಾಶ್ಮೀರದ ಮೇಲೆ ಪಾಕಿಸ್ತಾನಿಗಳು ಪೂರ್ವ ಯೋಜನೆಯಂತೆ ಅತಿಕ್ರಮಣಕಾರರನ್ನು ಅಕ್ರಮವಾಗಿ ಗಳಿಸಿ, ಬಲಾತ್ಕಾರ ಶಕ್ತಿಯ ಮೂಲಕ ಅಲ್ಲಿ ಚುನಾವಣೆಗಳ ಮೂಲಕ ಸ್ಥಾಪಿತವಾದ ಪ್ರಜಾಸತ್ತಾತ್ಮಕ ಸರಕಾರವನ್ನು ಉರುಳಿಸಿ ಅರಾಜಕತೆಯನ್ನು ಹುಟ್ಟಿಸಿ ಗೊಂದಲವೆಬ್ಬಿಸುವ ಇರಾದೆಯುಳ್ಳವರಿದ್ದರು. ರಾಷ್ಟ್ರದ ಸಮಗ್ರತೆ ಮತ್ತು ಸಾರ್ವಭೌಮತೆಯ ಸಂರಕ್ಷಣೆಗಾಗಿ ಭಾರತವು ಸುಮ್ಮನಿರುವುದು ಸಾಧ್ಯವಿರಲಿಲ್ಲ. ಹಾಗಾಗಿ ಭಾರತವೇನೂ ಯುದ್ಧ ಮಾಡಲಿಲ್ಲ. ಸಾರಲೂ ಇಲ್ಲ. ಆದರೆ, ಪಾಕಿಸ್ತಾನವೇ ಭಾರತವನ್ನು ಯುದ್ಧರಂಗಕ್ಕೆಳೆದಿದೆ; ಭಾರತದ ಮೇಲೆ ಯುದ್ಧ ಸಾರಿದೆ. ಭಾರತ ತನ್ನ ಆತ್ಮರಕ್ಷಣೆಗಾಗಿಯೇ ಹೋರಾಡುತ್ತಿದೆ..."

'ಅದು ನಿಜಾನ್ನಿ. ಅಲ್ರೀ, ಆ ಕೆಂಪು ಚೀನಾದವರು ಏನೋ ಭಾರತಕ್ಕೆ ಎಚ್ಚರಿಕೆ ನೀಡಿದ್ದಾರಂತಲ್ಲ?'

"ಹೌದು, ಸಿಕ್ಕಿಂ ಗಡಿಯಲ್ಲಿರುವ ಭಾರತೀಯ ಸೇನೆಯನ್ನು ಹಿಂತೆಗೆದುಕೊಳ್ಳಬೇಕಂತೆ..."

"ಅಲ್ರೀ, ಅಲ್ಲಿ ನಮ್ಮ ಸೇನೆಯಿದೆಯೇನು?'

'ಹೊಸತೇನೂ ಅಲ್ಲಿ ನಡೆದಿಲ್ಲ...'

'ಹಾಗಾದರೆ?'

'ಏನಿಲ್ಲ. ಭಾರತವನ್ನು ಕೆಡಹುವುದು, ಅದರ ಲಕ್ಷ್ಯವನ್ನು ವಿಭಜಿಸುವುದು. ಅನುಕೂಲ ಪರಿಸ್ಥಿತಿಯೊದಗಿ ಬಂದರೆ, ಪಾಕಿಸ್ತಾನಕ್ಕೆ ಯಾವ ರೀತಿಯಿಂದಾದರೂ ನೆರವಾಗುವುದು ಅದರ ಉದ್ದೇಶವಿರಬಹುದು ."

'ಅಂದ್ರೆ, ಭಾರತ ಪಾಕಿಸ್ತಾನಗಳ ತಂಟೆಯನ್ನು ವಿಸ್ತರಿಸುವುದು, ಉರಿಯುವ ಬೆಂಕಿಗೆ ತುಪ್ಪ ಸುರಿಯುವುದು....'

"ಹ್ಞಾಂ..."

"ಅದ್ರ ನೋಡಿ, ಚೀನಾ ಈ ಮಧ್ಯೆ ಪ್ರವೇಶಿಸಿದರೆ, ಅಮೇರಿಕೆ, ಬ್ರಿಟನ್

(ಹತ್ತನೇ ಪುಟ ನೋಡಿರಿ)

Form No. 155

Name of the company:

KARNATAKA TILES PRIVATE LIMITED

COONDAPUR (in liquidation).

Notice convening final meeting.

Notice is hereby given in pursuance of Section 497/509 that a General Meeting of the members of the abovenamed Company will be held at the Registered Office of the Company on Friday the 5th day of November 1965 at 3 P. M. (afternoon) for the purpose of having an account laid before them showing the manner in which the winding up has been conducted and the property of the Company disposed of and of hearing any explanation that may be given by the liquidator and also of determining by a special resolution of the company the manner in which the books, accounts and documents of the Company and of liquidator shall be disposed of.

Dated this 10th day of September, 1965.

(G. Kushala Hegde.)
Signature of the Liquidator.

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್

ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ

"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½% ದಿಂದ 8% ವರೆಗಿನ ಬಡ್ಡಿ ದರ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ರಿ. ಆಫೀಸು—"ವಿಜಯ ಬ್ಯಾಂಕ್ ಬಿಲ್ಡಿಂಗ್",

ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು—3

ಪರಿಚಯ

ಶ್ರೀಮತಿ ಕಮಲಾ ನೆಹರು

ಬರೆದವರು
ಶ್ರೀ ಪಿ. ಕೆ. ಶೆಟ್ಟಿ, ಕರೋಪಾಡಿ.

ಪತಿ ಜವಾಹರರು ದೇಶ ಸೇವಾ ಧುರಂಧರರಾದರೆ ಈಕೆ ಆದರ್ಶ ನಾರಿಯೂ ಆಗಿದ್ದರು.

ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ವೀರ ನಾರಿಯರ ಸಾಲಿನಲ್ಲಿ ಸೇರಬಹುದಾದ ಆದರ್ಶ ವನಿತೆಯರಲ್ಲಿ ದಿ| ನೆಹರೂರವರ ಧರ್ಮಪತ್ನಿ ಶ್ರೀಮತಿ ಕಮಲಾ ನೆಹರೂರವರೂ ಒಬ್ಬರು.

ಸತ್ಯಾಗ್ರಹ ಆಂದೋಲನದ ವೇಳೆ ಬ್ರಿಟಿಷರಿಗೂ ಭಾರತೀಯರಿಗೂ ಬಿರುಸಾದ ಹೋರಾಟವೇ ನಡೆದಿತ್ತು. ಭಾರತೀಯ ಧೈರ್ಯ, ಸಾಹಸ, ಕಷ್ಟ ಸಹಿಷ್ಣುತೆಗಳ ನಿಜವಾದ ಪರೀಕ್ಷೆಯೇ ನಡೆದಿದ್ದ ಆ ಸಮಯದಲ್ಲಿ, ಸನ್ಮಾರ್ಗದಲ್ಲಿ ನಮ್ಮ ಅನೇಕ ಪ್ರಮುಖ ನಾಯಕರು ಸೆರೆಮನೆಯ ಕಹಿಯನ್ನು ಅನುಭವಿಸುತ್ತಿದ್ದರು.

ಅದೇ ಹೊತ್ತಿಗಾಗಲೇ ತನ್ನ ಮಾವ ಪಂಡಿತ ಮೋತಿಲಾಲ ನೆಹರೂ ಮತ್ತು ಪತಿ ಜವಾಹರಲಾಲ ನೆಹರೂ—ಇವರುಗಳು ಜೈಲು ಸೇರಿದೊಡನೆ, ಗಂಡೆದೆಯಿಂದ ಸತ್ಯಾಗ್ರಹ ಆಂದೋಲನದ ಸಂಪೂರ್ಣ ಭಾರವನ್ನು ತಾನೇ ವಹಿಸಿಕೊಂಡ ಶ್ರೀಮತಿ ಕಮಲಾ ನೆಹರೂ, ತನ್ನ ವೀರ ವಾಣಿಯಿಂದ ಸಹಸ್ರಾರು ಶಿಕ್ಷಿತಾಶಿಕ್ಷಿತ ನಾರೀ ಸಮೂಹವನ್ನು ತನ್ನೆಡೆಗೆ ಆಕರ್ಷಿಸಿ, ಪವಿತ್ರವಾದ ಈ ದೇಶಹಿತಕಾರ್ಯಕ್ಕಾಗಿ ಪ್ರೇರಣೆಯನ್ನಿತ್ತರು.

ಸುಮಾರು ಒಂದು ಸಾವಿರದ ಒಂಭೈನೂರನೇ ಇಸವಿಯಲ್ಲಿ ದೆಹಲಿಯ ಒಂದು ಶ್ರೀಮಂತ ವ್ಯಾಪಾರಿಯೊಬ್ಬರಿಗೆ ಮಗಳಾಗಿ ಕಮಲಾರವರು ಹುಟ್ಟಿದರು. ಅವರ ಬಾಲ್ಯವು ಬಹಳ ಮುದ್ದಿನಿಂದ ತಂದೆಯ ಬಳಿಯಲ್ಲೇ ಕಳೆಯಿತು; ಹಿಂದೀ ಭಾಷೆಯಲ್ಲಿ ಸ್ವಲ್ಪ ಸುಟ್ಟಿನ ಓದು ಬರಹವನ್ನು ಕಲಿಸಲಾಯಿತು.

ಪಂಡಿತ ನೆಹರೂರವರು ಇಂಗ್ಲೆಂಡಿನಿಂದ ಬ್ಯಾರಿಸ್ಟರರಾಗಿ ಬಂದ ವೇಳೆಗಾಗಲೇ —1916ನೇ ಇಸವಿಯಲ್ಲಿ ನೆಹರೂರವರ ವಿವಾಹವು ಕಮಲಾರೊಂದಿಗೆ ಬಹಳ ವಿಜೃಂಭಣೆಯಿಂದ ನೆರವೇರಿತು. ಮುಪ್ಪಿನ ಮುದುಕರು ಇಂದಿಗೂ ಆ ವಿವಾಹದ ವೈಭವವನ್ನು ಬಾಯ್ತುಂಬ ಹೊಗಳುತ್ತಾರಂತೆ!

ಗಂಡನ ಮನೆಗೆ ಕಾಲಿಡುತ್ತಲೇ ಶ್ರೀಮತಿ ಕಮಲಾರವರು ತನ್ನ ಸರ್ವಗುಣ ಸಂಪನ್ನತೆಯಿಂದ ಮನೆಯವರನ್ನೆಲ್ಲಾ ತನ್ನ ವಶಮಾಡಿಕೊಂಡರು. ಅತ್ತೆ, ಮಾವಂದಿರ ಮಮತೆಗೆ ಪಾತ್ರರೂ, ಪತಿ ಮಹಾಶಯರ ಹೃದಯ ದೇವತೆಯೂ, ಅತ್ತಿಗೆಯರ ಒತ್ತಿನ ಸಹೋದರಿಯೂ ಆದರು. ಮನೆಯ ಆಳುಗಳ ಮನದಲ್ಲಿ ತನ್ನ ಬಗೆಗೆ ಭಕ್ತಿಯು ಉತ್ಪನ್ನವಾಗುವಂತೆ ವರ್ತಿಸಿದರು. ಆಕೆ ಆ ಮನೆಯ ಸೌಭಾಗ್ಯಲಕ್ಷ್ಮಿಯೇ ಆದರು.

ವಿವಾಹವಾದ ಬಳಿಕ ಕೆಲವೇ ವರ್ಷಗಳಲ್ಲಿ ಪಂಡಿತ ನೆಹರೂ ಅವರು ಬ್ಯಾರಿಸ್ಟರ್ ವೃತ್ತಿಯನ್ನು ಬಿಟ್ಟರು. ಅವರ ಒಲವು ರಾಷ್ಟ್ರೀಯತೆಯ ಕಡೆಗೆ ಹರಿದಿತ್ತು. ಭಾರತ ನಾರಿಯ ಆದರ್ಶವೆಂಬಂತೆ ಶ್ರೀಮತಿ ಕಮಲಾರೂ ತನ್ನ ಪತಿಯ ಮಾರ್ಗವನ್ನೇ ಅವಲಂಬಿಸಿದರು. ಕೆಲವೇ ದಿನಗಳಲ್ಲಿ ಆ ಆದರ್ಶ ಸತಿಯು ದೇಶ ಪ್ರೇಮದ ಪ್ರವಾಹ ದೇಶದ ಉದ್ದಗಲಕ್ಕೂ ಹರಿಯಿತು. ಜನರಲ್ಲಿ ದೇಶಪ್ರೇಮದ ಸ್ಫೂರ್ತಿ ಉಕ್ಕಿತು. ೧೯೨೦-೨೧ರಲ್ಲಿ ಪಂಜಾಬಿನ ಹತ್ಯಾಕಾಂಡದ ವೇಳೆ ಮಹಾತ್ಮಾ ಗಾಂಧೀಜಿಯವರು ಅಸಹಕಾರ ಚಳವಳಿಕ್ಕೆ ಕರೆಯಿತ್ತರು. ಪಂಡಿತ ಜವಾಹರಲಾಲರೂ ಅವರೊಂದಿಗೆ ಅವರ ಸಂಗಡಿಗರೂ ಈ ಅಸಹಕಾರ ಚಳವಳಿಗೆ ಧುಮುಕಿದರು. ಆಗಲೂ ಶ್ರೀಮತಿ ಕಮಲಾ ನೆಹರೂ ತನ್ನ ಪತಿಯ ಜೊತೆಗಿದ್ದರು.

ಬಳಿಕ ಉಪ್ಪಿನ ಸತ್ಯಾಗ್ರಹದ ವೇಳೆ ಶ್ರೀಮತಿ ಕಮಲಾರವರು ತಮ್ಮಿಂದ ಯಾವ ಕಾರ್ಯಗಳನ್ನು ಮಾಡಲು ಸಾಧ್ಯವಿತ್ತೋ ಅವನ್ನೆಲ್ಲಾ ಮಾಡಿಯೇ ಪೂರೈಸಿದ್ದಾರೆ. ಹಸಿವು ನೀರಡಿಕೆಗಳನ್ನು ಲೆಕ್ಕಿಸದೆ ಗ್ರಾಮಗಳಲ್ಲಿ ಮನೆ ಮನೆಗೆ ನಡೆದು ರಾಷ್ಟ್ರೀಯತೆಯ ಸಂದೇಶವನ್ನು ಮುಟ್ಟಿಸಿದ್ದಾರೆ; ಜನರ ಮನಸ್ಸೊಲಿಸಿದ್ದಾರೆ. ಆಂಗ್ಲ ಸರಕಾರದ ಕಾನೂನುಗಳನ್ನು ಎಷ್ಟು ಬಗೆಯಿಂದ ವಿರೋಧಿಸಲು ಶಕ್ಯವಿತ್ತೋ ಅಷ್ಟು ಬಗೆಯಿಂದ ವಿರೋಧಿಸಿದ್ದಾರೆ. ಪೋಲೀಸು ಅಧಿಕಾರಿಗಳ ಲಾಠಿಯ ಪ್ರಹಾರಕ್ಕೆ ಸ್ವಾಗತ ನೀಡಿದ್ದಾರೆ; ಕೊನೆಗೆ ಜೈಲನ್ನೂ ಸೇರಿದ್ದಾರೆ.

ತನ್ನ ಪತಿ ಹಾಗೂ ತನಗೆ ಮೇಲಿಂದ ಮೇಲೆ ಈ ರೀತಿಯಿಂದ ಕಷ್ಟಗಳು ಬಂದಾಗ ಮಾನಸಿಕವಾಗಿಯೂ ಶಾರೀರಿಕವಾಗಿಯೂ ಅವರ ಆರೋಗ್ಯಕ್ಕೆ ಧಕ್ಕೆ ಬಾರದೆ ಉಳಿಯಲಿಲ್ಲ. ವಿಶ್ರಾಂತಿಯೇ ದೊರೆಯದಾಯಿತು. ಆರೋಗ್ಯ ಕೆಡುತ್ತಾ ಸಾಗಿತು.

ಆ ಮೊದಲೇ ಅಂದರೆ ೧೯೨೦-೨೧ರ ಸುಮಾರಿಗೇ ಶ್ರೀಮತಿಯವರ ಶರೀರದಲ್ಲಿ ಕ್ಷಯರೋಗದ ಚಿಹ್ನೆ ಕಾಣಿಸಿತ್ತು. ಬೇಕಾದ ಚಿಕಿತ್ಸೆಗಳನ್ನು ನಡೆಸುತ್ತಿದ್ದರೂ ಮಾನಸಿಕ ಚಿಂತೆಗೊಳಗಾದ ಅವರ ಕಾಯಿಲೆ ಉಲ್ಬಣ ಸ್ಥಿತಿಗೇರತೊಡಗಿತು. ನೆಹರೂ ಅವರು ಇನ್ನೂ ಕಾರಾಗೃಹದಲ್ಲೇ ಇದ್ದರು.

ನಮ್ಮಲ್ಲೇ ಬೇಕಾದ ಚಿಕಿತ್ಸೆ ಮಾಡಿಯೂ ಏನೂ ಫಲದೋರದಾಗ ಶ್ರೀಮತಿ ಕಮಲಾರವರು ಚಿಕಿತ್ಸೆಗಾಗಿ ಸ್ವಿಜರ್‌ಲೇಂಡಿಗೆ ಹೋಗುವುದೆಂದು ನಿಶ್ಚಯವಾಯಿತು. ಸ್ವಿಜರ್‌ಲೇಂಡಿನಲ್ಲಿ ಕೆಲ ಸಮಯದ ಚಿಕಿತ್ಸೆ ನಡೆಯಿತು. ರೋಗವು ಮುಂದೆ ಹೆಜ್ಜೆಯಿಡುತ್ತಿತ್ತಲ್ಲದೆ ಹಿಂದೆ ಬರುತ್ತಲೇ ಇರಲಿಲ್ಲ.

ಅದೇ ವೇಳೆಗೆ ಭಾರತದಲ್ಲಿ ಅಸಹಕಾರ ಆಂದೋಲನ ಬಹಳ ಬಿರುಸಿನಿಂದ ನಡೆದ ದೆಸೆಯಿಂದ ಸರಕಾರ ಅಶಕ್ತವಾಗಿ ಜೈಲಿನಲ್ಲಿದ್ದ ಜವಾಹರರನ್ನು ಬಿಟ್ಟುಬಿಟ್ಟಿತು. ಬಂಧಮುಕ್ತರಾಗುತ್ತಲೆ ಜವಾಹರಲಾಲರು ನೇರವಾಗಿ ತನ್ನ ಪತ್ನಿಯನ್ನು ನೋಡುವುದಕ್ಕಾಗಿ ಸ್ವಿಜರ್‌ಲೇಂಡಿಗೆ ಪಯಣ ಬೆಳೆಸಿದರು.

ತನ್ನ ಪತಿಯನ್ನು ನೋಡುತ್ತಿದ್ದಂತೆ ಕಮಲಾರವರಿಗೆ ಅಪಾರ ಆನಂದವಾಯಿತು. ಕಣ್ಣುಗಳಿಂದ ಹರ್ಷ ಬಾಷ್ಪವು ಉಕ್ಕಿ ತೊಟ್ಟಿಕ್ಕಿತು. ಅವರ ರೋಗವು ಬಹಳ ಉಲ್ಬಣಿಸಿತ್ತು. ಇನ್ನು ತಾನು ರೋಗದಿಂದ ಮುಕ್ತಳಾಗುದಿಲ್ಲವೆಂದು ಅವರಿಗೆ ಖಂಡಿತ ಅರಿವಾದಂತಿತ್ತು. ಅದರಂತೆ ೧೯೩೬ನೇ ಫೆಬ್ರುವರಿ ೨೮ರಂದು ತನ್ನ ಪೂಜ್ಯ ಪತಿದೇವನ ಬಳಿಯಲ್ಲೇ, ಪತಿದೇವರಿಂದ ಮತ್ತು ತನ್ನ ಮಗಳು ಇಂದಿರಾಳಿಂದ ವಿದಾಯ ಪಡೆದು ಈ ಲೋಕದಿಂದ ಕಣ್ಮರೆಯಾದರು.

ಕಮಲಾರ ಅಂತ್ಯಕ್ರಿಯೆಯು ಅಲ್ಲಿಯೇ ನಡೆಯಿತು. ನೆಹರೂರವರು ಪತ್ನಿಯ ಚಿತೆಯ ಭಸ್ಮವನ್ನು ತನ್ನೊಂದಿಗೆ ಅಲಹಾಬಾದಿಗೆ ತಂದು; ಅಲಹಾಬಾದಿನಲ್ಲಿ ಬಹು ದೊಡ್ಡ ಮೆರವಣಿಗೆಯೊಂದಿಗೆ ತ್ರಿವೇಣಿ ಸಂಗಮಕ್ಕೊಯ್ದು ಪವಿತ್ರ ಜಲದಲ್ಲಿ ಬಿಟ್ಟಾಗ ಮೆರವಣಿಗೆಯೊಂದಿಗೆ ಬಂದಿದ್ದ ಪ್ರತಿಯೊರ್ವನ ಕಣ್ಣುಗಳಿಂದ ಅಶ್ರುಗಳು ಉರುಳುತ್ತಿದ್ದುವಂತೆ!

ಕಮಲಾರವರು ವಿವಾಹವಾದ ಮರುವರ್ಷವೇ ಕೇಂದ್ರದ ಇಂದಿನ ಸಚಿವೆಯೋರ್ವರಾದ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಜನ್ಮವಿತ್ತಿದ್ದರು. ಆ ಬಳಿಕ ೧೯೨೪ರಲ್ಲಿ ತಾನು ಜನ್ಮ ಕೊಟ್ಟಂತಹ ಗಂಡು ಶಿಶುವೊಂದು ಕೇವಲ ಮೂರೇ ದಿನಗಳಲ್ಲಿ ಈ ಲೋಕದಿಂದ ತೆರಳಿತು. ಅದು ಹಾಗಾದುದು ಭಾರತೀಯರ ದೌರ್ಭಾಗ್ಯವೆನ್ನಲೇ ಬೇಕು. ಯಾಕೆಂದರೆ ಆ ಮಹಾನ್ ವ್ಯಕ್ತಿಗಳ ಪ್ರೇಮದ ಫಲಸ್ವರೂಪವಾದ, ನೆಹರೂ ವಂಶದ ಆ ಕುಡಿಯು ಭಾರತದ ಭವಿಷ್ಯದಲ್ಲಿ ಮಹತ್ತ ವ್ಯಕ್ತಿಯಾಗುತ್ತಿತ್ತೋ ಏನೋ ಎಂಬುದು ಜನರ ಊಹನೆಯಾಗಿದೆ!

ಕಮಲಾರವರ ಸ್ಮಾರಕಾರ್ಥವಾಗಿ, ಅವರ ಅಪೇಕ್ಷೆಯಂತೆ ಪ್ರಯಾಗದಲ್ಲಿ "ಕಮಲಾನೆಹರೂ ಹೋಸ್ಪಿಟಲ್" ಎಂಬ ಆಸ್ಪತ್ರೆಯೊಂದು ಸ್ಥಾಪಿತವಾಗಿದೆ. ಕೇವಲ ಸ್ತ್ರೀಯರಿಗಾಗಿ ಮಾತ್ರವಿರುವ ಈ

(ಒಂಭತ್ತನೇ ಪುಟ ನೋಡಿ)



ಕಾಶ್ಮೀರದ ಮೇಲೆ ಪಾಕಿಸ್

ಪಾಕಿಸ್ತಾನವು ಕಾಶ್ಮೀರದ ಮೇಲೆ ಅಂದು—೧೯೪೭ರಲ್ಲಿ ದುರಾಕ್ರಮಣ ನಡೆಸಿದಾಗ, ಇಂದು ೧೯೬೫ರಲ್ಲಿ ದುರಾಕ್ರಮಣ ನಡೆಸುವಾಗ ಅನುಸರಿಸಿದ ವಿಧಾನಗಳಲ್ಲಿ ಒಂದೇ ಒಂದಂಶವನ್ನು ಬಿಟ್ಟು ಬಹ್ವಂಶಗಳಲ್ಲಿ ಸಾಮ್ಯವಿರುವುದು. ಈಗಿನ ದುರಾಕ್ರಮಣ ಯತ್ನದಲ್ಲಿ, ಅತಿಕ್ರಮಣಕಾರರಿಗೆ, ಸ್ಥಳೀಯ ಕಾಶ್ಮೀರಿ ಜನತೆಯೊಂದಿಗೆ ಸ್ನೇಹವನ್ನು ಸಂವರ್ಧಿಸಿಕೊಳ್ಳುವಂತೆಯೂ ಅಸಹಕಾರ ತೋರಿಸಿದ ಪ್ರಸಂಗಗಳಲ್ಲಿ ಬೆದರಿಕೆಯನ್ನು ಹಾಕುವಂತೆಯೂ ಸೂಚಿಸಲಾಗಿರುವುದು.

ಪಾಕಿಸ್ತಾನ ಸರ್ಕಾರವು, ೧೯೪೭ರಲ್ಲಿ ಈ ಆಕಾರ್ಯದಲ್ಲಿ ಭಾಗವಹಿಸಿರುವುದನ್ನು ಅಲ್ಲಗಳೆಯುವುದಕ್ಕೆ ಉಪಯೋಗಿಸಿಕೊಂಡಿದ್ದ ಮುಸುಕನ್ನು ಈಗಲೂ ಉಪಯೋಗಿಸಿಕೊಂಡಿದೆ.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ತನ್ನ ಪ್ರತಿನಿಧಿಯೆಂದು ಅಮೇರಿಕೆಯು ಆರ್ಥರ್ ಜೆ. ಗೋಲ್ಡ್‌ಬರ್ಗರನ್ನು ಜುಲೈ ೧೯೬೫ರಲ್ಲಿ ನೇಮಿಸಿತು. ಗೋಲ್ಡ್‌ಬರ್ಗರು ಕೂಲಿಗಾರ ನಾಯಕರಾಗಿದ್ದು ಕೆನ್ನೆಡಿ ಮಂತ್ರಿಮಂಡಳದಲ್ಲಿ ಕೂಲಿಗಾರ ಶಾಖೆಯ ಕಾರ್ಯದರ್ಶಿಯೂಗಿದ್ದರು. ಹೊಸ ಹುದ್ದೆಗೆ ನೇಮಕವಾಗುವುದಕ್ಕೆ ಮೊದಲು ಅಮೆರಿಕೆಯ ಸರ್ವೋಚ್ಚ ನ್ಯಾಯಾಲಯದ ಸಹ ನ್ಯಾಯಾಧೀಶರಾಗಿದ್ದರವರು. ಕಳೆದ ಆಗಸ್ಟ್ ೮ರಂದು ೫೭ನೆಯ ವಯಸ್ಸಿಗೆ ಕಾಲಿಟ್ಟ ಗೋಲ್ಡ್‌ಬರ್ಗ್ ಸಪ್ಟಂಬರ ತಿಂಗಳಲ್ಲಿ ಭದ್ರತಾ ಸಮಿತಿಯ ಅಧ್ಯಕ್ಷರಾದರು. ಕಾಶ್ಮೀರದ ಕೊಳ್ಳದಲ್ಲಿ ಭಾರತ-ಪಾಕಿಸ್ತಾನಗಳ ಹೋರಾಟವನ್ನು ನಿಲ್ಲಿಸುವಲ್ಲಿ ಇವರು ಮಹತ್ವದ ಪ್ರಯತ್ನ ಮಾಡಿದರು. ಪಾಕಿಸ್ತಾನದ ಅವ್ಯಾವಹಾರಿಕ ಪೂರ್ವಶರ್ತಗಳಿಂದ ವಿಫಲರಾದ ಯುಥಾಂಟ ವರದಿಯನ್ನು ಗಮನಿಸಿ ಮುಂದಿನ ಕ್ರಮ ಕೈಗೊಳ್ಳುವ ಹೊಣೆಗಾರಿಕೆಯನ್ನು ಇವರು ಹೊರಬೇಕಾಗಿದೆ. ಕಾಶ್ಮೀರದ ಕೊಳ್ಳದಲ್ಲಿ ಭಾರತದ ಮೇಲೆ ಪಾಕಿಸ್ತಾನವು ಆಕ್ರಮಣ ಮಾಡಿದುದು ಹಗಲಿನಷ್ಟು ಸ್ಪಷ್ಟವಿರುವಾಗ ಆಕ್ರಮಣಕಾರರನ್ನು ಬೊಟ್ಟು ಮಾಡಿ ತೋರಿಸಲು ಗೋಲ್ಡ್‌ಬರ್ಗ್ ಇನ್ನಾದರೂ ಹಿಂಜರಿಯಬಾರದು.

೧೯೪೮ರ ಜನವರಿ ೧೫ರಂದು, ಪಾಕಿಸ್ತಾನದ ವಿದೇಶಾಂಗ ಮಂತ್ರಿ ಸರ್ ಝಫರುಲ್ಲಾ ಖಾನರು, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳವರಿಗೆ ಬರೆದ ಪತ್ರದಲ್ಲಿ "ಅತಿಕ್ರಮಣಕಾರರೆಂದು ಕರೆಯಲಾಗುತ್ತಿರುವವರಿಗೆ, ತಾವು ಕೊಡುತ್ತಿರುವ ನೆರವನ್ನು" ಬಲವಾಗಿ ಅಲ್ಲಗಳೆದಿದ್ದರು. ಇಂದು, ಮಿ: ಝುಡ್ ಎ. ಭುಟ್ಟೋರವರು, ಅವರ ಹಾದಿಯನ್ನೇ ತುಳಿದಿದ್ದಾರೆ. ಈ ಆಕ್ರಮಣದ ವಿಷಯ ತಮಗೆ ಏನೂ ತಿಳಿಯದೆಂದೂ ಆಕ್ರಮಣಕ್ಕೆ ತಾವು ಹೊಣೆಗಾರರಲ್ಲವೆಂದೂ ಅವರು ಪ್ರತಿರೋಧಿಸಿದರು. ಪಾಕಿಸ್ತಾನದ ಇನ್ನುಳಿದ ನಾಯಕರು, ಪಾಕಿಸ್ತಾನಿ ಪತ್ರಿಕೆಗಳು ಮತ್ತು ರೇಡಿಯೋ ಸಹ ಅವರ ಈ ರಾಗಕ್ಕೆ ತಾಳ ಹಾಕುತ್ತಿವೆ.

ವಿಶ್ವದ ಪತ್ರಿಕೆಗಳು ಮತ್ತು ನಿಷ್ಪಕ್ಷಪಾತೀ ವೀಕ್ಷಕರುಗಳು ಪಾಕಿಸ್ತಾನದ ಕಪಟವನ್ನು ಪತ್ತೆಹಚ್ಚಿದ ಮೇಲೆ ಝಫರುಲ್ಲಾ ಖಾನರವರು. ಕಾಶ್ಮೀರಕ್ಕೆ ಸಂಬಂಧಪಟ್ಟ ವಿಶ್ವಸಂಸ್ಥೆಯ ಕಮೀಷನ್ನಿನ ಸದಸ್ಯರಿಗೆ ತನ್ನ ವಂದಯನ್ನು ಕಳುಹಿಸಬೇಕಾಯಿತು. ಧಾಳಿ ನಡೆದ ತಿಂಗಳ ನಂತರ ಪಾಕಿಸ್ತಾನಿ ಸೈನ್ಯವು ಕಾಶ್ಮೀರದಲ್ಲಿ ಆ ಸಮಯದಲ್ಲಿ ಪಾಕ್ ಸೇನೆಯ ಮೂರು ಬ್ರಿಗೇಡ್‌ಗಳನ್ನು ಇಟ್ಟುಕೊಂಡಿತ್ತೆಂದು ತಿಳಿಸಬೇಕಾಯಿತು.

ಇಂದು ಅದೇ ಧಾಟಿಯಿದೆ. ೧೫ ದಿನಗಳ ಕಾಲ ಅವಿರತವಾಗಿ ಅಲ್ಲಗಳೆದ ಮೇಲೆ, ಪಾಕಿಸ್ತಾನಿ ಅಧ್ಯಕ್ಷರು ಪಾಕ್ ದಳಗಳು ಈ ಆಕ್ರಮಣದಲ್ಲಿ ಪಾಲುಗೊಂಡಿದ್ದರೆಂಬುದನ್ನು ಒಪ್ಪಿಕೊಂಡಿರುವರು.

೧೯೪೭ರಲ್ಲಿ, ಕಾಶ್ಮೀರದ ಮೇಲೆ ಧಾಳಿ ಅಕ್ಟೋಬರ್ ೨೨ರಂದು ನಡೆಯಿತು. ಈ ಧಾಳಿ ಯದ್ವಾತದ್ವ ನಡೆಯಲಿಲ್ಲ; ದೊಂಬಿ ದಾಂದಲೆಯಿಂದ ನಡೆಯಲಿಲ್ಲ. ಆದ. ಪಾಕಿಸ್ತಾನಿ ಗವರ್ನರ್ ಜನರಲ್ಲರ ಕ್ರಮಬದ್ಧವಾದ ಆಜ್ಞೆಯ ಮೇರೆಗೆ ನಡೆಯಿತು. ಈ ಸಾರಿಯೂ ಅಷ್ಟೆ, ಅಧ್ಯಕ್ಷ ಅಯೂಬರೇ ಸಶಸ್ತ್ರ ಧಾಳಿಯ ಸೂತ್ರಧಾರರೆಂದು ನಂಬಲರ್ಹವಾದ ಪುರಾವೆಗಳು ದೊರೆತಿವೆ. ಪಾಕಿಸ್ತಾನದ ಆಕ್ರಮಣ ಮುಷ್ಟಿಯಲ್ಲಿದ್ದ ಪಾಕ್ ಕೈಗೊಂಬೆ ಅಬ್ದುಲ್ ಹಮೀದ್‌ಖಾನ್‌ರವರು, ರಾವಲ್ಪಿಂಡಿಯಲ್ಲಿ ೧೯೬೫ ಜನವರಿ ೫ರಂದು ಅಧ್ಯಕ್ಷ ಅಯೂಬ್‌ರವರನ್ನು ಭೇಟಿ ಮಾಡಿದ ಮೇಲೆ, ಅಯೂಬ್‌ರವರು ಕಾಶ್ಮೀರದ ವಿಮೋಚನೆಗಾಗಿ ಇನ್ನೂ ಹೆಚ್ಚಿನ ಕಠಿನ ಕ್ರಮಗಳನ್ನು ಕೈಗೊಳ್ಳುವ ಭರವಸೆಯನ್ನು ಅವರು ನೀಡಿರುವರು ಎಂದಿದ್ದರು.

ಭಾರಿ ಪ್ರಮಾಣದ ಧಾಳಿ ನಡೆಸಲು, ಹಾಗೂ ಪಾಕಿಸ್ತಾನದಲ್ಲಿ ಜನಜಂಗುಳಿಯಲ್ಲಿ ದ್ವೇಷವನ್ನು ಪ್ರಚೋದಿಸಲು ೧೯೪೭ರಲ್ಲಿ ಅನುಸರಿಸಿದ ವಿಧಾನಗಳನ್ನೇ ಈ ಸಾರಿಯೂ ಅನುಸರಿಸಿ ಅದನ್ನು ಮತ್ತಷ್ಟು ಸಾಂದ್ರಗೊಳಿಸಲಾಗಿದೆ.

ಪಶ್ಚಿಮ ಪಾಕಿಸ್ತಾನದ ಪುರಿಯಲ್ಲಿ ಧಾಳಿಕಾರರಿಗೆ ಸಘನ

ಅಂದು (೧೯೪೭)—ಇಂ

ರೀತಿಯಲ್ಲಿ ತರಬೇತಿಯನ್ನು ನೀಡಲು ವಿಶೇಷ ವ್ಯವಸ್ಥೆಯನ್ನು ರಚಿಸಲಾಗಿತ್ತು. ಪಾಕಿಸ್ತಾನದ ೧೨ ಇನ್‌ಫೆಂಟ್ರಿ ಡಿವಿಷನ್ ಪ್ರಧಾನ ಕಮಾಂಡಿಂಗ್ ಆಫೀಸರ್ ಲೆ. ಜ. ಅಖ್ತಾರ್ ಹುಸೇನ್ ಮಲ್ಲಿಕ್‌ರವರು ಈ ತರಬೇತಿಯ ನಿರ್ದೇಶಕರಾಗಿದ್ದರು. ಇದಕ್ಕೆ 'ಆಪರೇಷನ್ ಜಿಬ್ರಾಲ್ಟರ್' ಎಂದು ಕರೆಯಲಾಗಿತ್ತು. ಅಧ್ಯಕ್ಷ ಅಯೂಬ್ ಖಾನ್‌ರವರು ಈ ಕಳೆದ ಜೂನ್ ಎರಡನೆಯ ವಾರದಲ್ಲಿ ಈ ತರಬೇತಿಯನ್ನು ಪಡೆಯುತ್ತಿದ್ದವರನ್ನು ಉದ್ದೇಶಿಸಿ ಮಾತನಾಡಿ, ಆ ಮೂಲಕ ಅವರು ಕಾಶ್ಮೀರದಲ್ಲಿ ಗೊಂದಲ ಹಾಗೂ ಉತ್ಕಟ ಪರಿಸ್ಥಿತಿಯನ್ನು ಎಬ್ಬಿಸುವ ಗುರಿ ಸಾಧನೆಯಲ್ಲಿ ಆಸಕ್ತಿಯನ್ನು ತಾಳುವಂತೆ ಪ್ರಚೋದಿಸಿದರು.

ಈ ವರ್ಷದ ಆರಂಭದಿಂದೀಚೆಗೆ ಮಿಲಿಟರಿ ಸಿದ್ಧತೆಗಳು ತೀವ್ರತರವಾಗಿ ನಡೆಯುತ್ತಿವೆ. ಸಶಸ್ತ್ರ ಸೈನಿಕರಿಗೆ 'ಗೆರಿಲ್ಲಾ ಯುದ್ಧ ವಿಧಾನ'ದಲ್ಲಿ ಹೆಚ್ಚಿನ ತರಬೇತಿಯನ್ನು ಕೊಡಲು ಮೊದಲಾಯಿತು. ಅನೇಕ ಪಾಕಿಸ್ತಾನಿ ಅಧಿಕಾರಿಗಳು ೧೯೬೪ರ ಸಪ್ಟೆಂಬರ್ ತಿಂಗಳಿಂದೀಚೆಗೆ ಚೀಣೀ ಸೇನಾ ಶಿಕ್ಷಕರಿಂದ ಗೆರಿಲ್ಲಾ ಸಮರ ವಿಧಾನದಲ್ಲಿ ತರಬೇತಿ ಪಡೆಯುತ್ತಿರುವರು.

೧೯೬೫ರ ಮೇ ತಿಂಗಳ ವೇಳೆಗೆ ತೀವ್ರವಾದ ಧಾಳಿಗಾಗಿ ಸಿದ್ಧತೆಗಳಾದುವು. ಆಗ ಪಾಕಿಸ್ತಾನದ ಪ್ರಧಾನ ಸೇನಾನಿ ಜನರಲ್ ಮಹಮ್ಮದ್ ಮೂಸಾರವರು ಯುದ್ಧ ಸ್ತಂಭನ ರೇಖೆಯ ಕ್ಷೇತ್ರಕ್ಕೆ ಎರಡು ಸಾರಿ ಭೇಟಿ ಕೊಟ್ಟು ಬಂದರು. ಅವರ ಎರಡನೆಯ ಪ್ರವಾಸ ಮೇ ೩೦ನೆಯ ತಾರೀಖು ನಡೆಯಿತು. ಅವರೊಂದಿಗೆ ಅವರ ಕಾರ್ಯಾಲೋಚನಾ ಸಿಬ್ಬಂದಿಯೂ ಹೋಗಿದ್ದಿತು. ಅದಾದ ಬಳಿಕ ಅವರು ಅನೇಕ ಸೇನಾವ್ಯೂಹ ಸಂಯೋಜನಾಧಿಕಾರಿಗಳನ್ನೂ ಅವರ ಸಿಬ್ಬಂದಿಯವರನ್ನೂ ಸಮ್ಮೇಳನವೊಂದರಲ್ಲಿ ಸಂದರ್ಶಿಸಿದರು. ಪಾಕ್ ಸೇನಾ ಸಿದ್ಧತೆಯನ್ನೇ ಅವರು ಮುಖ್ಯವಾಗಿ ಸಮಾಲೋಚಿಸಿ ಸರ್ವಾಂಗೀಣ ಸಿದ್ಧತೆಯಾಗಿದೆ ಎಂಬುದನ್ನು ಮನಗಂಡರು.

ಮೇ ೨೯ರಂದು ನಡೆದ ಸಭೆಯಲ್ಲಿ ೧೦ ಮಂದಿ ಸದಸ್ಯರ ಕ್ರಿಯಾ ಸಮಿತಿಯೊಂದನ್ನು ರಚಿಸಲಾಯಿತು. ಕಾಶ್ಮೀರದಲ್ಲಿ ಬುಡ ಮೇಲು ಕೃತ್ಯಗಳನ್ನು ನಿಯೋಜಿಸಿ ಕಾರ್ಯಾಚರಣೆಗಿಳಿಸುವುದೇ ಆ ಸಮಿತಿಯ ಮುಖ್ಯ ಗುರಿಯಾಗಿತ್ತು.

ದಕ್ಷಿಣ ವಿಯತ್‌ನಾಮದ ಮೇಲೆ ವಿಯತ್ ಕಾಂಗೋ ಗೆರಿಲ್ಲಾ ಪಡೆಗಳು ಕಮ್ಯೂನಿಸ್ಟರ ನೇತೃತ್ವದಲ್ಲಿ ಹಳ್ಳಿಹಳ್ಳಿಗಳ ಮೇಲೆ ಆಕ್ರಮಣ ಮಾಡಿದುವು. ಆಹಾರ ವಸ್ತುಗಳನ್ನು ವಶಪಡಿಸಿಕೊಂಡುವು; ಮನೆಗಳನ್ನು ಸುಟ್ಟು ಹಾಕಿದುವು. ನಾಗರಿಕರಲ್ಲಿ ಅಭದ್ರತೆಯ ಭೀಷಣತೆಯ ಭಾವವನ್ನು ಹುಟ್ಟಿಸಿ ತಮ್ಮ ಸ್ವಾರ್ಥ ಸಾಧನೆ ಮಾಡುವುದೇ ಈ ಗೆರಿಲ್ಲಾ ಪಡೆಗಳ ಉದ್ದೇಶವಿತ್ತು. ಆಗ ಭಯಭೀತವಾದ ಪುಟ್ಟ ಕುಟುಂಬವಿದು.

ಪಾಕಿಸ್ತಾನಿ ಆಕ್ರಮ ಪ್ರವೇಶಗಾರರು ಸಮರ ವಿರಾಮ ರೇಖೆಯನ್ನು ಉಲ್ಲಂಘಿಸಿ ಕಾಶ್ಮೀರವನ್ನು ನುಗ್ಗಿ ಇದೇ ಬಗೆಯ ಕೋಟಲೆಗೊಳ್ಳುತ್ತಿದ್ದರು. ಆದರೆ, ಭಾರತ ಸರಕಾರದ ಕಾರ್ಯಾಚರಣೆಯಿಂದ ಆ ಭೀತಿಯಿಂದು ದೂರವಾಗಿದೆ. ಭಾರತದ ಸಾರ್ವಭೌಮಿಕತೆಗೆ ಬಂದ ಪಂಥಾಹ್ವಾನವನ್ನು ಭಾರತೀಯರು ಸಂತೋಷದಿಂದಲೇ ಸ್ವೀಕರಿಸಿದ್ದಾರೆ.

ನದ ವಿಫಲ ದುರಾಕ್ರಮಣ

೬೫) ಒಂದು ವಿವೇಚನೆ

ಪಾಕಿಸ್ತಾನ್ ಸೇನೆಯು ಸಮಗ್ರ ಅಂಗವನ್ನಾಗಿ ಮುಜಾಹಿದ್ ಬಲವನ್ನು ಪರಿಗ್ರಹಿಸುವ ಸಲುವಾಗಿ ಜೂನ್ ೮ರಂದು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಲಾಯಿತು. ರಾಷ್ಟ್ರೀಯ ಸಭೆಯು ಈ ವಿಶೇಷಾಜ್ಞೆಯನ್ನು ಜೂನ್ ೨೧ರಂದು ಅಂಗೀಕರಿಸಿತು. ಈ ಬಲದ ಸಂಖ್ಯೆಯನ್ನು ೧,೫೦,೦೦೦ ಎಂದು ಗೊತ್ತುಪಡಿಸಿದ್ದು ಆಗಲೇ.

ಕಾಶ್ಮೀರದ ಮೇಲೆ ಧಾಳಿ ನಡೆಸಲು ಅಯ್ಯೂಬ್ ಕಾರ್ಯಯೋಜನೆ ಮಾಡಿಕೊಂಡಿದ್ದು ಈ ವರ್ಷ ಮೇ ತಿಂಗಳ ಮೂರನೆಯ ವಾರದಲ್ಲಿ ಮುಕ್ತಾಯಗೊಂಡಿತು. ಕಚ್ ರಣ ಗಡಿ ವಿವಾದದಲ್ಲಿ ಶಾಂತಿಯುತವಾದ ಇತ್ಯರ್ಥಕ್ಕಾಗಿ ಸಮಾಲೋಚನೆ ನಡೆಯುತ್ತಿದ್ದುದು ಆ ಕಾಲದಲ್ಲೇ.

ಭಾರತದ ವಿರುದ್ಧ ವಿಧ್ವಂಸಕ ಚಟುವಟಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ಹಿನ್ನೆಲೆಯಾಗಿ ಸಾರ್ವಜನಿಕ ಅಭಿಪ್ರಾಯವನ್ನು ಸಿದ್ಧಗೊಳಿಸುವ ಸಾದ್ಯಂತ ಪಾಕಿಸ್ತಾನ್ ಪ್ರಚಾರ, ಅದೇ ಸಮಯದಲ್ಲಿ ಖಾಸಗಿ ಕ್ಷೇತ್ರಗಳಿಂದ ಆರಂಭವಾಯಿತು. ಅವು:

೧) ಕಾಶ್ಮೀರದ ವಿಮೋಚನೆಯೆಂದು ಹೇಳಲಾದ ಚಳುವಳಿಯ ಆರಂಭ

೨) ಗುಡ್ಡಗಾಡಿನ ನಾಯಕರಾದ ಮಲ್ಲಿಕ್ ಸ್ಕಿಂಗುಲ್ ಮೊದಲಾದವರು, ಗೆರಿಲ್ಲಾ ಯುದ್ಧ ಹೂಡುವುದಾಗಿ ಬೆದರಿಕೆ ಕೊಡುವಂತೆ ಮಾಡಲಾಯಿತು.

೩) ಪಾಕಿಸ್ತಾನಿ ಅಧಿಕಾರಿಗಳು ಜನತೆಯ ಬೆಂಬಲವನ್ನು ಗಳಿಸುವ ಸಲುವಾಗಿ ಪ್ರತಿಭಟನಾ ದಿನಾಚರಣೆಯೊಂದನ್ನು ನಡೆಸಿದರು

೪) ಪಶ್ಚಿಮ ಪಾಕಿಸ್ತಾನದಲ್ಲಿ ಪ್ರಾಂತೀಯ ಶಾಸನ ಸಭೆಯ ಚುನಾವಣೆಯ ಕಾಲದಲ್ಲಿ ಭಾರತದ ವಿರುದ್ಧ ಜೆಹಾದ್ ನ್ನು ಬಹಿರಂಗವಾಗಿ ಬೋಧಿಸಲಾಯಿತು. ಜಾಮಾಯಿತ್-ಇ ಮುಜಾಹಿದ್ ಪ್ರಯತ್ನ ಮುಂದುವರಿಯಿತು.

೫) ಮಜ್ಲಿಸ್-ಇ ತಹಾಫುಜ್ ಇ-ಪಾಕಿಸ್ತಾನ್ "ಜೆಹಾದ್ ದಿನ"ವನ್ನು ಮೇ ೨೧ರಂದು ದೇಶದಾದ್ಯಂತ ಆಚರಿಸಿತು. ಅದಾದ ಎರಡು ದಿನಗಳ ನಂತರ ಅದೇ ಉದ್ದೇಶದ ಪ್ರತಿಭಟನಾ ದಿನಾಚರಣೆ ನಡೆಯಿತು

ಏಪ್ರಿಲ್ ತಿಂಗಳಲ್ಲಿ ಅಧ್ಯಕ್ಷರ ಮುಜಾಹಿದ್ ನಿಧಿಯನ್ನು ಆರಂಭಿಸಲಾಯಿತು ಪಾಕಿಸ್ತಾನದ ನ್ಯಾಷನಲ್ ಬ್ಯಾಂಕ್ ಮತ್ತು ಯುನೈಟೆಡ್ ಬ್ಯಾಂಕ್ ಮುಜಾಹಿದ್‌ಗಳಿಗಾಗಿ ದೊಡ್ಡ ಪ್ರಮಾಣದಲ್ಲಿ ವಂತಿಗೆಗಳನ್ನು ನೀಡಿದವು.

ಧಾಳಿಕಾರರನ್ನು ತುಕ್ಕಡಿಗಳಾಗಿ ವ್ಯವಸ್ಥೆಗೊಳಿಸಲಾಯಿತು ಪ್ರತಿ ತುಕ್ಕಡಿಯಲ್ಲಿಯೂ ೧೧೦ ಜನರಿದ್ದು, ಮೇಜರ್ ದರ್ಜೆಯ ಸೇನಾಧಿಕಾರಿಯೊಬ್ಬನು ಅದರ ನಿರ್ದೇಶಕನಾಗಿ ನೇಮಕಗೊಂಡನು. ಒಂದು ತುಕ್ಕುಡಿಯಲ್ಲಿ ಕೊನೆಯ ಪಕ್ಷ ಮೂವರು ನಾನ್ ಕಮಿಷನ್ಡ್ ಅಧಿಕಾರಿಗಳು, ೧೯ ಮಂದಿ ವಿಶೇಷ ವರ್ಗದ ಖಾಕಾ ಬಲೂಚ್‌ಗಳು ಇದ್ದರು.

ಸೇತುವೆಗಳನ್ನು ನಾಶಪಡಿಸುವುದು, ಸಂಪರ್ಕ ಮಾರ್ಗಗಳನ್ನು ಕಡಿದು ಹಾಕುವುದು, ಭಾರತೀಯ ಸೇನೆಗಳಿಗೆ ಸೇರಿದ ಮುಖ್ಯ ನೆಲೆಗಳ ಮೇಲೆ ಪೋಲಿಸ್ ಠಾಣೆಗಳ ಮೇಲೆ ಧಾಳಿಯಿಡುವುದು, ಸೈನಿಕರು, ನಾಗರಿಕ ಅಧಿಕಾರಿಗಳು ಮತ್ತು ಪ್ರಮುಖ ವ್ಯಕ್ತಿಗಳಿಗೆ ಸಾವು ನೋವುಗಳನ್ನುಂಟುಮಾಡುವುದು ಅವರ ಚಟುವಟಿಕೆಗಳ ವ್ಯಾಪ್ತಿಗೊಳಪಟ್ಟದ್ದು.

ಶ್ರೀ ನಗರ, ಕಾರ್ಗಿಲ್ ಮತ್ತು ತಿತ್ವಾಲ್‌ಗಳಲ್ಲಿ ಸಾಧಿಸಲೋಸುಗ ಆರಿಸಿಕೊಳ್ಳಲಾಗಿದ್ದ ಗುರಿ ಮುಖ್ಯವಾಗಿ ಸಶಸ್ತ್ರ ಸೇನೆಗಳು "ಅಗಾಧ ಪ್ರಮಾಣ"ದಲ್ಲಿ ಗಡಿ ದಾಟುವುದು. ಮಿಲಿಟರಿ ಮೂಲಗಳು ಹಾಗೂ ವಿಶ್ವ ಸಂಸ್ಥೆಯ ಮುಖ್ಯ ಮಿಲಿಟರಿ ವೀಕ್ಷಕರಾದ ಜನರಲ್ ನಿಮ್ಮೋರವರ ವರದಿ ಈ ವಿಷಯವನ್ನು ಸಮರ್ಥಿಸಿವೆ

ಧಾಳಿಕೋರರ ಗುರಿಯು ಮಿಲಿಟರಿ ಉದ್ದೇಶಗಳಿಂದ ಕೂಡಿದ್ದರೂ, ಅವರು ಲೂಟಿ, ಅಗ್ನಿಸ್ಪರ್ಶ, ನಿಂಶಸ್ತ್ರರಾಗಿದ್ದ ನಾಗರಿಕರನ್ನು ಗುಂಡಿಟ್ಟು ಕೊಲ್ಲುವುದು ಈ ಕೆಲಸಗಳನ್ನು ನಿರತರಾದರು—೧೯೪೭ ಮತ್ತು ೪೮ ರಲ್ಲಿ ಇದೇ ರೀತಿ ನಡೆದಿತ್ತು.

ಇದಕ್ಕೆಲ್ಲಾ ಛಾಯಾ ಚಿತ್ರಗಳ ಪುರಾವೆಯಿದೆ. ಅಸೋಸಿಯೇಟೆಡ್ ಪ್ರೆಸ್ ಸಂಸ್ಥೆಯ ಛಾಯಾಗ್ರಹಕರೊಬ್ಬರು ೧೯೪೭ರ ಅಕ್ಟೋಬರ್‌ನಲ್ಲಿ ಕಾಶ್ಮೀರ ಧಾಳಿಯ ಕಾಲದಲ್ಲಿ ವಿಮಾನದಲ್ಲಿ ಹೋಗುತ್ತಿದ್ದಾಗ ೨೦ ಕ್ಕೂ ಹೆಚ್ಚು ಗ್ರಾಮಗಳು ಅಗ್ನಿ ಸ್ಪರ್ಶಕ್ಕೊಳಗಾಗಿದ್ದುದನ್ನು ತಾವು ನೋಡಿದುದಾಗಿ ತಿಳಿಸಿದ್ದರು ಆ ಗ್ರಾಮಗಳಿಗೆ ಅಗ್ನಿ ಸ್ಪರ್ಶವಾಗಿದ್ದು ಶ್ರೀ ನಗರದತ್ತ ನುಗ್ಗಲು ಪ್ರಯತ್ನಿಸಿದ್ದ ಮುಸ್ಲಿಂ ಧಾಳಿಕೋರರಿಂದಲೇ. ೧೯೪೭ರಲ್ಲಿ ಕಾಶ್ಮೀರ ಜನತೆಯು ಧೈರ್ಯದಿಂದ ಕಾಶ್ಮೀರದ ರಕ್ಷಣೆಗಾಗಿ ಮುಂದೆ ಬಂದಿತು. ಬಾರಾಮೂಲದಲ್ಲಿ, ಯುವಕ ಮುಸ್ಲಿಂ ಅಂಗಡಿಯಾತ ತನ್ನ ಮತೀಯ ಸಹಿಷ್ಣುತೆಯನ್ನು ಮಾರುವುದಕ್ಕಿಂತ ತನ್ನ ಪ್ರಾಣವನ್ನೇ ಬಲಿಯಾಗಿಕೊಟ್ಟ. ಅವನ ಮರಣ ಕಾನ್ವೆಂಟಿನ ಗೋಡೆಗಳ ನೆರಳಿನಲ್ಲಿ ನಡೆಯಿತು. ಕಾಶ್ಮೀರಿಗಳ ಸ್ಮೃತಿಪಥದಲ್ಲಿ ಆತನು ಸಂತನ ನಿಲುವನ್ನು ಸಾಧಿಸಿಕೊಂಡಿದ್ದಾನೆ ಈ ಸಾರಿಯೂ ಅಷ್ಟೆ. ಶ್ರೀ ನಗರದ ಹತ್ತಿರದ ಹಳ್ಳಿಯ ಗುಜ್ಜಾರ್ ಎಂಬ ಮುಸ್ಲಿಂ ಪ್ರಥಮತಃ ಕಾಶ್ಮೀರಿ ಪೋಲೀಸರಿಗೆ ಧಾಳಿಕೋರರ ಚಟುವಟಿಕೆಗಳನ್ನು ತಿಳಿಸಿದಾತ. ಇಂದಿಗೂ ಕಾಶ್ಮೀರದ ಜನತೆ ಪಾಕ್ ಧಾಳಿಕಾರರನ್ನು ಓಡಿಸುವಲ್ಲಿ ನೆರವಾಗುತ್ತಿದೆ.

ಕಾಶ್ಮೀರದಲ್ಲಿ ಈಗ ನಡೆಯುತ್ತಿರುವ ರುದ್ರನಾಟಕದ ಹಗರಣವಿದು. ಪಾಕಿಸ್ತಾನದ ಆಡಳಿತ ವರ್ಗವು, ಪಾಕಿಸ್ತಾನಿ ಜನತೆಯಿಂದ, ಭಾರತದ ವಿರುದ್ಧ ಹೋರಾಡುವಂತೆ ಸಚೇತನಗೊಳಿಸಲಾಗಿರುವ ಈ ವಿಷಯವನ್ನು ಮುಚ್ಚಿಡಲು ಅತ್ಯಂತ ಕುತೂಹಲಕಾರಿಯಾಗಿದೆ.

ಈಕೆ ಯಾರು? ರೋದಿಸುತ್ತಿರುವ ವಿಯಟ್‌ನಾಮಿನ ಮಹಿಳೆ. ಈಕೆ ಅಳುತ್ತಿರುವುದೇಕೆ? ಕಳೆದ ಜುಲೈ ತಿಂಗಳಲ್ಲಿ ವಿಯತ್ ಕಾಂಗೋವಿನ ಗೆರಿಲ್ಲಾ ಪಡೆಗಳು ಆಕ್ರಮವಾಗಿ ನುಗ್ಗಿ ಈಕೆಯ ಪತಿಯನ್ನು ಕೊಂದವು. ಅನಾಥೆ ಮಹಿಳೆಯನ್ನು ಹೆಲಿಕಾಪ್ಟರಿನ ಮೂಲಕ ಸುರಕ್ಷಿತ ಸ್ಥಳಕ್ಕೆ ತರಲಾಯಿತು.

ಭಾರತದ ನಾಗರಿಕ ಪ್ರದೇಶಗಳ ಮೇಲೆ ಪಾಕಿಸ್ತಾನ ಉದ್ರಿಕ್ತವಾಗಿ ಬಾಂಬು ದಾಳಿ ನಡೆಸುತ್ತಿದೆ. ಅಮಾನುಷವಾದ ಅದರ ಈ ಕೃತ್ಯ ಎಷ್ಟು ನಾಗರಿಕರ ಬದುಕನ್ನು ಬರಡು ಮಾಡಿದೆಯೋ! ಇದಕ್ಕೆ ಕೊನೆಯಿಲ್ಲವೆ?

ಚಾರುಚಯನ

ಸವಕಲು ನಾಣ್ಯಕ್ಕೇನು ಬೆಲೆ?

ಆಗೋಸ್ತು ೫. ಪಾಕಿಸ್ತಾನದ ಅಕ್ರಮ ಆಕ್ರಮಣಕಾರರ ಕಾಶ್ಮೀರ ಪ್ರವೇಶ—

ಜನತೆಯನ್ನು ಯಾವುದೇ ರೀತಿಯಲ್ಲಿದೆ ಸಾವ ಅಥವಾ ದಂಡ—ಬೆದರಿಸುವುದು, ಭಾರತದ ಸಭದ್ರ ರಕ್ಷೆಯನ್ನು ಅಭದ್ರಗೊಳಿಸುವುದು. ಅರಾಜಕತೆಯನ್ನು ಭಾರತದಲ್ಲಿ ಹುಟ್ಟಿಸುವುದು, ಹಿಂಸೆಯಿಂದಾದರೂ ಶಕ್ತಿ ಪ್ರದರ್ಶನದಿಂದಾದರೂ ಅಥವಾ ಇನ್ನಾವುದೇ ತೆರದಿಂದಾದರೂ ಕಾಶ್ಮೀರವನ್ನು ಕಬಳಿಸುವುದು — ಪಾಕಿನ ದುರುದ್ದೇಶ

ಗಡಿ ನಾಡಿನ ಜನ ಚತುರರು, ಪಾಕ್ ಕಾರಸ್ಥಾನದಿಂದ ಪ್ರತಿದಿನವೂ ಅವರು ನೋಯುತ್ತಿದ್ದವರು, ಶತ್ರುವಿನ ಸುಳಿವನ್ನು ಅರಿಯ ಬಲ್ಲವರು– ರಹಸ್ಯ ಸ್ಫೋಟ ಮಾಡಿಯೇ ಬಿಟ್ಟರು.

ಶ್ರೀನಗರದ ಬಳಿಯ ಹಳ್ಳಿಯ ಗುಜ್ಜಾರ್ ಧಾಳಿಕಾರರ ಸುಳಿವಿತ್ತು, ಕಾಶ್ಮೀರ ಪೋಲೀಸರಿಗೆ ತಿಳಿಸಿದನು, ಭಾರತ ಸರಕಾರದ ಆದೇಶದಂತೆ, ಸ್ವರಕ್ಷಣೆ, ಧಾಳಿಕಾರರನ್ನು ಹೊರಗಟ್ಟುವುದು, ಮುಂದೆ ಆಕ್ರಮಣ ನಡೆಯದಂತೆ ಎಚ್ಚರಿಕೆಯನ್ನು ವಹಿಸುವುದು ಪ್ರಾರಂಭವಾಯಿತು.

ಭೀಕರ ಕದನ, ಶತ್ರುಗಳಿಂದ ಅಮೆರಿಕನ್ ಶಸ್ತ್ರಾಸ್ತ್ರಗಳ ಬಳಕೆ, ಹಿನ್ನಡೆ; ಭಾರತದ ಮೇಲುಗೈ.... ಸಮರ ವಿರಾಮ ರೇಖೆಯನ್ನೂ ದಾಟಿ ದಾಳಿಗಾರರ ಮೂಲವನ್ನು ನಾಶಪಡಿಸುವ ಸಲುವಾಗಿ ಭಾರತದ ಸೂಕ್ತ ಕಾರ್ಯಾಚರಣೆ. ಅಯೂಬಖಾನರಿಗೆ ದಿಗ್ಭ್ರಮೆ. ಅವರ ಕಲ್ಪನೆ ಬುಡ ಮೇಲಾಗಿರಬೇಕು— ಧನ್ಯ ನಮ್ಮ ಜೇನೆ!

ಭಾರತವು ಆಕ್ರಮ ಪ್ರವೇಶಗಾರರ ಸಂಬಂಧದಲ್ಲಿ ಪ್ರತಿಭಟನೆಯನ್ನು ಸೂಚಿಸಬಹುದು. ಇಚ್ಛೆಂದರೆ, ಅವರನ್ನು ಸೆರೆಹಿಡಿಯಬಹುದು, ಹೊರಗಟ್ಟಬಹುದು—ಎಂದವರು ಕಲ್ಪಿಸಿರಬಹುದೇ ಹೊರತು, ಸಮರ ವಿರಾಮ ರೇಖೆಯನ್ನೂ ಮೀರಿ ಪಾಕ್ ಮಿಲಿಟರಿ ಠಾಣೆಗಳತ್ತ ನುಗ್ಗಬಹುದೆಂದವರು ಕನಸಿನಲ್ಲೂ ಭಾವಿಸಿರಬಾರರು.

(ಒಂಭತ್ತನೇ ಪುಟ ನೋಡಿರಿ)

ಮಹಿಳಾಮಂಡಲ

ಹೆಣ್ಣು ಮತ್ತು ಸಮಾಜ

ಬರೆದವರು
• ಶ್ರೀ ಮಜಿಬೈಲು ಭಾಸ್ಕರ ಭಂಡಾರಿ.

ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ ಹಿಂದಿನಿಂದಲೂ ಹಿರಿದು; ಇಂದಿಗೆ ಮತ್ತೂ ಹಿರಿದಾಗಿದೆ.

"ಯತ್ರ ನಾರ್ಯಸ್ತು ಪೂಜ್ಯಂತೇ
ರಮಂತೇ ತತ್ರದೇವತಾಃ!"
"ಗೃಹಿಣೀಮ್ ಗೃಹಮುಚ್ಯತೇ"

ಭವ್ಯ ಭಾರತದ ಯಾವ ಗತವೈಭವದ ಕುರಿತು ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವೆವೋ ಆ ಕಾಲದಲ್ಲಿ ಸಮಾಜದಲ್ಲಿ ಹೆಣ್ಣಿಗೆ ಯಾವ ಸ್ಥಾನಮಾನಗಳಿದ್ದುವು ಎಂಬುದಕ್ಕೆ ಮೇಲಿನ ನುಡಿಮುತ್ತುಗಳೇ ಸಾಕ್ಷಿ. ಈ ರೀತಿಯ ಗಣ್ಯಸ್ಥಾನಕ್ಕೆ ಹೆಣ್ಣು ಯೋಗ್ಯಳೆನಿಸಿಕೊಳ್ಳಬೇಕಾದರೆ, ಅವಳಲ್ಲಿ ಅಂತಹ ಯಾವುದಾದರೊಂದು ಮಹತ್ವಪೂರ್ಣ ಶಕ್ತಿ ಅಥವಾ ಯೋಗ್ಯತೆ ಇದ್ದಿರಬೇಕೆಂಬುದು ನಿರ್ವಿವಾದ. ಏಕೆಂದರೆ ಸಮಾಜದಲ್ಲಿ ಒಂದು ವ್ಯಕ್ತಿಯನ್ನು ನಾವು ಗೌರವಪೂರ್ಣ ದೃಷ್ಟಿಯಿಂದ ನೋಡಬೇಕಾದರೆ ಆತನು ಆದಾವುದೋ ಒಂದು ಮಹಾನತೆಗೆ ಆಶ್ರಯಭೂತನಾಗಿರಬೇಕು. ಹಾಗಿಲ್ಲದಿರುತ್ತಿದ್ದರೆ "ಯೋಗ್ಯ" "ಅಯೋಗ್ಯ" ಎಂಬ ಪ್ರಶ್ನೆಗೇ ಎಡೆಯಿರುತ್ತಿರಲಿಲ್ಲ.

ಸಮಾಜ ಅಥವಾ ದೇಶ— ಇದರ ಮೂಲ ವ್ಯಕ್ತಿ! ವ್ಯಕ್ತಿ ಹೆಣ್ಣಾಗಲೀ ಗಂಡಾಗಲೀ ಅಲ್ಲಿಂದಲೇ ದೇಶದ ರೂಪೀಕರಣ; ಏಕೆಂದರೆ ವ್ಯಕ್ತಿಯಿಂದ ಕುಟುಂಬ, ಅಂತಹ ಅನೇಕ ಕುಟುಂಬಗಳಿಂದ ಒಂದು ಸಮಾಜ ನಿರ್ಮಿತವಾಗಿ, ಅನೇಕ ಸಮಾಜಗಳ ಒಂದು ಗುಂಪು ಒಂದಾಗಿ ಒಂದು ಭೌತಿಕ ಇತಿಮಿತಿಗಳಿಂದೊಡಗೂಡಿದ ಸ್ಥಳವನ್ನು ಆವರಿಸಿಕೊಂಡು ಸ್ಥಿರವಾಗಿ ನೆಲಸಿದರೆ, ಅದನ್ನೇ ನಾವು "ದೇಶ" ಎನ್ನುತ್ತೇವೆ. ಮೇಲಿನ ನಿರ್ವಚನದ ಆಧಾರದಿಂದ ನೋಡಿದಾಗ ವ್ಯಕ್ತಿ ಹೆಣ್ಣಾದರೆ—ನೇರವಾಗಿ ಆಕೆಯೇ ದೇಶದ ಮೂಲವಾಯಿತು. ಗಂಡಾದರೂ ಆಕೆಗೇ ಪ್ರಾಧಾನ್ಯತೆ ಸಲ್ಲುತ್ತದೆ. ಅಲ್ಲಿಯೂ ಆಕೆಯ ಮೇಲಿರುವ ಕರ್ತವ್ಯದ ಹೊರೆ ಅಥವಾ ಹೊಣೆಗಾರಿಕೆ ಬಹಳ ದೊಡ್ಡದು! ಏಕೆಂದರೆ ಒಂದು ಗಂಡಿನ ಜೀವನದಲ್ಲಿ ಹೆಣ್ಣಿನ ಪಾತ್ರ ಬಹಳ ಹಿರಿದಾದುದು. ಆದಕ್ಕಾಗಿಯೇ ನಮ್ಮ ಹಿರಿಯರು "ಹೆಣ್ಣು ಗಂಡಿನ ಅರ್ಧಾಂಗಿ" ಎಂದು ಸಾರಿದರು. ಅಷ್ಟೇ ಅಲ್ಲದೆ ಆಕೆ ಅತನಿಗೆ ಮಾರ್ಗದರ್ಶಕಿ, ಮಹಾರಕ್ಷಕಿ; ಶ್ರೀಯೋಮೂಲವಾದುದಕ್ಕೂ ಅನೇಕ ನಿದರ್ಶನಗಳಿವೆ. ಪೌರಾಣಿಕ ಹಾಗೂ ಐತಿಹಾಸಿಕ ಸ್ತ್ರೀ ರತ್ನಗಳಾದ ಸಾವಿತ್ರಿ ತುಲಸೀದಾಸನ ಮಡದಿ ರತ್ನಾವಳಿ, ವೈರಾಗ್ಯ ನಿಧಿ ಮೀರಾಬಾಯಿ, ಅಕ್ಕಮಹಾದೇವಿ, ರಾಣಿ ಅಬ್ಬಕ್ಕ, ಕಸ್ತೂರಿಬಾ ಗಾಂಧಿ ಮೊದಲಾದ ಅನೇಕ ಆದರ್ಶ ಸ್ತ್ರೀಯರನ್ನು ನಾವೆಂದೂ ಮರೆಯುವಂತಿಲ್ಲ. ಕೈಹಿಡಿದ ಹೆಣ್ಣು ಯೋಗ್ಯಳಾಗಿ ತನ್ನ ಪತಿಯನ್ನು ಯಶಸ್ಸಿಗೆ ಪಾತ್ರನನ್ನಾಗಿಸಲು ಯತ್ನಿಸದಿದ್ದಲ್ಲಿ, ಆತನ ಬಾಳು ಅಂಧಕಾರಮಯವಾಗಿ ಆತನು ಅಧೋಗತಿಗಿಳಿಯಲು ಎಡೆಯಾಗಿರುವುದು. ಈ ದೃಷ್ಟಿಯಿಂದಲೂ ಹೆಣ್ಣಿನ ಸ್ಥಾನಕ್ಕೆ ಅಗ್ರ ಪೂಜೆ ಸಲ್ಲುತ್ತದೆ. ಪ್ರಾಯಶಃ ಇದಕ್ಕಾಗಿಯೇ ನಮ್ಮ ಹಿರಿಯರು ಅವಳನ್ನು ಗೌರವಿಸಿರಬೇಕು!

ಸಮಾಜದಲ್ಲಿ ಹೆಣ್ಣಿನ ಸ್ಥಾನ ಹೇಗೆ ಗಣನೀಯವೋ ಹಾಗೆಯೇ ಒಂದು ದೇಶದ ವಿಶಾಲ ದೃಷ್ಟಿಯಿಂದ ನೋಡಿದಾಗಲೂ ಆಕೆಯ ಪಾತ್ರ ಮಹತ್ವಪೂರ್ಣ. ಕೆಲವರೇನೋ, ಮನೆಯೊಡತಿ, ಅಡುಗೆ ಮನೆಯ ಒಡೆತನವೇ ಆಕೆಯ ಕರ್ತವ್ಯ ಎಂಬ ಭಾವನೆಯನ್ನು ಮುಂದೊಡ್ಡಿ ಗಂಡಿನ ಭೋಗ ಸಾಧನವಾಗಿರುವ ಹಾಗೆ ಯಂತ್ರಗಳೇ ಹೆಣ್ಣುಗಳೆಂದು ಭಾವಿಸುವುದರೊಂದಿಗೆ ಅವರನ್ನು ದೇಶ ಅಥವಾ ಅದರ ರಾಜಕೀಯಕ್ಕೆ ಸಂಬಂಧಿಸಿದ ಕಾರ್ಯಕಲಾಪಗಳಿಂದ ಬಹಳಷ್ಟು ದೂರದಲ್ಲಿಡಲು ಯತ್ನಿಸುತ್ತಾರೆ. ಇದು ಅವರ ಸಂಕುಚಿತ ಮನೋಭಾವವನ್ನಷ್ಟೇ ಕಾಣಿಸಬಲ್ಲುದು. ಏಕೆಂದರೆ ಚರಿತ್ರೆಯು ಕಣ್ಣೆದುರಿನಲ್ಲಿಯೇ ಝಾನ್ಸೀ ರಾಣಿ ಲಕ್ಷ್ಮೀಬಾಯಿ, ಸುಲ್ತಾನ್ ರಜಿಯಾ, ಕಿತ್ತೂರು ರಾಣಿ ಚೆನ್ನಮ್ಮ ಮೊದಲಾದ ಅನೇಕ ಮಹಿಳೆಯರು ರಾಜಕೀಯ ರಂಗಕ್ಕೆ ಧುಮುಕಿ, ಗಂಡಿನಂತೆಯೇ ಯಲ್ಲಿ ದೇಶದ ಆಡಳಿತವನ್ನು ಕೈಯಲ್ಲಿಟ್ಟು ಕೊಂಡು, ಕರ್ತವ್ಯದ ಹೊರೆಯನ್ನು ಹೊತ್ತು ಹೇಗೆ ಅಮರರಾದರೆಂಬುದನ್ನು ನಾವಿಂದೂ ಮರೆಯಲಾರೆವು. ಅವರ ಸಾಹಸ ಧೈರ್ಯ ಶೌರ್ಯ, ಬುದ್ಧಿಶಕ್ತಿ ಚತುರತೆ ತ್ಯಾಗಗಳು 'ಅಸದೃಶ' ಮಾತ್ರವೇ ಆಗಿರದೆ ಶ್ಲಾಘನೀಯವೆನಿಸಿವೆ. ಆಧುನಿಕ ಕಾಲದಲ್ಲಿಯೂ ಪೂಜ್ಯಮಾತೆ ಕಸ್ತೂರ್‌ಬಾ ಗಾಂಧಿ, ಕಮಲಾ ಬಾಯಿ ನೆಹರೂ, ಇಂದಿರಾ ಗಾಂಧಿ, ವಿಜಯಲಕ್ಷ್ಮೀ ಪಂಡಿತ ಸರೋಜಿನಿ ನಾಯ್ಡು ಮೊದಲಾದವರು ತೋರಿದ ಹಾಗೂ ತೋರುತ್ತಿರುವ ಚಾತುರ್ಯ ಅಥವಾ ನಿರ್ವಹಿಸುತ್ತಿರುವ ಹೊಣೆಗಾರಿಕೆ ಬಲುದೊಡ್ಡದು ಎಂಬುದರಲ್ಲಿ ಸಂಶಯವಿಲ್ಲ.

ಮೇಲಿನ ವಿಷಯಗಳನ್ನು ಪರಿಶೀಲಿಸಿದಾಗ ರಾಜಕೀಯ ಮತ್ತು ಸ್ತ್ರೀ ಇವುಗಳಲ್ಲಿ ಬಹಳಷ್ಟು ನಿಕಟ ಸಂಬಂಧವಿದೆ ಎಂದು ತಿಳಿದು ಬರುತ್ತದೆ. ಇದನ್ನು ಇನ್ನಷ್ಟು ಪುಷ್ಟೀಕರಿಸಬೇಕಾದರೆ "ತೊಟ್ಟಿಲು ತೂಗುವ ಕೈ ದೇಶವನ್ನಾಳುವುದು" ಎಂಬ ನಾಣ್ಣುಡಿಯೇ ಸಾಕು. ಇದು ಬರೇ ಗಾದೆಯ ಮಾತಾಗಿರದೆ ಯಥಾರ್ಥ ಎಂಬುದನ್ನು ಜೀಜಾಬಾಯಿಯಂತಹ ಅನೇಕ ಮಹಾಮಾತೆಯರು ಎತ್ತಿ ತೋರಿಸಿದ್ದಾರೆ. ಸಭುತ್ವ ಸಂಪನ್ನ ಪ್ರಜಾರಾಜ್ಯದಲ್ಲಂತೂ, ಸ್ತ್ರೀಯರು ಪುರುಷರಿಗೆ ಸಮಾನವಾದ ಸ್ಥಾನಕ್ಕೆ ಪಾತ್ರರಾಗಿದ್ದಾರೆ. "ಪ್ರಜೆಗಳಿಂದಲೇ ಪ್ರಜೆಗಳಿಗಾಗಿ ರಚಿಸಲ್ಪಟ್ಟ ಪ್ರಜೆಗಳ ಸರಕಾರ" ಎಂದಾಗ ಅದರ ಉಳಿವು ಪ್ರತಿಯೊಬ್ಬ ಪ್ರಜೆಯ ಹೊಣೆಗಾರಿಕೆಯೇನೆಂಬುದು ಸ್ಪಷ್ಟವಾಗುತ್ತದೆ. ಅಂತಹ ರಾಷ್ಟ್ರದಲ್ಲಿ ಹಕ್ಕುಗಳೂ ಕರ್ತವ್ಯಗಳೂ ಒಂದು ಗಾಡಿಯ ಎರಡು ಚಕ್ರಗಳಂತೆ ಒಂದು ನಾಣ್ಯದ ಎರಡು ಮುಖಗಳಂತೆ ಒಂದನ್ನೊಂದು ಹೊಂದಿಕೊಂಡಿರುವುದರಿಂದ ಪ್ರಜೆಗಳು ತಮ್ಮ ಕರ್ತವ್ಯವನ್ನು ನಿರಾತಂಕವಾಗಿ ನಿರ್ವಹಿಸಿದಾಗ ಮಾತ್ರ ಹಕ್ಕುಗಳನ್ನು ಪಡೆಯಲು ಸಮರ್ಥರಾಗುತ್ತಾರೆ. ಕರ್ತವ್ಯದ ಹೊಣೆಗಾರಿಕೆಗಾಗಲೀ, ಹಕ್ಕುಗಳ ಅನುಭೋಗಕ್ಕಾಗಲೀ ಹೆಣ್ಣು ಗಂಡುಗಳಿಬ್ಬರೂ ಸಮಾನರು. ಆದರೆ ದೇಶದಲ್ಲಿ ತುರ್ತು ಪರಿಸ್ಥಿತಿ ಪ್ರಾಪ್ತವಾದಾಗ ಗಂಡಿಗಿಂತಲೂ ಹೆಣ್ಣಿನ ಹೊಣೆಗಾರಿಕೆ ಅಧಿಕವಾಗುತ್ತದೆ.

ದೇಶದ ತುರ್ತು ಪರಿಸ್ಥಿತಿಯಲ್ಲಿ ಪೃಥ್ವೀಯಿಂದ ಪುರುಷರೆಲ್ಲರೂ ಸ್ವರ್ಗ ಸಮಾನವಾದ ಜನ್ಮ ಭೂಮಿಯ ಕರೆ ಯಾವಾಗ ಬರುವುದೋ ಎಂದು ಕಾದಿರಬೇಕಾದರೆ, ಮನೆಯ ಅಥವಾ ಸಮಾಜದ ಸಮಸ್ತ ಭಾರವನ್ನೂ ಸ್ತ್ರೀಯರು ವಹಿಸಿಕೊಳ್ಳಬೇಕಾಗುತ್ತದೆ. ಆಗ ಅವರು ಸದ್ವರ್ತನೆಗಳಾಗಿ ಸದ್‌ವ್ಯವಹಾರಗಳಿಗೆ ತಳಹದಿಯಾಗಿ, ಸಹನಾಶೀಲತೆ, ವಿನಯ ಔದಾರ್ಯ ಸರಳ ಜೀವನ ಗೃಹೋದ್ಧರಣ, ಗ್ರಾಮೋದ್ಧಾರ ಮೊದಲಾದುವುಗಳಲ್ಲಿ ದತ್ತಚಿತ್ತರಾಗಿರಬೇಕು. ಪ್ರಾಚೀನ ಕಾಲದ ಆದರ್ಶ ರಮಣಿಯರ ಜೀವನ ಕ್ರಮ, ಉಚ್ಚ ಭಾವನೆ, ಉನ್ನತ ಮಾರ್ಗ, ಕಾರ್ಯತತ್ಪರತೆಗಳನ್ನು ಮರೆಯದೆ, ತನ್ನ ಸಂಸಾರ ನೌಕೆಯನ್ನು ಪತಿಯ ಹೊರತಾಗಿಯೂ, ಮರ್ಯಾದೆಯಿಂದ ಯುಕ್ತವಾಗಿ ನಡೆಸುವ ವಿಧಾನಗಳನ್ನು ತಿಳಿದಿರುವುದರೊಂದಿಗೆ, ಬಾಹ್ಯಾಡಂಭರದ ದುಷ್ಪರಿಣಾಮ, ಪ್ರಥಮ ಚಿಕಿತ್ಸೆ, ಗೃಹಿಣೀಧರ್ಮವಾದ ಹಾಗೆ ಮಕ್ಕಳ ಲಾಲನೆ ಪಾಲನೆ ಇತ್ಯಾದಿಗಳಲ್ಲಿ ಪಾರಂಗತರಾಗಿರಬೇಕು. ಮಕ್ಕಳಿಗೆ ತಾಯಿಯೇ ಮೊದಲ ಪಾಠಶಾಲೆಯಾದುದರಿಂದ ಅವರನ್ನು ಯೋಗ್ಯ ಪ್ರಜೆಗಳನ್ನಾಗಿ ಮಾಡುವ ಹೊಣೆ ಅವರದು. ಇಂದಿನ ಮಕ್ಕಳೇ ಮುಂದಿನ ಜನಾಂಗ. ಹೆತ್ತ ತಾಯಿಯೇ ಮನೋಸ್ಥೈರ್ಯವಿಲ್ಲದವಳಾಗಿ, ನೈತಿಕ ಅಧಃಪತನವನ್ನು ಹೊಂದಲೆತ್ನಿಸಿದರೆ ಮಕ್ಕಳ ಪಾಡೇನು ? ಅವರಲ್ಲಿ ಮನೋಧಾರ್ಢ್ಯತೆ, ಮನೋನಿಗ್ರಹತೆ, ಶರೀರ ಸಂಪತ್ತು, ದೇಶಪ್ರೇಮಗಳು ಹೇಗೆ ತಾನೆ ಉದಯವಾಗಬಲ್ಲುದು ?

ಆದಿಯಿಂದಲೇ ಮಹತ್ತೂ ಬೃಹತ್ತೂ ಆದ ಸಂಸ್ಕೃತಿಯಿಂದ ಕೂಡಿದ, ಜಗತ್ತಿಗೆ ತಾನು ತೋರುತ್ತಿರುವ ಶಾಂತಿ ಅಹಿಂಸೆಗಳಿಗಾಗಿ ಹೆಸರ್ಪಡೆದ ನಮ್ಮೀ ಭವ್ಯ ಭಾರತ ದೇಶದ ಮೇಲೆ "ಪಂಚಶೀಲ" ದಂತಹ ಒಪ್ಪಂದವನ್ನು ಕಡೆಗಣಿಸಿ 'ಒಡಹುಟ್ಟು ನೀನೆಂದು ಒಡಲಿಗಿರಿಯುವ ಬುದ್ಧಿ'ಯನ್ನು ತೋರಿಸಿ ಆಕ್ರಮಣ ನಡೆಸಿತು ಚೀನ! ನಮ್ಮದೇ ಆಗಿದ್ದು, ನಮ್ಮಿಂದ ಬೇರೆಯಾಗಿ ಈಗ ನಮ್ಮನ್ನೇ ಕೆಣಕ ಬಂದಿದೆ ಪಾಕಿಸ್ತಾನ! ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮೆಲ್ಲರ ಕರ್ತವ್ಯ ಒಂದಲ್ಲ ನೂರಾರು! ಆದರಲ್ಲೂ ಹೆಣ್ಣುಗಳು ಹೆತ್ತ ಮಗನನ್ನೋ ಕೈ ಹಿಡಿದ ಪತಿಯನ್ನೋ ನಗುಮುಖದಿಂದ ಹುರಿದುಂಬಿಸಿ, "ವಿಜಯ ಶ್ರೀಯು ವರನಾಗೆ"ಂದು ಹಣೆಗೆ ತಿಲಕವಿಟ್ಟು ಕಳುಹಿಸುವುದರೊಂದಿಗೆ, ದೇಶದ ರಕ್ಷಣಾ ನಿಧಿಗೆ ಬೇಕಾದ ಧನಕನಕಗಳನ್ನು ಅರ್ಪಿಸಲೂ ಸಂಗ್ರಹಿಸಲೂ ಮರೆಯಬಾರದು! ಆಭೂಷಣ ಪ್ರಿಯತೆಯಿದ್ದರೂ, ದೇಶದ ಗಂಡಾಂತರ ಪರಿಸ್ಥಿತಿಯಲ್ಲಿ ಅದನ್ನು ಕಡೆಗಣಿಸಿ "ರಕ್ಷಣೆಗಾಗಿ ಒಡವೆ" ಎಂಬ ಘೋಷಣೆಗಳೊಂದಿಗೆ ತ್ಯಾಗಕ್ಕೆ ಸಿದ್ಧರಾಗಬೇಕು! ಆಗಲೇ ನಮ್ಮೀ ಪ್ರಜಾ ಪ್ರಭುತ್ವಕ್ಕೆ ಭದ್ರತೆಯೂ ಗಾಂಧೀಜಿಯವರ ಕನಸಿನ "ರಾಮರಾಜ್ಯ"ದ ಬೆಲೆಯೂ ಬರಬಹುದು!

— ಜೈ ಹಿಂದ್



READ &
ADVERTISE IN
NAVAYUGA WEEKLY

ನಂಬ್ರ 959ನೇ
ಕುಂದಾಪುರ ಕೋಪರೇಟಿವ್ ಟೌನ್ ಬೇಂಕ್ ಲಿಮಿಟೆಡ್,
ಕುಂದಾಪುರ, ದ. ಕ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಋಣಿಯರು ಮೇಲ್ಕಾಣಿಸಿದ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡದೆ ಬಾಕಿ ಇರುವುದರಿಂದ ಸದ್ರಿಯವರಿಗೆ ಕ್ರಮಪ್ರಕಾರ ರಿಜಿಷ್ಟ್ರ ನೋಟೀಸು ಕೊಟ್ಟಲ್ಲಿ ಕೆಲವರು ನೋಟೀಸು ಪಡಕೊಂಡು ನಗಗಳನ್ನು ಇಷ್ಟರ ತನಕ ಬಿಡಿಸದಿರುವುದರಿಂದಲೂ ಮತ್ತು ಕೆಲವರಿಗೆ ಬಿಟ್ಟ ನೋಟೀಸು ವಾಪಾಸು ಬಂದಿರುವುದರಿಂದಲೂ ಸದ್ರಿಯವರಿಗೆಯೂ ಅವರು ಮೃತಪಟ್ಟಲ್ಲಿ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಈಡಿಟ್ಟ ನಗಗಳನ್ನು ಇದೇ ಬರುವ ತಾ. 9-10-1966ನೇ ಶನಿವಾರ ಮಧ್ಯಾಹ್ನ 2 ಗಂಟೆಯೊಳಗೆ ಬಿಡಿಸದೇ ಇದ್ದಲ್ಲಿ ಅದೇ ದಿವಸ 4 ಗಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಯಾವುದೇ ಕಾರಣದಿಂದ ಆ ದಿನ ಏಲಂ ಮಾಡಲು ಅಸಾನುಕೂಲವಾದಲ್ಲಿ ಬೇಂಕಿಗೆ ಯುಕ್ತ ಕಂಡ ಇತರ ದಿವಸಗಳಲ್ಲಿ ಪುನಃ ನೋಟೀಸು ಕೊಡದೆ ಬೇಂಕಿನ ಆಫೀಸಿನಲ್ಲಿ ಏಲಂ ಮಾಡಲಾಗುವುದು.

ಸಾಲದ ನಂಬ್ರ	ತಾರೀಕು	ಹೆಸರು ಮತ್ತು ವಿಳಾಸ	ಮೊಬಲಗು ರೂ. ಪೈ.
6463	27—4—62.	ಕೊರಗ ತೋಟಿ, ಸೀರ ತೋಟಿಯ ಮಗ, ಕುಂದಾಪುರ ಪಂಚಾಯತ್ ಆಫೀಸ್, ಕುಂದಾಪುರ.	40—00
6481	30—4—62.	ನರಸಿಂಹ ಮೂರ್ತಿ, ಸುಬ್ಬರಾಯರ ಮಗ, ಮೀನು ಮಾರ್ಕೆಟ್ ಬಳಿ, ಕುಂದಾಪುರ.	28—00
6508	4—5—62.	ನಾರಾಯಣ ಹೆಗ್ಡೆ, ಮೋನಪ್ಪ ಹೆಗ್ಡೆಯರ ಮಗ, ಹಲ್ಲಾಡಿ ಹರ್ಕಾಡಿ ಗ್ರಾಮ, ಕುಂದಾಪುರ.	110—00
6583	12—5—62.	ಅನಂತಕೃಷ್ಣ ವರ್ಣ, ತಮ್ಮಯ್ಯ ವರ್ಣರ ಮಗ, ಬಡಾಕೆರೆ ಗ್ರಾಮ, ಕೋಟೇಶ್ವರ, ಕುಂದಾಪುರ.	176—00
6659	16—5—62.	ಅಣ್ಣಪ್ಪ ಒಳಿಗಾರ್, ಗೋವಿಂದ ಬಳೆಗಾರರ ಮಗ, ಕಟ್ಕರೆಂಜೆ ಗ್ರಾಮ, ಗುಲ್ವಾಡಿ, ಕುಂದಾಪುರ.	125—00
6662	5—6—62.	ಕೃಷ್ಣಜೀ ರಾವ್, ವೀರೋಜಿ ರಾವ್‌ರ ಮಗ, ಪೋಲೀಸ್, ಶಂಕರ್‌ನಾರಾಯಣ ಗ್ರಾಮ, ಕುಂದಾಪುರ.	18—00
6666	5—6—62.	ರಾಜೀವಿ ಬಾಯಿ, ಮಂಜುನಾಥ್ ಸೇರಿಗಾರರ ಮಗಳು, ಚಿಕ್ಕನ್‌ಸಾಲೆ ರಸ್ತೆ, ಕುಂದಾಪುರ	80—00
6702	14—6—62.	ಮಂಜ ಪೂಜಾರಿ, ಮುತ್ತ ಪೂಜಾರಿಯ ಮಗ, ಮೀನು ಮಾರ್ಕೆಟ್ ಬಳಿ, ಕುಂದಾಪುರ.	93—00
6726	16—6—62.	ಕೋಣಿ ರುಸಾರಿಯೋ ಕೋತ, ಜಾಕೀ ಕೋತರ ಮಗ, ಕೋಣಿ ಗ್ರಾಮ, ಕುಂದಾಪುರ.	110—00
6745	19—6—62.	ಮಂಗಳ ತೋಟಿ, ಕುಂದಾಪುರ ಪಂಚಾಯತ್ ಆಫೀಸು, ಕುಂದಾಪುರ.	8—00
6826	4—7—62.	ಕೃಷ್ಣಪ್ಪ ಸೇರಿಗಾರ, ಶೀನ ಸೇರಿಗಾರರ ಮಗ, ಹೆಸ್ಕುಂಜೆ ಗ್ರಾಮ, ಮಂದರ್ತಿ, ಉಡುಪಿ ತಾಲೂಕು.	34—00
6903	13—7—62.	ಸುಬ್ರಾಯ ಉರಾಳ್, ತಮ್ಮಯ್ಯ ಉರಾಳರ ಮಗ, ಬೋರ್ಡ್ ಹೈಸ್ಕೂಲ್, ಕುಂದಾಪುರ.	80—00
6913	14—7—62.	ಸುಬ್ರಾಯ ಉರಾಳ್, ತಮ್ಮಯ್ಯ ಉರಾಳರ ಮಗ, ಬೋರ್ಡ್ ಹೈಸ್ಕೂಲ್, ಕುಂದಾಪುರ.	85—00
6931	16—7—62.	ರಘುರಾಮ ಹೆಗ್ಡೆ, ಸುಬ್ಬಣ್ಣ ಹೆಗ್ಡೆಯರ ಮಗ, ಬಳ್ಕೂರು ಗ್ರಾಮ ಕುಂದಾಪುರ.	126—00
6978	23—7—62.	ಶ್ರೀನಿವಾಸ್ ಸೇರಿಗಾರ, ರಾಮಯ್ಯ ಸೇರಿಗಾರರ ಮಗ, ಕೋಣಿ ಸಾಂತಾವರ್ ಗ್ರಾಮ, ಕುಂದಾಪುರ.	120—00
6977	24—7—62.	ಸಯ್ಯದ್ ಉಸ್ಮಾನ್ ಕೋಯಾ, ಸಯ್ಯದ್ ಜಾಫರ್ ಕೋಯಾ, ಗಂಗೊಳ್ಳಿ ಕಳುವಿನ ಬಾಗಿಲು, ಕುಂದಾಪುರ.	35—00
[illegible]			
7100	14—8—62.	ಸವೇರ ಸೋಜ, ಸಂತಾನ್ ಸೋಜರ ಮಗ, ಅನಗಳ್ಳಿ ಗ್ರಾಮ, ಕುಂದಾಪುರ	21—00
7111	14—8—62.	ಸವೇಸರ ಜೆಂಗ್ರು, ಸೀತು ಪೂಜಾರ್ತಿಯ ಮಗಳು, ಬಸ್ರೂರು ಮೇರ್ಡಿ ಗ್ರಾಮ, ಕುಂದಾಪುರ.	50—00
7182	16—8—62.	ಎಸ್. ಎಚ್. ಅಬ್ದುಲ್ ಮಹಮ್ಮದ್ ಸಾಹೇಬ್, ಶಮ್‌ಸುದ್ದೀನ್ ಸಾಹೇಬರ ಮಗ, ಗಂಗೊಳ್ಳಿ ಗ್ರಾಮ, ಕುಂದಾಪುರ.	30—00
7266	15—9—62.	ಕೋಡಿ ನಾಗಪ್ಪ ಸೇರಿಗಾರ, ಕೋಡಿ ಬಗ್ಗಯ್ಯ ಸೇರಿಗಾರರ ಮಗ, ಕೋಡಿ ಗ್ರಾಮ, ಕುಂದಾಪುರ.	18—00
7269	15—9—62.	ಶೀನ ಪೂಜಾರಿ, ಪುಟ್ಟ ಪೂಜಾರರ ಅಳಿಯ, ಚಿಕ್ಕನ್‌ಸಾಲೆ ರಸ್ತೆ, ಮೋಹ್‌ಹಿತ್ಲು, ಕುಂದಾಪುರ.	23—00
7288	20—9—62.	ಕೋಡಿ ನಾಗಪ್ಪ ಸೇರಿಗಾರ, ಕೋಡಿ ಬಗ್ಗಯ್ಯ ಸೇರಿಗಾರರ ಮಗ, ಕೋಡಿ ಗ್ರಾಮ, ಕುಂದಾಪುರ.	10—00
7368	12—10—62.	ವಿಠಲ್ ಸೆಟ್ಟಿ, ವೆಂಕಪ್ಪ ಸೆಟ್ಟರ ಮಗ, ಪೋಸ್ಟ್ ಆಫೀಸ್, ವಡೇರ ಹೋಬಳಿ ಗ್ರಾಮ, ಕುಂದಾಪುರ.	42—00
7435	23—10—62.	ಪಿ. ಜನಾರ್ಧನ್ ರಾವ್, ಪಿ. ಶಂಕರನಾರಾಯಣ ರಾವ್‌ರ ಮಗ, ಗೀತಾ ಟಾಕೀಸಿನ ಹತ್ತಿರ, ಕುಂದಾಪುರ.	1000—00
7524	19—11—62	ಕೋಡಿ ಅಪ್ಪು ಪೂಜಾರಿ, ರಾಮ ಪೂಜಾರಿಯ ಮಗ, ಕೋಡಿ ಗ್ರಾಮ, ಕುಂದಾಪುರ.	9—00

ಕುಂದಾಪುರ,
ತಾ. 9-9-1966

ಸುಬ್ರಾಯ ಉಡುಪ, ಎಂ.ಎ.
ಕಾರ್ಯದರ್ಶಿ.

ಸವಕಲು ನಾಣ್ಯಕ್ಕೇನು ಬೆಲೆ?

ಶ್ರೀಕ

(ಏಳನೇ ಪುಟದಿಂದ)

ಭಾರತ ಸರಕಾರದ ದೃಢ ನಿಲುವು— ಸರ್ವಪಕ್ಷೀಯರ, ನಾಗರಿಕರ ಸಂಪೂರ್ಣ ಬೆಂಬಲ—ರುದ್ರ ತಾಂಡವ

ಹಾಜಿಪೀರ್ ಕಣಿವೆಯ ಪತನ, ಲಾಹೋರ್‌ನಲ್ಲಿ ಕಂಪನ, ಪೇಶಾವರಕ್ಕೆ ಬೀತಿ ... ರಾವಲಪಿಂಡಿಯಲ್ಲಿ ಕೋಲಾಹಲ....

ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಕಳವಳ ಶೀಘ್ರ ಸಮರ ವಿರಾಮ ಸಾಧನೆಯ ಆಸೆ—ಯುದ್ಧಾರ ಭಾರತ ಉಪಖಂಡ ಯಾತ್ರೆ. . ಅಯ್ಯೂಬ ಖಾನರ ಪೂರ್ವ ಶರ್ತಗಳು—

ಕೂಡಲೇ ಕಾಶ್ಮೀರದಿಂದ ಭಾರತ—ಪಾಕ್ ಸೇನೆಗಳು ಹಿಂದೆ ಸರಿಯಬೇಕು, ಅಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಆಫ್ರೋಏಷ್ಯಾ ರಾಷ್ಟ್ರಗಳ ರಕ್ಷಣೆ, ಮೂರು ತಿಂಗಳೊಳಗೆ ಜನಮತಗಣನೆ— ಇದಕ್ಕೆ ಅವರ ರಕ್ಷೆ. ಗಳಲ್ಲಿ ಸಂಯುಕ್ತ ರಾಷ್ಟ್ರ ಸಂಘ ಸ್ವೀಕರಿಸಿದ ಗೊತ್ತುವಳಿ ......

ಅದೇ ವರ್ಷ ಇದೇ ಸಂಬಂಧದ ಗೊತ್ತುವಳಿಯ ಮೊದಲ ಅಂಶ ಪಾಕಿಸ್ತಾನವು ತಾನು ಮಾಡಿದ ಆಕ್ರಮಣವನ್ನು ತೆರವು ಮಾಡಬೇಕು.

ಪಾಕ್ ಆಕ್ರಮಣ ತೆರವು ಮಾಡಲಿಲ್ಲ; ಕಾಶ್ಮೀರದಲ್ಲಿ ಜನಮತಗಣನೆ ನಡೆಯಲಿಲ್ಲ. ೧೮ ವರ್ಷಗಳ ಹಿಂದಿನ ಗೊತ್ತುವಳಿ ಇಂದು ಪ್ರಯೋಜನವೂ ಇಲ್ಲ. ಅದೀಗ ನಡೆಯದ ಸವಕಲು ನಾಣ್ಯ.

ಸಮರ ವಿರಾಮ ರೇಖೆ ಶಾಶ್ವತ ಗಡಿಯಲ್ಲ. ಅದನ್ನಿನ್ನು ಪಾಲಿಸುವ ಅಗತ್ಯವೂ ಇಲ್ಲ. ಪಾಕಿಸ್ತಾನವು ಪ್ರತಿನಿತ್ಯವೆಂಬಂತೆ ಆಕ್ರಮಣ ನಡೆಸಲು ಇನ್ನು ಮುಂದೆಯೂ ಅವಕಾಶ ಕೊಡಲಾಗದು.

ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ, ಭಾರತದ ಒಂದು ರಾಜ್ಯ. ಅಲ್ಲಿ ಜನಮತಗಣನೆ ನಡೆಯಬೇಕೆಂದು ಹೇಳುವ ಅಧಿಕಾರ ಯಾರಿಗೂ ಇಲ್ಲ. ಅದು ಸಮರ ವಿರಾಮಕ್ಕೆ ನಾಂದಿಯಾಗುವುದೂ ಸಾಧ್ಯವಿಲ್ಲ. ಭಾರತದ ಸಾರ್ವಭೌಮತೆಯನ್ನು ಯಾವ ಮೌಲ್ಯ ತೆತ್ತಾದರೂ ಉಳಿಸುವುದೇ ನಮ್ಮ ಕರ್ತವ್ಯ.

ಯು. ಥಾಂ ರಾಯಭಾರ ನಿರೀಕ್ಷೆಯಂತೆ ಅಸಫಲ. ಮುಂದೇನು?

ನಿಶ್ಶರ್ತವಾಗಿ ಸಂಯುಕ್ತ ರಾಷ್ಟ್ರ ಸಂಘದ ಕರೆಗೆ ಭಾರತ ಒಗೊಟ್ಟಿದೆ. ಮುಂದೇನು? ಅಯ್ಯೂಬರ ಕೂಗು, ಕೇಳಿ ಕೆಂಪು ಚೀನಾದ ಮಾವೊ ಕಿವಿ ನಿಮಿರಿಸಿದ್ದಾರೆ. ಇಂಡೋನೇಶ್ಯದ ಸುಕರ್ಣ ತಮ್ಮ ಕರ್ಣಗಳನ್ನು ಬಡಿದು ಸಜ್ಜೀಕರಿಸಿದ್ದಾರೆ. ತುರ್ಕಿ-ಇರಾಣಗಳು ತಲೆ ಕೆರೆದುಕೊಳ್ಳತೊಡಗಿವೆ....

ಚೀನಾ ಪ್ರವೇಶವಾದರೆ, ಪಾಶ್ಚಾತ್ಯ ರಾಷ್ಟ್ರಗಳು ಸುಮ್ಮನುಳಿಯುವುದು ಸಾಧ್ಯವಿಲ್ಲ. ಯಾವುದಾದರೊಂದು ಪಕ್ಷ— ಅದು ಭಾರತದ್ದೇ —ಸೇರಲೇ ಬೇಕಾಗುತ್ತದೆ. ಈ ಬಗ್ಗೆ ಚೀನಾಕ್ಕೆ ತಕ್ಕ ಎಚ್ಚರಿಕೆ ಎಲ್ಲೆಡೆಯಿಂದ ಹೊರಟಿದೆ.

ಪಾಕ್ ಶಕ್ತಿ ಕುಂದಿದೆ. ನೂರು ವರ್ಷ ಕಾಲವಾದರೂ ಕಾಶ್ಮೀರಕ್ಕಾಗಿ ಹೋರಾಡುವೆನೆಂದ ಅಯ್ಯೂಬ್-ಭುಟ್ಟೋ ತಮ್ಮ ಹೋರಾಟದ ಉದ್ದೇಶವನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ —ಅದೇ ಕಾಶ್ಮೀರ ಕವಳ. ಹೋರಾಟದಿಂದ ಪಾಕ್—ಭಾರತಗಳಿಗೆ ಸಮೃದ್ಧಿಯಿಲ್ಲವೆಂಬ ವಿವೇಕೋದಯ ಅವರಿಗಾಗಿದೆ. ಅದಕ್ಕೆಂದೇ ಅಮೇರಿಕೆಯ ಮಧ್ಯಸ್ಥಿ

(ಮುಂದಿನ ಪುಟಕ್ಕೆ)

ಶ್ರೀಮತಿ ಕಮಲಾ ನೆಹರು

(ಐದನೇ ಪುಟದಿಂದ)

ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆಯ ಕಲ್ಲನ್ನು ಗಾಂಧೀಜಿಯವರು ಸ್ವಹಸ್ತದಿಂದ ಇಟ್ಟಿದ್ದರು. ಹಾಗೆಯೇ ಆಸ್ಪತ್ರೆಯ ಉದ್ಘಾಟನೆಯನ್ನು ಅವರೇ ನೆರವೇರಿಸಿದ್ದರು. ಇಂದಿಗೂ ಆ ಆಸ್ಪತ್ರೆಯ ಉದ್ಘಾಟನೆಯನ್ನು ಅವರೇ ನೆರವೇರಿಸಿದ್ದರು. ಇಂದಿಗೂ ಆ ಆಸ್ಪತ್ರೆಯು ಶ್ರೀಮತಿ ಕಮಲಾರ ಉತ್ತಮ ಸೇವೆಯ ಪ್ರತೀಕವಾಗಿ ಸೇವೆಗವಕಾಶ ಇಟ್ಟಿದ್ದರು. ಹಾಗೆಯೇ ಆಸ್ಪತ್ರೆಯ ಉದ್ಘಾಟನೆಯನ್ನು ಅವರೇ ನೆರವೇರಿಸಿದರು. ಇಂದಿಗೂ ಆ ಆಸ್ಪತ್ರೆಯು ಶ್ರೀಮತಿ ಕಮಲಾರ ಉತ್ತಮ ಸೇವೆಯ ಪ್ರತೀಕವಾಗಿ ಸೇವೆಗವಕಾಶವೀಯುತ್ತಿರುವ ಆ ಮೂಲ್ಯ ಕೊತ್ತನ್ನ ಬಹುದು.

ಸ್ತ್ರೀ ಸಮೂಹಕ್ಕೆ ಗೌರವ ತರುವ ಶ್ರೀಮತಿ ಕಮಲಾ ನೆಹರೂ ಅವರ ಜೀವನ ಸಾರ್ಥಕ! ಹೊತ್ತಲ್ಲದ ಹೊತ್ತಿನಲ್ಲಿ ಅವರಿಗೊದಗಿ ಮೃತ್ಯು ಭಾರತಕ್ಕೊದಗಿ ಬಂದ ಅಪಾರ ನಷ್ಟ!

(ಹಿಂದಿನ ಪುಟದಿಂದ)

ಸ್ಥಿ ನಡೆಸಿದರೆ, ತನ್ನ ಪೂರ್ವ ಶರ್ತಗಳ ನ್ನೂ ಹಿಂತೆಗೆದು ಕೊಳ್ಳಲು ಅವರು ತ ಯ್ಯಾರು?

ಆದರೆ, ಅಮೆರಿಕೆಯ ಸ್ಪಷ್ಟ ನಿರಾಕರ ಣೆ! ಅಯ್ಯೂಬರ ಉಗುರಿಡೆಯ ಆಸೆಗೂ ಅರ್ಧಚಂದ್ರ....

ಅಯ್ಯೂಬರ ಮುಂದಿನ ಕ್ರಮವೇ ಭಾ ರತ— ಪಾಕ್ ಸಮರದ ಭವಿಷ್ಯ ನಿರ್ಣ ಯಿಸಬಲ್ಲದು. ಭಾರತಕ್ಕೆ ಯುದ್ಧ ವಿಸ್ತ ರಿಸುವ ಉದ್ದೇಶವಿಲ್ಲ. ಪಾಕ್ ಆಕ್ರಮಣ ದ ಮೂಲ ನೆಲೆಗಳನ್ನು ತಡೆಯುವುದಷ್ಟೇ ಅದರ ಉದ್ದೇಶ. ಅಯ್ಯೂಬ ಖಾನರೇ ಯುದ್ಧ ಸಾರಿದವರು, ನಾವು ಆತ್ಮರಕ್ಷ ಣೆಗಾಗಿ ಹೋರಾಡುವವರು. ಅಯ್ಯೂ ಬರೇ ಯುದ್ಧವನ್ನು ಹಿಂತೆಗೆದು ಕೊಳ್ಳ ಬೇಕು.

ಕಾಶ್ಮೀರ ಘಟನೆ ಭಾರತದ ದೃಢ ನೀತಿಯ ದ್ಯೋತಕ. ಕಾಶ್ಮೀರದೊಡನೆ ಕಣ್ಣು ಮುಚ್ಚಾಲೆಯಾಡುವವರು ಇ ನ್ನಾದರೂ ಕಣ್ಣು ತೆರೆಯಬೇಕು. ಅಂ ದು ಕಾಯಿದೆಗೆ ಗೊತ್ತುವಳಿಯ ಮೊದಲಂಶವನ್ನು ತಾರದ ಪಾಕಿಸ್ತಾನ ಕ್ಕೆ ಎರಡನೆಯಂಶದ ಬಗ್ಗೆ ಆಗ್ರಹ ತೋಡುವ ಅಧಿಕಾರವಿಲ್ಲವೇ ಇಲ್ಲ.

ಕಾಶ್ಮೀರ ಭಾರತದ ಒಂದು ರಾಜ್ಯ. ಸಮರ ವಿರಾಮ ರೇಖೆ ಇನ್ನು ಮುಂದೆ ಉಳಿಯ ಬೇಕೆ? ಆಜಾದ್ ಕಾಶ್ಮೀರವ ನ್ನು ಪಾಕ್ ಕಪಿ ಮುಷ್ಟಿಯಿಂದ ಆಜಾ ದ್‌ಗೊಳಿಸಿಕೊಂಡರೆ, ಹೇಗೆ? ಪಾಕ್ ಕೀಟಲೆಗೊಂದು ಮುಟ್ಟುಗೋಲು ಹಾ ಕಿದಂತಾಗದೆ?

— ರಾಶಿ.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. 248/1965.

ವಾದಿ: ಕೃಷ್ಣಭಟ್ಟ.

ಪ್ರತಿವಾದಿರು: ಶ್ರೀ ಲಕ್ಷ್ಮೀನಾರಾಯಣ ದೇವರ ಭಂಡಾರ ಕೂಡಾ.

3ನೇ ಪ್ರತಿವಾದಿ, ನಾರಾಯಣ, ಚಂದು ಹೆಂಗ್ಸಿನ ಮಗ.

6ನೇ ಪ್ರತಿವಾದಿ, ನಾಗಪ್ಪ ನಾಯ್ಕ, ರುಕ್ಮಿಣಿ ಹೆಂಗ್ಸಿನ ಮಗ.

8ನೇ ಪ್ರತಿವಾದಿ, ಸಂಜೀವ, ಕೃಷ್ಣಿ ಹೆಂಗ್ಸಿನ ಮಗ.

3, 6ನೇಯವರು ಬಸ್ರೂರು ಗ್ರಾಮ, ಕಳೇಯುವ ಬೈಂದೂರು ಗ್ರಾಮದಲ್ಲಿರುತ್ತಾನೆ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವು ದೇನೆಂದ್ರೆ—

1ನೇ ಪ್ರತಿವಾದಿ ಲಕ್ಷ್ಮೀನಾರಾಯಣ ದೇವ ರ ನೈವೇದ್ಯ ಪೂಜೆ ಏರ್ಪಾಡು ನಡಿಸಿದ ಬಾಬ್ತು ವಾದಿಗೆ ಬರಬೇಕಾದ ಪ್ಲವ, ಶುಭಕೃತು, ಶೋಭ ಕೃತು ಈ ಮೂರು ವರ್ಷಗಳ ಅಕ್ಕಿ, ಕಾಯಿ ಇತ್ಯಾದಿ ಹಣ್ಣುಗಳ ಬಗ್ಗೆ ವಾದಿಯು ಮಾಡಿದ ಮೊಕದ್ದಮೆಯು ತಾ. 29-9-65ಕ್ಕೆ ತನ್ನಿ ಗೆ ಯಿರುತ್ತದೆ. ಆ ಕುರಿತು ನಿಮ್ಮದೇನಾ ದರೂ ಆಕ್ಷೇಪಣೆಯಿದ್ದರೆ ಆ ದಿವಸ ಬೆಳಿಗ್ಗೆ 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಹ್ಯಾಜೀರು ಮಾಡಿಕೊಳ್ಳತಕ್ಕದ್ದು ಎಂಬ ಸಂ ಗ್ತಿ ತಿಳಿಸಿರುತ್ತದೆ.

By order of the Court

Y. TEJAPPA SHETTY,
Advocate for Plaintiff.

Coondapoor, 17-9-1965.

ಒಲ್ಲದ ಗಂಡನಿಗೆ ಮೊಸ ರಲ್ಲಿ ಕಲ್ಲು

(ನಾಲ್ಕನೇ ಪುಟದಿಂದ)

ರಶ್ಯಗಳು ಸುಮ್ಮನಿರುವುದಿಲ್ಲವಂತಲ್ಲ...”

‘ಅಂತೆ. ಆದರೆ, ಏನಾಗುವುದೆಂದು ಹೇಗೆ ಗೊತ್ತು?’

‘ಅಲ್ರಿ, ಭಾರತ ಚೀನಕ್ಕೆ ಏನೆಂದು ಉತ್ತರ ನೀಡಿದೆ?’

‘ಮತ್ತೇನು? ನಿಷ್ಪಕ್ಷಪಾತ ನಿರೀಕ್ಷಕ ರಿಂದ ಸಿಕ್ಕಿಂಗಡಿಯನ್ನು ಪರಿಶೀಲಿಸಬಹು ದು. ಅದು ಹೊರತು ಭಾರತದ ಮೇಲೆ ಚೀನಾವು ಶಕ್ತಿಯನ್ನೇ ಪ್ರದರ್ಶಿಸ ಬಯ ಸುವುದಾದರೆ, ಸ್ವಾತಂತ್ರ್ಯ, ಸಮಗ್ರತೆಗ ಳ ರಕ್ಷಣೆಯನ್ನು ಮಾಡುವ ದೃಢ ನಿರ್ಧಾ ರದಿಂದ ಭಾರತವನ್ನು ಚೀನಾ ಕದಲಿಸ ಲಾರದೆಂದು ತಿಳಿಸಿದ್ದಾರೆ.’

‘ಅಂದರೆ, ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು’ ಎಂದಂತೆ ಅಲ್ಲವೆ?”

‘ಹ್ಞೂಂ. ಒಲ್ಲದವನು ಕಲ್ಲನ್ನೇ ಹು ಡುಕಬಹುದು. ಆದರೆ, ನಾನೇನೂ ಹಾಗಿ ಲ್ಲವಲ್ಲ....”

‘ಪಾಪ, ಮೊಸರು ಅನ್ನುತ್ತಲೇ ಬಾಯ ಲ್ಲಿ ನೀರು ಸುರಿಯುತ್ತದೆ, ಅಲ್ವೆ?’

‘ಇದರಲ್ಲಿ ವಿಶೇಷವೇನಿದೆ?’

‘ಹ್ಞೂಂ... ಆಯ್ತು. ಇನ್ನು ಏನೇನು ನೋಡಬೇಕಾಗಿದೆಯೋ ಯಾರಿಗೆ ಗೊ ತ್ತು? ನಾಳೆ ಏನಾಗುವುದೋ, ಇಂದಂ ತೂ ಮೊಸರನ್ನ ತಿಂದು ತೇಗ...’

“ಯಾಕೆ ಹಾಗಂತೀಯ?”

‘ಅಲ್ರಿ, ಪಾಕ್ ವೈಮಾನಿಕ ಪಡೆಯು ಸಮರ ರಂಗವನ್ನು ಬಿಟ್ಟು ಭಾರತದ ನಾಗರಿಕ ಪ್ರದೇಶಗಳ ಮೇಲೆ ಬಾಂಬು ದಾಳಿ ಒಂದೇ ಸಮನೆ ನಡೆಸುತ್ತಿದೆಯಂ ತೆ. ಅನೇಕರು ಸತ್ತರು ಅನೇಕರು ಗಾಯ ಗೊಂಡರು ಯಾವ ಗಳಿಗೆಯಲ್ಲಿ ಏನಾಗು ವುದೋ ಯಾರು ತಾನೇ ಹೇಳಬಲ್ಲರು?’

“ಹೆದರ ಬೇಡ, ಇಷ್ಟು ಗಾಬರಿಗೊಂ ಡರೆ ಹೇಗೆ? ದೇಶದ ರಕ್ಷಣೆಯನ್ನು ರಕ್ತ ದ ಕೊನೆಯ ಬಿಂದುವಿರುವ ವರೆಗೂ ಮಾಡುವುದು ನಮ್ಮ ಕರ್ತವ್ಯ. ಧೈರ್ಯ ಗೆಡದೆ ಬರಬಹುದಾದ ಗಂಡಾಂತರಗಳ ನ್ನು ಎದುರಿಸಬೇಕು..’

‘ಹ್ಞೂಂ... ಅದು ಸರಿಯೇ... ಬನ್ನಿ.... ಇನ್ನು ಮತ್ತೆ ರೇಡಿಯೋ ವಾರ್ತೆ ಕೇ ಳೋದಿದೇಂತೆ ಊಟಕ್ಕೆ ಹೊತ್ತು ಮಾಡ ಬೇಡಿ. ಏಳಿ ಬೇಗ....’

“ಸರಿಯಮ್ಮ... ಇಗೋ ಬಂದೆ....”

— ಗೋರಾ.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

REC 48/1965 (OS 54/57 & AS 18/60).

ನಗರ ರಮಾನಾಥ ಶೆಟ್ಟಿ ಕೂಡಾ —ಅರ್ಜಿದಾರರು.

ಪದ್ಮಾವತಿ ಯಾನೆ ಬಾಬು ಸೆಟ್ಟಿ— ಯದ್ರಿರು.

ಎದ್ರಿರು—

4. ನಾಗರತ್ನ, ರತಿದೇವಿ ಅಮ್ಮನ ಮಗ ಳು— ಕಾರ್ಕಳ ತಾಲ್ಲೂಕು ಹಿರ್ಗಾನ ಗ್ರಾ ಮದ್ದು, ಮೂಡಬಿದ್ರಿಯಲ್ಲಿರುತ್ತಾಳೆ.

5. ಭವಾನಿ, ರತಿದೇವಿ ಅಮ್ಮನ ಮಗ ಳು ವೈಯ್ಯಾರು ಪ್ರಾಂತ್ಯದ ಶೃಂಗೇರಿ ಯಲ್ಲಿರುತ್ತಾಳೆ.

ಯಿವರೀಗೆ ಈ ಮೂಲಕ ತಿಳಿಸುವುದೇ ನೆಂದ್ರೆ—

ಮೇಲ್ಕಂಡ ಅಮಲ್ಜಾರಿಯಲ್ಲಿ ಏಲಂಗೆ ಅಪೇಕ್ಷಿಸಿದ ಸ್ಥಿರಾಸ್ತಿಯ ಕುರಿತು ಹಾಜರಾದ ಯೇಲಂ ಯಿಸ್ತಿಹಾರ ಶರತಗಳನ್ನು ನಿರ್ಣ ಯಿಸುವ ಬಗ್ಗೆ, ಯೇಲಂನಲ್ಲಿ ದರಖಾಸ್ತಿಗೆ ನಿಲ್ಲುವರೇ ಅರ್ಜಿದಾರರಿಗೂ ಪರ್ಮಿಶನ್ ಕೊಡುವ ಬಗ್ಗೆ, ನಿಮಗೆ ಆಕ್ಷೇಪಣೆಯಿದ್ದರೆ ತಾ. 29-9-65ಕ್ಕೆ ನೀವು ಸ್ವತಃ ಯಾ ವ ಕೀಲ ದ್ವಾರಾ ಕೋರ್ಟು ಮುಂದೆ ಹಾಜ ರಾಗಿ ಉಜುರಸ್ಸತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ್ಹಾಜರಿ ಯುಕ್ತ ಕಂಡಂತೆ ತೀರ್ಮಾನಿಸಲಾಗು ವದು.

ಕೋರ್ಟು ಹ್ಕುಂ ಪ್ರಕಾರ,

B. K. Suryanarayana Rao,
Advocate for Petitioners.

ಬೆಳ್ತಂಗಡಿ, ತಾ. 10-9-65.

ಎಲ್ಲೆಲ್ಲಿ ಏನೇನು?

ಶಿಕ್ಷಕರ ದಿನಾಚರಣೆ

ಕುಂದಾಪುರ, ಸ್ಥಳೀಯ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ದಿನಾಂಕ 6ರಂದು ಶಿಕ್ಷಕರ ದಿನಾಚರಣೆಯನ್ನು ಜರುಗಿಸಿದರು. ಪ್ರೊ| ಟಿ. ಕೃಷ್ಣರಾವ್, ಪ್ರಿನ್ಸಿಪಾಲ್‌ರವರು ಪ್ರಧಾ ನ ಅತಿಥಿ ಪ್ರೊ| ಪಿ. ಎಮ್. ಇನಾಂದಾರರ ಪರಿಚಯ ಮಾಡಿಕೊಟ್ಟು ಸ್ವಾಗತಿಸಿದರು. ಪ್ರೊ| ಇನಾಂದಾರರವರು ಭಾಷಣ ಮಾಡುತ್ತಾ ಶಿಕ್ಷಣವು ಶಿಕ್ಷಕ-ಶಿಷ್ಯವರ್ಗದ ಪರಸ್ಪರ ಪ್ರ ಯತ್ನವೆಂದೂ, ವಿದ್ಯಾರ್ಥಿ ವೃಂದವು ಪರೀಕ್ಷಾ ದೃಷ್ಟಿಯಿಂದಲೇ ವಿದ್ಯಾಭ್ಯಾಸ ಮಾಡಿದರೆ ಭಾವೀ ಜನಾಂಗವು ಜ್ಞಾನಶೂನ್ಯವಾದೀತೆಂಬ ಎಚ್ಚರಿಕೆಯನ್ನು ಕೊಟ್ಟರು. ಶ್ರೀ ಪಿ. ಪಿ. ಉಪಾಧ್ಯಾಯರು ಧನ್ಯವಾದಾರ್ಪಣೆ ಮಾಡಿ ದರು.

ಮನೋರಂಜನಾ ಕಾರ್ಯಕ್ರಮ

ಕುಂದಾಪುರ, ತಾ 8, ಸ್ಥಳೀಯ ಭಂಡಾ ರ್ ಕಾರ್ಸ್ ಕಾಲೇಜು ಯೂನಿಯನ್ನಿನ ಆಶ್ರ ಯದಲ್ಲಿ ಮನೋರಂಜನೆಯ ಕಾರ್ಯಕ್ರಮ ವನ್ನು ಏರ್ಪಡಿಸಲಾಯಿತು. ಶ್ರೀ ದೈಲಂಗ ಡಿ ಪ್ರಭಾಕರ ರಾವ್,—ಇವರು ವಿವಿಧ ಅ ನುಕರಣೆ, ವ್ಯಕ್ತಿಗತ ಅಭಿನಯಗಳನ್ನು ಪ್ರ ದರ್ಶಿಸಿದರು. ಶ್ರೀ. ಶ್ರೀಧರ ನಾಯಕರು ಬರೇ ಬೆಂಕಿ ಪೆಟ್ಟಿಗೆಯಿಂದ ನುಡಿಸಿದ “ಓಂ ಶ್ರೀ ವಾದನ” ಕಾರ್ಯಕ್ರಮವೂ ಶ್ಲಾಘ ನೀಯವಾಗಿತ್ತು. ಕಾರ್ಯದರ್ಶಿ ಶ್ರೀ ವರ ದಾನಂದ ಶೆಟ್ಟಿಯವರು ಧನ್ಯವಾದಾರ್ಪಣೆ ಮಾಡಿದರು.

ಉದ್ಘಾಟನೆ

ಸುರತ್ಕಲ್ಲು ಕರ್ನಾಟಕ ರೀಜನಲ್ ಎಂಜಿ ನಿಯರಿಂಗ್ ಕಾಲೇಜಿನ “ಮೆಕ್ಯಾನಿಕಲ್ ಎಂಜಿ ನಿಯರಿಂಗ್ ಸೊಸೈಟಿ”ಯನ್ನು ತಾ. 7-9-65 ರಂದು ಪ್ರೊ| ಡಾ| ಡಿ. ಜೆ. ಹ್ಯೂಬರ್ ವಿಸಿ ಟಿಂಗ್ ಪ್ರೊಫೆಸರ್ ಮೆಕ್‌ಮಸ್ಟರ್ ಯು ನಿವರ್ಸಿಟಿ ‘ಕೆನಡಾ’ ಇವರು ಉದ್ಘಾಟಿಸುತ್ತಾ ಎಂಜಿನಿಯರರ ಯೋಗ್ಯತೆ, ಆವಶ್ಯಕತೆ ಹಾ ಗೂ ತಾಂತ್ರಿಕತೆಯ ಪ್ರಗತಿಯ ಕುರಿತು ಮಾತನಾಡಿದರು. ಪ್ರಿನ್ಸಿಪಾಲ್ ಡಾ| ಎ. ಎಸ್ ಅಯ್ಯರವರು ಅಧ್ಯಕ್ಷತೆವಹಿಸಿದ್ದರು.

ಪೆನ್ಶನ್‌ದಾರರ ಸಭೆ

ಉಡುಪಿ, ತಾ. 5-9-65ರಂದು ಮುನ್ಸಿ ಪಲ್ ಗಾಂಧಿ ಮೆಮೋರಿಯಲ್ ಬೇಸಿಕ್ ಪ್ರೈ ಯರ್ ಎಲಿಮೆಂಟರಿ ಶಾಲೆಯಲ್ಲಿ ಎಲ್ಲಾ ತರದ ಪೆನ್ಶನ್‌ದಾರರ ಎಸೋಶಿಯೇಶನಿನ ಸಭೆಯು ಶ್ರೀ ಕೋಣಿ ಜನಾರ್ಧನ ಹೆಬ್ಬಾರರ ಅಧ್ಯಕ್ಷತೆ ಯಲ್ಲಿ ಜರಗಿ, ಎಲ್ಲಾ ಪೆನ್ಶನ್‌ದಾರರಿಗೂ ಸರಕಾರದ ನೌಕರರಿಗೆ ಈಗ ದೊರೆಯುವ ಸಂಬಳದ ದಾಮಾಶ ಪ್ರಕಾರ ಪೆನ್ಶನ್ ಮತ್ತು ತುಟ್ಟಿಭತ್ತೆ ಸಿಗುವಂತೆ ಕೇಳಿಕೊಳ್ಳುವ ನಿರ್ಣ ಯವಾಯ್ತು.

ರಾಷ್ಟ್ರೀಯ ರಕ್ಷಣೆಗಾಗಿ ಸರ್ವ ಪಕ್ಷೀಯ ಸಭೆ

ಉಡುಪಿ:— ದೇಶದ ಪ್ರಸ್ತುತದ ವಿಷ ಮ ಪರಿಸ್ಥಿತಿಯಲ್ಲಿ ನಾಗರಿಕರು ವಹಿಸಬೇಕಾ ದ ಪಾತ್ರ ಹಾಗೂ ನಿರ್ವಹಿಸಬೇಕಾದ ಕರ್ತವ್ಯಗಳ ಕುರಿತು ಜನ ಜಾಗೃತಿಮಾಡಿಸು ವ ಸಲುವಾಗಿ ಮತ್ತು ದೇಶ ರಕ್ಷಣೆಯ ಕು ರಿತು ಉಡುಪಿಯ ಜನತೆಯ ದೃಢ ನಿ ರ್ಧಾರವನ್ನು ವ್ಯಕ್ತಪಡಿಸುವುದರ ಸಲುವಾಗಿ ಸರ್ವಪಕ್ಷೀಯ ಸಭೆಯೊಂದು ತಾ 13ರಂದು ರಥಬೀದಿಯಲ್ಲಿ ಜರಗಿತು.

ಉಡುಪಿಯ ಇತಿಹಾಸದಲ್ಲೇ ಅಭೂತ ಪೂರ್ವವೆನ್ನಬಹುದಾದ ಈ ಸಭೆಯ ಮೊದಲು ರೋಮಾಂಚಕಾರಿಯಾದ ನಾಗರಿಕರ ಮೆರವ ಣಿಗೆಯು ನಗರದ ಬೀದಿಗಳಲ್ಲಿ ಘೋಷಣೆಗಳ ನ್ನೆಬ್ಬಿಸುತ್ತಾ ಸಾಗಿತು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಂ. ಮಧ್ವರಾಜ್, ಎಂ. ಎಲ್. ಎ., ಇವರು ವಹಿ ಸಿದ್ದರು. ಶ್ರೀ ಎ. ಜಿ. ಅಲ್ಸೆಯವರು ಪ್ರಾ ಸ್ತಾವಿಕ ಮಾತುಗಳನ್ನಾಡಿದರು. ಆ ಬಳಿಕ ಸರ್ವ ಶ್ರೀ ಪಿ. ರಂಗನಾಥ ಶೆಣೈ, ಟಿ. ರಮೇಶ ಪೈ, ಬಿ. ಎಸ್. ಲೂವಿಸ್, ಯು. ಅನಂತಕೃಷ್ಣ, ನರಸಿಂಹ ನಾಯಕ, ವಾಸು ಸೇ ರಿಗಾರ, ಬಿ. ವಿ. ಕೆದಿಲಾಯ, ಭರತನ್, ಜಿ. ಸಿ. ರೇಗೋ, ಯು. ಅಬ್ದುಲ್‌ಖಾದರ್, ಬಿ. ಶೀನಪ್ಪ ಹೆಗ್ಡೆ ಮೊದಲಾದವರು ಮಾತ ನಾಡಿ ದೇಶದ ಇಂದಿನ ಗಂಡಾಂತರ ಪರಿ ಸ್ಥಿತಿಯಲ್ಲಿ ನಾವು ಸರ್ವ ತ್ಯಾಗಕ್ಕೂ ಸಿದ್ಧ ರಾಗಿದ್ದು, ಮಾತೃಭೂಮಿಯ ರಕ್ಷಣೆಗಾಗಿ ತನು ಮನ ಧನಗಳನ್ನರ್ಪಿಸಬೇಕೆಂದರು. ಆ ಗಾಗ್ಗೆ ಬರುತ್ತಿದ್ದ ಮಳೆಯನ್ನು ಲೆಕ್ಕಿಸದೆ ಜ ನ ಸ್ತೋಮ ಶ್ರದ್ಧೆಯಿಂದ ಈ ಸಭೆ ಯಲ್ಲಿ ಭಾಗವಹಿಸಿದ್ದರು. ಸಾ ಮಾಯಿ ಸ್ಫೂರ್ತಿಯಿಂದಲೇ ಸಭೆಯಲ್ಲೇ ರಾ ಷ್ಟ್ರೀಯ ರಕ್ಷಣಾ ನಿಧಿಗೆ ರೂ. ಹತ್ತು ಸಾ ವಿರಕ್ಕೂ ಮಿಕ್ಕಿ ಸಂಗ್ರಹ ವಾಗಿದೆ ಎಂದು ತಿಳಿದುಬಂದಿದೆ. ತಹಸೀ ಲ್ದಾರರು ಈ ಸಂದರ್ಭದಲ್ಲಿ ಮಾತನಾಡುತ್ತಾ ನಾಗರಿಕರು ಸರಕಾರದೊಡನೆ ಹೇಗೆ ಸಹಕರಿಸ ಬೇಕೆಂಬುದನ್ನು ತಿಳಿಸಿ, ಇದೇ ಬರುವ ತಾ. 22ರಂದು ರಾಷ್ಟ್ರೀಯ ರಕ್ಷಣೆಗಾಗಿ ವಿವಿಧ ಸಮಿತಿಗಳನ್ನೇರ್ಪಡಿಸಲು ಪ್ರಮುಖ ನಾಗರಿ ಕರ ಸಭೆ ಕರೆದಿರುವುದನ್ನು ತಿಳಿಸಿದರು.

ಅಧ್ಯಕ್ಷ ಮಧ್ವರಾಜರು ತಮ್ಮ ಭಾಷಣ ದಲ್ಲಿ ಜನತೆಯ ಸಹಕಾರವನ್ನು ಕೋರಿ, ಉಡುಪಿಯ ಜನತೆಯ ಪರವಾಗಿ ಅಂಗೀಕರಿ ಸಿದ ನಿರ್ಣಯವನ್ನು ತಿಳಿಸಿ, ಅದನ್ನು ಪ್ರಧಾ ನಿ, ರಾಷ್ಟ್ರಪತಿ ಹಾಗೂ ರಕ್ಷಣಾ ಮಂತ್ರಿ ಗಳಿಗೆ ಕಳುಹಿಸಲಾಗುವುದೆಂದರು. ಸಮಾ ರಂಭದ ಕೊನೆಯಲ್ಲಿ ರಕ್ಷಣಾನಿಧಿಗೆ ಕಾಣಿಕೆ ಯಾಗಿ ದೊರೆತ ವಸ್ತುಗಳನ್ನು ಏಲಂ ಹಾಕ ಲಾಯಿತು.

ರಕ್ಷಣಾ ನಿಧಿಗೆ ಕೊಡುಗೆ

ಮಣಿಪಾಲ, ಸೆ. 12.-ಪಾಕಿಸ್ತಾನ ಉಂ ಟುಮಾಡಿರುವ ಉತ್ಕಟ ಪರಿಸ್ಥಿತಿಯಲ್ಲಿ ರಾ ಷ್ಟ್ರಕ್ಕೆ ಬೆಂಬಲ ಕೊಡುವುದಾಗಿ ಪಣತೊಟ್ಟಿ ರುವ ಮಣಿಪಾಲ ಇಂಜಿನಿಯರಿಂಗ್ ಕಾಲೇ ಜಿನ ವಿದ್ಯಾರ್ಥಿಗಳು 3000ರೂಗಳನ್ನು ಸಂ ಗ್ರಹಿಸಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಸಲ್ಲಿ ಸಿದ್ದಾರೆ. ಈ ಮೊತ್ತವನ್ನು ಕಾಲೇಜಿನ ಪ್ರಿ ನ್ಸಿಪಾಲರು ಪ್ರಧಾನ ಮಂತ್ರಿಯವರಿಗೆ ಕಳಿಸಿದ್ದಾರೆ.

ಕೃಷಿ ಪದ್ಧತಿಯ ಪುನರ್ವಿಮರ್ಶೆ ಅಗತ್ಯ

ಮಂಗಳೂರು, ಸೆ. —ದಕ್ಷಿಣ ಕನ್ನಡ ಜಿಲ್ಲಾ ಕೃಷ್ಯಭಿವೃದ್ಧಿ ಸಹಕಾರ ಸಂಘದ ಡೈ ರೆಕ್ಟರರ ಸಭೆಯಲ್ಲಿ ಮಾತನಾಡುತ್ತಾ, ಆಹಾರ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಟಿ. ಎ. ಪೈ ಗಳು, ಏರುತ್ತಿರುವ ಜನಸಂಖ್ಯೆಗೆ ಸಾಕಷ್ಟು ಆಹಾರ ಪೂರೈಸಲು ಈಗಿರುವ ಕೃಷಿ ಪದ್ಧತಿ ಗಳನ್ನು ಅಮೂಲಾಗ್ರವಾಗಿ ಪುನರ್ವಿಮರ್ಶಿ ಸುವ ಅಗತ್ಯವಿದೆ, ಯಾಂತ್ರೀಕೃತ ಬೇಸಾ ಯಕ್ಕೆ ದ. ಕ. ಜಿಲ್ಲೆ ಹೆಚ್ಚು ಅನುಕೂಲವಾ ಗಿದೆ ಎಂದು ಅಭಿಪ್ರಾಯ ಸೂಚಿಸಿದರು. ರೈ ತರಿಗೆ ಕೃಷಿ ಸೇವಾ ಸೌಲಭ್ಯಗಳನ್ನು ಒದಗಿ ಸುವ ಕುರಿತು ಶ್ರೀ ಪೈಗಳಿತ್ತ ಸಲಹೆಯನ್ನು ಡೈರೆಕ್ಟರರ ಮಂಡಳಿಯು ಅನುಮೋದಿಸಿತು.

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕ ಔಷಧಿಯನ್ನು ತಾ. 10-10-65ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವು ದರಿಂದ ಅಸ್ತಮಾ, ಶ್ವಾಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿ ಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Ayurvedashram,
P. O. Chitrakot U. P.

ಪ್ರತೀಕಾರ

(ಎರಡನೇ ಪುಟದಿಂದ)

ನಾವು ತಂದ ಆ ಹುಲಿ ಮರಿ ಕಂಡು ಅಜ್ಜನಿಗೆ ಸಮಾಧಾನವಾಗಲಿಲ್ಲ. ಅವರೆಂದರು—"ಸದ್ಯದಲ್ಲಿಯೇ ಆಪತ್ತು ಒದಗಿ ಬರಲಿದೆ."

ನಾನೆಂದೆ—"ಎಂತಹ ಆಪತ್ತು?"

"ಎಂತಹ ಆಪತ್ತು!? ನೀನು ತಂದಿರುವ ಆ ಹುಲಿ ಮರಿಯ ತಾಯಿ ಸುಮ್ಮನಿದ್ದೀತೆ? ಮರಿಯನ್ನರಸಿ ಬಂದಾಗ ಅದರ ಕೋಪಕ್ಕೆ ಗುರಿಯಾಗದಿರುವುದು ಹೇಗೆ?" ಅಜ್ಜ ಎಂದ.

ನನಗಂತೂ ಹೆಚ್ಚೇಕೆ ಅತಿಥಿಯಾಗಿ ಬಂದ ನನ್ನಂತಿರುವ ಹುಡುಗರಿಗೂ ಆ ಹುಲಿ ಮರಿಯನ್ನು ಬಿಟ್ಟುಬಿಡುವ ಮನಸ್ಸಿರಲಿಲ್ಲ. ನನ್ನ ಮೇಲಣ ಮೋಹದಿಂದಾಗಿ ನಮ್ಮ ಮನೆಯವರು ಆ ಹುಲಿ ಮರಿ ಸಾಕುವುದಕ್ಕೆ ಸಮ್ಮತಿಯನ್ನಿತ್ತರು.

ಆದರೂ ಅಜ್ಜ—ಅಪ್ಪ ಮುಂಜಾಗ್ರತೆಯಿಂದಿದ್ದರು. ಹುಲಿಯು ಮರಿಯನ್ನರಸಿ ಬರುವುದಂತೂ ಖಚಿತ! ಬಂದ ಹುಲಿಯು ಯಾರನ್ನಾದರೂ ಬಲಿ ಕೊಂಡು ತನ್ನ ಮರಿಯನ್ನು ಹೊಂದಿ ಹೋಗುವುದೂ ಖಂಡಿತವಿರಬಹುದು. ಆದುದರಿಂದ ಅಜ್ಜ ಬರಲಿರುವ ಆ ಹುಲಿಯನ್ನು ಹಿಡಿಯುವರೆ ಹಗಲಿರುಳು ಎಂಬಂತೆ ಕೋವಿ ಸಿದ್ಧಪಡಿಸಿ ಕೊಂಡಿಟ್ಟಿದ್ದರು. ಆದರೂ ಹುಲಿ ಮಾತ್ರ ಅಲ್ಲಿಗೆ ಬಂದಿರಲಿಲ್ಲ.

ಬಹುಶಃ ಹುಲಿ ಮರೆತಿರಬಹುದು ಎಂದುಕೊಂಡು ರಾತ್ರಿ ಹೊತ್ತು ಸುಖವಾಗಿ ಮಲಗಿ ವಿರಮಿಸುವರೇ ಒಂದು ಚಿಕ್ಕ ದೊಡ್ಡ ಬೋನು ಸಿದ್ಧಪಡಿಸಿದರು. ಅದರೊಳಗೆ ಒಂದು ಬಡ ಪ್ರಾಣಿ ಮೇಕೆಯನ್ನೂ ಇರಿಸಲಾಯಿತು.

ಪಾಪ ಮೇಕೆಗೆ ತಿಳಿದಿತ್ತೊ ಇಲ್ಲವೊ. ಆದರೆ ಮೇಕೆ ತನಗೆ ಇತ್ತ ಹುಲ್ಲು ಕಡ್ಡಿಗಳನ್ನು ತಿಂದು ಏನೊಂದೂ ಕೂಗದ ಸುಮ್ಮನಿತ್ತು. ಒಂದು ವೇಳೆ ರಾತ್ರಿ ಹುಲಿ ಬಂದರೆ ಮೇಕೆ ಕೂಗುವುದು ಆ ಕೂಗಿಗೆ ಎಚ್ಚರವಾಗಿ ಹುಲಿಯನ್ನು ಗುರಿಯಿಟ್ಟು ಹೊಡೆಯುವುದು. ಮೇಕೆ ಉಳಿಯುವುದು. ಒಂದು ವೇಳೆ ಮೇಕೆ ಕೂಗದಿದ್ದರೆ—ಹುಲಿ ಬಂದದ್ದು ಮೇಕೆಗೆ ತಿಳಿಯದಿದ್ದರೆ—ಮೇಕೆ ಹುಲಿಯ ಹೊಟ್ಟೆ ಸೇರುವುದಂತೂ ನಿಶ್ಚಯ! ಆದರೆ ಮೇಕೆ ತಿಂದ ಹುಲಿ ಹೊರಗೆ ಮಾತ್ರ ಬರಲಾರದು. ಗೂಡಿನಲ್ಲಿ—ಬೋನಿನಲ್ಲಿ ಸಿಕ್ಕಿ ಬೀಳುವುದು.

ಎಂತಹ ಒಂದು ಯೋಜನೆ ನನ್ನ ಅಜ್ಜ ರಚಿಸಿದ್ದರು! ಏನೆಂದರೂ ಅಜ್ಜ ಪ್ರಾಯವಾದವರು, ಅನುಭವಿಗಳು.

ಆದರೆ ಹುಲಿ ಮಾತ್ರ ನಾಲ್ಕಾರು ದಿನಗಳ ತನಕ ಬರಲೇ ಇಲ್ಲ. ನಮಗೆಲ್ಲಾ ನಿರಾಶೆಯಾಯ್ತು. ಹುಲಿ ಮರಿ ನಮ್ಮಲ್ಲಿ ದನದ ಹಾಲಿನಿಂದ ಬೆಳೆಯುತ್ತಲಿತ್ತು.

ಒಂದು ದಿನ ಸಂಜೆ ನಾವೆಲ್ಲ ಹುಡುಗರು ಸೇರಿ ಹುಲಿಯಾಟ ಆಡಿದೆವು. ನಾನೇ ಹುಲಿಯಾಗಿದ್ದೆ. ಹುಲಿ ಬಂದು ಮೇಕೆಯನ್ನು ತಿನ್ನುವ ದೃಶ್ಯ. ಆದರೆ ನಾನು ಆ ಮೇಕೆಯ ಕತ್ತಿಗೆ ಬಾಯಿ ಇಕ್ಕುವಂತೆ ಮಾಡುವಾಗ ಮೇಕೆ ಹೆದರಿ ಹಿಂದೆ ಸರಿಯಿತು. ಪಟ್ ಶಬ್ದವೂ ಆಯ್ತು! ನೋಡಿದರೇನು? ಬೋನಿನ ಬಾಗಿಲು ಭದ್ರವಾಗಿ ಮುಚ್ಚಿತ್ತು. ನಾನು ಒಳಗೆ ಸೇರಿದ್ದೆ. ಹುಡುಗರೆಲ್ಲಾ ಕೈ ಚಪ್ಪಾಳೆ ಬಡಿದರು. ಆಟ ಮುಗಿಯಿತು. ಬೋನು ಮುರಿದು ನಾನಂತೂ ಹೊರ ಬಂದೆ. ಬೋನು ಪುನಃ ಸರಿಪಡಿಸಲಾಗಲಿಲ್ಲ. ಅದನ್ನು ಅಜ್ಜನಿಗೆ ಹೇಳಿದರೆ ಅವರೆಲ್ಲಾದರೂ ಗದರಿಸಿದರೆ?

ಅವರೂ ಅಷ್ಟೆ ಎಂದಿನಂತೆ ಮೇಕೆ ಹುಲ್ಲು ತಿನ್ನುತ್ತಲಿದ್ದುದರಿಂದ ಬೋನು ಹಾಳಾಗಿದೆ ಎಂಬುದು ಅವರ ಗಮನಕ್ಕೆ ಹೋಗಿಲ್ಲ.

ಹಗಲು ಕಳೆದು ರಾತ್ರಿ ಬಂತು. ಮಧ್ಯರಾತ್ರಿಯ ಸಮಯ ಮೇಕೆ ಒಂದೇ ಸಮನೆ ಕೂಗಲಾರಂಭಿಸಿತು. ಅಜ್ಜ.. ಅಪ್ಪ ಎಚ್ಚೆತ್ತರು. ಕೋವಿ ಕೈಗೆತ್ತಿಕೊಂಡರು. ಆದರೆ ದುರದೃಷ್ಟಕ್ಕೆ ಕೋವಿಯಲ್ಲಿ ಮದ್ದೇ ಇರಲಿಲ್ಲ. ಈಗಂತೂ ಕೋವಿ ನಿಷ್ಫಲವಾಯಿತು. ಬೇರೆಡೆ ಹೋಗಿ ತರುವಂತೆಯೂ ಇಲ್ಲ. ಹೊರಗೆ ಹುಲಿ ಬಂದು ನಿಂತಿದೆ! ಏನು ಮಾಡೋಣ? ಅಪ್ಪ ಕೇಳಿದರು ಅಜ್ಜ ಸಮಾಧಾನದ ನಿಟ್ಟುಸಿರು ಬಿಟ್ಟ—ಬೋನು ಇದೆಯಲ್ಲ! ನಾನು ಮಾತ್ರ ನನ್ನೊಳಗೆ ಕಸಿವಿಸಿಗೊಂಡೆ. ಕಾರಣ ಬೋನು ನಾನು ಮುರಿದು ಇಟ್ಟಿದ್ದೆ. ಈ ಸಂದರ್ಭದಲ್ಲಿ ಹೇಳಬೇಕಾದ್ದು ನನ್ನ ಧರ್ಮ! ಆದರೆ ಹೇಳಿದರೆ ನನಗಂತೂ ಬೈಗಳ ಸುರಿಮಳೆಯಾದೀತು? ಧರ್ಮ ಸಂಕಟದಲ್ಲಿ ಬಿದ್ದು ಕೊನೆಗೂ ಮೌನವಾಗಿದ್ದೆ.

ಅಜ್ಜ ಬಾಗಿಲ ಸಂಧಿಯಿಂದ ನೋಡಿದ. ಅಲ್ಲಿ ಮೇಕೆ ಕೂಗುತ್ತಿತ್ತೆ ವಿನಹ ಹುಲಿ ಇರಲಿಲ್ಲ. ಸುತ್ತಮುತ್ತಲೂ ಇರಲಿಲ್ಲ. ನಮ್ಮ ಮನೆಯ ಮಾಡು ಹುಲ್ಲಿನಿಂದ ತಯಾರಿಸಿದ್ದು ಮನೆಯ ಮಾಡಿನ ಹುಲ್ಲು ಅಲುಗಾಡಿದಂತೆ ನನಗೆ ಭಾಸವಾಯಿತು.

ನಾನು ಮೇಲೆ ನೋಡಿದೆ. ಹೌದು! ಹುಲಿಯು ಒಂದು ಕಾಲನ್ನು ಮಾಡಿನ ಮೇಲೆ ಇಟ್ಟು ಹುಲ್ಲು ಬದಿಗೆ ಸರಿಸಿ ಒಳಗ ಬರಲು ಪ್ರಯತ್ನಿಸುತಿತ್ತು. ಅಜ್ಜನಿಗೆ ಸಮಯಾವಕಾಶವನ್ನು ಹಾಳು ಮಾಡದೆ ಅತ್ತ ತೋರಿಸಿದೆ.

ಅಜ್ಜ—ಅಪ್ಪ—ಅಮ್ಮ ಎಲ್ಲರೂ ಹೆದರಿದರು. ಇನ್ನೇನು ಸುಮ್ಮನಿದ್ದರೆ ಹುಲಿ ನಮ್ಮ ಮೇಲೆ ಹಾರುವುದಂತೂ ಖಂಡಿತ. ಕಾರಣ ಅದರ ಮರಿಯನ್ನು ನಾವು ಅಲ್ಲಿಯೇ ಕಟ್ಟಿ ಹಾಕಿದ್ದೆವು. ವಾಸನಾ ಬಲದಿಂದ ಅದು ನೇರವಾಗಿ ನಮ್ಮ ಮಾಡಿನ ಮೇಲೆಯೇ ಹಾರಿ ನಿಂತಿದೆ.

ಅಜ್ಜನಿಗೆ ಕೂಡಲೆ ಒಂದು ಆಲೋಚನೆ ಹೊಳೆಯಿತು. ಏಳೆಂಟು ಮರದ ತುಂಡು ಒಟ್ಟು ಮಾಡಿದ. ಚಿಮಣಿ ಎಣ್ಣೆ ಸುರಿದ. ಬೆಂಕಿ ಹೊತ್ತಿಸಿದ. ಚಳಿಗಾಲವಾದುದರಿಂದ ಚಳಿ ಕಾಯಿಸಲೂ ಒಳ್ಳೆಯ ಸಾಧನವಾಗಿತ್ತು. ಬೆಂಕಿಯ ಜ್ವಾಲೆ ಮಾಡಿನೆತ್ತರಕ್ಕೆ ಇರಲಿಲ್ಲವಾದರೂ ಉರಿ ದೊಡ್ಡದಿತ್ತು. ಹುಲಿ ಬಹುಶಃ ಹೆದರಿತು. ಮತ್ತೆ ಮಾಡಿನ ಹುಲ್ಲು ಅಲುಗಾಡಲಿಲ್ಲ. ಹುಲಿಯ ಕಾಲೂ ತೋರಲಿಲ್ಲ

ನಮಗೆಲ್ಲರಿಗೂ ಒಂದು ಸಲ ಹೋದ ಜೀವ ಬಂದಂತಾಯ್ತು. ಆದರೆ ಮರುಕ್ಷಣದಲ್ಲೆ ಪುನಃ ಪ್ರಾಣ ಭಯ! ಬಾಗಿಲ ಬಳಿಯೇ ಬಂದು ನಿಂತಿದೆ. ಬಾಗಿಲನ್ನು ಒಂದೇ ಸಮನೆ ದೂಡುವ ರಭಸಕ್ಕೆ ನಮ್ಮ ಹೃದಯವೂ ಬಡಿತದ ವೇಗ ಹೆಚ್ಚಿಸುತಿತ್ತು.

ಅಜ್ಜ ಹೆದರಲಿಲ್ಲ ನಮ್ಮ ಮನೆಯಲ್ಲಿ ಒಂದು ಡೋಲು ಇತ್ತು. ಆ ಡೋಲನ್ನು ಕೈಗೆತ್ತಿಕೊಂಡು ಒಂದೇ ಸಮನೆ ಬಡಿಯಲಾರಂಭಿಸಿದ ಅದರ ಶಬ್ದಕ್ಕೆ ಬೇರೆ ಎಲ್ಲಿಯಾದರೂ ಜನರೆಲ್ಲಾ ಒಟ್ಟಾಗಬೇಕು ಆದರೆ ಸಮೀಪದಲ್ಲಿ ಮನೆಗಳೇ ಇಲ್ಲದುದರಿಂದ ಬರುವವರು ಯಾರು? ಅಜ್ಜನ ಈ ಉಪಾಯಕ್ಕೆ ಮಾತ್ರ ಹುಲಿ ಅಲ್ಲಿಂದ ಕಾಲ್ಕಿತ್ತು ಪರಾರಿಯಾದ ವಿಚಾರ ನಮಗೆಲ್ಲ ಹಗಲಾದೊಡನೆಯೇ ತಿಳಿಯಿತು. ರಾತ್ರಿ ಇಡೀ ಜಾಗರಣೆ ಮಾಡಿದ್ದೆವು.

ಹಗಲಾದೊಡನೆ ಅಜ್ಜ ಮೆಲ್ಲನೆ ಬಾಗಿಲನ್ನು ತೆರೆದು ಹೊರಗೆ ಬಂದರು. ಶಿಕಾರಿಯಲ್ಲಿ ಪಳಗಿದ ಅಜ್ಜ ಹುಲಿಯ ನಡೆಯನ್ನೂ ಬಲ್ಲವರಾಗಿದ್ದರು.

ಅಜ್ಜ ನಮ್ಮೊಡನೆ ಹೇಳಿದರು--'ಇಂದಲ್ಲ ನಾಳೆ ಈ ಹುಲಿಯಿಂದ ಪ್ರಾಣ ಭಯ ತಪ್ಪದು. ಆದುದರಿಂದ ನಾನು ಈ ದಿನವೇ, ಈಗಲೇ ಆ ಹುಲಿಯನ್ನು ಮುಗಿಸಿ ಬರುವೆ. ನನ್ನ ಆ ದನ ಕೊಂದುದಕ್ಕಾಗಿ ಖಂಡಿತವಾಗಿಯೂ ಪ್ರತೀಕಾರವೆಸಗಿ ತೃಪ್ತಿಯನ್ನು ಹೊಂದುವೆ."

ನಮಗೆಲ್ಲಾ ಅಜ್ಜನ ಮೇಲೆ ಭರವಸೆ ಉಂಟಾಯ್ತು. ಏಕೆಂದರೆ ಅವರು ಹಿಡಿದ ಗುರಿ ತಪ್ಪಿರಲಿಲ್ಲ. ಅವರ ಛಲ ಅಚಲ. ಅಜ್ಜ ಕೋವಿ ಕೈಗೆತ್ತಿ ಹಿಡಿಯುವ ಬದಲು ಚೂಪಾದ ಈಟಿಯೊಂದನ್ನು ಹಿಡಿದು ಹೊರಟು ಹೋದರು. ನಾವೆಲ್ಲರೂ ಅವರಿಗೆ ಶುಭವನ್ನೇ ಹಾರೈಸಿದೆವು. ಅಜ್ಜನ ಜತೆಯಲ್ಲಿ ಅಪ್ಪನೂ ಹೊರಟ.

ಸಾಯಂಕಾಲವಾದರೂ ಇಬ್ಬರೂ ಮನೆಗೆ ಬಂದಿರಲಿಲ್ಲ. ನಮಗೆಲ್ಲ ಗಾಬರಿಯಾಯ್ತು. ಆದರೆ ಅಪ್ಪ ಸಾಯಂಕಾಲವಾಗುತ್ತಲೆ ಹಿಂದಿರುಗಿ ಬಂದ. ಬಂದವನೆ ಅಜ್ಜನ ಬಗ್ಗೆ ಕೇಳಿದ. ನಾವು ಕೇಳಿದೆವು— "ಅಜ್ಜ ನಿನ್ನ ಜತೆಯೇ ಹೋಗಿದ್ದನಲ್ಲ?"

ಅಪ್ಪನೆಂದ— "ಹೌದು. ಆದರೆ ನಾವು ಮತ್ತೆ ಬೇರೆ ಬೇರೆ ದಾರಿ ಹಿಡಿದು ಹೊರಟೆವು."

ಅಮ್ಮ ಎಂದರು ಹಾಗಾದರೆ ಶೀಘ್ರ ಈಗಲಾದರೂ ಮಾವಯ್ಯ (ನಮಗೆ ಅಜ್ಜ ಆದರೂ ನನ್ನಮ್ಮನಿಗೆ ಮಾವಯ್ಯ!) ಎಲ್ಲಿ ಹೋಗಿದ್ದಾರೆ ಎಂದು ಹುಡುಕಬನ್ನಿ.

ಅಷ್ಟು ಸರಿ ಎಂದುಕೊಂಡು ಹೊರಟೆ. ಈಗ ನಾನೂ ಜತೆಯಾಗಿ ಹೊರಟೆ. ನಾನು ಅಪ್ಪನ ಬೆನ್ನು ಹಿಡಿದೆ ಇದ್ದೆ. ನದಿಯ ಕಾಡಿನ ಪಕ್ಕದಲ್ಲಿ ಒಂದು ಗವಿ. ಆ ಗವಿಯಲ್ಲಿ ಹುಲಿಯು ಇರುವುದು ಎಂದು ಪ್ರತೀತಿ. ಅಲ್ಲಿಗೆ ಹೋಗುವುದೇ ಒಂದೆರಡು ಸಲ ಕಷ್ಟ, ಹಗಲಾದುದರಿಂದ ಕೆಲವೊಮ್ಮೆ ಆ ಗವಿಯಲ್ಲಿ ಹುಲಿಗಳು ಇರುವುದು ಕಮ್ಮಿ. ಆದರೂ ಅಪ್ಪ—ನಾನು ಅತ್ತ ಹೊರಟೆವು.

ಗವಿಯನ್ನು ಅತಿ ಕಷ್ಟದಲ್ಲಿ ಸೇರಿದೆವು

ಅಲ್ಲಿ ತಲಪುತ್ತಲೆ ನಮ್ಮ ಎದೆ ಧಸಕ್ಕೆಂದಿತು ಅಜ್ಜ ಕೆಳಗೆ ಬಿದ್ದಿದ್ದ ಮೇಲೆ ಹುಲಿ ಬಿದ್ದಿತ್ತು ಅಜ್ಜನ ಇನ್ನೊಂದು ಕೈ ಹುಲಿಯನ್ನು ಅಪ್ಪಿ ಹಿಡಿದಿತ್ತು.

ನಾವು ಎಷ್ಟು ಶಬ್ದ ಮಾಡಿದರೂ ಹುಲಿಯಂತೂ ಕದಲಲೇ ಇಲ್ಲ ಕೊನೆ ಪಕ್ಷ ಅಜ್ಜನಾದರೂ ಏಳಬೇಕಿತ್ತಲ್ಲವೆ? ಇಲ್ಲ. ಅಜ್ಜನೂ ಏಳಲಿಲ್ಲ.

ಅಪ್ಪ ಧೈರ್ಯದಿಂದ ಹುಲಿಯನ್ನು ಪಕ್ಕಕ್ಕೆ ಹೊರಳಿಸಿದ. ಹುಲಿಯ ಕೆಳಹೊಟ್ಟೆಗೆ ಅಜ್ಜನ ಈಟಿ ಸೇರಿತ್ತು. ಅಜ್ಜನ ಕುತ್ತಿಗೆಗೆ ಹುಲಿ ಬಾಯಿ ಹಾಕಿತ್ತು—ಅಂದರೆ ಅಲ್ಲಿಯ ಮಾಂಸವೇ ಇರಲಿಲ್ಲ. ಒಂದು ಕ್ಷಣ ನಾವು ಇಬ್ಬರೂ ಅತ್ತೆವು. ಆದರೆ ಅತ್ತು ಏನು ಫಲ? ಹುಲಿ ತನ್ನ ಮರಿಗಾಗಿ ಪ್ರತೀಕಾರವೆಸಗಿ ಆಗಿತ್ತು ಅಜ್ಜನೂ ಅಷ್ಟೆ! ತಾನು ಕಳೆದ ಒಂದು ದನಕ್ಕಾಗಿ ಹುಲಿಯ ಪ್ರಾಣವನ್ನು ಆಗಲೇ ಅಪಹರಿಸಿಯಾಗಿತ್ತು!

ಅಜ್ಜನ ಮತ್ತು ಹುಲಿಯ ಮೃತ ದೇಹಗಳೊಡನೆ ಮನೆ ಸೇರಿದೆವು.

ಅದೇ ವರ್ಷ ನಾವು ಹಳ್ಳಿ ಬಿಟ್ಟು ಪೇಟೆ ಸೇರಿದೆವು ಆದರೆ ಇಪ್ಪತ್ತೈದು ವರ್ಷದ ಹಿಂದಿನ ಆ ಘಟನೆ ಮಾತ್ರ ಅಚ್ಚಳಿಯದೆ ಚಿತ್ತ ಭಿತ್ತಿಯಲ್ಲಿ ಚಲಚ್ಚಿತ್ರದಂತೆ ಒಂದರ ಹಿಂದೆ ಒಂದೊಂದರಂತೆ ಮೂಡಿ ಮಾಯವಾಗುತ್ತದೆ. ಕೆಲವೊಮ್ಮೆ ಅಜ್ಜನ ತ್ಯಾಗ, ಪ್ರತೀಕಾರಕ್ಕೆ ಹೆಮ್ಮೆಪಡಬೇಕಾದರೆ ಕೆಲವೊಮ್ಮೆ ಆ ಹುಲಿಯ ಪ್ರತೀಕಾರಕ್ಕೆ ದುಃಖವುಮ್ಮಳಿಸಿ ಬರುತ್ತದೆ.

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Director of Public Instruction Madras.

ಟೆಲಿಗ್ರಾಂ. 'ಸುದರ್ಶನ'. ಸ್ಥಾಪನೆ: 1914 ಫೋನ್ ನಂಬ್ರ: 3428
ಜಗತ್ಪ್ರಸಿದ್ಧವಾದ ಜೈಹಿಂದ್ ಹಂಚುಗಳನ್ನೇ
ಸದಾ ಉಪಯೋಗಿಸಿರಿ.
ತಯಾರಕರು: ಸುದರ್ಶನ ಟೈಲ್ ವರ್ಕ್ಸ್, ಬೋಳಾರ, ಮಂಗಳೂರು-೧



NAVAYUGA 23—9—1965

Registered with the Registrar
of News Papers for India
under No. R. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೨೩-೯-೬೫ರಿಂದ ೨೯-೯-೬೫ರ ವರೆಗೆ

೧. ಮೇಷ

ನಿಮ್ಮ ಹೆಚ್ಚಿನ ಗೃಹತಾಪತ್ರಯಗಳು ಇಂದು ಕಾಣಲಿರುವವು. ನಿಮ್ಮ ಪರಿಶ್ರಮವೂ ಕೂಡ ಸಫಲವಾಗುವುದರಿಂದ ಹಣದ ತೊಂದರೆಯಿಂದ ಮುಕ್ತರಾಗುವಿರಿ. ನೌಕರಿ ವರ್ಗದವರು ಭಡತಿಯನ್ನು ಹೊಂದಲಿರುವರು. ಆದರೆ ಶತ್ರುಜನರ ಪೀಡೆ, ಪಿತ್ಥದೋಷದಿಂದ ಅನಾರೋಗ್ಯ ಇವು ಹೆಚ್ಚಲಿವೆ. ವ್ಯಾಪಾರೀ ಜನಾಂಗಕ್ಕೆ ಅನಿರೀಕ್ಷಿತ ನಷ್ಟವುಂಟಾದೀತು. ತಾ. ೨೫ರಿಂದ ೨೮ರ ವರೆಗಿನ ದಿನಗಳು ಉತ್ತಮವಾಗಿವೆ.

೨. ವೃಷಭ

ಧನಸ್ಥಾನಗತ ಗುರುಪ್ರೋರ್ವನನ್ನುಳಿದು ಇತರ ಗ್ರಹರೆಲ್ಲರೂ ವಿಮುಖರಾಗಿರುವುದರಿಂದ ನಿಮಗೀವಾರದಲ್ಲಿ ಅರ್ಥಿಕ ದಕ್ಕಟ್ಟು ಕಾಣಲಿರುವಾದರೂ ಸಂಸಾರ ಸುಖದಿಂದ ಹೊರತಾಗುವಿರಿ. ಮನೆಯಲ್ಲಿ ಸುಖನೆಮ್ಮದಿಯೆಂಬುದು ಈಷತ್ತೂ ದೊರೆಯದು. ರಾಜಕೀಯದಲ್ಲಿ ಪ್ರತಿಪಕ್ಷಗಳಿಂದ ಪರಾಜಿತರಾಗುವಿರಿ. ಅಪ್ತಜನರ ವಿಯೋಗವುಂಟಾಗಲಿದೆ. ನಿರೋಗಿಗಳಾದ ನಿಮಗೆ ವಾರಾಂತ್ಯದ ೩ ದಿನಗಳು ಅನುಕೂಲವಿವೆ.

೩. ಮಿಥುನ

ಮನದಲ್ಲಿ ನೆನೆದ ಕಾರ್ಯವನ್ನು ಕಾರ್ಯರೂಪಕ್ಕೆ ತಂದೇ ತೀರುವಿರಿ. ನಿಮ್ಮ ನಿರೀಕ್ಷೆಯಂತೆ ಕಾರ್ಯವೂ ಸಫಲವಾಗಲಿದೆ. ಗೃಹತಾಪತ್ರಯಗಳಿಂದ ಮುಕ್ತರಾಗುವರಲ್ಲದೆ, ನಿಮ್ಮನಿಮ್ಮಲ್ಲಿನ ಕಲಹಗಳು ರಾಜಿಯಿಂದ ತೀರ್ಮಾನ ಹೊಂದುವವು. ನಿಮ್ಮ ತನುಮನಗಳಿಗಿಂದು ಸುಖನೆಮ್ಮದಿ ದೊರೆಯಲಿದೆ. ಬೇಕಾದ ವಸ್ತುವಡವೆಗಳಿದ್ದರೂ ಅವಶ್ಯವಿದ್ದಾಗ ಅವು ಲಭಿಸಲಾರವು. ತಾ. ೨೩, ೨೪, ೨೭ ಇವು ಭೋಗ ವಿಜಯ ಸುಖನಿಷ್ಠೆಯಲಿವೆ.

೪. ಕರ್ಕಟ

ಈ ವಾರದಲ್ಲಿ ನಿಮಗೆ ಅರ್ಥಿಕ ತಗಾದೆ ಹೆಚ್ಚಲಿದೆ. ವಿಶೇಷತಃ ನೌಕರಿ ಜನರಿಗೆ ಸಾಂಸಾರಿಕ ತಾಪತ್ರಯವಧಿಕವಾದೀತು. ಅಕಸ್ಮಿಕವಾಗಿ ಪ್ರಾಪ್ತವಾಗುವ ಪ್ರವಾಸ ಪರ್ಯಟನಾದಿಗಳಿಂದ ಧನವ್ಯಯ ಅನಾರೋಗ್ಯಗಳಿಗೆ ಬಲಿಯಾಗುವಿರಿ. ಸ್ವಜನ ವಿರಹ ದುಃಖಿತರಾದ ನಿಮಗೆ ಬಾಲ್ಯಮಿತ್ರರ ನೆರವು ಸಕಾಲದಲ್ಲಿ ದೊರೆಯಲಿದೆ. ತಾ. ೨೫, ೨೮ ಈ ೨ ದಿನಗಳು ಇದ್ದುದರಲ್ಲಿ ಉತ್ತಮ.

೫. ಸಿಂಹ

ಧನಲಾಭಪತಿಯಾದ ಬುಧನು ಧನಸ್ಥಾನದಲ್ಲಿ ಉಚ್ಚನಾಗಿ ಕುಳಿತಿರುವನು. ಅಲ್ಲದೆ ಲಾಭಸ್ಥಾನದಲ್ಲಿ ಸುರಗುರುಗಳು ನೆಲೆಸಿರುವರು. ಅಂತೆಯೇ ದೈತ್ಯಾಚಾರ್ಯರ ಅನುಗ್ರಹವೂ ನಿಮಗಿಂದು ಲಭಿಸಿದ ಕಾರಣ ಇಂದಿನ ದಿನಗಳನ್ನು ಸುಖನೆಮ್ಮದಿಯಿಂದ ಕಳೆವಿರಿ. ಯಾವೊಂದು ತರದ ತಾಪತ್ರಯಕ್ಕೂ ಸಿಲುಕಲಾರಿರಿ. ಆದರೆ ಕೆಲವೊಂದು ಕಂಜನರು ತಮ್ಮ ಮೋಸದ ಬಲೆಯಲ್ಲಿ ಕೆಡಹಲಿರುವರು. ಆ ಭಾಗದಲ್ಲಿ ಜಾಗ್ರತರಾಗಿರಿ. ತಾ. ೨೩, ೨೪, ೨೭, ೨೮ ತುಂಬ ಅನುಕೂಲ.

೬. ಕನ್ಯಾ

ಎಂತಹ ದುಃಸಾಧ್ಯವಾದ ಕಾರ್ಯವೂ ನಿಮಗಿಂದು ತೃಣಸಮವಾಗಲಿದೆ. ಯಾರೊಬ್ಬರ ನೆರವೂ ನಿಮಗಿಂದು ಲಭಿಸದಾದರೂ ಅಸಹಾಯ ಶೂರರೆನಿಸುವ ಕೀರ್ತಿಗೆ ಪಾತ್ರರಾಗುವಿರಿ. ಸಾಕಷ್ಟು ಧನಕನಕಾದಿಗಳಿದ್ದರೂ ಮನಸ್ಸಿಗೆ ಮಾತ್ರ ನೆಮ್ಮದಿಯಿರದು. ಚಿಕ್ಕಪುಟ್ಟ ಗೃಹಕಲಹಗಳು ಅಗಾಗ ಕಾಣಿಸಲಿವೆ. ತಾ. ೨೩, ೨೫, ೨೯ ಈ ದಿನಗಳಲ್ಲಿ ಧನ, ಭೋಗ ಸುಖಗಳಂ ಪಡೆವಿರಿ.

೭. ತುಲಾ

ದೇವಗುರುಗಳ ಪೂರ್ಣ ದೃಷ್ಟಿಯು ನಿಮ್ಮ ಮೇಲಿರುವುದಾದರೂ ಇಂದಿನ ದಿನಗಳು ನಿಮಗೆ ಸುಖ ನೆಮ್ಮದಿಯನ್ನೀಯಲಾರವು. ಮಾತನಾಡಿದವರೊಡನೆ ಕಲಹವಾಗುವುದು. ದುಡಿಮೆಗಿಂತ ದ್ವಿಗುಣವಾದ ಖರ್ಚುಗಳು ಸಂಭವಿಸಲಿವೆ. ಅಧಿಕಾರಿ ಜನರು ನಿಮ್ಮನ್ನು ಸಂಶಯ ದೃಷ್ಟಿಯಿಂದ ನೋಡಲಿರುವರು. ಪಿತ್ಥದೋಷದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ತಾ. ೨೩, ೨೪, ೨೭, ೨೮ ಈ ದಿನಗಳು ಇದ್ದುದರಲ್ಲಿ ಹಿತವನ್ನು ಮಾಡಲಿವೆ.

೮. ವೃಶ್ಚಿಕ

ಪರಿಶ್ರಮಾಧಿಕ ಫಲವು ನಿಮಗಿಂದು ಲಭಿಸಲಿದೆ. ಶತ್ರುಜನರ ಕಾಟ ಸ್ವಜನರ ವಿರೋಧಗಳು ಮೇಲಿಂದ ಮೇಲೆ ಕಂಡುಬಂದರೂ ನೀವು ಕೈಗೊಂಡ ಕಾರ್ಯಗಳನ್ನು ಪೂರೈಗೊಳಿಸುವಿರಿ. ಕೆಲವೊಮ್ಮೆ ವಿಷಯಾದಿಗಳ ಕಡೆ ಮನಗೊಟ್ಟು ದುವ್ಯರ್ಯಗಳಿಗೆ ಗುರಿಯಾಗುವ ಸಂಭವವಿದೆ. ಪ್ರವಾಸವು ಅನಿಷ್ಟವೂ ಅಪಾಯಕಾರಿಯೂ ಆಗ ಪರಿಣಮಿಸೀತು. ತಾ. ೨೭, ೨೮ ತುಂಬ ಪ್ರತಿಕೂಲ.

೯. ಧನು

ಇಂತಹ ಸುಸಂಧಿಯು ನಿಮಗೆ ಸಿಗ್ಗ ದೊರೆಯದು. ಆದ ಕಾರಣ ಈ ಕಾಲವನ್ನು ನೀವು ವ್ಯರ್ಥ ಮಾಡದೆ ಸದುದ್ಯಮದಲ್ಲಿ ವ್ಯಯಿಸಿರಿ. ನಿಮ್ಮ ನಿರೀಕ್ಷೆಗಿಂತಲೂ ಅಧಿಕಾಧಿಕವಾದ ಫಲವು ಅನಾಯಾಸದಿಂದ ಲಭಿಸಲಿದೆ. ಶತ್ರುಜನರೂ ಮಿತ್ರರಾಗಿ ಪರಿವರ್ತಿಸುವರು. ಪಶು ಭೃತ್ಯ ಬಂಧುಬಾಂಧವರ ಪರಿವಾರ ವರ್ಗದವರೊಂದೊಡಗೂಡಿದ ನಿಮಗೆ ದಿನಗಳೆದುದೇ ತಿಳಿಯಲೊಲ್ಲದು. ತಾ. ೨೫ರಿಂದ ೨೮ರ ವರೆಗಿನ ದಿನಗಳು ಅತೀವ ಪ್ರಶಸ್ತವಿವೆ.

೧೦. ಮಕರ

ಇದ್ದ ಅಲ್ಪಸ್ವಲ್ಪಸುಖ ಭೋಗ ಸೌಕರ್ಯಗಳೂ ಇಂದು ಲಭಿಸಲೊಲ್ಲವು. ವಿನಾ ಕಾರಣ ಗುರುಹಿರಿಯರೊಡನೆ ದ್ವೇಷ ಕಟ್ಟಿಕೊಳ್ಳುವಿರಿ. ವ್ಯಾಪಾರ ವ್ಯವಹಾರಾದಿಗಳಲ್ಲಿ ಸೋಲುಂಟಾದೀತು. ಎಷ್ಟೇ ಮಿತಭಾಷಿಯಾಗಿದ್ದರೂ ಅಸುದಿನ ವಾಕ್ಕಲಹವಾಗಲಿದೆ. ಅದರೊಂದು ವಿಚಾರ, ಹಣದ ವಿಚಾರದಲ್ಲಿ ನೀವು ಯಾರೊಬ್ಬರನ್ನೂ ಯಾಚಿಸಬೇಕಾದ ಪ್ರಸಂಗ ಬರಲಾರದು. ವಾರಾಂತ್ಯದ ೩ ದಿನಗಳು ಅನುಕೂಲವಿವೆ. –

೧೧ ಕುಂಭ

ದೈವದಿಂದು ನಿಮ್ಮ ಮೇಲೆ ಕೃಪೆದೋರಿರುವುದು. ಹೆಚ್ಚಿನಂಶ ನಿಮ್ಮ ನಿಮ್ಮ ತಾಪತ್ರಯಗಳು ಇಂದು ಸೂರ್ಯರಶ್ಮಿಯಿಂ ಕಂಡ ಮಂಜಿನಂತೆ ಕರಗಿ ಹೋಗಲಿವೆ. ನಿಮ್ಮ ನಿರೀಕ್ಷೆಗೂ ಹೆಚ್ಚಿನ ಫಲವು ಅನಾಯಾಸದಿಂದ ಲಭಿಸುವದು. ಗುರುಹಿರಿಯರ ನೆರವು ಸದಾ ನಿಮ್ಮನ್ನು ಪ್ರಗತಿಪಥದಲ್ಲಿ ಮುನ್ನಡೆಯುತ್ತಿವದು. ಆರೋಗ್ಯದ ಬಾರದಲ್ಲಿ ಸ್ವಲ್ಪ ಜಾಗರೂಕರಾಗಿರಿ. ತಾ ೨೩-೨೪-೨೯ ಉತ್ತಮ.

೧೨. ಮೀನ

ಸ್ವಕ್ಷೇತ್ರಗತನಾದ ಶುಕ್ರನೋರ್ವನನ್ನುಳಿದು ಇತರ ಇಲ್ಲಾ ಗ್ರಹರೂ ಪ್ರತಿಕೂಲರಾಗಿಹರು. ತಾನೊಂದು ಬಗೆದರೆ ದೈವವೊಂದಣಿಸಿತೆಂಬ ಗಾದೆಯಂತೆ ಇಂದು ನಿಮ್ಮ ಸಂಕಲ್ಪಗಳೆಲ್ಲವೂ ತಿರುಕನ ಕನಸಿನಂತೆ ವಿಪರೀತವಾಗಲಿವೆ. ಬಂಧು ವರ್ಗದವರ ಕೂಡೆ ಮನಸ್ತಾಪ ಹುಟ್ಟಲಿದೆ. ರಾಜಕೀಯ ರಂಗದಲ್ಲಿ ಶತ್ರುಜನರಿಂದ ಪರಾಜಿತರಾಗುವಿರಿ. ವಾರಾದಿಯ ೪ ದಿನಗಳಲ್ಲಿ ಗೃಹ ಸುಖಭೋಗಗಳು ಲಭಿಸುವವು.

ಅಸ್ತಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ ನಿವಾರಕ ಮೂಲಿಕೆಯನ್ನು ದಿ. 10-10-65 ಹುಣ್ಣಿಮೆಯ ರಾತ್ರಿ ಹಾಲು ಸಹಿತ್ತ ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದು ಕೊಳ್ಳುವುದರಿಂದ ಅಸ್ತಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲೀಷಿನಲ್ಲಿ ಬರೆಯಿರಿ.

Shri Mahatma Sidh Baba Sewa Ashram
P. O. Chitrkot, (Uttar Pradesh)

ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ., ಯವರ
ಸನಕಾಲಕಾದಂಬರಿ ಪುಸ್ತಕಗಳು

ದೇಶ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ!	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು: -
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.



ಮೋಹಿನಿಗೆ
ತನ್ನ ಹಣವೆಲ್ಲಿ ಜೋಪಾನವಾಗಿದೆ
ಎಂಬುದು ಗೊತ್ತು.



ರಾಧೆಗೆ
ತನ್ನ ಹಣಕ್ಕೇನಾಯಿತು
ಎಂಬುದೊಂದೇ ಚಿಂತೆ.

ಮೋಹಿನಿಯು ತನ್ನ ಖರ್ಚು ವೆಚ್ಚಗಳನ್ನು ಬಹಳ ಜಾಗರೂಕತೆಯಿಂದ ತೂಗಿಸುವಳು. ತಿಂಗಳಾರಂಭದಲ್ಲಿ ಸ್ವಲ್ಪ ಹಣವನ್ನು ಸಿಂಡಿಕೇಟ್ ಬ್ಯಾಂಕಿನಲ್ಲಿಡುವಳು. ರಾಧೆಗೆ ಹಣ ಬಂದ ಹಾಗೆ ಖರ್ಚು ಮಾಡುವ ಅಭ್ಯಾಸ. ಕೆಲವು ವರ್ಷಗಳು ಕಳೆದಾಗ, ಮೋಹಿನಿಯು ತನ್ನ ಮಗನನ್ನು ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶಕ್ಕೆ ಕಳುಹಿಸುವಳು. ರಾಧೆಯ ಮಗನು ಸಾಧಾರಣ ವಿದ್ಯಾಭ್ಯಾಸದಲ್ಲಿಯೇ ಮುಗಿಸಿ ಕೆಲಸಕ್ಕೆ ಸೇರಬೇಕಾಯಿತು. ನೀವೂ ಕೂಡಾ ಮೋಹಿನಿಯ ಆದರ್ಶದಂತೆ, ಸಿಂಡಿಕೇಟಿನಲ್ಲಿ ಉಳಿತಾಯ ಮಾಡಿರಿ. ಭಾರತದಲ್ಲಿ ಪ್ರಥಮವಾಗಿ ಮಹಿಳಾ ಬ್ಯಾಂಕನ್ನು ಸ್ಥಾಪಿಸಿದ ಸಿಂಡಿಕೇಟ್ ಬ್ಯಾಂಕಿನಲ್ಲಿ ಮಹಿಳೆಯರಿಗಾಗಿಯೇ ವಿಶಿಷ್ಟ ಸೌಕರ್ಯಗಳಿವೆ.

FAITHFUL SB FRIENDLY

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಣಿಪಾಲ, ಮೈಸೂರು ರಾಜ್ಯ.

200ಕ್ಕೂ ಹೆಚ್ಚು ಶಾಖೆಗಳು.

ರೂ. 70 ಕೋಟಿಗೂ ಮಿಕ್ಕಿದ ಠೇವಣಿಗಳು.

ವೈಷ್ಣವ ಶಿಖಾಮಣಿ
ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು
ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು ರುಭಕರವಾದ ವಿಷಯದ ಮೇಲೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರವಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

0.30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ರಖಂ ಪ್ರತಿಗಳಿಗೆ ವಿಚಾರಿಸಿರಿ:-

ನವಯುಗ ಪ್ರೆಸ್, ಉಡುಪಿ

Edited, Printed & Published by K. H. Shetty at the Navayuga Press, Udipi, S. India.

226

NAVAYUGA

[illegible]

೭೦

ಕಥಾ ಪ್ರಪಂಚ

ನ್ಯಾಯ ಮೂರ್ತಿ

ಬರೆದವರು
ಶ್ರೀ ಸ. ನಾರಾಯಣ.

ಅಣ್ಣ — ನ್ಯಾಯ, ಮಾತೃ ದೇವತೆ — ನ್ಯಾಯ ದೇವತೆ — ಇವರಲ್ಲಿ ಯಾರನ್ನು ಬಿಗಿದಪ್ಪಬೇಕೆಂಬ ಜಟಿಲ ಪೇಚಿನಲ್ಲಿ ರಘು ಸಿಕ್ಕಿಬಿದ್ದ— ಕೊನೆಗೂ ನ್ಯಾಯವೇ ಧರ್ಮವೇ ಆತನ ತೆಕ್ಕೆಯೊಳಗೆ ಬಂದಿತು.

ನ್ಯಾಯಾಧೀಶರು ನ್ಯಾಯಾಲಯವನ್ನು ಪ್ರವೇಶಿಸಿ, ತಮ್ಮ ಪೀಠದಲ್ಲಿ ಕುಳಿತುಕೊಂಡರು

ಅಂದು ನಡೆಯಬೇಕಿದ್ದ ಮೊದಲ ವಿಚಾರಣೆ ಆರಂಭವಾಯಿತು. ಅಪರಾಧಿಯನ್ನು ಕರೆತಂದು ಕಟಕಟೆಯಲ್ಲಿ ನಿಲ್ಲಿಸಿದರು ಪೋಲೀಸರು. ಅಪರಾಧಿ ಒಮ್ಮೆ ನ್ಯಾಯಾಧೀಶರನ್ನು ದೀನದೃಷ್ಟಿಯಿಂದ ನೋಡಿ ಕತ್ತು ತಗ್ಗಿಸಿ ನಿಂತ.

ಸರ್ಕಾರಿ ವಕೀಲರು ಅಪರಾಧಿಯನ್ನು ಪ್ರಶ್ನಿಸಲಾರಂಭಿಸಿದರು ನ್ಯಾಯಾಧೀಶರ ಅನುಮತಿಯ ಮೇರೆಗೆ—

"ನಿಮ್ಮ ಹೆಸರು"

"ರಾಮಮೂರ್ತಿ"

"ನಿಮ್ಮ ತಂದೆಯವರ ಹೆಸರು'

"ಕೇಶವಯ್ಯನವರು"

"ಸತ್ಯವಾಗಿ ನುಡಿಯುವಿರಾ?"

"ಹೌದು ಸ್ವಾಮಿ"

"ನೀವು ವೃತ್ತಿಯಿಂದ ಪೋಲೀಸ್ ಇನ್‌ಸ್ಪೆಕ್ಟರು ಹೌದಷ್ಟೆ?"

"ಹೌದು ಸ್ವಾಮಿ"

'ಕಳೆದ..... ವಾರದಂದು ರಾತ್ರಿ ಹತ್ತು ಗಂಟೆ ಸಮಯದಲ್ಲಿ ಕಳ್ಳತನ ಮಾಡಿ ಲಾಕಪ್ಪಿನಲ್ಲಿದ್ದ ಓರ್ವ ಕೈದಿಯ ಮೇಲೆ ಕೈಮಾಡಿದ ಪರಿಣಾಮವಾಗಿ ಅವನು ಮಡಿದ ಎಂಬುದು ಗೊತ್ತಷ್ಟೆ?"

"ಗೊತ್ತು"

"ಅದು ಆಕಸ್ಮಿಕ ಮರಣವಲ್ಲ ಕೊಲೆ ಎಂಬುದನ್ನು ಬಲ್ಲಿರಷ್ಟೆ?"

'ಬಲ್ಲೆ"

"ಆ ಕೊಲೆಯಲ್ಲಿ ನಿಮ್ಮ ಪಾತ್ರವೂ ಇದೆ ಎಂಬುದು ನಿಜವಷ್ಟೆ?"

'ಕೈದಿಯಿಂದ ಸತ್ಯಸಂಗತಿಯನ್ನು ಅಂದರೆ ಕಳ್ಳತನ ಒಂದರ ಪೂರ್ಣ ವಿವರ ತಿಳಿಯ ಬಯಸಿ ಅವನನ್ನು ಶಿಕ್ಷಿಸಿದುದ್ದು ನಿಜವಷ್ಟೆ. ಆದರೆ ಅವನನ್ನು ಕೊಲೆ ಮಾಡುವ ಉದ್ದೇಶ್ಯ ನನಗಿರಲಿಲ್ಲ."

"ಉದ್ದೇಶ್ಯಪೂರ್ವಕವಾಗಿ ಅಲ್ಲವಾದರೂ ಪೋಲೀಸ ಅಧಿಕಾರಿಗಳ ಮತ್ತು ಪೇದೆಗಳ ಹೊಡೆತದಿಂದ ಕೈದಿ ಸತ್ತನೆಂಬುದು ಸರಿ ತಾನೆ?"

"ಈ ವಿಷಯದಲ್ಲಿ ನಾನು ನಿರಪರಾಧಿ ಅವನು ಸಾಯಲಿ ಎಂದು ನಾನು ಶಿಕ್ಷಿಸಲಿಲ್ಲ".

'ಸಾಯಲೆಂದು ನೀವು ಶಿಕ್ಷಿಸಲಿಲ್ಲ, ಆದರೆ ಕೈದಿ ನಿಮ್ಮ ಶಿಕ್ಷೆ ತಾಳಲಾರದೆ ಸತ್ತ ಹೌದಷ್ಟೆ' ಎಂದರು ನ್ಯಾಯಾಧೀಶರು.

'ಅವನ ಬಗ್ಗೆ ನನಗೆ ಯಾವ ವೈಯಕ್ತಿಕ ದ್ವೇಷವೂ ಇರಲಿಲ್ಲ".

"ನೀವು ಯಾವ ಸಂಗತಿ ತಿಳಿಸಿದರೂ ಸರಿಯಲ್ಲ, ನಿಮ್ಮ ಉದ್ದೇಶ್ಯ ಏನೇ ಇರಲಿ, ಕೈದಿ ಸಾಯುವ ಮುಂಚೆ 'ನನ್ನ ಮರಣಕ್ಕೆ ಕಾರಣ ಪೋಲೀಸ್ ಇನ್‌ಸ್ಪೆಕ್ಟರು' ಎಂದು ತಿಳಿಸಿದ್ದಾನೆ. ಅದಕ್ಕೆ ಸಾಕ್ಷಿಗಳೂ ಇದ್ದಾರೆ" ಎಂದರು ಸರ್ಕಾರಿ ವಕೀಲರು.

ಅಪರಾಧಿಯ ಸ್ಥಾನದಲ್ಲಿ ನಿಂತಿದ್ದ ಪೋಲೀಸ್ ಇನ್‌ಸ್ಪೆಕ್ಟರ್ ರಾಮಮೂರ್ತಿ ಕತ್ತು ಬಗ್ಗಿಸಿ ನಿಂತ.

ನ್ಯಾಯಾಧೀಶರು ಅಪರಾಧಿಯ ಹೇಳಿಕೆಯನ್ನು ಬರೆದುಕೊಳ್ಳುತ್ತಿದ್ದರು.

ನ್ಯಾಯಾಧೀಶರು ಸರ್ಕಾರಿ ಲಾಯರನ್ನುದ್ದೇಶಿಸಿ 'ಅಪರಾಧಿಯ ವಿಚಾರಣೆ ಮುಗಿಯಿತೆ?' ಎಂದರು.

ವಕೀಲರು ನಮ್ರತೆಯಿಂದ "ಎಸ್ ಯುವರ್ ಆನರ್' ಎಂದರು.

ಅಂದಿನ ವಿಚಾರಣೆ ಮುಗಿಯಿತು. ರಾಮಮೂರ್ತಿ ಪೋಲೀಸರೊಂದಿಗೆ ನ್ಯಾಯಾಲಯದಿಂದ ಜೈಲಿಗೆ ನಡೆದ.

— ೨ —

ವಿಧಿಯ ಲೀಲೆ ವಿಚಿತ್ರವಾಗಿತ್ತು.

ಯಾವ ತಮ್ಮನನ್ನು ರಾಮಮೂರ್ತಿ "ಕೆಲಸಕ್ಕೆ ಬಾರದವನು" ಎಂದು ತಿಳಿದಿದ್ದನೋ ಆ ತಮ್ಮ ರಘು ತನ್ನ ಸ್ವಪ್ರತಿಭೆಯಿಂದ ನ್ಯಾಯಾಧೀಶನಾಗಿದ್ದ.

ತಮ್ಮ ರಘು ನ್ಯಾಯಾಧೀಶನಾಗಿ ನ್ಯಾಯ ಪೀಠವನ್ನು ಅಲಂಕರಿಸಿದ್ದಾಗ ಅಣ್ಣ ರಾಮಮೂರ್ತಿ ಅಪರಾಧದ ಹೊರೆ ಹೊತ್ತು ಅಪರಾಧಿಯ ಸ್ಥಾನದಲ್ಲಿ ನಿಲ್ಲಬೇಕಾಗಿತ್ತು.

ಮನೆಯವರೆಲ್ಲರ ರೀತಿ-ನೀತಿ, ನಡವಳಿಕೆಗಳೇ ಒಂದು ಬಗೆಯದಾಗಿತ್ತು; ರಘು ಮನೋಭಾವವೇ ಮತ್ತೊಂದು ಬಗೆಯದಾಗಿತ್ತು.

ಹಣ—ಅಧಿಕಾರಗಳೆರಡೇ ಶ್ರೇಷ್ಟವೆಂದು ಭಾವಿಸಿದ್ದ ಮನೆಯವರಿಗೆ ರಘುವಿನ ಸಾತ್ವಿಕ ಭಾವನೆ, ನಿರ್ಮಲಾಂತಃಕರಣ, ಮುಗ್ಧ ಮನೋಭಾವ ಸಹಿಸಲಾಗಲಿಲ್ಲ.

ರಾಮಮೂರ್ತಿಗೆ ತಂದೆಯ ಅಧಿಕಾರ ಲಾಲಸೆ, ದರ್ಪ, ಕೋಪ ದುರಾಸೆ ರಕ್ತಗತವಾಗಿ ಬಂದಿತ್ತು. ತಾಯಿಯ ಮಮತೆ ರಘುವನ್ನು ಮನೆಯಲ್ಲಿಯೇ ಉಳಿಸಿತ್ತು. ತಾಯಿಯೊಬ್ಬರೇ ಮನೆಯಲ್ಲಿ ಆವನ ಹಿತೈಷಿಗಳಾಗಿದ್ದರು.

ರಘು ತಂದೆ ಮತ್ತು ಅಣ್ಣನ ಸಲಹೆಯನ್ನು ವಿರೋಧಿಸಿ ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ, ಕೆಲ ವರ್ಷ ಬೊಂಬಾಯಿಯ ನ್ಯಾಯ ಶಾಸ್ತ್ರದ ಕಾಲೇಜಿನಲ್ಲಿಯೂ ಶಿಕ್ಷಣ ಪಡೆದು ಹಿಂತಿರುಗಿದ. ತರುವಾಯ ಆವನಿಗೆ ಬೆಂಗಳೂರಿನ ಲಾ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ದೊರೆಯಿತು.

ಈ ಮಧ್ಯೆ ರಘು ಮನೆ ಮತ್ತು ಮನೆಯವರನ್ನು ತೊರೆಯ ಬೇಕಾಯಿತು

ಬೊಂಬಾಯಿಯ ನ್ಯಾಯ ಶಾಸ್ತ್ರದ ಕಾಲೇಜಿನಲ್ಲಿ ಅವನೊಂದಿಗೆ ಕಲಿಯುತ್ತಿದ್ದ ರೋಹಿಣಿಯನ್ನು ಮದುವೆಯಾಗುವುದಾಗಿ ರಘು ಮನೆಯವರಿಗೆ ತಿಳಿಸಿದ. ತಂದೆ ಕಿಡಿ ಕಿಡಿಯಾದರು. ತಾಯಿ ಕಣ್ಣೀರುಗರೆದರು. ರಾಮಮೂರ್ತಿ ಮನ ತೃಪ್ತಿಯಾಗುವಂತೆ ಬೈದ.

ರಘು ತನ್ನ ನಿರ್ಧಾರವನ್ನೂ ಬದಲಿಸಲಿಲ್ಲ.

"ಇಂದಿಗೆ ನಿನ್ನ ನಮ್ಮ ಋಣ ತೀರಿಹೋಯಿತು. ನನ್ನ ಪಾಲಿಗೆ ಒಬ್ಬ ಮಗನಿಲ್ಲವೆಂದು ಭಾವಿಸುತ್ತೇನೆ. ಹಾಳಾಗಿ ಹೋಗು" ಎಂದು ಅಜ್ಞಾಪಿಸಿದರು ತಂದೆ. ಪತಿ ಎದುರಿನಲ್ಲಿ ಪತ್ನಿ ಬಾಯಿ ತೆರೆಯುವಂತಿರಲಿಲ್ಲವಾದ ಕಾರಣ ರಘು ತಾಯಿ ದುಃಖಿಸುತ್ತಾ ಮೂಲೆ ಸೇರಬೇಕಾಯಿತು

"ನಿಮ್ಮ ಆಶೀರ್ವಾದ" ಎಂದು ರಘು ಮನೆ ಬಿಟ್ಟು ನಡೆದ.

ರಘು ರೋಹಿಣಿ ಇವರ ವಿವಾಹ ವೈಭವದಿಂದಲೇ ನೆರವೇರಿತು ಗೆಳೆಯರ ಸಮ್ಮುಖದಲ್ಲಿ, ಹಿಂದೂ ವಿವಾಹ ಸಂಪ್ರದಾಯದ ರೀತಿಯಲ್ಲಿ.

ಲಾ ಕಾಲೇಜಿನ ಅಧ್ಯಾಪಕನಾಗಿದ್ದ ರಘು ತನ್ನ ಪ್ರತಿಭೆಯಿಂದ ಪ್ರಾಧ್ಯಾಪಕನಾಗಿ. ಅನಂತರ ಪ್ರಿನ್ಸಿಪಾಲನಾದ; ಆವನ ಸೇವಾ ಕ್ಷೇತ್ರ ವಿಶಾಲವಾಯಿತು

ಸರ್ಕಾರದ ಆಜ್ಞೆಯ ಮೂಲಕ ರಘು ಸೇವಾ ಕ್ಷೇತ್ರ ಮತ್ತಷ್ಟು ವಿಸ್ತಾರವಾಯಿತು. ರಘು ನ್ಯಾಯಾಧೀಶನಾದ.

ರಘು ಹೃದಯ ತಂದೆ, ತಾಯಿ, ಅಣ್ಣ ಮೊದಲಾದವರನ್ನು ನೆನೆಯದಿರುತ್ತಿರಲಿಲ್ಲ; ರಘು ಮತ್ತು ರೋಹಿಣಿಯ ಹೃದಯಗಳು ಮನೆಯವರ ಬಳಿಗೆ ಹೋದಷ್ಟು ಮನೆಯವರು ದೂರವಾಗುತ್ತಿದ್ದರು. ನಿಸ್ಸಹಾಯಕರಾಗಿದ್ದ ರಘು ತಾಯಿ ಏನನ್ನೂ ಮಾಡುವಂತಿರಲಿಲ್ಲ.

ರಘು ರೋಹಿಣಿ ನಡೆಸಿದ ಪ್ರಯತ್ನ ವಿಫಲವಾಗಿತ್ತು

'ನನ್ನ ಜೀವವಿರುವ ವರೆವಿಗೂ ಅವರನ್ನು ಮನಗೆ ಸೇರಿಸುವುದಿಲ್ಲ' ಎಂದು ಪ್ರತಿಜ್ಞೆ ಮಾಡಿದ್ದರು ರಘು ತಂದೆ.

"ನನ್ನೊಬ್ಬಳ ದೆಸೆಯಿಂದ ಅವರು ಮನೆಯವರೆಲ್ಲರಿಂದ ದೂರವಾದರು. ಇಷ್ಟಕ್ಕೆಲ್ಲ ನಾನೇ ಕಾರಣ' ಎಂದು ರೋಹಿಣಿ ಅನೇಕ ಬಾರಿ ನೊಂದುಕೊಳ್ಳುತ್ತಿದ್ದಳು.

'ನಾನೇ ಹೋಗಿ ಮಾವನವರ ಕಾಲು ಹಿಡಿದು ಕ್ಷಮೆ ಬೇಡಿ ಅನುಮತಿ ಪಡೆದು ಬರುತ್ತೇನೆ. ನಿಮ್ಮನ್ನು ತಂದೆ, ತಾಯಿ, ಬಂಧುಗಳಿಂದ ಅಗಲಿಸಿದ ಪಾಪಿ ನಾನು ... ..."

(ಹದಿನೈದನೇ ಪುಟ ನೋಡಿರಿ)

8%

ಡಿಪಾಜಿಟುಗಳ ಮೇಲೆ
ಹೊಸ ಬಡ್ಡಿ ದರಗಳು

				ನೇಕಡಾ
91 ದಿನಗಳಿಂದ	6 ತಿಂಗಳ ಕೆಳಗ	....	....	5½
6 ತಿಂಗಳಿಂದ	12 ತಿಂಗಳ ಕೆಳಗೆ	...	....	6
12 ತಿಂಗಳಿಂದ	24 ತಿಂಗಳ ಕೆಳಗೆ	....	....	6¼
24 ತಿಂಗಳಿಂದ	36 ತಿಂಗಳ ಕೆಳಗೆ	....	....	6½
36 ತಿಂಗಳಿಂದ	48 ತಿಂಗಳ ಕೆಳಗೆ	...	..	7
48 ತಿಂಗಳಿಂದ	60 ತಿಂಗಳ ಕೆಳಗೆ	....	....	7¼
60 ತಿಂಗಳಿಂದ	84 ತಿಂಗಳ ಕೆಳಗೆ	....	....	7½
84 ತಿಂಗಳಿಂದ	120 ತಿಂಗಳ ಕೆಳಗೆ	....	....	8
ಸೇವಿಂಗ್ಸ್ ಖಾತೆಯ ಮೇಲೆ				4

ದಿ ಪಾಂಗಾಳ ನಾಯಕ್
ಬ್ಯಾಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬ್ಯಾಂಕ್
ರಿಜಿಸ್ಟರ್ಡ್ ಆಫೀಸು: ಉಡುಪಿ.
ಸ್ಥಾಪನೆ: 1920.

Telephone 226.

Estd. 1921

NAVAYUGA

Leading Kannada Weekly

UDIPI, S. Kanara

(Mysore State)

ದಿ| ಎ. ಬಿ ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ಉಡುಪಿ, ದ. ಕನ್ನಡ.

++

ಸಂಚಾಲಕ—ಸಂಪಾದಕ.

ಕೆ. ಹೊನ್ನಯ್ಯ ಶೆಟ್ಟಿ

++

ವಾರ್ಷಿಕ ಚಂದಾ:

ಮೂರು ವಿಶೇಷ ಸಂಚಿಕೆಗಳು ಸೇರಿ ಅಂಚೆ ವೆಚ್ಚ ಸಹಿತ ಮುಂಗಡ

ಸ್ವದೇಶ ರೂ. ೧೦

ವಿದೇಶ ರೂ. ೧೪

++

ಜಾಹೀರಾತು ದರಗಳು:

ಅನಿಯಮಿತ (ಕೆಜುವಲ್)

ಕಲಂ ಸೆಂಟಿಮೀಟರಿಗೆ ರೂ. 2-00

ನಿಯಮಿತ (ಕಂಟ್ರಾಕ್ಟ್)

ಕಲಂ ಸೆಂಟಿಮೀಟರಿಗೆ ರೂ 1-50

++

ಸೂಚನೆಗಳು

ಲೇಖಕ ಬಂಧುಗಳಿಗೆ

ಲೇಖನವು ಕಿರಿದಾಗಿದ್ದು ಹಿರಿದರ್ಥದಿಂದ ಕೂಡಿರಬೇಕು ಕಾಲು ಕಾವಿನ ಪ್ರಮಾಣದ ಹಾಳೆಯ ಒಂದೇ ಮಗ್ಗುಲಲ್ಲಿ ಬದಿಯಂಚುಗಳನ್ನು ಬಿಟ್ಟು ಸುಸ್ಪಷ್ಟವಾದ ಅಕ್ಷರಗಳಿಂದ ಬರೆಯಲ್ಪಡಬೇಕು ಆಧಾರಿತ, ಅನುವಾದಿತವಾದರೆ ಅವುಗಳ ಮೂಲವನ್ನೂ ತಿಳಿಸಬೇಕು.

ಸುದ್ದಿಗಳನ್ನು ಕಳಿಸುವವರು ಅವನ್ನು ಟಪಾಲಿನಲ್ಲಿ ಸ್ಪಷ್ಟವಾಗಿ ಬರೆದು ರವಾನಿಸಬಹುದು.

ಆಯಾಯ ವಾರದ ಸಂಚಿಕೆಯ ಮುದ್ರಣಕಾರ್ಯವು ಸಾಮಾನ್ಯವಾಗಿ ಸೋಮವಾರವೇ ಮುಗಿಯುವುದರಿಂದ ವಾರ್ತೆ, ಫೋಟೋ ಮತ್ತು ಇತರ ಪ್ರಕಟಣೆ, ಜಾಹೀರಾತುಗಳು ಕನಿಷ್ಠ ಸೋಮವಾರದೊಳಗಾದರೂ ನಮ್ಮ ಕೈಸೇರಬೇಕು.

ಚಂದಾದಾರರಿಗೆ—

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಚಂದಾದಾರರು ಹಣ ಪಾವತಿ ಮಾಡುವಾಗಲಾಗಲಿ ಪತ್ರವ್ಯವಹಾರ ಮಾಡುವಾಗಲಾಗಲಿ ತಮ್ಮ ಚಂದಾ ನಂಬ್ರವನ್ನು ಸೂಚಿಸುವುದು ಅನುಕೂಲ.

ಮುಖಪತ್ರದಲ್ಲಿ:

ಸುದೃಢ ಜನಾಂಗ ನಿರ್ಮಾಣದಲ್ಲಿ ಶಾರೀರಿಕ ಶಿಕ್ಷಣವು ಪ್ರಮುಖ ಪಾತ್ರ ವಹಿಸುವುದು ಶಾಲಾ ಶಾಲೆಯಿಂದಂ ಕ್ರೀಡಾಂಗಣದಲ್ಲಿ ಹಸುಳೆಗಳು ಆನಂದಿಸುತಿದ್ದಾರೆ.

ನವಯುಗ

ಸಂಪುಟ ೪೫	ಉಡುಪಿ	Vol. 45
ಸಂಚಿಕೆ ೪	೩೦—೯—೧೯೬೫	No. 4

ವಚನ ಸುಧೆ

ನ ತಥೇಚ್ಛಂತಿ ಕಲ್ಯಾಣಾನ್
ಪರೇಷಾಂ ವೇದಿತುಂ ಗುಣಾನ್
ಯಥೈಷಾಂ ಜ್ಞಾತುಮಿಚ್ಛಂತಿ
ನೈರ್ಗುಣ್ಯಂ ಪಾಪ ಚೇತಸಃ ॥

ಪಾಪಶೀಲರಾದವರು ಇತರರಲ್ಲಿರುವ ಉತ್ತಮ ಗುಣಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡುವುದಿಲ್ಲ. ಆದರೆ, ಅವಗುಣಗಳನ್ನೇ ಹೆಕ್ಕಿ ತೆಗೆಯುತ್ತಾರೆ. ಅರಸಿನ ರೋಗದವನಿಗೆ ಊರೆಲ್ಲಾ ಅರಸಿನವೇ ಕಾಣುವುದು.

ಸಮರ ವಿರಾಮದ ಬಳಿಕ

ಹೆಸರಿಗೇನೋ ಪಾಕ್—ಭಾರತಗಳ ನಡುವಣ ಹೋರಾಟ ನಿಂತಿತು. ನಿಜವಾಗಿ ನಿಂತಿದೆಯೇ? ಭಾರತ ನಿಷ್ಕಲ್ಮಷ ಮನಸ್ಸಿನಿಂದ ಶಾಂತಿಸ್ಥಾಪನೆಗನುವಾಗಿ ಸಮರವಿರಾಮ ಸಂಬಂಧಿ ವಿಶ್ವಸಂಸ್ಥೆಯ ಗೊತ್ತುವಳಿಯನ್ನು ಸ್ವೀಕರಿಸಿದಂತೆ ಪಾಕ್ ಮಾಡಿದೆಯೆ? ಖಂಡಿತಕ್ಕೂ ಇಲ್ಲ. ಯಾಕೆ? ಪಾಕಿಸ್ಥಾನದ ಇರಾದೆ ಕಾಶ್ಮೀರವನ್ನು ಕಬಳಿಸುವುದು ಮಾತ್ರ. ಅದಕ್ಕಾಗಿ ಅನುಸರಿಸುವ ಕ್ರಮಗಳು ಶಾಂತಿ ಪ್ರೇರಿತವಿರಲಿ, ಕ್ರಾಂತಿಕಾರಕವಿರಲಿ ಅದರ ಗೊಡವೆ ಪಾಕಿಸ್ಥಾನಕ್ಕಿಲ್ಲ. ಮುಗಿದ ಶಸ್ತ್ರಾಸ್ತ್ರ ಭಂಡಾರವನ್ನು ಮತ್ತೊಮ್ಮೆ ತುಂಬಿಸಿಕೊಳ್ಳಲು, ಸೋತು ಸುಣ್ಣವಾದ ಸೈನಿಕರಿಗೆ ಉಸಿರು ಬಿಡಲು ಬೇಕಾಗಿತ್ತು ಅಯ್ಯೂಬ ಭುಟ್ಟೋರಿಗೆ ವಿರಾಮ ಅಷ್ಟೆ.

ಕದನ ವಿರಾಮವು ಜ್ಯಾರಿಗೆ ಬಂದ ಮೇಲೂ ಪಾಕಿಸ್ತಾನಿ ಪಡೆಗಳು ಹೋರಾಟವನ್ನು ನಿಲ್ಲಿಸಿದಂತೆ ಕಾಣುವುದಿಲ್ಲ. ಅವು ಸಮರ ವಿರಾಮವನ್ನು ಉಲ್ಲಂಘಿಸಿವೆ. ಭಾರತೀಯ ರಕ್ಷಣಾ ಪಡೆಗಳ ಮೇಲೆ ಗುಂಡು ಹಾರಿಸುತ್ತಿವೆ. ತಾವು ಕಳೆದುಕೊಂಡಿದ್ದ ನೆಲೆಗಳನ್ನು ಮತ್ತೆ ವಶಪಡಿಸುವ ಪ್ರಯತ್ನಗಳನ್ನೂ ಮಾಡುತ್ತಿವೆ. ಇವೆಲ್ಲಾ ಯು ಥಾಂಟ ವರದಿಯಲ್ಲೇ ಉಲ್ಲೇಖಿತವಾಗಿವೆ. ಅಂದರೆ, ಸಮರ ವಿರಾಮವನ್ನು ಪಾಕ್ ಮೀರಿ ನಡೆಯುತ್ತಿದೆ. ಅಥವಾ ಭಾರತವು ಏಕಪಕ್ಷೀಯವಾಗಿಯೇ ಸಮರ ವಿರಾಮವನ್ನು ಅನುಸರಿಸಬೇಕಾಗಿದೆ. ಈ ಪರಿಸ್ಥಿತಿ ಎಂದಿಗೂ ಸಾಧ್ಯವಿಲ್ಲ. ನಮ್ಮ ಮೇಲೆ ವೈರಿಗಳು ಗುಂಡು ಹಾರಿಸುವುದು, ದಾಳಿ ಮಾಡುವುದು— ನಾವು ಮಾತ್ರ ಹೇಡಿಗಳಂತೆ ಕೈಕಟ್ಟಿ ನಿಂತುಕೊಳ್ಳುವುದು— ಇದು ಅಸಾಧ್ಯ. ಯು ಥಾಂಟ ತಮ್ಮ ದೆಹಲಿ ಸಂದರ್ಶನದ ವೇಳೆ ಇದೇ ಮಾದರಿಯ ಸಲಹೆಯನ್ನು ಮಾಡಿದ್ದಾಗ ಪ್ರಧಾನಿ ಶಾಸ್ತ್ರಿಯವರು ಅದನ್ನು ಸ್ಪಷ್ಟವಾಗಿ ನಿರಾಕರಿಸಿದ್ದರು. ಆದುದರಿಂದಲೇ ನಮ್ಮ ಪಡೆಗಳು ಶಸ್ತ್ರ ಸನ್ಯಾಸ ಕೈಗೊಂಡಿಲ್ಲ ಸದಾ ಜಾಗರೂಕರಾಗಿರಬೇಕು ಎಂಬುದೇ ಅವರಿಗಿತ್ತ ಸೂಚನೆ. ಸಮರ ವಿರಾಮವನ್ನು ಉಲ್ಲಂಘಿಸಿದ ಪಾಕ್ ಪಡೆಗಳಿಗೆ ಸಮರ್ಪಕವಾದ ಸೈನಿಕ ರೀತಿಯಲ್ಲೇ ನಮ್ಮ ಸೈನಿಕರು ಉತ್ತರ ಕೊಟ್ಟಿದ್ದಾರೆ, ಮುಂದಕ್ಕೂ ಕೊಡುತ್ತಾರೆ ಈ ಘಟನೆಗಳಿಂದಲೇ ಪಾಕಿಸ್ಥಾನ ದುರಭಿಪ್ರಾಯವೇನೆಂಬುದನ್ನು ಜಗತ್ತು ಅರಿತುಕೊಳ್ಳಬೇಕು. ಆದರೆ ರಾಜಕೀಯ ಸ್ವಾರ್ಥಸಾಧನೆಯಲ್ಲಿ ಕಟ್ಟುಬಿದ್ದ ಈ ಜಗತ್ತು ಸತ್ಯವನ್ನು ಕಣ್ಣು ತೆರೆದು ನೋಡುವುದಿಲ್ಲ ಸತ್ಯ ಶೋಧನೆಯ ಪ್ರಯತ್ನವನ್ನು ಮಾಡುವುದಿಲ್ಲ. ಸತ್ಯವೇ ಕಾಲ ಬಳಿ ಬಂದಾಗಲೂ ಅದನ್ನು ಕಿತ್ತು ಬಿಸುಡುತ್ತದೆ. ಇದು ಈಗಿನ ಭಾರತ—ಪಾಕ್ ಹೋರಾಟದಲ್ಲಿ ಮತ್ತೊಮ್ಮೆ ಹೊರಪಟ್ಟಿದೆ.

ಈ ಹೋರಾಟದ ಬಗ್ಗೆ ಅಮೆರಿಕ—ಬ್ರಿಟನ್‌ಗಳು ತಳೆದ ನಿಲುಮೆಯನ್ನು ಭಾರತ ಮೆಚ್ಚುವುದಿಲ್ಲ. ಪಾಕ್ ಆಕ್ರಮಣಕಾರ ರಾಷ್ಟ್ರವೆಂಬುದನ್ನು ಅವು ತಿಳಿದಿದ್ದರೂ ಆ ಮುದ್ರೆಯನ್ನು ಪಾಕ್ ಮುಖಕ್ಕೆ ಹಚ್ಚಲು ಅವರು ಸಿದ್ಧರಿಲ್ಲ. ಕಮ್ಯೂನಿಸ್ಟ್ ಆಕ್ರಮಣವನ್ನೆದುರಿಸಲು ತಾನು ಪಾಕಿಸ್ಥಾನಕ್ಕೆ ನೀಡುತ್ತ ಬಂದ ಸೈನಿಕ ಸಹಾಯವನ್ನು ಅದು ಭಾರತದ ವಿರುದ್ಧ ಪ್ರಯೋಗಿಸಿದ ಬಗ್ಗೆ ಅಮೆರಿಕೆಯ ಅಭಿಪ್ರಾಯ: "ಈ ಹೊತ್ತಿನಲ್ಲಿ ನಾವು ಏನು ಮಾಡಲೂ ಅಸಮರ್ಥರಾಗಿದ್ದೇವೆ" — ಹೇಗಿದೆ? ಅಮೆರಿಕ ಇದುವರೆಗೆ ನೀಡಿದ್ದ ಸೈನಿಕ ನೆರವಿನ ಬಹುಪಾಲೀಗ ಭಾರತೀಯ ವೀರಯೋಧರಿಂದ ನಷ್ಟವಾಗಿದೆ. ಇನ್ನು ಮುಂದಾದರೂ ತಾನು ನೆರವು ನೀಡುವುದಕ್ಕೆ ಮುನ್ನ ನೂರು ಬಾರಿ ಅಮೆರಿಕ ಯೋಚಿಸೀತೆ? — ಹೇಗೆ ಮಾಡುವುದೆಂಬ ವಿಶ್ವಾಸ ಹುಟ್ಟೀತೆ?

ಇನ್ನು ಬ್ರಿಟನ್ನಿನ ಸಂಗತಿಯೋ ಬೇರೆ, ಪಾಕಿಸ್ಥಾನದ ಜನನಿಯೇ ಬ್ರಿಟನ್. ಭಾರತೀಯ ಉಪಖಂಡದಲ್ಲಿನ ಎರಡು ರಾಷ್ಟ್ರಗಳು ಸೌಹಾರ್ದದಿಂದ ಬಾಳಬೇಕೆಂಬ ಇರಾದೆ ಅದಕ್ಕಿಲ್ಲ. ಮೊದಲಿನಿಂದಲೂ ಪಾಕ್ ಪರ ನಿಲುಮೆಯದರದು. ಕಾಮನ್ ವೆಲ್ತಿನ ವೇದಿಕೆಯನ್ನು ಪಾಕ್ ಪರ ವಾದಕ್ಕೆ ಅನುಕೂಲ ಮಾಡಿಕೊಟ್ಟ ಹಿರಿಮೆಯದರದ್ದು. ಅಸತ್ಯವೆನ್ನುವುದಕ್ಕಿಂತಲೂ ಸತ್ಯವನ್ನು ಅಸತ್ಯವೆನ್ನುವ ಬ್ರಿಟಿಷ್ ಸರಕಾರದ ನೀತಿಯನ್ನು ಭಾರತೀಯರು ನಿಂದಿಸುತ್ತಾರೆ. ಈ ಬಗೆಯ ಕಪಟನಾಟಕದಿಂದಲೇ ತಕ್ಕಡಿ ಹಿಡಿದು ಬಂದ ಬ್ರಿಟನರು ಸಾಮ್ರಾಜ್ಯ ಸ್ಥಾಪಿಸಿದರು ನಿಜ. ಆದರೆ, ಇಂದಿನ ಭಾರತೀಯ ಜನಕೋಟಿ ಜಾಗ್ರತವಾಗಿದೆ, ತನ್ನ ಇತಿಹಾಸದಿಂದ ಪಾಠ ಕಲಿಸುತಿದೆ. ತನ್ನ ದೌರ್ಬಲ್ಯಗಳನ್ನು ಅರಿತುಕೊಂಡಿದೆ. ಭಾರತವು ಕಾಮನ್ ವೆಲ್ತ್ ಕೂಟದಿಂದ ಹೊರಬರಬೇಕು ಎಂಬ ವಾದ ಹುಟ್ಟಿದುದು ಇಂದು ನಿನ್ನೆಯಲ್ಲ. ಪಂಡಿತ ನೆಹರೂ ಇದಕ್ಕೆ ಒಪ್ಪಲಿಲ್ಲ. ಒಂದು ಕೋಪಕ್ಕೊಂದು ಬಾವಿಯನ್ನು ಹಾರಿದರೆ ಭಾವಿ ಯನ್ನು ಬೇಕ.? ಆದರೆ, ಭಾರತ-ಪಾಕ್‌ನ ಇಂದಿನ ಸಮರದಲ್ಲಿ ಭಾರತದ ಸತ್ಯವನ್ನು ಅಲ್ಲಗಳೆಯುವ ಬ್ರಿಟನ್ ಭಾರತದ ಹಿತವನ್ನು ಬಯಸೀತೆಂದು ಹೇಳಲಾಗದು. ಆದುದರಿಂದ ಭಾರತ ಕಾಮನ್‌ವೆಲ್ತಿನಲ್ಲಿರಬೇಕೇ ಅಥವಾ ಪ್ರತ್ಯೇಕವಾಗಿರಬೇಕೇ ಎಂಬುದನ್ನು ಜಾಣತನದಿಂದ ಮತ್ತೊಮ್ಮೆ ಪರಿಶೀಲಿಸುವುದಕ್ಕೆ ಕಾಲವೀಗ ಪಕ್ವವಾಗಿದೆ.

ಪಾಕ್ ಪರ್ವಕ್ಕೆ ಚೀನೀ ಹೆಬ್ಬಾವಿನ ನೆರವು ಸದಾ ಇದ್ದೇ ಇದೆ. ರಾಷ್ಟ್ರ ರಕ್ಷಣೆಯ ಕಾರ್ಯದಲ್ಲಿ ಪರರಾಷ್ಟ್ರಗಳ ಬಲವನ್ನು ನಂಬಿಕೊಂಡಿರುವುದು ಸಾಧ್ಯವಿಲ್ಲ. ನಾವು ನಮ್ಮ ರಕ್ಷಣಾಶಕ್ತಿಯನ್ನು ಹೆಚ್ಚಿಸಿಕೊಳ್ಳಲೇ ಬೇಕು. ದೇಶದೊಳಗೆನೇ ಶಸ್ತ್ರಾಸ್ತ್ರಗಳನ್ನು ತಯಾರಿಸಿಕೊಳ್ಳಬೇಕು. ಸಂಪೂರ್ಣ ಭಾರತೀಯ ತಯಾರಿಕೆಯ ನ್ಯಾಟ್ ವಿಮಾನಗಳು ನಮ್ಮ ಕುಶಲ ತಂತ್ರಜ್ಞರು ಜಾಗತಿಕ ತಂತ್ರಜ್ಞರಿಗೆ ಯಾವುದರಲ್ಲೂ ಕಡಿಮೆಯಿಲ್ಲವೆಂಬುದನ್ನು ಸಾರಿ ಹೇಳಿವೆ. ಇದೇ ಬಗೆಯಲ್ಲಿ ನಮಗೆ ಬೇಕಾದಷ್ಟನ್ನು ನಾವು ಉತ್ಪಾದಿಸಬೇಕು. ಜೀವವುಳಿಸಲು ಆಹಾರದಲ್ಲಿ ಸ್ವಾವಲಂಬನೆಯನ್ನು ಬಯಸುವಂತೆಯೇ ದೇಶದ ಸ್ವಾತಂತ್ರ್ಯವುಳಿಸಲು ರಕ್ಷಣಾ ಸಾಮಗ್ರಿಗಳಲ್ಲೂ ಸ್ವಾವಲಂಬಿಯಾಗಬೇಕು ನಾವು. ಆಗ ಪಾಕ್ ಚೀನಾದೊಡನೆ ಕೂಡಿ ಬರಲಿ ಅಥವಾ ಶತಮಾನದ ಅರಲ ಜಾತಿಯ ಬಲದೊಡನೆ ಬರಲಿ, ನಾವು ಅಂಜಬೇಕಾಗಿಲ್ಲ. ಯಾಕೆಂದರೆ, ನಾವು ಅಜೇಯರು.

ಕಾಶ್ಮೀರ ಭಾರತದ ಒಂದು ರಾಜ್ಯ. ಅದರ ಮೇಲೆ ಪಾಕ್ ಹುಟ್ಟಿ ಬಿಚ್ಚ ಬಾರದು. ಅದು ಆಜಾದ ಕಾಶ್ಮೀರವನ್ನೂ ತೆರವು ಮಾಡಿ ರಾವಲಪಿಂಡಿಗೆ ಹಿಂದೆ ಹೋಗ

(ಹದಿನಾಲ್ಕನೇ ಪುಟ ನೋಡಿರಿ)

ನರಸಣ್ಣನ ಸರಸ



'ಕಾಶ್ಮೀರ ಉಳಿಸಲು ಕನ್ನಡಿಗರು ಯಾಕೆ ದಾನ ಮಾಡಬೇಕು ಸ್ವಾಮಿ ?'

'ಏನೆಂತಿಯ? ತಲೆ ಹಿಡಿದರೆ, ಬಾಯಿ ಆನಾಸಿನ ಯಾಕೆ ನುಂಗಬೇಕು ? ಹೊಟ್ಟೆ ಯಾಕೆ ಅದನ್ನ ತುಂಬಿಕೊಳ್ಳಬೇಕು ?....'

ಗೇಹ ರಾಜ್ಯದಲ್ಲಿ

ಸಮರವಿರಾಮವಾಯಿತೇನು?

'ಅಲ್ರಿ ಸ್ವಪ್ಪ ಇತ್ತ ಕೇಳೀಂದ್ರೆ .'

'ಏನಪ್ಪಾ ಅದು ಸ್ವಲ್ಪ ಕೇಳೋ ವಿಷಯ?"

"ಗದ್ಯ ಮಾತ್ರಾವುದು'

'ಅಂದ್ರೆ?"

'ನೀವೇ ಹೇಳಿ ನೋಡೋಣ"

'ಹೇಳೋದನ್ನ ನೋಡೋದೆಲ್ಲಿ ಬಂತು. "

'ಅ ಯ್ಯೋ, ನೀವೂ ಎಲ್ರು ಅಯ್ತು, ಹೇಳೋದನ್ನ ನೋಡ್ದೇದಲ್ಲ, ಕೇಳೋದ . ವಾಗಾಯಿತಲ್ಲ?"

'ಏನ ?"

"ಮತ್ತೆ ಮಾಳಿ ಸುರು ಮಾಡಿದ್ರಲ್ಲ..'

"ಏನನ್ನು?"

'ನೀವು ಏನು, ಏನನ್ನು, ಏಕಿರಿಂದ, ಏತಕ್ಕೆ ಏತರತ್ತಣಿಂದ, ಏತರ, ಏತರಲ್ಲಿ ಎಂದು ಹೇಳುತ್ತ ಕೂತರೆ, ಕೆಲ್ಸ ಆಗುತ್ತೆಯೆ?"

"ಅಲ್ವೆ ಅಂತಹ ಮಹಾ ಕೆಲ್ಸವಾದ್ರೂ ಏನಾವುದೂಂತ__'

'ಮನೇ ಎಂದಾದ ಮೇಲೆ ಕೆಲ್ಸಕ್ಕೇನು ಕಡಿಮೆ? ನೋಡಿ, ನಮ್ಮ ಮನೇಗತಿ ಇರೋರು ನಾಲ್ಕು ಜನವಾದ್ರೂ ಮುಂಜಾವದಲ್ಲಿ ಎದ್ರೆ ಮಲಗುವಾಗ ರಾತ್ರಿ ಆಗುತ್ತೆ...."

"ಯಾರಿಗೆ?"

'ಯಾರಿಗೇಂದ್ರೆ! ಒಂಭತ್ತು ತಾಸಿನವರೆಗೆ ಮುಸುಕೆಳೆದು ಮಲಕ್ಕೊಳ್ಳುವವರಿಗೆ ನಮ್ಮ ಕಷ್ಟ ಹೇಗೆ ಗೊತ್ತಾಗಬೇಕು?'

"ಓಹೋ, ಈಗ ನನ್ನ ಕುರಿತೇ ಹೇಳಿದ್ದೇನು? ನಾನಲ್ಲ ಹಾಗೆ ಮಲುತ್ತೇನೆಯೆ? ಮುಂಜಾವದ ಐದೂವರೆ ಗಂಟೆಗೇನೇ ಏಳುತ್ತೇನೆ. ಎದ್ದು ಹೊರಗೆ ಹೋಗಿ ಒರುಕಿಲ್ಲಾ ಕಣ್ಣು ಸ್ವಲ್ಪ ಕೂರುತ್ತೇಂತ ಮತ್ತೆ ..'

"ಹಾದಪ್ಪ, ಅದನ್ನೇ ಅಂದದ್ದು ಮುಸುಕು ಎಳೆದು ಹೊಂಳಾಡ್ತಾ ಇದ್ರೆ ಈ ಲೋಕವಲ್ಲ ಏನಾದ್ರೂ ಗೊತ್ತಿಲ್ಲ .."

'ಇನ್ನ ನಾಲ್ಕು ದಿನ ಮಂಗೆ ಪ್ರಲಯವಾಗೋದೇನೂ ನಡೆಯೋದಿಲ್ಲ"

"ಸರಿ, ಯುದ್ಧ ಒಮ್ಮೆಗೆ ಮುಗಿಯಿತಲ್ಲ?"

"ಹೌದು, ಯುದ್ಧವೇನೋ ಸ್ತಂಭನಗೊಂಡಿತು ..."

'ಅಂದ್ರೆ ಮತ್ತೇನೂ ಇಲ್ಲ. ನೀನಂದದ್ದೇ."

'ಮತ್ತೆ ನಾಲ್ಕು ದಿನ ಅಂದ್ರಲ್ಲ?"

"ಅಂದ್ರೆ ತತ್ಕಾಲಕ್ಕೇಂತ ...'

'ಮುಂದೆ ಮತ್ತೆ ಸುರುವಾಗುವುದೆ?"

'ನಾಳೆ ಏನಾದೀತೂಂತ ಇಂದು ಹೇಗ ನ್ನೋದು?"

'ಆದರೂ ಒಂದು ಮಾತಿಗೆ "

"ಸದ್ಯದ ಲಕ್ಷಣಗಳನ್ನು ನೋಡುವಾಗ ಯುದ್ಧದ ಕಿಡಿಗಳು ಮತ್ತೊಮ್ಮೆ ಹಾರ ತೊಡಗ್ಬಹುದು ಅಂತಿತ...."

"ಇದಕ್ಕೆ ಆಧಾರ?'

"ಅಯ್ಯೋ ಪದ್ದಿ ಹಾಗೆಲ್ಲಾ ನಿಂತದ್ದಕ್ಕೆ ಕುಳಿತದ್ದಕ್ಕೆಲ್ಲಾ ಆಧಾರ ಕೇಳಿದ್ರೆ ಹೇಗೆ? ರಾಜಕೀಯದಲ್ಲಿ ಎಲ್ಲವೂ ಸಾಧ್ಯ. ಸತ್ಯಂ ಭಟ್ಟನಾಗಿ ಕುಳಿತವರು ಆ ಸತ್ಯದಿಂದ್ಲೇ ತತ್ತರಿಸಿ ಹೋಗುತ್ತಾರೆ, ಮಿಥ್ಯಾವಾದಿಗಳು ಅದರ ಬಲದಿಂದಲ್ಲೇ ಹಾರಾಡುತ್ತಾರೆ "

'ಅದು ಸರೀನ್ನಿ, ಆದರೂ .'

"ಏನು?"

"ಪಾಂಡವರದು ಹೇಳಿ ಕೇಳಿ ಸತ್ಯವಾದಿಗಳ ಪಕ್ಷ. ಅವರು ಪಟ್ಟ ಬವಣೆಗಳು ಒಂದೇ ಎರಡೆ? ದುರ್ಯೋಧನನದು ಅಸತ್ಯವಾದ. ಆರಂಭದಲ್ಲಿ ಆತ ಗೆದ್ದನೂ ಮುಂದೆ "

"ಮಣ್ಣು ಮುಕ್ಕಿದ ಅಲ್ವೆ?"

"ಹ್ಹ ಹ್ಹ ಹ್ಹ ಹ್ಹ .."

"ಯಾಕೆ ನಗು? '

"ಅಲ್ಲಾ, ಮಣ್ಣು ಮುಕ್ಕಿದ ಅನ್ನೋವಾಗ ಒಂದು ಮಾತು ನೆನಪಿಗೆ ಬಂತು.."

"ಏನ ?"

"ಮತ್ತೇನಿಲ್ಲ ಅವ ತೊಡೆ ಹಲ್ಲು ಮುರಿಸಿಕೊಂಡು, ಕಿರೀಟ ಹಾರಿಸಿಕೊಂಡು ರಣರಂಗದಲ್ಲಿ ಬಿದ್ದುಕೊಂಡಿದ್ದನಲ್ಲಾ ?"

"ಹ್ಞಾಂ ."

'ಆಗಲೂ ತನ್ನ ಬಚ್ಚ ಬಾಯಲ್ಲಿ ಭೂಮಿಯನ್ನು ಕಚ್ಚಿ, ಪಾಂಡವರಿಗೆ ಅದು ಸಿಗದಂತೆ ನುಂಗುವ ಸಾಹಸ ಮಾಡುತ್ತಿದ್ದನಂತೆ!'

'ಹ್ಞಾಂ...ಪಾಕ್ ಮಿಥ್ಯಾವಾದಿಗಳ ಗತಿಯೂ ಅದೇ ಅನ್ನು..?"

'ಅದೇ ಅಂತೀರಾ?'

"ಯಾಕೆ ಸಂಶಯವೆ?'

'ಅಂತಹ ಬಲವಾದ ಸಂದೇಹವಿಲ್ಲವಾದ್ರೂ ಎದೆಯೊಳಗೆ ಏಕೋ ತುಸು ಅಳುಕು ಬರುತ್ತದಲ್ಲಾ!'

"ಯಾವ ಕಾರಣದಿಂದ?'

"ನೋಡಿ, ಪಾಕಿಸ್ತಾನದ ಪಕ್ಷ ಅನ್ಯಾಯದ್ದಾದರೂ ಅದನ್ನು ಎತ್ತಿ ಕಟ್ಟುವವರು—ಅಮೆರಿಕೆ - ಬ್ರಿಟನ್‌ಗಳು ಬೇಕಷ್ಟು ಶಸ್ತ್ರಾಸ್ತ್ರಗಳನ್ನು ಪೂರೈಸುತ್ತವೆ. ಅತ್ತ ಚೀನಾ ಕೂಡ....ಹಾಗಿರುವಾಗ....'

'ನಾವು ಅಂತಹ ಸೈನಿಕ ಶಕ್ತಿಯನ್ನು ಹೇಗೆ ಎದುರಿಸಬಹುದೆಂದು ಸಂದೇಹ ನಿನಗೆ ಅಲ್ಲವೆ?'

'ಹ್ಞಾಂ"

"ಹದರ ಬೇಡ . ಈಗ ಪಾಕಿಸ್ತಾನದ ಪ್ಯಾಟನ್ ಟ್ಯಾಂಕುಗಳು, ಸೇಬ್ರೆ ಜೆಟ್‌ಗಳೆಲ್ಲಾ ಎಲ್ಲಿಂದ ಬಂದುವು?"

"ಅಮೆರಿಕದಿಂದ, ಇನ್ನ ಬೇರೆಯವು ಬ್ರಿಟನ್ನಿಂದ .."

"ನೋಡು, ಅವುಗಳೆಲ್ಲಾ ಹೇಗೆ ಧೂಳೀಧೂಸರಿತವಾದುವು?"

'ಸೈನಿಕರ ಯುಕ್ತಿಯಿಂದ .."

'ಹೌದು. ನಮ್ಮಲ್ಲೇ ತಯಾರಾದ ನ್ಯಾಟ್ ವಿಮಾನಗಳು ಮೊತ್ತಮೊದಲ ಬಾರಿಗೆ ಸಮರದಲ್ಲಿ ಭಾಗವಹಿಸಿದುವು; ಅವು ಸೇಬ್ರೆ ಜೆಟ್‌ಗಳನ್ನು ಉರುಳಿಸುವಲ್ಲಿ ಯಶಸ್ವಿಯಾದುವು. ಹಾಗೆಯೇ ಪ್ಯಾಟನ್ ಟ್ಯಾಂಕುಗಳಿದ್ದರೂ ಅವೆಲ್ಲವನ್ನೂ ನಮ್ಮವರು ನಾಶಮಾಡಿದರು. ಸಮರದಲ್ಲಿ ಬಂದು ಶಕ್ತಿಯಿದ್ದರೆ ಸಾಲದು, ಅದನ್ನು ಉಪಯೋಗಿಸುವ ತಂತ್ರ ಕೌಶಲಗಳನ್ನೂ ಹೊಂದಿರಬೇಕು ..."

ಶಾಂತಿ—ಅಹಿಂಸೆಗಳ ಮೂಲಕ
ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟರು
ರಾಷ್ಟ್ರಪಿತ ಬಾಪೂಜಿ.
ಶಾಂತಿ—ಅಹಿಂಸೆಗಳ ತಳಹದಿಯಲ್ಲಿಯೇ
ದೇಶಕ್ಕೆ ಭದ್ರ ಪಂಚಾಂಗ ಹಾಕಿದರು
ದಿವಂಗತ ಪ್ರಧಾನಿ ಪಂಡಿತಜಿ

ಶಾಂತಿ—ಅಹಿಂಸೆಗಳಿಗೆ ಕಟ್ಟುಬಿದ್ದು
ಗಳಿಸಿದ ಸ್ವಾತಂತ್ರ್ಯವನ್ನು ಕಾಪಿಡಿರೆಮ್ಮ
ಇಂದಿನ ಪ್ರಧಾನಿ ಶಾಸ್ತ್ರೀಜಿ.

ಬಾಪೂಜಿ ನೀವು ತೋರಿಸಿದ ದಾರಿಯಲ್ಲೇ
ನಾವು ಮುಂದುವರಿಯುವೆವು.
ನಮ್ಮ ಮೇಲೆ ಶತ್ರುಗಳು ಗುಂಡು ಹಾರಿಸಿದಾಗ ಮಾತ್ರ
ನಾವು ಪ್ರತಿಯಾಗಿ ಗುಂಡು ಹಾರಿಸುವೆವು.

ನಿಮ್ಮ ಆಶೀರ್ವಾದ ನಮ್ಮ ಭದ್ರ ರಕ್ಷಾಕವಚ.
ಸತ್ಯಕ್ಕೆ ಧರ್ಮಕ್ಕೆ ಜಯವೆಂಬುದು ಸಿದ್ಧ
ಸತ್ಯಧರ್ಮದ ದೀಕ್ಷೆ ನಮಗೆ ಬದ್ಧ
ವಿಜಯ ನಮ್ಮದು ಎಂಬುದು ಶ್ರುತಿಸ್ಮೃತಿ ಸಿದ್ಧ

"ತಮ್ಮ ಟ್ಯಾಂಕು ನಾಶವಾದುದಕ್ಕೆ ಪಾಕ್ ಚಿಂತಿಸುವುದಕ್ಕಿಂತ ಅಮೆರಿಕೆ ಯೋಚನೆ ಗೀಡಾಗಿದೆಯಂತೆ!"

"ಹ್ಞಾಂ, ತಮ್ಮ ಅಭೇದ್ಯ ಟ್ಯಾಂಕನ್ನು ಭಾರತೀಯರು ಯಾವ ಇಂದ್ರಜಾಲದಿಂದ ಭೇದಿಸಿದರೂಂತ ಅಲ್ವೆ?'

"ಹ್ಞಾಂ... "

"ಅದರಲ್ಲಿ ಇಂದ್ರಜಾಲವೇನೋ ಇಲ್ಲ. ಕರ್ತವ್ಯ ಪಥದಲ್ಲಿ ನಡೆವವನಿಗೆ ಹಿಮಾಲಯವೂ ಬಾಗಿ ದಾರಿ ಬಿಡುತ್ತದೆ ಸಮುದ್ರವೂ ಹಳ್ಳವಾಗುತ್ತದೆ... ಜಪ್ಪೆ ..."

"ಅದು ಸರೀನ್ನಿ. ಆದರೂ "

'ಆದರೂ ಇಲ್ಲ, ಹೋದರೂ ಇಲ್ಲ. ನಮ್ಮ ಯೋಧರು ತೃಣಕ್ಕಿಂತ ಕಡೆಯಾಗಿ ಪ್ರಾಣವನ್ನು ಗಣಿಸಿದ್ದರಿಂದಲೇ ...?"

'ನಾವು ಗೆದ್ದೆವು ಅಲ್ಲವೆ?"

"ಹ್ಞಾ ಹಾಗೆಂದುಕೊಳ್ಳಬಹುದು. ಆದರೆ ಸಮರದಲ್ಲಿ ನಮ್ಮದೇನು ಮೇಲುಗೈಯಾಗಿದೆ?

"ಮತ್ತ್ಯಾರದು? ಪಾಕಿಸ್ತಾನಿಗಳದ್ದೇ

"ಛೆ, ಅದು ಹೇಗೆ ಸಾಧ್ಯ? ಎ... ಭೂಮಿಯ ಸಂರಕ್ಷಣೆಗಾಗಿ ಹೋರಾ... ಅಮರರಾದ ವೀರ ಯೋಧರ ... ಲಾಯ್ತು .."

'ಹ್ಞಾಂ.. ಅದೇ ಸರಿ. ಅವರ ಆತ್ಮಕ್ಕೆ ಚಿರಶಾಂತಿ ಹೊಂದಲಿ. ನಮ್ಮ ಆ... ಳಲ್ಲೂ ತಮ್ಮ ಉಜ್ವಲ ಶಕ್ತಿಯನ... ತುಂಬಿಸಲಿ "

"ಈಗಂತೂ ಸಮರ ವಿರಾಮವಾಯ್ತು... ಕೊನೆಯ ಗಳಿಗೆಯಲ್ಲಿ ಅಯ್ಯೂಬ... ನರು ತಮ್ಮ ಹಠವನ್ನು ಬಿಟ್ಟು ಕೊ... ಟ್ಟರು...."

'ಏನು ಬಿಟ್ಟರೋ, ಏನು ಕೊ... ರೋ, ಪರಿಸ್ಥಿತಿಯನ್ನು ನೋಡುವಾಗ ...

(ಹದಿಮೂರನೇ ಪುಟ ನೋಡಿರಿ)

ಸಫಲರಾಗಲು

ಆರು ಸೂತ್ರಗಳನ್ನು ಪಾಲಿಸಿರಿ

ಸಂಗ್ರಹ: ಶ್ರೀ ಬೇಕಲ್ ನರಸಿಂಗ ರಾವ್.

ಜೀವನದಲ್ಲಿ ಯಶ ಸುಮ್ಮನೆ ಬರುವುದಿಲ್ಲ. ಪರಿಶ್ರಮ, ಆತ್ಮತ್ಯಾಗ, ಪ್ರೇಮ, ಸದಾ ಪ್ರಸನ್ನತೆ, ನಿರ್ಭಯತೆ ಮತ್ತು ಆತ್ಮವಿಶ್ವಾಸಗಳು ಅರುಮೈಗೂಡಿದಾಗಲೇ ಯಶ ನಮ್ಮದಾಗುವುದು.

ಜಗತ್ತಿನಲ್ಲಿ ಪ್ರತಿಯೊರ್ವ ವ್ಯಕ್ತಿಯು ತನ್ನ ಸಫಲತೆಯನ್ನು ಬಯಸುತ್ತಾನೆ; ಆದರೆ ಇಂತಹ ವ್ಯಕ್ತಿಗಳಲ್ಲಿ ಸಫಲರಾಗುವವರು ಕೇವಲ ಒಬ್ಬರೋ ಇಬ್ಬರೋ. ಅಸಫಲನಾಗುವುದು ತನ್ನ ದೌರ್ಭಾಗ್ಯದ ಫಲವೆಂದು ಕೆಲವರು ಹೇಳುವುದುಂಟು. ಇದು ಮೂಲತಃ ತಪ್ಪು ಅಭಿಪ್ರಾಯ. ಸಫಲತೆ ಹೊಂದಲು ಕೆಲವು ನಿಶ್ಚಿತ ಸಿದ್ಧಾಂತಗಳಿವೆ. ನೀವೂ ನಿಮ್ಮ ಜೀವನದಲ್ಲಿ ಸಫಲತೆಹೊಂದಲು ಇವನ್ನ ಆಚರಣೆಗೆ ತರಲು ಅಭ್ಯಸಿಸಬೇಕು. ಈ ರೀತಿ ಮಾಡಿದಲ್ಲಿ ಸಫಲತೆಯು ತಾನಾಗಿಯೇ ನಿಮ್ಮನ್ನು ಹುಡುಕಿಕೊಂಡು ಬರುವುದು. ಸಾಮಾನ್ಯವಾಗಿ ಜನರು ಸಿದ್ಧಾಂತವನ್ನು ಉಪದೇಶಿಸುತ್ತಾರೆಯೆ ಹೊರತು ತಾವೇ ಸ್ವತಃ ಆಚರಣೆಗೆ ತರಲೊಲ್ಲರು. ಆದರೂ ಇಲ್ಲಿ ನೀಡಿರುವ ಸಿದ್ಧಾಂತಗಳು ಆಚರಣೆಗೆ ತರುವುದರಲ್ಲಿ ಎಳ್ಳಷ್ಟೂ ಕಷ್ಟವಾಗದು.

ಪ್ರಥಮ ಸಿದ್ಧಾಂತ: ಕಾರ್ಯ:— ಪ್ರಪ್ರಥಮವಾಗಿ ಸಫಲತೆಯ ಭೇದವನ್ನು ತಿಳಿಯಲು ನಾಲ್ದೆಸೆಗೂ ಹರಡಿದ ಪ್ರಕೃತಿ ಯೆಡೆ ಕಣ್ಣು ಹೊರಳಿಸಿ. ಒಂದು ಆವರಣದಲ್ಲಿ ಕಟ್ಟಿಟ್ಟ ಸ್ತಬ್ಧವಾದ ಕೆರೆಯನ್ನೂ, ಸರಾಗವಾಗಿ ಹರಿಯುತ್ತಿರುವ ನದಿಯನ್ನೂ ಒಮ್ಮೆ ನೋಡಿ. ಎರಡರಲ್ಲೂ ಎಷ್ಟೊಂದು ಅಂತರವಿದೆ ಮತ್ತು ಯಾಕೆ? ಹರಿಯುವ ನದೀ ನೀರು ಸ್ಫಟಿಕದಂತೆ ಸ್ವಚ್ಛ, ನಿರ್ಮಲ ಮತ್ತು ಕುಡಿಯಲು ಯೋಗ್ಯ. ತದ್ವಿರುದ್ಧ ನೀವೂ ಬದ್ಧ ಕೆರೆಯ ನೀರು ಕೊಳಕಿದ್ದು ದುರ್ವಾಸನಾಯುಕ್ತವಿದೆ. ಸರಿ, ಸಫಲರಾಗುವ ಹಂಬಲಿಕೆಯಿದ್ದರೆ ನದಿಯಂತೆ ನಿರಂತರ ಗತಿಯನ್ನು ಅನುಸರಿಸಿ. ಕಾರ್ಯ, ಕಾರ್ಯ, ನಿರಂತರ ಕಾರ್ಯ. ನದಿಯು ಪರಿಸ್ಥಿತಿಗನುಕೂಲ ಸದೈವ ಮುಂದಡಿಯಿಡುತ್ತಾ ಇರುತ್ತದೆ. ನೀವು ನಿತ್ಯವೂ, ನಿರಂತರವೂ ಮೈಮುರಿದು ದುಡಿದಲ್ಲಿ ಉತ್ತಮದಿಂದ ಉತ್ತಮರಾಗುವಿರಿ. ಒಂದೇ ಮಾತಿನಲ್ಲಿ ಹೇಳುವುದಾದರೆ "ಕಾಯಕವೇ ಕೈಲಾಸ, ಆಲಸ್ಯವೇ ನರಕ". ನೆಹರೂ ಎಂದಂತೆ "ಆರಾಮ್ ಹರಾಮ್ ಹೈ".

ದ್ವಿತೀಯ ಸಿದ್ಧಾಂತ: ಆತ್ಮತ್ಯಾಗ: ಪ್ರತಿಯೊರ್ವನೂ ಶ್ವೇತ ವಸ್ತುವನ್ನು ಬಯಸುತ್ತಾನೆ. ಕರಿವರ್ಣದ ವಸ್ತುವನ್ನು ಯಾರೂ ಬಯಸರು. ಇದಕ್ಕೆ ಕಾರಣವೇನು? ಇಲ್ಲಿ ಪ್ರಕೃತಿ ವಿಜ್ಞಾನದ ಮನೋಹರ ಉದಾಹರಣೆಯಿದೆ. ಸೂರ್ಯ ಕಿರಣದಲ್ಲಿ ಸಪ್ತವರ್ಣವಿದೆ. ಗುಲಾಬಿಯಲ್ಲಿ ಕೆಂಪು ವರ್ಣವು ಎತರಿಂದ? ಸೂರ್ಯ ರಶ್ಮಿಯಲ್ಲಿರುವ ಆರು ವರ್ಣಗಳನ್ನು ಅಂತರಂಗದಲ್ಲಡಗಿಸಿ ಕೇವಲ ಕೆಂಬಣ್ಣವನ್ನು ಮಾತ್ರವೇ ಹೊರಗೆಡಹುತ್ತದೆ ಆ ಗುಲಾಬಿ. ಆದೇ ರೀತಿ ಎಲೆಯ ಹಸುರು ವರ್ಣ ಕೂಡ. ಈಗ ಕಪ್ಪು ವಸ್ತುವಿನೆಡೆ ನೋಡಿ. ಅದು ಪ್ರಕಾಶದಲ್ಲಿರುವ ಸಪ್ತವರ್ಣವನ್ನೂ ಸ್ವೀಕರಿಸುತ್ತದೆ; ಒಂದನ್ನೂ ಹೊರಗೆ ಬಿಟ್ಟು ಕೊಡಲಾರದು. ಅಂತೆಯೇ ಅದರ ವರ್ಣ ಕರಿದು. ಶ್ವೇತ ವರ್ಣದ ವಸ್ತುವಿನ ಸ್ವಭಾವವನ್ನು ಗ್ರಹಣ ಮಾಡಿ. ಅದರಿಂದ ಜೀವನದಲ್ಲಿ ಸಾಫಲ್ಯವನ್ನು ಹೊಂದಿಯೇ ತೀರುವಿರಿ. ಹೃದಯದಲ್ಲಿ ಶ್ವೇತ ವಸ್ತುವಿನಂತೆ ಉದಾರತೆ ತುಂಬಿರಲಿ. ಆ ಶ್ವೇತ ವಸ್ತುವು ತನ್ನ ಸ್ವಾರ್ಥ ಸಾಧನೆಗೋಸ್ಕರ ಯಾವ ವರ್ಣವನ್ನೂ ಬಳಸಿಕೊಳ್ಳುವುದಿಲ್ಲ; ಎಲ್ಲಾ ವರ್ಣವನ್ನು ಹೊರಗೆಡಹುತ್ತದೆ, ಅಂತೆಯೇ ಎಲ್ಲರೂ ಅದನ್ನು ಪ್ರೀತಿಸುತ್ತಾರೆ. ನೀವು ಪರರಿಂದ ಎಷ್ಟನ್ನು ಪಡೆಯುತ್ತೀರೋ ಅಷ್ಟನ್ನೆ ಸದೈವ ಇತರರಿಗೂ ಕೊಡಲು ಸಿದ್ಧರಿರಿ. ಯಾರು ಅತ್ಯಧಿಕ ಪರೋಪಕಾರ ಮಾಡುತ್ತಾರೋ ತಷ್ಟೆ ಅಧಿಕ ಅಥವಾ ಅದರಿಂದಲೂ ಅಧಿಕ ಉಪಕಾರವನ್ನು ಪಡೆದೇ ಪಡೆಯುತ್ತಾರೆ.

ಆತ್ಮತ್ಯಾಗಕ್ಕೆ ಮತ್ತೊಂದು ಹೆಸರು ಆತ್ಮವಿಸ್ಮೃತಿ ಅಥವಾ ಮೈಮರೆತು ಬಿಡುವುದು. ವಿದ್ಯಾರ್ಥಿಗಳಿಗೆ ಹೆಚ್ಚಿನಂಶ ಇದು ತಿಳಿದಿರಬಹುದು. ಏಕೆಂದರೆ, ಎಂದಾದರೂ ಉಪಾಧ್ಯಾಯರು ಪ್ರಶ್ನೆಯನ್ನುತ್ತರಿಸ ಹೇಳಿದರೆ ವಿದ್ಯಾರ್ಥಿಯು ಉತ್ತರದ ಕುರಿತು ಆಲೋಚಿಸುತ್ತಾ ತನ್ನನ್ನೆ ಮರೆತು ಬಿಡುವುದುಂಟು. ಅದೇ ರೀತಿ ಕಾರ್ಯತತ್ಪರ ವ್ಯಕ್ತಿಯು 'ಅಹಂ'ನ್ನು ಮರೆತು ಬಿಡುತ್ತಾನೆ. ಇದಾಗಲೇ ಸಾಫಲ್ಯವು ನಿಮ್ಮ ಉಜ್ವಲ ಭವಿಷ್ಯದ ಬಾಗಿಲನ್ನು ತಟ್ಟುವುದು.

ತೃತೀಯ ಸಿದ್ಧಾಂತ ಪ್ರೇಮ:— ಪ್ರೇಮವು ಸಾಫಲ್ಯವನ್ನು ಪಡೆಯಲು ಒಬ್ಬನೊಡನಿರುವ ಪ್ರಬಲಾಸ್ತ್ರ. ನೀವು ಪರರನ್ನು ಪ್ರೀತಿಸಿ ಆಗ ನಿಮ್ಮನ್ನೂ ಇತರರು ಪ್ರೀತಿಸುವರು. ಉದಾಹರಣೆಗೆ ಮನುಷ್ಯನ ಕೈಗಳನ್ನು ನೋಡಿ. ಕರಗಳು ಶರೀರದ ಎಲ್ಲಾ ಅಂಗಗಳೊಡನೆ ಸಖ್ಯದಿಂದಿರಬೇಕು. ತನ್ನ ದುಡಿತದಿಂದಲೇ ದೇಹದ ಇತರ ಭಾಗಗಳು ಲಾಭ ಪಡೆಯುತ್ತವೆಂದು ಅದು ಹೆಮ್ಮೆಪಟ್ಟು ಸುಮ್ಮನೆ ಕುಳಿತರೆ ಪರಿಸ್ಥಿತಿ ಏನಾದೀತು? ಅದು ಸ್ವತಃ ಸಾಯಬಹುದು ಮತ್ತು ಪರರನ್ನು ನೀರಲ್ಲಿ ಮುಳುಗಿಸಬಹುದು. ಎಂದಾದರೂ ತನ್ನ ಸಂಪಾದನೆಯಿಂದುಣ್ಣುವ ಭೋಜನವನ್ನು ಕೈ ಬಾಯಲ್ಲಿ ತುಂಬಿಸದೆ ತಾನೇ ತಿನ್ನುವೆನೆಂದರೆ ಕಾರ್ಯ ನಡೆಯದು. ಸಮಾಜ ಜೀವಿ ಮನುಷ್ಯನು ಇದೇ ರೀತಿ ಏಕಾಂಗಿಯಾಗಿ ಜೀವಿಸಲಾರ. ಪರರೊಂದಿಗೆ ಸಹ ಬಾಳ್ವೆಯಿಂದ ಜೀವಿಸಲೇ ಬೇಕಾಗುವುದು. ಈ ನೀತಿಯನ್ನೆ 'ಸಹಕಾರ' ಎನ್ನುವರು. ಇದಕ್ಕೆ ನಮ್ಮ ನಮ್ಮ ಹೃದಯದಲ್ಲಿರುವ ಪ್ರೇಮ ಭಾವನೆಯನ್ನು ಜಾಗೃತಿಗೊಳಿಸುವುದು. ಅರ್ಥಾತ್ ಸೌಹಾರ್ದಮಯ ಸಹ ಬಾಳ್ವೆಯನ್ನು ನಡೆಸುವುದು ಅಗತ್ಯ.

ಚತುರ್ಥ ಸಿದ್ಧಾಂತ ಪ್ರಸನ್ನತೆ:- ತನ್ನ ದುಡಿತದ ಫಲವೇನಾದೀತು ಎಂದು ಚಿಂತಿಸಬೇಡಿ. ಭವಿಷ್ಯದ ಚಿಂತೆಯನ್ನು ಮರೆತು ಭೂತಕಾಲದ ಚಿಂತೆ ಬಿಟ್ಟು ಬಿಡಿ. ಸಫಲತೆಯನ್ನು ಕುರಿತು, ಅಸಫಲತೆಯನ್ನು ಕುರಿತು ಮರೆತು ವರ್ತಮಾನದಲ್ಲಿ ನಿಮ್ಮ ಕೆಲಸವನ್ನು ಮಾಡುತ್ತಾ ಮೈ ಮರೆಯಿರಿ. ಉತ್ತಮ ಬೀಜದಲ್ಲಿ ಉತ್ತಮ ಫಲವು ದೊರಕುವುದು. ಅದಕ್ಕೆ ಪೃಥ್ವೀ, ಜಲ, ಪ್ರಕಾಶದ ಬಲವು ತನ್ನಿಂತಾನೇ ದೊರೆಯುವುದು. ನೀವು ಅದನ್ನು ಕಾರ್ಯ ತತ್ಪರರಾದಲ್ಲಿ ಸಾಫಲ್ಯದ ದಾರಿಯು ಸುಗಮವಾದೀತು. ಅಂಧಕಾರದಲ್ಲಿ ನೂರು ಮೈಲು ನಡೆಯಲು ನಿಮ್ಮೊಡನೆ ಹತ್ತು ಅಡಿ ತನಕ ಪ್ರಕಾಶ ಚೆಲ್ಲುವ ಬೆಳಕಿದ್ದರೆ ನಿಮಗೇತರ ಚಿಂತೆ? ನೀವು ಮುಂದರಿಯಿರಿ; ನಿಮಗೆ ಕತ್ತಲಲ್ಲಿ ಕಾಲಿಡುವ ಆವಶ್ಯಕತೆಯೇ ಇರಲಾರದು. ನೀವು ಸುಗಮವಾಗಿ ನಿನ್ನ ಗುರಿ ತಲುಪಬಹುದು.

ನೀವು ಸದೈವ ಕರ್ಮಚಿತ್ತನಾಗಿರಿ, ಆಗಲೇ ನಿಮ್ಮನ್ನು ಸಫಲತೆಯು ಅಟ್ಟಿಕೊಂಡು ಬಂದೀತು. ಮನುಷ್ಯನು ತನ್ನ ನೆರಳನ್ನು ಹಿಡಿಯಲು ಪ್ರಯತ್ನಿಸುತ್ತಾನೆ. ಇದು ಮರುಳತನ. ನೀವು ನೆರಳಿನೆಡೆಗೆ ಬೆನ್ನು ಹಾಕಿ ನಿಲ್ಲಿ, ಆಗ ನೆರಳು ನಿಮ್ಮ ಹಿಂದೆ—ಹಿಂದೆ ಬರುವುದು. ದುಡಿಯಿರಿ ಮೈ ಮರೆದು ದುಡಿಯಿರಿ. ನಿಮಗೆ ಸಾಫಲ್ಯವು ದೊರಕಿಯೇ ದೊರಕೀತು.

ಪಂಚಮ ಸಿದ್ಧಾಂತ. ನಿರ್ಭಯತೆ:— ಯಾವನ ಹೃದಯದಲ್ಲಿ ಹೆದರಿಕೆಯೆಂಬ ಭೂತವು ಮನೆಮಾಡಿಕೊಂಡಿರುವುದೋ ಅತನೆಂದಿಗೂ ಜೀವನದಲ್ಲಿ ಸಫಲನಾಗಲಾರ. ಆಲೋಚನೆಯಲ್ಲಿ, ಚಿಂತಿಸುವುದರಲ್ಲಿ, ಗಾಳಿಗೋಪುರವನ್ನು ಕಟ್ಟುವುದರಲ್ಲಿ ಅತನ ಜೀವನ ಮುಕ್ತಾಯವಾಗುವುದು. ಪಾರಿವಾಳವು ಬೆಕ್ಕಿನೆದುರು ಕಣ್ಮುಚ್ಚಿ ಕುಳಿತಿರುವುದನ್ನು ನೀವು ಕಂಡಿರಬಹುದು. ತಾನು ಬೆಕ್ಕನ್ನು ಕಾಣದಂತೆ ಬೆಕ್ಕೂ ತನ್ನನ್ನು ಕಾಣದು ಎಂದು ಅದು ತಿಳಿಯುವುದು. ಆದರೆ ಆಗುವುದು ಏನು? ಬೆಕ್ಕು ಪಾರಿವಾಳದ ಮೇಲೆರಗಿ ಪಾರಿವಾಳವನ್ನು ತನ್ನ ಹೊಟ್ಟೆಗೆ ನೂಕುತ್ತದೆ. ನಿರ್ಭಯತೆಯಿಂದ ಸಿಂಹವನ್ನು ವಶಮಾಡಬಹುದು. ಆದರೆ

(ಹನ್ನೆರಡನೇ ಪುಟ ನೋಡಿರಿ)

ನಿಮ್ಮ ಒಳಿತಿಗಾಗಿ
ಉಳಿತಾಯದ
ಮತ್ತೊಂದು ಆಕರ್ಷಕ ಯೋಜನೆ....

"ಕ್ಯುಮುಲೇಟಿವ್ ಡಿಪಾಸಿಟ್"
(ಸಂಚಯಿತ ಠೇವಣಿ)

ರೂಪಾಯಿ 10/- ಅಥವಾ ಅದೇ ಗುಣಕದ ಹೆಚ್ಚಳದಿಂದ ನೀವು ಠೇವಣಿಯನ್ನು ಇಡಬಹುದು.

ನಮೂದಿಸಿದ ಅವಧಿ	ತಿಂಗಳಿಗೆ ರೂ. 10/- ರಂತೆ ಒಟ್ಟು ಜಮೆಯಾದ ಮೊತ್ತ	ಅವಧಿಯ ಕೊನೆಯಲ್ಲಿ ಬಡ್ಡಿ ಸಮೇತ ಮರಳಿ ಪಡೆಯುವ ಮೊತ್ತ
ತಿಂಗಳು	ರೂಪಾಯಿ	ರೂಪಾಯಿ
12	120 . 00	123 . 50
24	240 . 00	254 . 50
36	360 . 00	393 . 50
48	480 . 00	539 . 00
60	600 . 00	700 . 00

ಅವಧಿಯ ಮುಂಚೆಯೇ ಬಡ್ಡಿ ಸಹಿತ ಠೇವಣಿ ವಾಪಸಾತಿಗೆ ಈ ಯೋಜನೆಯಲ್ಲಿ ಅವಕಾಶವಿದೆ.
ಹೆಚ್ಚಿನ ವಿವರಗಳಿಗೆ ನಮ್ಮ ಯಾವ ಶಾಖೆಯಲ್ಲಿಯೂ ವಿಚಾರಿಸಬಹುದು.

ಸಿಂಡಿಕೇಟ್ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮಣಿಪಾಲ.

ಶಾಖೆಗಳು: 200ಕ್ಕೂ ಮಿಕ್ಕಿ. ಸಾಧನಾ ಸಂಪತ್ತು: ರೂ. 70 ಕೋಟಿಗೂ ಮಿಕ್ಕಿದೆ.

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕ ಬೂಟಿಯನ್ನು ತಾ. 10.10.65ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ಶ್ವಾಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayurvedashram,
P. O. Chitrakot U. P.

ಆಕ್ರಮಣದ ಹಿನ್ನೆಲೆಯಲ್ಲಿ

ಪಾಕಿಸ್ತಾನದ ತುಚ್ಛ ದುರುದ್ದೇಶ

ಕಾಶ್ಮೀರವನ್ನು ಕಬಳಿಸುವ ತನ್ನ ಮೂಲಗುರಿಯನ್ನು ಪಾಕ್ ಬಿಟ್ಟುಕೊಟ್ಟಿಲ್ಲ !

ಪಾಕಿಸ್ತಾನವು ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಉ ಥಾಂಟ್ ಅವರಿಗೆ ಸಲ್ಲಿಸಿರುವ ಮೂರು ಅಂಶಗಳ ಕಾರ್ಯ ಸೂಚನೆಯಲ್ಲಿ ಹೊಸದೇನೂ ಇಲ್ಲ. ಕಳೆದ 18 ವರ್ಷಗಳಿಂದಲೂ ಕಾಶ್ಮೀರ ಸಮಸ್ಯೆಯ ಇತ್ಯರ್ಥಕ್ಕೆ ಆತಂಕ ವೊಡ್ಡಿದ ಅಂಶಗಳೇ ಈ ಕಾರ್ಯ ಸೂಚನೆಯಲ್ಲಿಯೂ ಇವೆ. ಕಾಶ್ಮೀರ ಸಮಸ್ಯೆಗೆ ಸಂಬಂಧಿಸಿದಂತೆ ಪಾಕಿಸ್ತಾನ್ ಸರ್ಕಾರದ ನಿಲುವಿನಲ್ಲಿ ಯಾವ ಬದಲಾವಣೆಯೂ ಆಗಿಲ್ಲ.

ಪಾಕಿಸ್ತಾನ ಸರ್ಕಾರವು ಉ ಥಾಂಟ್ ಅವರಿಗೆ ಸಲ್ಲಿಸಿರುವ ಕಾರ್ಯ ಸೂಚನೆಯಲ್ಲಿನ ಮೂರು ಮುಖ್ಯಾಂಶಗಳು ಈ ರೀತಿಯಿವೆ.

ಮೊದಲು ಯುದ್ಧ ವಿರಾಮ ಘೋಷಿಸಬೇಕು. ಬಳಿಕ ಪಾಕಿಸ್ತಾನ ಮತ್ತು ಭಾರತ ಕಾಶ್ಮೀರ ಪ್ರದೇಶದಿಂದ ತಮ್ಮ ತಮ್ಮ ಸೈನಿಕರನ್ನು ಹಿಂತೆಗೆದು ಕೊಳ್ಳಬೇಕು.

ಈ ಷರತ್ತುಗಳನ್ನು ಪೂರೈಸಿದ ಬಳಿಕ ವಿಶ್ವಸಂಸ್ಥೆಯು ೧೯೪೯ನೇ ವರ್ಷದ ಜನವರಿ ೫ನೇ ದಿನಾಂಕದ ಹಳೆಯ ನಿರ್ಣಯದ ಮೇರೆಗೆ ಕಾಶ್ಮೀರದಲ್ಲಿ ಜನಮತಗಣನೆ ನಡೆಯಬೇಕು. ಪಾಕಿಸ್ತಾನವು ಇದಕ್ಕಾಗಿ ಮೂರು ತಿಂಗಳ ಅವಧಿಯನ್ನು ನೀಡಿದೆ.

ಪಾಕಿಸ್ತಾನದ ಈ ಕಾರ್ಯಸೂಚನೆಯು ಅದು ಈ ಹಿಂದೆ ಮುಂದಿಡಿಸಿದ ಹಳೆಯ ಸೂಚನೆಯ ಪುನರಾವೃತ್ತಿಯಾಗಿದೆ.

ಭಾರತದ ಪರಮಾಧಿಕಾರ ಮತ್ತು ಪ್ರಾದೇಶಿಕ ಸಮಗ್ರತೆಗೆ ಬಾಧಕವಾಗುವ ಯಾವುದೇ ಸೂಚನೆಯನ್ನು ಭಾರತವು ಒಪ್ಪುವುದಿಲ್ಲವೆಂಬುದು ಪಾಕಿಸ್ತಾನಿಗಳಿಗೆ ಗೊತ್ತಿದ್ದರೂ ಅವರು ಜನಮತಗಣನೆಯ ಹಳೆಯ ರಾಗವನ್ನೇ ಹಾಡುತ್ತಿದ್ದಾರೆ. ಪಾಕಿಸ್ತಾನ ಸರ್ಕಾರದ ಈ ಕಾರ್ಯ ಸೂಚನೆಗಳು ಭಾರತದ ಪರಮಾಧಿಕಾರಕ್ಕೆ ಸವಾಲು ಹಾಕಿವೆ.

ಪ್ರಧಾನ ಮಂತ್ರಿ ಶ್ರೀ ಲಾಲ್‌ಬಹಾದ್ದೂರ್ ಶಾಸ್ತ್ರಿ ಅವರು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ಸೆಪ್ಟೆಂಬರ್ ೨ರ ಸಂದೇಶಕ್ಕೆ ಕಳುಹಿಸಿದ ಉತ್ತರದಲ್ಲಿ ಕದನ ವಿರಾಮ ರೇಖೆಗೆ ಸಂಬಂಧಿಸಿ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

'ನಾವು ಅನೇಕ ವರ್ಷಗಳಿಂದಲೂ ಕದನ ವಿರಾಮ ರೇಖೆಗೆ ಗೌರವ ಕೊಡುತ್ತಾ ಬಂದಿದ್ದೇವೆ. ಪಾಕಿಸ್ತಾನವು ಈ ರೇಖೆಗೆ ಯಾವ ನಿಷ್ಠೆಯನ್ನು ತೋರಿಸಿಲ್ಲ!

ಪ್ರಧಾನ ಕಾರ್ಯದರ್ಶಿ ಉ ಥಾಂಟ್ ಅವರು ತಮ್ಮ ವರದಿಯಲ್ಲಿ ಭಾರತವು ಶಾಂತಿ—ಸುವ್ಯವಸ್ಥೆ ಸ್ಥಾಪಿಸಲು ಕಾತರವಾಗಿದೆಯೆಂದು ಒಪ್ಪಿಕೊಂಡಿದ್ದಾರೆ. ಅವರು ಭದ್ರತಾ ಪರಿಷತ್ತಿಗೆ ಸಲ್ಲಿಸಿರುವ ವರದಿಯ ಕೆಲವು ಮುಖ್ಯಾಂಶಗಳು ಇವು:

'ಕಾಶ್ಮೀರದ ಕದನ ವಿರಾಮ ರೇಖೆಯನ್ನು ಕದನ ವಿರಾಮ ಒಪ್ಪಂದವನ್ನು ಇನ್ನು ಮುಂದೆ ಗೌರವಿಸುವುದಾಗಿ ಪಾಕಿಸ್ತಾನ್ ಸರ್ಕಾರದಿಂದ ನನಗೆ ಯಾವ ಆಶ್ವಾಸನವೂ ಬಂದಿಲ್ಲ. ವಿಶ್ವಸಂಸ್ಥೆಯಲ್ಲಿನ ಭಾರತದ ಪ್ರತಿನಿಧಿಗಳು ಭಾರತವು ಪಾಕಿಸ್ತಾನ ಸರ್ಕಾರದ ವಿರುದ್ಧ ಪ್ರತೀಕಾರ ಕ್ರಮಗಳನ್ನು ಕೈಗೊಳ್ಳುವಾಗ ಸಂಯಮದಿಂದ ವರ್ತಿಸುವುದೆಂದೂ ಕದನ ವಿರಾಮ ಒಪ್ಪಂದ ಮತ್ತು ಕದನ ವಿರಾಮ ರೇಖೆಯನ್ನು ಗೌರವಿಸುವುದಾಗಿಯೂ ಆಶ್ವಾಸನವಿತ್ತಿದ್ದಾರೆ. ಪಾಕಿಸ್ತಾನವು ಈ ರೀತಿ ಮಾಡಲು ಒಪ್ಪಿದರೆ ಮಾತ್ರ ತಾನು ಹಾಗೆ ಮಾಡಲು ಸಿದ್ಧವಾಗಿರುವುದಾಗಿ ಭಾರತ ತಿಳಿಸಿದೆ.

ಭಾರತವು ಮತ್ತೊಮ್ಮೆ ಶಾಂತಿ ಸ್ಥಾಪನೆಯೇ ತನ್ನ ಮುಖ್ಯ ಗುರಿಯಾಗಿದೆ ಎಂಬುದನ್ನು ಸ್ಪಷ್ಟಗೊಳಿಸಿದೆ.

ಈಗಿನ ಪರಿಸ್ಥಿತಿಯಲ್ಲಿ ಭಾರತೀಯ ಉಪಖಂಡ ಮತ್ತು ಸಮಗ್ರ ವಿಶ್ವದಲ್ಲಿ ಶಾಂತಿ ಸ್ಥಾಪಿಸಲು ಪಾಕಿಸ್ತಾನವು ಮೊದಲು ಕದನ ವಿರಾಮ ರೇಖೆಯ ಈಚೆಗೆ ಸಶಸ್ತ್ರ ಅತಿಕ್ರಮಣಕಾರರನ್ನು ಕಳುಹಿಸುವುದನ್ನು ಕೂಡಲೇ ನಿಲ್ಲಿಸಬೇಕು, ಮತ್ತು ಭಾರತೀಯ ಪ್ರದೇಶದಲ್ಲಿರುವ ತನ್ನ ಎಲ್ಲ ಅತಿಕ್ರಮಣಕಾರಿಗಳನ್ನು ಮತ್ತು ಸೈನಿಕರನ್ನು ಅಂತಾರಾಷ್ಟ್ರೀಯ ಗಡಿಯಿಂದ ಆಚೆಗೆ ಹಿಂತೆಗೆದುಕೊಳ್ಳಬೇಕು. ಪಾಕಿಸ್ತಾನವು ಮುಂದೆ ಇಂತಹ ದುಸ್ಸಾಹಸಗಳಲ್ಲಿ ತೊಡಗುವುದಿಲ್ಲವೆಂದು ಭಾರತಕ್ಕೆ ಭರವಸೆ ನೀಡಬೇಕು.

ಕಾಶ್ಮೀರ ಪ್ರದೇಶದಲ್ಲಿ ಪಶ್ಚಿಮ ಅಥವಾ ಪೂರ್ವರಾಷ್ಟ್ರಗಳ ಅಥವಾ ಈ ಎರಡು ವಿಭಾಗಗಳಿಗೆ ಸೇರಿದ ಸಂಯುಕ್ತ ಸೇನಾ ಬಲವನ್ನು ನೆಲೆಗೊಳಿಸಬೇಕೆಂಬ ಕಾರ್ಯ ಸೂಚನೆಯು ಅನೇಕ ಬಾರಿ ಚರ್ಚೆಗೆ ಬಂದಿದೆ. ಪರಮಾಧಿಕಾರವುಳ್ಳ ಯಾವುದೇ ರಾಷ್ಟ್ರವು ಇಂತಹ ಸೂಚನೆಯನ್ನು ಎಂದೂ ಒಪ್ಪಲಾರದು. ಭಾರತ ಪಾಕಿಸ್ತಾನ ಸಂಬಂಧವಾದ ವಿಶ್ವಸಂಸ್ಥೆಯ ಆಯೋಗಕ್ಕೂ ಈ ಕಾರ್ಯಸೂಚನೆಗೆ ಮೂಲಭೂತ ಆಕ್ಷೇಪಗಳಿವೆಯೆಂದು ಚೆನ್ನಾಗಿಗೊತ್ತಿತ್ತು.

ದಿವಂಗತ ಪ್ರಧಾನ ಮಂತ್ರಿ ನೆಹರೂ ಅವರು ಒಮ್ಮೆ ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಹೀಗೆ ಹೇಳಿದ್ದರು.

ಜಮ್ಮು ಕಾಶ್ಮೀರದಲ್ಲಿ ವಿಶ್ವಸಂಸ್ಥೆಯ ಪೋಲೀಸ್ ಪಡೆಯನ್ನಿಡುವ ಪ್ರಶ್ನೆಯೇ ಉದ್ಭವಿಸಲಾರದು. ಪಾಕಿಸ್ತಾನವು ಸರ್ಕಾರವು ೧೯೪೮ರ ಆಗಸ್ಟ್ ೧೯ರಂದು ಭಾರತ ಪಾಕಿಸ್ತಾನ ಸಂಬಂಧವಾದ ವಿಶ್ವಸಂಸ್ಥೆಯ ಆಯೋಗಕ್ಕೆ ಪತ್ರ ಬರೆದು: ಕಾಶ್ಮೀರದಿಂದ ತಾನು ಹಿಂತೆಗೆದುಕೊಂಡಿರುವ ಸೈನಿಕರ ಸ್ಥಳದಲ್ಲಿ ಅಂತಾರಾಷ್ಟ್ರೀಯ ಅಥವಾ ಅಲಿಪ್ತ ರಾಷ್ಟ್ರಗಳ ಸೇನಾಬಲವನ್ನಿಡಲು ಉದ್ದೇಶಿಸಿದೆಯೆ? ಎಂದು ಕೇಳಿತು. ವಿಶ್ವಸಂಸ್ಥೆಯ ಆಯೋಗಕ್ಕೆ ಪಾಕಿಸ್ತಾನ ಸರ್ಕಾರವು ಕಳುಹಿಸಿರುವ ಉತ್ತರದಲ್ಲಿ ಈ ರೀತಿ ತಿಳಿಸಿದೆ.

ತನ್ನ ಬಳಿಯಲ್ಲಿ ಅಂತಹ ಯಾವುದೇ ಕಾರ್ಯಸೂಚನೆಯಿಲ್ಲವೆಂದು ಆಯೋಗವು ತಿಳಿಸಿದೆ. ಭಾರತೀಯ ಪ್ರದೇಶದಲ್ಲಿ ವಿದೇಶಿ ಸೇನೆಯನ್ನಿಡುವ ಪ್ರಶ್ನೆಯೇ ಉದ್ಭವಿಸಲಾರದು ಎಂದು ಸ್ಪಷ್ಟಗೊಳಿಸಿತು.

ತನ್ನ ಆಯೋಗವೊಂದು ಈಗಾಗಲೇ ತಿರಸ್ಕರಿಸಿರುವ ಸೂಚನೆಯನ್ನು ಪುನರುಜ್ಜೀವನಗೊಳಿಸಲು ವಿಶ್ವಸಂಸ್ಥೆಯು ಪಾಕ್ ಸರ್ಕಾರಕ್ಕೆ ಅನುಮತಿ ಕೊಡಲು ಸಾಧ್ಯವಿಲ್ಲವಾಗಿದೆ.

ದಿವಂಗತ ಪ್ರಧಾನ ಮಂತ್ರಿ ನೆಹರೂ ಅವರು ಇದಕ್ಕೂ ಮುಂಚೆ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಮಾತನಾಡುತ್ತಾ 'ಹಿಂದೆ ಕೆಲವರು ಕಾಶ್ಮೀರದಲ್ಲಿ ಯೂರೋಪಿಯನ್ ಅಥವಾ ಅಮೇರಿಕನ್ ಸೇನೆಯನ್ನು ಇಂದಿರಬೇಕೆಂದು ಸೂಚಿಸಿದರು; ಭಾರತದ ಮಟ್ಟಿಗೆ ಹೇಳುವುದಾದರೆ ಭಾರತವು ಯಾವುದೇ ಸಂದರ್ಭದಲ್ಲಿಯೇ ಆಗಲಿ ವಿದೇಶಿ ಸೈನಿಕರು ತನ್ನ ಪ್ರದೇಶದಲ್ಲಿ ಪದಾರ್ಪಣ ಮಾಡಲು ಅವಕಾಶ ನೀಡಲಾರದು" ಎಂದು ಹೇಳಿದರು.

ಶ್ರೀ ಶೇಖ ಅಬ್ದುಲ್ಲಾ ಅವರು ೧೯೫೫ರಲ್ಲಿ ಜಮ್ಮು—ಕಾಶ್ಮೀರದಲ್ಲಿ ವಿದೇಶಿ ಸೇನೆಯನ್ನಿಡುವ ಸೂಚನೆಯನ್ನು ಖಂಡಿಸುತ್ತ ಇದು ದೇಶದ ಜನತೆಗೆ ಅವಮಾನಕರವೆಂದು ತಿಳಿಸಿದರು. ಇಂತಹ ಕ್ರಮದಿಂದಾಗಬಹುದಾದ ಪರಿಣಾಮಗಳನ್ನು ವಿಶ್ಲೇಷಿಸುತ್ತ, ಅವರು, ಭಾರತದಲ್ಲಿ ವಿದೇಶಿ ಸೇನೆಗಳನ್ನಿಟ್ಟುಕೊಳ್ಳುವುದು ಹಿಂಬಾಗಿಲಿನಿಂದ ಭಾರತವನ್ನು ಪ್ರವೇಶಿಸಲು ವಿದೇಶೀಯರಿಗೆ ಅವಕಾಶಕಲ್ಪಿಸಿಕೊಟ್ಟಂತೆ ಎಂದು ಅಭಿಪ್ರಾಯಪಟ್ಟರು.

ಶೇಖ್ ಅಬ್ದುಲ್ಲಾ ಅವರು ಇನ್ನೂ ಮುಂದುವರಿದು ವಿದೇಶೀ ಸೈನಿಕರು ಯಾವುದೇ ನೆವದಿಂದ ಭಾರತಕ್ಕೆ ಆಗಮಿಸಿದರೆ ಅವರು ಭಾರತದಲ್ಲಿ ಖಾಯಂ ಆಗಿಯೇ ನೆಲೆಸುತ್ತಾರೆ. ಕಾಶ್ಮೀರದ ಭೌಗೋಲಿಕ ಪರಿಸ್ಥಿತಿಯು ಇದನ್ನು ಸಮರ್ಥಿಸುತ್ತದೆ.

......ಕೋರಿಯನ್ ಯುದ್ಧದ ಬಳಿಕ, ಕಾಶ್ಮೀರದ ಮೃದುವಾದ ನೆಲದಲ್ಲಿ ವಿದೇಶಿ ಸೇನೆ ತಳವೂರಿದರೆ ಕಾಶ್ಮೀರ ರಾಜ್ಯವು ಅಂತಾರಾಷ್ಟ್ರೀಯ ವಿವಾದವುಳ್ಳ ರಾಜ್ಯವಾಗುವುದೆಂದು ಹೇಳಿದರು.

ಕಾಶ್ಮೀರ ಪ್ರದೇಶದಲ್ಲಿ ಶಾಂತಿ ನೆಲೆಸಲು ಕದನ ವಿರಾಮವು ಸಮಗ್ರ ಸಮಸ್ಯೆಯ ಇತ್ಯರ್ಥದ ಒಂದು ಭಾಗವಾಗಬೇಕು ಹಾಗೂ ಜನಮತಗಣನೆಯ ಆಶ್ವಾಸನೆ ನೀಡುವ ಒಪ್ಪಂದ ಏರ್ಪಡಬೇಕೆಂದು ಪಾಕಿಸ್ತಾನವು ಉ ಥಾಂಟರಿಗೆ ತಿಳಿಸಿದೆ.

ಕಾಶ್ಮೀರದ ರಾಜಕೀಯ ಸ್ಥಾನಮಾನಗಳನ್ನು ಇಂದಿನ ವಿವಾದದೊಂದಿಗೆ ಬೆಳೆಸಲು ಯತ್ನಿಸಿ ಪಾಕಿಸ್ತಾನವು ವಿಶ್ವಸಂಸ್ಥೆಯ ಇಂದಿನ ಸಂಧಾನ ಯತ್ನವನ್ನು ಉದ್ದೇಶಪೂರ್ವಕವಾಗಿಯೇ ಇದರಿಂದ ವಿಫಲಗೊಳಿಸಿಯಾಯಿತು.

ರಾಜಕೀಯವಾಗಿ ನಮ್ಮ ನಿಲುವು ಸ್ಪಷ್ಟವಾಗಿದೆ. ಜಮ್ಮು-ಕಾಶ್ಮೀರವು ಭಾರತೀಯ ಒಕ್ಕೂಟದ ಒಂದು ಅವಿಭಾಜ್ಯ ಅಂಗವಾಗಿದೆ. ಬಲ ಪ್ರಯೋಗದಿಂದ ಈ ನಿಲುವನ್ನು ಬದಲಾಯಿಸಲು ಸಾಧ್ಯವಿಲ್ಲ. ಪಾಕಿಸ್ತಾನ ನಮ್ಮ ಈ ನಿಲುವನ್ನು ಪ್ರಶ್ನಿಸಿದರೂ ಭಾರತಕ್ಕೆ ಬಲಪ್ರಯೋಗದ ಬೆದರಿಕೆ ಹಾಕಿ ತನ್ನ ಉದ್ದೇಶ ಸಾಧಿಸಿಕೊಳ್ಳಲಾರದು. ಪಾಕಿಸ್ತಾನವು ಕಾಶ್ಮೀರವನ್ನು ಕಬಳಿಸಲು ಆಕ್ರಮಣ ಮಾರ್ಗವನ್ನೇ ಅನುಸರಿಸಿತು. ಆದರೆ ಈ ಆಕ್ರಮಣವನ್ನು ಸರ್ವಶಕ್ತಿಯಿಂದ ಹಿಮ್ಮೆಟ್ಟಿಸಲಾಗುವುದೆಂಬುದನ್ನು ಅದು ನೆನಪಿಟ್ಟುಕೊಳ್ಳಬೇಕು.

ಕಾಶ್ಮೀರದಲ್ಲಿ ತಾನು ನಡೆಸಿರುವ ಆಕ್ರಮಣ ಕೃತ್ಯಗಳ ಮೇಲೆ ಮುಸುಕೆಳೆಯಲು ಪಾಕಿಸ್ತಾನಿಗಳು, ಕಾಶ್ಮೀರದ ಜನತೆಗಾಗಿ ಸ್ವಯಂ ನಿರ್ಣಯಾಧಿಕಾರದ ಹಕ್ಕನ್ನು ಕೇಳುತ್ತಿದ್ದಾರೆ! ಪಾಕಿಸ್ತಾನದ ದುರುದ್ದೇಶ ಇದರಿಂದ ಸ್ಪಷ್ಟವಾಗುತ್ತದೆ. ಪಾಕಿಸ್ತಾನವು ತಾನು ಆಕ್ರಮಿಸಿರುವ ಕಾಶ್ಮೀರದ ಜನರಿಗೆ, ಪಖ್ತೂನಿಗಳಿಗೆ, ಬಲೂಚಿಗಳಿಗೆ ಸ್ವಯಂ ನಿರ್ಣಯಾಧಿಕಾರದ ಹಕ್ಕನ್ನು ನೀಡಿದೆಯೇ? ಪಾಕಿಸ್ತಾನದ ಬಳಿಯಲ್ಲಿ ಈ ಪ್ರಶ್ನೆಗೆ ಉತ್ತರವಿಲ್ಲದಾಗಿದೆ.

ಪಾಕಿಸ್ತಾನವು ಸಮಯ ಸಿಕ್ಕಾಗಲೆಲ್ಲ ಜನಮತಗಣನೆಯ ಪ್ರಶ್ನೆಯನ್ನು ಮುಂದೊತ್ತುತ್ತಿದೆ. ಭಾರತ— ಪಾಕಿಸ್ತಾನ ಸಂಬಂಧವಾದ ವಿಶ್ವಸಂಸ್ಥೆಯ ಆಯೋಗವು ೧೯೪೮ರ ಡಿಸೆಂಬರ್ ೧೧ರಂದು ಭ

(ಹನ್ನೊಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಮತ್ತು ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್
ವ್ಯವಹಾರಗಳಿಗೆ ತನ್ನ 52 ಶಾಖೆಗಳಿಂದ ಹಬ್ಬಿರುವ
"ವಿಜಯ ಬ್ಯಾಂಕಿ"ನಲ್ಲಿ ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 5½%ರಿಂದ 8% ವರೆಗಿನ ಬಡ್ಡಿ ದರ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4½% ಬಡ್ಡಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್,
ರಿ. ಆಫೀಸು— "ವಿಜಯ ಬ್ಯಾಂಕ್ ಬಿಲ್ಡಿಂಗ್",
ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3

ಚಾರುಚರಿಯನ

ಕದನ ತಯಾರಿಗೆ ಕದನ ವಿರಾಮವೆ?

ಸಪ್ಟಂಬರ ೨೩ನೇ ತಾರೀಕು. ಪಾಕ್ ಅತಿಕ್ರಮದ ವಿರುದ್ಧ ಭಾರತ ಕೈಗೊಂಡ ಕಾರ್‍ಯಾಚರಣೆ ತೊಡಗಿ ಬರಿಯ ಮೂರು ವಾರಗಳಾಗಿ ಕಳೆದಿಲ್ಲ.

ಕಾಶ್ಮೀರವನ್ನು ಕಬಳಿಸುವ ಮಹತ್ವಾಕಾಂಕ್ಷಿ ಪಾಕಿಸ್ತಾನದ ಯೋಜನೆಗಳೆಲ್ಲವೂ ಬುಡ ಮೇಲ ಗಿದ್ದುವು ಈ ವೇಗ ದಲ್ಲೇ ಶರಣಾಗತಿ ಬರುವುದಕ್ಕೆ ಶುಷ್ಕ ಗೌರವದ ಪ್ರಶ್ನೆ ಅಡ್ಡ ಬರುತ್ತದೆ. ಎಂತಾದರೂ ಒಮ್ಮೆಗೆ ಸಮರ ವಿರಾಮವಾದರೆ ಸಾಕು; ಇದಕ್ಕೆ ತನ್ನ ಗೆಳೆಯ ಅಮೆರಿಕೆಯು ಮುಂದೆ ಬಂದರೆ ತನಗೆ ಒಳ್ಳೆಯದು ಎಂದು ಅಯ್ಯೂಬಖಾನರ ಕಳಕಳಿಯ ಮೊರೆ.

ಆದರೆ, ಜಾನ್ಸನ್ ಪಾಕಿನೊಡನೆ ತನಗಿರುವ ಪಕ್ಷಪಾತವನ್ನು ಪ್ರತ್ಯಕ್ಷವಾಗಿ ತೋರಿಸಲು ಸಿದ್ಧರಿಲ್ಲ. ಚೀನೀಯ ಹೆಬ್ಬಾವಿನತ್ತ ವಾಲಿದ ಪಾಕ್ ಸರ್ಪದ ಮೇಲೆ ಅದಕ್ಕೆ ನೆರಳಿತ್ತ ಅಮೆರಿಕನ್ ಗೋಳಿಮರಕ್ಕೇನೇ ಪೂರ್ಣ ನಂಬಿಕೆಯಿಲ್ಲ.

ಜಾನ್ಸನ್ನರ ಕಟು ನುಡಿ—ಸಾಧ್ಯವಿಲ್ಲ. ಸಂಯುಕ್ತರಾಷ್ಟ್ರ ಸಂಘದ ಯಾವ ಕ್ರಮಕ್ಕಾದರೂ ಸರಿಯೇ, ನಾವು ಬೆಂಬಲ ಕೊಡುತ್ತೇವೆ.

ಅಳಿಯ ಅಯೂಬ ಭುಟ್ಟೋ ಅನ್ಯತ್ರಗತಿ ಕಾಣದೆ ಚೀನೀ ಮಾವನ ಮುಖ ನೋಡಿದರು.

ಮಾವ ಗುಡುಗಿದ- ಸಿಕ್ಕಿಂ ಅಂತಾರಾಷ್ಟ್ರೀಯ ಗಡಿಯ ಚೀನೀ ಭಾಗದಲ್ಲಿ ಭಾರತ ಸೇನಾ ನೆಲೆ ಸ್ಥಾಪಿಸಿದೆ. ಅದನ್ನು ೭೨ ತಾಸುಗಳೊಳಗೆ ಹಿಂತೆಗೆದುಕೊಳ್ಳದೆ ಹೋದರೆ....

ಭಾರತದ ಜನಕೋಟಿ ಬೆದರಲಿಲ್ಲ. ೧೯೬೨ರಲ್ಲಿ ಚೀನೀಯರು ಎಚ್ಚರಿಕೆಯಿತ್ತು ಆಕ್ರಮಣ ಮಾಡಲಿಲ್ಲ, ಸ್ವಾತಂತ್ರ್ಯ ಮತ್ತು ಸಮಗ್ರತೆಗಳ ರಕ್ಷಣೆಯನ್ನು ಯಾವ ಬೆಲೆ ತೆತ್ತಾದರೂ ಮಾಡುವುದು ಭಾರತೀಯರ ದೃಢ ಪ್ರತಿಜ್ಞೆ.

ಭಾರತೀಯ ಹಿಂದೂ ಇರಬಹುದು, ಮುಸ್ಲಿಮನಿರಬಹುದು, ಸಿಕ್ಖನಿರಬಹುದು, ಕ್ರೈಸ್ತನಿರಬಹುದು—ಅಥವಾ ಮತ್ತಾವ ಕೋಮಿಗಾದರೂ ಸೇರಿದವನಿರಬಹುದು. ಆದರೆ ಅವನು ಮೊತ್ತಮೊದಲು ಭಾರತೀಯ. ಭಾರತೀಯ ರಕ್ಷಣೆಯಿಂದಲೇ ಆತನ ಜೀವನ. ರಾಷ್ಟ್ರಪುರುಷ ನೆಮ್ಮದಿಯಿಂದಿದ್ದರೆ ತಾನೇ ರಾಷ್ಟ್ರೀಯನಿಗೆ ನೆಮ್ಮದಿ! ೪೫ ಕೋಟಿ ಕಂಠಗಳು ಬೊಬ್ಬಿಟ್ಟುವು:

ನಾವು ನೆಲೆಗಳನ್ನು ಚೀನೀ ಪ್ರದೇಶದಲ್ಲಿ ಸ್ಥಾಪಿಸಿಲ್ಲ; ಅದುದರಿಂದ ಅವನ್ನು ಕೀಳುವಂತೆಯೂ ಇಲ್ಲ. ನಿಷ್ಪಕ್ಷಪಾತಿ ನಿರೀಕ್ಷಕರಿಂದ ಪರಿಶೀಲನೆ ನಡೆಸಲು ನಾವು ಸಿದ್ಧ. ಅನ್ಯಾಯವಾಗಿ ನಮ್ಮ ಮನೆಬಾಗಿಲಲ್ಲಿ ಯುದ್ಧದ ಬೇಗೆ ಉರಿಸುವುದಾದರೆ, ಅದನ್ನು ನಂದಿಸುವ ಆದ್ಯ ಪಣ ನಮ್ಮದು!

ಜೀಯ್—ಭಾರತೀಯ, ನಿನ್ನ ಕೆಚ್ಚು ಆರಿಲ್ಲ. ಅರಿದಳ ತುಳಿಯುವ ನಿನ್ನ ಶಕ್ತಿ ಅಜೇಯವಾಗಲಿ....

ಚೀನೀಯ ಅಲ್ಟಿಮೇಟಂಗೆ ಮತ್ತೊಂದು ಅಲ್ಟರೇಶನ್....ಭಾರತೀಯರಿಗೆ ರಾಣೆ ಕೀಳಲು ಮತ್ತೆ ಮೂರು ದಿನಗಳ ಅವಕಾಶದ ಕೊಡುಗೆ....?

ಭಾರತೀಯರ ಮೇಲೆ ಚೀನೀಯ ಹೆಬ್ಬಾವಿಗೆ ಅದೆಷ್ಟು ಕರುಣೆ.

ಯುಥಾಂರು ಸಂಯುಕ್ತರಾಷ್ಟ್ರ ಸಂಘಕ್ಕೆ ನೀಡಿದ ವರದಿಯ ಬಗ್ಗೆ ಅದು ಯಾವ ಕ್ರಮ ಕೈಗೊಳ್ಳುತ್ತದೆ? ತನ್ನ ಬಾಯ ಬಳಿ ತಿರುಗುತ್ತಿರುವ ಪಾಕ್ ಸರ್ಪದ ವಿಷದ ಹಲ್ಲು ಮುರಿದರೂ ಹೆಡೆಯಿದೆಯಲ್ಲಾ? ಅದಾದರೂ ಉಳಿದೀತೆ? ಭಾರತ ಹೆದರಿ ಪಾಕಿಸ್ತಾನದಿಂದ ಸೇನೆ ಹಿಂದೆ ಕರೆದೀತೆ? ಅಮೆರಿಕೆ-ರಷ್ಯಗಳು ಏನು ಹೇಳಿಯಾವು? ಕಾದು ನೋಡುವ ಹವಣಿಕೆ!

ಭಾರತೀಯ ಸೇನೆಯು ತನ್ನ ಮಂಕಲವು ಕುರಿಗಳನ್ನು ಕದ್ದೊಯ್ದಿತು! ಅದಕ್ಕಾಗಿ ಭಾರೀ ಪ್ರತಿಭಟನೆ!—ಜಾಗತಿಕ ಮುಖಭಂಗವಾಗದಂತಿರಬೇಕಾದರೆ, ಪಾಕಿಸ್ತಾನಕ್ಕೆ ಸಹಾಯ ಮಾಡಬಾರದು ಎಂಬ ವಿವೇಕೋದಯ! ಅಳಿಯ ತನ್ನ ಹಿಡಿತದಲ್ಲಿಯೇ ಇಲ್ಲವಲ್ಲಾ? ಆತನ ಹತ್ತವರೂ ಪಾಲಕರೂ ಒಂದು ಕಣ್ಣು ಇಟ್ಟಿದ್ದಾರೆ...ಬೆಳೆಸಿ ಬಂದವನು ಅವನು!

ಅಯ್ಯೂಬರು ಏನು ಮಾಡಬೇಕು?

ಭಾರತ—ಪಾಕಿಸ್ತಾನಗಳು ಬುಧವಾರ ಮಧ್ಯಾಹ್ನ ೧೨-೩೦ಕ್ಕೆ ಯುದ್ಧವನ್ನು ನಿಲ್ಲಿಸಬೇಕು. ಅನಂತರ ಎಲ್ಲಾ ಪಡೆಗಳೂ ೧೯೬೫ರ ಆಗಸ್ಟ ೫ರ ಮೊದಲಿಗೆ ತಾವಿದ್ದ ರಾಣೆಗಳಿಗೆ ಹಿಂತಿರುಗಬೇಕು. ಬಾಕಿ ವಿಚಾರ ಮುಂದಿನಿಂದ....

ಅಯ್ಯೂಬರು ಒಮ್ಮೆಗೆ ಉಸಿರು ಬಿಟ್ಟರು.... ಅವರ ಪ್ಯಾಟನ್, ಶರ್ಮನ್ ಟ್ಯಾಂಕುಗಳೆಲ್ಲ ನಾಶವಾಗಿ, ಕದನ ಕಣಕ್ಕೆ ರಿಜರ್ವ ಇಟ್ಟ ಟ್ಯಾಂಕನ್ನು ತರಬೇಕಾಗಿ ಬಂದಿತ್ತು. ವಿಮಾನಗಳೂ ಸಾಕಷ್ಟು ಪುಡಿಯಾಗಿದ್ದುವು.... ಆದರೂ ಪಾಕಿಸ್ತಾನಿಗಳಿಗೆ ಯುದ್ಧ ಬೇಕು—ಕಾಶ್ಮೀರವೂ ಬೇಕು. ಕೊಡುವವರಿದ್ದರೆ ಅವರಿಗೆ ಇಡಿಯ ಜಗತ್ತೂ ಬೇಕು.

ಯುಥಾಂರ ಮುಂದೆ ಸ್ಪಷ್ಟವಾಗಿ ಸಮರ ವಿರಾಮವನ್ನು ನಿರಾಕರಿಸಿದ, ಶರ್ತಗಳನ್ನು ಹೇರಿದ ಅಯ್ಯೂಬಖಾನ್ ಒಮ್ಮೆಲೇ ಭದ್ರತಾ ಸಮಿತಿಯ ಗೊತ್ತುವಳಿಯನ್ನು ಒಪ್ಪುವುದು ಹೇಗೆ? ಅದರಲ್ಲೂ ತಮ್ಮದೇ ಮೇಲುಗೈ ಸಮರರಂಗದಲ್ಲಿ ಎಂದು ಟಂಬಡಿ ಬಾರಿಸಿದವರು, ಯುದ್ಧವನ್ನು ಸಾರಿದವರು...! ಕಾಶ್ಮೀರವೆಂಬ ಶಬ್ದವನ್ನು ಹೇಗಾದರೂ ಗೊತ್ತುವಳಿಯಲ್ಲಿ ತಾರಬಾರದಾಗಿತ್ತೇ ಎಂಬ ಕಸಿವಿಸಿ ಅವರಿಗೆ...

ಭಾರತೀಯರ ದೃಢ ಪ್ರತಿಜ್ಞೆ, ಅದಕ್ಕೆ ವಿಶಾಲ ಜಗತ್ತಿನ ನೈತಿಕ ಬೆಂಬಲ ಕಂಡುಕೊಂಡ ಕೆಂಪು ಚೀನಾ ಸಾರಿತು: ಭಾರತೀಯರು ತಮ್ಮ ರಾಣೆಗಳನ್ನು ತಾವೇ ಕಿತ್ತುಕೊಂಡು ಹೋಗಿದ್ದಾರೆ. ತಾನು ಬರೆದ ಪದ್ಯಕ್ಕೆ ತಾನೇ ಅರ್ಥವನ್ನೂ ಹೇಳಿತು. ಪಾಪ, ತಿಳಿಸಿರಬಹುದು: ಹೀಗೆಯೇ ಮಾಡು. ನೋಡೋಣ ಮುಂದೆ... ನಮ್ಮ ಸುಖವಿಲ್ಲ. ನೀನೂ ಭಾರಿ ಸೋತಿದ್ದೀಯೊ? ನಿನಗೆ ಕೈಕೊಟ್ಟರೆ, ನನ್ನದೂ ಸಟ್ಟು ಹೋದೀತು. ಆದರೂ ಭಾರತಕ್ಕೆ ಕಿರುಕುಳ ಕೊಡುತ್ತಲಿರುವೆ.

ಅಯೂಬರೀಗ ಮುಂಗಾಣದಾದರು. ತನ್ನ ಎರಡು ಕೈ ಭುಟ್ಟೋರನ್ನು ಕಳಿಸಿದರು ಸಂದೇಶದೊಂದಿಗೆ ಸಂಯುಕ್ತರಾಷ್ಟ್ರ ಸಂಸ್ಥೆಗೆ.

ಭುಟ್ಟೋಗೆ ಮೊದಲೇ ಭಾರತದ ಪ್ರತಿಕ್ರಿಯೆ ಅಲ್ಲಿ ಮುಟ್ಟಿತ್ತು. ಪಾಕಿಸ್ತಾನ ಒಪ್ಪುವುದಾದಲ್ಲಿ ೨೪ ತಾಸುಗಳ ಪೂರ್ವ ಸೂಚನೆಯೊಂದಿಗೆ ಕದನ ವಿರಾಮಕ್ಕೆ ಆಕ್ಷೇಪವಿಲ್ಲ.

ಇದು ಸಾಂಕೇತಿಕ. ಯುಥಾಂರೊಡನೆ ಹಿಂದೆಯೇ ಭಾರತವು ಸಮರ ವಿರಾಮಕ್ಕೆ ನಿಶ್ಶರ್ತ ಸಮ್ಮತಿ ನೀಡಿತ್ತು. ಶರ್ತ ಹೇರಿದ್ದ ಪಾಕಿಸ್ತಾನದ ಮೇಲೆಯೇ ಭದ್ರತಾ ಸಮಿತಿಯ ಗೊತ್ತುವಳಿಯ ಕ್ರೂರ ದೃಷ್ಟಿ.

ಭುಟ್ಟೊ ಬಯಕೆಯಂತೆ ಮತ್ತೆ ಸಂಯುಕ್ತ ರಾಷ್ಟ್ರ ಸಂಘದ ಸಭೆ—ಭುಟ್ಟೋ ಆರಣ್ಯರೋದನ... ....ಕಾಶ್ಮೀರದ ಮೇಲೆ ತಮಗೂ ಅಧಿಕಾರವಿದೆಯೆಂಬುದನ್ನು ಹೇಗಾದರೂ ತೋರಿಸುವ ಹೇರಾಸೆ—ತಣ್ಣೀರು....

ಕೊನೆಗೂ ಭುಟ್ಟೋ ನಿರಾಶರಾದರು; ಅಯೂಬರಿಂದ ತಂದಿದ್ದ ಒಂದು ಸಂದೇಶವನ್ನು ಅನಿವಾರ್ಯ ಮುಂದಿಟ್ಟರು. ಗೊತ್ತುವಳಿಯು ನಮಗೆ ಸಮಾಧಾನಕರವಾಗಿಲ್ಲ. ಆದರೂ ಶಾಂತಿಪ್ರಿಯ ಪಾಕಿಸ್ತಾನವು ಶಾಂತಿ ಸ್ಥಾಪನೆಯ ಉದ್ದೇಶದಿಂದ ಒಪ್ಪುತ್ತದೆ........

ಕೊನೆಗೂ ಅಯ್ಯೂಬರು ನಿಶ್ಶರ್ತವಾಗಿ ಕದನ ವಿರಾಮಕ್ಕೆ ಒಪ್ಪಿದರು! ತಾವು ಕಟ್ಟಿಕೊಂಡಿದ್ದ ಕನಸಿನ ಗೋಪುರ ತನ್ನ ಮುಂದೆಯೇ ಉರುಳಿ ಹೋಗುವುದನ್ನು ಕಂಡರು.

ಹೆಚ್ಚು ಕಡಿಮೆ—ಏನೇ ಇರಲಿ ೨೩ರ ಮುಂಜಾನೆ ೩-೩೦ರಿಂದ ಸಮರ ವಿರಾಮವಾಯಿತು.

ಮುಂದೇನು?

ಭಾರತದೊಡನೆ ಶಾಂತಿ ಸ್ನೇಹದಿಂದಿ

(ಹದಿನೆರಡನೇ ಪುಟ ನೋಡಿರಿ)

ದಿ ವಿಜಯಾ ಬೇಂಕ್, ಲಿಮಿಟೆಡ್, ಕಾರ್ಕಳ.

ರಿಜಿಸ್ಟರ್ಡ್ ಆಫೀಸು: ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡದಕ್ಕೆ ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಇನ್ನು ಕೆಲವರು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದಲೂ, ಸದ್ರಿಯವರಿಗೆ-ಪ-ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬೇಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಾರೀಕು 8—10—1965ರ ಒಳಗೆ ಬೇಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ, ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾರೀಕು 9—10—1965ರಲ್ಲು ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು. ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಮ್ಮಂದ ಬೇಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ.

ಸಾಲದ ಜಂಜಾತ್ರ ನಂಬರು	ಸಾಲಗಾರನ ಹೆಸರು ಮತ್ತು ವಿಳಾಸ.	ಮೊಬಲಗು ರೂ. — ಪೈ
541/63	ಶ್ರೀ ಕೆ. ವಾಸುದೇವ ರಾವ್, ವೆಂಕಟಾಚಲಯ್ಯರ ಮಗ, ರಿಟಾಯರ್ಡ್ ಟೀಚರ್, ಕಡಂದಲೆ ಗ್ರಾಮ, ಪೋಸ್ಟು ಕಡಂದಲೆ	87-60
557/63	ಶ್ರೀಮತಿ ಲಲಿತಾ ಸಡ್ತಿ, ಸಂಕಯ ಸೆಟ್ರ ಮಗಳು, ಬಾಳೆಮನೆ, ಕೊಳಕೆ ಇರ್ವತ್ತೂರು ಗ್ರಾಮ, ಪೋಸ್ಟು ಕೊಳಕೆ ಇರ್ವತ್ತೂರು.	145-10
120/64	ಶ್ರೀ ಅದಮ್ ಸಾಹೇಬ ಶೇಖ್ ರಹಿಮಾನರ ಮಗ, ಮಾಪಿಲ್ ಮನೆ, ದುರ್ಗಾ ತೆಳ್ಳಾರ್ ಗ್ರಾಮ, ಪೋಸ್ಟು ತೆಳ್ಳಾರು	30 .. 00
162/64	ಶ್ರೀ ಸಂಕಪ್ಪ ಪೂಜಾರಿ, ಅಣ್ಣಪ್ಪ ಪೂಜಾರಿರ ಮಗ, ಕೆಮ್ಮಣ್ಣು ಗುಂಡಿ, ಕಾರ್ಕಳ	72 — 70
254/64	ಶ್ರೀ ಸೋಮಪ್ಪ ಪೂಜಾರಿ, ಬೊಗ್ಗು ಪೂಜಾರಿರ ಮಗ, ಬೀರಬೆಟ್ಟು ಮನೆ, ಪೋಸ್ಟು ಅತ್ತೂರು	47 — 15
280/64	ಶ್ರೀ ವಿ. ಆರ್. ಸುವರ್ಣ, ರುಕ್ಕಯ್ಯರ ಮಗ, ಆನೆಕೆರೆ ಬಳಿ, ಪೋಸ್ಟು ಕಾರ್ಕಳ	131 — 35
285/64	ಶ್ರೀ ಮಹಾಬಲ ಶೆಟ್ಟಿ, ತಬುರ ಸೆಟ್ರ ಮಗ, ಬೆಳ್ಳಿಬೆಟ್ಟು ಮನೆ, ಹಿಗ್ಗಾನ ಗ್ರಾಮ ಪೋಸ್ಟು ಹಿಗ್ಗಾನ	60-20

ಸ್ಥಳ: ಕಾರ್ಕಳ

ತಾರೀಕು 22-9-1965

ಯಂ. ಮಂಜಯ ಭಂಡಾರಿ

ಮೆನೇಜರ್

ನಚಿಕೇತ'ರ

ಹೃದಯಸ್ಪರ್ಶಿ

ನವೀನ ಕಾದಂಬರಿಗಳು

ಹಸುರು ಹಂಸ

ಬೆಲೆ: ರೂ. ಎರಡು.

ಋಣ ಯಾತ್ರೆ

ಬೆಲೆ ರೂ. 1-50 ನ. ಪೈಸೆ.

ಭಾವಾರ್ಚನೆ

ಬೆಲೆ ರೂ. 2-00

ಪ್ರತಿಗಳು ಸಿಗುವ ಸ್ಥಳ:

ನವಯುಗ ಪ್ರೆಸ್, ಉಡುಪಿ.

ಗುಡುಗಿ

ಪಾಕಿಸ್ತಾನದ ಅಸಹ್ಯ

ಕಾಶ್ಮೀರವು ಭಾರತದ ಒ
ಭಾರತೀಯರ ಕತ್ತ
ಭಾರತೀಯ

ಭಾರತ—ಪಾಕಿಸ್ತಾನಗಳ ನಡುವಣ ಕದನವೇನೋ ಸದ್ಯಕ್ಕೆ ವಿರಾಮ ಸ್ಥಿತಿಯನ್ನು ಪಡೆದಿದೆ. ಆದರೆ, ಈ ವಿರಾಮವು ಎದು ವರೆಗೆ ಉಳಿಯುವುದೆಂದು ಈಗಲೇ ಹೇಳುವುದು ಸಾಧ್ಯವಿಲ್ಲ. ವಿರಾಮೋಪಕರವೂ ಪಾಕಿಸ್ತಾನವು ಸಮರವನ್ನು ಮುಂದುವರಿಸಿದ ಕೆಲವು ವರದಿಗಳು ಬಂದಿವೆ. ಅವಕ್ಕೂ ಮಿಗಿಲಾಗಿ ಪಾಕ್ ಅಧ್ಯಕ್ಷ ಫೀಲ್ಡ್ ಮಾರ್ಶಲ್ ಅಯ್ಯೂಬಖಾನ್ ಮತ್ತವರ ವಿದೇಶ ಮಂತ್ರಿ ಝುಡ್. ಎ. ಭುಟ್ಟೋ ಇವರ ಗತ್ತುಗಾರಿಕೆಯ ಗುಡುಗುಗಳಿಂದ ಸಮರ ವಿರಾಮವು ಕೇವಲ ತಾತ್ಕಾಲಿಕವಾದುದು ಎಂಬುದನ್ನು ಯಾರಾದರೂ ಮನವರಿಕೆ ಮಾಡಿಕೊಳ್ಳಬಹುದು. ಈ ಸಮರವನ್ನು ಪಾಕಿಸ್ತಾನವೇ ಯಾಕೆ ಹೂಡಿತು ಎಂಬುದನ್ನು ಕೂಡ ಅವರ ಮಾತುಗಳೇ ಸ್ಪಷ್ಟಗೊಳಿಸಿವೆ. 'ಸಾವಿರ ವರ್ಷಗಳ ವರೆಗಾದರೂ ಸರಿಯೇ ಕಾಶ್ಮೀರಕ್ಕಾಗಿ ಹೋರಾಡುತ್ತೇವೆ' ಎಂಬ ಭುಟ್ಟೋರ ಘೋಷಣೆಯೊಡನೆ ಫೀಲ್ಡ್ ಮಾರ್ಶಲರ ಗುಡುಗು— 'ಸಂಯುಕ್ತ ರಾಷ್ಟ್ರಸಂಘದಿಂದ ಅನುಕೂಲ ಪರಿಹಾರ ದೊರೆಯದೆ ಹೋದರೆ ಪಾಕಿಸ್ತಾನ ಅದರಿಂದ ಹೊರಬಿದ್ದು ಮುಂದಿನ ಕ್ರಮ ಕೈಗೊಳ್ಳುವುದು' ಪ್ರತಿಧ್ವನಿಸಿದೆ. ಇವೆಲ್ಲದರ ಗುಟ್ಟು—ಗತ್ತುಗಾರಿಕೆ, ಬೆದರಿಕೆ, ಶಕ್ತಿ ಪ್ರದರ್ಶನದಿಂದಲಾದರೂ ಅನ್ಯಾಯದ ಗುರಿ ಸೇರುವುದು.

ಪಾಶ್ಚಾತ್ಯ ರಾಷ್ಟ್ರಗಳು ಪಾಕಿಸ್ತಾನವೇ ಆಕ್ರಮಣ ಮಾಡಿದೆ ಎಂದು ಹೇಳಲು ಸಿದ್ಧರಿರಲಿಲ್ಲವಾದರೂ ಪಾಕ್ ಧ್ಯೇಯವನ್ನು ಸರಿಯಾಗಿ ಅರ್ಥಮಾಡಿಕೊಂಡಿವೆ. ಭಾರತದ ನೀತಿಯನ್ನು ಮನಸ್ವೀ ಮೆಚ್ಚಿವೆ. ಪಾಕ್ ಅಧ್ಯಕ್ಷ ಅಯ್ಯೂಬಖಾನರು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಿರುವ ಉತ್ತರದ ಒಕ್ಕಣೆಯೇ ಇದಕ್ಕೆ ಕಾರಣ. ಪಾಕ್ ಆಕ್ರಮಣಕ್ಕೆ ಕಾಶ್ಮೀರ ಕಬಳಿಸುವ ಗಗನಮುಟ್ಟುವಾಸೆಯೇ ಹೇತುವೆಂಬುದು ಅದರಲ್ಲಿ ಸ್ಪಷ್ಟವಾಗಿದೆ. 'ಕಾಶ್ಮೀರವು ಪಾಕಿಸ್ತಾನದಲ್ಲಿ ವಿಲೀನ ಹೊಂದಿದಂತೇ ಪಾಕ್-ಭಾರತ ಹೋರಾಟವು ಕೊನೆಗೊಳ್ಳುವುದು ಎಂದಿದ್ದಾರೆ' ಆಗತಾನೇ ಶಾಂತಿಸ್ಥಾಪನೆ ಸಾಧ್ಯವೆನ್ನುತ್ತಾರೆ ಅವರು. ಈ ಸ್ಪಷ್ಟ ಮಾತುಗಳನ್ನು ಆಡವಾಗಿಯಾದರೂ ಆಡಿ ಅಯ್ಯೂಬರು ಜಗತ್ತಿನ ಕಣ್ಣು ತೆರೆಯಿಸಿದ್ದಾರೆ. ಆಕ್ರಮಣವೇ ತನ್ನ ಶೀಲವೆಂದವರು ಒಪ್ಪಿಕೊಂಡಿದ್ದಾರೆ. ಈ ಪ್ರವೃತ್ತಿಯಿಂದಾಗಿಯೇ ಅವರು ವಿಶ್ವಸಂಸ್ಥೆಯು ಮೊದಲು ಮಾಡಿದ ವಿನಂತಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದರು; ಕಾಶ್ಮೀರದ ಮೇಲೆ ತಮಗೂ ಅಧಿಕಾರವಿದೆಯೆಂಬುದನ್ನು ಒಪ್ಪಿದಾಗಲೇ ಮುಂದಿನ ಯೋಚನೆಯೆಂದರವರು. ಮುಂದಕ್ಕಾದರೂ "ಬರಿಯ ಶಾಂತಿ ಕಾದುಕೊಳ್ಳುವುದಕ್ಕಾಗಿ ಮಾತ್ರ ಅಸಮರ್ಪಕವೂ ಅತೃಪ್ತಿಕರವೂ'ಆದ ಯಾವುದೇ ನಿರ್ಣಯದಂತೆ ಯುದ್ಧವಿರಾಮಕ್ಕೊಪ್ಪಿದುದಲ್ಲವೆ?

ಜಮ್ಮು-ಕಾಶ್ಮೀರದಲ್ಲಿ ಶಾಶ್ವತ ಶಾಂತಿನೆಲಸಬೇಕಾದರೆ, ಮೊದಲು ಪಾಕಿಸ್ತಾನದ ಸೇನೆಗಳು ಹಿಂದೆಗೆಯಬೇಕು. ಇದು ಅಯ್ಯೂಬರಿಗೂ ಗೊತ್ತು. ತಮ್ಮ ಸೇನೆಯನ್ನು ಹಿಂದೆ ಮರಳಿಸಿಕೊಂಡ ಬಳಿಕ ಕಾಶ್ಮೀರದೊಳಗೆ ತಾನು ಕಳಿಸಿದ್ದ ದಾಳಿಗಾರರನ್ನು ಹಿಂದೆ ಕರೆದುಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಬಹುದು—ಇದನ್ನೂ ಅವರು ತಿಳಿದಿದ್ದರು. ಇದರಲ್ಲಿ ಭಾರತವು ಯಾವ ದೂರಿಗೂ ಇಲ್ಲ. ಅಯ್ಯೂಬರ ಪೂರ್ಣ ನಿರ್ಧಾರದಿಂದಲೇ ಕಾಶ್ಮೀರದಲ್ಲಿ ಹಿಂಸಾಕೃತ್ಯಗಳು ನಡೆದುವು. ಅವರಿಗೆ ಪೂರ್ಣ ಮನಸ್ಸಿದ್ದಲ್ಲಿ ಮಾತ್ರ ಇವು ನಿಲ್ಲಬಹುದು. ಪಾಕಿಸ್ತಾನಿ ಹಿಂಸಾಕೃತ್ಯಗಳು ಪ್ರಾರಂಭವಾದ ನಂತರವೇ ಅವನ್ನು ಪ್ರತಿಬಂಧಿಸಲು ಭಾರತವು ಅನಿವಾರ್ಯವಾಗಿ ಮುಂದರಿಯಲೇ ಬೇಕಾಯಿತು. ಭಾರತವು ಮೊದಮೊದಲು ಬರಿಯ ಆತ್ಮರಕ್ಷಣಾ ಕ್ರಮಗಳನ್ನು ಕೈಗೊಂಡಿತು. ಪಾಕಿಸ್ತಾನದ ಅಪಾರ ಮಿಲಿಟರಿ ಪ್ರಚೋದನೆಯನ್ನು ಎದುರಿಸದೆ ಇರುವುದು ಹೇಗೆ ಸಾಧ್ಯ? ಇದನ್ನು ಅಯ್ಯೂಬಖಾನರೂ ಒಪ್ಪದಿರುವುದು ಸಾಧ್ಯವಿಲ್ಲ. ಆದ ಕಾರಣದಿಂದಲೇ ಅವರು ಹಿಂದ ಮುಂದೆ ನೋಡದೆ ತಮ್ಮ ಕುತಂತ್ರಗಳ ಮುಖ್ಯ ಗುರಿಯೇನು ಎಂಬುದನ್ನು ಜಗಜ್ಜಾಹೀರು ಮಾಡಿಯೇ ಬಿಟ್ಟರು.

ಮೊದಲ ದಿನಗಳಲ್ಲಿ ತಮ್ಮ ನೀರು ಹಾಲಿಗೆ ಬೀಳುವುದೆಂಬ ಭರದಲ್ಲಿ ಅವರು ಕಾಶ್ಮೀರದ ಹಿಂಸಾಕೃತ್ಯಗಳಲ್ಲಿ ತಾನು ಅನಭಿಜ್ಞನಂತೆ ನಟಿಸಿದ್ದರು. ಸಶಸ್ತ್ರ ಬಂಡುಗಾರರು ಪಾಕಿಸ್ತಾನದಿಂದ ಸಮರ ವಿರಾಮ ರೇಖೆಯನ್ನು ದಾಟಲ್ಲವೆಂದೂ ಕಾಶ್ಮೀರಿಗಳೇ ಭಾರತ ಸರಕಾರದ ವಿರುದ್ಧ ಬಂಡೇಳುತಿದ್ದಾರೆಂದೂ ಡೋಲು ಬಾರಿಸಿದರು. ಭಾರತದ ಮೇಲೆ ನಾವು ಆಕ್ರಮಣ ಮಾಡಿಲ್ಲವೆಂದು ಡಂಗುರ ಹೊಡೆದರು. (ಕಾಶ್ಮೀರವು ಭಾರತದ ಜಾಗದಲ್ಲಿ ಒಂದಾದರೂ ಅವರ ಮಟ್ಟಿಗೆ ಅದು ಹಾಗಲ್ಲ...?) ಸತ್ಯವನ್ನು ಬಹುಕಾಲ ಮುಚ್ಚಿಡುವುದು ಅಸಾಧ್ಯ, ಎಲೆಮರೆಯ ವಿಷಫಲ ತೆರೆಯ ಮೇಲೆ ಮೂಡಿತು. ಕಾಶ್ಮೀರ ಕವಳ ಗ್ರಾಸದಿಂದಲೇ ಅಯ್ಯೂಬಾಸುರನಿಗೆ ಸಂತೃಪ್ತಿ ಎಂಬುದು ಸುವ್ಯಕ್ತವಾಯಿತು. ಯುಥಾಂಟ ಮುಂದೆ ಮಾತನಾಡುವಾಗ ಬಳಸು ಮಾತು ದೂರವುಳಿಯಿತು. ಕಾಲವ ನಾಲಗೆ ಅರುಹಿತು. ಮೊದಲಿನ ತಿರುವು ನಿಲುವೆಯೆಲ್ಲಾ ಧೂಳಿಧೂಸರವಾಯಿತು. ಪಾಕ್ ಬಾಲಹಿಡಿಯುತ್ತಿರುವ ಪಾಶ್ಚಾತ್ಯ ಮಹಾರಾಷ್ಟ್ರಗಳಿಗೂ ಇದರ ಸುಳಿವು ಸಿಕ್ಕಿತು.

ಆದರೆ, ಭಾರತದ ಪ್ರಧಾನಿ ಲಾಲಬಹದೂರ ಶಾಸ್ತ್ರಿಯವರು ಯುಥಾಂಟ ಮುಂದೆ ಭಾರತದ ಏಕಮೇವ ನೀತಿಯನ್ನೇ ಇಟ್ಟಿದ್ದಾರೆ:

"ಕಾಶ್ಮೀರದಲ್ಲಿನ ವಿಶ್ವಸಂಸ್ಥೆಯ ವೀಕ್ಷಕರು ಈಗಾಗಲೇ ಕಳಿಸಿರುವ ವರದಿಯಿಂದ ಮತ್ತು ನಿಮ್ಮ ನಿಜ ಸಮೀಕ್ಷೆಯಂತೆ ಕಾಶ್ಮೀರದಲ್ಲಿ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿಗೆ ಪಾಕಿಸ್ತಾನಿ ದಾಳಿಕಾರರೇ ಮೂಲ ಕಾರಣವೆಂಬುದು ಸ್ಪಷ್ಟವಾಗಿದೆ. ಇದೇನೂ ಅನಿರೀಕ್ಷಿತವಲ್ಲ. ಪಾಕ್ ದಾಳಿಕಾರರು ಸುವ್ಯವಸ್ಥಿತ ಯೋಜನೆಯ ಮೇರೆಗೆ ಈ ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿದ್ದಾರೆ. ಅವರು ವಿಧ್ವಂಸಕ ಕಾರ್ಯಚಟುವಟಿಕೆಗಳಲ್ಲಿ ಸಾಕಷ್ಟು ತರಬೇತಿಯನ್ನೂ ಪಡೆದಿದ್ದಾರೆ. ಈಯೆಲ್ಲಾ ಬಗೆಯ ಹಿಂಸಾತ್ಮಕ ಚಟುವಟಿಕೆಗಳನ್ನು ಸಮಗ್ರ ಯೋಜನೆಯೊಂದರಲ್ಲಿ ಪಾಕಿಸ್ತಾನ ಸರಕಾರವೇ ಅಳವಡಿಸಿ ಅದನ್ನು ಕಾರ್ಯರೂಪಕ್ಕೆ ತಂದಿದೆ. ಆದುದರಿಂದಲೇ ಕಾಶ್ಮೀರ ಕಂದರದ ಹದಗೆಟ್ಟ ಪರಿಸ್ಥಿತಿಗಳಿಗೆ ಪಾಕ್ ಕುಕೃತ್ಯಗಳೇ ಕಾರಣವಾಗಿವೆ. ಈ ಪಾಕ ಹೇಯ ಕೃತ್ಯಗಳು ವಿಶ್ವಸಂಸ್ಥೆಯ ಪ್ರಣಾಳಿಕೆಗೆ



ರಕ್ಷಣೆಯ ಸಾಧನ

ದುಷ್ಟ ಶಕ್ತಿಗಳೊಡನೆ ಹೋರಾಡಲು ಖಡ್ಗವೇ ಶರಣ. ಪಾಕ್ ಕುತಂತ್ರಿಗಳನ್ನು ಹದಕ್ಕೆ ತರುವುದಕ್ಕೆ ಸೈನಿಕ ಶಕ್ತಿ ಮತ್ತು ತಂತ್ರ ಶಸ್ತ್ರಾಸ್ತ್ರಗಳಿಗೇ ಶರಣ ಹೋಗಬೇಕೆಂಬುದೀಗ ವ್ಯಕ್ತವಾಯಿತು. ವಿದೇಶೀಯ ಸೈನ್ಯ ಶಕ್ತಿಯನ್ನೇ ದೃಢವಾಗಿ ನಂಬಿ, ಭಾರತದೊಂದಿಗೆ ದ್ವೇಷ ಮನೋಭಾವನೆಯನ್ನೆ ಬೆಳೆಸಿಕೊಂಡು ಬಂದ ಪಾಕ್ ನಾಯಕರು ನಾಗರಿಕರನ್ನು ಅಧಃಪತನಕ್ಕೆ ತಳ್ಳಿದರು. ಪ್ರಜಾಪ್ರಭುತ್ವದ ಈ ಯುಗದಲ್ಲೂ ಪ್ರಜಾಭಿಪ್ರಾಯವನ್ನು ಮೆಟ್ಟಿ ನಿಂತು ಸರ್ವಾಧಿಕಾರಿ ಭಾವನೆಯಿಂದ ಪಾಕಿಸ್ತಾನ ಕಂಗೆಟ್ಟಿದೆ.

ಆದೇನೇ ಇದ್ದರೂ ಮಾತೃಭೂಮಿಯ ಸಂರಕ್ಷಣೆ ಪ್ರತಿ ದೇಶವಾಸಿಯ ಆದ್ಯ ಕರ್ತವ್ಯ. 'ದೇಶವೊಂದುಳಿಯೆ ಎಲ್ಲವುಂಟು, ದೇಶವೊಂದಳಿಯೆ ಮತ್ತೆಲ್ಲ ಉಂಟು' ಎಂಬುದನ್ನು ಅರ್ಥಮಾಡಿಕೊಳ್ಳಬಲ್ಲ ಭಾರತೀಯ ಜನತೆ ಪಾಕಿನೊಡನೆ ಕದನದಲ್ಲಿ ಯಶಸ್ವಿ ಕಾರ್ಯಾಚರಣೆಗೆ ತೊಡಗಿತು. ಯಶಸ್ವಿಯಾಯಿತು. ನಾವು ಸುಮ್ಮನಿಳಿದರೂ ನಮ್ಮ ಮೇಲೆ ಬರುವವರಿದ್ದಾರೆಂದು ಕಂಡುಕೊಂಡ ನಾವೆಲ್ಲ ಸೈನಿಕರೇ ಇರಲಾಪುದೆ ಉಚಿತ. ಅಮೇರಿಕೆಯು ಹೊಸ ಬಗೆಯ ಅವ್‌ರೋಕ್ ಗಣ—೪೦ ಎಂಬ ರಾಕೆಟ್ ಗನ್ನನ್ನು ಇದೀಗ ತಯಾರಿಸಿದೆ. ನಾವೂ ನಮ್ಮ ಶಸ್ತ್ರಾಸ್ತ್ರ ಸಾಮಗ್ರಿಯನ್ನು ಹೆಚ್ಚಾಗಿ ತಯಾರಿಸಿಕೊಳ್ಳಬೇಕು. ಹೋರಾಟ ಕೈಬಿಯಲಿಕ್ಕಲ್ಲ, ಆತ್ಮರಕ್ಷಣೆಗಾಗಿ ಮಾತ್ರ.

ಸರಿನಲಿ
ಏಕತೆಯ ಆರ್ತನಾದ

ಅದರ ರಕ್ಷಣೆ ಸಮಸ್ತ ರ್ತವ್ಯಪಾಲನೆಯಲ್ಲಿ ದೆಂಕಲ್ಪರು.

ವಿರುದ್ಧವಾಗಿದ್ದು ಕದನ ವಿರಾಮ ಒಪ್ಪಂದದ ಶರ್ತಗಳಿಗೆ ವಿಸಂಗತವಾಗಿವೆ. ಕಾಶ್ಮೀರದಲ್ಲಿ ಶಾಂತಿ ನೆಲೆಗೊಳ್ಳಬೇಕಾದರೆ ಅಲ್ಲಿ ಪಾಕ್ ಹಿಂಸಾಕೃತ್ಯಗಳು ನಿಲ್ಲಬೇಕು.

ಈಗ ಸಮರ ವಿರಾಮವನ್ನು ಅನಿವಾರ್ಯವಾಗಿ ಒಪ್ಪಿಕೊಂಡರೂ ಕೂಡ ಅಯ್ಯೂಬಖಾನ, ಭುಟ್ಟೋ ಅವರು ಹಿಂದಿನಂತೆಯೇ ದೋಷಾರೋಪಗಳ ದೂಳನ್ನು ಭಾರತದ ಮುಖದ ಮುಂದೆ ಎಬ್ಬಿಸುತ್ತಲಿದ್ದಾರೆ. ಸರಿಯಾದ ಪ್ರಶ್ನೆಯನ್ನು ಬದಿಗೊತ್ತಿ ಅದನ್ನು ಮತ್ತಷ್ಟು ಕ್ಲಿಷ್ಟಗೊಳಿಸುತ್ತ ಬರುತ್ತಿದ್ದಾರೆ.

ಕಾಶ್ಮೀರದಲ್ಲಿನ ವಿಶ್ವಸಂಸ್ಥೆಯ ವೀಕ್ಷಕರು "ಅತಿಕ್ರಮಣಕಾರರು ಯಾರು ಎಂಬುದು ಇನ್ನೂ ತಿಳಿಯದಿದ್ದಾಗ ಈ ಸಂಬಂಧದಲ್ಲಿ ಕೆಲವು ನಿರ್ದಿಷ್ಟ ಅಭಿಪ್ರಾಯಗಳನ್ನು ಹೊಂದಿದ್ದಾರೆ' ಎಂದ ಅಯ್ಯೂಬಖಾನರೂ ಭಾರತವನ್ನು ಗಾಳಿಪಟವಾಡುವ ನೀತಿಯನ್ನೇ ಸಂಯುಕ್ತ ರಾಷ್ಟ್ರ ಸಂಘ ಮತ್ತು ಅದರ ವೀಕ್ಷಕರಿಗೂ ಅನ್ವಯಿಸಿದೆ! ಪಾಕ್ ಅತಿಕ್ರಮಣಕಾರರನ್ನು ಭಾರತ ಪ್ರದೇಶಕ್ಕೆ ಕಳಿಸಿದುದೇ ತಂಟೆಗೆ ಮೂಲ ಕಾರಣವೆಂದು ವೀಕ್ಷಕರು ವರದಿ ಮಾಡಿದ್ದಾರೆ!

ಕಾಶ್ಮೀರವು ಭಾರತದ ಒಂದು ರಾಜ್ಯ. ಇದರೊಳಗೆ ಸಶಸ್ತ್ರ ಪಾಕಿಸ್ತಾನಿ ದಾಳಿಕಾರರನ್ನು ಕಳಿಸುವಲ್ಲಿ ಪಾಕ್ ಸರಕಾರದ ಕೈವಾಡವಿದೆಯೆಂಬುದೀಗ ಪುರಾವೆಗಳೊಂದಿಗೆ ಸಾಬೀತಾಗಿದೆ. ಈ ವರ್ಷದ ಫೆಬ್ರವರಿಯಿಂದಲೇ ಈ ಬಗೆಯ ಆಕ್ರಮಣಕ್ಕೆ ತಕ್ಕ ಸೂಚನೆಗಳನ್ನು ಪಾಕ್ ಸೇನಾಧಿಕಾರಿಗಳಿಗೆ ಕೊಡಲಾಗಿತ್ತು. ಹೋರಾಟದ ವೇಳೆ ಸೆರೆ ಹಿಡಿಯಲಾದ ಅಧಿಕಾರಿ—ಸೈನಿಕರ ಮತ್ತು ದೊರೆತ ವೈಮಾನಿಕರ ದಿನಚರಿ ಪುಸ್ತಕಗಳ ಹಾಳೆಗಳಲ್ಲಿ ಇದು ಸಿದ್ಧವಾಗಿದೆ. ಇದರ ಮೇಲೆ, ಜನರಲ್ ನಿಮ್ಮೋ ವರದಿಯಲ್ಲಿ ಈ ನಿರ್ಣಯವೇ ಇದೆ. ಆದರೆ, ತಮಗನುಕೂಲವಲ್ಲದ ನಿರ್ಣಯಗಳು ವಿರೋಧಿಸುವವರಲ್ಲಿ ಫೀಲ್ಡ್ ಮಾರ್ಶಲ್ ಅಯ್ಯೂಬಖಾನರು ಚೀನದ ಚೌ ಎನ್-ಲಾಯಿಗಿಂತ ಯಾವುದರಲ್ಲೂ ಕಡಿಮೆಯಿಲ್ಲ. ವೀಕ್ಷಕರ ವರದಿಯ ಮೇಲೆ ಖಾನರ ಸರಳ ವ್ಯಾಖ್ಯಾನ 'ಅದು ಪಕ್ಷಪಾತದಿಂದ ಕೂಡಿದೆ.'

ಅಯ್ಯೂಬಖಾನರು ತಮ್ಮ ವಿದೇಶ ಮಂತ್ರಿ ಝುಲ್. ಎ. ಭುಟ್ಟೋ ಅವರ ಕೈಗೊಂಬೆಯಾಗಿದ್ದಾರೆ. ಆದುದರಿಂದಲೇ ಖಾನರನ್ನು ಮೀರಿಸುವ ವಿಕ್ರಮದ ಆರ್ಭಟೆಯನ್ನು ಭುಟ್ಟೋ ಕೊಡುತ್ತಾರೆ, ವಿಶ್ವಸಂಸ್ಥೆಯ ವೀಕ್ಷಕರಿಗೆ ಕಾಶ್ಮೀರದ ವ್ಯವಹಾರಗಳಿಗೆ ಸಂಬಂಧಿಸಿದಂತೆ ವರದಿ ನೀಡುವ ಅಧಿಕಾರವಿಲ್ಲ! ಭುಟ್ಟೋ ವಿಚಾರ ಭಿನ್ನವಾಗಿದೆ. ತಾವು ಏನು ಮಾಡಿದರೂ ಪ್ರಶ್ನಿಸುವವರಿರಬಾರದು, ಸರಿಯೆ ಎಲ್ಲ?

ಭುಟ್ಟೋ ಅವರ ಅಭಿಪ್ರಾಯದಲ್ಲಿ ಕದನ ವಿರಾಮ ರೇಖೆಯ ಮೇಲ್ವಿಚಾರಣೆ ಮಾತ್ರ ಆ ವೀಕ್ಷಕರ ಕೆಲಸ. ಪಾಕಿಸ್ತಾನದ ಸಶಸ್ತ್ರ ದಾಳಿಕಾರರು ಕದನವಿರಾಮ ರೇಖೆಯನ್ನು ದಾಟಿ ಭಾರತದ ರಾಜ್ಯ ಜಮ್ಮು ಕಾಶ್ಮೀರದಲ್ಲಿ ಸೇತುವೆಗಳನ್ನು ಧ್ವಂಸಗೊಳಿಸುವಾಗ, ಪೋಲೀಸ್ ಠಾಣ್ಯಗಳನ್ನು, ಪ್ರಧಾನ ಮಿಲಿಟರಿ ನೆಲೆಗಳನ್ನೂ ಪೂರೈಕೆ ಕೇಂದ್ರಗಳನ್ನೂ ಆಕ್ರಮಿಸುವಾಗ, ಹಿಂಸಾಚಾರದಲ್ಲಿ ತೊಡಗಿದಾಗ ವೀಕ್ಷಕರು ಇದೊಂದನ್ನು ನೋಡದಂತೆ ಕುರುಡರಂತೆ ಕುಳಿತುಕೊಳ್ಳಬೇಕು. ಭಾರತವೂ ಶರಣಾಗತವಾಗಿ ತನ್ನ ಕಾಶ್ಮೀರವನ್ನು ಪಾಕಿಗೆ ದಾನಮಾಡಬೇಕು—ಭುಟ್ಟೋ ಅವರ ಈ ವಾದ, ಕರ್ತವ್ಯಪಾಲನೆಯ ಪಾರ ನಾಟಕದಲ್ಲಾಗಬಹುದೋ ಏನೋ, ವಾಸ್ತವ ಪ್ರಪಂಚದಲ್ಲಿಲ್ಲ.

ಅಯ್ಯೂಬಖಾನ ಮತ್ತು ಭುಟ್ಟೋರವರ ಮೂಲ ಗುರಿಯೊಂದೇ ಕಾಶ್ಮೀರವನ್ನು ಸ್ವಹಾ ಮಾಡುವುದು. ಆದರೆ ಇದನ್ನು ಸಾಧಿಸುವ ಬಗೆಗೆ ಮಾತ್ರ ಇಬ್ಬರಲ್ಲೂ ತುಸು ಭಿನ್ನಮತವಿದೆ. ಭುಟ್ಟೋ ನೇರವಾಗಿ ಚೀನೀಯರ ಮುಷ್ಟಿಯಲ್ಲಿ ಕ್ಷೇಮವಾಗಿರಲು ಬಯಸಿದರೆ, ಅಯ್ಯೂಬರು ಅಮೆರಿಕೆಯನ್ನು ಸಲೀಸಾಗಿ ಮುಂದು ಹಾಕಿಕೊಳ್ಳಲು ಇಚ್ಛಿಸುವುದಿಲ್ಲ. ಚೀನೀಯರಿಂದ ಪಾಕ್ ಸೈನಿಕರು ಗೆರಿಲ್ಲಾ ತರಬೇತಿ ಪಡೆದುದು, ಭಾರತದ ಉತ್ತರ ಗಡಿಯಲ್ಲಿ ಚೀನಾ ಆಕ್ರಮವಾಗಿ ೧೯೬೨ರಲ್ಲಿ ಅತಿಕ್ರಮಣ ಮಾಡಿದ ನೀತಿಯನ್ನೇ ಅವಲಂಬಿಸಿದುದು ಮಾತ್ರವಲ್ಲದೆ ಶಸ್ತ್ರಾಸ್ತ್ರಗಳ ಪೂರೈಕೆ ಮಾಡಿದುದು—ಭುಟ್ಟೋ ಪ್ರಭಾವವನ್ನು ಸಾರಿ ಹೇಳುತ್ತವೆ. ವಾಶಿಂಗ್‌ಟನ್ ಭಾರತ—ಪಾಕ್ ಕದನದ ಮಧ್ಯೆ ಪ್ರವೇಶಿಸಿದರೆ ಸಂಧಾನ ಸಾಧ್ಯವೆಂದು ಮರೆಹೊಕ್ಕ ಅಯ್ಯೂಬರ ಕರುಣಾಜನಕ ಸ್ಥಿತಿಯನ್ನು ಯಾರು ಮರೆಯಬಲ್ಲರು?

ಅಯ್ಯೂಬ—ಭುಟ್ಟೋ ಕುರಿತ ದೋಣಿ ಯಾವ ದಡ ಮುಟ್ಟುವುದೆಂದು ಈಗಾಗಲೇ ಹೇಳಬಾರದು. ಪಾಕ್ ವರ್ತನೆಯಿಂದ ಭಾರತ ಮಾತ್ರ ನೋವಿಗೀಡಾದುದಲ್ಲ. ಅದನ್ನು ಶಕ್ತಿ ಮದವನ್ನಾಗಿಸಿದವರೂ ತುಸುವಾದರೂ ನೊಂದಿದ್ದಾರೆ. ಇದರ ಮೇಲೆ ಭದ್ರತಾ ಸಮಿತಿಯಲ್ಲಿಯೇ ಅದರ ನಾಯಕ ಭುಟ್ಟೋ ಘೋಷಿಸಿದ್ದಾರೆ—ಕಾಶ್ಮೀರ ಸಮಸ್ಯೆಯನ್ನು ಇತ್ಯರ್ಥಗೊಳಿಸುವಲ್ಲಿ ವಿಶ್ವಸಂಸ್ಥೆ ಅಸಮರ್ಥವಾದರೆ, ಪಾಕಿಸ್ತಾನವು ಅದರಿಂದ ಹೊರಬಿದ್ದಾದರೂ ತನ್ನ ಆಶೆಯನ್ನು ಈಡೇರಿಸುವುದು—

ಇದೇನು ಹೇಳುತ್ತದೆ? ಕಾಶ್ಮೀರವನ್ನು ಕಬಳಿಸಲು ವಿಶ್ವಸಂಸ್ಥೆಯನ್ನು ಒಂದು ಸಾಧನವನ್ನಾಗಿ ಬಳಸುವ ಯೋಜನೆ ಈ ಕುತಂತ್ರಿ ನಾಯಕರದ್ದು. ಇದು ಇನ್ನೂ ಸಾಧ್ಯವೆಂಬುದು ಅವರ ಅಂಬೋಣ. ಅಮೆರಿಕೆ, ಬ್ರಿಟನ್ ಮೊದಲಾದ ಮಹಾ ರಾಷ್ಟ್ರಗಳಲ್ಲಿ ಕೆಲವು ತಮ್ಮ ಸ್ವಾರ್ಥ ಸಾಧನೆಗಾಗಿ ಪಾಕಿಸ್ತಾನದ ದುಷ್ಕೃತ್ಯಗಳನ್ನು ಕಂಡೂ ಕಾಣದಂತೆ ವರ್ತಿಸಿ ಅವರನ್ನು ಎತ್ತಿಕಟ್ಟುತ್ತವೆ. ಇದರಿಂದ ಗಾಳಿ ತುಂಬಿದ ಪುಗ್ಗೆಯಂತೆ ಮೇಲೆ ನೆಗೆಯುತ್ತಾರೆ ಅವರು. ಈ ರಾಷ್ಟ್ರಗಳ ಇಂತಹ ಅಸ್ಥಿರ ನಿಲುವಿಗೆ ಸದ್ಯದ ಘಟನೆಯೇ ಸಾಕ್ಷಿ. ವಿಶ್ವಸಂಸ್ಥೆಯ ವೀಕ್ಷಕರೂ ಪ್ರಧಾನ ಕಾರ್ಯದರ್ಶಿಯವರೂ ಕಾಶ್ಮೀರ ದುರ್ಘಟನೆಗಳಿಗೆ ಪಾಕಿಸ್ತಾನವೇ ಮೂಲಕಾರಣವೆಂದೂ ಅದು ಭಾರತವನ್ನು ಆಕ್ರಮಣ ಮಾಡಿದೆಯೆಂದೂ ಬಾಯಬಿಟ್ಟು ಹೇಳಿದರೂ ಪಾಕಿಸ್ತಾನವನ್ನು ಆಕ್ರಮಣಕಾರ ರಾಷ್ಟ್ರವೆಂದು ಹೆಸರಿಸಲು ಅವರು ಸಿದ್ಧರಿಲ್ಲ!

ಸತ್ಯವನ್ನು ನುಡಿಯಲು ಹಿಂಜರಿಯುವ ಈ ನೀತಿ ವಿಶ್ವಸಂಸ್ಥೆಗೂ ಮಾರಕವಾಗಬಹುದು. ಈ ಮಹಾ ಸಂಸ್ಥೆಯು ತನ್ನ ಉದ್ದೇಶಗಳಲ್ಲಿ ಸಫಲವಾಗಬೇಕಾದರೆ, ಅನ್ಯಾಯಗಾರರನ್ನು ಅನ್ಯಾಯಿಯೆಂದು ಹೇಳಲು ಹಿಂದೆ ಮುಂದೆ ನೋಡಬಾರದು. ಇದನ್ನು ಬಿಟ್ಟು ಪಾಕಿಸ್ತಾನದ ಕಪ್ಪು ಮುಖಕ್ಕೆ ಪೌಡರ್ ಬಳಿಯಲು ಯತ್ನಿಸಿದರೆ, ಅದು ಹೇಳಬಹುದು: ಕರಿ ಮುಖವನ್ನು ಬಿಳಿ ಮಾಡಿರಿ, ಇಲ್ಲವೇ ನೀವು ಅಸಮರ್ಥರೆಂದು ತಿಳಿದು ಇತರ ಸಮರ್ಥರನ್ನರಸ ಹೋಗುತ್ತೇನೆ.

ವಿಶ್ವ ಸಂಸ್ಥೆಯಿಂದ ಸಿಡಿದು ಬರುವ ಪಾಕಿಸ್ತಾನವನ್ನು ಸ್ವಾಗತಿಸಲು ಕೆಂಪು

(ಹದಿಮೂರನೇ ಪುಟ ನೋಡಿರಿ)

ರೆಯುದಿರೋಣ

...ದಲ್ಲಿ ಹೇಡಿತನಕ್ಕೆ ಎಂದೂ
... ಹೇಡಿತನದಿಂದ ಅಹಿಂಸೆ
...ವನ್ನು ಸಾಧಿಸಲಿಕ್ಕಾಗುವು
...ತ್ತು ಅಹಿಂಸೆ ಈ ಎರಡಕ್ಕೂ
... ಅಹಿಂಸೆಯು ಮಕ್ಕಿಗೆ ಮಾತ್ರ
... ಹೆಚ್ಚು. ಶೌರ್ಯವಿಲ್ಲದ
...ವೆನಿಸುತ್ತದೆ.

° °

...ದೇ ಶಕ್ತಿಗೂ ತಲೆಬಾಗಿಸ
...ಕ್ಕಿಂತ ಹೆಚ್ಚಿನ ಶೌರ್ಯ
...ಕ್ತಿ ಎಷ್ಟೇ ಪ್ರಬಲವಾಗಿ
...ಣಿ, ಧರ್ಮದಲ್ಲಿ ನಂಬುಗೆ
...ಮ್ಮವೊಂದೇ ಶಾಶ್ವತವಾಗಿ
...ಷ್ಟೆಲ್ಲದುದೆಲ್ಲವೂ ನಶ್ವರ.

—ಗಾಂಧೀಜಿ

ಆಕ್ರಮಣದ ಫಲ

ದಕ್ಷಿಣ ವಿಯಾತನಾಮದ ಮೇಲೆ ವಿಯತ ಕಾಂಗೋ ಮಾಡಿದ ಆಕ್ರಮಣವು ಹಲವಾರು ನಾಗರಿಕರನ್ನು ಬಲಿ ತೆಗೆದುಕೊಂಡಿದೆ, ಇನ್ನು ನೂರಾರು ಜನರನ್ನು ಗಾಯಗೊಳಿಸಿದೆ. ದುರ್ಘಟನೆಗೆ ಗುರಿಯಾದ ಮಗುವೊಂದನ್ನು ರಕ್ಷಿಸಲು ವೈದ್ಯರು ಮೃತ್ಯುವಿನೊಡನೆ ಹೋರಾಡುತಿದ್ದಾರೆ.

ಪಾಕಿಸ್ತಾನವು ಭಾರತದ ಮೇಲೆ ಆಕ್ರಮಣ ಮಾಡಿತು. ನಾವು ಆತ್ಮರಕ್ಷಣೆಗಾಗಿ ಹೋರಾಡಿದೆವು. ಅವರು ಯುದ್ಧ ಸಾರಿದರು. ನಾವು ಹಾಗೆ ಮಾಡಲಿಲ್ಲ. ಪಾಕ್ ಜನತೆಗೆ ನಾವು ಶುಭ ಕೋರುತ್ತೇವೆ. ಆದರೆ ಮಿಲಿಟರಿ ಶಕ್ತಿಯೊಡನೆ ಮಾತ್ರ ನಮ್ಮ ಹೋರಾಟವಿತ್ತು. ನಿರ್ದಯಿ ಪಾಕಿಸ್ತಾನಿಗಳು ನಾಗರಿಕ ಪ್ರದೇಶಗಳ ಮೇಲೆ ಬಾಂಬು ಹಾಕಿದರು. ದೇವಮಂದಿರಗಳು, ಕಟ್ಟಡಗಳು ಮಾತ್ರವಲ್ಲದೆ ನೂರಾರು ಜೀವಗಳನ್ನೂ ಪಾಕ್ ಬಾಂಬುಗಳು ಬಲಿ ತೆಗೆದುಕೊಂಡವು. ನೂರಾರು ಜನರನ್ನು ಗಾಯಗೊಳಿಸಿದುವು. ಗುಜರಾತದ ಮುಖ್ಯಮಂತ್ರಿ ಸಕುಟುಂಬವಿದ್ದ ನಾಗರಿಕ ವಿಮಾನವನ್ನೂ ಹೊಡೆದುರುಳಿಸಿದರು— ರಕ್ತದೋಕುಳಿ ಹಾಸಿದರು. ಪಾಕ್ ಬಾಂಬಿನಿಂದ ಮಡಿದವರ ಆತ್ಮಗಳಿಗೆ ಶ್ರದ್ಧಾಂಜಲಿ; ಅಂಗ ಪೀಡಿತರಿಗೆ ವೈದ್ಯಾಂಜಲಿ.

ಕೈಲಾಸದಲ್ಲಿ

ಗಣಪತಿಗೆ ಭಾರಿ ಹೊಟ್ಟೆನೋವು

ಬರೆದವರು
ಶ್ರೀ ಬಸವರಾಜ ಕುಂಚೂರು.

ಗಣಪತಿಯು ನೋವಿನಿಂದ ದೇವಲೋಕವೇ ಕಕ್ಕಾಬಿಕ್ಕಿಯಾಯಿತು.
ಈ ನೋವಿನ ಮೂಲ ಭಾರತೀಯರಿಗೇ ಗೊತ್ತು.

ಸದಾ ಸದಾ ಕಾಲವಾಗಲು ಗಣಾದಿಗಳಿಂದ ಋಷಿ ಮುನಿಗಳಿಂದ, ಪಂಡಿತರಿಂದ ವೈಭವ ಪೂರಿತವಾದಂತಹ ಕೈಲಾಸ ಅಂದು ಗಾಢವಾದ ನೋವಿನ ಪ್ರತೀಕವನ್ನು ಸಾರುತ್ತಿತ್ತು. ಎಲ್ಲೆಲ್ಲೂ ಗುಜುಗುಜು, ಪಿಸಿ, ಪಿಸಿ ಮಾತು ನಾರದರ ಆದಿಯಾಗಿ ಎಲ್ಲರ ಮುಖದಲ್ಲೂ ಮ್ಲಾನತೆ. ಪಾರ್ವತಿಯಂತು ತುಂಬಾ ವ್ಯಸನಕ್ಕೀಡಾದವಳಾಗಿದ್ದಳು.

ವಿಘ್ನಾಧಿಪತಿಯಾದ ಗಣಪತಿಯು ಹಾಸಿಗೆಯಲ್ಲಿ ಹೊರಳಾಡುತ್ತಿದ್ದನು. ಕೈಲಾಸದ ಪ್ರಮುಖರೆಲ್ಲರು ಸಪ್ಪೆ ಮೋರೆ ಹಾಕಿ ನಿಂತಿದ್ದರು. ವೈದ್ಯರು ಮದ್ದು ಕೊಟ್ಟು ಕೊಟ್ಟು ಸೋತು ಹೋಗಿದ್ದರು. ಮಗನ ತೊಳಲಾಟವನ್ನು ನೋಡಲಾರದೆ ಸ್ವತಃ ಶಿವನೇ ಉಪಚರಿಸುತ್ತಿದ್ದನು. ಷಣ್ಮುಖ ತನ್ನ ನವಿಲನ್ನೇರಿ ನಿಮಿಷಾರ್ಧದಲ್ಲಿ ಅನೇಕ ಗಿಡ ಮೂಲಿಕೆಗಳನ್ನು ತಂದು ಹುಡುವಿದನು. ಆದರೆ, ಯಾವುದೂ ಪ್ರಯೋಜನವಾಗಲಿಲ್ಲ. ಗಣಪತಿಯು ಹೊಟ್ಟೆನೋವಿನ ಸುದ್ದಿ ಕೇಳಿ, ಸ್ವತಃ ವಿಷ್ಣುವೇ ಲಕ್ಷ್ಮೀಸಮೇತ ಕೈಲಾಸಕ್ಕೆ ಬಂದಿಳಿದ. ಬ್ರಹ್ಮ ಇಂದ್ರ ಉಳಿದ ಪ್ರಮುಖರೆಲ್ಲರೂ ಆಗಮಿಸಿದರು. ಬೇಗ ಗುಣವಾಗಲೆಂದು ಕೆಲವರು ತಂತಿ ಕಳಿಸಿದರು.

ಇತ್ತ ಗಣಪತಿಯು ಹೊಟ್ಟೆನೋವು ಹೆಚ್ಚುತ್ತಲೇ ಇತ್ತು. ಕೊನೆಗೆ ನಾರದರು ಭೂಲೋಕದಲ್ಲಿ ಪ್ರಸಿದ್ಧರಾಗಿರುವ ಅಮೇರಿಕಾ—ರಷ್ಯಾ ಯುರೋಪಿಯನ್, ವೈದ್ಯರುಗಳನ್ನೂ ಕೂಡಲೇ ಕಳಿಸಿಕೊಡಲು ಆಯಾ ದೇಶದ ಪ್ರಮುಖರಿಗೆ ತಂತಿ ಕಳಿಸಿದರು. ಅಮೇರಿಕನ ಸರ್ಕಾರವು ಬಹಳ ಹೆಮ್ಮೆಯಿಂದ ಇತ್ತೀಚೆಗೆ ತಯಾರಿಸಿದ "ವಾಯು ವೇಗ" ವಿಮಾನದ ಮೂಲಕ ಇಬ್ಬರು ಪ್ರಸಿದ್ಧ ಸರ್ಜನ್‌ರನ್ನು ಕಳಿಸಿತು. ನಾಲ್ಕೈದು ನಿಮಿಷಗಳಲ್ಲಿ ಎಲ್ಲಾ ಕಡೆಯಿಂದ ಪರಿಣತರು ಬಂದರು. ರಷ್ಯಾದವರ ನವೀನ ರೀತಿಯ ಸರ್ಜರಿಯ ಉಪಕರಣಗಳನ್ನೂ ನೋಡಿ, ನೆರೆದಿದ್ದವರೆಲ್ಲರು ಬೆಪ್ಪಾದರು. ಕೈಲಾಸದ ವೈದ್ಯರಿಗೆ ಅವರ ಉಪಕರಣ, ಚಾಕಚಕ್ಯತೆಯನ್ನು ನೋಡಿ ನಾಚಿಕೆಯಾಯಿತು. ಆದರೆ ಕೊನೆಗೆ ಯಾರಿಂದಲೂ ಹೊಟ್ಟೆನೋವಿಗೆ ಮದ್ದನ್ನು ಕೊಡಲಿಕ್ಕಾಗಲಿಲ್ಲ. ಆಪರೇಷನ್ ಮಾಡಬೇಕಾದರೆ, ಹೊಟ್ಟೆಯೊಳಗೆ ಗಂಟಿಲ್ಲ. ಯುರೋಪಿಯನ್ ಮೆಡಿಸನ್ ಕೊಟ್ಟರೆ, ನೋವಿನ ಬಾಧೆ ಹೆಚ್ಚುತ್ತಾ ಹೋಯಿತು. ಎಲ್ಲರೂ ವಿಷಣ್ಣವದನರಾದರು. ಏನು ಮಾಡಬೇಕೆನ್ನುವದೆ ತೋಚದಾಯಿತು. ಕೊನೆಗೆ ಮಾಪಕ, ಭಾರತದಿಂದ ಆಯುರ್ವೇದ ಪಂಡಿತರು ಬರುವಂತೆ ಮಾಡುವದು ಒಳ್ಳೆಯದೆಂದು ನಾರದರಿಗೆ ತಿಳಿಸಿತು. ನಾರದರು ಕೂಡಲೆ, ಭಾರತ ಸರಕಾರಕ್ಕೆ ಎಕ್ಸ್‌ಪ್ರೆಸ್ ತಂತಿಯನ್ನು ಕಳಿಸಿದರು.

ನಿಮಿಷಾರ್ಧದಲ್ಲಿಯೇ ಯಂತ್ರ, ಮಂತ್ರ, ತಂತ್ರ ಎಲ್ಲವನ್ನೂ ಬಲ್ಲ ಪಂಡಿತರು ಕೈಲಾಸಕ್ಕೆ ಬಂದಿಳಿದರು. ಗಣಪತಿಯು ಮೈ, ಕೈ ಮುಟ್ಟಿ ನೋಡಿ, ನಾಡೀ ಪರೀಕ್ಷೆ ಮಾಡಿದರು. ಅರ್ಧ ಗಂಟೆಯ ಕಾಲ ಇಲ್ಲಿ ಯಾರೂ ಇರಕೂಡದೆಂದು ಹೇಳಿ, ಗಣಪತಿಯನ್ನು ಪ್ರೈವೇಟ್ ಕೋಣೆಗೆ ಒಯ್ದರು.

ವಿದ್ಯಾಧಿಪತಿ, ತಮ್ಮನ್ನೂ ನಾವು ಕೆಲವೊಂದು ಪ್ರಶ್ನೆಗಳನ್ನು ಕೇಳುತ್ತೇವೆ. ಬೇಜಾರ ಪಡದೆ ಉತ್ತರಿಸ ಬೇಕು" ಎಂದು ಗಣಪತಿಯನ್ನು ವಿನಂತಿಸಿದರು.

"ತಾವು ಚೌತಿಯ ನಿಮಿತ್ತ ಹೊರಟವರು ಭಾರತದಿಂದ ಯಾವಾಗ ಮರಳಿದಿರಿ?"

"ಎರಡು ದಿನವಾಯಿತು."

"ಅಲ್ಲಿ ನಿಮ್ಮ ಊಟ ಉಪಚಾರ ಚೆನ್ನಾಗಿ ಆಯಿತೆ?"

ಚೆನ್ನಾಗಿ ಆಯಿತೇನೋ ನಿಜ, ಆದರೆ, ನನಗೆ ಪ್ರಿಯವಾದ ಮೋದಕಗಳೂ ಯಾರ ಮನೆಯಲ್ಲೂ ಸರಿಯಾಗಲಿಲ್ಲ."

ಪಂಡಿತರು ಹುಸಿ ನಗುತ್ತಾ "ಅದೇ ಪ್ರಭುಗಳೆ, ನಮ್ಮ ದೇಶದಲ್ಲಿ ಈಗ ಜನರಿಗೆ ತಿನ್ನಲಿಕ್ಕೆ ಆಹಾರವಿಲ್ಲ. ಪರದೇಶದಿಂದ ಅಕ್ಕಿ ಗೋದಿಯನ್ನು ತರಿಸಿದರೂ ಸಾಕಾಗಲೊಲ್ಲದು"

"ಏನಿದು ಆಶ್ಚರ್ಯ? "ಡೋಕ್ಕಿ" "ಡೋಬಿ" ಬರದಲ್ಲೂ ನನಗೆ ಒಳ್ಳೇ ಗೋದಿಯ ಕಡುಬನ್ನೂ ಬಡಿಸುತ್ತಿದ್ದರು. ಈಗ, ಕಾಲವಿಷ್ಟು ವಿಪರೀತವಾಯಿತೆ. ಅಯ್ಯೋ ನೋವು ಪಂಡಿತರೆ" ಎಂದು ಗಣಪತಿ, ಉಸಿರೆಳೆದನು.

ಕ್ಷಮಿಸಿ ಪ್ರಭು, ಮಾತಿನಲ್ಲಿ ಮರೆತೇಬಿಟ್ಟೆವು ಇದನ್ನು ಸೇವಿಸಿ' ಎಂದು ಒಂದು ಲೋಟೆಯಲ್ಲಿ ಚೂರ್ಣವನ್ನು ಕರಗಿಸಿ ಕೊಟ್ಟರು.

"ಸ್ವಲ್ಪಕಾಲ ಮಲಗಿ" ಎಂದು ಹೇಳಿ ಪಂಡಿತರು ಹೊರಗಡೆ ಬಂದರು. ಎಲ್ಲರೂ ಕಾತುರಗೊಂಡು ಕುಳಿತಿದ್ದರು.

"ಏನೂ, ಗಾಬರಿಯಿಲ್ಲ ಇನ್ನು ಐದು ಹತ್ತು ನಿಮಿಷದಲ್ಲಿ ಎಲ್ಲಾ, ಸರಿ ಆಗುತ್ತದೆ" ಎಂದು ತಿಳಿಸಿದರು. ಭಾರತದ ಪಂಡಿತರ ಜಾಣ್ಮೆಯನ್ನು ಕಂಡು ಅಮೇರಿಕಾ, ರಶ್ಯಾ, ಯುರೋಪ್ ಖಂಡದ ವೈದ್ಯರು ಬೆಪ್ಪಾದರು. ಕೈಲಾಸದ ಜನವೆಲ್ಲ ಶಹಭಾಷ್ ಎಂದರು. ಆಗ ನಾರದರು 'ಪಂಡಿತರೆ ಗಣಪತಿಯು ಹೊಟ್ಟೆನೋವಿಗೆ ಕಾರಣವೇನೆಂ'ದು ಪ್ರಶ್ನಿಸಿದರು.

ಪಂಡಿತರು ನಗುತ್ತ "ಅಮೇರಿಕದ ಗೋದಿಯ ಪ್ರಭಾವ". ಎಂದರು. ಅಮೇರಿಕನ್ ಡಾಕ್ಟರಿಗೆ ಬಹಳ ಕೋಪ ಬಂದಿತು. ಇದನ್ನು ಕೇಳಿ ರಷ್ಯಯನ್ ಡಾಕ್ಟರಂತು ತುಂಬಾ ನಕ್ಕರು.

ಅಮೇರಿಕನ್ ಡಾಕ್ಟರಂತ್ರು, ಕೈಮಾಡಿ 'Please, don't be angry' ಎಂದರು ಪಂಡಿತರು. 'ಅಯ್ಯೊ, ಭಾರತದ ಈ ಆಯುರ್ವೇದ ಪಂಡಿತರಿಗೆ ಇಂಗ್ಲೀಷು ಬರುತ್ತದೆ' ಎಂದು ಕೈಲಾಸದ ಜನರೆಲ್ಲ ತಬ್ಬಿಬ್ಬಾದರು.

"ನೋಡಿ, ಗೋದಿಯಲ್ಲಿ ಏನೂ ದೋಷವಿಲ್ಲ. ಆದರೆ ನಮ್ಮ ಜನ ಬಂದ ಗೋದಿಯನ್ನು ಹಂಚುವದಕ್ಕೇ ವರ್ಷಗಟ್ಟಲೆ ತಡ ಮಾಡುತ್ತಾರೆ. ನಡುವಿನವರು, ತಮ್ಮ ಲಾಭಕ್ಕೋಸ್ಕರ, ಏನು, ಮಾಡಲು ಹಿಂಜರಿಯುವದಿಲ್ಲ. ನಮ್ಮ ಜನರೇ ನಮಗೆ ಮೋಸ ಮಾಡುತ್ತಾರೆ. ಗಣಪತಿಯು ಇದ್ದಕಿದ್ದಂತ ಎದ್ದು ಬಂದೇ ಬಿಟ್ಟರು, ಎಲ್ಲರೂ, ಹಸ್ತಲಾಘವ ಮಾಡಿ ಆತನನ್ನು ಸ್ವಾಗತಿಸಿದರು.

"ಪಂಡಿತರೆ, ಇನ್ನು ಮುಂದೆ ನೀವು ಭಾರತಕ್ಕೆ ಮರಳುವದು ಬೇಡ. ಇಲ್ಲೇ ಇದ್ದು ಬಿಡಿ, ನಿಮ್ಮ ಸಕಲ ವಿಷಯಗಳ ಜವಾಬ್ದಾರಿಯನ್ನು ನಾವು ನೋಡಿಕೊಳ್ಳುವೆವು".

"ತಮ್ಮ ಹೊಟ್ಟೆ ನೋವು ಕಡಮೆಯಾಯಿತೆ?"

"ಹೌದು, ಈಗ, ಏನೂ ತೊಂದರೆ ಇಲ್ಲ"

ಮಗನ ಪರವಾಗಿ ಪಾರ್ವತಿ, ಪರಮೇಶ್ವರರು, ಪಂಡಿತರನ್ನು ಅಭಿನಂದಿಸಿದರು.

"ಈಗ ಭೂಲೋಕದಲ್ಲಿ, ಈ ಹೊಟ್ಟೆನೋವಿನ ಕಾಯಿಲೆಯಿಂದ ಬಹಳ ಜನ ಬಳಲುತಿದ್ದಾರೆ ಅವರ ಉಪಚಾರವನ್ನು ಮಾಡಲು ನಾವು ಹೋಗಬೇಕು, ತಾವುಗಳು ಅಪ್ಪಣೆ ಕೊಡಿರಿ" ಎಂದು ಪ್ರಾರ್ಥಿಸಿದರು, ಪಂಡಿತರು.

"ಹಾಗಾದರೆ, ತಾವು ಹೋಗಲೇಬೇಕೆ ಪಂಡಿತರೆ" ಎಂದು ಗಣಪತಿಯು ಪ್ರಶ್ನಿಸಿದನು.

"ಹೌದು, ಪ್ರಭು, ಸೇವೆ ಮಾಡುವದು ನಮ್ಮ ಕರ್ತವ್ಯ. ನಾವು ಹೋಗಲೇಬೇಕು."

ಎಲ್ಲರೂ ಪಂಡಿತರನ್ನು ಉಡುಗರೆಗಳೊಂದಿಗೆ ಬೀಳ್ಕೊಟ್ಟರು. ಪಂಡಿತರ ಬುದ್ಧಿ ಶಕ್ತಿಯನ್ನು ಮೆಚ್ಚಿ. ಅಮೇರಿಕಾ, ರಷ್ಯಾ ಡಾಕ್ಟರರು ತಮ್ಮ ದೇಶಕ್ಕೆ ಬರಲು ಆಮಂತ್ರಿಸಿದರು. ಮಳೆಗಾಲ ಕಳೆದ ನಂತರ ಬರಲು ಒಪ್ಪಿಕೊಂಡು ವೈಭವಯುತವಾಗಿ ಪಂಡಿತರು ಭಾರತಕ್ಕೆ ಮರಳಿದರು.

ಜನತೆಗೆ ಮುಖ್ಯಮಂತ್ರಿಗಳ ಕರೆ

ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಬಾಗಿಲಕೋಟೆಯಲ್ಲಿ ಸೆಪ್ಟಂಬರ್ 13 ರಂದು ದೊಡ್ಡ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತ ಎಂಥ ಪ್ರಸಂಗ ಬಂದರೂ ನಮ್ಮ ರಾಷ್ಟ್ರದ ಸಮಗ್ರತೆ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವೆವೆಂದು ಕೈಕೊಂಡ ನಿರ್ಣಯದಿಂದ ನಾವು ಹಿಂದೆ ಸರಿಯುವುದಿಲ್ಲವೆಂದು ಜಗತ್ತಿಗೆ ತೋರಿಸಿಕೊಡುವ ಕಾಲವು ಈಗ ಬಂದಿದೆಯೆಂದು ನುಡಿದರು. ಸೈನಿಕ ಸರ್ವಾಧಿಕಾರದ ವಿರುದ್ಧ ಪ್ರಜಾಪ್ರಭುತ್ವವನ್ನು ರಕ್ಷಿಸಲು ಏನು ಬೇಕಾದುದನ್ನು ತ್ಯಾಗ ಮಾಡಲು ಸಿದ್ಧರಿರಬೇಕೆಂದು ಅವರು ಜನತೆಗೆ ಕರೆಯಿತ್ತರು.

ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಂ. ಪಿ. ಸಿ. ಸಿ. ಅಧ್ಯಕ್ಷರಾದ ಶ್ರೀ ಮಹಮ್ಮದ ಅಲಿ ಅವರು ನಾವು ಕಳೆದ 18 ವರ್ಷಗಳಿಂದ ಪಾಕಿಸ್ತಾನದ ಕುಚೋದ್ಯತನ ಮತ್ತು ಆಕ್ರಮಣಕಾರಿ ಚಟುವಟಿಕೆಗಳನ್ನು ಸಹಿಸಿದ್ದೇವೆ. ಆದರೆ ಪಾಕಿಸ್ತಾನಿ ನಾಯಕರಿಗೆ ಪಾಠವನ್ನು ಕಲಿಸಿಕೊಡುವ ಕಾಲವು ಈಗ ಬಂದಿದೆಯೆಂದು ತಿಳಿಸಿದರು. ನಮ್ಮದು ಸರ್ವಾಧಿಕಾರ ಪ್ರಭುತ್ವವನ್ನು ಎದುರಿಸುವ ಹಾಗೂ ಪ್ರಜಾಪ್ರಭುತ್ವವನ್ನು ರಕ್ಷಿಸುವ ಘನ ಉದ್ದೇಶವಿರುವುದರಿಂದ ಕಡೆಯ ಗೆಲುವು ನಮ್ಮದೇ ಆಗುವುದೆಂದು ತಮಗೆ ಭರವಸೆ ಇದೆಯೆಂದು ಹೇಳಿದರು.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. E. P No 49/1965 (S.C. 315/62)

ನಗ ರಮಾನಾಥ ಶೆಟ್ಟಿ— ಅರ್ಜಿದಾರ
ಪೀರಪ್ಪ ಮಲೆಕುಡಿಯ, ದೇವಯ್ಯನ ಅಳಿಯ, ಬೆಳ್ತಂಗಡಿ ತಾಲ್ಲೂಕು ಮಲವಂತಿಗೆ ಗ್ರಾಮ ಬಂಗ್ರ ಬಾಗೆ ಎಂಬಲ್ಲಿರುವವ.
ಎದ್ರಿ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ಮೇಲಿನ ಅಮಲ್ಜಾರಿಯಲ್ಲಿ ಜಪ್ತಿ ಆದ ಆಸ್ತಿ ಏಲಂ ಕುರಿತು ಹಾಜರುಪಡಿಸಿದ ಯಿಸ್ತಾರಿನ ಶರತುಗಳನ್ನು ನಿರ್ಣಯಿಸಲಿಕ್ಕೂ ಏಲಂನಲ್ಲಿ ದರಖಾಸ್ತಿಗೆ ನಿಲ್ಲಲಿಕ್ಕೂ ದರಖಾಸ್ತಿನ ಹಣ ಮುಜ್ರೆ ಬಗ್ಗೆ ತನಗೆ ಪರ್ಮಿಶನ್ ಕೊಡಬೇಕೆಂತ ಅರ್ಜಿದಾರ ಕೊಟ್ಟ ಅರ್ಜಿ ತಖ್ತೆ ಬಗ್ಗೆ ತಾ. 11 10—65 ಕ್ಕೆ ಯಿದೋಣಾದ್ದರಿಂದ ಆ ಕುರಿತು ಆಕ್ಷೇಪ ಇದ್ರೆ ಸದ್ರಿ ಮ್ಯಾದ ದಿನ ಬೆಳಗ್ಗೆ 10 ಗಂಟೆಗೆ ನೀವು ಸ್ವತಃ ಯಾ ವಕೀಲ ದ್ವಾರಾ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ರೆ ಯುಕ್ತ ಕಂಡಂತೆ ತೀರ್ಮಾನಿಸಲಾಗುವದು.

(ಕೋರ್ಟು ಹುಕುಂ ಪ್ರಕಾರ)

B. K. Sooryanarayana Rao
Advocate for Petitioner

ಬೆಳ್ತಂಗಡಿ, ತಾ. 21.9.65

ನವಯುಗಕ್ಕೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರ್ಷಿಕ ಚಂದಾ ರೂ. ೧೦

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯೆ ನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೫—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ

ಬಡತನದ ರುದ್ರ ತಾಂಡವ

ಸತ್ತ ಹೆಣಕ್ಕೆ ಸುತ್ತುವುದಕ್ಕೂ ಅಲ್ಲಿ ಹೊಸ ಬಟ್ಟೆ ದೊರೆಯುವುದಿಲ್ಲ !

ಕೇವಲ ಕೆಲವೇ ದಿನ ಹಿಂದೆ ಕದನವಿರಾಮ ರೇಖೆಯ ಆಚೆಯ ಕಡೆ ಇರುವ ಜನ ಪಾಕಿಸ್ತಾನಿ ಸೈನಿಕರು ಮತ್ತು ಪೋಲೀಸರ ಮೇಲೆ ಅಷ್ಟೊಂದು ಹಗೆತನವಿಟ್ಟುಕೊಂಡಿದ್ದಾರೆಂಬುದನ್ನು ಊಹಿಸಲೂ ಕೂಡ ಸಾಧ್ಯವಿರಲಿಲ್ಲ.

ಸೆಪ್ಟೆಂಬರ್ ೨ರಂದು ಗುರುವಾರ ಭಾರತೀಯ ಮತ್ತು ವಿದೇಶೀ ಪತ್ರಕರ್ತರು, ಫೋಟೋಗ್ರಾಫರುಗಳು ಮತ್ತು ನ್ಯೂಸ್‌ರೀಲ್ ಕ್ಯಾಮರಾಮನ್‌ಗಳ ತಂಡವೊಂದು ಹೊರಗೆ ಆಚೆ ಐದು ಮೈಲಿಗಳ ದೂರದಲ್ಲಿ ನೆರೆದಿದ್ದ ಸುಮಾರು ೨೦೦ ಜನರ ಸಭೆಯೊಂದನ್ನು ಭೇಟಿ ಮಾಡಿ ಹಿಂದಿರುಗಿದಾಗ "ಆಜಾದ್ ಕಾಶ್ಮೀರ"ದಲ್ಲಿನ ಸ್ಥಿತಿಗತಿಗಳ ಬಗ್ಗೆ ಬೆಚ್ಚಿಬೆರಗೊಂಡರು. ಇದು ನಿಜವೇ ಎಂದೂ ಅವರು ಒಬ್ಬರಿಗೊಬ್ಬರು ಪ್ರಶ್ನಿಸ ಬೇಕಾಯಿತು.

೭೦ ವರ್ಷಗಳ ವಯೋವೃದ್ಧ ಫರೀಜದೀನ್ ತನ್ನ ಜನರ ಕಷ್ಟಕಾರ್ಪಣ್ಯಗಳನ್ನು ಒಂದೇ ಮಾತಿನಲ್ಲಿ ಹೇಳಿ ಬಿಟ್ಟ- "ನೋಡಿ ಸ್ವಾಮಿ, ನಮ್ಮ ಬಾಳು ಯಮಯಾತನೆಯದ್ದು. ಸತ್ತವರೂ ಕೂಡಾ ನೆಮ್ಮದಿಯಿಂದ ಸತ್ತಿಲ್ಲ."

"ಇಲ್ಲಿ ನೋಡಿ ಸ್ವಾಮಿ, ಈ ಉಣ್ಣೆ ಬಟ್ಟೆಯನ್ನು" ಎಂದ. ಅವನು ತೋರಿಸಿದ್ದ ಹತ್ತಾರು ಕಡೆ ತ್ಯಾಪೆಹಾಕಿದ್ದ ಗಮಟು ಹಿಡಿದ ಉಣ್ಣೆ ಬಟ್ಟೆಯ ತುಂಡನ್ನು. "ನಾನು ಸತ್ತಾಗ, ಇದನ್ನೇ ನನಗೆ ಸುತ್ತಲು ಉಪಯೋಗಿಸುತ್ತಾರೆ. ಇದು ೨೫ ವರ್ಷಗಳಿಂದ ನನ್ನ ಹತ್ತಿರವೇ ಇದೆ ನನ್ನನ್ನು ಹೂಳುವಾಗ ಈ ಬಟ್ಟೆಯನ್ನು ಸುತ್ತುತ್ತಾರೆ ಎಂದು ನಾನು ನಂಬಿದ್ದೇನೆ" ಎಂದು ವ್ಯಸನದಿಂದ ನುಡಿದ. ಅವನ ಸುತ್ತ ನಿಂತಿದ್ದ ಅವನ ಮಿತ್ರರು ಹೌದೆಂದು ತಲೆದೂಗಿದರು ಮಾತ್ರ.

ಕಳೆದ ೧೮ ವರ್ಷಗಳಲ್ಲಿ ಈ ಪ್ರದೇಶದಲ್ಲಿ ಸತ್ತವರಾರಿಗೂ ಬಿಳಿಬಟ್ಟೆ ಸುತ್ತಿ ಶವ ಸಂಸ್ಕಾರ ನಡೆಸಿಲ್ಲ. ರಾತ್ರಿ ಬೆಳಗ್ಗೆ ತಾವು ಉಪಯೋಗಿಸುತ್ತಿದ್ದ ಹಳೆಯ ಬಟ್ಟೆಗಳೇ ಅವರ ಶವಸಂಸ್ಕಾರದಲ್ಲಿ ಸಹ ಉಪಯೋಗವಾಗುತ್ತಿವೆ. ಆ ಬಟ್ಟೆಯು ಇಲ್ಲದಿದ್ದವರನ್ನು ಅವರು ಸತ್ತ ನಂತರ ತರಗೆಲೆಗಳು ಮತ್ತು ಹುಲ್ಲನ್ನು ಮುಚ್ಚಿ ಹೂಳಲಾಗುತ್ತಿದೆ.

ಸತ್ತವರಿಗೆ ಸುತ್ತಲು ಒಂದು ತುಂಡು ಬಟ್ಟೆ ಸಹ ಇಲ್ಲದಿರುವಂತಹ ಪ್ರದೇಶಗಳಲ್ಲಿ ಜೀವನಾವಶ್ಯಕ ವಸ್ತುಗಳು ದೊರೆಯಲು ಸಾಧ್ಯವೇ? ಅವುಗಳ ಹೆಸರೇ ಇಲ್ಲದಂತಾಗಿದೆ 'ಆಜಾದ್ ಕಾಶ್ಮೀರ' ದಲ್ಲಿ.

ಕೆಲವು ಸಾಹಸಿಗಳು ಕದನವಿರಾಮ ರೇಖೆಯನ್ನು ದಾಟಿಕೊಂಡು ಬಂದು ತಮ್ಮ ಬಂಧು ಮಿತ್ರರಿಂದ ಒಳ್ಳೆಯ ಬಟ್ಟೆ, ಸಕ್ಕರೆ ಮತ್ತು ಸೀಮೆಎಣ್ಣೆ ತಂದಿದ್ದುಂಟು. ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಜನರಿಗೆ ಈ ವಸ್ತುಗಳೆಂದರೆ ಮಹದಾನಂದ.

ದೀ[illegible] ಪಾಕಿಸ್ತಾನಿ ಪೋಲೀಸರಂತೂ ಸೀಮೆಎಣ್ಣೆ ಎಂದರೆ ಎಲ್ಲೂ ಇಲ್ಲದ ಒಂದು ವಿಶೇಷ ವಾಸನಾಗ್ರಹಣ ಶಕ್ತಿ ಪಡೆದಿದ್ದಾರೆ. ಸೀಮೆಎಣ್ಣೆ ಮತ್ತು ಸಕ್ಕರೆ ಬಳಸುತ್ತಿರುವ ಜನರೆಂದರೆ ಪಾಕಿಸ್ತಾನಿ ಪೋಲೀಸರಿಗೆ ತುಂಬಾ ಕೋಪ, ವಿದ್ವೇಷ. ಸೀಮೆಎಣ್ಣೆ ಮತ್ತು ಸಕ್ಕರೆ ಉಪಯೋಗಿಸುವ ಜನರಿಗೆ ಭಾರತದ ಏಜೆಂಟರು ಎಂದು ಹೆಸರಿಟ್ಟಿದ್ದಾರೆ.

ಇನ್ನು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಜನರ ಕಷ್ಟಕಾರ್ಪಣ್ಯಗಳು ಪಾಕಿಸ್ತಾನದಲ್ಲೇ ಇರುವ ತಮ್ಮ ನೆಂಟರು ಇಷ್ಟರಿಗೆ ತಿಳಿಯುತ್ತದೆಯೋ? ಅದೂ ಅಸಾಧ್ಯದ ಮಾತು, ಒಂದು ಗಡಿ ಪೋಲೀಸರ ಬಿಡಾರಕ್ಕೆ ಇನ್ನೊಂದು ಕಡೆ ಸಂಪರ್ಕ ಅಸಾಧ್ಯ. ರಾವಳಪಿಂಡಿಯಿಂದ ಬರೆದ ಕಾಗದ ತಲುಪಲು ಎರಡು ತಿಂಗಳಾದರೂ ಬೇಕು. ರಾವಳಪಿಂಡಿಯಿಂದ ಕಾಶ್ಮೀರಕ್ಕಿರುವ ದೂರವಾದರೂ 100 ಮೈಲಿಗಳು ಮಾತ್ರ

ಇನ್ನು ಔಷಧೋಪಚಾರ 'ಹೌದು ಸ್ವಾಮಿ, ಇಲ್ಲೊಂದು ಆಸ್ಪತ್ರೆ ಕೂಡ ಇತ್ತು. ಆದರೆ ಯಾರಿಗೂ ವಾಸಿಯಾಗಲಿಲ್ಲ' ಎನ್ನುತ್ತಾನೆ ಖೂಜರ್ ಬಂದಿಯ ಸಯ್ಯದ್ ಮಿರಾಂ ಹುಸನ್ ವ್ಯಂಗ್ಯವಾಗಿ. 'ಅದಕ್ಕೇ ಅವರು ವರ್ಷಗಳ ಹಿಂದೆ ಮುಚ್ಚಿ ಬಿಟ್ಟರು.'

ಪಾಕಿಸ್ತಾನದ ತುಚ್ಛ ದುರುದ್ದೇಶ

(ಆರನೇ ಪುಟದಿಂದ)

ಭದ್ರತಾ ಪರಿಷತ್ತಿಗೆ ಸಲ್ಲಿಸಿರುವ ವರದಿಯಲ್ಲಿ ಜನಮತಗಣನೆಯ ಬಗೆಗಿನ ಭಾರತದ ನಿಲುವನ್ನು ಸ್ಪಷ್ಟಗೊಳಿಸಿದೆ. ಆಯೋಗವು ತನ್ನ ವರದಿಯಲ್ಲಿ ಕಾಶ್ಮೀರದಲ್ಲಿ ಜನಮತಗಣನೆಗೆ ಅವಕಾಶ ನೀಡುವುದು, ಈ ಪ್ರದೇಶದ ವಿಲಯನ ದೃಢೀಕರಿಸುವುದಕ್ಕಾಗಿ. ಕಾಶ್ಮೀರವು ಈಗಾಗಲೇ ಭಾರತದ ಭಾಗವಾಗಿರುವುದರಿಂದ ಜನಮತಗಣನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಭಾರತವು ತಾನು ಕಾಶ್ಮೀರದಲ್ಲಿ ಹಕ್ಕಿನಿಂದ ಇರುವುದಾಗಿಯೂ ಪಾಕಿಸ್ತಾನವು ಭಾರತದೊಂದಿಗೆ ಈ ವಿಷಯದಲ್ಲಿ ಸಮಾನ ಹಕ್ಕುಗಳನ್ನು ಅಪೇಕ್ಷಿಸಬಾರದೆಂದು ಅಭಿಪ್ರಾಯದಿಂದಿರುವುದಾಗಿಯೂ ಆಯೋಗವು ತಿಳಿಸಿದೆ.

ಭಾರತವು ಸ್ಪಷ್ಟಗೊಳಿಸಿರುವ ಈ ರಾಜಕೀಯ ನಿಲುವೆಯ ಪ್ರಕಾರ, ವಯಸ್ಕರ ಮತದಾನದಿಂದ ಆರಿಸಲ್ಪಟ್ಟ ಕಾಶ್ಮೀರದ ಸಂವಿಧಾನ ಸಭೆಯು ಕಾಶ್ಮೀರವನ್ನು ಭಾರತದೊಂದಿಗೆ ಅಂತಿಮವಾಗಿ ವಿಲೀನಗೊಳಿಸಲು ತೀರ್ಮಾನಿಸಿತು. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದೆಂದರೆ ಕಾಶ್ಮೀರಿಗಳು—ಜಮ್ಮು ಕಾಶ್ಮೀರವು ಭಾರತದ ಅವಿಭಾಜ್ಯ ಭಾಗವೆಂಬುದನ್ನು ಈ ತೀರ್ಮಾನದಿಂದ ಸ್ಪಷ್ಟಗೊಳಿಸಿದರು.

ಕದನ ತಯಾರಿಗೆ ಕದನ ವಿರಾಮವೇ

(ಏಳನೇ ಪುಟದಿಂದ)

ರಲು ಪಾಕಿಸ್ತಾನ ಬಯಸುತ್ತದೆ—ಇದು ನಿಜವೇ?

ಕಾಶ್ಮೀರವನ್ನು ಭಾರತ ಅದಕ್ಕೆ ಬಳುವಳಿಕೊಡಬೇಕು, ಭಾರತ ಪಾಕಿಸ್ತಾನದೊಡನೆ ಶಾಂತಿ ಬಯಸುವುದಾದರೆ..

ತನ್ನದಲ್ಲದ ಕಾಶ್ಮೀರದ ಒಂದು ಭಾಗವನ್ನು ಮಾವ ಕೆಂಪು ಚೀನಾಕ್ಕೆ ಪಾಕಿಸ್ತಾನ ಬಳುವಳಿ ಕೊಟ್ಟಿದೆ, ನಿಜ. ಆದರೆ, ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಅದನ್ನು ಬಳುವಳಿ ಕೊಡಲು ಭಾರತ ಸಿದ್ಧವಿಲ್ಲ. ಕಾಶ್ಮೀರವನ್ನು ತೆತ್ತು ಪಾಕಿಸ್ತಾನದೊಡನೆ ಶಾಂತಿ ಸ್ನೇಹ ನಮಗೆ ಬೇಕಿಲ್ಲ. ಇದು ೪೫ ಕೋಟಿ ಭಾರತೀಯರ ಖಚಿತಾಭಿಪ್ರಾಯ.

ಹಾಗಾದಲ್ಲಿ, ಕಾಶ್ಮೀರದ ಆಸೆಯನ್ನು ಪಾಕಿಸ್ತಾನ ಬಿಟ್ಟು ಬಿಡುವುದೆ? ಅದು ಊಹೆಗೂ ದೂರ.

ಹಾಗಾದರೆ, ಮುಂದೇನು?

ಪಾಕಿನ ಮಿಲಿಟರಿ ಸಂಗ್ರಹ ಒಮ್ಮೆಗೆ ಬರಿದಾಯಿತು. ಅದು ಮತ್ತೊಮ್ಮೆ ತುಂಬುವವರೆಗೆ ಕದನ ವಿರಾಮ ನಡೆದೀತು. ಮುಂದೆ ಮತ್ತೆ ೧೯೪೭, ೧೯೬೫ರ ದುರ್ಘಟನೆಗಳು ಪುನರಾವೃತ್ತಿಯಾಗದಿದ್ದೀತೆ?

ಯು. ಎನ್. ಓ ದಿಂದ ಹೊರಗೆ ಬೀಳಬೇಕಾಗಬಹುದೆಂದು ಭುಟ್ಟೋ ಗುಡುಗಿದರೆ ಭದ್ರತಾ ಮಂಡಲಿಯಲ್ಲಿ - ಕಾಶ್ಮೀರದ ಹಿರಿ ಹಂಬಲದಿಂದ.

ಪ್ರತಿ ವಿಶ್ವಸಂಸ್ಥೆ ಕಟ್ಟುವ ಬಗ್ಗೆ ಈಗಾಗಲೇ ಸಿದ್ಧತೆಯಲ್ಲಿರುವ ಪಾಕ್ ಸ್ವಾಭಾವಿಕವಾಗಿಯೇ ಚೀನೀಯ ಹೆಬ್ಬಾವಿನ ಬಾಯೊಳಗೆ ಬೀಳುವ ದಿನ ಬಹು ದೂರವುಳಿದೀತೇ?

ಶಿವ ಹಿಂಡುವ ಪಾಶ್ಚಾತ್ಯರಾದರೂ ಎಷ್ಟು ದಿನ ಹಿಂಡಿಯಾರು? ಹೆತ್ತವರ, ಪಾಲಕರ ಹಿಡಿತ ತಪ್ಪಿಸಿ ಮಾವನ ಕೈಗೊಂಬೆಯಾಗುವ ಕರುಣರಿಗೇನು ಕಡಿಮೆ? ಇದೇ ಒಳ್ಳೆಯದೆಂದು ಕಿವಿಯೂದುವ ಸುಕರ್ಣರೂ ಇದ್ದಾರೆ ಜತೆಯಲ್ಲಿ, ಮಾದರಿ ಪುರುಷರಂತಾಗಿ, ಯು ಎನ್. ಓ ದಿಂದ ಹೊರಬಿದ್ದ ಮಹನೀಯರಾಗಿ.

ಈಗ ನಡೆದ ಕದನ ವಿರಾಮ ಮುಂದಿನ ಬಾರಿ ಕದನ ತಯಾರಿಗಾಗಿಯೇ?

ಅಲ್ಲವೆಂದು ಹೇಳುವುದು ಹೇಗೆ ತಾನೇ ಸಾಧ್ಯ? ಇದುವರೆಗಿನ ಅನುಭವದಂತೆ ಈ ಊಹೆಯೇ ಸರಿ.

ನಮ್ಮ ಸೇನೆ ಧನ್ಯ. ತಾಯಿಯ ಕರೆಯನ್ನು ಅಕ್ಷರಶಃ ಪಾಲಿಸಿದ ಕೃತಾರ್ಥ! ಮುಂದೆಯೂ ಅವಕಾಶ ಬಂದಾಗ ತಾಯ ಕರೆಗೆ ಓಗೊಟ್ಟು ಅರಿ ದಮನ ಮಾಡಲಿ.

—ರಾಕಿ.

ಇದೀಗ ಪ್ರಕಟವಾಗಿದೆ-

ಮೈಸೂರು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಭಾರತದ ವೀರಾಂಗನೆಯರು

(ಐತಿಹಾಸಿಕ ಜೀವನದ ಘಟನೆಗಳು)

ಗ್ರಂಥಕರ್ತ— ಕೆ. ಎಸ್. ಭಟ್, ಶಿರಾಡಿಪಾಲ್

.... "ಈ ಗ್ರಂಥದಲ್ಲಿನ ವೀರ ಮಹಿಳೆಯರಲ್ಲಿ ಝಾನ್ಸಿ ಲಕ್ಷ್ಮೀಬಾಯಿಯ ಹೊರತು ಮಿಕ್ಕವರ ಜೀವನೇತಿಹಾಸ ಇದುತನಕ ಸಮಗ್ರವಾಗಿ ಕನ್ನಡ ಸಾಹಿತ್ಯದ ಮೂಲಕ ಬೆಳಕಿಗೆ ಬಂದಿಲ್ಲ. ಆದುದರಿಂದ ಕನ್ನಡಿಗರಿಗೆ ಈ ಜೀವನ ಘಟನೆಗಳು ಮೆಚ್ಚಿಗೆಯಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀ ಶಿರಾಡಿಪಾಲರು ತಮ್ಮ ವೀರ ಶೈಲಿಯಲ್ಲಿಯೇ ವೀರಾಂಗನೆಯರ ಕುರಿತು ಬರೆದಿದ್ದಾರೆ........................."

(ಶ್ರೀ ಕೆ. ಕೆ. ಪೈಗಳ ಮುನ್ನುಡಿಯಿಂದ)

ಕಣ್ಣನ ಸೆಳೆವ ತ್ರಿವರ್ಣ ಮುಖಪತ್ರ!

ಬಿಳಿ ಕಾಗದ! 120 ಪುಟಗಳು! ಬೆಲೆ ರೂ. 1-50

ಒಂದು ಪ್ರತಿ ಬೇಕಾದವರು ರೂ. 1-75 ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ಪ್ರತಿಗಳಿಗೆ ಬರೆಯಿರಿ—

ನವಯುಗ ಪ್ರೆಸ್, ಉಡುಪಿ | ನವಭಾರತ ಬುಕ್ ಡಿಪೋ, ಪಾಲುಕೋಟೆ, ಉಡುಪಿ.

ವೈಷ್ಣವ ಶಿಖಾಮಣಿ

ಕನಕದಾಸ ರಚಿತ

ಹರಿಭಕ್ತಿಸಾರ

ಎಂಬ ಅಮೂಲ್ಯ ಕೃತಿಯನ್ನು ನೀವು ಓದಿರುವಿರಾ?

ಚಂಚಲವಾದ ಮನಸ್ಸನ್ನು [illegible] ವಿಷಯದ ಕಡೆ ಕೇಂದ್ರೀಕರಿಸಿ ಸತ್ಕಾರ್ಯಗಳಲ್ಲಿಯೇ ತತ್ಪರರಾಗುವಂತೆ ಮಾಡುವ ಕೃತಿ.

ಬೆಲೆ: 0-19 ಪೈಸೆ

0-30 ಪೈಸೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ರಖಂ ಪ್ರತಿಗಳಿಗೆ ವಿಚಾರಿಸಿರಿ :-

ನವಯುಗ ಪ್ರೆಸ್, ಉಡುಪಿ

— ರಣ ಕಹಳೆ —

ರಣ ಕಹಳೆ ಊದೋಣ ವೈರಿಯನು
ಅಟ್ಟೋಣ ।
ರಣದ ಸಿರಿಯಂಗಣದಿ ಅರಿಶಿರವ
ತರಿಯೋಣ ||
ಏಳಿ ಎದ್ದೇಳಿ ಎಲೆ ಭಾರತೀಯರೇ ।
ಏಳಿ ಜಾಗೃತಿಗೊಳ್ಳಿ ಎಲೆ ವೀರ
ಯೋಧರೇ ||
ನೋಡಿ ಉತ್ತರಕೆ ನೋಡಿ ನಭದೆತ್ತರಕೆ ।
ಮುಗಿಲಂತರದಿ ಗುಡುಗುತಿದೆ ಭುಗಿಲೆಂದು
ಸಿಡಿಯುತಿದೆ ।
ಅದೆ ಪಾಕ್ ಗುಂಡು ಅದೆ ದುರುಳದಂಡು ||
ಸಂಧಾನ ಸಾಕಿನ್ನು ಕದನವೇ
ಬೇಕಿನ್ನು ।
ಸಂದು ಗೊಂದುಗಳಲ್ಲಿ ಮರೆಯಾದ
ಸೈನಿಕನ ।
ಬಂದ ತಕ್ಷಣ ಸುಡಲು ದಹನವೇ
ಬೇಕಿನ್ನು ||ರಣ ಕಹಳೆ||
ದಮನಿದಮನಿಗಳಲ್ಲಿ ಹರಿಯುತಿದೆ
ವೀರಾವೇಶ ।
ದಮನವಾಗಲಿ ವೈರಿ ಸೇನಾ ವಿಲಾಸ ।
ಅನುದಿನವು ನೆಲಸಲಿ ಭಾರತೀಯರ
ಮಂದಹಾಸ ।
ರಚನೆಯಾಗಲಿ ಇಂದು ಭಾರತದ ಹೊಸ
ಇತಿಹಾಸ ||
ಜಗವರಿಯಲೆಂದು ಭಾರತದ ಸಾಹಸ।
ಜನ ತಿಳಿಯಲೆಂದು ಪಾಕ್
ಜನತೆಯ ಮೋಸ ।
ಜಗತೊರೆಯಲೆಂದು-ದುಷ್ಟರಾ
ಸಹವಾಸ ||
ನಾವೆ ರಣ ಶೂರರು ನಾವೆ ರಣ ಧೀರರು।
ನಾವ್ ಗಂಡುಗಲಿಗಳು ನಾವ್ ರಣ
ಕಲಿಗಳು ।
ಸಮರ ವೈರಿಯ ನೀಸಿ ಅಮರ
ಕೀರ್ತಿಯ ಗಳಿಸಿ ।
ಭಾರತದ ಜಯ ಪತಾಕೆಯ ಹಿಡಿದು
ನಡೆಯೋಣ ಮುಂದು ||ರಣ ಕಹಳೆ||

—ಬಿ. ಎ. ಶೆಟ್ಟಿ, ಬೆಂಡಾನ್ಸಿಮಾರ್.

ದೇಶ ಸೇವೆಗೆ ಬನ್ನಿರಿ

ಬನ್ನಿ ಹಿರಿಯರೆ ಬನ್ನಿ ಕಿರಿಯರೆ
ದೇಶ ಸೇವೆಗೆ ಹರುಷದಿ
ನಾಡ ರಕ್ಷಣೆಗಾಗಿ ಹೋಗುವ
ಹೊರಡಿರೆಲ್ಲರೂ ತ್ವರಿತದ. ||೧||
ನಮ್ಮ ನಮ್ಮೊಳಿ ದ್ವೇಷ ಸಾಧನೆ
ಇದ್ದರಾಗದು ಖಂಡಿತ
ಬೇಧ ಭಾವವನುಳಿದು ಬನ್ನಿರಿ
ಬೇಕು ನಮ್ಮೊಳಗೊಮ್ಮತ ||೨||
ಆತ್ತಣಿಂದ್ಯೆ ತಂದರದೋ ಹೋ!
ಶತ್ರುಗಳು ಘೋ—ಸಹಿಸದು
ಮಿತ್ರವಂತ್ಯ್ಯಿದ್ದವರ ನಡದಾ
ಯ್ದೊತ್ತರಿಸಿ ನೆಲಸವು ಮಾಡುವ. ||೩||
ಅಂಜಲೇಕೆನ್ನೆಲ್ಲರೊಳಗಿದೆ
ಇದೆ ಭಯಂಕರ ಶಕ್ತಿಯು
ನಾಡ ಪ್ರೇಮವು—ನಮ್ಮ ಪೊರೆವುದು
ತಾಯ ಮೇಲಣ ಭಕ್ತಿಯು. ||೪||
ಈಗ ಸಮಯವು ಬಂತು ತೋರಲು
ಭಾರತೀಯರ ಕೆಚ್ಚನು
ಪೌರುಷದೊಳೈತೆನ್ನಿರಳಿಸಲು
ವೈರಿಗಡಂದ ಹುಚ್ಚನು. ||೫||
ಉರಿವ ಬಡಬಾಲನ ತೆರದೊಳು
ಭುಗಿಲು ಭುಗಿಲೆಂದೇಳುವ
ಕಾಳ್ಗಿಚ್ಚಿನಂತರಿ ಸೇನೆಯನು ತಂ
ದಿಕ್ಕಿ ರಕ್ಷಣೆ ಮಾಡುವ. ||೬||
ಬಾಯ ಬಡಿದಾಟವದು ಸಲ್ಲದು
ಕಾಯ ಕಷ್ಟವೇ ಬೇಕುದು
ತಾಯ ಋಣ ತೀರಿಸಲು ತನುವನು
ತೇಯ ಉನ್ನತಿಯಪ್ಪುದು ||೭||
ನಿತ್ಯವೂ ದುಡಿ ದುಡಿದು ಕೂಡುವ
ನಮ್ಮ ಮುಂದಿನ ಜನತೆಗೆ
ಹರಿಯಲಿಮ್ಮಿಯ ಬಡತನವು ಜನ
ಜನಕೂ ದೊರೆಯಲಿ ಹೊಟ್ಟೆಗೆ ||೮||
ದುಡಿಮೆಯೊಂದೇ ದೇಶದೇಳ್ಗೆಯ
ಹಾದಿ ಪದರೊಳೆ ಸಾಗುವ
ನಡೆದು ಮುಂದಕೆ ನಾಡ ಧ್ವಜವನು
ಎತ್ತಿ ಮೇಲಕೆ ಹಿಡಿಯುವ. ||೯||
ಸತ್ಯ ಧೃಢತೆಯ ಮಾರ್ಗದಲಿ ಮುಂ
ಬರಿಯೆ ವಿಜಯವು ನಿಶ್ಚಯ
ಸುಪ್ತ ಚೇತನ ಕಿಡಿಯು ಸಿಡಿಯಲಿ
ಆತ್ಮ ಬಲಕಿಲ್ಲಳಜಯ. ||೧೦||

— ಶ್ರೀ ಕೆ. ಪರಮೇಶ್ವರ, ಭಟ್.

ಆರು ಸೂತ್ರಗಳನ್ನು ಪಾಲಿಸಿರಿ

(ಐದನೇ ಪುಟದಿಂದ)

ಅಂಜುಬುರುಕನೆದುರಿಗೆ ಬೆಕ್ಕು ಕೂಡ ಸಿಂಹವಾಗುತ್ತದೆ.

ಉದಾಹರಣೆಗಾಗಿ ನಡುಗುವ ಕೈಗಳಿಂದ ಹಾಲನ್ನು ಒಂದು ಪಾತ್ರೆಯಿಂದ ಇನ್ನೊಂದಕ್ಕೆರೆಯುವುದು ಕಷ್ಟ; ಖಂಡಿತವಾಗಿ ಸ್ವಲ್ಪ ಹಾಲಾದರೂ ಚೆಲ್ಲುವುದು. ನಿರ್ಭಯತೆಯಿಂದ ಇದನ್ನು ಮಾಡಿದರೆ ಕಾರ್ಯ ಸುಗಮವಾದೀತು.

ಆರನೇ ಸಿದ್ಧಾಂತ: ಆತ್ಮವಿಶ್ವಾಸ:— ಆತ್ಮವಿಶ್ವಾಸ ಅಥವಾ ತನ್ನನ್ನೇ ತಾನು ತಿಳಿದಿರುವುದು ಮತ್ತು ತನ್ನ ಮೇಲೆ ಭರವಸೆಯಿಟ್ಟು ಕೆಲಸಕ್ಕೆ ಕೈ ಹಾಕುವುದು ಇಂಗ್ಲೀಷಿನಲ್ಲಿ ಒಂದು ಗಾದೆಯಿದೆ—"God helps those who help themselves" ಎಂದು. ತನ್ನ ಕೆಲಸದಲ್ಲಿ ಯಾವನು ತಾನೇ ಸ್ವತಃ ಕೈ ಹಾಕುತ್ತಾನೋ ಈಶ್ವರನೂ ಆತನ ಸಹಾಯಕ್ಕೆ ಬರುವನು. ಅಂತೆಯೇ ಅತನು ಕಾರ್ಯಸಾಫಲ್ಯ ಹೊಂದುತ್ತಾನೆ.

ಸಿಂಹವನ್ನು ವನರಾಜನೆಂದೂ, ಮೃಗರಾಜನೆಂದೂ ಕರೆಯುತ್ತಾರೆ. ಅದು ಆತ್ಮವಿಶ್ವಾಸಿಯೂ ಸಾಹಸಿಯೂ ಶಕ್ತಿಯುತವೂ ಆಗಿದೆ. ಇದೆಲ್ಲಾ ಕೇವಲ ಆತ್ಮ ವಿಶ್ವಾಸದ ಬಲ. ಆದರಿಂದಲೇ ಅದು 'ಸ್ವಯ್ಮೇವ ಮೃಗೇಂದ್ರತಾ' ಅದೇ ರೀತಿ ಆನೆಯನ್ನು ನೋಡಿ. ಕಾಣಲು ಚಲಿಸುವ ಬೆಟ್ಟದಂತಿದೆ ಅದು. ಆದರೆ ಸದಾ ಗುಂಪಿನಲ್ಲಿ ಇರುತ್ತದೆ. ನಿದ್ರಿಸುವಾಗಲೂ ನಾಲ್ಕು ಕಡೆಗಳಲ್ಲಾ ಪಹರೆಯಿರಿಸುತ್ತದೆ. ತಮ್ಮ ಆಪಾರ ಶಕ್ತಿಯ ಮೇಲೆ ಅವುಗಳಿಗೆ ವಿಶ್ವಾಸವಿಲ್ಲ. ತಮ್ಮನ್ನು ಶಕ್ತಿಹೀನವೆಂದವು ತಿಳಿದುಕೊಂಡಿವೆ. ಒಂದು ಸಿಂಹದ ಗರ್ಜನೆಯನ್ನು ಕೇಳಿ ಆನೆಗಳ ಗುಂಪೇ ನಡುಗ ತೊಡಗುತ್ತದೆ. ಕಾರಣ ಅವುಗಳಲ್ಲಿ ಆತ್ಮ ವಿಶ್ವಾಸವಿಲ್ಲ.

ಆದುದರಿಂದ ನೀವು ನಿಮ್ಮ ಜೀವನದಲ್ಲಿ ಸಫಲರಾಗಬೇಕಿದ್ದರೆ ಪ್ರತಿಯೊಂದು ಕಾರ್ಯದಲ್ಲೂ ನಿಮ್ಮ ಮೇಲೆ ವಿಶ್ವಾಸವಿಟ್ಟು ದುಡಿಯಿರಿ. ನೀವು ಸಫಲರಾಗುವಿರಿ, ಅವಶ್ಯ ಸಫಲರಾಗುವಿರಿ.

NAVAYUGA

Deepavali Special 1965

ANNOUNCEMENT

HAPPY DEEPAVALI, the great Indian festival of lights, is fast approaching. Rightly do the people rejoice on this day, what with hundred illuminations at home and in the market place.

NAVAYUGA, the premier Kannada Weekly, shares with the people this joy and serves them with a SPECIAL DEEPAVALI ISSUE to illumine their minds. It will contain rich food for thought and entertainment for the masses. Thousands of Kannada people read this issue with relish.

It would be a happy idea for you to use the Navayuga Deepavali Special, as a medium for advertising your goods; for, Navayuga is able to carry your message to every home.

Kindly send your advertisement before 15—10—65.

ADVERTISEMENT RATES:

Full Page ...	Rs. 200/-	Back Cover Page ...	Rs. 500/-
Half Page ...	Rs. 100/-	Inside 1st Cover Page ...	Rs. 400/-
Quarter Page ...	Rs. 50/-	Inside 2nd Cover Page ...	Rs. 300/-

MECHANICAL DATA:

Paper Size ... 15" × 10" (37.5 Cm. × 25 Cm.)　Size of type page 13" × 8" (32.5 Cm × 20 Cm.)

Date of publication: 21—10—1965

ಅಮೃತ ಬಿಂದು

ಸಕ್ರಿಯ ದುಡಿಮೆ ಕೂತು ಉಣ್ಣುವ ಸ್ಥಳಗಳಿಗೆ ತಿಕ್ಕಾಟ ನಡೆಸುವದು ಹೆಚ್ಚಾದಂತೆ ರಾಷ್ಟ್ರದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ.

o o o

ಮನುಷ್ಯನು ಹಿತದ ಹದ್ದು ದಾಟಿದಾಗಲೇ ದೇವರು ಗುದ್ದು ಕೊಡುವ ಸಮಯ.

o o o

ಬಿಸಿಯಾಗಿರುವ ಕಬ್ಬಿಣವನ್ನು ಬಡೆದು ರೂಪಕೊಡಬೇಕು. ತಣಿದಾಗ ಆದಕ್ಕೆ ಸಾವಧಾನದಿಂದ ಬಣ್ಣ, ನಾಜೂಕುತನ ಕೊಡಬಹುದು.

o o o

ಒಂದೇ ಕಿಟಕಿಯಿಂದ ನೋಡುವವರಾದರೂ ಒಬ್ಬರಿಗೆ ನೆಲದ ಕಸ ಕಡ್ಡಿ ತೋರಬಹುದು. ಇನ್ನೊಬ್ಬರಿಗೆ ಆಕಾಶದ ಚಂದ್ರ ತಾರೆಗಳು ಕಾಣಬಹುದು.

o o o

ಆಳದ ಘನ ಮಾತು ಬೇಕಿರುವಾಗ ಅಗಲದ ಹಗುರ ಮಾತು ಪ್ರಯೋಜನವಿಲ್ಲ ಸತ್ಯದ ಝಳಕು ಬೇಕಿರುವಲ್ಲಿ ಮಿಥ್ಯದ ತಳಕು ಪ್ರಯೋಜನವಿಲ್ಲ.

o o o

ನೋವಿಲ್ಲದೆ ಈ ಜಗತ್ತಿನಲ್ಲಿ ಯಾವುದೂ ಘಟಿಸದು. ಇತರರಿಗೆ ನೋವುಂಟು ಮಾಡಿಯೇ ನಾವು ಜನಿಸುತ್ತೇವೆ. ನಮಗೆ ನೋವುಂಟು ಮಾಡಿಕೊಂಡೇ ನಾವು ನಶಿಸುತ್ತೇವೆ.

o o o

ಗಂಡಸು ತನಗೆ ಬಂದ ವಿಪತ್ತಿ ಶಿಕ್ಷೆಯೆಂದು ನೋವನ್ನು ಸಹಿಸುತ್ತಾನೆ. ಹೆಂಗಸು ನೈಸರ್ಗಿಕ ಪರಂಪರೆಯೆಂದು ನೋವನ್ನು ಸ್ವಾಗತಿಸುತ್ತಾಳೆ.

o o o

ಒಂದು ಹಿಡಿ ಸಹನೆಯು ನೂರ್ಮಡಿ ಚತುರತೆಗಿಂತಾ ಮಿಗಿಲು.

o o o

ಶಾಂತಿಯು ಎಷ್ಟೇ ಅನ್ಯಾಯಯುತವಾಗಿದ್ದರೂ ಅದು ಅಷ್ಟೇ ನ್ಯಾಯಬದ್ಧವಾದ ಯುದ್ಧಕ್ಕಿಂತಾ ಉತ್ತಮ.

o o o

ಕೆಲವು ಜನರ ಲಾಭಕ್ಕಾಗಿ ಹಲವು ಜನರ ಹುಚ್ಚಾಟವೇ ಪಾರ್ಟಿ ಎನಿಸುತ್ತದೆ.

ಸಮರವಿರಾಮವಾಯಿತೇನು?

(ನಾಲ್ಕನೇ ಪುಟದಿಂದ)

ವರಿಗೆ ಸಮರ ವಿರಾಮ ಅನಿವಾರ್ಯವಾಗಿ ಬೇಕಾಯಿತು.

"ಯಾಕೆ?"

"ಯುನೋನ ಗೊತ್ತುವಳಿಯನ್ನು ಸಂಪೂರ್ಣವಾಗಿ ನಿರಾಕರಿಸಿದರೆ, ತನ್ನ ಬಗೆಗೆ ಜಾಗತಿಕ ಅಭಿಪ್ರಾಯವೇನಾದೀತೆಂಬ ಯೋಚನೆ ಬಂದಿರಬಹುದು. ಯುದ್ಧವನ್ನು ಮುಂದುವರಿಸಲು ಅದರ ಶಸ್ತ್ರಾಸ್ತ್ರಗಳಲ್ಲಿ ಬಹು ಭಾಗ ನಾಶವಾದುದರಿಂದ ಚೀನಾದ ಸಹಾಯ ಬರುವವರೆಗೆ ಕಾಯಬೇಕು. ಸಮರ ವಿರಾಮದ ನಾಟಕ ಆಡಿದರೆ, ಒಪ್ಪಿ ಸಲ್ಲಿಸಿದ ಅಮೆರಿಕೆ—ಬ್ರಿಟನ್‌ಗಳು ನೆರವು ನೀಡಬಹುದು, ವಿದೇಶಗಳಿಂದ ಮತ್ತಷ್ಟು ಶಕ್ತಿ ಕೇಂದ್ರೀಕರಿಸಿ ಮತ್ತೆ ಧಾಳಿ ಮಾಡಿ ಭಾರತವನ್ನು ಬಗ್ಗುಬಡೆ

(ಒಂಭತ್ತನೇ ಪುಟದಿಂದ)

ಚೀನಾ ಮತ್ತು ಇಂಡೋನೇಶ್ಯ ಕೈ ಚಾಚಿವೆ ನಿಜ. ಆದರೆ, ಪಾಕನ್ನು ಒಪ್ಪಿಕೊಳ್ಳುವುದಕ್ಕಿಂತ ಮೊದಲು ಅವು ತಮ್ಮ ಕೈಗಳನ್ನು ಮೊದಲು ನೋಡಿಕೊಳ್ಳಬೇಕು. ಅದಕ್ಕಿಂತ ಹೆಚ್ಚಾಗಿ ಪಾಕ್ ನೋಡಬೇಕು—ಇದುವರೆಗಿನ ಅರ್ಭಟೆಯಂತೆ ಪಾಕಿನ ಈ ಅರ್ಭಟೆಯೂ ಅಸಹಾಯಕರ ಅರ್ತನಾದ ಮಾತ್ರವಾದೀತೆ?

ವಿಶ್ವಸಂಸ್ಥೆಯಲ್ಲಿ, ಅದರ ಶಕ್ತಗಳಲ್ಲಿ ಪಾಕಿಗೆ ವಿಶ್ವಾಸವಿಲ್ಲ. ಅದೇನೇ ಇದ್ದರೂ ವಿಶ್ವಸಂಸ್ಥೆಯ ಮುಂದಿರುವ ಕಾರ್ಯ ಈಗ ಹಾಲಿನಷ್ಟು ಬೆಳ್ಳಗಿದೆ. ಭಾರತದ ಅವಿಭಾಜ್ಯ ಅಂಗವಾದ ಕಾಶ್ಮೀರವನ್ನು ಹಾರಿಂದು ಒಪ್ಪಿ ಬಿಡಲು ಯಾಕೆ ಮೊನ ಮೇಷವೆಣಿಸಬೇಕು? ಪಾಕಿನ ಸರ್ವಾಧಿಕಾರಿ ಸತ್ಯಕಾಮಿ ಭಾರತವನ್ನು ಕಣ್ಣುಕೆಂಪಗಾದೇಕೆ?

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O. S. 133/1965

ನಾರಾಯಣ ಪಾಟ್ಲ— ವಾದಿ

ಮತ್ತು

1 ವೆಂಕಟ್ರಮಣ ಪಾಟ್ಲ ಕೂಡಾ—ಪ್ರತಿವಾದಿಯು. 2 ಶಿವರಾಮ ಪಾಟ್ಲ— 3 ಶ್ರೀಧರ ಪಾಟ್ಲ— ವೆಂಕಟ್ರಮಣ ಪಾಟ್ಲರ ಮಕ್ಕಳು. ಹಾವಂಜೆ ಗ್ರಾಮದ ಕೀಲಂಜೆ ಮನೆ.

ವಾದಿಗೆ ಪ್ರತಿವಾದಿಯು ರೂ. 2103.00ಕ್ಕೆ 28.5.63 ರಲ್ಲಿ ಬರೆಕೊಟ್ಟ ದಿನಾಂಕದ ನೋಟು ಪ್ರಕಾರ ಬರತಕ್ಕ ಅಸಲುಬಡ್ಡಿ ಸಹಾ ರೂ 2450-97ಕ್ಕೆ ದಾಖಲುಮಾಡಿದ ಮೇಲಿನ ದಾವೆಯು 2, 3 ನೇ ಪ್ರತಿವಾದಿ ನೋಟೀಸಿನ ಬಗ್ಗೆ ತಾ. 16—10—65 ಕ್ಕೆ ಇಟ್ಟಿದೆ. ಸದರಿ ಪ್ರತಿವಾದಿಯು ಸ್ವತಾಃ ಅಥವಾ ವಕೀಲರ ದ್ವಾರಾ ಸದ್ರಿ ತಾ. 16-10-65 ರ ಪೂರ್ವಾಹ್ನ ಘಂಟೆ 10-30 ಮೇಲ್ಕಂಡ ಕೋರ್ಟಿನ ಮುಂದೆ ಸದ್ರಿ ದಾವೆಯಲ್ಲಿ ಹಾಜರಾಗದೆ ತಪ್ಪಿದರೆ, ಮೇಲಿನ ದಾವೆಯು ಸದ್ರಿ ಪ್ರತಿವಾದಿಯ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವುದು.

Gratian C. Rego.

Vakil for Plaintiff.

ಉಡುಪಿ ತಾ. 23—9—1965

ಯುಗ ೩೦—೯—೧೯೬೫

ಮ ಒಪುದು..."

"ಹ್ಞೂಂ... ಇದು ನಾಟಕವೆಂಬುದು ಕಂಡಿತ ಇಲ್ಲವಾದರೆ, ಅವರು ಈಗಲೂ ಯಾಕೆ ಗುಂಡು ಹಾರಿಸುತ್ತಾರೆ? ಯಾಕೆ ಆಕ್ರಮ ನಡೆಸುತ್ತಾರೆ? ಅಗಸ್ಟ್ ೫ರಂದಿದ್ದ ಸ್ಥಳಕ್ಕೆ ಹಿಂದೆ ಸರಿಯುವುದಿಲ್ಲ ಎಂದು ಬೊಬ್ಬಿಡುತ್ತಾರೆ?

"ಹ್ಹ ಹ್ಹ..."

"ಏನು?"

"ಆಗಸ್ಟ್ ೫ರ ಸ್ಥಳಕ್ಕೆ ಹಿಂದೆ ಸರಿಯುವುದಿಲ್ಲ ಅನ್ನುತ್ತಾರಲ್ಲಾ ಅದು ಬಹಳ ಸೋಜಿಗ."

"ಅಲ್ಲ, ನಾವು ಪಾಕಿಸ್ತಾನದೊಳಗೆ ನಲಿ ಮಾಡಿರುವಾಗ ಅವರು ಹಾಗೇಕೆ ಅನ್ನುತ್ತಾರೆ ಭಾರತದ ಬಹು ಭಾಗವೇ ತಮ್ಮ ಒಳ ಇದೆಯೆನ್ನುವಂತೆ!"

"ಹೌದು, ಯುದ್ಧದಲ್ಲಿ ತಾವೇ ಬಹು ಮುಂದೆ ಸಾಗಿದ್ದೇವೆ ಎಂಬುದನ್ನು ಜಗತ್ತಿನ ಮುಂದೆ ಅಭಿನಯಿಸಬೇಕಲ್ಲಾ? ಜಾಂಬ್ ಪ್ರದೇಶದಲ್ಲಿ ತುಸು ಆಕ್ರಮವಾಗಿ ಅವರು ಇದ್ದಾರೆಂದ ಮಾತ್ರಕ್ಕೆ ಅವರದ್ದಲ್ಲಿ ಮೇಲುಗೈಯಾಗಿದೆ?"

"ಅದು ಏನೇ ಇರಲಿ. ಪಾಕ್ ಸಮರ ವಿರಾಮವನ್ನು ಒಪ್ಪಿತಲ್ಲಾ...."

"ಅದೇ ಕೊಡಕಿನ ಪ್ರಸಂಗ. ಸಮರ ವಿರಾಮ ಜ್ಯಾರಿಗೆ ಒಂದಂತೆಯೇ ಪಾಕ್ ಮತ್ತೆ ಮತ್ತೆ ಅದನ್ನು ಉಲ್ಲಂಘಿಸುವಾಗ ವಿರಾಮವೆಲ್ಲಿ ಬಂತು?"

"ಹ್ಞೂಂ, ಅದೂ ಸರಿಯೇ."

'ಮತ್ತೆ ಸೌಮ್ಯತರದ ಕೋಂಟೆ ಅಲ್ಲಿ ಇಲ್ಲಿ ನಡೆಯುತ್ತಿದೆ. ಇದನ್ನು ಸಂಯುಕ್ತರಾಷ್ಟ್ರ ಸಂಘಕ್ಕೆ ಆದರ ಪ್ರಧಾನ ಕಾರ್ಯದರ್ಶಿಗಳು ಮಂದಿ ಮಾಡಿದ್ದಾರೆ. ಆದರೆ, ಅವರಿಂದೇನಾದೀತು?"

"ಯಾಕೆ?"

"ಅದೇ ಅವರ ಮಂದಿ ಪಾಕಿಸ್ತಾನ ಆಕ್ರಮಣಗಾರನೆಂದು ಹೆಸರಿಸಿದ್ದರೂ ಭದ್ರತಾಸಮಿತಿ ಅದನ್ನು ಕರೆಯಲಿಲ್ಲ ..."

'ಅಂತೂ ಈಗ ಏನಾಯಿತು?'

ಆಗೋದೇನು? ಚೀನೀಯ ಮಾವನಿಂದ ಶಸ್ತ್ರಾಸ್ತ್ರ ಬರುವ ತನಕ ಸಮರ ವಿರಾಮ, ಮತ್ತೆ ಸಂಗ್ರಾಮ.....'

ಹೌದ್ರಿ, ಬ್ರಿಟನ್ ಯಾಕೆ ಪಾಕಿಗೆ ಪರವಾಗಿದೆ?"

'ಯಾಕೆ ಅಂದ್ರೆ? ಅದನ್ನು ಹಟ್ಟಿಸಿದವರೇ ಅವರಲ್ವೆ?'

"ಅದರ ಪರಿಣಾಮ ?'

"ಭಾರತ - ಬ್ರಿಟನ್ ಸಂಬಂಧ ಕೆಡುತ್ತಿದೆ. ಮುಂದೆ ಕಾಮನ್‌ವೆಲ್ತನಿಂದ ಭಾರತ ಹೊರ ಬಂದರೂ ಬರಬಹುದು..'

"ಇನ್ನೂ ಬಹಳ ಎಚ್ಚರಿಕೆಯಿಂದಿರಬೇಕು ಅಲ್ವೆ?"

"ಪಾಕಿಸ್ತಾನವು ಕಾಶ್ಮೀರದ ಮೇಲೆ ತನ್ನ ಕಣ್ಣು ಇಡುವ ವರೆಗೆ ಬಹು ಎಚ್ಚರಿಕೆ ಅಗತ್ಯವಿದೆ .."

'ಹ್ಞೂಂ... ನೋಡೋಣ... ಸತ್ಯವೇ ಜಯವೆಂಬ ದಿವ್ಯಮಂತ್ರ ಹೊರಡಿ, ರಾತ್ರಿ ಭಾರವಾಯಿತು.... ಮಲಗೋಣ....'

"ಹ್ಞೂಂ..."

ಗೋರಾ.

ಜಗವಂಚಕಾಗ್ರೇಸರ

ಅಯೂಬರ ಠಕ್ಕು ಎಷ್ಟು ಕಾಲ ಸಾಧ್ಯ?

ಅವರ ಸೋಗು ಬಯಲಾಗುವ ಸಂದರ್ಭ ಬಂದಿದೆ.

ಒಂದು ಕಡೆ ವಿಜಯಗಳ ಘೋಷಣೆ. ಇಷ್ಟು ಭಾರತೀಯ ಟ್ಯಾಂಕ್‌ಗಳನ್ನು ಮತ್ತು ವಿಮಾನಗಳನ್ನು ಧ್ವಂಸ ಮಾಡಿರುವುದಾಗಿ ಒಡಾಯಿ ಕೊಚ್ಚುವುದು ಇನ್ನೊಂದು ಕಡೆ ಶಸ್ತ್ರಾಸ್ತ್ರಗಳು ಬೇಕೆಂದು ತನ್ನ ಮಿತ್ರ ರಾಷ್ಟ್ರಗಳ ಮುಂದೆ ಕೈಯೊಡ್ಡುವುದು ಇದು ಪಾಕಿಸ್ತಾನ ಅನುಸರಿಸುತ್ತಿರುವ ಕಾರ್ಯನೀತಿ. ವಿಶ್ವಸಂಸ್ಥೆಯ ಹೊರಗಿರುವ ರಾಷ್ಟ್ರಗಳ ಮುಂದೆಯೂ ಅದು ಶಸ್ತ್ರಾಸ್ತ್ರಗಳಿಗಾಗಿ ಕೈಯೊಡ್ಡುತ್ತಿದೆ. ಲಂಡನ್‌ನಲ್ಲಿ ಪಾಕಿಸ್ತಾನ್ ಹೈಕಮಿಷನರ್‌ರವರ ಹೇಳಿಕೆಯೇ ಒಂದಾದರೆ ಇತ್ತ ಪಾಕಿಸ್ತಾನದ ಪತ್ರಿಕೆಗಳು, ರೇಡಿಯೋ ಎಷ್ಟು ಆಳರಸರು ಬಣ್ಣಿಸಿದ ಪರಿಸ್ಥಿತಿಯೇ ಬೇರೆ.

ಪಾಕಿಸ್ತಾನ ಭಾರತೀಯ ಸೈನಿಕರ ಮೇಲೆ ಆಕ್ರಮಣ ನಡೆಸಿ ಅವರಿಂದ ಕಸಿದುಕೊಂಡಿದುವುದಾಗಿ ಹೇಳುತ್ತಿರುವ ಶಸ್ತ್ರಾಸ್ತ್ರಗಳ,—ಟ್ಯಾಂಕ್‌ಗಳು, ಗುಂಡು ಮದ್ದುಗಳು ಇತರ ಸಲಕರಣೆಗಳು—ಕೊಂಚ, ಕೇವಲ ನಮ್ಮಿಂದ ಕಸಿದುಕೊಂಡ ಶಸ್ತ್ರಾಸ್ತ್ರಗಳಿಂದಲೇ ಹೋರಾಡಿದ ಎಂಬ ಅರ್ಥ ಬರುತ್ತದೆ. ಆದರೆ ಹೊರ ದೇಶಗಳ ಮುಂದೆ ಶಸ್ತ್ರಾಸ್ತ್ರಗಳಿಗಾಗಿ ಅದು ಅಸಹಾಯಕತೆಯಿಂದ ಕೈಯೊಡ್ಡಿದ ದೀನಾವಸ್ಥೆಯನ್ನು ನೋಡಿದರೆ ಹೋರಾಟದ ಮೊದಲ ಹತ್ತು ದಿನಗಳಲ್ಲೇ ಪಾಕಿಸ್ತಾನ ಸಾಕಷ್ಟು ಪೆಟ್ಟು ತಿಂದಿದೆ ಎಂಬುದು ಅರ್ಥವಾಗುತ್ತದೆ.

ಕಳೆದ ಎಪ್ರಿಲ್ ತಿಂಗಳಲ್ಲಿ ಕಚ್ ಪ್ರದೇಶದಲ್ಲಿ ಹೋರಾಟ ನಡೆದಾಗ ಪಾಕಿಸ್ತಾನ ಮಿಲಿಟರಿ ನೆರವಿನ ಕಾರ್ಯಕ್ರಮಗಳ ಮೂಲಕ ತಾನು ಪಡೆದಿರುವ ಯಾವ ಆಸ್ತ್ರಗಳನ್ನೂ ವಿಮಾನಗಳನ್ನೂ ಉಪಯೋಗಿಸಿಲ್ಲವೆಂದು ಪಾಕಿಸ್ತಾನ ಸೋಗು ಹಾಕಿತು. ಈ ಸಲ ಕಾಶ್ಮೀರದ ಕದನದಲ್ಲಿ ಅಂತಹ ಸೋಗುಹಾಕುವ ಗೋಜಿಗೂ ಪಾಕಿಸ್ತಾನ ಹೋಗಿಲ್ಲ. ಪಾಕಿಸ್ತಾನದ ಪ್ರಾಮಾಣಿಕತೆ ಮಟ್ಟ ಇದರಿಂದ ಸ್ವಲ್ಪ ಸುಧಾರಿಸಿದೆ ಎನ್ನೋಣವೇ? ಆದರೆ, ಹಾಗೆ ಹೇಳುವಂತಿಲ್ಲ. ಈಗಲೂ ವಿರೋಧಾಭ್ಯಾಸಗಳಿಗೆ ಕೊನೆ ಮೊದಲಿಲ್ಲ ತನ್ನ ದೇಶದ ಜನರನ್ನುದ್ದೇಶಿಸಿ ಮಾತನಾಡುವಾಗಲೇ ಒಂದು ಮಾತು, ಜಗತ್ತಿನ ಮುಂದೆ ಹಾಕುವ ಸೋಗಿನ ಸಮಯದಲ್ಲೇ ಒಂದು ಮಾತು. ಇದರಿಂದಾಗಿ ಪಾಕಿಸ್ತಾನಕ್ಕೆ ಎರಡು ನಾಲಿಗೆ ಎನ್ನುವಂತಾಗಿದೆ.

ತಮ್ಮ ಜನರ ಮುಂದೆ ಒಂದು ಸುಳ್ಳಿಯ ಚಿತ್ರ ಮೂಡುವಂತೆ ಮಾಡುವರೀತಿಯಲ್ಲಿ ತಮ್ಮ ಸೈನಿಕರ ವಿಜಯಗಳ ಬಗ್ಗೆ ಮಾಡುವ ಬಡಾಯಿಯನ್ನು ಅರ್ಥಮಾಡಿಕೊಳ್ಳಬಹುದು. ಯುದ್ಧದಾಹಿಗಳು ಹಾಗೂ ಮಿಲಿಟರಿ ಸರ್ವಾಧಿಕಾರಿಗಳು ನಡೆದುಕೊಳ್ಳುವ ರೀತಿಯೇ ಹೀಗೆ. ಮಿಲಿಟರಿ ಸರ್ವಾಧಿಕಾರಿಗಳು ಮೊದಲು ತಮ್ಮ ಬಲವನ್ನು ಜನರ ಮೇಲೆ ಪ್ರಯೋಗಿಸುತ್ತಾರೆ. ಅನಂತರ ಗಡಿಯಾಚೆಗೆ ಪ್ರಯೋಗಿಸುವ ಸಾಹಸ ಮಾಡುತ್ತಾರೆ.

ಸರ್ವಾಧಿಕಾರಿಗಳು ತಮ್ಮ ಮಿಲಿಟರಿ ಬಲವನ್ನೇ ಆಶ್ರಯಿಸಿ ಆ ಬಲದ ಮೇಲೆಯೇ ಒದುಕುತ್ತಾರೆ. ಅಧಿಕಾರಕ್ಕೆ ಬಂದ ತಕ್ಷಣವೇ ಮಿಲಿಟರಿ ಬಲವನ್ನು ಆದಷ್ಟು ಹೆಚ್ಚಿಸಿಕೊಳ್ಳಲು ಅವರು ಪ್ರಯತ್ನ ನಡೆಸುತ್ತಾರೆ. ತಮ್ಮ ಮಿಲಿಟರಿ ಪ್ರಾಬಲ್ಯ ಪ್ರದರ್ಶಿಸುವುದರ ಮೂಲಕ ಜನರನ್ನು ದಂಗು ಬಡಿಸುವ ಸಾಹಸ ಅವರದು ತನ್ನ ಮಿಲಿಟರಿ ಪ್ರಾಬಲ್ಯ ಅಭೇದ್ಯವಾಗಿದೆ ಎಂದು ಜನ ತಿಳಿಯುವಂತೆ ಗಬೇಕಂಬುದು ಅವರ ಅಪೇಕ್ಷೆ. ದೇಶದ ಸಂಪತ್ಸಾಧನಗಳನ್ನು ಮಿಲಿಟರಿ ಬಲ ಹೆಚ್ಚಿಸಿಕೊಳ್ಳಲು ಉಪಯೋಗಿಸಿಕೊಳ್ಳಬೇಕಾದರೆ ಇಂತಹ ಕಾರ್ಯನೀತಿ ಅವರಿಗೆ ಆವಶ್ಯಕವಾಗುತ್ತದೆ.

ಪಾಕಿಸ್ತಾನದ ಸೈನ್ಯ ಸೋಲನ್ನರಿಯದ ಸೈನ್ಯ ಎಂಬ ಭ್ರಮೆಯನ್ನು ಜನರಲ್ಲಿ ಹುಟ್ಟಿಸುವ ಪ್ರಯತ್ನ ನಡೆಸುತ್ತಿರುವ ಅಧ್ಯಕ್ಷ ಅಯೂಬ್ ಖಾನರು ಹಿಟ್ಲರ್ ಮತ್ತು ಮುಸೋಲಿನಿ ಇವರೇ ಮೊದಲಾದ ಸರ್ವಾಧಿಕಾರಿಗಳ ದಾರಿಯಲ್ಲೇ ಮುನ್ನಡೆಯುತ್ತಿದ್ದು ಅವರ ಅನುಕರಣ ನಡೆಸುತ್ತಿದ್ದಾರೆ ಅಯೂಬಖಾನರು ಆರಂಭಿಸಿದ ಸಮರದ ಪ್ರಥಮ ಘಟ್ಟದಲ್ಲಿ ಇಂತಹ ಒಂದು ಚಿತ್ರವನ್ನೇ ಜನರ ಕಣ್ಮುಂದೆ ಇಡಲು ಅವರು ಪ್ರಯತ್ನಿಸಿದರು. ಭಾರತೀಯ ಸೈನ್ಯಗಳಿಗೆ ಅಪಾರ ನಷ್ಟವನ್ನು ಉಂಟು ಮಾಡುವ ಕಾರ್ಯದಲ್ಲಿ ಪಾಕಿಸ್ತಾನಿ ಸೈನಿಕರು ಯಶಸ್ವಿಯಾಗಿದ್ದಾರೆ ಎಂಬ ಒಂದು ಸುಳ್ಳು ಕಲ್ಪನೆಯನ್ನು ಉಂಟು ಮಾಡುವ ಪ್ರಚಾರಕ್ಕೆ ಅವರು ಕೈಹಾಕಿದರು. ತಮಗೇನೂ ನಷ್ಟವಾಗಿಲ್ಲ ಎಂಬ ಒಂದು ಸುಳ್ಳು ಚಿತ್ರವನ್ನೇ ಜನರ ಕಣ್ಮುಂದೆ ಇಟ್ಟರು.

ಆದರೆ, ಪ್ರಚಾರ ಒಂದರಿಂದಲೇ ಎಲ್ಲವೂ ಸಾಧ್ಯವಾಗದು. ಅದರ ಪಾತ್ರ ಒಟ್ಟು ಕಾರ್ಯಾಚರಣೆಯ ಒಂದು ಭಾಗವಷ್ಟೇ ಆಗಿದೆ. ಭಾರತದ ಸೈನಿಕರು ಪಾಕಿಸ್ತಾನದ ಗುಂಡು ಮದ್ದುಗಳನ್ನು ಶಸ್ತ್ರಾಸ್ತ್ರಗಳನ್ನು ಮುಗಿಸುತ್ತಾ ಪಾಕಿಸ್ತಾನದ ಸೈನಿಕರ ಕೈಬರಿದಾಗುವಂತೆ ಮಾಡುತ್ತಿದ್ದಾಗ, ಫೀಲ್ಡ್ ಮಾರ್ಷಲ್ ಅಯೂಬ್ ಖಾನರಿಗೆ ದಿಕ್ಕತೋಚದಂತಾಯಿತು. ಎಂದೇ, ಅವರು ಶಸ್ತ್ರಾಸ್ತ್ರಗಳಿಗಾಗಿ ಇಡೀ ಜಗತ್ತಿನ ಮುಂದೆ ಅಂಗಲಾಚಿ ಬೇಡಿದರು. ಕಾರ್ಯಾಚರಣೆ ಆರಂಭವಾದ ಒಂದು ವಾರದಲ್ಲೇ ಅವರ ಈ ದೀನಾವಸ್ಥೆ ಪ್ರಾರಂಭವಾಯಿತು.

ಸೆಂಟೊ ಮತ್ತು ಸೀಟೊ ರಾಷ್ಟ್ರಗಳಿಂದ ಪಾಕಿಸ್ತಾನ ಹೆಚ್ಚು ನಿರೀಕ್ಷಿಸಿತು. ಅಲ್ಲಿ ತನ್ನ ನಿರೀಕ್ಷೆ ಸುಳ್ಳಾಯಿತೆಂಬ ಕಾರಣದಿಂದಲೇ ವಿಶ್ವಸಂಸ್ಥೆಗೂ ಸದಸ್ಯತ್ವ ಪಡೆಯದಿರುವ ರಾಷ್ಟ್ರಗಳ ಮುಂದೆಯೂ ಪಾಕಿಸ್ತಾನ ಸರ್ಕಾರ ಅಂಗಲಾಚಿತು. ಇಂತಹ ರಾಷ್ಟ್ರಗಳ ಪೈಕಿ ಪಾಕಿಸ್ತಾನ ಮುಖ್ಯವಾಗಿ ಚೀನಾದಿಂದ ತನಗೆ ಬೇಕಾದ ನೆರವನ್ನು ನಿರೀಕ್ಷಿಸಿತ್ತು. ಇದೇ ಸಮಯದಲ್ಲಿ ಭಾರತಕ್ಕೆ ಒಂದಿಷ್ಟು ಕಿರುಕುಳ ಕೊಡುವ ಅಪೇಕ್ಷೆ ಚೀನಾದ್ದು.

ಜಡಿಮಾರು

ಅದರ ಉದ್ದೇಶ ಭಾರತದ ಮೇಲೆ ಬೆದರಿಕೆ ಹಾಕುವುದಾದರೂ ಆಗಬಹುದು ಅಥವಾ ಪಾಕಿಸ್ತಾನದ ಪಾಶ್ಚಾತ್ಯ ಮಿತ್ರ ರಾಷ್ಟ್ರಗಳ ಮೇಲೆ ಬೆದರಿಕೆ ಹಾಕುವುದಾದರೂ ಆಗಬಹುದು. ಅಮೇರಿಕಾ ಮತ್ತು ಬ್ರಿಟನ್ನಿನ ಪತ್ರಿಕೆಗಳಲ್ಲಿ ಬಂದ ವ್ಯಾಖ್ಯಾನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಪಾಕಿಸ್ತಾನ ಮಿಲಿಟರಿ ಒಪ್ಪಂದಗಳ ಸದಸ್ಯರಾಷ್ಟ್ರವಾಗಿ ಯಾವ ಹೊಣೆಯನ್ನು ನಿರ್ವಹಿಸಬೇಕೋ ಆ ಹೊಣೆಯನ್ನು ನಿರ್ವಹಿಸುವುದಿಲ್ಲವೆಂಬ ಭೀತಿ ಅಮೇರಿಕಾ ಮತ್ತು ಬ್ರಿಟನ್ ಈ ಎರಡೂ ರಾಷ್ಟ್ರಗಳಿಗೆ ಉಂಟಾಯಿತು. ಚೀಣೀ ಆಕ್ರಮಣವನ್ನು ಎದುರಿಸಲೆಂದು ಮಾಡಿಕೊಂಡ ಮಿಲಿಟರಿ ಒಪ್ಪಂದಗಳಿಗೆ ಸಹಿಹಾಕಿರುವ ಪಾಕಿಸ್ತಾನ ಈಗ ಕಮ್ಯೂನಿಸ್ಟ ಚೀಣಾವನ್ನೇ ಆಶ್ರಯಿಸ ಹೋಗುವ ಸೂಚನೆಗಳು ಕಂಡುಬಂದುವು.

ತಕ್ಷಣದಿಂದ ಕೆಲವರನ್ನು ಸ್ವಲ್ಪ ಕಾಲದ ಮಟ್ಟಿಗೆ ಮೋಸಹೋಗಿಸಬಹುದು. ಆದರೆ, ಎಲ್ಲಾ ಕಾಲಕ್ಕೂ ಮೋಸಹೋಗಿಸುವುದು ಸಾಧ್ಯವಾಗದೆ ಹೋಗುತ್ತದೆ. ಈ ಸೂತ್ರಕ್ಕೆ ಅಧ್ಯಕ್ಷ ಅಯೂಬ್ ದೂರರಾಗಲಾರರು.

(ಮೂರನೇ ಪುಟದಿಂದ)

ಬೇಕು—ಇದು ಭಾರತೀಯರ ದೃಢ ನಿಲುವು. ಇದು ಈಡೇರದಂದೇ ಪಾಕ್ ಅನ್ಯಾಯ ಒಂದು ಘಟ್ಟದೊಳಗೆ ಉಳಿಯಬಹುದು. ಭಾರತ ಉಪಖಂಡದಲ್ಲಿ ಶಾಂತಿಯನ್ನು ಬಯಸುವ ಶಾಂತಿಪ್ರಿಯರು ಇದನ್ನು ಒಪ್ಪಬೇಕು; ಅದು ಬಿಟ್ಟು ಪಾಕ್ ಸರ್ಪಕ್ಕೆ ಹಾಲೆರೆಯುತ್ತ ಬಂದರೆ ಭಾರತದ ಗಡಿಯಲ್ಲಿ ಘಟಸರ್ಪ ಸಾಕಿಟ್ಟಂತೆ, ಅದರ ಬಗ್ಗೆ ಗಂಭೀರವಾಗಿ ಭಾರತ ಪರ್ಯಾಲೋಚಿಸಲೇ ಬೇಕು.

ಕಾಶ್ಮೀರ ನಮ್ಮದು, ಅದರ ಮೇಲೆ ಪಾಕಿಸ್ತಾನಕ್ಕೆ ಯಾವ ಅಧಿಕಾರವೂ ಇಲ್ಲ. ಪಾಕಿಸ್ತಾನಕ್ಕದನ್ನು ಕೊಡಬೇಕೆಂದು ಹೇಳುವ ಅಧಿಕಾರ ಲೋಕದಲ್ಲಿ ಯಾರಿಗೂ ಇರುವುದಿಲ್ಲ.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. No. 205/1965

ಕೃಷ್ಣರಾವ ಹೆಗಡ್ತಿ— ವಾದಿಯು

ಮತ್ತು

ಅಕ್ಕು ಶೆಡ್ತಿ ಸಹಾ— ಪ್ರತಿವಾದಿಗಳು

ಸದ್ರಿ ದಾವೆಯ 3 ನೆ ಪ್ರತಿವಾದಿ ಜಗನ್ನಾಥ ಶೆಟ್ಟಿ, ಅಕ್ಕು ಶೆಡ್ತಿಯ ಮಗ ಕಾರ್ಕಳ ತಾಲ್ಲೂಕು ಬೆಳ್ಮಣ್ಣು ಗ್ರಾಮದ ಮೂಡುಮನೆಬೆಟ್ಟು ನೆಲ್ಲಿಬೆಟ್ಟು ಎಂಬಲ್ಲಿ ವಾಸವಾಗಿರುವವರಿಗೆ ಈ ಮೂಲಕ ತಿಳಿಸುವದೇನೆಂದ್ರೆ,

ವಾದಿಯು ನೀವು ಕೂಡಾ 3 ಜನರ ಮೇಲೆ ಮಾಡಿದ ಮೇಲಿನ ದಾವಾ ನಿಂತು ಹಾಜರಿ ಬಗ್ಗೆ ತಾರೀಕು 22-10-1965 ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹ ಯಾ ವಕೀಲ್ ದ್ವಾರಾ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ ಮಾಡಿ ಮೇಲಿನ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾದೀತು.

By order of the court

N. Mohandas Adyanthaya.

Advocate for Plaintiff

Karkala 23-9-1965

ಎಲ್ಲೆಲ್ಲಿ ಏನೇನು?

ವಾರ್ಷಿಕ ಸಾಧಾರಣ ಸಭೆ

ದಿನಾಂಕ 17-9-1965ರಂದು ಯಲ್ಲಾಪುರ ತಾಲೂಕು ಕಳಚೆ ಗ್ರೂಪ್ ಸೇವಾ ಸಹಕಾರಿ ಸಂಘದ ವಾರ್ಷಿಕ ಸಾಧಾರಣ ಸಭೆಯನ್ನು ಏರ್ಪಡಿಸಿ 65-66ನೇ ವರ್ಷಕ್ಕೆ ಶ್ರೀಗಳಾದ ಎಮ್. ಜಿ. ಭಟ್ಟ ಕೋಣೆಮನೆ (ಅಧ್ಯಕ್ಷ) ಜಿ. ಆರ್ ಭಟ್ಟ ಕೊಡಸಳ್ಳಿ (ಉಪಾಧ್ಯಕ್ಷ) ವಿ. ಎನ್. ಭಟ್ಟ ಉಪಾಧ್ಯ, ಎಸ್. ಆರ್. ಭಟ್ಟ, ಕಳಚೆ. ಎಸ್. ಎನ್. ಭಟ್ಟ, ಕಳಚೆ, ಎನ್. ಜಿ. ಹೆಗಡೆ, ಕಳಚೆ, ಎನ್. ಎಸ್. ಭಟ್ಟ, ಕೊಡಸಳ್ಳಿ, ಎನ್. ಜಿ. ಪಾಟೀಲ, ಬರಬಳ್ಳಿ, ಜಿ. ಎಸ್. ಭಟ್ಟ ಇವರನ್ನು ಆಯ್ಕೆ ಮಾಡಲಾಯಿತು.

ರಾತ್ರಿ ಸಹಕಾರೀ ಕಾರ್ಯಕ್ರಮದ ಅಂಗವಾಗಿ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಶ್ರೀಕೃಷ್ಣ ಸಂಧಾನವೆಂಬ ಯಕ್ಷಗಾನ ತಾಳಮದ್ದಳೆಯು ಶ್ರೀ ಜಿ. ಆರ್. ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು.

'ನಿಮಗೆ ಸ್ವಂತ ಮನೆ' ಯೋಜನೆ-29 ಹೊಸ ಕೇಂದ್ರಗಳಿಗೆ ವಿಸ್ತರಣೆ:

ಲೈಫ್ ಇನ್ಶೂರೆನ್ಸ್ ಕಾರ್ಪೋರೇಶನು "ನಿಮಗೆ ಸ್ವಂತ ಮನೆ ಯೋಜನೆಯನ್ನು" ಇದೇ ತಿಂಗಳಾದಿಯಿಂದ ಮತ್ತೆ 29 ಕೇಂದ್ರಗಳಿಗೆ ವಿಸ್ತರಿಸಿರುತ್ತದೆ. ಈ ಯೋಜನೆ ಈಗ 48 ಕೇಂದ್ರಗಳಿಗೆ ವ್ಯಾಪಿಸಿದಂತಾಯಿತು ಎಂದು ತಿಳಿದುಬಂದಿದೆ. ಅಕೋಲಾ, ಅಲಿಘರ್, ಅಂಬಾಲಾ, ಔರಂಗಾಬಾದ್ ಟೌನ್ ಗ್ರೂಪ್, ಬಾರಾನಗರ, ಭಾಗಲ್‌ಪುರ, ಭಾಟ್‌ಪಾರಾ, ಬಿಕಾನೇರ್, ಬದ್ವಾನ್, ದರ್ಭಾಂಗಾ, ಏಲೂರು, ಝಾನ್ಸಿ, ಕಾಕಿನಾಡ, ಕಾಮರಹಟ್ಟಿ, ಕೋಲಾರ್ ಗೋಲ್ಡ್‌ಫೀಲ್ಡ್ ಟೌನ್‌ಗ್ರೂಪ್, ಕರ್ನೂಲ್, ಮಾಲೆಗಾಂವ್, ಮಥುರಾ, ಮಿರ್ಜಾಪುರ, ಮೋಂಘೀರ್, ನಾಗರಕೊಯಿಲ್, ನೆಲ್ಲೂರು, ರಾಜಮಂಡ್ರಿ, ರಾಮಪುರ, ಸಾಗರ, ಸಹರಾನ್‌ಪುರ, ಶಹಜಾನ್‌ಪುರ ಮತ್ತು ವೆಲ್ಲೂರು ಇವೇ ವಿಸ್ತರಿಸಿದ 29 ಕೇಂದ್ರಗಳಾಗಿವೆ.

1964ರಲ್ಲಿ ಪ್ರಾರಂಭಿಸಲ್ಪಟ್ಟ ಈ ಯೋಜನೆಯಂತೆ ಇದುವರೆಗೆ ಸುಮಾರು 3.67 ಕೋಟಿ ರೂ.ಗಳ ಅರ್ಜಿಗಳಿಗೆ ಮಂಜೂರಾತಿಯೀಯಲಾಗಿದೆ. ಮಧ್ಯಮವರ್ಗದ ಜನರಲ್ಲಿ ಇದು ಜನಪ್ರಿಯವಾಗುತ್ತಿದೆಯೆಂದು ತಿಳಿದುಬಂದಿದೆ.

ವಾರ್ಷಿಕ ಸಭೆ

ಅಂಕೋಲೆ, ಅಂಕೋಲಾ ತಾಲೂಕ ರಿಂಪಿಗರ ಕುಶಲ ಕೈಗಾರಿಕಾ ಕೆಲಸಗಾರರ ಸಹಕಾರಿ ಸಂಘದ ವಾರ್ಷಿಕ ಸಭೆಯು ದಿನಾಂಕ ೧೩-೯-೬೫ರಂದು ಶ್ರೀ ವೆಂಕಟ್ರಮಣ ಜೋಗಿ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, 1965-66ನೇ ಸಾಲಿನ ಅಂದಾಜು ಪತ್ರಿಕೆ ಮಂಜೂರಿ ಆದ ಮೇಲೆ ಚಾಲ್ತಿ ವರ್ಷದ ಬಗ್ಗೆ ಸಂಘದ ವ್ಯವಸ್ಥಾಪಕ ಮಂಡಳಿಗೆ ಶ್ರೀಗಳಾದ ವೆಂ. ಜೋ. ನಾಯಕ, ಶಂಕರ ಎನ್. ಶೇಣ್ವಿ, ರಾ. ಗೋ. ಶೆಟ್ಟಿ, ಬಿ. ಜಿ. ದಿವೇಕರ, ಅ. ಕೇ. ಪಂಡಿತ, ರಂ. ಬೀ. ನಾಯ್ಕ, ರಾ. ಬೀ. ನಾಯ್ಕ, ಅ. ಸಿ. ನಾಯ್ಕ, ಜಾ. ಕೃ. ಮಹಾಲೆ, ಈ ಒಂಭತ್ತು ಮಂದಿ ಸದಸ್ಯರು ಅವಿರೋಧವಾಗಿ ಆರಿಸಿಬಂದಿರುವರಾಗಿಯೂ ತಿಳಿಯುತ್ತದೆ.

ಸಭಾಧ್ಯಕ್ಷರು ಮಾತನಾಡುತ್ತ, ನಾವೆಲ್ಲ ಒಟ್ಟುಗೂಡಿ ಸಹಕಾರದಿಂದ ಬಾಳ್ವೆ ಮಾಡುವುದನ್ನು ಕಲಿಯಬೇಕೆಂತಲೂ, ನಮ್ಮ ರಾಷ್ಟ್ರ ರಕ್ಷಣಾ ಕಾರ್ಯಕ್ಕೆ ತನು-ಮನ-ಧನಗಳಿಂದ ಸಹಾಯ ಸಲ್ಲಿಸಿ, ಸಂಪೂರ್ಣ ಬೆಂಬಲ ನೀಡುತ್ತೇವೆಂತ ಪ್ರತಿಜ್ಞೆ ಮಾಡಬೇಕೆಂತಲೂ, ಹೇಳಿ ಸಂಘದ ವತಿಯಿಂದ ರಕ್ಷಣಾ ನಿಧಿಗೆ ರೂ. ೧೦೧ ಅರ್ಪಿಸುವ ನಿರ್ಧಾರವನ್ನು ತಿಳಿಸಿದರು.

ರಾಷ್ಟ್ರ ರಕ್ಷಣಾ ನಿಧಿಗೆ ಬೆಂಬಲ ನೀಡಿಕೆ

ಮಂಜೂರು ಕೆರಂದಾಡಿ, 28, ಸ್ಥಳೀಯ ಶ್ರೀ ರಾಮ ಹಾ| ಎ| ಶಾಲೆಯಲ್ಲಿ ರಾಷ್ಟ್ರೀಯ ಐಕ್ಯತೆ, ರಾಷ್ಟ್ರರಕ್ಷಣೆ ಮತ್ತು ಶಾಂತಿ ಸಾಧಕ ಸಭೆಯೊಂದು ಶಾಲಾ ಮೆನೇಜರ್ ಶ್ರೀ ಟಿ. ಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ವೈ. ವಿ. ನಾರಾಯಣ ರಾವ್, ಕೆ. ದಾಮೋದರ ಆಚಾರ್, ಎಚ್. ಶಂಕರನಾರಾಯಣ ರಾವ್, ಎಂ. ವಾಸು ಶೆಟ್ಟಿ, ಯು. ಕೃಷ್ಣಮೂರ್ತಿ ಭಟ್, ಇವರ ಉಪನ್ಯಾಸಗಳಾಗಿ ಸರಕಾರಕ್ಕೆ ಪೂರ್ಣ ಬೆಂಬಲ ನೀಡುವ ಪ್ರತಿಜ್ಞೆ ಮಾಡಲಾಯಿತು.

ಸ್ವಾಮಿ ಚಿನ್ಮಯಾನಂದರವರಿಗೆ ಪೌರ ಸನ್ಮಾನ

ಮಂಗಳೂರಿಗೆ ಸಂದರ್ಶನವಿತ್ತ ಸ್ವಾಮಿ ಚಿನ್ಮಯಾನಂದರವರನ್ನು ಮಂಗಳೂರು ನಗರಸಭೆಯು ಪುರಭವನದಲ್ಲಿ ಶ್ರೀ ಜಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ಮಾನಪತ್ರ ನೀಡಿ ಗೌರವಿಸಿತು. ನಗರದ ಸ್ವಾಗತ ಸಮಿತಿಯು ರಜತ ಕರಂಡದಲ್ಲಿ ಬಿನ್ನವತ್ತಳೆಯೊನ್ನು ಅಧ್ಯಕ್ಷ ಡಾ| ಎಂ. ಪಿ. ಪೈಯವರ ಮುಖೇನ ಅರ್ಪಿಸಿತು.

ಸ್ವಾಮಿಜಿಯವರು ಮಾತನಾಡುತ್ತಾ, ಭಾರತೀಯ ಸಂಸ್ಕೃತಿಯ ಮಹತ್ವಗಳನ್ನು ಎತ್ತಿತೋರಿಸಿ, ಅದನ್ನು ಗೌರವಿಸುವಂತಹ ಆದರ್ಶಗಳನ್ನು ಪ್ರತಿ ಭಾರತೀಯನೂ ಹೊಂದುವಂತೆ ಶ್ರಮಿಸಬೇಕೆಂದು ಜನತೆಗೆ ಸಾರಿದರು. ಸಮಾರಂಭದ ಅಂಗವಾಗಿ ಸ್ಥಳೀಯ ಚಿನ್ಮಯ ಮಿಶನ್ನಿನ ಬಾಲಕರ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದುವು.

ಅಕ್ಟೋಬರ್ ತಾ. 2ರಿಂದ ಮೈಸೂರು ಭೂ ಸುಧಾರಣಾ ಮಸೂದೆ ಜ್ಯಾರಿಗೆ ಬರುವುದು

ಮಧ್ಯವರ್ತಿ ಹಿಡುವಳಿಯನ್ನು ರದ್ದುಗೊಳಿಸುವುದು, ಗೇಣಿ ಪದ್ಧತಿಯನ್ನು ಪರಿಷ್ಕರಿಸುವುದು, ಭೂ ಹಿಡುವಳಿಗೆ ಮಿತಿ ಕಲ್ಪಿಸುವುದು, ಹಿಡುವಳಿಯ ಕ್ರೋಢೀಕರಣ ಮತ್ತು ಚೂರು ಪಾರು ಮಾಡುವುದರ ತಡೆಯುವಿಕೆ, ಇವು ಮಸೂದೆಯ ಪ್ರಮುಖ ಅಂಶಗಳು.

ಇನ್ನು ಮುಂದೆ ಕೆಲ ವಿನಾಯಿತಿ ಹೊರತು, ಹೊಸ ಒಕ್ಕಲಾತನ ನಿರ್ಮಾಣಗೊಳಿಸುವಂತಿಲ್ಲ. ಗೇಣಿಗೆ ಕೊಡುವಂತೆಯೂ ಇಲ್ಲ. ಹಿಂದಕ್ಕೆ ಪಡೆಯುವ ಮತ್ತು ಪಡೆದುಕೊಳ್ಳಲಾಗದಿರುವ ಜಮೀನಿನ ನಿಷ್ಕರ್ಷೆಯಾಗುವವರೆಗೆ ಈಗಿನ ಒಕ್ಕಲಾತನವೇ ಮುಂದುವರಿಯುವುದು ಮತ್ತು ಹಿಂದಕ್ಕೆ ಪಡೆಯಬಹುದಾದ ಜಮೀನನ್ನು ಮಸೂದೆಯ ಹದಿನಾಲ್ಕನೆ ವಿಧಿಯಂತೆ ಭೂಮಾಲಕನು ಹಿಂದಕ್ಕೆ ಪಡೆಯುವನು. ಹಿಂದಕ್ಕೆ ಪಡೆದುಕೊಳ್ಳಲಾಗದ ಜಮೀನನ್ನು ಸರಕಾರಕ್ಕೆ ವರ್ಗಾಯಿಸಬೇಕಾಗುವದು.

ಇಪ್ಪತ್ತೇಳು ಸ್ಟಾಂಡಾರ್ಡ ಎಕ್ರೆಗಿಂತ ಹೆಚ್ಚಿನ ಜಮೀನನ್ನು ಉಳಿಕೆಯ ಜಮೀನೆಂದು ಪರಿಗಣಿಸಲಾಗುವುದು. ಮತ್ತದನ್ನು ಸರಕಾರಕ್ಕೆ ಒಪ್ಪಿಸಬೇಕು.

ಇನ್ನು ಮುಂದಿನ ಹಿಡುವಳಿಗೆ ಹದಿನೆಂಟು ಸ್ಟಾಂಡರ್ಡ ಎಕ್ರೆ ಮಿತಿಯೆಂದು ನಿಷ್ಕರ್ಷಿಸಲಾಗಿದೆ.

ಸರಕಾರಕ್ಕೊಪ್ಪಿಸುವ ಭೂಮಿಗೆ ಮಸೂದೆಯಲ್ಲಿ ನಮೂದಿಸಿದಂತೆ ಪರಿಹಾರ ನೀಡಲಾಗುವುದು.

ಶ್ರೀ ವಿಶ್ವಕರ್ಮ ಪೂಜಾ

ಮಂಗಳೂರು, ಭಗವಾನ್ ಶ್ರೀ ವಿಶ್ವಕರ್ಮೇಶ್ವರ ಮಂದಿರದಲ್ಲಿ ತಾ. 16-9-65ರಂದು ಸ್ಥಳೀಯ ವಿಶ್ವಕರ್ಮ ಸಂಸ್ಕೃತಿ ಸಂವರ್ಧನೀ ಸಭಾ ಆಶ್ರಯದಲ್ಲಿ ಶ್ರೀ ವಿಶ್ವಕರ್ಮ ಪೂಜಾ ಸಮಾರಂಭವು ವಿದ್ಯುಕ್ತವಾಗಿ ಜರಗಿತು. ತದಂಗವಾಗಿ ತಹಶಿಲ್ದಾರ್ ಶ್ರೀ ಬಿ. ಗೋಪಾಲಕೃಷ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಮಹಾ ಸಭೆ ಜರಗಿ, ಪೂಜಾ ಮಹತ್ವದ ಕುರಿತು ವೇದಮೂರ್ತಿಗಳಾದ ಕೆ. ಜನಾರ್ದನಾಚಾರ್ಯ, ರುದ್ರಯ್ಯಾಚಾರ್ಯ, ಸವಿಶ್ರೀ ಉ. ಪೈ. ಭಾಸ್ಕರಾಚಾರ್ಯ, ಕು. ಜನಾರ್ದನಾಚಾರ್ಯ, ಯಂ. ಗೋಪಾಲಾಚಾರ್ಯ ಮತ್ತು ಬಿ. ಹರಿಶ್ಚಂದ್ರಾಚಾರ್ಯರು ಉಪನ್ಯಾಸವಿತ್ತರು. ಅಧ್ಯಕ್ಷರ ಉಪಸಂಹಾರ ಭಾಷಣವಾದ ಬಳಿಕ ಸಂಗೀತ ವಿದ್ವಾನ್ ಎನ್. ಕೆ. ಸುಂದರಾಚಾರ್ಯರ ಸಂಗೀತ ಕಛೇರಿ ಜರಗಿತು. ಪ್ರಾರ್ಥನೆಯ ವೇಳೆ ಭಾರತಕ್ಕೆ ಸಂಪೂರ್ಣ ವಿಜಯ ಪ್ರಾಪ್ತಿಯಾಗುವಂತೆ ಪ್ರಾರ್ಥಿಸಲಾಯಿತು.

ಮದ್ರಾಸು ಕರ್ನಾಟಕ ಸಂಘ

ಈ ಸಂಘದ ಮಹಿಳಾ ಸದಸ್ಯೆಯರು ದಿನಾಂಕ 10-9-65ರಂದು ಒಂದು ಕೂಟವನ್ನು ಏರ್ಪಡಿಸಿದ್ದರು. ಸುಮಾರು 150 ಮಂದಿ ಮಹಿಳೆಯರು ಭಾಗವಹಿಸಿದ್ದರು. ಲಘು ಫಲಹಾರದ ನಂತರ ಕೆಲವು ಆಟಗಳು ನಡೆದುವು. ಶ್ರೀಮತಿ ಯು. ಆನಂದರಾಯರು ಬಹುಮಾನಗಳನ್ನು ಬಯಸಿದರು. ಶ್ರೀಮತಿ ವರ್ಗೀಸ್ ಆಟದಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಿದರು. ಕೊನೆಯದಾಗಿ ಕಾರ್ಯದರ್ಶಿ ವಂದನಾರ್ಪಣೆ ಮಾಡಿದರು.

ಉಪಯುಕ್ತವಾದ ಕೆಲವು ಪುಸ್ತಕಗಳು

		ರೂ. ನ.
ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=50
ನಡುಹಗಲಿನ ಕಗ್ಗತ್ತಲೆ	(ಅನು: ಕು. ಶಿ. ಹರಿದಾಸ ಭಟ್)	2=50
ಶಿಕ್ಷಣದ ಧ್ಯೇಯಗಳು	(ಅನು: ಕೆ. ಬಿ. ರಾಮಕೃಷ್ಣ ರಾವ್ ಮತ್ತು ಯು. ಲಕ್ಷ್ಮೀನಾರಾಯಣಾಚಾರ್ಯ)	2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಅನು: ಕು.ಶಿ.ಹರಿದಾಸ ಭಟ್)	2=00
ಹಿರೋಶಿಮಾದಿಂದ ಜಿನೇವ	(ಯು. ಆರ್. ಆಚಾರ್ಯ)	1=50
ಮೋಹದ ಮಹಾಜಾಲ	(ವೀರಪ್ಪ ಯುಗಟೆ)	1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	1=50
ಕಥಾ ಕೌಮುದಿ	(ಎಸ್. ಗೋಪಿಚಂದ ರಾವ್)	1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ ವಾಷಿಂಗ್ಟನ್	(ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್)	2=00
ಅಮೇರಿಕದ ಆರು ಕತೆಗಳು	(ಅನು: ಕು.ಶಿ.ಹರಿದಾಸ ಭಟ್)	1=75
ಕುಲವಿಲ್ಲದ ಹೆಣ್ಣು	(ಪಿ. ವೆಂಕೋಬಾಚಾರ್ಯ)	1=50
ಚಿತ್ರಾಂಗದೆ	(ಅನು: ಕೆ. ಕೆ. ಶೆಟ್ಟಿ)	0=60
ರವೀಂದ್ರರ ಕತೆಗಳು	(ಹನುಮಂತ ರಾವ್ ಮಾಂಜ್ರೇಕರ)	0=90
ಹಸುರು ಹಂಸ	(ನಚಿಕೇತ)	2=00
ಭಾವಾರ್ಚನೆ	(ನಚಿಕೇತ)	1=25
ಋಣಯಾತ್ರೆ	(ನಚಿಕೇತ)	1=50
ಗೀತೆಯ ಕೈಗನ್ನಡಿ	(ಹೊಸಕೆರೆ ಚಿದಂಬರಯ್ಯ)	1=00

ವಿವರವಾದ ಪಟ್ಟಿಗಾಗಿ ಬರೆಯಿರಿ:

ನವಯುಗ ಪ್ರೆಸ್, ಉಡುಪಿ

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ನ್ಯಾಯ ಮೂರ್ತಿ

(ಎರಡನೇ ಪುಟದಿಂದ)

"ನಿನಗೆ ಹುಚ್ಚು, ರೋಹಿ......ನಿನ್ನ ಮೂತಿಗೆಲ್ಲ ಅವರು ಮಣಿಯುತ್ತಾರೆಯೇ? ನನ್ನ ನಿನ್ನ ಮದುವೆ ಒಂದು ಮುಖ್ಯ ಕಾರಣ ಅಷ್ಟೆ. ಅಮ್ಮನ ಏನಃ ಉಳಿದವರೆಲ್ಲರಿಗೂ ನಾನು ತೃಣಸಮಾನ"

'ನನ್ನಿಂದ ನಿಮಗೆ ಯಾವ ಸುಖವೂ ದೊರೆಯಲಿಲ್ಲ.'

'ಅಯ್ಯೋ ಹುಚ್ಚಿ... ತಾಯಿ, ತಂಗಿ, ಗೆಳತಿ, ಪತ್ನಿ, ದಾಸಿ ಹೀಗೆ ನಾನಾ ಪಾತ್ರ ವಹಿಸಿ ನನ್ನನ್ನು ಆರೈಕೆ ಮಾಡುತ್ತಿದ್ದೀಯ...... ನಿನಗಿಂತ ಲೂ ಮಿಗಿಲಾದ ಆಸ್ತಿ ನನಗೇನಿದೆ "ಎಂದು ಪತ್ನಿಯನ್ನು ಸಮಾಧಾನ ಪಡಿಸುತ್ತಿದ್ದ ರಘು."

ರಘು ಬಾಳ ಬಂಡಿ ಸಾಗಿತ್ತು, ರಾಜ ಮಾರ್ಗದಲ್ಲಿ.

— ೩ —

ರಾಮಮೂರ್ತಿ ತನಗೆ ದೊರೆತಿರುವ ಪದವಿ, ಅಧಿಕಾರ ತನ್ನ ಸುಖಕ್ಕೆ, ತೃಪ್ತಿಗೆ ಎಂದು ತಿಳಿದಿದ್ದ. ಕೆಳವರ್ಗದ ನೌಕರರಿಗೆ ಪೋಲೀಸ್ ಇನ್ಸ್‌ಪೆಕ್ಟರ್ ರಾಮಮೂರ್ತಿ ಯಮಸ್ವರೂಪನಾದ.

"ಆಡಿದರೆ ಹೂವು. ಕಾಡಿದರೆ ಹಾವು" ಎನ್ನುವಂತಾದ ರಾಮಮೂರ್ತಿ.

ತನ್ನ ಸ್ವಾರ್ಥ ಸಾಧಿಸಿಕೊಂಡು, ವಿರೋಧಿಗಳಿಗೆ ಕಿರುಕುಳ ಕೊಡಲು ಒಂದು ಗುಂಪೇ ಬೆಳೆಯಿತು ರಾಮಮೂರ್ತಿಯ ಸುತ್ತಲೂ. ಅಧಿಕಾರದ ನಂಜು ರಾಮಮೂರ್ತಿಯದೇ ಹಾದ್ಯಂತ ವ್ಯಾಪಿಸಿತು.

ಅಧಿಕಾರದೊಂದಿಗೆ ನಾನಾ ದುರ್ವ್ಯಸನಗಳೂ ರಾಮಮೂರ್ತಿಗೆ ಅಂಟಿಕೊಂಡವು.

ಹಲವಾರು ಮುಖ್ಯ ಕೊಲೆ, ಕಳ್ಳತನ, ಲೂಟಿ ಪ್ರಕರಣಗಳಲ್ಲಿ ರಾಮಮೂರ್ತಿಯ ಪೂರ್ಣ ಬೆಂಬಲ ಆ ಗುಂಪಿನವರಿಗೆ ದೊರೆಯುತ್ತಿತ್ತು. ಪ್ರತಿಫಲ ರಾಮಮೂರ್ತಿಯ ಮನೆಗೇ ಬಂದು ತಲುಪುತ್ತಿತ್ತು ವಿವಿಧ ರೂಪದಲ್ಲಿ.

ತಾಯಿ, ಪತ್ನಿಯ ಉಪದೇಶ ಕೇಳಿ "ನಾನು ಎಳೆ ಮಗುವಲ್ಲ. ಈ ವಿಷಯದಲ್ಲಿ ನೀವು ಪ್ರವೇಶಿಸುವುದು ಬೇಡ' ಎಂದು ಸೂಚಿಸಿದ.

ಮಗನ ಮೂರ್ಖತನ ಎಂದಿದ್ದರೂ ಅಪಾಯ ಎಂಬುದನ್ನು ಅರಿತರು ಅವನ ತಾಯಿ.

ಸರೋಜ, ನಿರ್ಮಲ, ರವಿ, ರಾಮಮೂರ್ತಿಯ ಮಕ್ಕಳು. ರಾಮಮೂರ್ತಿ ತಾನೇ ಸರ್ವಾಧಿಕಾರಿ ಎಂದು ವರ್ತಿಸುತ್ತಿದ್ದ.

ಕೈದಿಯನ್ನು ರಕ್ಷಿಸುವಾಗ ಮಾನವೀಯತೆಯನ್ನೇ ಮರೆತ ರಾಮಮೂರ್ತಿ. ಕೈದಿ ಶಿಕ್ಷೆ ತಡೆಯಲಾರದೆ ಕಣ್ಮುಚ್ಚಿದ ಸಾಯುವ ಮುಂಚೆ "ನನ್ನ ಮರಣಕ್ಕೆ ಕಾರಣ ಇನ್ಸ್‌ಪೆಕ್ಟರ್ ರಾಮಮೂರ್ತಿ "ಎಂದು ತಿಳಿಸಿ ಕೊನೆಯುಸಿರು ಬಿಟ್ಟ. ಡಾಕ್ಟರು ತಮ್ಮ ವರದಿಯಲ್ಲಿ ಹೊಡೆತದಿಂದ ಸಾವು ಸಂಭವಿಸಿದೆ. ಇದು ಕೊಲೆ" ಎಂದು ಸೂಚಿಸಿದ್ದರು.

ರಾಮಮೂರ್ತಿ ಅಪರಾಧದ ಹೊರೆಯಿಂದ ಹೊರಬರಲು ಹಣ, ಅಧಿಕಾರಗಳನ್ನು ಉಪಯೋಗಿಸಿದ; ಪ್ರಯೋಜನವಾಗಲಿಲ್ಲ. ಸಾಕಷ್ಟು ಸಾಕ್ಷ್ಯ, ಆಧಾರಗಳು ಇದ್ದುದರಿಂದ ಬಂಧನಕ್ಕೆ ಒಳಗಾದ. ಅಪರಾಧಿ ಎನಿಸಿಕೊಂಡು ನ್ಯಾಯಾಲಯದ ಕಟ್ಟೆಯನ್ನು ಏರಿದ.

— ೪ —

ರಾಮಮೂರ್ತಿಯ ವಿಧಿ ಕ್ರೂರವಾಗಿತ್ತು. ಅಪಮಾನದ ಕಿಚ್ಚನ್ನು ತಾಳಲಾರದೆ ಅವನ ಪತ್ನಿ ಮಕ್ಕಳನ್ನು ಬಿಟ್ಟು ಗಂಗೆಯ ಆಶ್ರಯ ಪಡೆದಳು.

ರಾಮಮೂರ್ತಿಯ ತಾಯಿ ಮೊಮ್ಮಕ್ಕಳ ಆರೈಕೆಯ ಹೊರೆ ಹೊತ್ತಳು.

ಕಳೆದ ಎಲ್ಲ ಘಟನೆಗಳನ್ನು ನೆನಪು ಮಾಡಿಕೊಂಡು ರಾಮ ಮೂರ್ತಿ ಪಶ್ಚಾತ್ತಾಪ ಪಟ್ಟ. ಕಾಲ ಮಿಂಚಿ ಹೋಗಿತ್ತು. ತಮ್ಮ ತನ್ನ ಬಗ್ಗೆ ಕರುಣೆ ತೋರಿ ಉಳಿಸ ಬಹುದೇನೋ ಎಂಬ ಆಸೆ ಅವನ ಮನದಲ್ಲಿ ಮೂಡಿತ್ತು.

ತಾಯಿ ಕಿರಿಯ ಮಗನನ್ನು ಭೇಟಿ ಮಾಡಲು ನಿಶ್ಚಯಿಸಿದರು.

ಮನೆಗೆ ಬಂದ ತಾಯಿಯನ್ನು ರಘು ಆದರದಿಂದ ಬರಮಾಡಿಕೊಂಡ. ರೋಹಿಣಿಯ ಆನಂದಕ್ಕಂತೂ ಪಾರವೇ ಇರಲಿಲ್ಲ. ಸೊಸೆಯನ್ನು ಕಂಡು ಆನಂದದಿಂದ ಅಪ್ಪಿಕೊಂಡು "ನೀನು ಮಹಾಲಕ್ಷ್ಮಿ ಕಣೆ ತಾಯಿ" ಎಂದರು.

ಯೋಗ ಕ್ಷೇಮಗಳ ಸಂಗತಿ ಮುಗಿಯಿತು.

ತಾಯಿ ತಮ್ಮ ಉದ್ದೇಶವನ್ನು ಹೇಳಲೇ ಬೇಕಾಯಿತು.

'ರಾಮು ಅನ್ಯಾಯ ಮಾಡಿದ್ದಾನೆ. ಮೊದಲಿನಿಂದಲೂ ಅವನ ಸ್ವಭಾವವೇ ಹಾಗಾಯ್ತು. ಅವನನ್ನು ಉಳಿಸುವ ಭಾರ ನಿನ್ನದು. ಮೂವರು ಮಕ್ಕಳನ್ನು ಬಿಟ್ಟು ತಾಯಿ ಎಂದೋ ಮರೆಯಾದಳು. ಇದೆಲ್ಲವನ್ನು ನೋಡುವ ಕರ್ಮ ನನ್ನದ.' ಎಂದು ನೊಂದು ನುಡಿದರು.

"ದಯವಿಟ್ಟು ಈ ವಿಷಯದಲ್ಲಿ ನೀನು ಪ್ರವೇಶಿಸ ಬೇಡಮ್ಮ. ಧರ್ಮ, ನೀತಿ ನ್ಯಾಯಗಳಿಗೆ ಎರಡು ಬಗೆಯಲಾರೆ', ಎಂದು ಪ್ರಾರ್ಥಿಸಿದ ರಘು.

"ಆ ಮಕ್ಕಳ ಗತಿ ಏನೋ! ಅವುಗಳ ಓದು, ಮುಂದಿನ ಜೀವನ"

'ಈ ಮನೆಯಲ್ಲಿ ಆ ಮೂವರು ಮಕ್ಕಳಿಗೆ ಸ್ಥಳವೂ ಇದೆ. ಅನ್ನವೂ ಇದೆ. ಅವುಗಳ ಹೊಣೆ ನನ್ನದು' ಎಂದಳು ರೋಹಿಣಿ.

'ತಾಯಿಯ ಪ್ರಾರ್ಥನೆಯನ್ನು ನಡೆಸಲಾರೆಯಾ ರಾಘು?" ಎಂದರು ತಾಯಿ. ರಘು ಒಂದು ಮಾತನ್ನೂ ಆಡದೆ ಅಲ್ಲಿ ನಿಲ್ಲದೆ ಹೊರಕ್ಕೆ ನಡೆದ.

— ೫ —

ಚಿಂತಿಸಿದಷ್ಟು ಗಾಢವಾಗಿಯೇ ಬೆಳೆಯಿತು ಸಮಸ್ಯೆ ರಘು ಮನದಲ್ಲಿ. ಒಡ ಹುಟ್ಟಿದ ಅಣ್ಣ, ಅವನ ಅನೀತಿಯುತ ದುಷ್ಕೃತ್ಯ, ಅಂತಃಕರಣ ಭಾವನೆ, ಕರುಳ ಕರೆ, ಮತ್ತೊಂದು ಕಡೆ ಧರ್ಮ, ನ್ಯಾಯ ನೀತಿಗಳ ಗುರಿ, ಮಾರ್ಗ, ಯಾವುದನ್ನು ಬಿಡಲಿ ಯಾವುದನ್ನು ಬಿಡದಿರಲಿ ಎಂದು ಯೋಚಿಸಿದ ರಘು.

ಕರುಳಿನ ಅಂತಃಕರಣ—ನ್ಯಾಯದ ಕತ್ತರಿ.

ಅಣ್ಣ—ಧರ್ಮ.

ತಾಯಿ—ನ್ಯಾಯ ದೇವತೆ.

'ರೋಹಿ ಸಂದಿಗ್ಧ ಪರಿಸ್ಥಿತಿ. ಏನು ಮಾಡಲಿ? ಒಂದೂ ತೋರುತ್ತಿಲ್ಲ' ಎಂದ ರಘು.

'ಹೇಳಿದರೆ ಕೋಪವಿಲ್ಲವಷ್ಟೆ'

"..........ಖಂಡಿತ ಇಲ್ಲ'

'ಅಂತಃಕರಣಕ್ಕೆ ಮರುಳಾಗಿ, ನ್ಯಾಯಕ್ಕೆ ಅಪಚಾರ ಮಾಡಬೇಡಿ" ಎಂದಳು ರೋಹಿಣಿ ದೃಢವಾಣಿಯಲ್ಲಿ.

ರಘು "ಬದುಕಿದೆ ರೋಹಿ" ಎಂದು ಉದ್ವಿಗ್ನವಾಗಿ ನುಡಿದ.

— ೬ —

ನ್ಯಾಯಾಲಯದಲ್ಲಿ ವಿಚಾರಣೆ, ಸಾಕ್ಷಿಗಳ ಹೇಳಿಕೆ, ನ್ಯಾಯವಾದಿಗಳ ವಾದ ಮುಗಿಯಿತು, ನ್ಯಾಯಾಧೀಶರು ತೀರ್ಪಿನ ದಿನವನ್ನು ಕಾದಿರಿಸಿದರು.

ತೀರ್ಪಿನ ದಿನವನ್ನು; ತೀರ್ಪನ್ನು ಎದುರು ನೋಡುತ್ತಿದ್ದರು ಎಲ್ಲರು.

"ಅಣ್ಣ ಅಪರಾಧಿ, ತಮ್ಮ ನ್ಯಾಯಾಧೀಶ—ನೋಡಬೇಕು ಹೇಗಿರುತ್ತದೆ ತೀರ್ಪು'—ಎಂದು ಎಲ್ಲರೂ ಕುತೂಹಲ ತಾಳಿದ್ದರು.

ತೀರ್ಪಿನ ದಿನ ಬಂತು.

ನ್ಯಾಯಾಧೀಶರು ನ್ಯಾಯಾಲಯವನ್ನು ಪ್ರವೇಶಿಸಿ ಆಸೀನರಾದರು.

ತೀರ್ಪನ್ನು ಕೇಳಲು ನೂರಾರು ಜನ ಕಾತುರರಾಗಿ ನಿಂತಿದ್ದರು ನ್ಯಾಯಾಲಯದ ಆವರಣದಲ್ಲಿ. ಪ್ರೇಕ್ಷಕರೊಂದಿಗೆ ರಘು ತಾಯಿ. ಹಾಗೂ ರಾಮಮೂರ್ತಿ ಮಕ್ಕಳು ಮತ್ತು ರೋಹಿಣಿ ಇದ್ದರು.

ರಾಮಮೂರ್ತಿ ಅಪರಾಧಿಯ ಸ್ಥಾನದಲ್ಲಿ ತಲೆ ಬಗ್ಗಿಸಿ ನಿಂತಿದ್ದ.

ನ್ಯಾಯಾಧೀಶರು ತಮ್ಮ ತೀರ್ಪನ್ನ ಓದಲಾರಂಭಿಸಿದರು.

ಮೂವತ್ತು ಪುಟಗಳ ತಮ್ಮ ತೀರ್ಪನ್ನು ಮುಗಿಸುತ್ತಾ ನ್ಯಾಯಾಧೀಶರು 'ಅಧಿಕಾರದಲ್ಲಿದ್ದ ರಾಮಮೂರ್ತಿಯವರು ಹಣಕ್ಕಾಗಿ, ಸ್ವಸುಖಕ್ಕಾಗಿ ಅನ್ಯಾಯ, ಅಧರ್ಮ, ಅನೀತಿ ಮಾರ್ಗಗಳನ್ನು ಅನುಸರಿಸಿದ್ದಾರೆ. ತಮ್ಮ ಗುಟ್ಟು ಬಯಲಾಗುವುದೆಂದು ತಿಳಿದಾಗ ತಮ್ಮ ನಂಬಿಕೆಯ ಕೈದಿಯನ್ನೇ ಕೊಲೆ ಮಾಡಿದ್ದಾರೆ ಇದಕ್ಕೆ ದೊರೆತಿರುವ ಸಾಕ್ಷ್ಯಗಳನ್ನು ಮೇಲೆ ಪ್ರಸ್ತಾಪಿಸಿದ್ದೇವೆ. ಈ ಬಗೆಯ ಸಮಾಜ, ಸರ್ಕಾರ, ರಾಷ್ಟ್ರ ಘಾತುಕ ಕೃತ್ಯಗಳಿಗೆ ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡ, ಮತ್ತು ಓರ್ವ ಕೈದಿಯ ಕೊಲೆಗೆ ಕಾರಣರಾದ ರಾಮಮೂರ್ತಿಯವರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿದ್ದೇವೆ" ಎಂದು ಆಸನದಿಂದ ಇಳಿದರು.

ಆವರಣದಲ್ಲಿ ನೆರೆದಿದ್ದವರೆಲ್ಲರೂ ಗರ ಬಡಿದವರಂತೆ ನಿಂತಿದ್ದರು! ರಘುತಾಯಿ ನಿಂತಲ್ಲಿಯೇ ಕುಸಿದರು.

ರೋಹಿಣಿ, ಸರೋಜ, ನಿರ್ಮಲ, ರವಿ ಇವರನ್ನು ಒಳಗೆ ಕರೆದು ಕೊಂಡಳು. ಅವಳ ಕಣ್ಣಿಂದ ನೀರು ಕೋಡಿಯಾಗಿ ಹರಿದಿತ್ತು.

ರಾಮಮೂರ್ತಿ ಕುಳಿತಿದ್ದ ಪೋಲೀಸ್ ವ್ಯಾನ್ ಹೊರಡಲು ಸಿದ್ಧವಾಗಿತ್ತು. ಅವಸರದಿಂದ ಅಲ್ಲಿಗೆ ಬಂದ ರಘು ಕೈಮುಗಿದು 'ನನ್ನನ್ನು ಕ್ಷಮಿಸಿ ಬಿಡಣ್ಣ" ಎಂದ.

ರಾಮಮೂರ್ತಿ ಗದ್ಗದಿತನಾಗಿ 'ನೀನು ನ್ಯಾಯ ಮೂರ್ತಿ ರಘು" ಎಂದಷ್ಟೇ ನುಡಿದ.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ., ಯವರ
ನವಕಾಲಕ್ಕೊಪ್ಪುವ ಪುಸ್ತಕಗಳು

ಶಿವ ಭಕ್ತ	1=25
ಪ್ರೇಮ ವಿಜಯ	1=00
ಮುಂದಿನ ದೇವರು	0=25
ವ್ಯಭಿಚಾರಿಣಿ ಯಾರು?	1=00
ಹೆಂಡ್ತಿ ಗಂಡನಾದರೆ?	0=25
ಪುರುಷವಧು	0=25
ಸನ್ಯಾಸಿಯ ಸೋಗಿನಲ್ಲಿ	0=75
ಸಂಶಯ ಪಿಶಾಚಿ	0=75
ಕುಶಲವ	0=50
ಚಿತ್ರಾಂಗದೆ	0=60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ,
ನವಭಾರತ ಬುಕ್ ಡಿಪೊ, ಉಡುಪಿ.

ಹಾಲು ಕಾಗದದ ಮೇಲೆ ಈಗ ತಾನೇ ಅರಳಿದೆ
ಹಗಲಿನ್ನದೆ ಇರುಳಿನ್ನದೆ
ಋತುಭೇದ ಮೊದಲಿಲ್ಲದೆ
ಸದಾಕಾಲ ಹೃನ್ಮನಗಳಿಗೆ ಪರಿಮಳ ಸೂಸುವ

ಬಿರಿದ ಮುಗುಳು

ನಿಮಗೆ ಬೇಕೇ ಬೇಕು
ಹನ್ನೆರಡು ಕಥೆಗಳ ಸಂಕಲನ
ಬರೆದವರು
ಶ್ರೀ ಎಸ್. ಗೋಪೀಚಂದ ರಾವ್

ಪುಟಗಳು 126 ಬೆಲೆ, ರೂ. 1-50

ರೂ. 1-75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಬರೆಯಿರಿ
ನವಯುಗ ಪ್ರೆಸ್, ಉಡುಪಿ
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA 30—9—1965
Registered with the Registrar of News Papers for India under No. K. N. 3546/'57

REGD. No. B. G. 176
LICENCE No. 31
Licensed to Post without Prepayment

ಭವಿಷ್ಯ ವಾಣಿ

ಶ್ರೀ ಪಿ. ಎಲ್. ಅಡಿಗ, ಜ್ಯೋತಿಷ್ಯ ಶಿರೋಮಣಿ, ಸಾಲಿಗ್ರಾಮ.

೩೦-೯-೬೫ರಿಂದ ೬-೧೦-೬೫ರ ವರೆಗೆ

೧. ಮೇಷ

ಇಂದು ಕುಜ ಬುಧ ಶುಕ್ರ ಶನಿಗಳು ತಂತಮ್ಮ ಕ್ಷೇತ್ರದಲ್ಲಿದ್ದರೂ ಕುಜನ ಅಗ್ರಹಕ್ಕೆ ಪಾತ್ರರಾಗಿರುವಿರಿ. ಆದಕಾರಣ ದೇಹಾರೋಗ್ಯವೊಂದನ್ನುಳಿದು ಇತರ ಭಾಗಗಳಲ್ಲಿ ನಿಮಗೇನೂ ಕೊರತೆ ಕಾಣಿಸದು. ದೈನಂದಿನದ ಖರ್ಚುವೆಚ್ಚಗಳಿಗೆ ಸಾಕಷ್ಟು ದುಡಿಮೆಯಿದ್ದು ಸಂಸಾರ ರಥವು ಅರ್ಧಾಂಗಿಯಳ ದುರಾಗ್ರಹದಿಂದಾಗಿ ನಿರಾತಂಕವಾಗಿ ಮುಂದುವರಿಯದಾಗಿದೆ. ವಾರಾಂತ್ಯದ ೩ ದಿನಗಳು ಇದ್ದುದರಲ್ಲಿ ಉತ್ತಮವಾಗಿ ಕಂಡೀತು.

೨. ವೃಷಭ

ಕಾಲವಿಂದು ತೀರ ಪ್ರತಿಕೂಲಪರಿಸ್ಥಿತಿಗೆ ಬಂದಿಹುದು. ಹಡೆದ ಮಕ್ಕಳೂ ಕೈ ಹಿಡಿದ ಅರ್ಧಾಂಗಿಯೂ ಕೂಡ ನಿಮ್ಮೊಡನೆ ಸದಾ ಕಲಹ ಕಚ್ಚಾಟವಾಡಲಿರುವರು. ಇಂತಹ ಈ ಪರಿಸ್ಥಿತಿಯಲ್ಲಿ ಕೆಲವೊಮ್ಮೆ ಸಂಸಾರಿಯಾಗಿರುವುದಕ್ಕಿಂತ ಸನ್ಯಾಸಿಯಾಗಿದ್ದರೇನೇ ಲೇಸೆನಿಸೀತು ಮನಕೆ. ಆದರೂ ಮುಂದಿನ ಕಲ್ಯಾಣವನ್ನು ಕಾಣುವ ಬಯಕೆಯಿಂದ ಕಾಲ ಕಳೆದ ನಿಮಗೆ ತಾ. ೩೦-೧-೬ ಈ ದಿನಗಳು ಸ್ವಲ್ಪ ಅನುಕೂಲವೆನಿಸುವವು.

೩. ಮಿಥುನ

ದೇಹ ಸುಖಪತಿಯಾದ ಬುಧನು ಸುಖಸ್ಥಾನದಲ್ಲಿ ಉಚ್ಚನಾಗಿದ್ದು ಕುಜ ಶುಕ್ರರ ಪೂರ್ಣಾನುಗ್ರಹಕ್ಕೆ ಪಾತ್ರರಾದ ನಿಮಗೆ ಇಂದು ಯಾವ ಭಾಗದಲ್ಲೂ ಕುಂದುಕೊರತೆಗಳು ಕಾಣಲಾರವು. ವ್ಯಾಪಾರ ವ್ಯವಹಾರಾದಿ ಉದ್ಯಮಗಳು ನಿರಂತರವಾಗಿ ಸಾಗಲಿವೆ. ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾದ ನಿಮಗೆ ಆರೋಗ್ಯವು ಅಷ್ಟೊಂದು ಅನುಕೂಲವಾಗಿರದು. ವಾರದ ೪ ದಿನಗಳು ತುಂಬ ಅನುಕೂಲವಾಗಿವೆ.

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ತಮಾ ನಿವಾರಕ ಮೂಲಿಕೆಯನ್ನು ದಿ. 10-10-65 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದು ಕೊಳ್ಳುವುದರಿಂದ ಅಸ್ತಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ.

Shri Mahatma Sidh Baba Sewa Ashram
P. O. Chitrkot, (Uttar Pradesh)

'NAVAYUGA' Weekly is in the list of periodicals and Newspapers approved for use in Secondary Schools as per proceedings Roc. No. 466 N/50 dated 2-12-1950 of the Directer of Public Instruction Madras.

೪ ಕರ್ಕಟ

ಸುಖ ಲಾಭಪತಿಯು ಸ್ವಕ್ಷೇತ್ರನಾಗಿದ್ದು ಧನಪತಿಯ ಅನುಗ್ರಹವು ನಿಮಗೆ ಲಭಿಸಿರುವುದರಿಂದ ದಿನಯಾಪನೆಯು ಸಾಗಮಾಡೀತು. ದುಡಿಮೆಯಲ್ಲಿನ ಹೆಚ್ಚಿನಂಶವನ್ನು ಸದ್ವಿನಿಯೋಗಮಾಡುವಿರಿ. ವಿರೋಧಿ ಜನರ ಪೀಡೆಯು ಸ್ವಲ್ಪ ಹೆಚ್ಚಿರುವುದರಿಂದ ನಿಮ್ಮೆಲ್ಲ ಬಯಕೆಗಳು ಕಾರ್ಯರೂಪಕ್ಕೆ ಬರಲಾರವು. ಸ್ವಜನ ವಿರಹ ದುಃಖಿತರಾದ ನಿಮಗೆ ತಾ. ೩೦ಂದ ೬ರ ವರೆಗಿನ ದಿನಗಳು ಸುಖ ಭೋಗಗಳನ್ನೀಯಲಿವೆ.

೫. ಸಿಂಹ

ಪರಿಶ್ರಮಕ್ಕಿಂತ ಅಧಿಕವಾದ ಫಲವು ಅನಾಯಾಸದಿಂದ ಲಭಿಸುವದು. ರಾಜಕೀಯೇತರ ಚಟುವಟಿಕೆಗಳಲ್ಲಿ ನೀವಿಂದು ವಿಜಯಿಗಳಾಗುವಿರಿ. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಜನತೆಯು ಸಹಕಾರವಿದ್ದರೂ ಕೋರ್ಟು ಕಚೇರಿಗಳ ವ್ಯವಹಾರಗಳಲ್ಲಿ ಪ್ರತಿಪಕ್ಷದವರ ಕೈಯೇ ಮೇಲಾಗುವ ಸಂಭವವಿದೆ. ವ್ಯವಹಾರ ಚತುರರಾದ ನಿಮಗೆ ವಾರಾಂತ್ಯದ ೩ ದಿನಗಳು ಅನುಕೂಲವಾಗಿವೆ.

೬. ಕನ್ಯಾ

ಧನಪತಿಯಾದ ಶುಕ್ರ ವಿಕ್ರಮಪತಿಯಾದ ಕುಜ ಉಪಚಯಗತನಾದ ಶನೈಶ್ವರ ಇವರೆಲ್ಲರ ಬೆಂಬಲವು ಇಂದು ನಿಮಗಿರುವುದರಿಂದ ಎಂತಹ ಮಹತ್ಕಾರ್ಯವೇ ಇರಲಿ ಹೆರವರ ನೆರವಿಲ್ಲದೆ ಸಾಧಿಸಿ ಅಸಹಾಯಶೂರರೆಂಬ ಬಿರುದಿಗೆ ಪಾತ್ರರಾಗುವಿರಿ. ಸದುದ್ಯಮಿಗಳಾದ ನಿಮಗೆ ಲಕ್ಷ್ಮಿಯು ತಾನಾಗಿ ಮನಸೋತು ಬಂದು ಸೇರುವಳು. ಸ್ವಂತ ಆರೋಗ್ಯದತ್ತ ಗಮನವಿರಲಿ. ತಾ. ೩೦-೧-೬ ಈ ದಿನಗಳು ಪ್ರಶಸ್ತವಾಗಿವೆ.

೭. ತುಲಾ

ನಿಮ್ಮ ನಿರೀಕ್ಷೆಗಿಂತಲೂ ಅಧಿಕಾಧಿಕವಾಗಿ ಖರ್ಚು ಮಾಡಿಸೀತು. ಆದರೆ ನಿಮಗಿಂದು ಸಾಲ ಮಾಡುವ ಪರಿಸ್ಥಿತಿಯೊದಗಲಾರದು. ನಿಮ್ಮ ಸ್ವಂತ ಉಪಭೋಗಕ್ಕೆ ಬೇಕಾದ ಸಕಲ ವಸ್ತುಗಳೂ ಅನಾಯಾಸದಿಂದ ಲಭಿಸಲಿವೆ. ಗೃಹ ಜೀವನದಲ್ಲಿ ನೆಮ್ಮದಿ ಬರಲಾರದು. ಸ್ನೇಹಿತರಾದಿಗಳಾದ ನಿಮಗೆ ಕೆಲವರೊಡನೆ ವಿರೋಧವು ಉಂಟಾಗಲಿದೆ. ತಾ. ೨, ೩ ಈ ದಿನಗಳು ತುಂಬ ಅನುಕೂಲವಾಗಿವೆ.

೮. ವೃಶ್ಚಿಕ

ನಿಮ್ಮ ವ್ಯವಹಾರಗಳಿಗೆ ಹಲವಾರು ತರದ ವಿಘ್ನ ವಿಡಂಬರಗಳು ಬರಲಿವೆ. ಆದರೂ ಮಾಡಿದ ಕಾರ್ಯಗಳಲ್ಲಿ ಯಶಸ್ವಿಯಾಗುವಿರಲ್ಲದೆ ತಕ್ಕುದಾದ ಪ್ರತಿಫಲವೂ ಲಭಿಸುವದು. ಸಂಸಾರದಲ್ಲಿನ ಕೊರತೆಗಳೂ ಕಾಣಲಾರವು. ಕಫ ಪಿತ್ತ ದೋಷದಿಂದಾಗಿ ಆರೋಗ್ಯಕ್ಕೆ ಭಂಗವುಂಟಾಗಲಿದೆ. ಚಂಚಲವಾದ ನಿಮ್ಮ ಮನಸ್ಸಿಗೆ ತಾ ೩೦, ೨, ೪, ೫ ಈ ದಿನಗಳಲ್ಲಿ ಶಾಂತಿ ಸುಖಗಳು ಲಭಿಸುವವು.

೯. ಧನು

ವ್ಯಯಗಳ ಕುಜನೋರ್ವನನ್ನುಳಿದು ಇತರ ಗ್ರಹ ಸಮುದಾಯವೇ ನಿಮಗೆ ಬೆಂಬಲವಾಗಿ ನಿಂತಿಹುದು. ಆದ ಕಾರಣ ಇಂದು ನಿಮ್ಮ ಬಯಕೆಗಳು ಯಾವೊಂದು ತರದ ತೊಡಕು ತೊಂದರೆಗಳಿಲ್ಲದೆ ಕಾರ್ಯರೂಪಕ್ಕೆ ಬರಲಿವೆ. ಕಿರೀಟವಿಲ್ಲದ ಭೂಪತಿಯೋಪಾದಿಯಲ್ಲಿ ನೀವಿಂದು ವಿಹರಿಸಲಿರುವಿರಿ. ಸದುಪ್ಯೋಗ ಪ್ರಯತ್ನವಾಗಿ ಸಮಯವನ್ನು ಸಾರ್ಥಕಗೊಳಿಸುವಿರಿ, ತಾ ೨, ೩, ೪ ಅತ್ಯುತ್ತಮ.

೧೦. ಮಕರ

ಸುಖ ಲಾಭ ಪಡೆಯುವ ಕುಜನನ್ನುಳಿದು ಇತರ ಎಲ್ಲಾ ಗ್ರಹರೂ ಪ್ರತಿಕೂಲ ಸ್ಥಾನವನ್ನು ಹೊಂದಿರುವುದರಿಂದ ಅತೀವ ಕಷ್ಟದಿಂದ ನೀವೀ ವಾರವನ್ನು ಕಳೆಯ ಬೇಕಾಗಿ ಬರಲಿದೆ. ಆತ್ಮೀಯರಿಂದ ವಿರೋಧ, ಸಾಂಸಾರಿಕ ತಾಪತ್ರಯ ಶತ್ರು ಜನರ ಕಾಟ ಮತ್ತು ದೇಹಾಲಸ್ಯದಿಂದ ಸಂತತವಾದೀತೆಂಬಿದ್ದ ನಿಮಗೆ ತಾ. ೩೦—೧—೪—೫ ಈ ದಿನಗಳಲ್ಲಿ ಧನಲಾಭ ಮನಸ್ಸಿಗೆ ನೆಮ್ಮದಿ ದೊರಕೀತು.

೧೧ ಕುಂಭ

ಎಂತಹ ಕಷ್ಟಸಾಧ್ಯವಾದ ಕಾರ್ಯವೂ ಕೂಡ ನಿಮಗಿಂದು ಅತೀವ ಸುಲಭವಾಗಿ ಪರಿಣಮಿಸಲಿದೆ. ಪರಿಶ್ರಮಕ್ಕೆ ತಕ್ಕುದಾದ ಫಲವು ಲಭಿಸುವುದರಿಂದ ದಿನಯಾಪನೆಯು ಸುಗಮವಾದೀತು. ದ್ಯೂತ ವ್ಯಸನಿಗಳಿಗೆ ಆಕಸ್ಮಿಕ ಧನ ಲಾಭಯೋಗವಿದೆ. ಪಶು ಧಾನ್ಯಾದಿ ಗೃಹ ಪರಿವಾರವು ಸಂಪೂರ್ಣವಾಗಿರುವುದರಿಂದ ದಿನ ಕಳೆದುದೇ ತಿಳಿಯಲೊಲ್ಲದು. ವಾರಾದಿಯ ೪ ದಿನಗಳು ತುಂಬ ಅನುಕೂಲವಾಗಿವೆ.

೧೨. ಮೀನ

ಪರಿಸ್ಥಿತಿಯು ತುಂಬಾ ಬಿಕ್ಕಟ್ಟಿಗೆ ಬರಲಿದೆ. ವಿಲಾಸಿಗಳಿಂದ ಕಾಟದಿಂದಾಗಿ ಮನಸ್ಸಿಗೆ ಆಪತ್ತು ನೆಮ್ಮದಿಯಿರದು ಕುಟುಂಬಿಕ ಕಲಹ ಸ್ವಜನ ವಿರೋಧಕ್ಕೆರಗಿದ ನಿಮಗೆ ಪೈತ್ತಿಕ ದೋಷದಿಂದಾಗಿ ಆರೋಗ್ಯ ಕೆಡುವದಲ್ಲದೆ ಸರ್ವತ್ರ ಪ್ರತಿಪಕ್ಷಿಗಳಿಂದ ಪರಾಜಯವು ಉಂಟಾದೀತು. ಆರ್ಥಿಕ ಬಿಕ್ಕಟ್ಟು ಮನೋದೌರ್ಬಲ್ಯದಿಂದ ತೊಳಲುತ್ತಿರುವ ನಿಮಗೆ ತಾ. ೨ ರಿಂದ ೬ ರ ವರೆಗಿನ ದಿನಗಳು ಸ್ವಲ್ಪ ಉತ್ತಮವಾಗಿ ಕಾಣಲಿವೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ದಿ| ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ.ಎರಡು. ಉತ್ತಮ ಪ್ರತಿ:ರೂ.ಎರಡೂವರೆ(ಟ.ಖ. ಪ್ರತ್ಯೇಕ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ

ಸುಲಭದಲ್ಲಿ ಪತ್ರಲೇಖನ

LETTER WRITING MADE EASY

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ: ರೂ. 1-25 (ಟ.ಖ.ಪ್ರತ್ಯೇಕ)

ಹೊಸಕೆರೆ ಚಿದಂಬರಯ್ಯನವರ
ಶ್ರೀಮದ್ಭಗವದ್ಗೀತೆಯ ಸಮೂಲ ಭಾಷಾಂತರ

ಗೀತೆಯ ಕೈಗನ್ನಡಿ

300 ಪುಟಗಳಿಗೂ ಮಿಕ್ಕಿದೆ. ಕೈಹೊತ್ತಗೆಯ ಆಕಾರದಲ್ಲಿದೆ.
ಬೆಲೆ: ಸಾದಾ ಪ್ರತಿ ರೂ. ೧
ಗೀತೆಯ ಕೈಗನ್ನಡಿಯ ಒಂದು ಪ್ರತಿ ಬೇಕಾದವರು ರೂ. 1-50ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
—ಪ್ರತಿಗಳಿಗೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ
ನವಯುಗ ಪ್ರೆಸ್, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು. ರಾಘವೇಂದ್ರ ಆಚಾರ್ಯ,ಎಂ.ಎ.

ಸಾಮಾನ್ಯ ರೋಗಗಳು
ಡಾ| ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯ ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡಕ್ಕಿಲ ಕೃಷ್ಣ ಭಟ್ಟ, ಎಂ. ಎಸ್. ಸಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K, H, Shetty at the Navayuga Press, Udipi, S, India.